



ಅಕ್ಕರೆಯ ಕಡಲು

ಆರ್. ಭರಣಯ್ಯ ನೆನಪಿನ ಸಂಪುಟ

ಸಂಪಾದಕ

ತುಕಾರಾಮ್. ಎಸ್



ಕಿರು ಪರಿಚಯ

ಆರ್. ಭರಣಯ್ಯನವರು ಭರಣಿ ಮಳೆಯಂತಹ ವ್ಯಕ್ತಿತ್ವ ಹೊಂದಿದ್ದವರು. ನಿಜವಾಗಿಯೂ ತಂಪು ಹೊತ್ತಿನಲ್ಲಿ ಕೂತು ನೆನಪಿಸಿಕೊಳ್ಳಬೇಕಾದವರು. ಹೇಗೆ ಭರಣಿ ಮಳೆ ತನ್ನ ಸ್ಪರ್ಶಕ್ಕೆ ನಿಲುಕುವ ಚರಾಚರಗಳನ್ನು ತಂಪಾಗಿಸಬಲ್ಲದೋ, ಹಾಗೆ ಭರಣಯ್ಯನವರು ನಿರುದ್ಯೋಗ, ಹಸಿವು–ಅಸ್ಪೃಶ್ಯತೆಯಿಂದ ಕಂಗಾಲಾಗಿರುತ್ತಿದ್ದ ಲೋಕವನ್ನು ತಣ್ಣಗಿಡಲು ಪ್ರಯತ್ನಿಸಿದರು. ಈ ಲೋಕ ಅದುವರೆಗೆ ದಾರಿಮಧ್ಯೆ ಕಟ್ಟಿದ್ದ ತಡೆಗೋಡೆಗಳನ್ನು ಸ್ವಂತ ಪರಿಶ್ರಮದಿಂದ ದಾಟಿ ಮೇಲೇರಿ ಬಂದರು. ಪದವಿಧರರಾದರು. ವಿದ್ವತ್ ಗಳಿಸಿದರು. ಆ ಕಾಲದಲ್ಲಿ ಅಪರೂಪ, ಎನಿಸುವಂತೆ ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದು ಮೈಸೂರು ಮಹಾರಾಜರಿಂದ ಮನ್ನಣೆ ಪಡೆದರು. ಕರ್ನಾಟಕದ ಹತ್ತು ಹಲವು ಇಲಾಖೆಗಳಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಐ.ಎ.ಎಸ್. ಅಧಿಕಾರಿಯೂ ಆದರು. ತಮ್ಮ **'ಜನಪರ'** ನಿಲುವುಗಳಿಂದ ಕಾರ್ಯನಿರ್ವಹಿಸಿ **'ಅಪರೂಪದ ಅಧಿಕಾರಿ'** ಎನಿಸಿಕೊಂಡರು. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರ ಜೀವಪ್ರೇಮದ ಸಂಗತಿಗಳನ್ನು ಅಂಗೈಲಿಟ್ಟುಕೊಂಡು ಅಸಹಾಯಕರನ್ನು ಸಲುಹಿದರು.

ಆರ್. ಭರಣಯ್ಯನವರ ಹುಟ್ಟು ನೆಲವಾದ ಮೈಸೂರು ಸೀಮೆಯ ಸುತ್ತುಮುತ್ತಲ ಜನರನ್ನು ಇವರ ಬಗ್ಗೆ ಒಂದು ಸಲ ಮುಟ್ಟಿ ಮಾತಾಡಿಸಿದರೆ ಸಾಕು, ಯಾವುದೋ ಧ್ಯಾನದ ಲೋಕದಲ್ಲಿ ನೆನಪುಗಳನ್ನು ತಡುವುತ್ತಾರೆ. ಮತ್ತು ತಡವರಿಸದೆ, ಪ್ರೀತಿ, ಮಮತೆಯ ತೋರಿ ಕೃತಜ್ಞತೆಯ ಮಳೆ ಸುರಿಸುತ್ತಾರೆ. ಅವರಿಂದಾಗಿ ತಮ್ಮ ಬಾಳ ಬುತ್ತಿ ಕಟ್ಟಿಕೊಂಡವರು ತಮ್ಮ ನೆನಪುಗಳ ಮಾಲೆ ತೋಡಿಸಿ, **"ಆ ಪುಣ್ಯಾತ್ಮ ಭರಣಿ ಮಳೆ ಇದ್ದಂಗೆ ಕಪ.. ಆ ದೇವ್ರು ಅವರ ಮಕ್ಕಮರಿಗಳ ಹೊಟ್ಟೇನ ತಣ್ಣಗೆ ಮಡಗಿರಲಿ"** ಅಂತ ಹನಿಗಣ್ಣಾಗಿ ಮಾತಾಡುತ್ತಾರೆ. ಹೀಗೆ ಜನಗಳ ಮನದಲ್ಲಿ ನೆಲೆಯೂರೋದು ಇದೆಯಲ್ಲ, ಅದು ಬಹಳ ಮಹತ್ವದ ಕೆಲಸ. ಅಷ್ಟೇ ಕಷ್ಟ ಕೂಡ. ಭರಣಯ್ಯನವರು ಆಗ ಮಾಡಿದ ಪತ್ರಿ ಕೆಲಸಗಳು, ಕೈಗೊಳ್ಳುತ್ತಿದ್ದ ನಿರ್ಣಯಗಳು ಈ ಹೊತ್ತಿಗೂ ಸಾರ್ಥಕವಾಗಿದೆ ಅನ್ನಿಸುತ್ತದೆ.

ಚಿರಸ್ಮರಣೆ

ತಂದೆಯ ಬಗ್ಗೆ ವಾತ್ಸಲ್ಯ - ಆರಾಧನಾ ಭಾವ ಹೊಂದಿ ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಅಪೂರ್ವ ಯೋಜನೆಯ ಕನಸು ಹೆಣೆದು, ಈ ಕೃತಿ ಪ್ರಕಟಿಸಿದ ಕೆಲವೇ ವಾರಗಳಲ್ಲಿ ಹೃದಯಾಘಾತಕ್ಕೆ ಸಿಲುಕಿ ನಮ್ಮನ್ನು ಅಗಲಿದ ಚೇತನದ ನೆನಪಿಗಾಗಿ



ಬಿ.ಗುರುಪ್ರಸಾದ್

ಮಾಜಿ ಶಾಸಕರು, ನೆಲಮಂಗಲ

ಜನನ: 28.11.1957 ನಿಧನ: 04.03.2010

ಗೆಳೆಯರು ಹಾಗೂ

ಆರ್.ಭರಣಯ್ಯ ಪೀಪಲ್ ಟ್ರೀ ಫೌಂಡೇಷನ್ (ರಿ.)



ಅಕ್ಕರೆಯ ಕಡಲು

ಆರ್. ಭರಣಯ್ಯ ನೆನಪಿನ ಸಂಪುಟ

ಸಂಪಾದಕ

ತುಕಾರಾಮ್ ಎಸ್.

AKKAREYA KADALU : Commemorative Volume on the Life and Achievements of Late Shri. R. Bharaniah, I.A.S. (Retd).

Edited by : Thukaram S.

ಮೊದಲ ಮುದ್ರಣ : ಫೆಬ್ರವರಿ 2010

First Impression : February 2010

ಪ್ರತಿಗಳು : ಒಂದು ಸಾವಿರ

Copies: One Thousand

ಬೆಲೆ : ರೂ. 360/– (ಸಾದಾ ಪ್ರತಿ), ರೂ. 480/– (ಕೇಸ್ ಬೈಂಡಿಂಗ್ ಪ್ರತಿ)

Price: Rs. 360/- (Perfect Binding), Rs. 480/- (Case Binding)

ಡಿ.ಟಿ.ಪಿ. ಮತ್ತು ವಿನ್ಯಾಸ : ಸೈಲೋಟಮ್ ಕ್ರಿಯೇಷನ್ಸ್, ಮೈಸೂರು

D.T.P. and Design : Silotum Creations, Mysore

Published by :

R. BHARANIAH PIPAL TREE FOUNDATION

79, Serpentine Road, 5th Block,
Kumara Park West Extension, Bengaluru - 560 020

Phone : 91-80-23363660, Fax : 91-80-23447564
web : www.rbharaniahpipaltreefdn.org

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000

ಚಾಮರಾಜಪೇಟೆ, ಬೆಂಗಳೂರು–೧೮

ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಸಲಹಾ ಸಮಿತಿ

ಮಂಗ್ಳೂರ್ ವಿಜಯ

ಪ್ರೊ. ಟಿ. ಎಸ್. ವೇಣುಗೋಪಾಲ್

ರಾಜು ಬಿ.

ಪ್ರೊ. ಎಂ. ಎಸ್. ಶೇಖರ್

ಹಿಮಾಂಶು ಸಿ. ಆರ್.

ಎಂ. ಹೆಚ್. ಶ್ರೀಧರಮೂರ್ತಿ

ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಶನ್

ಬಿ. ಗುರುಪ್ರಸಾದ್

ಬಿ. ವಿಜಯ ಕೃಷ್ಣ

ಶ್ರೀಮತಿ ಮಂಜುಳಾ ಸಿದ್ಧಯ್ಯ

ಕ್ಷೇತ್ರಾಧ್ಯಯನ

ಎಂ. ಹೆಚ್. ಶ್ರೀಧರಮೂರ್ತಿ — ಬಿ. ಎನ್. ಸಿದ್ದುಪ್ರಸನ್ನ

ತುಕಾರಾಮ್ ಎಸ್. — ಕುಮಾರ್–ಮಹೇಶ್

ರಾಘವೇಂದ್ರ ಕೆಸವಿನಮನೆ — ಕುಮಾರ

ಮುಖಪುಟ ವಿನ್ಯಾಸ

ಒಳ ಚಿತ್ರಗಳು

ಕೆ. ಕೆ. ಮಕಾಳಿ

ಪ್ರಖ್ಯಾತ ಕಲಾವಿದರು

ಪುಸ್ತಕ ವಿನ್ಯಾಸ

ರಾಜು ಬಿ., ಚಿಕ್ಕಮಗಳೂರು ಗಣೇಶ್, ಕುಮಾರ್–ಮಹೇಶ್

ಮುನ್ನುಡಿ

ಕಾಯಕವೇ ಕೈಲಾಸ

ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ
ತುಮಕೂರು - 572 104, ಕರ್ನಾಟಕ ರಾಜ್ಯ.

☎ : 2282211
: 2282411
Fax 0816-: 2282511

ಕ್ರ. ಸಂಖ್ಯೆ : 1607/2009-10

ದಿನಾಂಕ : 1/01/2010

ಸಂದೇಶ

ಹೌದು ಅವರು ಬಡವರ ರಾಯಭಾರಿ, ದಲಿತ ಲೋಕದ ಚಂದ್ರ, ಎರಡನೇ ಅಂಬೇಡ್ಕರ್ ಜಾತ್ಯತೀತ ವ್ಯಕ್ತಿತ್ವದ ಸಿರಿ. ಸಂಸ್ಕೃತದಲ್ಲಿ ವಿದ್ವಾಂಸ. ಜನರ ಬಾಯಲ್ಲಿ ಧರ್ಮರಾಯ. ಮಾನವೀಯತೆಯ ಮೌನಪ್ರೇಮಿ, ಕಾರ್ಯತತ್ಪರ, ದಕ್ಷತೆಯ ಹರಿಕಾರ, ಔದಾರ್ಯಶೀಲ ಹುಟ್ಟನ್ನು ಎಂದೂ ಸ್ವಲಾಭಕ್ಕಾಗಿ ಬಳಸಿಕೊಳ್ಳದ ಅಪರೂಪದ ವ್ಯಕ್ತಿ. ಸರ್ಕಾರದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಭ್ರಷ್ಟಾಚಾರ ಮುಕ್ತ ಶುದ್ಧ ಹಸ್ತ. ಅರ್ಥಶೌಚವನ್ನು ಕಾಪಾಡಿಕೊಂಡು ಬಂದ ಜನಾನುರಾಗಿ. ಬಳಿಗೆ ಸಹಾಯ ಯಾಚಿಸಿ ಬಂದ ಬಡವರಿಗೆ 'ಅಷ್ಟು ದೂರದಿಂದ ಯಾಕೆ ಕಾಸುಖರ್ಚು ಮಾಡಿಕೊಂಡು ಬಂದಿರಿ. ಒಂದು ಕಾಗದ ಬರೆದರೆ ಸಾಕಿತ್ತಲ್ಲ ಅಥವಾ ಫೋನ್ ಮಾಡಿದರೂ ಸಾಕಿತ್ತು ನಿಮ್ಮ ಕೆಲಸ ಆಗಿರೋದು' ಎನ್ನುತ್ತಿದ್ದ ವಿರಳಾತಿವಿರಳರು. ನೆನಪಿನ ರತ್ನಗಣಿ ಆತ್ಮೀಯತೆಯ ಅರವಟ್ಟಿಗೆ. ಕರ್ನಾಟಕದ ರೂವಾರಿ ನಿಜಲಿಂಗಪ್ಪನವರ ಪ್ರೀತಿ ಪಾತ್ರ. ಸೋಲನ್ನು ಶಿವಪ್ರಸಾದವೆಂದು ಸ್ವೀಕರಿಸಿದ ಸಮಚಿತ್ತದ ದಿವಂಗತ ಆರ್. ಭರಣಯ್ಯನವರು. ಅವರನ್ನು ಕುರಿತು ಗ್ರಂಥವೊಂದನ್ನು ಹೊರತರುತ್ತಿರುವುದನ್ನು ತಿಳಿದು ಸಂತೋಷವಾಯಿತು. ಮೃದು ಮನಸ್ಸಿನ ಭರಣಯ್ಯನವರ ಸ್ಮರಣೆಗೆ ಸಮುಚಿತವಾದ ಸೇವೆ.

ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಶನ್ ಸಂಸ್ಥೆಯು ಈ ಸೇವೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಶ್ರೀ ಶಿವಕುಮಾರ ಸ್ವಾಮಿಗಳು

(ಶ್ರೀ ಶಿವಕುಮಾರ ಸ್ವಾಮಿಗಳು)
ಶ್ರೀ ಸಿದ್ಧಗಂಗಾಮಠ

ಪರಿವಿಡಿ

ಅಲೆ – ಒಂದು

ಅಲೆ – ಎರಡು


ಕಂಡವರ ಕಣ್ಣಲ್ಲಿ; ಸಂದರ್ಶನಗಳು

ಅಲೆ - ಮೂರು

ಅಲೆ – ನಾಲ್ಕು

ಲೇಖನಗಳು

ಅಲೆ – ಐದು



ಪ್ರಸ್ತಾವನೆ

'ಭರಣಿ ಮಳೆ ಬಂದ್ರೆ ಧರಣಿ ತಂಪು' ಅಂತಾರಲ್ಲ ಹಂಗೆ......

• ತುಕಾರಾಮ್ ಎಸ್.

"ಶ್ರೀ ಆರ್. ಭರಣಯ್ಯ ಹಳೆಯ ತಲೆಮಾರಿಗೆ ಚೇತೋಹಾರಿ ಹೆಸರು. ಆ ಕಾಲದ ಹಳ್ಳಿಗಾಡಿನ ಅಪ್ಪಟ ದೇಸಿ ಪ್ರತಿಭೆ. ತನ್ನ ಬದುಕಿನ ಕಾಲದಲ್ಲಿ ಸಾವಿರಾರು ಪ್ರತಿಭೆಗಳನ್ನು ಗುರುತಿಸಿ, ಮುಂದೆ ತಂದ ಉದಾರಿ. ನಿರ್ಗತಿಕರನ್ನು ಕೈಹಿಡಿದ ಕರುಣಾಮಯಿ. ಬಡವರಿಗೆ ಆಶ್ರಯ ನೀಡಿದ ಹೃದಯವಂತ. ಶ್ರೇಣೀಕೃತ ಸಮಾಜದ ಕಣ್ಣಲ್ಲೂ ಬೆಳಗಿದ ಪ್ರತಿಭಾವಂತ. ದಲಿತ ಸಮುದಾಯದ ಘನತೆ-ಗೌರವವನ್ನು ವಿಸ್ತರಿಸಿದ ಧೀಮಂತ. ಸಂಸ್ಕೃತ ಪಂಡಿತ. ನೀತಿ-ನಿಯಮ ಪಾಲನೆಮಾಡಿ 'ಸೈ' ಎನಿಸಿಕೊಂಡ ನಿಷ್ಠಾವಂತ ಅಧಿಕಾರಿ. ತಮ್ಮ ವಿಶಿಷ್ಟ ನಡೆ ನುಡಿಯಿಂದಲೇ ಇಂದೂ 'ಹೌದಾ' ಎಂದು ಉದ್ಗಾರದ ಜೊತೆ ಬೆರಗುಗೊಳ್ಳುತ್ತಾ, ಸ್ಮರಿಸಿಕೊಳ್ಳುವ ವ್ಯಕ್ತಿತ್ವ." ಇದಿಷ್ಟು ಆರ್. ಭರಣಯ್ಯನವರನ್ನು ಬಲ್ಲವರು ಮತ್ತು ಅವರನ್ನು ಕಣ್ಣಾರೆ ಕಂಡವರು ಕಟ್ಟಿಕೊಡುವ ಚಿತ್ರ ಮತ್ತು ಅವರಿಂದ ಹಲವು ಬಗೆಯ ನೆರವು ಪಡೆದ ಹೃದಯಗಳಲ್ಲಿ ಮಡುಗಟ್ಟಿದಂತಿರುವ ಮಾತುಗಳು.

ಆರ್. ಭರಣಯ್ಯನವರ ಬಗ್ಗೆ ನಮ್ಮ ಹಿರಿಯರು ಆಡಿಕೊಳ್ಳುತ್ತಿದ್ದ ಮಾತುಗಳನ್ನು ಮಾತ್ರ ಕೇಳಿಸಿಕೊಂಡಿದ್ದ ನನಗೆ, ಇವರ ಕುರಿತು ಮಾಹಿತಿ ಸಂಗ್ರಹಕ್ಕೆ ತೊಡಗಿದಾಗ ಕೇಳಿಬಂದ ಮಾತುಗಳು ಇವು. ಈ ಮಾತುಗಳನ್ನಾಡಿದವರನ್ನು ಮತ್ತೆ ಮತ್ತೆ ಪ್ರಶ್ನೆ ಕೇಳುತ್ತಾ, ಮಾತನಾಡಿಸುತ್ತಾ ಹೋದಂತೆಲ್ಲಾ ಇದೇ ಮಾತುಗಳು ಎಲ್ಲಿ ಹೋದರೂ ಕೇಳತೊಡಗಿತು. ಜಾತಿ-ಮತ ಭೇದವಿಲ್ಲದೆ, ಎಲ್ಲರಲ್ಲೂ ಇದೇ ಮಾತುಗಳು. ಒಂದು ರೀತಿ ಆರ್. ಭರಣಯ್ಯನವರನ್ನು 'ದೇವತಾ ಮನುಷ್ಯ', ಅಷ್ಟೇ ಅಲ್ಲ ಅವರೊಬ್ಬ 'ಜನತಾ ಮನುಷ್ಯ' ಕೂಡ ಎಂದು ಹಲವು, ಹತ್ತು ಘಟನೆಗಳನ್ನು ವಿವರಿಸತೊಡಗಿದರು. ಕೊಳ್ಳೇಗಾಲ, ಚಾಮರಾಜನಗರ, ಚಿತ್ರದುರ್ಗ ಸೀಮೆಯವರೆಗೆ, ಗುಲ್ಬರ್ಗಾ, ಬಿಜಾಪುರದಿಂದ ಮೈಸೂರು ಬೆಂಗಳೂರಿನವರೆಗೆ, ಅವರ ವ್ಯಕ್ತಿತ್ವ ಚಾಚಿಕೊಂಡಿರುವುದು ತಿಳಿಯಿತು. ತಲೆಮಾರುಗಳ ಅಂತರದಿಂದ, ಅವರ ಬಗ್ಗೆ ಲಿಖಿತ ದಾಖಲೆಗಳೇ ಸಿಗದ ಕಾಲಘಟ್ಟದಲ್ಲಿ ನಿಂತು ಮೇಲಿನ ಮಾತುಗಳನ್ನು ಖುದ್ದಾಗಿ ಕೇಳತೊಡಗಿದೆ. ಭಯ ಮಿಶ್ರಿತ ಗೌರವ, ಪ್ರೀತಿ ಬೆರೆತ ಭಾವನೆಗಳು ಒಟ್ಟೊಟ್ಟಿಗೆ ಮೂಡತೊಡಗಿದವು. ಈ ಕೆಲಸ ಒಳಗೊಳಗೆ ಯಾವುದೋ ಸಾಹಸಕ್ಕಿಳಿಸುತ್ತಿದೆ ಎಂಬ ಅಳುಕು. ದೃಢ ಮನಸ್ಸಿನಿಂದ ಅವರು ಬದುಕಿದ ಕಾಲದ ಹೆಜ್ಜೆಗುರುತುಗಳ ಕಡೆಗೆ ನಾನು ಮತ್ತು ನಮ್ಮ ಬಳಗ ನಡೆದೆವು. ಮೊದಲು ಸಮೀಪ ಸಿಕ್ಕವರ ಜೊತೆ ಮಾತಾಡಿದೆವು. ನಂತರ ಅವರು ನೀಡಿದ ಹೆಸರುಗಳ ಅನುಸರಿಸಿ ನಡೆದೆವು. 'ಹೌದು' ಎಲ್ಲರಲ್ಲೂ ಅವರ ಬಗ್ಗೆ ಅದೇನೋ ಗೌರವ, ಅದೆಂಥದೋ ಅವ್ಯಕ್ತ ಪ್ರೀತಿ, ಹೆಸರು ಹೇಳಿದ ಕೂಡಲೆ ಮಿಂಚಿನ ಸಂಚಾರ. 50-60 ವರ್ಷಗಳ ಹಿಂದಕ್ಕೆ ಸುಮ್ಮನೆ ಜಿಗಿದು, ಖುಷಿಗೊಂಡು, ಮುದಗೊಂಡು, ದುಃಖ ತಂದುಕೊಂಡು, ವಿಷಾದ ಹೇಳಿ, ಸುಮ್ಮನೆ ಪ್ರೀತಿಯ ಮಳೆಗರೆದರು. ತಮ್ಮ ನೆನಪುಗಳ ಬುತ್ತಿ ಬಿಚ್ಚಿ ಹಂಚಿಕೊಂಡರು. ಎಲ್ಲಿ ಹೋದರಲ್ಲಿ ಅವರು ಮಾಡಿದ ಉಪಕಾರ ಮತ್ತು ನೀಡಿದ ಸಹಾಯಗಳ ನೆನಪುಗಳೇ ಬಿಚ್ಚಿಕೊಳ್ಳತೊಡಗಿದವು. ಈ ಎಲ್ಲಾ ನೆನಪುಗಳು ಮತ್ತು ನೀಡಿರುವ ಆ ಎಲ್ಲಾ ದಾಖಲೆಗಳು ಅವರವರ ಮಾತಿನಲ್ಲಿ ಮುಂದೆ ಇವೆ.

ಆದರೆ ಇಂಥ ಮಾತಿನಿಂದಲೇ ಶ್ರೀ ಭರಣಯ್ಯ ಉಳಿದುಕೊಂಡು ಬಂದಿರುವರೆ? ಆ ಕಾಲಘಟ್ಟದಲ್ಲಿ ಇಷ್ಟೆಲ್ಲಾ ಮೆಚ್ಚುಗೆಯ ಮತ್ತು ಪ್ರೀತಿಯ ಮಾತುಗಳನ್ನು ಒಬ್ಬ ವ್ಯಕ್ತಿ ಅನ್ನಿಸಿಕೊಂಡಿರಲು ಸಾಧ್ಯವಿತ್ತೆ? ಹೌದಾದರೆ ಆ ಹೆಜ್ಜೆ ಗುರುತುಗಳೇನು? ಇವರ ಪರಿಶ್ರಮದ ವೈಖರಿ ಎಂಥದ್ದು? ಆಗ ಸೋಮನಾಥಪುರದ ಪರಿಸರ, ಸಮಾಜ ನಿಜಕ್ಕೂ ಹೇಗಿತ್ತು? ಇಂದಿಗಿಂತಲೂ ಆಗ ಇದ್ದ ಅಸ್ಪೃಶ್ಯತೆ, ಜಾತೀಯತೆಗಳು ಒಬ್ಬ ವ್ಯಕ್ತಿಯನ್ನು ವಿಶಿಷ್ಟವಾಗಿಸಲು ಪೂರಕವಾಗಿತ್ತೆ? ಅದರಲ್ಲೂ ದಲಿತ ಜನಾಂಗದ,

ಅನಕ್ಷರತೆಯಲ್ಲಿ ಮಿಂದು ಎದ್ದ ಕುಟುಂಬವೊಂದರಲ್ಲಿ ಹೀಗೊಂದು ಪ್ರತಿಭೆಯನ್ನು ಆ ಸಮಾಜ ಸ್ವೀಕರಿಸಲು ಸಾಧ್ಯವಾದದ್ದು ಹೇಗೆ? ಇವೆಲ್ಲ ವಿಸ್ಮಯ ಮತ್ತು ಗೌರವ ತರಿಸುವಂತಹ ಸಂಗತಿಗಳಾಗಿ ತೋರತೊಡಗಿತು. ಪ್ರತಿಭೆಯೊಂದರಿಂದಲೇ ಜಾತಿ, ವರ್ಗವನ್ನು ದಾಟಿಬರಲೂ ಸಾಧ್ಯವಿದೆಯೋ? ಪ್ರತಿಭೆ ಮಾತ್ರದಿಂದಲೇ ಸಾಮಾಜಿಕವಾಗಿ ಸಮಾನವಾದ ಸ್ಥಾನಮಾನವನ್ನು ಅನುಭವಿಸಲು ಸಾಧ್ಯವೇ? ಇಂಥ ಹತ್ತು ಹಲವಾರು ಕುತೂಹಲ – ಪ್ರಶ್ನೆಗಳು ಆರ್. ಭರಣಯ್ಯನವರ ಬಗ್ಗೆ ತಿಳಿಯಲು ಹೊರಟಾಗ ಎದುರಾದವು. ಹೀಗೆ ಆರ್. ಭರಣಯ್ಯನವರ ವ್ಯಕ್ತಿತ್ವವನ್ನು ಹುಡುಕಿ ಹೊರಟ ನಮಗೆ ಮೊದಲು ಎದುರಾದದ್ದು, ಇತಿಹಾಸದ ಗರ್ಭವನ್ನು ಶೋಧಿಸುವವರಿಗೆ ಎದುರಾಗಬಹುದಾದ ಸವಾಲುಗಳು! ಈ ಸಾಹಸದ ದಾರಿಗೆ ಇಳಿಯುವುದಕ್ಕೆ ಮುನ್ನ ತಮ್ಮೊಡನೆ ಹಂಚಿಕೊಳ್ಳಬಹುದಾದ ಸಂಗತಿವೊಂದನ್ನು ಮೊದಮೊದಲಿಗೆ ಹೇಳಬಯಸುವೆ. ಈ ಸಂಗತಿ ನನ್ನ ಬಾಲ್ಯದಲ್ಲಿ ಬೇರೂರಿದ್ದ ಭರಣಯ್ಯನವರ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು.

ಆಗ ನಾವಿನ್ನು ಪ್ರಪಂಚಕ್ಕೆ ಕಣ್ಣುಬಿಡುತ್ತಿದ್ದ ಕಾಲ! ದಲಿತ ಕೇರಿಗಳಲ್ಲಿ ಓದಿದವರು ದೇವರಂತೆ ಕಾಣತೊಡಗಿದ್ದರು! ಹಾಗೆ ಓದಿದವರು ಊರು–ಕೇರಿಗೆ ಬಂದರೇ ಎದೆ 'ಝುಲ್' ಎನ್ನುತ್ತಿತ್ತು. ಅವರು ನಮ್ಮವರೆ ಅನಿಸಿದರೂ ಅವರನ್ನು ನಮ್ಮ ಬಾಲ್ಯದ ಕಣ್ಣುಗಳು ಎದುರುಗೊಳ್ಳುವುದಕ್ಕೆ ಅಳುಕುತ್ತಿದ್ದವು! ಇಂಥವರ ಬಗ್ಗೆ ನಮ್ಮ ಅವ್ವ–ಅಪ್ಪ, ತಾತ–ಅಮ್ಮಂದಿರು ಮಾತಾಡುವಾಗ ನಮ್ಮನ್ನು ಮತ್ತಷ್ಟೂ ಅಳ್ಳೆದೆಯವರನ್ನಾಗಿ ಮಾಡಿಬಿಡುತ್ತಿತ್ತು! ಓದಿದವರೆಲ್ಲರ ಬಗ್ಗೆ ಇದುವರೆಗೂ ಭಯಮಿಶ್ರಿತ ಗೌರವ ಬೀಜಉಳಿದು ಬಂದಿರುವುದು ಹೀಗೆಯೇ ಇರಬೇಕು. ಹೀಗೆ ಓದಿಕೊಂಡು ಬಂದವರಿಗೆ ಆ ಕಾಲದಲ್ಲಿ ನಮ್ಮ ಕೇರಿಗಳಲ್ಲಿ ಅಂಥ ಮಾನ್ಯತೆ ಸಿಕ್ಕುತ್ತಿದ್ದುದು ಸಹಜವಾಗಿರುತ್ತಿತ್ತು! ನಮ್ಮ ಊರು ಕೇರಿಗಳೊಳಗೆ ಅದು ಚಾರಿತ್ರಿಕ ಸಂಗತಿಯಾಗಿರುತ್ತಿತ್ತು!! ಬರಿ ಓದಿದವರಿಗಿಂತಲೂ ಓದಿ ಕೆಲಸಕ್ಕೆ ಸೇರಿದವರ ಬಗ್ಗೆ ಇನ್ನೂ ಹೆಚ್ಚಿನ ಭೀತಿ ಅನುಭವಿಸಬೇಕಾಗುತ್ತಿತ್ತು. ಅದಕ್ಕೇ ಇರಬೇಕು ಅಕ್ಷರ ಕಲಿಕೆಗೆ ಈಗಲೂ 'ಪ್ರೀತಿ' ಸಿಕ್ಕಿಲ್ಲ! ಅದರಲ್ಲೂ 'ಪೊಲೀಸ್' ಇಲಾಖೆಯಲ್ಲಿ 'ಪೇದೆ' ಆದರಂತೂ ದೇವರೇ ಗತಿ. ಅವನು ನಡೆದಾಡಿದ ಜಾಗವೆಲ್ಲ ಪಾವನವೇ. ಊರ ಮಾರಿ–ಮಸಣಿಯರ ಬಿಟ್ಟರೆ 'ಭಯ–ಭಕ್ತಿ–ಗೌರವ ಸಲ್ಲಿಕೆ' ಆಗುತ್ತಿದ್ದುದು ಇವರಿಗೇ ಮೊದಲು. ಆಗಿನ ಆ 'ಆಸಾಮಿ'ಗಳು ಅಷ್ಟೆ. ಊರ ಹೊರಗೆ ಹೇಗಿರುತ್ತಿದ್ದರೋ ತಿಳಿಯದು. ಊರಿನಲ್ಲಿ ಅವರ ಮನೆಯ ಮಟ್ಟಿಗೆ ಜಬರದಸ್ತು ಮಾತ್ರ ಹೇಳಲಸದಳ! 40–50 ವರ್ಷಗಳ ಕಾಲಘಟ್ಟದಲ್ಲಿ ಈಗ ಬದಲಾಗಿರುವ ಈ ಗಳಿಗೆ ಅವೆಲ್ಲ

ನೆನಪಾಗುತ್ತಿವೆ. ಈಗ ನಗು ಎನಿಸಿದರೂ ಅಂದು ಆ ಬಗೆಯ ನಡವಳಿಕೆ ಸಹಜವೆಂಬಂತೆ ತೋರುತ್ತಿತ್ತು. ಅಂದು ಹಾಗೆಯೇ ಅವರಿಗೆ ತಮ್ಮ ತಮ್ಮೊಳಗೆ ಬದುಕು ಚಲಾಯಿಸಿಕೊಂಡಿರಬೇಕಿದ್ದುದು ಅನಿವಾರ್ಯವಾಗಿರುತ್ತಿತ್ತೇನೋ.

ಹೀಗೆ ನಮ್ಮ ಬಾಲ್ಯದ ಕಣ್ಣುಗಳು ಹಲವು ಬಗೆಯ ಭೀತಿಯುಕ್ತ ನೋಟಗಳಿಂದ ತುಂಬಿ ತುಳುಕಾಡಿಕೊಳ್ಳುತ್ತಿದ್ದವು. ಆದರೆ ಅದೇ ವೇಳೆ ತಮ್ಮದೇ ಸಮುದಾಯದ ದೂರದೂರಿನ ದೊಡ್ಡವರ ಬಗ್ಗೆ ಮಾತುಕತೆಗಳಾಗುತ್ತಿದ್ದವು. ನಮ್ಮ ಕಣ್ಣನೋಟದಲ್ಲಿ, ಕಣ್ಣೆದುರಿನ ಆ ಓದಿದ ನೌಕರರು ವಿಜೃಂಭಿಸಿದರೆ, ನಮ್ಮ ಮನಃಪಟದಲ್ಲಿ ಅಲ್ಲೆಲ್ಲೋ ಇವರನ್ನು ಮೀರಿದವರು ಇರುವುದು ಮಾತುಕತೆಯಿಂದ ತಿಳಿದುಬರುತ್ತಿತ್ತು. ಊರ ಒಳಗೆ ಇವರ ಮೆರವಣಿಗೆ ನಡೆದಂತೆಲ್ಲಾ ನಮ್ಮ ಮನಃಪಟದಲ್ಲಿ ಊರ ಹೊರಗಿರಬಹುದಾದ ಆ ದೊಡ್ಡವರ ಮೆರವಣಿಗೆ ನಡೆಯುತ್ತಿತ್ತು. ಇಂಥ ಮೆರವಣಿಗೆಯ ಸಾಲಿನಲ್ಲಿ ಮೈಸೂರು ಸೀಮೆಯಲ್ಲಿ ಎಷ್ಟೋ ಜನ ನಡೆದುಹೋಗಿದ್ದಾರೆ. ಅವರಲ್ಲಿ ಆರ್. ಭರಣಯ್ಯನವರು ಒಬ್ಬರಾಗಿದ್ದರು ಎಂಬುದು ಈಗ ನೆನಪಾಗುತ್ತಿರುವ ಸಂಗತಿ.

ನಮ್ಮ ಊರು ಮೈಸೂರು ನಗರಕ್ಕೆ ಒತ್ತೊತ್ತಾಗಿ ಅಂಟಿಕೊಂಡಿರುವ ಊರೇ. ಆದರೆ ಆರ್. ಭರಣಯ್ಯನವರ ಹೆಸರಿನ ಜೊತೆಗೆ ಸೋಮನಾಥಪುರದ ಹೆಸರು ಮಿಂಚಿನಂತೆ ಸಂಚಾರವಾಗುತ್ತಿತ್ತು. ನಮ್ಮೂರು ಮೈಸೂರು ಅರಮನೆ ಮೊಗ್ಗಲಲ್ಲಿದ್ದರೂ ಇದು ನೀಡುವ ಪುಳಕಕ್ಕಿಂತ ಸೋಮನಾಥಪುರದ ವಿಚಾರ ಅದ್ಯಾಗೋ ಏನೋ ಒಂದು ಬಗೆಯ ಅವ್ಯಕ್ತ ಭಾವನೆಯತ್ತ ನಮ್ಮನ್ನು ಸೆಳೆದಿಟ್ಟಿತ್ತು! ಇದರೊಟ್ಟಿಗೆ ಕೊಳ್ಳೇಗಾಲ, ತಿ. ನರಸೀಪುರ, ಸೋಸಲೆ, ಮಾಂಬಳ್ಳಿ, ದುಗ್ಗಟ್ಟಿ, ಬನ್ನೂರು, ನಂಜನಗೂಡು, ಚಾಮರಾಜನಗರಗಳೂ ಕೂಡ ಆಗಾಗ ಸಾಲುಗಟ್ಟಿ ಬರುತ್ತಿದ್ದವು. ಆಗ ನಮ್ಮನಮ್ಮೊಳಗೆ ಒಮ್ಮಿಂದೊಮ್ಮೆಗೆ ವಿಸ್ತಾರವಾದ ಜಗತ್ತೊಂದು ತೆರೆದುಕೊಳ್ಳುತ್ತಿತ್ತು. ವಿಸ್ಮಯಗೊಳಿಸುವ ಅಂಥ ಆಲೋಚನೆಗಳಿಗೆ ಮೊದಲ ತಲೆಮಾರುಗಳಲ್ಲಿ ಓದು ಕಲಿತವರು ಮತ್ತು ಅವರೆಲ್ಲರ ಸರ್ಕಾರಿ ಕೆಲಸಗಳೇ ಮುಖ್ಯಕಾರಣವಾಗಿತ್ತು!

ಈ ನೆನಪುಗಳ ಮೆರವಣಿಗೆಯಲ್ಲಿ ಕಂಡುಕೊಳ್ಳುತ್ತಿದ್ದ ಇನ್ನೊಂದು ವಿಚಿತ್ರ ಸತ್ಯವೂ ಜೊತೆಯಲ್ಲಿರುತ್ತಿತ್ತು. ಅದೇನೆಂದರೆ, ಇಲ್ಲಿನ ನಮ್ಮ ಕಣ್ಣೆದುರಿನ ಓದಿದ ಹಾಗೂ ಸರ್ಕಾರಿ ನೌಕರರ ಬಗ್ಗೆ 'ಪ್ರೀತಿ' ಮೂಡುತ್ತಿರಲಿಲ್ಲ. ಅದು ಭೀತಿಯಾಗಿ ಮಾತ್ರ ಮುಂದುವರಿಯುತ್ತಿತ್ತು. ಆದರೆ ದೂರದ ಅಲ್ಲೆಲ್ಲೋ ಕೇಳುವ ಆ ಓದಿದ, ಆ ಸರ್ಕಾರಿ ಹುದ್ದೆಯಲ್ಲಿದ್ದ ವ್ಯಕ್ತಿಯ ಬಗ್ಗೆ ವಿಶೇಷವಾದ ಪ್ರೀತಿ ಬೆರೆತ ಗೌರವ ಸುಳಿದು ಹೋಗುತ್ತಿತ್ತು. ಕುತೂಹಲಗಳು ಇಮ್ಮಡಿಸುತ್ತಿತ್ತು. ಅದಕ್ಕೆ ಕಾರಣವಿಷ್ಟೆ.

ಅವರ ಬಗ್ಗೆ ಕೇಳಿಬರುತ್ತಿದ್ದ ಮತ್ತು ಅವರ ಬಗ್ಗೆ ಚಾಲ್ತಿಯಲ್ಲಿದ್ದ ಜನೋಪಕಾರದ ಮಾತುಗಳು. ಆ ಮಾತುಗಳ ಮಾದರಿಗಳ್ಯಾವುವೆಂದರೆ, "ಭರಣಯ್ಯನವರಂತೆ, ಅಮಲ್ದಾರಂತೆ, ನಮ್ಮ ಜಾತೀಲೇ ಇನ್ನೊಬ್ಬ ಅಂತವರು ಆ ಸೀಮೆಯಲ್ಲೇ ಇಲ್ಲವಂತೆ. 'ಯಾರೋದ್ರೂ ಕೂಡ, ಕಾಸು-ಕರಿಮಣಿ, ಬಟ್ಟೆ-ಬರಿನ ದಾನಮಾಡರಂತೆ, ಎಂಥ ಗರೀಬ್‌ನಿಗೂ ಕೈಯೆತ್ತಿ ದಾನಮಾಡರಂತೆ'. ಏನ್ ನೂರಾರು ಎಕರೆ ಜಮೀನಿದ್ದದಂತೆ, ಆಳುಕಾಳೂ ಅನ್ನೋದು ನೂರಾರಂತೆ" ಇತ್ಯಾದಿ ಮಾತುಗಳು ಸ್ಥಳೀಯರ ಮೂಲಕ ಊರಿನ ಮಾತಾಗಿ ಹರಿದಾಡುತ್ತಿತ್ತು. ಆ ಮಾತುಗಳಲ್ಲಿ ಮಲೆಮಾದೇಶ್ವರನ ಹಿರಿಮೆ, ಗರಿಮೆಯನ್ನೋ ಬೊಪ್ಪಣ್ಣಪುರ, ಚಿಕ್ಕಲ್ಲೂರಿನ ಸಿದ್ದಪ್ಪಾಜಿ, ರಾಚಪ್ಪಾಜಿ, ಮಂಟೇಸ್ವಾಮಿಗಳ ಪವಾಡಗಳನ್ನು ಕುರಿತು ಕೊಂಡಾಡುವ ಭಾವದಲ್ಲಿರುತ್ತಿತ್ತು. "ಮೈಸೂರು ಅರಸರನ್ನು ಬಿಟ್ಟರೆ ನಮ್ಮನ್ನು ಪೊರೆಯುವ ಶಕ್ತಿ ಇರುವುದೇ ಇವರಿಗಂತೆ" ಎನ್ನುವ ಎತ್ತರಕ್ಕೆ ಮಾತುಗಳು ಊರು ಕೇರಿಗಳಲ್ಲಿ ಮನೆ-ಮನಗಳಲ್ಲಿ ತುಂಬಿ ತುಳುಕುತ್ತಿದ್ದವು. ಬಾಲ್ಯದ ಕಣ್ಣು ಮತ್ತು ಮನಸ್ಸುಗಳು ಆದಷ್ಟು ಇವರನ್ನು ಅಪ್ಪಿಕೊಂಡು ಜೋಪಾನವಾಗಿರಿಸಲು ಹಾತೊರೆಯುತ್ತಿತ್ತು. ಈಗ ಅಷ್ಟೂ ನೆನಪುಗಳು, ಅದನ್ನು ಮತ್ತೆ ಕಣ್ಣಿಗೆ ಕಟ್ಟಿಕೊಳ್ಳಲು, ಆ ಗಳಿಗೆಯನ್ನು ನೆನೆಯಲು ಯತ್ನಿಸುತ್ತಿದೆ. ಬಾಲ್ಯದ ಆ ಕಣ್ಣೋಟದಿಂದ ಹೊರಗೆ ಬಂದು ನೋಡಲು ಹವಣಿಸುತ್ತಿದೆ. ಹೀಗೆ ಆರ್. ಭರಣಯ್ಯನವರ ಚಿತ್ರ ನಮ್ಮಲ್ಲಿ ಇರುವುದು ಆಗಿನದ್ದೇ. ಆಗ ನಮ್ಮ ಹಿರಿಯರು ಕಟ್ಟಿದ್ದು. ಇದನ್ನೆಲ್ಲ ಪ್ರಸ್ತುತ ಇಡಿಗಂಟು ಮಾಡಿಕೊಂಡು ಆರ್. ಭರಣಯ್ಯನವರ ಕಾಣಲು, ಆ ಕಾಲವ ಎಡತಾಕಿ ನೋಡಲು, ನಾವೊಂದು ತಂಡವಾಗಿ ವರ್ಷದ ಹಿಂದೆ ಹೊರಟೆವು. ಆ ವ್ಯಕ್ತಿಯ ಬಗ್ಗೆ ಅವರ ಮನೆ, ಆ ಊರು-ಕೇರಿಗಳನ್ನು ತಿರುಗುತ್ತಾ ನಡೆದೆವು. ಹೀಗೆ ನಡೆದಂತೆಲ್ಲಾ ತಿರುತಿರುಗಿ ಹೋಗಿಬಂದಂತೆಲ್ಲಾ ಸಿಕ್ಕಿದ್ದು, ಕಟ್ಟಿದ್ದು ಈಗ ತಮ್ಮ ಮುಂದಿದೆ.

ಈ ಕ್ಷೇತ್ರಾಧ್ಯಯನದ ಉದ್ದಕ್ಕೂ ನಮಗೆ ಪಾಠವಾಗಿ ದಕ್ಕಿದ್ದು ಒಂದಂಶವಿದೆ. ಅದು ಆಗಿನ ಎಂದೂ ಮರೆಯಬಾರದ ಸಂಗತಿಯಾಗಿ ತೋರಿದೆ. ಅದೇನೆಂದರೆ ಆಗಿನ ಒಳ್ಳೆಯ ಕೆಲಸಗಳ ಸ್ಮರಣೆ. ಒಳ್ಳೆಯದನ್ನೇ ಮಾಡಬೇಕೆಂಬ ಉತ್ಕಟ ಹಂಬಲ. ಒಳ್ಳೆಯ ಕೆಲಸಗಳು ಯಾವುದಾದರೂ ಆಗಲಿ, ಆ ಕೆಲಸ ಮಾಡಿದವನು ಆತ ದೊಡ್ಡವನೆನಿಸಿಕೊಳ್ಳುತ್ತಿದ್ದ, ದೇವರಾಗುತ್ತಿದ್ದ! ಜಾತಿ-ಮತ ಭೇದವಿಲ್ಲದೆ ಎಲ್ಲರ ಗೌರವಕ್ಕೆ ಪಾತ್ರವಾಗುತ್ತಿದ್ದ. ತಮ್ಮವನೊಬ್ಬ ಇತರೇ ಜಾತಿಯನ್ನು ಮೀರಿಸಿ ಬೆಳೆಯುತ್ತಿದ್ದಾನೆಂಬ ಸಂಭ್ರಮವೊಂದು ಈ ನಾಡಿನೆಲ್ಲೆಡೆ ಕಾಣಿಸುತ್ತಿತ್ತು. ಆ ಸಂಭ್ರಮವೊಂದರಿಂದಲೇ ಊರು ತಾನು ತಬ್ಬಲಿಯಲ್ಲ, ನಮ್ಮನ್ನೆಲ್ಲ ಕಾಯುವವನು

ಅಲ್ಲೆಲ್ಲೋ ಒಬ್ಬನಿದ್ದಾನೆ ಎಂಬ ಮನೋಧೈರ್ಯ ತಂದುಕೊಂಡು ಬದುಕಲು ಮೊದಲಾಗುತ್ತಿತ್ತು. ಆರ್. ಭರಣಯ್ಯನವರ ಕೆಲಸದ ಬಗ್ಗೆ ನೆನೆದವರ ಮನದಾಳದಲ್ಲಿ ಇಂತದೊಂದು ಸಂಗತಿ ಸದಾ ಸಂಚರಿಸುತ್ತಲೇ ಬಂದಿದೆ. ಈಗಲೂ ಹಾಗೆಯೇ ಇದೆ! ಇಂಥದೇ ಭಾವನೆಗಳು ಅಂಬೇಡ್ಕರ್ ವಿಷಯಗಳಲ್ಲೂ ಕಾಣಬಹುದು. ಆದರೆ ವಿಶೇಷವೆಂದರೆ ಅನಕ್ಷರಸ್ಥ ದಲಿತ ಜಗತ್ತು ಅಂಬೇಡ್ಕರನ್ನು ಅಥವಾ ಆರ್. ಭರಣಯ್ಯನವರನ್ನು ನೋಡುವುದಕ್ಕೂ, ಅಕ್ಷರಸ್ಥ ದಲಿತ ಜಗತ್ತು ನೋಡುವುದಕ್ಕೂ ಒಂದು ವ್ಯತ್ಯಾಸವನ್ನು ತೋರಿಸಿದೆ. ಅನಕ್ಷರಸ್ಥ ದಲಿತ ಜಗತ್ತಿಗೆ ಅಂಬೇಡ್ಕರ್ ದೈವ ಮತ್ತು ಸಂಭ್ರಮ. ಸುಮ್ಮನೆ ಎದೆಯಲ್ಲಿ ಬಚ್ಚಿಟ್ಟುಕೊಂಡು ಇದ್ದುಬಿಡುವ ಸ್ವಭಾವ. ಮನೆದೇವರಂತೆ ಮನದೊಳಗೆ ಇಟ್ಟಿಕೊಂಡು ಮನದ ಕನ್ನಡಿಯೊಳಗಿಂದ ನೋಡಿಕೊಳ್ಳುವಗುಣ. ತನ್ನ 'ಮನೆದೇವರು' ಅದನ್ನು ತಾನು ಜೋಪಾನವಾಗಿಟ್ಟುಕೊಂಡರಾಯಿತು ಎಂಬ ದುಡ. ಆದರೆ ಅಕ್ಷರಸ್ಥ ದಲಿತ ಜಗತ್ತಿನದು ಕೊಂಚ ಬೇರೆಯೆ. ಅದು ಹೊರ ಪ್ರಪಂಚಕ್ಕೆ ಅಂಬೇಡ್ಕರ್‌ನ್ನಿಟ್ಟು ಸಂಭ್ರಮಿಸಬೇಕು. ರಕ್ಷಾ ಕವಚವಾಗಿಯೂ ಬಳಸಿಕೊಳ್ಳಬೇಕು. ವೈಚಾರಿಕ ಜಗತ್ತಿನಲ್ಲಿ ಅವರನ್ನು ಮೇರೆ ಮೀರಿದವರೆಂದು ರುಜುವಾತು ಪಡಿಸಬೇಕು. ಆದರೆ ಅನಕ್ಷರಸ್ಥ ಜಗತ್ತಿನ ಆ ಆಪ್ತತೆ ಅಂಬೇಡ್ಕರರನ್ನು ದಿಕ್ಕುದೆಸೆಯೆಂದೆಣಿಸುವ ಮನಸ್ಸು, ಇಲ್ಲಿ ಅಕ್ಷರಸ್ಥ ಜಗತ್ತಿನಲ್ಲಿ ಕಾಣುವುದು ಕಮ್ಮಿ. ಇಡೀ ಮನುಕುಲದ ಮನಸ್ಸನ್ನು ಬುದ್ಧ ತತ್ವದಿಂದ ಶುದ್ಧಗೊಳಿಸಿದ ಅಂಬೇಡ್ಕರ್ ತೋರಿಕೆಯ ಸಂಭ್ರಮದಿಂದ ಅಪರಿಚಿತರಾಗಿಬಿಡುತ್ತಿರುವ ಅಪಾಯವೊಂದು ಬದಲಾದ ಕಾಲದಲ್ಲಿ ಅಕ್ಷರಸ್ಥ ಜಗತ್ತಿನಲ್ಲಿ ಕಾಣುತ್ತಿರುವಂತಿದೆ. ಇರಲಿ ಇದಕ್ಕೆ ಬೇರೆಯದೇ ಚರ್ಚೆ ನಡೆಯಬೇಕಿದೆ.

ಈ ಸಂದರ್ಭದಲ್ಲಿ ನೆನಪಿಗೆ ಬಂದ ಮತ್ತೊಂದು ಅಂಶವೆಂದರೆ; ನಾವೆಲ್ಲ ತಿಳಿದಂತೆ ಡಾ. ಬಿ. ಆರ್. ಅಂಬೇಡ್ಕರ್ ಆ ಕಾಲದಲ್ಲಿ ಈ ಶ್ರೇಣೀಕೃತ ಸಮಾಜದಲ್ಲಿ ಕಡೆಗಣಿಸಲ್ಪಟ್ಟ ಸಮಾಜದಿಂದ ಎದ್ದುಬಂದವರು. ಅಪಾರ ನೋವು ಅವಮಾನಗಳನ್ನು ಅನುಭವಿಸುತ್ತಲೇ ಬೆಳೆದವರು. ವಿವಿಧ ಕ್ಷೇತ್ರಗಳಲ್ಲಿ ಅಪಾರ ಜ್ಞಾನ ಮತ್ತು ವಿದ್ವತ್‌ನ್ನು ಗಳಿಸಿದರು. ಆ ಮೂಲಕ ಅತ್ಯಂತ ಘನತೆಯಿಂದ ಅನೇಕ ಸಾಧನೆಗಳನ್ನು ಮಾಡಿದರು. ಅವರನ್ನು ಬೌದ್ಧಿಕ ಕೀಳರಿಮೆ ಎಂದೂ ಕಾಡಲೇ ಇಲ್ಲ. ಅವರು ಗಳಿಸಿದ ಪಾಂಡಿತ್ಯದಿಂದಾಗಿ ಅರ್ಥಶಾಸ್ತ್ರ ಮತ್ತು ರಾಜಕೀಯಶಾಸ್ತ್ರ, ಧರ್ಮಶಾಸ್ತ್ರ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ನಿರೂಪಿಸಿದ ವಿದ್ವತ್ ಅವರನ್ನು ಆ ಕಾಲದಲ್ಲಿ ದಲಿತ ಸಮುದಾಯದಲ್ಲೇ ವಿಶಿಷ್ಟವೆನಿಸುವಂತೆ ರೂಪಿಸಿತು. ಭಾರತ ದೇಶ ಮತ್ತು ಅಂದಿನ ಸಮಾಜಕ್ಕೆ, ಬೌದ್ಧ ಧರ್ಮದ ಸಾರವನ್ನು ಮೂಲದ ಆಶಯಗಳಂತೆಯೇ ಪುನರ್

ರೂಪಿಸಿಕೊಟ್ಟರು. ಆಗಿನ ಅಂಬೇಡ್ಕರ್‌ರವರ ಸಮಕಾಲೀನರಾದ ಯಾರಲ್ಲಿಯೂ ಕಾಣಲಾಗದ ವಿಶಿಷ್ಟ ನೋಟವೊಂದು, ಅಂಬೇಡ್ಕರಲ್ಲಿತ್ತು. ಅದಕ್ಕೆ ಕಾರಣವೇ ಅವರ ಬೌದ್ಧಿಕ ಹಸಿವಿನಿಂದ ಗಳಿಸಿದ ಜ್ಞಾನವಾಗಿತ್ತು. ಬಹುಭಾಷಾ ಪಂಡಿತರಾಗಿದ್ದ ಅವರು ಉರ್ದು, ಹಿಂದಿ, ಇಂಗ್ಲಿಷ್, ಮರಾಠಿ, ಪಾಳಿ, ಪ್ರಾಕೃತ, ಸಂಸ್ಕೃತ ಭಾಷೆಗಳಲ್ಲಿ ಪರಿಣತಿ ಹೊಂದಿದ್ದರು. ಪ್ರತಿ ಭಾಷೆಯನ್ನೂ ದೀರ್ಘವಾಗಿ ಅರಿತುಕೊಂಡು ಆ ಭಾಷೆಗಳಲ್ಲಿರುವ ಜನಮುಖಿ ಸಂಗತಿಗಳನ್ನು ಅಭ್ಯಾಸಮಾಡಿದ್ದರು. ಮುಖ್ಯವಾಗಿ ಪಾಳಿ–ಪ್ರಾಕೃತದ ಮೂಲಕವೇ ಬೌದ್ಧಧರ್ಮದ ಎಲ್ಲಾ ಮಾನವೀಯ ಆಶಯಗಳನ್ನು ಅರಿತು, ಬರೆದು, ಮಾತಾಡಿ ಜನತೆಗೆ ತಿಳಿಸಿದರು. ಅವಮಾನಿತ ಜನಸಮುದಾಯಗಳು, ಬೌದ್ಧಧರ್ಮದತ್ತ ಮತ್ತೆ ಮರಳುವುದಕ್ಕೆ ದಾರಿ ತೆರೆದಿಟ್ಟರು. ಅವರು ಪ್ರತಿ ಕೆಲಸವನ್ನೂ ಒಟ್ಟು ಮನುಕುಲದ ಸೇವೆಯಂತೆ ಪರಿಗಣಿಸಿ ಮಾಡುತ್ತಿದ್ದರು. ಈ ಕೆಲಸವೇ ಅವರನ್ನು ಎಲ್ಲಾ ಶೋಷಿತ ಸಮುದಾಯಗಳು ಅಪ್ಪಿಕೊಳ್ಳುವಂತೆ ಮಾಡಿತು.

ಹೀಗೆ ಅಂಬೇಡ್ಕರ್ ಆದರ್ಶವಾದರು, ಕಥೆಯಾದರು, ಚಿಂತಕರಾದರು, ದಾರಿದೀಪವಾದರು, ಸುಧಾರಕರಾದರು. ಎಲ್ಲಕ್ಕಿಂತಲೂ ಮಿಗಿಲಾಗಿ ಒಟ್ಟು ನಿರ್ಲಕ್ಷಿತ ಸಮುದಾಯಕ್ಕೆ ದಿಕ್ಕು ದೆಸೆಯಂತೆ ತೋರಿದರು. ಒಬ್ಬ ವ್ಯಕ್ತಿ ಸಮುದಾಯಕ್ಕೆ ಆದರ್ಶವಾಗುವುದೇ ಹೀಗಿರಬೇಕು. 'ತನ್ನೊಳಗಿನ ಸಂಕಟವನ್ನು ತನ್ನ ಸಮುದಾಯದ ಸಂಕಟದಲ್ಲಿ ಗುರುತಿಸಿಕೊಳ್ಳುತ್ತಾ, ಅವರ ಅವಮಾನ ತನ್ನ ಅವಮಾನವೆಂದು ತಿಳಿಯುತ್ತಾ, ಅವರ ಸ್ವಾಭಿಮಾನ ತನ್ನ ಸ್ವಾಭಿಮಾನವೆಂದು ಬಗೆಯುತ್ತಾ ಬಿಡುಗಡೆಗೆ ಒಟ್ಟು ಸ್ವಾವಲಂಬನೆ ಮತ್ತು ಸ್ವಾಭಿಮಾನದ ಕಡೆಗೆ ಮುನ್ನಡೆಯುವುದರಲ್ಲಿದೆ ಎನಿಸುತ್ತದೆ'. ಇಂಥ ನಡತೆಗಳಿಂದಲೇ ಅಂಬೇಡ್ಕರ್ ದಲಿತ ಸಮುದಾಯವನ್ನು ಉಳಿಸಿದರು. ಎಲ್ಲಾ ಬಗೆಯ ಶೋಷಣೆ ಮತ್ತು ಅವಮಾನಗಳಿಂದ ತಾನೊಬ್ಬ ಮಾತ್ರ ಪಾರಾಗುವುದಲ್ಲ, ತಾನು ಪಾರಾಗಿ, ತನ್ನವರನ್ನು ಪಾರುಮಾಡುವುದೇ ಸಂಕಲ್ಪವಾದಾಗ ಅವರು ಸಮುದಾಯದ ಕಣ್ಣಾದರು. ಆಸರೆಯಾದರು. ಆದರ್ಶವಾದರು. ಸಮುದಾಯದ ನೆನಪಾಗಿ ಬದುಕುತ್ತಾ, ಉಳಿಯುತ್ತಾ ಹೋದರು.

ಇಂಥ ಚರಿತ್ರೆಯ ಹಾಗೂ ನಡತೆಯ ಅಂತಃಕರಣದ ಕೊಂಡಿಯಾಗಿಯೇ, ಆರ್. ಭರಣಯ್ಯನವರು ನಮ್ಮ ನಡುವೆ ಎದ್ದು ಕಾಣಲು ಸಾಧ್ಯವಾಗಿದೆ. ತಾನು ಹುಟ್ಟಿ ಬಂದ ಸಮುದಾಯದ ಬವಣೆಗಳನ್ನು ಮರೆಯದೆ, ತನ್ನ ಬದುಕಿನ ಕಾಲಘಟ್ಟದಲ್ಲಿ ಕಂಡುಂಡ ನೋವುಗಳನ್ನು ಮರೆಯದೆ, ಎಲ್ಲರ ಕಷ್ಟ ಸುಖಗಳಿಗೆ ಆಸರೆಯಾಗುತ್ತಾ ಭರಣಯ್ಯನವರು ಬಂದಿದ್ದಾರೆ. ಈ ಕಾರಣಕ್ಕಾಗಿಯೇ ಇವರು ಇಷ್ಟು ವರ್ಷಗಳ ನಂತರವೂ ಸಮುದಾಯದ ಸ್ಮರಣೆಯಲ್ಲಿ ಉಳಿದು ಮನೆ–

ಮನದ ಮಾತಾಗಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿರಬಹುದು. ಅವರ ಜನಪ್ರಿಯತೆಗೆ ಸಾಕ್ಷಿಗಳನ್ನು ಈ ಹಿನ್ನೆಲೆಯಲ್ಲಿ ಕಾಣಬೇಕಾಗುತ್ತದೆ ಎಂತಲೂ ಅನಿಸುತ್ತಿದೆ.

ಈಗಲೂ ನೂರಾರು ಜನ ಆರ್. ಭರಣಯ್ಯನವರನ್ನು ಪ್ರೀತಿಸುವ ಪರಿ ಕಂಡಾಗ ವಿಸ್ಮಯವೆನಿಸುತ್ತದೆ. ತಮ್ಮೊಳಗೆ ಆ ಪರೋಪಕಾರಿಯನ್ನು ಸ್ಮರಿಸುತ್ತಾ ನಡೆದಿದೆ. ತಮ್ಮವನೊಬ್ಬ ವಿಶಿಷ್ಟವಾದನೆಂಬ ಆಂತರಿಕ ತಿಳುವಳಿಕೆಯ ಸಂಭ್ರಮದಿಂದ ಬೀಗುತ್ತಿದೆ. “ಅಂಬೇಡ್ಕರ್ ಕಟ್ಟಿಕೊಟ್ಟ ಕನಸುಗಳನ್ನು ಸಾಕಾರಗೊಳಿಸುತ್ತಾ ಮುಂದುವರಿಸುತ್ತಾ, ದಲಿತರ ಏಳಿಗೆಗಾಗಿ ದುಡಿದಿದ್ದಾರೆ” ಎಂಬಂತೆ ಮಾತಾಡಿವೆ. ಈ ಅಧ್ಯಯನದ ಉದ್ದಕ್ಕೂ ಇಂಥ ಅನುಭವಗಳಾಗುತ್ತಾ ಹೋಯಿತು. ಭರಣಯ್ಯನಂಥವರು ತಮ್ಮ ಪರೋಪಕಾರದಿಂದಲೇ ಊರೂರು ತಲುಪುತ್ತಿದ್ದುದು, ಲೋಕಪ್ರಿಯತೆಯನ್ನು ಪಡೆದುಕೊಳ್ಳುತ್ತಿದ್ದುದು. ತನ್ನ ಜಾತಿಯ ಜನರ ಬೇಡಿಕೆಗಳನ್ನು ಈಡೇರಿಸುತ್ತಾ, ಇತರೇ ಕೋಮಿನ ಜನರಿಗೂ ನೆರವಾಗುತ್ತಾ, ವೃತ್ತಿಜೀವನದಲ್ಲಿ ಎಲ್ಲಾ ಜನವರ್ಗಗಳಲ್ಲಿ ಸಮಾನತೆ ಕಾಯ್ದುಕೊಂಡು ‘ಸೈ’ ಎನಿಸಿಕೊಂಡ ಮಾರ್ಗವಂತೂ, ಅವರ ವಿಶಿಷ್ಟ ಮನಸ್ಥಿತಿಗೆ ಕೈಗನ್ನಡಿಯಾಗಿ ತೋರಿದೆ.

ನಾವು ಕಂಡ ಹತ್ತಾರು ಊರುಗಳ ಹಿರಿಯರು ಕೊಟ್ಟ ಮಾಹಿತಿಯಂತೆ; ಸೋಮನಾಥಪುರ ಹಾಗೂ ಅಂದಿನ ಆಸುಪಾಸಿನ ಊರು-ಕೇರಿಗಳು ಹುಲ್ಲು ಸೋಗೆಯ ಕೊಂಪೆಗಳು – ಅಲ್ಲಲ್ಲಿ ಕೈಯಂಚಿನ ಹಟ್ಟಿಗಳು ಅಷ್ಟೆ. ಅನಕ್ಷರತೆಯ ಲೋಕ. ಹೊರಗಿನ ವ್ಯವಹಾರಿಕ ಲೋಕಕ್ಕೆ ದೂರ. ನಗರ ಪಟ್ಟಣಗಳನ್ನು ಭೀತಿ ಬೆರೆತ ಮನಸ್ಸಿನಿಂದ ನೋಡುವುದಷ್ಟೆ ಗೊತ್ತು. ‘ತಾವು ಮತ್ತು ತಮ್ಮ ಇರುವಿಕೆಗೆ ದೈವ ಕಾರಣವೆಂಬ ದೃಢತೆ! ಒಂದು ಮನೆಗೆ ಹಚ್ಚಿದ ದೀಪ ಇಡೀ ಊರನ್ನೇ ಬೆಳಗುವಂತಹ ಸ್ಥಿತಿ – ಅಷ್ಟರಲ್ಲೇ ತೃಪ್ತಿ ಕಂಡು ಮುನ್ನಡೆಯುವುದು. ಜಾತಿ ಅಪಮಾನಗಳನ್ನು ನಿಶ್ಚಿಂತೆಯಿಂದ ಅನುಭವಿಸುವುದಷ್ಟೆ ತಿಳಿದಿತ್ತು. ಪ್ರತಿಭಟನೆ ಎಂದರೇನು ಎಂಬ ಅಂದಾಜು ಇಲ್ಲದ ಜೀವ ಸಂಕುಲ! ಎಂದಾದರೂ ತನಗೆ ಅವಮಾನವಾದರೆ ಅದನ್ನು ಹಣೆಬರಹವೆಂದು ಬಗೆದು ನೆಮ್ಮದಿ ಮೂಡಿಸಿಕೊಳ್ಳುತ್ತಿದ್ದ ಕಾಲ. ದೇವರು-ದಿಂಡರು-ಹರಕೆಗಳಲ್ಲಿ ಎಲ್ಲವನ್ನು ಸರಿದೂಗಿಸಿಕೊಳ್ಳುವ ಸಾಂಪ್ರದಾಯಿಕ ಮನಸ್ಸು. ಕಿಚ್ಚು ಸಹಿಸಿಕೊಳ್ಳಲು ಜಗಳ ಜೂಟಿಗೆ ತನ್ನವರ ಎದುರೇ ನಿಲ್ಲುವ ಜೂರತ್, ಕೂಲಿ-ಕಂಬಳಿಯಿಂದ ಬರುವ ನಾಕು ಬಿಡುಗಾಸನ್ನು ಹೆಂಡಕ್ಕೆ ಹಾಕಿ ಉಡಾಯಿಸಿ ಬಿಡುವ ಐಲು! ಇನ್ನು ಏನೇನೋ ಅಂದಾಜಿಸಬಹುದು. ಉಳ್ಳವರ ಮನೆಯಲ್ಲಿ ಕೂಲಿ/ ಜೀತ! ತನ್ನವನು ಎಷ್ಟು ಶ್ರೀಮಂತನಾದರೂ ತಾತ್ಸಾರ! ಗರೀಬನಾದರಂತೂ ಹುಟ್ಟುತ್ತಲೂ – ಬೆಳೆಯುತ್ತಲೂ, ಸಾಯುತ್ತಲೂ

ಕೀಳರಿಮೆಯಲ್ಲೇ ಬೆಂದು ಸುಣ್ಣವಾಗಿಬಿಡುವ ಜಡತ್ವ! ಇವುಗಳಿಂದ ಈಚೆಗೆ ಬಂದು ನಿಲ್ಲಲು ಬಯಸಿದವರು ಯಾರಾದರೂ ಸರಿ ಕೈ ಹಿಡಿಯಲೇಬೇಕು. ಹೀಗೆ ಕೈ ಹಿಡಿದವನ ಹಿಂದೆಯೇ ನಂಬಿಕಸ್ಥರಾಗಿ ಅಲ್ಲೂ ತನ್ನತನವನ್ನು ಬಿಡದೆ ಬದುಕು ನೂಕುವುದು. ನಂಬಿಕೆ ಎಂದರೆ ಜೀವನ್ಮರಣದ ಪ್ರಶ್ನೆ. ಉಳ್ಳವರಿಗೆ ಹೆಗಲು ಕೊಡುತ್ತಾ, ಶೋಷಣೆಯ ದಳ್ಳುರಿಗೆ ಜೀವ ನೀಡುತ್ತಾ, ಮೌನಕ್ಕೆ ಶರಣಾಗಿ ಅಲ್ಲೆಲ್ಲೋ ಆಕಾಶಕ್ಕೆ ಮೊಖಮಾಡಿನಿಂತ ಲಕ್ಷಾಂತರ ಜೀವಗಳಲ್ಲೆಲ್ಲಾ ಮನುಷ್ಯರು ಇದ್ದಾರೆ, ಅವರಲ್ಲಿ ತರತಮ ತಿಳಿಯದ ಮುಗ್ಧರು ಇದ್ದಾರೆ' ಎಂದು ಅಂಬೇಡ್ಕರ್ ಹೇಳಿದಾಗಲೂ ಆಲಿಸದೆ ಹೋದ, ದುರಂತ ಹೋದ, ಅಲ್ಲಿ ಇಲ್ಲಿ ಅಂಬೇಡ್ಕರ್ ಮಾತಿಗೆ ಕಿವಿಗೊಟ್ಟು ಈ ಜನರ ಉದ್ಧಾರಕ್ಕೆ ನಾಕು ಹೆಜ್ಜೆ ಮುಂದೆ ಹಾಕಿ ಬಂದ ದಲಿತೇತರ ಸಮಾಜವು ಗಲಿಬಿಲಿಗೊಂಡಂತೆ ಬಹುಪಾಲು ಈ ದಲಿತರ ಬದುಕು ಸುಮ್ಮನೆ ನರಳಿ ಹೊರಟು ಹೋಗಿದೆ. ಜಾತಿ ವಿಷಯಕ್ಕೆ ಅಪಾರ ಮಾನವ ಸಾಮರ್ಥ್ಯವನ್ನು ಧಾರೆ ಎರೆದು ದಣಿದು ಕಣ್ಮರೆಯಾಗಿವೆ. ಅಲ್ಲೆಲ್ಲೋ ಜೀವ ಚೇತನವಾಗಿ ಚಿಮ್ಮಿದವು ಅದೃಷ್ಟವೆಂಬಂತೆ ಈ ಲೋಕದ ಕಣ್ಣಿಗೆ ಬಿದ್ದಿವೆ! ಅವೂ ಜೀವಗಳಂತೆ!! ಅವೂ ಮನುಷ್ಯರಂತೆ!! ಅವೂ ಎಲ್ಲಾ ಸಾಮರ್ಥ್ಯವನ್ನು ಪಡೆದ ಸಂಕುಲದಂತೆ!! ಇಂಥ ಸನ್ನಿವೇಶದಲ್ಲಿ ಹಲವು ಸಿಕ್ಕುಗಳನ್ನು ಜಾಡಿಸಿಕೊಂಡು ಎದ್ದು ಈಗ ಇತಿಹಾಸವಾಗಿರುವ ಆರ್. ಭರಣಯ್ಯ ಇದಕ್ಕೆ ಜೀವಂತ ಉದಾಹರಣೆಯಾಗಿ ತೋರುತ್ತಿದ್ದಾರೆ. ಅಲ್ಲೆಲ್ಲೋ ಓದಿ, ಅಲ್ಲೆಲ್ಲೋ ಮನುಷ್ಯತ್ವ ಇರುವವರ ಕಣ್ಣಿಗೆ ಬಿದ್ದು ಅಕ್ಷರ ಕಲಿತು, ಉನ್ನತ ವ್ಯಾಸಂಗ ಮಾಡಿ, ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿ ಅದೇ ಬಿಡುಗಡೆ ಎಂದು ಭಾವಿಸಿ, ಅಂಗೈ ಬೆಳಕು ಮಾಡಿಕೊಂಡು ತನ್ನವರಿಗೆ ಹಂಚುತ್ತಾ ಆರ್. ಭರಣಯ್ಯನವರು ನಡೆದುಬಿಟ್ಟಿದ್ದಾರೆ. ಚಂದದ "ಭರಣಿಮಳೆ" ಬಿದ್ದು ಭೂಮಿ ಹಸನುಗೊಳಿಸಿದಂತೆ, ಇವರು ಹುಟ್ಟಿ ದಲಿತ ಸಮುದಾಯದ ಬದುಕಿಗೊಂದಷ್ಟು ಆಸರೆಯಾಗಿದ್ದು ಹೋಗಿದ್ದಾರೆ.

ನೂರಾರು ವ್ಯಕ್ತಿಗಳು, ಹತ್ತಾರು ಘಟನೆಗಳು ಹೇಳುವಂತೆ ಅಂಥ ಸನ್ನಿವೇಶದಲ್ಲೂ ಆರ್. ಭರಣಯ್ಯನವರ ವೃತ್ತಿ ಜೀವನ ಜನಮುಖಿಯಾಗಿ ಸಾಗಿರುವುದೊಂದು ಇತಿಹಾಸ. ಸರ್ಕಾರದ ವ್ಯವಸ್ಥೆಯಲ್ಲಿ ಅಧಿಕಾರಿಯಾಗುವುದು. ಇತರೆ ಕೋಮಿನವರ ಜೊತೆ ಸರಿಸಮಕ್ಕೆ ಅಳುಕುತ್ತಲೇ ನಿಲ್ಲುವುದಕ್ಕೆ ನೋಡುವುದು. ಇವರ ಅಧಿಕಾರ ಅಂತಸ್ತು ಕಂಡು ಇತರರೂ ಬೆರಗಾಗುವುದು. ಮೇಲು ಜಾತಿಯವರು ತಮ್ಮ ಭಾವಡಿಗೆ ಆಹ್ವಾನಿಸಿದರೂ ಹೋಗಲು ಅಳುಕುವುದು. ಅದೇ ವೇಳೆ ಇತರೆ ಕೋಮಿನವರಲ್ಲಿನ ಬಡತನ ಕಂಡು ಮರುಗುವುದು. ಅವರಿಗೂ ತನ್ನವರಿಗೆ

ಮಾಡಿದಂತೆ ಉಪಕಾರ ಮಾಡಲು ಮುಂದಾಗುವುದು. ಇವೆಲ್ಲ ಆರ್. ಭರಣಯ್ಯನವರನ್ನು ಹುಡುಕಿ ಹೊರಟಾಗ ದೊರಕಿದ ಅಪೂರ್ವ ಚಿತ್ರಗಳಾಗಿವೆ.

ಮೈಸೂರಿಗೆ ಅನತಿ ದೂರದ ಸೋಮನಾಥಪುರ ಹೊಯ್ಸಳರ ಕೊಡುಗೆ. ಸೋಮೇಶ್ವರನಿಗೆ ಗುಡಿ ನಿರ್ಮಿಸಿ, ಶಿವನ ವಿಶಿಷ್ಟ ಶಿಲ್ಪ ನಿರ್ಮಾಣ ಮಾಡಿದ ಹೊಯ್ಸಳ ಸಾಮ್ರಾಜ್ಯದ ಅರಸರು ಆ ಊರನ್ನೇನೋ ಚರಿತ್ರೆಯಾಗಿಸಿಬಿಟ್ಟರು. ಆಧುನಿಕರು ಅದನ್ನು ಪ್ರವಾಸಿ ಕೇಂದ್ರವನ್ನಾಗಿಸಿದರು. ಆದರೆ ಇಲ್ಲಿ ಭರಣಯ್ಯನವರ ಚಿತ್ರ ಕಟ್ಟಿಕೊಡುತ್ತಿದ್ದವರಲ್ಲಿ ಇತಿಹಾಸ ಪ್ರಸಿದ್ಧ ಆ ಸೋಮನಾಥಪುರ ಅರುಗಾಗಿ ಆರ್. ಭರಣಯ್ಯನವರಿಂದ ಚಾಲ್ತಿಗೆ ಬಂದಿದ್ದ ಈ ಊರಿನ ಪ್ರಸಿದ್ಧಿ ವಿಸ್ಮಯತರುತ್ತಿತ್ತು. ಸೋಮನಾಥಪುರದ ಚರಿತ್ರೆಯೊಟ್ಟಿಗೆ ಇವರ ಮನೆತನದ-ಬದುಕು-ಬಾಳು ಬೆರೆತುಕೊಂಡಿರುವುದು, ಆ ಊರ ಚರಿತ್ರೆಯ ಒಂದಂಶವಾಗಿ ದಾಖಲಾಗಿರುವುದು ವಿಶೇಷವೆನಿಸಿದೆ. ಹೀಗಾಗಿ ಸೋಮನಾಥಪುರವು ಚಾರಿತ್ರಿಕ ದೇಗುಲವುಳ್ಳ ಊರಿಗಿಂತ ಆರ್. ಭರಣಯ್ಯ ಬಾಳಿಬದುಕಿದ ಊರಾಗಿರುವುದು ಮತ್ತಷ್ಟು ಕುತೂಹಲ ತರಿಸುತ್ತಿತ್ತು.

ಈ ಅಧ್ಯಯನದ ಹಾದಿಯಲ್ಲಿ ಅರ್ಥವಾದ ಆರ್. ಭರಣಯ್ಯನವರ ವ್ಯಕ್ತಿತ್ವ ವಿಶೇಷ ಮತ್ತು ವಿಭಿನ್ನ! ನೊಂದ ಎಲ್ಲಾ ಜನಾಂಗಕ್ಕೆ ಅವರು ಸಹಾಯ ಹಸ್ತ ಚಾಚಿದ್ದಾರೆ. ಎಲ್ಲರಿಗೂ ಬೇಕಾದ ಮನುಷ್ಯ ಎನಿಸಿಕೊಂಡಿದ್ದಾರೆ. ಇದು ಎಲ್ಲಿ ಯಾರನ್ನು ಕೇಳಿದರೂ ಹೇಳುವ ಮೊದಲ ಮಾತು. ಯಾರಲ್ಲೂ ನಿಷ್ಠೂರ ಕಟ್ಟಿಕೊಂಡವರಲ್ಲ. ಮನೆ ಒಳಗೂ, ಹೊರಗೂ ಒಂದೇ ಗುಣ. ಎಲ್ಲಿಯವರೆಗೆ ಎಂದರೇ ಒಬ್ಬ ಗೌಡ ಇವರನ್ನು ಒಮ್ಮೆ 'ಏನೋ ಹೊಲೆಯಾ' ಎಂದಾಗಲೂ ತಲೆ ತಗ್ಗಿಸಿ ನಡೆದುಬಿಡುತ್ತಾರೆ. ಆದರೆ ಅದೇ ಗೌಡ ತನ್ನ ಜಾತಿಯ ಬಡವನೊಬ್ಬನಿಗೆ ಅವರ ಬಳಿ ಕೆಲಸಕ್ಕೆ ಕೈ ಚಾಚಿ ನಿಂತಾಗ ಅವನಿಗೆ ಕೆಲಸ ನೀಡಿ ಅವನ ಬಾಳ ಬುತ್ತಿ ಕಟ್ಟಿಕೊಡುತ್ತಾರೆ. ವಿಚಿತ್ರ ಸಂಭ್ರಮ ಮೂಡುವುದು ಈ ಸ್ವಭಾವದ ಬಗ್ಗೆ. ಎಲ್ಲಾ ಬಗೆಯ ಅವಮಾನಗಳನ್ನು ಮೆಟ್ಟಿ, ಪ್ರತಿಭಟಿಸಿ ಮೇಲೆ ಬರುವ ಸ್ವಾಭಿಮಾನದ ಪಾಠ ಹೇಳಿಕೊಟ್ಟ ಡಾ. ಅಂಬೇಡ್ಕರ್ ಅವರ ಕಟ್ಟಾ ಅನುಯಾಯಿಯಾದ ಆರ್. ಭರಣಯ್ಯ. ಅವರು ಹೇಗೆ ಇಂಥ ಜಾತಿ ನಿಂದಕ ಮಾತುಗಳನ್ನು ತಣ್ಣಗೆ ಸಹಿಸಲು ಸಾಧ್ಯವಾಯ್ತು? ಇದೇ ಆಗಿನ ಗ್ರಾಮ ಭಾರತದ ಅಥವಾ ಆಗಿನ ಗ್ರಾಮ ಕರ್ನಾಟಕದ ಮನಸ್ಸಾಗಿತ್ತಾ?! ಅದಕ್ಕೆ ಪೂರಕವೆನಿಸುವ ಒಂದಷ್ಟು ವಿವರಗಳನ್ನು ಸಾಕಷ್ಟು ಹುಡುಕಿ ನೋಡಿದೆವು. ಸಿಕ್ಕವರ್ಯಾರು ಈ ಮಾತಿಗೆ ಪುಷ್ಟಿನೀಡುವ ವಿವರಗಳನ್ನು ನೀಡಲೇ ಇಲ್ಲ! ಆದರೆ ಇದೇ ಕಾಲಕ್ಕೆ ಇವರ ವ್ಯಕ್ತಿತ್ವಕ್ಕಿದ್ದ ಇನ್ನೊಂದು ಮೊಗ್ಗಲು ಗಮನಾರ್ಹ. ಅದು ತಾನು ನಡೆದುಬಂದ ದಾರಿಯನ್ನು ಕಿಂಚಿತ್ತು ಮರೆಯದೆ ಇದ್ದುದು. ತನಗೆ

ಸಿಕ್ಕ ಅವಕಾಶದಲ್ಲಿ ವೃತ್ತಿ ಜೀವನದುದ್ದಕ್ಕೂ ಉಪಕಾರ! ಉಪಕಾರ! ಉಪಕಾರ! ಅಷ್ಟೇ. ತನ್ನೂರಿನ ಮತ್ತು ಆಸುಪಾಸಿನ ಜನರು ತನ್ನನ್ನು ನಂಬಿ ಬಂದ, ಅರಸಿ ಬಂದ ಎಲ್ಲರಿಗೂ ಏನಾದರೊಂದು ಕೆಲಸಕೊಟ್ಟು ಕಳುಹಿಸುವುದು, ಇಲ್ಲವೇ ಇತರರಿಗೆ ಹೇಳಿ ಮಾಡಿಸುವುದು. ಈ ನಡತೆ ಇಂದಿನವರಿಗಿಲ್ಲ ಎಂದೇ ಮಾತನಾಡಿದವರೆಲ್ಲರ ದೂರು. ಭರಣಯ್ಯನವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಹೇಳುವಂತೆ ಭರಣಯ್ಯನವರಿಗೆ "ಕೆಲಸ ಕೊಡುವುದೆ ಒಂದು ಕೆಲಸ"ವಾಗಿತ್ತು. ಆದರೆ ಕುತೂಹಲವೆನಿಸುವಂತಹದು ಎಂದೂ ಅವರು ಜಾತಿಬಾಧಿತ ಅಥವಾ ಇನ್ನಾವುದೇ ತಾರತಮ್ಯ ಸಂಗತಿಗಳಿಗೆ ಮುಖ ಕೊಟ್ಟು ಸೆಟೆದು ನಿಂತಿರುವ ಉದಾಹರಣೆಗಳಿಲ್ಲ. ಪ್ರತಿ ಹಂತದಲ್ಲೂ ಹೊಂದಾಣಿಕೆಯ ಅಥವಾ ರಾಜಿ ಎನಿಸುವಂತಹ ಮಾರ್ಗದಲ್ಲೇ ವೃತ್ತಿ ಜೀವನ ಮುನ್ನಡೆಸಿದ್ದಾರೆ. ಆಡಳಿತ ಪರಿಭಾಷೆಯಲ್ಲಿ ಹೇಳುವುದಾದರೆ ಅವರ ಮಾರ್ಗ ಒಂದು Balanced ಮಾರ್ಗ. ಜಾತಿ, ಮತ ಲೆಕ್ಕಿಸದೆ ಬೇಡಿ ಬಂದವರಿಗೆಲ್ಲ ನೆರವಾಗಿರುವುದು. ಈ ಮನೋಧರ್ಮವನ್ನು ಕುರಿತು ಆಲೋಚಿಸುವಾಗ ಆಗಿನ ದಲಿತ ವರ್ಗದ ಅಕ್ಷರಸ್ಥರಲ್ಲಿ ಸಾಮಾನ್ಯವಾಗಿ ಕಾಣಬಹುದಾದಂಥ ಮನಸ್ಸೆಂದು ಗುರುತಿಸಬಹುದೆ?

ಈ ಸಮಯದಲ್ಲಿ ಒಂದು ವಿಶೇಷ ಸಂಗತಿಯನ್ನು ಇಲ್ಲಿ ಕಾಣಿಸಬೇಕು. ಅದು ಇವರ ವಿದ್ಯಾಭ್ಯಾಸದ ವಿಶಿಷ್ಟತೆಗೆ ಸಂಬಂಧಿಸಿದ್ದು. ಒಂದು ಕಾಲಕ್ಕೆ ಅಸ್ಪೃಶ್ಯರು ತಮ್ಮ ಜಾತಿ ಸೂಚಕ ಪದವನ್ನು ಜೋರಾಗಿ ಹೇಳುತ್ತಾ ಸಾರ್ವಜನಿಕ ರಸ್ತೆಗಳಲ್ಲಿ ಸಂಚರಿಸಬೇಕಿತ್ತೆಂಬುದನ್ನು ಚರಿತ್ರೆ ಹೇಳುತ್ತಿದೆ. ಇವರ ಇರುವಿಕೆ ಅಥವಾ ಬರುವಿಕೆಯನ್ನು ಕೇಳಿ ಸವರ್ಣೀಯರು ನಡೆಯುತ್ತಿದ್ದರು. ವೇದ, ಪುರಾಣ, ಶಾಸ್ತ್ರ ಕೇಳಿಸಿಕೊಂಡರೆ ಕಾದ ಸೀಸವನ್ನು ಕಿವಿಗೆ ಬಿಡುತ್ತಿದ್ದರು. ಅಕ್ಷರವನ್ನು ಕಣ್ಣೆತ್ತಿ ನೋಡಲು ಅರ್ಹರಲ್ಲ ಎಂಬುದನ್ನು ಹಲವು ದಾಖಲೆಗಳು ತಿಳಿಸಿಕೊಟ್ಟಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಇಂದಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅನಕ್ಷರತೆಗೆ ಆಗಿನ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ ಮತ್ತು ಜೀವನ ವಿಧಾನದ ವ್ಯವಸ್ಥೆಯೇ ಕಾರಣವಾಗಿದೆ ಎಂಬುದು ಬೇರೆ ಮಾತು. ಇಂಥ ವೇಳೆಯಲ್ಲಿ ಆರ್. ಭರಣಯ್ಯನವರು ಸಂಸ್ಕೃತ ಓದಿದರು. ಮೈಸೂರು ಸಂಸ್ಕೃತ ಪಾಠ ಶಾಲೆಯಲ್ಲಿ ಪದವಿಗಳಿಸಿದರು. ಈ ಪದವಿಗಾಗಿಯೇ ಮೈಸೂರು ಅರಮನೆಯಂಗಳದಲ್ಲಿ ಜಯಚಾಮರಾಜ ಒಡೆಯರ್‌ರವರಿಂದ 'ಗೌರವ ಪದಕ'ವನ್ನು ಪಡೆದರು. ಮಹಾರಾಜರು ನೀಡಿದ ಉತ್ತೇಜನದ ಫಲವಾಗಿ ಉಡುಪಿ-ಶಿವಮೊಗ್ಗ ಮುಂತಾದ ಕಡೆ ನಡೆದ ಬ್ರಾಹ್ಮಣ ಸಮಾವೇಶಗಳಲ್ಲಿ ಆಹ್ವಾನಿತರಾಗಿ ಹೋಗಿ ಭಾಗವಹಿಸಿದ್ದರು. ಅಲ್ಲೆಲ್ಲಾ ವಿದ್ವತ್

ಸಭೆಗಳಲ್ಲಿ ಸಂಸ್ಕೃತದಲ್ಲೇ ತಾಸುಗಟ್ಟಲೆ ಭಾಷಣ ಮಾಡಿದ್ದಾರೆ. ಈ ಸಂಗತಿಗಳನ್ನು ಬಹುಪಾಲು ಇವರ ಒಡನಾಡಿಗಳೆಲ್ಲ ಅತ್ಯಂತ ಸಂಭ್ರಮದಿಂದ ಹೇಳಿದ್ದಾರೆ. ಅದನ್ನು ಇಡೀ ಜನಾಂಗದ ಹೆಚ್ಚುಗಾರಿಕೆಯೆಂದು ಗುರುತಿಸಿದ್ದಾರೆ. ಈ ಸಂಗತಿಯನ್ನು ಈಗ ಸ್ಮರಿಸುವಾಗ ಅನ್ನಿಸುವುದಿಷ್ಟು. ಬಹುಷಃ ಆಗ ಸಂಸ್ಕೃತ ಜ್ಞಾನ ಸಂಪಾದನೆಯಿಂದ ಆ ಕಾಲಕ್ಕೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಥಾನಮಾನಗಳ ಜೊತೆ ಅವಕಾಶಗಳನ್ನು ಸಾಮಾನ್ಯವಾಗಿ ಹಂಚಿಕೊಳ್ಳಬಹುದೆಂಬುದು ಇವರಿಗೆ ಮನದಟ್ಟಾಗಿರಬಹುದು. ಇದು ಅಂಬೇಡ್ಕರ್ ಗಳಿಸಿದ ಸಂಸ್ಕೃತ ಪಾಂಡಿತ್ಯಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಅರ್ಥವಾಗುತ್ತಿದೆ. ಆಗ ಸಂಸ್ಕೃತ ಓದಿದವರು ವಿವರಿಸುವ ಭಾರತೀಯ ಸಂಸ್ಕೃತಿಗಿಂತ ತಾನೇ ಸಂಸ್ಕೃತ ಕಲಿತ ಅದರೊಳಗಿನ ತಿರುಳನ್ನು ಕರಗತ ಮಾಡಿಕೊಂಡು ತಾನೇ ಮುಖಾಮುಖಿಯಾಗುವ ಆಶಯ ಅಂಬೇಡ್ಕರ್ ಅವರು ಸಂಸ್ಕೃತ ಕಲಿತದ್ದರ ಹಿಂದಿನ ಆಶಯವಾಗಿತ್ತು. ಬಹುಷಃ ಭರಣಯ್ಯನವರು ಇದಕ್ಕಿಂತ ಭಿನ್ನವಾದ ಮಾರ್ಗ. ಅಂದರೆ ಸಂಸ್ಕೃತ ಪಾಂಡಿತ್ಯಗಳಿಸುವುದರಿಂದ ಆ ಕಾಲಮಾನದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಸ್ಥಾನಮಾನಗಳ ಗಳಿಸುವ ವಿಧಾನದ್ದು. ಆ ಮೂಲಕ ಸಂಸ್ಕೃತ ಪಾಂಡಿತ್ಯ ಎಲ್ಲರಿಗೂ ಗಳಿಸಲು ಸಾಧ್ಯ ಎಂದು ಸಾಧಿಸುವುದಾಗಿತ್ತೇನೋ ಅನ್ನಿಸುತ್ತದೆ. ಈ ಬಗ್ಗೆ ಮಾಹಿತಿ ನೀಡಿದವರಲ್ಲಿ, ಅವರು ನೀಡಿದ ಘಟನೆಗಳಲ್ಲಿ ಈ ಅಂಶಗಳು ವ್ಯಕ್ತಗೊಂಡಿವೆ. ಇದೇ ವೇಳೆ ಅವರ ಇನ್ನೊಂದು ನಡವಳಿಕೆಯನ್ನು ಕೆಲವರು ಗುರುತಿಸಿದ್ದು ಹೀಗೆ. ಅವರು ಎಂದೂ ಜಾತಿ ತಾರತಮ್ಯದ ವಿರುದ್ಧ ಸಿಡಿದವರಲ್ಲ. ಮೇಲುಜಾತಿಯ ಮನೆಯವರು ಕರೆದಾಗಲೂ ಅವರ ಮನೆಗಳಿಗೂ ಹೋಗಲು ಹಿಂಜರಿಯುತ್ತಿದ್ದರು ಅಥವಾ ಹೋಗುತ್ತಿರಲಿಲ್ಲ. ಒಬ್ಬ ಅಂಬೇಡ್ಕರ್ ಅನುಯಾಯಿ ಯಾಕೆ ದಿಟ್ಟತನದಿಂದ ವರ್ತಿಸುತ್ತಿರಲಿಲ್ಲ? ಜಾತಿಬಾಧಿತ ಈ ಸಮಾಜವನ್ನು ಏಕೆ ವಿರೋಧಿಸುತ್ತಿರಲಿಲ್ಲ? ಎಂತಹ ಕೀಳರಿಮೆ ಅಥವಾ ಅಳುಕು ಅವರನ್ನು ಬಾಧಿಸುತ್ತಿತ್ತು? ಇದಕ್ಕೆ ಈಗಲೂ ವಿಶ್ಲೇಷಣೆಯ ಅಗತ್ಯವಿದೆ. ಸಂದರ್ಶನದ ವೇಳೆ ಇಷ್ಟರ ನಡುವೆಯೂ ಅನೇಕರು ರಾಷ್ಟ್ರಕ್ಕೆ ಅಂಬೇಡ್ಕರ್ ಹೇಗೋ ಹಾಗೇ ಕನ್ನಡನಾಡಿಗೆ ಆ ಕಾಲಕ್ಕೆ ಆರ್. ಭರಣಯ್ಯನವರೇ 'ಕರ್ನಾಟಕದ ಅಂಬೇಡ್ಕರ್' ಎಂದು ಜನ ಭಾವಿಸಿದ್ದಾರೆ.

ಹೀಗೆ ನೂರಾರು ಜನರಲ್ಲಿ ಆರ್. ಭರಣಯ್ಯನವರು ಬಹುಪಾಲು ದಾಖಲಾಗಿರುವುದು ಬಡಬಗ್ಗರ ರಾಯಭಾರಿಯಂತೆ. ಇಡೀ ದಲಿತ ಜನಾಂಗದ ಆಪತ್ಕಾಲದ ಬಂಧುವಂತೆ. ಆದರೆ ಅವರು ಮತ್ತು ಅವರ ಕೆಲಸಗಳು ಕೇವಲ ದಲಿತರಲ್ಲಿ ಮಾತ್ರವೇ ಉಳಿಯದೆ ಆಚೆಕೇರಿಗೂ ಸುಮ್ಮನೆ ಚಾಚಿಕೊಂಡು ಹೋಗಿದೆ.

ಇದೇ ಎಲ್ಲಾ ಜನವರ್ಗಗಳೂ ಪ್ರೀತಿಸಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅವರ ಆಡಳಿತ ವಿಧಾನದ ಕೆಲವು ಸಂಗತಿಗಳನ್ನು ಈ ಮುಂದಿನ ಭಾಗದಲ್ಲಿ ದಾಖಲಿಸಬಯಸುತ್ತೇನೆ. ಆದರೆ ಈ ಭಾಗದಲ್ಲಿ ಅಷ್ಟೊಂದು ಪೂರ್ಣ ಪ್ರಮಾಣದ ಚಿತ್ರವನ್ನು ಕಟ್ಟಿಕೊಡುವುದು ಬಹಳ ಸವಾಲಾಯಿತು. ಇದಕ್ಕೆ ಕಾರಣ ಅವರು ಕೆಲಸ ಮಾಡಿದ ಇಲಾಖೆಗಳಲ್ಲಿ, ಅವರೊಡನೆ ಕೂಡಿ ಕೆಲಸ ಮಾಡಿದವರು ಇಲ್ಲವೇ ಇಲ್ಲ! – ಇದ್ದರೂ ಕೆಲವೇ ಬೆರಳೆಣಿಕೆಯ ಜನ ಮಾತ್ರ, ಅವರು ನೀಡಿದಷ್ಟು ವಿವರಗಳು ಹಾಗೆಯೇ ದಾಖಲಿಸಿದೆ ಅಥವಾ ಅವರುಗಳು ವಯೋಮಾನದ ಮರೆವಿನಿಂದ ಎಷ್ಟೋ ನೆನಪುಗಳನ್ನು ಹಂಚಿಕೊಳ್ಳಲು ಸಾಧ್ಯವಾಗಲೇ ಇಲ್ಲ! ಈ ಎಲ್ಲಾ ತಾಪತ್ರಯಗಳ ನಡುವೆ ಅವರ ಆಡಳಿತದ ವೈಖರಿಯನ್ನು ದೊರಕಿದ ಮಾಹಿತಿಯನ್ನಾಧರಿಸಿ ಸಂಕ್ಷಿಪ್ತವಾಗಿ ವಿವರಿಸಿದ್ದೇವೆ. ಅದನ್ನು ಈ ಪ್ರಸ್ತಾವನೆಯ ಸಂದರ್ಭಕ್ಕೆ ಹೀಗೆ ಕ್ರೋಢೀಕರಿಸಿ ಹೇಳಬಹುದಾಗಿದೆ.

ಆರ್. ಭರಣಯ್ಯನವರು ಆಡಳಿತ ನಡೆಸಿದ ಕಾಲ, ಸ್ವಾತಂತ್ರ್ಯ ಪೂರ್ವದ್ದು ಮತ್ತು ಸ್ವಾತಂತ್ರ್ಯ ಬರೊ ಹೊಸ್ತಿಲಿನ ನಡುವಿನ ಕಾಲ. ಅವರ ಬಗ್ಗೆ ಅಧ್ಯಯನ ನಡೆಸುತ್ತಿರುವ ನಾವ್ಯಾರು ಹುಟ್ಟೇ ಇಲ್ಲದ ಕಾಲದ್ದು! ಲಿಖಿತ ದಾಖಲೆಗಳನ್ನು ಓದಿ ಅದರ ಅನುಸಾರ ಚರ್ಚಿಸುವುದಾದರೆ ಸ್ವಾತಂತ್ರ್ಯಪೂರ್ವದ ಕಾಲ. ಸನ್ನಿವೇಶ, ಜನರ ಮನೋಧರ್ಮ, ಜನರಾಡುವ ಮಾತುಕತೆಗಳೇ ಬೇರೆ ಬಗೆಯವು. ಅಪಾರವಾದ ಜನಸಮೂಹದಲ್ಲಿದ್ದ ಅನಕ್ಷರತೆ, ಕೆಲವೇ ವರ್ಗದ ಕೈಯಲ್ಲಿದ್ದ ಆಡಳಿತ, ಅದೂ ಬ್ರಿಟಿಷ್ ಆಡಳಿತದ ಮೇಲುಗೈ ಕಾಲ. ರಾಜಾಧಿರಾಜರು ಬ್ರಿಟಿಷರನ್ನು ಹೇಳಿ-ಕೇಳಿ ರಾಜ್ಯಭಾರ ಮಾಡಿಕೊಳ್ಳಬೇಕಿದ್ದ ಕಾಲ. ಕುಲ ಕಸುಬುಗಳಿಂದ ತುಂಬಿ ತುಳುಕಾಡುತ್ತಿದ್ದ ಗ್ರಾಮಗಳು. ಭೂಮಿ ನೆಚ್ಚಿ ಬದುಕು ಕಟ್ಟಿಕೊಂಡವರೇ ಬಹುಪಾಲು. ನಮ್ಮ ಸಮಾಜಶಾಸ್ತ್ರ ಪಠ್ಯಪುಸ್ತಕದಲ್ಲಿ ಬರುವಂತೆ ನಮ್ಮದು ಕೃಷಿ ಆಧಾರಿತ ಜೀವನ. ಭೂ ಒಡೆತನ ಮೇಲುವರ್ಗದ ಕೈಯಲ್ಲಿ – ಜೊತೆಗೆ ಅಪಾರ ಜಾತಿ ಮತ-ಪಂಥಗಳ ಒಳಗೆ ಸಂಪೂರ್ಣ ಬೇರು ಬಿಟ್ಟಿಕೊಂಡಿದ್ದ ಸಾಮಾಜಿಕ ಸ್ಥಿತಿ. ಅಕ್ಷರ ಬಲ್ಲವರಾಗಿದ್ದ ಮೇಲುವರ್ಗದ ಅಥವಾ ಜಾತಿಯ ಜನರ ಕೈಯಲ್ಲೇ ಸಹಜವಾಗಿ ನಿರ್ಧಾರಗಳಾಗುತ್ತಿದ್ದ ನ್ಯಾಯ ನಿಖರಿಗಳು. ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿಯೇ ಊರ ಹೊರಗೆ ಬದುಕುತ್ತಿದ್ದ ದಲಿತರು. ಕಾಡು ಮೇಡನ್ನೇ ಪ್ರಪಂಚ ಮಾಡಿಕೊಂಡು ಬದುಕುತ್ತಿದ್ದ ಬುಡಕಟ್ಟು ಜನರು. ನಾಗರಿಕತೆ ಎಂದರೆ ಬೆಚ್ಚಿಬೀಳುತ್ತಿದ್ದ ನಿರ್ಲಕ್ಷಿತ ಜನ ಸಮುದಾಯಗಳು. ಗ್ರಾಮಗಳೆಂದರೆ ಹೆಚ್ಚು ಕಡಿಮೆ ಜಾತಿವಾರು ಕೇರಿಗಳ ರೂಪದಲ್ಲಿ ಬದುಕು ವಿಭಾಗಿಸಿಕೊಂಡು ಜೀವಿಸಿದ್ದ ಜನ

ಸಮುದಾಯ. ಬ್ರಿಟಿಷರ ಕಾಲ್ನಡೆಯಿಂದ ತೆರೆಯುತ್ತಿದ್ದ ಶಾಲೆಗಳು. ಅದರಲ್ಲೂ ಮೇಲುಜಾತಿಯ, ಮಾನವೀಯತೆ ಹೊಂದಿದ್ದ ಕೆಲವೇ ಜನರ ಔದಾರ್ಯದಿಂದ ಅಲ್ಲೊಬ್ಬರು ಇಲ್ಲೊಬ್ಬರು ನಿರ್ಲಕ್ಷಿತ ಸಮುದಾಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಬೆರಳೆಣಿಕೆಯ ಜನ. ಅಕ್ಷರ ಪ್ರಪಂಚಕ್ಕೆ ಕಾಲಿರಿಸಿದ್ದವರು ನಾಕಾರು ಜನಮಾತ್ರ. ಇಂಥ ಹೊತ್ತಿನಲ್ಲಿ ನಿರ್ಲಕ್ಷಿತ ಸಮುದಾಯದತ್ತ ಅಂತಃಕರಣ ತೋರಿ ಬಂದವರೂ ನಾಕಾರು ಜನ. ಅವರಲ್ಲಿ ಕುದ್ಮುಲ್ ರಂಗರಾಯರು, ಗೋಪಾಲಸ್ವಾಮಿ ಅಯ್ಯರ್ ಮುಂತಾದವರು. ಇವರು ದಲಿತ ಜನ ಸಮುದಾಯಕ್ಕೆ ಅಕ್ಷರ ಕಲಿಸಲು ಮಾಡಿದ ಪ್ರಯತ್ನಗಳು ಚರಿತ್ರಾರ್ಹ. ಈ ಹೊತ್ತಿನಲ್ಲಿ ಅವರು ಕೊಟ್ಟ ಶಿಕ್ಷಣವನ್ನು ದಕ್ಕಿಸಿಕೊಂಡು ಬಂದವರಲ್ಲಿ ಆರ್. ಭರಣಯ್ಯನವರು ಒಬ್ಬರು ಎಂಬುದು ಇಲ್ಲಿನ ವಿಶೇಷ. ಇಂಥ ಹಿನ್ನೆಲೆಯ ಹಾಗೂ ಪ್ರಭಾವದಿಂದಲೇ ತಮ್ಮ ತಮ್ಮ ವೃತ್ತಿ ಬದುಕಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಬಂದಿರುವುದು ಪ್ರತಿ ಹಂತದಲ್ಲೂ ಗುರುತಿಸಬಹುದಾಗಿದೆ. ಬಹುಪಾಲು 'ಮೃದು ಧೋರಣೆ'ಯ ಅಥವಾ 'ರಾಜಿ' ಎನ್ನಬಹುದಾದ ರೀತಿಯಲ್ಲಿ ಆಡಳಿತ ನಡೆಸಿದ್ದಾರೆ. ಇಲ್ಲಿ ನೆನೆಸಬೇಕಾದ ಬಹುಮುಖ್ಯ ಸಂಗತಿ ಎಂದರೆ ಗೋಪಾಲಸ್ವಾಮಿ ಅಯ್ಯರ್ ಅವರು ಆರ್. ಭರಣಯ್ಯನವರನ್ನು ಪ್ರತಿಭಾವಂತ ವಿದ್ಯಾರ್ಥಿ ಎಂದು ಗಾಂಧೀಜಿಗೆ ಪರಿಚಯಿಸಿದ್ದರು.

ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾದ ಇನ್ನೊಂದು ಬಹುಮುಖ್ಯ ಸಂಗತಿಯೊಂದಿದೆ. ಅದೇನೆಂದರೆ ಹೀಗೆ ಬಂದ ಮೊದಲ ತಲೆಮಾರಿನಲ್ಲಿ ಆಡಳಿತಗಾರರಂತೆ ಕವಿಗಳೂ ಇದ್ದಾರೆ. ಅವರೆಲ್ಲಾ ಆ ಕಾಲದ ಸ್ಥಿತಿಗತಿ ಕುರಿತು ಕಥೆ – ಕವನ – ಪ್ರಬಂಧ – ಲಲಿತ ಪ್ರಬಂಧ – ಲೇಖನ – ಹಾಡು – ನಾಟಕ ಬರೆದು ತಮ್ಮನ್ನು, ತಮ್ಮ ಮತ್ತು ಸಮುದಾಯದ ಪ್ರತಿಭೆ ಮತ್ತು ಸಾಮರ್ಥ್ಯವನ್ನು ನಿರೂಪಿಸಲು ಯತ್ನಿಸಿದ್ದಾರೆ. ಅವರಲ್ಲಿ ಕೆಲವರನ್ನು ಮಾತ್ರ ಭರಣಯ್ಯನವರ ಜೀವನಗಾಥೆಯ ನೆಪದಲ್ಲಿ ಆ ಕಾಲಮಾನದ ದಲಿತ ಚೇತನಗಳ ನೆನಪು ಕೂಡ ಆಗಲೆಂದು ಒಂದೆರಡು ಸಂಗತಿಗಳನ್ನಷ್ಟೆ ಇಲ್ಲಿ ಸ್ಮರಿಸಿಕೊಳ್ಳಲಾಗಿದೆ. ಆರ್. ಭರಣಯ್ಯನವರು ಆಡಳಿತಾಧಿಕಾರಿಯಾಗಿ ಸರ್ಕಾರಿ ಸವಲತ್ತುಗಳನ್ನು ನೀಡುತ್ತಾ ಅನ್ನ, ವಸತಿ, ಉದ್ಯೋಗ, ಕಲ್ಪಿಸಿಕೊಡುತ್ತಾ ದಲಿತರಿಗೆ ಆಸರೆಯಾದವರು. ಆದರೆ ಈ ಸಾಹಿತ್ಯ ಪ್ರತಿಮೆಗಳು ಪ್ರತಿಯೊಬ್ಬರಿಗೂ ಸಾಹಿತ್ಯ ಶಿಕ್ಷಣವೇ ಪ್ರಧಾನವೆಂದು ಬಗೆದು ಕೆಲಸ ಮಾಡಿದವರು. ಅದರಲ್ಲಿ ಮೊದಲ ತಲೆಮಾರಿನ ದಲಿತ ಕವಿ, ಸಾಹಿತಿ, ಚಿಂತಕರು ಬಹಳ ಮುಖ್ಯವಾಗಿ ತೋರುತ್ತಾರೆ. ದಲಿತ ಬದುಕುಗಳನ್ನು ಹಸನುಗೊಳಿಸಲು ಈ ಚೇತನಗಳು ಶಿಕ್ಷಣ ಮಾರ್ಗವನ್ನು ಆದ್ಯತೆಯೆಂದು ತಿಳಿದವರು.

ಆರ್. ಭರಣಯ್ಯನವರ ಆಡಳಿತಮಾರ್ಗಕ್ಕಿಂತ ಈ ಶೈಕ್ಷಣಿಕಮಾರ್ಗವೇ ಮುಖ್ಯವೆಂದು ನೋಡಿದ ಇವರ ವ್ಯಕ್ತಿತ್ವದ ಬಗ್ಗೆ ಕುತೂಹಲವೆನಿಸುತ್ತದೆ. ಕನ್ನಡದ ಸಂಸ್ಕೃತಿ ಚಿಂತಕ ಪ್ರೊ. ಎಂ. ಎಸ್. ಶೇಖರ್‌ರವರು ಸಂಪಾದಿಸಿ ಪ್ರಕಟಿಸಿರುವ ಮೊದಲ ತಲೆಮಾರಿನ ದಲಿತ ಸಾಹಿತಿಗಳ ಹೊತ್ತಿಗೆಯಲ್ಲಿ ಈ ಜೀವನ್ಮುಖಿಗಳ ಬದುಕು-ಬರಹ ಅತ್ಯಂತ ಅರ್ಥಪೂರ್ಣವಾಗಿ ಅನಾವರಣಗೊಂಡಿದೆ. ಈ ಮುಂದಿನ ಕೆಲವು ಸಾಲುಗಳನ್ನು ಅಲ್ಲಿಂದ ತೆಗೆದುಕೊಳ್ಳಲಾಗಿದೆ.

ಡಿ. ಗೋವಿಂದದಾಸ್ 1910ರಲ್ಲಿ ಜನ್ಮತಾಳಿದವರು. ಇವರು ಹಾಸನ ಜಿಲ್ಲೆ ಶ್ರವಣಬೆಳಗೊಳದ ಸಮೀಪದ ದಮ್ಮನಿಂಗಳದವರು. ಆ ಕಾಲಕ್ಕೆ ಅಪಾರ ಕಷ್ಟದಲ್ಲಿ ಜೀವನ ನಡೆಸಿ ಅಕ್ಷರ ಪ್ರಪಂಚ ಪ್ರವೇಶಿಸಿದವರು. 1920ರ ವೇಳೆಗೆ ನೊಂದವರ ಪರ ಸಾಮಾಜಿಕ ಸುಧಾರಣೆಯ ಕೆಲಸಗಳನ್ನು ಕೈಗೆತ್ತಿಕೊಂಡರು. ಪ್ರಧಾನವಾಗಿ ಸಾಹಿತ್ಯಕ ಚಟುವಟಿಕೆಗಳ ಮೂಲಕ ದಲಿತ ಸಮುದಾಯದ ಬದುಕನ್ನು ಕಟ್ಟಲು ಯತ್ನಿಸಿದವರು. ಕನ್ನಡದ ಮೇರು ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿಯವರು ಇವರ ಪ್ರತಿಭೆಯನ್ನು ಮೆಚ್ಚಿದವರು. ಇವರಿಗಾಗಿ ಉಪಾಧ್ಯಾಯ ಕೆಲಸ ನೀಡಲು ಮುಂದಾದಾಗ ಅದನ್ನು ನಿರಾಕರಿಸಿ ಸಮಾಜ ಸುಧಾರಣೆಯ ಕೆಲಸಕ್ಕೆ ತಾನು ಮುಡಿಪಾಗಿರುತ್ತೇನೆ ಎಂದು ಹೇಳಿದ ಮಹತ್ವದ ವ್ಯಕ್ತಿ. ಸಾಹಿತ್ಯದಿಂದ ಜನರ ಬದುಕು ಹಸನುಗೊಳಿಸಬಹುದೆಂದು ಕನಸಿದ್ದವರು.

1889ರಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಇಂಗಳೆ ಗ್ರಾಮದ ಶ್ರೀ ದೇವರಾಯ ಇಂಗಳೆ ಇನ್ನೊಂದು ಬಗೆಯ ಅಸಾಧಾರಣ ಪ್ರತಿಭೆಯುಳ್ಳವರು. ಅಂಬೇಡ್ಕರ್‌ಗಿಂತಲೂ ಎರಡು ವರ್ಷ ಹಿರೀಕರು. ಮೇಲಾಗಿ ಅಂಬೇಡ್ಕರ್ ಅವರಿಗೆ ನಿಕಟವರ್ತಿಗಳಾಗಿದ್ದವರು. ಸವರ್ಣೀಯರಿಂದ ಪಾರಾಗಿ ದಲಿತರು ಬದುಕಬೇಕೆಂದರೆ ಅಕ್ಷರವೇ ಮಹಾಮದ್ದು ಎಂದು ತಿಳಿದಿದ್ದ ಪ್ರಜ್ಞಾವಂತರು. ಶಿಕ್ಷಣದ ಅರಿವಿಲ್ಲದ ದಲಿತರಿಗೆ ಅರಿವು ಮೂಡಿಸಲು ಬರವಣಿಗೆಯನ್ನು ತಮ್ಮ ಮೂಲ ಮಾಧ್ಯಮವಾಗಿಸಿಕೊಂಡರು. ಆ ಮೂಲಕ ಸರಳ ಕಲಿಕೆ-ನಾಟಕಗಳನ್ನು ರಚಿಸಿದರು, ತಾವು ಕಟ್ಟಿದ ಹಾಡುಗಳನ್ನು ತಾವೇ ಸ್ವತಃ ದಲಿತಕೇರಿಗೆ ಕೊಂಡೊಯ್ದು ಜಾಗೃತಿ ಮೂಡಿಸಿದರು.

ಶ್ರೀ ಭರಣಯ್ಯನವರು ಬದುಕಿದ್ದ ಸೀಮೆಯಲ್ಲೇ ಇದ್ದ ಇನ್ನೊಂದು ಪ್ರತಿಭೆ ಸೋಸಲೆ ಸಿದ್ದಪ್ಪನವರು. ಗೋವಿಂದದಾಸರಿಗಿಂತಲೂ ಮೊದಲೇ ಕಾವ್ಯಕೃಷಿ ಮಾಡಿದ್ದ ಧೀಮಂತ. 1892ರಲ್ಲಿ ಜನಿಸಿದ ಇವರು ಸೋಮನಾಥಪುರ ನೆರೆಯ ಊರು ಸೋಸಲೆಯವರು. ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ ಬೋರ್ಡಿಂಗ್

ಶಾಲೆಯಲ್ಲಿ ಓದಿದವರು. ಸುಮಾರು ಹದಿನಾರು ಸಾಹಿತ್ಯ ಕೃತಿಗಳನ್ನು ಚರಿತ್ರೆ – ಸಂಸ್ಕೃತಿ – ಪುರಾಣ ಮುಂತಾದ ಕ್ಷೇತ್ರಗಳ ಮೇಲೆ ರಚಿಸಿ ಪ್ರಖ್ಯಾತರಾಗಿದ್ದರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿಯ ಜಿ. ವೆಂಕಟಯ್ಯ (1916) ಗೋಪಾಲಸ್ವಾಮಿ ಅಯ್ಯರ್ ಮತ್ತು ಗಾಂಧಿ ಪ್ರಭಾವಕ್ಕೆ ಒಳಪಟ್ಟು ದಲಿತರ ಏಳಿಗೆಗಾಗಿ ದುಡಿದಿದ್ದಾರೆ. ಹೈದರಾಬಾದ್ ಕರ್ನಾಟಕದ ಶೋಷಿತರ ವಿಮೋಚನೆಗೆ ಜೀವನ ಮುಡಿಪಾಗಿಟ್ಟ ಇನ್ನೊಬ್ಬ ಪ್ರತಿಭಾವಂತ ಚಿಂತಕ ಬಿ. ಶ್ಯಾಮಸುಂದರ್ (1908). ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ ಜನಿಸಿದ ಇವರ ಹೋರಾಟ ದಲಿತ ವಿಮೋಚನೆಗೆ ಬೆಳಕಾಯಿತು. ಡಾ. ಅಂಬೇಡ್ಕರ್‌ರವರ ವಿಚಾರಗಳಿಂದ ವಿಶೇಷವಾಗಿ ಪ್ರಭಾವಿತರಾಗಿದ್ದರು. ದಲಿತ ಜನ ಸಮುದಾಯದ ಜಾಗೃತಿಯನ್ನು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಿಸ್ತರಿಸಿದ್ದರು. ಅತ್ಯಂತ ವಿಶೇಷವೆಂದರೆ 1957ರಲ್ಲಿ ಭಾಲ್ಕಿ ಕ್ಷೇತ್ರದಿಂದ ಮೈಸೂರು ಸರ್ಕಾರದ ವಿಧಾನಸಭೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಬಹುಭಾಷಾ ಪಂಡಿತರಾಗಿದ್ದ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಅನುವಾದಿತ ಕೃತಿ 'ಬೆಂದವರು' ಗಮನಸೆಳೆಯುವ ಕೃತಿ. ಇದು ಶೋಷಕರನ್ನು ದಲಿತರು ಸುಟ್ಟುಬಿಡಬಲ್ಲರು ಎಂಬ ನಿಲುವನ್ನು ಪ್ರತಿಪಾದಿಸಿದ ಕೃತಿಯಾಗಿದೆ. ಪ್ರಖ್ಯಾತ– ಕಾದಂಬರಿಕಾರ ಎನ್. ನರಸಿಂಹಯ್ಯ, ಬಿಜಾಪುರದ ಕುಮಾರ ಕಕ್ಕಯ್ಯ ಪೋಳ, ಗದಗ ಜಿಲ್ಲೆ ಮುಂಡರಗಿಯ ಹಳ್ಳಿಗುಡಿ ಗ್ರಾಮದ ಎಂ. ದೇವೇಂದ್ರ ನಾಯಕ, ಮೈಸೂರು ಜಿಲ್ಲೆ ಹಾರೋಹಳ್ಳಿ ಗ್ರಾಮದಲ್ಲಿ ಜನಿಸಿ ಮಂಡ್ಯದ ವಿ.ಸಿ.ಫಾರಂನಲ್ಲಿ ಜೀವನ ಪೂರ್ತಿ ಸಂಶೋಧನೆ ಮಾಡಿ ಬಡವರ ಅನ್ನ 'ರಾಗಿ'ಯನ್ನು ಉಳಿಸಿದ ಖ್ಯಾತ ವಿಜ್ಞಾನಿ "ರಾಗಿ ಲಕ್ಷ್ಮಣಯ್ಯ" ಇವರೆಲ್ಲ ದಲಿತ ವರ್ಗದಿಂದ ಎದ್ದು ಬಂದ ಪ್ರತಿಭೆಗಳು.

ಇವರೆಲ್ಲರ ನಡುವಿನ ಸಂದರ್ಭದಲ್ಲಿ "ಈ ಮೈಸೂರು ಸೀಮೆಯಲ್ಲಿ ನೆಲದೊಡೆಯರೆನಿಸಿಕೊಂಡಿದ್ದವರು ಆರ್. ಭರಣಯ್ಯನವರ ತಾತ ಮತ್ತು ವಂಶಸ್ಥರು. ಆಗ ಆರ್. ಭರಣಯ್ಯನವರ ಕುಟುಂಬ ಶ್ರೀಮಂತ ಕುಟುಂಬವೆನಿಸಿತ್ತು. ನೂರಾರು ಎಕರೆ ಜಮೀನು ವಹಿವಾಟನ್ನು ನಡೆಸುತ್ತಾ ಕೆರೆ–ಕಟ್ಟೆಗಳನ್ನು, ಬಾವಿಗಳನ್ನು ನಿರ್ಮಿಸಿ, ಆಳುಕಾಳುಗಳನ್ನು ಇಟ್ಟುಕೊಂಡು ಬದುಕುತ್ತಿದ್ದವರು" ಎಂದು ಅವರ ಬಗ್ಗೆ ಅಭಿಮಾನದ ನುಡಿಗಳನ್ನಾಡಿದ್ದಾರೆ. ದುಗ್ಗಟ್ಟಿ ನಂಜಯ್ಯನವರು ಆದಿ ಕರ್ನಾಟಕ ಸಮುದಾಯದ ಬಹುದೊಡ್ಡ ರೇಷ್ಮೆ ಉದ್ಯಮಿ. ರಾಟೆ ಸಿದ್ದಯ್ಯ ಕೊಡುಗೈ ದಾನಿ. ಗುಂಡ್ಲುಪೇಟೆಯ ಪುಟ್ಟಮಾದಯ್ಯ ಸೇಂದಿ ಕಂಟ್ರಾಕ್ಟರ್, ಶಿವಯೋಗಿ ಸ್ವಾಮಿ ಆದಿ ಕರ್ನಾಟಕದ ಮೊದಲ ಧಾರ್ಮಿಕ ಗುರು. ಶೈಕ್ಷಣಿಕ ಕ್ಷೇತ್ರಕ್ಕೆ ಅವಿಸ್ಮರಣೀಯ

ಕೊಡುಗೆ ಕೊಟ್ಟು ಹೋಗಿರುವ ತುಮಕೂರಿನ ಶ್ರೀ ಗಂಗಾಧರಯ್ಯ. ಇಂಥ ಹಲವಾರು ಸಮಾಜಮುಖಿ ಪ್ರತಿಭೆಗಳ ಸಾಲಿಗೆ ಸೇರುವವರು ಆರ್. ಭರಣಯ್ಯ. ಈ ಮೇಲಿನ ಟಿಪ್ಪಣಿಯನ್ನು ಆರ್. ಭರಣಯ್ಯನವರು ಅಧಿಕಾರ ಬಳಸಿ ಮಾಡಿದ ಸುಧಾರಣೆಯ ಜೊತೆ ನೆನಪಿಸಿಕೊಳ್ಳಲು ಮಾತ್ರವೇ ಯತ್ನಿಸುತ್ತಿದ್ದೇನೆ. ಮೇಲೆ ಉದಾಹರಿಸಿದ ಜೀವನ ಚಿತ್ರಣಗಳು ದಲಿತ ಚೇತನಗಳ ದೊಡ್ಡ ಜೀವನ ಗಾಥೆಗಳಾಗಿವೆ.

ಆಡಳಿತಗಾರರಾಗಿ ಬಂದವರಲ್ಲಿ ಹೆಗ್ಗಡದೇವನ ಕೋಟೆಯಲ್ಲಿ ಅಮಲ್ದಾರರಾಗಿದ್ದ ರಾಚಯ್ಯನವರು, ನ್ಯಾಯಾಂಗ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಜಸ್ಟಿಸ್ ಭೀಮಯ್ಯನವರು, ಎನ್. ಸಂಜೀವಯ್ಯನವರು, ಬಿಳಿಗಿರಿ ರಂಗಯ್ಯನವರು ಮುಖ್ಯರು. ಆದರೆ ಆ ತಲೆಮಾರಿನಲ್ಲಿ ಆಡಳಿತ ಕ್ಷೇತ್ರದಲ್ಲಿ ದಲಿತ ಸಮುದಾಯದ ಹೆಗ್ಗುರುತಾಗಿ, ತಮ್ಮ ಜನಾಂಗಕ್ಕೆ ಆಡಳಿತ ಸಾಮರ್ಥ್ಯವಿದೆ ಎಂದು ಲೋಕದ ಕಣ್ಣಿಗೆ ರುಜುವಾಗು ಪಡಿಸಿದವರು ಬಹುಶಃ ಭರಣಯ್ಯನವರೇ ಇರಬೇಕು. ಇವರ ನಂತರ ಬಂದ ಆಡಳಿತಗಾರರ ಪಟ್ಟಿಯೆ ಇಂದು ಬಹುದೊಡ್ಡದಾಗಿದೆ ಅಥವಾ ಇವರ ಸಮಕಾಲೀನರಾಗಿದ್ದ ಆಡಳಿತಗಾರರು ಅನೇಕರು ಇದ್ದರು. ಆದರೆ ಇವರ ನಡುವೆ ಆರ್. ಭರಣಯ್ಯನವರ ಮಾರ್ಗ ಮಾತ್ರ ವಿಶೇಷವಾಗಿದೆ.

ಈ ಪ್ರಸ್ತಾವನೆಯಲ್ಲಿ ಸುಮಾರು 50 ವರ್ಷಗಳ ಹಿಂದಿನ ಆ ಕಾಲವನ್ನು ಇದೇ ಎಂದು ಈ ಕಿರು ಟಿಪ್ಪಣಿಯಲ್ಲಿ ನಿರೂಪಿಸುವುದು ನಿಜಕ್ಕೂ ಸವಾಲಿನ ಕೆಲಸ. ಆದರೆ ಈ ಅಧ್ಯಯನ ಸವಾಲನ್ನು ಕೆಲಮಟ್ಟಿಗಾದರೂ ಸ್ವೀಕರಿಸಲು ನೋಡಿದೆ. ಕಾಲವೆಂದರೆ ಬದಲಾವಣೆ. ಬದುಕಿನ ಬದಲಾವಣೆ. ಸನ್ನಿವೇಶದ ಬದಲಾವಣೆ. ಜೀವನ ವಿಧಾನದ ಬದಲಾವಣೆ. ವೇಗದ ಬದಲಾವಣೆ. ಅಂದರೆ ಬದಲಾವಣೆ ಎಂದರೇ ಒಂದೇ ಎರಡೇ: ಅಸಂಖ್ಯಾತ ಬದಲಾವಣೆಗಳು ಈ 50–60ವರ್ಷಗಳ ಕಾಲವು ಪ್ರಪಂಚವನ್ನು ಕಾಂತಿಯುಕ್ತಮಾಡಿದೆ. ಬರ–ಕ್ಷಾಮ–ಯುದ್ಧಗಳನ್ನು ತೋರಿಸಿದೆ. ಜಾತಿ–ಧರ್ಮಗಳ ಹೋರಾಟ ಮಾಡಿಸಿದೆ. ತಂತ್ರ–ಮಂತ್ರಗಳನ್ನು ಹಾದು ಯಂತ್ರಯುಗಕ್ಕೆ ಮನುಷ್ಯನನ್ನು ಕರೆತಂದುಬಿಟ್ಟಿದೆ. ಮನುಷ್ಯ ಈಗ ಬಾಹ್ಯಾಕಾಶದಲ್ಲಿ ನೆಲೆಯಾಗುವ ಬಯಕೆಯ ಪರಾಕಾಷ್ಠೆಯಲ್ಲಿ ಮುಳುಗಿದ್ದಾನೆ. ತೇಲುವನೋ–ಬೀಳುವನೋ ಕಾಲ ನಿರ್ಧರಿಸಬೇಕು! ಈಗ ಸ್ಪೃಶ್ಯನು ಅಸ್ಪೃಶ್ಯನು ಒಟ್ಟಿಗೆ ವಿಮಾನದಲ್ಲಿ ಕೂತು ಹಾರಬಲ್ಲ. ಭೂಮಿಗಿಳಿದ ಮೇಲೆ ತನ್ನ ಮನೆ–ಮಠ ಕೇರಿಗಳತ್ತ ನಡೆದುಹೋಗಿ ಕೇವಲ ಜಾತಿವಂತನಾಗಿಯೂ ಬದುಕಬಲ್ಲ! ಅದುವರೆಗೂ ಆಕಾಶದಲ್ಲಿ ಮಾಡಿದ ಪ್ರಯಾಣವನ್ನು ಒಂದು ಘಟನೆಯಾಗಿ ನೋಡಬಲ್ಲ! ಮರೆತು ಬಿಡಬಲ್ಲ! ಆ ಕಾಲಘಟ್ಟದಲ್ಲಿ ಅನಕ್ಷರಸ್ಥರ ದಲಿತರ ಹಟ್ಟಿಯಲ್ಲಿ ಹುಟ್ಟಿದವನು

ಜೀತದಾಳಾಗಿಯೂ ಜೀವಿಸಿ ಈಗ ಮಣ್ಣು ಸೇರಿದ್ದಾನೆ. ಓದಿ ಮುಂದೆ ಬಂದು ಉದ್ಧಾರಕನೂ ಆಗಿದ್ದಾನೆ. ತಾನೇ ಒಂದು ಪ್ರಪಂಚವಾಗಿ ಇದ್ದುಬಿಟ್ಟವರೂ ಇದ್ದಾರೆ. ಆರ್. ಭರಣಯ್ಯನವರಂತೆ ಲೋಕೋಪಕಾರಿಯಾಗಿ ಬದುಕಿಯೂ ಹೋಗಿದ್ದಾರೆ.

ಹೀಗಾಗಿ ಆರ್. ಭರಣಯ್ಯನವರು ತಮ್ಮ ಕಾಲಘಟ್ಟದಲ್ಲಿ ತನ್ನ ಜನಾಂಗದತ್ತ ತೀವ್ರವಾಗಿ ಇಳಿಯಲು ಕಾರಣ ಎರಡು ಬಗೆಯಲ್ಲಿ ತೋರುತ್ತದೆ. ಒಂದು, ಅವರ ಪೂರ್ವಜರ ದಾನ-ಧರ್ಮಗಳ ತಿಳುವಳಿಕೆಗೆ ಓಗೊಟ್ಟು ಬೆಳೆದ ಸಂಸ್ಕಾರವಿರಬಹುದು. ಇನ್ನೊಂದು, ಅದೇ ಕಾಲಕ್ಕೆ ನಿರ್ಲಕ್ಷಿತ ಸಮುದಾಯವೆನಿಸಿಕೊಂಡು ಹಲವು ಬಗೆಯ ಸಾಮಾಜಿಕ ಅವಮಾನಗಳಿಗೆ ತುತ್ತಾದವರಿಗೆ ದನಿಯಾಗಬೇಕೆಂದು ಹಂಬಲಿಸಿದ ಅಂಬೇಡ್ಕರ್‌ರವರ ಮಾತುಗಳೂ ಬೇರೂರಿರಬೇಕು. ಇನ್ನು ವಿಶೇಷವಾಗಿ 'ದೀನರೇ ದೇವರು-ಸೇವೆಯೇ ಧರ್ಮ'ವೆಂದ ಗಾಂಧೀಜಿ ಅವರ ಮಾತು ಆಳವಾಗಿ ಕೆಲಸ ಮಾಡಿರಬೇಕು. ಈ ಎಲ್ಲಾ ಪ್ರಭಾವಗಳು ಆರ್. ಭರಣಯ್ಯನವರನ್ನು ರೂಪಿಸಿದ್ದರೆ ಆಶ್ಚರ್ಯವಿಲ್ಲ. ಇದಕ್ಕೆ ಸಮರ್ಥನೆ ನೀಡುವಂತೆಯೇ ಅವರು ಮಾಡಿರುವ ಕೆಲಸಗಳು.

ಹೀಗೆ ಈ ಅಧ್ಯಯನದ ಹಾದಿಯಲ್ಲಿ ನಡೆದಷ್ಟು ದಾರಿಗಳು ತೆರೆದುಕೊಳ್ಳುತ್ತಿದ್ದವು. ದಲಿತ ಸಮುದಾಯದವನಾಗಿದ್ದರೂ ಜಮೀನು ಒಡೆಯನ ಮಗ ಕಡುಬಡವರ ಪರವಾದ ಅಧಿಕಾರಿಯಾದದ್ದು ವಿಸ್ಮಯ. ಭೂಮಿ ಸಂಪತ್ತಿನಿಂದ ಯಾರನ್ನು ಲೆಕ್ಕಿಸದೆ ಇದ್ದುಬಿಡುಬಹುದಾಗಿದ್ದ ಅವಕಾಶ. ಇದರಿಂದಾಗಿಯೇ ತನ್ನ ಬೇರುಗಳನ್ನು ನಯವಾಗಿ ಕಳಚಿಕೊಂಡು ಇದ್ದುಬಿಡಲು ಸಾಧ್ಯವಿದ್ದ ಸನ್ನಿವೇಶ. ಆದರೆ ಇವರು ತನ್ನ ಮೂಲ ಬೇರುಗಳತ್ತ ಮತ್ತೆ ಮತ್ತೆ ಬಂದಿದ್ದಾರೆ. ತನ್ನತ್ತ ಕರೆಸಿಕೊಂಡಿದ್ದಾರೆ. ತನ್ನ ತಾಯಿನೆಲದ ಋಣ ತೀರಿಸಿಕೊಳ್ಳುವ ಸ್ಪಷ್ಟ ಆಲೋಚನೆಯೊಂದನ್ನು ಎದೆಯಲ್ಲಿಟ್ಟುಕೊಂಡೇ ನಡೆದಿದ್ದಾರೆ. ತನ್ನನ್ನು ಕೇರಿಯಲ್ಲಿ ತನ್ನವರು ಮತ್ತು ಇತರರು ತನ್ನನ್ನು ನಂಬುವಂತೆ ನಡೆದುಕೊಂಡಿದ್ದಾರೆ. ನುಡಿದಂತೆ ನಡೆದಿದ್ದಾರೆ. ಆ ಮೂಲಕ ಇಡೀ ದಲಿತ ಸಮುದಾಯ ಪರೋಪಕಾರಕ್ಕೆ ತೆತ್ತುಕೊಳ್ಳುವ ಜಾಯಮಾನದ್ದೆಂದು ಸಾಬೀತುಪಡಿಸಿದ್ದಾರೆ. ಅದು ಸೋಸಲೆಯ ಹೊನ್ನಗಿರಿ ಗೌಡರು ಹೇಳಿದವರಿಗೆ ಕೆಲಸಕೊಟ್ಟಿದ್ದು. ಆತ ನಿಂದಿಸಿದ್ದನ್ನು ಮರೆತು ತಣ್ಣಗೆ ಉಪಕಾರ ಮಾಡಿಬಿಡುವುದು. ಇಮಾಮ್ ಸಾಬ್ ಕರೆತರುವ ಜನಕ್ಕೆ ಕೇಳಿದ ಕೆಲಸ ಕೊಡುವುದು. ತನ್ನದೇ ಕುಟುಂಬದವರಿಗೆ ಕೆಲಸದ ಬದಲು ಓದಲು ಹೇಳುವುದು. ಊರ ಕಟ್ಟುಕಟ್ಟಲೆಗೆ ತಾನು ಒಳಪಡುತ್ತಲೇ ಇದ್ದುಬಿಡುವ ಧೀನತೆ. ಶ್ಯಾನಬೋಗರನ್ನು ಮನೆಗೆ ಕರೆಸಿಕೊಂಡು ನಯವಿನಯದಲ್ಲಿ ಕಂದಾಯ ಕಟ್ಟಿ ಕರ್ತವ್ಯ ನಿರ್ವಹಿಸಿದ್ದಾರೆ. ಇವೆಲ್ಲ ಅವರ ಸ್ವಭಾವದ ಆಯ್ದ ಮಾದರಿಗಳಂತೆ ತೋರುತ್ತಿವೆ. ಬೆಂಗಳೂರಿನಲ್ಲಿ ತನ್ನ ಮಕ್ಕಳನ್ನು

ಶಾಲೆ, ಕಾಲೇಜಿಗೆ ಸೇರಿಸಿ ಓದಿಸಿದ್ದಾರೆ. ತನ್ನ ಮಕ್ಕಳಿಗೆ ತಾವ್ಯಾರು, ಯಾವ ಜನವರ್ಗದವರೆಂಬ 'ಅರಿವೇ' ಬಾರದಂತೆ ನೋಡಿಕೊಂಡಿದ್ದಾರೆ. ತಮ್ಮೊಳಗೆ ತಮ್ಮ 'ಜಾತಿಯ' ಪ್ರಜ್ಞೆಯನ್ನು ಇಟ್ಟುಕೊಂಡು ಅದಕ್ಕೆ ಬೇರೆ ವರ್ಚಸ್ಸು ತಂದುಕೊಡುವ ಪ್ರಜ್ಞಾಪೂರ್ವಕ ಪ್ರಯತ್ನ ಕಾಣುತ್ತದೆ. ಆದರೆ ತಮ್ಮ ಮಕ್ಕಳಿಗೆ ಎಲ್ಲರಂತೆ ಫೀಜುಕಟ್ಟಿ, ಅವರಲ್ಲಿ, ಯಾವ ಬಗೆಯಲ್ಲೂ ಜಾತಿ ರಿಯಾಯಿತಿಯಲ್ಲಿ ಬದುಕದಂತೆ ವ್ಯವಸ್ಥೆ ಕಲ್ಪಿಸಿದ್ದಾರೆ. ತಮ್ಮ ಶಿಸ್ತುಬದ್ಧ ಜೀವನ, ಆಧುನಿಕ ಉಡುಗೆ ತೊಡುಗೆ, ಸಂಸ್ಕೃತ ಪಾಂಡಿತ್ಯದಲ್ಲಿ ಸಾರ್ವಜನಿಕ ಜೀವನ ಮುನ್ನಡೆಸಿದ್ದೆಲ್ಲ ಅಚ್ಚರಿಪಡುವಂತಿದೆ. ಅವರ ಹೆಣ್ಣುಮಕ್ಕಳು ಹೇಳುವಂತೆ ಅವರಿಗೆ ತಮ್ಮ ಮದುವೆಯ ಗಳಿಗೆಯಲ್ಲಿ ಅವರ ಗಂಡಂದಿರ ಮನೆ ಸಂಪರ್ಕ, ಊರು ಕೇರಿಗಳ ಸಂಪರ್ಕವಾಗುವವರೆಗೂ ತಾವು ಹೀಗೊಂದು ಶ್ರೇಣಿಕೃತ ಸಮಾಜದಲ್ಲಿ ತಳಜಾತಿ ಎಂಬ ಅರಿವೇ ಆಗಿರಲಿಲ್ಲವಂತೆ! ಅಷ್ಟರ ಮಟ್ಟಿಗೆ ತಮ್ಮ ಮಕ್ಕಳನ್ನು ಒಂದು ವಿಭಿನ್ನ ವಾತಾವರಣದಲ್ಲಿ ಬೆಳೆಯುವಂತೆ ನೋಡಿಕೊಂಡಿದ್ದಾರೆ. ಈ ಮನೋಧರ್ಮ ಇಂದಿಗೂ ಕುತೂಹಲ ತರುತ್ತಿದೆ. ಹಬ್ಬ, ಹರಿದಿನಗಳಲ್ಲಿ ಅವರ ಮನೆ ಒಳಗಿನ ವಹಿವಾಟು, ಇವರಿಗಿದ್ದ ದೈವಭಕ್ತಿಗಳು, ಹಾಡು-ಭಜನೆ-ಪ್ರಾರ್ಥನೆಗಳಲ್ಲಿ ಹೊಂದಿದ್ದ ಪರಿಣಿತಿ ಇವೆಲ್ಲ ಇಡೀ ಕುಟುಂಬದೊಳಗೆ ಮತ್ತು ತನ್ನ ಮಕ್ಕಳಲ್ಲಿ ಒಂದು ಬಗೆಯ ದೈವಭಕ್ತಿ ಉಂಟಾಗುವಂತೆ ಮಾಡಿದ್ದರೆ ಆಶ್ಚರ್ಯವಿಲ್ಲ. ಯಾವ ಭಾರತೀಯ ಸನಾತನ ವಿಚಾರಧಾರೆಗಳು ಶ್ರೇಣಿಕೃತ ಸಮಾಜ ಸೃಷ್ಟಿಗೆ ಕಾರಣವಾಯಿತೋ, ಅಲ್ಲಿ ಸ್ಪೃಶ್ಯ-ಅಸ್ಪೃಶ್ಯ ಎಂಬ ಇಬ್ಭಾಗ ತಲೆ ಎತ್ತಿತ್ತೋ ಅಸ್ಪೃಶ್ಯ ಜನಸಮುದಾಯಕ್ಕೆ, ಅದರ ಘನತೆ ಗೌರವಕ್ಕೆ ಕುಂದು ತಂದಿತೋ, ಅದೇ ವಿಚಾರ, ಶಾಸ್ತ್ರ, ಪುರಾಣ, ಗೀತೆ-ಕಥೆ-ವಿಚಾರ-ನಂಬಿಕೆಗಳನ್ನು ತನ್ನ ಕುಟುಂಬದಲ್ಲಿ ಸರಾಗವಾಗಿ ಅನುಸರಿಸುವಂತೆ ನೋಡಿಕೊಂಡಿದ್ದಾರೆ. ಇಷ್ಟಾದರೂ ಈ ನಡುವೆ ಅಂಬೇಡ್ಕರ್ ವಿಚಾರಧಾರೆಗಳಿಂದ ಇವರು ಪ್ರಭಾವಿತರಾಗಿದ್ದಾರೆ. ಅಂಬೇಡ್ಕರ್ ಬಯಸಿದ್ದ ಸಮಾಜಕ್ಕಾಗಿ ತಾನು ತೆತ್ತುಕೊಂಡಿದ್ದಾರೆ. ತಳ ಸಮುದಾಯದ ಜನಕ್ಕೆ ಶಿಕ್ಷಣ-ಸಾಮಾಜಿಕ ಆರ್ಥಿಕ ಉಳಿವು-ಉನ್ನತಿಗೆ ತನ್ನದೇ ದೃಷ್ಟಿಕೋನದಲ್ಲಿ ಕೆಲಸ ಮಾಡಿರುವುದು ತಿಳಿದುಬರುತ್ತದೆ. ಅತೀ ನಿಷ್ಠೆ ಎನ್ನಬಹುದಾದ ಮಾರ್ಗದಲ್ಲಿ ನೆರವಿತ್ತಿದ್ದಾರೆ. ಬಡತನ-ಮೌಢ್ಯತೆ ಕಂಡು ಕಣ್ಣೀರಿಟ್ಟಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಪರಿ-ಪರಿಯಾಗಿ ದಲಿತರಿಗೆ ಅವಕಾಶ ಗಿಟ್ಟಿಸಿಕೊಡಲು ಅಂಗಲಾಚಿದ್ದಾರೆ. ತನ್ನ ಅಧಿಕಾರ ವ್ಯಾಪ್ತಿಗೆ ಮೀರಿದ ಸ್ಥಳಗಳಲ್ಲಿ ಕೆಲಸವೋ, ಸವಲತ್ತೋ ಕೊಡಿಸಲು ಇತರರಿಗೆ ಕೈ ಮುಗಿದಿದ್ದಾರೆ. ದಲಿತ ಸಮುದಾಯಕ್ಕೆ ನೆರವಾಗಬಹುದಾದ ತನ್ನದೇ ಒಂದು ದಾರಿಯನ್ನು

ನಿರೂಪಿಸಲು ಯತ್ನಿಸಿದಂತೆ ತೋರುತ್ತಾರೆ. ಇದು ಆ ಕಾಲದ ಸ್ಥಿತಿಗೆ ತಕ್ಕಂತೆ ಇರಬೇಕಿದ್ದ ಅನಿವಾರ್ಯ ಮಾರ್ಗವೇನೋ ಅನ್ನಿಸುವಂತಿದೆ.

ಇನ್ನು ಮುಂದಿನ ವಿಷಯ ಅವರು ವೃತ್ತಿಯಲ್ಲಿದ್ದಾಗಲೇ ರಾಜಕೀಯ ಪ್ರವೇಶ ಮಾಡಿದ್ದು. ಇನ್ನೂ ಅವಧಿ ಇರುವಾಗಲೇ ರಾಜೀನಾಮೆ ಇತ್ತು ರಾಜಕೀಯ ಪ್ರವಾಸ ಮಾಡಿದ್ದಾರೆ. ರಾಷ್ಟ್ರೀಯ ಕಾಂಗ್ರೇಸ್ ಪಕ್ಷವು 60ರ ದಶಕದ ಕರ್ನಾಟಕದಲ್ಲಿ ಒಡೆದು ಹೋಗಿದ್ದ ಸಂದರ್ಭ. ರಾಜ್ಯದ ನೇತಾರರು ಇವರ ಜನಪ್ರಿಯತೆಯನ್ನು ಗುರುತಿಸಿದ್ದಾರೆ. ಇವರನ್ನು ತಮ್ಮ ಪಕ್ಷದಲ್ಲಿ ಕ್ಷೇತ್ರವೊಂದಕ್ಕೆ ಅಭ್ಯರ್ಥಿಯನ್ನಾಗಿಸಲು ಪ್ರಯತ್ನ ಹಾಕಿದ್ದಾರೆ. ಅನೇಕರು ಇವರ ಜನಪ್ರಿಯತೆಗೆ ಇದೊಂದು ಅವಕಾಶವೆಂಬಂತೆ ಮನವೊಲಿಸಿದ್ದಾರೆ. ಇವರ ಉಪಕಾರ ವ್ಯಕ್ತಿತ್ವವು ರಾಜಕೀಯಕ್ಕೆ ಬಂದರೆ ಜನಪ್ರಿಯತೆ ಇಮ್ಮಡಿಸುತ್ತದೆ ಎಂದೇ ಮನವರಿಕೆ ಮಾಡಿಸಿದ್ದಾರೆ. ಭರಣಯ್ಯನವರೂ ಇದಕ್ಕೆ ಸಮ್ಮತಿಸಿ ಬಿಟ್ಟಿದ್ದಾರೆ. ತಾವು ಹುಟ್ಟಿ ಬೆಳೆದ ಸೀಮೆ ಕೊಳ್ಳೇಗಾಲದಲ್ಲಿ ಚುನಾವಣಾ ಕಣಕ್ಕೆ ಅಭ್ಯರ್ಥಿಯಾಗಿದ್ದಾರೆ. ನಂತರದ ಅನಿರೀಕ್ಷಿತ ಸೋಲು ಅವರ ವ್ಯಕ್ತಿತ್ವವನ್ನು ವಿಚಿತ್ರ ರೀತಿಯ ಪರೀಕ್ಷೆಗೆ ತಂದು ನಿಲ್ಲಿಸಿದಂತಿದೆ.

ಈ ಬಗ್ಗೆ ಮಾತನಾಡಿರುವ ಅನೇಕರ ದೃಷ್ಟಿಯಲ್ಲಿ ಏನೇ ಆದರೂ ಇವರು ಶಕ್ತಿ ರಾಜಕಾರಣದತ್ತ ಬಂದಿದ್ದು ಸೋಜಿಗವೂ, ಅನಿರೀಕ್ಷಿತವೂ ಎನಿಸಿದೆ. ನಂತರ ಸೋಲಿನ ಆಘಾತವೂ ತಕ್ಷಣವೇ ಸುತ್ತುವರಿದಿದೆ. ಅಲ್ಲಿಂದ ಅವರ ಸಾರ್ವಜನಿಕ ಬದುಕಿನ ಚಿತ್ರಣ ಹಠಾತ್ ನಿಂತಂತೆ ತೋರುತ್ತದೆ. ಅದೇ ಮನಸ್ಥಿತಿಯಲ್ಲಿ ಅವರು ಕೆಲವೇ ಕಾಲ ಇದ್ದು ಕಣ್ಮರೆಯಾಗಿದ್ದಾರೆ. ಇದು ಆ ಕಾಲಕ್ಕೆ ತುಂಬಿಕೊಳ್ಳಲಾರದ ನಷ್ಟವೆನಿಸಿದೆ. ಮೇಲಾಗಿ ಎಲ್ಲರಿಗೂ ಕಾಡಿದ ಪ್ರಮುಖ ಅಂಶವೆಂದರೆ, ಈ ಶಕ್ತಿ ರಾಜಕಾರಣ ಹೇಗೆ ಹೃದಯವಂತ ಪ್ರತಿಭೆಗಳನ್ನು ಹೊಸಕಿಹಾಕುತ್ತದೆ ಎಂಬುದಕ್ಕೆ ಒಂದು ವಿಶೇಷ ಅಧ್ಯಯನ ವಸ್ತುವಾಗಿ ಇದು ತೋರುತ್ತಿದೆ. ಸಕ್ರಿಯ ಶಕ್ತಿ ರಾಜಕಾರಣಕ್ಕೆ ಅವರು ಆಸಕ್ತಿ ತೋರದಿದ್ದರೆ ಅವರನ್ನು ಅವರ ಜನಪ್ರಿಯತೆಗೆ ಬೆಲೆ ನೀಡಿ ಯಾವುದಾದರೂ ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ಮಾಡಬೇಕೆಂದಿದ್ದ ವಿಷಯವೂ ಆಗ ಪ್ರಸ್ತಾಪದಲ್ಲಿತ್ತಂತೆ. ಇದು ಇವರ ವ್ಯಕ್ತಿತ್ವಕ್ಕಿದ್ದ ಇನ್ನೊಂದು ವಿಶೇಷತೆ. ಇಷ್ಟಲ್ಲದೇ ಅವರು ಈ ರಾಜಕೀಯ ಕ್ಷೇತ್ರವನ್ನು ಒಂದು ಅಭಿವೃದ್ಧಿ ಪ್ರಕ್ರಿಯೆಯಾಗಿ ಪರಿಭಾವಿಸಿಕೊಂಡಿದ್ದರು ಅಥವಾ ಇದನ್ನು ಅಭಿವೃದ್ಧಿ ಇಲಾಖೆಯೊಂದರ ಕೆಲಸ ಕಾರ್ಯಗಳಂತೆ ನೋಡಿದ್ದರು ಎಂಬುದಕ್ಕೆ ಕೆಲವರು ನೀಡಿರುವ ಉದಾಹರಣೆಗಳು ಅಚ್ಚರಿ ಎನಿಸುತ್ತವೆ. ಅವರು ಚುನಾವಣೆಗೆ ಸ್ಪರ್ಧಿಸಿದ ನಂತರ ಚುನಾವಣಾ ಪ್ರಚಾರಕ್ಕೆ ಹೋದಾಗ ಮತಯಾಚನೆಗಿಂತ ದಲಿತ ಕೇರಿಗಳ

ಕುಂದುಕೊರತೆಗಳ ಬಗ್ಗೆ ಹೆಚ್ಚು ಮಾತಾಡಿದ್ದಾರೆ. ಅಲ್ಲಿನ ಜನರ ಓದು-ಸಂಘಟನೆ-ಆರೋಗ್ಯ-ಉದ್ಯೋಗ ಈ ವಿಷಯದಲ್ಲಿ ಉಪನ್ಯಾಸ ನೀಡಿ ಮರಳಿ ಬಂದಿದ್ದಾರೆ. ಆ ಕ್ಷಣ ಮತಯಾಚನೆಗಿಂತ ಆ ಜನರ ಬದುಕು ಬವಣೆ ಸುಧಾರಿಸುವುದೇ ಮೇಲೆಂದು ತಿಳಿದು ನಡೆದುಕೊಂಡಿದ್ದಾರೆ. ಶಕ್ತಿ ರಾಜಕಾರಣಕ್ಕೆ ಇದು ಅಪಥ್ಯ, ಅಲ್ಲಿ ಚಾಲೂಕಾಗಿರಬೇಕು. ಚಮತ್ಕಾರದ ಮಾತಿರಬೇಕು. ಅಂತಃಕರಣಕ್ಕೆ ಸ್ಥಳ ಕಡಿಮೆ. ಹೀಗಿರುವಾಗ ಜನರು ಅವರ ಅಂತಃಕರಣಕ್ಕೆ ಒಲಿದಿದ್ದರೂ ಕಿವಿಗೊಡುವುದು ಶಕ್ತಿರಾಜಕಾರಣದ ಬಣ್ಣದ ಮಾತಿಗೆ. ಇಂದಿಗೂ ಈ ಮನೋಧರ್ಮ ಹಾಗೆ ಇದೆ. ಅಂದಿನ ಆ ಪ್ರಚಾರ ವೈಖರಿ, ಅದರಿಂದ ಉಂಟಾದ ಸೋಲು ಅವರನ್ನು ವಿಚಿತ್ರವಾಗಿ ಕಾಡಿರುವುದು ತಿಳಿಯುತ್ತದೆ. ಇದು ಅವರಿಗಿದ್ದ ರಾಜಕೀಯ ಜ್ಞಾನದ ಮಿತಿಯೇ, ಮುಗ್ಧತೆಯೇ? ಅಂತೂ ಸೋತರು! ಕ್ಷೇತ್ರಾಧ್ಯಯನ ಮಾತನಾಡಿರುವವರು ಹೇಳುವಂತೆ "ಅಂಬೇಡ್ಕರರನ್ನು ಸೋಲಿಸಿದ ಮನಸ್ಸೇ ಇವರನ್ನೂ ಸೋಲಿಸಿದೆ! ಜನಪರತೆ, ಜನಪ್ರಿಯತೆ, ಇಷ್ಟೇ ಶಕ್ತಿ ರಾಜಕಾರಣಕ್ಕೆ ಸಾಲುವುದಿಲ್ಲ. ಇದೇ ಸ್ಥಿತಿ ದಲಿತೋದ್ಧಾರಕ್ಕೆ ಇಳಿದವರಿಗೆಲ್ಲ ಎದುರಾಗಿರುವ ಸವಾಲಾಗಿದೆ".

ಒಟ್ಟಿನಲ್ಲಿ ಆರ್. ಭರಣಯ್ಯನವರು ವಿಶೇಷವಾಗಿರುವುದೇ ಅವರು ತಾನು ಗಳಿಸಿದ ಓದು-ಜ್ಞಾನ-ಅಧಿಕಾರವನ್ನು ಬಡಜನತೆಗಾಗಿ ಬಳಸಿದ್ದರಲ್ಲಿ. ಇದನ್ನು ಇಲ್ಲಿನ ಹಲವು ಸಂದರ್ಶನಗಳ ಚರ್ಚೆಗಳು, ವಿಚಾರಗಳು ಪುಷ್ಟೀಕರಿಸಿವೆ. ತಾನು ಇಟ್ಟ ಪ್ರತಿ ಹೆಜ್ಜೆಯೂ ನಾಳಿನವರಿಗೆ ದಾರಿದೀಪವಾಗಲಿ ಎಂಬಂತೆಯೇ ನಡೆದಿದ್ದಾರೆ. ಈ ಹೊತ್ತಿನ ವರ್ತಮಾನವು ಅವರ ನೆನಪನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ಅವರ ವೃತ್ತಿ ಜೀವನದಲ್ಲಿ ಬಿಟ್ಟುಹೋಗಿರುವ ಕೆಲವು ಮಾದರಿಗಳನ್ನು ನೋಡಬೇಕಾಗಿದೆ. ಈ ಮಾದರಿಗಳ ಒಳಹೊರಗನ್ನು ಗಮನವಿಟ್ಟು ನೋಡಬೇಕಾಗಿದೆ. ಅನೇಕ ಬದಲಾವಣೆಗಳು ಏರ್ಪಟ್ಟಿರುವ ಈ ಹೊತ್ತಿನಲ್ಲಿ ಅವರ ಮಾದರಿಗಳು ವರ್ತಮಾನಕ್ಕೆ ನಿಜಕ್ಕೂ ಪುನರಾವರ್ತನೆ ಆಗಬೇಕೇನೋ ಎಂಬಂತಿವೆ. ಇದನ್ನೆಲ್ಲಾ ಗಮನಿಸಲು, ಅರಿಯಲು ಇಲ್ಲಿ ಮಾಹಿತಿಗಳು ಇವೆ. ಅವರನ್ನು ಮನೆ ಜನ, ಮನೆ ಹೊರಗಿನ ಜನ, ಸಾರ್ವಜನಿಕ ಕ್ಷೇತ್ರಗಳ ಪ್ರತಿನಿಧಿಗಳು, ಜಾತಿ-ಧರ್ಮ-ಲಿಂಗ ಭೇದವಿಲ್ಲದೆ ಹೇಳಿರುವ ಮಾತುಗಳು ಅವರ ವ್ಯಕ್ತಿತ್ವದ ವೈವಿಧ್ಯತೆಯನ್ನು ತೋರಿಸಿಕೊಟ್ಟಿವೆ. ಅವರೇ ಬರೆದ ಒಂದೇ ಒಂದು ದಾಖಲೆಗಳು ಇಂದು ಇಲ್ಲ. ಅವರ ಕಾಲದಲ್ಲಿ ಬದುಕಿದ್ದವರೂ ಬೆರಳೆಣಿಕೆಯಷ್ಟಿದ್ದಾರೆ. ಅವರೊಂದಿಗೆ ಎಲ್ಲ ನೆನಪುಗಳು ಕಾಲದಲ್ಲಿ ಲೀನವಾಗಿವೆ. ಅವರ ಸಹವರ್ತಿಗಳು ಅವರಂತೆ ನೆನಪಾಗಿ ಹೋಗಿದ್ದಾರೆ. ಅವರಿಂದ ನೆರವು ಪಡೆದ ಕೆಲವರೇ ಕೆಲವರು ಇದ್ದ ನೆನಪುಗಳನ್ನು

ಹಂಚಿಕೊಂಡಿದ್ದೇ ಭಾಗ್ಯ. ಹೇಳುವವರೆಲ್ಲರಲ್ಲೂ ಇದ್ದ ಒಂದು ಸಮಾನ ಗುಣ ಎಂದರೆ ಅವರ ವ್ಯಕ್ತಿತ್ವವನ್ನು ಅವರನ್ನು ಮತ್ತೆ ಮತ್ತೆ ನೆನಪಿಸಿಕೊಂಡು ಕೃತಜ್ಞತೆಯ ಭಾವದಲ್ಲಿ ಮಾತನಾಡಿದ್ದು. ಅಂಥ ಜನಪ್ರೇಮಿ, ಶುದ್ಧ ಹಸ್ತದ ಜನೋಪಕಾರಿ ಅಧಿಕಾರಿಯನ್ನು ನಾಳೆಗಳು ಕಾಣುವುದು ಕಷ್ಟಸಾಧ್ಯ! ಇದಕ್ಕಾಗಿ ನಾಳೆಗೆ ಇವರು ಉಳಿದುಕೊಳ್ಳಬೇಕಾದ್ದು ಅನಿವಾರ್ಯವೆನಿಸಿತು.

ಈ ಪುಸ್ತಕದ ಮಹತ್ತ್ವವನ್ನು ಮತ್ತಷ್ಟು ವಿಸ್ತರಿಸುವ ನಿಟ್ಟಿನಲ್ಲಿ, ಕರ್ನಾಟಕದ ದಲಿತ ಅಧಿಕಾರಶಾಹಿಯೂ ಸೇರಿದಂತೆ, ಸಮುದಾಯದ ಸಾಂಸ್ಕೃತಿಕ ಮತ್ತು ನೈತಿಕ ತಿಳಿವಳಿಕೆಯ ಒಳಹೊರಗನ್ನು ಅರ್ಥಮಾಡಿಕೊಳ್ಳಬೇಕೆನಿಸಿತು. ಈ ನಿಟ್ಟಿನಲ್ಲಿ ನಾಡಿನ ಹಲವಾರು ಸಾಮಾಜಿಕ ಚಿಂತಕರು ಮತ್ತು ಲೇಖಕರೊಂದಿಗೆ ಅನಿಸಿಕೆಗಳನ್ನು ಹಂಚಿಕೊಂಡೆವು. ಅವರೆಲ್ಲರ ಒತ್ತಾಸೆಗಳು ನಮ್ಮನ್ನು ಮತ್ತಷ್ಟು ಉತ್ತೇಜನಗೊಳಿಸಿತು. ಜೊತೆಗೆ ಈ ಬಗ್ಗೆ ತಮ್ಮ ಚಿಂತನೆಗಳನ್ನು ಲೇಖನ ರೂಪದಲ್ಲಿ ಬರೆದುಕೊಡಲು ಒಪ್ಪಿದರು. ಅವರೆಲ್ಲರ ಅನಿಸಿಕೆಗಳು ಈ ಪುಸ್ತಕದಲ್ಲಿ ದಾಖಲಾಗಿರುವುದು ಕೂಡ ಈ ಪುಸ್ತಕದ ಶೋಭೆಯನ್ನು ಹೆಚ್ಚಿಸಿದೆ. ಇದಕ್ಕಾಗಿ ಚಿಂತನಶೀಲ ಲೇಖನ ಬರೆದ ಡಾ. ರಹಮತ್ ತರಿಕೆರೆ, ಡಾ. ಎಂ. ಎಸ್. ಶೇಖರ್, ಡಾ. ಜೆ. ಸೋಮಶೇಖರ್, ಡಾ. ಚಂದ್ರಕಿರಣ್ ಕುಳವಾಡಿ, ಮಹಾದೇವ ಶಂಕನಪುರ, ಡಾ. ಎಸ್. ನರೇಂದ್ರ ಕುಮಾರ್, ಡಾ. ಅಪ್ಪಗೆರೆ ಸೋಮಶೇಖರ ಈ ಎಲ್ಲಾ ಮಹನೀಯರಿಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಈ ಎಲ್ಲಾ ಚಿಂತನಶೀಲ ಲೇಖನಗಳನ್ನು ಇದೇ ಗ್ರಂಥದಲ್ಲಿ ಅಳವಡಿಸಲಾಗಿದೆ.

ಉಡಿತುಂಬಿದವರ ಒಡಲಾಳಕ್ಕೆ......

ಒಟ್ಟಾರೆ ಈ ನಿಟ್ಟಿನಲ್ಲಿ ಮಾಡಿದ ಒಂದು ಪುಟ್ಟ ಪ್ರಯತ್ನವಿದು. ಇದನ್ನು ನಾಳೆಯ ಜನ ಹಲವು ವಿಧಗಳಲ್ಲಿ ವಿಸ್ತರಿಸಬಹುದು. ಅಷ್ಟು ಪ್ರೇರಣೆ ಮತ್ತು ಅವಕಾಶಗಳನ್ನು ಈ ಅಧ್ಯಯನ ನೀಡಬಹುದೆಂಬ ನಿರೀಕ್ಷೆ ನಮ್ಮೆಲ್ಲರದು. ಈ ಕೆಲಸ ಹಲವು ವರ್ಷಗಳ ಹಿಂದೆ ನಡೆಯಬೇಕಿತ್ತು. ಆಗ ಇದ್ದವರು, ಬಲ್ಲವರು ಈ ವೈವಿಧ್ಯಮಯ ವ್ಯಕ್ತಿತ್ವವನ್ನು ಇದುವರೆವಿಗೂ ದಾಖಲಿಸದೆ ಮೌನವಹಿಸಿದ್ದು ಮಾತ್ರ ಈಗಲೂ ವಿಸ್ಮಯ ಮೂಡಿಸುತ್ತದೆ! ಆದರೆ ಈಗ ಸಾಧ್ಯವಾಗುತ್ತಿರುವುದಕ್ಕೆ ಸಮಾಧಾನವೂ ಇದೆ. ಇಂಥ ಅಪೂರ್ವವಾದ ಕೆಲಸಕ್ಕೆ ನಮ್ಮನ್ನು ವಿಶೇಷವಾಗಿ ಹಚ್ಚಿದವರು ಮಂಗ್ಳೂರು ವಿಜಯ ಅವರು. ದಲಿತ ಜನ ಸಮುದಾಯವನ್ನು

ಕಟ್ಟುವಲ್ಲಿ ಮೂರು–ನಾಲ್ಕು ದಶಕಕ್ಕೂ ಹೆಚ್ಚು ಕಾಲ ಅದೇ ಬದ್ಧತೆ, ಕಾಳಜಿಯನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿರುವ ಅವರ ಪ್ರೇರಣೆ–ಒತ್ತಾಸೆ ಈ ಕೆಲಸಕ್ಕೆ ಇಳಿಯಲು ಪ್ರೇರೇಪಿಸಿತು. ಒಂದಷ್ಟು ಕಾಲ ಸತಾಯಿಸಿದ ವಿಷಾದ ನನಗೆ ಈಗಲೂ ಕಾಡುತ್ತಿದೆ. ಆದರೂ ಅವರ ತ್ರಿವಿಕ್ರಮ ಮನಸ್ಸು ನಮ್ಮನ್ನು ಈ ಸಾರ್ಥಕ ಕೆಲಸಕ್ಕೆ ತೊಡಗಿಸಿತು. ಇದರಿಂದಾಗಿ ಈ ಕೆಲಸದಲ್ಲಿ ನಾನು ಮತ್ತು ನನ್ನ ಗೆಳೆಯರು ಗಳಿಸಿದ್ದು ಎಣೆಯಿಲ್ಲದ್ದು. ಅದಕ್ಕೆ ಅವರಿಗೆ ಮೊದಲು ಕೃತಜ್ಞತೆಗಳನ್ನು ಸಲ್ಲಿಸುವೆ.

ಇನ್ನು ಈ ಕೆಲಸಕ್ಕೆ ತೊಡಗಿದ ಮೇಲೆ ಇದಕ್ಕೆ ಒಂದು ಮಾರ್ಗ, ನೆರವು, ಒಳಹೊಕ್ಕುವ ದಾರಿಗಳನ್ನು ಬಿಡಿಸಿಕೊಟ್ಟವರು ಆದರಣೀಯ ಬಿ. ಗುರುಪ್ರಸಾದ್. ಈಗಲೂ ತಮ್ಮ ಅನೇಕ ವಹಿವಾಟಿನ ನಡುವೆಯೂ ಮುಕ್ತವಾಗಿ ಮತ್ತು ತೆರೆದ ಮನಸ್ಸಿನಿಂದ ವರ್ತಿಸಬಲ್ಲ ಅಪರೂಪದ ಸ್ನೇಹಜೀವಿ. ತಂದೆಯ ಪ್ರಭಾವದಿಂದ ಕಿಂಚಿತ್ತು ಆಚೆಗೆ ಸರಿಯದೇ ಇರುವ ವ್ಯಕ್ತಿತ್ವ. ತಮ್ಮ ತಂದೆ ಮಾಡಿದ ಕೆಲಸಗಳ ಬಗ್ಗೆ ಅವರ ನಿಷ್ಠೆ, ಕಾಳಜಿ, ಬದ್ಧತೆಗಳ ಬಗ್ಗೆ ಮಗುವಿನ ಕಣ್ಣಿಂದ ಪ್ರಬುದ್ಧನಾಗುವ ತನಕ ಕಟ್ಟಿಕೊಂಡು ಬಂದ ಚಿತ್ರಣಗಳ ಬಗ್ಗೆ ಅದೇನೋ ಗೌರವ. ಅಪರಿಮಿತ ಉತ್ಸಾಹ. ಇಡೀ ಅಧ್ಯಯನ ಯಾರ ಪರವೂ ವಾಲದೇ ನಿಷ್ಪಕ್ಷಪಾತವಾಗಿರುವಂತೆ ನಡೆಸಿ ಎಂದಷ್ಟೆ ಹೇಳಿ ದೂರ ಉಳಿದವರು. ಅವರ ಈ ನೆರವಿಗೆ ಮತ್ತು ಪ್ರೋತ್ಸಾಹಕ್ಕೆ ನಾನು ಕೃತಜ್ಞತೆ ಸಲ್ಲಿಸುವೆ. ತನ್ನ ತಂದೆ ಸಾರ್ವಜನಿಕ ಆಸ್ತಿ, ಜನತಾ ಮನುಷ್ಯನಾಗಿ ಹೇಗಿದ್ದರು ಎಂದು ಜನಕ್ಕೆಲ್ಲ ತಿಳಿಯಲಿ ಸಾಕು, ಸಾರ್ಥಕವಾಗುತ್ತದೆ ಎಂದು ಅವರ ಮತ್ತು ಅವರ ಸಹೋದರ, ಸಹೋದರಿಯರ ಮನಸ್ಸು ಈ ಕೆಲಸಕ್ಕೆ ಬೆನ್ನು ತಟ್ಟಿತು. ಜೊತೆಗೆ ಕುಟುಂಬದ ಸದಸ್ಯರೆಲ್ಲರೂ ಸೇರಿ ಸಾರ್ವಜನಿಕ ಸೇವೆಗಾಗಿ ರಚಿಸಿಕೊಂಡಿರುವ ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಶನ್‌ನ ಟ್ರಸ್ಟಿಗಳಾದ ಬಿ. ವಿಜಯ ಕೃಷ್ಣ ಮತ್ತು ಶ್ರೀಮತಿ ಮಂಜುಳಾ ಸಿದ್ಧಯ್ಯನವರು ನೀಡಿದ ಹತ್ತಾರು ಸಂಗತಿಗಳು ಆರ್. ಭರಣಯ್ಯನವರ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ಸಾಕಷ್ಟು ಸಹಾಯವಾಯಿತು. ಇವರಂತೆ ಆರ್. ಭರಣಯ್ಯನವರ ಮಕ್ಕಳಾದ ಶ್ರೀಮತಿ ನಾಗರತ್ನ, ಪ್ರೊ. ಅರಕೆರೆ, ಶ್ರೀಮತಿ ಶಾರದ ಚಂದ್ರಶೇಖರ್, ಪ್ರಖ್ಯಾತ ಕ್ರಿಕೆಟ್‌ಪಟು, ಬಿ. ವಿಜಯಕೃಷ್ಣ, ಶ್ರೀಮತಿ ಭುವನೇಶ್ವರಿ ಅನಿಲ್ ಶ್ರೀನಿವಾಸ್, ಶ್ರೀಮತಿ ಪದ್ಮಿನಿ – ಶಶಿಕುಮಾರ್ ನಾಯರ್, ಕುಮಾರಿ ನಂದಿನಿ, ತನ್ನ ತಂದೆಯ ಸಾರ್ಥಕ ಜೀವನದ ಬಗ್ಗೆ ಅನೇಕ ನೆನಪುಗಳನ್ನು ಹಂಚಿಕೊಂಡರು. ಇವರಿಗೆಲ್ಲ, ಅವರು ನೀಡಿದ ಮಾಹಿತಿಗಾಗಿ ನಮಸ್ಕಾರಗಳು. ಇದರೊಟ್ಟಿಗೆ ಅವರ ಬಂಧು–ಬಳಗ ತಿಳಿದದ್ದನ್ನು ಸರಳವಾಗಿ ಹೇಳಿರುವವರು. ಅವರೆಲ್ಲರಿಗೂ ವಿಶೇಷ ಧನ್ಯವಾದಗಳು. ವಿಶೇಷವಾಗಿ ಅವರ ಬಾಳಸಂಗಾತಿ ಶ್ರೀಮತಿ

ಶಾಂತಮ್ಮ. ಅದೇ ಹಳ್ಳಿಗಾಡಿನ ಸೊಗಡು–ಬಾವಣಿಕೆ. ತನ್ನ ಪತಿ ಮಾಡಿದ ಉಪಕಾರಗಳ ನೆನಪಿನಲ್ಲಿ ಜೀವನ ಮುನ್ನಡೆಸಿರುವ ಸಾಧ್ವಿ. ಈ ತಾಯಿಯ ಒಡಲಲ್ಲಿ ಹಚ್ಚ ಹಸಿರಾಗಿ ಉಳಿದಿರುವ ತನ್ನ ಬಾಳಸಂಗಾತಿಯ ನೆನಪುಗಳು, ಧಾನ–ಧರ್ಮಗಳು, ಉಪಕಾರಗಳು, ಜನಸೇವೆಯ ರೀತಿನೀತಿಗಳು, ತಾನು ಪಡೆದದ್ದು, ಕಳೆದುಕೊಂಡಿದ್ದು, ತಾನು ತಾನಾಗೇ ಉಳಿದಿದ್ದು ಎಲ್ಲವನ್ನು ಅದೇ ಮೈಸೂರು ಸೀಮೆಯ ತನ್ನೂರಿನ ಅಂಗಳದಲ್ಲಿ ಕುಳಿತು ಮಾತಾಡಿದಂತೆ ದಾಖಲಿಸಿದೆ. ಆ ನಿಷ್ಕಳಂಕ ಮನಸ್ಸಿಗೆ ಈ ಮೂಲಕ ನಮಸ್ಕಾರ ಸಲ್ಲಿಸುವೆ.

ಈ ಅಧ್ಯಯನಕ್ಕೆ ಇದೇ ರೀತಿ ತಮ್ಮ ನೆನಪುಗಳನ್ನು ನೀಡಿ, ಹತ್ತುಹಲವು ನಿದರ್ಶನಗಳನ್ನು, ಘಟನೆಗಳನ್ನು ಹೇಳಿದ ನಾಡಿನ ವಿವಿಧ ಭಾಗಗಳಲ್ಲಿರುವ ಎಲ್ಲಾ ಹಿರಿಯರಿಗೂ ನಾನು ಆಭಾರಿಯಾಗಿದ್ದೇನೆ. ಇಂಥ ಪ್ರಯತ್ನಕ್ಕೆ ಅವರ ನೆನಪುಗಳು, ಹೇಳಿಕೆಗಳು ಸಿಗದಿದ್ದರೆ ಒಬ್ಬ ಧೀಮಂತ ವ್ಯಕ್ತಿ ಕಾಲದಲ್ಲಿ ಲೀನವಾಗಿರುವಂತೆ, ನೆನಪುಗಳಿಂದಲೂ ಲೀನವಾಗಿ ಬಿಡುತ್ತಿದ್ದರು. ನಾಳಿನ ತಲೆಮಾರಿಗೆ ಒಂದು ಮಾದರಿಯಾದ ಆದರ್ಶವಾದ ವ್ಯಕ್ತಿತ್ವವೊಂದು ಉಳಿಯದೆ ಹೋಗಿಬಿಡುತ್ತಿತ್ತು. ಹೀಗಾಗಿ ತಮ್ಮ ನೆನಪುಗಳನ್ನು ನಾಳೆಗೆ ಉಳಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳನ್ನು ಈ ಮೂಲಕ ಸಲ್ಲಿಸಿದ್ದೇನೆ.

ಈ ಕೃತಿಗೆ ಆಶೀರ್ವಚನ ನೀಡಿ, ತಮ್ಮ ಔದಾರ್ಯವನ್ನು ಸಂದೇಶದ ಮೂಲಕ ಕೊಡಮಾಡಿದ ರಾಷ್ಟ್ರದ ಧಾರ್ಮಿಕ ಚಟುವಟಿಕೆಗಳ ಪ್ರಮುಖ ರೂವಾರಿಗಳು. ಶ್ರೀ ಸಿದ್ಧಗಂಗಾ ಮಠದ ಶ್ರೀಗಳು. ಕನ್ನಡ ನಾಡಿನ "ಧರ್ಮಶೋಭ" ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರಿಗೆ ಹೃದಯಪೂರ್ವಕ ನಮನಗಳನ್ನು ಸಲ್ಲಿಸುವೆ.

ಈ ಕೆಲಸವನ್ನು ಮಾಡುವುದಕ್ಕೆ ತಮ್ಮ ಪ್ರೀತಿಯ ಮಾತುಗಳಿಂದ ಪ್ರೇರೇಪಣೆ ನೀಡಿದ ಸಂಗೀತ ಸಾಹಿತ್ಯ ಪ್ರೇಮಿ, ಸಂಘಟಕರಾದ ಶ್ರೀ ಹಿಮಾಂಶು ಅವರನ್ನು ನಾವು ಮರೆಯಲು ಸಾಧ್ಯವೇ ಇಲ್ಲ. ಯಾವ ಪ್ರತಿಫಲಾಪೇಕ್ಷೆಯೂ ಈ ಕೆಲಸಕ್ಕೆ ಪೂರ್ಣ ಬೆಂಬಲ ನೀಡಿಕೊಂಡು ಬಂದಿರುವ ಅವರು ನೀಡಿದ ಬೆಂಬಲಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುವೆ.

ಇವರಂತೆ ಇಡೀ ಕ್ಷೇತ್ರಾಧ್ಯಯನ ಮಾರ್ಗವನ್ನು ತಿದ್ದಿ, ತೀಡಿ, ದಾಖಲಿತ ಅಂಶಗಳನ್ನು ರಚನೆಮಾಡುವಲ್ಲಿ ಮಾರ್ಗದರ್ಶನ ಮಾಡಿದ ಈ ಕೃತಿಯ ಸಂಪಾದಕ ಸಲಹಾ ಮಂಡಳಿಯ ಪ್ರೊ. ಎಂ. ಎಸ್. ಶೇಖರ್, ಮಂಗ್ಳೂರು ವಿಜಯ, ಪ್ರೊ. ಟಿ. ಎಸ್. ವೇಣುಗೋಪಾಲ್, ಹಿಮಾಂಶು ಸಿ. ಆರ್., ರಾಜು ಬಿ., ಎಂ. ಎಚ್. ಶ್ರೀಧರಮೂರ್ತಿ ಇವರೆಲ್ಲರಿಗೂ ನನ್ನ ಪ್ರೀತಿಪೂರ್ವಕ ನೆನೆಕೆಗಳು. ಈ ಅಪೂರ್ವ ಕೆಲಸದ ಪ್ರೇರಕರಾದ ಖ್ಯಾತ ಸಾಹಿತಿಗಳಾದ ದೇವನೂರ ಮಹಾದೇವ, ಪ್ರೊ.

ಎಚ್. ಗೋವಿಂದಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಡಾ. ಜೆ. ಸೋಮಶೇಖರ್, ಬಿ. ಎಸ್. ಸೋಮಶೇಖರ್, ಡಾ. ಜಿ. ವಿ. ಆನಂದಮೂರ್ತಿ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ. ನನ್ನ ಸಾಹಿತ್ಯ, ಆಸಕ್ತಿ ಮತ್ತು ಅಭಿರುಚಿಗೆ ಬೀಜನೆಟ್ಟು ಸದಾ ನನ್ನನ್ನು ಪೋಷಿಸುತ್ತಿರುವ ರಾಮುವಿಗೆ ಪ್ರೀತಿಪೂರ್ವಕ ನಮನ. ಈ ಅಧ್ಯಯನದ ಉದ್ದಕ್ಕೂ ಪ್ರೋತ್ಸಾಹದ ನುಡಿಗಳನ್ನಾಡಿದ ಹಿರಿಯರಾದ ರಘುನಂದನ್ ಮಾಮ, ಬಸಪ್ಪ, ದೇವನೂರು ಶಿವಮಲ್ಲು, ಓ. ಎಲ್. ನಾಗಭೂಷಣಸ್ವಾಮಿ, ಡಾ. ರಾಜೇಂದ್ರ, ಕ್ಷೀರಸಾಗರ್, ಜೆನ್ನಿ ಬ್ರದರ್, ಸಾಹಿತಿ ಗೆಳೆಯ ಬಸವರಾಜು ಕುಕ್ಕರಹಳ್ಳಿ, ಆತ್ಮೀಯರಾದ ನೇತ್ರರಾಜು, ಪ್ರಕಾಶ್ ಚಿಕ್ಕಪಾಳ್ಯ, ಅರವಿಂದ, ಕುಪ್ಪೆ ಮೋಹನ್, ನಿರಂತರದ ಹರಿಪ್ರಸಾದ್, ಸೃಜನಾದ ಮಂಜುಸ್ವಾಮಿ, ಜನಮನ ಕೃಷ್ಣ, ಸೋಸಲೆ ಸಿದ್ದರಾಜು ಇವರಿಗೆ ಧನ್ಯವಾದಗಳು. ಈ ಕೆಲಸದಲ್ಲಿ ತೊಡಗಿದ್ದಾಗ ಹತ್ತು ಹಲವು ರೀತಿಯ ಉತ್ತೇಜನ ನೀಡಿದ ಸಹೃದಯರಾದ ಬಿ. ರಾಮಕೃಷ್ಣ, ಕೆ. ಹೊನ್ನಲಗೆರೆ, ರಾಮಚಂದ್ರಯ್ಯ, ಪ್ರಸನ್ನ ಇವರಿಗೆ ನನ್ನ ಧನ್ಯವಾದಗಳು. ಸದಾ ಪ್ರೀತಿಯ ಮಾತುಗಳಿಂದ ಉತ್ತೇಜಿಸುವ ಹೆಚ್. ಎಸ್. ಅಶೋಕಾನಂದ, ದೇವನೂರ ಬಸವರಾಜು, ವರದಯ್ಯ, ಹ. ನಿ. ಶಿವಣ್ಣಗೌಡ, ಲಿಂಗಣ್ಣ ಬಂದೂಕಾರ್, ಮೋಹನ್ ಕೊಂಡಜ್ಜಿ, ಎಂ. ಶಂಕರ್ ಮಂಡ್ಯ, ಅಭಿರುಚಿ ಗಣೇಶ್, ಪಿ. ಅನಿಲ್ ಕುಮಾರ್, ಅಬ್ದುಲ್ ಕರೀಮ್, ಶ್ರೀಮತಿ ಭಾಗ್ಯ, ಕೆ. ವಿ. ಬಾಲಸುಬ್ರಹ್ಮಣ್ಯ, ಎಂ. ಎಸ್. ಮರಿಸ್ವಾಮಿಗೌಡ, ರಾಜಪ್ಪ ಕೋಲಾರ, ಪ್ರೊ. ಕೋಡಿರಂಗಪ್ಪ, ಸಿರಾಜ್ ಅಹಮದ್, ಸುಬ್ಬು ಅಡಪ, ಬಾಗಲಕೋಟೆಯ ಸಾಕ್ಷರತಾ ಸಮಿತಿ ಮಿತ್ರರಾದ ವಾಲಿ ಮತ್ತು ಬಸವರಾಜ ಕಲ್ಯಾಣಿ ಮತ್ತು ವಾಮನ ಕುಲಕರ್ಣಿ, ಅಥಣಿ ಇವರುಗಳಿಗೆ ವಿಶೇಷ ನಮನಗಳು.

ಈ ಅಪೂರ್ವ ಕೆಲಸದಲ್ಲಿ ನನ್ನ ಎಲ್ಲಾ ಒತ್ತಡಗಳನ್ನು, ಅರ್ಥಮಾಡಿಕೊಂಡು, ಈ ಕೆಲಸದ ಗಾಂಭೀರ್ಯತೆಯನ್ನು ಅರಿತು ನಡೆಸಿದವರು ನನ್ನ ಅಚ್ಚುಮೆಚ್ಚಿನ ಗೆಳೆಯರ ಬಳಗ. ಅವರಲ್ಲಿ ಎಂ. ಎಚ್. ಶ್ರೀಧರಮೂರ್ತಿ, ಬಿ. ಎನ್. ಸಿದ್ದುಪ್ರಸನ್ನ, ಕುಮಾರ್–ಮಹೇಶ್, ರಾಘವೇಂದ್ರ ಕೆಸವಿನಮನೆ ಮತ್ತು ಕುಮಾರ್. ಈ ಸಮಾಜಮುಖಿ ಬಳಗ ಆರ್. ಭರಣಯ್ಯನವರ ಬಗ್ಗೆ ಒಂದೇ ಒಂದು ಮಾತು ಹೇಳುವವರ ಮನೆ ಬಾಗಿಲಿಗೆ ಮತ್ತೆ, ಮತ್ತೆ, ಹೋಗಿ ಸಿಕ್ಕ ಸಂಗತಿಗಳನ್ನೆಲ್ಲಾ ಬರೆದುಕೊಂಡು, ಕಂಡಕಂಡವರಿಂದ ಪಡೆದ ಮಾಹಿತಿಗಳಿಗೆ ಒಂದು ರೂಪ ನೀಡಿ ಕೊಟ್ಟರು. ಈ ನಿಟ್ಟಿನಲ್ಲಿ ಈ ಗೆಳೆಯರ ಕೊಡುಗೆ ಅವಿಸ್ಮರಣೀಯ. ನಾವು ಒಟ್ಟಾಗಿ ಕೂಡಿ ಯೋಜನೆ ಮಾಡಿಕೊಂಡು ನಡೆಸಿದ ಈ ಕೆಲಸ ತಮ್ಮೆಲ್ಲರ ಕಣ್ಮುಂದೆ ಇದೆ. ನಿಮ್ಮ ಮೆಚ್ಚಿನ ನುಡಿಗಳಿದ್ದರೆ ಅದು ನಮ್ಮ ತಂಡದ ಕೆಲಸಕ್ಕೆ ಸಂದ 'ಮೆಚ್ಚು' ಎಂದು ಸ್ವೀಕರಿಸುತ್ತೇವೆ.

ಇಂಥ ಕೆಲಸಗಳಲ್ಲಿ, ಸದಾ ಸ್ಫೂರ್ತಿ ನೀಡುತ್ತಾ ಬಂದಿರುವ ಸನ್ಮಿತ್ರರಾದ ಹೆಚ್. ಎಲ್. ಮೋಹನ್, ಎನ್. ಎಸ್. ಮಾರುತಿ, ಎನ್. ಎಂ. ಮಮತಾ, ಆದರಣೀಯ ಸಿ. ಪಿ. ವಿಶ್ವನಾಥ ಗುಪ್ತ, ಶ್ರೀನಿವಾಸನ್ ಡಿ. ಕೆ., ಯು. ಎಸ್. ಮಹೇಶ್. ಓಂಕಾರಪ್ಪ, ಸಾಸನೂರ, ಗುಲ್ಬರ್ಗಾ, ಶಿವಲಿಂಗಯ್ಯ, ಬೆಂಗಳೂರು ಇವರಿಗೆ ನಮಸ್ಕಾರಗಳು. ಸದಾ ನನ್ನ ಸಾಹಿತ್ಯ ಚಟುವಟಿಕೆಗಳ ಬಗ್ಗೆ ಪ್ರೀತಿಯ ಮಾತುಗಳನ್ನಾಡಿ ಪ್ರೋತ್ಸಾಹಿಸುವ ಅರಸಿಕೆರೆ ಹೆಚ್. ಆರ್. ಸ್ವಾಮಿ, ಪುಸ್ತಕದ ಶೀರ್ಷಿಕೆಗಳು ಮತ್ತು ಪುಟ ವಿನ್ಯಾಸಕ್ಕೆ ಒಂದು ರೂಪ ನೀಡಿದ ಚಿಕ್ಕಮಗಳೂರು ಗಣೇಶ್, ಎಸ್. ನರೇಂದ್ರಕುಮಾರ್, ಬಿಸ್ಲೇಹಳ್ಳಿ ಪ್ರಭು, ಮಂಜುನಾಥ ಲತಾ, ಅಪ್ಪಗೆರೆ ಸೋಮಶೇಖರ್, ಉಗ್ರನರಸಿಂಹೇಗೌಡ, ಸಿದ್ದರಾಜು ನಿಸರ್ಗ, ಲಿಂಗರಾಜು ಇವರಿಗೆ ಧನ್ಯವಾದಗಳು.

ನನ್ನ ಸಾಹಿತ್ಯ ಮತ್ತು ಸಂಸ್ಕೃತಿ ಕೆಲಸಗಳಲ್ಲಿ ಸದಾ ಮೆಚ್ಚುಗೆಯನ್ನು ಹೊಂದಿರುವ ಅಮ್ಮ ಶ್ರೀಮತಿ ಸುಶೀಲಮ್ಮ, ಶ್ಯಾಮಲಾ ಮೇಡಂ, ಶ್ರೀ ನಾಗರಾಜರಾವ್–ಪದ್ಮಾವತಮ್ಮ, ಡಿ. ರಾಘವೇಂದ್ರ–ಕುಮುದ, ಶೈಲಜಾ, ಪಿ. ಓಂಕಾರ್–ಸ್ನೇಹಾ, ಸಹನಾ–ಸೀನಿ, ಋತ್ವಿಕ್, ತುಷಾರ, ದೊಡ್ಡವ್ವ ಶ್ರೀಮತಿ ಲಕ್ಕಮ್ಮ, ಶಿವಕ್ಕ, ಪಾರ್ವತಕ್ಕ, ಪದ್ಮಕ್ಕ, ಎಸ್. ಕುಮಾರಸ್ವಾಮಿ, ಎಸ್. ಚಂದ್ರಶೇಖರ್, ಮಹಾಲಕ್ಷ್ಮಿ–ಬೊಮ್ಮರಾಯಪ್ಪ, ಗುಣಾ–ಗೋಪಿ, ಎಸ್. ವಿಶ್ವನಾಥ–ರೂಪ, ವರ–ಸೋಮಣ್ಣ, ಯಶೋಧ–ಗೋಪಿ, ಭಾಗ್ಯ, ಶಾಲಿನಿ, ಎಸ್. ಡಿ. ಅನಂತ, ಎಸ್. ಡಿ. ಸಿರಿಸಿಂಚನ, ರಾಜೇಶ್, ಹಿರಿಯರಾದ ಕೆ. ಸ್ವಾಮಿ, ಚಂದ್ರಣ್ಣ ಇವರಿಗೆಲ್ಲ ಪ್ರೀತಿಯ ನೆನಕೆಗಳು.

ಸದಾ ನೆರಳಂತಿದ್ದು ನನ್ನ ಸಾಹಿತ್ಯಾಸಕ್ತಿಗಳಿಗೆ ಪ್ರೀತಿ ತೋರುತ್ತಾ, ಜೀವ ತುಂಬಿಕೊಡುವ ಬಾಳಸಂಗಾತಿ ರಾಜಿ ಮತ್ತು ಸಹೋದರ ಎಸ್. ದುರ್ಗೇಶ್‌ಕುಮಾರ್, ಮಗಳು ಕರುಣಾ ಟಿ. ಆರ್., ಇವರಿಗೆಲ್ಲಾ ಪ್ರೀತಿಯ ಅಭಿನಂದನೆಗಳು. ಈ ಕೃತಿಯ ಮುಖಪುಟವನ್ನು ವಿನ್ಯಾಸಮಾಡಿದ ಹಾಗೂ ಒಳಪುಟದ ಬರೆಹಕ್ಕೆ, ಸಂದರ್ಶನಗಳಿಗೆ ರೇಖಾಚಿತ್ರ ಮಾಡಿಕೊಟ್ಟ ಹೆಸರಾಂತ ಕಲಾವಿದ ಕೆ. ಕೆ. ಮಕಾಳಿ ಅವರಿಗೂ ಧನ್ಯವಾದಗಳು. ಇಡೀ ಪುಸ್ತಕದ ಪ್ರೂಫ್‌ನ್ನು ಅಚ್ಚುಕಟ್ಟಾಗಿ ನೋಡಿಕೊಟ್ಟ ಆತ್ಮೀಯ ಪ್ರಸಾರಾಂಗ ಪುರುಷೋತ್ತಮರಿಗೆ ಧನ್ಯವಾದಗಳು. ಈ ಕೆಲಸಕ್ಕೆ ನೆರವಿತ್ತ ಈ ನಾಡಿನ ಅಪಾರ ಬಂಧು–ಬಳಗಕ್ಕೆ, ಸಹೃದಯರಿಗೆ ವಿಶೇಷ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಕನ್ನಡ ಜನತೆ ಈ ಕೃತಿಯನ್ನು ಸ್ವೀಕರಿಸಿ, ಓದಿ, ಸಂತೋಷಿಸಿ ಪ್ರೋತ್ಸಾಹಿಸಿದ್ದಲ್ಲಿ ನಮ್ಮ ಶ್ರಮ ಸಾರ್ಥಕವೆಂದು ತಿಳಿಯುತ್ತೇನೆ.

ಜನವರಿ – 2010

ಅಲೆ – ಒಂದು

ನೆಲದ ನುಡಿ ನೆನಪು



ಊರ ಅಂಗಳದಿಂದ ಮೂಡಿ ಬಂದ ನೆನಪುಗಳು.....

"ಆರ್. ಭರಣಯ್ಯನವರನ್ನು ನೆನಪಿಸಿಕೊಳ್ಳುವುದೆಂದರೆ ಅದು ಕಾಲದ ಪುಣ್ಯ ಅಂಥ ವ್ಯಕ್ತಿತ್ವ ಮತ್ತೆ ಈ ನೆಲದಲ್ಲಿ ಹುಟ್ಟುವುದು ಕಷ್ಟ! ಅವರು ಎಂದೂ ತನ್ನ ತಾಯಿ ನೆಲದ ಬೇರುಗಳನ್ನು ಮರೆಯಲಿಲ್ಲ. ಬಯಸಿ ಬಂದವರಿಗೆ ಕೈಲಾದದ್ದನ್ನು ನೀಡುತ್ತಾ ಬಂದರು. ತನ್ನ ಜನವರ್ಗದ ಎಡ-ಬಲವನ್ನು ಒಂದಾಗಿ ಕರೆದೋಯ್ದರು. ತನ್ನವರೊಂದಿಗೆ ಇತರರನ್ನು ಒಂದೇ ಎಂದು ಕಂಡರು. ದಲಿತರ ಬದುಕಿನ ಆಶಾಕಿರಣ ಆರ್. ಗೋಪಾಲಸ್ವಾಮಿ ಅಯ್ಯರ್ ಅವರು ಸೃಷ್ಟಿಸಿದ್ದ ನೆರಳಲ್ಲಿ ಶಿಕ್ಷಣ ಗಳಿಸಿದರು. ಗಾಂಧೀಜಿಯವರಿಂದ ಮೆಚ್ಚುಗೆ ಪಡೆದರು. ಸಂಸ್ಕೃತ ಪದವಿಗಳಿಸಿ ಮೈಸೂರು ಮಹಾರಾಜರಿಂದ 'ಸೈ' ಎನಿಸಿಕೊಂಡರು. ತಾನು ಬಾಳಿ ಬದುಕಿದ ಊರಿನಲ್ಲಿ, ಸೇವೆ ಸಲ್ಲಿಸಿದ ಇಲಾಖೆಗಳಲ್ಲೆಲ್ಲಾ, ಧರ್ಮ ಮೀರಿದ ಸ್ನೇಹಗಳಿಸಿದರು. ಒಂದು ಕಾಲಕ್ಕೆ ಕನ್ನಡನಾಡಿನ 'ಗ್ರಾಮಶಿಲ್ಪಿ' ಎಂದು ಕರೆಸಿಕೊಂಡರು. ನಿಷ್ಠಾವಂತ ಅಂಬೇಡ್ಕರ್ ಅನುಯಾಯಿ. ಸಭ್ಯತೆ, ಪ್ರೀತಿ-ಆದರಗಳಿಂದ ಕುಟುಂಬ ಮತ್ತು ಬಂಧು-ಬಳಗವನ್ನು ಪೊರೆದರು. ನೀತಿ-ನಿಯಮ-ಪ್ರಾಮಾಣಿಕತೆಯಿಂದ ಕೆಲಸ ಮಾಡಿ ದಕ್ಷ ಅಧಿಕಾರಿ ಎನಿಸಿಕೊಂಡರು. ಮಮಕಾರದಲ್ಲಿ ಸಮುದಾಯದ ಮತ್ತು ಸಾರ್ವಜನಿಕ ಸೇವೆ ಮಾಡಿದರು..." ಇತ್ಯಾದಿ ಊರ ಅಂಗಳದಿಂದ ಮೂಡಿ ಬಂದ ನೂರಾರು ನುಡಿ ಚಿತ್ರಗಳು ಇಲ್ಲಿವೆ.



ಊರ ಅಂಗಳದಿಂದ ಮೂಡಿ ಬಂದ ನೆನಪುಗಳು.....

ಪರಿಚಯ

ಆರ್. ಭರಣಯ್ಯ ರಾಜ್ಯ ಕಂಡ ಅಪರೂಪದ ದಲಿತ ಪ್ರತಿಭೆ. ಜನನ 14–02–1912. ಮೈಸೂರು ಜಿಲ್ಲೆ, ತಿ. ನರಸೀಪುರ ತಾಲ್ಲೂಕು, ಸೋಮನಾಥಪುರ. ತಾಯಿ ಮಾರಮ್ಮ, ತಂದೆ ಚಿಕ್ಕರಂಗಯ್ಯ. ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಮುಗಿಸಿದ ಭರಣಯ್ಯ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸೇರಿದ್ದು ಬೆಂಗಳೂರು. ಅಲ್ಲಿಯ ನರಸಿಂಹರಾಜ ಹಾಸ್ಟಲ್‌ನಲ್ಲಿ, ನಂತರ ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ವಸತಿ ನಿಲಯದಲ್ಲಿ ಓದನ್ನು ಮುಂದುವರೆಸಿದರು. ದೀನ–ದಲಿತರ ಶಿಕ್ಷಣಕ್ಕಾಗಿ ಆಗ ಆರ್. ಗೋಪಾಲಸ್ವಾಮಿ ಅಯ್ಯರ್‌ರವರು ತೆರೆದಿದ್ದ ಹಾಸ್ಟಲ್ ಆರ್. ಭರಣಯ್ಯನವರನ್ನು ಮತ್ತು ಅವರಂತಹ ಪ್ರತಿಭೆಗಳನ್ನು ಆಗ ಪೋಷಿಸಿ, ಬೆಳೆಸಿತು. ಈ ಅವಕಾಶವನ್ನು ಸರಿಯಾಗಿ ಬಳಸಿಕೊಂಡ ಇವರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಸರ್ಕಾರಿ ಸೇವೆಗೆ ಸೇರಿದರು. ವಿವಿಧ

ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿದರು. ಅಪಾರ ಜನಮನ್ನಣೆ ಉಳ್ಳ ಐ.ಎ.ಎಸ್. ಅಧಿಕಾರಿಯೂ ಆದರು.

ಆರ್. ಭರಣಯ್ಯನವರು ಉನ್ನತ ವ್ಯಾಸಂಗ ಮಾಡಿ ಅಂದಿನ ಕಾಲಕ್ಕೆ ಸರ್ಕಾರದ ವಿವಿಧ ಹುದ್ದೆಗಳನ್ನು ಅಲಂಕರಿಸಿದರು. ಅವರ ವ್ಯಾಸಂಗ ಮತ್ತು ವೃತ್ತಿಜೀವನ ಹಾಗೂ ಸೇವೆ ಸಲ್ಲಿಸಿದ ಇಲಾಖೆಗಳು ಹಲವಾರು. 1932ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ. 1933ರಲ್ಲಿ ಪೂನಾ 'ಲಾ' ಕಾಲೇಜಿನಲ್ಲಿ ವ್ಯಾಸಂಗವನ್ನು ಪೂರ್ಣಗೊಳಿಸಿದರು. ನಂತರದಲ್ಲಿ ಗಾಂಧೀಜಿಯವರ ಭೇಟಿಯ ಫಲವಾಗಿ, ಸರ್ಕಾರಿ ಸೇವೆಯತ್ತ ಬರುವಂತಾಯಿತು. ಇದಕ್ಕೆ ಒತ್ತಾಸೆ ನೀಡಿದವರು ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು. ಅವರ ಜೊತೆಗೆ ಆಗಿನ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದ ಮೆಟ್‌ಕಾಫ್‌ರವರು. ಓದಿನ ಸಂದರ್ಭದಲ್ಲೇ ಅನೇಕ ಸಾರ್ವಜನಿಕ ವ್ಯಕ್ತಿತ್ವವುಳ್ಳವರಿಗೆ ಇವರ ಶಿಸ್ತು, ಬದ್ಧತೆ ಮತ್ತು ಸೇವಾಪರತೆಗಳು ತಿಳಿದಿದ್ದವು. ಹೀಗಾಗಿ ಸಹಜವಾಗಿ ಸರ್ಕಾರಿ ಸೇವೆಯತ್ತ ಬರಲು ಇವರಿಗೆ ಸಾಧ್ಯವಾಯಿತು. ಬಹುಷಃ ಇವರನ್ನು ಗುರುತಿಸಿದವರಿಗೆ ತಿಳಿದಿರಬೇಕು. 'ಭರಣಯ್ಯ ಸಾರ್ವಜನಿಕ ಸೇವೆಗೆ ಬಂದರೆ ನೂರಾರು ಜನರನ್ನು ಸಲಹಬಲ್ಲರು' ಎಂಬುದು. ಈ ಹಿನ್ನೆಲೆಯಲ್ಲಿ 1935ರಿಂದ 40ರ ತನಕ ಪ್ರೊಬೆಷನರಿ ಅಮಲ್ದಾರರಾಗಿ ಅನೇಕ ಕಡೆ ಸೇವೆ ಸಲ್ಲಿಸುವ ಅವಕಾಶ ದೊರಕಿತು. ಹೆಚ್.ಡಿ. ಕೋಟೆ, ಕೆ. ಆರ್. ನಗರ, ದಾವಣಗೆರೆ, ಹರಿಹರ, ಚಿತ್ರದುರ್ಗ, ತುಮಕೂರು, ಕನಕಪುರ, ರಾಮನಗರಗಳಲ್ಲಿ ಸೇವೆ ಸಲ್ಲಿಸಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದರು. ಅಂದು ಪ್ರೊಬೇಷನರಿ ಆಗಿದ್ದಾಗಲೇ ನೂರಾರು ಜನರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಾ, ಆಯಾಯ ಪ್ರದೇಶಗಳ ಅಭಿವೃದ್ಧಿ ಕೆಲಸಗಳನ್ನು ನಿಷ್ಠೆಯಿಂದ ನಿರ್ವಹಿಸಿದರು. ಮನೆ ಮನೆಯ ಮಾತಾದರು.

ಹೀಗೆ ಪ್ರೊಬೇಷನರಿ ಹುದ್ದೆಯಲ್ಲೇ ಅನೇಕ ಜನೋಪಕಾರದ ಕೆಲಸ ನಿರ್ವಹಿಸಿ ಅಪಾರ ಜನಪ್ರಿಯತೆಯನ್ನು ಗಳಿಸಿದರು. ಇದು ಅವರು ವಿವಿಧ ಇಲಾಖೆಗಳ ಸೇವೆಯತ್ತ ಬರಲು ಸಾಧ್ಯವಾಯಿತು. ಅನೇಕರು ಅವರ ನೆನಪುಗಳಿಂದ ಹೇಳಿದಂತೆ 'ಆ ಕಾಲಕ್ಕೆ ಒಬ್ಬ ವ್ಯಕ್ತಿ, ಬದ್ಧತೆ, ನಿಷ್ಠೆ, ಜನಪರತೆ ಮತ್ತು ಬಡವರ ಬಗೆಗಿನ ಕಾಳಜಿ ಇಟ್ಟು ಕೆಲಸ ಮಾಡದೇ ಇದ್ದಿದ್ದರೆ ಇಷ್ಟೊಂದು ಜನಪ್ರಿಯತೆ ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಆರ್. ಭರಣಯ್ಯ ತಮ್ಮ ಸೇವಾಪರತೆ ಮತ್ತು ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಹೆಸರಾಗಿಬಿಟ್ಟರು! ಪ್ರೊಬೇಷನರಿ ಅಮಲ್ದಾರರಾದ ನಂತರ ಅವರು 1940ರಿಂದ 42ರವರೆಗೆ ಸ್ಟೇಟ್ ಹೂಜರ್ ಟ್ರೆಜರಿ ಆಫಿಸರ್. 1942ರಿಂದ 44ರವರೆಗೆ ಅಸಿಸ್ಟೆಂಟ್ ಕಮೀಷನರ್‌ರಾಗಿ ಹಾಗು 1944ರಿಂದ 1946ರವರೆಗೆ

ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ಚಿತ್ರದುರ್ಗದಲ್ಲಿ ಸೇವೆ ಸಲ್ಲಿಸಿದರು. ಪೊಲೀಸ್ ಇಲಾಖೆಯ ಸೇವಾವಧಿಯಲ್ಲಿ ವೀರಭೂಮಿ ಎನಿಸಿಕೊಂಡಿದ್ದ ಚಿತ್ರದುರ್ಗ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಜನಮೆಚ್ಚುವಂತೆ ನಿರ್ಮಿಸಿ, ಅಲ್ಲಿನ ಅನೇಕ ತಂಟೆಕೋರರನ್ನು ಬಂಧಿಸಿ ದಿನಬೆಳಗಾಗುವುದರಲ್ಲಿ ಆ ಸೀಮೆಯ ಎಲ್ಲಾ ಊರುಗಳಲ್ಲಿ ಹೆಸರಾಗಿಬಿಟ್ಟರು. 1946–1947 ಸೆಕ್ರೆಟರಿ ಶಿವಮೊಗ್ಗ ಷುಗರ್ ಫ್ಯಾಕ್ಟರಿ, 1947ರಿಂದ 49ರವರೆಗೆ ಸೆಕ್ರಟರಿ ಎಂ.ಎಸ್.ಐ.ಎಲ್. ಭದ್ರಾವತಿ. 1949ರಿಂದ 1950ರವರೆಗೆ ಸಬ್‌ಡಿವಿಜನಲ್ ಆಫೀಸರ್ ಮೈಸೂರು, 1950 ರಿಂದ 1952ರವರೆಗೆ ಸೆಕ್ರೆಟರಿ 'ರೆಮ್ಕೊ', ಬೆಂಗಳೂರು, 1952ರಿಂದ 1954ರವರೆಗೆ ಸೆಕ್ರೆಟರಿ ಮೈಸೂರು ಲ್ಯಾಂಪ್ ವರ್ಕ್ಸ್, ಬೆಂಗಳೂರು. 1954 ರಿಂದ 1956ರವರೆಗೆ ಅಂಡರ್ ಸೆಕ್ರೆಟರಿ 'ಹೋಮ್' ಡಿಪಾರ್ಟ್‌ಮೆಂಟ್, ಬೆಂಗಳೂರು, 1956ರಿಂದ 1958ರವರೆಗೆ ಜಿಲ್ಲಾಧಿಕಾರಿ, ಶಿವಮೊಗ್ಗ, 1958ರಿಂದ 1960ರವರೆಗೆ ನಿರ್ದೇಶಕರು ಸಮಾಜಕಲ್ಯಾಣ ಇಲಾಖೆ, ಬೆಂಗಳೂರು, 1960ರಿಂದ 1962ರವರೆಗೆ ಎಂ. ಡಿ. ಮೈಸೂರು ವೇರ್ ಹೌಸಿಂಗ್ ಕಾರ್ಪೋರೇಷನ್ (ಮೈಸೂರು ಉಗ್ರಾಣ ನಿಗಮ) ಬೆಂಗಳೂರು, 1962ರಿಂದ 1964ರವರೆಗೆ ರಿಜಿಸ್ಟ್ರರ್ ಕೋ–ಆಪರೇಟಿವ್ ಸೊಸೈಟಿ, ಬೆಂಗಳೂರು. ರಿಜಿಸ್ಟ್ರರ್ ಆಫ್ ಕೊ–ಆಪರೇಟಿವ್ ಸೊಸೈಟಿಯಲ್ಲಿದ್ದಾಗ ಉದ್ಯೋಗ ಕ್ರಾಂತಿಯನ್ನೇ ಮಾಡಿದರು. ಆ ಕಾಲಕ್ಕೆ ಇದನ್ನು ಸರ್ಕಾರದ ಒಂದು ಅಧಿಕೃತ ಇಲಾಖೆಯಾಗಿ ಪರಿವರ್ತಿಸಿ, ಸಾವಿರಾರು ಜನರನ್ನು ಗುರುತಿಸಿ ಕೆಲಸ ನೀಡಿದರು. 1964ರಿಂದ 1966ರವರೆಗೆ ಕಮೀಷನ್‌ರ್ ಆಫ್ ಸರ್ವೆ ಸೆಟಲ್‌ಮೆಂಟ್ ಅಂಡ್ ಲ್ಯಾಂಡ್ ರೆಕಾರ್ಡ್ಸ್, ಬೆಂಗಳೂರು, 1966–1969 ಸೆಕ್ರೆಟರಿ ಡೆವಲೆಪ್‌ಮೆಂಟ್, ಹೌಸಿಂಗ್, ಹೆಲ್ತ್, ಪಂಚಾಯತ್ ರಾಜ್, ಕೊ–ಆಪರೇಷನ್, ಎಂ. ಡಿ., ಮೈಸೂರು ಹೌಸಿಂಗ್ ಬೋರ್ಡ್, ಎಕ್ಸ್ ಅಫಿಷಿಯೋ ಜಾಯಿಂಗ್ ಡೆವಲಪ್‌ಮೆಂಟ್ ಕಮೀಷನ್‌ರ್, 1969 ರಿಂದ 1972ರವರೆಗೆ ಕೆ.ಪಿ.ಎಸ್.ಸಿ. ಸದಸ್ಯರಾಗಿ ಸೇವೆ ಸಲ್ಲಿಸಿದರು. ನಂತರ ಸರ್ಕಾರಿ ಕೆಲಸಕ್ಕೆ ರಾಜಿನಾಮೆ. 1972 ನಂತರ ಕೊಳ್ಳೇಗಾಲ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ–ಸೋತರು. ಹೀಗೆ ಅವರ ವೃತ್ತಿಜೀವನವು ಹತ್ತು ಹಲವು ಕ್ಷೇತ್ರಗಳೊಂದಿಗೆ ಮುನ್ನಡೆದಿತ್ತು. ಹೋದ ಇಲಾಖೆಗಳಲ್ಲಿ ಜನಮೆಚ್ಚುವ, ಮನಸೊಪ್ಪುವ ಕೆಲಸಗಳಿಂದಲೇ ಜನಾನುರಾಗಿಯಾಗುತ್ತಾ ಬಂದವರು ಶ್ರೀ ಆರ್. ಭರಣಯ್ಯನವರು. ಮುಂದಿನದು ಅವರ ಪೂರ್ವಿಕರ ಬಗೆಗಿನ ಮಾಹಿತಿ ಮತ್ತು ನೆಲದ ನುಡಿ ನೆನಪುಗಳು. ನುಡಿ ನೆನಪಿನ ಮೊದಲ ಮಾತು ಆರ್. ಭರಣಯ್ಯನವರ ಬಾಳಸಂಗಾತಿ, ನೆಚ್ಚಿನ ಮಡದಿ ಶ್ರೀಮತಿ ಶಾಂತಮ್ಮನವರದು. ಪತಿಯ ಬಗ್ಗೆ ಈ ಬಾಳ ಸಂಗಾತಿಯು 'ಬಾಳಂಗಳದಲ್ಲಿ' ಇನ್ನು ಅಚ್ಚಹಸಿರಾಗಿಸಿಕೊಂಡಿರುವ ನೆನಪುಗಳ ನುಡಿ ಇದು.



ಬಾಳಸಂಗಾತಿಯ ಬಾಳಂಗಳದಲ್ಲಿ..........

ಶ್ರೀಮತಿ ಶಾಂತಮ್ಮ

"ನಾವು ಕಷ್ಟಪಟ್ಟಿದ್ರೂ ಸುಖವಾಗಿದ್ವಪ್ಪ. ಜೀವಮಾನದಲ್ಲಿ ಬೇಜಾರನ್ನೋದೆ ಇರ್ಲಿಲ್ಲ. ಜನ-ಮನ ನಮ್ಮನ್ನ ತುಂಬಾ ಪ್ರೀತಿಸ್ತಿದ್ರು. ನಮ್ಮನ್ನ ಚನ್ನಾಗಿನೋಡಕೊಂಡ್ರು. ತುಂಬು ಸಂಸಾರನಾ ತೂಗಿಸ್ಕೊಂಡು ಹೋಗಿದ್ದೇ ತಿಳಿದಿಲ್ಲ. ಅವರಿಗೆ 'ಕೆಲಸ' ಬಿಟ್ರೆ ಬೇರೇನೂ ಗೊತ್ತೇ ಇರ್ಲಿಲ್ಲ. ಎಂಥವ್ರನ್ನು ಪ್ರೀತ್ಸೋರು, ಕಷ್ಟ ಅಂದು ಬಂದವ್ರಿಗೆ ಎಂದೂ ಬರಿಗೈಲಿ ಕಳಿಸ್ತಿರ್ನಿಲ್ಲ. ದಿನೇರೆಡೊತ್ತು "ಕೆಲಸ ಕೊಡೇದೆ ಕೆಲ್ಸ ಅವರ್ಗೆ" – ಮನೆ ಒಳ್ಗೂ, ಹೊರ್ಗು ಒಂದೇ ಗುಣ......... ಬಿಡಪ್ಪಾ.... ಅದು ಸುಖದ ಕಾಲ... ಎಷ್ಟು ಹೇಳಿದ್ರೂ ಕಡಿಮೆಯೇ..." ಹೀಗೆ ತನ್ನ ಬಾಳಾಟದ ಸವಿನೆನಪುಗಳನ್ನು, ಬದುಕು-ಬವಣೆಗಳನ್ನು ಅದೇ ಹಳ್ಳಿಗಾಡಿನ ಸೊಗಡಿನ ಭಾಷೆಯಲ್ಲಿ ಶ್ರೀಮತಿ ಶಾಂತಮ್ಮ ವಿವರಿಸುತ್ತಿದ್ದರು. 85ರ ಹರೆಯದ ಶಾಂತಮ್ಮ ತುಂಬು ಜೀವನದ ಹೊತ್ತಿಲಲ್ಲಿ ನಿಂತು ತನ್ನ ಬಾಳಸಂಗಾತಿಯೊಂದಿಗೆ ಇಟ್ಟ ಹೆಜ್ಜೆಗಳನ್ನು ನೆನೆಯುತ್ತಾ ಹೋದರು. ಈ ಇಳಿವಯಸ್ಸಿನಲ್ಲೂ ಅದೇನೋ ತೃಪ್ತಿ, ಸಮಾಧಾನ, ಜೀವನೋತ್ಸಾಹ ತುಂಬಿಕೊಂಡಿತ್ತು. ಸುತ್ತಲೂ ಇರುವ ಮಕ್ಕಳು-

ಮೊಮ್ಮಕ್ಕಳನ್ನು ಕಣ್ಣುತುಂಬಿಕೊಂಡು ಜೀವನ ಮುನ್ನಡೆಸಿರುವ ಶಾಂತಮ್ಮನವರು ಆರ್.ಭರಣಯ್ಯನವರ ಧರ್ಮಪತ್ನಿ. ಎರಡು ಜನ ಹೆಂಡಿರು ತೀರಿಕೊಂಡ ನಂತರ 'ಕಳ್ಳಿ' ಗಿಡಕ್ಕೆ ತಾಲಿ ಕಟ್ಟಿ ಆರ್. ಭರಣಯ್ಯನವರ ತಂದೆ ತಾಯಿಗಳು ಇವರನ್ನು ಮನೆ ತುಂಬಿಸಿಕೊಂಡರಂತೆ. ಹಿಂದೆ ಕೈಹಿಡಿದವರು ಅಕಾಲ ಮರಣಕ್ಕೆ ತುತ್ತಾಗುತ್ತಿದ್ದುದನ್ನು ತಪ್ಪಿಸಲು 'ಕಳ್ಳಿ' ಗಿಡಕ್ಕೆ 'ತಾಳಿ' ಕಟ್ಟಿಸಿ ಈಗಾದರೂ, ಈಕೆಗಾದರೂ ಮುತ್ತೈದೆ ಭಾಗ್ಯ ಉಳಿಯಲೆಂದು ಹೀಗೆ ಮಾಡಿದ್ದರಂತೆ. ಆರ್. ಭರಣಯ್ಯನವರನ್ನು ಕೈಹಿಡಿದು ಬಂದ ಈ ಬಗೆಯನ್ನು ಶಾಂತಮ್ಮನವರು ನೆನೆದು ನಕ್ಕರು. ಆ ನಗುವಿನಲ್ಲಿ 85 ವರ್ಷದ ಸುದೀರ್ಘ ಜೀವನದ ಯಾತ್ರೆಯ ನೆನಪುಗಳು ತುಂಬಿತ್ತು.

ಮತದ ಮಾತು

"ನಾವು ಕ್ರಿಶ್ಚಿಯನ್ನರಂತೆ ಕಪ್ಪ. ನಮ್ಮಪ್ಪ ಮುಳ್ಳೂರುನಲ್ಲಿದ್ದಾಗ ಅದ್ಯಾರೋ ಬಂದ ನಮ್ಮ ಕುಲಕ್ಕೆ ಸೆರ್ಕೊಳ್ಳಿ ಅಂತ ಸೇರಿಸ್ಕೊಬುಟ್ರಂತೆ... ಆಗ ನಮ್ಮಪ್ಪ ಮಾದಯ್ಯ ಹೋಗಿ 'ಪಾಲ್‌ರಾಜಪ್ಪ' ನಾದ. ತಾಯಿ ಮನಿಯಮ್ಮ 'ಮಾಣಿಕ್ಯಮ್ಮ' ಆಗೋದ್ಲು. ಅದು ಬೇರೆ ಕತೆ' ಎಂದು ಹೊಟ್ಟೆ ತುಂಬಾ ನಕ್ಕರು. ಆ ನಗುವಿನಲ್ಲೂ ಕಂದಾಚಾರದ ವ್ಯಂಗ್ಯಗಳು ಮಿಂಚಿ ಹೋದವು. "ನಮ್ಮ ಜನಕ್ಕೆ ಆ ಕ್ರಿಶ್ಚಿಯನ್ರೆ ಓದೋದು ಕಲಿಸೋಕ್ಕೆ ವ್ಯವಸ್ಥೆ ಮಾಡಿದ್ರು. ಅಗೋಂದಷ್ಟು ಜನ ಅವರ ಕಾಲ್ದೆಸೆಯಿಂದಲೇ ಓದಿದ್ದು" ಎಂದು ತಾನು ಏಳನೇ ತರಗತಿವರೆಗೆ ಓದಿದ್ದು ನೆನೆದುಕೊಂಡರು. ಹಳ್ಳಿಸೊಗಡಿನ ಭಾಷೆಯೇ ಆದರೂ ತೂಕ ತಪ್ಪದ ಮಾತು, ನೆನಪಿನ ಗಣಿಯಿಂದ ಅನೇಕ ಸಂಗತಿಗಳನ್ನು ಮೊಗೆಮೊಗೆದು ನೀಡುತ್ತಾ ಹೋದರು.

ಧೀಮಂತನ ಕೈ ಹಿಡಿದು ನಡೆದಾಗ

"ನಮ್ಮ ತಾತನಿಗೆ ಮತ್ತು ನಮ್ಮಪ್ಪನಿಗೆ ಈ ಮದುವೆ ಇಷ್ಟವಿರಲಿಲ್ಲ. ಆದ್ರೆ ನಮ್ಮವ್ವನಿಗೆ ತುಂಬಾ ಇಷ್ಟವಿತ್ತು. ದೊಡ್ಡ ಸಾಹೇಬ್ರಗೆ ಮಗಳ ಕೊಡ್ತಿದ್ದೀವಿ ಅಂತ ನಮ್ಮಪ್ಪನಿಗೆ ತಿಳಸದೆ ಮಾತುಕೊಟ್ಲು. ಅವಳ ಇಚ್ಚೆಯಂತೆ ಮದುವೆಯೂ ಆಯ್ತು. ಆಮೇಲಾಮೇಲೆ ಎಲ್ಲಾ ಸರಿವೋಯ್ತು" ಎಂದು ಕಾಲದ ಮಹಿಮೆಯನ್ನು ಕೊಂಡಾಡಿದರು. ಊರ ಅಂಗಳದಿಂದ ನೆನೆದವರ ನೆನಪುಗಳಿಗೆ ಮುಕುಟವಿದ್ದಂತಿತ್ತು ಈ ಮಾತುಗಳು. ಆರ್. ಭರಣಯ್ಯನವರ ಕೈಹಿಡಿದು ಬಂದ ಕಾಲಕ್ಕೆ ಇನ್ನು ಮುಗ್ಧ ಮನಸ್ಸು. ಎಲ್ಲೋ ಹಳ್ಳಿಯಲ್ಲಿ ಅರಳುತ್ತಿದ್ದ ಪುಟ್ಟಬಾಲೆ. ಒಂದು ದಿನ ಒಬ್ಬ ಅಧಿಕಾರಿಯ ಮಡದಿಯಾಗಿಬಿಟ್ಟಿದ್ದು

ದಿಗ್ಭ್ರಮೆಯೋ, ಆಶ್ಚರ್ಯವೋ, ದಿಕ್ಕು ತೋಚದೆ ಹಸುವಿನಿಂದೆ ಕರು ಹಿಂಬಾಲಿಸಿ ಹೊರಟಂತೆ ಭರಣಯ್ಯನವರ ಕೈ ಹಿಡಿದು ನಡೆದೇ ಬಿಟ್ಟಿದ್ದರು. ಅಂದು ಇಡೀ ಊರೇ ಮರುಗಿ, ಕಣ್ಣೀರು ಹಾಕಿ ಹಸು ಕಂದನನ್ನು ಕಳುಹಿಸುವಂತೆ ಬಿಕ್ಕಿ ಬಿಕ್ಕಿ ಕಳುಹಿಸಿಕೊಟ್ಟಿತ್ತು. ಇವರಾದರೋ ದೊಡ್ಡ ಅಧಿಕಾರಿ! ಹೇಗೋ, ಏನೋ ಎಂಬ ಅಳಕು. ಆದರೂ ದೇವರ ಮೇಲೆ ಭಾರ ಹಾಕಿ ಮಾಣಿಕ್ಯಮ್ಮ (ಮುನಿಯಮ್ಮ) ಮಗಳನ್ನು ಆರ್. ಭರಣಯ್ಯನವರ ಕೈಗಾಕಿ ಹರಿಸಿದ್ದಳು. ತಾಯ ಹರಕೆ ಸುಳ್ಳಾಗಲಿಲ್ಲ. ಮುಂದೆ ತನ್ನ ಕರುಳಕುಡಿ ಧೀಮಂತನೊಬ್ಬನ ಮಡದಿಯಾಗುವಳೆಂಬ ಕನಸೇ ಕಾಣದ ಕಾಲದಲ್ಲಿ ಇದೆಲ್ಲ ನಡೆದುಹೋಗಿತ್ತು. ತಾಯ ಹರಕೆ ಕಾಪಾಡಿತು. ಶಾಂತಮ್ಮ ಮುಂದೆ ಇಡೀ ಸಮುದಾಯದಲ್ಲಿ ಪ್ರಖ್ಯಾತಿ ಪಡೆದ, ಧೀಮಂತ ವ್ಯಕ್ತಿಯಾಗಿ ಬಾಳಿದ ಆರ್. ಭರಣಯ್ಯನವರ ಜೊತೆ ಸಂಸಾರ ನಡೆಸಿ ತಾನೂ ಧನ್ಯತೆ ಪಡೆದರು. ಇದೇ ಧನ್ಯತೆ ಈಗಲೂ ತುಂಬಿರುವುದನ್ನು ಅವರ ಪ್ರತಿ ಮಾತಲ್ಲೂ ಕಾಣಬಹುದು.

ತಮ್ಮ ಪತಿ ಡಿ.ಸಿ.ಯೋ, ಎಸ್.ಪಿ.ಯೋ? ತಿಳಿಯದ ಮುಗ್ಧ ವಯಸ್ಸು. ಅಥವಾ ಈ ಅಧಿಕಾರದ ವ್ಯಕ್ತಿಯಾಗಲಿ, ಜಬರ್‌ದಸ್ತಾಗಲಿ ತಿಳಿಯದಂಥ ಸ್ಥಿತಿ. ಒಟ್ಟಿನಲ್ಲಿ ತಮ್ಮ ಯಜಮಾನರು ಬಹಳ ಜವಾಬ್ದಾರಿಯುಳ್ಳ ಅಧಿಕಾರಿ ಎಂಬುದು ಮಾತ್ರ ತಿಳಿಯುತ್ತಿತ್ತು. ಆ ಜನ, ಆ ಆಳುಕಾಳು, ವಾಹನ–ವಹಿವಾಟು, ಕಡತಗಳ ಮಹಾಪೂರ, ಎಂ.ಎಲ್.ಎ., ಎಂ.ಪಿ.ಗಳಾದಿಯಾಗಿ, ಊರಿನ ಕಡುಬಡವರ ತನಕ ಮನೆಗೂ, ಆಫೀಸಿಗೂ ಬರುವರು. ಆ ವಹಿವಾಟೇ ಒಂದು ಗಾಬರಿ ತರಿಸುವ ಸಂಗತಿ! ಆದರೂ ತಾನಾಯ್ತು, ತನ್ನ ಪಾಡಾಯ್ತು, ತನ್ನ ಪತಿ ಸೇವೆ ಹೊರತು 'ಅನ್ಯ' ಪ್ರಪಂಚದ ತಿಳಿವೇ ಇಲ್ಲ! ಇದೆಲ್ಲ ಆರಂಭದಲ್ಲಿ ಶ್ರೀಮತಿ ಶಾಂತಮ್ಮನವರ ನೆನಪಿನಾಳದಲ್ಲಿ ತನ್ನ ಪತಿಯ ಬಗ್ಗೆ ಉಳಿದಿರುವ ಒಂದು ಸಂಕ್ಷಿಪ್ತ ಚಿತ್ರಣ.

ಆ ವೈಭೋಗದ ದಿನಗಳು

ಶ್ರೀಮತಿ ಶಾಂತಮ್ಮನವರಿಗೆ ತನ್ನ ಪತಿಯ ಎಲ್ಲಾ ಹೆಜ್ಜೆಗುರುತುಗಳು ತಿಳಿದಿವೆ. ಆದರೆ ಕಾಲಾನುಕ್ರಮವಾಗಿ ಹೇಳುವಾಗ ಮಾತ್ರ ಕೊಂಚ ಗೊಂದಲವಿದೆ. ವಯಸ್ಸಿಗೆ ಸಾಕಷ್ಟು ಕರಾರುವಕ್ಕಾಗಿ ವಿವರಗಳನ್ನು ಹೇಳಿದ್ದೆ ಬಹಳ ದೊಡ್ಡದೆನಿಸಿತು. ಇಷ್ಟು ದೊಡ್ಡ ವಹಿವಾಟಿನ ಆಫೀಸರ್ ಮನೆ–ಮಡದಿ–ಮಕ್ಕಳಾದಿಯಾಗಿ ಅವರ ಒಡನಾಟವನ್ನು ಹೇಗೆ ನೆನಪಿಸಿಕೊಳ್ಳುತ್ತೀರಿ ಎಂಬ ಪ್ರಶ್ನೆಗೆ ಅವರು ಮತ್ತೇ ತಮ್ಮದೆ ಧಾಟಿಯಲ್ಲಿ "ಮಕ್ಕಳಿಗೆ ಅವರ ವಹಿವಾಟೆಲ್ಲ ತಿಳಿದೇ ಇಲ್ಲ. ಅವರಪ್ಪನ ವಿಷಯ, ಅಧಿಕಾರ, ಕೆಲಸ, ಶ್ರೇಯಸ್ಸನ್ನ ಮಕ್ಕಳು ಅಷ್ಟಾಗಿ ತಿಳಿದವರಲ್ಲ. ಅವರ ಸ್ಕೂಲ್–ಕಾಲೇಜಾಯ್ತು, ಅವರಾಯ್ತು. ಆದ್ರೆ

ಮಕ್ಕಳ ಹತ್ತಿರ ದೇವರ ಹತ್ರ ಮಾತಾಡೋ ರೀತಿ ಮಾತಾಡೋರು. ಅದು ಮಾತ್ರ ಭಾಳ ನೆನಪಿದೆ. ಮಕ್ಕಳ ಕಂಡ್ರೆ ತುಂಬಾ ಪ್ರೀತಿ. ನನಗೆ ಇವರನ್ನು ನೋಡ್ಕೊಳ್ಳೊದು ಬಿಟ್ರೆ ಬೇರೆನೂ ಕೆಲ್ಸವೇ ಇಲ್ಲ. ಮನೆ ಕೆಲ್ಸಕ್ಕೆ, ಅಡುಗೆ ಕೆಲ್ಸಕೆ ಜನಾ ಬರ್ತಿದ್ರು. ಅವರವರ ಕೆಲಸ ಅವರವರು ಮಾಡ್ಕೊಂಡು ಹೋಗ್ತಿದ್ರು. ಒಬ್ಬ ಆಳ್ಗೆ, ಬಂದವರ್ಗೆ ಕಾಫಿ–ಟೀ ಕಾಯ್ಸಿಕೊಡೋದೇ ಒಂದು ಕೆಲ್ಸ" ಹೀಗೆ ಇಡೀ ಮನೆ ಆಳು–ಕಾಳುಗಳಿಂದ ತುಂಬಿ ತುಳುಕುತಿದ್ದುದು ಜನ–ಮನ ಬಂದು ಹೋಗುತ್ತಿದ್ದ ವೈಭೋಗವನ್ನು ನೆನೆದು ಹನಿಗಣ್ಣಾದರು.

ಚಿತ್ರದುರ್ಗ, ಶಿವಮೊಗ್ಗ ಇತ್ಯಾದಿ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿ ಇವರ ಸಂಸಾರ ನಂತರ ಬಂದಿದ್ದು ಬೆಂಗಳೂರಿಗೆ. ಇಲ್ಲಿ ಬಂದಮೇಲೆ ಇನ್ನೂ ಜವಾಬ್ದಾರಿಗಳ ಮಹಾಪೂರವನ್ನೇ ಹೊತ್ತು ನಡೆಸಿದ್ದಾರೆ. ಗಂಡ ಸಾರ್ವಜನಿಕ ಕೆಲಸದಲ್ಲಿ ತೊಡಗಿದರೆ ಹೆಂಡತಿ ತಮ್ಮ ಮಕ್ಕಳು – ಜನ – ನೆಂಟರು–ಬಂಧು–ಬಳಗದ ಯೋಗಕ್ಷೇಮಕ್ಕಾಗಿ ಸಮಯ ಮೀಸಲಿಟ್ಟು ನಡೆದಿದ್ದಾರೆ. ಈ ನೆನಪುಗಳು ತೆರೆದುಕೊಂಡಿದ್ದು ಹೀಗೆ:

"ವೇರ್‌ಹೌಸಿಂಗ್ ಕಾರ್ಪೋರೇಷನ್‌ನಲ್ಲೂ ಇದ್ದರು. ಒಂದು ವರ್ಷ ಕೆಲಸ ಮಾಡಿದರು. ಆಗ ಮೈಸೂರು, ಗುಲ್ಬರ್ಗ, ರಾಯಚೂರು ಎಲ್ಲ ಕಡೆ ಒಂದೊಂದು ಡಿಪೋ ತೆರೆದುಬಿಟ್ಟರು. ಜನಗಳಿಗೋಸ್ಕರ ವ್ಯಾಪಾರಸ್ಥರು ಸಾಮಾನು – ಸರಂಜಾಮು ತುಂಬಿಡಲಿಕ್ಕೆ, ಎಲ್ಲ ಹಾಳಾಗಿಹೋಗಿಬಿಡುತ್ತಿತ್ತಲ್ಲ ಹಾಗಾಗಿ ಅನುಕೂಲ ಆಗಲಿ ಅಂತ. ಅಲ್ಲಿದ್ದ ಎರಡು ವರ್ಷವೂ ಬಹಳ ಕೆಲಸ ಮಾಡಿದರು. ಆಮೇಲೆ ಅಲ್ಲಿಂದ ಕೋ–ಆಪರೇಟಿವ್ ರಿಜಿಸ್ಟ್ರಾರ್ ಆಗಿ ಒಳ್ಳೇ ಕೆಲಸ ಮಾಡಿದರು. ಅಲ್ಲೊಂದು ಮೂರು ವರ್ಷ ಕೆಲಸ ಮಾಡಿದರು. ಆವಾಗಲೂ ಮಕ್ಕಳು ಚಿಕ್ಕವರೇ. ಗುರು ಎಂಟನೇ ಕ್ಲಾಸೋ ಹತ್ತನೇ ಕ್ಲಾಸೋ ಓದುತ್ತಿದ್ದ ಅಷ್ಟೆ. ಮಕ್ಕಳಿಗೆ ಅಪ್ಪನ ಹಿರಿಮೆ ಎಲ್ಲ ಗೊತ್ತೇ ಇರಲಿಲ್ಲ. ಹೆಣ್ಣುಮಕ್ಕಳು ಸ್ವಲ್ಪ ದೊಡ್ಡವರಿದ್ದರು. ಅವರನ್ನ ಆಮೇಲೆ ಮದುವೆ ಮಾಡಿದರು. ವೇರ್‌ಹೌಸ್‌ನಲ್ಲಿದ್ದಾಗ ನಾಗರತ್ನನ ಮದುವೆ ಮಾಡಿದೆವು. ಅದರ ಮುಂದಿನ ವರ್ಷ ಅವರು ರಿಜಿಸ್ಟ್ರಾರ್ ಆಗಿದ್ದಾಗ ಶಾರದಳ ಮದುವೆ ಮಾಡಿದೆವು. ಬೆಂಗಳೂರಿನಲ್ಲೇ, ವೆಂಕಟರಮಣ ಛತ್ರದಲ್ಲಿ. ಮತ್ತೊಂದು ಬೇರೆ ಕಡೆ. ಒಬ್ಬ ಶೆಟ್ಟರ ಕಲ್ಯಾಣ ಮಂಟಪವಿತ್ತು. ಅವರು ಯಾರಿಗೂ ಕೊಡುತ್ತಿರಲಿಲ್ಲ. ಸಾಹೇಬರಿಗೆ ಮಾತ್ರ ಕೊಟ್ಟರು. ಇವರೇ ಫಸ್ಟ್ ಅಲ್ಲಿ ಮದುವೆ ಮಾಡಿದವರು. ಮಾಧವನ್ ಪಾರ್ಕ್ ಹತ್ತಿರ ಕುಚ್ಚಲಾಂಬ ಛತ್ರ ಅಂತ ಅದು. ಇವರು ವೇರ್‌ಹೌಸಿನಲ್ಲಿದ್ದಾಗ ಶೆಟ್ಟರು, ವ್ಯಾಪಾರಿಗಳಿಗೆ ಸ್ವಲ್ಪ ಸಹಾಯ ಆಯಿತು. ಹೇಗೆ ಅಂದರೆ ಗೋಡೋನ್ ಎಲ್ಲ ಮಾಡಿಸಿಕೊಟ್ಟು ಅವರಿಗೆಲ್ಲ ಸಹಾಯ ಮಾಡಿದರು. ಹಾಗಾಗಿ ಹೋಗಿ ಕೇಳಿದ ತಕ್ಷಣ ಛತ್ರವನ್ನ ಕೊಟ್ಟರು".

"ಆವಾಗ ತುಂಬ ಹೆಸರುವಾಸಿ ಆಗಿದ್ದರು ಇವರು. ಮದುವೆ ಎಲ್ಲ ತುಂಬಾ ಜೋರಾಗಿ ಆಯಿತು. ಧಾರವಾಡ, ಬಿಜಾಪುರ ಎಲ್ಲ ಕಡೆಗಳಿಂದಲೂ ಜನ ಬಂದಿದ್ದರು. ಇವರೇ ಮೊದಲು ಛತ್ರಗಳಿಗೆ ಹೋಗಿ ಮದುವೆ ಮಾಡುವುದನ್ನು ತೋರಿಸಿಕೊಟ್ಟಿದ್ದು. ಇವರು ಮಾಡಿದ್ದೇ ತಡ ಎಲ್ಲರೂ ಅದೇ ರೀತಿ ಮಾಡೋಕೆ ಶುರು ಮಾಡಿದರು. ಅದಕ್ಕೂ ಮೊದಲು ಮನೆ ಮುಂದೆಯೇ ಮದುವೆ ಮಾಡಿಕೊಳ್ಳೋರು ಅಥವಾ ದೇವಸ್ಥಾನಗಳಲ್ಲಿ ಮಾಡಿಕೊಳ್ಳೋರು".

"ಇವರು ಹಾಗೆ ಮಾಡಿದ್ದು ನೋಡಿ, ಆಮೇಲೆ ಆಫೀಸರುಗಳೆಲ್ಲ ಶುರು ಮಾಡಿದರು. ನಮ್ಮ ಭರಣಯ್ಯ ಸಾಹೇಬರು ಹಾಗೆ ಮಾಡಿದಾರಲ್ಲ ನಾವೂ ಮಾಡೋಣ ಅಂತ. ಆವಾಗೆಲ್ಲ 'ನೀವೇ ತಾನೇ ತೋರಿಸಿಕೊಟ್ಟಿದ್ದು' ಅಂತ ತಮಾಷೆ ಮಾಡುತ್ತಿದ್ದೆ ಅವರಿಗೆ. ಏನೇ ಆದರೂ ಛತ್ರ ಅಂದರೆ ಕಡಿಮೆ ದುಡ್ಡು ಖರ್ಚಾಗುತ್ತಾ? ಆಮೇಲೆ ಮುಂದಿಂದು ವೆಂಕಟರಮಣಪ್ಪ ಛತ್ರದಲ್ಲಿ ಮಾಡಿದೆವು. ಇಲ್ಲೇ ಮಹಾರಾಣೀಸ್ ಹತ್ತಿರ. ಅವರು ಈ ಎರಡೇ ಮದುವೆ ಮಾಡಿದ್ದು. ಮಿಕ್ಕಿದ್ದೆಲ್ಲ ನಾನೇ. ಆವಾಗೆಲ್ಲ ಜನಗಳ ಸಹಾಯ ಎಲ್ಲ ಚೆನ್ನಾಗಿತ್ತು".

"ಆಮೇಲೆ ಚುನಾವಣೆಗೆ ಹೋದರು. ನರಸಿಂಹಮೂರ್ತಿ ಅಂತ. "ಬನ್ನಿ ಸಾರ್, ಬನ್ನಿ ಸಾರ್" ಅಂತ ಹೇಳಿ ಕರೆದುಕೊಂಡುಹೋಗಿ ಕೊಳ್ಳೇಗಾಲಕ್ಕೆ ಎಲೆಕ್ಷನ್‌ಗೆ ನಿಲ್ಲಿಸಿದ್ರು. ಅದು ಗುರುಗೆ ಸ್ವಲ್ಪ ಗೊತ್ತು. ಅವರು ಮಾಡಿದ್ದು ಇಬ್ಬರದೇ ಮದುವೆ. ಸಂಪತ್ ಚಿಕ್ಕವನು. ಇಂಜಿನಿಯರ್ ಓದಿಕೊಂಡ. ಆಮೇಲೆ ಅವನಿಗೆ ಸರ್ಕಾರಿ ಕೆಲಸಕ್ಕೆ ಹೋಗೋಕೆ ಇಷ್ಟವೇ ಆಗಲಿಲ್ಲ. ಫ್ಯಾಕ್ಟರಿಯೇಬೇಕು ಅಂತ ಹೆಚ್.ಎ.ಎಲ್.ಗೇ ಸೇರಿಕೊಂಡ" ಮಾತು ಮತ್ತೆ ಮನೆಯ ವಿಚಾರದತ್ತ ಬಂತು.

ಆಗ ಸಂತೋಷ ಎಂಬುದು ಇತ್ತು

ನಿಮ್ಮ ಬಳಿ ಸಾಹೇಬರು ಯಾವ ವಿಚಾರಗಳನ್ನು ಮಾತಾಡುತ್ತಿದ್ದರು?

ರಾಜಕೀಯ ಬಿಟ್ಟು ಎಲ್ಲಾ ವಿಚಾರ ಮಾತಾಡೋರು. ಮಕ್ಕಳ ಯೋಗಕ್ಷೇಮವನ್ನ ತಪ್ಪದೇ ಕೇಳೋರು. ಎಲ್ಲಿಗೂ ಹೊರಗಡೆ ಹೋಗುತ್ತಿರಲಿಲ್ಲ ನಾನು. ಈ ಮಕ್ಕಳು ಹೋಗಲಿಕ್ಕೆ ಬಿಡಬೇಕಲ್ಲ. ಎಲ್ಲ ಚಿಕ್ಕವರಿದ್ದರು ಆಗ. ಪಿ.ಎಸ್.ಸಿ. ಮೆಂಬರ್ ಆಗಿದ್ದರಲ್ಲ ಆವಾಗ ಏನೋ ಒಂದೆರಡು ಸಾರಿ ಬೆಳಗಾಂ ಕಡೆ ಹೋಗಿದ್ದೆವು ಟೂರ್‌ನಲ್ಲಿ. ಇವೆಲ್ಲ ಸಣ್ಣ ಸಣ್ಣ ಮಕ್ಕಳು. ಎಲ್ಲರನ್ನೂ ಕರೆದುಕೊಂಡು ಎಲ್ಲಿ ಹೋಗುವುದು!? ಅವರಿಬ್ಬರೂ ಮದುವೆ ಮಾಡಿಕೊಂಡು ಹೊರಟು ಹೋದರು ಹುಡುಗಿಯರು. ಮನೆ ನೋಡುವವರು

ಯಾರು? ಅವರಿದ್ದಿದ್ದರೆ ಸ್ವಲ್ಪ ಸಹಾಯ ಮಾಡೋರು. ಹಾಗಾಗಿ ಎಲ್ಲಿಗೂ ಹೋಗುತ್ತಿರಲಿಲ್ಲ ನಾನು ಮನೆಯಲ್ಲೇ ಇರುತ್ತಿದ್ದೆ. ಒಂದೆರಡು ಬಾರಿ ತಿರುಪತಿಗೆ ಹೋಗಿದ್ದೆವು.

ರಿಜಿಸ್ಟ್ರಾರ್ ಆದಮೇಲೆ ಸರ್ವೆ ಸೆಟಲ್‌ಮೆಂಟಿಗೆ ಹೋದರು. ಅಲ್ಲಿ ಒಂದು ವರ್ಷ ಇದ್ದರು. ಸಾವಿರ ಜನಗಳಿಗೆ ಕೆಲಸ ಕೊಟಿದ್ದರಂತೆ ಆವಾಗ. ಎಲ್ಲ ಲೈನಾಗಿ ನಿಲ್ಲುತ್ತಿದ್ರಂತೆ ಜನಗಳು. ಹೇಳುತ್ತಿದ್ದರು ಬಂದವರು. ಸಾವಿರ ಜನ ಅಂತೆ.! ಅವರು ಅಪ್ಲಿಕೇಷನ್ ಕೊಡೋದು, ಇವರು ಸೈನ್ ಮಾಡೋದು, ಅವರು ಆರ್ಡರ್ ತೆಗೆದುಕೊಂಡು ಹೋಗೋದು.! ಹೀಗೇ ಸಾವಿರ ಜನಕ್ಕೆ ಅಂತೆ ಕೆಲಸ ಕೊಟ್ಟಿರುವುದು ಅಲ್ಲಿ. ಅಲ್ಲಿಂದ ವಿಧಾನಸೌಧಕ್ಕೆ ಸೆಕ್ರೆಟರಿ ಆದರು. ಅಲ್ಲಿ ಮೂರು ನಾಲಕ್ಕು ವರ್ಷ ಇದ್ದು ಅಲ್ಲಿಂದ ಪಿ.ಎಸ್.ಸಿ. ಮೆಂಬರ್ ಆದರು. ಅಲ್ಲಿಂದ ಕೊನೆಗೆ ನಿವೃತ್ತಿ ಆದರು. ಐ.ಎ.ಎಸ್. ಸಿಕ್ಕಿದ್ದು ಯಾವಾಗ ಅಂದರೆ ಅವರು ವಿಧಾನ ಸೌಧದಲ್ಲಿದ್ದಾಗ ಬಂತು. ಗ್ರೇಡಿನ ಪ್ರಕಾರ ಬಂತು. ಆ ಕಾಲದಲ್ಲಿ ವಿಧಾನ ಸೌಧದಲ್ಲಿ 600 ರೂಪಾಯಿ ಸಂಬಳ ಅಷ್ಟೇ. ಕಮೀಷನರ್‌ಗೆ 1600 ರೂ. ಸಂಬಳ. ಆಗಿನ ಕಾಲದಲ್ಲಿ ಅದೇ ಜಾಸ್ತಿ ಸಂಬಳ! ಅದೇ ನಮಗೆ ಖುಷಿ, ಸಂತೋಷ ನಮಗೆ. ಎಷ್ಟೇ ಸಂಬಳ ಬಂದರೂ ಎಲ್ಲ ನನಗೇ ಕೊಟ್ಟುಬಿಡೋರು. ಇಡೀ ಕವರ್ ಸಮೇತ! ಜೇಬಿನಲ್ಲಿ 5 – 10 ರೂಪಾಯಿ ಇಟ್ಟುಕೊಂಡರೆ ಹೆಚ್ಚು ಅಷ್ಟೆ. ಆದರೆ ಆಗ ಒಳ್ಳೇ ಅಧಿಕಾರದ ಸಂತೋಷ ಇತ್ತು ನಮಗೆ.

ದಿನ ನಿತ್ಯ ಮನೆಗೆ ದಿನಸಿ ಸಾಮಾನು ಇತ್ಯಾದಿ ವಹಿವಾಟಿಗೆ ಏನು ವ್ಯವಸ್ಥೆ ಇತ್ತು?

"ಜವಾನರು ಇರುತ್ತಿದ್ದರಲ್ಲ. ಆವಾಗ ಜವಾನರು ಜಾಸ್ತಿ. ರಿಜಿಸ್ಟ್ರಾರ್ ಆಗಿದ್ದಾಗ ಮೂರು ಜನ ಸರ್ವೆಸೆಟಲ್‌ಮೆಂಟಿನಲ್ಲಿದ್ದಾಗಲೂ ಮೂರು ಜನ ಜವಾನರು. ಅವರೆಲ್ಲ ಸೌದೆ ಒಡೆದುಕೊಡೋದು, ಸ್ನಾನಕ್ಕೆ ನೀರು ಕಾಯಿಸಿಕೊಡೋದು – ಹೀಗೆ ನಮ್ಮದೇ ರಾಜ್ಯ! ಹಸೂನೂ ಕಟ್ಟಿದ್ದರು ಇಲ್ಲೇ. ಜವಾನರೇ ಹಾಲು ಕರೆದುಕೊಡೋದು ಎಲ್ಲ ಮಾಡೋರು. ಆಗ ಎಷ್ಟು 50 –100 ರೂ.ಸಂಬಳ ಅವರುಗಳಿಗೆ. ಅಧಿಕಾರ ಚೆನ್ನಾಗಿತ್ತು ಬಿಡ್ರಪ್ಪ! ಸಂತೋಷ ಆಗುತ್ತೆ ಈಗ ನೆನೆಸಿಕೊಂಡರೆ" ಮಾತಿನಲ್ಲಿ ಕಳೆದ ದಿನಗಳ ಬಗ್ಗೆ ತೃಪ್ತಿ ಇತ್ತು.

ಅಡುಗೆ ಎಲ್ಲ ನೀವೇ ಮಾಡುತ್ತಿದ್ದಿರಾ?

ನಾನೇ ಮಾಡುತ್ತಿದ್ದೆ. ಸಹಾಯಕ್ಕೆ ಜನವೂ ಇರುತ್ತಿದ್ದರು. ಆಮೇಲೆ ವಿಧಾನ ಸೌಧಕ್ಕೆ ಹೋಗುತ್ತಿದ್ದಾಗ ಮಾತ್ರ ಎರಡು ಜನರನ್ನು ಕೊಟ್ಟಿದ್ದರು. ಅವರುಗಳು ಊಟ ಎಲ್ಲಾ ಇಲ್ಲೇ ಮಾಡಿಕೊಂಡು ಸಾಹೇಬರಿಗೆ ಜೊತೇಲೆ ತೆಗೆದುಕೊಂಡು ಹೋಗುತ್ತಿದ್ದರು.

ಯಾವ ಊಟ ತುಂಬಾ ಇಷ್ಟ ಆಗಿತ್ತು ಅವರಿಗೆ?

ಅವರಿಗೆ ಮಟನ್ನು, ಚಿಕನ್ನು ಅಂದರೆ ತುಂಬಾ ಇಷ್ಟ ಆಗಿತ್ತು. ಎಲ್ಲಾ ವೆರೈಟಿನೂ ಮಾಡುತ್ತಿದ್ದೆ ನಾನು. ಸಹಾಯಕ್ಕೂ ಇರುತ್ತಿದ್ದರು. ಇವರೆಲ್ಲ ಸಣ್ಣ ಮಕ್ಕಳು ಆವಾಗ. ಮೂರು ಹುಡುಗಿಯರು. ಗುರು ಸಣ್ಣವನು. ಗುರುಗೆ ಏನೂ ಗೊತ್ತೇಇಲ್ಲ. ಸುಮ್ಮನೆ ಕಾಲೇಜಿಗೆ ಹೋಗೋದು ಬರೋದು ಊಟ ತಿಂಡಿ ಆಟ!. ವಿಜಯನಿಗಂತೂ ಕ್ರಿಕೆಟ್ಟು. ಬರೀ ಕ್ರಿಕೆಟಲ್ಲೇ ಮುಳುಗಿರೋನು. ಊಟವೂ ಬೇಡ ಏನೂ ಬೇಡ. ಆ ಥರ ವಿಜಯನ ಸ್ವಭಾವ. ನಮ್ಮವರಿಗೆ ಮಟನ್ನು ಅಂದರೆ ಬಹಳ ಇಷ್ಟ ಇತ್ತು. ಜೊತೆಗೆ ಚಪಾತಿ. ಮುದ್ದೆ ಅಷ್ಟು ತಿನ್ನುತ್ತಿರಲಿಲ್ಲ. ಸಾಯಂಕಾಲ ಚಪಾತಿ. ಹುಡುಗಿಯರು ಇದ್ದಾಗ ಅಡುಗೆಗೆಲ್ಲ ಸ್ವಲ್ಪ ಸಹಾಯ ಮಾಡೋರು.

ಹಬ್ಬಗಿಬ್ಬ ಎಲ್ಲ ಮಾಡಿದಾಗ ಏನು ಊಟ ಇಷ್ಟಪಡುತ್ತಿದ್ದರು?

ಮಾಮೂಲಿನ ಹಾಗೇ. ಯಾವಯಾವ ಹಬ್ಬಕ್ಕೆ ಏನೆಲ್ಲ ವಿಶೇಷ ತಿಂಡಿ ಮಾಡುತ್ತೇವೆ ಅದನ್ನೆಲ್ಲ ತಿನ್ನುತ್ತಿದ್ದರು. ಊಟದಲ್ಲಿ ಎಲ್ಲ ಇಷ್ಟ ಇತ್ತು ಅವರಿಗೆ. ಅವರು ಊಟದಲ್ಲಿ ಮಾತ್ರ ಫಸ್ಟ್ ಬಿಡ್ರಿ! ಟೂರಿನಲ್ಲಿದ್ದಾಗ ಹೊರಗಡೆ ಊಟ. ಇಲ್ಲಿ ಮನೆಗೆ ಬಂದಾಗ ಮನೆಯಲ್ಲಿ. ವಿಧಾನ ಸೌಧಕ್ಕೆ ಮಧ್ಯಾಹ್ನದ ಊಟವನ್ನು ಕ್ಯಾರಿಯರ್‌ನಲ್ಲಿ ಕೊಟ್ಟು ಕಳುಹಿಸುತ್ತಿದ್ದೆ.

ಮಕ್ಕಳಿಗೆ ಬಟ್ಟೆ ಬರೆ ಎಲ್ಲ ಅವರೇ ತರೋರು. ಜೊತೆಗೇ ಕರೆದುಕೊಂಡು ಹೋಗೋರು ಮಕ್ಕಳನ್ನೂ. ಇವರನ್ನೆಲ್ಲ ಕೂರಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದರು. ಚೆನ್ನಿಗರಾಮಯ್ಯ ಅಂತ ಆವಾಗಿನ ಕಾಲದಲ್ಲಿ ಮಿನಿಸ್ಟರು. ಅವರು ಬಟ್ಟೆ ಅಂಗಡಿ ಇಟ್ಟಿದ್ದರು. ಎಲ್ಲ ಮಕ್ಕಳನ್ನೂ ಅಲ್ಲಿಗೇ ಕರೆದುಕೊಂಡು ಹೋಗಿ ಡ್ರೆಸ್ ತಂದುಬಿಡುತ್ತಿದ್ದರು. ಎಲ್ಲ ಅವರವರ ಇಷ್ಟದ್ದು!

ನಿಮಗೂ ಬಟ್ಟೆ ತರುತ್ತಿದ್ದರಾ?

ನಾನಂತೂ ಅವರ ಕೈಲಿ ತರಿಸಲೇ ಇಲ್ಲ. ನಾನೂ ಒಂದು ಅಂಗಡಿಗೂ ಹೋದವಳಲ್ಲ. ಅದು ಹೇಗೆ ಬರುತ್ತಿತ್ತೋ ನನಗೆ ಸೀರೆ!? ನನಗೆ ಮರೆತೇ ಹೋಗಿದೆ. ವರ್ಷಕ್ಕೆ ಎರಡು ಮೂರು ಸಾರಿ ಬಟ್ಟೆ ತರುವುದು ಅಷ್ಟೆ, ಹಬ್ಬಗಳ ಸಮಯದಲ್ಲಿ.

ಅವರ ಪ್ರಪಂಚವೇ ಬೇರೆ

ಸಾಹೇಬರ ಬಗ್ಗೆ ಏನೇನು ಬರೆಯಬೇಕು ಅಂತ ಅನ್ನಿಸುತ್ತೆ ನಿಮಗೆ?

ಜನಗಳಿಗೆ ಸಹಾಯ ಮಾಡಿರೋದು ಬರೆಯಬೇಕು. ಕಷ್ಟ ಅಂತ ಬಂದವರು ಯಾರೇ ಆದರೂ ಅವರನ್ನ ಬರೀ ಕೈಯಲ್ಲಿ ಕಳುಹಿಸುತ್ತಿರಲಿಲ್ಲ. ಕೆಲಸಕ್ಕೆ, ವರ್ಗಾವಣೆಗೆ

ಅಂತ ಬೇಕಾದಷ್ಟು ಜನ ದಿನಾ ಬರುತ್ತಿದ್ದರು. ಅವರೆಲ್ಲರಿಗೂ ಸಹಾಯ ಮಾಡುತ್ತಿದ್ದರು. ಅದೆಲ್ಲ ಬರೆಯಬಹುದು. ಇವರು ಫೋನು ಮಾಡಿದರು ಅಂದರೆ ಸರಿ ಜನಗಳು ಹೋಗಿ ಆರ್ಡರ್ ತೆಗೆದುಕೊಂಡುಬಿಡೋರು. "ಬರೀ ಕೆಲಸ ಕೊಡಿಸೋದೆ ಕೆಲಸ ಇವರಿಗೆ!" (ಬಾಯಿತುಂಬಾ ನಕ್ಕರು. ನಗುತ್ತಲೇ ಕಣ್ಣೀರು ಒರೆಸಿಕೊಂಡರು). ಜಮಾನದ ದಿನಗಳ ನೆನಪು ಒಮ್ಮೆಯೇ ಬಂದಂತಾಯ್ತು!

"ವಿಧಾನಸೌಧಕ್ಕೆ ಹೋಗೋದು, ಒಂದಿಷ್ಟು ಫೈಲ್‌ಗಳನ್ನು ಹೊತ್ತುಕೊಂಡು ಬರೋದು, ಇಲ್ಲಿ ಆಫೀಸ್ ರೂಮಿನಲ್ಲಿ ಕೂತು ನೋಡೋದು. ಬೆಳಗಿನ ಹೊತ್ತು ಆ ಜವಾನರು ಆ ಫೈಲಿನ ಡಬ್ಬ ಎತ್ತಿಕೊಂಡು ಬರೋದು ಹೋಗೋದು! ಒಮ್ಮೊಮ್ಮೆ ಮಧ್ಯಾಹ್ನದ ಹೊತ್ತು ಊಟಕ್ಕೆ ಬರೋರು. ಜನಗಳೂ ಕೆಲವರು ಇಲ್ಲಿಗೇ ಬರೋರು. ಸಾಯಂಕಾಲದ ಹೊತ್ತು. ದೇವೇಗೌಡರು, ಕೊಂಡಜ್ಜಿ ಮೋಹನ್ ಅವರ ಅಪ್ಪ ಕೊಂಡಜ್ಜಿ ಬಸಪ್ಪ ಅವರೆಲ್ಲ ಸಾಯಂಕಾಲದ ಹೊತ್ತೇ ಬರೋರು. ಹೆಚ್.ಕೆ. ಪಾಟೀಲ್ ಅವರ ಅಪ್ಪ ಕೆ.ಹೆಚ್. ಪಾಟೀಲ್ ಅವರು ವಾರಕ್ಕೊಮ್ಮೆ, ಎರಡು ವಾರಕ್ಕೊಮ್ಮೆ ಬಂದು ಮಾತಾಡಿಕೊಂಡು ಹೋಗೋರು. ವೇರ್ ಹೌಸ್ ಕಾರ್ಪೋರೇಷನ್‌ನಲ್ಲಿದ್ದಾಗಲೂ ಧಾರವಾಡ, ಗುಲ್ಬರ್ಗದ ಕಡೆ ಎಲ್ಲ ಸಾಕಷ್ಟು ಸಹಾಯ ಮಾಡಿದ್ದಾರೆ. ಅವರು ಇದ್ದಷ್ಟು ದಿನವೂ ಜನಗಳಿಗೆ ಬಹಳ ಸಹಾಯ ಮಾಡಿದ್ದಾರೆ. ಆವಾಗ ಎಲ್ಲಿಗೆ ಹೋದರೂ ಇವರದ್ದೇ ಸುದ್ದಿ ಜನಗಳಿಗೆ. ಈಗಲೂ ಕೂಡ ಹಾಗೆ! 'ಅಯ್ಯೋ ಆ ಪುಣ್ಯಾತ್ಮ ಕೊಟ್ಟ ಕೆಲಸ' ಅಂತ ಹೇಳೋರು".

"'ಕೆಲಸ ಕೊಡಿಸಿ ಸ್ವಾಮಿ' ಅಂತ ಹಳ್ಳಿಯವರು ಬಂದರೆ ಒಂದು ಹೊತ್ತು ಊಟ ಹಾಕಿಯೇ ಕಳಿಸುತ್ತಿದ್ದರು. ಯಾರೇ ಬಂದರೂ ಕಾಫಿ, ಟಿ ಕುಡಿಸದೆ ಹಾಗೇ ಕಳಿಸುತ್ತಿರಲಿಲ್ಲ. ಆರಿನ್ ಅಂತ ಒಬ್ಬ ಇದ್ದ. ಅವನಿಗೆ ಬಂದವರಿಗೆಲ್ಲ ಕಾಫಿ, ಟಿ ಸರಬರಾಜು ಮಾಡುವುದೇ ಕೆಲಸ! ಬನ್ನೂರು ಸೋಮನಾಥಪುರದ ಕಡೆಯ ಗೌಡರುಗಳು ಎಲ್ಲಾ ಬರೋರು. ವೇರ್‌ಹೌಸಿನಲ್ಲಿದ್ದಾಗ ಆ ಗೌಡರ ಕಡೆಯವರಿಗೆ ಕೆಲಸ ಕೊಡಿಸಿದ್ದಾರೆ. ಉಳಿದ ವಿವರವಾದ ಸಂಗತಿ ನನಗೆ ಗೊತ್ತಿಲ್ಲ. ಯಾಕೆಂದರೆ ಮನೆ, ಮಕ್ಕಳು ನೋಡಿಕೊಂಡು ಇದ್ದೆ. ಹೊರಗಡೆ ಪ್ರಪಂಚ ಏನು ಅಂತ ನನಗೆ ಜಾಸ್ತಿ ಗೊತ್ತೇ ಇರಲಿಲ್ಲ ಆವಾಗ".

"ಇವನು – ಗುರು ಎಸ್.ಎಸ್.ಎಲ್.ಸಿಗೆ ಹೋಗಿದ್ದನೋ ಇಲ್ಲವೋ; ಇಲ್ಲ ಒಂಬತ್ತನೇ ಕ್ಲಾಸು ಅವರಪ್ಪ ತೀರಿಕೊಳ್ಳುವಾಗ. ಈ ಹುಡುಗರಿಗೆ ಎಷ್ಟೋ ಸಲ ಅವರೇ ಕೂರಿಸಿಕೊಂಡು ಓದಿಸುತ್ತಿದ್ದರು. ಆದರೂ ಎದ್ದುಬಿಡೋರು ಇವರೆಲ್ಲ ಮಧ್ಯದಲ್ಲೇ. ಹೋಗಪ್ಪಾ ಅಂತ. ಅಪ್ಪನ ಮಾತು ಕೇಳುತ್ತಲೇ ಇರಲಿಲ್ಲ. ವಿಜಯನಿಗೆ ಯಾವಾಗಲೂ ಕ್ರಿಕೆಟ್ಟು. ಸಂಪತ್ ಮಾತ್ರ ಸ್ವಲ್ಪ ದೊಡ್ಡವನು. ಸ್ವಲ್ಪ ಅಪ್ಪ ಅಂತ ಭಯ ಇತ್ತು. ಇವರೆಲ್ಲ

ಏನೂ ಕೇಳುತ್ತಲೇ ಇರಲಿಲ್ಲ. ಹೆಣ್ಣುಮಕ್ಕಳು ಮಾತ್ರ ತಮ್ಮಪಾಡಿಗೆ ತಾವು ಓದಿಕೊಳ್ಳುತಿದ್ದರು. ಅವರು ಎಲ್ಲರೂ ಗ್ರಾಜುಯೇಟ್‌ಗಳಾದರು".

ಆಫೀಸ್‌ನಿಂದ ಬರೋವಾಗ ಸಾಮಾನ್ಯವಾಗಿ ನಿಮಗೆ ಏನಾದರೂ ತರುತ್ತಿದ್ದರಾ?

ಹೌದು. ಹೂವುಗೀವು ಏನಾದರೂ ತರುತ್ತಿದ್ದರು. ಹೂವು ಅಂದರೆ ಬಹಳ ಇಷ್ಟ ಅವರಿಗೆ.

ದೊಡ್ಡ ಸಾಹೇಬರನ್ನ ಮದುವೆ ಆದಿರಿ ಅಂತ ನಿಮ್ಮ ತಂದೆತಾಯಿಗಳಿಗೆ ಖುಷಿ ಇತ್ತಾ?

ಅಪ್ಪನಿಗೆ ಖುಷಿ ಇತ್ತು. ಮೊದಲು ಅಪ್ಪನಿಗೆ ಇಷ್ಟ ಇರಲಿಲ್ಲ. ಅಜ್ಜಿ ಮತ್ತು ತಾತ ಅವರು ಮುಂದೆ ನಿಂತು ಮದುವೆ ಮಾಡಿಸಿದವರು. ಆಮೇಲೆ ಒಂದೆರಡು ವರ್ಷ ಆದಮೇಲೆ ಅವರಿಗೆ ಖುಷಿ ಸಮಾಧಾನ ಎಲ್ಲ ಆಯಿತು. ನಮ್ಮ ಜೊತೇಲಿ ಮೈದುನಂದಿರೂ ಇದ್ದರು. ದೊಡ್ಡ ಮನೆ. ಮೂರು ತಮ್ಮಂದಿರನ್ನೂ ಇವರ ಜೊತೇಲೇ ಇಟ್ಟುಕೊಂಡು ಓದಿಸಿದರು.

ಒಡವೆ ಎಲ್ಲ ತಂದುಕೊಡುತ್ತಿದ್ದರಾ ನಿಮಗೆ?

ಒಂದೆರಡು ಬಳೆ, ಮದುವೇಲಿ ಮಾಡಿಸಿದ್ದು. ಹೀಗೆ ಎಷ್ಟು ಬೇಕೋ ಅಷ್ಟೆ. ಆವಾಗೆಲ್ಲ ನಮಗೆ ಒಡವೆಗಳ ಬಗ್ಗೆ ಅಷ್ಟೊಂದು ಆಸೆಯೂ ಇರಲಿಲ್ಲ. ಈ ಕಾಲದಲ್ಲಪ್ಪ ಒಡವೆ ಚಿನ್ನ ಎಲ್ಲ.! ಆವಾಗ ಸರ್ಕಾರದ ಅಧಿಕಾರದ ಒಂದು ಸಂತೋಷ ಅಷ್ಟೆ. ಇನ್ನೇನೂ ಇರಲಿಲ್ಲ ಆವಾಗ. (ಸಂತೃಪ್ತಿಯ ನಗೆ ಚೆಲ್ಲಿದರು. ಆ ನಗುವಿನಲ್ಲಿ ನಿಜಕ್ಕೂ ನೆಮ್ಮದಿ ಇತ್ತು.) ಊರಲ್ಲಿ ಭತ್ತ ಬೆಳೆಯುತ್ತಿದ್ದರು. ಅವರ ಜಮೀನಿತ್ತಲ್ಲ ಅಲ್ಲಿ. ಅಲ್ಲಿಂದ ತರಿಸಿದ ಅಕ್ಕಿ ಊಟ ತುಂಬಾ ಇಷ್ಟ ಅವರಿಗೆ. ಇವತ್ತಿನವರೆಗೂ ನಾವು ಅಲ್ಲಿಂದಲೇ ಅಕ್ಕಿ ತರಿಸಿ ಊಟ ಮಾಡುವುದು. ಆ ಗದ್ದೆಯ ಭತ್ತವೇ ಚಿತ್ರದುರ್ಗಕ್ಕೂ ಬರುತ್ತಿತ್ತು. ಅಲ್ಲೂ ಅದರದ್ದೇ ಅಕ್ಕಿ ನಾವು ಊಟ ಮಾಡುತ್ತಿದ್ದಿದ್ದು. ಅಲ್ಲಿದ್ದಾಗಲೇ ಇಬ್ಬರು ತಮ್ಮಂದಿರನ್ನು ಮದುವೆ ಮಾಡಿದರು. ಆವಾಗೇನು ದಿನಸಿ, ಇತರೆ ಸಾಮಾನು ಎಲ್ಲದಕ್ಕೂ ಬೆಲೆ ಕಡಿಮೆ ಇತ್ತು. ಮೂರು ಜನರನ್ನೂ ಮನೆ ಮುಂದೆಯೇ ಮದುವೆ ಮಾಡಿದರು. ಸಾಹೇಬರು ತೀರಿಕೊಂಡ ನಂತರ ಎಲ್ಲ ಮದುವೆನೂ ಛತ್ರಗಳಲ್ಲೇ ಮಾಡಿದೆವು. (ಮಾತು ಕೊನೆಯ ದಿನಗಳತ್ತ ಹೋಯಿತು).

ಆ ದಿನ ಅವರು ಚಟುವಟಿಕೆಯಿಂದಲೇ ಇದ್ದರು. ಸಂಕ್ರಾಂತಿ ಹಬ್ಬ ಕಳೆದಿತ್ತು. ಸಹಜವಾಗೇ ಮಕ್ಕಳ ಜೊತೆಯಲ್ಲಿ ಬೆರೆತು ಮಾತಾಡಿಕೊಂಡಿದ್ದರು. ಬೆಳಗಿನ ಜಾವ ನನ್ನನ್ನು ಕೈ ಹಿಡಿದುಕೊಂಡು ಮಕ್ಕಳ ಯೋಗಕ್ಷೇಮವೆಲ್ಲ ವಿಚಾರಿಸಿಕೊಂಡರು. ನಾನು ಪಕ್ಕದಲ್ಲೇ ಇದ್ದೆ. ತನ್ನನ್ನು ಯಾರೋ ಕರೆಯುತ್ತಿದ್ದಾರೆ. ಹೋಗಿಬರುತ್ತೇನೆ ಎಂದೆಲ್ಲಾ ಮಾತಾಡುತ್ತಿದ್ದರು. ಮನೆಯ ಬಳಿಗೆ ಯಾರೋ 'ದೇವಪುರಷನೊಬ್ಬ ಬಂದು ಕಾಯುತ್ತಿದ್ದಾನೆ' ಎಂದರು. ಅವರಿಗೆ ಎದೆ ನೋವು ಕಾಣಿಸಿಕೊಂಡಿತು. ಮಕ್ಕಳನ್ನು ಕೂಗಿ ಎಬ್ಬಿಸಿದೆ. ಡಾಕ್ಟರನ್ನು ಕರೆಸಿದೆವು. ಅಷ್ಟರಲ್ಲಿ ಅವರು ನಮ್ಮ ಬಿಟ್ಟು ಹೋಗಿದ್ದರು. ಆಗ ಬೆಳಗಿನ ಜಾವ 4–30 ರ ಸಮಯವಿರಬೇಕು. ದಿನಾಂಕ 17–01–1974ರಂದು ಅವರು ಈ ಲೋಕದ ಯಾತ್ರೆ ಮುಗಿಸಿದ್ದರು.

ಅವರು ಹೋದ ಸುದ್ದಿ ತಿಳಿದು, ಬೆಳಗಿನ ಹೊತ್ತಿಗೆ ನೂರಾರು ಜನ ಬಂದು ಸೇರಿದರು. ನಮ್ಮ ಮನೆಯ ಮುಂದಿನ ರಸ್ತೆಯಲ್ಲಾ ಬಂದಾಗಿ ಹೋಯ್ತು. ಸಾವಿರಾರು ಜನ ಸಾಗರದಂತೆ ಹರಿದು ಬಂದ್ರು. ದೊಡ್ಡವರು, ಮಕ್ಕಳೆನ್ನದೆ ಜನ ಸಾಗರವೋ ಜನಸಾಗರ! ಈಗಲೂ ಕಣ್ಮುಂದೆ ಬಂದರೆ ವಿಸ್ಮಯವಾಗುತ್ತೆ. ಅಂಥ ಜನಸಾಗರ. ಆ ಜನಸಾಗರದ ನಡುವೆ ಅವರನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಅಂತ್ಯಕ್ರಿಯೆ ನಡೆಸಿದೆವು" ಎಂದು ನಿಟ್ಟುಸಿರು ಬಿಟ್ಟರು. ಜೀವನ ಸಂಗಾತಿಯ ಸುದೀರ್ಘ ಬಾಳಾಟದ ನೂರಾರು ನೆನಪುಗಳು ಬರುತ್ತಲೇ ಇದ್ದವು. ಬಾಳಿನುದ್ದಕ್ಕೂ ಪಡೆದ ತೃಪ್ತಿ, ಜೀವನ ಸಂಗಾತಿಯ ಸಾಧನೆಗಳು, ಮಕ್ಕಳು ಬೆಳದು ದೊಡ್ಡವರಾದದ್ದು, ಎಲ್ಲಾ ಮಕ್ಕಳು ಸಾಕಷ್ಟು ಅನುಕೂಲ ಇರುವರಾಗಿರುವುದು, ಮೊಮ್ಮಕ್ಕಳ ಸಾಧನೆ–ಬೆಳವಣಿಗೆ ಎಲ್ಲವನ್ನು ಕಣ್ತುಂಬಿಕೊಂಡರು. ಇಡೀ ಜೀವಮಾನದ ಏಳು–ಬೀಳುಗಳ ಬಗ್ಗೆ, ಇದುವರೆವಿಗೂ ಬದುಕು ತೂಗಿಸಿಕೊಂಡು ಬಂದಿರುವ ಬಗ್ಗೆ ಏನೋ ಒಂದು ತೃಪ್ತಿ – ಸಮಾಧಾನವಿತ್ತು. ಈ ತೃಪ್ತಿ ಮತ್ತು ಸಮಾಧಾನ ಕಡೆಯವರೆಗೂ ಅವರಿಗೆ ಸಿಗುತ್ತಲೇ ಇರಲಿ ಎಂದು ಮನಸ್ಸಿನಲ್ಲೇ ಹಾರೈಸಿದೆವು. ನಾವು ಮಾಡುತ್ತಿರುವ ಕೆಲಸಗಳ ಬಗ್ಗೆ ಬೆನ್ನು ತಟ್ಟಿದರು. ಅವರ ಮೆಚ್ಚುಗೆಯ ನುಡಿಗಳನ್ನು ಪಡೆದು ನಾವು ಅಲ್ಲಿಂದ ಹೊರಟೆವು. ತನ್ನ ಪತಿಯ ಊರು–ತಾನು ಸೊಸೆಯಾಗಿ ಬಂದ ಮನೆ –ಅಲ್ಲಿನ ಜನ–ಮನ–ಬಂಧು–ಬಾಂಧವರ ನೆನಪಿನಲ್ಲಿ ಆರ್. ಭರಣಯ್ಯನವರ ಬಗ್ಗೆ ಉಳಿದಿರುವ ನೆನಪುಗಳು ದಾಖಲಿಸುವ ಸಲುವಾಗಿ ಅವರ ಊರ ಅಂಗಳದತ್ತ ನಡೆದೆವು.

ಧೀಮಂತ ವ್ಯಕ್ತಿಯ ಪೂರ್ವಾಪರ

ಜೆ. ನಾರಾಯಣ ಸ್ವಾಮಿ, ಸೋಮನಾಥಪುರ

ಭರಣಿ ಚೌಡಯ್ಯ ಕೊಳ್ಳೇಗಾಲ ತಾಲ್ಲೂಕಿನಿಂದ ಸೋಮನಾಥಪುರಕ್ಕೆ ವಲಸೆ ಬಂದವರು. ಇವರು ಭರಣಯ್ಯನವರ ತಾತ. ಇವರಿಗೆ ಆರು ಜನ ಗಂಡು ಮಕ್ಕಳು. ಇಬ್ಬರು ಹೆಣ್ಣುಮಕ್ಕಳು. ಮೊದಲನೆಯವರು ಚೌಡಯ್ಯ, ಎರಡನೆಯವರು ರಂಗಯ್ಯ, ಮೂರನೆಯವರು ಬಿ. ರಾಮಯ್ಯ, ನಾಲ್ಕನೆಯವರು ಬಿ. ಪಾಪಯ್ಯ, ಐದನೆಯವರು ಕೃಷ್ಣಯ್ಯ, ಆರನೆಯವರು ಬಿ. ಪುಟ್ಟರಂಗಯ್ಯ, ಚೌಡಮ್ಮ, ನಂಜಮ್ಮ. ಭರಣಯ್ಯನವರ ತಂದೆಯ ಹೆಸರು ಚಿಕ್ಕರಂಗಯ್ಯ. ಚಿಕ್ಕರಂಗಯ್ಯನವರ ಮೊದಲನೇ ಮಗನೇ ಆರ್. ಭರಣಯ್ಯ. ಎರಡನೆಯವರು ಆರ್. ಜಗನ್ನಾಥಯ್ಯ, ಮೂರನೆಯವರು ಆರ್. ಲಕ್ಷ್ಮಣಸ್ವಾಮಿ. ನಾಲ್ಕನೆಯವರು ಆರ್. ಚಲುವಯ್ಯ, ಐದನೆಯವರು ಆರ್. ರಂಗಸ್ವಾಮಿ, ಆರನೆಯವರು ಆರ್. ಶ್ರೀನಿವಾಸ್. ಹೀಗೆ ಅವರ ಕುಟುಂಬದ ವಂಶವೃಕ್ಷ ಪರಿಚಯಿಸಿದವರು ಆರ್. ಭರಣಯ್ಯನವರ ತಮ್ಮ ಆರ್. ಜಗನ್ನಾಥಯ್ಯ ಅವರ ಪುತ್ರ ಜೆ. ನಾರಾಯಣಸ್ವಾಮಿ. ನಮ್ಮ ದೊಡ್ಡಪ್ಪ ಆರ್. ಭರಣಯ್ಯನವರ ಖಾಸಗಿ ಬದುಕಿನ ಕೆಲವು ವಿವರಗಳನ್ನು ನಾರಾಯಣಸ್ವಾಮಿ ಹೇಳಿದ್ದು ಹೀಗೆ:

“ತಂದೆಯ ಪರಿಶ್ರಮದಿಂದ ಭರಣಯ್ಯ ಮತ್ತು ಸಹೋದರರು ಉನ್ನತ ವಿದ್ಯಾಭ್ಯಾಸ ಮಾಡಿದರು. ಮೈಸೂರು ರಾಜ್ಯದಲ್ಲಿ ಉನ್ನತ ಮಟ್ಟದ ವಿದ್ಯಾಭ್ಯಾಸ ಮಾಡಿದ ದಲಿತರಲ್ಲಿ ಇವರೇ ಮೊದಲಿಗರು. ಅದಕ್ಕೆಂದೇ ಮೈಸೂರಿನ ಮಹಾರಾಜರು ಪದಕ ನೀಡಿ ಗೌರವಿಸಿದ್ದರಂತೆ. ಅದರಂತೆ ಭರಣಯ್ಯ ಆಗಿನ ಕಾಲಕ್ಕೆ ವಿವಿಧ ಸರ್ಕಾರಿ ಹುದ್ದೆಗಳಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಜನಾನುರಾಗಿಯಾದರು. ಅವರ ಅಪಾರ ಸೇವೆ ಕರ್ತವ್ಯ ನಿಷ್ಠೆಯಿಂದ ಸರ್ಕಾರದಿಂದ ಬಡ್ತಿ ಪಡೆದು ಐ.ಎ.ಎಸ್. ಅಧಿಕಾರಿಯೂ ಆದರು”.

ತಾಯಿ ಮತ್ತು ತವರಿನ ಬಗ್ಗೆ ಎಲ್ಲರಿಗೂ ಮೋಹ ಇರುವಂತದ್ದೇ. ಇದು ಭರಣಯ್ಯನವರಿಗೂ ಇತ್ತು. ತಾವು ಕೆಲಸದಲ್ಲಿದ್ದಾಗ ಬೆಂಗಳೂರಿನಲ್ಲಿ ಮನೆ ಮಾಡಿದ್ದರೂ, ತಮ್ಮ ಹುಟ್ಟೂರಿನ ಮೋಹ ತೊರೆದಿರಲಿಲ್ಲ. ಅವನು ಯಾರೆ ಆಗಿರಲಿ, ಎಲ್ಲೇ ಇರಲಿ, ಅವನ ಅಭಿವೃದ್ಧಿಯ ರೆಂಬೆಕೊಂಬೆಗಳು ಎಲ್ಲೇ ಚಾಚಿಕೊಂಡಿರಲಿ, ಆತನ ಮೂಲಬೇರು ತನ್ನ ತಾಯ್ನೆಲ ಅಂದರೆ ತನ್ನ ಹುಟ್ಟೂರಿನಲ್ಲಿ ಇರಬೇಕು, ಇರುತ್ತದೆ. ರಾಷ್ಟ್ರಕವಿ ಕುವೆಂಪು ಕೂಡ ತಮ್ಮ ಬದುಕಿನ ಬಹುಪಾಲು ದಿನಗಳನ್ನು ಮೈಸೂರಿನಲ್ಲಿಯೇ ಕಳೆದರು. ಈ ಊರಿನ ಸ್ಫೂರ್ತಿಯಿಂದ ಅವರು ಬರೆದ ಸಾಹಿತ್ಯ ಅನನ್ಯ. ಅದರೆ ತಮ್ಮ ಕೊನೆಯ ದಿನದಲ್ಲಿ ಅವರು ಬಯಸಿ ಮಣ್ಣಾದದ್ದು ತಮ್ಮ ಮೂಲ ಸ್ಥಳ ಮಲೆನಾಡಿನಲ್ಲಿ.

ಇಂತಹ ಮೋಹವನ್ನೇ ಹೊಂದಿದ್ದ ಭರಣಯ್ಯನವರು ಸಹ ಸೋಮನಾಥಪುರಕ್ಕೆ ತಮ್ಮ ನಿಷ್ಠೆ ಮೆರೆದರು. 'ಹುಟ್ಟೂರು ಅಂದ್ರೆ ಸುಮ್ನೆನಾ' ಎಂದೇ ಬಾಳಿನುದ್ದಕ್ಕೂ ಪ್ರೀತಿ ತೋರಿದರು.

ಸಾಮಾನ್ಯವಾಗಿ ದಲಿತ ಕುಟುಂಬಗಳಲ್ಲಿ ಆಗಿನ ಕಾಲಕ್ಕೆ ಹೆಚ್ಚಿನ ವಿದ್ಯಾಭ್ಯಾಸವನ್ನು ಯಾರೂ ಮಾಡುತ್ತಿರಲಿಲ್ಲ. ಐದಾರು ಮಕ್ಕಳಿದ್ದರಂತೂ ಸಂಸಾರದ ಭಾರಕ್ಕೆ ಹೆಗಲು ಕೊಡುತ್ತಾ, ದುಡಿಯುತ್ತಾ, ಕೂಲಿನಾಲಿ ಮಾಡಿ ಜೀವನ ಮಾಡುತ್ತಿದ್ದರು. ಇಂಥ ಪರಿಸರದಲ್ಲಿ ಭರಣಯ್ಯನವರ ತಂದೆ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಿದರು. ಭರಣಯ್ಯನವರನ್ನು ಉತ್ತಮ ವ್ಯಕ್ತಿಯಾಗಲು ಇಂತಹ ಕೌಟುಂಬಿಕ ಸಂಗತಿಗಳೇ ಪ್ರೇರಣೆಯಾಗಿತ್ತು.

"ಭರಣಯ್ಯನವರ ತಂದೆಗೆ ಸೋಮನಾಥಪುರದಲ್ಲಿ 25 ಎಕರೆ ಜಮೀನಿತ್ತು. ಈಗಲೂ ಸ್ವಲ್ಪ ಇದೆ. ತಂದೆ ಕಟ್ಟಿಸಿದ ಹಳೆಯ ತೊಟ್ಟಿಮನೆ ಈಗಲೂ ಇದೆ. ಅಣ್ಣ ತಮ್ಮಂದಿರ ಮಧ್ಯೆ ಒಂದು ದಿನವೂ ವಿರಸ, ಕಲಹ ತಲೆಹಾಕಲಿಲ್ಲ. ಎಲ್ಲರನ್ನು ಪ್ರೀತಿಯಿಂದ 'ಬಾರೋ ತಮ್ಮ' ಎಂದೇ ಕರೆಯುತ್ತಿದ್ದರು. ತುಂಬ ಶ್ರದ್ಧೆ, ಆಸಕ್ತಿಗಳಿಂದ ಓದಿದ ಭರಣಯ್ಯನವರಿಗೆ ತಾನು ಮತ್ತು ತನ್ನವರ ಸ್ಥಿತಿಗತಿಯ ಅರಿವಿತ್ತು. ಅದಕ್ಕಾಗಿ ಅವರು ಬಡವರ ಬಗ್ಗೆ ಸದಾ ನೆರವು ನೀಡುತ್ತಾ ಬರುತ್ತಿದ್ದರು. ಹೀಗಾಗಿಯೇ ಅವರು ಬೆಂಗಳೂರಿನಿಂದ ಬರುವ ವಿಷಯ ತಿಳಿದರೆ ಎರಡು ದಿನ ಮೊದಲೇ ಜನ ಅವರ ಸೋಮನಾಥಪುರದ ಮನೆಯ ಬಳಿ ಜಮಾಯಿಸುತ್ತಿದ್ದರು. ಅವನು ಬಡವನಾಗಿರಲಿ ಶ್ರೀಮಂತ, ಪಟೇಲ, ಕೂಲಿ, ಯಾರೇ ಆಗಿರಲಿ ಅವರನ್ನು ಸಮಾನತೆಯಿಂದ ಕಾಣುತ್ತಿದ್ದರು. ಸದಾ ನಗುಮುಖದ ಹಸನ್ಮುಖಿ".

ಭರಣಯ್ಯನವರ ಹೆಸರಿನ ಶ್ರೀರಕ್ಷೆಯೆ ಇಂದಿನವರೆಗೂ ನಮ್ಮ ಕುಟುಂಬವನ್ನು ಕಾಯ್ದುಕೊಂಡು ಬಂದಿದೆ. ಇಂದಿನವರೆಗೂ ಬೇರೆ ಜನಾಂಗದವರು ನಮ್ಮ ಕುಟುಂಬಕ್ಕೆ ಕೆಟ್ಟದ್ದು ಬಯಸಿಲ್ಲ, ಕುಟುಂಬದ ಮನೆಮಂದಿಯ ಜೊತೆ ಭರಣಯ್ಯ ಅಕ್ಕರೆಯ ಅಣ್ಣ, ಬಂಧು, ಮಾರ್ಗದರ್ಶಿ, ಯಜಮಾನನಾಗಿ ಬದುಕಿದರು. ತಮ್ಮಂದಿರ ಜೊತೆಯಲ್ಲಿ ಹೆಚ್ಚು ಮಾತನಾಡದಿದ್ದರೂ, ಮನಸ್ಸಿನಲ್ಲಿ, ಭಾವನೆಯಲ್ಲಿ ಮಿಗಿಲಾದ ಪ್ರೀತಿಯಿತ್ತು. ಕೌಟುಂಬಿಕ ಕಲಹ ಎಂದೂ ಹತ್ತಿರ ಸುಳಿಯಲಿಲ್ಲ. ಅವರ ಪತ್ನಿಯೂ ಸಹ ಅಣ್ಣ ತಮ್ಮಂದಿರ ಸಾಮರಸ್ಯಕ್ಕೆ ಒತ್ತಾಸೆ ಕೊಡುತ್ತಿದ್ದರು. ಹಣಕಾಸಿನ ವಿಚಾರದಲ್ಲಿ ಸೂಜಿ ಮೊನೆಯಷ್ಟು ವೈಮನಸ್ಸು ಮನೆಯೊಳಗೆ ಅಣ್ಣತಮ್ಮರಲ್ಲಿ ಬರುತ್ತಿರಲಿಲ್ಲ. ಅವರ ಮಾರ್ಗದರ್ಶನದಲ್ಲಿ ಸುಖೀ ಸಂಸಾರ ನಡೆಯುತ್ತಿತ್ತು. ಶುದ್ಧ ಹಸ್ತರು. ತಂದೆಯ ಸ್ಥಾನದಲ್ಲಿ ನಿಂತು ಎಲ್ಲರ ಸಲುಹಿದ್ದು ಭರಣಯ್ಯ. ಎಲ್ಲರಿಗೂ ಕೆಲಸ ಕೊಡಿಸಿ, ಮದುವೆ

ಮಾಡಿಸಿ ಅವರವರ ಜೀವನ ಭದ್ರಪಡಿಸಿದರು ಎಂಬುದು ನಾರಾಯಣ ಸ್ವಾಮಿಯವರ ಇನ್ನೊಂದು ಅಭಿಮಾನದ ಮಾತು. ನಾರಾಯಣ ಸ್ವಾಮಿಯವರು ಹಂಚಿಕೊಂಡ ಮತ್ತೊಂದು ನೆನಪು "ಆರ್. ಭರಣಯ್ಯನವರು ತಮ್ಮ ಮೊದಲನೆ ಸೋದರ ಜಗನ್ನಾಥಯ್ಯನಿಗೆ ತಂದೆ ಮಾಡಿದ್ದ ಜಮೀನು ನೋಡಿಕೊಂಡು ಉತ್ತು ಬಿತ್ತು ಬೆಳೆಯುವ ಕೃಷಿ ಕಾಯಕಕ್ಕಾಗಿ ಊರಿನಲ್ಲೇ ನೆಲೆಗೊಳಿಸಿದರು. ಎರಡನೇ ತಮ್ಮ ಲಕ್ಷ್ಮಣಸ್ವಾಮಿ ಬೆಂಗಳೂರು ವಿಧಾನಸೌಧದಲ್ಲಿ ಅಧೀನ ಕಾರ್ಯದರ್ಶಿ. ಮೂರನೇ ತಮ್ಮ ಚಲುವಯ್ಯ ಪಶುವೈದ್ಯ, ನಾಲ್ಕನೇ ತಮ್ಮ ರಂಗಸ್ವಾಮಿ ಎಲ್.ಐ.ಸಿ.ಯಲ್ಲಿ ಮ್ಯಾನೇಜರ್. ಐದನೇ ತಮ್ಮ ಶ್ರೀನಿವಾಸ್ ಕಾರ್ಮಿಕ ಭವಿಷ್ಯ ನಿಧಿ ನಿಗಮದಲ್ಲಿ ಮ್ಯಾನೇಜರ್ ಆಗಿ ಅಣ್ಣನ ಮಾರ್ಗದರ್ಶನದಲ್ಲಿ ಕುಟುಂಬದ ಬಂಧುಗಳು ಮುನ್ನಡೆದವರೇ".

"ಭರಣಯ್ಯನವರ ತಮ್ಮ ಜಗನ್ನಾಥಯ್ಯ ಕೂಡ ಶ್ರಮಜೀವಿ. ನಿಷ್ಠಾವಂತ ಕುಟುಂಬ ಜೀವಿ. ತಾವೊಬ್ಬರೆ ಸಂಸಾರದ ನೊಗಹೊತ್ತು, ಬೇಸಾಯಮಾಡಿ ನಾಲ್ಕು ಜನ ತಮ್ಮಂದಿರನ್ನು ಅಣ್ಣನ ಮಾರ್ಗದರ್ಶನದಲ್ಲಿ ಓದಿಸಿದರು. ಬೇಸಾಯದ ನೇತೃತ್ವ ವಹಿಸಿಕೊಂಡು ಉತ್ತು ಬಿತ್ತು ಬೆಳೆದರು. ಕೃಷಿ ನಂಬಿ ನೆಮ್ಮದಿಯ ಜೀವನ ಮುನ್ನಡೆಸಿದವರು. ಅಣ್ಣ ತಮ್ಮಂದಿರು ಮನೆಯಲ್ಲಿರುವಾಗ ಸಾಮಾನ್ಯವಾಗಿ ಬೇರೆಯವರು ಬರುತ್ತಿರಲಿಲ್ಲ. ಇವರೂ ಕೂಡ ತಮ್ಮ ಸಂಸಾರದ ವಿಚಾರವನ್ನು ಬೇರೆಯವರಿಗೆ ಬಿಟ್ಟುಕೊಡುತ್ತಿರಲಿಲ್ಲ. ಮನೆಮಾತನ್ನು ಮನೆಮಾತಾಗೇ ಉಳಿಸಿಕೊಂಡು ಎಲ್ಲರೂ ಅನ್ಯೋನ್ಯವಾಗಿರುವಂತೆ ಬದುಕಲು ತಿಳಿಹೇಳುತ್ತಿದ್ದರು. ಇದು ಊರಿಗೆ ಅಭಿಮಾನದ ವಿಷಯವಾಗಿತ್ತು. ನೆರೆಹೊರೆ ಮನೆಗಳಲ್ಲಿ ಮಾತುಕತೆ ನಡೆದರೆ ಜಗಳ-ಜೂಟಿ ಆದರೆ ಭರಣಯ್ಯನವರ ಕುಟುಂಬನ ನೋಡಿ ಕಲಿಯಿರಿ, ಅವರಂತೆ ಬಾಳಿ ಬದುಕಿ ಎಂಬ ಮಾತುಗಳೇ ಆಗ ಚಾಲ್ತಿಯಲ್ಲಿದ್ದವು. ಊರಿನಿಂದ ಯಾರಾದರೂ ಭರಣಯ್ಯನವರಿಗೆ ತರಕಾರಿ ಹಣ್ಣು ತಂದರೆ, ಅದು ಅವರು ಬೆಳೆದದ್ದು ಆಗಿದ್ದರೆ ತೆಗೆದುಕೊಳ್ಳುತ್ತಿದ್ದರು. ಕೊಂಡು ತಂದಿದ್ದರೆ ಅವರಿಗೆ ಬೈಯುತ್ತಿದ್ದರು. ಇಂತಹ ಗುಣಗಳೇ ಅವರನ್ನು ಜನರಿಗೆ ಹತ್ತಿರವಾಗಿಸಿದ್ದವು".

"ಭರಣಯ್ಯ ಜಾತ್ಯಾತೀತ ವ್ಯಕ್ತಿತ್ವವುಳ್ಳವರು. ಹೀಗಾಗಿ ಜಾತಿ-ಮತ ಲೆಕ್ಕಿಸದೇ ಕಷ್ಟವೆಂದು ಬಂದವರಿಗೆ ನೆರವಾಗುತ್ತಿದ್ದರು. ಉದ್ಯೋಗ ಕೊಡುತ್ತಿದ್ದರು. ಇಲ್ಲವೇ ಕೊಡಿಸುತ್ತಿದ್ದರು. ಚಾಮರಾಜನಗರ, ಹೆಚ್.ಡಿ. ಕೋಟೆ, ನಂಜನಗೂಡು, ಶಿವಮೊಗ್ಗ, ಚಿತ್ರದುರ್ಗ, ಕೊಳ್ಳೇಗಾಲ ಮುಂತಾದ ಕಡೆ ಅವರಿಂದ ಕೆಲಸ ಪಡೆದುಕೊಂಡವರು ಈಗಲೂ ಅವರ ಹೆಸರಿನಿಂದ ಬದುಕುತ್ತಿದ್ದಾರೆ. ಯಾರಿಂದಲೂ ಒಂದು ಪೈಸೆ ಮುಟ್ಟಿದವರಲ್ಲ. ತಾವೇ ಕರೆದು, ಅವರ ಕಷ್ಟ ವಿಚಾರಿಸಿ ಹಣ ಕೊಡುತ್ತಿದ್ದರು. ಜನಾಂಗಕ್ಕೆ

ಇವರು ಅಕ್ಷರಶಃ ಎರಡನೇ ಅಂಬೇಡ್ಕರ್ ಆಗಿ ಅವತರಿಸಿದ್ದರು. ಉತ್ಪ್ರೇಕ್ಷೆಯೆನಿಸಿದರೂ ಜನ ಕರೆಯುತ್ತಿದ್ದುದು ಹೀಗೆಯೇ. ಆದರೆ ಇಂದು ಕೆಲವರು ಅವರನ್ನು ನೆನೆಸುತ್ತಿದ್ದಾರೆ ಎಂದರೆ ಅದು ಕಾಲದ ಪುಣ್ಯ". ಮತ್ತೊಂದು ಪ್ರಮುಖ ಅಂಶವನ್ನು ನಾರಾಯಣಸ್ವಾಮಿ ತಿಳಿಸಿದ್ದು ಇದು; "ಭರಣಯ್ಯ ದಲಿತ ಜನಾಂಗದಲ್ಲಿ ಹುಟ್ಟಿದರೂ ಸಂಸ್ಕೃತದಲ್ಲಿ ವಿದ್ವಾಂಸರಾಗಿದ್ದರು. ಕೊಳ್ಳೇಗಾಲದಲ್ಲಿ ಮೈಸೂರು ಮಹಾರಾಜರು 'ಹಿಂದೂ ಸಂಸ್ಕೃತಿ' ಸಮ್ಮೇಳನ ನಡೆಸಿದ್ದಾಗ ಅದರಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದುಕೊಂಡಿದ್ದರು".

"ನಮ್ಮ ದೊಡ್ಡಪ್ಪ ತುಂಬ ಮೃದು ಸ್ವಭಾವದವರು. ಜೇಬಿನಲ್ಲಿ ಯಾವಾಗಲು ದುಡ್ಡು ಇಟ್ಟುಕೊಳ್ಳುತ್ತಿರಲಿಲ್ಲ. ಯಾರಿಗಾದರೂ ದುಡ್ಡುಕೊಡಬೇಕಾಗಿ ಬಂದಾಗ ತಮ್ಮ ಕಾರಿನ ಚಾಲಕ ದಂಡಪಾಣಿ ಬಳಿ ಹೋಗಿ "ದಂಡಪಾಣಿ ಅವರಿಗೆ ನೂರು ರೂಪಾಯಿ ಇದ್ರೆ ಕೊಡು. ನಿನಗೆ ಬೆಂಗಳೂರಿಗೆ ಹೋದಾಗ ಕೊಡುತ್ತೇನೆ" ಎಂದು ಹೇಳುತ್ತಿದ್ದರಂತೆ. ಇವರಿಂದ ಉದ್ಯೋಗ ಬಯಸಿ ಬೆಂಗಳೂರಿಗೆ ಹೋದವರಿಗೆ ಇವರು ಮೊದಲು ಕೇಳುತ್ತಿದ್ದುದು ಊಟ ಮಾಡಿದ್ದೀಯಪ್ಪ..? ಎಂದು. ಊಟಕ್ಕೆ ದುಡ್ಡಿಲ್ಲದಿದ್ದರೆ ಅವರೇ ಕೊಟ್ಟು ಕಳುಹಿಸುತ್ತಿದ್ದರು. ಆನಂತರ ಮುಂದಿನ ಕೆಲಸ". "ಪಾಪ, ನನ್ನನ್ನು ನೋಡಲಿಕ್ಕೆ ಅಷ್ಟು ದೂರದಿಂದ ಬಸ್ ಚಾರ್ಜ್ ಖರ್ಚು ಮಾಡಿಕೊಂಡು ಬಂದಿದ್ದಾರೆ. ಊಟಮಾಡಿದ್ದಾರೋ ಇಲ್ಲವೋ.. ನನ್ನನ್ನು ನೋಡಲು ಬರುವುದಕ್ಕಾಗಿ ತಮ್ಮವರ ಕೆಲಸಕ್ಕಾಗಿ ಅದ್ಯಾವ ಒಡವೆ ಗಿರಿವಿ ಇಟ್ಟು ಬಂದಿದ್ದಾರೋ.." ಎಂದು ಆಪ್ತರ ಬಳಿ ಹೇಳಿಕೊಳ್ಳುತ್ತಿದ್ದರು. ಅವರ ಶ್ರೀಮತಿ ಮನೆಗೆ ಬಂದವರು ಹಣ್ಣು ಹಂಪಲು ತಂದರೆ.. "ಏನ್ರೀ.. ಇವರು ಹಣ್ಣು ತಂದಿದ್ದಾರೆ.., ಇದೆಲ್ಲಾ ಯಾಕೆ.." ಎಂದು ಬೇಸರಿಸುತ್ತಿದ್ದರು. ಬಂದವರಿಗೆ ವಾಪಸ್ಸು ನೀಡುತ್ತಾ ತಿಳುವಳಿಕೆ ಹೇಳುತ್ತಿದ್ದರು. ಕೆಲವೊಮ್ಮೆ ಒತ್ತಾಯಕ್ಕೆ ಮಣಿದು ಉಭಯ ಸಂಕಟ ಅನುಭವಿಸುತ್ತಿದ್ದರು. ಕುಟುಂಬದಲ್ಲಿ ದುಂದುವೆಚ್ಚ ಮಾಡಲಿಲ್ಲ". ಇವಿಷ್ಟು ಉದಾಹರಣೆಗಳು ಮತ್ತು ನೆನಪುಗಳು ಸಾಕು ಭರಣಯ್ಯನವರ ವ್ಯಕ್ತಿತ್ವ ಅಳೆಯಲು.

"ಈಗಿನ ದಲಿತವರ್ಗದ ಐ.ಎ.ಎಸ್. ಮತ್ತು ಸರ್ಕಾರಿ ಅಧಿಕಾರಿಗಳನ್ನು ನೋಡಿದರೆ ಈ ಜನೋಪಕಾರಿ ಮನಸ್ಸು ಎಷ್ಟು ಜನರಲ್ಲಿರಬಹುದು ಎಂದು ಅನುಮಾನ ಮೂಡುತ್ತದೆ. ಎಲ್ಲರ ಬಳಿಯೂ ಲೆಕ್ಕವಿಲ್ಲದಷ್ಟು ಆಸ್ತಿ ಇದೆ. ನಾವು ಅವರ ತಮ್ಮನ ಮಕ್ಕಳಾಗಿ, ಅಂತ ಪ್ರಭಾವಿಯ ಸಂಬಂಧಿಗಳಾಗಿ ನಾವೂ ಬೇಕಾದಷ್ಟು ಆಸ್ತಿ ಮಾಡಿಕೊಳ್ಳಬಹುದಿತ್ತು. ಆದರೆ ಅವರ ಹೆಸರೇ ನಮಗೆ ಹೀಗೆ ಮಾಡಲು ಅವಕಾಶ ನೀಡಲಿಲ್ಲ. ಇವರು ಕೆಲಸದಲ್ಲಿದ್ದಾಗ ದೊಡ್ಡ ದೊಡ್ಡ ರಾಜಕಾರಣಿಗಳು ಮನೆಗೆ ಬರುತ್ತಿದ್ದರು. ಅವರಿಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿಕೊಡುತ್ತಿದ್ದರು. ಮನಸ್ಸು ಮಾಡಿದ್ದರೆ

ನಮ್ಮ ತಲೆಮಾರುಗಳು ಕುಳಿತು ತಿನ್ನುವಷ್ಟು ಆಸ್ತಿ ಮಾಡಬಹುದಿತ್ತು. ಆದರೆ ನಮ್ಮ ದೊಡ್ಡಪ್ಪ ಇದ್ಯಾವುದಕ್ಕೂ ಆಸೆ ಪಡಲಿಲ್ಲ. ಅಂತಹವರು ಈಗ ಇದ್ದರೆ ತೋರಿಸಿ. ಅವರ ಮನೆಯ ಜೀತ ಮಾಡುತ್ತೇನೆ" ಎಂಬುದು ನಾರಾಯಣ ಸ್ವಾಮಿಯ ಸವಾಲು.

"ಭರಣಯ್ಯ ಆಸ್ತಿ ಮಾಡದೇ ಇರಬಹುದು, ಆದರೆ ಅವರಿಗೆ ಆಸ್ತಿಯ ಅವಶ್ಯಕತೆ ಇರಲಿಲ್ಲ. ಸಮಾಜದ ಒಳಿತೇ ಅವರ ಆಸ್ತಿಯಾಗಿತ್ತು. ಇಂದಿಗೂ ಎಲ್ಲರ ಮನಸ್ಸಿನಲ್ಲಿ ಸ್ಥಿರಾಸ್ತಿಯಾಗಿ ಉಳಿದಿದ್ದಾರೆ. ಭರಣಯ್ಯನವರು ಕೊಡುಗೈ ದಾನಿಗಳಾಗಿದ್ದರು. ಗ್ರಾಮದಲ್ಲಿ ನಡೆಯುವ ಯಾವುದೇ ಜಾತಿಯ ಮದುವೆ, ಹಬ್ಬಗಳಿಗೆ ಸಹಾಯ ಮಾಡುತ್ತಿದ್ದರು. ಆದರೆ ಪ್ರಚಾರಪ್ರಿಯರಾಗಿರಲಿಲ್ಲ. ತಾವು ಬಲಗೈಯಲ್ಲಿ ಮಾಡಿದ ದಾನ ಎಡಗೈಗೆ ಗೊತ್ತಾಗದಂತೆ ಮಾಡುತ್ತಿದ್ದರು. ಈಗಿನ ಜನಸೇವಕರಂತೆ ಪ್ರಚಾರತೆಯನ್ನು ಬಯಸಿದ್ದರೆ ಅವರು ಇನ್ನೂ ಮನೆಮಾತಾಗಿರುತ್ತಿದ್ದರೇನೋ. ಆದರೆ ಅವರು ಎಂದೂ ಪ್ರಚಾರಕ್ಕೆ ಹಾತೊರೆಯದ ತಣ್ಣನೆಯ ಪ್ರೀತಿ ತೋರುತ್ತಾ ಬದುಕುವ ಜಾಯಮಾನದವರಾಗಿದ್ದರು".

"ಹಿಂದಿನಿಂದಲೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಬಲವಾಗಿ ಬೇರೂರಿದೆ. ಭರಣಯ್ಯನವರ ಕಾಲದಲ್ಲಿ ದಲಿತರು, ಹಿಂದುಳಿದವರನ್ನು ಮೇಲ್ಜಾತಿಯ ಜನ ಮನೆ ಒಳಗೆ ಸೇರಿಸುತ್ತಿರಲಿಲ್ಲ. ಆದರೆ ಭರಣಯ್ಯನವರ ವಿಚಾರದಲ್ಲಿ ಮಾತ್ರ ಕೊಂಚ ರಿಯಾಯಿತಿ ಇತ್ತು ಅಂತ ಅನ್ನಿಸುತ್ತೆ. ಭರಣಯ್ಯನವರು ಊರಿನಿಂದ ಬೆಂಗಳೂರಿಗೆ ಹೋಗುವಾಗ ಮಂಡ್ಯ ಮಾರ್ಗವಾಗಿ ಹೋಗುತ್ತಿದ್ದರು. ಆಗ ಮಂಡ್ಯದ ಪ್ರಮುಖ ಜನನಾಯಕರಾಗಿದ್ದ ಕೆ.ವಿ. ಶಂಕರೇಗೌಡರ ಮನೆಯಲ್ಲಿ ತಿಂಡಿ ತಿಂದು ತೆರಳುತ್ತಿದ್ದರಂತೆ. ಅವರಿಬ್ಬರ ನಡುವೆ ಅಂತಹ ಗೆಳೆತನವಿತ್ತು. ಎಲ್ಲರೂ ಪ್ರೀತಿಯಿಂದ ಆರ್ಬಿ (RB) ಎಂಬ ಸಂಕ್ಷಿಪ್ತ ನಾಮದಿಂದ ಕರೆಯುತ್ತಿದ್ದರು. ಇಂತಹ ಗೆಳೆತನ ಎಲ್ಲ ಹಳ್ಳಿಗಳಲ್ಲಿ, ಎಲ್ಲ ಮನೆಗಳಲ್ಲಿ ಕಂಡುಬಂದಿದ್ದರೆ ಸಮಾಜದ ಸಾಮರಸ್ಯ ಇನ್ನಷ್ಟು ಹೆಚ್ಚಾಗುತ್ತಿತ್ತು. ಅಷ್ಟೇ ಅಲ್ಲ ಅಂದಿನ ಶಿಕ್ಷಣಮಂತ್ರಿ ನಾಡಗೌಡರು ಮತ್ತು ಆಲೂರು ಬಿ.ರಾಚಯ್ಯ ನವರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಭರಣಯ್ಯನವರನ್ನು ನೋಡಲು ಜನ ರಸ್ತೆಯಲ್ಲಿ ತುಂಬಿರುತ್ತಿದ್ದರು. ಭರಣಯ್ಯನವರಿಂದ ಕೆಲಸ ಪಡೆದು ನಿವೃತ್ತರಾದವರು ಮತ್ತು ಸೇವೆಯಲ್ಲಿರುವವರು ಇನ್ನೂ ಇದ್ದಾರೆ" ಎಂದು ಹಲವು ಪ್ರಮುಖ ನೆನಪುಗಳನ್ನು ನಾರಾಯಣಸ್ವಾಮಿ ಹಂಚಿಕೊಂಡರು.

"ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸುವಲ್ಲಿ ಮಠಗಳ ಪ್ರಾಮುಖ್ಯತೆ ಎಷ್ಟಿದೆಯೋ, ಹಿಂದೆ ಎಷ್ಟಿತ್ತೋ ಗೊತ್ತಿಲ್ಲ. ಆದರೆ ಭರಣಯ್ಯನವರನ್ನು ಕಂಡರೆ ಮಠಾಧಿಪತಿಗಳಿಗೂ ಗೌರವವಿತ್ತು. ಕೆಲವು ಮಾಠಾಧಿಪತಿಗಳೂ ಭರಣಯ್ಯನವರಿಗೆ ಕೈಮುಗಿಯುತ್ತಿದ್ದರಂತೆ. ಇದನ್ನು ಕಂಡು ಅವರು ತಮ್ಮ ಸೋದರರೊಂದಿಗೆ

ಹೇಳಿಕೊಳ್ಳುತ್ತಿದ್ದರಂತೆ "ಏನ್ರೋ ಇದು.. ಅವರೇ ನನಗೆ ಕೈಮುಗಿಯುತ್ತಿದ್ದಾರೆ. ನಾವು ಅವರ ಅಶೀರ್ವಾದ ಪಡೆಯಲೆಂದು ಬಂದರೆ, ಇದು ಹೀಗಾಗುತ್ತಿದೆ. ಅವರು ನಮಗೇಕೆ ಕೈಮುಗಿಯುತ್ತಾರೆ" ಎಂದು ಮುಜುಗರ ಪಟ್ಟುಕೊಳ್ಳುತ್ತಿದ್ದರಂತೆ. ಮಠಾಧಿಪತಿಗಳು ಇವರನ್ನು ಪಕ್ಕದಲ್ಲಿ ಕೂರಿಸಿಕೊಂಡು ಉಭಯ ಕುಶಲೋಪರಿ ವಿಚಾರಿಸುತ್ತಿದ್ದರಂತೆ. ಈಗ ಅಂತಹ ಮಠಾಧಿಪತಿಗಳು ಎಲ್ಲಿದ್ದಾರೆ ಹೇಳಿ ನೋಡೋಣ" ಇದು ನಾರಾಯಣಸ್ವಾಮಿಯವರ ಪ್ರಶ್ನೆ.

"ನಮ್ಮಲ್ಲಿ ವೆಂಕಟರಮಣಸ್ವಾಮಿ ಒಕ್ಕಲಿನವರು ಶನಿವಾರ ಆಚರಿಸುತ್ತಾರೆ. ಶ್ರಾವಣದಲ್ಲಿ ಅವರು ತಮ್ಮ ಸುತ್ತಮುತ್ತಲ ಮನೆಗಳಲ್ಲಿ ಭಿಕ್ಷಾಟನೆ ಮಾಡುತ್ತಾರೆ. ಅದೇ ರೀತಿ ಕೆಲವು ಕುಟುಂಬದವರಲ್ಲಿ ಗುಡ್ಡಪ್ಪ ಅಥವಾ ಜೋಗಪ್ಪ ಅನ್ನುವವರು ಇರುತ್ತಾರೆ. ಕೆಲವು ವಿಶೇಷ ದಿನಗಳಲ್ಲಿ ಭಿಕ್ಷಾಟನೆ ಮಾಡುತ್ತಾರೆ. ಇದು ಭರಣಯ್ಯನವರ ಕುಟುಂಬದವರಲ್ಲೂ ಚಾಲ್ತಿಯಲ್ಲಿತ್ತು. ಅವರ ತಂದೆ, ತಾತ ಉಪಯೋಗಿಸುತ್ತಿದ್ದ ಜಾಗಟೆ, ಬೋನಾಸಿಗಳು ಇನ್ನೂ ಇವೆ. ವಿಷಯ ಅದಲ್ಲ. ಭರಣಯ್ಯ ತಾವು ಉನ್ನತ ಸ್ಥಾನದಲ್ಲಿದ್ದ ಸಮಯದಲ್ಲಿ, ಅಕಸ್ಮಾತ್, ಶನಿವಾರ ಊರಲ್ಲಿ ಉಳಿದಿದ್ದರೆ ಬೆಳಿಗ್ಗೆ ಸ್ನಾನ ಮಾಡಿ, ಪೂಜೆ ಮಾಡಿ, ಜಾಗಟೆ ಬೋನಾಸಿಯಿಂದ ಸುತ್ತಲ ನಾಲ್ಕಾರು ಮನೆಗಳಲ್ಲಿ ಭಿಕ್ಷಾಟನೆ ಮಾಡಿ ಅದೇ ಭಿಕ್ಷೆಯಿಂದ ಪ್ರಸಾದ ತಯಾರಿಸಿ ಉಪಯೋಗಿಸುತ್ತಿದ್ದರು. ಇದು ಇವರ ಧಾರ್ಮಿಕ ನಂಬಿಕೆಗೊಂದು ನಿದರ್ಶನ. ಸಮಾಜದ ಉನ್ನತ ಹುದ್ದೆಯಲ್ಲಿದ್ದರೂ ಬಹಳ ದೈವಭಕ್ತರು. ಆಧ್ಯಾತ್ಮಿಕ ಜಾಗೃತಿ ಇತ್ತು".

"ಕೆಲಸದ ವಿಚಾರದಲ್ಲಿ ಭರಣಯ್ಯನವರು ತುಂಬ ಶಿಸ್ತು. ಶ್ರದ್ಧೆ ರೂಢಿಸಿಕೊಂಡಿದ್ದರು. ತಡಮಾಡುತ್ತಿರಲಿಲ್ಲ. ಯಾರಿಗೂ ಅನವಶ್ಯಕವಾಗಿ ತೊಂದರೆ ಕೊಡುತ್ತಿರಲಿಲ್ಲ. ತುಂಬ ಸರಳ ದಿನಚರಿ ಮೈಗೂಡಿಸಿಕೊಂಡಿದ್ದ ಅವರು ಬೆಳಿಗ್ಗೆ ಐದಕ್ಕೆ ಎದ್ದು, ಸ್ನಾನ ಮುಗಿಸಿ ನಾಲ್ಕೈದು ಪುಟ ಶ್ರೀರಾಮನಾಮ ಬರೆದು, ನಂತರ ತಮ್ಮ ಕೆಲಸಕ್ಕೆ ತೆರಳುತ್ತಿದ್ದರು. ಮಧ್ಯಾಹ್ನದ ಊಟವನ್ನು ಕಛೇರಿಯಲ್ಲಿಯೇ ಮಾಡುತ್ತಿದ್ದರೇ ಹೊರತು ಮನೆಗೆ ಬರುತ್ತಿರಲಿಲ್ಲ. ಊಟದಲ್ಲಿ ಅವರು ಇಷ್ಟಪಡುತ್ತಿದ್ದುದು ರಾಗಿಮುದ್ದೆ ಮತ್ತು ಸೊಪ್ಪಿನಸಾರು. ಆಗಾಗ ನಾಟಿಕೋಳಿ ಸಾರು. ಮನೆಯ ಎಲ್ಲರನ್ನು ಕೂರಿಸಿಕೊಂಡು ಒಟ್ಟಿಗೇ ಊಟ ಮಾಡುತ್ತಿದ್ದರು. ಯಾವಾಗಲೂ ದೀರ್ಘ ವಿಶ್ರಾಂತಿ ಬಯಸಿದವರಲ್ಲ. ಅವರ ಬಳಿ ಯಾವಾಗಲೂ ಜನರಿರುತ್ತಿದ್ದರು. ರಾತ್ರಿ ಊಟ ಮಾಡಿ ಮಲಗುವಾಗಲೇ ಅವರಿಗೆ ವಿಶ್ರಾಂತಿ. ಯಾರನ್ನು ದೂರ ನಿಲ್ಲಿಸಿ ಮಾತಾಡುತ್ತಿರಲಿಲ್ಲ. ಎಲ್ಲರನ್ನು ಪ್ರೀತಿಯಿಂದ ಹತ್ತಿರ ಕರೆದು ಮಾತಾಡಿಸುತ್ತಿದ್ದರು".

"ಭರಣಯ್ಯನವರ ಜನಾನುರಾಗಿ ಗುಣವನ್ನು ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಕೂಡ ಬಲ್ಲವರಾಗಿದ್ದರು. ಬೆಂಗಳೂರಿನ ಲಾಲ್‌ಬಾಗ್ ಬಳಿಯಿರುವ ವಾಸವೀ

ಕಲ್ಯಾಣ ಮಂಟಪದಲ್ಲಿ ಭರಣಯ್ಯನವರ ಮಗಳ ಮದುವೆಗೆ ಮಹಾರಾಜರು ದಂಪತಿ ಸಹಿತವಾಗಿ ಬಂದು ಹರಸಿ ಆಶೀರ್ವದಿಸಿದ್ದರು. ಆ ಕಾಲಕ್ಕೆ ಇಡೀ ಜನಸಮುದಾಯಕ್ಕೆ ಅದೊಂದು ಅಚ್ಚರಿಯೆ ಅದು ಎಂದೂ ಅಳಿಸಲಾಗದ ಗೌರವವಾಗಿ ಉಳಿದುಕೊಂಡಿತು. ಇಂಥ ಗೌರವ ಸಂಪಾದನೆ ಮಾಡಬೇಕಾದರೆ ಇವರ ನಡವಳಿಕೆ, ನಂಬುಗೆ, ಜನಸೇವೆ ಎಂಥದ್ದು ಎಂಬುದನ್ನು ತಿಳಿಯಬಹುದು" ನಾರಾಯಣಸ್ವಾಮಿಯವರಿಗೆ ಈಗಲೂ ಈ ನೆನಪು ಹಸಿರಾಗಿದೆ. ಆನಂದಕ್ಕೆ ಪಾರವೇ ಇಲ್ಲದ ಸಂಗತಿಯಾಗಿ ಉಳಿದಿದೆ.

"ಕೆಲಸಕ್ಕೆ ರಾಜೀನಾಮೆ ನೀಡಿದ ಬಳಿಕ ನಿಜಲಿಂಗಪ್ಪನವರ ಸಂಯುಕ್ತ ಕಾಂಗ್ರೆಸ್‌ನಿಂದ ಕೊಳ್ಳೇಗಾಲ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಭರಣಯ್ಯನವರು ವಿಧಾನಸೌಧದಲ್ಲಿ ಕಾರ್ಯದರ್ಶಿಯಾಗಿದ್ದಾಗ ಇವರ ಕಾರ್ಯಕ್ಷಮತೆ ಮೆಚ್ಚಿದ್ದ ನಿಜಲಿಂಗಪ್ಪನವರು ಇವರನ್ನು ಸಂಯುಕ್ತ ಕಾಂಗ್ರೆಸ್‌ನ ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ನಂತರ ಕೊಳ್ಳೇಗಾಲ ವಿಧಾನ ಸಭಾ ಚುನಾವಣೆಗೆ ಟಿಕೆಟ್ ಕೊಟ್ಟು ನಿಲ್ಲಿಸಿದ್ದರು. ಜನ ಇವರ ಸೇವೆಯನ್ನು ಸ್ಮರಿಸಲಿಲ್ಲ. ಚುನಾವಣೆಯಲ್ಲಿ ಸೋತರು. ನಾನು ತಿಳಿದಿರುವಂತೆ ಭರಣಯ್ಯನವರು ಮಾನಸಿಕವಾಗಿ ಜರ್ಝರಿತರಾಗಿ ಕುಗ್ಗಿಹೋದದ್ದು ಕೊಳ್ಳೇಗಾಲದ ಚುನಾವಣೆಯ ನಂತರ. ಅವರ ನಂಬಿಕೆ, ದೈವಬಲ, ಜನಬಲ ಚುನಾವಣೆಯ ಸಮಯದಲ್ಲಿ ಕೈ ಕೊಟ್ಟಿತ್ತು. ಆ ನೋವನ್ನು ಯಾರ ಬಳಿಯೂ ಹೇಳಿಕೊಳ್ಳದೇ ತಾವೊಬ್ಬರೆ ಅನುಭವಿಸಿದ್ದರು. ಇದಕ್ಕೆ ನಿಖರ ಕಾರಣಗಳು ಗೊತ್ತಿರದಿದ್ದರೂ ಒಬ್ಬ ಒಳ್ಳೆ ಮನಸ್ಸಿನ ವ್ಯಕ್ತಿಗೆ ಇಂಥ ನೋವು ಬರಬಾರದಿತ್ತು. ಅದೇನೇ ಆಗಿದ್ದರೂ ಅವರು ನಮ್ಮ ವಂಶದ ಕೀರ್ತಿ ಮತ್ತು ಗೌರವವನ್ನು ಕನ್ನಡದ ಜನಕ್ಕೆ ತಿಳಿಯುವಂತೆ ಮಾಡಿದರು. ಜನರಿಂದಲೂ 'ಸೈ' ಎನಿಸಿಕೊಂಡರು. ನಾನು ಅವರ ಬಂಧುವಾಗಿರುವುದು ಪುಣ್ಯವೆಂದೇ ತಿಳಿದವನು".

ಕೆಲಸದ ಕಾಮಧೇನು!

ಬಸವರಾಜಪ್ಪ, ಸೋಮನಾಥಪುರ

ಸೋಮನಾಥಪುರದಲ್ಲಿರುವ 92ರ ಹರೆಯದ ಹಿರಿಯಜೀವ ಬಸವರಾಜಪ್ಪ ಹೇಳುವುದು ಹೀಗೆ "ಅವರು ಕೆಲಸದ ಕಾಮಧೇನು". ಈ ಬಿರುದನ್ನು ಸರ್ಕಾರವಾಗಲೀ, ಅವರ ಸಂಬಂಧಿಕರಾಗಲೀ ಕೊಟ್ಟ ಬಿರುದಲ್ಲ. ನಮ್ಮಲ್ಲೇ ವಾಡಿಕೆಯಲಿದ್ದ ಮಾತು. ಈ ವಿಚಾರದಲ್ಲಿ ಯಾವ ರಾಜಕಾರಣಿ ಅಥವಾ ಬೇರೆ ಅಧಿಕಾರಿ ಇವರನ್ನು ಹಿಂದಿಕ್ಕಲು ಸಾಧ್ಯವಿಲ್ಲ. ಇದು ಕೇವಲ ಹೊಗಳಿಕೆಯಲ್ಲ. ಯಾವನೇ ಅಧಿಕಾರಿ ಕೆಲಸಕ್ಕೆ ಸೇರಿದರೆ, ತನ್ನ ಕುರ್ಚಿ ಭದ್ರ ಮಾಡಿಕೊಳ್ಳುವುದರಿಂದ ಹಿಡಿದು, ತನ್ನ ಭವಿಷ್ಯ, ತನ್ನ ಕುಟುಂಬ,

ಮಕ್ಕಳು ಎಂಬ ವೈಯಕ್ತಿಕ ಲಾಲಸೆಗಳಲ್ಲಿ ಅವನು ಮುಳುಗಿಬಿಡುತ್ತಾನೆ. ಆದರೆ ಭರಣಯ್ಯ ಇದರಿಂದ ಸಂಪೂರ್ಣ ಹೊರತಾಗಿದ್ದರು. ಅವರು ಕೆಲಸಕ್ಕೆ ಸೇರಿದ ಕೂಡಲೇ ನಮ್ಮ ತಾಲ್ಲೂಕಿನ ಜನತೆಗೆ ಸರ್ಕಾರದ ಮಟ್ಟದಲ್ಲಿ ದೊರಕಬಹುದಾದ ಕೆಲಸಗಳನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ ಕೊಟ್ಟುಕೊಂಡು ಬಂದ್ರು. ಎಲ್ಲೂ ಕೂಡ ಜಾತಿಯ ಬೇಲಿ ಹಾಕಿಕೊಳ್ಳದೆ, ಕಷ್ಟ ಎಂದು ಬಂದವರಿಗೆಲ್ಲ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಸಹಾಯ ಮಾಡಿದ್ರು. ಅವರು ಕೆಲಸ ಕೊಡಿಸುವ ಪರಿ ಹೇಗಿತ್ತೆಂದರೆ, ನಮ್ಮೂರಿನ ಹಿರೀಕರು ಹೇಳ್ತಿದ್ದ ಮಾತು "ಅಲ್ಲಪ್ಪಾ ಭರಣಪ್ಪ. ನೀನು ಹೀಗೆ ಎಲ್ಲರನ್ನೂ ಹಿಡಿದು ಸರ್ಕಾರಿ ಕೆಲಸಕ್ಕೆ ತುಂಬಿದರೆ ವ್ಯವಸಾಯದ ಗತಿಯೇನು? ಊರಲ್ಲಿ ಒಕ್ಕಲುತನ ಮಾಡಿ ಹೊಲಗದ್ದೆ ಉಳುವವರು ಯಾರು.....?" ಬಸವರಾಜಪ್ಪನವರ ನೆನಪಿನಂಗಳದಲ್ಲಿ ಇಂಥ ನಾಕಾರು ಚಿತ್ರಗಳು ಕುಳಿತಿವೆ. ಇವರಲ್ಲಿ ಭರಣಯ್ಯನವರ ಕುರಿತಾದ ಎಷ್ಟೋ ವಿಷಯವಿದೆ. ಹೇಳಲು ಮನಸು ಬಯಸಿದರೂ... ವಯಸ್ಸಿನ ಕಾರಣಕ್ಕೆ ನೆನಪುಗಳು ಸಹಕರಿಸುತ್ತಿರಲಿಲ್ಲ. ಆದರೂ ಅವರು ಒಂದು ವಿಷಯ ಹೇಳಲು ಮರೆಯಲಿಲ್ಲ. 'ಭರಣಯ್ಯ ಮಾಡಿದಷ್ಟು ಸಹಾಯವನ್ನು ಬೇರೆ ಯಾರೂ ಇದುವರೆಗೂ ಮಾಡಿಲ್ಲ'.

ಮಾತು ತಪ್ಪದ ವ್ಯಕ್ತಿತ್ವ.

ಶಿವಣ್ಣ, ಸೋಮನಾಥಪುರ

ಎಲ್ಲ ಹೇಳುತ್ತಾರೆ, ಭರಣಯ್ಯ ಎಲ್ಲರಿಗೂ ಕೆಲಸ ಕೊಡಿಸಿದರು ಎಂದು, ಆದರೆ ಅವರು ಯಾವರೀತಿ ಕೆಲಸ ಕೊಡಿಸುತ್ತಿದ್ದರು, ಅವರೇ ನೇರವಾಗಿ ಕೆಲಸ ಕೊಡುತ್ತಿದ್ದರಾ? ತಮ್ಮ ಹಿರಿಯ ಅಧಿಕಾರಿಗಳ ಬಳಿ ಹೇಳಿ ಕೊಡಿಸುತ್ತಿದ್ದರಾ? ಎಂದು ಕೆಲವೊಮ್ಮೆ ಕಾಡಿದ್ದುಂಟು. ಅಷ್ಟೇ ಅಲ್ಲ ಕೇವಲ ಕೆಲಸ ಕೊಡಿಸಿದ ಮಾತ್ರಕ್ಕೆ ಒಬ್ಬ ವ್ಯಕ್ತಿ ದೇವರ ಸ್ಥಾನದಲ್ಲಿ ನಿಲ್ಲುತ್ತಾನಾ.. ? ಎಂದು ಅನಿಸಿದ್ದೂ ನಿಜ. ಆದರೆ ಸೋಮನಾಥಪುರದ ಶಿವಣ್ಣ, ತಮಗೆ ಭರಣಯ್ಯ ಕೆಲಸ ಕೊಡಿಸಿದ ರೀತಿಯನ್ನು ಹೇಳಿಕೊಂಡಾಗ ಭರಣಯ್ಯನವರನ್ನು ಜನ ಯಾಕೆ ಗ್ರೇಟ್ ಅಂತಾರೆ ಅಂತ ಮನವರಿಕೆ ಆಗತೊಡಗಿತು.

ಅದೇ ಊರಿನ ಶಿವಣ್ಣ ಆಗ ತಾನೆ ಎಸ್.ಎಸ್.ಎಲ್.ಸಿ. ಓದುತ್ತಿದ್ದರು. ಅವರು ಭರಣಯ್ಯನವರನ್ನು ನೋಡಿರಲಿಲ್ಲ. ಊರಿಗೆ ಬಂದಾಗ ಶಿವಣ್ಣನವರ ತಂದೆ ಅವರನ್ನು ಭರಣಯ್ಯನವರ ಬಳಿ ಕರೆದುಕೊಂಡು ಹೋದರು. 'ನನ್ನ ಮಗನಿಗೆ ಒಂದು ಕೆಲಸ ಕೊಡಿಸಿ' ಅಂತ ಕೇಳಿದಾಗ ಅವರು ಶಿವಣ್ಣನ ವಿದ್ಯಾಭ್ಯಾಸದ ಬಗ್ಗೆ ಕೇಳಿದರಂತೆ, ಎಸ್.ಎಸ್.ಎಲ್.ಸಿ. ಓದುತ್ತಿರುವ ವಿಷಯ ತಿಳಿದು, ಅದು ಪೂರ್ತಿಯಾದ ಮೇಲೆ ಬೆಂಗಳೂರಿಗೆ ಕರೆದುಕೊಂಡು ಬನ್ನಿ ಎಂದು ಹೇಳಿದರಂತೆ. ಅದರಂತೆ ಎಸ್.ಎಸ್.ಎಲ್.ಸಿ.

ಪಾಸಾದ ಶಿವಣ್ಣನವರು ತಮ್ಮ ತಂದೆಯವರೊಡನೆ ಬೆಂಗಳೂರಿಗೆ ಭರಣಯ್ಯನವರನ್ನು ನೋಡಲು ಹೋದರು. ಅವರನ್ನು ಕಂಡ ಕೂಡಲೆ ಭರಣಯ್ಯ ಇವರ ಯೋಗಕ್ಷೇಮ ವಿಚಾರಿಸಿ ಆತ್ಮೀಯವಾಗಿ ಸತ್ಕರಿಸಿದರು. ನಂತರ ಕೆಲವೇ ಗಳಿಗೆಯಲ್ಲಿ ಶಿವಣ್ಣನವರ ಕೆಲಸಕ್ಕೆ ಆದೇಶ ಪ್ರತಿಯನ್ನು ತಯಾರಿಸಿ ನೀಡಿದರಂತೆ!! ನಂತರ ಜನತಾ ಬಜಾ಼ರ್‌ನ ಅಧಿಕಾರಿಗೆ ಅತ್ತ ಫೋನ್‌ಮಾಡಿ ತಾವು ಒಬ್ಬ ಹುಡುಗನನ್ನು ಕಳುಹಿಸುತ್ತಿರುವುದಾಗಿ, ಆತನಿಗೆ ಕೆಲಸ ಕೊಡುವಂತೆ ತಿಳಿಸುತ್ತಾರೆ. ಇತ್ತ ಶಿವಣ್ಣನವರಿಗೆ ಆದೇಶ ಪ್ರತಿ ಇತ್ತು ಅವರನ್ನು ಜನತಾ ಬಜಾ಼ರ್‌ಗೆ ಕಳಿಸಿದರು. ಅಲ್ಲಿ ಹೋದ ಶಿವಣ್ಣ ನೇರವಾಗಿ ಜನತಾ ಬಜಾ಼ರ್‌ನ ಕ್ಯಾಷಿಯರ್ ಹುದ್ದೆಯಲ್ಲಿ ಕೂತರು. ಆಶ್ಚರ್ಯ ಅಂದ್ರೆ ಇಷ್ಟೆಲ್ಲಾ ಪ್ರಕ್ರಿಯೆ ನಡೆದದ್ದು ಕೇವಲ ಎರಡುವರೆ ಘಂಟೆಯ ಅವಧಿಯಲ್ಲಿ. ಶಿವಣ್ಣ ಬೆಂಗಳೂರು ತಲುಪಿದ್ದು ಬೆಳಿಗ್ಗೆ ಹನ್ನೊಂದು ಘಂಟೆಗೆ, ಕೆಲಸಕ್ಕೆ ಹಾಜರಾದದ್ದು ಮಧ್ಯಾಹ್ನ ಒಂದುವರೆ ಘಂಟೆಗೆ. ಇದು ಭರಣಯ್ಯನವರ ಬದ್ಧತೆಗೆ ಸಾಕ್ಷಿ. ಎಷ್ಟೋ ಜನ ಮಾತು ಕೊಡುತ್ತಾರೆ. ಆದರೆ ಅದನ್ನು ಉಳಿಸಿಕೊಳ್ಳುವವರು ಕೆಲವರು. ಇತ್ತ ಶಿವಣ್ಣನವರು ಯಾಕೋ, ಏನೋ ಜನತಾ ಬಜಾ಼ರ್‌ನಲ್ಲಿ ಕೆಲಸ ಮಾಡಲಾಗದೇ ವಾಪಸ್ಸು ಬಂದು ಬಿಡುತ್ತಾರೆ. ಇದನ್ನು ತಿಳಿದು ಭರಣಯ್ಯನವರು ಮೌನವಾಗುತ್ತಾರೆ. ಕೊಂಚವೂ ಬೇಸರಿಸಿಕೊಳ್ಳದೆ ಸಹಜವಾಗೇ ಇದ್ದುಬಿಡುತ್ತಾರೆ. ನಂತರದ ದಿನಗಳಲ್ಲಿ ಭರಣಯ್ಯ ತಾವು ಕರ್ನಾಟಕ ಲೋಕ ಸೇವಾ ಆಯೋಗದ ಸದಸ್ಯರಾದ ನಂತರ ಇದೇ ವ್ಯಕ್ತಿ ಶಿವಣ್ಣನನ್ನ ಮತ್ತೆ ಬರಹೇಳುತ್ತಾರೆ. ಮೊತ್ತೊಂದು ಕೆಲಸ ನೀಡಲು ಬಯಸಿರುವುದಾಗಿ ತಿಳಿಸುತ್ತಾರೆ. ಆದರೆ ಅನಿವಾರ್ಯ ಕಾರಣಗಳಿಂದ ಶಿವಣ್ಣ ಈ ಕೆಲಸಕ್ಕೆ ಹೋಗದೇ ಉಳಿದು ಬಿಡುತ್ತಾರೆ! ಆಗಲೂ ಭರಣಯ್ಯನವರು ಬೇಸರಿಸಿಕೊಳ್ಳದೆ ಸಹಜವಾಗಿದ್ದು ಬಿಡುತ್ತಾರೆ. ಶಿವಣ್ಣ ಈಗಲೂ ನೆನೆಸಿಕೊಳ್ಳುವುದು ಭರಣಯ್ಯನವರ ಸೌಜನ್ಯವನ್ನು. ಬೇರೆ ಯಾರೇ ಆಗಿದ್ದರೂ ನನ್ನ ಬೇಜವಬ್ದಾರಿಯನ್ನು ಸಹಿಸುತ್ತಿರಲಿಲ್ಲ. ಆದರೆ ಇಂದು ಅದನ್ನು 'ಪರವಾಗಿಲ್ಲ' ಎಂಬಂತೆ ನೋಡಿದರು. ಇದು ಭರಣಯ್ಯನವರಲ್ಲಿದ್ದ ಸೌಮ್ಯತೆ ಮತ್ತು ಔದಾರ್ಯಕ್ಕೆ ಉದಾಹರಣೆ ಎಂದೇ ಶಿವಣ್ಣ ನೆನೆಸುತ್ತಾರೆ. ಇವರ ಇನ್ನೊಂದು ಗುಣ ಎಂದರೆ ಯಾರನ್ನು ಕೆಲಸಕ್ಕೆ ಅಲೆಸುತ್ತಿರಲಿಲ್ಲ. ಒಮ್ಮೆ ಮಾತುಕೊಟ್ಟರೆ ಮುಗಿಯಿತು. ಇಂತಹ ದಿನ ಬನ್ನಿ ಎಂದರೆ ಆ ದಿನ ಕೆಲಸ ಗ್ಯಾರಂಟಿ.

ಆ ದಿನಗಳಲ್ಲಿ ನರಸೀಪುರದಿಂದ ಬೆಂಗಳೂರಿಗೆ ನಾಲ್ಕುರೂಪಾಯಿ ಬಸ್ ಚಾರ್ಜು..! ಯಾರಾದರೂ ವೃಥಾ ಅಲೆದು ಬಂದರೆ "ಯಾಕ್ರಪ್ಪಾ ನಾಲ್ಕು ರೂಪಾಯಿ ಖರ್ಚು ಮಾಡಿ ಅಲ್ಲಿಂದ ಬರ್ತೀರಿ. ಕೆಲಸ ಆದಾಗ ನಾನೇ ತಿಳಿಸುತ್ತೇನೆ, ಆಗಲೇ ಬನ್ನಿ ಸುಮ್ಮನೆ ಎಂಟು ರೂಪಾಯಿ ವ್ಯರ್ಥ ಮಾಡಬೇಡಿ" ಎಂದು ತಿಳಿ ಹೇಳುತ್ತಿದ್ದರು. ಇಂದು ಒಂದು ಜವಾನಗಿರಿಗೆ ಲಕ್ಷಾಂತರ ರೂಪಾಯಿ ಲಂಚ ಪಡೆಯುವ ಅಧಿಕಾರಿಗಳಿರುವಾಗ ಭರಣಯ್ಯನವರಂತಹ

ಅಧಿಕಾರಿಗಳು ಮತ್ತೆ ಹುಟ್ಟಿ ಬರುವರೇ, ಸೋಜಿಗವೆನಿಸುತ್ತದೆ. ಇಂಥ ಅನೇಕ ನೆನಪುಗಳು ಅವರನ್ನು ಬಲ್ಲ ಎಲ್ಲರೂ ಹೇಳುವವರೆ. ಒಟ್ಟಿನಲ್ಲಿ ತನ್ನ ಕೈಲಾದರೇ ತಾನೇ ನೇರವಾಗಿ ಕೆಲಸಕೊಡುತ್ತಿದ್ದರು. ಇತರಿಗೆ ಹೇಳಿ ಮಾಡಿಸುವುದಾದರೆ ಹೇಳಿ ಮಾಡಿಸುತ್ತಿದ್ದರು.

ಸಂಚಾರಿ ಉದ್ಯೋಗದಾನಿ

ಎಸ್. ಜಯಕುಮಾರ್, ಸೋಮನಾಥಪುರ

"ಭರಣಯ್ಯ ಊರಿಗೆ ಬರುವಾಗ ಅವರ ಜೊತೆಯಲ್ಲಿ ಟೈಪ್‌ರೈಟರ್ ಮತ್ತು ಟೈಪಿಸ್ಟ್ ಇರುತ್ತಿದ್ದರು. ಊರಿನಲ್ಲಿ ಯಾರಾದರು ಕೆಲಸಕ್ಕೆ ಅರ್ಜಿಕೊಟ್ಟರೆ, ಅಲ್ಲೇ ಟೈಪ್ ಮಾಡಿಸಿ, ಸಹಿಮಾಡಿ ಕೆಲಸಕ್ಕೆ ಆರ್ಡರ್ ಕೊಡುತ್ತಿದ್ದರು, ಅವರಿಗೆ ಕೆಲಸದ ಜಾಗ ಹೇಳಿ ಕಳುಹಿಸುತ್ತಿದ್ದರು. ಕಾನೂನನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದ ಇವರಿಗೆ ಕೆಳಮಟ್ಟದ ಅಧಿಕಾರಿಗಳು ಭಯಮಿಶ್ರಿತ ಗೌರವ ಕೊಡುತ್ತಿದ್ದರು. ಅಂಬೇಡ್ಕರ್ ನಂತರ ನಮ್ಮ ಇಲ್ಲಿನ ದಲಿತ ಸಮುದಾಯವನ್ನು ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ಪ್ರತಿನಿಧಿಸಿದವರು ಭರಣಯ್ಯನವರು" ಎಂಬುದು ಭರಣಯ್ಯನವರ ಸಂಬಂಧಿ, ಸೋಮನಾಥಪುರದ ಜಯಕುಮಾರ್ ಅನಿಸಿಕೆ.

ಜಯಕುಮಾರ್‌ಗೆ ತಿಳುವಳಿಕೆ ಬರುವ ವೇಳೆಗೆ ಭರಣಯ್ಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿರ್ದೇಶಕರಾಗಿದ್ದರು. ಇವರು ಕಂಡಂತೆ ಭರಣಯ್ಯ ಜಾತ್ಯಾತೀತ ಸೇವಾ ಮನೋಭಾವವನ್ನು ರೂಢಿಸಿಕೊಂಡಿದ್ದರು. ಕೇವಲ ಕೆಲಸವಷ್ಟೇ ಅಲ್ಲದೆ, ಮದುವೆ, ಹಬ್ಬ ಮುಂತಾದ ಕಾರ್ಯಗಳಿಗೂ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದರು. ಇವರು ಸರ್ಕಾರದ ಉನ್ನತ ಹುದ್ದೆಗಳಲ್ಲಿದ್ದರೂ ಊರಿನ ಅಭಿಮಾನ ತುಂಬಾ ಇತ್ತು. ಆಶ್ಚರ್ಯದ ಸಂಗತಿ ಎಂದರೆ ಊರಿನ ಇತರೆ ಕೋಮಿನವರು ಇವರ ಮೇಲೆ ಅಸ್ಪೃಶ್ಯತೆಯ ಅಸ್ತ್ರ ಪ್ರಯೋಗಿಸುತ್ತಿರಲಿಲ್ಲವೆಂಬುದೇ ಕುತೂಹಲದ ಸಂಗತಿ.

ಇನ್ನೊಂದು ಸ್ವಾರಸ್ಯಕರ ವಿಷಯವೆಂದರೆ. ಅವರು ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಾಗಿದ್ದಾಗ ಆಗಾಗ ಊರಿಗೆ ಬರುತ್ತಿದ್ದರು. ಬರುವಾಗ ಬ್ಯಾಂಕಿನಿಂದ ಆರು ಕಾಸು, ಮೂರು ಕಾಸು ತಾಮ್ರದ ನಾಣ್ಯಗಳನ್ನು ಕವರ್‌ನಲ್ಲಿ ತುಂಬಿಕೊಂಡು ಬರುತ್ತಿದ್ದರಂತೆ. ತಮಗೆ ಕಂಡ ಎಲ್ಲ ಚಿಕ್ಕ ಮಕ್ಕಳಿಗೂ ಹಂಚುತ್ತಿದ್ದರಂತೆ. ಆ ಮೂರು ಕಾಸಿಗೆ ಹೆಚ್ಚಿಗೆ ತಿಂಡಿ ತಿನಿಸುಗಳು ಮಕ್ಕಳಿಗೆ ದೊರೆಯುತ್ತಿದ್ದವು. ಆ ಮಕ್ಕಳಲ್ಲಿ ಜಯಕುಮಾರ್ ಕೂಡ ಒಬ್ಬರು. ಭರಣಯ್ಯ ಕೇವಲ ತಮ್ಮ ಕುಟುಂಬ ಕಾಳಜಿಯನ್ನು ಮಾತ್ರ ಮಾಡುತ್ತಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಬೇರೆಯವರ ಕಷ್ಟಕ್ಕೆ ಸ್ಪಂದಿಸುತ್ತಿದ್ದರು. ಇದು ಜಯಕುಮಾರ್ ಮನದಾಳದಲ್ಲಿರುವ ಭರಣಯ್ಯನವರ ಚಿತ್ರಣ.

"ಒಂದು ಕಾಲದಲ್ಲಿ ಸಂಸ್ಕೃತ ಅಧ್ಯಯನ ಕೇವಲ ಮೇಲು ಜಾತಿಯವರಿಗೆ ಮಾತ್ರ ಮೀಸಲಾಗಿತ್ತು. ಅದರಂತೆ ಅನೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿಗಾಗಿ ಬೇರೆಯವರೂ ಅದನ್ನು ಅಭ್ಯಸಿಸಲು ಆಸಕ್ತಿಯನ್ನು ತೋರುತ್ತಿರಲಿಲ್ಲ. ಭರಣಯ್ಯನವರ ಕಾಲದಲ್ಲೂ ಬಹುಶಃ ಇದೇ ಸ್ಥಿತಿ ಇತ್ತು. ಆದರೆ ಆ ಕಟ್ಟುಪಾಡುಗಳಿಗೆ ಗೊಡ್ಡು ವ್ಯವಸ್ಥೆಗೆ ಸೆಡ್ಡು ಹೊಡೆದು ಭರಣಯ್ಯ ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಾರೆ. ಅವರ ಕಾಲಕ್ಕೆ ಅದೊಂದು ಕ್ರಾಂತಿಕಾರಕ ಬೆಳವಣಿಗೆ. ಮೇಲ್ವರ್ಗದ ಜನ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರೂ ಆಶ್ಚರ್ಯವಿಲ್ಲ!" ಎಂದು ಎಸ್. ಜಯಕುಮಾರ್ ನೆನೆಯುತ್ತಾರೆ.

ಮರೆಯದ ಋಣ

ಎಸ್. ಎಂ. ಪುಟ್ಟಸ್ವಾಮಿ,
ಮಾಜಿ ಗ್ರಾಮಪಂಚಾಯ್ತಿ ಅಧ್ಯಕ್ಷರು, ಸೋಮನಾಥಪುರ

ನಮ್ಮಲ್ಲಿ ಒಂದು ಮಾತಿದೆ "ಹತ್ತಿದ ಏಣಿಯನ್ನು ಒದೀಬ್ಯಾಡ" ಅಂತ. ಇದನ್ನ ಭರಣಯ್ಯ ಅಕ್ಷರಶಃ ಪಾಲಿಸಿದರು. ಅಷ್ಟೇ ಅಲ್ಲ, ತಾವು ಹತ್ತಿದ್ದ ಏಣಿಗೆ ಇನ್ನೆರಡು ಮೆಟ್ಟಿಲು ಸೇರಿಸಿ ತಮ್ಮ ಹಿಂದೆ ಬಂದವರನ್ನೆಲ್ಲಾ ಹತ್ತಿಸಿಕೊಂಡರು. ಹಾಗೆ ಏರಿದವರ ಮಕ್ಕಳು, ಮೊಮ್ಮಕ್ಕಳು ಈಗಲೂ ಅದೇ ಮೆಟ್ಟಿಲಲ್ಲಿ ಏರುತ್ತಿದ್ದಾರೆ. ಭರಣಯ್ಯನವರ ಸಾಮಾಜಿಕ ಕಳಕಳಿಯನ್ನು ಸೋಮನಾಥಪುರದ ಮಾಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಹಾಲಿ ಸದಸ್ಯರಾದ ಎಸ್. ಎಂ. ಪುಟ್ಟಸ್ವಾಮಿ ಈಗಲೂ ನೆನೆದು ಭಾವುಕರಾಗುತ್ತಾರೆ.

"ಭರಣಯ್ಯ ಅಧಿಕಾರದಲ್ಲಿದ್ದರೂ ಯಾವುದೇ ಮದ, ಅಹಂಕಾರ, ದರ್ಪ ಯಾವುದೂ ಇರಲಿಲ್ಲ. ಅವರಲ್ಲಿ ಶಿಸ್ತು ಮನೆಮಾಡಿತ್ತು. ಸಂಯಮ ನೆಲೆಗೊಂಡಿತ್ತು. ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ನೋಡುತ್ತಿದ್ದರು. ಓದಲು ಬಾರದವರಿಗೂ ಒಳ್ಳೊಳ್ಳೆ ಉದ್ಯೋಗ ಕೊಡಿಸಿದ್ದರು. ಕೇವಲ ತಮ್ಮೂರು ಒಂದೇ ಅಲ್ಲದೆ ತಿ.ನರಸೀಪುರ ತಾಲ್ಲೂಕಿನ ಸುತ್ತಮುತ್ತಲ ಹಳ್ಳಿಗಳ ವಿದ್ಯಾವಂತರಿಗೂ ಕೆಲಸ ಕೊಡಿಸಿದ್ದಾರೆ."

ಭರಣಯ್ಯನವರು ಇದ್ದಕಾಲ ರಾಮರಾಜ್ಯವಾಗಿರಲಿಲ್ಲ. ಸಮಾಜದಲ್ಲಿ ಸಜ್ಜನರೇ ತುಂಬಿರಲಿಲ್ಲ. ಊರಿನಲ್ಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಆ ಸಮಯದಲ್ಲ ನವನಾಗರಿಕತೆಗೆ ಸಮಾಜ ಹೊರಳುತ್ತಿತ್ತು. ಜೊತೆಗೆ ಸಾಮಾಜಿಕ ದುಶ್ಚಟಗಳು ಅಲ್ಲಲ್ಲಿ ಮೊಳಕೆಯೊಡೆಯುತ್ತಿದ್ದವು. ಇದನ್ನು ಮನಗಂಡ ಭರಣಯ್ಯ ತಮ್ಮ ಕಾಳಜಿಯಿಂದ ಗ್ರಾಮಕ್ಕೆ ಉಪ ಪೊಲೀಸ್ ಠಾಣೆ ಮಂಜೂರು ಮಾಡಿಸಿದರು. ಆ ಊರಿಗೊಂದು ರಕ್ಷಣೆಯ ಊರುಗೋಲು ನೆಟ್ಟರು! ಆ ಠಾಣೆ ಈಗಲೂ ಇದೆ.

ಭರಣಯ್ಯನವರಿಗೆ ಬಡತನದ ಅರಿವಿತ್ತು. ಹಸಿವಿನ ಸಂಕಟ ತಿಳಿದಿತ್ತು. ಆ ಕಾರಣದಿಂದಾಗಿಯೇ ಬೇರೆಯವರ ಕಷ್ಟಕ್ಕೆ ನೋವಿಗೆ ಸ್ಪಂದಿಸುತ್ತಿದ್ದರು. ಅವರನ್ನು ಕಾಣಲು ಊರಿನಿಂದ ಯಾರೇ ಹೋದರೂ, ಅವರಿಗೆ ತಿಳಿಹೇಳುತ್ತಿದ್ದರಂತೆ. "ಅಷ್ಟು ದೂರದಿಂದ ಯಾಕೆ ಕಾಸು ಖರ್ಚು ಮಾಡಿ ಬಂದ್ರಿ. ಒಂದು ಕಾಗದ ಬರೆದರೆ ಸಾಕಿತ್ತಲ್ಲ ಅಥವಾ ಫೋನ್ ಮಾಡಿದರೂ ಸಾಕಿತ್ತು. ನಿಮ್ಮ ಕೆಲಸ ಆಗಿರೋದು" ಎಂದು ಮರುಗುತ್ತಿದ್ದರಂತೆ. ಹಾಗೇ ಬಂದವರಿಗೆ ಬಸ್ಸು ಛಾರ್ಜು ನೀಡಿ, ಊಟ ತಿಂಡಿ ಕೊಡಿಸಿ, ಬಂದವರಿಗೆ ಏನು ಬೇಕು ಅನ್ನುತ್ತಿದ್ದರೋ ಅದನ್ನ ಮಾಡಿಕೊಟ್ಟು ಕಳುಹಿಸುತ್ತಿದ್ದರಂತೆ. ಆಗ ದನ ಮೇಯಿಸುತ್ತಿದ್ದ ಹುಡುಗರೆಲ್ಲ ಸರ್ಕಾರಿ ಕೆಲಸ ಗಿಟ್ಟಿಸಿಕೊಂಡಿದ್ದೂ ಉಂಟು! ಆಗ ಕೇವಲ ಎಸ್.ಎಸ್.ಎಲ್.ಸಿ. ಪಾಸಾದವರೆಲ್ಲ ಇನ್ಸ್‌ಪೆಕ್ಟರ್, ಕ್ಲಾರ್ಕ್ ಇತ್ಯಾದಿ ಕೆಲಸಗಳಿಸಿಕೊಂಡಿದ್ದಾರೆ. ಇವರಲ್ಲಿ ಎಲ್ಲಾ ಜಾತಿ–ಮತದವರೂ ಇರುವುದು ವಿಶೇಷತೆ! ತಮ್ಮ ನೆಚ್ಚಿಬಂದ ಯಾರಿಗೂ ಸಬೂಬು ಹೇಳಿ ಸಾಗಹಾಕುತ್ತಿರಲಿಲ್ಲ. ಎಷ್ಟೋ ಜನ ಒಕ್ಕಲಿಗರ ಮನೆಯಲ್ಲಿ ಇವರ ಫೋಟೋ ಈಗಲೂ ಇರೋದು ಇವರ ಮಾನವೀಯ ಗುಣಕ್ಕೆ ಸಾಕ್ಷಿ.

ಬೆಂಬಿಡದ ಸಾಮಾಜಿಕ ಅಂಜಿಕೆ

ಸಿದ್ಧಯ್ಯ, ಸೋಮನಾಥಪುರ

ಭರಣಯ್ಯನವರ ಕುರಿತಾಗಿ ಅವರ ಸೇವೆಯ ಮತ್ತೆ ಹಲವು ಮುಖಗಳನ್ನು ಸೋಮನಾಥಪುರದ ಶಾನುಭೋಗರ ಶಿಷ್ಯ ಶ್ರೀ ಸಿದ್ಧಯ್ಯನವರು ಕೊಂಚ ಭಿನ್ನ ರೀತಿಯಲ್ಲಿ ತಿಳಿಸಿದರು. "ಆಗ ಭರಣಯ್ಯನವರು ದೊಡ್ಡ ಹುದ್ದೆಯಲ್ಲಿದ್ದರು. ಆದರೆ ಊರಿಗೆ ಬಂದಾಗ ಊರಿನ ಮಧ್ಯೆ ಪ್ರವೇಶಿಸಿ ತಮ್ಮ ಮನೆಗೆ ಹೋಗುತ್ತಿರಲಿಲ್ಲ" ತಮ್ಮ ಮನೆಗೆ ಬೇರೆಯದೇ ದಾರಿ ಮಾಡಿಸಿಕೊಂಡಿದ್ದರಂತೆ. ತಾವು ಊರು ಮಧ್ಯದಲ್ಲಿ ಹೋದರೆ ಸವರ್ಣೀಯರ ಭಾವನೆಗಳಿಗೆ ಧಕ್ಕೆಯಾಗುತ್ತದೆ ಎಂದು ತಾವೇ ಬೇರೆ ದಾರಿಯಲ್ಲಿ ಬಂದು ಹೋಗುತ್ತಿದ್ದರಂತೆ. ಇವರು ಹೇಳುವ ಪ್ರಕಾರ ಭರಣಯ್ಯನವರಿಗೆ ಸವರ್ಣೀಯರ ಬಗ್ಗೆ ಭಯ ಮಿಶ್ರಿತ ಗೌರವವಿದ್ದಂತೆ ತೋರುತ್ತದೆ. ಇದನ್ನೆಲ್ಲ ಗಮನಿಸಿದರೆ, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆರ್. ಭರಣಯ್ಯನವರಿಗೆ ಬೇಜಾರಿದ್ದರೂ, ಅದನ್ನು ಏಕೆ ಪ್ರತಿಭಟಿಸುವ ಮನಸ್ಸು ಮಾಡದೇ ಹೋದರು? ಜಾತಿ ಪದ್ಧತಿಯ ವಿರುದ್ಧ ಏಕೆ ದಿಟ್ಟ ನಿಲುವನ್ನು ಪ್ರಕಟಿಸದೆ ಹೋದರು ಎನ್ನುವ ಪ್ರಶ್ನೆಗಳು ಸಹಜವಾಗೇ ಏಳುತ್ತವೆ. ಅವರು ಮನಸ್ಸು ಮಾಡಿದ್ದರೆ ಅವನ್ನೆಲ್ಲ ಧಿಕ್ಕರಿಸಬಹುದಿತ್ತು. ಆದರೆ ಮತ್ತೊಬ್ಬರ ನಂಬಿಕೆಗಳಿಗೆ ಗೌರವ ಕೊಡುವ ಉದ್ದೇಶದಿಂದ ತಗ್ಗಿ ಬಾಳುತ್ತಿದ್ದರಾ? ಇನ್ನೇನು ವಿಶೇಷ ಕಾರಣವಿರಬಹುದು? ಶಾನುಭೋಗರ ಮನೆಗೆ

ಬರುವಾಗ ಅಳುಕಿನಿಂದಲೇ ಬರುತ್ತಿದ್ದರಂತೆ. ಯಾಕೆಂದರೆ ಅವರು ಎಲ್ಲಿ ನನಗೆ ಕುರ್ಚಿ ಹಾಕುತ್ತಾರೋ, ನಾನು ಶಾನುಭೋಗರ ಮುಂದೆ ಹೇಗೆ ಕೂರುವುದು ಎಂದು ಮುಜುಗರಕ್ಕೆ ಒಳಗಾಗುತ್ತಿದ್ದರು. ಕೆಲವೊಮ್ಮೆ ಶಾನುಭೋಗರನ್ನು ತಮ್ಮ ಮನೆಯ ಬಳಿ ಕರೆಸಿಕೊಂಡು ಕಂದಾಯ ಕಟ್ಟುತ್ತಿದ್ದರಂತೆ! ಇದು ಇವರೊಬ್ಬರಿಗಿದ್ದ ಅಪರೂಪದ ಅವಕಾಶ! ಇದನ್ನು ನೋಡಿ ಇತರರೂ ಹುಬ್ಬೇರಿಸಿದರೂ, ಭರಣಯ್ಯನವರೆಂದರೆ ಇಂಥದ್ದೊಂದು ರಿಯಾಯಿತಿ ಇರುತ್ತಿತ್ತಂತೆ. ಇದು ಸಿದ್ಧಯ್ಯನವರ ನೆನಪಿನಂಗಳದಲ್ಲಿ ತೂರಿ ಬಂದ ಮಾತು. ಇದು ಅಂದು ಅವರಲ್ಲಿದ್ದ ಸಾಮಾಜಿಕ ವ್ಯವಸ್ಥೆಗೆ ಗೌರವ ಸೂಚಕವೋ, ಅಂಜಿಕೆಯೋ ತಿಳಿಯದು!

ಆದರೆ ಭರಣಯ್ಯ ಎಲ್ಲ ಜನಾಂಗದವರಿಗೂ ಹತ್ತಿರವಾಗಿದ್ದರು. ಮೇಲ್ಜಾತಿಯ ಜನ ಇವರನ್ನು ದೈಹಿಕವಾಗಿ ತಬ್ಬಿಕೊಳ್ಳದಿದ್ದರೂ ಮಾನಸಿಕವಾಗಿ ಅಪ್ಪಿಕೊಂಡಿದ್ದರು. ತಮ್ಮ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಕೊಟ್ಟಿದ್ದರು. ಒಬ್ಬ ಹಿಂದುಳಿದ ವರ್ಗದ ವ್ಯಕ್ತಿ ಎಲ್ಲವರ್ಗದವರ ನಿಕಟವರ್ತಿಯಾಗುವುದು ಆಗ ಅಷ್ಟು ಸುಲಭವಲ್ಲ. ಭರಣಯ್ಯ ಅದನ್ನು ಸಾಧಿಸಿದ್ದರು. ಅವರ ಮಾನವೀಯತೆಯಿಂದಲೇ ಎಲ್ಲವನ್ನೂ ಗೆದ್ದುಕೊಂಡಿದ್ದರು. ಸೋಮನಾಥಪುರ ಪಡೆದದ್ದು ಚನ್ನಕೇಶವನ ದೇವಾಲಯದಿಂದ ಅಷ್ಟೇ ತಾನು ಪ್ರಸಿದ್ಧಿ ಅಲ್ಲ, ಭರಣಯ್ಯನವರಿಂದಲೂ ಅದೊಂದು ಗೌರವ ಗಳಿಸಿದೆ ಎಂದರೆ ತಪ್ಪಾಗಲಾರದು. ಭರಣಯ್ಯನವರು ಅಂದು ಕೆಲಸ ಕೊಡಿಸಿದ ಕುಟುಂಬಗಳು ಇಂದಿಗೂ ಬದುಕಿನ ಬಂಡಿ ಎಳೆಯುತ್ತಿದ್ದಾರೆ. ನಮ್ಮೆಲ್ಲರ ನೆನಪಿನಂಗಳದಲ್ಲಿರುವ ಮಾತು ಒಂದೇ "ಅಂಥವರು ಮತ್ತೆ ಸಿಗುತ್ತಾರಾ?" ಹೀಗೆಂದು ತಮ್ಮ ನೆನಪು ಚೆಲ್ಲುತ್ತಾರೆ, ಸೋಮನಾಥಪುರದ ಮತ್ತೊಬ್ಬ ವಯೋವೃದ್ಧ ಮಂಚಯ್ಯ.

ಧರ್ಮ ಮೀರಿದ ಸ್ನೇಹ

ನೂರುಲ್ಲಾ ಸಾಬ್

ಉಗ್ರಾಣ ನಿಗಮ, ನಿವೃತ್ತಿ ನೌಕರ, ಸೋಮನಾಥಪುರ

"'ಸ್ನೇಹ' ಎನ್ನುವ ಪದ ಯಾರನ್ನಾದರೂ, ಯಾವುದನ್ನಾದರೂ ಮೀರಿ ನಿಲ್ಲುತ್ತದೆ. ಅದಕ್ಕೆ ಜಾತಿ ಧರ್ಮದ ಹಂಗಿಲ್ಲ. ಅಂತಸ್ತಿನ ಅಂತರವಿರುವುದಿಲ್ಲ. ಅದೇ ರೀತಿ ತಮ್ಮನ್ನು ಒಡಹುಟ್ಟಿದ ಸಹೋದರರನಂತೆ ನೋಡುತ್ತಿದ್ದರು" ಎಂದು ತಮ್ಮ ಮತ್ತು ಭರಣಯ್ಯನವರ ಒಡನಾಟವನ್ನು ಮೆಲುಕು ಹಾಕಿದವರು ಸೋಮನಾಥಪುರದ 88 ವರ್ಷ ವಯಸ್ಸಿನ ನೂರುಲ್ಲಾ ಸಾಬ್. ನೂರುಲ್ಲಾ ಸಾಬ್ ಅವರು ಭರಣಯ್ಯನವರಿಗೆ ಆತ್ಮೀಯ ಗೆಳೆಯರು. ಯಾವ ಜಾತಿ ಧರ್ಮವನ್ನು ಲೆಕ್ಕಿಸದೆ ಎಲ್ಲರಿಗೂ ಕೆಲಸ ಕೊಡಿಸಿ ಜೀವನ ಸುಗುಮಗೊಳಿಸಿದ ಭರಣಯ್ಯನವರನ್ನು ಧನ್ಯತೆಯಿಂದ ನೆನೆಯುತ್ತಾರೆ. "ಆಗಲೂ ಭರಣಯ್ಯನವರನ್ನು

ಆಕ್ಷೇಪಿಸುವ ಜನರು ಇದ್ದರೂ. ಅಂತಹ ಗಾಂಧಿ, ಅಂಬೇಡ್ಕರ್ ಕೂಡ ಇದರಿಂದ ಹೊರತಾಗಿರಲಿಲ್ಲ ಎಂದ ಮೇಲೆ ಇವರೂ ಟೀಕೆಗೆ ಒಳಪಡಲೇಬೇಕಲ್ಲ!! ಅದೇ ರೀತಿ ಭರಣಯ್ಯ ಕೆಲಸ ಕೊಡಿಸಿದರೆ ಜನರಾಡಿಕೊಳ್ಳುತ್ತಿದ್ದದ್ದು, "ಎಲ್ಲರಿಗೂ ಕೆಲಸ ಕೊಟ್ಟರೆ ಹೊಲ, ಮನೆ, ಗದ್ದೆ ಕೆಲಸ ಮಾಡುವವರು ಯಾರು...? ಅವರಿಗೆಲ್ಲ ಯಾಕೆ ಊಟ ಹಾಕುತ್ತೀಯ" ಎಂದು ಕೆಲವು ಊರ ಪ್ರಮುಖರು ಮಾತಾಡಿಕೊಳ್ಳುತ್ತಿದ್ದರು. ಕೆಲಸ ಕೊಡಿಸದಂತೆ ತಡೆಯುತ್ತಿದ್ದರು. ಅಂದಾಜಿನ ಪ್ರಕಾರ 30 ರಿಂದ 40 ಜನರಿಗೆ ಭರಣಯ್ಯರ ಬಳಿ ಕೆಲಸ ನಾನೇ ಕೊಡಿಸಿದ್ದೆ. ಅದಕ್ಕೆ ಉದಾಹರಣೆ ನೋಡ್ಬೇಕಂದ್ರೆ "ಈಗಲೂ ನೀವು ಈ ಸುತ್ತಮುತ್ತಲ ನಾಕಾರು ಹಳ್ಳಿಗಳ ತಿರುಗಿ ನೋಡಿ, ಅವರ ಮನೆಗಳ ಇಣುಕಿ ಬನ್ನಿ, ಇಲ್ಲೇ ಕೆಲವರ ಮನೆಯಲ್ಲಿ, ಸುತ್ತಮುತ್ತ ಒಕ್ಕಲಿಗರ ಮನೆಗಳಲ್ಲಿ ಕೂಡ ಭರಣಯ್ಯನವರ ಫೋಟೋಗಳಿವೆ" ಎಂದು ನೂರುಲ್ಲಾ ಸಾಬ್ ಹೇಳಿದರು.

ಹೀಗೆ ತಮ್ಮ ನೆನಪಿನ ಲೋಕದಲ್ಲಿ ಸಾಗುತ್ತಿದ್ದ ಆ ಗಳಿಗೆ ನೂರುಲ್ಲಾಸಾಬ್ ಮಾತಿಗೆ ಬ್ರೇಕ್ ಹಾಕಿದ್ದು ಅವರ ಪತ್ನಿ. "ಏನೇನೋ ಹೇಳಿ, ನೀವ್ಯಾಕೆ ಕೆಟ್ಟವರಾಗ್ತೀರ..... ಬಾಯಿತಪ್ಪಿ ಏನಾದ್ರು ಹೇಳಿದ್ರೆ....... ಮುಂದೆ ತೊಂದರೆಯಾದರೆ....... ಏನುಗತಿ.......?" ಎಂದು ಆತಂಕ ವ್ಯಕ್ತಪಡಿಸಿದರು. ಆದರೆ ಪತ್ನಿ ಮಾತಿಗೆ ಗಮನಕೊಡದ ನೂರುಲ್ಲಾ ಸಾಬ್ ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಡುತ್ತಾ ಹೋದರು.

ನೂರುಲ್ಲಾ ಸಾಬ್ ಪೂರ್ವಜರು ಕೂಡ, ಭರಣಯ್ಯನವರ ಪೂರ್ವಜರಂತೆ ಸೋಮನಾಥಪುರಕ್ಕೆ ವಲಸೆ ಬಂದವರು. ಬಂದಾಗಿನಿಂದ ಗ್ರಾಮದವರ ಜೊತೆ ಒಡನಾಡಿಗಳಾಗಿ ಜೀವನ ಸಾಗಿಸಿದ್ದಾರೆ. ನೂರುಲ್ಲಾ ತಾತ ಮತ್ತು ಭರಣಯ್ಯನವರ ತಾತ, ಅವರ ಅಪ್ಪಂದಿರು ಸಹ ಸಹಬಾಳ್ವೆ ನಡೆಸಿಕೊಂಡು ಬಂದಿದ್ದರು. ಸಹಜವಾಗಿಯೇ ನೂರುಲ್ಲಾ ಸಾಬ್ ಕುಟುಂಬ ಮತ್ತು ಭರಣಯ್ಯನವರ ಕುಟುಂಬ ಪರಸ್ಪರ ಕೋಮು ಭಾವನೆಯನ್ನು ನೀವಾರಿಸಿಕೊಂಡು ಸಾಮರಸ್ಯದಿಂದ ಬದುಕಿದ್ದವರು. 'ರಾಮ-ರಹೀಮ' ಒಂದೇ ಎಂಬುದು ಸಾಬೀತು ಮಾಡಿತೋರಿಸಿದವರು!

ಭರಣಯ್ಯನವರ ಜೊತೆ ತಮಗಿದ್ದ ಸ್ನೇಹವನ್ನು ನೂರುಲ್ಲಾ ಸಾಬ್ ಅತ್ಯಂತ ಉಪಯುಕ್ತವಾಗಿ, ಎಲ್ಲೂ ಮಲಿನಗೊಳ್ಳದಂತೆ ಜವಾಬ್ದಾರಿಯುತವಾಗಿ ಬಳಸಿಕೊಂಡರು. ತಾವು ಯಾವುದೇ ಲಾಬಿ ನಡೆಸಲಿಲ್ಲ ಹಾಗೂ ತಮ್ಮ ವೈಯುಕ್ತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಿಲ್ಲ. ತಾವು ಭರಣಯ್ಯನವರ ಆಪ್ತರು ಎಂದು ತಿಳಿದು ಕೆಲಸಕ್ಕಾಗಿ ತಮ್ಮ ಬಳಿ ಬಂದ ಸ್ನೇಹಿತರು, ಸಂಬಂಧಿಕರಿಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ. ಕೆಲಸ ಕೊಡಿಸಿದರು. ತಮ್ಮ ಬಳಿ ಬಂದವರನ್ನು ಇವರು ನೇರವಾಗಿ ಭರಣಯ್ಯನವರ ಬೆಂಗಳೂರಿನ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಭರಣಯ್ಯನವರು

ಕೆಲಸಕ್ಕಾಗಿ ಬಂದವರನ್ನು ಮಾತಾಡಿಸಿ, ಉಪಚರಿಸಿ ತಮ್ಮ ಕಛೇರಿಗೆ ಕರೆದುಕೊಂಡು ಹೋಗುತ್ತಿದ್ದರು. ನೂರುಲ್ಲಾಸಾಬ್‌ಗೆ ಪ್ರೀತಿ ಮಾತುಗಳನ್ನಾಡಿ ಅವರ ಜನಸೇವೆಗೆ ಮೆಚ್ಚುಗೆಯನ್ನು ತೋರುತ್ತಾ, ಇವರನ್ನು ವಿಶೇಷವಾಗಿ ಉಪಚರಿಸಿ ಕಳುಹಿಸುತ್ತಿದ್ದರಂತೆ. ಇವರು ಕರೆತರುತ್ತಿದ್ದ ವ್ಯಕ್ತಿಗಳಿಗೆ ತಾವೇ ಖುದ್ದು ಸಂದರ್ಶನ ಮಾಡಿ ಅವರ ವಿದ್ಯಾರ್ಹತೆಯ ಆಧಾರದ ಮೇಲೆ ಕೆಲಸ ಕೊಡುತ್ತಿದ್ದರು. ಇಲ್ಲವೇ ತಮ್ಮ ಅಧಿಕಾರ ಬಳಸಿ ಪರಿಚಯಸ್ಥರಿಂದ ಕೆಲಸ ಕೊಡಿಸುತ್ತಿದ್ದರು. ಈ ರೀತಿ ನೂರುಲ್ಲಾ ನೆರವಿನಿಂದ ಕೆಲಸ ಪಡೆದವರು, ಇನ್ಸ್‌ಪೆಕ್ಟರ್, ದಫೇದಾರ್, ಪೇದೆಗಳು ಇನ್ನೂ ಮುಂತಾದ ಪ್ರಮುಖ ಹುದ್ದೆಗಳಲ್ಲಿ ನಿಯೋಜನೆಗೊಂಡು ಬಾಳು ನಡೆಸಿದ್ದಾರೆ.

ಹೀಗೆ ತಮ್ಮ ಬಳಿ ಬಂದವರಿಗೆಲ್ಲಾ ಒಂದಲ್ಲಾ ಒಂದು ಕೆಲಸ ಕೊಡಿಸುತ್ತಿದ್ದ ನೂರುಲ್ಲಾ ಸಾಬ್‌ಗೆ ಯಾವುದೇ ಕೆಲಸ ಇರಲಿಲ್ಲ. ಒಮ್ಮೆ ಭರಣಯ್ಯನವರು ನೂರುಲ್ಲಾ ಸಾಬರನ್ನು ಕೇಳಿಬಿಟ್ಟರು. 'ನೂರುಲ್ಲಾಸಾಬ್ ನೀವು ಇದುವರೆಗೂ ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ಮಾತ್ರ ಕೆಲಸ ಕೇಳಿದ್ದೀರಿ. ನಿಮಗೆ ಬೇಡವೋ', ಅದಕ್ಕೆ ನೂರುಲ್ಲಾಸಾಬ್ ಅಳುಕುತ್ತಾ ಸಂಕೋಚದಲ್ಲಿ 'ಬೇಕೆಂದು' ತಲೆಯಾಡಿಸಿದರು. ಆಗ ಕೂಡಲೇ ಭರಣಯ್ಯ ನೂರುಲ್ಲಾ ಸಾಬ್‌ಗೆ ಮಡಿಕೇರಿ ಉಗ್ರಾಣ ನಿಗಮದಲ್ಲಿ ವಾಚ್‌ಮನ್ ಕೆಲಸ ಕೊಡಿಸಿದರು. ತಿಂಗಳಿಗೆ 50 ರೂ. ಪಗಾರ. ದುರದೃಷ್ಟವಶಾತ್ ನೂರುಲ್ಲಾ ಹೆಚ್ಚಾಗಿ ಓದಿರಲಿಲ್ಲ. ಓದಿದ್ದರೆ ಸರ್ಕಾರದ ಉನ್ನತ ಉದ್ಯೋಗವನ್ನೇ ಕೊಡಿಸುತ್ತಿದ್ದರೋ ಏನೋ.. ಆಗ ಭರಣಯ್ಯ ಉಗ್ರಾಣ ನಿಗಮದ ಕಾರ್ಯದರ್ಶಿಯಾದ್ದರಿಂದ ನೇರವಾಗಿ ಕೆಲಸ ನೀಡಿದರು. ನೂರುಲ್ಲಾಸಾಬ್‌ರ ಸಂತೋಷಕ್ಕೆ ಎಣೆಯೇ ಇಲ್ಲ. 'ಅಲ್ಲಾ'ನೇ ಎದುರು ನಿಂತು ಆಶೀರ್ವದಿಸಿದಂತೆ ತೋರಿತು. ಖುಷಿಯಿಂದ ಕೆಲಸಕ್ಕೆ ಹೋದರು. ಭರಣಯ್ಯನವರ ಸೋಮನಾಥಪುರದ ಜಮೀನಿನಲ್ಲಿ ಬೆಳೆ ಬೆಳೆದರೆ ಅದರಲ್ಲಿ ನೂರುಲ್ಲಾ ಸಾಬ್ ಸ್ವಲ್ಪ ಪಾಲು ಪಡೆಯುತ್ತಿದ್ದರಂತೆ. ಹೀಗೆ 'ಅವರು ಅನ್ನ ನೀಡಿ ಕೆಲಸ ನೀಡಿ ನಮ್ಮ ಸಂಸಾರಕ್ಕೆ ದಿಕ್ಕಾದವರು' ಎಂದು ಕೃತಜ್ಞತೆಯಿಂದ ಈಗಲೂ ನೆನೆಯುತ್ತಾರೆ. ಹೀಗಿರುವಾಗ ಯಾರೂ ಬೇಡವೆಂದರೂ, ಭರಣಯ್ಯ ಕೊಳ್ಳೇಗಾಲದಲ್ಲಿ ವಿಧಾನಸಭಾ ಚುನಾವಣೆಗೆ ನಿಂತರು. ಅವರ ನಿರ್ಧಾರದ ಹಿಂದೆ ಅವರ ಭಾವಮೈದುನ ಇದ್ದರು. ಇದಕ್ಕೆ ನೂರುಲ್ಲಾ ಸಾಬ್ ಹೇಳುವುದು. "ಅಂಥ ದೊಡ್ಡಮನುಷ್ಯನನ್ನ ಈ ಜನ ಕೈಬಿಟ್ಟರು. ಅವರು ಈ ರಾಜಕೀಯಕ್ಕೆ ಬರಲೇಬಾರದಿತ್ತು. ಬಂದರು. ಆದರೆ ಜನ ಅವರನ್ನ ಬೆಂಬಲಿಸಲಿಲ್ಲ. ಅವರ ಋಣ ತಿಂದವರು ಕೈ ಹಿಡಿಯಲಿಲ್ಲ. ಇದು ನಾವೆಲ್ಲ ಅವರಿಗೆ ಮಾಡಿದ ಮೋಸ" ಇದು ನೂರುಲ್ಲಾಸಾಬ್‌ರ ಕಳವಳ. "ಅವರು ಜನಕ್ಕೆ ಕೊಟ್ಟ ಹಣ ದುರುಪಯೋಗವಾಯ್ತು ಮತ್ತು ಪ್ರಚಾರದ ಕೊರತೆಯಿಂದ ಸೋತುಹೋದರು" ಎಂದು ವಿಷಾದಿಸುತ್ತಾರೆ.

"ಭರಣಯ್ಯ ಜನರಿಗೆ ಮಾಡಿದ ದೊಡ್ಡ ಉಪಕಾರವೆಂದರೆ, ಅವರಿಗೆ ನೌಕರಿ ಅಂತ ಕೊಡಿಸಿದ್ದು. ಕೆಲಸ ಬೇಡಿ ಬಂದವರಿಗೆ ಒಂದು ಪತ್ರ ಕೊಡುತ್ತಿದ್ದರು. ಅದನ್ನು ಅವರು ಸಂಬಂಧಿಸಿದ ಇಲಾಖೆಗೆ ತೋರಿಸಿದರೆ ಕೆಲಸ ಗ್ಯಾರಂಟಿ ಸಿಗುತ್ತಿತ್ತು. ಭರಣಯ್ಯನವರ ಪ್ರಭಾವ, ಜನಮನ್ನಣೆ, ಗೌರವ ಆ ಕಾಲದಲ್ಲಿ ಎಲ್ಲರಲ್ಲೂ ಇತ್ತು. ಆದರೆ ಜನ ಚುನಾವಣೆಯಲ್ಲಿ ಕೈ ಹಿಡಿಯದೆ ಅನ್ಯಾಯ ಮಾಡಿದರು".

ಭರಣಯ್ಯನವರ ಎಲ್ಲ ತಮ್ಮಂದಿರೂ ಓದಿ ಒಳ್ಳೆಯ ಉದ್ಯೋಗದಲ್ಲಿದ್ದರು. ಆದರೆ ಅವರ ಮೊದಲನೆ ತಮ್ಮ ಜಗನ್ನಾಥಯ್ಯ ಸಂಸಾರದ ನೊಗ ಹೊತ್ತು ಊರಲ್ಲಿಯೇ ನೆಲೆಸಿದ್ದರು. ತಮಗಿದ್ದ ಜಮೀನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಅವರ ಜೊತೆಯಲ್ಲಿ ನೂರುಲ್ಲಾ ಸಾಬ್ ಅನ್ಯೋನ್ಯವಾಗಿದ್ದರು. ಇಬ್ಬರೂ ಅಣ್ಣತಮ್ಮಂದಿರ ರೀತಿ ಇರುತ್ತಿದ್ದರು. ಜಗನ್ನಾಥಯ್ಯರ ಪ್ರತಿ ಕೆಲಸದ ಹಿಂದೆ ನೂರುಲ್ಲಾ ಸಾಬ್ ಇರುತ್ತಿದ್ದರು.

ಭರಣಯ್ಯ ಊರಿಗೆ ಬಂದಾಗ ಸಾಮಾನ್ಯವಾಗಿ ಯಾರ ಮನೆಗೂ ಹೋಗುತ್ತಿರಲಿಲ್ಲ. ಎಲ್ಲಾ ಅವರ ಮನೆಗೆ ಬರುತ್ತಿದ್ದರು. ನೂರುಲ್ಲಾ ಸಾಬ್, 'ರಂಜಾನ್, ಬಕ್ರೀದ್, ಈದ್-ಮಿಲಾದ್' ಹಬ್ಬ ಮಾಡಿದರೆ ಭರಣಯ್ಯನವರಿಗೆ ಬಿರಿಯಾನಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು. ಭರಣಯ್ಯ ಇವರನ್ನು ಪಕ್ಕದಲ್ಲೇ ಕರೆದು ಕೂರಿಸಿಕೊಳ್ಳುತ್ತಿದ್ದರು. ನೂರುಲ್ಲಾ ಸಾಬ್ ಬೆಂಗಳೂರಿಗೆ ಹೋದರೆ ಅಥವಾ ಅಲ್ಲಿ ಉಳಿಯಬೇಕಾಗಿ ಬಂದರೆ ಇವರಿಗೆ ಉಳಿದುಕೊಳ್ಳಲು ಎಲ್ಲಾ ವ್ಯವಸ್ಥೆ ಮಾಡಿಸುತ್ತಿದ್ದರು. "ನೋಡಿ ಇವರಿಗೆ ತಿಂಡಿ, ಊಟ ಮಾಡಿಸಿ. ಊರಿಗೆ ಹೋಗುವಾಗ ಕೈಗೆ 20-30 ರೂ. ಕೊಡಿ. ಇವರು ನನಗೆ ತುಂಬಾ ಬೇಕಾದವರು" ಎಂದು ತಮ್ಮವರಿಗೆ ಹೇಳಿದ್ದರು. ಊಟಕ್ಕೆ ಕರೆದುಕೊಂಡು ಹೋಗಲು ತಮ್ಮ ಚಾಲಕ ಚನ್ನಯ್ಯನವರಿಗೆ ನೇಮಿಸಿದ್ದರು. ಅಲ್ಲದೆ ನರಸಿಂಹಯ್ಯ ಎಂಬ ಇನ್ಸ್‌ಪೆಕ್ಟರ್ ಭರಣಯ್ಯನವರಿಗೆ ಆಪ್ತರು. ಅವರು ಕೂಡ ನೂರುಲ್ಲಾರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು.

ನುರುಲ್ಲಾಸಾಬರ ಇನ್ನೊಂದು ನೆನಪು ಇದು. ಸಾಮಾನ್ಯವಾಗಿ ನಮ್ಮ ಗುಣ ನಡವಳಿಕೆಗಳು ನಮ್ಮ ಪೂರ್ವಜರನ್ನು ಅವಲಂಬಿಸಿರುತ್ತವೆ. ತಾತ ಮತ್ತು ತಂದೆಯ ಗುಣಗಳು ಅರ್ಧದಷ್ಟಾದರೂ ಮಕ್ಕಳಿಗೆ ರವಾನೆ ಆಗಿರುತ್ತವೆ. ಇದು ಭರಣಯ್ಯನವರಲ್ಲಿ ಸ್ಪಷ್ಟವಾಗುತ್ತದೆ. ಭರಣಯ್ಯನವರ ತಂದೆ ಬಡಬಗ್ಗರಿಗೆ ತಮ್ಮ ಹೊಲದಲ್ಲಿ ಬೆಳೆದ ದವಸಧಾನ್ಯಗಳನ್ನು ಕೊಡುತ್ತಿದ್ದರು. ಇದೇ ಗುಣ ಭರಣಯ್ಯನವರಿಗೂ ಇತ್ತು. ಊರಿನಲ್ಲಿ ಯಾರಾದರೂ ಮದುವೆ, ಹಬ್ಬ ಮಾಡಿದರೆ ಅಂಥವರಿಗೆ ತಮ್ಮ ಮನೆಯಿಂದ ಧನಸಹಾಯದ ಜೊತೆ ದವಸ ಧಾನ್ಯ ಕೊಡುವಂತೆ ವ್ಯವಸ್ಥೆ ಮಾಡಿದ್ದರು.

ನೂರುಲ್ಲಾ ಸಾಬ್ ನೆನೆಸಿಕೊಂಡ ಮತ್ತೊಂದು ವಿಶೇಷ ನೆನಪು ಇದು. "ಗರ್ಗೇಶ್ವರಿಯಲ್ಲಿ ಇದ್ದ ಒಬ್ಬ ಮೇಷ್ಟ್ರು ತಮಗೆ ಕೆಲಸ ಕೊಡಿಸುವಂತೆ ನನ್ನ ಬಳಿ ಬಂದರು. ಅವರನ್ನು ನೂರುಲ್ಲಾಸಾಬ್ ಭರಣಯ್ಯನವರ ಬಳಿ ಕರೆದುಕೊಂಡು ಹೋದರು. ಭರಣಯ್ಯ ಅವರಿಗೆ ಇನ್ಸ್‌ಪೆಕ್ಟರ್ ಕೆಲಸ ಕೊಡಿಸಿದರು. ಆನಂತರ ಆ ವ್ಯಕ್ತಿ ತಿ.ನರಸೀಪುರಕ್ಕೆ ಇನ್ಸ್‌ಪೆಕ್ಟರ್ ಆಗಿ ವರ್ಗವಾಗಿ ಬಂದರು. ಆಗ ನೂರುಲ್ಲಾ ಅವರನ್ನು ಭೇಟಿಯಾದರು. ಅವರು "ನಿಮಗೇನಾದರು ಸಹಾಯಬೇಕಾ.......?" ಎಂದು ಕೇಳಿದರು. ಆಗ ನೂರುಲ್ಲಾಸಾಬ್ ಕೇಳಿದ್ದು "ನಮ್ಮೂರಿಗೊಂದು ಶಾಲೆ" ಬೇಕು ಎಂದು. ಅವರು ಶಾಲೆ ಮಂಜೂರು ಮಾಡಿಸಿಕೊಟ್ಟರಂತೆ.

ಹೀಗೆ ಭರಣಯ್ಯನವರ ಒಡನಾಟವನ್ನು ತಮಗೆ ತಿಳಿದಷ್ಟು ಹೇಳಿದ ನೂರುಲ್ಲಾಗೆ ಈಗಲೂ ಒಂದು ನೋವಿದೆ. ಅದು ಕಡೆಯ ಸಲ ಭರಣಯ್ಯನವರ ಮುಖ ನೋಡದಿದ್ದುದು. ಭರಣಯ್ಯ ಸತ್ತಾಗ ಇವರು ಮಡಿಕೇರಿಯಲ್ಲಿದ್ದರು ಅವರ ಅಂತ್ಯಸಂಸ್ಕಾರಕ್ಕೆ ಬರಲು ರಜೆ ಕೇಳಿದರಂತೆ. ಅದಕ್ಕೆ ಅಲ್ಲಿದ್ದ ಅಧಿಕಾರಿ ಹೇಳಿದ್ದೇನು ಗೊತ್ತೆ "ಹೋಗಯ್ಯ ಕೆಲ್ಸ ಮಾಡು. ಅವರಿಗೂ ನಿನಗೂ ಏನು ಸಂಬಂಧ?" ಪಾಪ! ಆ ಅಧಿಕಾರಿಗೇನು ಗೊತ್ತು ಇವರ ಸಂಬಂಧ 'ಇದನ್ನೇ ವಿಧಿ ಆಟವೆನ್ನುವುದು' ಎಂದು ನೂರುಲ್ಲಾ ಹನಿಗಣ್ಣಾದರು. ಒಟ್ಟಿನಲ್ಲಿ ಅವರನ್ನು ಕಡೇ ಬಾರಿ ನೋಡದೇ, ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸದೇ ಇದ್ದುದಕ್ಕೆ ಇವತ್ತಿಗೂ ವಿಷಾದ ತುಂಬಿಕೊಂಡಿದೆ. 'ಅಂತಹ ವ್ಯಕ್ತಿ ಮತ್ತೊಬ್ಬ ಹುಟ್ಟುತ್ತಾರ' ಎಂದು ತಮ್ಮ ಉದ್ದನೆಯ ಬಿಳಿಯ ಗಡ್ಡ ನೀವಿಕೊಂಡು ಆಕಾಶದತ್ತ ನೋಡಿ ನಿಟ್ಟುಸಿರುಬಿಟ್ಟರು.

ದಯಾಮಯಿ ದಾಯಾದಿ

ಎಸ್. ಆರ್. ವರದರಾಜು

ಮಾಜಿ ಜಿಲ್ಲಾಪಂಚಾಯ್ತಿ ಸದಸ್ಯರು

"ಭರಣಯ್ಯನವರ ಕುಟುಂಬ ಇಂದು ಹತ್ತಾರು ಕವಲುಗಳಾಗಿ ಬೆಳೆದಿರಬಹುದು. ಆದರೆ ನಮ್ಮ ಕುಟುಂಬದಲ್ಲಿ ಒಳ್ಳೆ ಕೆಲಸಮಾಡಿದವರೆಂದರೆ ಅವರೊಬ್ಬರೆ" ಎಂದು ಭರಣಿ ಚೌಡಯ್ಯನವರ ಮೂರನೇ ಮಗನಾದ ಬಿ. ರಾಮಯ್ಯನವರ ಮಗ ಎಸ್.ಆರ್. ವರದರಾಜು ನೆನೆಯುತ್ತಾರೆ. ನೇರವಾಗಿ ವರದರಾಜು ಆರ್. ಭರಣಯ್ಯನವರ ಚಿಕ್ಕಪ್ಪನ ಮಗ ಎನ್ನಬಹುದು. ತಿ. ನರಸೀಪುರ ತಾಲ್ಲೂಕಿನ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು.

ಇವರು ಭರಣಯ್ಯನವರ ಚುನಾವಣೆ ಸಂದರ್ಭದ ನೆನಪುಗಳನ್ನು ಹಂಚಿಕೊಂಡರು. "ಆಗ ಭರಣಯ್ಯ ಸರ್ಕಾರಿ ಹುದ್ದೆಯ ನಿವೃತ್ತಿಯ ಅಂಚಿನಲ್ಲಿದ್ದರು. ಅದೇ ಸಮಯಕ್ಕೆ

ವಿಧಾನ ಸಭಾ ಚುನಾವಣೆ ನಡೆಯುತ್ತಿತ್ತು. ಆಗ ಇಂದಿರಾ ಕಾಂಗ್ರೇಸ್ ಮತ್ತು ನಿಜಲಿಂಗಪ್ಪ ಕಾಂಗ್ರೇಸ್ ಎಂದು ಕಾಂಗ್ರೇಸ್ ಎರಡು ಹೋಳಾಗಿತ್ತು. ಕೊಳ್ಳೇಗಾಲದಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಸಿದ್ದಮಾದಯ್ಯ ಸ್ಪರ್ಧಿಸಿದ್ದರು. ಅವರ ವಿರುದ್ಧ ತಕ್ಕ ಪ್ರತಿಸ್ಪರ್ಧಿ ಹುಡುಕುತ್ತಿದ್ದ ನಿಜಲಿಂಗಪ್ಪ ಕಾಂಗ್ರೆಸ್‌ನ ಕಟ್ಟಾಳುಗಳ ಕಣ್ಣಿಗೆ ಬಿದ್ದದ್ದು ಆರ್. ಭರಣಯ್ಯ. ಅದಾಗಲೇ ರಾಜಕೀಯದಲ್ಲಿ ಪಳಗಿದ್ದ ಗುರುಪಾದಸ್ವಾಮಿ ಮತ್ತು ಎಂ. ರಾಜಶೇಖರಮೂರ್ತಿ ಭರಣಯ್ಯನವರಿಂದ ಕೆಲಸಕ್ಕೆ ರಾಜಿನಾಮೆ ಕೊಡಿಸಿ ಅವರನ್ನು ಸ್ಪರ್ಧಾಕಣಕ್ಕೆ ಇಳಿಸಲು ತಯಾರಿ ನಡೆಸಿದರು. ಇದಕ್ಕೆ ಭರಣಯ್ಯ ಸಮ್ಮತಿಸಿದರು ಕೂಡ. ಭರಣಯ್ಯನವರ ಈ ನಿರ್ಧಾರ ಕಂಡು ಅಂದಿನ ಮತ್ತೊಬ್ಬ ರಾಜಕಾರಣಿ ಟಿ.ಪಿ. ಬೋರಯ್ಯನವರು "ನೀವು ಈಗ ನಿಲ್ಲುವುದು ಬೇಡ, ನೀವು ನಿಂತರೆ ಸೋತು ಹೋಗಬಹುದು. ಅದೂ ಅಲ್ಲದೆ ರಾಜಕೀಯ ನಿಮಗಲ್ಲ, ಕೊಳ್ಳೆಗಾಲದಲ್ಲಿ ಜನಗಳು ನಿಮ್ಮನ್ನು ಖಂಡಿತಾ ಸೋಲಿಸುತ್ತಾರೆ." ಎಂದು ತಿಳಿ ಹೇಳಿದರಂತೆ. ಆದರೆ ಭರಣಯ್ಯನವರಲ್ಲಿ ಒಂದು ಅದಮ್ಯ ವಿಶ್ವಾಸವಿತ್ತು. ಅದಕ್ಕೆ "ಇಲ್ಲ ಬೋರಪ್ಪ ನಾನು ಖಂಡಿತ ಗೆಲ್ಲುತ್ತೇನೆ" ಎಂದು ಹೇಳಿದ್ದರಂತೆ.

ಒಂದು ವೇಳೆ ಭರಣಯ್ಯ ಗೆದ್ದರೆ ಅವರಿಗೆ ಜನಪ್ರಿಯತೆ ಹೆಚ್ಚಾಗುತ್ತದೆ ಆಗ ಬೇರೆಯವರಿಗೆ ಅವಕಾಶ ಇರುವುದಿಲ್ಲ ಎಂಬುದನ್ನು ಮನಗಂಡು ಅವರನ್ನು ಸೋಲಿಸಲು ತೆರೆಮರೆಯಲ್ಲಿ ಕೆಲಸ ಮಾಡಿದ್ದರು. ಒಟ್ಟಿನಲ್ಲಿ "ಭರಣಯ್ಯನವರನ್ನು ಕಾಲೆಳೆದು ಸೋಲಿಸಿದ್ದು ಬೇರಾರು ಅಲ್ಲ ನಮ್ಮ ಜನಗಳೇ" ಎಂದು ವರದರಾಜು ಅವರ ಸ್ಪಷ್ಟ ನುಡಿ. "ಜಾತಿಗೆ ಜಾತಿ ವೈರಿ, ನೀರಿಗೆ ಪಾಚಿ ವೈರಿ" ಎಂಬುದನ್ನು ಅಂದಿನ ಜನರು ಆಗಲೇ ಸಾಧಿಸಿ ತೋರಿಸಿದ್ದರು ಎಂಬುದು ವರದರಾಜು ಅವರ ನೇರ ಆರೋಪ!

ಅವರ ಒಂದು ಸಹಿಗೆ ಎಷ್ಟೋ ಜನಕ್ಕೆ ನೌಕರಿ ಸಿಕ್ಕಿ ಅವರ ಬದುಕು ನೆಲೆಯಾಗುತ್ತಿತ್ತು. ಆಗಿನ ಕಾಲ ಹಾಗಿತ್ತು. ಬಡವ ಅಂದರೆ ಕರೆದು ಕೆಲಸ ಕೊಡುತ್ತಿದ್ದರು. ಭರಣಯ್ಯನವರ ತಾತ ಮುತ್ತಾತರು ಮಾಡಿದ್ದ ದಾನ ಧರ್ಮಗಳು ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದವು. ರಾಜಶೇಖರಮೂರ್ತಿಯವರು ಒಮ್ಮೆ ಹೇಳುತ್ತಿದ್ದರಂತೆ ರಾಜಕೀಯ ಎಂದರೆ ಅರ್ಥ ಬೇರೆ. ರಾ–ಅಂದರೆ ರಾವಣ, ಜ–ಜರಾಸಂಧ, ಕೀ–ಕೀಚಕ, ಯ–ಯಮ. ಈ ನಾಲ್ವರ ಗುಣಗಳಿದ್ದರೆ ಮಾತ್ರ ಅವನು ರಾಜ್ಯ ಆಳಬಹುದು. ಒಂದು ಗುಣ ಹೆಚ್ಚು ಕಮ್ಮಿ ಆದರೂ ರಾಜ್ಯ ಆಳೋಕೆ ಆಗಲ್ಲ ಅಂಥ. ರಾಜಕೀಯ ಮಾಡಕ್ಕಾಗಲ್ಲ. ಬಹುಶಃ ಭರಣಯ್ಯನವರಲ್ಲಿ ಇಂಥ ಯಾವಗುಣಗಳು ಇರಲಿಲ್ಲ. ಜನರೆಲ್ಲ ಭರಣಯ್ಯನವರನ್ನು ಧರ್ಮರಾಯ ಎನ್ನುತ್ತಿದ್ದರಂತೆ, ಊರಿನವರಿಗೆ ತಾವು ಬಂದು ಸಹಾಯ ಮಾಡಲು ಸಾಧ್ಯವಾಗದಿದ್ದರೆ ಅದನ್ನು ತಮ್ಮಂದಿರಿಗೆ ವಹಿಸುತ್ತಿದ್ದರು. ಯಾವ ಜಾತಿ, ಧರ್ಮದ

ಬಡವ ಬಂದು ಮಗಳ ಮದುವೆ ಎಂದರೆ ಅವರಿಗೆ ಮುಕ್ತ ಮನಸ್ಸಿನಿಂದ ಧನಸಹಾಯ ಮಾಡುತ್ತಿದ್ದರು. ಅವರ ನೆನಪಿನ ಶಕ್ತಿ ಎಷ್ಟು ಚುರುಕಾಗಿತ್ತೆಂದರೆ ತಮ್ಮನ್ನು ಭೇಟಿ ಮಾಡಿದ ಎಲ್ಲರನ್ನು ನೆನಪಿಟ್ಟುಕೊಂಡು ಮತ್ತೆ ಸಿಕ್ಕಾಗ ತಾವೇ ಹೆಸರಿಡಿದು ಮಾತನಾಡಿಸುತ್ತಿದ್ದರು.

"ಒಬ್ಬ ಮನುಷ್ಯ ಅಂದಮೇಲೆ ಆತನಲ್ಲೂ ಕೆಟ್ಟಗುಣಗಳು ಇರುತ್ತವೆ, ಮನುಷ್ಯ ಸಹಜವಾದ ಆಸೆ, ಆಕಾಂಕ್ಷೆಗಳು ಇರುತ್ತವೆ, ಹೀಗಿದ್ದಾಗ್ಯೂ ಭರಣಯ್ಯನವರನ್ನು ಯಾಕೆ ಶ್ರೇಷ್ಠ ಎಂದು ಒಪ್ಪಿಕೊಳ್ಳಬೇಕೆಂದು ಕೆಲವರು ವಾದ ಮಾಡಬಹುದು. ಆದರೆ ಅದಕ್ಕೆ ತಕ್ಕ ಕಾರಣಗಳಿವೆ. ಎಲ್ಲರೂ ಮಾಡುವ ಸಹಾಯ, ದಾನಕ್ಕಿಂತ ಭರಣಯ್ಯನವರ ಸಹಾಯ ಹೆಚ್ಚಿತ್ತು. ನಾವುಗಳು ಹತ್ತು ಜನಕ್ಕೆ ಸಹಾಯ ಮಾಡಬೇಕು ಅಂತ ಅಂದುಕೊಂಡರೆ ಕನಿಷ್ಠ 2 ರಿಂದ 3 ಜನರಿಗೆ ಮಾತ್ರ ಸಹಾಯ ಮಾಡುತ್ತೇವೆ. ಆದರೆ ಭರಣಯ್ಯ ಇರುವ ಹತ್ತುಜನರಿಗೆ ಮತ್ತೊಬ್ಬರನ್ನು ಸೇರಿಸಿ ಹನ್ನೊಂದು ಜನಕ್ಕೂ ತಮ್ಮ ನೆರವಿನ ಹಸ್ತ ಚಾಚುತ್ತಿದ್ದರು. ಅವರ ಆ ಗುಣಕ್ಕೆ ಮಿತಿಯೆಂಬುದು ಇರಲಿಲ್ಲ ಈ ಕಾರಣಕ್ಕೆ ಭರಣಯ್ಯನವರು ಶ್ರೇಷ್ಠರಾಗಿ ನಿಲ್ಲುತ್ತಾರೆ" ಎಂಬುದು ವರದರಾಜು ನಿಲುವು.

ವರದರಾಜುರವರು ಹೇಳಿದಂತ ಇನ್ನೊಂದು ನೆನಪು ಭರಣಯ್ಯನವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. "ಭರಣಯ್ಯನವರ ಕಾಲದಲ್ಲಿ ಜಾತಿ ವ್ಯವಸ್ಥೆ ಬಲವಾಗಿ ಬೇರೂರಿತ್ತು. ಭರಣಯ್ಯ ಉತ್ತಮರ ಮನೆಗಳಿಗೆ ಹೋದರೂ ಒಂದು ಲೋಟ ನೀರು ಕುಡಿಯುತ್ತಿರಲಿಲ್ಲ. ಕಛೇರಿಗೆ ಹೋದರೂ ಬಾಕ್ಸಿನಲ್ಲೇ ಮನೆಯಿಂದ ಊಟ ತೆಗೆದುಕೊಂಡು ಹೋಗುತ್ತಿದ್ದರು. ಜೊತೆಗೆ ತಾಯಿ ತಂದೆ ಹಾಕಿದ ಗೆರೆ ದಾಟುತ್ತಿರಲಿಲ್ಲ. ಜೀವನ ಪೂರ್ತಿ ತಂದೆ ತಾಯಿಯ, ಮಾತಿನಂತೆ ನಡೆದರು. ತಂದೆ ತಾಯಿಗಳನ್ನು ಎಷ್ಟು ಗೌರವಿಸುತ್ತಿದ್ದರೆಂದರೆ ಅವರ ಮುಂದೆ ಇವರು ಕೂರುತ್ತಿರಲಿಲ್ಲ. "ನಮಗೆ ಎಂಥಾ ಒಳ್ಳೆಯ ಮಗ ಹುಟ್ಟಿದ" ಎಂದು ಅವರು ಕಂಡಕಂಡವರ ಬಳಿ ಕೊಂಡಾಡುತ್ತಿದ್ದರು.

"ಭರಣಯ್ಯ ತಮ್ಮ ಕಾಲಾವಧಿಯಲ್ಲಿ ಸೋಮನಾಥಪುರವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಮಾಡಲು ಶ್ರಮಪಟ್ಟಿದ್ದರು. ಅಲ್ಲಿ ಒಂದು ಕಟ್ಟಡ ಕಟ್ಟಲು ಪ್ರಯತ್ನಿಸಿದ್ದರು. ಆದರೆ ಕೆಲವರು ಅಡ್ಡಗಾಲು ಹಾಕಿದ್ದರು. ಅದು ಇಲ್ಲಿ ಬೇಡ ಊರ ಹೊರಗೆ ಇರಲಿ ಎಂದು ಒಕ್ಕಲಿಗ ಸಮುದಾಯದ ಕೆಲವರು ಅದರಲ್ಲಿ ಹೋಟೆಲ್ ಶುರುವಾದರೆ ಹೊಲೆಯರು, ಮಾದಿಗರು, ನಾವೆಲ್ಲ ಒಟ್ಟಾಗಿ ಕಾಫಿ, ಟೀ ಕುಡಿಯಲು ಆಗುತ್ತದೆಯಾ.. ಅದಕ್ಕೆ ಬೇಡವೇ ಬೇಡ ಎಂದಿದ್ದರಂತೆ. ಆಗ ಭರಣಯ್ಯನವರು "ಏನು ಗೌಡರೇ, ಹೋಟೆಲ್‌ಗೆ ಹೊಲೆಯ ಮಾದಿಗರು ಬರುತ್ತಾರೆ ಅಂತ ತಾನೇ ನೀವು ಬೇಡ ಅನ್ನುವುದು, ನೀವು ಬರುವುದೇ ಬೇಡ ನಮ್ಮ ಜನರೇ ಕುಡಿಯುತ್ತಾರೆ ಬಿಡಿ" ಎಂದು ಹೇಳಿದ್ದರಂತೆ.

ನಂತರ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ತಪ್ಪಿಸುವ ಸಲುವಾಗಿ "ಅಲ್ಲಿ ಟೂರಿಸಂ ಹೋಟೆಲ್ ನಡೆಯೋದೆ ಬೇಡ, ಮಕ್ಕಳಿಗೆ ಶಾಲೆಯಾಗಲಿ" ಎಂದಿದ್ದರಂತೆ. ಹೀಗೆ ಭರಣಯ್ಯ ತಮ್ಮ ಗ್ರಾಮಕ್ಕೆ ಬೇಕಾದ್ದು ಮಾಡಲು ಸಿದ್ಧರಿದ್ಧರು. ಆದರೆ ಅಲ್ಲಿನವರೇ ಅವಕಾಶ ಕೊಡಲಿಲ್ಲ".

ಕೊನೆಯದಾಗಿ ವರದರಾಜು ಕೊಂಡಾಡಿದ್ದು ಭರಣಯ್ಯನವರ ಕೌಟುಂಬಿಕ ಪ್ರೇಮ ಮತ್ತು ಅವರ ಮಡದಿಯನ್ನು. ಹೇಳಿ ಕೇಳಿ ಭರಣಯ್ಯ ವರದರಾಜು ದಾಯಾದಿಗಳು. ದಾಯಾದಿ ಮತ್ಸರ ಎಂಬುದು ಬೇರೆಯವರ ಮನಸ್ಸಿನಲ್ಲಿ ಇದ್ದಿರಬಹುದು ಆದರೆ ಅದು ಭರಣಯ್ಯನವರಲ್ಲಿ ಕಿಂಚಿತ್ತು ಇರಲಿಲ್ಲ ಎಂಬುದು ಈ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಸೋಮನಾಥಪುರದಲ್ಲಿ ಭರಣಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದ ಜಮೀನಿತ್ತು. ಈಗಲೂ ಸ್ವಲ್ಪ ಇದೆ. ಅವರಿದ್ದಾಗ ಅದರ ಉಸ್ತುವಾರಿಯನ್ನು ಭರಣಯ್ಯನವರ ಮಗ ನೋಡಿಕೊಳ್ಳುತ್ತಿದ್ದರು. ಒಮ್ಮೆ ಅವರ ಮಗ ಜಮೀನಿನ ಬಳಿ ಇರುವಾಗ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ವರದರಾಜು ಮತ್ತು ಅವರ ಮಗನಿಗೆ ಜಗಳವಾಗಿದೆ. ಇದನ್ನೇ ನೆಪವಾಗಿಟ್ಟುಕೊಂಡ ವರದರಾಜು ಅವರ ಮಗನಿಗೆ ಒಂದು ಏಟು ಹೊಡೆದಿದ್ದರಂತೆ... ಆತ ಜಮೀನಿನಲ್ಲಿ ಬಿದ್ದ ತಕ್ಷಣ ವರದರಾಜು ಮನೆಗೆ ಓಡಿ ಬಂದಿದ್ದರಂತೆ... ಈ ಘಟನೆ ನಡೆದಾಗ ಭರಣಯ್ಯ ಗೃಹ ಕಾರ್ಯದರ್ಶಿಯಾಗಿದ್ದರು. ಅಂದ ಮೇಲೆ ಕೇಳಬೇಕೆ? ವಿಷಯ ಗೃಹ ಇಲಾಖೆಗೆ ತಿಳಿದದ್ದೇ ತಡ, ಪೊಲೀಸ್ ತಂಡೋಪತಂಡವಾಗಿ ವಾಹನಗಳಲ್ಲಿ ಸೋಮನಾಥಪುರಕ್ಕೆ ಬಂದಿಳಿದರು.. ವರದರಾಜು ಅವರನ್ನು ಬಂಧಿಸಲು. ವಿಷಯ ತಿಳಿದ ಭರಣಯ್ಯ ಸೋಮನಾಥಪುರಕ್ಕೆ ಧಾವಿಸಿದರು. ವರದರಾಜು ಅವರನ್ನು ಬಂಧಿಸಲು ಅನುವಾಗಿದ್ದ ಪೊಲೀಸರನ್ನು ತಡೆದರು. ಅವನಿಗೆ ನನ್ನ ಮಗನಿಗೆ ಹೊಡೆಯಲು ಹಕ್ಕಿದೆ.. ಅವನು ಬೇರೆಯಾರೂ ಅಲ್ಲ ನನ್ನ ತಮ್ಮ, ನನ್ನ ಮಗನೇ ಏನೋ ತಪ್ಪು ಮಾಡಿರಬೇಕು. ಇದನ್ನು ದೊಡ್ಡದು ಮಾಡಬೇಡಿ ನಾವುಗಳೇ ಬಗೆಹರಿಸಿಕೊಳ್ಳುತ್ತೇವೆ ಎಂದು ಪೊಲೀಸರನ್ನು ಹಿಂದಕ್ಕೆ ಕಳುಹಿಸಿದರಂತೆ.

ಮುಂದೊಂದು ದಿನ ವರದರಾಜು ಬೆಂಗಳೂರಿನಲ್ಲಿ ಭರಣಯ್ಯನವರನ್ನು ಭೇಟಿ ಆಗುವುದಿತ್ತು. ಆಗ ವರದರಾಜು ಅಣ್ಣನಿಗೆ ಹೇಗೆ ಮುಖ ತೋರಿಸುವುದು? ನಾನು ತಪ್ಪು ಮಾಡಿದ್ದೇನಲ್ಲ ಎಂದು ಹೊರಗೆ ನಿಂತಿದ್ದರಂತೆ. ಆಗ ಭರಣಯ್ಯ ಒಳಗೆ ಕರೆಸಿಕೊಂಡು 'ಯಾಕಪ್ಪಾ ಆಚೆ ನಿಂತಿದ್ದೀಯ ಒಳಗೆ ಬಾ.. ಎಷ್ಟೇ ಆದ್ರೂ ನೀನು ನನ್ನ ತಮ್ಮ, ಏನೋ ಕೆಟ್ಟಗಳಿಗೆ ಆಗೋಯ್ತು...' ಎಂದು ಮಾತಾಡಿಸಿದರಂತೆ. ಆಗ ಇಬ್ಬರ ಕಣ್ಣಲ್ಲೂ ನೀರು ಜಿನುಗುತ್ತಿತ್ತಂತೆ.

ಮತ್ತೆಂದೂ ಹುಟ್ಟದ ಅಪರೂಪದ ಜೀವ

ರಾಮಚಂದ್ರಪ್ಪ

ನಿವೃತ್ತ ಶಿಕ್ಷಕರು, ಸೋಮನಾಥಪುರ

"ಭರಣಯ್ಯನವರಂತ ಧೀಮಂತ ವ್ಯಕ್ತಿ ಈ ನಮ್ಮ ಗ್ರಾಮದಲ್ಲಿ ಹಿಂದೆ ಹುಟ್ಟಿಲ್ಲ ಮುಂದೆ ಹುಟ್ಟೋದು ಇಲ್ಲ" ಎಂದು ಭರಣಯ್ಯನವರ ಸಮಗ್ರ ವ್ಯಕ್ತಿತ್ವವನ್ನು ಒಂದೇ ಸಾಲಿನಲ್ಲಿ ಹೇಳಿದವರು ಶ್ರೀಯುತ ರಾಮಚಂದ್ರಪ್ಪನವರು. ನಿವೃತ್ತ ಶಿಕ್ಷಕರಾಗಿ ಸೋಮನಾಥಪುರದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ವಿದ್ಯೆ, ಕೃಷಿಯಲ್ಲಿ ಬಿತ್ತಿ ಬೆಳೆದು ಫಲ ಕಂಡಿರುವ ಇವರು. ಈ ಇಳಿ ವಯಸ್ಸಿಯಲ್ಲಿಯೂ ನೆಲದ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಭತ್ತದ ಕೃಷಿಯ ನಾಟಿ, ಕುಯ್ಲು ಎಂದು ಚಟುವಟಿಕೆಯಿಂದಿದ್ದಾರೆ. ತಾವು ಕಂಡ ಭರಣಯ್ಯನವರ ಬದುಕನ್ನು ನಮ್ಮ ಜೊತೆ ಹಂಚಿಕೊಂಡಿದ್ದಾರೆ.

ರಾಮಚಂದ್ರಪ್ಪ ಪಿ.ಯು.ಸಿ ಓದುವಾಗ ಭರಣಯ್ಯ ಸಹಕಾರ ಇಲಾಖೆಯಲ್ಲಿ ಸೆಕ್ರೆಟರಿ ಆಗಿದ್ದರು. ರಾಮಚಂದ್ರಪ್ಪ ಅಲ್ಲಿಗೆ ಆಗಾಗ ಭೇಟಿ ಕೊಡುತ್ತಿದ್ದರು. ಇವರ ಕಾಲೇಜಿನ ಎದುರಿಗೆ ಆಗ ತಾನೆ Survey Settlement ಇಲಾಖೆ ಹೊಸದಾಗಿ ಪ್ರಾರಂಭವಾಯ್ತು. ಪಿ.ಯು.ಸಿ. ಓದುತ್ತಿದ್ದ ಇವರಿಗೆ ಜಾತಿ ಪ್ರಮಾಣಪತ್ರ ಬೇಕಾಗಿತ್ತು. ಅದಕ್ಕಾಗಿ ಭರಣಯ್ಯನವರಲ್ಲಿಗೆ ಹೋದರು. ಇವರನ್ನು ಕಂಡ ಭರಣಯ್ಯ "ಏನಪ್ಪ ತಮ್ಮಾ?" ಎಂದರು. ಅದಕ್ಕಿವರು "ನನಗೆ ಜಾತಿ ಪ್ರಮಾಣಪತ್ರ ಬೇಕಾಗಿತ್ತು" ಎಂದರು. ಕೂಡಲೇ ಭರಣಯ್ಯ ತಮ್ಮ ಅಧಿಕಾರಿಗಳನ್ನು ಕರೆದು ಅವರಿಗೆ ಜಾತಿ ಪ್ರಮಾಣ ಪತ್ರ ನೀಡುವಂತೆ ತಿಳಿಸಿದರು. ನಂತರ ಪಿ.ಯು.ಸಿ. ಮುಗಿಸಿದ ರಾಮಚಂದ್ರಪ್ಪ 1967ರಲ್ಲಿ ಸಹಕಾರ ಇಲಾಖೆಗೆ ಹೋಗಿ ಕೆಲಸ ಕೇಳಿದರು. ಅದಕ್ಕೆ ಅಲ್ಲಿನ ಅಧಿಕಾರಿಗಳು ಸಹಕಾರ ಇಲಾಖೆಯ ಜಂಟಿ ರಿಜಿಸ್ಟ್ರಾರ್‌ಗೆ ಅರ್ಜಿ ಕೊಡುವಂತೆ ಹೇಳಿದರು. ಅದರಂತೆ ಅರ್ಜಿ ಕೊಟ್ಟ ಇವರಿಗೆ ಸಹಕಾರ ಇಲಾಖೆಯಲ್ಲಿ ಪ್ರೊಸೆಸರ್ ಕೆಲಸ ಸಿಕ್ಕಿತ್ತು. ಅಷ್ಟೊತ್ತಿಗಾಗಲೇ Survey Settlement ಇಲಾಖೆಗೆ ವರ್ಗವಾಗಿದ್ದ ಭರಣಯ್ಯ ತರಬೇತಿಗೆ ಬೆಳಗಾಂಗೆ ಹೋಗಿದ್ದರು. ಈ ಕೆಲಸ ರಾಮಚಂದ್ರಪ್ಪನವರಿಗೆ ಇಷ್ಟವಾಗದೇ ಅವರು ಕೆಲಸಕ್ಕೆ ಹೋಗಲಿಲ್ಲ.

ರಾಮಚಂದ್ರಪ್ಪನವರ ನೆನಪನ್ನು ತೆರೆದಾಗ ಕಂಡಿದ್ದು ಇದು. "ಭರಣಯ್ಯನವರ ಬಳಿ ಯಾರೇ ಬಂದರೂ ಅವರನ್ನು ಕರೆದು ಆತ್ಮೀಯವಾಗಿ ಮಾತಾಡಿಸುತ್ತಿದ್ದರು. ಅವನ ಊರು ವಿಚಾರಿಸುತ್ತಿದ್ದರು. ಎಲ್ಲ ಜಾತಿ ಧರ್ಮದವರನ್ನು ಒಂದಾಗಿ ಕಾಣುತ್ತಿದ್ದರು, ಅವರು ಮೊದಲು ಕೇಳುತ್ತಿದ್ದುದು "ಊಟ ಮಾಡಿ ಬಂದಿದ್ದೀಯ?" ಎಂದು.

ಅವನೇನಾದರೂ ಹಿಂದು ಮುಂದು ನೋಡಿದರೆ ಅವರೇ 2 ರೂ. ಕೊಟ್ಟು 'ಊಟಮಾಡಿ ಬಾ' ಎಂದು ಕಳಿಸುತ್ತಿದ್ದರು. ಕೆಲಸ ಕೇಳಲು ಬಂದ ವ್ಯಕ್ತಿ ಮತ್ತೆ ಬಂದಾಗ "ಊಟ ಮಾಡಿದ್ಯಾ?" ಎಂದು ಕೇಳುತ್ತಿದ್ದರು. ಅವನು ಬಂದ ಕಾರಣ ಕೇಳುತ್ತಿದ್ದರು. ಅವನು ಕೆಲಸಬೇಕೆಂದು ಹೇಳಿದಾಗ "ಆಯ್ತು ಆರ್ಡರ್ ಕಾಪಿ ಕಳಿಸುತ್ತೀನಿ" ಎಂದು ಅವನ ಊರು ತಿಳಿದು ವಿಳಾಸ ತೆಗೆದುಕೊಳ್ಳುತ್ತಿದ್ದರು. ನಂತರ ಊರಿಗೆ ಹೋಗಲು ಬಸ್ ಚಾರ್ಜ್‌ಗೆ ಕಾಸಿದೆಯಾ ಎಂದು ಕೇಳಿ ಇಲ್ಲದಿದ್ದರೆ ತಾವೇ ಕಾಸುಕೊಟ್ಟು ಕಳಿಸುತ್ತಿದ್ದರು" ಇದನ್ನು ಕಂಡ ರಾಮಚಂದ್ರಪ್ಪ ಒಮ್ಮೆ ಕೇಳಿದ್ದರಂತೆ. "ಇದೇನಿದು; ಬಂದವರಿಗೆಲ್ಲಾ ಹೀಗೆ ಕಾಸು ಕೊಡ್ತೀರಲ್ಲ ಯಾಕೆ?" ಅಂತ. ಆಗ ಭರಣಯ್ಯ "ನೋಡು ತಮ್ಮಾ, ಇಲ್ಲಿ ನಮ್ಮ ಭರಣಯ್ಯ ಇದ್ದಾನೆ ಅಂತ ಅವರು ಬಂದಿರುತ್ತಾರೆ. ಕೆಲಸ ಇರತ್ತೊ ಇಲ್ವೋ, ನಡೆದುಕೊಂಡು ಬಂದಿದಾರೋ ಏನೋ. ನಾನು ಕೆಲಸ ಕೊಡುವುದು ನಂತರದ ವಿಚಾರ ಆದರೆ ಮೊದಲು ಅವರನ್ನ ಗೌರವಿಸಬೇಕು" ಎಂದು ಹೇಳಿದರು. "ಇಂತಹ ವ್ಯಕ್ತಿ ನಮ್ಮ ವಂಶದಲ್ಲಿ ಹುಟ್ಟಿದ್ದು ನಮ್ಮ ಪುಣ್ಯ" ಎನ್ನುತ್ತಾರೆ ರಾಮಚಂದ್ರಪ್ಪನವರು. ಭರಣಯ್ಯನವರ ತಾತ ಮತ್ತು ರಾಮಚಂದ್ರಪ್ಪನವರ ತಾತ ಅಣ್ಣತಮ್ಮಂದಿರು. ಅಂದರೆ ದಾಯಾದಿ ಸಂಬಂಧ. ರಾಮಚಂದ್ರಪ್ಪ ಬೆಂಗಳೂರಿನ ಸರ್ಕಾರಿ ಸೈನ್ಸ್ ಕಾಲೇಜಿನಲ್ಲಿ ಪಿ.ಯು.ಸಿ ಮುಗಿಸಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮಾಡಿಕೊಂಡರು. ಮೊದಲಿಗೆ ಟ್ರಷರಿಯಲ್ಲಿ ಕೆಲಸ ಸಿಕ್ಕಿತು. ಆದರೆ ಹೋಗಲಿಲ್ಲ. ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡರು. ಬೆಂಗಳೂರಿನ ದೇವನಹಳ್ಳಿಯ ವಿದ್ಯಾನಗರದಲ್ಲಿ ಮೊಟ್ಟಮೊದಲು ಶಿಕ್ಷಕರಾಗಿ ನಿಯೋಜನೆಗೊಂಡರು. ಎರಡು ತಿಂಗಳ ನಂತರ ನರಸೀಪುರಕ್ಕೆ ವರ್ಗ ಮಾಡಿಸಿಕೊಂಡರು. ತಿ. ನರಸೀಪುರದಲ್ಲಿ ಇಪ್ಪತ್ತೆರಡು ವರ್ಷ. ಸೋಮನಾಥಪುರದಲ್ಲಿ ನಾಲ್ಕು ವರ್ಷ, ಕೇತುಪುರದಲ್ಲಿ ಮೂರು ವರ್ಷ ಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ.

ಭರಣಯ್ಯನವರ ತಾತನ ಹೆಸರು ಭರಣಯ್ಯ ಅಂತಲೇ. ಭರಣಿ ಅಂತಲೂ ಕರೆಯುತ್ತಿದ್ದರು. ಅವರ ತಂದೆ ಹೆಮ್ಮಿಗೆ ಚೌಡಯ್ಯ. ಅವರು ಈ ಗ್ರಾಮದಲ್ಲಿ ಮಗ್ಗದ ಸೀರೆ ನೇಯ್ದುಕೊಂಡು ಜೀವನ ಮಾಡುತ್ತಿದ್ದರು. ಅವರ ಮೂಲ ಯಳಂದೂರು. ಅಲ್ಲಿಂದ ಇಲ್ಲಿಗೆ ವಲಸೆ ಬಂದಿದ್ದರು. ಹೆಮ್ಮಿಗೆ ಚೌಡಯ್ಯ ಇದೇ ಗ್ರಾಮದಲ್ಲಿ ಮದುವೆ ಮಾಡಿಕೊಂಡರು. ಹೀಗೆ ಭರಣಿ ವಂಶ ಗ್ರಾಮದಲ್ಲಿ ಬೆಳೆಯಿತು.

ಭರಣಯ್ಯನವರ ತಂದೆ ಚಿಕ್ಕರಂಗಯ್ಯ ವ್ಯವಸಾಯ ಮಾಡುತ್ತಿದ್ದರು. 24 ಎಕರೆ ಜಮೀನು ಇಟ್ಟುಕೊಂಡು ದಳಪತಿಗಳಾಗಿ ಈ ಊರನ್ನೇ ಆಳುತ್ತಿದ್ದರು. ಸುತ್ತಮುತ್ತಲ ಗ್ರಾಮಗಳಿಗೆ ನ್ಯಾಯವನ್ನು ದೊರಕಿಸಿಕೊಡುತ್ತಿದ್ದರು. ಎಲ್ಲಕ್ಕೂ ಇವರೇ ರಾಜಿ ಪಂಚಾಯಿತಿ ಮಾಡುತ್ತಿದ್ದರು. ಇನ್ನು ಭರಣಿ ಕುಟುಂಬದಲ್ಲಿ ಬಿ. ರಾಮಯ್ಯ, ಪಾಪಯ್ಯ ಮತ್ತು ಚಿಕ್ಕ

ವಡ್ಡಗಲ್ಲಯ್ಯ ಎನ್ನುವವರು ಶಿಕ್ಷಕರಾಗಿದ್ದರು. ಸೋಮನಾಥಪುರದಲ್ಲಿ 1911ರಲ್ಲಿ ಶಾಲೆ ಸ್ಥಾಪನೆಯಾಯಿತು. ಆಗ ಮಳವಳ್ಳಿಯಲ್ಲಿದ್ದ ಬಸವಲಿಂಗಪ್ಪ ಎಂಬ ಉಪಾಧ್ಯಾಯರನ್ನು ಇಲ್ಲಿಗೆ ವರ್ಗ ಮಾಡಿದ್ದರು. ಭರಣಿ ಕುಟುಂಬದವರೆಲ್ಲ ಈ ಶಾಲೆಯಲ್ಲಿಯೇ ಕಲಿತರು. ಭರಣಿ ಕುಟುಂಬದಲ್ಲಿ ಶಿಕ್ಷಕರಾದವರೆಲ್ಲ ಇಲ್ಲಿ ನಾಲ್ಕನೇ ತರಗತಿವರೆಗೂ ಕಲಿತು ನಂತರ ಮೈಸೂರಿನ ಅರಸು ಬೋರ್ಡಿಂಗ್ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪಾಸುಮಾಡಿ ಇಲ್ಲಿ ಬಂದು ಉಪಾಧ್ಯಾಯರಾದರು.

ಭರಣಯ್ಯನವರ ಬಗ್ಗೆ ರಾಮಚಂದ್ರಪ್ಪ ಹೇಳಿದ ಇನ್ನೊಂದು ಮಹತ್ವದ ವಿಚಾರವೆಂದರೆ, ಒಮ್ಮೆ ಅಂಬೇಡ್ಕರ್ ದೆಹಲಿಯಲ್ಲಿ Depressed Class ನ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿದ್ದರಂತೆ. ಆಗ ಅದರಲ್ಲಿ ಭರಣಯ್ಯ ಸಹ ಭಾಗವಹಿಸಿದ್ದರು. ಅಲ್ಲಿ ಅಂಬೇಡ್ಕರ್ ಇವರ ಪರಿಚಯ ಮಾಡಿಕೊಂಡರಂತೆ. ನಂತರ ಅಂಬೇಡ್ಕರ್ ಒಂದು ಪ್ರಶ್ನೆ ಕೇಳಿದರಂತೆ. “ನೀವು ವಿದ್ಯಾಭ್ಯಾಸ ಮಾಡಿಕೊಂಡು ಉನ್ನತ ಸ್ಥಾನಕ್ಕೆ ಬಂದಾಗ ಜನಾಂಗಕ್ಕೆ ನಿಮ್ಮ ಕೊಡುಗೆ ಏನು?” ಎಂದು. ಆಗ ಭರಣಯ್ಯ “ನಾನು ಉನ್ನತ ಹುದ್ದೆಗೆ ಬಂದಾಗ ನಮ್ಮ ಜನಾಂಗಕ್ಕೆ ಮೊದಲ ಪ್ರಾತಿನಿಧ್ಯ. ಅವರ ಕಷ್ಟಸುಖಕ್ಕೆ ಭಾಗಿಯಾಗುತ್ತೇನೆ. ಮತ್ತು ನನ್ನ ಜೀವನ ಪರ್ಯಂತ ನಾನು ಲಂಚವನ್ನೇ ತೆಗೆದುಕೊಳ್ಳುವುದಿಲ್ಲ. ಇದು ನನ್ನ ಜನಾಂಗಕ್ಕೆ ನಾನು ನೀಡುವ ಕೊಡುಗೆ” ಎಂದು ಹೇಳಿದರಂತೆ. ಆಗ ಅಂಬೇಡ್ಕರ್ ಇವರ ಬೆನ್ನು ತಟ್ಟಿ ಪ್ರಶಂಸಿಸಿದರಂತೆ. ಅದರಂತೆ “ಭರಣಯ್ಯ ಹೆಚ್. ಡಿ. ಕೋಟೆಯಲ್ಲಿ ಅಮಲ್ದಾರರಾಗಿ ಸೇರಿಕೊಂಡಾಗಿನಿಂದ ಸಾಯುವವರೆಗೂ ಒಂದು ಪೈಸೆ ಲಂಚ ಮುಟ್ಟಲಿಲ್ಲ. ಮಾತಿನಂತೆ ನಡೆದರು. ಇಲ್ಲದಿದ್ದರೆ ಕೋಟ್ಯಾಂತರ ರೂಪಾಯಿ ಸಂಪಾದಿಸಬಹುದಿತ್ತು. ಅವರನ್ನು ಮೆಚ್ಚುವ ಗುಣಗಳಲ್ಲಿ ಅದೂ ಒಂದು”.

ಭರಣಯ್ಯ ಊರಿಗೆ ಬಂದಾಗ ರಾಮಚಂದ್ರಪ್ಪ ಸೇರಿದಂತೆ ಚಿಕ್ಕಮಕ್ಕಳೆಲ್ಲ ಅವರ ಮುಂದೆ ಜಮಾಯಿಸುತ್ತಿದ್ದರು. ಅವರಿಗೆಲ್ಲ ಕಾಸು ಎಂದರೆ ಅದ್ಭುತ ವಸ್ತು. ಭರಣಯ್ಯ ಎಲ್ಲ ಮಕ್ಕಳನ್ನು ಒಂದೆಡೆ ಕೂರಿಸಿ ತಮ್ಮ ಜಗನ್ನಾಥಯ್ಯನಿಗೆ ಕಾಸುಕೊಟ್ಟು ಅಂಗಡಿಯಿಂದ ಪೆಪ್ಪರ್‌ಮೆಂಟ್ ಮತ್ತು ಕಡ್ಲೆಪುರಿ ತರಿಸಿ ಮಕ್ಕಳಿಗೆಲ್ಲಾ ಹಂಚುತ್ತಿದ್ದರು. ಅವರು ಹೊರಡುವಾಗ ಮಕ್ಕಳೆಲ್ಲ ಕೈ ಮುಗಿಯುತ್ತಿದ್ದರು. ತಮ್ಮೂರಿನ ಜನರಿಗೆ ತಮ್ಮ ಕೈಲಾದ ಧನ ಸಹಾಯ ಮಾಡುತ್ತಿದ್ದರು. ಇಂಥ ಗುಣ ಅವರಲ್ಲಿತ್ತು.

ಇನ್ನೊಂದು ವಿಷಯ ರಾಮಚಂದ್ರಪ್ಪನವರ ನೆನಪಿನ ಗಣಿಯಿಂದ ದೊರಕಿದ್ದು; “ಊರಿನಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ, ಎಲ್ಲರಿಗೂ ಮೂರು ನಾಲ್ಕು ದಿನ ಊಟದ ವ್ಯವಸ್ಥೆ ಇರುತ್ತಿತ್ತು. ಆಗ ಯಾರ ಮನೆಯಲ್ಲೂ ಅಡಿಗೆ ಮಾಡುತ್ತಿರಲಿಲ್ಲ. ಆ ರೀತಿ ಅನ್ನದಾನ ಮಾಡುತ್ತಿದ್ದರು. ಊರಿನಲ್ಲಿ ಆಗ ವಿದ್ಯಾವಂತರು ಹೆಚ್ಚಾಗಿ ಇದ್ದುದರಿಂದ

ಮುಂಡರು, ಕುಡುಕರ ಕಾಟ ಅಷ್ಟಿರಲಿಲ್ಲ. ಚಿಕ್ಕವರು ದೊಡ್ಡವರನ್ನು ಕಂಡರೆ ಬಹಳ ಭಯ ಭಕ್ತಿಯಿಂದ ಇರುತ್ತಿದ್ದರು. ಚಿಕ್ಕವರು ತಪ್ಪು ಮಾಡಿದಾಗ ದೊಡ್ಡವರು ತಿದ್ದಿ ತಿಳುವಳಿಕೆ ಹೇಳುತ್ತಿದ್ದರು. ಅದನ್ನು ಕೇಳದಿದ್ದರೆ ಒಂದೆರಡು ಏಟು ಕೊಡುತ್ತಿದ್ದರು. ಆಗ ಊರಿನಲ್ಲಿ 50 ರಿಂದ 60 ಮನೆಗಳಿದ್ದವು. ಒಂದೊಂದು ಮನೆಯಲ್ಲೂ 3 ರಿಂದ 4 ಕುಟುಂಬಗಳು ಇರುತ್ತಿದ್ದವು. 1952-53ನೇ ಇಸವಿಯಲ್ಲಿ ಬಿ. ರಾಚಪ್ಪ ಎನ್ನುವವರು Depressed Class Commissioner ಆಗಿದ್ದರು. ರಾಜ್ಯಾಂಗದ ಪ್ರಕಾರ ಹರಿಜನರಿಗೆ ವಸತಿ ಕೊಡಬೇಕೆಂದು ಅರ್ಜಿ ಹಾಕಿದ್ದರು. ಅದರಂತೆ ಎಲ್ಲರಿಗೂ ಈ ಹೊಸ ಜಾಗದಲ್ಲಿ ನಿವೇಶನ ಕೊಟ್ಟರು. ಅಲ್ಲಿ ಜನ ಮನೆ ಕಟ್ಟಿಕೊಂಡರು. ಮೊದಲು ದೇವಸ್ಥಾನದ ಸುತ್ತ ಮುತ್ತ ಯಾವ ಮನೆಗಳು ಇರಲಿಲ್ಲ. ಸೋಮನಾಥಪುರದಲ್ಲಿ ದಲಿತ ಸಮುದಾಯದವರೇ ಹೆಚ್ಚು. ಸ್ವಲ್ಪ ಮುಸ್ಲಿಂ ಸಮುದಾಯದವರು ಇದ್ದರು. ಈಗ ಎಲ್ಲ ಜನಾಂಗದವರು ಇದ್ದಾರೆ. ಆಗಿನ ಕಾಲದಿಂದಲೂ ದಲಿತರ ಸ್ಥಿತಿಗತಿಗಳು ಚೆನ್ನಾಗಿಯೇ ಇದೆ. ಯಾಕೆಂದರೆ ಇಲ್ಲಿ ದಲಿತರು ವಿದ್ಯಾವಂತರಾಗಿದ್ದರು. ಭರಣಯ್ಯನವರ ತಾತ ಊರಿನ ಆಡಳಿತ ನೋಡಿಕೊಳ್ಳುತ್ತಿದ್ದರು. ಆದರೆ ಅವರ್‍ಯಾರಿಗೂ ಪಿತ್ರಾರ್ಜಿತವಾದ ಜಮೀನಿರಲಿಲ್ಲ. ಇವರೆಲ್ಲ ಪಕ್ಕದ ಊರುಗಳಾದ ಶ್ರೀರಂಗರಾಜಪುರ, ಗರ್ಗೇಶ್ವರಿಯ ಬ್ರಾಹ್ಮಣ ಸಮುದಾಯದ ಜಮೀನುಗಳ ಗುತ್ತಿಗೆ ಮಾಡುತ್ತಿದ್ದರು. ಅವರಿಗೆಲ್ಲ ಸ್ವಲ್ಪ ಭತ್ತವನ್ನು ಕೊಡುತ್ತಿದ್ದರು. ಭೂ ಸುಧಾರಣಾ ಕಾಯಿದೆ 1976ರಲ್ಲಿ ಜಾರಿಗೆ ಬಂದಾಗ ಎಲ್ಲರಿಗೂ ಅವರು ಉಳುತ್ತಿದ್ದ ಜಮೀನು ಸಿಕ್ಕಿತ್ತು. ಇಂದಿಗೂ ಮುಸ್ಲಿಂ ಕುಟುಂಬ, ಲಿಂಗಾಯಿತರ ಕುಟುಂಬ, ನಾಯಕ ಜನಾಂಗದ ಕುಟುಂಬ, ಕುಂಬಾರರ ಕುಟುಂಬ, ಆಚಾರ್ ಕುಟುಂಬ ಸೋಮನಾಥಪುರದಲ್ಲಿ ನಮ್ಮೊಂದಿಗೆ ನೆಲೆಸಿವೆ.

ಇದೆಲ್ಲಕ್ಕಿಂತ ಮಿಗಿಲಾಗಿ ಆಶ್ಚರ್ಯಕರ ಸಂಗತಿಯೆಂದರೆ ನಾವುಗಳು ರಾಮಚಂದ್ರಪ್ಪನವರನ್ನು ಮಾತನಾಡಿಸಲೆಂದು ಅವರ ಮನೆಗೆ ಹೋದಾಗ ಅವರ ಮನೆಯ ಮುಂದಿದ್ದ ಬೋರ್ಡ್ ನಮ್ಮ ಗಮನ ಸೆಳೆಯಿತು. 'ರಾಮಚಂದ್ರಪ್ಪ, ನಿವೃತ ಶಿಕ್ಷಕರು ಎಂಬುದರ ಜೊತೆಗೆ 'ಶ್ರೀನಿವಾಸ ಅಯ್ಯಂಗಾರ್' ಎಂಬ ಹೆಸರೂ ಇತ್ತು. ಪ್ರಾರಂಭದಲ್ಲಿ ನಮಗೆ ತುಸು ಗೊಂದಲವಾಯಿತು. ಆದರೆ ಮಾತಿನ ಮಧ್ಯೆ ಈ ಬಗ್ಗೆ ರಾಮಚಂದ್ರಪ್ಪ ವಿವರಣೆ ಕೊಟ್ಟರು. ಅವರು ಮಗನಿಗೆ ಉದ್ದೇಶಪೂರ್ವಕವಾಗಿಯೇ ಶ್ರೀನಿವಾಸ ಅಯ್ಯಂಗಾರ್ ಎಂದು ನಾಮಕರಣ ಮಾಡಿದ್ದರು. ದಲಿತರೊಬ್ಬರು ತಮ್ಮ ಮಗನಿಗೆ ಈ ರೀತಿ ಹೆಸರಿಟ್ಟಿರುವುದು ಬಹುಶಃ ಇದೇ ಮೊದಲಿರಬೇಕು. ಅವರ ಮಗ ಎಂ.ಟೆಕ್. ಮಾಡಿಕೊಂಡು ಬೆಂಗಳೂರಿನ ಎಚ್.ಎ.ಎಲ್.ನಲ್ಲಿ ಕೆಲಸಕ್ಕಿದ್ದಾರೆ. ಅಯ್ಯಂಗಾರ್ ಎಂದು ಹೆಸರಿಡಲು ಅವರು ಕೊಟ್ಟ ವಿವರಣೆ "ನಾವು ಕೂಡ ನಾಮ ಹಾಕಿಕೊಳ್ಳುವವರು.

ನಮ್ಮ ತಾತ ಮುತ್ತಾತನ ಕಾಲದಿಂದಲೂ ಇದು ಚಾಲ್ತಿಯಲ್ಲಿದೆ. ಬ್ರಾಹ್ಮಣರಿಗಿಂತಲೂ ಉನ್ನತವಾಗಿ ನಾವು ಹರಿಸ್ಮರಣೆ ಮಾಡುತ್ತೇವೆ. ಆದ್ದರಿಂದ ನಾವೂ ಯಾಕೆ 'ಅಯ್ಯಂಗಾರ್' ಅಂತ ಹೆಸರಿಟ್ಟುಕೊಳ್ಳಬಾರದು? ಜಾತಿಯಲ್ಲ. ಹೆಸರು ಮಾತ್ರ. ಈ ಹೆಸರಿಟ್ಟಿದ್ದರಿಂದ ತಹಶೀಲ್ದಾರ್ ವಿರೋಧಿಸಿದರು. ಜಾತಿ ಪ್ರಮಾಣಪತ್ರ ಮಾಡಿಸಲು ಹೋದಾಗ ಅವರು ಶಾಲೆಯ ದೃಢೀಕರಣ ಪತ್ರ ಕೇಳಿದರು. ಆಗ ನಾನು "ಸಾರ್ ನಾವು ಮೊದಲೇ ಕೊಟ್ಟಿದ್ದೇವೆ. ಮತ್ತೆ ಮತ್ತೆ ಕೊಡಲು ಆಗುವುದಿಲ್ಲ. ಈಗೇನು ಜಾತಿ ಪ್ರಮಾಣಪತ್ರ ಮಾಡಿಕೊಡುತ್ತೀರೋ ಇಲ್ಲವೊ? ಎಂದೆ. ಅದಕ್ಕವರು ಸ್ವಲ್ಪ ಒರಟಾಗಿ ಮಾತಾಡಿದರು. ಅದಕ್ಕೆ ನಾನು "ನಾವು ಯಾಕೆ ನಿಮ್ಮ ಮೇಲೆ ರಾಷ್ಟ್ರಪತಿಯವರಿಗೆ ದೂರು ಕೊಡಬಾರದು? ನಾವೇ ಅವರನ್ನು ವಿವರಣೆ ಕೇಳುತ್ತೇವೆ. ಸಂವಿಧಾನದ ಯಾವ ಪರಿಚ್ಛೇದದಲ್ಲಿ ಜಾತಿ ಆಧಾರಿತ ಹೆಸರಿಡಬೇಕೆಂಬ ನಿಯಮವಿದೆ ಎಂದು? ಅದರ ಪ್ರಕಾರ ನಾವು ಯಾವ ಹೆಸರನ್ನಾದರೂ ಇಟ್ಟುಕೊಳ್ಳುತ್ತೇವೆ" ಎಂದೆ.

"ರಾಷ್ಟ್ರಪತಿ ಎಂದ ಕೂಡಲೇ ಹೆದರಿದ ತಹಶೀಲ್ದಾರ್ ಜಾತಿ ಪ್ರಮಾಣಪತ್ರ ಮಾಡಿಕೊಟ್ಟರು. ನಂತರ ನನ್ನ ಮಗನಿಗೆ ಎಚ್.ಎ.ಎಲ್.ನಲ್ಲಿ ಕೆಲಸ ಸಿಕ್ಕಿತು. ಹೆಸರಿನಿಂದಾಗಿಯೇ ಕೆಲಸಕ್ಕೆ ಸೇರುವುದು ನಾಲ್ಕು ತಿಂಗಳು ತಡವಾಯಿತು. ನಾವು ಎಲ್ಲ ದಾಖಲೆ ಒದಗಿಸಿದೆವು. ಆದರೆ ಅಲ್ಲಿನ ಅಧಿಕಾರಿಯೊಬ್ಬರು "ನೀವು ಮಾತ್ರ ಈ ಹೆಸರು ಬದಲಾಯಿಸಿ" ಎಂದರು. ಆಗ ನನ್ನ ಮಗ "ಇದು ನನ್ನ ಅಪ್ಪ ಇಟ್ಟ ಹೆಸರು. ಈಗ ನಾನು ಇದನ್ನು ಬದಲಾಯಿಸಿದರೆ ಮುಂದೆ ತೊಂದರೆಯಾಗುತ್ತದೆ. ನಾವು ಈಗಾಗಲೇ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿ ವಿವರಣೆ ಕೋರಿದ್ದೇವೆ. ನಿಮ್ಮ ಮೇಲೆ ನಾವ್ಯಾಕೆ ನ್ಯಾಯಾಲಯಕ್ಕೆ ಹೋಗಬಾರದು? ಎಂದು ಪ್ರಶ್ನಿಸಿದ ಆಗ ಅವನಿಗೆ ಕೆಲಸ ಸಿಕ್ಕಿತು" ಎಂದು. ಆ ರೀತಿ ಹೆಸರು ಇಟ್ಟು ಸಣ್ಣದೊಂದು ಕ್ರಾಂತಿಯನ್ನು ಸದ್ದಿಲ್ಲದೇ ಮಾಡಿದ ರಾಮಚಂದ್ರಪ್ಪ ತಮ್ಮ ಮಕ್ಕಳಿಗೆ ಇಟ್ಟಿರುವ ಹೆಸರುಗಳು ಹೀಗಿವೆ. ಶ್ರೀನಿವಾಸ ಅಯ್ಯಂಗಾರ್, ಗಿರೀಶ್ ರಾವ್ ಪಟೇಲ್, ಶ್ರೀಕೃಷ್ಣ ಪರಮಾತ್ಮ, ಭಕ್ತ ಪ್ರಹ್ಲಾದ, ರಾಘವೇಂದ್ರ ಸ್ವಾಮಿ.

"ಭರಣಯ್ಯ ಊರಿಗೆ ಪೊಲೀಸ್ ಠಾಣೆ, ರಸ್ತೆಗಳಿಗೆ ಟಾರು, ಸೊಸೈಟಿ ಮಾಡಿಸಿದರು. ಊರಿನಿಂದ ಹೊರಗೆ ಇದ್ದರೂ ಊರವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಯಾರಾದರು ಮದುವೆ ಸಮಾರಂಭ ಎಂದು ಹೋದರೆ. ಕೈಲಾದ ಸಹಾಯ ಮಾಡುತ್ತಿದ್ದರು. ಯಾಕೆಂದರೆ ಅವರ ತಾತನ ಗುಣ ಅವರಲ್ಲಿತ್ತು. ಅವರ ತಾತನೂ ಹಾಗೆಯೇ ಇದ್ದರು. ಬೇರೆ ಸವರ್ಣೀಯರು ಇವರನ್ನು ನ್ಯಾಯ ತೀರ್ಮಾನ ಮಾಡಲು ಕರೆಯುತ್ತಿದ್ದರು. ಇವರಿಂದ ಸಲಹೆ ಕೇಳುತ್ತಿದ್ದರು. ಅವರು ಒಂಥರಾ ನ್ಯಾಯಾಧೀಶರಂತೆ ಇದ್ದರು. ಅವರ ತೀರ್ಪಿಗೆ ಯಾರೂ ವಿರೋಧ ವ್ಯಕ್ತಪಡಿಸುತ್ತಿರಲಿಲ್ಲ".

ಇದಾದ ನಂತರ ರಾಮಚಂದ್ರಪ್ಪ ಜಾತಿಯ ವಿಚಾರದಲಿ ತಮಗಾದ ನೋವು ಹೇಳಿಕೊಂಡರು. "ಸಾಮಾನ್ಯವಾಗಿ ದಲಿತರಿಗೆ 'ಅಯ್ಯ' 'ಅಯ್ಯ' ಎಂದೇ ಹೆಸರಿಡುತ್ತಾರೆ. 'ಅಯ್ಯ' ಎಂದ ತಕ್ಷಣ ಎಲ್ಲರೂ ಮೊದಲು ಹೇಳುವುದು ಇವನು ದಲಿತ ಎಂದು. ನನಗೂ ಒಮ್ಮೆ ಇಂತಹ ಕಹಿ ಅನುಭವವಾಗಿತ್ತು. ಅದು ನನ್ನ ಮಕ್ಕಳಿಗೆ ಆಗಬಾರದೆಂದು ಆ ಹೆಸರುಗಳನ್ನು ಇಟ್ಟೆ. ಅಯ್ಯಂಗಾರ್ ಎನ್ನುವುದು ಅವರಿಗಷ್ಟೇ ಮೀಸಲಲ್ಲ. ನಮ್ಮ ಜಾತಿಗೂ ಅವಮಾನ ಆಗಬಾರದು. ಇನ್ನೊಂದು ಜಾತಿಯವರೂ ನಮ್ಮಲ್ಲಿಗೆ ಬರಬೇಕು. ಇದೇ ನಮ್ಮ ಅಭಿಲಾಷೆ.

ಭರಣಯ್ಯನವರ ಕಾಲಕ್ಕೆ ಹೋಲಿಸಿದರೆ ಅವರಂತಹ ಅಧಿಕಾರಿಗಳು ಇಂದು ಇಲ್ಲವೆಂದೇ ಹೇಳಬೇಕು. ನಮ್ಮತ್ತ ಈಗ ನೋಡುವವರೇ ಕಡಿಮೆ. ನಿಜಕ್ಕೂ ದಲಿತರಿಂದಲೇ ದಲಿತರ ಶೋಷಣೆ ಆಗುತ್ತಿರುವುದು ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿಂದ ಮತ್ತು ಅವಿದ್ಯಾವಂತ ಕುಟುಂಬದಿಂದ ಬಂದ ವಿದ್ಯಾವಂತರಿಂದ. ನಮ್ಮಪ್ಪ ವಿದ್ಯಾವಂತರಾಗಿದ್ದರು. ಸರ್ಕಾರಿ ಕೆಲಸಕ್ಕೆ ಹೋಗದಿದ್ದರೂ ವಿದ್ಯಾವಂತರಾದ್ದರಿಂದ ನಮಗೆಲ್ಲ ಒಳ್ಳೆಯ ಸಂಸ್ಕಾರ ಕಲಿಸಿದ್ದರು. ಆದ್ದರಿಂದ ಈಗ ನಾವು ನಮ್ಮವರನ್ನು ಶೋಷಣೆ ಮಾಡಲು ಹೋಗಲ್ಲ. ಒಗ್ಗೂಡಿಸಲು ಪ್ರಯತ್ನಿಸುತ್ತಿದ್ದೇವೆ. ಅದೇ ರೀತಿ ಕೆಲವು ವ್ಯಕ್ತಿಗಳಿದ್ದಾರೆ. ಅವರಿಗೆ ಮನೆಯಲ್ಲಿ ತಿನ್ನುವುದಕ್ಕೆ ತಾತ್ಸಾರವಿತ್ತು. ಅಪ್ಪಂದಿರು ಬೇರೆ ಜನಾಂಗದಲ್ಲಿ ಜೀತ ಮಾಡುತ್ತಿದ್ದರು. ಅಂತವರು ವಿದ್ಯಾವಂತರಾದ ಮೇಲೆ ನಾವು ಜಾತಿ ಹೇಳಿಕೊಳ್ಳಬೇಕು, ತಂದೆ ಹೆಸರು ಹೇಳಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಡೆಯುತ್ತಿಲ್ಲ. ಅವರ ವರ್ಚಸ್ಸೆ ಬದಲಾಗುತ್ತಿದೆ. ನಮ್ಮ ಜನಕ್ಕೆ ಇನ್ನೂ ಸವಲತ್ತುಗಳು ಬೇಕು. ಹೋರಾಡುತ್ತೀವಿ ಎನ್ನುವವರು ರಾತ್ರಿ ಆರ್ಭಟಿಸುತ್ತಾರೆ. ಬೆಳಿಗ್ಗೆ ಪತ್ತೆ ಇರುವುದಿಲ್ಲ! ಆದರೆ ನಮ್ಮ ಕಾಲದಲ್ಲಿ ಎಲ್ಲವೂ ಸರಿಯಾಗಿರದಿದ್ದರೂ ಅವ್ಯವಸ್ಥೆಗಳು ಅಷ್ಟಿರಲಿಲ್ಲ. ಈಗ ಇದೆಲ್ಲಾ ಅರ್ಥ ಕಳೆದುಕೊಂಡಿವೆ. ಇದೂ ಕೂಡ ನಮ್ಮ ಏಳಿಗೆಗೆ ತೊಂದರೆಯಾಗಿದೆ. ಇಂಥ ವೇಳೆ ಭರಣಯ್ಯನವರಂತಹ ವ್ಯಕ್ತಿತ್ವಗಳು ನಮಗೆ ಇಂದಿಗೂ ಅಗತ್ಯವಿದೆ.

ಭರಣಯ್ಯ ಊರಿಗೆ ಬಂದಾಗ ಅವರನ್ನು ವಾದ್ಯಗಳ ಸಮೇತ ಬರಮಾಡಿಕೊಳ್ಳುತ್ತಿದ್ದೆವು. ಹಬ್ಬಹರಿದಿನಗಳಿಗೆ ತಪ್ಪದೇ ಬರುತ್ತಿದ್ದರು. 1972ರಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಭರಣಯ್ಯ ಸ್ಪರ್ಧಿಸಿದ್ದಾಗ ಕೆಲವರು ಹೇಳುತ್ತಿದ್ದರಂತೆ "ಭರಣಯ್ಯ ಸೂಟು ಬೂಟು ಹಾಕಿಕೊಂಡು ಬೆಂಗಳೂರಿನಲ್ಲಿ ಇರುವವರು. ನಮ್ಮ ಕಷ್ಟ ಅವರಿಗೇನು ತಿಳಿಯುತ್ತದೆ. ಅದೇ ಸಿದ್ದಮಾದಯ್ಯ ಆದ್ರೆ ಕಂಕುಳಲ್ಲಿ ಛತ್ರಿ ಸಿಕ್ಕಿಸಿಕೊಂಡು ಇಲ್ಲೇ ಓಡಾಡುತ್ತಾರೆ. ಅವರಿಗೆ ನಮ್ಮ ಕಷ್ಟ ಹೇಳಿಕೊಂಡರೆ ಪರಿಹಾರ ಸಿಗುತ್ತದೆ ಎಂದು. ಕೊನೆಗೂ ಅವರನ್ನೇ ಗೆಲ್ಲಿಸಿದರು". ರಾಮಚಂದ್ರಪ್ಪ ಭರಣಯ್ಯನವರಿಗೆ ಸಂಬಂಧಿಯಾದರೂ ಯಾವುದೇ

ಪ್ರಭಾವ ಬಳಸಲಿಲ್ಲ. ಅವರ ಬಳಿ ಕೆಲಸ ಕೇಳಲು ಹೋದಾಗ "ನಿನಗೆ ಯಾವ ಕೆಲಸ ಬೇಕು?" ಎಂದು ಕೇಳಿದರಂತೆ. ಅದಕ್ಕೆ ರಾಮಚಂದ್ರಪ್ಪ ಶಿಕ್ಷಕ ಕೆಲಸ ಆಯ್ದುಕೊಂಡರಂತೆ. "ಅವರ ಪ್ರಭಾವ ಬಳಸಿಕೊಂಡಿದ್ದರೆ, ನಾನು ಕೋಟ್ಯಾಧಿಪತಿಯಾಗಬಹುದಿತ್ತು. ಅವರು ಕೇಳಿದಾಗ ಹಣದ ಇಲಾಖೆಯನ್ನೇ ಆಯ್ಕೆ ಮಾಡಬಹುದಿತ್ತು" ಎಂದು. ಅವರಿಂದ ತಾವು ಪ್ರಭಾವಿತರಾದದ್ದನ್ನು ನೆನೆಯುತ್ತಾರೆ.

ಮಾತಿಗೆ ನಿಲುಕದ ವ್ಯಕ್ತಿತ್ವ

ದೊಡ್ಡ ಸಿದ್ಧಯ್ಯ

ನಿವೃತ್ತ ಸಹಾಯಕ ನಿರ್ದೇಶಕರು, ಸಹಕಾರ ಇಲಾಖೆ

"ಭರಣಯ್ಯನವರ ವ್ಯಕ್ತಿತ್ವಕ್ಕೆ ಬೆರಳು ತೋರುವ ಹಾಗೇ ಇಲ್ಲ. ಬಡವರನ್ನು ಕಂಡರೆ ಅಷ್ಟೇ ಕರುಣೆ. ಅವರಿಗೆ ಸಹಾಯ ಮಾಡುವಾಗ ಯಾವ ಸಮುದಾಯವನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಆ ವಿಚಾರದಲ್ಲಿ ಅವರು ಅಕ್ಷರಶಃ ಹಠವಾದಿಯಾಗಿದ್ದರು. ಅಂತಹ ವ್ಯಕ್ತಿತ್ವವನ್ನು ಅಳೆಯಲಾಗುವುದೇ..?" ಎಂದು ಅವರನ್ನು ಧನ್ಯತೆಯಿಂದ ಸ್ಮರಿಸಿಕೊಂಡವರು ಶ್ರೀಯುತ ದೊಡ್ಡಸಿದ್ದಯ್ಯ. ಮೂಲತಃ ಸೋಮನಾಥಪುರದವರಾದ ಇವರು ಪ್ರಸ್ತುತ ತಿ. ನರಸೀಪುರದ ನಿವಾಸಿ. ಸಹಕಾರ ಇಲಾಖೆಯ ಲೆಕ್ಕಪತ್ರ ವಿಭಾಗದಲ್ಲಿ ಗುಮಾಸ್ತರಾಗಿ ಸೇರಿಕೊಂಡು. ಹಲವು ಬಡ್ತಿಗಳ ನಂತರ ಅದೇ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಸೋಮನಾಥಪುರದ ಭರಣಯ್ಯನವರ ಮನೆಯ ಸನಿಹದಲ್ಲೇ ಇರುವ ತಮ್ಮ ಎರಡು ಎಕರೆ ಭತ್ತದ ಗದ್ದೆಯ ಹಸುರಿನ ನಡುವೆ ಕುಳಿತು, ತಮ್ಮ ಬದುಕು ಹೀಗೆ ಹಸನಾಗಲು ಕಾರಣರಾದ ಭರಣಯ್ಯನವರನ್ನು ಸ್ಮರಿಸಿಕೊಂಡರು.

ಭರಣಯ್ಯನವರ ತಂದೆ ರಂಗಯ್ಯನವರಿಗೆ ಸಾಕುಮಗ ಒಬ್ಬರು ಇದ್ದರು. ಅವರ ಹೆಸರು ದಾಸಯ್ಯ. ಚಿಕ್ಕಂದಿನಲ್ಲಿಯೇ ತಂದೆ ತಾಯಿ ಕಳೆದುಕೊಂಡ ದಾಸಯ್ಯನನ್ನು ತಮ್ಮ ಮಗನಂತೆಯೇ ಸಾಕಿದ್ದರು ರಂಗಯ್ಯ. ಆ ದಾಸಯ್ಯನವರನ್ನು ಹಿರಿಯಣ್ಣ ಎಂದು ಒಪ್ಪಿಕೊಂಡಿದ್ದರು. ಅವರ ಕುಟುಂಬದ ಬೇರೆ ಯಾರೂ ಒಪ್ಪಿಕೊಂಡಿರಲಿಲ್ಲ. ದೊಡ್ಡ ಸಿದ್ದಯ್ಯ ಎಸ್.ಎಸ್.ಎಲ್.ಸಿ. ಪಾಸುಮಾಡಿ ಮುಂದೆ ಓದುವ ಕನಸಿಟ್ಟುಕೊಂಡಿದ್ದರು. ಐ.ಎ.ಎಸ್., ಐ.ಪಿ.ಎಸ್. ಮಾಡುವ ಆಸೆಯೂ ಇತ್ತು. ಆದರೆ ಓದಿಗೆ ಬಡತನ ಅಡ್ಡಿಯಾಯಿತು. ಹೀಗಾಗಿ ಮುಂದೆ ಓದುವುದಕ್ಕೆ ಆಗಲಿಲ್ಲ. ಈ ವಿಷಯ ಭರಣಯ್ಯನವರಿಗೆ ಗೊತ್ತಾಗಿ "ಸರಿ ಅವನಿಗೆ ಕೆಲಸ ಕೊಡಿಸುತ್ತೇನೆ ಬಿಡು" ಎಂದು ಹೇಳಿ ದೊಡ್ಡಸಿದ್ದಯ್ಯನಿಗೆ Survey Settlement ನಲ್ಲಿ ಕೆಲಸಕೊಡಿಸಿದರಂತೆ. ಕೆಲ ದಿನಗಳ ನಂತರ Exice Department ನಲ್ಲಿ ಬೇರೆ ಕೆಲಸಕೊಡಿಸಿದರಂತೆ.

ಅಲ್ಲಿಯೂ ಹೋಗಿ ಕೆಲಸ ಮಾಡಿದರು. ಅವರು ಕೆಲಸ ಕೊಡಿಸುವ ಮುಂಚೆ "ಯಾವ ದುಡ್ಡಿಗೂ ಆಸೆ ಪಡಬೇಡ. ಪ್ರಾಮಾಣಿಕತೆಯಿಂದ ಬದುಕಿ ನನ್ನ ಹೆಸರು ಉಳಿಸಬೇಕು" ಎಂದು ಹೇಳುತ್ತಿದ್ದರಂತೆ. ದೊಡ್ಡಸಿದ್ದಯ್ಯ ಅವತ್ತಿನಿಂದಲೂ ಅವರ ಮಾತಿನಂತೆ ನಡೆದುಕೊಂಡು ಬಂದಿದ್ದಾರೆ.

ನಂತರ ದೊಡ್ಡಸಿದ್ದಯ್ಯ ಹೇಳಿದ್ದು "ನಾವು ಭರಣಯ್ಯನವರನ್ನು ಎರಡನೇ ಅಂಬೇಡ್ಕರ್ ಎಂದು ಕರೆಯುತ್ತಿದ್ದೆವು. ಬೀದಿಯಲ್ಲಿ ಯಾರಾದರು ಪುಂಡು ಪೋಕರಿಗಳು ತಿರುಗಾಡುತ್ತಿದ್ದರೆ ಅವರನ್ನು ಕರೆದು "ಯಾಕೆ ಹೀಗೆ ತಿರುಗ್ತಾಯಿದ್ದೀರ, ಬನ್ನಿ ಕೆಲಸ ಕೊಡಿಸುತ್ತೇನೆ" ಎಂದು ಕರೆದೊಯ್ಯುತ್ತಿದ್ದರು. ಅದರಂತೆ ಕೆಲಸ ಕೊಡಿಸುತ್ತಿದ್ದರು. ಅದರಲ್ಲಿ ಹೆಚ್ಚಿನವರು ಹೆಬ್ಬೆಟ್ಟು ಒತ್ತುವವರು. ಅವರು ಸಾಯೋವರೆಗೂ ಕೂಡ ಬೇರೆಯವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ತಮ್ಮಿಂದ ಸಾಧ್ಯವಾಗದಿದ್ದರೆ ಬೇರೆಯವರಿಗೆ ಹೇಳಿ ಕೆಲಸ ಕೊಡಿಸುತ್ತಿದ್ದರು. ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ. ಒಂದು ಒಳ್ಳೆಯ ಕೆಲಸ ಆಗಬೇಕೆಂದರೆ ಬಹಳ ಕಟುವಾಗುತ್ತಿದ್ದರು. ಕಡಿದಾಗಿ ಮಾತಾಡಿ ಅದನ್ನು ಸಾಧಿಸುತ್ತಿದ್ದರು. ಕೊಟ್ಟ ಮಾತಿಗೆ ಎಂದೂ ತಪ್ಪುತ್ತಿರಲಿಲ್ಲ. ದಲಿತರೆಂದರೆ ಮಾರುದೂರ ಇರುವ ಸವರ್ಣೀಯರು ಕೂಡ ಅವರ ಫೋಟೋ ಇಟ್ಟು ಪೂಜೆಮಾಡುತ್ತಾರೆನ್ನುವುದು ಭರಣಯ್ಯನವರ ಜಾತ್ಯಾತೀತ ವ್ಯಕ್ತಿತ್ವಕ್ಕೆ ಒಂದು ಉದಾಹರಣೆ. ಯಾರಾದರು ಹರಕಲು ಬಟ್ಟೆಯಲ್ಲಿ ಬಂದರೆ. "ನೀನು ಊಟ ಮಾಡಿದ್ದೀಯೋ ಇಲ್ಲವೋ ಅನ್ನುವುದನ್ನು ಯಾರೂ ಕೇಳುವುದಿಲ್ಲ. ಆದರೆ ಬಟ್ಟೆ ಚೆನ್ನಾಗಿ ಹಾಕಿಕೊಂಡು ಬಾ. ಅದು ಹಳೆಯದಾದರೂ ನೀಟಾಗಿ ಒಗೆದು ಹಾಕಿಕೊಂಡು ಬಾ" ಎನ್ನುತ್ತಿದ್ದರು. "ಒಂದು ಹೊತ್ತು ಹಸಿದಿದ್ದರೂ ಬೇರೆಯವರ ಎದುರು ಚೆನ್ನಾಗಿರಬೇಕು" ಎನ್ನುತ್ತಿದ್ದರು. "ನೀನು ಹರಿಜನ ಆದರೂ ನಿನ್ನನ್ನು ಪಕ್ಕದಲ್ಲಿ ಕೂರಿಸಿಕೊಳ್ಳಬೇಕಾದರೆ, ನೀನು ಚೆನ್ನಾಗಿ ಬಟ್ಟೆ ಹಾಕಿಕೋ ಶುಚಿಯಾಗಿರು, ಯಾರೂ ನಿನ್ನನ್ನು ಹರಿಜನ ಎನ್ನುವುದಿಲ್ಲ" ಎಂದು ಅಳವಡಿಸಿಕೊಳ್ಳಬೇಕಾದ ಶಿಸ್ತನ್ನು ಹೇಳುತ್ತಿದ್ದರು.

ದೊಡ್ಡ ಸಿದ್ದಯ್ಯನವರಿಗೆ ಕೆಲಸ ಕೊಡಿಸಿದ ಮೇಲೂ ಇವರನ್ನು ಗಮನಿಸುತ್ತಿದ್ದರು. ಕೆಲಸದಲ್ಲಿ ಏನಾದರೂ ತೊಂದರೆ ಆದರೆ ಅವರೇ ನಿವಾರಿಸುತ್ತಿದ್ದರು. ಕೆಲವೊಮ್ಮೆ ಭರಣಯ್ಯ ದೊಡ್ಡಸಿದ್ದಯ್ಯನವರ ಕಛೇರಿಗೆ ಬಂದರೆ ಮೊದಲು ದೊಡ್ಡಸಿದ್ದಯ್ಯನವರನ್ನೇ ಭೇಟಿ ಆಗುತ್ತಿದ್ದರಂತೆ. ಭರಣಯ್ಯನವರನ್ನು ಬಿಟ್ಟರೆ ಬೇರೆ ಯಾರೂ ದೊಡ್ಡಸಿದ್ದಯ್ಯನವರನ್ನು ಅಣ್ಣನ ಮಗನೆಂದು ಒಪ್ಪಿಕೊಳ್ಳುತ್ತಿರಲಿಲ್ಲ. ಭರಣಯ್ಯ ಆಗಲೇ ದಾಸಯ್ಯನವರಿಗೆ ತಮ್ಮ ಮನೆಯ ಪಕ್ಕದಲ್ಲೇ ಸೈಟು ಕೊಡಿಸಿದ್ದರಂತೆ. ಆದರೆ ದಾಸಯ್ಯ ಅದನ್ನು ನಿರಾಕರಿಸಿ "ನೀನು ಇಲ್ಲಿಗೆ ಬಂದಾಗ 'ಅಣ್ಣಾ' ಎಂದರೆ ಸಾಕು" ಎಂದು ಊರು ಹೊರಗಿನ ತಮ್ಮ

ಮನೆಯಲ್ಲೇ ಉಳಿದುಕೊಂಡರಂತೆ. ಅದಕ್ಕೆ ಭರಣಯ್ಯ ಕಣ್ಣೀರು ತುಂಬಿಕೊಂಡು "ನನ್ನ ಪಕ್ಕದಲ್ಲಿ ಇರೋಕೆ ಏನು ಕಷ್ಟ ನಿನಗೆ? ನೀನೇ ಹಿರಿಯಣ್ಣ. ನೀನೇ ನಮ್ಮನ್ನು ಸಾಕಿದವನು. ನಿನ್ನ ಮನೆಯ ಮೇಲೆ ಬಿದ್ದ ಬೆಳಕು ನನ್ನ ಮನೆಯ ಮೇಲೆ ಬಿದ್ದಾಗ ನನಗೆಷ್ಟು ಸಂತೋಷವಾಗುತ್ತೆ ಗೊತ್ತಾ...?" ಎಂದು ಗದ್ಗರಿತರಾಗಿದ್ದರಂತೆ. ದಾಸಯ್ಯ ಭರಣಯ್ಯನವರನ್ನು ನೋಡಲು ಬೆಂಗಳೂರಿಗೆ ಹೋಗುವಾಗ ಕೋಳಿ ಕುಯ್ದುಕೊಂಡು ಅಡುಗೆ ಮಾಡಿಕೊಂಡು ಹೋಗುತ್ತಿದ್ದರಂತೆ. ಅವರೇ ಬಡಿಸಿ ಜೊತೆಯಲ್ಲಿ ಊಟ ಮಾಡುತ್ತಿದ್ದರಂತೆ. ಇದನ್ನು ಕಂಡ ಭರಣಯ್ಯನವರ ಪತ್ನಿ ಒಮ್ಮೆ ಕೇಳಿದ್ದರಂತೆ "ಇದೇನು. ಎಲ್ಲರಿಗೂ ದಾಸಯ್ಯನನ್ನು ಕಂಡರೆ ಅಷ್ಟಕ್ಕಷ್ಟೆ ನೀವ್ಯಾಕೆ ಅಷ್ಟೊಂದು ಪ್ರೀತಿಸುತ್ತೀರಿ..?" ಎಂದು. ಅದಕ್ಕೆ ಭರಣಯ್ಯ ಕೊಟ್ಟ ಉತ್ತರ ಹೀಗಿತ್ತು. "ಸುಮ್ಮನಿರು. ನಿನಗೇನು ಗೊತ್ತು ಅವನ ವಿಚಾರ..? ನೀನು ಐ.ಎ.ಎಸ್. ಅಧಿಕಾರಿಯ ಪತ್ನಿಯಾಗಿ ಮಾತಾಡುತ್ತಿದ್ದೀಯ. ಅವನ ಹಿನ್ನೆಲೆ ನಿನಗೇನು ಗೊತ್ತು. ನಮ್ಮ ವಂಶ ಉದ್ಧಾರಕ ಅವನು. ಎಲ್ಲರೂ ಅವನನ್ನು ಕೇವಲವಾಗಿ ಕಂಡರೂ, ಯಾರ ವಿರುದ್ಧವೂ ಒಂದೇ ಒಂದು ಕೆಟ್ಟಮಾತು ಆಡುವವನಲ್ಲ. ಅಂತವನನ್ನು ನಾವು ಹೇಗೆ ಕಾಣಬೇಕು..?" ಎಂದು. ದಾಸಯ್ಯನವರನ್ನು ಕುರಿತು ಯಾರಾದರು ತುಚ್ಛವಾಗಿ ಮಾತಾಡಿದರೆ ಬಹಳ ಸಂಕಟ ಪಡುತ್ತಿದ್ದರಂತೆ. "ಕೊಳ್ಳೆಗಾಲದ ಚುನಾವಣೆಗೆ ಹಸು-ಕರು ಗುರುತಿನಿಂದ ಸ್ಪರ್ಧಿಸಿದ್ದರು. ಆದರೆ ನಮ್ಮವರೇ ಕೈ ಹಿಡಿಯಲಿಲ್ಲ. ಸಂಬಂಧಿಕರಿಂದಲೇ ತೊಂದರೆಯಾಯಿತು".

ಹೀಗೆ ಮಾತಾಡುತ್ತಿದ್ದ ದೊಡ್ಡ ಸಿದ್ದಯ್ಯನವರನ್ನು ಊರಿನ ಸ್ಥಿತಿಗತಿಗಳ ಬಗ್ಗೆ ಕೇಳಿದಾಗ ಅವರು ಹೇಳಿದ ವಿಚಾರ. "ಆಗ ಊರು ಚೆನ್ನಾಗಿತ್ತು. ಹಳೇ ಹೆಂಚಿನ ಮನೆಗಳು. ಆಗೆಲ್ಲ ಮಾತಿಗೆ ಮಾನ್ಯತೆ ಇತ್ತು. ಈಗ Dont Care. ಭರಣಯ್ಯನವರು ಇದ್ದಾಗ ದಲಿತರೆಲ್ಲ ಇಲ್ಲಿ ಬಡವರಾಗಿದ್ದರು. ಭರಣಯ್ಯನವರ ಮನೆತನದವರು ಸ್ವಲ್ಪ ಅನುಕೂಲಸ್ಥರಾಗಿದ್ದರು. ಭರಣಯ್ಯ ವಿದ್ಯಾವಂತರಾದ ಮೇಲೆ ಅವರ ಕೈಲಾದ ಸಹಾಯ ಮಾಡತೊಡಗಿದರು. ಆನಂತರ ದಲಿತರ ಸ್ಥಿತಿಗತಿ ಸ್ವಲ್ಪ ಸುಧಾರಿಸತೊಡಗಿತು. ಊರವರೆಲ್ಲ ವಿದ್ಯಾವಂತರಾಗಬೇಕು ಎನ್ನುವುದು ಭರಣಯ್ಯನವರ ಆಸೆಯಾಗಿತ್ತು".

ಭರಣಯ್ಯನ ಅಣ್ಣನೆಂಬ ಕಾರಣಕ್ಕೆ ಕಛೇರಿಗಳಲ್ಲಿ ಯಾರೂ ದೊಡ್ಡ ಸಿದ್ದಯ್ಯನವರ ಬಗ್ಗೆ ಕೀಳಾಗಿ ಮಾತಾಡುತ್ತಿರಲಿಲ್ಲ. ಭರಣಯ್ಯನವರ ಮಾತಿನಂತೆ ಲಂಚ ತೆಗೆದುಕೊಳ್ಳದೇ ಕೆಲಸ ಮಾಡುತ್ತಿದ್ದ ಇವರಿಗೆ "ನೀನು ಲಂಚ ತೆಗೆದುಕೊಳ್ಳುವುದಿಲ್ಲ, ಹೋಗಲಿ ನಮಗೆಲ್ಲ ಊಟವನ್ನಾದರು ಹಾಕಿಸು" ಎಂದು ಸಹೋದ್ಯೋಗಿಗಳು ಛೇಡಿಸುತ್ತಿದ್ದರಂತೆ.

ಆಗ ಭರಣಯ್ಯ ಪಿ.ಎಸ್.ಸಿ. ಸದಸ್ಯರಾಗಿದ್ದರು. ಒಮ್ಮೆ ವಿದೇಶ ಪ್ರವಾಸಕ್ಕೆ ಹೋಗಿದ್ದರು. ಕೆಲಸ ಪಡೆದುಕೊಂಡವರ ಪಟ್ಟಿಯನ್ನು ಅಂತಿಮಗೊಳಿಸಿದ್ದರು. ಆದರೆ

ಅದನ್ನು ಪ್ರಕಟಿಸುವ ಮೊದಲು ವಿದೇಶಕ್ಕೆ ಹೋಗಿದ್ದರು. ಪ್ರೇಮಾನಂದ ಎನ್ನುವವರು ಇದ್ದರು. ಅವರು ಒಕ್ಕಲಿಗರು. ಅವರಿಗೆ ಬಿಡಿಓ ಆಫೀಸಿಗೆ Posting ಆಗಿತ್ತು. ಆದರೆ ಇನ್ನೂ ಆದೇಶ ಹೊರಬಿದ್ದಿರಲಿಲ್ಲ. ಭರಣಯ್ಯ ಇಲ್ಲದ ಸಮಯದಲ್ಲಿ ಪ್ರೇಮಾನಂದ ಯಾರ್ಯಾರದೋ ಪ್ರಭಾವ ಬಳಸಿ ಬಿಡಿಓ ಕಛೇರಿಗೆ ಕೆಲಸಕ್ಕೆ ಸೇರಿಬಿಟ್ಟರು. ಪ್ರವಾಸ ಮುಗಿಸಿ ಬಂದ ಭರಣಯ್ಯನವರಿಗೆ ವಿಷಯ ತಿಳಿಯಿತು. ತಕ್ಷಣ Stay ಕೊಟ್ಟರು. “Without my knowledge ನೀವು ಹೇಗೆ Select ಮಾಡಿದಿರಿ...?” ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. “ನಾನ್ಯಾಕೆ ಇಲ್ಲಿ ಮೆಂಬರ್ ಆಗಿರೋದು...” ಎಂದು ಸಿಟ್ಟನ್ನು ಹೊರಗೆಡವಿದ್ದರಂತೆ. ಆಗ ಪ್ರೇಮಾನಂದ್‌ಗೆ ಅವರ ಮೇಲೆ ಅಸಮಾಧಾನ ಉಂಟಾಯಿತು. ಒಮ್ಮೆ ದೊಡ್ಡಸಿದ್ದಯ್ಯನವರು ಸಿಕ್ಕಿದ್ದಾಗ ಇವರ ಬಳಿ ಹೇಳಿದ್ದರಂತೆ. “ನಿಮ್ಮ ಚಿಕ್ಕಪ್ಪ ನನಗೆ ಮೋಸ ಮಾಡಿದರು” ಎಂದು. ಅದಕ್ಕೆ ದೊಡ್ಡ ಸಿದ್ದಯ್ಯ “ಅಲ್ಲಾ ಸ್ವಾಮಿ. ನೀವೆ ಸ್ವಲ್ಪ ಯೋಚಿಸಿ. ಅವರಿಲ್ಲದಾಗ ನೀವು, ಪ್ರಭಾವ ಬಳಸಿ ಕೆಲಸ ಗಿಟ್ಟಿಸಿದರಲ್ಲ ಯಾಕೆ...? ಅವರ ಕಡೆಯವರು ಇರಲಿಲ್ಲವೆ? ನೀವೇನೋ ಸಾಹುಕಾರರು. ಅವರು ಆಯ್ಕೆ ಮಾಡುವುದೆಲ್ಲ ಬಡವರು. ಅವರಿಗೊಂದು ಕೆಲಸ ಬೇಡವಾ..? ಹೀಗಿರುವಾಗ ಬಡವರಿಗೆ ಸಹಾಯ ಮಾಡುವವರನ್ನು ನೀವು ಕೆಟ್ಟವರು ಎನ್ನುತ್ತೀರಾ...?” ಎಂದು ಪ್ರಶ್ನಿಸಿದರಂತೆ. ಕೆಲದಿನಗಳ ನಂತರ ಪ್ರೇಮಾನಂದ್ ತಮ್ಮ ತಪ್ಪು ಒಪ್ಪಿಕೊಂಡರು. ಭರಣಯ್ಯ ಸತ್ತಾಗ ದೊಡ್ಡಸಿದ್ದಯ್ಯನವರಿಗೆ ವಿಷಯವೇ ಗೊತ್ತಿರಲಿಲ್ಲ. ಆ ವಿಷಯವನ್ನು ತಿಳಿಸಿದ್ದು ಇದೇ ಪ್ರೇಮಾನಂದ್..! ದೊಡ್ಡಸಿದ್ದಯ್ಯ ಪ್ರವಾಸಕ್ಕೆ ಹೋಗಿ ಬಂದಾಗ ಇನ್ನೂ ವಿಷಯ ತಿಳಿದಿರಲಿಲ್ಲ. ಆಗ ಅವರ ಬಳೀ ಬಂದ ಪ್ರೇಮಾನಂದ್ “ನಿಮ್ಮ ಚಿಕ್ಕಪ್ಪ ತೀರಿಹೋದರಂತಲ್ಲ” ಎಂದರು. ಆಗ ದೊಡ್ಡಸಿದ್ದಯ್ಯ “ಯಾವ ಚಿಕ್ಕಪ್ಪ ಸ್ವಾಮಿ? ನನಗೆ ಬೇಕಾದಷ್ಟು ಚಿಕ್ಕಪ್ಪಂದಿರು ಇದ್ದಾರೆ” ಎಂದರು. ಅದಕ್ಕವರು “ಭರಣಯ್ಯ ರೀ” ಎಂದರು. ಆನಂತರವೇ ದೊಡ್ಡಸಿದ್ದಯ್ಯನವರಿಗೆ ಗೊತ್ತಾದದ್ದು.

ದೊಡ್ಡಸಿದ್ಧಯ್ಯನವರ ನೆನಪಿನ ಜೋಳಿಗೆಯಲ್ಲಿದ್ದ ಇನ್ನೊಂದು ಆಪ್ತ ವಿಚಾರವಿದು. “ಭರಣಯ್ಯ ಊರಿಗೆ ಬಂದಾಗ ತಮ್ಮ ಗದ್ದೆಗೆ ಭೇಟಿ ಕೊಡುತ್ತಿದ್ದರು. ಇನ್ನೊಂದು ಮುಖ್ಯ ವಿಷಯವೆಂದರೆ ನಮ್ಮ ತಂದೆ ದಾಸಯ್ಯನವರು ಭುಜದ ಮೇಲೆ ಹೊತ್ತುಕೊಂಡು ಹೊಳೆ ದಾಟಿಸಿ ಶಾಲೆಗೆ ಕರೆದು ಹೋಗಿ ಬಿಟ್ಟು ಬರುತ್ತಿದ್ದರಂತೆ. ಅದನ್ನು ಭರಣಯ್ಯ ಆಗಾಗ ನೆನೆಯುತ್ತಿದ್ದರು. “ನಿಮ್ಮ ತಂದೆ ಪ್ರಾಣಭಯವನ್ನು ತೊರೆದು ನನ್ನನ್ನು ಹೊತ್ತುಕೊಂಡು ಹೋಗುತ್ತಿದ್ದರು. ಅವರ ಋಣವನ್ನು ಮರೆಯಲು ಸಾಧ್ಯವಿಲ್ಲ” ಎಂದು ಆಗಾಗ ನನ್ನ ಬಳಿ ಹೇಳುತ್ತಿದ್ದರು. ಅಂತಹ ಭರಣಯ್ಯ ಒಬ್ಬ ಸಾಮಾನ್ಯ ಹಳ್ಳಿಗನಾಗಿ ಇದ್ದುಬಿಟ್ಟಿದ್ದರೆ ನಮ್ಮ ಊರಿನ ಜನಜೀವನ ವ್ಯವಸ್ಥೆ ಹಾಗೇ ಇರುತ್ತಿತ್ತು. ಬದಲಾಗುತ್ತಿತ್ತೋ,

ಇಲ್ಲವೋ, ಯಾರಾದರೂ ಬಂದು ಬದಲು ಮಾಡುತ್ತಿದ್ದರೋ ಗೊತ್ತಿಲ್ಲ. ಇದ್ದವರು ಇಲ್ಲದವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದ ಕಾಲ. ಹೀಗೆ ನಮ್ ಜನರನ್ನ, ಇತರರನ್ನು ಒಟ್ಟಾಗೆ ಕರೆದೋಯ್ದ ಅಪ್ಪಟ ಮಾನವಪ್ರೇಮಿ ಭರಣಯ್ಯ".

ದೊಡ್ಡ ಮನಸ್ಸಿನ ದೊಡ್ಡಪ್ಪ

ಸಿ. ಗಾಂಧಿ, ಸೋಮನಾಥಪುರ

"ಭರಣಯ್ಯ ಧೀಮಂತ ವ್ಯಕ್ತಿ. ಪ್ರಾಮಾಣಿಕತೆಯ ಪ್ರತೀಕ, ಜನಸೇವೆಯೇ ಉಸಿರೆಂದ ಜನಾನುರಾಗಿ. ದಲಿತ ಜನಾಂಗದ ಸರ್ವಶ್ರೇಷ್ಠ ವ್ಯಕ್ತಿ. ಅವರು ನಮ್ಮ ದೊಡ್ಡಪ್ಪ ಎಂಬುದೇ ನನ್ನ ಹೆಮ್ಮೆ" ಎಂದು ಭರಣಯ್ಯನವರ ತಮ್ಮ ಚಲುವಯ್ಯನವರ ಪುತ್ರ ಸಿ. ಗಾಂಧಿಯವರ ಅಭಿಪ್ರಾಯ. "ಭರಣಯ್ಯನವರು ದಲಿತ ಜನಾಂಗದಲ್ಲೇ ಉತ್ಕೃಷ್ಟರಾದವರು. ರಾಜಕೀಯದಲ್ಲಿದ್ದುಕೊಂಡು ದಲಿತರ ಏಳಿಗೆಗೆ ದುಡಿದಂತವರು ಬಸವಲಿಂಗಪ್ಪನವರು, ಅದರಂತೆ ಸರ್ಕಾರಿ ಸೇವೆಯಲ್ಲಿದ್ದುಕೊಂಡು ದುಡಿದವರು ಭರಣಯ್ಯ. ಭರಣಯ್ಯ ಹರಿಜನರಲ್ಲಿ ಹುಟ್ಟಿದರೂ ಕೂಡ ಎಲ್ಲ ಜನಾಂಗದವರಿಗೂ ತಮ್ಮ ಸಹಾಯ ಹಸ್ತ ಚಾಚಿದರು. ಕೇವಲ ಮೈಸೂರು ಭಾಗವಷ್ಟೇ ಅಲ್ಲದೆ, ಉತ್ತರ ಕರ್ನಾಟಕದಲ್ಲೂ ದಲಿತರು ಮತ್ತು ಇತರರಿಗೆ ಉದ್ಯೋಗ ಮತ್ತು ವಿದ್ಯೆಯ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ಈಗಿನ ಸಂದರ್ಭದಲ್ಲಿ ಸರ್ಕಾರಿ ಕೆಲಸಕ್ಕಾದರೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕು. ರಾಜಕಾರಣಿಗಳ ಪ್ರಭಾವ ಬೆಳೆಸಬೇಕು, ಲಂಚ ಕೊಡಬೇಕು. ಆದರೆ ಆಗ ಈ ರೀತಿ ಇರಲಿಲ್ಲ. ಆ ಇಲಾಖೆಯ ಮುಖ್ಯ ಅಧಿಕಾರಿಗೆ ನೌಕರರನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವಿತ್ತು ಅಂತಹ ಸಮಯದಲ್ಲಿ ಭರಣಯ್ಯ ಸಾವಿರಾರು ಜನರಿಗೆ ಉದ್ಯೋಗ ನೀಡಿದರು. ಭರಣಯ್ಯ ಅವರ ಸೇವಾವಧಿಯಲ್ಲಿ ಸರಿಸುಮಾರು ಇಪ್ಪತ್ತೊಂದು ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಪ್ರತಿಯೊಂದು ಇಲಾಖೆಯಲ್ಲಿಯೂ ಉದ್ಯೋಗ ಕ್ರಾಂತಿಯನ್ನೇ ನಡೆಸಿದ್ದಾರೆ. ಅಂತವರಲ್ಲಿ ಹಲವಾರು ಜನ ಉನ್ನತ ಅಧಿಕಾರಿಗಳಾಗಿ ನಿವೃತ್ತಿಗೊಂಡಿದ್ದಾರೆ. ಇಂದಿಗೂ ಭರಣಯ್ಯನವರನ್ನು ನೆನೆಸಿಕೊಳ್ಳುತ್ತಾರೆ. ಶಿಕ್ಷಣ ನಮ್ಮ ಜನಕ್ಕೆ ಬೇಕು ಮತ್ತು ಅಲ್ಲಿ ಪರಿಶಿಷ್ಟರು ಓದಬೇಕು. ಅವರಿಗೆ ವಸತಿ ಸಮಸ್ಯೆ ಆಗಬಾರದು ಎನ್ನುವ ಮೂಲೋದ್ದೇಶದಿಂದ ಆರ್. ಗೋಪಾಲಸ್ವಾಮಿ ಅಯ್ಯರ್ ಎಂಬುವವರು ಡಿ. ವೆಂಕಟಯ್ಯ ಎನ್ನುವ ಸ್ನೇಹಿತರ ಜೊತೆಗೂಡಿ ಹಾಸ್ಟೆಲ್ ಒಂದನ್ನು ಪ್ರಾರಂಭಿಸಿದರು. ಅಲ್ಲಿ ಹೆಚ್ಚು ಆಶ್ರಯ ಪಡೆದವರು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು. ಭರಣಯ್ಯ ಕೂಡ ಅಲ್ಲೇ ಓದಿದ್ದು. ಸಹಸ್ರಾರು ವಿದ್ಯಾರ್ಥಿಗಳು ಆ ಹಾಸ್ಟೆಲ್‌ನಲ್ಲಿದ್ದು ಓದಿದ್ದಾರೆ. ಅವರಲ್ಲಿ ಮುಖ್ಯವಾದವರು ದಲಿತ ಕವಿ ಸಿದ್ಧಲಿಂಗಯ್ಯ".

ರಂಗನಾಥಯ್ಯ ಭರಣಯ್ಯನವರ ದೊಡ್ಡಪ್ಪನ ಮಗ. ರಂಗನಾಥಯ್ಯನವರ ಮಗ ಸುಭಾಷ್ ಭರಣಿ ಬಿ. ಎ. ಓದುತ್ತಿದ್ದರು. ಅದನ್ನು ಪಾಸು ಮಾಡಿದರು. ಹೀಗೆ ಒಮ್ಮೆ ಭರಣಯ್ಯ ಊರಿಗೆ ಬಂದರು. ಆಗ ರಂಗನಾಥಯ್ಯ ಅವರ ಬಳಿ ಹೋಗಿ "ನನ್ನ ಮಗನಿಗೆ ಎಂ. ಎ. ಮಾಡಬೇಕೆಂದು ಆಸೆಯಿದೆ. ಆದುದರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವನಿಗೊಂದು ಸೀಟು ಕೊಡಿಸು" ಎಂದು ಕೇಳಿದರು. ನಂತರ ಮುಂದೊಂದು ದಿನ ಭರಣಯ್ಯ ತಮ್ಮ ಕಾರಿನಲ್ಲೇ ಸುಭಾಷ್ ಭರಣಿ, ಮತ್ತು ತಮ್ಮನ ಮಗ ಗಾಂಧಿಯನ್ನು ಕರೆದುಕೊಂಡು ಮಾನಸಗಂಗೋತ್ರಿಗೆ ಬಂದರು. ಭರಣಯ್ಯ ಬಂದ ವಿಷಯ ತಿಳಿದ ಪ್ರೊ. ಕೆ. ವಿ. ತೋಟಪ್ಪನವರು "ಅವರು ಬರುವುದು ಬೇಡ, ನಾನೇ ಬರುತ್ತೇನೆ" ಎಂದು ಅವರಿದ್ದ ಕಾರಿನ ಬಳಿಯೇ ಬಂದು ಅವರ ಕುಶಲೋಪರಿ ವಿಚಾರಿಸಿದರು. ನಂತರ ಭರಣಯ್ಯನವರು "ನಮ್ಮ ಹುಡುಗನಿಗೆ ಎಂ.ಎ.ಗೆ ಒಂದು ಸೀಟು ಕೊಡಿ ಬಹಳ ಉಪಕಾರವಾಗುತ್ತದೆ" ಎಂದು ಕೇಳಿಕೊಂಡರಂತೆ. ಆಗ ತೋಟಪ್ಪನವರು "ಆಗಲಿ ಸರ್ ಖಂಡಿತಾ ಕೊಡುತ್ತೇವೆ" ಎಂದು ಸುಭಾಷ್ ಭರಣಿಯನ್ನು ವಿಶ್ವವಿದ್ಯಾಲಯದಲ್ಲಿ ದಾಖಲು ಮಾಡಿಕೊಂಡರಂತೆ. ನಂತರ ಸುಭಾಷ್ ಭರಣಿ ಎಂ. ಎ. ಮಾಡುತ್ತಿದ್ದಾಗಲೇ ಅವರ ತಂದೆ ರಂಗನಾಥಯ್ಯ ತೀರಿಕೊಂಡರು. ಎಂ. ಎ. ಮುಗಿಸಿದ ಸುಭಾಷ್ ಭರಣಿ ಭರಣಯ್ಯನವರ ಬಳಿ ಹೋದರು. ಆಗ ಭರಣಯ್ಯ "ನೋಡಪ್ಪ ನೀನು ಐ.ಎ.ಎಸ್. ಮಾಡು. ಅಲ್ಲಿಯವರೆಗೆ ಗೋಪಾಲಸ್ವಾಮಿ ಅಯ್ಯರ್ ಹಾಸ್ಟೆಲ್‌ನಲ್ಲಿ ಟೀಚರ್ ಆಗಿ ಕೆಲಸಮಾಡು. ಅಲ್ಲಿ ಯಾವುದೇ ಸಂಬಳ ಇರುವುದಿಲ್ಲ. ಎರಡು ಹೊತ್ತು ಊಟ ಇರುತ್ತದೆ ಅಷ್ಟೆ. ಅಲ್ಲಿದ್ದುಕೊಂಡೆ ಓದಿ ಐ.ಎ.ಎಸ್. ಪಾಸು ಮಾಡು" ಅಂದರು. ನಂತರ ಸುಭಾಷ್ ಭರಣಿಗೆ ಕೆ.ಎ.ಎಸ್. ಕಟ್ಟಿಸಿದರಂತೆ. ಅದನ್ನು ಪಾಸುಮಾಡಿದ ಸುಭಾಷ್ ಭರಣಿಗೆ ತಹಶೀಲ್ದಾರ್ ಕೆಲಸ ಕೊಡಿಸಿದರಂತೆ. ಆನಂತರ ಅವರು ಐ.ಎ.ಎಸ್. ಬದಲು ಐ.ಪಿ.ಎಸ್. ಮಾಡಿದರು. ನಂತರ ಭರಣಯ್ಯನವರೇ ಸುಭಾಷ್ ಭರಣಿಯವರಿಗೆ ಪೊಲೀಸ್ ಕೆಲಸದ ಆದೇಶ ಪ್ರತಿಯನ್ನು ತಂದು ತಲುಪಿಸಿದರಂತೆ. ಆಗ ಸುಭಾಷ್ ಭರಣಿಯವರಿಗೆ "ನೋಡಪ್ಪಾ ನೀನೀಗ ಅಧಿಕಾರಿಯಾಗಿದ್ದೀಯ. ನಾನು ನನ್ನ ಜನಾಂಗಕ್ಕೆ ಕೈಲಾದ ಸಹಾಯ ಮಾಡಿದ್ದೀನಿ. ನೀನು ಅದನ್ನು ಮುಂದುವರೆಸಿಕೊಂಡು ಹೋಗಬೇಕು" ಎಂದರು. ಅದು ನನ್ನ ಕಣ್ಣಿಗೆ ಈಗಲೂ ಕಟ್ಟಿದಂತಿದೆ ಎನ್ನುತ್ತಾರೆ ಗಾಂಧಿ.

ಅದೇ ರೀತಿ ಗಾಂಧಿಯವರ ಸೋದರತ್ತೆ ಮಗ ಆರ್. ಶಂಕರಪ್ಪ ಎಂಬುವವರನ್ನು ಭರಣಯ್ಯ ಐ.ಎ.ಎಸ್. ಅಧಿಕಾರಿಯನ್ನಾಗಿ ಮಾಡಿದ್ದರಂತೆ. ಆರ್. ಶಂಕರಪ್ಪ ಸೋಸಲೆ ಬಿ. ರಾಚಯ್ಯನವರ ಮಗ. ಬಿ.ಎಸ್ಸಿ. ಓದಿಕೊಂಡಿದ್ದ ಶಂಕರಪ್ಪನಿಗೆ ವಿಧಾನಸೌಧದ

ಗ್ರಂಥಾಲಯದಲ್ಲಿ ಪ್ರಥಮ ದರ್ಜೆ ಗುಮಾಸ್ತರನ್ನಾಗಿ ನೇಮಿಸಿದ್ದರಂತೆ. ಆಗ ಅವರಿಗೆ ಹೇಳಿದ್ದರಂತೆ "ನೋಡಪ್ಪ ನಿನ್ನನ್ನು ಇಲ್ಲಿ ಕೆಲಸಕ್ಕೆ ಸೇರಿಸಿದ್ದು ಬರೀ ಕೆಲಸ ಮಾಡಲು ಅಲ್ಲ. ಕೆಲಸದ ಜೊತೆಗೆ ಇಲ್ಲಿನ ಪುಸ್ತಕಗಳನ್ನು ಚೆನ್ನಾಗಿ ಓದಿ ಐ.ಎ.ಎಸ್. ಪಾಸುಮಾಡು" ಎಂದು. ಅವರು ಐ.ಎ.ಎಸ್. ಪಾಸುಮಾಡಿ ಭರಣಯ್ಯನವರ ಅಭಿಲಾಷೆಯಂತೆ ಅಧಿಕಾರಿಯಾದರು".

"ಭರಣಯ್ಯನವರ ಕೆಲಸ ಕಾರ್ಯಗಳು ಶೋಷಣೆಯ ಅಥವಾ ಅಸ್ಪೃಶ್ಯತೆಯ ವಿರುದ್ಧಕ್ಕಿಂತ ಹೆಚ್ಚಾಗಿ, ಅನಕ್ಷರತೆ ಮತ್ತು ನಿರುದ್ಯೋಗದ ವಿರುದ್ಧ ಇತ್ತು. ನಿರುದ್ಯೋಗವನ್ನು ನಿವಾರಣೆ ಮಾಡುವ ಸಲುವಾಗಿ Survey Settlement and land records ಎಂಬ ಇಲಾಖೆಯನ್ನು ಸರ್ಕಾರದ ಆದೇಶ ಪಡೆದು ತಾವೇ ಸ್ಥಾಪಿಸಿದರು. ಅಲ್ಲಿ ಸುಮಾರು ಸಾವಿರಾರು ಜನರಿಗೆ ಉದ್ಯೋಗ ದೊರಕಿಸಿದರು. ಭರಣಯ್ಯ ಪ್ರಾರಂಭ ಮಾಡುವ ಮುಂಚೆ ಈ ಇಲಾಖೆ ಇರಲಿಲ್ಲ. ಜನರಿಗೆ ಉದ್ಯೋಗದ ಜೊತೆ ಮಾರ್ಗದರ್ಶನವನ್ನೂ ಕೊಡುತ್ತಿದ್ದರು. ಯಾರೇ ವಿದ್ಯಾವಂತರು ಹೋದರು ಕೆಲಸ ಕೊಟ್ಟು ಅವರು ಹೇಳುತ್ತಿದ್ದದು ಇಷ್ಟು "ನೀನು ತಂದೆ, ತಾಯಿ, ತಮ್ಮ, ತಂಗಿ ಎಲ್ಲರನ್ನು ಸಾಕಬೇಕು. ಜನರಿಗೆ ಆದಷ್ಟು ಸಹಾಯ ಮಾಡಬೇಕು. ನಿರ್ವಂಚನೆಯಿಂದ ಕೆಲಸ ಮಾಡಬೇಕು". ಭರಣಯ್ಯ ಕೇವಲ ದಲಿತ ನಾಯಕರಲ್ಲ, ಜಾತ್ಯಾತೀತ ನಾಯಕ. ಅತ್ತಹಳ್ಳಿಯಲ್ಲಿ ಅವರ ಅಜ್ಜಿ ಮತ್ತು ಚಿಕ್ಕಮ್ಮ ಇದ್ದರು. ಆಗಾಗ ಅಲ್ಲಿಗೆ ಹೋಗುತ್ತಿದ್ದ ಭರಣಯ್ಯ ತಮ್ಮ ಅಜ್ಜಿ ಹೇಳಿದವರಿಗೆಲ್ಲ ಕೆಲಸ ಕೊಟ್ಟಿದ್ದಾರೆ. ಅತ್ತಹಳ್ಳಿ, ಬೇವಿನಹಳ್ಳಿ, ಬೆಟ್ಟಹಳ್ಳಿ, ಸೇನಾಪತಿಹಳ್ಳಿ ಮುಂತಾದ ಊರಿನ ವಿದ್ಯಾವಂತರಿಗೆ ಮಾರ್ಗದರ್ಶನ, ಕೆಲಸ ನೀಡಿದ್ದಾರೆ. ಅವರನ್ನು ಸ್ಮರಿಸದಿರುವ ಜನರೇ ಇಲ್ಲ".

ಗಾಂಧಿಯವರು ಎಸ್.ಎಸ್.ಎಲ್.ಸಿ. ಫೇಲ್ ಆದಾಗ ದೊಡ್ಡಪ್ಪ ಭರಣಯ್ಯನವರ ಜೊತೆಗೆ ಎರಡು ವರ್ಷ ಬೆಂಗಳೂರಿನಲ್ಲಿ ಇದ್ದರು. ಅವರು ಗಮನಿಸಿದ ರೀತಿ ಭರಣಯ್ಯನವರ ದಿನಚರಿ ಹೀಗಿತ್ತು "ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದು ಇಲಾಖೆ ಕಡತಗಳನ್ನು ನೋಡುತ್ತಿದ್ದರು. ನಂತರ ಸ್ನಾನ ಮಾಡಿ ಬಂದ ಜನರನ್ನೆಲ್ಲ ಮಾತಾಡಿಸುತ್ತಿದ್ದರು. ಆನಂತರ ತಿಂಡಿ ತಿಂದು ವಿಧಾನಸೌಧಕ್ಕೆ ಹೋಗುತ್ತಿದ್ದರು. ಅಪಘಾತವೊಂದರಲ್ಲಿ ಕಾಲಿಗೆ ಸಮಸ್ಯೆಯಾಗಿತ್ತು. ಅವರ ದಿನನಿತ್ಯದ ಕೆಲಸಗಳಿಗೆ ಗಾಂಧಿ ನೆರವಾಗುತ್ತಿದ್ದರು. ಕಛೇರಿಯಿಂದ ಬಂದ ಮೇಲೂ ಜನ ಸಂದರ್ಶನವೇ. ಎಲ್ಲರನ್ನು ತಾವೇ ಸ್ವತಃ ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಎಲ್ಲರಿಗೂ ಏನಾದರೊಂದು ಸಾಂತ್ವನ, ಸಹಾಯ ಮಾಡುತ್ತಿದ್ದರು. ಪೂಜೆ ಪುನಸ್ಕಾರದ ಬಗ್ಗೆ ವಿಶೇಷ ಆಸಕ್ತಿ ಇತ್ತು".

"ಭರಣಯ್ಯ ಬಿ.ಎಸ್ಸಿ. ಓದಿ ಕೆಲಸಕ್ಕೆ ಸೇರಿಕೊಂಡಿದ್ದಾಗಲೇ ಅವರ ತಂದೆ ತಾಯಿ ತೀರಿಕೊಂಡರು. ಆನಂತರ ತಮ್ಮ ಐದು ಜನ ತಮ್ಮಂದಿರನ್ನು ಸಾಕುವ ಜವಾಬ್ದಾರಿ

ಇವರ ಹೆಗಲ ಮೇಲೆ ಬಿತ್ತು. ತಂದೆಯ ಸ್ಥಾನದಲ್ಲಿ ನಿಂತು ಅವರನ್ನೆಲ್ಲ ಸಾಕಿದರು. ಐದು ಜನ ತಮ್ಮಂದಿರಿಗೂ ಅವರೇ ಮದುವೆ ಮಾಡಿದರು. ಅವರ ಕೊನೆ ಉಸಿರಿರುವ ತನಕ ತಮ್ಮಂದಿರನ್ನು ಪ್ರೀತಿಯಿಂದ ನೋಡಿಕೊಂಡರು. ನಾಲ್ಕು ಜನಕ್ಕೆ ಕೆಲಸ ಕೊಡಿಸಿದರು. ಮೊದಲನೆಯ ತಮ್ಮ ಜಗನ್ನಾಥಯ್ಯನಿಗೆ ಮನೆ, ಜಮೀನು ಉಸ್ತುವಾರಿ ವಹಿಸಿದರು. ಜೊತೆಗೆ ತಮ್ಮಂದಿರ ಮಕ್ಕಳ ಮದುವೆಯನ್ನೂ ಮಾಡಿದರು. ಊರಿನೊಂದಿಗೆ ಅವರ ಸಂಬಂಧ ಚೆನ್ನಾಗಿತ್ತು. ಹದಿನೈದು ದಿನಕ್ಕೊಮ್ಮೆ ಊರಿಗೆ ಬರುತ್ತಿದ್ದರು. ಅವರ ಬರುವಿಕೆಗೆ ಇಡೀ ತಾಲ್ಲೂಕು ಜನ ಕಾದಿರುತ್ತಿದ್ದರು. ಎಲ್ಲರನ್ನು ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಮುಕ್ಕಾಲು ಪಾಲು ಜನ ಕೆಲಸ ಕೇಳಲೆಂದೇ ಬಂದಿರುತ್ತಿದ್ದರು. ಅವರ ತಾತ ಮತ್ತು ತಂದೆಯ ಗುಣ ಅವರಲ್ಲಿ ಮೈಗೂಡಿತ್ತು. ಎಲ್ಲ ವರ್ಗದ ಜನರೂ ಕೂಡ ಅವರನ್ನು ನೋಡಲು ಬರುತ್ತಿದ್ದರು. ಉತ್ತಮವಾದ ವ್ಯಕ್ತಿತ್ವ. ಸೋಮನಾಥಪುರದಿಂದ ಬೆಂಗಳೂರಿಗೆ ಹೋಗುವಾಗ ಪ್ರತೀ ಹಳ್ಳಿಯಲ್ಲೂ ಕಾರು ನಿಲ್ಲಿಸಿ ಜನರನ್ನು ಮಾತಾಡಿಸುತ್ತಿದ್ದರು. ಬೆಳಿಗ್ಗೆ ಸೋಮನಾಥಪುರದಿಂದ ಹೊರಟರೆ ಬೆಂಗಳೂರು ಸೇರುವುದು ಸಂಜೆ ಆರು ಘಂಟೆ ಆಗುತ್ತಿತ್ತು. ಸೋಮನಾಥಪುರದಿಂದ ಹೊರಟರೆ ಟಿ. ಪಿ. ಬೋರಯ್ಯನವರನ್ನು ಮಾತಾಡಿಸಿಕೊಂಡು, ಬೇವಿನಹಳ್ಳಿಯಲ್ಲಿ ಜನಗಳು, ಅತ್ತಳ್ಳಿಯಲ್ಲಿ ಅಜ್ಜಿ ಮತ್ತು ಚಿಕ್ಕಮ್ಮ, ಚಿಕ್ಕಪ್ಪ, ಬನ್ನೂರಿನಲ್ಲಿದ್ದ ಮತ್ತೊಬ್ಬಳು ತಂಗಿಯನ್ನು ಮಾತಾಡಿಸಿಕೊಂಡು, ಮುಂದೆ ಹೋಗುತ್ತಿದ್ದರು. ವಯಸ್ಸಾದವರು ಸಿಕ್ಕರೆ ತಾವೇ ಕಾರಿನಿಂದ ಇಳಿದು ಹೋಗಿ ಮಾತಾಡಿಸುತ್ತಿದ್ದರು".

"ಭರಣಯ್ಯ ಈ ರೀತಿ ಜನರ ಕಷ್ಟಗಳಿಗೆ ಸ್ಪಂದಿಸಲು ಕಾರಣ ಅವರ ತಂದೆ ತಾಯಿ ಸ್ಫೂರ್ತಿ. ಬಾಲ್ಯದ ಓದು ಮತ್ತು ಬೆಳೆದಂತ ಪರಿಸರ. ಜೊತೆಗೆ ಭರಣಯ್ಯನವರ ಚಿಕ್ಕಪ್ಪ ಪಾಪಯ್ಯ ಎನ್ನುವವರು ಇದ್ದರು. ಅವರು ತಾವೇ ಶಾಲೆ ಸ್ಥಾಪಿಸಿ ಮೇಷ್ಟರಾಗಿದ್ದರು. ಅವರ ಪ್ರೇರೇಪಣೆಯೂ ಇರಬಹುದು. ಅವರ ತಾತನ ಜನೋಪಕಾರಿ ಗುಣವೂ ಕೂಡ ಸ್ಫೂರ್ತಿಯಾಗಿತ್ತು. ಭರಣಯ್ಯನವರ ವ್ಯಕ್ತಿತ್ವದಲ್ಲಿ ಲೋಪದೋಷಗಳೇ ಇರಲಿಲ್ಲ. ಲಂಚಗುಳಿತನ ಇರಲಿಲ್ಲ. ಸಾವಿರಾರು ಜನರಿಗೆ ಕೆಲಸ, ಶಾಲೆಗೆ ಸೇರಿಸಿಕೊಟ್ಟಿದ್ದು ಉನ್ನತ ವ್ಯಾಸಂಗವೆಂದು ಯಾರಾದರು ಬಡವರು ಬಂದರೆ ಸಂಪೂರ್ಣ ಖರ್ಚು ವಹಿಸಿಕೊಳ್ಳುತ್ತಿದ್ದರು. ಹೀಗಿದ್ದ ಭರಣಯ್ಯನವರು ಬದುಕಿರುವವರೆಗೂ ಯಾರೂ ಅವರನ್ನು ಟೀಕೆ ಮಾಡಲಿಲ್ಲ, ಸತ್ತ ಮೇಲೂ ಸಹಾ ಟೀಕೆ ಮಾಡಲು ಸಾಧ್ಯವೇ ಇಲ್ಲದ ವ್ಯಕ್ತಿತ್ವ ಅವರದು" ಭರಣಯ್ಯ ಸತ್ತಮೇಲೆ ನಮ್ಮ ಕುಟುಂಬದಲ್ಲಿ ಮತ್ತೊಬ್ಬ ಭರಣಯ್ಯ ಹುಟ್ಟಲಿಲ್ಲ. ನಾವೆಲ್ಲ ಮೂರನೇ ಪೀಳಿಗೆಯವರು. ಅವರಂತೆ ಕೆಲಸ ಮಾಡಲು ಸಾಧ್ಯವಿಲ್ಲ. ಅವರ ಮಗನೇ ಎಂ.ಎಲ್.ಎ. ಆಗಿದ್ದರು. ನಮ್ಮ ಕುಟುಂಬದ ಹಲವಾರು ಜನ ಐ.ಎ.ಎಸ್.,

ಐ.ಪಿ.ಎಸ್. ಡಾಕ್ಟರ್, ಇಂಜಿನಿಯರ್ ಇನ್ನಿತರ ಉನ್ನತ ಹುದ್ದೆಗಳಲ್ಲಿದ್ದರೂ ಅವರಲ್ಲಿ ಭರಣಯ್ಯನವರಿಗಿದ್ದ ಔದಾರ್ಯದ ಮನೋಭಾವ ಕಂಡುಬರುತ್ತಿಲ್ಲ. ಭರಣಯ್ಯನವರ ತತ್ತ್ವಗಳನ್ನು ಅಳವಡಿಸಿಕೊಳ್ಳುತ್ತಿಲ್ಲ. ಯಾರೇ ಬಡವ ಕೆಲಸ ಕೇಳಿಕೊಂಡು ಬರಲಿ ಅವನಿಗೆ ಸಾಂತ್ವನ ಹೇಳಿ ಕುಳಿತುಕೊಳ್ಳುವಂತೆ ಹೇಳಿ ಕೆಲಸ ಖಾಲಿ ಇರುವ ಇಲಾಖಾ ಮುಖ್ಯಸ್ಥರಿಗೆ ದೂರವಾಣಿ ಕರೆ ಮಾಡುತ್ತಿದ್ದರು. ಬೇರೆಯವರಿಂದ ಸಹಾಯ ಮಾಡಿಸುತ್ತಿದ್ದರು. ನಮ್ಮಲ್ಲಿ ಹಲವಾರು ಜನ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿದ್ದಾರೆ. ಯಾರಾದರು ಬಡವರು ಕೆಲಸ ಕೇಳಿಕೊಂಡು ಹೋದರೆ ಅವರಿಗೆ ಸಹಾಯ ಮಾಡಲು ಆಗದಿದ್ದರೂ ಸಮಾಧಾನವನ್ನಾದರೂ ಹೇಳಬಹುದು. ಆದರೆ ಅದನ್ನೂ ಮಾಡುತ್ತಿಲ್ಲ". ಅಷ್ಟು ದಿನ ಅವರ ಜೊತೆ ಇದ್ದ ಗಾಂಧಿ, ಅವರಿಂದ ಸತ್ಯ, ಪ್ರಾಮಾಣಿಕತೆ, ಜನಸೇವೆಗಳನ್ನು ಕಲಿತರಂತೆ. ಅವರೇ ಹೇಳುವಂತೆ "ಗುರುಪ್ರಸಾದ್ ಎಂ.ಎಲ್.ಎ. ಆಗಿದ್ದಾಗ ಸಾವಿರಾರು ಜನರಿಗೆ ಸಹಾಯ ಮಾಡಿಸಿದ್ದೆ. ಅವರೆಲ್ಲ ಈಗ ಅಧಿಕಾರಿಗಳಾಗಿದ್ದಾರೆ. ಅದಲ್ಲದೆ ನಾನು ಪ್ರಾಂಶುಪಾಲನಾಗಿರುವ ಕಾಲೇಜಿನಲ್ಲಿ ಬಡ ವಿದ್ಯಾರ್ಥಿಗಳಿಗೆ ನನ್ನ ಕೈಲಾದ ಸಹಾಯ ಮಾಡುತ್ತಿದ್ದೇನೆ".

ಇಷ್ಟೆಲ್ಲಾ ಹೇಳಿದ ಗಾಂಧಿಯವರು ಹೊರಳಿದ್ದು ದೊಡ್ಡಪ್ಪನ ಚುನಾವಣಾ ವಿಚಾರದ ಬಗ್ಗೆ. "ದೊಡ್ಡಪ್ಪನಿಗೆ ಚುನಾವಣೆಯ ಅಗತ್ಯವಿರಲಿಲ್ಲ. ಆದರೂ ಕೊಳ್ಳೇಗಾಲದಲ್ಲಿ ವಿಧಾನ ಸಭಾ ಚುನಾವಣೆಗೆ ನಿಂತರು. ಅಲ್ಲಿ ಅವರ ಹೆಂಡತಿಯ ಸಂಬಂಧಿಕರಿದ್ದರು. ಜೊತೆಗೆ ಅಲ್ಲಿಯೂ ಜನೋಪಕಾರಿ ಕೆಲಸಗಳನ್ನು ಮಾಡಿದ್ದರು. ಜನ ಗೆಲ್ಲಿಸುತ್ತಾರೆಂಬ ಭರವಸೆಯ ಮೇಲೆ ನಿಂತರು. ಆದರೆ ಅಲ್ಲಿನ ಜನ ಕೈ ಹಿಡಿಯಲಿಲ್ಲ. ಅಲ್ಲಿ ಬಹುಪಾಲು ಜನ ಅನಕ್ಷರಸ್ಥರು ಇದ್ದರು. ಇವರು ಮಾಡಿದ್ದ ಸೇವೆ ಅವರಿಗೇನು ಗೊತ್ತಾಗುತ್ತದೆ. ವಿದ್ಯಾವಂತರಿಗೆ ಮಾತ್ರ ಗೊತ್ತಿತ್ತು. ದೊಡ್ಡಪ್ಪ ಚುನಾವಣೆಗೆ ನಿಲ್ಲದಿದ್ದರೇ ಚೆನ್ನಾಗಿತ್ತು. ಏಕೆಂದರೆ ಇನ್ನೂ ಅವರ Service ಬಾಕಿ ಇತ್ತು. 55 ವರ್ಷಕ್ಕೆ ನಿವೃತ್ತಿಯಾದರು. ಆಗ ಡಿ. ದೇವರಾಜ ಅರಸು ಮುಖ್ಯಮಂತ್ರಿ. ನಿವೃತ್ತಿಯ ನಂತರ ಪಿ.ಎಸ್.ಸಿ. ಮೆಂಬರ್ ಆದರು. ಕೆಲ ದಿನಗಳ ಕಾಲ ಛೇರ್‌ಮನ್ ಆಗಿದ್ದರು. ಸಮರ್ಥವಾದ Candidate ಬೇಕು ಎಂದು ಅವರನ್ನು ಚುನಾವಣೆಗೆ ನಿಲ್ಲಿಸಿದರು. ಅವರನ್ನು ರಾಜಕಾರಣಕ್ಕೆ ಎಳೆದು ತಂದವರು ರಾಜಶೇಖರಮೂರ್ತಿ, ಟಿ.ಎನ್. ನರಸಿಂಹಮೂರ್ತಿ ಮತ್ತು ಗುರುಪಾದಸ್ವಾಮಿ. ಅವರಿಗೊಬ್ಬ ಸಮರ್ಥ ಅಭ್ಯರ್ಥಿ ಬೇಕಾಗಿತ್ತು ಅಷ್ಟೆ. ಆದರೆ ಇವರು ಸ್ಪರ್ಧಿಸಿದ್ದು ಸಂಸ್ಥಾ ಕಾಂಗ್ರೆಸ್‌ನಿಂದ ಇಂದಿರಾ ಕಾಂಗ್ರೆಸ್ ವಿರುದ್ಧ. ಆಗ ಇಂದಿರಾಗಾಂಧಿ ಅಲೆ ಚೆನ್ನಾಗಿತ್ತು. ಸಿದ್ಧಮಾದಯ್ಯ ಗೆದ್ದರು. ನಮ್ಮ ದೊಡ್ಡಪ್ಪನಿಗೆ ತುಂಬಾ ಜನ ಹೇಳಿದ್ದರು. "ನೀವು Electionಗೆ ನಿಲ್ಲಬೇಡಿ" ಎಂದು. ಬನ್ನೂರಿನ ರಮಾನಂದ ಸ್ವಾಮಿ

ಎಂಬುವವರು ಸಹ ನೀವು ಗೆಲ್ಲುವ ಸಾಧ್ಯತೆಗಳಿಲ್ಲ. ಚುನಾವಣೆಗೆ ನಿಲ್ಲಬೇಡಿ ಎಂದು ಹೇಳಿದರು. ಆದರೆ ಭರಣಯ್ಯ ದ್ವಂದ್ವ ಮನಸ್ಥಿತಿಯಲ್ಲಿದ್ದರು. ನಿಂತರೆ ಗೆಲ್ಲುವ ಅನುಮಾನ, ನಿಲ್ಲದಿದ್ದರೆ ತ್ರಿಮೂರ್ತಿಗಳ ನಿಷ್ಠುರ. ಏನು ಮಾಡುವುದೆಂದು ತೋಚದೆ ಗಟ್ಟಿ ಮನಸ್ಸಿನಿಂದ ನಿಂತುಬಿಟ್ಟರು. ಸೋತರು. "ಇಷ್ಟೆಲ್ಲಾ ಮಾಡಿದರೂ ಜನ ಗುರುತಿಸಲಿಲ್ಲವಲ್ಲ" ಎಂದು ವ್ಯಥೆಪಟ್ಟರು. ಅವರಿಂದ ಸಹಾಯ ಪಡೆದ ಜನರೇ ಬೇರೆ ಪಕ್ಷ ಬೆಂಬಲಿಸಿದ್ದರು. ಇಂದಿರಾ ಪ್ರಭಾವ ಹಾಗೆ ಕೆಲಸ ಮಾಡಿತ್ತು. ಸೋತ ನಂತರ ಮಾನಸಿಕವಾಗಿ ಕುಗ್ಗಿ ಹೋದರು. ಹೃದಯಾಘಾತ ಕೂಡ ಆಗಿತ್ತು. ಯಾರಾದರು ಸಮಾಧಾನ ಹೇಳಿದರೆ "ನೀವೆಲ್ಲ ಇದ್ದೀರಲ್ಲ, ನನ್ನ ಮಕ್ಕಳು ಇದ್ದಾರಲ್ಲ, ನೀವೆಲ್ಲ ನನ್ನ ಹೆಸರು ಉಳಿಸಿ" ಎನ್ನುತ್ತಿದ್ದರು. ಪಿ.ಎಸ್.ಸಿ.ಗೆ ರಾಜೀನಾಮೆ ಕೊಟ್ಟು ಚುನಾವಣೆಗೆ ನಿಲ್ಲದಿದ್ದರೆ ಇನ್ನೂ ಸ್ವಲ್ಪ ದಿನ ಬದುಕುತ್ತಿದ್ದರು. ಭರಣಯ್ಯ ಸೋತಾಗ ಬುದ್ಧಿಜೀವಿಗಳು ನೊಂದುಕೊಂಡಿದ್ದರು. ಇಂತಹ ಒಳ್ಳೆಯ ವ್ಯಕ್ತಿಗಳನ್ನು ರಾಜಕೀಯಕ್ಕೆ ಎಳೆತಂದು ಅವರ ಮರ್ಯಾದೆಗೆ ಭಂಗ ತಂದರಲ್ಲ ಎಂದು ರಾಜಕಾರಣಿಗಳ ಬಗ್ಗೆ ಕಿಡಿ ಕಾರಿದ್ದರಂತೆ. ರಾಷ್ಟ್ರಮಟ್ಟದಲ್ಲಿ ಚಿಂತಿಸಿದ ಅಂಬೇಡ್ಕರ್ ಗುಣಗಳನ್ನು ಎರವಲಾಗಿ ಪಡೆದುಕೊಂಡು ಅವರ ದಾರಿಯಲ್ಲೇ ನಡೆದರು. ರಾಷ್ಟ್ರಕ್ಕೆ ಅಂಬೇಡ್ಕರರಾದರೆ, ರಾಜ್ಯಕ್ಕೆ ಭರಣಯ್ಯ. ಎಲ್ಲರೂ ಅಂಬೇಡ್ಕರ್ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸುತ್ತಾರೆ ಆದರೆ ಯಾರೂ ಅವರ ತತ್ತ್ವ ಅಳವಡಿಸಿಕೊಳ್ಳಲಿಲ್ಲ. ಅವರ ಮಟ್ಟಕ್ಕೆ ಯಾರೂ ಬರಲಾಗುವುದಿಲ್ಲ. ಭರಣಯ್ಯ ಹುಟ್ಟದಿದ್ದರೆ ನಮ್ಮದೊಂದು ಸಾಮಾನ್ಯ ಕುಟುಂಬವಾಗಿ ಇದ್ದುಬಿಡುತ್ತಿತ್ತು. ಸೋಮನಾಥಪುರದ ದಲಿತರು ಮುಂದುವರೆಯಲು ಆಗುತ್ತಿರಲಿಲ್ಲ. ನಮ್ಮ ತಾತ ಮುದಿಭರಣಯ್ಯ ಅಂತೂ ತುಂಬಾ ಸ್ಥಿತಿವಂತರು. ಒಳ್ಳೆಯ ಕೃಷಿ ಜಮೀನಿತ್ತು. ನೂರಾರು ಎಕರೆ. ತಮ್ಮ ಮೊಮ್ಮಕ್ಕಳಿಗೆ (ಚೌಡಯ್ಯನವರ ಹಿರಿಯ ಮಗಳಿಗೆ) ಮದುವೆ ಮಾಡಲೆಂದು ಗಂಡು ಹುಡುಕ ತೊಡಗಿದರು. ಕರ್ನಾಟಕದ ಮೊಟ್ಟಮೊದಲ ಪರಿಶಿಷ್ಟ ಜಾತಿಯ ಪದವೀಧರ ಸೋಸಲೆ ಬಿ. ರಾಚಯ್ಯ ಅವರ ಮಗ ಆರ್. ಶಂಕರಪ್ಪ ವರನಾಗಿ ಗೊತ್ತಾದರು. ವಿಜೃಂಭಣೆಯಿಂದ ಮದುವೆ ಮಾಡಿದರು ಮುದಿಭರಣಯ್ಯ. ಆಗಿನ ಕಾಲಕ್ಕೆ ನರಸೀಪುರ ಸುತ್ತ ಮುತ್ತ ಅದ್ಧೂರಿ ಮದುವೆ ಅದು. ಹೀಗೆ ಭರಣಯ್ಯ ನಮ್ಮ ಕುಟುಂಬವೂ ಸೇರಿದಂತೆ ಎಲ್ಲರಿಗೂ ಎಲ್ಲಾ ವಿಧದಲ್ಲೂ ಮಾರ್ಗದರ್ಶನ ಮಾಡಿದ್ದರು. ಊರಿನ ಪ್ರತಿಯೊಂದು ಮನೆಯವರಿಗೂ ಮಕ್ಕಳನ್ನು ಓದಿಸುವಂತೆ ಸಲಹೆ ಮಾಡುತ್ತಿದ್ದರು. ಹೀಗೆ ಜನಾನುರಾಗಿಯಾಗಿ ಬದುಕುತ್ತಿದ್ದ ದೊಡ್ಡಪ್ಪ ಅಕಾಲ ಸಾವಿಗೀಡಾದರು. ಆಗ ನನಗೆ ಹದಿನಾರು ವರ್ಷ. ಎಸ್.ಎಸ್.ಎಲ್.ಸಿ. ಓದುತ್ತಿದ್ದೆ. ಅವರು ಸತ್ತ ನಂತರ ಊರಿಗೆ ಬಂದು ನೆಲೆಸಿದೆ. ಅವರ ನೆನಪು ಮಾತ್ರ ಇನ್ನೂ ಜೀವಂತ".

ಅವರ ಹೆಸರೇ ಶ್ರೀರಕ್ಷೆ

ಸಿ. ವಿಶ್ವನಾಥ ಭರಣಿ
ಜಿಲ್ಲಾ ಉದ್ಯೋಗಾಧಿಕಾರಿ, ಚಾಮರಾಜನಗರ

ನೀವು ಸೋಮನಾಥಪುರ ನೋಡಿದ್ದೀರಾ...? ಅಲ್ಲಿ ಏನು ಕೆಲಸ ಆಗಿದೆ? ಏನಾದರೂ ಅಭಿವೃದ್ಧಿ ಆಗಿದೆಯಾ...? ಹೀಗಂತ ನಮಗೆ ಪ್ರಶ್ನೆಗಳನ್ನಿಟ್ಟು ಶಾಕ್ ಕೊಟ್ಟವರು ಸಿ. ವಿಶ್ವನಾಥಭರಣಿ. ಭರಣಯ್ಯನವರ ಮೂರನೇ ತಮ್ಮ ಆರ್. ಚಲುವಯ್ಯನ ಮಗ. ಪ್ರಸ್ತುತ ಚಾಮರಾಜನಗರ ಜಿಲ್ಲಾ ಉದ್ಯೋಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಭರಣಯ್ಯನವರ ಕುರಿತಾಗಿ ನಿಮ್ಮಲ್ಲಿರುವ ಮಾಹಿತಿಗಳನ್ನು ನೀಡಿ ಎಂದಾಗ ಚಾಮರಾಜನಗರದ ಜಿಲ್ಲಾಡಳಿತ ಭವನದ ಮೂರನೇ ಅಂತಸ್ತಿನ ತಮ್ಮ ಕೋಣೆಯಲ್ಲಿಯೇ ಮಾತಿಗೆ ಕುಳಿತರು ವಿಶ್ವನಾಥ ಭರಣಿ. ಬಹುಶಃ ಭರಣಯ್ಯನವರ ಬದುಕಿನ ರೀತಿಯನ್ನು ವಿಮರ್ಶಾತ್ಮಕ ಮನೋಭಾವದಲ್ಲಿ ವಿವರಿಸಿದರು.

"ಭರಣಯ್ಯನವರಲ್ಲಿ ನಾವೆಲ್ಲ ಒಂದೇ ಅನ್ನೋ ಭಾವನೆಯಿತ್ತು. ನಾವೆಲ್ಲ ಅವರ ಹೆಸರಿನಿಂದಲೇ ಇಷ್ಟು ಬೆಳೆದಿದ್ದೇವೆ. ಬಹಳ ಜನಾನುರಾಗಿಯಾಗಿದ್ದ ಅವರು ಅಂದಿನ ಕಾಲದಲ್ಲಿಯೇ ನೊಂದವರ ದನಿಯಾಗಿದ್ದರು. ನಾನು ಅವರನ್ನು ಗುರುತಿಸುವ ವೇಳೆಗಾಗಲೇ ಅವರು ಅಭಿವೃದ್ಧಿ ಕಾರ್ಯದರ್ಶಿಯಾಗಿದ್ದರು." ಇದು ಭರಣಯ್ಯ ಕುರಿತಾದ ವಿಶ್ವನಾಥ ಭರಣಿಯವರ ಪ್ರಥಮ ಅನಿಸಿಕೆ. ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಭರಣಯ್ಯ ಶುದ್ಧ ಹಸ್ತರು ಅವರು ಕೇವಲ ಕೆಲಸ ಕೊಡಿಸುತ್ತಿರಲಿಲ್ಲ. ಜೊತೆಗೆ ಉತ್ತಮ ಬದುಕು ಸಾಗಿಸುವುದು ಹೇಗೆ ಎಂದು ಗೈಡ್ ಮಾಡುತ್ತಿದ್ದರು. ಯಾವುದನ್ನು ಓದಬೇಕು. ಓದಿದ ನಂತರ ಯಾವ ಕೆಲಸ ಹಿಡಿಯಬೇಕು ಎಂಬುದರ ಬಗ್ಗೆ ಕೂಡ ಸಲಹೆ ನೀಡುತ್ತಿದ್ದರಂತೆ. ಯಾರಾದರು ಹಬ್ಬ ಹರಿದಿನ ಎಂದು ಬಂದರೆ ಅವರಿಗೆ ಧನ ಸಹಾಯ ಮಾಡುತ್ತಿದ್ದರು. ಅವರು ಊರಿಗೆ ಮಾಡಿದ ಒಂದು ಮುಖ್ಯ ಉಪಕಾರವೆಂದರೆ ಹರಿಜನರಿಗೆ ತಮ್ಮ ಮನೆ ಪಕ್ಕದಲ್ಲಿ ಬಾವಿ ತೋಡಿಸಿದ್ದು. ಆಗ ಸೋಮನಾಥಪುರದಲ್ಲಿ ಹರಿಜನರಿಗೆ ಬಾವಿ ಇರಲಿಲ್ಲ. ಊರಿನ ಬಾವಿಯಲ್ಲಿ ಸವರ್ಣಿಯರು ಮಾತ್ರ ನೀರು ಪಡೆಯುತ್ತಿದ್ದರು. ಹರಿಜನರಿಗೆ ನೀರಿರಲಿಲ್ಲ. ಬಾವಿಯ ಹತ್ತಿರ ಸುಳಿಯಲೂ ಬಿಡುತ್ತಿರಲಿಲ್ಲ. ಇಂಥಾ ಸ್ಥಿತಿಯನ್ನು ಮನಗಂಡ ಭರಣಯ್ಯನವರು ತಮ್ಮ ಕುಲಜನರಿಗೆ ತಮ್ಮ ಮನೆಯ ಪಕ್ಕದಲ್ಲೇ ಬಾವಿ ತೋಡಿಸಿ ನೀರಿನ ಬವಣೆ ನೀಗಿಸಿದ್ದರು. ಸೋಮನಾಥಪುರಕ್ಕೆ ಮೊಟ್ಟಮೊದಲು ವಿದ್ಯುತ್ ತಂದವರು ಭರಣಯ್ಯನವರು. ನಾನು ಕಂಡ ಮಟ್ಟಿಗೆ ಭರಣಯ್ಯನವರ ಬಗ್ಗೆ ನಕಾರಾತ್ಮಕವಾಗಿ ಮಾತನಾಡಿದವರು ಯಾರೂ ಇಲ್ಲ ಎನ್ನುತ್ತಾರೆ ವಿಶ್ವನಾಥ ಭರಣಿ.

ವಿಶ್ವನಾಥ ಭರಣಿಯವರು ಹೇಳುವ ಪ್ರಕಾರ "ಭರಣಯ್ಯನವರು ತಮಗಾಗಿ ಮತ್ತು ತಮ್ಮ ತಮ್ಮಂದಿರಿಗಾಗಿ ಇನ್ನೂ ಹೆಚ್ಚಿನ ಆಸ್ತಿ ಮಾಡಬಹುದಿತ್ತು ಮತ್ತು ಕುಟುಂಬದವರಿಗೆ ಸಹಾಯ ಮಾಡಬಹುದಿತ್ತು. ಇವತ್ತು ಭರಣಯ್ಯನವರ ಹೆಸರಿನಿಂದ ಬದುಕುತ್ತಿರಬಹುದು. ಆದರೆ ಭರಣಯ್ಯ ಅಧಿಕಾರದಲ್ಲಿದ್ದಾಗ ತಮ್ಮ ಕುಟುಂಬದವರು ತಮ್ಮ ಹೆಸರನ್ನು ಸ್ವಾರ್ಥಕ್ಕೆ ಬಳಸುವುದನ್ನು ವಿರೋಧಿಸುತ್ತಿದ್ದರು. ಆದರೆ ಅವರಿಗೆ ಬೇಕಾದ ವಿದ್ಯೆ, ಮಾರ್ಗದರ್ಶನಗಳನ್ನು ಕೊಟ್ಟರು. ಇಂದಿಗೂ ನನಗೆ ವಿಚಿತ್ರವೆನಿಸುವುದು ಅವರು ಚುನಾವಣೆಗೆ ನಿಂತದ್ದು. "ಭರಣಯ್ಯ ಹುಟ್ಟಿದ್ದು ತಿ. ನರಸೀಪುರ ತಾಲ್ಲೂಕಿನಲ್ಲಿ. ಅವರ ನೆಂಟರು, ಮಿತ್ರರು ಇದ್ದದ್ದು ಇದೇ ಊರಿನಲ್ಲಿ. ಇದೆಲ್ಲವನ್ನು ಬಿಟ್ಟು ಅದ್ಯಾವ ಆಧಾರದ ಮೇಲೆ ಅವರು ಕೊಳ್ಳೇಗಾಲದಲ್ಲಿ ಹೋಗಿ ಸ್ಪರ್ಧಿಸಿದರು? ಅವರಿಗೇನಾದರೂ ಉದ್ದೇಶವಿತ್ತು? ಒಳ್ಳೆ ಕೆಲಸ ಇತ್ತು, ಹೆಸರು ಇತ್ತು, ಗೌರವ ಇತ್ತು, ಅವರಿಗೆ ರಾಜಕೀಯ ಯಾಕೆ ಬೇಕಿತ್ತು? ಹಾಗೊಂದು ವೇಳೆ ಸ್ಪರ್ಧಿಸುವ ಆಸೆಯಿದ್ದರೆ ನರಸೀಪುರದಲ್ಲೇ ನಿಲ್ಲಬಹುದಿತ್ತು. ಗೆಲ್ಲುತ್ತಿದ್ದರೋ, ಸೋಲುತ್ತಿದ್ದರೋ ಅದು ಬೇರೆ ಪ್ರಶ್ನೆ. ಆದರೆ ನಮ್ಮ ಕ್ಷೇತ್ರದಲ್ಲೇ ಜನ ಗುರುತಿಸುವುದೇ ಕಷ್ಟ. ಅಂತಹುದರಲ್ಲಿ ಇವರ್ಯಾಕೆ ಕೊಳ್ಳೇಗಾಲಕ್ಕೆ ಹೋದರು? ಅವರನ್ನು ಅಲ್ಲಿಯ ಜನ ಗುರುತಿಸಿದರಾ?" ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆದರು.

"ಹಲವಾರು ಜನ ಭರಣಯ್ಯ ನಮಗೆ ಸಹಾಯ ಮಾಡಲಿಲ್ಲ ಎನ್ನುತ್ತಿದ್ದರು. ಆದರೆ ಅವರ್ಯಾರು ಭರಣಯ್ಯನವರ ಹತ್ತಿರ ಹೋಗಿ ಕೇಳಿಕೊಂಡಿರಲಿಲ್ಲ. ಕೇಳಿದ್ದರೆ ಅವರಿಗೂ ಕೈಲಾದ ಸಹಾಯ ಮಾಡುತ್ತಿದ್ದರು. ಯಾಕೆಂದರೆ ಒಬ್ಬ ಮನುಷ್ಯನಿಗೆ ಒಂದು ಹಂತದವರೆಗೆ ಸಹಾಯ ಮಾಡಬಹುದು, ವಿದ್ಯೆ ಕೊಡಬಹುದು, ಆದರೆ ಅವರ ಕಾಲ ಮೇಲೆ ಅವರೇ ನಿಲ್ಲಬೇಕು. ಆದರೂ ಭರಣಯ್ಯನವರ ಮಾರ್ಗದರ್ಶನದಿಂದ ಅವರ ಕುಟುಂಬ ಇಲ್ಲಿಯವರೆಗೂ ಬಂದಿದ್ದರೂ. ಅವರು ಸಮಾಜದ ಕಡೆಗೆ ಹರಿಸಿದ ಗಮನವನ್ನು ತನ್ನ ಕಡೆಗೆ ಅಷ್ಟಾಗಿ ಹರಿಸಲಿಲ್ಲ "ಭರಣಯ್ಯನವರಿಂದ ಅವರ ಸಂಸಾರಕ್ಕೆ ವೈಯುಕ್ತಿಕವಾಗಿ ಉಪಕಾರವಾಗಿರಬಹುದು. ಆದರೆ ಉಳಿದ ಕುಟುಂಬದವರು ಆಸ್ತಿಮಾಡಲು ಅವಕಾಶ ಇರಲಿಲ್ಲ. ಅವರು ಬೇರೆಯವರಿಗೆ ಮಾರ್ಗದರ್ಶನ ಮಾಡಿದಷ್ಟು ತಮ್ಮಂದಿರಿಗೆ ಮತ್ತು ಅವರ ಮಕ್ಕಳಿಗೆ ಮಾಡಲಿಲ್ಲ ಅನ್ನಿಸುತ್ತದೆ". ಎಂದು ನುಡಿಯುತ್ತಾರೆ ವಿಶ್ವನಾಥ ಭರಣಿ.

"ನನಗೆ ಮುಖ್ಯವಾಗಿ ಅನ್ನಿಸುವುದಿಷ್ಟು ಭರಣಯ್ಯ ಬಿ.ಎಸ್ಸಿ. ಓದಿ ಗೌರವಾನ್ವಿತ ಐ.ಎ.ಎಸ್. ಪಡೆಯಬೇಕಾದರೆ ಅವರಲ್ಲಿದ್ದ ಛಲ, ಆಸಕ್ತಿ, ಸೇವಾ ಮನೋಭಾವ ಎಲ್ಲವನ್ನೂ ಅವರ ಕುಟುಂಬ ಮತ್ತು ತಮ್ಮಂದಿರು ಗಮನಿಸಬೇಕಿತ್ತು. ಅವರು ವಿದ್ಯೆಯಲ್ಲಿ ಆಸಕ್ತಿ ತೋರಿದ್ದರೆ ಅವರಿಗೂ ಒಳ್ಳೊಳ್ಳೆ ನೌಕರಿಗಳನ್ನು ಕೊಡಿಸುತ್ತಿದ್ದರು. ಅವರಿಗೆ ಓದಿನಲ್ಲಿ ಆಸಕ್ತಿಯಿಲ್ಲವೆಂದ ಮೇಲೆ ಭರಣಯ್ಯ ತಾನೇ ಏನು ಮಾಡಿಯಾರು? ಅಣ್ಣನನ್ನು

ನೋಡಿ ಅವರಲ್ಲೂ ಛಲ ಹುಟ್ಟಬೇಕಿತ್ತು. ಅವರ ತಮ್ಮಂದಿರಿಗಾದರೆ ಭರಣಯ್ಯ ಇದ್ದರು ಆದರೆ ಭರಣಯ್ಯನವರಿಗೆ ಯಾರಿದ್ದರು? ತಮ್ಮ ಸ್ವಂತ ಸಾಮರ್ಥ್ಯದಿಂದ ಅವರು ಆ ಪರಿ ಬೆಳೆದರು. ಇಷ್ಟೆಲ್ಲಾ ಹೇಳಿದ ವಿಶ್ವನಾಥ ಭರಣಿಯವರು ಕೊನೆಯಲ್ಲಿ ನಮ್ಮ ಮುಂದೆ ಕೆಲವು ಪ್ರಶ್ನೆಗಳನ್ನು ಇಟ್ಟರು. ಚುನಾವಣೆಗೆ ನಿಂತಿದ್ದು ಯಾಕೆ? ಕುಟುಂಬಕ್ಕೆ ಯಾಕೆ ಹೆಚ್ಚೇನು ಮಾಡಲಿಲ್ಲ? ಇನ್ನೂ ಹಲವಾರು. ಇದಕ್ಕೆಲ್ಲಾ ಅವರಿಗೆ ಕೆಲವು ಉತ್ತರಗಳು ಗೊತ್ತಿರಬಹುದು. ಗೊತ್ತಿದ್ದರೂ ಅವರು ಹೇಳದೆ ಮೌನವಾದರು.

ಅಣ್ಣ ಅಂದ್ರೆ ನಮ್ಮಣ್ಣ

ಶ್ರೀಮತಿ ಕೆಂಪಮ್ಮ, ಮೈಸೂರು

"ನನಗೆ ಒಡಹುಟ್ಟಿದ ತಂಗಿಗಿಂತ ಹೆಚ್ಚಿನ ಪ್ರೀತಿ, ವಿಶ್ವಾಸ, ವಾತ್ಸಲ್ಯ ಕೊಟ್ಟು ನೋಡಿಕೊಂಡಿದ್ದರು. ಅಂತಹ ಅಣ್ಣ ಮತ್ತೊಬ್ಬ ಹುಟ್ಟಿ ಬರಲಾರ" ಎಂದು ಅಕ್ಕರೆಯ ಅಣ್ಣನ ನೆನೆಸಿಕೊಂಡು ಗದ್ಗದಿತರಾದರು ಕೆಂಪಮ್ಮ. ಮೈಸೂರಿನ ಸರಸ್ವತಿಪುರಂನಲ್ಲಿ 14ನೇ ಮುಖ್ಯರಸ್ತೆಯಲ್ಲಿ ಅಣ್ಣ ಕೊಡಿಸಿದ ಮನೆಯಲ್ಲಿ ಇಂದಿಗೂ ಬದುಕು ಸಾಗಿಸುತ್ತಿದ್ದಾರೆ. ಕೆಂಪಮ್ಮ ಮೂಲತಃ ನಂಜನಗೂಡು. ಇವರು ಭರಣಯ್ಯನವರಿಗೆ ಒಡಹುಟ್ಟಿದ ತಂಗಿಯೇನಲ್ಲ. ಆದರೆ ಬೆನ್ನಿಗೆ ಅಂಟಿಕೊಂಡು ಹುಟ್ಟಿದ ತಂಗಿಗೆ ಸಿಗಬೇಕಾದ ಎಲ್ಲ ವಾತ್ಸಲ್ಯ, ಆದರಗಳು ಕೆಂಪಮ್ಮನವರಿಗೆ ಸಿಕ್ಕಿದ್ದವು. ಭರಣಯ್ಯ ತಮ್ಮ ಒಡಹುಟ್ಟಿದ ತಂಗಿಯನ್ನು ಕಳೆದುಕೊಂಡ ಮೇಲೆ ಇವರನ್ನೇ ತಂಗಿಯಂತೆ ನೋಡಿಕೊಂಡರು.

ಕೆಂಪಮ್ಮನ ನೆನಪುಗಳು ಅಚ್ಚಳಿಯದೆ ಉಳಿದಿರುವುದು. ತನ್ನ ಅಣ್ಣನ ಗುಣದ ಕಡೆಗೆ "ಭರಣಯ್ಯನವರ ಗುಣ ಅತ್ಯುತ್ತಮ" ಎನ್ನುವುದು ಕೆಂಪಮ್ಮನ ಅಂತರಾಳದ ಸರ್ಟಿಫಿಕೇಟ್. ಯಾರಿಗೂ ಒಂದು ಮಾತು ಅಂದವರಲ್ಲ, ಜನಕ್ಕೆ ಸೇವೆ ಮಾಡುವ ಭಾವನೆಯಿತ್ತು. ತಾನೊಬ್ಬ ಉನ್ನತ ಅಧಿಕಾರಿ ಎಂಬುದನ್ನು ಮರೆತು, ಊರಿಗೆ ಹೋದಾಗ ಶಂಖ ಜಾಗಟೆ ಹಾಕಿಕೊಂಡು 'ದಾಸತ್ವ' ಮಾಡುತ್ತಿದ್ದರು. ಆದರೆ ಅವರ ಗುಣ ಅವರ ಬಂಧು-ಬಳಗದಲ್ಲಿ ಮತ್ತ್ಯಾರಿಗೂ ಅಷ್ಟಾಗಿ ಬರಲಿಲ್ಲ.

ಭರಣಯ್ಯನವರು ಆ ಕಾಲದಲ್ಲಿ "ಸತ್ಯವೇ ದೇವರು" ಎಂದು ಬದುಕುತ್ತಿದ್ದರು. ಮನೆಗೆ ಯಾರೇ ಬರಲಿ ಹಾಗೇ ಕಳುಹಿಸಿದವರಲ್ಲ "ಏ, ಶಾಂತೂ...... ಇವರಿಗೆ ಕಾಫಿ, ತಿಂಡಿ ಕೊಡು" ಎಂದು ಪತ್ನಿಗೆ ಹೇಳುತ್ತಿದ್ದರು. ಅವರು ಪರಂಗಿ ಹಣ್ಣನ್ನು ಅತಿಯಾಗಿ ಇಷ್ಟಪಡುತ್ತಿದ್ದರು. ಪತಿಯ ಮನದಿಂಗಿತವನ್ನು ಅರಿತ ಅವರ ಪತ್ನಿ ಸಹ ಬೇಸರಿಸದೆ ಪತಿಯ ಪರೋಪಕಾರಗಳಲ್ಲಿ ಭಾಗಿಯಾಗುತ್ತಿದ್ದರು.

ಮೈಸೂರಿಗೆ ಭರಣಯ್ಯ ಭೇಟಿ ಕೊಟ್ಟಾಗಲೆಲ್ಲ ಕೆಂಪಮ್ಮನ ಮನೆಗೆ ಬಂದೇ ಹೋಗುತ್ತಿದ್ದರು. ಕೆಲವೊಮ್ಮೆ ತಂಗುತ್ತಿದ್ದರು. ದಿವಾನರ ತೋಟವಾಗಿದ್ದ ಸರಸ್ವತಿಪುರಂ ಆಗತಾನೆ ಬಡಾವಣೆಯಾಗಿ ರೂಪುಗೊಳ್ಳುತ್ತಿತ್ತು. "ಇದು ಮುಂದೆ ಒಳ್ಳೆ ಬಡಾವಣೆಯಾಗುತ್ತದೆ. ಚಿಂತಿಸಬೇಡಮ್ಮ" ಎಂದು ಆಗಲೇ ಭವಿಷ್ಯ ನುಡಿದಿದ್ದರು. ಒಮ್ಮೆ ಭರಣಯ್ಯ ಯಾವುದೋ ಕೆಲಸದ ಮೇಲೆ ಮೈಸೂರಿಗೆ ಬಂದು ಚಾಮುಂಡಿ ಗೆಸ್ಟ್ ಹೌಸ್‌ನಲ್ಲಿ ತಂಗಿದ್ದರಂತೆ. ಈ ವಿಷಯ ಕೆಂಪಮ್ಮನಿಗೆ ಗೊತ್ತಾಗಿ ಹೋಗಿ ಕೇಳಿದರಂತೆ "ಅಣ್ಣಾ ನನ್ನ ಕಿರಿಯ ಮಗನನ್ನು ಓದಿಸಲು ಆಗುತ್ತಿಲ್ಲ. ಏನು ಮಾಡುವುದು?" ಆಗ ಭರಣಯ್ಯ "ಇವನು ಓದಿ ನನ್ನ ಮಟ್ಟಕ್ಕೆ ಬೆಳೆಯುತ್ತಾನೆ. ಅವನ ಓದಿಗೆ ನಾನು ಸಹಾಯ ಮಾಡುತ್ತೇನೆ" ಎಂದು ಭರವಸೆ ಕೊಟ್ಟರಂತೆ. "ಭರಣಯ್ಯನವರನ್ನು ಬಿಟ್ಟರೆ ಬೇರೆ ಯಾರಿಗೂ ಕೈ ನೀಡಿ ಕೊಡುವ ಗುಣ ಇರಲಿಲ್ಲ. ಎಲ್ಲವೂ ಅವರ ಜೊತೆ ಹೊರಟು ಹೋಯಿತು" ಎಂದು ಆಗಸಕ್ಕೆ ಕೈ ತೋರಿದರು– ಕೆಂಪಮ್ಮ.

"ಭರಣಯ್ಯನನ್ನು ನೆನೆಸಿಕೊಳ್ಳದೇ ಒಂದು ದಿನವೂ ಅನ್ನ ತಿನ್ನುವುದಿಲ್ಲ. ಮಲಗಿದಾಗ ಅನ್ನಿಸುತ್ತದೆ, ಇದೆಲ್ಲ ಎಲ್ಲಿಂದ ಬಂತು. ಇದಕ್ಕೆ ಯಾರು ಕಾರಣ ಎಂದು ಕಣ್ಣುಮುಚ್ಚಿದರೆ ನಮ್ಮಣ್ಣ ಭರಣಯ್ಯ ಕಣ್ಣಮುಂದೆ ಬಂದು ನಿಲ್ಲುತ್ತಾರೆ" ಎನ್ನುತ್ತಾರೆ ಕೆಂಪಮ್ಮ. "ಭರಣಯ್ಯನಂತೆ ಬಾಳಿ ಬದುಕಿ ಎಂದು ನಮ್ಮ ಮೊಮ್ಮಕ್ಕಳಿಗೆ ಹೇಳುವುದಷ್ಟೇ ನಮ್ಮ ಕೈಲಾಗುವುದು. ಮನೆಗೆ ಬಂದಾಗ ಮುದ್ದೆ ಬಿಟ್ಟರೆ ಬೇರೆ ಏನೂ ತಿನ್ನುತ್ತಿರಲಿಲ್ಲ. ಅದೇ ಪ್ರಿಯವಾದದ್ದು ಅವರಿಗೆ. ಎಷ್ಟೋ ಮನದ ನೋವಿದ್ದರೂ ಯಾರೊಂದಿಗೂ ಹೇಳಿಕೊಳ್ಳುತ್ತಿರಲಿಲ್ಲ. ಅಂತಹ ಅಣ್ಣ ಮತ್ತೆ ಹುಟ್ಟಿ ಬರಲಿ" ಎಂದು ಆಶಿಸಿದರು ಕೆಂಪಮ್ಮ.

ಕೈ ಬಿಟ್ಟ ಹಿತವರು

ಶ್ರೀ ನಂಜಪ್ಪ, ರೇಷ್ಮೆ ವ್ಯಾಪಾರಿ, ಮಾಂಬಳ್ಳಿ

"ಭರಣಯ್ಯ ಅಂದರೆ ಸಮುದ್ರ. ಎಷ್ಟೋಜನ ಏನೇನೋ ಕೇಳಿಕೊಂಡರು, ಪಡೆದುಕೊಂಡರು. ನಾನೂ ಭರಣಯ್ಯನವರ ಬಳಿಗೆ ಹೋಗುತ್ತಿದ್ದೆ. ಆದರೆ ಅಷ್ಟಾಗಿ ಏನೂ ಕೇಳಲಿಲ್ಲ." ಎಂದು ಹಳೆಯ ದಿನಗಳನ್ನು ಮೆಲುಕು ಹಾಕಿದವರು ಕೊಳ್ಳೇಗಾಲದ ಮಾಂಬಳ್ಳಿಯ ರೇಷ್ಮೆ ವ್ಯಾಪಾರಿ ನಂಜಪ್ಪನವರು. ಇವರು ಭರಣಯ್ಯನವರಿಗೆ ಸಂಬಂಧಿಕರು. ಭರಣಯ್ಯನವರ ಪತ್ನಿ ಮತ್ತು ನಂಜಯ್ಯನವರ ಪತ್ನಿ ಅಕ್ಕತಂಗಿಯರು. ಹೀಗಾಗಿ ಭರಣಯ್ಯ ಅಲ್ಲಿನ ಸಂಪರ್ಕ ಇಟ್ಟುಕೊಂಡಿದ್ದರು. ನಂಜಯ್ಯನವರು ಹೇಳುವ ಪ್ರಕಾರ, "ಕೊಳ್ಳೇಗಾಲದಲ್ಲಿ ಭರಣಯ್ಯನವರಿಗೆ ಆಗದವರೂ ಇದ್ದರು. ಅವರ ಸೋಲಿಗೆ

ಇದೂ ಒಂದು ಕಾರಣ. "ಭರಣಯ್ಯ ತಮ್ಮ ನಾಮಾಂಕಿತದ ಮೇಲೆ ಬಹಳ ವಿಶ್ವಾಸವಿಟ್ಟು ಚುನಾವಣೆಗೆ ನಿಂತಿದ್ದರು. ಆದರೇನು ಮಾಡುವುದು. ಈ ಕ್ಷೇತ್ರವೇ ಹಾಗೆ! ಇಲ್ಲಿ ಅನಕ್ಷರಸ್ಥರನ್ನೇ ಹೆಚ್ಚಾಗಿ ಗೆಲ್ಲಿಸುತ್ತಿದ್ದರು. ಈಗಿನವರು ಸ್ವಲ್ಪ ವಿದ್ಯಾವಂತರು. ಆಗೆಲ್ಲ ಒಂದು ಬೀದಿ ಅಥವಾ ಕೇರಿಯಲ್ಲಿ ಯಾವುದಾದರೊಂದು ಪಕ್ಷದ ಬಾವುಟ ಹಾರಿಸಿದರೆ ಯಾರೂ ಬೇರೆ ಪಕ್ಷಕ್ಕೆ ಓಟು ಹಾಕುತ್ತಿರಲಿಲ್ಲ. ಹಾಗಿತ್ತು ಆಗಿನ ಪಕ್ಷನಿಷ್ಠೆ. ಈಗ ಒಂದೇ ಮನೆಯಲ್ಲಿ ಮೂರು ಪಕ್ಷ...!" ಎಂದು ಪ್ರಸ್ತುತ ವ್ಯವಸ್ಥೆಯನ್ನು ಟೀಕಿಸಿದರು ನಂಜಯ್ಯ.

ನಂತರ ಮಾತಿಗೆ ಮುಂದಾದವರು ನಂಜಯ್ಯನವರ ಮಗ ಮೋಹನ್‌ಕುಮಾರ್. ಕೊಳ್ಳೇಗಾಲದ ರೇಷ್ಮೆ ಮಾರುಕಟ್ಟೆಯಲ್ಲಿ ಆಪರೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. "ಭರಣಯ್ಯ ಚುನಾವಣೆಗೆ ನಿಂತದ್ದು 1972ರಲ್ಲಿ ಸಂಸ್ಥಾ ಕಾಂಗ್ರೆಸ್‌ನಿಂದ. ಅವರ ಗುರುತು ಹಸು-ಕರು. ಭರಣಯ್ಯ ಸಾಧು ಸ್ವಭಾವದವರಾದ್ದರಿಂದ ಆ ಗುರುತು ಆರಿಸಿಕೊಂಡರೋ ಏನೋ. ಆಗ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದರು. ಜೊತೆಗೆ ನಮ್ಮ ಕರ್ನಾಟಕದಲ್ಲಿ 'ಉಳುವವನೇ ಭೂಮಿಯ ಒಡೆಯ' ಎಂಬ ಕಾಯಿದೆ ಜಾರಿಯಾಗಿತ್ತು. ಜನರೆಲ್ಲ ಆ ವರ್ಚಸ್ಸಿನ ಮೇಲೆ ಇಂದಿರಾ ಕಾಂಗ್ರೆಸ್‌ನ ಸಿದ್ಧಮಾದಯ್ಯನಿಗೆ ಓಟು ಒತ್ತಿದ್ದರು. ಭರಣಯ್ಯನವರಿಗೆ ವಿದ್ಯಾವಂತರು, ತಿಳುವಳಿಕೆಯಿರುವ ಪ್ರಜ್ಞಾವಂತರು ಮಾತ್ರ ಮತ ಚಲಾಯಿಸಿದರು. ಭರಣಯ್ಯನವರಿಗೆ ಕೊಳ್ಳೇಗಾಲ ಕ್ಷೇತ್ರವೇನು ಅನಿವಾರ್ಯ ಆಗಿರಲಿಲ್ಲ. ಆದರೆ ಮೀಸಲು ಆಗಿತ್ತು. ಆಗ ಟಿ. ನರಸೀಪುರ ಮೀಸಲು ಆಗಿರಲಿಲ್ಲ. ಅಲ್ಲಿ ಟಿ.ಎನ್. ನರಸಿಂಹಮೂರ್ತಿ ಸ್ಪರ್ಧಿಸಿದ್ದರು. ಹೀಗಾಗಿ ಭರಣಯ್ಯ ಕೊಳ್ಳೇಗಾಲ ಆಯ್ಕೆ ಮಾಡಿಕೊಂಡಿದ್ದರು. ಜನಾಭಿಪ್ರಾಯದ ಜೊತೆಗೆ ವೀರೇಂದ್ರ ಪಾಟೀಲ್, ಬಿ.ಡಿ. ಜತ್ತಿಯಂಥವರ ಒತ್ತಾಸೆಯೂ ಇತ್ತು. "ನೀವು ದಕ್ಷ ಅಧಿಕಾರಿಯಾಗಿದ್ದೀರಿ ಅದೇ ರೀತಿ ದಕ್ಷ ಆಡಳಿತಗಾರರಾಗುತ್ತೀರಿ" ಎಂದು ರಾಜಕೀಯದ ನುಡಿಗಟ್ಟಿನಲ್ಲೇ ಹೇಳಿದ್ದರು. ಇದೆಲ್ಲವನ್ನು ಕೇಳಿದ ಭರಣಯ್ಯ 'ಅಂಬಿಗ ನಾ ನಿನ್ನ ನಂಬಿದೆ' ಅಂತ ಚುನಾವಣೆಯೆಂಬ ಹುಚ್ಚು ಹೊಳೆಗೆ ಇಳಿದಿದ್ದರು. ಹಾಗೆಂದು, ಅವರು ಗೆದ್ದು ಅಧಿಕಾರದ ಕನಸನನ್ನೇನು ಕಾಣುತ್ತಿರಲಿಲ್ಲ. ಜನರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಬೇಕೆಂಬ ತವಕ ಇತ್ತು. ದಲಿತರನ್ನು ಒಳ್ಳೆಯ ಮಟ್ಟಕ್ಕೆ ತರಬೇಕೆಂದು ಅವರ ಆಶಯವಾಗಿತ್ತು. ಆದ್ದರಿಂದಲೇ ಅವರು ಸ್ವಯಂ ನಿವೃತ್ತಿ ಪಡೆದು ಚುನಾವಣೆಗೆ ನಿಂತಿದ್ದರು. ಅಧಿಕಾರಕ್ಕೆ ಬಂದರೆ ಅಂಬೇಡ್ಕರ್ ರೀತಿಯಲ್ಲಿ ಸೇವೆ ಮಾಡಬೇಕೆಂಬ ಕನಸಿತ್ತು ಅವರಿಗೆ. ಮೈಸೂರಿನ ಮಹಾರಾಜರು, ಯಳಂದೂರು ತಾಲ್ಲೂಕಿನ ಅರವತ್ತಮೂರು ಹಳ್ಳಿಗಳಿಗೆ ಜಾಗೀರುದಾರರಾಗಿದ್ದ ದಿವಾನ್ ಪೂರ್ಣಯ್ಯನವರು ಭರಣಯ್ಯನವರಿಗೆ ಆತ್ಮೀಯರಾಗಿದ್ದರು. ಇಷ್ಟೆಲ್ಲಾ ವರ್ಚಸ್ಸು ಇದ್ದ ಭರಣಯ್ಯನವರು ಗೆಲ್ಲಬೇಕಾಗಿತ್ತು. ಆದರೆ ದಲಿತರೆಲ್ಲರೂ

ಭರಣಯ್ಯನವರಿಗೆ ಓಟು ಹಾಕಲಿಲ್ಲ. ತೀರಾ ಹಳ್ಳಿ ಜನರಿಗೆ ಭರಣಯ್ಯ ಯಾರೆಂದೇ ಗೊತ್ತಿರಲಿಲ್ಲ. ಆದರೆ ಅವರೆಲ್ಲರಿಗೂ ಕಾಂಗ್ರೆಸ್ ಚಿಹ್ನೆ ಮತ್ತು ಅದರ ಮುಖ್ಯಸ್ಥರು ಗೊತ್ತಿದ್ದರು. ಅವರ ಅಲೆ ಚೆನ್ನಾಗಿ ಕೆಲಸಮಾಡಿತ್ತು. ಭರಣಯ್ಯನವರಿಗೆ ಸೋಲು ಉಂಟಾಗಿತ್ತು. ಅಲ್ಲದೆ ಚುನಾವಣೆ ತರಾತುರಿಯಲ್ಲಿ ಆದುದರಿಂದ ಹೆಚ್ಚಿನ ಪ್ರಚಾರ ಮಾಡಲು ಸಾಧ್ಯವಾಗಲಿಲ್ಲ. ಚುನಾವಣೆಗೆ ಹದಿನೈದು ದಿನ ಇರುವಾಗ ಭರಣಯ್ಯ ಕೊಳ್ಳೇಗಾಲದಲ್ಲಿ ಬೀಡು ಬಿಟ್ಟಿದ್ದರು. ಗೆದ್ದೇಗೆಲ್ಲುವೆನೆಂಬ ವಿಶ್ವಾಸವಿದ್ದ ಭರಣಯ್ಯನವರು ಅನಕ್ಷರಸ್ಥನ ವಿರುದ್ಧ ಸೋತೆನಲ್ಲಾ ಎಂದು ಮನಸ್ಸಿಗೆ ತುಂಬಾ ಹಚ್ಚಿಕೊಂಡಿದ್ದರು. ಇದೇ ಅವರ ಅನಾರೋಗ್ಯಕ್ಕೆ ಕಾರಣವಾಯಿತು".

ಚುನಾವಣಾ ಸಮಯದಲ್ಲಿ ಮೋಹನ್‌ಕುಮಾರ್ ಚಿಕ್ಕವರು. ಭರಣಯ್ಯನವರ ಪ್ರಚಾರದ ಸಮಯದಲ್ಲಿ ಕಾಫಿಫ್ಲಾಸ್ಕ್ ಹಿಡಿದು ಅವರ ಜೊತೆಯೇ ಇರುತ್ತಿದ್ದರಂತೆ. ಪ್ರಚಾರದ ಸಮಯದಲ್ಲಿ ಭರಣಯ್ಯ "ನೀವು ನನ್ನನ್ನು ಗೆಲ್ಲಿಸಿದರೆ. ಗ್ರಾಮಗಳ ಅಭಿವೃದ್ಧಿ, ಮೂಲ ಸೌಕರ್ಯ, ಕುಡಿಯುವ ನೀರು, ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳುತ್ತೇನೆ. ಮತ್ತು ಸರ್ಕಾರದ ಮಟ್ಟದಲ್ಲಿ ಸಮುದಾಯ ಭವನ, ಮನೆಗಳಿಗೆ ವಿದ್ಯುತ್ ಕೊಡಲು ಪ್ರಯತ್ನಿಸುತ್ತೇನೆ". ಎಂದು ಹೇಳುತ್ತಿದ್ದುದು ಮೋಹನ್‌ಕುಮಾರ್‌ಗೆ ನೆನಪಿದೆ. "ಅಂಬೇಡ್ಕರ್ ರೀತಿಯಲ್ಲೇ ಭರಣಯ್ಯನವರನ್ನು ಸೋಲಿಸಿದರು. ಅವರ ಪ್ರತಿಸ್ಪರ್ಧಿ ಸಿದ್ಧಮಾದಯ್ಯನವರು ವೈಯಕ್ತಿಕ ವರ್ಚಸ್ಸಿನವರೇನಲ್ಲ. ಅವರೊಬ್ಬ ಸಾಮಾನ್ಯ ರೈತ. ಆಮಿಷಗಳು ಜಾಸ್ತಿ ಇರಲಿಲ್ಲ. ಆದರೂ ಜನ ಸಿದ್ಧಮಾದಯ್ಯನವರನ್ನು ಗೆಲ್ಲಿಸಿದ್ದರು. ಆಗಿನ ರಾಷ್ಟ್ರನಾಯಕರೆಲ್ಲ ಭರಣಯ್ಯನವರನ್ನು ಸೋಲಿಸಿದ ವ್ಯಕ್ತಿ ಯಾರಿರಬಹುದೆಂದು ಸಿದ್ಧಮಾದಯ್ಯನವರನ್ನು ನೋಡಿ ಆಶ್ಚರ್ಯ ಪಟ್ಟಿದ್ದರಂತೆ....!"

"ಭರಣಯ್ಯನವರು ಎಲ್ಲರನ್ನು ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಅವರು ಕೇವಲ ಆಶ್ವಾಸನೆ ಕೊಡುತ್ತಿರಲಿಲ್ಲ. ಆಶ್ವಾಸನೆ ಕೊಟ್ಟವರೆಲ್ಲರಿಗೂ ಕೆಲಸ ಕೊಡಿಸಿದ್ದಾರೆ, ಕೊಟ್ಟಿದ್ದಾರೆ. ಅಲ್ಲದೆ ಜಮೀನು, ನಿವೇಶನದ ವ್ಯಾಜ್ಯಗಳನ್ನು ಪರಿಹರಿಸಿಕೊಟ್ಟಿದ್ದಾರೆ. ಆ ತರಹದ ದೊಡ್ಡ ಮನಸ್ಸಿನ ಅಧಿಕಾರಿ ಮತ್ತೊಬ್ಬರಿಲ್ಲ. ಅತ್ಯಂತ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದರು. ಆಗ ಕರ್ನಾಟಕದಲ್ಲಿ ನಾಲ್ಕೈದು ಜನ ಐ.ಎ.ಎಸ್. ಅಧಿಕಾರಿಗಳು ಮಾತ್ರ ಇದ್ದರೇನೋ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಅಂತ. ಆಗ ಸರ್ಕಾರ ಭರಣಯ್ಯನವರಿಗೊಂದು ಹಸಿರು ವ್ಯಾನ್ ನೀಡಿತ್ತು. ಈಗ ನೂರಾರು ಐ.ಎ.ಎಸ್. ಅಧಿಕಾರಿಗಳಿದ್ದಾರೆ ಅವರಿಂದ ಏನೂ ಮಾಡಲಾಗುತ್ತಿಲ್ಲ".

"ಭರಣಯ್ಯ ಶಿಸ್ತನ್ನು ಬಾಲ್ಯದಿಂದಲೂ ಮೈಗೂಡಿಸಿಕೊಂಡಿದ್ದರು. ಬೇರೆಯವರು ಶಿಸ್ತನ್ನು ಅಳವಡಿಸಿಕೊಳ್ಳುವಂತೆ ಹೇಳುತ್ತಿದ್ದರು. ಅದಕ್ಕೊಂದು ಉದಾಹರಣೆ ಹೇಳ್ತೀನಿ

“ನಮ್ಮ ಭಾವ ನಾಗಬಸವಯ್ಯ ಎಂಬುವವರು ಬಿ.ಇ. ಮಾಡಿಕೊಂಡು 150ರೂ ಸಂಬಳದ ಕೆಲಸದಲ್ಲಿದ್ದರು. ಭರಣಯ್ಯನವರೇ ಅವರಿಗೆ ಇಂಜಿನಿಯರ್ ಕೆಲಸ ಕೊಡಿಸಿದ್ದರು. ಒಮ್ಮೆ ಭರಣಯ್ಯನವರು ನಮ್ಮ ಮನೆಗೆ ಬಂದಿದ್ದಾಗ ನಮ್ಮ ಭಾವ ಯಾವುದೋ ತುಂಡು ಅಂಗಿ ಮತ್ತು ಪ್ಯಾಂಟನ್ನು ಧರಿಸಿ ಓಡಾಡುತ್ತಿದ್ದರು. ಆಗ ಭರಣಯ್ಯ ನಮ್ಮ ಭಾವನವರಿಗೆ ಎಚ್ಚರಿಕೆ ಕೊಡುತ್ತಾ ಹೇಳಿದ್ದರು. ‘ಮೊದಲು ನೀನು ಶಿಸ್ತಾಗಿ ಇರಬೇಕಪ್ಪ ನೀನು ಯಾರೋ ಅಲ್ಲ, ಒಬ್ಬ ಇಂಜಿನಿಯರ್, ಅದು ನಿನ್ನ ಕರ್ತವ್ಯ ನಾವು ಶಿಸ್ತಾಗಿ ಇದ್ದರೆ ನಮ್ಮ ಆಡಳಿತ ಶಿಸ್ತಾಗಿ ನಡೆಯುತ್ತದೆ’ ಎಂದು. ಇಂಥ ಭರಣಯ್ಯ ನಮಗೆ ಬಹುಕಾಲ ದಕ್ಕಲಿಲ್ಲ” ಇದು ಮೋಹನ್‌ಕುಮಾರ್ ಅವರ ನೊಂದ ನುಡಿ.

ಅಭಿವೃದ್ಧಿ ಚಿಂತಕ

ಮಾಜಿ ಪಟೇಲ್ ರಂಗೇಗೌಡರು, ಅತ್ತಳ್ಳಿ

“ಭರಣಯ್ಯನವರ ಕಾಲದಲ್ಲಿಯೇ ನಮ್ಮ ತಾಲ್ಲೂಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ನಡೆದವು. ಕಾಲಕ್ರಮೇಣ ಅವೆಲ್ಲ ಕುಂಠಿತವಾಗುತ್ತಾ ಬಂದವು. ಭರಣಯ್ಯನವರ ಬದಲಿಗೆ ಯಾರೂ ಹುಟ್ಟಲಿಲ್ಲ. ಹಾಗಾಗಿ ಅಭಿವೃದ್ಧಿ ಎಂಬುದು ನಮ್ಮಲ್ಲಿ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ” ಎಂದು ವಿಷಾದದಿಂದಲೇ ನುಡಿದವರು, ಅತ್ತಹಳ್ಳಿಯ 85ರ ವಯೋಮಾನದ ಹಿರಿಯಜ್ಜ. ಸ್ವಾತಂತ್ರ್ಯ ಹೋರಾಟಗಾರರೂ ಮಾಜಿ ಪಟೇಲರೂ ಆದ ಶ್ರೀಯುತ ರಂಗೇಗೌಡರು.

ರಂಗೇಗೌಡರು 1944ರಲ್ಲಿ ಪಟೇಲ್‌ಗಿರಿಗೆ ಬಂದರು. ದಿನಾಂಕ 06–03–1948ರಲ್ಲಿ ಸರ್ಕಾರಿ ಮಿಡಲ್‌ಸ್ಕೂಲ್‌ನ್ನು ಹೊಸದಾಗಿ ಸ್ಥಾಪಿಸಿ ಸರ್ಕಾರದಿಂದ ಬೆಳ್ಳಿಕಪ್ ಮತ್ತು ಯೋಗ್ಯತಾ ಪತ್ರ ಪಡೆದಿದ್ದಾರೆ. ಹಳೆಯ ನೆನಪುಗಳ ಖಜಾನೆಯಂತಿದ್ದ ರಂಗೇಗೌಡರನ್ನು ಭರಣಯ್ಯನವರ ಕುರಿತು ಮಾತಿಗೆಳೆದಾಗ ವಯಸ್ಸಿನ ಮುಸುಕಿನಲ್ಲಿ ಮರೆಯಾಗಿದ್ದ ಕೆಲವೊಂದು ವಿಚಾರಗಳು ಹೊರಬಂದವು. ಏನೋ ಹೇಳಬೇಕೆನ್ನುತ್ತಿದ್ದ ಅವರ ಉತ್ಸಾಹಕ್ಕೆ ಆಗಾಗ್ಗೆ ವಯಸ್ಸು. ಮಾಗಿದ ದೇಹ, ಸಹಕರಿಸುತ್ತಿರಲಿಲ್ಲ. ಆದರೂ ಭರಣಯ್ಯನ ವಿಚಾರವೆಂದ ತಕ್ಷಣ ಕಣ್ಣರಳಿಸಿ ಮಾತಾಡತೊಡಗಿದರು.

“ಅತ್ತಹಳ್ಳಿ ಭರಣಯ್ಯನವರ ತಾಯಿಮನೆ. ಅವರ ಚಿಕ್ಕಮ್ಮ ಹೊನ್ನಮ್ಮ ಇಲ್ಲಿಯೆ ಇದ್ದರು. ಭರಣಯ್ಯನವರಿಗೆ ಅವರನ್ನು ಕಂಡರೆ ತುಂಬಾ ಪ್ರೀತಿ, ಗೌರವ, ಹಾಗಾಗಿ ಊರಿಗೆ ಬರುವಾಗ ಮತ್ತು ಬೆಂಗಳೂರಿಗೆ ಹೋಗುವಾಗ ತಪ್ಪದೆ ಅತ್ತಹಳ್ಳಿಯ ಚಿಕ್ಕಮ್ಮನ ಮನೆಗೆ ಭೇಟಿ ಕೊಡುತ್ತಿದ್ದರು. ಅವರಿದ್ದ ಪ್ರತಿಯೊಂದು ಇಲಾಖೆಯಲ್ಲಿಯೂ ಅಭಿವೃದ್ಧಿಯ ಕಡೆಗೆ ಗಮನ ಹರಿಸುತ್ತಿದ್ದರು. ಭರಣಯ್ಯ ಕೊ–ಆಪರೇಟಿವ್ ರಿಜಿಸ್ಟ್ರಾರ್ ಆದಂತಹ

ಸಂದರ್ಭದಲ್ಲಿ ತಿ. ನರಸೀಪುರದಲ್ಲಿ ಕೊ–ಆಪರೇಟಿವ್ ಡಿಪಾರ್ಟ್‌ಮೆಂಟ್‌ನ ಡೆವಲಪ್‌ಮೆಂಟ್ ಇರಲಿಲ್ಲ. ಆಗ ಟಿ.ಪಿ. ಬೋರಯ್ಯನವರು ಶಾಸಕರಾಗಿದ್ದರು. ಭರಣಯ್ಯ ಬಹಳ ಹಿಂದುಳಿದಿದ್ದ ನರಸೀಪುರದ ಸೊಸೈಟಿಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಕಷ್ಟು ಕೆಲಸ ಮಾಡಿದರು".

"ಅಲ್ಲದೆ ಅತ್ತಹಳ್ಳಿ, ಟಿ. ನರಸೀಪುರ ಮತ್ತು ಸೋಮನಾಥಪುರಗಳಲ್ಲಿ ಗೋದಾಮುಗಳನ್ನು ಕಟ್ಟಲು ಆದೇಶಿಸಿದರು. ಗೋದಾಮುಗಳನ್ನು ಶೀಟಿನ ಬದಲಾಗಿ ತಾರಸಿಯಲ್ಲಿ ಕಟ್ಟುವಂತೆ ಹೇಳಿದ್ದರು. ಆದರೆ ಆಗಿನ ಸ್ಥಳೀಯ ರಾಜಕಾರಣಿಗಳ ಕಿತ್ತಾಟದಿಂದ ಯಾವುದೂ ಆಗಲಿಲ್ಲ. ಕೆಲದಿನಗಳ ನಂತರ ಅತ್ತಹಳ್ಳಿಯ ಸೇವಾ ಸಹಕಾರ ಸಂಘಕ್ಕೆ ಕೊ–ಆಪರೇಟಿವ್ ರಿಜಿಸ್ಟ್ರಾರ್ ಶ್ರೀ ಭರಣಯ್ಯನವರು ಒಂದು ರೂರಲ್ ಗೋಡೋನ್ ಕಟ್ಟಲು ಪಿ.ಡಬ್ಲುಡಿ. ಇಲಾಖೆಯ ಇಂಜಿನಿಯರಿಂದ ಪ್ಲಾನ್ ಮಾಡಿಸಿ 14,250ರೂ ಅಂದಾಜಿನಲ್ಲಿ ಆರ್.ಸಿ.ಸಿ. ಗೋಡೋನ್ ಕಟ್ಟಲು ಹಣ ಮಂಜೂರು ಮಾಡಿಸಿ ಕೊಟ್ಟಿದ್ದರು. ಅಲ್ಲದೆ ಅದಕ್ಕೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನವಿರುವ ಸರ್ವೆ.ನಂ. 154ರಲ್ಲಿ 20 ಗುಂಟೆ ಜಾಗವನ್ನು ಸರ್ಕಾರದಿಂದ ಕೊಡಿಸಿದ್ದರು. ಕಟ್ಟಡಕ್ಕೆ ಅಡಿಪಾಯವನ್ನು ಹಾಕಲಾಗಿತ್ತು. ಆದರೆ ಅಂದಿನ ಪಂಚಾಯಿತಿ ಛೇರ್‌ಮನ್‌ರವರು ರಾಜಕೀಯ ಪಿತೂರಿಯಿಂದ, ಗೋಡೋನ್ ಕಟ್ಟಕೂಡದೆಂದು ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯವನ್ನು ಹೂಡಿ ಅದಕ್ಕೆ ತಡೆಯಾಜ್ಞೆ ತಂದರು. ತಡೆಯಾಜ್ಞೆ ಮುಗಿದನಂತರ ಸರ್ಕಾರದಿಂದ ಸಂಘವನ್ನು ಸೂಪರ್‌ಸೀಡ್ ಮಾಡಿಸಿದರು. ಹೀಗೆ ರಾಜಕೀಯ ಮೇಲಾಟದಿಂದಾಗಿ 1962–63ನೇ ಸಾಲಿನಲ್ಲಿ ಮಂಜೂರಾದ ಗೋಡೋನ್ ಕಟ್ಟಡವನ್ನು ಈವರೆಗೂ ಕಟ್ಟಲಾಗಿಲ್ಲ. ಕಟ್ಟುವವರಿಗೂ ಅವಕಾಶ ಕೊಡಲಿಲ್ಲ. ಅವರು ಸೇವೆಯಲ್ಲಿದ್ದಾಗ ಕೇಳಿದವರಿಗೆಲ್ಲ ಕಾರಿನಲ್ಲಿ ಕೂರಿಸಿಕೊಂಡು ಹೋಗಿ ಕೆಲಸ ಕೊಡುತ್ತಿದ್ದರು. ಅವರನ್ನು ಅವರ ಜನರೇ ತುಳಿದರು. ಯಾರಲ್ಲಿಯೂ ಭೇದಭಾವ ಎಣಿಸದ ಅವರು ಎಲ್ಲರಿಗೂ ಫೇವರ್".

ಗ್ರಾಮ ಶಿಲ್ಪಿ

ಪಟೇಲ್ ಹೊನ್ನಗಿರಿಗೌಡರು, ಅತ್ತಳ್ಳಿ

"ಡಾ. ಬಿ. ಆರ್. ಅಂಬೇಡ್ಕರ್ ಸಂವಿಧಾನ ರಚಿಸುವಾಗ ಸಮಗ್ರ ಭಾರತದ ಅಭಿವೃದ್ಧಿ ಕನಸು ಕಟ್ಟಿಕೊಟ್ಟರು. ಅದರಲ್ಲಿ ವಿಶೇಷವಾಗಿ ದಲಿತರು, ಹಿಂದುಳಿದವರಿಗೆ ಮೀಸಲು ಸೌಲಭ್ಯ ಕಲ್ಪಿಸಿ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ ಉನ್ನತಿಗೊಳ್ಳಲು ವೇದಿಕೆ ನಿರ್ಮಿಸಿದರು. ಅದೇ ರೀತಿ ಆರ್. ಭರಣಯ್ಯ ಕೂಡ ತನ್ನ ನೆರೆಹೊರೆಯ ಊರಿನ ಕಡುಬಡವರಿಗೆ, ನಿರ್ಗತಿಕರಿಗೆ ದನಿಯಾಗಿ,

ಆಸರೆಯಾಗಿ ನಡೆದುಕೊಂಡರು. ತಮ್ಮ ಅಧಿಕಾರವಧಿಯಲ್ಲಿ ಸರ್ಕಾರದ ಅನುಮತಿ ಇಲ್ಲದಿದ್ದರೂ ಕೂಡ ಹುದ್ದೆಗಳನ್ನು ಸೃಷ್ಠಿಸಿ ನಂತರ ಸರ್ಕಾರದ ಗಮನಕ್ಕೆ ತಂದು ಅನುಮೋದನೆ ಪಡೆದುಕೊಳ್ಳುವ ಶಕ್ತಿ ಅವರಲ್ಲಿತ್ತು" ಎಂದು ಅವರ ವಿಶೇಷ ಗುಣವನ್ನು ಕೊಂಡಾಡಿದವರು ಸೋಮನಾಥಪುರ ಪಕ್ಕದ ಅತ್ತಹಳ್ಳಿಯ ಪಟೇಲ್ ಹೊನ್ನಗಿರಿಗೌಡರು. ಗೌಡರು ವಿದ್ಯಾವಂತರು. ಮೇಲಾಗಿ ಪಟೇಲ್‌ಗಾರಿಕೆ ನಡೆಸಿದವರು. ದಲಿತರು ಮತ್ತು ಹಿಂದುಳಿದ ಜನಗಳ ಕಲ್ಯಾಣಕ್ಕಾಗಿ ಭರಣಯ್ಯನವರು ನಡೆಸಿದ 'ರಾಯಭಾರತ್ವ'ವನ್ನು ಬಹಳ ಅಭಿಮಾನದಿಂದ ನೆನೆದುಕೊಂಡರು. "ಭರಣಯ್ಯ ನಮ್ಮ ಗ್ರಾಮಗಳ ಶಿಲ್ಪಿಯಂತಿದ್ದರು". ಎಂದು ಹೊನ್ನಗಿರಿಗೌಡರು ಕೊಂಡಾಡಿದರು.

"ಭರಣಯ್ಯನವರು ಎಂದಿಗೂ ತಮ್ಮ ಮನೆಯಲ್ಲಿ ಸವರ್ಣೀಯರಿಗೆ ಊಟ, ತಿಂಡಿ ಕೊಟ್ಟವರಲ್ಲ. ಯಾಕೆಂದರೆ ತಾವು ಹರಿಜನರೆಂಬ ಪ್ರಜ್ಞೆ ಅವರಲ್ಲಿತ್ತು. ನಾಳೆ ಸಮಾಜದ ವಿರೋಧ ಎದುರಿಸಬೇಕಾಗುತ್ತದೆ ಎಂದು ತಿಳಿದಿದ್ದರು. ಅತ್ತಹಳ್ಳಿಯ ಕೆಲವರು ಅವರ ಮನೆಗೆ ಕೆಲಸ ಕೇಳಲು ಹೋದಾಗ ತಡವಾದರೆ ಅವರಿಗೆ ಬೇರೆ ರೂಮಿನ ವ್ಯವಸ್ಥೆ ಮಾಡಿಕೊಟ್ಟು, ಹೋಟೆಲ್‌ನಲ್ಲಿ ಊಟಮಾಡಲು ದುಡ್ಡು ಕೊಡುತ್ತಿದ್ದರಂತೆ. ತಾವೇ ಊಟ ಹಾಕಿದರೆ ಜನ ಏನೆನ್ನುತ್ತಾರೋ ಎಂಬ ಸಾಮಾಜಿಕ ಭಯ ಅವರಲ್ಲಿತ್ತು. ಆದರೆ ಇಂದು ಜಾತಿ ವ್ಯವಸ್ಥೆ ಕ್ರಮೇಣವಾಗಿ ಹೋಗುತ್ತಿದೆ. ಆದರೆ ಆ ದಿನಗಳಲ್ಲಿ ಅವರು ಜಾತಿ-ಮತಗಳನ್ನು ಬದಿಗಿಟ್ಟು ನೆರವಾಗುತ್ತಿದ್ದರು. ಅಂಥ ಅಧಿಕಾರದಲ್ಲಿದ್ದರು, ಭಯ, ಭೀತಿ, ಇಟ್ಟುಕೊಂಡೇ ನಡೆದುಕೊಳ್ಳುತ್ತಿದ್ದರು. ಇದು ಅವರ ದೊಡ್ಡತನ" ಎಂದು ಗೌಡರು ತಮ್ಮ ನೆನಪುಗಳನ್ನು ಬಿಚ್ಚಿಟ್ಟರು.

"ಭರಣಯ್ಯ ಹೆಚ್ಚು ಒತ್ತು ಕೊಟ್ಟಿದ್ದು ಬಡವರ ಏಳಿಗೆಗೆ ಮತ್ತು ಉದ್ಧಾರಕ್ಕೆ. ಆದರೆ ನಿವೃತ್ತಿಯ ನಂತರ ಕೊಳ್ಳೇಗಾಲದ ಚುನಾವಣೆಗೆ ಸಂಯುಕ್ತ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಎದುರಾಳಿ ಅನಕ್ಷರಸ್ಥರಾಗಿದ್ದ ಸಿದ್ಧಮಾದಯ್ಯನ ವಿರುದ್ಧ ಸೋತರು. ಇಲ್ಲಿನ ನಮ್ಮ ಜನ ಎಂಥಾ ಬುದ್ಧಿವಂತರೆಂದರೆ.........." ಎಂದು ಏನೋ ಹೇಳಲು ಹೋಗಿ ಸುಮ್ಮನಾದರು. ನಂತರ ಮಾತು ಮುಂದುವರೆಸಿ "ಬಹುಶಃ ಅಷ್ಟೊಂದು ಸಹಾಯ ಮಾಡಿ, ಜನ ಜೀವನದ ಉನ್ನತಿಗೆ ಶ್ರಮಿಸಿದವರನ್ನು ನೆನೆಯದೆ ಆಮಿಷಗಳಿಗೆ ದಾಸರಾಗಿ ಅವರನ್ನು ಸೋಲಿಸಿದರು. ತಾಲ್ಲೂಕಿನ ಕೆಲವರು 'ಚುನಾವಣೆಗೆ ನಿಲ್ಲೋದು ಬೇಡ' ಎಂದರೂ ಭರಣಯ್ಯ ಅವರ ಮಾತೂ ಕೇಳಲಿಲ್ಲ. ಅವರಿಗೆ ಕೊಳ್ಳೇಗಾಲದ ಜನರ ಮೇಲೆ ಅಂತಹ ವಿಶ್ವಾಸವಿತ್ತು. ಅದಕ್ಕೆ ನಿಜಲಿಂಗಪ್ಪನವರ ಒತ್ತಾಸೆಯೂ ಇತ್ತು. ಆದರೂ ಜನ ಇವರ ಕೈಹಿಡಿಯಲಿಲ್ಲ. ಅದನ್ನು ನೆನೆಸಿಕೊಂಡರೆ ಈಗಲೂ ಬೇಸರವಾಗುತ್ತದೆ" ಎಂದು ವಿಷಾದಿಸಿದರು.

"ನಾವುಗಳು ಬಡವರು ಏಳಿಗೆಯಾಗಬೇಕು. ಅವರನ್ನು ಬಡತನ ರೇಖೆಯಿಂದ ಮುಂದೆ ತರಬೇಕು, ಅವರ ಸಂಪತ್ತು ಬೆಳೆಯಬೇಕು, ಅವರು ಉದ್ಧಾರವಾಗಬೇಕು ಎಂದು ನಾವೆಲ್ಲ ಬಾಯಲ್ಲಿ ಹೇಳುವುದನ್ನು ಅವರು ಆಗಲೇ ಕಾರ್ಯಗತ ಮಾಡಿ ತೋರಿಸಿದ್ದರು. ಈಗಿನ ರಾಜಕಾರಣಿಗಳು ಬರೀ ಭಾಷಣ ಮಾಡುತ್ತಾರೆ ಅಷ್ಟೆ. ಬಡವರು ಆರ್ಥಿಕವಾಗಿ ಸದೃಢರಾಗಬೇಕೆಂಬುದು ಅವರ ಹಂಬಲ. ಅವರು ಸಹಕಾರ ಸಂಘದ ರಿಜಿಸ್ಟ್ರಾರ್ ಆಗಿದ್ದಾಗ ತಿ. ನರಸೀಪುರ ತಾಲ್ಲೂಕಿಗೆ ಒಂದು ಸಕ್ಕರೆ ಕಾರ್ಖಾನೆ ಕೊಡಬೇಕೆಂದು ಸರ್ವ ಪ್ರಯತ್ನ ನಡೆಸಿದ್ದರು. ಆದರೆ ಅಲ್ಲಿನ ಮುಖಂಡರ ಕಿತ್ತಾಟದಿಂದ ಅದು ಬೇರೆ ತಾಲ್ಲೂಕಿನ ಪಾಲಾಯಿತು" ಎಂದು ತಮ್ಮ ತಾಲ್ಲೂಕಿಗೆ ಸಿಗಬೇಕಿದ್ದ ಉದ್ಯೋಗಾವಕಾಶಗಳನ್ನು ನಮ್ಮವರೇ ಹಾಳು ಮಾಡಿದರೆಂದು ಬೇಸರಿಸುತ್ತಾರೆ. "ಯಾವುದೇ ಹುದ್ದೆಯಲ್ಲಿ ಕೆಲಸ ಮಾಡಿದರೂ ಸರ್ಕಾರಕ್ಕೂ ಜನರಿಗೂ ಲೋಪವಾಗದಂತೆ ನಿರ್ವಹಿಸುತ್ತಿದ್ದರು. ಸಾಮಾಜಿಕವಾಗಿ, ಲೌಕಿಕವಾಗಿ ಸಮಾಜವನ್ನು ಆಗಲೇ ಎಷ್ಟೋ ಬಗೆಯಲ್ಲಿ ಅವರ ಕೈ ಹಿಡಿದು ಉದ್ಧಾರ ಮಾಡಿದ್ದರು. ಕೆಲವು ಸುಧಾರಣೆಗಳಿಗೂ ನಾಂದಿ ಹಾಡಿದ್ದರು".

ಹೊನ್ನಗಿರಿ ಗೌಡರು ಪಿ.ಯು.ಸಿ ಓದುವಾಗ, ಮೈಸೂರಿನ ಸರಸ್ವತಿಪುರಂನಲ್ಲಿ ಹಾಸ್ಟೆಲ್ ಒಂದರಲ್ಲಿ ಇದ್ದರು. ಇವರ ರೂಮಿನಲ್ಲಿ ಕೆಲವರು ವಕೀಲರು ಸಹ ಇದ್ದರು. ಆಗ ಅವರನ್ನು ಭೇಟಿ ಮಾಡಲು ಶಾಂತವೇರಿ ಗೋಪಾಲಗೌಡರು ಬರುತ್ತಿದ್ದರಂತೆ. ಹೀಗೆ ಒಮ್ಮೆ ಬಂದಾಗ "ನಾವು ಸಮಾನವಾಗಿರಬೇಕಾದರೆ, ಉದ್ಯೋಗಸ್ಥರಾಗಬೇಕಾದರೆ ಸಮತಾವಾದ ಅವಶ್ಯಕ" ಎಂದು ಹೇಳಿದ್ದರಂತೆ. ಬಹುಷಃ ಹೊನ್ನಗಿರಿಗೌಡರಿಗೆ, ಭರಣಯ್ಯನವರ ಬಗ್ಗೆ ಔದಾರ್ಯತಾಳಲು ಶಾಂತವೇರಿ ಗೋಪಾಲಗೌಡರ ಸಹವಾಸವೂ ನೆರವಾಗಿರಬಹುದೇನೋ.

ಒಮ್ಮೆ ಗೋಪಾಲಗೌಡರು ಮುಖ್ಯಮಂತ್ರಿ ನಿಜಲಿಂಗಪ್ಪನವರ ಬಳಿ ಕೇಳಿದ್ದರಂತೆ "ಸಮಾಜ ಸುಧಾರಣೆಯಾಗಬೇಕಾದರೆ ನಿರುದ್ಯೋಗ ನಿವಾರಿಸಬೇಕು, ಅದಕ್ಕೆ ಉದ್ಯೋಗ ಸೃಷ್ಟಿಕೊಡಬೇಕಾದರೆ, ನಿಮ್ಮಲ್ಲಿ ಯಾವ ಯೋಜನೆಗಳಿವೆ? ಎಂದು. ಆಗ ಹನುಮಂತಯ್ಯ ಕೊಟ್ಟ ಉತ್ತರ "ಈಗ ವಿಧಾನ ಸೌಧ ಕಟ್ಟುತ್ತಿದ್ದೇವೆ. ಅಲ್ಲಿ ಈಗ ಎಲ್ಲರಿಗೂ ಕೆಲಸ ಸಿಗುತ್ತದೆ" ಅಂತ. ಆಗ ಗೋಪಾಲಗೌಡರು ಹೇಳಿದರು "ನಿಮ್ಮ ವಿಧಾನಸೌಧ ಮೂರರಿಂದ ಐದು ವರ್ಷಗಳಲ್ಲಿ ಮುಗಿಯುತ್ತದೆ. ಆನಂತರ ಅವರ ಪಾಡೇನು.....? ಉದ್ಯೋಗದ ಗತಿಯೇನು........ ? ಈ ಪ್ರಶ್ನೆಗೆ ಹನುಮಂತಯ್ಯನವರ ಬಳಿ ಉತ್ತರ ಇರಲಿಲ್ಲವಂತೆ. ಆಗ ಗೋಪಾಲಗೌಡರು ಹೇಳಿದರಂತೆ, "ಅಲ್ಲಾ ಸ್ವಾಮಿ, ಉದ್ಯೋಗ ಸೃಷ್ಟಿ ಮಾಡುವುದು ಹಾಗಲ್ಲ. ಉದ್ಯೋಗಕ್ಕೊಂದು ಶಾಶ್ವತ ನೆಲೆಯಿರಬೇಕು. ಒಂದು ಪೆಟ್ಟಿಗೆ ಅಂಗಡಿ, ಎರಡು ಹಸು, ಹೀಗೆ ಅವರ ಉದ್ಯೋಗದ ಜೊತೆಗೆ ಅವರ ಜೀವನಮಟ್ಟ ಸುಧಾರಣೆಯಾಗಬೇಕು. ಯಾವ ದೇಶದಲ್ಲಿ ಅನ್ನದ ಕೂಗು, ಹಣದ ಕೂಗು, ವಿದ್ಯೆಯ ಕೂಗು, ಇರುತ್ತದೋ

ಅಲ್ಲಿ ನಾವು ಅದಕ್ಕೆ ಕಿವಿಗೊಟ್ಟು ಕೇಳಿಸಿಕೊಂಡು ಕಾರ್ಯಕ್ರಮ ರೂಪಿಸಿ, ಆ ಕೂಗಿನ ಬೇಡಿಕೆಗಳನ್ನು ಈಡೇರಿಸುತ್ತಾ ಹೋದರೆ ಆಗ ದೇಶ ಉದ್ಧಾರವಾಗುತ್ತದೆ. ಇದೇ ಉದ್ಯೋಗದ ವಿಷಯದಲ್ಲಿ ನಮಗೂ ನಿಮಗೂ ಇರುವ ವ್ಯತ್ಯಾಸ" "ಇಂಥದೇ ಧೋರಣೆ ಮತ್ತು ಮನೋಧರ್ಮ, ಗೋಪಾಲಗೌಡರ ರೀತಿಯ ಕಾಳಜಿ ಭರಣಯ್ಯನವರಿಗಿತ್ತು" ಎಂದು ಹೊನ್ನಗಿರಿಗೌಡರು ಪ್ರಶಂಶಿಸಿದರು.

ಹೊನ್ನಗಿರಿಗೌಡರ ರೂಮಿನಲ್ಲಿದ್ದ ವಕೀಲರ ಜೊತೆ ಚರ್ಚಿಸಲು ಗೋಪಾಲಗೌಡರು ಬರುತ್ತಿದ್ದ ಸಮಯದಲ್ಲಿ ಹೊನ್ನಗಿರಿ ಗೌಡರು ಸಾಮಾನ್ಯವಾಗಿ ಇರುತ್ತಿರಲಿಲ್ಲ. ಅವರಿಗೆ ಈ ಚರ್ಚೆಗಳಲ್ಲಿ ಆಸಕ್ತಿಯೇ ಇರಲಿಲ್ಲ. ಕಾಲೇಜು ರಜೆ ಇದ್ದ ಕಾರಣ ಅನಿವಾರ್ಯವಾಗಿ ಅವರ ಚರ್ಚೆ ಕೇಳುತ್ತ ಕುಳಿತಿರುತ್ತಿದ್ದರು. "ಒಬ್ಬ ಅಡ್ನಾಡಿ ಮೇಷ್ಟ್ರಿಂದ ಇಡೀ ಶಾಲೆ ಹಾಳಾಗುತ್ತದೆ. ಅವನು ಸರಿಯಿದ್ದರೆ ಮಕ್ಕಳು ಉದ್ಧಾರವಾಗುತ್ತಾರೆ. ಆವತ್ತಿನ ಶಾಲೆಯ ಶಿಕ್ಷಕರು ಈಗ ಸಿಗುವುದಿಲ್ಲ" ಇದು ಗೌಡರ ಇವತ್ತಿನ ಕಾಳಜಿ. ಆದರೆ ನಿಜಕ್ಕೂ ಆಗ ಗೌಡರು ಕೊಂಚ ಉಡಾಫೆಯ, ಯಾರಿಗೂ ಕೇಡು ಮಾಡದ ಪೈಕಿ! ಜೂರತ್ತಿನಲ್ಲಿ ಬದುಕುತ್ತಿದ್ದ ಗಟ್ಟಿ ಕುಳ, ಸ್ವಾರಸ್ಯವೆಂದರೆ, ಭರಣಯ್ಯ ಮತ್ತು ಹೊನ್ನಗಿರಿಗೌಡರ ಭೇಟಿ. ವಿಚಿತ್ರವಾದರೂ ಸತ್ಯ ಅದೊಂದು ಸಾಮರಸ್ಯದಿಂದ ಸೌಹಾರ್ದ ವಾತಾವರಣದಲ್ಲಿ ಕೂಡಿದ ಭೇಟಿಯಲ್ಲ. ಅದೊಂದು ಬೈಗುಳದ ಭೇಟಿ. "ಆಗೆಲ್ಲ ರಸ್ತೆಯಲ್ಲಿ ಸೇಂದಿ ಮಾರುತ್ತಿದ್ದರು. ಗೌಡರಿಗೆ ಇನ್ನೂ ಹದಿಹರೆಯ. ರಸ್ತೆಬದಿಯಲ್ಲಿ ಇವರು ಸೇಂದಿ ಕುಡಿಯುವಾಗ ಭರಣಯ್ಯ ಅದೇ ದಾರಿಯಲ್ಲಿ ಹೋಗುತ್ತಿದ್ದರು. ಅವರನ್ನು ಕಂಡ ಗೌಡರು "ಯಾವನೋ ಅವನು ಹೊಲೆಯ ಬಡ್ಡಿಮಗ, ಭಾಳ ಜಬರದಸ್ತಾಗಿ ಠಾಕು, ಠೀಕಾಗಿ ಹೋಯ್ತಾನೆ" ಎಂದು ಬೈದೇ ಬಿಟ್ಟರು. ಭರಣಯ್ಯ ಏನೂ ಮಾತನಾಡದೇ ದಿಟ್ಟಿಸಿ ಗೌಡರನ್ನೇ ನೋಡಿಕೊಂಡು ಮುಂದೆ ಹೋದರು. ಬಹುಶಃ ಈಗಿನವರಾಗಿದ್ದರೆ "ಜನಾಂಗೀಯ ನಿಂದನೆ" ಎಂದು ಜಗಳ ಕೋರ್ಟು, ಕೇಸು, ಕಲಹಗಳಿಂದ ಸಮಾಜದಲ್ಲಿ ರಾಡಿ ಎಬ್ಬಿಸಿ ಬಿಡುತ್ತಿದ್ದರು. ಆದರೆ ಭರಣಯ್ಯ ಏನೂ ಮಾತನಾಡದೆ ಸುಮ್ಮನೆ ಹೋದರು. "ಒಂದು ವೇಳೆ ಅವರು ಕೆಳಗಿಳಿದು "ಯಾಕೆ ಬೈದೆ" ಎಂದು ಕೇಳಿದ್ದರೆ "ಹೋಗಯ್ಯೋ ನನ್ನಿಷ್ಟ ಅದನ್ನ ಕೇಳೋಕೆ ನೀನ್ಯಾರು" ಅಂದು ಬಿಡುತ್ತಿದ್ದೆ. ಆಗ ನನ್ನದು ಹುಡುಗ ಮನಸ್ಸು. ಪುಣ್ಯಾತ್ಮ ಏನೂ ಕೇಳಲಿಲ್ಲ" ಎಂದು ಈಗ ನೆನೆದು ನಿಟ್ಟುಸಿರು ಬಿಡುತ್ತಾರೆ. ಬೈದ ನಂತರ ಇವರಿಗೆ ಅರಿವಾಯಿತು. "ಛೇ ಅಂತಹವರನ್ನು ಯಾಕೆ ಬೈದೆ? ಎಂದು ಈಗಲೂ ಬೇಜಾರಾಗುತ್ತದೆ" ಎಂದು ಗೌಡರು ಬೇಸರಿಸಿಕೊಂಡರು. ಅಷ್ಟೇ ಅಲ್ಲ ಇಂದಿಗೂ ಆ ಧೀಮಂತ ವ್ಯಕ್ತಿಗೆ ಬೈದೆನಲ್ಲಾ ಎಂದು ಪಶ್ಚಾತ್ತಾಪಪಡುತ್ತಿದ್ದಾರೆ. ಅಂದು ಹಾಗೆ ಬೈದಿದ್ದನ್ನು ಎಷ್ಟು ಪ್ರಾಮಾಣಿಕವಾಗಿ ಒಪ್ಪಿಕೊಂಡರೋ, ಅದಕ್ಕೆ ಪಶ್ಚಾತ್ತಾಪ ಪಡುವುದನ್ನು ಈಗಲೂ ಪ್ರಾಮಾಣಿಕವಾಗಿ ಹೇಳಿಕೊಂಡರು.

ಹೊನ್ನಗಿರಿಗೌಡರಲ್ಲಿ ಇನ್ನೊಂದು ಅಪರೂಪದ ನೆನಪಿತ್ತು. ಅದು ಈಗಲೂ ಸಾಮಾಜಿಕ ವಿಶ್ಲೇಷಣೆಗೆ ಒಳಪಡುವ ಸಂಗತಿಯಾಗಿ ತೋರುತ್ತದೆ. ಅದೇನೆಂದರೆ, ಭರಣಯ್ಯನವರು ಪ್ರತಿಬಾರಿ ಊರಿಗೆ ಬಂದು ಹೋಗುವಾಗ ಆ ದಾರಿಯಲ್ಲಿ ಅತ್ತಹಳ್ಳಿಯ ರಸ್ತೆಬದಿಯಲ್ಲಿ ಕಾರು ನಿಲ್ಲಿಸಿ ಎಳೆನೀರು ಕೊಂಡು ಕುಡಿಯುತ್ತಿದ್ದರಂತೆ. ಆದರೆ ಅಪ್ಪಿತಪ್ಪಿಯೂ ಖಾಲಿ ಎಳನೀರು ಬುರುಡೆಯನ್ನು ರಸ್ತೆಯಲ್ಲಿ ಬೀಸಾಡುತ್ತಿರಲಿಲ್ಲ. ಅದನ್ನು ಕಾರಿನಲ್ಲಿ ಇಟ್ಟುಕೊಂಡು ಹೋಗಿ ಬೇರೆಲ್ಲೋ ಎಸೆಯುತ್ತಿದ್ದರು. ಒಂದು ವೇಳೆ ಊರ ಮುಂದೆಯೇ ಎಸೆದರೆ ಹುಡುಗರು ಚಚ್ಚಿಕೊಂಡು ಒಳಗಿನ ಕಾಯಿ ತಿಂದುಬಿಡುತ್ತಾರೆ. ಆಗ ಊರವರು "ಆ .... ಎಸೆದ ಎಳೆನೀರು ಕಾಯನ್ನು ನಮ್ಮ ಹುಡುಗರು ತಿನ್ನಬೇಕಾ....... ? ಎಂದು ಬೈಯುತ್ತಾರೆ ಎಂಬ ಅಳುಕು ಅವರಲ್ಲಿತ್ತು. ಜೊತೆಗೆ 'ಅವರಲ್ಲಿ ತಮ್ಮ ಜಾತಿಯ ಪ್ರಜ್ಞೆ ಸ್ವಲ್ಪ ಹೆಚ್ಚೆ ಇತ್ತು. ಮೇಲಾಗಿ ಭಯಮಿಶ್ರಿತ ಗೌರವ ಇಟ್ಟುಕೊಂಡೇ ನಡೆದುಕೊಳ್ಳುತ್ತಿದ್ದರು. ಏನೇ ಆಗಲಿ ದಲಿತ ಜನಾಂಗದಲ್ಲಿ ಹುಟ್ಟಿದರೂ ಸಮಾಜದ ಏಳಿಗೆ ಬಯಸಿದ ಧೀಮಂತ ವ್ಯಕ್ತಿ" ಎಂದು ಅಭಿನಂದಿಸುತ್ತಾರೆ ಹೊನ್ನಗಿರಿ ಗೌಡರು.

ಭರಣಯ್ಯನವರು ಸಮಾಜವನ್ನು ಸುಧಾರಣೆ ಮಾಡಿದಂತ ಆದರ್ಶ ವ್ಯಕ್ತಿ. ವ್ಯಕ್ತಿ ಅಂದ ಮೇಲೆ ಕೆಲವು ಅವಗುಣಗಳು ಇರಬಹುದು. ಆದರೆ ಭರಣಯ್ಯನವರು ತುಂಬಾ ಸಜ್ಜನರಾಗಿದ್ದರು. ಐ.ಎ.ಎಸ್. ಆಗಿದ್ದರೂ ದರ್ಪ ಇರಲಿಲ್ಲ. ರಸ್ತೆಯಲ್ಲಿ ಹೋಗುವಾಗ ಯಾರಾದರೂ ಕೈ ಬೀಸಿದರೆ ಕಾರು ನಿಲ್ಲಿಸಿ ಅವರನ್ನು ಮಾತಾಡಿಸಿ ಅವರ ಕಷ್ಟ ವಿಚಾರಿಸುತ್ತಿದ್ದರು. ಅತ್ತಳ್ಳಿಯಲ್ಲಂತೂ ಅವರ ಚಿಕ್ಕಮ್ಮನನ್ನು ನೋಡಲು ತಪ್ಪದೆ ನಿಲ್ಲಿಸುತ್ತಿದ್ದರು. ಮನೆಗೆ ಹೋಗಿ ಅವರ ಬೇಕುಬೇಡಗಳನ್ನು ಕೇಳಿ ನೆರವು ನೀಡುತ್ತಿದ್ದರು. ಇದನ್ನೆಲ್ಲಾ ನಾವು ಕಣ್ಣಾರೆ ಕಂಡಿದ್ದೇವೆ. ಜನರೆಲ್ಲ ಪ್ರೀತಿಯಿಂದ 'ಭರಣಪ್ಪ" ಎಂದು ಕರೆಯುತ್ತಿದ್ದರು. ಭರಣಯ್ಯ ಎಲ್ಲೇ ಕೆಲಸ ಮಾಡಿದರೂ ಯಾವುದೇ ಕಳಂಕ ಹೊತ್ತಿರಲಿಲ್ಲ. ಅವರು ಶುದ್ಧಹಸ್ತರು" ಎಂದ ಗೌಡರು, ಅವರನ್ನು ಬೈದಿದ್ದಕ್ಕೆ ಸಂದರ್ಶನದ ಕೊನೆಯಲ್ಲೂ ಪಶ್ಚಾತ್ತಾಪ ಪಡುತ್ತಲೇ ಇದ್ದರು. ಇದು ಭರಣಯ್ಯನವರು ಬಿಟ್ಟುಹೋಗಿರುವ ಆದರ್ಶವೆನ್ನಬಹುದೆ?!

ಮನೆ ದೇವರು

ಸಣ್ಣಯ್ಯ
ನಿವೃತ್ತ ನೌಕರ, ಉಗ್ರಾಣ ಇಲಾಖೆ, ಅತ್ತಳ್ಳಿ

ಭರಣಯ್ಯನವರನ್ನು, ಅವರಿಂದ ಕೆಲಸ ಪಡೆದವರು 'ಮನೆ ದೇವರು' ಎಂದೇ ತಿಳಿದಿದ್ದಾರೆ. 'ನಾನು ಸಹ' ಎಂದು ಹೇಳಿದವರು ಅತ್ತಹಳ್ಳಿಯ ಸಣ್ಣಯ್ಯ. ಉಗ್ರಾಣ ಇಲಾಖೆಯ ನಿವೃತ್ತ ನೌಕರ. ಸಣ್ಣಯ್ಯ ಎಸ್.ಎಸ್.ಎಲ್.ಸಿ ಪಾಸುಮಾಡಿ ಸುಮ್ಮನೆ

ಮನೆಯಲ್ಲಿದ್ದರಂತೆ. ಯಾರೋ ಇವರಿಗೆ ಹೇಳಿದರಂತೆ. ಭರಣಯ್ಯನವರನ್ನು ಭೇಟಿಯಾದರೆ ಕೆಲಸ ಸಿಗುತ್ತದೆ ಎಂದು. ಅದೇ ರೀತಿ ಬೆಂಗಳೂರಿಗೆ ಹೋಗಿ ಭರಣಯ್ಯನವರನ್ನು ಭೇಟಿಯಾದರಂತೆ. ಇವರನ್ನು ವಿಚಾರಿಸಿದ ಭರಣಯ್ಯ ಉಗ್ರಾಣ ನಿಗಮದಲ್ಲಿ ಕೆಲಸ ನೀಡಿದರು. ಬಹುಶಃ ಬೇರೆಯವರಾಗಿದ್ದರೆ ಕೆಲಸ ಕೊಡಿಸಿ ಕೈ ತೊಳೆದುಕೊಂಡು ಬಿಡುತ್ತಿದ್ದರು. ಆದರೆ ಭರಣಯ್ಯನವರು ಹಾಗಲ್ಲ. ಬೆಂಗಳೂರಿನ ರಸ್ತೆಗಳ ಪರಿಚಯವೇ ಇಲ್ಲದ ಸಣ್ಣಯ್ಯನವರನ್ನು ಒಂದು ತಿಂಗಳು ಜೊತೆಯಲ್ಲಿ ಕರೆದುಕೊಂಡು ಹೋಗಿ ಕೆಲಸಕ್ಕೆ ಬಿಡುತ್ತಿದ್ದರಂತೆ. ಅಂತಹ ಧೀಮಂತ ವ್ಯಕ್ತಿಗೆ ಸಣ್ಣಯ್ಯ ಎರಡೂ ಕೈ ಎತ್ತಿ ಮುಗಿಯುತ್ತಾರೆ. ಕೆಲಸ ಕೊಡಿಸಿದ ಮಾತ್ರಕ್ಕೆ ಭರಣಯ್ಯ ದೊಡ್ಡವರಾಗುವುದಷ್ಟೇ ಅಲ್ಲ. ಕೆಲಸ ಕೊಡಿಸಿದ ನಂತರ ಅವರ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿದ್ದರು. ಇಂತಹ ವಿಚಾರಗಳಿಂದಲೇ ಭರಣಯ್ಯನವರು ತಮ್ಮ ವೃತ್ತಿ ಜೀವನದುದ್ದಕ್ಕೂ ವಿಶೇಷ ವ್ಯಕ್ತಿಯಾಗಿ ನಿಲ್ಲುತ್ತಾರೆ. "ಅವರು ಮನಸ್ಸು ಮಾಡಿದ್ದರೆ ಕೆಲಸ ಕೊಡಿಸಿಯೆ ಶ್ರೀಮಂತರಾಗಬಹುದಿತ್ತು. ಆದರೆ ಅಂತಹ ಕಳಪೆ ಕೆಲಸಕ್ಕೆ ಎಂದು ಕೈ ಹಾಕಿದವರಲ್ಲ. ಲಂಚಕ್ಕೆ ಎಂದೂ ಆಸೆ ಪಟ್ಟವರಲ್ಲ. ನಮ್ಮ ಟಿ. ನರಸೀಪುರದಲ್ಲಿ ಕಾಳಜಿ ವಹಿಸಿ ಉಗ್ರಾಣ ಸ್ಥಾಪಿಸಿದರು. ಬೇರೆ ಅಧಿಕಾರಿಗಳು ಇವರನ್ನು ಕಂಡರೆ ಭಯಪಡುತ್ತಿದ್ದರು. ಯಾರೂ ಎದುರಾಡುತ್ತಿರಲಿಲ್ಲ. ಅವರ ಗುಣವೇ ಸಮಾಜಕ್ಕೆ ಮಾದರಿಯಾಗಿತ್ತು. ಪುಸ್ತಕ ಓದುವ ಹವ್ಯಾಸ ಇಟ್ಟುಕೊಂಡಿದ್ದ ಭರಣಯ್ಯನವರು, ತಾವು ಸಹಕಾರಿ ಇಲಾಖೆಯಲ್ಲಿದ್ದಾಗ ಅತಿ ಹೆಚ್ಚು ಜನಕ್ಕೆ ಕೆಲಸ ಕೊಡಿಸಿದ್ದಾರೆ. ಆನಂತರ ಕೊನೆ ದಿನಗಳಲ್ಲಿ ಭರಣಯ್ಯ ಚುನಾವಣೆಗೆ ನಿಂತು ಸೋತರು. ಇದೊಂದು ತೀರಾ ಕೆಟ್ಟ ಸಮಯ, ಅವರ ಪಾಲಿಗೆ. ಆಗ ಶಾಸಕರಾಗಿದ್ದ ಟಿ.ಪಿ. ಬೋರಯ್ಯನವರು ಭರಣಯ್ಯನವರು ಚುನಾವಣೆಗೆ ನಿಂತಾಗ ಹೇಳಿದ್ದರಂತೆ "ರಾಜಕೀಯ ಮೂರುಬಿಟ್ಟು ನಿಂತವರಿಗೇ ಹೊರತು. ನಿಮ್ಮಂತವರಿಗಲ್ಲ" ಎಂದು. ಭರಣಯ್ಯ ಮನಸ್ಸು ಬದಲಿಸಿದ್ದರೆ ಕೊನೆಗಾಲವನ್ನು ನೆಮ್ಮದಿಯಿಂದ ಕಳೆಯಬಹುದಾಗಿತ್ತು. ಆದರೆ ಹಣೆಬರಹ ಅವರ ನೆಮ್ಮದಿ ಕೆಡಿಸಿತು". ಇದು ಸಣ್ಣಯ್ಯನವರ ನೆನಪಿನಿಂದ ಮೂಡಿಬಂದ ಮಾತು.

ನಮ್ಮ ಭರಣಪ್ಪ ದೇವ್ರು ಕಪ್ಪ....

ಮೊಳ್ಳಯ್ಯ, ಅತ್ತಳ್ಳಿ

"ಭರಣಪ್ಪ, ಅಂವಾ ದೇವರುಕಪ್ಪ. ಕೇಳಿಕೇಳಿದವರಿಗೆಲ್ಲ ಕೆಲ್ಸಕೊಟ್ಟ. ಅಂತವರು ಈಗ ಹುಟ್ತಾರಪ್ಪ?" ಎಂದು ಮಂಜುಗಣ್ಣಿನಲ್ಲಿ ನೀರು ತುಂಬಿಕೊಂಡು ಭರಣಯ್ಯನವರನ್ನು ನೆನೆಸಿಕೊಂಡವರು ಅವರ ದೂರದ ಸಂಬಂಧಿ ಅತ್ತಳ್ಳಿಯ ಮೊಳ್ಳಯ್ಯ. ಸುಮಾರು 92ವರ್ಷ ವಯಸ್ಸಾದವರು. ಭರಣಯ್ಯನವರ ಸಂಪೂರ್ಣ ಪರಿಚಯವಿದ್ದರೂ, ವಯಸ್ಸಿನ

ಕಾರಣ ನೆನಪುಗಳೆಲ್ಲಾ ಮಾಸಿ ಹೋಗಿವೆ. ಅವರ ಕುರಿತಾದ ಎಷ್ಟೋ ವಿವರಗಳು ಸ್ಮೃತಿ ಪಟಲದಲ್ಲಿದ್ದರೂ, ನೆನಪಾಗದೇ ಅವರು ಹೇಳಿದ್ದಿಷ್ಟು. "ನಮ್ಮ ಭರಣಪ್ಪ ದಲಿತ ಜನಾಂಗದಲ್ಲಿ ಹುಟ್ಟಿ ಅಷ್ಟು ಎತ್ತರಕ್ಕೆ ಬೆಳೆದ. ನಮ್ಮೂರಿಗೆ ಆಗಾಗ ಬರುತ್ತಿದ್ದ. ನಾನು ದೂರದಲ್ಲೇ ನಿಂತು ಅವನನ್ನ ನೋಡುತ್ತಿದ್ದೆ. ಅವನೇ ಹತ್ತಿರ ಕರೆದು ಮಾತಾಡಿಸುತ್ತಿದ್ದ. ಅವನ ಹತ್ತಿರ ನಿಂತ್ಕೋಳ್ಳೋಕು ಭಯ ಆಗೋದು. ಆದ್ರೂ ಅವನು ನಮ್ಮವನು ಎಂದು ಸಂತೋಷ ಆಗ್ತಿತ್ತು. ಎಳೆನೀರು ಕುಡಿದರೂ ಅದನ್ನ ಎಸೆಯದೆ ಕಾರಲ್ಲಿ ತಗೊಂಡು ಹೋಗ್ತಿದ್ದ ಕಪ್ಪ. ತನ್ನ ಎಂಜಲು ಯಾರ್ಗೂ ಸೋಕ್ಬಾರ್ದು ಅಂತ 'ತಿಂದದ್ನಾ ಹಂಗೆ ಎಸಿತಾನೇ ನೋಡು, ಅವ್ನ' ಅಂತ ಜನ ದೂರಬಾರ್ದು ಅಂತ ಅವನು ಹಂಗೆ ಮಾಡೋನು. ಸತುವಂತ ಕನಪ್ಪ ನಮ್ಮ ಭರಣಪ್ಪ! ಅಂತಾ ಜನ ಈಗ ಇದ್ದಾರಾ...? ಅವರ ಚಿಕ್ಕಮ್ಮನ ಕಂಡರೆ ಬಿದ್ದು ಸಾಯ್ತಿದ್ದ. ಇಲ್ಲಿಗೆ ಬರದೇ ಯಾವತ್ತೂ ಹೋದವನಲ್ಲ. ಅವನನ್ನ ನೆನೆಸಿಕೊಳ್ಳದ ಜನರೇ ಇಲ್ಲ ಆ ಕಾಲಕ್ಕೆ" ಎಂದು ಒಂದು ದೊಡ್ಡ ನಿಟ್ಟುಸಿರುಬಿಟ್ಟು ಸುಮ್ಮನಾದರು. ನೆರೆಹೊರೆಯಲ್ಲಿ ಅಂತ ಜೀವಗಳು ಈಗ ಇಲ್ಲದ್ದು ಕಂಡು ಪಿಚ್ಚೆನಿಸಿರಬೇಕು ಇವನಿಗೆ. ಒತ್ತಿದ ನೆನಪುಗಳಲ್ಲಿ ಮತ್ತೆ ಅವರನ್ನ ನೆನೆದು ಹನಿಗಣ್ಣಾದ. ತಾನು ಕಣ್ಮುಚ್ಚುವುದರೊಳಗೆ ಅಂತಾ ಪುಣ್ಯಾತ್ಮ ಮತ್ತೊಬ್ಬ ಬಂದಾನೋ ಎನ್ನಿಸಿತೆನೋ ಗಾಳಿಯಲ್ಲಿ ಇಲ್ಲವೆಂಬಂತೆ ಕೈಯಾಡಿಸಿದ. ಆಕಾಶದತ್ತ ಕೈಎತ್ತಿ ಮುಗಿದು ಮಾತು ನಿಲ್ಲಿಸಿದ ಆ ನೆಲದ ಜೀವ ಮೊಳ್ಳಯ್ಯ!

ಹೃದಯವಂತ ಅಧಿಕಾರಿ

ಹಾನವಾಡಿ ಕೆಂಪಯ್ಯ,

ನಿವೃತ್ತ ಸರ್ಕಾರಿ ಅಧಿಕಾರಿ, ಚಾಮರಾಜನಗರ

Bharanaiah was great person and man and honest. ಹೀಗೆ ಎರಡೇ ಸಾಲಿನಲ್ಲಿ ಅವರ ವ್ಯಕ್ತಿತ್ವ ಹಿಡಿದಿಟ್ಟವರು ಹಾನವಾಡಿ ಕೆಂಪಯ್ಯ ಅಲಿಯಾಸ್ ಮದ್ದೂರ್ ಸ್ವಾಮೀಜಿ. ಚಾಮರಾಜನಗರದಲ್ಲಿ ವಿಶ್ರಾಂತ ಜೀವನ ನಡೆಸುತ್ತಿರುವ ಕೆಂಪಯ್ಯನವರಿಗೆ ಭರಣಯ್ಯ ಭೇಟಿ ಆದದ್ದೇ ಒಂದು ರೋಚಕ ಕ್ಷಣ.

1959ರಲ್ಲಿ ಕೆಂಪಯ್ಯನವರು ಮದ್ದೂರಿನ ಮುಖ್ಯ ರಸ್ತೆಯ ಬದಿಯಲ್ಲಿ ಮಕ್ಕಳಿಗೊಂದು "ಆರ್. ಗೋಪಾಲಸ್ವಾಮಿ ಅಯ್ಯರ್ ಸ್ಮಾರಕ ವಿದ್ಯಾರ್ಥಿ ನಿಲಯ" ಎಂಬ ಆಶ್ರಮ ನಡೆಸುತ್ತಿದ್ದರು. ದಾನಿಗಳು ಕೊಟ್ಟ ಅಷ್ಟೋ ಇಷ್ಟೋ ಹಣ ಮತ್ತು ತಮ್ಮ ಕೈಯಿಂದ ಹಣ ಹಾಕಿ ಈ ಆಶ್ರಮ ನಡೆಸುತ್ತಿದ್ದರು. ಅಲ್ಲಿನ ಮಕ್ಕಳಿಗೆ ಊಟದ ವ್ಯವಸ್ಥೆ ಸಹ ಮಾಡಿದ್ದರು. ಆಗ ಕೆಂಪಯ್ಯನವರು ಗಡ್ಡ ಬಿಟ್ಟು ಉದ್ದನೆಯ ಬಿಳಿ ನಿಲುವಂಗಿ ಧರಿಸಿ ಥೇಟ್ ಸ್ವಾಮೀಜಿಯೂ ಆಗಿದ್ದರು. ಭರಣಯ್ಯ ಮೈಸೂರಿನಿಂದ ಬೆಂಗಳೂರು, ಬೆಂಗಳೂರಿನಿಂದ ಮೈಸೂರಿಗೆ

ಕಾರಿನಲ್ಲಿ ಓಡಾಡುವಾಗ ಇವರ ಆಶ್ರಮವನ್ನು ಗಮನಿಸುತ್ತಿದ್ದರು. ಒಮ್ಮೆ ಬೆಂಗಳೂರಿನಿಂದ ಬರುವಾಗ ಇವರ ಆಶ್ರಮದ ಮುಂದೆ ಕಾರು ನಿಲ್ಲಿಸಿ ಆಶ್ರಮ ನೋಡಲೆಂದೇ ಒಳಬಂದರು. ಆಗ ಅವರು ಸಮಾಜಕಲ್ಯಾಣ ಇಲಾಖೆಯ ನಿರ್ದೇಶಕರಾಗಿದ್ದರು. ಮಕ್ಕಳು ಮಾತ್ರ ಇದ್ದುದನ್ನೇ ಗಮನಿಸಿ ಮುಖ್ಯಸ್ಥರಿಗಾಗಿ ಹುಡುಕಾಡುತ್ತಾ ಸೀದಾ ಅಡುಗೆ ಮನೆಗೇ ಬಂದರು. ಆಶ್ಚರ್ಯ!.. ಆಶ್ರಮದ ಸ್ವಾಮೀಜಿಯೇ ಎರಡು ಕಾಲಿನಲ್ಲಿ ತಪ್ಪಲೆ ಹಿಡಿದು, ಹಿಟ್ಟಿನ ದೊಣ್ಣೆಯಿಂದ ಬಿಸಿ ರಾಗಿಮುದ್ದೆ ತಿರುಗುತ್ತಿದ್ದಾರೆ!! ಒಂದು ಕ್ಷಣ ದಿಗ್ಭ್ರಾಂತರಾಗಿ ಬಾಗಿಲಲ್ಲೇ ನಿಂತರು. ಮಾತು ಹೊರಡದೆ ಅವರನ್ನೇ ನೋಡುತ್ತಾ ನಿಂತ ಭರಣಯ್ಯನವರಿಗೆ ಕಣ್ಣಲ್ಲಿ ನೀರು ಬಂತಂತೆ. “Swamiji What is this…?” ಎಂದು ಕೇಳಿದರಂತೆ. ಆಗ ಸ್ವಾಮೀಜಿ ಆಶ್ರಮದ ಸ್ಥಿತಿಗತಿಯನ್ನು ವಿವರಿಸಿದರಂತೆ. ಇದನ್ನು ಕೇಳಿದ ಭರಣಯ್ಯ ಸ್ಥಳದಲ್ಲೇ “ಈ ಆಶ್ರಮಕ್ಕೆ ಎರಡು ಸಾವಿರ ರೂಪಾಯಿ ಹಣ ಮತ್ತು ಅಡಿಗೆಗೆ ಬೇಕಾದ ಪಾತ್ರೆಗಳನ್ನು ಕೂಡಲೇ ಒದಗಿಸತಕ್ಕದ್ದು” ಎಂದು ಆದೇಶ ಹೊರಡಿಸಿದರಂತೆ. ಆಗ ಸ್ವಾಮೀಜಿಗಂತೂ ತುಂಬಾ ಸಂತೋಷವಾಗಿತ್ತು. ಕಣ್ಣೀರಿನ ಜೊತೆಗೆ.

ಹೀಗೆ ಭರಣಯ್ಯನವರನ್ನು ಮೊಟ್ಟ ಮೊದಲು ಕಂಡು ಪ್ರಭಾವಿತರಾದ ಕೆಂಪಯ್ಯ ಅನಂತರ ಅವರನ್ನು ಎರಡು ಬಾರಿ ಭೇಟಿ ಆಗಿದ್ದರು. ಒಮ್ಮೆ ಮಳವಳ್ಳಿಯ ಪೂರಿಗಾಲಿಯಲ್ಲಿ ಯಾವುದೋ ಭಾಷಣಕ್ಕೆ ಭರಣಯ್ಯ ಬಂದಿದ್ದರಂತೆ. ಭಾಷಣ ಮಾಡುವಾಗ “ನಿಮ್ಮ ಊರಿಗೆ ಒಂದು ಶಾಲೆ ಮಂಜೂರು ಮಾಡಿಸ್ತೀನಿ ಕಟ್ಟಡ ಯಾರು ಕಟ್ಟಿಸ್ತೀರಿ..? ಎಂದು ಕೇಳಿದ್ದರಂತೆ. ಯಾರೋ ವ್ಯಾಪಾರಿ ಒಬ್ಬರು ಮುಂದೆ ಬಂದು ಶಾಲೆ ಕಟ್ಟಿಸಿದರಂತೆ.

“ಭರಣಯ್ಯನವರ ಮಾನವೀಯ ಗುಣಕ್ಕೆ ಬಹುಶಃ ಇದಕ್ಕಿಂತ ಉತ್ತಮ ಉದಾಹರಣೆ ಸಿಗಲಾರದು. ಬೆಂಗಳೂರಿನಲ್ಲಿ ಪಾಂಚಜನ್ಯ ಕೃಷ್ಣಪ್ಪ ಎಂಬುವವರು ಇದ್ದರು. ‘ಪಾಂಚಜನ್ಯ’ ಎಂಬ ಪತ್ರಿಕೆಯನ್ನು ಸಂಪಾದಕರಾಗಿ ಮುನ್ನಡೆಸುತ್ತಿದ್ದರು. ಅವರ ಮಗ ಬಹುಶಃ ವಿದೇಶದಲ್ಲಿದ್ದರು ಅನ್ನಿಸುತ್ತೆ. ಅವರ ಪತ್ನಿ ಶಾಸಕಿಯಾಗಿದ್ದರಂತೆ. ಕೃಷ್ಣಪ್ಪ ಭರಣಯ್ಯನವರಿಗೆ ಆತ್ಮೀಯ ಸ್ನೇಹಿತರು. ಅಲ್ಲದೆ ಕೃಷ್ಣಪ್ಪ ಹಾಸ್ಟೆಲ್ ಒಂದನ್ನು ಮಾಡಿ ಓದುವವರಿಗೆ ಸಹಾಯ ಮಾಡುತ್ತಿದ್ದರು. ಮುಂದೊಂದು ದಿನ ಪಾಂಚಜನ್ಯ ಕೃಷ್ಣಪ್ಪ ಸತ್ತಾಗ ಅವರ ಮಕ್ಕಳು ಮಡದಿ ಯಾರೂ ಬರಲಿಲ್ಲವಂತೆ. ಏನೋ ಕೌಟುಂಬಿಕ ಕಲಹ. ಆಗ ಕೃಷ್ಣಪ್ಪನವರ ಅಂತ್ಯಕ್ರಿಯೆ ಮಾಡುವವರು ಯಾರು? ಎಂಬ ಪ್ರಶ್ನೆ ಬಂದಾಗ ಮುಂದೆ ಬಂದವರು ಭರಣಯ್ಯ, ನಾನೇ ಅವರ ಹಿರಿಯ ಮಗ! ಅವರ ಚಿತೆಗೆ ನಾನೇ ಅಗ್ನಿಸ್ಪರ್ಶ ಮಾಡುತ್ತೇನೆ. ಅವರ ಅಂತಿಮ ಸಂಸ್ಕಾರಗಳನ್ನು ನಾನೇ ನೆರವೇರಿಸುತ್ತೇನೆ ಎಂದು ಸಿದ್ಧರಾದರಂತೆ. ಅದರಂತೆ ಅವರ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ತಲೆ ಬೋಳಿಸಿಕೊಂಡು ಹೆತ್ತ

ಮಗನಂತೆ ಅವರ ವಿಧಿ ವಿಧಾನಗಳನ್ನು ನೆರವೇರಿಸಿದರು. ಒಂದು ಉತ್ತಮ ಬಂಧುತ್ವಕ್ಕೆ, ಉನ್ನತ ಸ್ನೇಹಕ್ಕೆ ಇದಕ್ಕಿಂತ ಉತ್ತಮ ಸಂಸ್ಕಾರ ಬೇಕಾ.. ?"

ದಲಿತ ಜನಾಂಗದಲ್ಲಿ ಹುಟ್ಟಿದ ಭರಣಯ್ಯ ಪಾಂಚಜನ್ಯ ಕೃಷ್ಣಪ್ಪನವರ ಅಂತ್ಯ ಸಂಸ್ಕಾರ ಮಾಡಿದಾಗ ಮಡಿವಂತರೂ, ವಿಚಾರವಂತರೂ ಮೂಗಿನ ಮೇಲೆ ಬೆರಳಿಟ್ಟುಕೊಂಡಿರಬಹುದು. ಆದರೆ ಕೃಷ್ಣಪ್ಪನವರ ಆತ್ಮವಂತೂ ಮುಕ್ತಿ ಹೊಂದಿರುತ್ತದೆ. ಕೆಂಪಯ್ಯನವರೂ ಸಹ ಭರಣಯ್ಯನವರಂತೆಯೇ ಒಮ್ಮೆ ಆರ್.ಪಿ.ಐ. ಪಾರ್ಟಿಯಿಂದ ವಿಧಾನಸಭಾ ಚುನಾವಣೆಗೆ ನಿಂತಿದ್ದರಂತೆ..! ಆದರೆ ಭರಣಯ್ಯ ಸೋತದ್ದು ಮಾತ್ರ ವಿಷಾದನೀಯ. ಅವರೇನಾದರೂ ಗೆದ್ದು ಮಂತ್ರಿಯಾಗಿದ್ದರೆ ಸಮಾಜದಲ್ಲಿ ಹಲವಾರು ಸುಧಾರಣೆಗಳನ್ನು ಮಾಡುತ್ತಿದ್ದರು. ಒಂದು ಒಳ್ಳೆಯ ಸುಧಾರಣಾ ಸಮಾಜ ನಿರ್ಮಿಸಲು ಶ್ರಮಿಸುತ್ತಿದ್ದರು. ಭರಣಯ್ಯ ಎಲ್ಲೇ ಹೋದರೂ, ನಮ್ಮ ಜನಾಂಗದವರಿಗೆ ಹೇಳುತ್ತಿದ್ದುದು ಒಂದೇ, "ನಮ್ಮ Mejority ಎಲ್ಲೆಲ್ಲಿ ಇದೆಯೋ ಅಲ್ಲಿ ಹೋಗಿ ಸೇರಿಕೊಂಡು ಸಂಘಟಿತರಾಗಿ" ಎಂದು. ವಿಶ್ವವನ್ನು ಚೇತನಗೊಳಿಸಲು ಅಂಬೇಡ್ಕರ್ ಅವತರಿಸಿದ್ದರೆ, ರಾಜ್ಯದ ಏಳಿಗೆ ಬಗ್ಗೆ ಚಿಂತಿಸಲು ಭರಣಯ್ಯ ಅವತರಿಸಿದ್ದರು. ಅವರಲ್ಲಿದ್ದ ಸೇವಾ ಮನೋಭಾವ, ಹೆಂಗರುಳು ಅವರನ್ನು ಉತ್ತಮ ವ್ಯಕ್ತಿಯನ್ನಾಗಿಸಿತ್ತು".

ಆನಂತರ ಭರಣಯ್ಯ ಕೆಂಪಯ್ಯನವರನ್ನು ಭೇಟಿ ಆದದ್ದು ಕೆಂಪಯ್ಯನವರ ಮದುವೆಯಲ್ಲಿ. ಅಂದಹಾಗೆ ಕೆಂಪಯ್ಯನವರ ಪತ್ನಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯಿಂದ ವೈದ್ಯಕೀಯ ಪದವಿ ಪಡೆದ ಮೊಟ್ಟಮೊದಲ ಮಹಿಳೆ! ಭರಣಯ್ಯನವರಿಗೆ ಕುತೂಹಲ. 'ನಮ್ಮ ಸ್ವಾಮೀಜಿ ಮದುವೆ ಆಗುತ್ತಿದ್ದಾರಲ್ಲ!?' 'ಸನ್ಯಾಸಾಶ್ರಮ ಬಿಟ್ಟು ಗೃಹಸ್ಥಾಶ್ರಮ ಪ್ರವೇಶಿಸುತ್ತಿದ್ದಾರಲ್ಲ!?' ಎಂದು. ಅದಕ್ಕೆ ಮದುವೆಯಲ್ಲಿ ಭಾಗವಹಿಸಬೇಕು ಎಂದು ಮದುವೆಗೆ ಬಂದು ಅವರನ್ನು ಆಶೀರ್ವದಿಸಿದ್ದರು. ಕೆಂಪಯ್ಯನವರ ಪ್ರಕಾರ ಭರಣಯ್ಯ ಒಬ್ಬ ಶ್ರೇಷ್ಠ ಸಮಾಜ ಸುಧಾರಕ.

ದಲಿತರ ದಾರಿ ದೀಪ

ಪ್ರೊ. ವಿ. ಎಂ. ಪಾರ್ವತಮ್ಮ

ನಿವೃತ್ತ ಪ್ರಾಂಶುಪಾಲರು, ಮಹಾರಾಣಿ ಕಾಲೇಜು, ಮೈಸೂರು

"ಭರಣಯ್ಯ ಅಂದರೆ ದಕ್ಷ ಆಡಳಿತಕ್ಕೆ ಮತ್ತೊಂದು ಹೆಸರು. ದಲಿತರು ಮತ್ತು ಹಿಂದುಳಿದವರ ಉದ್ಧಾರಕ್ಕೆ ಬದುಕು ಮೀಸಲಿಟ್ಟ ಆಶಾಕಿರಣ" ಎಂದು ಇಳಿವಯಸ್ಸಿನಲ್ಲೂ ಭರಣಯ್ಯನವರನ್ನು ನೆನೆದುಕೊಂಡವರು, ನಿವೃತ್ತ ಪ್ರಾಂಶುಪಾಲರಾಗಿ ಮೈಸೂರಿನ ಕುವೆಂಪುನಗರದಲ್ಲಿ ಜೀವನ ನಡೆಸುತ್ತಿರುವ ಪ್ರೊ. ವಿ. ಎಂ. ಪಾರ್ವತಮ್ಮ.

ಚಿಕ್ಕಂದಿನಿಂದಲೇ ಭರಣಯ್ಯನವರನ್ನು ಕಂಡ ಇವರು ಅವರ ಕುಟುಂಬದ ಆಪ್ತ ವಲಯದಲ್ಲಿದ್ದವರು. ಬೆಂಗಳೂರಿನಲ್ಲಿದ್ದಾಗ ಅವರ ಮನೆಗೂ ಹೋಗುತ್ತಿದ್ದರು. ಭರಣಯ್ಯ ಇವರಿಗೆ ದೂರದ ಸಂಬಂಧ. ಭಾರತೀಯ ಜೀವ ವಿಮಾ ನಿಗಮದಲ್ಲಿ ಅಧೀನ ಕಾರ್ಯದರ್ಶಿಯಾಗಿದ್ದ ಟಿ. ಮಾದಯ್ಯನವರು ಪಾರ್ವತಮ್ಮನವರ ತಂದೆ. ಮಾದಯ್ಯ ಮತ್ತು ಭರಣಯ್ಯ ಆಪ್ತ ಸ್ನೇಹಿತರು. ಇಬ್ಬರೂ ಅಧಿಕಾರಿಗಳಾದರೂ ಅವರಿಬ್ಬರಲ್ಲಿ ಆತ್ಮೀಯತೆ ಇತ್ತು. ಆದ್ದರಿಂದಲೇ ಭರಣಯ್ಯ ಮಾದಯ್ಯನವರನ್ನು ಪ್ರೀತಿಯಿಂದ 'ಮಾದೂ.... ಮಾದೂ....' ಎಂದು ಕರೆಯುತ್ತಿದ್ದರಂತೆ. ಇಬ್ಬರಲ್ಲೂ ಜನಸೇವೆಯ ಹಂಬಲವಿತ್ತು. ಪಾರ್ವತಮ್ಮ ಚಿಕ್ಕವರಿದ್ದಾಗ ಭರಣಯ್ಯನವರ ಮನೆಗೆ ಹೋಗುತ್ತಿದ್ದರು. ಆದರೆ ಹೆದರಿಕೆಯಿಂದಲೋ, ಸಂಕೋಚದಿಂದಲೋ ಅವರನ್ನು ಮಾತಾಡಿಸುವುದಕ್ಕೆ ಹೆದರುತ್ತಿದ್ದರು. ಆದರೆ ಭರಣಯ್ಯನವರೇ ಪ್ರೀತಿಯಿಂದ ಮಾತಾಡಿಸುತ್ತಿದ್ದರಂತೆ.

ಪ್ರೊ. ಪಾರ್ವತಮ್ಮನವರ ನೆನಪುಗಳು ತೆರೆದುಕೊಂಡಿದ್ದು ಹೀಗೆ – "ಭರಣಯ್ಯ ಸ್ನೇಹಕ್ಕೆ ಹೆಚ್ಚು ಬೆಲೆ ಕೊಡುತ್ತಿದ್ದರು. ಅದಕ್ಕೆ ಉದಾಹರಣೆ ನಮ್ಮ ತಂದೆ ಮಾದಯ್ಯನವರಿಗೆ ನಾಟಕದ ಹುಚ್ಚಿತ್ತು. ವೃತ್ತಿ ರಂಗಭೂಮಿಯ ಹಲವಾರು ನಾಟಕ ಸಂಸ್ಥೆಗಳಲ್ಲಿ ನಟರಾಗಿ ನಟಿಸುತ್ತಿದ್ದರು. ಅವರಿಗೆ ಪ್ರಿಯವಾದದ್ದು ಶ್ರೀಕೃಷ್ಣನ ಪಾತ್ರ. ಅವರು ಪ್ರತಿಸಾರಿ ನಾಟಕ ಮಾಡಿದಾಗಲೂ ಭರಣಯ್ಯನವರಿಗೆ ಮತ್ತು ಅವರ ಕುಟುಂಬದವರಿಗೆ ಆಹ್ವಾನ ನೀಡುತ್ತಿದ್ದರು. ಎಲ್ಲೇ ಇದ್ದರೂ ಭರಣಯ್ಯ ನಾಟಕ ನೋಡಲು ಬರುತ್ತಿದ್ದರು. ಸ್ನೇಹಿತನ ಪಾತ್ರ ಮೆಚ್ಚಿ ಕೊಂಡಾಡುತ್ತಿದ್ದರು. ಕೆಲಸದ ಒತ್ತಡದಿಂದ ಬರಲು ಸಾಧ್ಯವಾಗದಿದ್ದರೆ ತಮ್ಮ ಕಟುಂಬದವರನ್ನು ತಪ್ಪದೇ ಕಳಿಸುತ್ತಿದ್ದರು".

"ಭರಣಯ್ಯನವರ ನಂತರ ಯಾವುದೇ ಅಧಿಕಾರಿ ಅದರಲ್ಲೂ ದಲಿತ ಅಧಿಕಾರಿಗಳು ಅವರ ಮಟ್ಟಕ್ಕೆ ಬೆಳೆಯಲಿಲ್ಲ. ಅವರ ಕಾಲದ ಆಡಳಿತಕ್ಕೂ ಈಗಿನ ಆಡಳಿತಕ್ಕೂ ತುಂಬಾ ವ್ಯತ್ಯಾಸ. ಭರಣಯ್ಯ ಎಂದೂ ಅಧಿಕಾರಕ್ಕೆ ಜೋತು ಬಿದ್ದವರಲ್ಲ. ಜನಸೇವೆ ಮಾಡಬೇಕು. ದಲಿತರನ್ನು ಮುಂದೆ ತರಬೇಕು. ಎಲ್ಲ ಬಡವರ ಏಳಿಗೆಗೆ ಶ್ರಮಿಸಬೇಕು ಎಂಬುದು ಅವರ ಕನಸಾಗಿತ್ತು. ಅದರಲ್ಲಿ ತಕ್ಕ ಮಟ್ಟಿಗೆ ಯಶಸ್ವಿಯಾಗಿದ್ದರು ಕೂಡ. ಆದರೆ ಅವರಿಂದ ಕೆಲಸ ಪಡೆದುಕೊಂಡ ಅವರ ವರ್ಗದ ಅಧಿಕಾರಿಗಳು ಮತ್ತು ಸಂಬಂಧಿಕರು ತುಳಿದದ್ದು ಸ್ವಾರ್ಥದ ಹಾದಿ. ತಾನಾಯಿತು ತನ್ನ ಸಂಸಾರವಾಯಿತು ಎಂದು ಇದ್ದುಬಿಟ್ಟರು. ಅಷ್ಟೆಲ್ಲಾ ಓದಿ ಮುಂದೆ ಬಂದರೂ ಕೀಳರಿಮೆಯಿಂದಲೋ, ಬೇಜವಾಬ್ದಾರಿಯಿಂದಲೋ ತಮ್ಮ ಪಾಡಿಗೆ ತಾವು ಇದ್ದುಬಿಡುತ್ತಿದ್ದರು" ಎಂದು ಬೇಸರಿಸುತ್ತಾರೆ ಪಾರ್ವತಮ್ಮ. "ಆದರೆ ಭರಣಯ್ಯ ಹಾಗಿರಲಿಲ್ಲ. ತಮ್ಮ ಅಧಿಕಾರವಧಿಯಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಸಹಾಯ ಮಾಡಬೇಕೋ ಅಷ್ಟನ್ನು ಮಾಡುತ್ತಿದ್ದರು. ಇಂದಿಗೂ

ಎಷ್ಟೋ ಜನ ಅವರ ಹೆಸರು ಹೇಳಿಕೊಂಡು ಜೀವನ ನಡೆಸುತ್ತಿದ್ದಾರೆ" ಎಂದು ಭರಣಯ್ಯನವರನ್ನು ಪ್ರಶಂಶಿಸುತ್ತಾರೆ. "ಭರಣಯ್ಯನವರಲ್ಲಿ ಧೈರ್ಯವಿತ್ತು, ದಕ್ಷತೆಯಿತ್ತು, ಉತ್ತಮ ಆಡಳಿತವಿತ್ತು. ಅವರ ಮಾದರಿಯನ್ನು ನಮ್ಮವರು ಅನುಸರಿಸಿದ್ದರೆ ದಲಿತವರ್ಗ ಇಷ್ಟೊತ್ತಿಗೆ ಎಷ್ಟೋ ಸುಧಾರಣೆಯಾಗುತ್ತಿತ್ತು" ಎಂದು ದಲಿತರತ್ತ ಗಮನ ನೀಡದೆ ತಮ್ಮ ತಮ್ಮ ಉದ್ಧಾರಕ್ಕೆ ಮಾತ್ರ ಅಧಿಕಾರ ಅಂತಸ್ತು ಬಳಸಿಕೊಂಡು ಬೇರೆ ದಾರಿ ತುಳಿದವರನ್ನು ನೆನೆದು ವಿಷಾದಿಸಿದರು.

"ಕೆ.ಪಿ.ಎಸ್.ಸಿ.ಯಲ್ಲಿ ಇದ್ದಾಗಲೇ ಕೆಲಸಕ್ಕೆ ರಾಜೀನಾಮೆ ನೀಡಿ ಕೊಳ್ಳೇಗಾಲದಿಂದ ಚುನಾವಣೆಗೆ ಸ್ಪರ್ಧಿಸಿದರು. ದುರಾದೃಷ್ಟವಶಾತ್ ಸೋತು ಮಾನಸಿಕ ಆಘಾತಕ್ಕೆ ಒಳಗಾಗಿ ಅಕಾಲ ಮರಣಕ್ಕೀಡಾದರು. ಅದು ಸಾಯುವ ವಯಸ್ಸಾಗಿರಲಿಲ್ಲ. ಭರಣಯ್ಯ ಇನ್ನಷ್ಟು ದಿನ ಇರಬೇಕಿತ್ತು" ಎಂದು ನೊಂದುಕೊಂಡವರು ಪಾರ್ವತಮ್ಮ.

"ಸೋಮನಾಥಪುರದಲ್ಲಿ ಭರಣಯ್ಯನವರ ಹೆಸರಿನಿಂದಲೇ ಇಡೀ ಕುಟುಂಬ ಬದುಕುತ್ತಿದೆ. ಆಗಿನ ಕಾಲಘಟ್ಟದಲ್ಲಿ ಜಾತೀಯತೆ ಎಂಬುದು ತುಂಬ ಇತ್ತು. ಅದು ಯಾವ ಮಟ್ಟದಲ್ಲಿ ಇತ್ತೆಂದರೆ ಒಬ್ಬರು ಡಿ.ಸಿ.ಯಾಗಿದ್ದರು ಬಿ. ರಾಚಯ್ಯ ಅಂತ. ಅವರಿಗೇ ತಲೆ ಕ್ಷೌರ ಮಾಡಲು ಹಿಂಜರಿಯುತ್ತಿದ್ದರು..! ಅಂತಾ ಸಂಕಷ್ಟದ ನಮ್ಮವರನ್ನ ಮನುಷ್ಯರೆಂದು ನೋಡದ ಕಾಲ! ಅಂತಹದರಲ್ಲಿ ಭರಣಯ್ಯ ಈ ಜಾತೀಯತೆಯನ್ನು ಮೀರಿ ಮೇಲೆ ಬಂದವರು. ಹಾಗಾಗಿ ಎಲ್ಲ ವರ್ಗದ ಜನ ಅವರಿಗೆ ಮರ್ಯಾದೆ ಕೊಡುತ್ತಿದ್ದರು. ಆದರೆ ಎಲ್ಲಾ ಅಧಿಕಾರಿಗಳು ಹೀಗಿರಲಿಲ್ಲ".

ಪಾರ್ವತಮ್ಮನವರು ಓದಿ ಸಮಾಜದ ಇತರ ವರ್ಗದವರೊಡನೆ ಬೆರೆಯಲು ಪ್ರಾರಂಭವಾದಾಗ ನಾವು ದಲಿತರು ಎಂದರೂ ಇತರರು ನಂಬುತ್ತಿರಲಿಲ್ಲವಂತೆ. ಎಲ್ಲ ವರ್ಗದ ಜನರ ಸ್ನೇಹವನ್ನು ಆ ರೀತಿ ಸಂಪಾದಿಸಿದ್ದರು. ತಮ್ಮ Family ಬೆಳೆಯಲು ಇತರ ವರ್ಗದವರ ಅಡಚಣೆಯಿದ್ದರೂ ಅದನ್ನು ಲೆಕ್ಕಿಸದೆ ಸಾಮಾಜಿಕವಾಗಿ ತಾವು ಸಹ ಮುಂದುವರೆದುಕೊಂಡು ಬಂದಿದ್ದನ್ನು ಇಂದಿಗೂ ನೆನೆಯುತ್ತಾರೆ. "ಹಿಂದೆ ದಲಿತ ಅಧಿಕಾರಿಗಳು ಸಹ ಜಾತಿ ನಿಂದನೆಯನ್ನು ಹಲವು ಬಗೆಯಲ್ಲಿ ಅನುಭವಿಸಿದ್ದವರೇ. ಅಂಬೇಡ್ಕರ್ ಮೀಸಲಾತಿ ತಂದ ಮೇಲೆ ಎಲ್ಲರೂ ಮುಖ್ಯವಾಹಿನಿಗೆ ಬಂದರು. ಆ ಮೂಲಕ ಅಂಬೇಡ್ಕರ್ ದಲಿತರಿಗೆಲ್ಲ ಅನ್ನದಾತರಾದರು. ಸ್ವತಃ ಶೋಷಣೆ, ದೌರ್ಜನ್ಯಗಳಿಂದ ನೊಂದು ಬೆಂದಿದ್ದ ಅಂಬೇಡ್ಕರ್ ಎಲ್ಲ ಧರ್ಮಗಳನ್ನು ವಿಮರ್ಶಿಸಿ ಕೊನೆಗೆ ಬೌದ್ಧ ಧರ್ಮ ಸ್ವೀಕರಿಸಿದರು. ಅಲ್ಲಿ ಸಮಾನತೆ ಸಿಗುತ್ತದೆ. ನೀವು ಬೌದ್ಧಧರ್ಮದ ಅನುಯಾಯಿಗಳಾಗಿ ಎಂದು ದಲಿತರಿಗೆಲ್ಲ ಕರೆಕೊಟ್ಟರು. ಅದರಂತೆ ಮೈಸೂರಿನಲ್ಲಿ ಬಸವಲಿಂಗಪ್ಪನವರ ನೇತೃತ್ವದಲ್ಲಿ 'ಕರ್ನಾಟಕ ಬುದ್ಧ ಧಮ್ಮ ಸಮಿತಿ'ಯನ್ನು

ಪ್ರಾರಂಭಮಾಡಿದೆವು" ಎಂದು ತಾವು ಬುದ್ಧ ಧಮ್ಮ ಸಮಿತಿಯ ಚಟುವಟಿಕೆಗಳಲ್ಲಿ ಸದಸ್ಯರಾಗಿ ಸಕ್ರಿಯವಾಗಿರುವುದನ್ನು ಹೇಳಿದರು. ಸಮಿತಿ ಈಗಲೂ ಸಕ್ರಿಯವಾಗಿ ಕಾರ್ಯ ಪ್ರವೃತ್ತವಾಗಿದೆ.

"ಶ್ರೀಮತಿ ಪಾರ್ವತಮ್ಮನವರ ದೃಷ್ಟಿಯಲ್ಲಿ ಅಂಬೇಡ್ಕರ್ ಮತ್ತು ಭರಣಯ್ಯನವರಿಗಿದ್ದ ಮುಖ್ಯ ಗುರಿಯೆಂದರೆ. ದಲಿತ ವರ್ಗವನ್ನು ಮುಂದೆ ತಂದು ಸಮಾನತೆ ಕೊಡಿಸುವುದು, ಶೋಷಣೆ ಎಂಬ ಸಂಕೋಲೆಯಿಂದ ಬಿಡಿಸುವುದು ಮತ್ತು ಅವರ ಜೀವನ ಸುಧಾರಿಸುವುದು. ಭರಣಯ್ಯ ಸಹ ಅಂಬೇಡ್ಕರ್ ಅನುಯಾಯಿ. ಹೀಗಾಗಿ ಅಂಬೇಡ್ಕರ್‌ರಲ್ಲಿದ್ದ ಕ್ರಾಂತಿಕಾರಿ ಗುಣಗಳನ್ನು ತಮ್ಮದೇ ರೀತಿಯಲ್ಲಿ ಭರಣಯ್ಯನವರು ಅನುಸರಿಸುತ್ತಾ ಹೋದರು. ಆದರೆ ಇವರಿಗೆ ಅಂಬೇಡ್ಕರ್‌ರಂತೆ ಕ್ರಾಂತಿ ಮಾಡಲು ಇಲ್ಲಿ ಅವಕಾಶ ಇರಲಿಲ್ಲ. ಜೊತೆಗೆ ಕಾಲ ಪಕ್ವವಾಗಿರಲಿಲ್ಲ. ಒಂದು ವೇಳೆ ಭರಣಯ್ಯ ಮೊದಲೇ ರಾಜಕೀಯ ಪ್ರವೇಶ ಮಾಡಿದ್ದರೆ ಅಂತಹ ಕ್ರಾಂತಿಕಾರಿ ಗುಣಗಳು ಬರುತ್ತಿದ್ದವೋ ಏನೋ.. ಆದರೂ ಭರಣಯ್ಯ ಜಾತಿಗೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಗೌರವಕೊಟ್ಟು ಬದುಕುತ್ತಿದ್ದರು. ನಾನೊಬ್ಬ ದೊಡ್ಡ ಅಧಿಕಾರಿಯಾಗಿ ಈ ರೀತಿ ಮಾಡಿದರೆ ಏನಾಗುತ್ತದೋ ಎಂದು ಅಂಜುತ್ತಿದ್ದರು. ಈಗ ಪಟ್ಟಣಗಳಲ್ಲಿ ಜಾತಿ ನಿಂದನೆಗಳು ಕಡಿಮೆಯಾಗುತ್ತಿದ್ದರೂ, ಹಳ್ಳಿಗಳಲ್ಲಿ ಕೆಲವೆಡೆ ಶೋಷಣೆ ಇನ್ನೂ ಜೀವಂತವಾಗಿದೆ".

ಪಾರ್ವತಮ್ಮನವರು ದೇವಸ್ಥಾನಗಳಿಗೆ ಹೋಗಿ ಹೊರನಿಲ್ಲುತ್ತಿದ್ದ ಸಂದರ್ಭಗಳು ಉಂಟು. ಆಗ ಬಸವಲಿಂಗಪ್ಪ ಹೇಳುತ್ತಿದ್ದರಂತೆ "ನೀವು ಯಾಕೆ ದೇವಸ್ಥಾನಗಳಿಗೆ ಹೋಗುತ್ತೀರಾ..? ನೀವು ಹೋಗೋದು ಬಿಡಲಿಲ್ಲ, ಅವರು ಬಾಗಿಲು ತೆಗೆದು ನಿಮ್ಮನ್ನು ಒಳಗೆ ಬಿಡಲ್ಲ. ನಿಮ್ಮ ಪಾಡಿಗೆ ನೀವು ಸುಮ್ಮನಿದ್ದು ಬಿಡಿ" ಎಂದು. ತಮ್ಮ ಕಾಲದಲ್ಲಿದ್ದ ಶೋಷಣೆಯ ರೀತಿಯನ್ನು ಪಾರ್ವತಮ್ಮ ಒಂದು ಉದಾಹರಣೆಯ ಮೂಲಕ ಬಿಚ್ಚಿಟ್ಟರು. "ಮಳವಳ್ಳಿಯಲ್ಲಿ ಉಪ್ಪುನೀರಿನ ಕಟ್ಟೆ ಇತ್ತು. ಕುಡಿಯುವ ನೀರಿನ ಕೊಳ. ಅಲ್ಲಿ ದಲಿತರಿಗೆ ನೀರು ತೆಗೆದುಕೊಳ್ಳುವ ಅವಕಾಶವೇ ಇರಲಿಲ್ಲ. ಹಾಗೊಂದು ವೇಳೆ ತೆಗೆದರೆ ಶಿಕ್ಷೆಗೆ ಗುರಿಯಾಗಬೇಕಿತ್ತು. ಪಾರ್ವತಮ್ಮನವರಿಗೆ ಅಜ್ಜಿಯೊಬ್ಬರು ಇದ್ದರು, ಚನ್ನಪಟ್ಟಣದವರು. ಬಹಳ ಧೈರ್ಯವಂತೆ, ಗಟ್ಟಿಗಿತ್ತಿ. ಅವರು ಈ ಶೋಷಣೆಯ ವಿರುದ್ಧ ತಿರುಗಿನಿಂತರು. ಅಲ್ಲಿನ ದಲಿತ ಹೆಂಗಸರನ್ನೆಲ್ಲ ಒಟ್ಟುಗೂಡಿಸಿದರು. ಎಲ್ಲರೂ ಸ್ನಾನ ಮಡಿ ಮಾಡಿಕೊಂಡು, ತಂಬಿಗೆಗಳನ್ನು ಹಿಡಿದುಕೊಂಡು ಕೊಳದ ಹತ್ತಿರಕ್ಕೆ ಬಂದು ಸೇರಿಕೊಂಡರು. ಊರಿನ ಸವರ್ಣೀಯರೆಲ್ಲ ಕೊಳದ ಸುತ್ತಲೂ ನಿಂತು ನೋಡುತ್ತಿದ್ದರು. ಮೊದಲು ನೀರಿಗಿಳಿದ ಅಜ್ಜಿ ಗಂಗೆ ಪೂಜೆ ನೆರವೇರಿಸಿ ಒಂದು ಕೊಡ ನೀರು ತೆಗೆದರು. ಹೀಗೆ ಶೋಷಣೆಯ ವಿರುದ್ಧ ರಣಕಹಳೆ ಮೊಳಗಿಸಿ ಮೊದಲಬಾರಿ ನೀರು ತೆಗೆದವರು ನಮ್ಮ ಅಜ್ಜಿ. ಆನಂತರ ದಲಿತರೆಲ್ಲ ಅಲ್ಲಿನ ನೀರು ಉಪಯೋಗಿಸತೊಡಗಿದರು". ಈ ಉದಾಹರಣೆಯನ್ನು

ಈ ಸಂದರ್ಭದಲ್ಲಿ ಅವರು ನೀಡಿದ್ದು ಬಹುಶಃ ಭರಣಯ್ಯನವರಿಂದ ಅಂಥ ನಿಲುವುಗಳುಳ್ಳ ಕೆಲಸಗಳನ್ನು ಬಯಸಿ ಹೇಳಿದರೇನೋ ಅನ್ನಿಸುವಂತಿತ್ತು!

"ಭರಣಯ್ಯನವರಲ್ಲಿದ್ದ ವಿಶೇಷ ಗುಣವೆಂದರೆ, ಅವರು ಭ್ರಷ್ಟ ಅಧಿಕಾರಿ ಆಗರಲಿಲ್ಲ. ದಿಟ್ಟ ಅಧಿಕಾರಿಯಾಗಿದ್ದರು. ಅಜಾನುಬಾಹು ಆದರೂ ಮೃದುಹೃದಯಿ. ಅವರ ಬಗ್ಗೆ ಯಾರೂ ಟೀಕೆ ಮಾಡುತ್ತಿರಲಿಲ್ಲವಂತೆ. ದಲಿತರ ಶೋಷಣೆಗೆ ಕಾರಣವಾಗಿದ್ದ ಅನಕ್ಷರತೆ, ನಿರುದ್ಯೋಗವನ್ನು ಹೋಗಲಾಡಿಸಲು ಹೆಚ್ಚು ಒತ್ತು ನೀಡಿದರು. ಅದಕ್ಕಾಗಿ ಶಿಕ್ಷಣ ಪಡೆದುಕೊಳ್ಳಲು ಅವಕಾಶ ಕಲ್ಪಿಸುವುದು ಮತ್ತು ಉದ್ಯೋಗ ನೀಡಿ ಅವರ ಜೀವನೋಪಾಯಕ್ಕೆ ದಾರಿ ಕೊಡುವುದನ್ನು ಹೆಚ್ಚಾಗಿ ಮಾಡಿಕೊಂಡುಬಂದರು. ಬೇಸರದ ಸಂಗತಿಯೆಂದರೆ ಭರಣಯ್ಯನವರ ಕುಟುಂಬಸ್ಥರಲ್ಲಿ ಎಷ್ಟೋ ಜನ ಅಧಿಕಾರಿಗಳಿದ್ದಾರೆ, ಅವರಲ್ಲಿ ಯಾರೊಬ್ಬರಲ್ಲೂ ಭರಣಯ್ಯ ಅವತರಿಸಿಲ್ಲ. ಅದಕ್ಕೆ ಕಾರಣ ಏನು ಎಂಬುದೇ ತಿಳಿಯದು! ವ್ಯವಸ್ಥೆಯ ಒತ್ತಡವಿರಬಹುದು. ಅಥವಾ ತಮ್ಮ ಜನಾಂಗದ ಉಸಾಬರಿ ತಮಗ್ಯಾಕೆ ಎಂದು ಅಧಿಕಾರಕ್ಕೆ ಅಂಟಿಕೊಂಡಿರಬಹುದು. ಏನೇ ಆದರೂ ಅವರ ಗುಣ ಎಲ್ಲರಿಗೂ ಬರುವಂತದ್ದಲ್ಲ. ಅವರಿಗೆ ಅವರೇ ಸಾಟಿ".

ಹೀಗೆ ಭರಣಯ್ಯನವರನ್ನು ನೆನಪಿಸಿಕೊಂಡ ಪಾರ್ವತಮ್ಮನವರು ಹೊರಳಿದ್ದು ಇಂದಿನ ವ್ಯವಸ್ಥೆಗೆ. "ಈಗಿನ ಕಾಲಘಟ್ಟದಲ್ಲಿ ಭರಣಯ್ಯನಂತಹ ಮಾನವೀಯತೆಯುಳ್ಳ ಅಧಿಕಾರಿಗಳು ಬರಬೇಕು". ಅವರ ಪರಂಪರೆಯನ್ನು ಮುಂದುವರೆಸುವವರು ಸಾಕಷ್ಟು ಬರಬೇಕು ಎಂದು ಆಶಿಸುತ್ತಾರೆ. ಪಾರ್ವತಮ್ಮನವರ ವಿನಮ್ರ ಬೇಡಿಕೆಯೊಂದೆ "ಇಂದಿನ ಸಮಾಜಕ್ಕೆ ಅಂತಹ ನೂರು ಭರಣಯ್ಯನವರು ಬೇಕು" ಇವರ ಬೇಡಿಕೆಗೆ ಕಾಲವೇ ಸ್ಪಂದಿಸಬೇಕು.

ತಿಂಗಳ ಬೆಳಕಿನ ಕನಸುಗಾರ

ಎಂ. ಬಿ. ಜಯಶಂಕರ್
ನಿವೃತ್ತ ಮುಖ್ಯ ಇಂಜಿನಿಯರ್

'ಸೇವೆಯೇ ಧರ್ಮ'ವೆಂದ ಅಪರೂಪದ ಅಧಿಕಾರಿ ಭರಣಯ್ಯ. 'ಅವರಿಂದಲೇ ನಡೆಯುತ್ತಿದೆ ಈ ಬಾಳ ಬಂಡಿ' ಎಂದು ಅವರಿಂದ ಅನುಗ್ರಹಿತರಾಗಿ ತಮ್ಮ ನಿವಾಸ 'ಅನುಗ್ರಹ' ದಲ್ಲಿ ಕುಳಿತು ಮಾತಿಗೆ ಮುಂದಾದವರು ಕರ್ನಾಟಕ ನೀರಾವರಿ ಇಲಾಖೆಯ ನಿವೃತ್ತ ಮುಖ್ಯ ಇಂಜಿನಿಯರ್ ಎಂ.ಬಿ. ಜಯಶಂಕರ್.

ಬೆಂಗಳೂರಿನ ಹಾಸ್ಟೆಲ್‌ನಲ್ಲಿ ಭರಣಯ್ಯ, ವೈ. ಸಿ. ಹೊಂಬಾಳಯ್ಯ, ಬಿ. ರಾಚಯ್ಯ ಎಲ್ಲರೂ ಒಟ್ಟಿಗೆ ಓದಿದವರು. ಇವರೆಲ್ಲರಿಗಿದ್ದ ಏಕೈಕ ಗುರಿ ಎಂದರೆ ದಲಿತರ

ಉನ್ನತೀಕರಣ. ಅದೇ ರೀತಿ ಭರಣಯ್ಯ ದಲಿತ ಜನಾಂಗದ ದಕ್ಷ ಅಧಿಕಾರಿಯಾಗಿ ರೂಪುಗೊಂಡರು. ಜಯಶಂಕರ್‌ರವರ ತಂದೆ ಎಂ. ಪಿ. ಬೊಮ್ಮಯ್ಯ ಅಸಿಸ್ಟೆಂಟ್ ಕಮಿಷನರ್ ಆಗಿದ್ದವರು. ಮಂಡ್ಯದಲ್ಲಿ ನೆಲೆಸಿದ್ದರು. ಭರಣಯ್ಯನವರ ಕೈ ಕೆಳಗೆ ಕೆಲಸ ಮಾಡುತ್ತಿದ್ದರು.

ಭರಣಯ್ಯನವರನ್ನು ಮೊಟ್ಟ ಮೊದಲು ಭೇಟಿ ಆದದ್ದನ್ನು ಜಯಶಂಕರ್ ವಿವರಿಸಿದ್ದು ಹೀಗೆ; "ನಾನಾಗ ಬಿ. ಇ. ಅಂತಿಮ ವರ್ಷದಲ್ಲಿ ಫೇಲ್ ಆಗಿದ್ದೆ. 'ಮನೆಯಲ್ಲಿ ಕುಳಿತು ಏನು ಮಾಡುತ್ತೀಯ ಹೋಗಿ ಭರಣಯ್ಯನವರನ್ನು ನೋಡು' ಎಂದು ನಮ್ಮ ತಂದೆ ಬೊಮ್ಮಯ್ಯ ಹೇಳಿದರು. ಅದರಂತೆ ಅರ್ಜಿ ಬರೆದುಕೊಂಡು ಹೋಗಿ ಭರಣಯ್ಯನವರನ್ನು ಭೇಟಿಯಾದೆ. ಆಗ ಭರಣಯ್ಯ "ಯಾಕಪ್ಪ ಮಗು ಫೇಲಾದೆ. ಚೆನ್ನಾಗಿ ಓದಬೇಕು. ಇನ್ನೂ ನಾಲ್ಕುತಿಂಗಳಿದೆ ಪರೀಕ್ಷೆಗೆ. ಅಲ್ಲಿಯವರೆಗೆ ಏನುಮಾಡುತ್ತೀಯಾ?" ಎಂದರು. ಆನಂತರ ಹೊಸದಾಗಿ ಪ್ರಾರಂಭವಾಗಿದ್ದ Servilianee mosquito eradication ಎಂಬ ಹೊಸ ಶಾಖೆಗೆ ಕೆಲಸಕ್ಕೆ ಹೋಗಿ ಸೇರುವಂತೆ ತಿಳಿಸಿ ಆದೇಶ ಪತ್ರವನ್ನು ಕೊಟ್ಟರು. ಅದೇ ನನ್ನ ಮೊದಲ Appointment. ಅಲ್ಲಿಗೆ ಸ್ವಲ್ಪ ದಿನ ಕೆಲಸಕ್ಕೆ ಹೋದೆ. ಮೊದಲೇ ನಾನು Employment Officeಗೆ ಅರ್ಜಿ ಹಾಕಿದ್ದೆ. ಅದರಂತೆ ಮಂಡ್ಯದ Deputy Commissioner ವೈ. ಹನುಮಂತಪ್ಪ ಎಂಬುವವರು ಪಾಂಡವಪುರದ Asst. Commissioner Office ನಲ್ಲಿ ಪ್ರಥಮದರ್ಜೆ ಗುಮಾಸ್ತನಾಗಿ ಕೆಲಸ ಕೊಡಿಸಿದರು. ಆನಂತರ ಹೋಗಿ ಭರಣಯ್ಯನವರಿಗೆ ತಿಳಿಸಿದೆ. 'ಸರ್ ನನಗೆ ಬೇರೆ ಕೆಲಸ ಸಿಕ್ಕಿದೆ. ನಾನು Mosquito Eradication Office ಗೆ ಕೆಲಸಕ್ಕೆ ಬರಲು ಆಗುವುದಿಲ್ಲ' ಎಂದು. ಅವರು ಮನಃಪೂರ್ಣವಾಗಿ ಹರಸಿ ಕಳಿಸಿದರು. ಆನಂತರ ನಾನು ಬಿ. ಇ. ಪಾಸುಮಾಡಿಕೊಂಡು ಕೆಲಸದ ಹುಡುಕಾಟದಲ್ಲಿದ್ದಾಗಲೇ ನೀರಾವರಿ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್ ಕೆಲಸ ಸಿಕ್ಕಿತು. ಮಂಗಳೂರಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡೆ".

ಹೀಗೆ ಜೂನಿಯರ್ ಇಂಜಿನಿಯರ್ ಆಗಿ ಕೆಲಸ ಮಾಡುವಾಗಲೇ ಜಯಶಂಕರ್ Probationary Officer ಹುದ್ದೆಗೆ PSC ನಡೆಸುವ ಪರೀಕ್ಷೆಯನ್ನು ಬರೆದು ಪಾಸು ಮಾಡಿದರು. "ಅಲ್ಲಿ ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಅರಣ್ಯ ಇಲಾಖೆ ಮತ್ತು ಆದಾಯ ತೆರಿಗೆ ಇಲಾಖೆಯಲ್ಲಿನ ಹುದ್ದೆಗಳಿದ್ದವು. ಆಗ ಭರಣಯ್ಯ PSC ಸದಸ್ಯರಾಗಿದ್ದರು. ಸಂದರ್ಶನದ ದಿನ ಅವರೇ ಇದ್ದರು. ನನಗೆ ಆಗಲೇ ಮದುವೆಯಾಗಿತ್ತು. ನಮ್ಮ ತಂದೆ ಮತ್ತು ಮಾವನೊಂದಿಗೆ ಹೋಗಿದ್ದೆ. ಆಗ ನನ್ನ ಕಂಡ ಭರಣಯ್ಯ "ನೀನು ಬಿ.ಇ. ಮಾಡಿಕೊಂಡು ಕೆ.ಎ.ಎಸ್. ಪರೀಕ್ಷೆ ಪಾಸು ಮಾಡಿದ್ದು ಸಂತೋಷವೆ.

ನೀನು ಇಲ್ಲಿಗೆ ಬಂದರೆ ತಹಶೀಲ್ದಾರ್ ಆಗಿ ನೇಮಕವಾಗಬಹುದು. ಆದರೆ ಯಾಕೆ ಸೇರುತ್ತೀಯಾ? ನೀನು ಈಗಾಗಲೇ ಬಿ.ಇ. ಮಾಡಿಕೊಂಡು ಒಳ್ಳೆಯ ಕೆಲಸದಲ್ಲಿದ್ದೀಯ. ಒಳ್ಳೆ ಸಂಬಳ ಇದೆ. ಈ ಕೆಲಸವನ್ನು ಬೇರೆಯವರಿಗೆ ಬಿಟ್ಟುಕೊಡು ಅವರೂ ಬದುಕಲಿ. ಆಮೇಲೆ ಬಿ.ಇ. ವಿಭಾಗದಲ್ಲಿ Probationary ಹುದ್ದೆಗಳಿಗೆ ಅರ್ಜಿ ಕರೆಯುತ್ತೇವೆ. ಆಗ ಬೇಕಾದರೆ ಅರ್ಜಿ ಹಾಕು. ಒಳ್ಳೆಯ ಕೆಲಸ ಕೊಡಿಸೋಣ. ಆಗ ನೀನು Chief Engineer ಆಗಬಹುದು. ಈ ಬೇರೆಯವರ ಅವಕಾಶ ಕಿತ್ತುಕೊಳ್ಳಬೇಡ. ಅವನೂ ನಿನ್ನ ಜಾತಿಯವನೆ, ಬೇರೆಯವನಲ್ಲ, ನೀನು ನಿನ್ನದೇ ಕ್ಷೇತ್ರದಲ್ಲಿ ಕೆಲಸ ಮಾಡು ಎಂದು ಬುದ್ಧಿ ಹೇಳಿದರು".

ಆಗ ನಾನು "ಇಲ್ಲ ಸರ್. ನಾನು ನನ್ನ ತಂದೆ ಹಾಗೂ ಮಾವನ ರೀತಿ Asst. Commissioner ಆಗಬೇಕೆಂದು ಆಸೆ ಪಟ್ಟಿದ್ದೇನೆ" ಎಂದೆ – ಅದಕ್ಕೆ ಭರಣಯ್ಯ "ಅಲ್ಲಪ್ಪ ನೀನು ಇಲ್ಲಿ ಬಂದರೆ Asst. Commissioner ಆದರೆ ನನಗೂ ಸಂತೋಷ. ಆದರೆ ನೀನು ಅಲ್ಲಿನ ಕೆಲಸ ಬಿಟ್ಟುಬಂದರೆ ನಾನು ನನ್ನ ಜನಾಂಗದ ಒಬ್ಬ ಪ್ರತಿಭಾವಂತ Engineer ನನ್ನು ಕಳೆದುಕೊಳ್ಳುತ್ತೇನೆ. ಆ ಸ್ಥಾನ ತುಂಬುವವರು ಯಾರು?" ಎಂದು ಇರುವ ಕೆಲಸ ಬಿಟ್ಟು ಮತ್ತೊಂದು ಕೆಲಸಕ್ಕೆ ಆಸೆ ಪಟ್ಟ ಜಯಶಂಕರ್‌ಗೆ ಅರಿವಾಗುವಂತೆ ಬುದ್ಧಿ ಹೇಳಿದರು. ಬೇರೆ ಯಾರಾದರೂ ಆಗಿದ್ದರೆ ಕೆಲಸಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದರು. ಆದರೆ ಭರಣಯ್ಯ ಎಲ್ಲರಿಗೂ ಉದ್ಯೋಗ ಕೊಡಬೇಕು ಎನ್ನುವ ಹಂಬಲದಿಂದ ಜಯಶಂಕರ್ ಅವರನ್ನು ಅವರ ಮಾತೃ ಇಲಾಖೆಗೆ ಕಳಿಸಿ "ನಿನ್ನ ಕ್ಷೇತ್ರದಲ್ಲೇ ಒಳ್ಳೆಯ ಹೆಸರು ಮಾಡು ಎಂದು ಹರಸಿದರು".

"ಇದನ್ನೆಲ್ಲಾ ನೋಡಿದಾಗ, ನಮ್ಮ ಜನಾಂಗದ ಪ್ರತಿಭಾವಂತರು ಎಲ್ಲ ಕ್ಷೇತ್ರಗಳಲ್ಲಿ ಬೆಳೆಯಬೇಕು ಎನ್ನುವ ಅವರ ಜನಾಂಗೀಯ ಕಳಕಳಿ ಎದ್ದು ಕಾಣುತ್ತದೆ. ತಮ್ಮ ಜನಾಂಗದ ಡಾಕ್ಟರ್, ಇಂಜಿನಿಯರ್‌ಗಳನ್ನು ಕಳೆದುಕೊಂಡು ಮತ್ತೊಂದು ಕ್ಷೇತ್ರಕ್ಕೆ ಕಳುಹಿಸುವುದನ್ನು ಅವರು ಇಷ್ಟ ಪಡುತ್ತಿರಲಿಲ್ಲ.

ಅವರ ಮಾತಿನಿಂದ ಪ್ರಭಾವಿತರಾದ ಜಯಶಂಕರ್ ತಮ್ಮ ನೀರಾವರಿ ಇಲಾಖೆಯಲ್ಲೇ ಕಾರ್ಯನಿರ್ವಹಿಸುತ್ತಿದ್ದರು. ಆಗ ಭರಣಯ್ಯ 400 ಜನ ಇಂಜಿನಿಯರ್‌ಗಳನ್ನು Regularaise ಮಾಡಲು ಕರೆದಿದ್ದರು. ಆಗಲೂ ಸಂದರ್ಶನ ಇತ್ತು. ಸಂದರ್ಶನಕ್ಕೂ ಮುಂಚೆ ಜಯಶಂಕರ್ ತಮ್ಮ ತಂದೆ ಮತ್ತು ಮಾವನ ಜೊತೆಯಲ್ಲಿ ಹೋಗಿ ಭರಣಯ್ಯನವರನ್ನು ಮತ್ತೆ ಭೇಟಿ ಮಾಡಿದರಂತೆ. ಆಗ ಭರಣಯ್ಯ "ನೋಡಪ್ಪಾ ನಾನೇ ಇಲ್ಲಿ ಶಾಶ್ವತ ಅಲ್ಲ. ಆದರೆ ನಿನ್ನ ಕೆಲಸ ಮುಖ್ಯ. ಪ್ರಶ್ನೆ ಯಾವುದೇ ಇರಲಿ, ನೀನು ಉತ್ತರ ಕೊಡಬೇಕು. ನಿನ್ನ ಇಲಾಖೆಗೆ ಸಂಬಂಧಿಸಿದ ವಿವರಗಳನ್ನೆಲ್ಲಾ ತಿಳಿದಿಕೊ.

ಧೈರ್ಯವಾಗಿ ಉತ್ತರ ಕೊಡು" ಎಂದು ಹೇಳಿದರಂತೆ. "ಬೇರೆ ಯಾರಾದರೂ ಭ್ರಷ್ಟರಾಗಿದ್ದರೆ ದುಡ್ಡು ತೆಗೆದುಕೊಂಡು ಯಾವ ಪ್ರಶ್ನೆ ಕೇಳುತ್ತೇನೆ ಎಂದು ಮುಂಚಿತವಾಗೇ ತಿಳಿಸಿಬಿಡುತ್ತಿದ್ದರೋ ಏನೋ....!? ಆದರೆ ಭರಣಯ್ಯ ಶುದ್ಧ ಹಸ್ತದವರಾಗಿದ್ದರು. ನಂತರ ಸಂದರ್ಶನದಲ್ಲಿ ನನ್ನ ಸಹಿತ ಎಲ್ಲ ಅಭ್ಯರ್ಥಿಗಳನ್ನು ಗೌರವಾದರಗಳಿಂದ ನೋಡಿಕೊಂಡರು" ಭರಣಯ್ಯನವರ ಈ ಗುಣ ಜಯಶಂಕರ್‌ಗೆ ಅಚ್ಚುಮೆಚ್ಚು.

ಇಷ್ಟೆಲ್ಲಾ ಹೇಳಿದ ಜಯಶಂಕರ್ ಭರಣಯ್ಯನವರ ಕುಟುಂಬದೊಂದಿಗೆ ತಮ್ಮ ಸಂಬಂಧವನ್ನು ಹೇಳಿಕೊಂಡರು. ಭರಣಯ್ಯನವರ ಅಳಿಯ ಆರ್. ಚಂದ್ರಶೇಖರ್ ಸಹ ನೀರಾವರಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದರು. ಅವರ ತಮ್ಮನಿಗೆ ಜಯಶಂಕರ್ ಅವರ ಚಿಕ್ಕಮ್ಮನನ್ನು ಕೊಟ್ಟು ವಿವಾಹ ಮಾಡಲಾಗಿತ್ತು. ಅಲ್ಲದೆ, ಸೋಮನಾಥಪುರದ ಶಾಲಾ ಮಾಸ್ಟರು ಪುಟ್ಟಸ್ವಾಮಿ ಎಂಬುವರ ಮಗಳು ಜಯಶಂಕರ್‌ಗೆ ಮದುವೆಯಾಗಿದ್ದರಿಂದ ಸೋಮನಾಥಪುರದ ನಂಟುಂಟು.

"ಭರಣಯ್ಯನವರು ಅಂಬೇಡ್ಕರ್ ವಿಚಾರಗಳನ್ನು ತುಂಬಾ ಚೆನ್ನಾಗಿ ಬಲ್ಲವರಾಗಿದ್ದರು. ಮಾತು ಮಾತಿಗೂ ಅಂಬೇಡ್ಕರ್ ಅವರನ್ನು ಉದಾಹರಿಸುತ್ತಿದ್ದರು. ಅದರಿಂದಲೇ ದಲಿತ ವರ್ಗದ ಜೊತೆಗೆ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗದವರಿಗೂ ಸಹಾಯ ಹಸ್ತ ಚಾಚುತ್ತಿದ್ದರು. ಆನಂತರ ಭರಣಯ್ಯ ಚುನಾವಣೆಗೆ ನಿಂತು ಸೋತರು. ಒಬ್ಬ ಸಾಮಾನ್ಯ ವ್ಯಕ್ತಿಯ ವಿರುದ್ಧ ಸೋತೆನಲ್ಲಾ ಎಂದು ಅದೇ ಗುಂಗಿನಲ್ಲಿ ಮಾನಸಿಕವಾಗಿ ಆಘಾತಗೊಂಡರು. ಬಹಳ ನೊಂದುಕೊಂಡರು. ಅವರಿಗೆ ಚುನಾವಣೆ ಅಗತ್ಯವಿತ್ತಾ? ಎಂಬ ಪ್ರಶ್ನೆಗೆ, ಅವರು ಸ್ಪರ್ಧಿಸುವ ವೇಳೆಗೆ ತಿ. ನರಸೀಪುರ ಮೀಸಲು ಕ್ಷೇತ್ರ ಆಗಿರಲಿಲ್ಲ. ಕೊಳ್ಳೇಗಾಲ ಮೀಸಲು ಕ್ಷೇತ್ರ ಆಗಿತ್ತು. ಜೊತೆಗೆ ಅದು ನರಸೀಪುರದ ಪಕ್ಕದಲ್ಲಿತ್ತು. ಹೀಗಾಗಿ ಅಲ್ಲಿಯೂ ಕೆಲಸ ಮಾಡಿದ್ದರು. Co-operative department ನಲ್ಲಿ ಇದ್ದಾಗ ಇಡೀ ರಾಜ್ಯವನ್ನು ಸುತ್ತಿದ್ದರು. ಕೊಳ್ಳೇಗಾಲದಲ್ಲೂ ಪರಿಚಿತರಾಗಿದ್ದರು. ಈ ಕಾರಣದಿಂದ ಗೆಲ್ಲುತ್ತೇನೆಂಬ ಅದಮ್ಯ ವಿಶ್ವಾಸದಿಂದ ನಿಂತರು. ಆದರೆ ಅವರಿಗೆ ಚುನಾವಣೆಗೆ ನಿಲ್ಲುವ ಅಗತ್ಯವಿರಲಿಲ್ಲ. ಒಳ್ಳೆಯ ಕೆಲಸವಿತ್ತು. ನೆಮ್ಮದಿಯ ಬಾಳಿತ್ತು. ಆದರೆ ಚುನಾವಣೆಗೆ ನಿಂತು ಗೆದ್ದರೆ ಅಲ್ಲಿ ಅಂಬೇಡ್ಕರ್ ರೀತಿಯಲ್ಲಿ ಕೆಲಸ ಮಾಡಬಹುದು, ಹೆಚ್ಚಿನ ಅಧಿಕಾರ ಸಿಕ್ಕಿದರೆ ಇನ್ನೂ ಹೆಚ್ಚಿನ ಸಮಾಜಸೇವೆ ಮಾಡಬಹುದು ಮತ್ತು ಹೊಸದಾಗಿ ಬರುವ MLAಗಳು, ರಾಜಕೀಯ ಪುಢಾರಿಗಳಿಗೆ ಆಡಳಿತ ಅಂದ್ರೆ ಏನು ಅಂತ ತೋರಿಸಿಕೊಡುವುದು ಅವರ ಉದ್ದೇಶವಾಗಿತ್ತು. ಜೊತೆಗೆ ಮಂತ್ರಿಯಾಗಿದ್ದರೆ ರಾಜ್ಯಮಟ್ಟದಲ್ಲಿ ಹೆಚ್ಚಿನ ಸೇವೆ ಸಲ್ಲಿಸಬಹುದು ಎಂಬ ಮಹದಾಸೆಯಿಂದ ಚುನಾವಣೆಗೆ ನಿಂತರು. ಆದರೆ ಅದೃಷ್ಟ ಅವರ ಕೈ ಹಿಡಿಯಲಿಲ್ಲ!"

“ಭರಣಯ್ಯನವರಲ್ಲಿ ಆತ್ಮೀಯತೆ, ಸರ್ವರನ್ನೂ ಸ್ವೀಕರಿಸುವ ಮನೋಭಾವವಿತ್ತು. ಭರಣಿ ಕುಟುಂಬದಲ್ಲಿ ಹಲವಾರು ಜನರಿದ್ದಾರೆ. ಅವರೂ ಭರಣಯ್ಯನ ರೀತಿ ಬದುಕಬಹುದು. ಅವರಂತೆ ಕೆಲಸ ಮಾಡಬಹುದು. ಆದರೆ ಅವರಿಗೆ ಅವರದೇ ಆದ ಬದುಕಿದೆ, ಚಿಂತನೆಗಳಿವೆ. ಅದರಿಂದ ಆಚೆ ಬರಲು ಆಗುತ್ತಿಲ್ಲ. ಅವರಿಂದ ಕೆಲಸ, ಸಹಾಯ ಪಡೆದವರು ಅವರದೇ ಆದ ಸೀಮಿತ ವ್ಯಾಪ್ತಿಯೊಳಗೆ ಬದುಕುತ್ತಿದ್ದಾರೆ. ಬೇರೆಯವರಿಗೆ ಉಪಕಾರ ಮಾಡಲಿಲ್ಲ. ಅದಕ್ಕೆ ವ್ಯವಸ್ಥೆ ಕಾರಣವಲ್ಲ. ವೈಯಕ್ತಿಕ ವಿಷಯಗಳು. ಕೆಲವರು ಕೆಲಸ ಮಾಡಿದರೂ ಅವರ ಮಟ್ಟಕ್ಕೆ ಹೋಗಲು ಆಗಲಿಲ್ಲ. ಭರಣಯ್ಯ ಸಾಯುವವರೆಗೂ ಸೇವೆಯೇ ಧರ್ಮ ಎಂದು ಬದುಕಿದ್ದರು. ಅವರಿಗೆ ಅಂಬೇಡ್ಕರ್ ಅವರೇ ಮಾರ್ಗದರ್ಶಿ, ಮಾದರಿ ಎಲ್ಲ. ಭರಣಯ್ಯನವರಲ್ಲಿ ಅಂಬೇಡ್ಕರ್ ಹೇಳಿದ್ದ ಮಾನವೀಯತೆಯ ಬೀಜ ಅಗಾಧವಾಗಿ ಬೇರೂರಿತ್ತು. ಅಂಬೇಡ್ಕರ್‌ರವರ ತತ್ತ್ವಾದರ್ಶಗಳು ರಕ್ತಗತವಾಗಿತ್ತು. ಸಮಾಜ ಕಟ್ಟುವುದರಲ್ಲಿ, ದಲಿತರ ಉದ್ಧಾರದ ವಿಚಾರದಲ್ಲಿ ಇಬ್ಬರದೂ ಒಂದೇ ತೆರನಾದ ಮನಸ್ಥಿತಿ ಇತ್ತು. ಅಂಬೇಡ್ಕರ್ ಸಂವಿಧಾನ ರೂಪಿಸಿದರು. ಭರಣಯ್ಯ ಆ ಸಂವಿಧಾನದಲ್ಲಿರುವ ಅನುಕೂಲಗಳನ್ನು ತಮ್ಮ ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದರು. ಜನ ಅಂಬೇಡ್ಕರ್‌ರ ದೃಷ್ಟಿಕೋನವನ್ನು ಭರಣಯ್ಯನವರಲ್ಲಿ ಕಂಡರು. ಇಂದಿನ ಸಮುದಾಯಕ್ಕೆ ಭರಣಯ್ಯನಂತವರ ವ್ಯಕ್ತಿತ್ವದ ಅವಶ್ಯಕತೆ ಇದೆ”.

“ಆಗಿನ ರಾಜಕಾರಣವೇ ಬೇರೆ ಇತ್ತು. ಅದೆಲ್ಲ ಜನಸೇವೆ, ಅವರ ಉದ್ಧಾರವೇ ಗುರಿ ಎಂಬಂತೆ ಬದುಕುತ್ತಿದ್ದರು. ಜೊತೆಗೆ ಅಧಿಕಾರ ಕೇಂದ್ರೀಕೃತವಾಗಿತ್ತು. ಸಾರ್ವಜನಿಕ ಸೇವೆ ಮಾಡುವವರು ಎಂದರೆ ಪೂಜ್ಯ ಭಾವನೆಯಿತ್ತು. ಅದೇ ರೀತಿಯಲ್ಲಿ ಅಧಿಕಾರಿಗಳನ್ನು ಕಾಣುತ್ತಿದ್ದರು. ಆದರೆ ಈಗ ಅಧಿಕಾರ ವಿಕೇಂದ್ರಿಕರಣವಾಗಿದೆ. ಅದರಂತೆ ಅಧಿಕಾರಿಗಳನ್ನು ನೋಡುವ ರೀತಿಯೇ ಬೇರೆ. ಅವನು ಕೆಲಸ ಮಾಡುತ್ತಾನೆ ಅದಕ್ಕೆ ತಕ್ಕ ಸಂಬಳ ಪಡೆಯುತ್ತಾನೆ. ಅದರಲ್ಲೇನಿದೆ? ಎಂದು ಅಸಡ್ಡೆ ತೋರುತ್ತಾರೆ. ಅದೇ ರೀತಿ ರಾಜಕಾರಣಿಗಳು ಸಹ. ಇವನು ಸರ್ಕಾರಿ ಸೇವಕ. ನಾನು ಹೇಳಿದ ರೀತಿಯೇ ಮಾಡಬೇಕು. ಜೊತೆಗೆ ರಾಜಕಾರಣಿಗಳಿಗೆ ತಾವು ನೀತಿ ರೂಪಕರು ಎಂಬ ಅಹಂ ಬೇರೆ. ಇವರೇನಿದ್ದರೂ ನಮ್ಮ ಪಾಲಿಸಿಯನ್ನು execute ಮಾಡುವವರು ಎಂಬ ಮನೋಭಾವ ಹೆಚ್ಚಿದೆ. ಇಂತಹ ವೇಳೆ ನಮ್ಮ ಜನರ ಏಳಿಗೆಗೆ ಮತ್ತಷ್ಟು ನಿಸ್ವಾರ್ಥದಿಂದ ಕೆಲಸ ಮಾಡುವವರುಬೇಕಿದೆ. ನಿಜಕ್ಕೂ ಈಗ ಭರಣಯ್ಯನಂತವರು ಬೇಕು. ದುರಂತ ಎಂದರೆ ಸಮಾಜಕ್ಕೆ ಬದುಕನ್ನು ಮುಡುಪಾಗಿಟ್ಟ ಎಷ್ಟೋ ನಾಯಕರ ಕುಟುಂಬಗಳಲ್ಲಿ ಅವರಂತ ಚೇತನಗಳು ಅವತರಿಸಲಿಲ್ಲ. ಅಂಬೇಡ್ಕರ್ ಕುಟುಂಬದಲ್ಲಿ ಇರಬಹುದು. ಗಾಂಧಿಯ ಕುಟುಂಬದಲ್ಲಿ ಇರಬಹುದು.

ಅವರ ಹೆಸರೇಳಲು ಬದುಕಲಿಲ್ಲ. ಅದೇ ರೀತಿ ಭರಣಯ್ಯನವರ ಗುಣಧರ್ಮಗಳನ್ನು ಅವರ ಬಂಧು-ಬಳಗ ಕುಟುಂಬದಲ್ಲಿ ರೂಢಿಸಿಕೊಳ್ಳಬಹುದಿತ್ತು. ಅವರ ಉತ್ತಮವಾದ ಗುಣಗಳನ್ನು ಅನುಷ್ಠಾನ ಮಾಡಬಹುದಿತ್ತು. ಎಲ್ಲರೂ ಅವರ ಹೆಸರು ಬಳಸಿಕೊಂಡರೇ ವಿನಃ ಯಾರೂ ಹೆಸರು ಉಳಿಸಲಿಲ್ಲ. ಕೆಲವರು ಇರಬಹುದು. ಆದರೆ ಅವರ ಎತ್ತರಕ್ಕೆ ಬೆಳೆಯಲಿಲ್ಲ ಎಂಬುದು ನನ್ನ ಅನಿಸಿಕೆ. ಭರಣಯ್ಯನವರ ಸಮಾಜಸೇವೆಯಲ್ಲಿ ಹುಳುಕಿರಲಿಲ್ಲ ಆದುದರಿಂದ ಅವರನ್ನು ಯಾರೂ ಟೀಕಿಸುತ್ತಿರಲಿಲ್ಲ. ಅವರದಲ್ಲಿದ್ದುದು ಮೃದು ಮಾತು, ಪ್ರೀತಿ, ಮಮತೆ. ಚಿಕ್ಕವರನ್ನು ಮಕ್ಕಳಂತೆ ಕಾಣುತ್ತಿದ್ದರು. ತಂದೆಯು ಮಕ್ಕಳನ್ನು ನೋಡುವ ರೀತಿ ನೋಡುತ್ತಿದ್ದರು. ದೊಡ್ಡವರಾದರೆ ಪ್ರೀತಿಯಿಂದ 'ಅಣ್ಣಾ' ಎನ್ನುತ್ತಿದ್ದರು. ಅವರ ಗುಣಗಳನ್ನು ಅಳವಡಿಸಿಕೊಂಡು ಬೆಳೆದರೆ ಸಮಾಜ ಖಂಡಿತ ಉದ್ಧಾರವಾಗುತ್ತದೆ. ಅವರು ಸೇವೆ ಅಂದರೇನು ಎಂಬುದನ್ನು ತೋರಿಸಿಕೊಟ್ಟರು. ಇವುಗಳನ್ನು ಈಗಿನ ಹೊಸಪೀಳಿಗೆ ಅನುಸರಿಸಬೇಕು. ಅವುಗಳನ್ನು ಮೈಗೂಡಿಸಿಕೊಳ್ಳುವಂತೆ ಅವರಿಗೆ ತಿಳುವಳಿಕೆ ನೀಡುವುದು ನಮ್ಮ ಕರ್ತವ್ಯವಾಗಬೇಕು".

"ಸಮಾಜವೇ ನನ್ನ ಕುಟುಂಬವೆಂದು ಸೇವೆ ಮಾಡುತ್ತಾ ಹೋಗುವ ವ್ಯಕ್ತಿಯಲ್ಲಿ ವಿಶೇಷ ಗುಣಗಳಿದ್ದರೆ ಸಮಾಜ ಅವರನ್ನು ಗುರುತಿಸುತ್ತದೆ. ಒಂದು ವೇಳೆ ಭರಣಯ್ಯ ಆ ಮಟ್ಟಕ್ಕೆ ಬೆಳೆಯದಿದ್ದರೆ ಅವರ ಹಿಂಬಾಲಕರು, ದಲಿತ ವರ್ಗ ಆ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ. ಒಬ್ಬ ವ್ಯಕ್ತಿ ಸಮಾಜಕ್ಕೇನಾದರೂ ಕೊಡುಗೆ ಕೊಟ್ಟರೆ ಚರಿತ್ರೆ ಗುರುತಿಸುತ್ತದೆ. ಉದಾ: ಅಂಬೇಡ್ಕರ್‌ರನ್ನು ಸಮಾಜ ಇಂದಿಗೂ ನೆನಪಿಸಿಕೊಳ್ಳುತ್ತದೆ. ಆದರೆ ಅವರ ಜೊತೆ ಹುಟ್ಟಿದ ಉಳಿದವರು ಎಲ್ಲಿದ್ದಾರೆಂದು ಸಮಾಜಕ್ಕೆ ಗೊತ್ತಿಲ್ಲ. ಸೋಮನಾಥಪುರ ಸುತ್ತಮುತ್ತ ದಲಿತವರ್ಗದವರ ಏಳಿಗೆಯಲ್ಲಿ ಪ್ರಮುಖವಾಗಿ ಭರಣಯ್ಯನವರ ಹೆಸರು ಕೇಳಿಬರುತ್ತದೆ. ಉಳಿದ ಎಷ್ಟೋ ಜನ ದೊಡ್ಡ ದೊಡ್ಡ ಅಧಿಕಾರಿಗಳಿದ್ದರೂ ಅವರ ಹೆಸರು ಹೇಳೋದಿಲ್ಲ. ನಾನು ಒಳ್ಳೆಯ ವ್ಯಕ್ತಿಯಾಗಬೇಕು, ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು ಎಂಬುದು ಸಕಾರಾತ್ಮಕ ಚಿಂತನೆಯ ತಳಹದಿಯ ಮೇಲೆ ಹೋಗುತ್ತದೆ. ಅದೇರೀತಿ ಯಾರು ಜಡತ್ವ ಬೆಳೆಸಿಕೊಂಡು, ಸೋಮಾರಿಯಾಗಿ, ತಾನು ತನ್ನ ಸಂಸಾರವೆಂಬ ಸ್ವಾರ್ಥ ಮನಸ್ಥಿತಿ ಬೆಳೆಸಿಕೊಳ್ಳುತ್ತಾರೋ ಅವರು ನಕಾರಾತ್ಮಕ ನೆಲೆಯಲ್ಲೇ ನೋಡುತ್ತಾರೆ. ಅಂತವರು ಬೆಳೆಯಲು ಸಾಧ್ಯವಿಲ್ಲ. ಆದರೆ ಭರಣಯ್ಯನವರಲ್ಲಿ ಇದ್ದುದು ಸಕಾರಾತ್ಮಕ ಚಿಂತನೆಗಳು ಮಾತ್ರ. ಅದಕ್ಕಾಗೇ ಅವರು ನಮ್ಮ ನಡುವೆ ವಿಭಿನ್ನವಾಗಿ ಎದ್ದು ಕಾಣುತ್ತಾರೆ". ಶೋಷಣೆಯಿಂದ ನೊಂದಿದ್ದ ಅಂಬೇಡ್ಕರ್ ತಮ್ಮ ಜನಾಂಗದ ಏಳಿಗೆಗೆ, ತಮ್ಮ ಅಭ್ಯುದಯಕ್ಕೆ ಅಡ್ಡಗಾಲಾಗಿದ್ದ ಬ್ರಾಹ್ಮಣಷಾಹಿಯನ್ನು ತೊಡೆದುಹಾಕುವ ಸಂಕಲ್ಪ ಮಾಡುತ್ತಾರೆ. ಕ್ರಾಂತಿಕಾರಕ

ಹೆಜ್ಜೆಗಳನ್ನಿಡುತ್ತಾರೆ. ಆದರೆ ಭರಣಯ್ಯ ಮೌನ ಕ್ರಾಂತಿಯ ಮೂಲಕ ಅವುಗಳನ್ನೆಲ್ಲ ಸುಧಾರಿಸಿದರು. ಅಂಬೇಡ್ಕರ್‌ರಲ್ಲಿ ಛಲ ಇತ್ತು. ಭರಣಯ್ಯನವರಲ್ಲಿ ಮೃದುತ್ವ ಇತ್ತು. ಮೃದುತ್ವ ಇದ್ದಾಗ ಮನಸ್ಸು ವ್ಯವಸ್ಥೆಗೆ ಮಣಿಯುತ್ತದೆ. ಭರಣಯ್ಯನವರಲ್ಲಿ ಪ್ರತಿರೋಧ, ಬಂಡಾಯ ಇರಲಿಲ್ಲ. ವ್ಯವಸ್ಥೆಯ ಒಳಗಿದ್ದೇ ಅವನ್ನೆಲ್ಲ ಸರಿ ಮಾಡಬೇಕು ಎಂಬ ಮಹದಾಸೆಯಿತ್ತು. ಈ ವ್ಯವಸ್ಥೆಯ ಒಳಗೇ ಗಟ್ಟಿಯಾಗಿ ನಿಂತು ಸೇವೆ ಮಾಡಬೇಕು ಎಂಬುದು ಅವರ ನಿಲುವಾಗಿತ್ತು. ದಲಿತರ ಪಾಲಿಗೆ ಅಂಬೇಡ್ಕರ್ 'ಸೂರ್ಯ'ನಾಗಿ ಪ್ರಜ್ವಲಿಸಿದರೆ, ಭರಣಯ್ಯ ದಲಿತ ಲೋಕದ 'ಚಂದ್ರ'ನಾಗಿ ಬೆಳಗಿದ್ದಾರೆ".

ಅವರು ಬರೀ ಮನುಷ್ಯರಲ್ಲ........

ಡಾ. ರಂಗಸ್ವಾಮಿ
ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು

"Bharanaiah is a God, nothing but god, ಅಂತಹ ಮಹಾನ್ ವ್ಯಕ್ತಿಯ ಬಗ್ಗೆ ಹೇಳಲು ನಾವೆಲ್ಲ ಸಣ್ಣವರು" ಎಂದೇ ಮಾತು ಪ್ರಾರಂಭಿಸಿದ್ದರು ಡಾ. ರಂಗಸ್ವಾಮಿ. ಪ್ರಸ್ತುತ ಬೆಳ್ಳೂರಿನ ಆದಿಚುಂಚನಗಿರಿ ವೈದ್ಯಕೀಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಂಗಸ್ವಾಮಿ ಸಂಬಂಧದಲ್ಲಿ ಭರಣಯ್ಯನವರ ತಮ್ಮನ ಮಗನಾಗಬೇಕು. ರಂಗಸ್ವಾಮಿಯವರ ತಂದೆಯ ತಾಯಿ (ಅಜ್ಜಿ) ಮತ್ತು ಭರಣಯ್ಯನವರ ತಾಯಿ ಒಡಹುಟ್ಟಿದವರು. ಅಲ್ಲದೆ ರಂಗಸ್ವಾಮಿಯವರ ತಾಯಿಯ ತಾಯಿ ಮತ್ತು ಭರಣಯ್ಯನವರ ತಂದೆ ಅಣ್ಣ ತಂಗಿಯರು. ಹೀಗಾಗಿ ಭರಣಯ್ಯ ಅವರಿಗೆ ದೊಡ್ಡಪ್ಪ.

ಭರಣಯ್ಯ ಕೇವಲ ಸಂಬಂಧದಲ್ಲಿ ಅಷ್ಟೇ ಅಲ್ಲದೆ ಎಲ್ಲ ವರ್ಗದಲ್ಲೂ ಅಂಬೇಡ್ಕರ್ ಅನುಯಾಯಿಯಾಗಿ, ಅವರ ತತ್ತ್ವ ಸಿದ್ಧಾಂತಗಳನ್ನು ಅನುಷ್ಠಾನಗೊಳಿಸಿದ ಮೇರು ವ್ಯಕ್ತಿ. ಅವರು ಬರೀ ದೀನ ದಲಿತರಿಂದಲೇ ಪ್ರೀತಿ ಪಾತ್ರರಾಗಿರಲಿಲ್ಲ. ಸವರ್ಣೀಯರೆಲ್ಲರಿಗೂ ಅಂದರೆ ಬಹಳ Irrespective of caste and creed ಬಹಳ ಆತ್ಮೀಯರಾಗಿದ್ದರು. ಅದಕ್ಕೊಂದು ಮನಸ್ಪರ್ಶಿ ಉದಾಹರಣೆ ಕೊಟ್ಟರು ರಂಗಸ್ವಾಮಿ. "ನಾನೊಮ್ಮೆ ಬ್ರಾಹ್ಮಣರ ಮನೆಗೋದೆ. ಅವರು ನಿವೃತ್ತ Deputy registrar of co-operative society. ಅವರ ಮನೆಯಲ್ಲಿ ಭರಣಯ್ಯನವರ ಫೋಟೊ ನೋಡಿದೆ. ಆಶ್ಚರ್ಯವಾಗಿ ಅವರನ್ನು ಕೇಳಿದೆ. "ಯಾಕೆ ಸಾರ್ ಅವರ ಫೋಟೊ ಇಟ್ಟು ಕೊಂಡಿದ್ದೀರಿ?" ಅದಕ್ಕವರು "ಭರಣಯ್ಯ ನಿಮಗೇನಾಗಬೇಕು?" ಎಂದು ಪ್ರಶ್ನಿಸಿದರು. ಆಗ ನಾನು "ಅವರು ನನಗೆ ಗೊತ್ತಿರುವವರು ಅದಕ್ಕೆ ಕೇಳಿದೆ" ಎಂದು ಹೇಳಿದೆ. ಆಗ ಅವರು ಕೊಟ್ಟ ಉತ್ತರ ನೋಡಿ ಮನತುಂಬಿ ಬಂತು. "ಅವರು ನನಗೆ

ಅನ್ನ ಕೊಟ್ಟವರು. ನನ್ನ ಪಾಲಿನ ದೇವರು. ಅವರನ್ನು ದಿನಾ ಪೂಜಿಸದೆ ನಾನು ಊಟ ಮಾಡುವುದಿಲ್ಲ" ಎಂದರು ಭಾವುಕರಾಗಿ. ನಂತರ ನಾನು ಹೇಳಿದೆ "ನಾನು ಅವರ ತಮ್ಮನ ಮಗ" ಅಂತ. ಅದಕ್ಕವರು "ಎಂಥಾ ಪುಣ್ಯಾತ್ಮನ ಕುಟುಂಬದಲ್ಲಿ ಹುಟ್ಟಿದ್ದೀಯಪ್ಪ. ನೀನೇ ಧನ್ಯವಂತ" ಎಂದು ಹರಸಿ ಕಳುಹಿಸಿದರು".

ಭರಣಯ್ಯ ಎನ್ನುವ ಹೆಸರಿಗೆ ಒಂದು ಚುಂಬಕ ಶಕ್ತಿಯಿತ್ತು. ಅದಕ್ಕೆ ಮತ್ತೊಂದು ಉದಾಹರಣೆ ಕೊಟ್ಟರು ರಂಗಸ್ವಾಮಿ. "ನನ್ನನ್ನು ಜಿಲ್ಲಾ ಆರೋಗ್ಯ ಅಧಿಕಾರಿಯಾಗಿ ರಾಯಚೂರಿಗೆ ವರ್ಗ ಮಾಡಿದರು. ಅಲ್ಲಿನ ಯಾವುದೋ ಒಂದು ಹಳ್ಳಿಗೆ ವರ್ಗ ಮಾಡಿದ್ದರು. ಅಲ್ಲಿಗೆ ಬಸ್ ಸೌಲಭ್ಯ ಅಷ್ಟಾಗಿ ಇರಲಿಲ್ಲ. ನಾನು ಬೇರೆ ಹೊಸಬ. ಏನು ಮಾಡುವುದೆಂದು ತೋಚಲಿಲ್ಲ. ಆಗ ಅಲ್ಲಿನ Deputy commissioner ಪುಟ್ಟರಂಗಪ್ಪ ಎನ್ನುವವರನ್ನು ಭೇಟಿಯಾದೆ. ಅವರ ಬಳಿ ನನ್ನ ಸಮಸ್ಯೆ ಹೇಳಿಕೊಂಡೆ. ಜೊತೆಗೆ ಭರಣಯ್ಯನವರ ತಮ್ಮನ ಮಗ ಎಂದೆ. ಅದಕ್ಕವರು "ಏನಪ್ಪಾ ನೀನು ಭರಣಯ್ಯನವರ ತಮ್ಮನ ಮಗನಾ... ಮೊದಲೇ ಹೇಳಬಾರದಿತ್ತಾ..." ಎಂದು ಫೋನ್ ತೆಗೆದುಕೊಂಡು ಆಕಡೆಯ ಆರೋಗ್ಯಾಧಿಕಾರಿ ಜೊತೆ "ನೋಡ್ರೀ, ಭರಣಯ್ಯನವರ ತಮ್ಮನ ಮಗ ಬಂದಿದ್ದಾರೆ. ಅವರನ್ನ ಯಾವುದೋ ಹಳ್ಳಿಗೆ ಹಾಕಿದ್ದಾರಂತೆ. ಭರಣಯ್ಯ ನಮಗೆ ಅನ್ನ ಕೊಟ್ಟ ಧಣಿ. ಅವರ ತಮ್ಮನ ಮಗನಿಗೆ ನಾವು ಉಪಕಾರ ಮಾಡಬೇಕು. ಅವರನ್ನು Head Quartersಗೆ ವರ್ಗಮಾಡಿ ಒಂದು Post ಕೊಡಿ" ಎಂದರು. ಆಕಡೆಯ ಅಧಿಕಾರಿ "ಸಾರ್ ಅವರು ನಿಮ್ಮಲ್ಲಿಗೆ ಬಂದಿದ್ದಾರಾ.. ಖಂಡಿತ ಸರ್ ಅವರಿಗೆ ಇಲ್ಲಿಗೆ ವರ್ಗಮಾಡ್ತೇನೆ" ಎಂದು ಹೇಳಿ ನನ್ನನು ಮರುದಿನವೇ Head Quartersನಲ್ಲಿ ಜಾಗ ಕೊಟ್ಟು ಓಡಾಡಲು ಜೀಪು ಕೊಟ್ಟರು".

"ಹೀಗೆ ಎಲ್ಲೇ ಹೋದರೂ ಸರಿ ಭರಣಯ್ಯನವರ ಹೆಸರು ಹೇಳಿದರೆ ಸಾಕು, ಕೆಲಸ ಕಾರ್ಯಗಳು ಸುಸೂತ್ರವಾಗಿ ಆಗಿಬಿಡುತ್ತಿದ್ದವು. ಆ ಹೆಸರಿಗಿದ್ದ ಗೌರವ ಅಂತಹುದು. ಅತ್ತಹಳ್ಳಿಯಲ್ಲಿ ಅವರನ್ನು ಸ್ಮರಿಸದ ಸವರ್ಣೀಯರೆ ಇಲ್ಲ. Co-operative departmentನಲ್ಲಿ ಇದ್ದಾಗ ಅದರ ಜನಕನಂತೆ ಕೆಲಸ ಮಾಡಿದ್ದರು. Expantion of department and introducing all officials. ದಲಿತವರ್ಗದಲ್ಲಿ ಎಷ್ಟು ಜನ High level officers ಗಳು ಇದ್ದರೋ, ಅವರೆಲ್ಲ ಅವರ ಕಾಲದಲ್ಲೇ ಕೆಲಸ ಪಡೆದವರು. ಅದೇ ರೀತಿ ಯಾವುದೇ ಸಮಾರಂಭ ಇರಲಿ ಅಥವಾ ಸಂಬಂಧಿಕರ ಕಾರ್ಯಕ್ರಮಗಳಿರಲಿ ತಾನು ಐ.ಎ.ಎಸ್. ಅಧಿಕಾರಿ ಎಂಬುದನ್ನೂ ಮರೆತು ಅವರ ಜೊತೆ ಬೆರೆಯುತ್ತಿದ್ದರು. ಇದೆಲ್ಲಕ್ಕಿಂತ ಮಿಗಿಲಾಗಿ ನಾನು ಈ ಮನೆಯಲ್ಲಿ ಕುಳಿತಿದ್ದೇನೆ ಎಂದರೆ ಅದಕ್ಕೆ ಅವರೇ ಕಾರಣ" ಎಂದರು ಡಾ. ರಂಗಸ್ವಾಮಿ.

ರಂಗಸ್ವಾಮಿ ಆಗ ಪಿ.ಯು.ಸಿ. ಓದುತ್ತಿದ್ದರು. ಮನೆಯಲ್ಲಿ ಕಡು ಬಡತನ. ಇದನ್ನು ಕಂಡ ಭರಣಯ್ಯ "ಅಲ್ಲಪ್ಪಾ ನೀನು ಪಿ.ಯು.ಸಿ. ಪಾಸಾಗುತ್ತೀಯ? ನೀನು ಪಾಸಾದರೂ ಅಪ್ಪನಿಗೆ ಮುಂದೆ ಓದಿಸಲು ತೊಂದರೆಯಾಗುತ್ತದೆ. ನೀನು ಕೆಲಸಕ್ಕೆ ಸೇರಿಕೊಂಡು ಬಿಡು. ನಾನು ಕೆಲಸ ಕೊಡಿಸುತ್ತೇನೆ. ಅದರಿಂದ ಅಪ್ಪ ಅಮ್ಮನನ್ನು ಸಾಕು" ಎಂದು ಹೇಳಿ ಕೆ.ಇ.ಬಿ.ಯಿಂದ ಕೆಲಸದ ಆದೇಶ ತರಿಸಿದರಂತೆ. ಕಾಕತಾಳೀಯವೇನೋ ಎಂಬಂತೆ ಅದೇ ದಿನ ರಂಗಸ್ವಾಮಿಯ ಪಿ.ಯು.ಸಿ. ಫಲಿತಾಂಶ ಬಂದಿತ್ತು. ಅಚ್ಚರಿಯೆಂದರೆ ರಂಗಸ್ವಾಮಿ ಪಾಸಾಗಿದ್ದರು. ಈ ವಿಷಯವನ್ನು ಭರಣಯ್ಯನವರಿಗೆ ಹೇಳಿದಾಗ ತುಂಬಾ ಆನಂದ ಪಟ್ಟರಂತೆ. ನಂತರ ತಮ್ಮ ಮನೆಗೆ ಕರೆದುಕೊಂಡು ಹೋಗಿ ಹೇಳಿದರಂತೆ "ನೋಡಪ್ಪಾ ನೀನು ಕೆಲಸಕ್ಕೆ ಹೋಗುವುದು ಬೇಡ. Medicalಗೆ ಸೇರಿಕೊ" ಎಂದು ತಮ್ಮ ಮಗಳ ಕೈಯಿಂದ ಸಿಹಿ ಕೊಡಿಸಿದರಂತೆ. ಜೊತೆಗೆ ರಂಗಸ್ವಾಮಿಗೆ ಒಂದು ಚೆಕ್ ಕೊಟ್ಟರಂತೆ "ಇದನ್ನು ತೆಗೆದುಕೊಂಡು ಹೋಗಿ ಜನತಾ ಬಜಾರ್ ಮ್ಯಾನೇಜರ್‌ಗೆ ಕೊಡು ಅವರು ಹಣ ಕೊಡುತ್ತಾರೆ. ಅದನ್ನು ಮೆಡಿಕಲ್ ಕಾಲೇಜಿಗೆ ಶುಲ್ಕ ಕಟ್ಟು" ಎಂದು ಅವರೇ ರಂಗಸ್ವಾಮಿಯನ್ನು ಮೆಡಿಕಲ್‌ಗೆ ಸೇರಿಸಿದರು. "ಆ 500 ರೂಪಾಯಿ ನನಗೆ 5 ಕೋಟಿಗೂ ಹೆಚ್ಚು. ಅದನ್ನು ನೆನೆಸಿಕೊಂಡರೆ ಈಗಲೂ ಆನಂದ ಬಾಷ್ಪ ಸುರಿಯುತ್ತದೆ" ಎಂದು ರಂಗಸ್ವಾಮಿ ಅಭಿಮಾನದಿಂದ ಹೇಳುತ್ತಾರೆ.

ಭರಣಯ್ಯ ಉನ್ನತ ಅಧಿಕಾರಿಯಾದರೂ ಅತ್ಯಂತ ಸರಳ ಜೀವಿ. ಅವರ ಸರಳ ತನಕ್ಕೊಂದು ಉದಾಹರಣೆ ಕೊಟ್ಟರು ರಂಗಸ್ವಾಮಿ. "ಅವರು ದೊಡ್ಡ ವ್ಯಕ್ತಿಗಳಾದರೂ ನಮ್ಮಂತಹ ಹಳ್ಳಿ ಜನರನ್ನು ಜೊತೆಯಲ್ಲಿ ಕೂರಿಸಿಕೊಂಡು ಮಾತಾಡುತ್ತಿದ್ದರು. ಅವರು ದೇವತಾ ಮನುಷ್ಯ. ಕೆಲಸದ ಹೊರತಾಗಿ ಅವರು ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದ ರೀತಿ ಅನನ್ಯ. ಒಮ್ಮೆ ನಮ್ಮ ಸಂಬಂಧಿಕರು ತೀರಿಕೊಂಡಿದ್ದರು. ಅದಕ್ಕೆ ಭರಣಯ್ಯನವರು ಯಾವುದೋ ಕಾರಣಕ್ಕಾಗಿ ಬರಲಾಗಲಿಲ್ಲ. ಅವರು ನಂತರ ಸುಮ್ಮನಿದ್ದು ಬಿಡಬಹುದಿತ್ತು. ಅದಕ್ಕೆ ನಾನು ಮತ್ತು ನನ್ನ ತಮ್ಮಂದಿರು ಉತ್ತರ ಕ್ರಿಯಾದಿ ಕಾರ್ಯಕ್ಕೆ ಖಂಡಿತಾ ಬರುತ್ತೇವೆ" ಎಂದರು. ಉತ್ತರ ಕ್ರಿಯಾದಿ ದಿನ ಆರೂ ಜನ ಅಣ್ಣತಮ್ಮಂದಿರು ಬಂದು ಭಾಗವಹಿಸಿ, ಗುಡಿಸಲಲ್ಲಿ ಕುಳಿತು ಊಟ ಮಾಡಿ ಅಲ್ಲಿನ ಊಟವನ್ನು ಊರಿಗೂ ತೆಗೆದುಕೊಂಡು ಹೋದರಂತೆ. "ಅಣ್ಣನ ಪ್ರಸಾದ ಇದು. ಇದನ್ನು ಅಲ್ಲಿನವರಿಗೆ ಹಂಚುತ್ತೇನೆ" ಎಂದು. ಅಂತಹ ವ್ಯಕ್ತಿಯನ್ನು ಈಗ Imagine ಮಾಡಲು ಸಾಧ್ಯವಿಲ್ಲ. ಅವರಲ್ಲಿದ್ದ Great Generosity and Relationship ಅಂತಹುದು ಯಾವುದೇ ಮದುವೆ, ಇನ್ನಾವುದೇ ಕಾರ್ಯಕ್ರಮವಿರಲಿ ಅಲ್ಲಿಗೆ ಹಾಜರಾಗುತ್ತಿದ್ದರು. ಅವರಿಗೆ ಧನ ಸಹಾಯ ಮಾಡುತ್ತಿದ್ದರು. He was loved and liked person by every one of our family members and others.

"ಭರಣಯ್ಯ ಹೀಗೆ ಮಾಡಲು ಅವರ ಪೂರ್ವಜನ್ಮದ ಸಂಸ್ಕಾರ ಮತ್ತು ಮನೆತನ ಕಾರಣ. ಭರಣಯ್ಯನವರ ತಾತನಿಗೆ ಅಂದರೆ ತಾಯಿಯ ತಂದೆಗೆ ಆರು ಜನ ಹೆಣ್ಣು ಮಕ್ಕಳು. ಮೊದಲನೆಯವರೆ ರಂಗಸ್ವಾಮಿ ಅಜ್ಜಿ. ಎರಡನೆಯವರೇ ಭರಣಯ್ಯನವರ ತಾಯಿ. ಭರಣಯ್ಯನವರ ತಾತ ಎಲ್ಲ ಹೆಣ್ಣುಮಕ್ಕಳಿಗೂ ಜಮೀನು ನೀಡಿದ್ದರು. ಏಳು ಊರಿನ ಕಂದಾಯ ಕಟ್ಟುತ್ತಿದ್ದರು. ಒಳ್ಳೆಯ ಸ್ಥಿತಿವಂತರು. ಅದೇ ರೀತಿ ಭರಣಯ್ಯನವರ ತಂದೆ ತಂದೆಯೂ ಕೂಡ Knownfull people ಜನಾನುರಾಗಿ ಮತ್ತು leader of community. ಜೊತೆಗೆ ಭರಣಯ್ಯ, ಅಂಬೇಡ್ಕರ್ ಕೆಲಸಗಳ ಕಾಲು ಭಾಗವನ್ನಾದರೂ ಮಾಡಿದರೆ ಅವರ ಹೆಸರು ಹೇಳಿದ್ದಕ್ಕೂ ಸಾರ್ಥಕ ಎಂದು ನಂಬಿದ್ದರು. ಅಂಬೇಡ್ಕರ್ ಕೂಡ ಸಾಮೂಹಿಕವಾಗಿ ಎಲ್ಲರಿಗೂ You get educated. Get organised and agitated ಎಂದಿದ್ದರು. Politically he was powerfull and legal adviser also. ಅದೇ ರೀತಿ ಭರಣಯ್ಯ ಮಾಡಿದ್ದು ಉದ್ಯೋಗ ಕ್ರಾಂತಿ. ತನ್ನ ಜನಾಂಗದ ನಿರುದ್ಯೋಗಿಗಳು ಎಲ್ಲೆಲ್ಲಿ ಇದ್ದಾರೆ. ಅವರನ್ನೆಲ್ಲ ಒಂದೊಂದು ಇಲಾಖೆಯಲ್ಲಿ ಕೆಲಸಕ್ಕೆ ಸೇರಿಸಿದ್ದರು. ಅವರಿಗಿದ್ದ ದೃಷ್ಟಿಯೆಂದರೆ ಒಬ್ಬನಿಗೆ ಕೆಲಸ ಕೊಟ್ಟರೆ ಅವನ ಕುಟುಂಬ ಬೆಳೆಯುತ್ತದೆ. ಕುಟುಂಬದಿಂದ ಊರು ಬೆಳೆಯುತ್ತದೆ ಎಂಬುದು. ಅವರು ಎಲ್ಲೇ ಹೋದರು ಅಲ್ಲಿ ದೀನ ದಲಿತರನ್ನು appoint ಮಾಡುತ್ತಿದ್ದರು. ಸಮಾಜದಲ್ಲಿ ಅವರು ಬೆಳೆಯಬೇಕು. ಅವರ Surroundingನಲ್ಲಿ ಅವರು ಬೇರೆಯವರನ್ನು ಬೆಳೆಸಬೇಕು ಎಂಬುದು ಅವರ ಗುರಿ. ಅವರು ಯಾರಿಗೇ ಕೆಲಸ ಕೊಟ್ಟರೂ ಮೊದಲು ಹೇಳುತ್ತಿದ್ದುದು "ಕೆಲಸ ಕೊಟ್ಟು ತಕ್ಷಣ ನೀನು ದೊಡ್ಡವನಾಗಬೇಡ, ನಿನ್ನ ಕುಟುಂಬ, ನಿನ್ನ ಪಕ್ಕದವರು. ಅಣ್ಣ ತಮ್ಮಂದಿರು, ನಿನ್ನ ಜನಾಂಗವನ್ನು ನೋಡಿಕೋ" ಎಂದು. ಸರ್ಕಾರದ ಎಲ್ಲ ಇಲಾಖೆಗಳಲ್ಲೂ ದಲಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿದ್ದರು. Especially in co-operative department. ಸಹಕಾರ ಇಲಾಖೆಗೆ ನಾಡಗೌಡರು ಮಂತ್ರಿ ಆಗಿದ್ದರು. ಇಲಾಖೆಗೆ ಸಂಬಂಧಿಸಿದ ಏನೇ ಇದ್ದರು ನನ್ನ ಸೆಕ್ರೆಟರಿ ಕೇಳಿ ಅಂತಿದ್ದರು. "Because he had that scholar quality, Intelligence, Intellectual and Highly spirited personality".

"He has recognized non-schedule caste person. ನೋಡಿದವರೆಲ್ಲ ಇವರು ಬ್ರಾಹ್ಮಣ ಇರಬೇಕೆಂದು ಅನಿಸುವಷ್ಟು ಮೇಧಾವಿ. ಅಲ್ಲದೆ He was sanskrit scholar. ದಲಿತರು ಸಂಸ್ಕೃತ ಅಧ್ಯಯನ ಮಾಡಿದರೆ ನಾಲಿಗೆ ಕತ್ತರಿಸುವಂತಹ ಪರಿಸ್ಥಿತಿ ಇದ್ದ ಕಾಲದಲ್ಲಿ ಅವರು ಸಂಸ್ಕೃತ ಕಲಿತಿದ್ದರು. ಸಮಾಜಕ್ಕೆ ಅವರ ಕೊಡುಗೆ ಅಪರಿಮಿತ. ಇದು ದಲಿತ ಲೋಕದ ಒಂದು ಹೆಮ್ಮೆ. ಟಿ. ನರಸೀಪುರ ಮತ್ತು ಮೈಸೂರು

ಭಾಗದ ಯಾರೇ ಹೋದರೂ ಸರಿ ಅತ್ಯಂತ ಆತ್ಮೀಯತೆಯಿಂದ ಮಾತಾಡಿಸುತ್ತಿದ್ದರು. ಅವರಿಗೆ ಯಾವುದಾದರೂ ಇಲಾಖೆಯಿಂದ ಕೆಲಸ ಕೊಡಿಸಬೇಕಾದರೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಫೋನ್ ಮಾಡುತ್ತಿದ್ದರು. ಮೊದಲು ಅವರ ಯೋಗಕ್ಷೇಮ ವಿಚಾರಿಸಿ ನಂತರ ಕೆಲಸದ ಬಗ್ಗೆ ಮಾತಾಡುತ್ತಿದ್ದರು. "ನಾನು ಒಬ್ಬರನ್ನು ಕಳುಹಿಸುತ್ತಿದ್ದೇನೆ. ದಯವಿಟ್ಟು ಕೆಲಸ ಕೊಡಿ" ಎನ್ನುತ್ತಿದ್ದರು. ಯಾವತ್ತು ಯಾವ ಅಧಿಕಾರಿಯನ್ನು ಗತ್ತಿನಲ್ಲಿ ಕೇಳಿದವರಲ್ಲ. ವಿನಮ್ರವಾಗಿ ಬೇಡಿಕೊಳ್ಳುತ್ತಿದ್ದರು. ಇವರು ಕಳಿಸಿದ ಯಾರೂ ಬರಿಗೈಲಿ ಬರುತ್ತಿರಲಿಲ್ಲ".

"ಅಂಬೇಡ್ಕರ್ ಬೌದ್ಧಿಕವಾಗಿ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಬಲರಾಗಿದ್ದರು. ಆದುದರಿಂದ ಸಾಮಾಜಿಕ ಶೋಷಣೆಗಳ ವಿರುದ್ಧ ಕ್ರಾಂತಿ ಮಾಡಲು ಅನುವಾಗುತ್ತಿದ್ದರು. But Bharanaiah as a Govt. Servent he cannot come out with that and he can't do the revolutions. ಏಕೆಂದರೆ ಸರ್ಕಾರಿ ಅಧಿಕಾರಿಗಳು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದರಂತೆ ಭರಣಯ್ಯ ನೀತಿ ನಿಯಮ ಮೀರುತ್ತಿರಲಿಲ್ಲ. ಅವರ ತವರು ಮೈಸೂರು, ಹಾಸನ, ಮಂಡ್ಯದಲ್ಲಿ ಒಕ್ಕಲಿಗರ ಪ್ರಾಬಲ್ಯವಿತ್ತು. ಒಂದು ವೇಳೆ ಅವರು ಕೆಲಸ ತೊರೆದಿದ್ದರೂ ಚಳುವಳಿ ಮುಂದುವರೆಸುವ ಅವಕಾಶ ಇರುತ್ತಿರಲಿಲ್ಲ. ಅದರ ಬದಲು ಅವರಿಗೆ ಶಿಕ್ಷಣ, ಕೆಲಸ ಕೊಡಿಸಿದರೆ ಅವರ ಸಂಸಾರ ಸುಧಾರಿಸುತ್ತದೆ ಎಂದು ನಂಬಿದ್ದರು. ಇದ್ದ ಪರಿಸರದಲ್ಲೇ ಅವರ ಬದುಕನ್ನು ಉತ್ತಮಪಡಿಸಿ ಅವರನ್ನು ಬೆಳೆಸಿದರೆ, ಅವರ ಮಕ್ಕಳಿಗೆ ಅವರು ಉತ್ತಮ ವಿದ್ಯಾಭ್ಯಾಸ ಕೊಡಿಸುತ್ತಾರೆ ಎಂದು ನಂಬಿದ್ದರು. ಎಲ್ಲ ಜನರನ್ನು ಗಣನೆಗೆ ತೆಗೆದುಕೊಂಡು ಅವರಿಂದ ಸಾಮಾಜಿಕ ಕೆಲಸಗಳನ್ನು ನೆರವೇರಿಸಬೇಕೆಂಬ ಹಂಬಲವಿದ್ದುದರಿಂದ ಎಲ್ಲರಿಗೂ ಹತ್ತಿರವಾದರು".

"ಬಸವಲಿಂಗಪ್ಪನವರಿಗೆ Political power ಇತ್ತು. ಆದುದರಿಂದ ಯಾರೂ ಅವರನ್ನು ತಡೆಯುತ್ತಿರಲಿಲ್ಲ. But Bharanaiah was under the orders of Govt. ಸವರ್ಣೀಯರ ವಿರುದ್ಧ ತಿರುಗಿ ಬೀಳುವುದರ ಬದಲು ಅವರ ಪ್ರೀತಿಯನ್ನು ಗಳಿಸಿಕೊಂಡು ಅಭಿವೃದ್ಧಿ ಮಾಡಬಹುದಲ್ಲ ಎಂದು ಯೋಚಿಸುತ್ತಿದ್ದರೇ ಹೊರತು, ಅವರಿಗೆ ಯಾವುದೇ ರೀತಿಯ ಸಾಮಾಜಿಕ ಮತ್ತು ವೈಯುಕ್ತಿಕ ಅಂಜಿಕೆಗಳು ಇರಲಿಲ್ಲ. ಯಾವುದೇ ದೀನ ದಲಿತರ ಸಭೆಯಲ್ಲಿ ಭರಣಯ್ಯ ಹೇಳುತ್ತಿದ್ದರಂತೆ "ನೋಡ್ರಪ್ಪಾ, ಆ ಮಹಾನುಭಾವ (ಅಂಬೇಡ್ಕರ್)ನ ಹೋರಾಟದಿಂದ ನಾವೆಲ್ಲ ಈ ಸುಖ ಅನುಭವಿಸುತ್ತಿದ್ದೇವೆ. ಅವರು ಹಾಕಿಕೊಟ್ಟ ಹಾದಿಯಲ್ಲೇ ನಾವು ಹೋಗಬೇಕು. ನೀವು ವಿದ್ಯಾವಂತರಾಗುತ್ತೀರಿ. ದೊಡ್ಡವರಾಗುತ್ತೀರಿ. ಜ್ಞಾನ ಬೆಳೆಸಿಕೊಳ್ಳುತ್ತೀರಿ. ಬೇರೆಯವರು

ನಿಮ್ಮನ್ನು ಅಸ್ಪೃಶ್ಯರನ್ನಾಗಿ ನೋಡಬಹುದು. ಆದರೆ ನಿಮ್ಮವರನ್ನು ನೀವೇ ಅಸ್ಪೃಶ್ಯರನ್ನಾಗಿ ನೋಡಬೇಡಿ. ಅವರನ್ನು ಅಂತರಂಗಕ್ಕೆ ಬಿಟ್ಟುಕೊಂಡು ಪ್ರೀತಿಯಿಂದ ಮಾತನಾಡಿಸಿ. ನೀವು ಅವರಿಗೆ ಗೌರವ ಕೊಟ್ಟು ನಿಮ್ಮ ಸಹೋದರರಂತೆ ಬೆಳೆಸಿ. ಅವರು ವಿದ್ಯಾವಂತರಾಗಲು ಏನು ಮಾರ್ಗದರ್ಶನ ಮಾಡಬೇಕೋ ಅದನ್ನು ಮಾಡಿ. ನಮ್ಮ ಚಳುವಳಿ, ಕ್ರಾಂತಿ, ಆಂದೋಲನವನ್ನು ಈ ದಿಕ್ಕಿನಲ್ಲಿ ಉಪಯೋಗಿಸಬೇಕು" ಎಂದು ಹೇಳುತ್ತಿದ್ದರು. ಅದೇ ರೀತಿ ಸವರ್ಣೀಯರ ಸಭೆಯಲ್ಲಿ "ಏನೇ ಆದರೂ ನೀವು ಬಲಾಢ್ಯರು. ನಿಮ್ಮಗಳ ಮಧ್ಯೆ ನಾವು ಬೆಳೆಯುತ್ತಿದ್ದೇವೆ. ಈ ಸಂದರ್ಭದಲ್ಲಿ ನೀವು ನಮಗೆ ನೀರು ಗೊಬ್ಬರ ಹಾಕಿದರೆ ನಾವು ದೊಡ್ಡ ಮರವಾಗಿ ಬೆಳೆಯಬಹುದು. ನಿಮ್ಮ ಸಹಕಾರ, ಸಹಾನುಭೂತಿ ಯಾವಾಗಲೂ ನಮಗೆ ಬೇಕು. ಅದನ್ನು ನೀವು ಮಾಡಿದರೆ ದೀನ ದಲಿತರನ್ನು ಮೇಲೆತ್ತಲು ಸಹಾಯವಾಗುತ್ತದೆ. ಇದಕ್ಕಿಂತಾ ದೊಡ್ಡ ಕೊಡುಗೆ ಸಮಾಜಕ್ಕೆ ಏನಿಲ್ಲ. ನೀವು ಕೊಡಬೇಕಾಗಿರುವುದು ಇದೇ ಕೊಡುಗೆ. ಎಲ್ಲಾ ಹಂತದಲ್ಲೂ ನೀವು ನಮಗೆ ನೆರವಾಗಬೇಕು" ಎಂದು ಕಳಕಳಿಯಿಂದ ಕೈ ಮುಗಿದು ಕೇಳುತ್ತಿದ್ದರು".

ಚಿಕ್ಕಂದಿನಿಂದಲೇ ಅವರ ಗುಣಗಳಿಂದ ಪ್ರಭಾವಿತರಾದ ರಂಗಸ್ವಾಮಿ. "ಪ್ರೀತಿ ಗಳಿಸುವ ವಿದ್ಯೆ ಕಲಿತದ್ದು ನಮ್ಮ ದೊಡ್ಡಪ್ಪನಿಂದ. ನಾನು ಸಹನೆ, ಸೌಜನ್ಯತೆಯನ್ನು ಕಲಿತಿದ್ದು ಭರಣಯ್ಯ ಅವರಿಂದ. ಹೆಚ್ಚಾಗಿ ವಿದ್ಯೆ ಪಡೆದು Power ಪಡೆಯಬೇಕು. ನಾವು ಒಂದು ವೇಳೆ ಅಧಿಕಾರಕ್ಕೆ ಬಂದರೆ ಭರಣಯ್ಯನವರ ಕಾರ್ಯಗಳನ್ನು ಅನುಷ್ಠಾನಕ್ಕೆ ತರಬೇಕು ಎಂಬುದು ನನ್ನ ಆಸೆ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. "ಹೀಗಿದ್ದ ನಮ್ಮ ದೊಡ್ಡಪ್ಪನಿಗೆ ನಮ್ಮ ರಾಜಕಾರಣಿಗಳು ಟಿಕೆಟ್ ಕೊಟ್ಟು ಕೊಳ್ಳೇಗಾಲದಲ್ಲಿ ಚುನಾವಣೆಗೆ ನಿಲ್ಲಿಸಿದರು. ಸಮಾಜ ಹೇಗಿದೆಯೆಂದರೆ, ನಮ್ಮ ಜನಾಂಗದವರೇ ಓಟು ಕೊಡಲಿಲ್ಲ. ಒಂದು ವೇಳೆ ಅವರೇನಾದರೂ ಗೆದ್ದಿದ್ದರೆ. ಅವರೇ Rule maker ಆಗಿ ಒಳ್ಳೆಯ ಆಡಳಿತಗಾರರಾಗಿರುತ್ತಿದ್ದರು. ದಲಿತ ರಾಜಕೀಯ ನಾಯಕರ ಗುಂಪಿನಲ್ಲಿ ಅಗ್ರಮಾನ್ಯರಾಗಿರುತ್ತಿದ್ದರು. ಆದರೆ ಈಗಾಗಲೇ ಅಧಿಕಾರಿಯಾಗಿ ಜನಮನ್ನಣೆಗಳಿಸಿದ ಇವರು ಏನಾದರು ಗೆದ್ದರೆ ನಾವು ಮೂಲೆಗುಂಪಾಗುತ್ತೇವೆ ಎಂದು ತಿಳಿದು ಇವರನ್ನು ತುಳಿದರು. ನಂತರ ಅವರು ಬಹಳ ಚಿಂತೆಗೀಡಾದರು. 'ಇಷ್ಟೆಲ್ಲಾ ಜನೋಪಕಾರಿ ಕೆಲಸ ಮಾಡಿದರೂ ದೀನ ದಲಿತರು ನನ್ನ ಗುರುತಿಸಲಿಲ್ಲವಲ್ಲ, ಒಬ್ಬ ಅನಕ್ಷರಸ್ಥನ ಎದುರು ಸೋತೆನಲ್ಲ' ಎಂದು ನೊಂದುಕೊಂಡಿದ್ದರು. ಜನ ಆಗ ಅವರ ಕೈ ಹಿಡಿದಿದ್ದರೆ ಇಂದಿನ ದಲಿತರ ಪರಿಸ್ಥಿತಿ ಇನ್ನೂ ಸುಧಾರಿಸಿರುತ್ತಿತ್ತು".

ಭರಣಯ್ಯನವರ ಕುಟುಂಬದಲ್ಲಿ ಅವರ ತರದ ವ್ಯಕ್ತಿಗಳು ಯಾರೂ ಹುಟ್ಟಲಿಲ್ಲ. ಒಂದು ಉದಾಹರಣೆ ಹೇಳಬೇಕೆಂದರೆ "ಒಂದು ಮರದಲ್ಲಿ ನೂರಾರು ಹಣ್ಣುಗಳು ಬಿಡುತ್ತವೆ. ಆದರೆ ಎಲ್ಲ ಒಂದೇ ಆಕಾರ, ಗಾತ್ರ, ರುಚಿ ಇರುವುದಿಲ್ಲ" ಅದರಂತೆ

ಭರಣಯ್ಯನವರ ವ್ಯಕ್ತಿತ್ವ ಬೇರೆ, ಅವರ ಕುಟುಂಬದವರ ವ್ಯಕ್ತಿತ್ವ ಬೇರೆ. ಭರಣಯ್ಯನವರಲ್ಲಿ ದಿಟ್ಟ ಧೋರಣೆಯೊಂದಿತ್ತು. ಈಗ ಇರುವವರೆಲ್ಲ ಬೇರೆ Community ಎದುರಿಗೆ ನಾನು ದೊಡ್ಡವನಾಗಬೇಕು ಎಂದು ಹಂಬಲ ಹೊತ್ತಿರುತ್ತಾರೆ. ಆದರೆ ಭರಣಯ್ಯ ನಮ್ಮವರಲ್ಲಿ ಪ್ರೀತಿ ಗಳಿಸಬೇಕು ಎಂದು ಆಸೆ ಪಡುತ್ತಿದ್ದರು. ಇಂದಿನವರು ತಾವು ಬಂದ ದಾರಿಯನ್ನೇ ಮರೆತಿರುವುದು ದುರಂತ. ಅವರ ಮಟ್ಟದಿಂದ ಕೆಳಗಿಳಿದು ಯೋಚಿಸುವುದಿಲ್ಲ. ಅವರ ಗುರಿಯ ಮೇಲೆ ಲಕ್ಷ್ಯವಿಲ್ಲ. ಇದರಲ್ಲಿ ನಮ್ಮವರು ಎಡವಿದ್ದಾರೆ. ಇಂತಹ ಸಮಾಜಕ್ಕೆ ನೂರಾರು ಭರಣಯ್ಯನವರು ಬೇಕು. ಏಕೆಂದರೆ ಇದು ಕಂಸರ ರಾಜ್ಯ. ಇಲ್ಲಿಗೆ ಒಬ್ಬರು ಸಾಲಲ್ಲ. ಪ್ರತಿಯೊಬ್ಬರು ಇದು ನನ್ನದೆಂಬ ಭಾವನೆಯಲ್ಲಿ ಬದುಕಬೇಕು" ಇಷ್ಟೆಲ್ಲಾ ಹೇಳಿದ ರಂಗಸ್ವಾಮಿ ದಲಿತ ಜನಾಂಗಕ್ಕೆ ಪ್ರಶ್ನೆಯೊಂದನ್ನು ಮುಂದಿಡುತ್ತಾರೆ. "ನಮ್ಮವರು Sofesticated ಆದಾಗ ನಮ್ಮವರನ್ನೇ ಅಸ್ಪೃಶ್ಯರನ್ನಾಗಿ ನೋಡುವಾಗ, ಬೇರೆಯವರು ಯಾಕೆ ನಮ್ಮನ್ನು ಅಸ್ಪೃಶ್ಯರನ್ನಾಗಿ ನೋಡಬಾರದು..? ಮುಂದುವರೆದಿರುವ 'ನಮ್ಮವರ' ಮನೆಗಳಿಗೆ ಹೋದರೆ ಅವರಿಗೆ ಮಾತನಾಡಲು ಸಂಕಟ. 'ಸಾಹೇಬರು ಮಲಗಿದ್ದಾರೆ Disturb ಮಾಡಲ್ಲ' ಅಂತಾರೆ ಮನೆಯವರೋ, ಕೆಲಸದವರೋ. ಅಣ್ಣಾವ್ರು ಎಂಬ ಪದಬಿಟ್ಟು 'ಸಾಹೇಬರು' ಎಂದು ಗತ್ತು ತೋರುತ್ತಾರೆ. ಮಾತಾಡಿಸುವುದು ಇರಲಿ ಬಾಗಿಲಲ್ಲೇ ನಿಲ್ಲಿಸುತ್ತಾರೆ. ಇನ್ನು ಒಳಗೆ ಕರೆದು ಕಾಫಿ ಇರಲಿ ನೀರೂ ಕೊಡುವುದಿಲ್ಲ. ಅದಾದರೂ ಹೋಗಲಿ ಪ್ರೀತಿಯಿಂದ ನಾಲ್ಕು ಮಾತನಾಡಿ ಕಳಿಸಿದರೆ ಎಷ್ಟು ಒಳ್ಳೆಯದಲ್ಲವೆ...? ಅಂತವರು ಯಾವ ಜನಾಂಗದಲ್ಲೂ ಬೆಳೆಯಬಾರದು. ಪ್ರತಿಯೊಬ್ಬ ದಲಿತನೂ ಇದು ನನ್ನ ಜನಾಂಗ ಎಂಬ ಪ್ರೀತಿ ಇಡಬೇಕು. ನಾನು ಅವರಿಗೆ, ಅವರು ನನಗೆ ಬೇಕು ಎಂದು ಬದುಕಬೇಕು. ಸರ್ಕಾರ ಏನೇ ಕಾರ್ಯ, ಕಟ್ಟಳೆ, ನೀತಿ ತಂದರೂ, ನಮ್ಮವರು ನಮ್ಮವರಾಗದಿದ್ದ ಮೇಲೆ ಉನ್ನತಿ ಎಲ್ಲಿ..? How could we expect from others...? ಅಧಿಕಾರಿಯಾಗಿ ನಾನೇ ಸಹಾಯ ಮಾಡದಿದ್ದರೆ ಬೇರೆಯವರು ಯಾಕೆ ಮಾಡಬೇಕು? ಇದು ಮುಂದುವರೆದ ದಲಿತರು ಚಿಂತಿಸಬೇಕು".

ತಮ್ಮ ಜೀವನದಲ್ಲಿ ಮರೆಯಲಾಗದ ಘಟನೆಯೊಂದನ್ನು ರಂಗಸ್ವಾಮಿ ತಮ್ಮನೆನಪಿನಲ್ಲಿ ಜೋಪಾನವಾಗಿಟ್ಟುಕೊಂಡಿದ್ದರು. ಭರಣಯ್ಯನವರ ವ್ಯಕ್ತಿತ್ವದ ಹೊಳಪು ಹೆಚ್ಚಿಸುವಂತ ಈ ಘಟನೆಯುನ್ನು ರಂಗಸ್ವಾಮಿ ಹೇಳಿದ್ದು ಹೀಗೆ: "ಅವರು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಎಲ್ಲರನ್ನು ಮರೆಯದೆ ಮಾತಾಡಿಸುತ್ತಿದ್ದರು. ಅವರು ಪಿ.ಎಸ್.ಸಿ. ಮೆಂಬರ್ ಆಗಿದ್ದಾಗ ನಾನು ಒಮ್ಮೆ ಅವರನ್ನು ನೋಡಲು ಹೋಗಿದ್ದೆ. ಆಗ ತಾನೇ ಪಿ.ಯು.ಸಿ. ಪಾಸಾಗಿದ್ದೆ. ಅವರು ದೊಡ್ಡವರು. ನಾನು ಅವರಿಗೆ ತೃಣಕ್ಕೆ ಸಮಾನ. ಸುಮಾರು ಜನ ಅವರನ್ನು ನೋಡಲು ಕುಳಿತಿದ್ದರು. ಎಲ್ಲರೂ ಒಳ್ಳೊಳ್ಳೆ Officials ಎಲ್ಲರೂ ಅವರವರ Visiting cards ಗಳನ್ನು ಜವಾನನಿಗೆ ಕೊಟ್ಟು ಕಳಿಸುತ್ತಿದ್ದರು.

ನಾನು ಹಳ್ಳಿಯವನು ಏನು ಕೊಡಲಿ. ನಾನು ಪೈಜಾಮ ಮತ್ತು ಷರ್ಟು ಹಾಕಿಕೊಂಡಿದ್ದೆ. ನನಗೋ ಭಯ. ಇಷ್ಟುದೊಡ್ಡ ಆಫೀಸಿನಲ್ಲಿ ದೊಡ್ಡಪ್ಪ ಇದ್ದಾರೆ. ಹೇಗೆ ಮಾತಾಡಿಸೋದು ಎಂದು. ಹಾಗೂ ಹೀಗೂ ನಾನೊಂದು ಚೀಟಿಯಲ್ಲಿ 'ಎಸ್. ರಂಗಸ್ವಾಮಿ ಸೇನಾಪತಿಹಳ್ಳಿ' ಎಂದು ಬರೆದು ಜವಾನನಿಗೆ ಕೊಟ್ಟೆ. ಅಷ್ಟೆಲ್ಲಾ State level ಅಧಿಕಾರಿಗಳಿದ್ದರೂ ಜವಾನ ಬಂದು 'ಸಾಹೇಬರು ಕರೀತಿದ್ದಾರೆ' ಎಂದು ನನಗೆ ಹೇಳಿದ. ಅಲ್ಲಿದ್ದ ಎಲ್ಲರೂ ಕಕ್ಕಾಬಿಕ್ಕಿ. ನನಗೂ ಪರಮಾಶ್ಚರ್ಯ. ನಾನು ತುಂಬಾ ಸಣ್ಣಗಿದ್ದೆ. ಏಕೆಂದರೆ ಸರಿಯಾದ ಊಟ ಉಪಚಾರ ಇರಲಿಲ್ಲ, Ugly look ಬೇರೆ, ಮಾಸಲು ಬಟ್ಟೆ, ಎಲ್ಲರೂ 'ಈ ಹುಡುಗನ ಕರೆದು ಬಿಟ್ಟರಲ್ಲ' ಎಂದು ಮಿಕಮಿಕ ನೋಡುತ್ತಿದ್ದರು. ಸರಿ ನಾನು ಒಳಗೆ ಹೋದ ತಕ್ಷಣ ಭರಣಯ್ಯ ನನ್ನನ್ನು ನೋಡಿ ಗಳಗಳ ಎಂದು ಅತ್ತುಬಿಟ್ಟರು. ನಮ್ಮ ಕುಟುಂಬದವರನ್ನೆಲ್ಲ ವಿಚಾರಿಸಿದರು. ನನ್ನನ್ನು 'ಕೂತ್ಕೋ' ಎಂದರು. ನನಗೆ ಅವರ ಮುಂದೆ ಕೂರಲು ತುಂಬಾ ಭಯ. ಆದರೂ ಒತ್ತಾಯ ಮಾಡಿ ಕೂರಿಸಿದರು. ಎಲ್ಲರನ್ನು ಕೇಳಿದೆ ಎಂದು ಹೇಳು. ಚೆನ್ನಾಗಿ ಓದು, ಅಪ್ಪ ಅಮ್ಮನನ್ನು ಚೆನ್ನಾಗಿ ನೋಡಿಕೋ ಎಂದರು. Rarely it was a great occasion. ಅಂದೇ ನಾನು ಶಪಥ ಮಾಡಿದೆ. ನಮ್ಮ ದೊಡ್ಡಪ್ಪನ ಹಾಗೆ ಆಗಬೇಕೆಂದು. ಆದರೆ ಆ ಮಟ್ಟಕ್ಕೆ ಏರಲು ಆಗಲಿಲ್ಲ. ಆದರೆ ನಾನು ಕೆಲಸ ಮಾಡಿದ ಕಡೆಯಲೆಲ್ಲ ಒಳ್ಳೆ ಹೆಸರು ಸಂಪಾದಿಸಿದ್ದೇನೆ. ಹಳ್ಳಿಯಲ್ಲಿ ಎಮ್ಮೆ ಕಾಯ್ದುಕೊಂಡು ಜೀತ ಮಾಡಬೇಕಾದ ವ್ಯಕ್ತಿ ನಾನು, ಈ ಮಟ್ಟಕ್ಕೆ ಬಂದಿದ್ದೀನಿ ಎಂದರೆ ಅದಕ್ಕೆ ಭರಣಯ್ಯ ಕಾರಣ. ನಾವು ಕನಸಿನಲ್ಲೂ ನೆನೆಸದ ಜೀವನ ಅವರಿಂದ ನಮಗೆ ಸಿಕ್ಕಿದೆ" ರಂಗಸ್ವಾಮಿಯವರ ಮಾತುಮುಗಿಯುವ ಹೊತ್ತಿಗೆ ಅವರ ಮಗ ದೀಪಕ್ ತಮ್ಮ ತಾತನ ಕುರಿತಾಗಿ ಹೇಳಿದ್ದು "ನಮ್ಮ ತಂದೆ ಹೇಳಿದರು ಅವರ ಕುಟುಂಬದಲ್ಲಿ ಅವರ ತರ ಯಾರೂ ಇಲ್ಲ ಅಂತ. Though not today, But one day there will be a one Bharanaiah. Though not equalant to Bharanaiah. ಆದರೆ ಆ ಮಟ್ಟಕ್ಕೆ ಒಬ್ಬರು ಬಂದೇ ಬರುತ್ತಾರೆ. ವಂಶವಾಹಿಯಲ್ಲಿ ಒಬ್ಬರಾದರು ಆ ತರಹ ಜನಿಸುತ್ತಾರೆ. and will be very dinamic also".

ಅಪ್ಪಟ ರೇಷ್ಮೆಯಂತ ಗುಣ

ಕೆಂಪಸಿದ್ದಯ್ಯ

ನಿವೃತ್ತ ಇನ್‌ಸ್ಪೆಕ್ಟರ್, ರೇಷ್ಮೆ ಇಲಾಖೆ, ಮೈಸೂರು

"ಅಂದು ಭರಣಯ್ಯನ ಜಾಗದಲ್ಲಿ ಬೇರೆ ಯಾರಿದ್ದರೂ ನನಗೆ ಕೆಲಸ ಸಿಕ್ಕುತ್ತಿರಲಿಲ್ಲ. ಇಂದು ಅವರ ಬಗ್ಗೆ ಮಾತಾಡಲು ಆಗುತ್ತಿರಲಿಲ್ಲ" ಎಂದು ಕೆ. ಆರ್. ಮಿಲ್ ಕಾಲೋನಿಯಲ್ಲಿ ರೇಷ್ಮೆ ಇಲಾಖೆಯ ನಿವೃತ್ತ ಇನ್ಸ್‌ಪೆಕ್ಟರ್ ಕೆಂಪಸಿದ್ದಯ್ಯನವರ ಅಭಿಪ್ರಾಯ.

ಕೆಂಪಸಿದ್ದಯ್ಯ ಪಿ.ಯು.ಸಿ. ಪಾಸಾದಾಗ 1969ರಲ್ಲಿ ರೇಷ್ಮೆ ಇಲಾಖೆಯಿಂದ Interview ಬಂತು. ಆಗ ಭರಣಯ್ಯ ಪಿ.ಎಸ್.ಸಿ. ಮೆಂಬರ್ ಆಗಿದ್ದರು. ಕೆಂಪಸಿದ್ದಯ್ಯನವರ ಅಣ್ಣ ಡಿ.ಸಿ. ಆಗಿದ್ದರು ಅವರು ಭರಣಯ್ಯನವರನ್ನು ಭೇಟಿ ಆಗುವಂತೆ ತಿಳಿಸಿದರು. ಅದರಂತೆ ಕೆಂಪಸಿದ್ದಯ್ಯ ಕುಮಾರಪಾರ್ಕಿನಲ್ಲಿದ್ದ ಅವರ ಮನೆಗೆ ಹೋದರು. ಇವರನ್ನು ಕಂಡ ಭರಣಯ್ಯ 'ಯಾಕಪ್ಪ ಇಲ್ಲಿಗೆ ಬಂದಿದ್ದೀಯ?' ಎಂದರಂತೆ. ಅದಕ್ಕಿವರು 'ಸರ್ ರೇಷ್ಮೆ ಇಲಾಖೆಯ Interview ಇತ್ತಲ್ಲ ಅದಕ್ಕೆ ಬಂದಿದ್ದೀನಿ' ಎಂದರಂತೆ. ಆಗ ಭರಣಯ್ಯ "10 ಘಂಟೆಗೆ ಪಿ.ಎಸ್.ಸಿ. ಕಛೇರಿಯಲ್ಲಿ Interview ಇದೆ ಅಲ್ಲಿಗೇ ಬಂದು ಬಿಡಪ್ಪ' ಅಂದರು. ಕೆಂಪಸಿದ್ದಯ್ಯನವರಿಗೆ ರೇಷ್ಮೆ ಬಗ್ಗೆ ಅಷ್ಟೇನು ಅನುಭವ ಇರಲಿಲ್ಲ. ನಂತರ Interviewನಲ್ಲಿ ಭಾಗವಹಿಸಿದಾಗ "ನೀವು ಮೈಸೂರಿನವರು 19ರಂದು ಅಂದರೆ ನೆನ್ನೆ ಅಲ್ಲಿ ಸಂದರ್ಶನವಿತ್ತು. ಇವತ್ತು ಇಲ್ಲಿಗೆ ಯಾಕೆ ಬಂದಿದ್ದೀರಿ. ಅಲ್ಲೇ ಸಂದರ್ಶನ ಎದುರಿಸಬೇಕಿತ್ತು. ನಾನು ನೆನ್ನೆ ಮೈಸೂರಿಗೆ ಬಂದಿದ್ದೆ ನೀವ್ಯಾಕೆ ಬರಲಿಲ್ಲ..?" ಎಂದು ಭರಣಯ್ಯ ಕೇಳಿದರು. ಅದಕ್ಕೆ ಕೆಂಪಸಿದ್ದಯ್ಯ "ಇಲ್ಲ ಸರ್ ನನಗೆ Interview ಬೆಂಗಳೂರಿನಲ್ಲಿ ಅಂತ ಕೊಟ್ಟಿದ್ದಾರೆ" ಎಂದು ಕ್ಲರ್ಕ್ ಕರೆದು ಕೇಳಿದಾಗ ಅವರಲ್ಲೇ ತಪ್ಪಾಗಿರುವುದು ಕಂಡುಬಂತು. ನಂತರ Interview ನಡೆಸಿ Select ಮಾಡಿ ಚನ್ನಪಟ್ಟಣಕ್ಕೆ Trainingಗೆ ನಿಯೋಜಿಸಿ. ಊರಿಗೆ ಹೋಗಲು ಕ್ಲರ್ಕ್ ಬಳಿ 10ರೂ. ಪಡೆದು ಕೆಂಪಸಿದ್ದಯ್ಯನವರಿಗೆ ಕೊಟ್ಟರು. ಒಂದು ವೇಳೆ ಬೇರೆ ಅಧಿಕಾರಿಯಾಗಿದ್ದರೆ ನನ್ನನ್ನು ವಾಪಸ್ ಕಳಿಸಿಬಿಡುತ್ತಿದ್ದರು. ಆದರೆ ಭರಣಯ್ಯ ಹಾಗೆ ಮಾಡಲಿಲ್ಲ. ಯಾರೇ ಬಡವ್ಯಕ್ತಿ ಹೋದರೂ ಅವರ ಕಷ್ಟಸುಖ ವಿಚಾರಿಸಿ ಮಾತಾಡಿಸುತ್ತಿದ್ದಂತಹ ವ್ಯಕ್ತಿತ್ವ".

"ಜೀವನದಲ್ಲಿ ಬೇರೆಯವರ ಉನ್ನತಿಗೆ ಒಳ್ಳೆಯ ಕೆಲಸ ಮಾಡುವುದು, ಅವರ ಕಷ್ಟ ಸುಖಕ್ಕೆ ಸ್ಪಂದಿಸುವುದು. ತಮ್ಮಕೈಲಾದ ಸೇವೆ ಮಾಡುವುದು. ಅದು ಆಗದಿದ್ದರೆ ಕನಿಷ್ಟ ಪಕ್ಷ ನಾಲ್ಕು ಒಳ್ಳೆಯ ಮಾತಾಡುವುದು ಮನುಷ್ಯತ್ವದ ಲಕ್ಷಣ. ಇಂತಹ ಗುಣಗಳನ್ನು ನಾನು ಭರಣಯ್ಯನವರಿಂದ ಕಲಿತೆ" ಎನ್ನುತ್ತಾರೆ ಕೆಂಪಸಿದ್ದಯ್ಯನವರು. "ಅಂತಹ ವ್ಯಕ್ತಿಗಳು ದಲಿತ ಜನಾಂಗಕ್ಕೆ ಬೇಕು. ಆದರೆ ಅವರ ನಂತರದವರು ಅವರ ರೀತಿ ಆಗಲಿಲ್ಲ. ಅದಕ್ಕೆ ಕಾರಣವಿದೆ. ಐದು ಬೆರಳೂ ಒಂದೇ ಸಮ ಇರುವುದಿಲ್ಲ ಇದು ನಿಯಮ" ಎಂದು ಒಂದು ಸಮರ್ಥನೆಯನ್ನೂ ಕೊಟ್ಟರು.

"ಇಡೀ ಐ.ಎ.ಎಸ್. ಸಮೂಹದಲ್ಲೇ ಆ ರೀತಿಯ ವ್ಯಕ್ತಿತ್ವ ಹುಟ್ಟಲಿಲ್ಲ. ಆದರೂ ಭರಣಯ್ಯ ಆಗ ಕೆಲಸ ಮಾಡುವಾಗ ಸರ್ಕಾರದಿಂದ, ರಾಜಕಾರಣಿಗಳಿಂದ ಅಡ್ಡಿ ಆತಂಕಗಳು ಇರುತ್ತಿದ್ದವು. ಆದರೂ ಅವನ್ನೆಲ್ಲ ನಿವಾರಿಸಲು ಅವರಲ್ಲಿ ಕಾನೂನಿನ ಅಸ್ತ್ರಗಳಿದ್ದವು. ಕಾನೂನು ಕಟ್ಟಳೆಗಳನ್ನು ಕೂಲಂಕಷವಾಗಿ ತಿಳಿದಿದ್ದರು. ಹೀಗಾಗಿ ಶಿಸ್ತಿನಿಂದ

ಅಧಿಕಾರ ಚಲಾಯಿಸುತ್ತಿದ್ದರು. ಆಗೆಲ್ಲ ಅಂತಹ ಕೆಟ್ಟ ರಾಜಕೀಯ ವ್ಯವಸ್ಥೆಯೇನು ಇರಲಿಲ್ಲ. ಹೀಗಾಗಿ ಅಲ್ಲಿಂದಲೂ ಭರಣಯ್ಯನವರಿಗೆ ಸಹಕಾರವಿತ್ತು. ಆದರೆ ಈಗಿನ ಚಿತ್ರಣವೇ ಬೇರೆ. ನಮ್ಮ ಜನಾಂಗದ ಅಧಿಕಾರಿಗಳ ಮನೆಗೆ ಹೋದರೆ ತಮ್ಮವರನ್ನು ಹತ್ತಿರ ಸೇರಿಸುವುದಿಲ್ಲ. ಅವರ ಬಳಿ ಹೋಗಿ ನೀವು ಅಧಿಕಾರದಲ್ಲಿದ್ದೀರಿ ನಮ್ಮ ಮಗನಿಗೊಂದು ಕೆಲಸ ಕೊಡಿ ಎಂದು ಅಲ್ಲಿ ಕೇಳಿದರೆ ಪ್ರಯೋಜನವಿಲ್ಲ. ಬೇರೆಯವರಿಗೆ, ಅವರ ಅಂತಸ್ತಿನವರಿಗೆ ಉಂಟು, ಆದರೆ ನಮಗೆ ಅವಕಾಶ ಇಲ್ಲ. ನಮ್ಮಲ್ಲಿನ ಒಳಶೋಷಣೆ ಹೊರ ಶೋಷಣೆಗಿಂತ ಭಿನ್ನ. ತಮ್ಮ ಜನಾಂಗದವರನ್ನೇ ಸಹಿಸಿಕೊಳ್ಳಲಾಗದ ಮಹಾನ್ ಅಧಿಕಾರಿಗಳಿದ್ದಾರೆ" ಎಂದು ದಲಿತ ಶೋಷಣೆಯ ಮತ್ತೊಂದು ಮುಖ ಪರಿಚಯಿಸಿದರು. ಕೊನೆಯದಾಗಿ ಕೆಂಪಸಿದ್ದಯ್ಯ ಹೇಳಿದ್ದು, ಭರಣಯ್ಯನವರ ಒಂದು ಶಿಫಾರಸ್ಸು ಪತ್ರಕ್ಕೆ ಕೆಲಸ ಸಿಕ್ಕುತ್ತಿತ್ತು. ಅಧಿಕಾರಿಗಳಲ್ಲೂ ಗೌರವ ಇತ್ತು. ಈಗೆಲ್ಲ ಹಣ. ಆಗ ಒಂದು ವೇಳೆ ಭರಣಯ್ಯ ಇರದಿದ್ದರೆ ಸರ್ಕಾರದಿಂದ ದಲಿತರಿಗೆ ಸಿಗಬೇಕಾಗಿದ್ದ ಸವಲತ್ತುಗಳು ಉಳ್ಳವರ ಪಾಲಾಗುತ್ತಿದ್ದವು. ನಿಜಕ್ಕೂ ಅವರು ಕರ್ನಾಟಕದ ಅಂಬೇಡ್ಕರ್".

ಆ ಪುಣ್ಯಾತ್ಮ ಮತ್ತೆ ಹುಟ್ಟಿಬರಬೇಕು...

ಡಾ. ಸುಬ್ಬೇಗೌಡ
ಮಾನಸಿಕ ರೋಗ ವಿಭಾಗ
ಶಾಂತವೇರಿ ಗೋಪಾಲಗೌಡ ಆಸ್ಪತ್ರೆ, ಮೈಸೂರು

"ಕಂಡವರ ಕಷ್ಟಕ್ಕೆ ಕಣ್ಣೀರು ಹಾಕುವ ಧರ್ಮ ಆ ಪುಣ್ಯಾತ್ಮನಿಗೆ ಏನಿತ್ತು? ಆದರೂ ಅವರು ತಮ್ಮ ಬಳಿ ಬಂದ ಯಾರನ್ನೇ ಆದರೂ ಹಾಗೇ ಕಳಿಸಿದವರಲ್ಲ. ಅವರು ನನ್ನಪಾಲಿನ ದೇವರು. ನನಗೆ ಅನ್ನಕೊಟ್ಟ ಧಣಿ" ಹೀಗೆ ಭರಣಯ್ಯನವರ ಮಾನವೀಯತೆಯ ಒಂದು ಉದಾಹರಣೆಯನ್ನು ಕೊಟ್ಟವರು ಡಾ. ಸುಬ್ಬೇಗೌಡರು. ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಮಾನಸಿಕ ರೋಗ ವಿಭಾಗದಲ್ಲಿ ವೈದ್ಯರಾಗಿ ಸೇವೆಸಲ್ಲಿಸುತ್ತಿರುವ ಇವರು ಭರಣಯ್ಯನವರಿಂದ ಬದುಕು ಕಟ್ಟಿಕೊಂಡವರಲ್ಲಿ ಒಬ್ಬರು.

ಸುಬ್ಬೇಗೌಡರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಬಳಿಯ ಸೊಳ್ಳೇಪುರ ಗ್ರಾಮದವರು. ಬಡ ರೈತ ಕುಟುಂಬದಲ್ಲಿ ಹುಟ್ಟಿ, ಕಷ್ಟಪಟ್ಟು ಓದಿ ಎಂ.ಬಿ.ಬಿ.ಎಸ್. ಪಾಸುಮಾಡಿದ್ದರು. ಆದರೂ ಅವರಿಗೆ ಪ್ರಪಂಚದ ಜ್ಞಾನ ಅಷ್ಟಾಗಿ ಇರಲಿಲ್ಲ. ಕಿಕ್ಕೇರಿಯಲ್ಲಿ ಬಸ್ಸುಹತ್ತಿದರೆ ಮೈಸೂರಿನಲ್ಲಿ ಇಳಿಯುತ್ತಿದ್ದರು. ಮತ್ತೆ ಮೈಸೂರಿನಲ್ಲಿ ಬಸ್ಸು ಹತ್ತಿದರೆ ಇಳಿಯುತ್ತಿದ್ದುದು ಕಿಕ್ಕೇರಿಯಲ್ಲೇ! ಎಂ.ಬಿ.ಬಿ.ಎಸ್ ಮುಗಿಸಿದ ತಕ್ಷಣ ಮೈಸೂರಿನಲ್ಲಿ ಒಂದು ಅರೆಕಾಲಿಕೆ ಶಿಕ್ಷಕವೃತ್ತಿ ದೊರೆತಿತ್ತು. ಮೈಸೂರು ಮಹಾರಾಜರ

ಫಿಸಿಶಿಯನ್ ಆಗಿದ್ದ ಡಾ॥ ದಾಸ್ ಎಂಬುವವರ ಯೂನಿಟ್‌ನಲ್ಲಿ ಹೊಸದಾಗಿ ಬರುವ ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಅದನ್ನು ಬಿಟ್ಟರೆ ತನ್ನ ಓದಿಗೆ ಯಾವ ಕೆಲಸ, ಎಲ್ಲಿ ಸಿಗುತ್ತದೆ, ಯಾರು ಕೊಡುತ್ತಾರೆ ಎಂಬುದೂ ತಿಳಿದಿರಲಿಲ್ಲ. ಆವಾಗ ಯಾರೋ ಹೇಳಿದರಂತೆ "ಪಿ.ಎಸ್.ಸಿ. ಅಂತ ಒಂದು ಆಫೀಸಿದೆ ಬೆಂಗಳೂರಿನಲ್ಲಿ, ಅಲ್ಲಿಗೆ ಹೋಗು ಕೆಲಸ ಸಿಗಬಹುದು" ಎಂದು. ಆರ್ಥಿಕ ಮುಗ್ಗಟ್ಟಿದ್ದರೂ ಹೇಗೋ ಒಂದು ಅರ್ಜಿ ಬರೆದುಕೊಂಡು ಬೆಂಗಳೂರು ಬಸ್ಸುಹತ್ತಿದರು ಸುಬ್ಬೇಗೌಡರು. ನೇರ ಪಿ.ಎಸ್.ಸಿ. ಆಫೀಸಿಗೆ ಹೋದ ಇವರಿಗೆ ಸಿಕ್ಕಿದ್ದು ಭರಣಯ್ಯನವರು. ಅವರನ್ನು ನೋಡಿ ಅವರಲ್ಲಿ "ಸಾರ್ ನಾನು ಎಂ.ಬಿ.ಬಿ.ಎಸ್. ಓದಿದೀನಿ ಬಡ ರೈತನ ಮಗ, ದಯವಿಟ್ಟು ಸಹಾಯ ಮಾಡಿ. ಒಂದು ಕೆಲಸ ಕೊಡಿ". ಎಂದು ಕೇಳಿಕೊಂಡರು. ಅದಕ್ಕವರು "ನೋಡಪ್ಪ ಪ್ರತಿ ಕೋಮಿಗೂ ಒಬ್ಬೊಬ್ಬ ಪ್ರತಿನಿಧಿಗಳು ಇದ್ದಾರೆ. ನಿಮ್ಮ ಕೋಮಿನ ಪ್ರತಿನಿಧಿ ವಿ. ಭೈರಪ್ಪ ಅಂತ ಅಲ್ಲಿ ಕೂತಿದ್ದಾರೆ ಅಲ್ಲಿಗೆ ಹೋಗಿ ನೋಡು" ಎಂದು ಹೇಳಿದರು. ಅರ್ಜಿ ಹಿಡಿದುಕೊಂಡು ಅವರ ಮುಂದೆ ಹೋಗಿ ನಿಂತರು ಸುಬ್ಬೇಗೌಡರು. ಆ ಪುಣ್ಯಾತ್ಮ ಭೈರಪ್ಪನವರು ಇವರನ್ನು ಮಾತನಾಡಿಸುವುದಿರಲಿ ತಲೆಯೆತ್ತಿಯೂ ನೋಡಲಿಲ್ಲ. ಇವರ ಕಷ್ಟವನ್ನೂ ಕೇಳಲಿಲ್ಲ. ನಂತರ ಸುಬ್ಬೇಗೌಡರು ಮರಳಿ ಭರಣಯ್ಯನವರ ಬಳಿಗೇ ಬಂದರು "ಸಾರ್ ಅವರು ನನ್ನ ಮಾತಾಡಿಸಲೇ ಇಲ್ಲ. ದಯವಿಟ್ಟು ನೀವೇ ಏನಾದ್ರು ಮಾಡಿ" ಎಂದು ಕೇಳಿಕೊಂಡರು. ಅದಕ್ಕೆ ಸರಿ ಎಂದ ಭರಣಯ್ಯನವರು ಸುಬ್ಬೇಗೌಡರನ್ನು ತಮ್ಮ ಮನೆಗೇ ಕರೆದುಕೊಂಡು ಹೋದರು. ತಿನ್ನಲು ಉಪ್ಪಿಟ್ಟುಕೊಟ್ಟು ಉಪಚರಿಸಿ ನಂತರ ಸುಬ್ಬೇಗೌಡರ ವಿವರ ಕೇಳಿದರಂತೆ. ಅದಕ್ಕಿವರು "ಸಾರ್ ನಾನು ಕೆ.ಆರ್.ಪೇಟೆಯ ಕಿಕ್ಕೇರಿ ಬಳಿಯ ಗ್ರಾಮದವನು" ಎಂದರಂತೆ. ಅದಕ್ಕೆ ಭರಣಯ್ಯ "ಏನು ಕೆ.ಆರ್.ಪೇಟೇನಾ! ನಾನು ಮೊದಲು ಅಲ್ಲಿ ಆಹಾರ ನಿರೀಕ್ಷಕನಾಗಿ ಕೆಲಸ ಮಾಡಿದ್ದೆ" ಎಂದು ಕೆ.ಆರ್. ಪೇಟೆಯೊಂದಿಗಿನ ತಮ್ಮ ನಂಟನ್ನು ಹೇಳಿಕೊಂಡರು. "ಅಲ್ಲಿಯ ಸೀಳನೆರೆ ಗ್ರಾಮದ ಮುಖಂಡರು ನನಗೆ ಬೆಳ್ಳಿ ತಟ್ಟೆಯಲ್ಲಿ ಊಟಹಾಕಿದ್ದರು" ಎಂದು ಅಲ್ಲಿನ ಜನರ ಪ್ರೀತಿಯನ್ನು ನೆನಪು ಮಾಡಿಕೊಂಡರು. ನಂತರ ಸಂದರ್ಶನದ ದಿನಾಂಕವನ್ನು ಸುಬ್ಬೇಗೌಡರಿಗೆ ತಿಳಿಸಿ ಆ ದಿನ ಬರುವಂತೆ ಹೇಳಿ ಊರಿಗೆ ಕಳುಹಿಸಿದರು.

ಆ ದಿನ ಮೈಸೂರಿನಲ್ಲಿ ಸಂದರ್ಶನ ಇತ್ತು. ಭರಣಯ್ಯ ಚಾಮುಂಡಿ ಗೆಸ್ಟ್ ಹೌಸ್‌ನಲ್ಲಿ ಉಳಿದುಕೊಂಡಿದ್ದರು. ಸುಬ್ಬೇಗೌಡರು ಮತ್ತೊಬ್ಬರ ಜೊತೆಯಲ್ಲಿ ಭರಣಯ್ಯನವರನ್ನು ಕಾಣಲು ಬೆಳಿಗ್ಗೆ 7 ಘಂಟೆಗೆ ಹೋದರು. ಸಂದರ್ಶನ ಇದ್ದುದ್ದು 9 ಘಂಟೆಗೆ. ಇವರ ಗುರುತು ಮರೆತಿದ್ದ ಭರಣಯ್ಯ "ಅಲ್ಲಾರೀ... ಮೊದಲೇ ಬಂದು ಹೇಳಬಾರ್ದ, ಈಗ ಬಂದಿದ್ದೀರಲ್ಲ?" ಎಂದು ಹೇಳಿದರು. ಅದಕ್ಕೆ ಸುಬ್ಬೇಗೌಡರು "ಸಾರ್ ನಾನು ಅವತ್ತು ಬಂದು ನಿಮ್ಮನ್ನು ಭೇಟಿಯಾಗಿದ್ದೆ. ನೀವೇ ಸಂದರ್ಶನದ

ದಿನಾಂಕ ಕೊಟ್ಟಿದ್ದಿರಿ" ಎಂದರು. ಆಗ ಭರಣಯ್ಯ "ಸರಿ ಹಾಗಿದ್ದರೆ 10 ಘಂಟೆಗೆ ಸಂದರ್ಶನಕ್ಕೆ ಬನ್ನಿ" ಎಂದರು. 10 ಘಂಟೆಗೆ ಸಂದರ್ಶನ ಪ್ರಾರಂಭವಾಯಿತು. ಸುಬ್ಬೇಗೌಡರ ಸರದಿ. ಸಂದರ್ಶಕರು ಕೇಳಿದ ಪ್ರಶ್ನೆಗಳಿಗೆಲ್ಲ ಇವರು ಪಟಪಟನೆ ಉತ್ತರ ಹೇಳಿದರು. ಇವರ ಉತ್ತರಗಳಿಂದ ಸಂದರ್ಶಕರು ಬಹಳ ಖುಷಿಯಾದರು. ಸಂದರ್ಶನ ಆದ ಎರಡು ತಿಂಗಳುಗಳವರೆಗೂ ಸುಬ್ಬೇಗೌಡರಿಗೆ ಯಾವುದೇ ಕೆಲಸದ ಆದೇಶ ಬರಲಿಲ್ಲ. ಇದರಿಂದ ಕಂಗಾಲಾದ ಅವರು ಹೇಗೋ ಕಷ್ಟಪಟ್ಟು ಬೆಂಗಳೂರಿಗೆ ಹೋಗಿ ಭರಣಯ್ಯನವರನ್ನು ಭೇಟಿಯಾದರು. ಅಷ್ಟೊತ್ತಿಗೆ ಭರಣಯ್ಯ ಇವರ ವಿಚಾರ ಮರೆತೇ ಬಿಟ್ಟಿದ್ದರು. "ಅಲ್ರೀ ಡಾಕ್ಟ್ರೇ, ನೀವು ಆಗಾಗ ಬಂದು ನನಗೆ ರಿಮೈಂಡ್ ಮಾಡೋದಲ್ವ. ನನಗೆ ಮರತೇ ಹೋಗಿತ್ತು" ಎಂದರು. ಆಗ ಗೌಡರು "ಸಾರ್ ನನಗೆ ತುಂಬ ಕಷ್ಟ ಬೆಂಗಳೂರಿಗೆ ಬರಲು ಬಸ್ ಚಾರ್ಜಿಗೂ ಕಾಸಿರಲಿಲ್ಲ. ಹೇಗೋಬಂದೆ ದಯವಿಟ್ಟು ಏನಾದ್ರು ಮಾಡಿ" ಎಂದು ಕೇಳಿಕೊಂಡರು. ಆಗ ಭರಣಯ್ಯ ಹೇಳಿದ ಮಾತು ನೆನೆದು ಸುಬ್ಬೇಗೌಡರು ಈಗಲೂ ಕೈ ಮುಗಿಯುತ್ತಾರೆ. "ನೀನೇನು ಹೆದರಬೇಡ, ಈ ಪಟ್ಟಿಯಲ್ಲಿ ನಿನ್ನ ಹೆಸರಿರದಿದ್ದರೆ ನಮ್ಮ ಕೆಟಗರಿಯಿಂದಲೇ ಒಂದು ಸೀಟನ್ನು ತೆಗೆದು ನಿನಗಾಗಿ ಕೊಡುತ್ತೇನೆ. ನಿನಗೆಂದೂ ಮೋಸ ಆಗುವುದಿಲ್ಲ. ಧೈರ್ಯವಾಗಿರು" ಎಂದರು.

"ಆ ಪುಣ್ಯಾತ್ಮನನ್ನು ತಂಪು ಹೊತ್ತಿನಲ್ಲಿ ನೆನೆಯಬೇಕು" ಎಂದು ಭಾವುಕರಾದರು ಸುಬ್ಬೇಗೌಡರು. ತಕ್ಷಣ ಪಿ.ಎಸ್.ಸಿ. ಸೆಕ್ರೆಟರಿಗೆ ಹೋಗಿದ್ದ ಫೈಲನ್ನು ಹಿಂದೆ ತರಿಸಿ ನೋಡಿದರು. ಅದೃಷ್ಟವೆಂಬಂತೆ ಅಲ್ಲಿದ್ದ 300 ಜನರ ಪಟ್ಟಿಯಲ್ಲಿ ನನ್ನದು 62ನೆಯ ಹೆಸರಾಗಿತ್ತು. ನಂತರ ನನಗೆ ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನ ಸಂತೆ ಬಾಚಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿತು". ಸುಬ್ಬೇಗೌಡರು ಕೆಲಸ ಮಾಡುತ್ತಿದ್ದಾಗ ಒಂದು ದಿನ ಪೇಪರ್‌ನಲ್ಲಿ ಬಂದ ಸುದ್ದಿ ನೋಡಿ ಆಘಾತಗೊಂಡರು "ಭರಣಯ್ಯನವರಿಗೆ ಹೃದಯಘಾತವಾಗಿ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದಾರೆ" ಎಂದು. ತಕ್ಷಣ ಕೆಲಸಕ್ಕೆ ರಜೆ ಹಾಕಿ ಬೆಂಗಳೂರಿಗೆ ಹೋದರು. ಐದಾರು ದಿನ ಅಲ್ಲೇ ಇದ್ದು ಅವರಿಗೆ ಅಗತ್ಯವಾಗಿದ್ದ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿದರು. ಆ ಪರೀಕ್ಷೆಗಳಿಗೆ ದುಡ್ಡು ಕೊಡಲು ಬಂದ ಭರಣಯ್ಯನವರಿಗೆ "ಬೇಡ ಸಾರ್, ನಿಮ್ಮ ಋಣ ನನ್ನ ಮೇಲಿದೆ, ನಿಮ್ಮ ಸೇವೆ ಮಾಡುವ ಮೂಲಕ ಅದನ್ನು ತೀರಿಸಲು ಪ್ರಯತ್ನಪಡುತ್ತೇನೆ" ಎಂದು ನಿರಾಕರಿಸಿದರು ಸುಬ್ಬೇಗೌಡರು. ಭರಣಯ್ಯ ಒಮ್ಮೆ ಅವರ ಪತ್ನಿಯ ಬಳಿ ಹೇಳಿದರಂತೆ "ನೋಡು, ಅವನಿಗೆ ನಾನು ಯಾವತ್ತೋ ಸಹಾಯ ಮಾಡಿದ್ದೆ, ಈಗ ಅವನು ರಜಾ ಹಾಕಿ ಬಂದು ನನ್ನ ಸೇವೆ ಮಾಡುತ್ತಿದ್ದಾನೆ, ಭೂಮಿಯ ಮೇಲೆ ಇಂಥಾ ಜನಗಳು ಇದ್ದಾರಲ್ಲ" ಎಂದು ಆತ್ಮೀಯವಾಗಿ ಸ್ಮರಿಸುತ್ತಿದ್ದರಂತೆ. ನಂತರ ಸುಬ್ಬೇಗೌಡರು ಹೇಳಿದ್ದು ಅವರ

ಗುಣದ ಬಗ್ಗೆ, "ಅವರೊಬ್ಬ ಸಂಸ್ಕೃತ ಪಂಡಿತ, ನಮ್ಮವರಿಗೆ ಮಾತ್ರ ಸಹಾಯ ಮಾಡಬೇಕು ಎಂಬ ಸ್ವಾರ್ಥ ಇರಲಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದರು. ಅವರು ಎಷ್ಟು ಮೃದು ಹೃದಯ ಎಂದರೆ, ನಾನು ಹೋಗಿ ಅವರಲ್ಲಿ ಕಷ್ಟ ಹೇಳಿಕೊಂಡೆ. ನಾನು ರೈತಾಪಿ ಕುಟುಂಬದಿಂದ ಬಂದವನು, ತುಂಬ ಬಡತನ ಅಂದ ತಕ್ಷಣ ಕಣ್ಣೀರು ಹಾಕಿಬಿಟ್ಟರು. ಆಗ ಬರಗಾಲ, ಕುಡಿಯಲು ನೀರೂ ಸಿಗುತ್ತಿರಲಿಲ್ಲ. ಅಂತ ಕಷ್ಟಕಾಲದಲ್ಲೇ ನಾನು ಎಂ.ಬಿ.ಬಿ.ಎಸ್ ಮಾಡಿದ್ದೆ. ಸರಳ ಸ್ವಭಾವದ ಭರಣಯ್ಯನವರು ಯಾವ ವ್ಯಕ್ತಿಯಾದರೂ, ಹಿಂದುಳಿದವರಾದರೂ, ಅವರ ಅಟೆಂಡರ್ ಆದರೂ ಗೌರವದಿಂದಲೇ ಮಾತಾಡಿಸುತ್ತಿದ್ದರು. ಅವರ ನೋವುಗಳಿಗೆ ಸ್ಪಂದಿಸುತ್ತಿದ್ದರು. ಯಾವ ನಿರೀಕ್ಷೆಯಿಲ್ಲದೆ ಕೆಲಸ ಮಾಡುತ್ತಿದ್ದರು. ಬೇರೆ ಅಧಿಕಾರಿಗಳು ನಮ್ಮನ್ನು ಮಾತಾಡಿಸುವುದೂ ಕಷ್ಟ. ಆದರೆ ಇವರು ಅವರಿಗಿಂತ ಭಿನ್ನವಾಗಿದ್ದರು. "ಏನೋ ಮರಿ, ಎಂ.ಬಿ.ಬಿ.ಎಸ್ ಮಾಡಿದ್ದೀಯ. ಯಾರೂ ಬಲೆ ಬೀಸಲಿಲ್ಲವೇನೋ ಹೆಣ್ಣು ಕೊಡ್ತೀನಿ ಅಂತ" ಎಂದು ನಗುನಗುತ್ತಾ ಮಾತನಾಡಿಸುತ್ತಿದ್ದರು. "ನನ್ನ ಕಾಲ ಮೇಲೆ ನಿಲ್ಲುವ ತನಕ ಯಾವ ಮದುವೆಯೂ ಇಲ್ಲ ಸರ್" ಎಂದು ಹೇಳಿದ್ದನ್ನು ಕೇಳಿ ಖುಷಿಪಟ್ಟಿದ್ದರು".

"ನಾನು ಮುನಿಸಿಪಲ್ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದಿದವನು, ಅಲ್ಲಿ ಕೊಡುತ್ತಿದ್ದ ಅನ್ನದಲ್ಲಿ ಅಷ್ಟೆ ಪ್ರಮಾಣದ ಕಲ್ಲಿರುತ್ತಿತ್ತು. ಸುಮ್ಮನೆ ತಿನ್ನಲಾಗುತ್ತಿರಲಿಲ್ಲ, ಕಲ್ಲನ್ನು ಪಕ್ಕಕ್ಕೆ ಸರಿಸಿ ಅನ್ನ ತಿನ್ನುವಷ್ಟರಲ್ಲಿ ಸಾಕಾಗಿ ಹೋಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಬೆಳೆದವನು ನಾನು. ಆಗೆಲ್ಲ ಖಾಸಗೀ ಆಸ್ಪತ್ರೆಗಳು ಜಾಸ್ತಿ ಇರಲಿಲ್ಲ. ಪ್ರತಿಯೊಂದಕ್ಕೂ ಸರ್ಕಾರವನ್ನೇ ಅವಲಂಬಿಸಬೇಕಾಗಿತ್ತು. ನಾನಂತು ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನದಲ್ಲೇ ಓದುಮುಗಿಸಿದೆ. ಅಂಕಪಟ್ಟಿಗೆ ಐದು ರೂ ಖರ್ಚುಮಾಡಿದ್ದು ಬಿಟ್ಟರೆ ಯಾವ ಖರ್ಚನ್ನು ಮಾಡಲಿಲ್ಲ. ಇದನ್ನೆಲ್ಲ ಕೇಳಿ ಭರಣಯ್ಯ ಕಣ್ಣೀರು ಹಾಕಿದ್ದರು. ಅದನ್ನು ನೋಡಿ ನನಗನ್ನಿಸುತ್ತಿತ್ತು. 'ಇವರು ಸಾಮಾನ್ಯ ಮನುಷ್ಯರಲ್ಲ ದೈವಾಂಶ ಸಂಭೂತರು' ಎಂದು. ಅವತ್ತಿನ ಕಾಲದಲ್ಲಿ Untouchablety ಇತ್ತು. ಪರಿಶಿಷ್ಟ ಜಾತಿಯವರು ಎಂದರೆ ಎಲ್ಲರಿಗೂ ತಾತ್ಸಾರ ಮನೋಭಾವ. ಅಂತಹ ಕಾಲದಲ್ಲೇ ಸೀಳನೆರೆ ಸಾಹುಕಾರರು ಬೆಳ್ಳಿತಟ್ಟೆ ಬೆಳ್ಳಿಲೋಟದಲ್ಲಿ ಇವರಿಗೆ ಊಟ ಹಾಕಿದ್ದರು ಎಂದರೆ, ಇವರು ಯಾವ ರೀತಿಯಲ್ಲಿ ಸವರ್ಣೀಯರ ಮನಸ್ಸು ಗೆದ್ದಿದ್ದರು ಎಂಬುದು ತಿಳಿಯುತ್ತದೆ. ಅವರ ಜೊತೆ ಮಾತಾಡುವಾಗ ನಮ್ಮ ಕೆ.ಆರ್. ಪೇಟೆಯ ಶಾಸಕರಾಗಿದ್ದ ಎಸ್.ಎಂ. ಲಿಂಗಪ್ಪನವರ ಹೆಸರು ಹೇಳಿದೆ, ಅದಕ್ಕೆ ಭರಣಯ್ಯ "ನಾನು ಅವರ ಮನೆಯಲ್ಲಿ ಹಾಲು ಅನ್ನ ತಿಂದಿದ್ದೇನೆ ಕಣಪ್ಪಾ, ಬಾ ನಿನಗೆ ಕೆಲಸ ಕೊಟ್ಟು ಆ ಋಣ ತೀರಿಸುತ್ತೇನೆ" ಎಂದರು. ಅಲ್ಲದೆ ಅವರು ಅವರ ಕೆಳಗಿನ ಅಧಿಕಾರಿಗಳಿಗೆ ತುಂಬಾ ಗೌರವ ಕೊಡುತ್ತಿದ್ದರು.

ನಾನೊಮ್ಮೆ ನನ್ನ ಕೆಲಸದ ವಿಚಾರವಾಗಿಯೇ ಕೆ.ಆರ್. ತಿಮ್ಮೇಗೌಡ ಎನ್ನುವ ನಮ್ಮ ತಾಲ್ಲೂಕಿನ ಅಧಿಕಾರಿಯನ್ನು ಭರಣಯ್ಯನವರ ಹತ್ತಿರ ಕರೆದುಕೊಂಡು ಹೋಗಿದ್ದೆ. ತಿಮ್ಮೇಗೌಡರು ಭರಣಯ್ಯನವರ Under Secretary ಆಗಿ ಕೆಲಸ ಮಾಡಿದ್ದರು. ತಿಮ್ಮೇಗೌಡರನ್ನು ಕಂಡೊಡನೆಯೇ ಭರಣಯ್ಯ ಎದ್ದು ನಿಂತರು "ಏನ್ ಗೌಡ್ರೇ, ನೀವ್ಯಾಕೆ ಬರೋಕೆ ಹೋದ್ರಿ, ಒಂದು ಚೀಟಿ ಕಳಿಸಿದ್ರೆ ಆಗ್ತಿತ್ತು. ನೀವೇನು ಚಿಂತೆ ಮಾಡಬೇಡಿ. ನಾನು ಇವನನ್ನ Select ಮಾಡ್ತೀನಿ ನನ್ನ ಮನಸ್ಸಿಗೆ ಬಂದು ಬಿಟ್ಟಿದೆ" ಎಂದು ಭರವಸೆ ಕೊಟ್ಟರು. "ಅವರಿಲ್ಲದಿದ್ದರೆ ನಾನೀಗ ಎಲ್ಲಿರುತ್ತಿದ್ದೆನೋ" ಎಂದು ಈಗಲೂ ಅನ್ನಿಸುತ್ತದೆ. **ಆ ಪುಣ್ಯಾತ್ಮ ಮತ್ತೆ ಹುಟ್ಟಿಬರಲಿ".**

ವಿದ್ಯೆಗೆ ದಿಕ್ಕಾದರು

ಡಾ. ಎಸ್. ಎಂ. ಶೇಷಣ್ಣ
ನಿವೃತ್ತ ಸರ್ಕಾರಿ ವೈದ್ಯಾಧಿಕಾರಿಗಳು.

"ಭರಣಯ್ಯ ಬಹಳ ಒಳ್ಳೆಯ ವ್ಯಕ್ತಿ. ಅವರನ್ನು ನಾನು ಸಾಯೋವರೆಗೂ ಮರೆಯೋ ಹಾಗಿಲ್ಲ. ಅವರಿಂದಾಗಿಯೇ ಇಂದು ನಾನು ವೈದ್ಯನಾಗಿದ್ದೇನೆ" ಎಂದು ಅವರ ನೆನಪು ಮಾಡಿಕೊಂಡು, ಅವರಿಂದ ಬದುಕು ಕಂಡುಕೊಂಡವರು ಡಾ. ಎಸ್. ಎಂ. ಶೇಷಣ್ಣ.

ಸರ್ಕಾರಿ ವೈದ್ಯಾಧಿಕಾರಿಯಾಗಿದ್ದರು. 1996ರಲ್ಲಿ ನಿವೃತ್ತಿಯಾಗಿ ಈಗ ಖಾಸಗೀ ಆಸ್ಪತ್ರೆಯಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಮೈಸೂರು ತಾಲ್ಲೂಕು ಜಯಪುರ ಹೋಬಳಿಯ ಸಿಂಧುವಳ್ಳಿ ಗ್ರಾಮದವರಾದ ಶೇಷಣ್ಣ. ಭರಣಯ್ಯನವರೊಂದಿಗಿನ ತಮ್ಮ ಒಡನಾಟವನ್ನು ನೆನಸಿಕೊಂಡಿದ್ದು ಹೀಗೆ:

"ನಮ್ಮೂರಿನಲ್ಲಿ ಆಗ ಕೇವಲ ಏಳನೇ ತರಗತಿಯವರೆಗೆ ಮಾತ್ರ ಶಾಲೆ ಇತ್ತು. ಏಳನೆಯ ತರಗತಿ ಆದ ನಂತರ ನಮ್ಮೂರ ಹುಡುಗರೆಲ್ಲ ಪಕ್ಕದ ಊರಿಗೆ ಹೋಗಿ ಓದಬೇಕಾಗಿತ್ತು. ಆದರೆ ಅಲ್ಲಿ ದಲಿತ ಮಕ್ಕಳಿಗೆ ಪ್ರವೇಶ ಇರಲಿಲ್ಲ. ಹೀಗಾಗಿ ನಮ್ಮ ಊರಿನಲ್ಲಿಯೇ ದಲಿತ ಮಕ್ಕಳಿಗಾಗಿ ಶಾಲೆ ತೆರೆಯಲು ಎಂ. ರಂಗಯ್ಯ ಎಂಬುವವರು ಮುಂದೆ ಬಂದರು. ರಂಗಯ್ಯನವರು ಭರಣಯ್ಯನವರ ಜೊತೆಯಲ್ಲಿ ಓದಿದವರು. ಅವರಿಬ್ಬರು ಎ. ಕೆ. ಬೋರ್ಡಿಂಗ್ ಹೋಂನಲ್ಲಿ ಓದಿದ್ದರು. ಹೀಗಾಗಿ ರಂಗಯ್ಯನವರಿಗೆ ಶಾಲೆ ತೆರೆಯಲು ನಮ್ಮ ಮನೆಯಲ್ಲೇ ಒಂದು ರೂಮ್ ಕೊಟ್ಟೆವು. ಅವರು ನಮ್ಮಣ್ಣ ಮತ್ತು ನನಗೆ ಮೇಷ್ಟ್ರಾಗಿದ್ದರು. ನಾನು ಪಿ.ಯು.ಸಿ. ಪಾಸಾದ ಮೇಲೆ ಬಿ.ಎಸ್ಸಿಗೆ

ಸೇರಿಕೊಂಡೆ. ಮೊದಲನೇ ವರ್ಷ ಪಾಸಾಯಿತು. ಎರಡನೇ ವರ್ಷ ಓದುತ್ತಿದ್ದೆ. ಆಗ ನನ್ನ ಸಹಪಾಠಿಗಳೆಲ್ಲ. 'ನಿನ್ನ ಪಿ.ಯು.ಪಿ. Percentage ಜಾಸ್ತಿ ಇದೆ. ನೀನೇಕೆ ಮೆಡಿಕಲ್ ಕಾಲೇಜಿಗೆ ಸೇರಬಾರದು?' ಎಂದು ನನ್ನನ್ನು ಹುರಿದುಂಬಿಸಿದರು. ನನಗೂ ಮೆಡಿಕಲ್‌ನಲ್ಲಿ ಆಸಕ್ತಿ ಇತ್ತು. ಹೀಗಾಗಿ ಅಣ್ಣನ ಬಳಿ ಕೇಳಿದೆ. ಅದಕ್ಕವರು 'ನಾನು ಬಡಮೇಷ್ಟ್ರು ಕಣಪ್ಪ ಓದಿಸೋಕೆ ಆಗಲ್ಲ' ಎಂದುಬಿಟ್ಟರು. ಆದರೂ ನನ್ನ ಆಸಕ್ತಿಕಂಡು ಹುಡುಗರೆಲ್ಲ 'ನೀನು Application ಹಾಕು ಸೀಟು ಸಿಕ್ಕರೂ ಸಿಗಬಹುದು' ಎಂದರು. ನಾನು ಅರ್ಜಿ ಹಾಕಿದೆ. ಸೀಟು ಸಿಕ್ಕೇಬಿಟ್ಟಿತು. ಬಿ.ಎಸ್ಸಿ. ಅರ್ಧಕ್ಕೆ ನಿಲ್ಲಿಸಿ ಮೆಡಿಕಲ್ ಕಾಲೇಜು ಸೇರಿಕೊಂಡೆ. ಕಾಲೇಜಿನಲ್ಲಿ ಎಲ್ಲರಿಗೂ ವಿದ್ಯಾರ್ಥಿವೇತನದ ಅರ್ಜಿ ಕೊಡುತ್ತಿದ್ದರು. ನಾನು ಅರ್ಜಿಕೇಳಿದೆ. ನನ್ನ ವಿವರವನ್ನೆಲ್ಲಾ ಕೇಳಿ ಅರ್ಜಿಕೊಟ್ಟರು. ಅರ್ಜಿಯಲ್ಲಿ ಬಿ.ಎಸ್ಸಿ. Incomplete ಎಂದು ಬರೆದಿದ್ದರಿಂದ ಅಲ್ಲಿಂದ ಆದೇಶ ಬಂತು. 'ನೀವು ಒಂದು ಕೋರ್ಸ್ ಬಿಟ್ಟು ಮತ್ತೊಂದು ಕೋರ್ಸ್‌ಗೆ ಸೇರಿಕೊಂಡಿದ್ದರಿಂದ ನಿಮಗೆ ವಿದ್ಯಾರ್ಥಿ ವೇತನ ಕೊಡಲಾಗುವುದಿಲ್ಲ' ಎಂದು. ಹೀಗಾಗಿ ನನಗೆ Scholarship ಸಿಗಲಿಲ್ಲ. ನಾನು ಬೇರೆ ರೂಮು ಮಾಡಿಕೊಂಡು ಓದತೊಡಗಿದೆ. ರೂಮ್‌ನಲ್ಲಿ ಓದಲಾಗದೆ, ನಾನು ಪ್ರಥಮ ವರ್ಷದ ಎಂ.ಬಿ.ಬಿ.ಎಸ್.ನಲ್ಲಿ ಫೇಲಾದೆ. ರೂಮಿನಲ್ಲಿ ನನ್ನ ಕೆಲಸವನ್ನೆಲ್ಲಾ ನಾನೇ ಮಾಡಬೇಕಾದ್ದರಿಂದ ಓದಲು ಸಮಯ ಸಿಗುತ್ತಿರಲಿಲ್ಲ. ಈ ವಿಚಾರವನ್ನು ರಂಗಯ್ಯನವರ ಬಳಿ ಹೇಳಿಕೊಂಡೆ. ಅದಕ್ಕವರು 'ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಾದ ಶ್ರೀ ಆರ್. ಭರಣಯ್ಯ ಅಂತ ಒಬ್ಬರು ಇದ್ದಾರೆ. ಬಹಳ ಶಿಸ್ತಿನ ಮನುಷ್ಯ. ನೀತಿ ನಿಯಮ ಪಾಲಿಸುತ್ತಾರೆ. ಅವರು ಎಲ್ಲರಿಗೂ ಸಹಾಯ ಮಾಡುತ್ತಾರೆ. ಅವರ ಬಳಿ ಹೋದರೆ ನಿನ್ನ ತೊಂದರೆ ನಿವಾರಿಸುತ್ತಾರೆ. ಅವರು ಮೈಸೂರಿಗೆ ಬಂದಾಗ ಕರೆದುಕೊಂಡು ಹೋಗ್ತೀನಿ ಇರು' ಎಂದರು. ಮುಂದೊಂದು ದಿನ ಅವರು ಚಾಮುಂಡಿ ಗೆಸ್ಟ್‌ಹೌಸ್‌ಗೆ ಬಂದರೆಂದು ತಿಳಿಯಿತು. ಆಗ ಅಲ್ಲಿಗೆ ರಂಗಯ್ಯನವರ ಜೊತೆ ಹೋದೆ. ಅಲ್ಲಿ ಭರಣಯ್ಯ ನನ್ನ ವಿವರವನ್ನೆಲ್ಲ ಕೇಳಿದರು. ನಂತರ ನಮ್ಮ ಮೇಷ್ಟ್ರು 'ನಾನು ಸೋಸಲೆ ರಂಗಯ್ಯ ಅಂತ' ಎಂದು ತಮ್ಮನ್ನು ಪರಿಚಯಿಸಿಕೊಂಡರು. ಬಹುಶಃ ಭರಣಯ್ಯ ಮರೆತಿದ್ದರು. 25 ವರ್ಷ ಆಗಿತ್ತು. 'ಸೋಸಲೆ ರಂಗಯ್ಯ' ಎಂಬ ಹೆಸರು ಕಿವಿಗೆ ಬಿದ್ದದ್ದೇ ತಡ. ಭರಣಯ್ಯನವರಿಗೆ ಹುಮ್ಮಸ್ಸು ಬಂದುಬಿಡ್ತು. ತಟ್ಟನೆ ಎಂದು ನಿಂತರು. ಸುತ್ತೆಲ್ಲ ತುಂಬ ಜನ ಅಧಿಕಾರಿಗಳು, ಜನಗಳು ಇದ್ದರು. ಅಲ್ಲಿಂದ ಓಡಿಬಂದು ರಂಗಯ್ಯನನ್ನು ತಬ್ಬಿಕೊಂಡು. ನಿಜಕ್ಕೂ ಆಕ್ಷಣ ನೋಡಿದವರಿಗೇ ಮಾತ್ರ ಗೊತ್ತು. ಆಗ ಭರಣಯ್ಯ ಏನು ಹೇಳಿದರು ಗೊತ್ತಾ..? "ರಂಗಣ್ಣ, ನೀನೇ ಅಲ್ವಾ ಸೋಸಲೆ ರಂಗಣ್ಣ. ನಾನು ಮರೆತಿಲ್ಲ

ರಂಗಣ್ಣ. ನನಗೆ ಕಜ್ಜಿ ಆಗಿದ್ದಾಗ ನೀನು ಸೋಪು ಹಾಕಿ ತೊಳೆದು ಅದಕ್ಕೆ ಔಷಧಿ ಹಚ್ಚುತ್ತಿದ್ದೆಯಲ್ಲ ಅದನ್ನ ಮರೆತಿಲ್ಲ ರಂಗಣ್ಣ" ಎಂದು. ಬಹುಶಃ ಬೇರೆ ಅಧಿಕಾರಿಯಾಗಿದ್ದರೆ ಅವರನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಮಾತಾಡಿಸುತ್ತಿದ್ದರು. ಭರಣಯ್ಯ ಎಲ್ಲರ ಎದುರಿಗೇ ತಮ್ಮ ಬಾಲ್ಯವನ್ನು ನೆನೆಸಿಕೊಂಡರು. ರಂಗಣ್ಣನವರನ್ನು ತಬ್ಬಿಕೊಂಡು ಎಳೆಮಕ್ಕಳಂತೆ ಅಳುತ್ತಿದ್ದರು. ನಂತರ ಭರಣಯ್ಯನವರು ರಂಗಣ್ಣನವರಿಗೆ ಏನಾಗಬೇಕೆಂದು ಕೇಳಿದರು. ಆಗ ರಂಗಯ್ಯನವರು 'ಇವನಿಗೆ ಬಿ.ಎಸ್ಸಿ. ಅರ್ಧಕ್ಕೆ ನಿಲ್ಲಿಸಿ ಬಂದಿದ್ದಾನೆಂದು ವಿದ್ಯಾರ್ಥಿ ವೇತನ ನಿಲ್ಲಿಸಿದ್ದಾರೆ. ಸ್ವಲ್ಪ ಸಹಾಯ ಮಾಡಿ' ಎಂದರು. ಆಗ ಭರಣಯ್ಯ 'ಕೋರ್ಸ್ ಏನಾದ್ರು ಚೇಂಜ್ ಮಾಡು ಪರವಾಗಿಲ್ಲ, ಆದ್ರೆ ಫೇಲ್ ಆಗಿದ್ದೀಯ?' ಎಂದು ಕೇಳಿದರು. ನಾನು 'ಇಲ್ಲ' ಎಂದೆ. ಆಗ ಅವರು ಅಧಿಕಾರಿಯನ್ನು ಕರೆದು 'ಅವನು ಫೇಲ್ ಆಗಿಲ್ಲ, ಮತ್ಯಾಕೆ ಅವನಿಗೆ ವಿದ್ಯಾರ್ಥಿವೇತನ ನಿಲ್ಲಿಸಿದ್ದೀರಾ?' ಎಂದು ಕೇಳಿದರು. ಆಗ ಒಂದು ನಿಯಮ ಇತ್ತು. ಒಮ್ಮೆ ಫೇಲ್ ಆದರೆ ವಿದ್ಯಾರ್ಥಿವೇತನ ಸಿಗುತ್ತಿತ್ತು. ಎರಡನೇ ಬಾರಿ ಫೇಲ್ ಆದರೆ ಸಿಗುತ್ತಿರಲಿಲ್ಲ. ನಂತರ ಭರಣಯ್ಯ 'ಆಯ್ತಪ್ಪ. ನಿನ್ನ ವಿಚಾರ ಅಲ್ಲಿ ಪರಿಶೀಲಿಸುತ್ತೇನೆ' ಎಂದು ಹೇಳಿ ಅವರ ಸಹಾಯಕನನ್ನು ಕರೆದು ನನ್ನ ವಿವರವನ್ನೆಲ್ಲ ಬರೆದುಕೊಂಡರು. 'ಇನ್ನು ಎಂಟು ದಿನದಲ್ಲಿ ನಿನಗೆ ವಿದ್ಯಾರ್ಥಿ ವೇತನ ಸಿಗುವ ಹಾಗೆ ಮಾಡುತ್ತೀನಿ. ಸರಿಯಪ್ಪಾ' ಎಂದರು. 'ನೀನು ಚೆನ್ನಾಗಿ ಓದಬೇಕು' ಅಂತ ನನ್ನ ಬೆನ್ನುತಟ್ಟಿದರು. ಅವರ ಮಾತಿನಂತೆ ನಾಲ್ಕೇ ದಿನದಲ್ಲಿ ವಿದ್ಯಾರ್ಥಿ ವೇತನದ ಚೆಕ್ ನನ್ನ ಕಾಲೇಜಿಗೆ ಬಂದಿತು. ಅದರಿಂದಾಗಿಯೇ ನಾನು ಶಿಕ್ಷಣ ಮುಂದುವರೆಸುವುದು ಸಾಧ್ಯವಾಯಿತು.


ನಾನು ಓದುತ್ತಿದ್ದಾಗಲೇ ಅವರನ್ನು ಕಂಡಿದ್ದೆ. ಅವರನ್ನು ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ ಕರೆಸುತ್ತಿದ್ದೆವು. ನಮ್ಮ ಹಾಸ್ಟೆಲ್ ಇದ್ದ ಜಾಗವನ್ನು ಗಣೇಶ ಬೀಡಿಯವರು ಕೊಂಡುಕೊಂಡರು. ನಂತರ ಆಗಿನ ವಿದ್ಯಾರ್ಥಿ ಮುಖಂಡರು, ಬಸವಲಿಂಗಪ್ಪ ರಾಚಯ್ಯನವರೆಲ್ಲ ಭರಣಯ್ಯನವರ ಬಳಿ ಹೇಳಿಕೊಂಡರು. ಆಗ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿಯೇ ಗೌತಮ್ ಹಾಸ್ಟೆಲ್ ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ದಲಿತರಿಗೆ ಸೌಲಭ್ಯಗಳು ಸಿಕ್ಕಿದ್ದು ಇಂತಹ ಅಧಿಕಾರಿಗಳು ಮತ್ತು ರಾಜಕಾರಣಿಗಳಿಂದ. ಅಂತಹ ಅಧಿಕಾರಿಗಳನ್ನು ನಾನು ಎಂದಿಗೂ ನೋಡಲಿಲ್ಲ. ಅಂತಹ ಅಧಿಕಾರಿಗಳು ನೂರು ಜನ ಬೇಕಾಗಿಲ್ಲ. ಕೇವಲ ಐದು ಜನ ಸಾಕು.

ಭರಣಯ್ಯ ಯಾವಾಗಲು ಶಿಕ್ಷಣದ ಬಗ್ಗೆ ಮಾತಾಡುತ್ತಿದ್ದರು. ಚೆನ್ನಾಗಿ ಓದುವಂತೆ ನಮಗೆ ಕರೆ ನೀಡುತ್ತಿದ್ದರು. ಅವರನ್ನ ನಾವೆಲ್ಲರೂ ಸಾಯೋವರೆಗೂ ಮರೆಯುವ ಹಾಗಿಲ್ಲ.

ಅಲೆ – ಎರಡು

ಕಂಡವರ ಕಣ್ಣಲ್ಲಿ

ಸಂದರ್ಶನಗಳು



ಭರಣಿ ಮಳೆ ಬಂದ್ಹಾಂಗೆ...

ಡಾ. ಸಿದ್ಧಲಿಂಗಯ್ಯ

.... ಆದರೆ ಇಷ್ಟು ಮಾತ್ರ ನಾನು ಕೇಳಿದ್ದೇನೆ ಆರ್. ಭರಣಯ್ಯನವರು ಯಾವುದೇ ಇಲಾಖೆಗೆ ಹೋದರೂ ಅತ್ಯಂತ ದಕ್ಷತೆಯಿಂದ, ಚಾಣಾಕ್ಷತನದಿಂದ ದಲಿತರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟರು. ಅವರು ಕೇವಲ ದಲಿತರಿಗೆ ಮಾತ್ರವೇ ಅಲ್ಲ ಕಷ್ಟದಲ್ಲಿರುವ ಇತರೇ ಜನವರ್ಗಗಳ ಬಡವರಿಗೂ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟಿದ್ದರು. ಅವರು ಯಾವುದೇ ಒಂದು ಜಾತಿಗೆ ಸೀಮಿತವಾಗಿರದೇ ಎಲ್ಲಾ ಜಾತಿಯ ಬಡವರಿಗೂ ಸಹಾಯ ಮಾಡಿದ ಕಾರಣಕ್ಕೆ ಜಾತಿ ಮೀರಿದ ಪ್ರೀತಿಯನ್ನು ಎಲ್ಲರಿಂದ ಗಳಿಸಿದ್ದರು. ಶೋಷಿತ ಜನ ಸಮುದಾಯದ ಕಣ್ಣೀರನ್ನು ಒರೆಸಲು ತನ್ನ ಅಧಿಕಾರವನ್ನು ಅಥವಾ ಉದ್ಯೋಗವನ್ನು ದಕ್ಷತೆಯಿಂದ ಬಳಸಿದವರ ಸಾಲಿನಲ್ಲಿ ಅವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ – ಬೆಂಗಳೂರು





ಭರಣಿ ಮಳೆ ಬಂದ್ಹಾಂಗೆ...

ಡಾ. ಸಿದ್ಧಲಿಂಗಯ್ಯ

ಶಿವನು ಭಿಕ್ಷಕ್ಕೆ ಬಂದ, ನೀಡು ಬಾರೇ – ತಂಗಿ
ಅವನಂಥ ಚಲುವನಿಲ್ಲ, ನೋಡು ಬಾರೇ – ತಂಗಿ

(ಒಂದು ಜಾನಪದ ಗೀತೆ)

"ಭಿಕ್ಷಕ್ಕೆ ಬಂದಾತನನ್ನು ಶಿವನಾಗಿ ಕಾಣುವ ಪ್ರತಿಭೆ ಇಲ್ಲದ ಸಮಾಜಗಳಲ್ಲಿ, ಬಡವರಿಗೆ ಶಾಶ್ವತ ಭಿಕಾರಿಕೆಯೇ ಖಾತ್ರಿ" ಬಡವರ ಬಗ್ಗೆ ಪ್ರತಿಭೆ ತಳೆಯುವ ನಿಲುವುಗಳ ಬಗ್ಗೆ ಡಾ.ಡಿ.ಆರ್. ನಾಗರಾಜ್‌ರವರು ನಿಮ್ಮ 'ಊರು ಕೇರಿ' ಪುಸ್ತಕದ ಹಿನ್ನುಡಿ ಬರೆಯುವಾಗ ಬಳಸಿದ ಜಾನಪದ ಹಾಡಿದು. ಸಮಾಜವಾದ ಎಷ್ಟೇ ಬಡವರ ಪರವಾಗಿದ್ದರೂ, ಭಿಕ್ಷಕ್ಕೆ ಬಂದಾತನನ್ನು ಅದು ಶಿವ ಎಂದು ಕಲ್ಪಿಸಿಕೊಳ್ಳಲಾರದು. ಭಿಕ್ಷಕ್ಕೆ ಬಂದಾತ ಎಲ್ಲಾ ಬಗೆಯ ಶೋಷಣೆಗಳಿಂದ ದೀನನಾಗಿ, ಅಸಹ್ಯವಾಗಿ ಕಾಣುವುದು ನಮಗೆ ರಾಜಕೀಯವಾಗಿ ಭಾವುಕವಾಗಿ ಸರಿಯಾಗಿ ಕಾಣುತ್ತದೆ ಎಂಬುದನ್ನು ಹೇಳಿದ್ದಾರೆ.

ಬಡತನ ಮತ್ತು ಪ್ರತಿಭೆಗಳ ನಡುವೆ ಹುಟ್ಟಿ ಬೆಳೆದವರು ನೀವು. ನಿಮ್ಮ ಬಾಲ್ಯದ ಕೆಲವು ನೆನಪುಗಳನ್ನು ಹಂಚಿಕೊಳ್ಳಿ......

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ಹೊಲೇರ ಹಟ್ಟಿಯಲ್ಲಿ ಹುಟ್ಟಿದ್ದು. ತಂದೆ ದೇವಯ್ಯ ಗೇಣಿದಾರ-ಕೂಲಿಕಾರ. ತಾಯಿ ವೆಂಕಮ್ಮ. ಮಾಗಡಿಯಲ್ಲಿ ಕೂಲಿ-ನಾಲಿ ಜೀವನ. ಕಷ್ಟವಾದಾಗ ತಂದೆ ಆರು ಮಕ್ಕಳ ಸಂಸಾರ ಸಮೇತ ಊರು ತೊರೆದು, ರಾಜಾ ಮಿಲ್ಲಿನಲ್ಲಿ ಬದಲಿ ಕೆಲಸಗಾರನಾಗಿದ್ದ. ಬೆಳಗಿನ ಜಾವ ಐದು ಗಂಟೆಗೆ ಎದ್ದು ರಾಜಾ ಮಿಲ್ಲಿನ ಗೇಟಿಗೆ ಹೋಗಿ ನಿಲ್ಲುತ್ತಿದ್ದ. ಆ ದಿನ ಯಾರಾದರೂ ಖಾಯಂ ಕೆಲಸಗಾರರು ಕೆಲಸಕ್ಕೆ ಬರದಿದ್ದರೆ ಮಿಲ್ಲಿನವರು ಹೊರಗೆ ಕಾಯುತ್ತಿದ್ದ ಬದಲಿ ಕೆಲಸದವರನ್ನು ಕೆಲಸಕ್ಕೆ ಕರೆಯುತ್ತಿದ್ದರು. ಹೀಗೆ ಕೆಲಸ ಮಾಡಿದ ದಿನ ಕಾರ್ಡಿನಲ್ಲಿ ಟಿಕ್ ಮಾಡುತ್ತಿದ್ದರು. ಇದರಿಂದ ನಮಗೆ ಸ್ವಲ್ಪ ಅನುಕೂಲವಾಗಿತ್ತು. ಆದರೆ ರಾಜಾ ಮಿಲ್ಲಿನಲ್ಲಿ ಕಾರ್ಮಿಕರ ಚಳುವಳಿ ನಡೆದು ಮಿಲ್ಲನ್ನು ಮಾಲೀಕರು ವರ್ಷಗಟ್ಟಲೆ ಮುಚ್ಚಿಬಿಟ್ಟರು. ಆಗ ಬದಲಿ ಕೆಲಸಗಾರರಿರಲಿ, ಖಾಯಂ ಕೆಲಸಗಾರರಿಗೂ ಊಟಕ್ಕೆ ತೊಂದರೆಯಾಯಿತು.

ನಂತರ ನನ್ನ ತಂದೆ ಅಕ್ಕಪಕ್ಕ ಸೌದೆ ಡಿಪೋಗಳಲ್ಲಿ ನಿತ್ಯವೂ ಸೌದೆ ಹೊಡೆಯುತ್ತಿದ್ದನು. ತಂದೆ ಮರದ ಚಿಕ್ಕ ಚಿಕ್ಕ ದಿಮ್ಮಿಗಳನ್ನು ಒಲೆಯಲ್ಲಿ ಉರಿಯಲು ಅನುಕೂಲವಾಗುವಂತೆ ಹೋಳುಗಳನ್ನಾಗಿ ಸೀಳುತ್ತಿದ್ದನು. ಆ ಸೀಳುಗಳನ್ನು ಹೊರೆಕಟ್ಟಿ ಅವರ ಮನೆಗೆ ಹೊತ್ತುಕೊಂಡು ಹೋಗಿ ತಲುಪಿಸುತ್ತಿದ್ದನು. ಆ ಕೆಲಸದಲ್ಲಿ 1 ಕಿ.ಲೋ. ಸೌದೆಗೆ 10 ಪೈಸೆ ಸಿಗುತ್ತಿತ್ತು. ನಮ್ಮ ಕುಟುಂಬದ ಜೀವನಕ್ಕೆ ಇದೇ ಆಧಾರವಾಗಿತ್ತು.

ನನ್ನ ತಾಯಿ ಮತ್ತು ಜೊತೆಗಾತಿಯರು ಶಿವನಹಳ್ಳಿ ಕೆರೆಯಲ್ಲಿ ಗೋಟಿಗೆಡ್ಡೆ ಆಯಲು ಹೋಗುತ್ತಿದ್ದರು. ಕೆರೆಯ ಒಳಗೆ ಇಳಿದು ಅದರ ಬೇರುಗಳನ್ನು ಗುರುತಿಸಿ

ಗೋಟಿಗೆಡ್ಡೆಯನ್ನು ಸಂಗ್ರಹಿಸಿ ತರುತ್ತಿದ್ದರು. ಬರುವ ದಾರಿಯಲ್ಲಿ ರಾಜಾಜಿನಗರದಲ್ಲಿ ಅಣ್ಣೆಸೊಪ್ಪು, ಬೆರಕೆಸೊಪ್ಪು ಬಹುವಾಗಿ ಬೆಳೆಯುತ್ತಿತ್ತು. ಅದನ್ನು ಕಿತ್ತು ತರುತ್ತಿದ್ದರು. ಗೋಟಿಗೆಡ್ಡೆ ಮತ್ತು ಸೊಪ್ಪು ರಾತ್ರಿಯ ಊಟವಾಗಿತ್ತು.

ನನ್ನ ತಂದೆ ದೊಡ್ಡ ಸಾಲಗಾರನಾಗಿದ್ದ. ಸಾಲ ತರುವುದು ಆತನಿಗೆ ನೀರು ಕುಡಿದಷ್ಟು ಸುಲಭವಾಗಿತ್ತು. ಆದರೆ ಸಾಲ ತೀರಿಸಲು ಬಹಳ ಪಡಿಪಾಟಲು ಬೀಳುತ್ತಿದ್ದ. ಒಂದು ದಿನ ಇಬ್ಬರು ಥಾಂಡಿಗರು ಬೀದಿಯಲ್ಲಿ ನಮ್ಮ ತಂದೆಯನ್ನು ಹೊಡೆಯುತ್ತಿದ್ದರು. ಈತ ಗೋಳಾಡುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಹೀಗೆ ಪ್ರಯತ್ನಿಸಿದಷ್ಟೂ ಅವರು ಜೋರಾಗಿ ಹೊಡೆಯುತ್ತಿದ್ದರು. ನಾವೆಲ್ಲ ಗಾಬರಿಯಾಗಿ ಹತ್ತಿರ ಹೋದೆವು. ಕೆಲವರು ಬಿಡಿಸಿದ್ದರಿಂದ ತಂದೆಗೆ ಭಾರಿ ಹೊಡೆತಗಳು ತಪ್ಪಿದವು. ಮೈಯೆಲ್ಲ ಗಾಯವಾಗಿ ಬಟ್ಟೆ ಹರಿದಿತ್ತು. ಆ ಥಾಂಡಿಗರು ಲೇವಾದೇವಿಗಾರನ ಏಜೆಂಟರು. ಸಾಲ ಹಿಂದಿರುಗಿಸುವುದು ನಿಧಾನವಾದ್ದರಿಂದ ತಂದೆಯ ಮೇಲೆ ಹೀಗೆ ಹಲ್ಲೆ ನಡೆಸಿದ್ದರು. ಆ ದಿನ ರಾತ್ರಿಯೇ ತಂದೆ ಅವಮಾನ ತಾಳಲಾರದೆ ಮನೆಯಲ್ಲಿ ವಿಷ ಕುಡಿದು ವಿಲವಿಲನೆ ಒದ್ದಾಡುತ್ತಿದ್ದ. ಆಸ್ಪತ್ರೆಗೆ ಸೇರಿಸಿದ ಮೇಲೆ ಗುಣಮುಖನಾದ.

ಈ ಕಷ್ಟದಲ್ಲೂ ತಂದೆ ಕೇರಿಯಲ್ಲಿ ಜಾಗ ಹಿಡಿದು ಒಂದು ಗುಡಿಸಲು ಹಾಕಿದ್ದ. ಹತ್ತು ಅಡಿ ಅಗಲ. ಐದಡಿ ಎತ್ತರದ ಆ ಗುಡಿಸಲು ಮಳೆಗಾಲದಲ್ಲಿ ಬಹಳ ಸೋರುತ್ತಿದ್ದರಿಂದ ಭಾವಣಿಯ ಗಳಗಳನ್ನು ಜೋಡಿಸಲು ಸದಾ ಮನೆಯ ಮೇಲೆ ಇರುತ್ತಿದ್ದ, ಶಾಲೆಯಲ್ಲಿ ನನಗೆ ರಾಮಕೃಷ್ಣ ಎಂಬ ಗೆಳೆಯನಿದ್ದ. ಅವನ ಮನೆಯಲ್ಲಿ ಹಸುಗಳನ್ನು ಸಾಕಿದ್ದರು. ಆವನು ಹಾಲು ಮಾರುತ್ತಿದ್ದ, ಅದರಲ್ಲಿ ಮಿಗಿಸಿದ ದುಡ್ಡನ್ನು ಇಬ್ಬರು ಖರ್ಚು ಮಾಡುತ್ತಿದ್ದೆವು. ರಾಮಕೃಷ್ಣ ನನ್ನ ಹುಡುಕುವ ನೆಪದಲ್ಲಿ ನಮ್ಮ ಕೇರಿಗೆ ಬಂದ. ನಾನು ಗುಡಿಸಲಿನಲ್ಲಿ ಇದ್ದುದನ್ನು ಕಂಡು ಅವನಲ್ಲಿ ಮರುಕ ಉಂಟಾಯಿತು. ಅಂದಿನಿಂದ ಹಾಲಿನಲ್ಲಿ ಮಿಗಿಸಿದ ಹಣದಲ್ಲಿ ಸ್ವಲ್ಪವನ್ನು ನನಗೆ ಕೊಡಲಾರಂಭಿಸಿದ.

ಬಡವರಾದ ತಂದೆ ತಾಯಿಗಳಿಗೆ ಮಕ್ಕಳನ್ನು ಸಾಕಲು ನನ್ನ ತಾಯಿ ಶ್ರೀರಾಂಪುರದ ದಲಿತ ವಿದ್ಯಾರ್ಥಿ ನಿಲಯದಲ್ಲಿ ಕಸಗುಡಿಸುವ ಕೆಲಸಕ್ಕೆ ಸೇರಿಕೊಂಡಳು. ಅದರ ಹೆಸರು ಆರ್. ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿನಿಲಯ. ಡಿ. ವೆಂಕಟಯ್ಯ ಎಂಬುವವರು ಅದರ ಮೇಲ್ವಿಚಾರಕರು. ವಿದ್ಯಾರ್ಥಿಗಳಿಗೆ ಊಟ ಬಡಿಸಿದ ಮೇಲೆ ಅಲ್ಲಿಯ ಕೆಲಸಗಾರರಿಗೂ ಊಟ ಕೊಡುತ್ತಿದ್ದರು. ಅವರು ಕೊಡುತ್ತಿದ್ದ ಮುದ್ದೆ ಸಾರನ್ನು ನನ್ನ ತಾಯಿ ಮಧ್ಯಾಹ್ನ, ರಾತ್ರಿ ಮನೆಗೆ ತರುತ್ತಿದ್ದಳು. ಇದರಿಂದ ನಮ್ಮ ಅನ್ನದ ಸಮಸ್ಯೆ ನಿವಾರಣೆ ಆಯಿತು.

ಮಧ್ಯಾಹ್ನ 11 ಗಂಟೆಗೆ ಮನೆಗೆ ಊಟ ತಂದ ಕೂಡಲೇ ನಾನು ಊಟ ಮಾಡಿ ಶಾಲೆಗೆ ಹೊರಡುತ್ತಿದ್ದೆ. ನನ್ನ ತಾಯಿ ಕೆಲಸ ಮಾಡುತ್ತಿದ್ದ ಹಾಸ್ಟೆಲಿನ ಹಿಂದುಗಡೆ ನಾನು ಓದುತ್ತಿದ್ದ ಮಾಧ್ಯಮಿಕ ಶಾಲೆ ಇತ್ತು. ಆ ದಿನ ಹಾಸ್ಟೆಲಿನಿಂದ ಊಟ ತರಲು ನನ್ನ ತಂಗಿ ಹೋಗಿದ್ದಳು. ಯಾಕೋ ಊಟ ತರುವುದು ತಡವಾಯಿತು. ಶಾಲೆಗೆ ಹೊತ್ತಾಗತೊಡಗಿತ್ತು. ನಾನು ಪುಸ್ತಕದ ಚೀಲ ಹೆಗಲಿಗೇರಿಸಿಕೊಂಡು ಶಾಲೆಗೆ ಹೊರಟೆ. ಅರ್ಧದಾರಿ ನಡೆದಿದ್ದಾಗ ಎದುರಿಗೆ ನನ್ನ ತಂಗಿ ಊಟದೊಂದಿಗೆ ಮನೆಗೆ ಬರುತ್ತಿದ್ದಳು. ಯಾವುದಾದರೂ ಅಂಗಡಿಯಲ್ಲಿ ಉಪ್ಪು ಪಡೆದು ಮಧ್ಯಾಹ್ನ ತಿನ್ನಬಹುದೆಂದು ನಾನು ತಂಗಿಯಿಂದ ಒಂದು ರಾಗಿಮುದ್ದೆಯನ್ನು ಈಸಿಕೊಂಡು ಬ್ಯಾಗಿನಲ್ಲಿ ಹಾಕಿಕೊಂಡು ಶಾಲೆಗೆ ಹೊರಟೆ. ಮಧ್ಯಾಹ್ನ ಊಟಕ್ಕೆ ಬಿಡುವುದನ್ನೇ ನಿರೀಕ್ಷಿಸುತ್ತಿದ್ದೆ. ಈ ಪಿರಿಯಡ್ಡಿನ ನಂತರ ವಿರಾಮ.

ಅಂದು ಒಬ್ಬ ಹುಡುಗ ಪೆನ್ಸಿಲ್ ಕಳೆದುಕೊಂಡಿದ್ದ, ಎಲ್ಲರ ಬ್ಯಾಗನ್ನು ಪರೀಕ್ಷಿಸಲು ಮೇಡಂ ಅನುಮತಿ ಪಡೆದಿದ್ದ. ಪೆನ್ಸಿಲ್ ಕಳೆದುಕೊಂಡವನು ನನ್ನ ಬ್ಯಾಗಿನಲ್ಲಿರುವ ಮುದ್ದೆಯನ್ನು ಹೊರತೆಗೆದು ಪ್ರದರ್ಶನಕ್ಕೆ ಇಡಬಹುದೆಂದು ನನಗೆ ಅನುಮಾನ ಬಂತು. ಭಯವಾಯಿತು. ನನ್ನ ಬಳಿ ಬಂದಾಗ ನಾನು ನನ್ನ ಬ್ಯಾಗ್ ಪರೀಕ್ಷೆ ಮಾಡಲು ಅವಕಾಶ ಕೊಡಲಿಲ್ಲ. ಇದರಿಂದ ನಾನೇ ಕಳ್ಳನೆಂಬ ಅಭಿಪ್ರಾಯಕ್ಕೆ ಬಂದು ಮೇಡಂಗೆ ದೂರಿತ್ತ. ಮೇಡಂ ನನ್ನ ಹತ್ತಿರ ಬಂದು ಬ್ಯಾಗು ತೆಗೆಯಲು ಒತ್ತಾಯಿಸಿದರು. ಹುಡಗರೆಲ್ಲ ಕುತೂಹಲದಿಂದ ನೋಡತೊಡಗಿದರು. ಅವರಿಗೆ ಪೆನ್ಸಿಲಿನ ಸಮಸ್ಯೆ. ನನಗೆ ಮುದ್ದೆಯ ಭಯ. ಒತ್ತಾಯವಾಗಿ ನನ್ನ ಬ್ಯಾಗಿನೊಳಗಿನ ವಸ್ತುಗಳನ್ನು ಹೊರತೆಗೆದರು. ಪೆನ್ಸಿಲ್ ಸಿಗಲಿಲ್ಲ. ರಾಗಿಮುದ್ದೆ ಸಿಕ್ಕಿತು. ಮೇಡಂ ಚಕಿತರಾದರು. ಹುಡುಗರಿಗೆ ಇದು ಮೋಜಿನ ವಿಷಯವಾಯಿತು. ಮಧ್ಯಾಹ್ನ ಆಟಕ್ಕೆ ಬಿಟ್ಟಿದ್ದೇ ತಡ ಎಲ್ಲರೂ ಏಕಕಂಠದಿಂದ "ಮುದ್ದೇ ಮುದ್ದೆ" ಎಂದು ಕೂಗುತ್ತಾ ನಡೆದರು.

ನನಗೆ ಗಂಗವಾಳಗಯ್ಯ ಎಂಬ ದೊಡ್ಡಪ್ಪ ಇದ್ದರು. ಅವರು ವಿದ್ಯಾವಂತರಾಗಿದ್ದರು. ನನ್ನ ಅತ್ತೆಯ ಮನೆಗೆ ಆಗಾಗ ಬರುತ್ತಿದ್ದರು. ಅವರನ್ನು ಕಂಡರೆ ನಮ್ಮ ಮನೆಯವರೆಲ್ಲರಿಗೂ ಭಯ, ಗೌರವ. ಅವರು ಬಂದಾಗಲೆಲ್ಲಾ ಅವರ ಮುಂದೆ ಹೋಗಿ ಕೂರುತ್ತಿದ್ದೆ. ನಾನು ಚೂಟಿಯಾಗಿ ಮಾತನಾಡುವುದನ್ನು ನೋಡಿ ನನಗೆ ಭಾಷಣ ಮಾಡುವುದನ್ನು ಹೇಳಿಕೊಟ್ಟರು, ಯಾವುದಾದರೂ ಒಂದು ವಿಷಯವನ್ನು ಕುರಿತು ಹೇಗೆ ಭಾಷಣ ಮಾಡಬೇಕೆಂದು ಅವರು ಜಗತ್ತಿನ ಶ್ರೇಷ್ಠ ಭಾಷಣಕಾರರನ್ನು ಉದಾಹರಿಸಿ ವಿವರಿಸುತ್ತಿದ್ದರು. ಆಗ ಭಾರತ–ಚೈನಾ

ಯುದ್ಧ ನಡೆಯುತ್ತಿತ್ತು. ಈ ವಿಷಯವನ್ನೇ ಏಕೆ ಭಾಷಣ ಮಾಡಬಾರದು ಅನಿಸಿತು. ವಿಷಯ ಸಂಗ್ರಹಕ್ಕಾಗಿ ಹಲವಾರು ಬಡಾವಣೆಗಳ ಗ್ರಂಥಾಲಯಗಳಿಗೆ ಹೋಗಿ ವಿಷಯ ಸಂಗ್ರಹಿಸಿದೆ. ಕೆಲವೇ ದಿನಗಳಲ್ಲಿ ಪುಟಾಣಿ ಭಾಷಣಕಾರನಾದೆ. ಗಂಗಮಾಳಗಯ್ಯನವರು ಭಾಷಣದ ಪೂರ್ವಸಿದ್ಧತೆಯನ್ನು ಹೇಳಿ ಕೊಟ್ಟಿದ್ದರು. ಮನೆಯಲ್ಲಿಯೇ ಹಂಡೆ-ಗುಂಡಿ, ಬಿಂದಿಗೆ, ತಣಿಗೆಗಳನ್ನೇ ಸಭಿಕರೆಂದು ಭಾವಿಸಿ ಅವರನ್ನು ಉದ್ದೇಶಿಸಿ ಭಾಷಣ ಮಾಡುವುದರಿಂದ ಜನರ ಮುಂದೆ ಭಾಷಣ ಮಾಡಲು ಸುಲಭ ಎಂದಿದ್ದರು.

ನಾನೊಮ್ಮೆ ಮನೆಯಲ್ಲಿ ಮಾನ್ಯ ಹಂಡೆಯವರೇ, ಮಾನ್ಯ ಗುಂಡಿಯವರೇ, ಮಾನ್ಯ ಬಿಂದಿಗೆಯವರೇ ಎಂದು ಭಾಷಣ ಅಭ್ಯಾಸ ಮಾಡುತ್ತಿದುದ್ದನ್ನು ನನ್ನ ತಂದೆ-ತಾಯಿಗಳು ನೋಡಿ ಹೆದರಿದರು. ನನಗೆ ಹುಚ್ಚು ಹಿಡಿದಿರಬಹುದೆಂದು ಭಾವಿಸಿ ಹುಚ್ಚಾಸ್ಪತ್ರೆಗೆ ಸೇರಿಸಲು ತಯಾರಾದರು. ಕೆಲವರು ಹಿರಿಯರು ಈಗಲೇ ಬೇಡ, ಇನ್ನೂ ಸ್ವಲ್ಪ ಕಾದುನೋಡಿ ಮುಂದೆ ಏನಾಗುವುದೋ ನೋಡೋಣ ಎಂದು ಸಲಹೆ ನೀಡಿದ ಮೇಲೆ ಸುಮ್ಮನಾದರು. ಭಾಷಣ ಮಾಡುವುದರ ಜೊತೆಗೆ ನನ್ನ ದೊಡ್ಡಪ್ಪ ನಾನು ಕವಿತೆ ಬರೆಯುವುದನ್ನು ಪ್ರೋತ್ಸಾಹಿಸಿದರು. ನಾನು ಭಾಷಣ ಮಾಡುವ ವಿಷಯ ಕೇರಿಯಲ್ಲೆಲ್ಲ ಹಬ್ಬಿತು. ಕೇರಿಯ ಜನ ಭಾಷಣ ಕೇಳಿ ಆನಂದಪಟ್ಟರು. ಸಂತೋಷಕ್ಕೆ ನನಗೆ ಜನ ಮಿಠಾಯಿ, ಪೆಪ್ಪರಮೆಂಟ್, ಪಕೋಡ, ವಡೆ ರೂಪದಲ್ಲಿ ಬಹುಮಾನ ಕೊಡುತ್ತಿದ್ದರು.

ನೀವು ಓದಿದ ದಲಿತರ ಹಾಸ್ಟೆಲ್ ಹೇಗಿತ್ತು?

ಶ್ರೀರಾಂಪುರದ ಆರ್. ಗೋಪಾಲಸ್ವಾಮಿ ಅಯ್ಯರ್ ದಲಿತ ವಿದ್ಯಾರ್ಥಿನಿಲಯಕ್ಕೆ ನನ್ನ ತಾಯಿ ನನ್ನನ್ನು ಸೇರಿಸಿದಳು. ಅವಳು ಅದೇ ವಿದ್ಯಾರ್ಥಿನಿಲಯದಲ್ಲಿ ಕಸ ಗುಡಿಸುವ ಕೆಲಸ ಮಾಡುತ್ತಿದ್ದಳು. ಇದರಿಂದ ನನಗೆ ಕೊಂಚ ಧೈರ್ಯವಿತ್ತು. ಆದರೆ ಕೆಲವು ಪುಂಡ ಹುಡುಗರು ಆಕೆಯನ್ನು ಗದರಿಸಿದಾಗ ನನಗೆ ವ್ಯಥೆಯಾಗುತ್ತಿತ್ತು. ಬಡತನವೇ ಮೈದಳೆದಂತೆ ಇದ್ದ ನನ್ನ ತಂದೆ ಆಗಾಗ ಅಲ್ಲಿಗೆ ನನ್ನನ್ನು ನೋಡಲು ಬರುತ್ತಿದ್ದ. ಒಟ್ಟು 300 ಜನ ವಿದ್ಯಾರ್ಥಿಗಳಿದ್ದೆವು. ಒಂದೊಂದು ಕೊಠಡಿಯಲ್ಲಿ 10 ರಿಂದ 30 ಜನದವರೆಗೂ ಮಲಗುತ್ತಿದ್ದೆವು. ಕಜ್ಜಿ ಬಂದವರು ಮುಲಾಮು ಹಚ್ಚಿಕೊಂಡು ಬಿಸಿಲಿನಲ್ಲಿ ಮೈಕಾಯಿಸುವುದು ಸಾಮಾನ್ಯವಾಗಿತ್ತು.

ಈ ವಿದ್ಯಾರ್ಥಿನಿಲಯದಲ್ಲಿ ನಾನಾ ಊರುಗಳಿಂದ ಬಂದವರು ಕನ್ನಡವನ್ನು ಬೇರೆ ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯವರ

ಕನ್ನಡ ಒಂದು ರೀತಿಯಾದರೆ, ಕೊಳ್ಳೇಗಾಲ ಮಾಂಬಳ್ಳಿಯ ಕಡೆಯವರು ಬಾ ಹೋಗು ಎಂಬುದನ್ನು ಬಾರುಡೋ, ಹೋಗುಡೋ, ಹೋಗುಜಾ ಎನ್ನುತ್ತಿದ್ದರು. ಬೆಂಗಳೂರು ನಗರದಲ್ಲೇ ಇದ್ದು ಅಲ್ಲಿ ಸೇರಿಕೊಂಡಿದ್ದ ನಾನು ಮತ್ತು ನಾಲ್ಕೈದು ಜನ ಗೆಳೆಯರು ಬಾಯಿ ಬಿಟ್ಟರೆ ಬೈಗುಳಗಳಲ್ಲದೆ ಇನ್ನೇನೂ ಬರುತ್ತಿರಲಿಲ್ಲ.

ಈ ವಿದ್ಯಾರ್ಥಿನಿಲಯದ ಕಟ್ಟಡ ಬಹಳ ದೊಡ್ಡದು. ಅದರ ಮುಂದೆ ನಾಲ್ಕು ಎಕರೆ ಮೈದಾನ. ರಸ್ತೆಯ ಆ ಬದಿಗೆ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಮತ್ತು ಪೊಲೀಸ್ ಸ್ಟೇಷನ್. ರಾತ್ರಿಯ ಹೊತ್ತು ಪೊಲೀಸ್ ಸ್ಟೇಷನ್ನಿಂದ ಚೀತ್ಕಾರ ಧ್ವನಿಗಳು ಕೇಳಿ ಬರುತ್ತಿದ್ದವು. ಅವು ಬಂಧಿತರಿಗೆ ಪೊಲೀಸರ ಹೊಡೆತದ ಫಲ. ನಮ್ಮ ಹಾಸ್ಟೆಲ್‌ನ ಹಳೆಯ ವಿದ್ಯಾರ್ಥಿಗಳು ವಾಲಿಬಾಲ್ ತುಂಬಾ ಚೆನ್ನಾಗಿ ಆಡುತ್ತಿದ್ದರು. ಇದಕ್ಕೆ ಅಂಬೇಡ್ಕರ್ ಟೀಮ್ ಎಂದು ಹೆಸರಿಟ್ಟಿದ್ದರು.

ತಾವು ಭರಣಯ್ಯನವರನ್ನು ಮೊದಲು ಕಂಡದ್ದು ಯಾವಾಗ?

ವಿದ್ಯಾರ್ಥಿನಿಲಯದಲ್ಲಿ ರಾಷ್ಟ್ರೀಯ ದಿನಾಚರಣೆಗಳನ್ನು ಆಚರಿಸುತ್ತಿದ್ದರು. ಆ ದಿನ ಬೆಳಗಿನ ಜಾವ ಎದ್ದು ಸಾಲಾಗಿ ಶ್ರೀರಾಂಪುರದ ಬೀದಿಗಳಲ್ಲಿ ಮೆರವಣಿಗೆ ಹೋಗುತ್ತಿದ್ದೆವು. ಆಗ ರಾಷ್ಟ್ರಭಕ್ತಿಯ ಗೀತೆಗಳನ್ನು ಕಲಿತಿದ್ದವರು ಹೇಳಿ ಕೊಡುತ್ತಿದ್ದರು. ನಾವು ಏರುಧ್ವನಿಯಲ್ಲಿ ಹಾಡುತ್ತಾ ಆ ಬಡಾವಣೆಯಲ್ಲಿ ಮಲಗಿದ್ದವರನ್ನು ಎಚ್ಚರ ಉಂಟು ಮಾಡುತ್ತಿದ್ದೆವು. ನಂತರ ಸಮಾರಂಭ ಏರ್ಪಡಿಸಲಾಗಿತ್ತು. ಈ ಸಮಾರಂಭಕ್ಕೆ ಎಸ್. ನಿಜಲಿಂಗಪ್ಪ, ಬಿ. ರಾಚಯ್ಯ, ನಾಗಪ್ಪ ಆಳ್ವಾ, ಆರ್. ಭರಣಯ್ಯ ಮತ್ತು ಡಾ. ಸಿದ್ದಾರ್ಥ ಅರಕೇರಿಯವರು ಬಂದು ಸ್ಫೂರ್ತಿದಾಯಕ ಭಾಷಣ ಮಾಡುವುದನ್ನೇ ನಾವು ಕೇಳುತ್ತಿದ್ದೆವು. ನಾನು ಪ್ರಥಮಬಾರಿಗೆ ಹೀಗೆ ಆರ್. ಭರಣಯ್ಯನವರನ್ನು ನೋಡಿದ್ದು, ಭಾಷಣ ಕೇಳಿದ್ದು ನನ್ನ ಪ್ರಥಮ ಭೇಟಿಯಾಗಿತ್ತು.

ಆರ್. ಭರಣಯ್ಯನವರನ್ನು ಹೇಗೆ ನೆನಪು ಮಾಡಿಕೊಳ್ಳುತ್ತೀರಿ. ಅವರ ಬಗೆಗಿನ ನೆನಪನ್ನು ಹೇಳಿ.

ಆರ್. ಭರಣಯ್ಯನವರು ನನ್ನ ಪಾಲಿಗೆ ರೂಪಕವಾಗಿ ಕಾಣಿಸುತ್ತಾರೆ. ನನ್ನ ಬಾಲ್ಯ ಭರಣಯ್ಯನವರಿಂದ ಸ್ಫೂರ್ತಿಯನ್ನು ಪಡೆದುಕೊಂಡಿದೆ. ಅವರ ಭಾಷಣಗಳನ್ನು ಕೇಳುತ್ತಾ, ಅವರ ನಡೆ-ನುಡಿಯಲ್ಲಿ ರೋಮಾಂಚನವನ್ನು ಕಂಡವನು. ಆರ್. ಭರಣಯ್ಯನವರು ಆರ್. ಗೋಪಾಲಸ್ವಾಮಿ ಅಯ್ಯರ್ ಹಾಸ್ಟಲ್‌ಗೆ ಬರುತ್ತಿದ್ದಾಗ ಈಗಲೂ ನನ್ನ ಕಣ್ಣಮುಂದೆ ಹಾಗೇ ಚಿತ್ರೀಕರಿಸಿಕೊಳ್ಳಬಹುದು. ಅವರು

ಹಸನ್ಮುಖಿಯಾಗಿ, ಪ್ರಸನ್ನವದನರಾಗಿ, ಸೌಜನ್ಯಪೂರ್ಣರಾಗಿ, ಸೂಟ್ ಹಾಕಿಕೊಂಡು ಶುಭ್ರವಾದ ಬಟ್ಟೆಯೊಂದಿಗೆ ಬರುತ್ತಿದ್ದರು. ಅವರಿಗೆ ಸ್ವಲ್ಪ ಕಾಲು ಹೈಬು ಇತ್ತು ಅಂತ ಕಾಣುತ್ತೇ. ಕುಂಟುವಂತೆ ನಡೆಯುತ್ತಿದ್ದರು. ಯಾರಿಗಾದರೂ ಅವರಿಗೆ ಕೈಯೆತ್ತಿ ನಮಸ್ಕರಿಸಬೇಕೆಂಬ ಭಾವನೆ ಮೂಡುತ್ತಿತ್ತು. ನಾನು ಇದರಿಂದ ಹೊರತವನಾಗಿರಲಿಲ್ಲ. ಅಷ್ಟರಮಟ್ಟಿಗೆ ಅವರಲ್ಲಿ ಘನತೆ, ಗತ್ತು, ಸೌಜನ್ಯತೆ, ತೇಜಸ್ಸು ಎದ್ದು ಕಾಣುತ್ತಿತ್ತು. ಇವರು ಒಬ್ಬ ದಲಿತ ಅಧಿಕಾರಿಯೇ ಎಂಬ ಅನುಮಾನ ಮೂಡುವಷ್ಟರ ಮಟ್ಟಿಗೆ ಅವರು ಗಾಂಭೀರ್ಯವನ್ನು ಹೊಂದಿದ್ದರು.

ಅವರು ಹಾಸ್ಟಲ್‌ಗೆ ಬರುವ ಸುದ್ದಿ ತಿಳಿದ ಕೂಡಲೇ ನಾನು ನನ್ನ ಸ್ನೇಹಿತ ಹುಡುಗರನ್ನೆಲ್ಲಾ ಒಟ್ಟಿಗೆ ಸೇರಿಸಿ ಗೇಟ್‌ನ ಹತ್ತಿರ ಅವರು ಕಾರಿನಿಂದ ಇಳಿಯುತ್ತಿದ್ದಂತೆ ಭರಣಯ್ಯನವರು ಬರುತ್ತಿದ್ದಾರೆ, ಭರಣಯ್ಯನವರು ಬರುತ್ತಿದ್ದಾರೆ. ಅವರಿಗೆ ಸ್ವಾಗತ, ಸ್ವಾಗತ ಎಂದು ಘೋಷಣೆ ಕೂಗುತ್ತ ಬರಮಾಡಿಕೊಳ್ಳುತ್ತಿದ್ದೆವು. ಆರ್. ಭರಣಯ್ಯನವರು ಬಹಳ ಸಂತೋಷಪಟ್ಟು ನನ್ನ ಭುಜದ ಮೇಲೆ ಕೈಯಿಟ್ಟು 'ನೀನು ತುಂಬಾ ಚೂಟಿ ಆಗಿದ್ದೀಯಾ! ಇದೇ ರೀತಿ ಓದುವುದರಲ್ಲೂ ಇರಬೇಕು' ಎಂಬ ಮಾತನ್ನು ಹೇಳುತ್ತಿದ್ದರು. ಅದು ಇನ್ನೂ ಕಿವಿಯಲ್ಲಿದೆ.

ಶ್ರೀ ಆರ್. ಭರಣಯ್ಯನವರು ಅಮೇರಿಕಾಕ್ಕೆ ಹೋಗುವ ಸಂದರ್ಭದಲ್ಲಿ ಒಂದು ಸಮಾರಂಭವನ್ನು ಹಾಸ್ಟೆಲ್‌ನಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಸಕರಾಗಿದ್ದ ಸಿದ್ಧಾರ್ಥ ಅರಕೇರಿಯವರು ಆವೇಶದಿಂದ ಭಾಷಣಮಾಡಿ ನಮ್ಮನ್ನೆಲ್ಲ ಪ್ರಭಾವಗೊಳಿಸಿದರು. ಅನೇಕ ಹಿರಿಯರು ಈ ಸಮಾರಂಭದಲ್ಲಿ ಆರ್. ಭರಣಯ್ಯನವರ ಪ್ರತಿಭೆ, ಅವರ ಕೆಲಸದ ದಕ್ಷತೆಯನ್ನು ಹೊಗಳಿ ಮಾತನಾಡಿದರು. ಕೆಲವರು ಆರ್. ಭರಣಯ್ಯನವರನ್ನು 'ಭರಣಿ ಮಳೆಗೆ' ಹೋಲಿಸಿದರು. ಆಗ ಭಾಷಣ ಮಾಡಲು ಎದ್ದು ನಿಂತ ಆರ್. ಭರಣಯ್ಯನವರು 'ಭರಣಿ ಮಳೆಯ' ಪ್ರಸ್ತಾಪಮಾಡಿ ಕಣ್ಣೀರು ಸುರಿಸಿದರು. ಭರಣಯ್ಯನವರು ಭಾವುಕದ ವ್ಯಕ್ತಿತ್ವ. ಅವರು ಬಹಳ ಸೌಜನ್ಯವಂತರು. ಮಿತಭಾಷಿ, ವಿನಯ, ಕರುಣೆ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಇದು ನನ್ನನ್ನು ತುಂಬಾ ಪ್ರಭಾವ ಬೀರುವಂತೆ ಮಾಡಿತು.

ವಿದ್ಯಾರ್ಥಿನಿಲಯದ ಮುಖ್ಯಸ್ಥರಾದ ಡಿ. ವೆಂಕಟಯ್ಯನವರು ಭಾಷಣ ಮಾಡುವಾಗ ದಲಿತ ವರ್ಗದ ದುಸ್ಥಿತಿಯ ಬಗ್ಗೆ ವಿದ್ಯಾರ್ಥಿಗಳಾದ ನಮ್ಮ ಕಷ್ಟಸ್ಥಿತಿಯ ಬಗ್ಗೆ ಮನಕರಗುವಂತೆ ವಿವರಿಸಿ ಕಂಬನಿ ಮಿಡಿಯುತ್ತಿದ್ದರು. ನಮ್ಮ ವಿದ್ಯಾರ್ಥಿನಿಲಯದ ಗ್ರಾಂಟಿಗೆ ಸಂಬಂಧಪಟ್ಟಂತೆ ಸರ್ಕಾರದ ಅರ್ಥ ಸಚಿವರನ್ನು ನೋಡಲು ಹೋಗಿದ್ದರು. ಸಚಿವರು ಅರ್ಜಿ ಕೊಡಲು ಹೋದಾಗ ಅವರು ಇವರ

ಅರ್ಜಿಯನ್ನೇ ಮುಟ್ಟಲಿಲ್ಲ. ಡಿ. ವೆಂಕಟಯ್ಯನವರು ಸಚಿವರನ್ನು ಕುರಿತು ದೈನ್ಯದಿಂದ "ಸ್ವಾಮಿ ನಾನೇನೋ ಅಸ್ಪೃಶ್ಯ. ನಿಮ್ಮ ಪಾಲಿಗೆ ನನ್ನ ಅರ್ಜಿಯೂ ಅಸ್ಪೃಶ್ಯವಾಯಿತೇ" ಎಂದರು. ಇದರಿಂದ ಮನಕರಗಿದ ಅರ್ಥಸಚಿವರು ತಕ್ಷಣ ಅರ್ಜಿಯನ್ನು ತೆಗೆದುಕೊಂಡು ಅನುದಾನವನ್ನು ಬಿಡುಗಡೆ ಮಾಡಿದರು.

ಈ ಘಟನೆಯನ್ನು ಯಾಕೆ ಹೇಳಿದೆ ಎಂದರೆ, ಆರ್. ಭರಣಯ್ಯನವರು ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿ, ಚೆನ್ನಾಗಿ ಓದಿ, ಉನ್ನತ ಸ್ಥಾನದ ಅಧಿಕಾರದಲ್ಲಿ ಇದ್ದು ತನ್ನ ಅಧಿಕಾರದ ಅವಧಿಯಲ್ಲಿ ತನಗೆ ಇದ್ದ ಅಧಿಕಾರವನ್ನು ಬಳಸಿ ನೂರಾರು, ಸಾವಿರಾರು ದಲಿತರಿಗೆ, ಬಡವರಿಗೆ ಕೆಲಸ ಕೊಟ್ಟ ದಕ್ಷ ಆಡಳಿತಗಾರರಾಗಿದ್ದರು. ಅಂತವರನ್ನು ನೆನಪು ಮಾಡಿಕೊಳ್ಳುವುದು ಒಂದು ಶ್ರೇಷ್ಠ ಕೆಲಸ.

ಇನ್ನೊಮ್ಮೆ ನನಗೆ ಆರ್. ಭರಣಯ್ಯನವರ ಸಮ್ಮುಖದಲ್ಲಿ ಭಾಷಣ ಮಾಡುವ ಸುಯೋಗ ದೊರಕಿತು. ಒಮ್ಮೆ ಪುರಭವನದಲ್ಲಿ ಅಂಬೇಡ್ಕರರ ದಿನಾಚರಣೆ. ಮುಖ್ಯಮಂತ್ರಿ ವೀರೇಂದ್ರ ಪಾಟೀಲರು, ಹೈಕೋರ್ಟ್ ನ್ಯಾಯಾಧೀಶರಾದ ಕೆ. ಭೀಮಯ್ಯನವರು, ಐ.ಎ.ಎಸ್. ಅಧಿಕಾರಿಗಳಾದ ಆರ್. ಭರಣಯ್ಯನವರು, ಮಂತ್ರಿಗಳಾದ ಬಿ. ರಾಚಯ್ಯನವರು ಸಮಾರಂಭದ ಅತಿಥಿಗಳು. ಶಾಂತವೇರಿ ಗೋಪಾಲಗೌಡರು ಅಂದಿನ ಮುಖ್ಯ ಭಾಷಣಕಾರರು. ಶಾಂತವೇರಿ ಗೋಪಾಲಗೌಡರು ಭಾಷಣ ಹಾಗೂ ಇತರರ ಭಾಷಣ ಮುಗಿದ ಮೇಲೆ ಡಾ. ಸಿದ್ಧಾರ್ಥ ಅರಕೇರಿಯವರು ನನ್ನನ್ನು ಮಾತನಾಡಲು ಆಹ್ವಾನಿಸಿದರು. ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿ ಎಂಬುದನ್ನು ಮರೆತು ಆತ್ಮವಿಶ್ವಾಸದಿಂದ ಅಂಬೇಡ್ಕರ್‌ರವರನ್ನು ಕುರಿತು ಭಾಷಣ ಮಾಡಿದೆ. ಅತಿಥಿಗಳು, ಸಭಿಕರು ನನ್ನ ಭಾಷಣ ಕೇಳಿ ಸಂತೋಷಪಟ್ಟರು. ವೀರೇಂದ್ರ ಪಾಟೀಲರು, ಬಿ. ರಾಚಯ್ಯನವರು ಹಾಗೂ ಆರ್. ಭರಣಯ್ಯವರು ತಮಗೆ ಹಾಕಿದ್ದ ಹಾರಗಳನ್ನು ತಂದು ನನಗೆ ಹಾಕಿದರು. ನಾನು ಸಂತೋಷದಿಂದ ಮುಜುಗರದಿಂದ ಹಾರಗಳೊಂದಿಗೆ ಕೆಳಗಿಳಿದೆ. ಆರ್. ಭರಣಯ್ಯನವರು ನನಗೆ ಶಭಾಷ್‌ಗಿರಿ ಕೊಟ್ಟು ಬೆನ್ನುತಟ್ಟಿದರು. ಅವರ ಹಾರೈಕೆ ಸದಾ ನನ್ನ ಮೇಲೆ ಆಶಿರ್ವಾದದಂತೆ ಇದೆ.

ಆರ್. ಭರಣಯ್ಯನವರನ್ನು ಮತ್ತೆ ಭೇಟಿ ಮಾಡಿದ ನೆನಪು ಎಂದರೆ ಅಕ್ಸಿಡೆಂಟಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇರಿದ್ದಾರೆ ಎಂಬ ವಿಷಯ ತಿಳಿಯಿತು. ನಾನು ಕೆಲವು ಸ್ನೇಹಿತರನ್ನು ಕರೆದುಕೊಂಡು ಅವರನ್ನು ಕಾಣಲುಹೋದೆ. ನನ್ನನ್ನು ನೋಡಿದ ಕೂಡಲೇ ಅವರಿಗೆ ಕಣ್ಣೀರು ಬಂತು. ನನ್ನನ್ನು ಹತ್ತಿರ ಕರೆದು ನೀನು ಅಂಬೇಡ್ಕರ್ ಬಗ್ಗೆ ನನಗಿಂತ ತುಂಬಾ ಚೆನ್ನಾಗಿ ಭಾಷಣ ಮಾಡಿದೆ ಎಂದು ಹೊಗಳಿದರು. ಅವರು ಎಂದೂ ದೊಡ್ಡವರು. ಚಿಕ್ಕವರನ್ನು ಕಾಣುವ, ಅವರನ್ನು ಪ್ರೋತ್ಸಾಹಿಸುವ

ಅವರ ದೊಡ್ಡತನ ಕಂಡು ನನಗೆ ಅವರ ಬಗ್ಗೆ ಅಭಿಮಾನ ಹೆಚ್ಚಿತು. 'ಇನ್ನೊಮ್ಮೆ ಬಾ ನಿನ್ನ ಜೊತೆ ತುಂಬಾ ಮಾತನಾಡಬೇಕು' ಎಂದು ಹಾರೈಸಿ ಕಳುಹಿಸಿಕೊಟ್ಟರು. ನಾನು ಕೂಡ 'ನೀವು ಕೂಡ ಬೇಗ ಗುಣಮುಖರಾಗಿ ಬನ್ನಿ ಸಾರ್, ನಿಮ್ಮನ್ನು ಮತ್ತೆ ಭೇಟಿ ಮಾಡುತ್ತೇನೆ' ಎಂದು ಹೇಳಿ ಬಂದೆ.

ಮತ್ತೇ ಅವರಿಗೂ ನನಗೂ ಭೇಟಿಯಾಗಲಿಲ್ಲ. ಅವರು ಬೇರೆ ಬೇರೆ ಇಲಾಖೆಗಳಲ್ಲಿ ಅತ್ಯುತ್ತಮವಾದ ಕೆಲಸಗಳನ್ನು ಮಾಡಿದರು ಅಂತ ಕೇಳಲ್ಪಟ್ಟಿದ್ದೇನೆ. ಶಿವಮೊಗ್ಗ, ಚಿತ್ರದುರ್ಗದಲ್ಲಿದ್ದರು. ನಂತರ ಸ್ವಯಂ ನಿವೃತ್ತಿ ಹೊಂದಿದ ಮೇಲೆ ಕೊಳ್ಳೇಗಾಲದಲ್ಲಿ ಚುನಾವಣೆಗೆ ನಿಂತು ಸೋತರು ಎಂದು ಕೇಳಿದೆ. ನನಗೆ ನೋವಾಯಿತು. ಮತ್ತೇ ನನಗೆ ಭೇಟಿಯಾಗುವ ಸುಯೋಗ ಸಿಗಲಿಲ್ಲ. ಆದರೆ ಒಂದು ದಿವಸ ಯಾರದೊ ಮೂಲಕ ಆರ್. ಭರಣಯ್ಯನವರು ತೀರಿಕೊಂಡರು ಎಂದು ಕೇಳಿ ದುಃಖವಾಯಿತು. ನಾನು ನನ್ನ ಸ್ನೇಹಿತರನ್ನು ಕರೆದುಕೊಂಡು ಕುಮಾರಕೃಪದಲ್ಲಿದ್ದ ಅವರ ಮನೆಗೆ ಭೇಟಿಮಾಡಿ ಪಾರ್ಥಿವ ಶರೀರಕ್ಕೆ ನಮಸ್ಕಾರ ಮಾಡಿದೆ. ಕುಮಾರಕೃಪಾದಿಂದ ಹೊರಟ ಮೆರವಣಿಗೆಯಲ್ಲಿ ನಾವೆಲ್ಲ ಪಾಲ್ಗೊಂಡು ಭರಣಯ್ಯನವರು ಅಮರರಾಗಲಿ ಅಮರರಾಗಲಿ ಎಂದು ಘೋಷಣೆ ಹಾಕುತ್ತಾ ಹರಿಶ್ಚಂದ್ರಘಾಟ್-ನವರೆಗೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದೆವು. ಅದೇ ನಾನು ಅವರನ್ನು ಕೊನೆಯಬಾರಿ ಕಂಡಿದ್ದು ನಮಸ್ಕರಿಸಿದ್ದು.

ಆರ್. ಭರಣಯ್ಯ ಇನ್ನಷ್ಟು ಕಾಲ ಬದುಕಬೇಕಿತ್ತು. ಅವರ ಆದರ್ಶ, ಅವರ ಮಾರ್ಗದರ್ಶನ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ. ಅವರು ಮಾಡಿದ ಕೆಲಸ ಸದಾ ಜನರ ಮನಸ್ಸಿನಲ್ಲಿ ಹಚ್ಚ ಹಸಿರಾಗಿದೆ. ಭರಣಯ್ಯನವರಿಗೆ ಬಡವರನ್ನು ಕಂಡರೆ ಅಪಾರವಾದ ಪ್ರೀತಿಯಿತ್ತು. ಅವರ ಬಳಿಗೆ ಯಾರೇ ಬಡವರು, ದಲಿತರು ಸಹಾಯ ಕೇಳಿದರೆ ತಕ್ಷಣ ಸ್ಪಂದಿಸಿ ಅವರಿಗೆ ಸಹಾಯ ಮಾಡುವ ದೊಡ್ಡಗುಣವನ್ನು ಹೊಂದಿದ ಮೇರು ವ್ಯಕ್ತಿತ್ವದವರು. ಅಂಥವರಿಗೆ ಸಾವು ಬೇಗ ಬರಬಾರದಾಗಿತ್ತು. ಅವರ ಸಾವಿನಿಂದ ದಲಿತ ಹಾಗೂ ಬಡವರ ಸಮುದಾಯ ಬಡವಾಯಿತು.

ಸರ್ಕಾರಿ ಸೇವೆಯಲ್ಲಿ ಅವರು ಇದುವರೆಗೂ ಸಾವಿರಾರು ಜನಕ್ಕೆ ನೆರವು ನೀಡುತ್ತಾ ಬಂದರು ಎಂಬ ಮಾತಿದೆ. ಈ ಬಗ್ಗೆ ಏನು ಹೇಳಬಯಸುವಿರಿ?

ನಾನು ಚಿಕ್ಕವನಾಗಿದ್ದಾಗ ಮಾತ್ರ ಅವರನ್ನು ಹೆಚ್ಚು ಕಂಡವನು. ನಂತರದಲ್ಲಿ ಅವರು ಬೇರೆ ಬೇರೆ ಇಲಾಖೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು ಎಂದು

ತಿಳಿದಿದ್ದೇನೆ. ಅವರು ಖಚಿತವಾಗಿ ಏನು ಮಾಡಿದರು ಎನ್ನುವ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲ. ಆದರೆ ಇಷ್ಟು ಮಾತ್ರ ನಾನು ಕೇಳಲ್ಪಟ್ಟಿದ್ದೇನೆ. ಆರ್. ಭರಣಯ್ಯನವರು ಯಾವುದೇ ಇಲಾಖೆಗೆ ಹೋದರು ಅತ್ಯಂತ ದಕ್ಷತೆಯಿಂದ, ಚಾಣಾಕ್ಷತನದಿಂದ ದಲಿತರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟರು. ಅವರು ಕೇವಲ ದಲಿತರಿಗೆ ಮಾತ್ರವಲ್ಲದೆ ಕಷ್ಟದಲ್ಲಿರುವ ಇತರೇ ಜನವರ್ಗಗಳ ಬಡವರ ಮಕ್ಕಳಿಗೂ ಉದ್ಯೋಗ ಅವಕಾಶವನ್ನು ಸಹಕಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಇನ್ನಿತರೆ ಇಲಾಖೆಗಳಿಂದ ಮಾಡಿದರು. ಇವರು ಯಾವುದೇ ಒಂದು ಜಾತಿಗೆ ಸೀಮಿತವಾಗಿರದೇ ಎಲ್ಲಾ ಜಾತಿಯ ಬಡವರಿಗೂ ಸಹಾಯ ಮಾಡಿದ ಕಾರಣಕ್ಕೆ ಜಾತಿ ಮೀರಿದ ಪ್ರೀತಿಯನ್ನು ಎಲ್ಲರಿಂದ ಗಳಿಸಿದ್ದರು. ಶೋಷಿತ ಜನ ಸಮುದಾಯದ ಕಣ್ಣೀರನ್ನು ಒರೆಸಲು ತನ್ನ ಅಧಿಕಾರವನ್ನು ಅಥವಾ ಉದ್ಯೋಗವನ್ನು ದಕ್ಷತೆಯಿಂದ ಬಳಸಿದವರ ಸಾಲಿನಲ್ಲಿ ಆರ್. ಭರಣಯ್ಯನವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ಇದಕ್ಕೆ ಕಾರಣ ಆರ್. ಭರಣಯ್ಯನವರು ಗ್ರಾಮೀಣ ಪರಿಸರದಿಂದ ಬೆಳೆದು ಬಂದವರು. ಕೊಳ್ಳೇಗಾಲ ಸುತ್ತಮುತ್ತ ದಲಿತರ ಬದುಕನ್ನು ಹತ್ತಿರದಿಂದ ಕಂಡವರು. ಸ್ವತಃ ತಾವೇ ಕಷ್ಟಪಟ್ಟು ಬಡತನದ ಬೇಗುದಿಯಲ್ಲಿ ಬೆಂದು ಶಿಕ್ಷಣವನ್ನು ಪಡೆದುಕೊಂಡು ಉನ್ನತ ಸ್ಥಾನಕ್ಕೆ ಬಂದವರಾಗಿದ್ದರು. ಅವರದು ತನ್ನ ಸುತ್ತ ಇರುವ ಜನರ ಕಣ್ಣೀರನ್ನು ಒರೆಸಬೇಕೆಂಬ ಉತ್ಕಟ ಬಯಕೆಯಾಗಿತ್ತು. ಹಾಗಾಗಿ ಅವರಿಗೆ ಬಡವರನ್ನು ಕಂಡರೆ ಪ್ರೀತಿ ಮತ್ತು ಕರುಣೆ, ಸಹಾಯ ಮಾಡಬೇಕೆನ್ನುವ ಧೋರಣೆ ಚಿಕ್ಕಂದಿನಿಂದಲೇ ಬೆಳೆಸಿಕೊಂಡು ಬಂದವರು. ಅವರು ಆರ್. ಗೋಪಾಲಸ್ವಾಮಿ ಅಯ್ಯರ್ ಮತ್ತು ಅಂಬೇಡ್ಕರ್‌ರಂತಹ ಮೇಧಾವಿಗಳ ಸ್ಫೂರ್ತಿಯಿಂದ ಬೆಳೆದವರಾಗಿದ್ದರು. ಗಾಂಧೀಜಿಯವರಿಂದ ಆಶೀರ್ವಾದ ಪಡೆದುಕೊಂಡವರು ಆರ್. ಭರಣಯ್ಯನವರು. ಹಾಗಾಗಿ ಅವರು ಜೀವನದಲ್ಲಿ ಶಿಸ್ತು, ಬದ್ಧತೆ, ಭಕ್ತಿ, ಭಾವವನ್ನು ಬೆಳೆಸಿಕೊಂಡಿದ್ದರು. ಅವರು ತನ್ನತನವನ್ನು ಎಲ್ಲೂ ಕಳೆದುಹೋಗಲು ಸಾಧ್ಯವಾಗಲಿಲ್ಲ. ಅವರಿಗೆ ಸದಾ ಸೇವೆಯೇ ಹೊರತು ಬೇರೆ ಏನು ಕಾಣಲಿಲ್ಲ. ಹಾಗಾಗಿ ಆರ್. ಭರಣಯ್ಯನವರಿಗೆ ಬಡತನದ ವಾಸ್ತವ ಅಂಬೇಡ್ಕರ್‌ರವರ ಹೋರಾಟ ಅವರ ಜೊತೆಗೆ ಇತ್ತು. ಹಾಗಾಗಿ ಆರ್. ಭರಣಯ್ಯನವರು ತನ್ನ ಅಧಿಕಾರದ ಅವಧಿಯಲ್ಲಿ ಇಷ್ಟು ಒಳ್ಳೆಯ ಸೇವೆಯನ್ನು ನಮ್ಮ ಸಮುದಾಯದಲ್ಲಿ ಮಾಡಿ ಇತರರಿಗೆ ಮೇಲ್‌ಪಂಕ್ತಿ ಹಾಕಿಕೊಟ್ಟರು ಎಂದು ಹೇಳಬಹುದು.

ಭರಣಯ್ಯನವರ ಈ ಪರಂಪರೆಯನ್ನು ಮುಂದುವರಿಸಲು ಇಂದಿನ ನಮ್ಮ ಸಮುದಾಯದಿಂದ ಬಂದ ಅಧಿಕಾರಿಗಳಿಗೆ ಸಾಧ್ಯವಾಗ್ತಾ ಇದೆ ಅನ್ಸುತ್ತಾ ತಮಗೆ?

ದಲಿತ ಅಧಿಕಾರಿಗಳು ಭ್ರಷ್ಟರು ಎಂಬ ದೂರು ಕೂಡ ಉಂಟು. ಇದಕ್ಕೆ ತಾವು ಏನು ಹೇಳುತ್ತೀರಿ?

ಈಗಾಗಲೇ ನಾನು ತಿಳಿಸಿದ ಹಾಗೆ ಯಾರು ಬಡತನ, ಕಷ್ಟ, ಹಸಿವು, ಅವಮಾನದಿಂದ ಬೆಳೆದು ಬಂದಿರುತ್ತಾರೋ ಅಂಥವರಿಗೆ ಮಾತ್ರ ಭರಣಯ್ಯನವರಂತೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅಂತಹ ವಾತಾವರಣದಿಂದ ಬೆಳೆದು ಬಂದವರಿಗೆ ಅಧಿಕಾರ ಸಿಕ್ಕರೆ ಈ ಸಮಾಜಕ್ಕೆ ಆ ಸಮುದಾಯದ ಜನರಿಗೆ ಏನಾದರೂ ಮಾಡಲು ಸಾಧ್ಯ. ಕೆಲವರು ಇಂತಹ ಬಡತನದಿಂದ ಓದಿ ಮೇಲೆ ಬಂದಿದ್ದರೂ ಪರಿಸ್ಥಿತಿ ಅವರನ್ನು ಭ್ರಷ್ಟರನ್ನಾಗಿ ಮಾಡಿಸುತ್ತದೆ. ಆದರೆ ಇದು ತಾತ್ಕಾಲಿಕ. ಮುಂದೆ ಅವರು ತಿದ್ದಿಕೊಳ್ಳಲೇಬೇಕಾಗುತ್ತದೆ. ಅಂತಹ ಸಮಯದವರೆಗೆ ಕಾಯಬೇಕಾಗುತ್ತದೆ.

ಭರಣಯ್ಯನವರಿಗೆ ಯಾವುದನ್ನು ಪ್ರತಿಭಟಿಸುವ ಮನೋಧರ್ಮವಿರಲಿಲ್ಲ ಎಂಬ ಮಾತಿದೆ. ಇದು ಹೇಗೆ? ಜೊತೆಗೆ ಜಾತಿ ಮೀರಲು ಪ್ರಯತ್ನಿಸುತ್ತಿದ್ದರು ಎನ್ನುತ್ತಾರೆ?

ನನಗೆ ಹಾಗೆ ಅನ್ನಿಸುವುದಿಲ್ಲ. ಪ್ರತಿಯೊಬ್ಬರಿಗೂ ಒಂದೊಂದು ಗುಣವಿರುತ್ತದೆ. ಕೆಲವರಿಗೆ ಸಾಮ್ಯತೆಯಿಂದ, ಒಳ್ಳೆಯ ನಡತೆಯಿಂದ, ಒಳ್ಳೆಯ ಮಾತಿನಿಂದ ಗೆಲ್ಲುವಗುಣ ಹೊಂದಿರುತ್ತಾರೆ. ಭರಣಯ್ಯನವರು ಅಂತಹ ಸಾಲಿಗೆ ಸೇರುತ್ತಾರೆ. ಜಾತಿಯನ್ನು ಮೀರಿದ ಪ್ರೀತಿಯನ್ನು ಗಳಿಸಿಕೊಳ್ಳುವುದೇ ಇದಕ್ಕೆ ಇರುವ ಪರ್ಯಾಯ ಮಾರ್ಗ. ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವುದು, ಬಡವರ, ದೀನದಲಿತರ ಬಗ್ಗೆ ಕರುಣೆ, ಪ್ರೀತಿ, ಸಹಾಯ ಮಾಡುವ ದೊಡ್ಡ ಗುಣವೇ ನಾವು ಅನುಸರಿಸಬಹುದಾದ ವಿಧಾನ. ಇದಕ್ಕೆ ದೊಡ್ಡ ಉದಾಹರಣೆ ಆರ್. ಭರಣಯ್ಯನವರು.

ಭರಣಯ್ಯನವರು ಒಬ್ಬ Ideal Personalityಯೇ!

ಏಕಾಗಬಾರದು. ಭರಣಯ್ಯನವರು ಮಾಡಿರುವ ಉತ್ತಮ ಕೆಲಸಗಳನ್ನು ಮುಂದುವರಿಸುವವರೆಗೆ ಅವರು ಒಬ್ಬ ಆದರ್ಶ ವ್ಯಕ್ತಿಯಾಗಿ ಕಾಣಬಹುದು. ಅದನ್ನು ಒಪ್ಪುವುದು ಬಿಡುವುದು ಅವರವರಿಗೆ ಬಿಟ್ಟ ವಿಚಾರ. ನನಗೆ ಭರಣಯ್ಯನವರು ಬಾಲ್ಯದಲ್ಲಿ ಸ್ಫೂರ್ತಿಯಾಗಿದ್ದರು ಎಂಬುದು ಇಂದಿಗೂ ಸತ್ಯ.

ಭರಣಯ್ಯನವರು ಚುನಾವಣೆಯಲ್ಲಿ ನಿಂತಿದ್ದು ಸರಿಯೇ ಅಥವಾ ಬೇಡವಾಗಿತ್ತೇ!

ನನ್ನ ಅಭಿಪ್ರಾಯದಲ್ಲಿ ಅವರು ಚುನಾವಣೆಗೆ ನಿಂತಿದ್ದು ಸರಿ. ಆದರೆ ಸೋಲಬಾರದಾಗಿತ್ತು. ಆಡಳಿತ ಸೇವೆಯಲ್ಲಿ ಮಾಡಿದ ಸೇವೆಯನ್ನು ಮುಂದುವರಿಸಲು

ಅವರು ಗೆಲ್ಲಬೇಕಿತ್ತು. ಅವರು ಗೆದ್ದಿದ್ದರೆ, ಮತ್ತಷ್ಟು ಈ ಸಮುದಾಯಕ್ಕೆ ಒಳ್ಳೆಯ ಸೇವೆಯನ್ನು ಮಾಡಬಹುದಾಗಿತ್ತು. ಆದರೆ ಜನರಿಗೆ ಒಳ್ಳೆಯವರು, ಕೆಟ್ಟವರು ಎಂಬ ರಾಜಕೀಯ ಅರಿವು ತಿಳಿದಿಲ್ಲ ಎಂದು ಆರ್. ಭರಣಯ್ಯನವರು ಚುನಾವಣೆಯಲ್ಲಿ ಸೋತಾಗ ತಿಳಿಯುತ್ತೆ. ರಾಜಕೀಯವೇ ಬಡವರಿಗೆ ಅಲರ್ಜಿಯಾಗಿದೆ. ಇನ್ನೂ ಮಧ್ಯಮ ವರ್ಗದವರಿಗೆ 'ಭ್ರಷ್ಟರ ಕೂಟ'ವೇ ರಾಜಕೀಯ ಅಂತ ತಿಳ್ಕೊಂಡಿದ್ದಾರೆ. ಏನೇ ಆದ್ರೂ ಎಲ್ಲವೂ ಜನರ ತೀರ್ಮಾನಕ್ಕೆ ಬಿಟ್ಟಿದ್ದು. ತನ್ನ ಹಿತಚಿಂತಕರನ್ನು ಆಯ್ಕೆ ಮಾಡೋ ಜವಾಬ್ದಾರಿಯೂ ಅವರಿಗೆ ಸೇರಿದೆ. ನಾನು ಎರಡು ಬಾರಿ M.L.A. ಆಗಿ ಕೆಲಸ ಮಾಡಲು ಸಾಧ್ಯವಾಯಿತು. ಆ ಮೂಲಕ ದಲಿತರ ಪರವಾದ ಹಲವಾರು ವಿಚಾರಗಳನ್ನು ವಿಧಾನಸಭೆಯ ಗಮನಕ್ಕೆ ತಂದು ಸರ್ಕಾರ ಆ ಕಡೆ ಗಮನಹರಿಸಲು ಸಾಧ್ಯವಾಯಿತು. ಈ ಸಾಧ್ಯತೆಗಳು ಆರ್. ಭರಣಯ್ಯನವರಿಗೂ ಇತ್ತು. ಆದರೆ ಜನ ಆರಿಸಲಿಲ್ಲ. ಇದು ದುರಂತ. ಅಂಬೇಡ್ಕರ್‌ರವರನ್ನೂ ರಾಜಕೀಯ ಕುತಂತ್ರದಿಂದ ಸೋಲಿಸಿದರು. ಇಲ್ಲಿ ಭರಣಯ್ಯನವರಿಗೂ ಇದೇ ಗತಿ ಆಯಿತು.

ದಲಿತ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯಗಳನ್ನು ಒಗ್ಗಟ್ಟಾಗಿ ಎದುರಿಸಬೇಕು ಎಂಬ ಕಾಲಘಟ್ಟದಲ್ಲಿ ದಲಿತ ಸಮುದಾಯದಲ್ಲೇ ಎಡ-ಬಲ ಎಂಬ ಕಚ್ಚಾಟ ಸರಿಯೇ ಇದಕ್ಕೆ ಕೊನೆ ಎಂದು?

ಇದಕ್ಕೆ ತಿಳುವಳಿಕೆಯ ಕೊರತೆಯೇ ಕಾರಣ. ಎಲ್ಲಿಯವರೆಗೆ ದಲಿತ ಸಮುದಾಯದಲ್ಲಿ ಎಲ್ಲರಿಗೂ ಶಿಕ್ಷಣದ ಅರಿವು ದೊರಕುವುದಿಲ್ಲವೊ ಅಲ್ಲಿಯವರೆಗೂ ಇದು ಕಾಡುವ ಪ್ರಶ್ನೆಯೇ ಸರಿ. ಆದರೆ ಇದೂ ಕೂಡ ತಾತ್ಕಾಲಿಕ. ಎಲ್ಲಾ ದಲಿತ ಗುಂಪುಗಳು ಒಂದಾಗುವ ಕಾಲಘಟ್ಟಕ್ಕೆ ಬಂದು ನಿಲ್ಲುವ ಕಾಲ ದೂರವಿಲ್ಲ. ಅಂತಹ ಪರಿಸ್ಥಿತಿ ಬಂದೇ ಬರುತ್ತದೆ. ಅಲ್ಲಿಯವರೆಗೆ ಕಾಲವನ್ನು ಕಾಯಲೇಬೇಕಾಗುತ್ತದೆ. ಆರ್. ಭರಣಯ್ಯನಂತವರಿಗೆ ಇಂತಹ ಪ್ರಶ್ನೆಗಳೇ ಉದ್ಭವಿಸಲೇ ಇಲ್ಲ. ಕಾರಣ ಅವರು ಬಡವರ, ದೀನ ದಲಿತರ ಸೇವೆ ಮಾಡುತ್ತಾ ಬಂದವರು. ಅವರಿಗೆ ತಿಳಿದಿದ್ದು ಒಂದೆ ನಮ್ಮ ಬಡವರು-ದಲಿತರು ವಿದ್ಯಾವಂತರಾಗಬೇಕು, ಒಳ್ಳೆಯ ಉದ್ಯೋಗ ಗಳಿಸಬೇಕು, ಉತ್ತಮ ಸ್ಥಿತಿಯಿಂದ ಬದುಕಬೇಕು ಎಂದು ನಂಬಿದವರು. ಇದನ್ನು ದಲಿತ ಸಂಘಟನೆಗಳು ಅರಿಯಬೇಕು. ಆಗ ಈ ಎಡ-ಬಲಕ್ಕೆ ವಿರಾಮ ದೊರಕುತ್ತದೆ ಎಂಬುದೇ ನನ್ನ ನಂಬಿಕೆ.


ಭೂತಕಾಲದಲ್ಲಿ-ವರ್ತಮಾನದಲ್ಲಿ ಭರಣಯ್ಯನವರನ್ನು ಹೇಗೆ ನೆನಪು ಮಾಡಿಕೊಳ್ಳಲು ಬಯಸುತ್ತೀರಿ?

ಭೂತಕಾಲದಲ್ಲಿ ಭರಣಯ್ಯನವರು ಮಾಡಿದ ಕೆಲಸಗಳು ನಮಗೆ ಸ್ಫೂರ್ತಿ. ವರ್ತಮಾನದಲ್ಲಿ ಅವರಂತೆ ನಡೆಯಲು ಪ್ರಯತ್ನಿಸುವುದೇ ಅವರಿಗೆ ನಾವು ಸಲ್ಲಿಸುವ ಗೌರವ.

ಆರ್. ಭರಣಯ್ಯನವರ ಬಗ್ಗೆ 50-60 ವರ್ಷಗಳ ನಂತರ ಒಂದು ಪುಸ್ತಕ ತರುತ್ತಿರುವ ಬಗ್ಗೆ ನಿಮ್ಮ ಅನಿಸಿಕೆ, ಈ ಪುಸ್ತಕ ಯಾವ ಸಂದೇಶ ನೀಡಲಿ ಎಂದು ಆಶಿಸುತ್ತೀರಿ?

ಯಾವುದೇ ಕಾಲಘಟ್ಟದಲ್ಲಿ ಒಬ್ಬರ ಬಗ್ಗೆ ನೆನಪು ಮಾಡಿಕೊಳ್ಳುವುದು ಅಗತ್ಯ. ಅದರಲ್ಲೂ ದಲಿತ ಸಮುದಾಯದ ಆಶಾಕಿರಣವಾಗಿದ್ದ ಆರ್. ಭರಣಯ್ಯನವರನ್ನು ನೆನಪು ಮಾಡಿಕೊಳ್ಳುವುದು ಜನಾಂಗದ ದೃಷ್ಟಿಯಿಂದ ಶ್ರೇಷ್ಠವಾದ ಕೆಲಸ. ಇದನ್ನು ಈ ಹಿಂದೆಯೇ ಮಾಡಿದ್ದರೆ ಚೆನ್ನಾಗಿತ್ತು. ಈಗಲಾದರೂ ಕೈಗೆತ್ತಿಕೊಂಡಿರುವುದು ಶ್ಲಾಘನೀಯವಾದ ಕೆಲಸ. ಆರ್. ಭರಣಯ್ಯನವರು ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ, ಅವರ ಶ್ರೇಷ್ಠವಾದ ಕೆಲಸಗಳನ್ನು ಇಂದಿನ ಪೀಳಿಗೆಯವರು ಓದಿ ಸ್ಫೂರ್ತಿಗೊಂಡು ಅವರಂತೆ ದಲಿತ ಸಮುದಾಯದ ಕಲ್ಯಾಣಕ್ಕೆ ನಾಂದಿಯಾಗಲಿ ಎಂದು ಆಶಿಸುತ್ತೇನೆ.

* * *



ಎಲ್ಲಾ ಜನವರ್ಗಗಳ ಸಮನ್ವಯಕಾರ

ಸಿದ್ಧಯ್ಯ ಭಾ.ಆ.ಸೇ.

ನಾವು ಮೊದಲು ಗುರುತಿಸಬೇಕಾಗಿದ್ದು ಭರಣಯ್ಯನವರು ಕಾರ್ಯನಿರ್ವಹಿಸಿದ ಕಾಲಘಟ್ಟವನ್ನು. ಅದು ಪ್ರತಿಯೊಬ್ಬರು ಸ್ವಾವಲಂಬನೆ ಮತ್ತು ಸಹಬಾಳ್ವೆಯ ಜೊತೆ ಎದ್ದು ನಿಲ್ಲಬೇಕಿದ್ದ ಕಾಲಘಟ್ಟ. ದಾಸ್ಯ ಸಂಕೋಲೆಗಳಿಂದ ಬಿಡುಗಡೆ ಪಡೆದು. ಅಸ್ಪೃಶ್ಯತೆ ನಿವಾರಿಸಿಕೊಂಡು, ಒಗ್ಗೂಡಿ ನಡೆಯದ ಹೊರತು ಹೊಸ ಭಾರತ ನಿರ್ಮಾಣ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇತ್ತು. ಇಂಥ ಸಂದರ್ಭದಲ್ಲಿ ಹಲವು ಬಗೆಯ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ನಡೆಸಿದವರು ಮತ್ತು ಅವರ ಪ್ರಭಾವ ಆಗಿನ ಎಲ್ಲಾ ಅಧಿಕಾರಿಗಳ ಮೇಲೂ ಇತ್ತು. ಅಂಥವರ ಪ್ರಭಾವ ಭರಣಯ್ಯನವರಲ್ಲಿ ಇತ್ತೆಂಬುದನ್ನು ನಾವು ಕಾಣಬಹುದು. ಹೀಗಾಗಿ ಭರಣಯ್ಯನವರು ಎಲ್ಲಾ ಜನವರ್ಗಗಳ ಬಡವರ ಪರವಾಗಿ ಮಾದರಿ ಎನಿಸುವ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದವರು ಮತ್ತು ಎಲ್ಲಾ ಸಮುದಾಯಗಳ ಸಾಮಾಜಿಕ ಸಮನ್ವಯತೆಯನ್ನು ಕಾಯ್ದುಕೊಂಡು ಬಂದವರು. ಕಾನೂನಿನ ರೀತಿಯಲ್ಲಿ ಕೂಡ ಅವರ ಒಂದು Balanced ಆದ ಕಾರ್ಯ ವೈಖರಿಯನ್ನು ನಡೆಸಿ ಹೋಗಿದ್ದಾರೆ.

ಆಯುಕ್ತರು
ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಬೆಂಗಳೂರು



ಎಲ್ಲಾ ಜನವರ್ಗಗಳ ಸಮನ್ವಯಕಾರ

ಸಿದ್ಧಯ್ಯ ಭಾ.ಆ.ಸೇ.

ಸಾರ್ವಜನಿಕ ಸೇವೆಯಲ್ಲಿ ಅಪಾರ ಜನಮನ್ನಣೆ ಪಡೆದಿರುವ ಸಿದ್ಧಯ್ಯ ಐ.ಎ.ಎಸ್. ಇವರು ಪ್ರಸ್ತುತ ಕರ್ನಾಟಕ ಸರ್ಕಾರದ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರನ್ನು ಸಂಪರ್ಕಿಸಿ

ಮಾತಾಡಲು ಬೆಂಗಳೂರಿನ ಅವರ ಮನೆಗೆ ಹೋದಗಳಿಗೆ. ಅವರ ಶ್ರೀಮತಿ ಮಂಜುಳಾರವರು ಪ್ರೀತಿಯ ಮಾತುಗಳಿಂದ ಒಳಗೆ ಕರೆದರು. ಸುಸಜ್ಜಿತವಾದ ಮನೆ. ಒಳಗೆ ಕಾಲಿಟ್ಟರೆ ಮನಸ್ಸಿಗೆ ಸಂತೋಷ ನೀಡುವ ವಾತಾವರಣ. ಸಿದ್ಧಯ್ಯನವರು ಒಬ್ಬ ಹಾಡುಗಾರರಾಗಿರುವ ಬಗ್ಗೆ ನೋಡಿ, ಕೇಳಿದ್ದ ನಮ್ಮಂಥವರಿಗೆ ಅವರ ಅಭಿರುಚಿಗೆ ತಕ್ಕ ಹಾಗೇ ಶೃಂಗರಿಸಿದ್ದ ಮನೆ ಅದು. ಕಲಾವಿದನ ಮನಸ್ಸು ಇಚ್ಚೆಪಟ್ಟಂತೆ ಇತ್ತು. ಕೆಲವು ಪೇಯಿಂಟಿಂಗ್ಸ್‌ಗಳು ಮತ್ತೆ ಮತ್ತೆ ನೋಡುವಷ್ಟು ಸುಂದರವಾಗಿ ಗೋಡೆಗಳನ್ನು ಅಲಂಕರಿಸಿದ್ದವು. ಅವರನ್ನು ತುಂಬಾ ಹತ್ತಿರದಿಂದ ಬಲ್ಲ ಶ್ರೀ ಹೀಮಾಂಶುರವರು ಅವರ ಕೆಲಸದ ಒತ್ತಡಗಳು, ಅವರು ದಕ್ಷತೆ ಮೆರೆದು ಹೆಸರಾಗಿದ್ದ ಕ್ಷಣಗಳನ್ನು ಹೇಳುತ್ತಲೇ ನಮ್ಮನ್ನು ಮಾತಾಡುವುದಕ್ಕೆ ಪ್ರೇರೇಪಿಸುತ್ತಿದ್ದರು. ವೈಯುಕ್ತಿಕವಾಗಿ ನಾನು ಅವರನ್ನು ದೂರದಿಂದ ಕಂಡವನು. ಟಿ. ಎಸ್. ವೇಣುಗೋಪಾಲ್ ಅವರ ಬಗ್ಗೆ ಕೇಳಿದ್ದರು. ಸಿದ್ಧಯ್ಯನವರು ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಕಾಲದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಹೀಮಾಂಶುರವರಿಗೆ ಮತ್ತು ಟಿ. ಎಸ್. ವೇಣುಗೋಪಾಲ್‌ರಿಗೆ ಅದರ ನೆನಪನ್ನು ಕೊಡುತ್ತಾ, ಕುಳಿತಿದ್ದೆವು.

ಆ ಕ್ಷಣ. ಒಂದು ಸರಳ ಉಡುಗೆಯಲ್ಲಿ ಶ್ರೀ ಸಿದ್ಧಯ್ಯನವರು ಬಂದರು. ನಮ್ಮನ್ನು ಪರಿಚಯಮಾಡಿಕೊಂಡರು. ನಾನು ನಮ್ಮ ಸಂಸ್ಥೆಗೆ ಅವರು ನೆರವಿತ್ತದ್ದನ್ನು ಹೇಳಿ ಮತ್ತೆ ಕೃತಜ್ಞತೆ ವ್ಯಕ್ತಪಡಿಸಿದೆ. ಒಂದು ಮುಗುಳ್ನಗೆಯೊಂದಿಗೆ ಮಾತಿಗೆ ತೊಡಗಿದರು. ಮೈಸೂರಿನ ಆ ದಿನಗಳನ್ನು ನೆನೆಯುತ್ತಾ ಉಲ್ಲಾಸಗೊಂಡರು. ಮೈಸೂರಿನ ಬಗ್ಗೆ ಅವರ ಮನಸ್ಸಲ್ಲಿ ಇರುವ ಪ್ರೀತಿ ಕೇವಲ ಅಧಿಕಾರಿಯಾಗಿ ಮಾತ್ರವಲ್ಲದೆ, ಮೈಸೂರಿನ (ಸೋಮನಾಥಪುರ) ಕರುಳುಬಳ್ಳಿ ಸಂಬಂಧದ ಮಾತಂತಿತ್ತು. ಆ ಎಳೆ ಹಿಡಿದುಕೊಂಡೇ ಮಾತಾಡತೊಡಗಿದವು.

ಸಿದ್ಧಯ್ಯನವರನ್ನು ಕಾಣುವ ಉದ್ದೇಶವಿದ್ದುದು ಆರ್. ಭರಣಯ್ಯನವರ ಬಗ್ಗೆ ಇವರಿಗೆ ತಿಳಿದದ್ದನ್ನು ದಾಖಲಿಸುವುದಕ್ಕೆ. ಅದಕ್ಕಿಂತಲೂ ಮಿಗಿಲಾಗಿ ಆ ಕಾಲದ ಒಬ್ಬ ದಲಿತ ವರ್ಗದ ಅಧಿಕಾರಿಗೂ ಈ ಕಾಲದ ಒಬ್ಬ ದಲಿತ ಅಧಿಕಾರಿಗೂ ಇರುವ ಕಾರ್ಯನಿರ್ವಹಣಾ ಶೈಲಿಯಲ್ಲಿ ಮತ್ತು ಎದುರಾಗುವ ಸವಾಲುಗಳ ಬಗ್ಗೆ ತಿಳಿಯುವ ಬಯಕೆ ಇತ್ತು. ಅಲ್ಲದೆ ಅಂದಿನ ಆರ್. ಭರಣಯ್ಯನವರ ವೃತ್ತಿ ಬದುಕಿನ ಸಂದರ್ಭಗಳನ್ನು ತಿಳಿಯಬೇಕಾದಲ್ಲಿ ವರ್ತಮಾನದಲ್ಲಿ ಅಧಿಕಾರಸ್ಥರಾಗಿರುವ ಇವರ ವೃತ್ತಿ ಬದುಕಿನ ರೀತಿನೀತಿಗಳನ್ನು ತಿಳಿಯುವ ಹಂಬಲವಿತ್ತು. ಎರಡು ಕಾಲಘಟ್ಟಗಳ, ಎರಡು ಅಧಿಕಾರಿಗಳ ಕಾರ್ಯಾನುಷ್ಠಾನ ಮತ್ತು ಅದರ ಬಗ್ಗೆ ಎರಡು ಕಾಲಗಳ ಸಮಾಜಗಳ ಬಗ್ಗೆ ತಿಳಿಯಲು ಹಂಬಲದಲ್ಲೆ ಮಾತಾಡತೊಡಗಿದೆವು.

ಸಹಜವಾಗೇ ಸಿದ್ಧಯ್ಯನವರ ವೈಯಕ್ತಿಕ ಪರಿಚಯದೊಂದಿಗೆ ಮಾತು ಆರಂಭವಾಯಿತು. ಅವರಾಡಿದ ಮಾತುಗಳು ಇವು;

"ನಾನು ಈಗ ರಾಮನಗರ ಜಿಲ್ಲೆಗೆ ಸೇರಿರುವ, ಅಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದವನು. ನಾನು ಹುಟ್ಟಿದ ಊರು ಒಂದು ರೀತಿಯ ಭಾವೈಕ್ಯತೆಯ ನೆಲೆ. ನಮ್ಮಪ್ಪ ಕೂಡ ಎಲ್ಲಾ ಸಮುದಾಯಗಳ ಗೌರವಕ್ಕೆ ಪಾತ್ರರಾಗಿ ಹಾಗೂ ನ್ಯಾಯಾಧಿಕಾರದಲ್ಲಿ ಕುಳಿತುಕೊಳ್ಳುವಂತಹ ವ್ಯಕ್ತಿತ್ವ ಗಳಿಸಿಕೊಂಡಿದ್ದರು. ಅವರ ಬಳಿ ನ್ಯಾಯ ಕೇಳಲು ಇತರೇ ಸಮುದಾಯದವರು ಬರುತ್ತಿದ್ದರು. ಜಾತಿಯ ಮೇಲರಿಮೆ ಮತ್ತು ಕೀಳರಿಮೆಗಳ ಸೋಂಕು ನಮಗೆ ತಗುಲಿರೋದು ತೀರಾ ಕಡಿಮೆ ಎಂದೇ ಹೇಳಬೇಕು. ಶಾಲೆಯಲ್ಲಿ ಕೂಡ ನಾನು ಜಾತಿಕಾರಣಕ್ಕಾಗಿ ಮುಜುಗರಕ್ಕೆ ಒಳಪಟ್ಟವನಲ್ಲ. ಅದಕ್ಕೆ ಕಾರಣವೆಂದರೆ ನಾನು ಶಾಲೆಯಲ್ಲಿ "ಶಾಲಾ ನಾಯಕ" ಆಗಿದ್ದೆ. ಇದು ಬಹುಶಃ ನನ್ನನ್ನು ನಾನು ಎಲ್ಲರಿಗಿಂತ ಮುಂದು ಅಂದುಕೊಳ್ಳುವುದಕ್ಕೆ ಒತ್ತಾಸೆ ನೀಡಿರಬೇಕು". ಅವರು ಶಾಲಾ ದಿನಗಳಲ್ಲಿ ತಾನು ಜಾತಿ-ಮತದ ಎಲ್ಲೇ ಮೀರಿ ಮುನ್ನಡೆದ ದಿನಗಳನ್ನು ನೆನೆದರು. ಅವರ ವ್ಯಕ್ತಿತ್ವದ ಬಗ್ಗೆ ಅವರಿಗೆ ಅಭಿಮಾನ ಇಮ್ಮಡಿಸಿದಂತೆ ವ್ಯಕ್ತಗೊಂಡಿತು. ನಂತರ ಮಾತು ಮುಂದುವರಿಸಿ "ಓದಿನಲ್ಲಿ ಮುಂದೆ ಇದ್ದರೂ ನನಗೆ ಶಾಲಾ ವಾತಾವರಣದಲ್ಲಿ ಮುನ್ನಡೆಯಲು ಸಹಾಯ ಮಾಡಿದ ಸಂಗತಿ ಯಾವುದೆಂದರೆ, ಇತರ ಸಹಪಾಠಿಗಳಿಗೆ ನಾನು ಮುಂದೆ ನಿಂತು 'ಮಗ್ಗಿ' ಹೇಳಿಸುತ್ತಿದ್ದದ್ದು, ಮೇಸ್ಟರ ಪ್ರತಿನಿಧಿಯಾಗಿರಲು ಅವಕಾಶ ಸಿಕ್ಕುತ್ತಿದ್ದದು ಎಲ್ಲಾ, ನಾನು ಓದಿಕೊಂಡು ಮುಂದೆ ಬಂದುದಕ್ಕೆ ಕಾರಣವಾಗಿ ಕಂಡಿವೆ". ಅವರ ಮಾತಲ್ಲಿ ಬಾಲ್ಯದ ನೆನಪುಗಳು ತೆರೆದುಕೊಂಡವು.

ಸಿದ್ಧಯ್ಯನವರಿಗೆ ತಮ್ಮ ವಿದ್ಯಾರ್ಥಿ ಜೀವನದಲ್ಲಿ ದೊರೆತ ಪ್ರೋತ್ಸಾಹಗಳ ಬಗ್ಗೆ ವಿಶೇಷ ಅಭಿಮಾನವಿರುವುದು ಅವರ ಪ್ರತೀಮಾತುಗಳಲ್ಲಿ ವ್ಯಕ್ತಗೊಳ್ಳುತ್ತಿತ್ತು. ಮಾತು ಆರ್. ಭರಣಯ್ಯನವರ ಸಂಪರ್ಕ ದೊರೆತ ಬಗ್ಗೆ ಬಂತು. ನಾವು ಕೇಳಿದ **"ತಾವು ಭರಣಯ್ಯನವರನ್ನು ಕಂಡಿದ್ದು ಅಥವಾ ಅವರ ಬಗ್ಗೆ ಕೇಳಿದ್ದು ಯಾವಾಗ?"** ಎಂಬ ಪ್ರಶ್ನೆಗೆ ಅವರು ವಿವರಿಸಿದ್ದು ಹೀಗೆ;

"ನಿಮಗೆ ಆಶ್ಚರ್ಯವೆನಿಸಬಹುದು! ನಾನು ಅವರನ್ನ ನೋಡೇ ಇಲ್ಲ. ಅವರ ಬಗ್ಗೆ ಮೊದಲು ಸಮುದಾಯದಲ್ಲಿ ನಂತರ ಅವರ ಮನೆಯ ಕುಟುಂಬದ ಸದಸ್ಯನಾದ ಮೇಲೆ ಹೆಚ್ಚು ತಿಳಿದದ್ದು. ಅವು ನನ್ನ ಓದಿನ ದಿನಗಳು. ಕಾಲೇಜಿಗೆಂದು ನಡೆದು ಹೊರಟಿದ್ದೆ. ಒಂದು ವಿದ್ಯಾರ್ಥಿ ತಂಡ ಬಹುಶಃ ನನಗಿಂತ ಎರಡು-ಮೂರು ವರ್ಷದ ಹಿರಿಯರಿರಬಹುದು ಅಥವಾ ಸಮಾನ ವಯಸ್ಸಿನವರು. ಅವರು

ಭರಣಯ್ಯನವರು ತೀರಿಕೊಂಡರಂತೆ ಅಂದರು. ಅವರು ಯಾರು ಅಂತ ತಿಳಿಯದ ನನ್ನ ಮನಸ್ಸಿನಲ್ಲಿ ಅವರ್ಯಾರೋ ವಿಶೇಷ ವ್ಯಕ್ತಿ ಇರಬಹುದೆಂದು, ಅದಕ್ಕಾಗೆ ಇವರೆಲ್ಲ ಇಷ್ಟು ದುಗುಡದಲ್ಲಿ ಹೇಳುತ್ತಿದ್ದಾರೆ ಅಂತ ಅನ್ನಿಸಿತು. ಆ ಕ್ಷಣ ನನಗೆ ಯಾವ Impact ಆಗಲಿಲ್ಲ! ಒಂದಷ್ಟು ಸಮಯ ಕಳೆದಿತ್ತು. ನನ್ನ ಕ್ಲಾಸ್‌ಮೇಟ್ ಒಬ್ಬಳು. ನಾನು ಒಬ್ಬ ಒಳ್ಳೆಯ ಹಾಡುಗಾರನೆನಿಸಿಕೊಂಡಿದ್ದರಿಂದ ನನ್ನ ಬಗ್ಗೆ ಅಭಿಮಾನ ಹೊಂದಿದ್ದಾಕೆ. ಆಕೆಯಂತೆ ಹಲವಾರು ಗೆಳೆಯರು ನನ್ನ ಹಾಡಿನ ಬಗ್ಗೆ ಮೆಚ್ಚುಗೆಯನ್ನಿಟ್ಟುಕೊಂಡಿದ್ದರು. ಆಕೆ ಮತ್ತು ನಾನು ಕಾಲೇಜು ಸಮಾರಂಭಗಳಲ್ಲಿ ಒಟ್ಟಿಗೆ ಹಾಡಿದ್ದೇವೆ. ಆಕೆ ಒಮ್ಮೆ ನನ್ನನ್ನು 'ಸಿದ್ಧಯ್ಯ ಐ.ಎ.ಎಸ್. ಅಧಿಕಾರಿಯ ಮಗಳಿದ್ದಾಳೆ. ಆಕೆಯನ್ನು ನೀನ್ಯಾಕೆ ಮದುವೆ ಆಗಬಾರದು' ಎಂದು ಸಲಹೆ ನೀಡಿದಳು. ನಾನು 'ಏನ್ ತಮಾಷೆ ಮಾಡ್‌ತ್ತಿದ್ದೀಯಾ. ಐ.ಎ.ಎಸ್. ಅಧಿಕಾರಿ ಅವರ ಮಗಳನ್ನು ನನಗೆ ಕೊಡ್ತಾರಾ? ಜೊತೆಗೆ ಈಗ ನಂದೇನು ಮದುವೆ ಆಗೋ ವಯಸ್ಸಾ?' ಎಂದು ಸುಮ್ಮನೆ ತಳ್ಳಿಹಾಕಿದೆ. ಅಲ್ಲಿಗೆ ಆ ವಿಷಯ ಮರೆತುಹೋಯ್ತು. ಫಸ್ಟ್ ಅಟೆಂಪ್ಟ್‌ನಲ್ಲಿ ಕೆ.ಎ.ಎಸ್. ಪಾಸ್ ಮಾಡಿದೆ. ಅದೇ ಮನೋವೇಗದಲ್ಲಿ ಐ.ಪಿ.ಎಸ್. ಕೂಡ ಮುಗಿಸಿದೆ. ಆ ಸಂದರ್ಭದಲ್ಲಿ ಒಂದು ತರಬೇತಿ ವೇಳೆ ಅಂತ ಕಾಣುತ್ತೆ ನನ್ನ ಬ್ಯಾಚ್‌ಮೇಟ್ ಸುಭಾಷ್ ಭರಣಿ ಕೂಡ ಒಮ್ಮೆ ಇದೇ ವಿಷಯವನ್ನು ಅಂದರೆ, ಭರಣಯ್ಯನವರ ನನ್ನ ಕ್ಲಾಸ್‌ಮೇಟ್ ಹೇಳಿದ ಹುಡುಗಿಯನ್ನೇ ಮದುವೆಯಾಗಲು ನನಗೆ ಸಲಹೆ ನೀಡದರು! ಒಂದೇ ವ್ಯಕ್ತಿಯ ಬಗ್ಗೆ ಎರಡು ಜನ ಎರಡು ಸಂದರ್ಭದಲ್ಲಿ ನನಗೆ ಪ್ರಸ್ತಾಪವಾಡಿದ್ದು ಆಶ್ಚರ್ಯವೆನಿಸಿತು. ಸರಿ ಎಂದು ನೋಡಿದೆ. ಒಪ್ಪಿದೆ. ಮದುವೆ ಆಯಿತು! ಮಂಜುಳಾ ನನ್ನ ಬಾಳಸಂಗಾತಿಯಾದರು. ನಾನು ಭರಣಯ್ಯನವರ ಕುಟುಂಬದಲ್ಲಿ ಒಬ್ಬನಾದೆ. ಆದರೆ ನಮ್ಮಾಕೆಯ ಒತ್ತಾಯದ ಮೇರೆಗೆ ಐ.ಪಿ.ಎಸ್. ತರಬೇತಿಯಲ್ಲಿ ಮುಂದುವರಿಯದೇ ಅದಕ್ಕೆ ರಾಜಿನಾಮೆ ಕೊಟ್ಟು ಇತ್ತ ಬಂದೆ" ಎಂದು ತಮ್ಮ ಯೌವನದ ಹಾಗು ವೃತ್ತಿ ಜೀವನದ ಆರಂಭದ ಗಳಿಗೆಗಳನ್ನು ನೆನೆದುಕೊಂಡರು. ಆರ್. ಭರಣಯ್ಯನವರ ಕುಟುಂಬದೊಳಕ್ಕೆ ಪ್ರವೇಶ ಪಡೆದದ್ದನ್ನು ಸಂಕ್ಷಿಪ್ತವಾಗಿ ಬಿಡಿಸಿಟ್ಟರು.

ನಮ್ಮ ಮಾತುಕಥೆ ಆರ್. ಭರಣಯ್ಯನವರನ್ನು ಇವರು ಒಬ್ಬ ಆಡಳಿತಗಾರರಾಗಿ ಹೇಗೆ ಪರಿಭಾವಿಸಿರಬಹುದೆಂಬ ಕಡೆಗಿತ್ತು. ಅಂತಹ ಕುತೂಹಲವಿರಿಸಿಕೊಂಡೇ ಪ್ರಶ್ನೆ ಕೇಳುತ್ತಿದ್ದೆವು. ತಮ್ಮ ಮಾವನೆಂಬ ಸಂಬಂಧದಿಂದ ದೂರನಿಂತು ಮಾತಾಡಲು ಕೋರಿದೆವು. ಇದಕ್ಕೆ ಕಾರಣ ನಮ್ಮ ಮಾತುಕತೆಗೆ ಮತ್ತು ಭರಣಯ್ಯನವರ ಆಡಳಿತ

ಶೈಲಿಯನ್ನು ತಿಳಿಯುವುದಕ್ಕೆ ಸಹಾಯವಾಗಲಿ ಎಂಬುದಾಗಿತ್ತು. ತಾವು ಬಲ್ಲ ಮತ್ತು ಅವರ ಬಗ್ಗೆ ಗ್ರಹಿಸಿರುವ ಹಲವು ಮಾಹಿತಿಗಳನ್ನು ತಮ್ಮ ಆಡಳಿತಾನುಭವದ ಹಿನ್ನೆಲೆಯೊಳಗೆ ವಿವರಿಸುತ್ತಾ ಹೋದರು.

"ನಾನು ಬಲ್ಲಂತೆ ಭರಣಯ್ಯನವರು He is most emotional parsonality by nature. ಕಷ್ಟ ಎಂದು ಬಂದವರಿಗೆ, ಕಡುಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡುವುದಕ್ಕೆ ಹಾತೊರೆಯುತ್ತಿದ್ದರಂತೆ. ಬಹುಶಃ ಬಡವರನ್ನು ಕಂಡು ಅತ್ತಿದ್ದು ಉಂಟೆಂದು ಕೇಳಿದ್ದೇನೆ. ಇದಕ್ಕಾಗಿ ಅವರು ಬೆಳೆದುಬಂದ ಹಿನ್ನೆಲೆಯು ಕಾರಣವಾಗಿರುತ್ತದೆ. ಈಗಲೂ ನನ್ನೊಳಗೂ ಅಂತ ಸ್ವಭಾವಗಳು ಇದೆ. ಆದರೆ ನಾನು ಅದನ್ನು ವ್ಯಕ್ತಮಾಡುವ ರೀತಿ ಈ ಕಾಲಘಟ್ಟದಲ್ಲಿ ಬೇರೆ ರೀತಿ ಇರಬಹುದು. ಭರಣಯ್ಯನವರನ್ನು ಕಂಡು ಉಪಕಾರಪಡೆದವರು ಅಥವಾ ಅವರನ್ನು ದೂರದಿಂದ ಬಲ್ಲವರೆಲ್ಲರ ಅಭಿಪ್ರಾಯ ಗ್ರಹಿಸಿ ಹೇಳುವುದಾದರೆ, ಅವರು ಸರಕಾರದ ಸವಲತ್ತುಗಳನ್ನು ನೇರವಾಗಿ, ಅಗತ್ಯವುಳ್ಳವರೆಲ್ಲರಿಗೆ ಅದರಲ್ಲೂ ದಲಿತ ಸಮುದಾಯಕ್ಕೆ ತಕ್ಷಣವೇ ತಲುಪಿಸುತ್ತಿದ್ದರು. ಕೆಲಸದ ಅಗತ್ಯವಿರುವವರನ್ನು ಕರೆಸಿಕೊಂಡೋ, ತಾನೇ ಹುಡುಕಿಕೊಂಡೊ ಹೋಗಿ ಅವರವರ ಯೋಗ್ಯತಾನುಸಾರ ಕೆಲಸ ನೀಡಿರುವುದುಂಟು. ಅವರು ಕೆಲಸ ನೀಡುತ್ತಿದ್ದ ವೈಖರಿ ಎಷ್ಟರಮಟ್ಟಿಗೆ ಇತ್ತು ಎಂದರೆ ಅವರು ಮೊದಲು ಕೆಲಸ ಮಾಡಿ, ನಂತರ ಸರಕಾರದ ಅನುಮೋದನೆ ಪಡೆಯುತ್ತಿದ್ದರು. ಅವರ ಆ ಕಾರ್ಯ ಶೈಲಿಯಲ್ಲಿ ತಾನು ಕಾನೂನು ಮಿತಿಯಲ್ಲಿ ಮಾಡಿದೇನೆಂಬ ನಂಬಿಕೆ ಇರುತ್ತಿತ್ತೇನೋ. ಅವರು ನೈತಿಕ ಭಯವಿಟ್ಟುಕೊಂಡು ಕೆಲಸ ನಿರ್ವಹಿಸುತ್ತಿರಲಿಲ್ಲವೆನಿಸುತ್ತದೆ. ಅಷ್ಟರಮಟ್ಟಿಗೆ ಅವರು ಕಾರ್ಯದಕ್ಷತೆ ಮೆರೆದಿದ್ದಾರೆ. ಒಂದು ಬಗೆಯಲ್ಲಿ ಬಡವರ ಪಕ್ಷಪಾತಿಯಾಗಿ ತಮ್ಮ ಅಧಿಕಾರದ ಅವಕಾಶಗಳನ್ನು ಬಳಸಿಕೊಂಡರು. ಇದು ತುಂಬಾ ಮುಖ್ಯವಾದದ್ದು"

ನಮ್ಮ ಪ್ರಶ್ನೆ **"ಜಾತಿವ್ಯವಸ್ಥೆ ಬಹಳ ಗಟ್ಟಿಯಾಗಿತ್ತೆಂಬ ಆ ಕಾಲದಲ್ಲಿ ದಲಿತರ ಏಳಿಗೆಗೆ ಅಷ್ಟೊಂದು ದಿಟ್ಟವಾಗಿ ಕಾರ್ಯನಿರ್ವಹಿಸಲು ಒಬ್ಬ ದಲಿತ ಅಧಿಕಾರಿಗೆ ಸಾಧ್ಯವಿತ್ತಾ?"** ನಮ್ಮೀ ಪ್ರಶ್ನೆಗೆ ಅವರು ನೀಡಿದ ಉತ್ತರವಿದು.

"ನೋಡಿ ನೀವು ಗುರುತಿಸಬೇಕಾದ್ದು ಅಂದಿನ ಕಾಲಘಟ್ಟವನ್ನು – ಆಗ ಇದ್ದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿ ಎಂತಹದು? ಎಂತಹ ಪ್ರಭಾವಳಿ ಎಲ್ಲಾ ಕ್ಷೇತ್ರಗಳ ಮೇಲೂ ಇತ್ತು ಎಂಬುದನ್ನು ಗಮನಿಸಬೇಕಾಗುತ್ತದೆ. ಅದು ನಾವು ಆಗಷ್ಟೆ ಸ್ವಾತಂತ್ರ್ಯ ಗಳಿಸಿದ್ದ ಕಾಲ. ಇಡೀ ಭರತಖಂಡ ಎಲ್ಲಾ ಕ್ಷೇತ್ರಗಳಲ್ಲಿ ಸ್ವಾವಲಂಬನೆಯ ಕಡೆಗೆ ಎದ್ದು ನಡೆಯಬೇಕಿತ್ತು. ನಮ್ಮ ಒಳಗಿನ ಅನೇಕ

ಕೋಟಲೆಗಳನ್ನು ನಿಭಾಯಿಸಿಕೊಳ್ಳುತ್ತಲೇ ಸ್ವಾತಂತ್ರ್ಯ ಗಳಿಸಿದ ಉದ್ದೇಶದ ಕಡೆಗೇ ಎಲ್ಲರ ಪ್ರಯತ್ನ ಸಾಗಬೇಕಿತ್ತು. ಗಾಂಧೀಜಿ ಮತ್ತು ಅವರ ಸಮಕಾಲೀನರು ನಿರೂಪಿಸಿದ 'ಸರ್ವೇಜನ ಸುಖೀನೋಭವತ್' ತತ್ತ್ವ ಎಲ್ಲರ ಆದ್ಯತೆಯ ಸಂಗತಿಯಾಗಿತ್ತು. ಬ್ರಿಟೀಷರ ವಿರುದ್ಧ ಹೋರಾಡಿದ ರೀತಿಯೇ, ಅದೇ ಅರ್ಪಣಾ ಮನೋಭಾವದಲ್ಲಿ ಅಸ್ಪೃಶ್ಯತೆಯ ವಿರುದ್ಧ ಕೂಡ ಗಾಂಧೀಜಿ ತಮ್ಮ ಹೋರಾಟವನ್ನು ನಡೆಸುತ್ತಿದ್ದರು. ದಲಿತರ ಏಳಿಗೆ, ಅಸ್ಪೃಶ್ಯತೆ ನಿವಾರಣೆ ಹೊರತು ನಿಜವಾದ ಭಾರತ ನಿರ್ಮಾಣ ಸಾಧ್ಯವೇ ಇಲ್ಲ ಎಂಬ ಅವರ ಖಚಿತ ನಿಲುವು ಸಾಕಷ್ಟು ಕೆಲಸಮಾಡಿತ್ತು. ಇಂಥ ಒಂದು ಸುಧೀರ್ಘ ಹೋರಾಟದ ಕಾವು ಮತ್ತು ಅದನ್ನು ಮುನ್ನಡೆಸಿದ ವ್ಯಕ್ತಿತ್ವಗಳು ಹಾಗೂ ಅವರಿಂದ ಪ್ರಭಾವಿತಗೊಂಡವರ ಉಪಸ್ಥಿತಿ ಅಧಿಕಾರ ನಡೆಸುವವರ ಬೆನ್ನಿಗಿತ್ತು. ಇದೇ ಭರಣಯ್ಯನವರ ಕಾರ್ಯಶೈಲಿಗೆ, ಅವರ ದಲಿತರಿಗೆ ಹೆಚ್ಚು ಕೆಲಸ ಮಾಡಿದ್ದಕ್ಕೆ ಒತ್ತಾಸೆ ನೀಡಿವೆ. ಹೀಗಾಗಿ ಭರಣಯ್ಯನವರು ಒಬ್ಬ ದಲಿತ ಅಧಿಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ, ಯಶಸ್ಸು ಕಾಣುತ್ತಾ ಬಂದಿರುವುದರಲ್ಲಿ ಆ ಸಂದರ್ಭ ಬಹಳ ಪೂರಕವಾಗಿ ಕೆಲಸಮಾಡಿದೆ".

"ಒಂದು ಕಡೆ ಗಾಂಧೀಜಿಯವರ ಪ್ರಯತ್ನಗಳು. ಇನ್ನೊಂದು ಕಡೆ ದಲಿತರ ದನಿಯಾಗಿ, ಭರತಖಂಡದ ಎಲ್ಲಾ ಶೋಷಿತ ವರ್ಗಗಳ ಕಣ್ಬೆಳಕಾಗಿ ಇದ್ದ ಡಾ. ಬಿ. ಆರ್. ಅಂಬೇಡ್ಕರ್‌ರವರ ಹೋರಾಟದ ಫಲಗಳು ಜೊತೆಗಿದ್ದವು. ಇದು ಆಗಿನ ಕಾಲದ ಅಧಿಕಾರಿಗಳಿಗೆ ಹಲವಾರು ರೀತಿಯಲ್ಲಿ ಸಹಾಯ ಮಾಡಿವೆ. ಇದನ್ನು ನಾವು ಮುಖ್ಯವಾಗಿ ಅವಲೋಕಿಸಬೇಕು. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟ ಜನಸಮೂಹದ ಏಳಿಗೆಗೆ ದುಡಿಯಲು ಮುಂದೆ ಬಂದವರಿಗೆ ಇವು ನೆರವಾಗಿವೆ. ಆಗ ಎಲ್ಲಿ ನೋಡಿ ನೀವು ಅಂತ್ಯಜರ, ದುರ್ಬಲರ ಉದ್ಧಾರಕ್ಕೆ ದುಡಿಯಬೇಕು ಎಂಬ ಸಂದೇಶ ಹಳ್ಳಿ ಹಳ್ಳಿಗಳಲ್ಲಿತ್ತು. ಅಂತಹ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ಯಾರಿಗೂ ಜಾತಿಯ ಹಣೆಪಟ್ಟಿ ಅಷ್ಟಾಗಿ ಬೀಳುತ್ತಿರಲಿಲ್ಲ! ಇದು ಬಹಳ ಮುಖ್ಯ. ಗಾಂಧೀ ಮತ್ತು ಅಂಬೇಡ್ಕರ್‌ರವರ ಪ್ರಭಾವ ಇನ್ನು ದಟ್ಟವಾಗಿಯೇ ಇದ್ದ ಕಾಲವಾದ್ದರಿಂದ ಇವರು ಎಲ್ಲಾ ಜಾತಿಯ ಜನರಿಗೂ ಸಹಾಯ ಮಾಡುತ್ತಲೇ ದಲಿತರಿಗೆ ಹೆಚ್ಚಾಗಿ ನೆರವಾಗಲು ಸಾಧ್ಯವಾಗುತ್ತಾ ಹೋಗಿದೆ. ಇದನ್ನು ಬಹಳ ಮುಖ್ಯವಾಗಿ ಗಮನಿಸಬೇಕು".

"ನಾನು ಈ ಮಾತನ್ನು ಪ್ರಸ್ತಾಪಿಸುವ ಉದ್ದೇಶವೇನೆಂದರೆ, ಒಂದು ಕಾಲಘಟ್ಟದಲ್ಲಿ ಅಧಿಕಾರ ನಡೆಸುವವರಿಗೆ ಸಮಾಜದ ಒಳಗೆ ಮತ್ತು ಹೊರಗೆ ಪ್ರಭಾವ ಬೀರುವ ಸಾಮಾಜಿಕ ವಾತಾವರಣ ಮತ್ತು ಅಂತಹ ವಾತಾವರಣ ಸೃಷ್ಟಿಸಿಕೊಡುವ

ಸಾರ್ವಜನಿಕ ವ್ಯಕ್ತಿತ್ವಗಳು ಕೂಡ ಮುಖ್ಯ. ಇದರಿಂದ ಒಟ್ಟು ಸಮಾಜದ ಅಭಿವೃದ್ಧಿಗೆ ಒಬ್ಬ ಆಡಳಿತಾಧಿಕಾರಿ ಯಾವ ಕಾಲವಾದರೂ ತನ್ನ ಕೊಡುಗೆ ನೀಡಬಲ್ಲ. ಅಧಿಕಾರಶಾಹಿಗೆ ಮಾನವೀಯತೆಯ ಸ್ಪರ್ಶ ತರಬಲ್ಲ. ಅಂಥ ಸನ್ನಿವೇಶಗಳೇ ಭರಣಯ್ಯನವರ ಪ್ರತಿಭೆಯು, ಸಾರ್ವಜನಿಕವಾಗಿಯೂ, ಆಡಳಿತಗಾರನಾಗಿಯೂ ಏಕಕಾಲಕ್ಕೆ ಬೆಳಗಿದ್ದರಲ್ಲಿ ಆಶ್ಚರ್ಯವಿಲ್ಲ! ಜೊತೆಗೇ ಭರಣಯ್ಯನವರು ಯಾವತ್ತು ಬಡವರ ಪರವಾಗೇ ತುಡಿತವನ್ನು ಇಟ್ಟುಕೊಂಡಿದ್ದರಿಂದ ಸಹಜವಾಗೇ ಅವರು ತಮ್ಮ ಅಧಿಕಾರದ ಅವಕಾಶವನ್ನು ಬಡವರಿಗೆ ಬಳಸಿದರು." ಈ ಮಾತಿನ ಮೂಲಕ ಶ್ರೀ ಸಿದ್ಧಯ್ಯನವರು ಪ್ರಸ್ತುತ ಸಂದರ್ಭದಲ್ಲಿ ಸಾರ್ವಜನಿಕ ಒತ್ತಾಸೆ ನೀಡುವ ಚಳುವಳಿಗಳ ಕೊರತೆಯನ್ನು ಮತ್ತು ಸಾರ್ವಜನಿಕವಾಗಿ ಪ್ರಭಾವಿಸಬಲ್ಲ ವ್ಯಕ್ತಿತ್ವಗಳ ಕೊರತೆಯನ್ನು ಗುರುತಿಸಿಕೊಳ್ಳುತ್ತಿರುವಂತೆ ತೋರಿದರು.

ಕರ್ನಾಟಕದ ಸಂದರ್ಭದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಹಾಗೂ ರಾಜಕೀಯವಾಗಿ ಪ್ರಭಾವಿಸಬಲ್ಲ ದಲಿತ ವ್ಯಕ್ತಿತ್ವಗಳ ಕಡೆ ಅವರು ನಮ್ಮ ಗಮನ ಸೆಳೆದಂತೆ ತೋರಿತು. ಮಾತಿನ ಮಧ್ಯೆ ವಿಚಾರಕ್ಕೆ ಪೂರಕವಾಗಿ ಬಸವಲಿಂಗಪ್ಪನವರ ಹಾಗೂ ದೇವರಾಜು ಅರಸುರವರ ಆಡಳಿತ ಅವಧಿಯ ಕಾಲಘಟ್ಟ. ಆ ಕಾಲದ ದಲಿತ, ಹಿಂದುಳಿದ ವರ್ಗಗಳಲ್ಲಿ ಇವರುಗಳು ಮೂಡಿಸಿದ್ದ ಸಾಮಾಜಿಕ, ರಾಜಕೀಯ ಅರಿವು, ಅದರಿಂದಾಗುತ್ತಿದ್ದ ಪ್ರಯೋಜನಗಳ ಎಳೆಗಳನ್ನು ನೆನಪಿಸಿಕೊಂಡರು. ಆದರೆ ಮುಖ್ಯವಾಗಿ ಭರಣಯ್ಯನವರು ಜೀವಿಸಿದ್ದ ಕಾಲದಲ್ಲಿ, ಆಡಳಿತಗಾರರಾಗಿ ಸರ್ಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಕಾಲದಲ್ಲಿದ್ದ, ಆ ಸ್ವಾತಂತ್ರ್ಯ ಹೋರಾಟದ ಕಾವು ನೆರವಿತ್ತ ಬಗ್ಗೆ ಅವರಲ್ಲಿ ಹೆಚ್ಚು ವಿಶ್ವಾಸವಿದ್ದುದು ಕಂಡಿತು. ಅಂಥ ಪ್ರಭಾವಗಳು ಸಾಕಷ್ಟು ಕಾಲ ಜೀವಂತವಾಗಿದ್ದರಿಂದ ಜಾತಿಯ ವೈರುಧ್ಯಗಳಿದ್ದರೂ, ಭರಣಯ್ಯನವರು ದಲಿತರಿಗಾಗಿ ಹೆಚ್ಚು ಕೆಲಸ ಮಾಡಿಕೊಟ್ಟಾಗಲೂ ಅಂದಿನ ಸಮಾಜ ಮತ್ತು ವ್ಯವಸ್ಥೆ ಸಲೀಸಾಗಿ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿತ್ತು. ಅಷ್ಟೇ ಮುಖ್ಯವಾಗಿ ಭರಣಯ್ಯನವರಿಗಿದ್ದ ಬಹುದೊಡ್ಡ ಔದಾರ್ಯವೆಂದರೆ ಎಲ್ಲಾ ಜಾತಿಯ ಬಡವರಿಗೂ, ಅದರಲ್ಲೂ ಅರ್ಹರಿಗೆ ನೆರವಾಗುತ್ತಿದ್ದರು. ಅದು ಕೂಡ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂಬುದು ಸಿದ್ಧಯ್ಯನವರು ಗುರುತಿಸಿಕೊಟ್ಟ ಮತ್ತೊಂದು ಅಂಶ.

"ಇಷ್ಟಾದರೂ ಅವರಿಗೆ ಸವಾಲುಗಳೇ ಇರಲಿಲ್ಲವೆಂದಲ್ಲ! ಭರಣಯ್ಯನವರ ವ್ಯಕ್ತಿ ನಿಷ್ಠತೆ, ಬದ್ಧತೆ, ಸಾಮರ್ಥ್ಯಗಳು ಕೂಡ ಜನ ಅವರನ್ನು ಒಪ್ಪಿಕೊಳ್ಳುವಂತೆ ಮಾಡುತ್ತಿತ್ತು. ಇದು ಮುಖ್ಯ" ಇದು ಸಿದ್ಧಯ್ಯನವರು ತೆರೆದಿಟ್ಟ ಇನ್ನೊಂದು ಮಗ್ಗುಲು. ಭರಣಯ್ಯನವರ ವಿದ್ವತ್ತು ಮತ್ತು ಸಾಮರ್ಥ್ಯದ ಬಗ್ಗೆ ಸಿದ್ಧಯ್ಯನವರಿಗೆ

ಸಹಜ ಗೌರವವಿದ್ದುದು ಇದಕ್ಕೆ ಕಾರಣವೆನಿಸುತ್ತದೆ. ಒಬ್ಬ ಸಮರ್ಥ ಆಡಳಿತಗಾರನಿಗೆ ಒಂದಷ್ಟು ಸಾಂಸ್ಕೃತಿಕ ಮತ್ತು ಧಾರ್ಮಿಕ ಹಾಗೂ ಶೈಕ್ಷಣಿಕ ಜಗತ್ತಿನ ವಿದ್ವತ್ತು ಕೂಡಿದ್ದರಂತೂ ಆತ 'ಅಸಾಮಾನ್ಯ' ನಾಗಬಲ್ಲನೆಂಬುದು ಸಿದ್ಧಯ್ಯನವರ ಅನಿಸಿಕೆ. ಇದಕ್ಕೆ ಅವರು ಮತ್ತೆ ಭರಣಯ್ಯನವರ ಯಶಸ್ಸನ್ನು ಗುರುತಿಸಿಕೊಟ್ಟದ್ದು ಹೀಗೆ;

"ಭರಣಯ್ಯನವರನ್ನು ಎಲ್ಲಾ ಜಾತಿಯ ಜನರು ಒಪ್ಪಲು ಬಹುಶಃ ನನಗೆ ಮನವರಿಕೆಯಾದ ಮುಖ್ಯ ಕಾರಣ ಅವರ ದೈವಭಕ್ತಿ ಮತ್ತು ಸಂಸ್ಕೃತದ ಬಗ್ಗೆ ಅವರಿಗಿದ್ದ ವಿದ್ವತ್ತು. ಅವರು ಬಹಳ ದೊಡ್ಡ ಸಂಸ್ಕೃತ ವಿದ್ವಾಂಸರಾಗಿದ್ದರು. ಸಂಸ್ಕೃತ ಅನ್ನುವುದು ಕೇವಲ ಮೇಲು ಜಾತಿಯವರಾಡುವ, ಅವರಿಗೇ ಮಾತ್ರ ಸಾಧ್ಯವೆನ್ನುವ ಸಂಗತಿಯನ್ನು ಇವರು ಬದಲಾಯಿಸಿದವರು. "ಆತ ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ವಿದ್ವಾಂಸ" ಎಂದು ಬ್ರಾಹ್ಮಣ ಸಮುದಾಯದವರೇ ಮೆಚ್ಚಿ ಮಾತಾಡಿರುವುದನ್ನು ನಾನು ಕೇಳಿದ್ದೇನೆ. ಒಮ್ಮೆ ಉಡುಪಿಯಲ್ಲಿ ಯಾವುದೋ ಸಮಾರಂಭದಲ್ಲಿ ಸುಮಾರು ಎರಡು ಘಂಟೆ ನಿರರ್ಗಳವಾಗಿ ಸಂಸ್ಕೃತದಲ್ಲಿ ಉಪನ್ಯಾಸ ನೀಡಿದ್ದರಂತೆ" ಸಿದ್ಧಯ್ಯನವರ ಈ ನಿರೂಪಣೆಯ ಹಿಂದೆ, ಒಬ್ಬ ದಲಿತ ಸಮೂಹದಿಂದ ಬಂದ ವ್ಯಕ್ತಿಗೆ, ಒಂದು ಸಂಸ್ಕೃತವೋ, ಒಂದು ಅಧಿಕಾರವೋ, ಪ್ರತಿಭೆಯೋ ಇದ್ದರೆ, ಆತ ಜಾತಿ ಮೀರಿಕೊಳ್ಳಬಹುದೆಂಬ ನಂಬಿಕೆ ಇರುವಂತೆ ತೋರುತ್ತಿತ್ತು. ಈ ಸಂಗತಿಯನ್ನು ಹೇಳಿಕೊಳ್ಳುವಾಗ ತಾನು ಕೂಡ ಶಾಲಾ ದಿನಗಳಲ್ಲಿ 'ಶಾಲಾ ನಾಯಕ'ನಾಗಿ ಎಲ್ಲರಿಗಿಂತ ಭಿನ್ನವಾಗಿರಲು ಸಾಧ್ಯವಾಗುತ್ತಿದ್ದ ಸಂಗತಿಯನ್ನು ಸಮೀಕರಿಸಿದಂತೆಯೂ ತೋರತೊಡಗಿತು. ಇವರ ಮಾತಿನ ಮಧ್ಯೆ ತಂದೆಯ ಸಂಸ್ಕೃತದ ಸಾಧನೆಯ ಬಗ್ಗೆ ಮಗಳು ಶ್ರೀಮತಿ ಮಂಜುಳಾ ಸಿದ್ಧಯ್ಯನವರು "ಅಪ್ಪಾ ಸಂಸ್ಕೃತದಲ್ಲಿ ಪದವಿ ಗಳಿಸಿದ್ದರು. ಆ ವಿಷಯದಲ್ಲಿ ಚಿನ್ನದ ಪದಕವನ್ನು ಪಡೆದಿದ್ದರು. ಮನೆಯಲ್ಲಿ ಸಂಸ್ಕೃತದಲ್ಲಿ ಶ್ಲೋಕಗಳನ್ನು ಹೇಳುತ್ತಾ ಪೂಜೆ ಮಾಡುತ್ತಿದ್ದರು. ನಮಗೂ ಹೇಳಿಸುತ್ತಿದ್ದರು" ಎಂದು ಅಭಿಮಾನದಿಂದ ನೆನೆದುಕೊಂಡರು. ನಂತರ ಸಿದ್ಧಯ್ಯನವರು ಮಾತು ಮುಂದುವರಿಸಿ "ನೋಡಿ ಇಂಥ ವಿದ್ವತ್‌ಗಳು ಕೂಡ ಭರಣಯ್ಯನವರ ಕೆಲಸಕಾರ್ಯಗಳಲ್ಲಿ, ವೃತ್ತಿಜೀವನದಲ್ಲಿ ಸಾಕಷ್ಟು ಅನುಕೂಲ ಮಾಡಿವೆ. ಪ್ರತಿಭೆಯನ್ನು ಗಳಿಸಿಕೊಂಡಿದ್ದರೆ ಸಮಾಜ ಖಂಡಿತ ಗುರುತಿಸುತ್ತೆ. ಅವರಿಗೆ ಸಂಸ್ಕೃತ ಅಷ್ಟು ಚೆನ್ನಾಗಿ ತಿಳಿದಿತ್ತು. ಮತ್ತು ಅದನ್ನು ಬಳಸುತ್ತಿದ್ದರಿಂದ ಬ್ರಾಹ್ಮಣ ಸಮುದಾಯಕ್ಕೆ ಪ್ರಿಯರಾದರು. ಇದು 'ಜಾತಿ' ಎಂಬ ಕೀಳರಿಮೆಯಿಂದ ಹೊರಬರಲು ಸಾಧ್ಯವಾಯಿತೇನೋ. ಅವರಿಗೆ ತಮ್ಮ ಕೆಲಸಕಾರ್ಯದಲ್ಲಿ ಇತರರ Acceptance ಸಿಕ್ಕುತ್ತಾ ಹೋಗಿದ್ದು ಕೂಡ ಇದೇ ಕಾರಣಕ್ಕಿರಬಹುದು. ನೋಡಿ

ಯಾವ ಕಾಲಕ್ಕಾದರೂ ಒಬ್ಬ ಸಾರ್ವಜನಿಕ ಸೇವೆಯಲ್ಲಿ ನಿರತನಾದ ವ್ಯಕ್ತಿಗೆ ವಿದ್ವತ್ ಮತ್ತು ಬದ್ಧತೆ ಇದ್ದರೆ ಆತ ಎಲ್ಲೂ, ಯಾವ ಕಾಲಕ್ಕೂ ಯಶಸ್ಸುಗಳಿಸಬಲ್ಲ – ಭರಣಯ್ಯನವರಿಗೆ ಯಶಸ್ಸು ಸಿಕ್ಕಿದ್ದು ಜನಪ್ರಿಯತೆ ಬಂದಿದ್ದಕ್ಕೆ ಈ ಕಾರಣವೂ ಇದೆ".

ಸಿದ್ಧಯ್ಯನವರು ವ್ಯಕ್ತಮಾಡಿದ ಇನ್ನೊಂದು ಮುಖ್ಯ ಸಂಗತಿ ಇದು. "ಭರಣಯ್ಯನವರು ಕೇವಲ ನನ್ನ ಮಾವನಾಗಿದ್ದರು ಎಂಬ ಮಾತ್ರಕ್ಕೆ ನಾನು ಅವರ ಜನಪ್ರಿಯತೆಯನ್ನು ಕೊಂಡಾಡುತ್ತಿಲ್ಲ. ನಿಜಕ್ಕೂ ದಲಿತ ಸಮುದಾಯದ ಮನಸ್ಸಿನೊಳಗೆ ಉಳಿದ ಅವರ ಜನಪ್ರಿಯತೆ ನನ್ನನ್ನು ಹೇಗೆ ತಲುಪುತ್ತಿತ್ತು ಎನ್ನುವುದಕ್ಕೆ ಈ ಮಾತು ಹೇಳುತ್ತಿರುವೆ".

"ಭರಣಯ್ಯನವರ ಪ್ರಭಾವ ಜನಪ್ರಿಯತೆ ಎಷ್ಟು ಇತ್ತೆಂದರೆ, ನಾನು ಹೋದಕಡೆ ಎಲ್ಲಾ ನನ್ನನ್ನು ಭರಣಯ್ಯನವರ ಅಳಿಯ ಅಂತಲೇ ಗುರುತಿಸುತ್ತಿದ್ದರು. ಇದು ಒಂದು ರೀತಿಯಲ್ಲಿ ಸಂತೋಷಕೊಟ್ಟರೂ ಒಂದು ರೀತಿಯಲ್ಲಿ ನನ್ನನ್ನು ಕಾಡುತ್ತಿತ್ತು. ಆಗ ನಾನು "ಇಲ್ಲ ಅವರು ನನ್ನ ಮಾವ ಎಂದು ನನ್ನನ್ನು ಪರಿಚಯ ಮಾಡಿಕೊಳ್ಳುತ್ತಿದ್ದೆ" ಇದು, ಒಂದು ರೀತಿ ನನ್ನಿಂದ ನಿರೀಕ್ಷೆಯನ್ನು ಹೆಚ್ಚು ಮಾಡುತ್ತಾ ಹೋಗುತ್ತಿತ್ತು. ಅವರ ಪ್ರಭಾವ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ನನ್ನ ಮೇಲೆ ಇತ್ತು. ಒಂದು ರೀತಿಯ ನೈತಿಕ ಭಯವನ್ನು ನನ್ನಲ್ಲಿ ಮೂಡಿಸಿತ್ತು ಅನ್ನೋದು ನಿಜ. ಯಾವುದೇ ಒಬ್ಬ ಪ್ರಾಮಾಣಿಕ ಅಧಿಕಾರಿ ಉಳಿದವರಲ್ಲಿ ಇದನ್ನು ಉಂಟುಮಾಡುತ್ತಾನೆ".

"ಭರಣಯ್ಯನವರ ಜನಪ್ರಿಯತೆಯ ಮತ್ತೊಂದು ಮಗ್ಗಲು ಬಗ್ಗೆ ಹೇಳುವುದಾದರೆ; ಅವರು ಎಲ್ಲಾ ಜನವರ್ಗಗಳಲ್ಲಿ ಸಮನ್ವಯತೆ ಕಾದುಕೊಳ್ಳಲು ಪ್ರಯತ್ನಿಸಿದ್ದಾರೆ. ಅದರಲ್ಲಿ ಯಶಸ್ಸು ಕೂಡ ಆಗಿದ್ದಾರೆ. ಭರಣಯ್ಯನವರದ್ದು ಹೊಂದಿಕೊಂಡು, ಕೆಲಸಮಾಡಿಕೊಂಡು ಹೋಗುವ ಕ್ರಮ. ಅವರದು ಕನ್‌ಫ್ರಾಂಟೇಷನ್ ಕ್ರಮವಲ್ಲ. ಹಾಗಾಗಿಯೇ ಅವರು ದಲಿತರಿಗೆ ಸಹಾಯ ಮಾಡಿದರೂ ಅದಕ್ಕೆ ಜಾತಿಯ ಲೇಪ ಬರುತ್ತಿರಲಿಲ್ಲ". ಸಿದ್ಧಯ್ಯನವರ ಬಗ್ಗೆ, ಅವರ ಆಡಳಿತ ವೈಖರಿ ಮತ್ತು ವಿಧಾನಗಳ ಬಗ್ಗೆ ಹೇಳುವವರಲ್ಲಿ ಕಂಡುಬರುವ ಅಂಶವೆಂದರೆ, 'ಭರಣಯ್ಯನವರ ರೀತಿಯಲ್ಲೇ ಹೆಚ್ಚು ಕಡಿಮೆ ಸಿದ್ಧಯ್ಯನವರು ಎಲ್ಲಾ ಜನ ಜಾತಿಗಳ ಕೆಲಸವನ್ನು ಸಮಾನವಾದ ಆದ್ಯತೆ ನೀಡಿ ಮಾಡಿಕೊಡುತ್ತಾರೆ' ಎಂಬುದು. ಸಿದ್ಧಯ್ಯನವರ ಕ್ರಮದಲ್ಲೂ ಈ ರೀತಿಯ ಫ್ಲೆಕ್ಸಿಬಿಲಿಟಿಯನ್ನು ನಾವು ಕಾಣಬಹುದು.

ಸಿದ್ಧಯ್ಯನವರಲ್ಲಿ ಕಂಡುಕೊಂಡ ಇನ್ನೊಂದು ಪ್ರಮುಖ ಸಂಗತಿ ಎಂದರೆ ಇವರಿಗೆ ದಲಿತ ಚಳವಳಿಯ ಎಲ್ಲರ ಪರಿಚಯವೂ ಇದೆ. ಅದರ ಬೆಳೆವಣಿಗೆಗಳು

ಗೊತ್ತು. ಅದರ ಬೆಳವಣಿಗೆಯ ಹಾದಿಯಲ್ಲಿ ಅಧಿಕಾರಶಾಹಿಯ ಮೇಲೆ ಉಂಟುಮಾಡಿದ ಪರಿಣಾಮವೂ ತಿಳಿದಿದೆ. ಇಂದು ಆ ಕಾಲದ ದಲಿತ ಚಳುವಳಿಯ ಪ್ರಖರತೆ ಇಲ್ಲ ಎಂಬುದು ತಿಳಿದಿದೆ! ಅದಕ್ಕೆ ಕಾರಣಗಳನ್ನು ತಿಳಿದಿದ್ದಾರೆ. ಇದರಿಂದಾಗಿ ಒಟ್ಟು ದಲಿತ ಜನ ಸಮೂಹಕ್ಕೆ ಉಂಟಾಗಿರುವ ಭ್ರಮನಿರಸನ, ಅದರ ಪರಿಣಾಮಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಜೊತೆಗೆ ಆರ್.ಎಸ್.ಎಸ್.ನ ಎಲ್ಲಾ ನಾಯಕರ ಪರಿಚಯವೂ ಇದೆ. ಎಲ್ಲಾ ರೀತಿಯ ಪಕ್ಷಗಳ ಮುಖ್ಯಮಂತ್ರಿಗಳ ಹಾಗೂ ಮಂತ್ರಿಗಳ ಬಳಿಯೂ ಕೆಲಸಮಾಡಿದ್ದಾರೆ. ವಿವಿಧ ಸಿದ್ಧಾಂತಗಳನ್ನು ಮೀರಿ ಒಬ್ಬ ಆಡಳಿತಾಧಿಕಾರಿಯ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ. ಎಲ್ಲಾ ಜಾತಿಯ ಜನರೊಂದಿಗೆ ಸಲೀಸಾಗಿ ಬೆರೆಯಬಲ್ಲರು. ಯಾವುದೇ ಕಷ್ಟವೂ ಇಲ್ಲದೆ ಇದು ಅವರಿಗೆ ಸಾಧ್ಯವಾಗಿದೆ.

ಸಿದ್ಧಯ್ಯನವರು ಹೇಳುವಂತೆ ಬಾಲ್ಯದಲ್ಲಿ ತಮಗೆ ಜಾತಿಯ ಕೀಳರಿಮೆಯನ್ನು ಮೀರಿಕೊಂಡು ಬೆಳೆಯುವುದು ಸಾಧ್ಯವಾಗಿದೆ. ಆದರೆ ದಲಿತರ ನೋವುಗಳು ಸ್ಪಷ್ಟವಾಗಿ ಗೊತ್ತಿದೆ. ಇವರು ಮದುವೆ ಆದದ್ದು, ಒಬ್ಬ ಖ್ಯಾತ ಐ.ಎ.ಎಸ್. ಅಧಿಕಾರಿಯ ಕುಟುಂಬದ ಹೆಣ್ಣುಮಗಳನ್ನು. ಅದು ತೀರಾ ಸುಸಂಸ್ಕೃತ ಎನ್ನಬಹುದಾದ ಪರಿಸರವನ್ನು ಮೈಗೂಡಿಸಿಕೊಂಡಿದ್ದ ಕುಟುಂಬ. ಸ್ವತಃ ಭರಣಯ್ಯನವರು ಜಾತೀಯತೆಯ ಸಂಕಷ್ಟಗಳನ್ನು ಅನುಭವಿಸಿದ್ದರೂ ತಮ್ಮ ಮಕ್ಕಳಿಗೆ ಅದನ್ನು ತಟ್ಟದಂತೆ ನೋಡಿಕೊಂಡಿದ್ದು ಕಾರಣವಿರಬಹುದು. ಮನೆಯ ತುಂಬಾ ಜನರೇ ಇದ್ದುದರಿಂದ ಬೇರೆಯವರ ಸಂಪರ್ಕ ಭರಣಯ್ಯನವರ ಮಕ್ಕಳಿಗೆ ಬೇಕಾಗಲಿಲ್ಲವೇನೋ! ಸ್ವಾರಸ್ಯವೆಂದರೆ ಶ್ರೀಮತಿ ಮಂಜುಳಾ ಸಿದ್ಧಯ್ಯನವರು ಹೇಳಿದಂತೆ, ಇವರಿಗೆಲ್ಲ ಜಾತೀಯತೆಯ ಪರಿಚಯ ಒಂದು ಬಗೆಯಲ್ಲಿ ಪರಿಚಯ ಆದದ್ದು ಮದುವೆಯಾದ ಮೇಲೆಯೆ. ತಮ್ಮ ಗಂಡ ಕಂಡುಂಡ ನೋವಿನ ಅನುಭವವನ್ನು ಕೇಳಿಯೆ ಇವರೆಲ್ಲರಿಗೂ ಅದು ತಿಳಿದಿದ್ದು. ಇಷ್ಟಾದರೂ ಸಿದ್ಧಯ್ಯನವರಿಗೆ ಜಾತಿ ವ್ಯವಸ್ಥೆ ಉಂಟುಮಾಡುವ, ಮಾಡಿರುವ, ಮಾಡಲಿರುವ ಕಷ್ಟಗಳ ಬಗ್ಗೆ ಸ್ಪಷ್ಟ ಅರಿವಿದೆ. ಅದಕ್ಕೆ ಅವರು ಹೇಳುವುದು "ಇಂದಿಗೂ ಕೂಡ ಜಾತಿಯ ಸ್ಟಿಗ್ಮವನ್ನು ಮೀರಿಕೊಂಡೆ ನಾವು ಕೆಲಸಮಾಡಬೇಕಾಗುತ್ತದೆ. ನಾನು ಭರಣಯ್ಯನವರು ಕೆಲಸಮಾಡಿದ ಬಹುಪಾಲು ಸ್ಥಳದಲ್ಲೆಲ್ಲಾ ಕೆಲಸಮಾಡಿದ್ದೇನೆ. ಅವರ ಬಗ್ಗೆ ತುಂಬಾ ಒಳ್ಳೆಯ ಮಾತುಗಳನ್ನು ಆಡುವುದನ್ನು ನಾನು ಕೇಳಿದ್ದೇನೆ. ಆದರೆ ಅವರ ಕೆಲಸದ ಕ್ರಮ ಖುದ್ದು ನನಗೆ ಗೊತ್ತಿಲ್ಲ. ಅವರು ನಿರ್ವಹಿಸುತ್ತಿದ್ದ ಫೈಲ್‌ಗಳನ್ನು ನಾನು ನೋಡಿಲ್ಲ. ಆದರೆ ಅವರಿಗೆ ಎಲ್ಲರ ಬಗ್ಗೆ ಅನುಕಂಪ ಇತ್ತು

ಮತ್ತು ಸಹಾಯ ಮಾಡಬೇಕೆಂಬ ಮನಸ್ಸು ಇತ್ತು. ತಕ್ಷಣ ಮಾಡುತ್ತಿದ್ದರು ಎಂಬುದು ಎಲ್ಲೆಡೆ ಇರುವ ಮಾತು. ಕಮಿಟ್‌ಮೆಂಟ್, ಸಾಮರ್ಥ್ಯ, ಕಾಳಜಿ ಇದು ಒಬ್ಬ ಒಳ್ಳೆಯ ಆಫೀಸರ್‌ಗೆ ಇರಬೇಕಾದ ಗುಣಗಳು. ಒಬ್ಬ ದಲಿತ ಅಧಿಕಾರಿ ಒಳ್ಳೆಯ ಕೆಲಸಮಾಡಿದರೆ, ಅದನ್ನು ಒಂದು ಎಕ್ಸೆಪ್ಷನ್ ಆಗಿ ನೋಡಲಾಗುತ್ತದೆ. ಅದು ಇಡೀ ಸಮುದಾಯಕ್ಕೆ ವರ್ಗವಾಗುವುದಿಲ್ಲ. ಆದರೆ ಅವನು ತಪ್ಪಿದರೆ ಆ ಜಾತಿಯೇ ಹೀಗೆ ಎನ್ನಲಾಗುತ್ತದೆ. ಹೆಚ್ಚಿನ ಜನ ಒಳ್ಳೆಯ ಕೆಲಸಮಾಡಿದರೆ ಆ ಸಮುದಾಯಕ್ಕೆ ಒಳ್ಳೆಯದಾಗುತ್ತದೆ. ಈ ನಿಟ್ಟಿನಲ್ಲಿ ನಾವು ಕೆಲಸಮಾಡಬೇಕು" ಅಂದರು. "ಈ ಪ್ರಯತ್ನವನ್ನು ಭರಣಯ್ಯನವರು ಮಾಡಿದ್ದರು" ಎಂದು ಅಭಿಮಾನದಿಂದ ಹೇಳಿದರು.

ಒಟ್ಟಾರೆ ಸಿದ್ಧಯ್ಯನವರ ಕಣ್ಣಮುಂದೆ ಇದ್ದ ಅನುಭವಗಳೆಂದರೆ; ಒಂದು, ದಲಿತ ಅಧಿಕಾರಿಯಾದ ಮಾತ್ರಕ್ಕೆ ರಿಯಾಯ್ತಿ ಇರುವುದಿಲ್ಲ. ಎರಡು, ಆತ ತನಗೆ ಸಿಕ್ಕ ಅವಕಾಶವನ್ನು ದಕ್ಷತೆಯಿಂದ ನಿರ್ವಹಿಸಬೇಕು ಎಂಬುದು ಅವರು ಹೇಳಿದ ಇನ್ನೊಂದು ಮುಖ್ಯಮಾತು. "ಕೆಲಸ ಕಲಿಯಬೇಕು. ಕಾನೂನು ಚೌಕಟ್ಟಿನಲ್ಲಿ ಮಾನವೀಯತೆಗೆ ಅವಕಾಶ ಕಲ್ಪಿಸಿಕೊಂಡು ಕೆಲಸ ಮಾಡುವ ನೈಪುಣ್ಯತೆ ಇಟ್ಟುಕೊಳ್ಳಬೇಕು. ಒಬ್ಬ ಕಾರಕೂನ ಅಥವಾ ಕೈಕೆಳಗಿನ ಅಧಿಕಾರಿ ಹಾಕುವ ನೋಟ್‌ಗೆ ಸಹಿ ಹಾಕುವುದು ನನ್ನ ಕೆಲಸವಾಗಿರುವುದಿಲ್ಲ! ನಾನೂ ಕೂಡ ನನ್ನ ನೈಪುಣ್ಯತೆಯನ್ನು ಮೆರೆಯಬೇಕು. ನಾನು ಪ್ರತಿ ಕಡತದಲ್ಲಿ ಕೊಡುವ ತೀರ್ಪು, ಮಾಡುವ ನಿರ್ಣಯಗಳು ಕೂಡ ನನ್ನ ವ್ಯಕ್ತಿತ್ವವನ್ನು, ನನ್ನ ಕಾರ್ಯದಕ್ಷತೆಯನ್ನು ಪರೋಕ್ಷವಾಗಿ ಹೇಳುತ್ತಿರುತ್ತವೆ. ಎಷ್ಟೋ ಸಂದರ್ಭದಲ್ಲಿ ಇದೇ ನನ್ನ ಬಗೆಗಿನ ಸಾರ್ವಜನಿಕ ಅಭಿಪ್ರಾಯ ಕೂಡ ಆಗಿರುತ್ತದೆ. ಇದರಲ್ಲಿ 'ಜಾತಿ'ಗೆ ಆದ್ಯತೆ ನೀಡುವುದರಲ್ಲಿ ತೋರಬೇಕಾದ ಜಾಣ್ಮೆ ಒಂದಿದೆ. ಅದು ಕಾನೂನು ನೀಡಿರುವ ಸವಲತ್ತುಗಳ ವಿತರಣೆಯಲ್ಲಿ ನಿಷ್ಠೆ ಮತ್ತು ಬದ್ಧತೆ. ಅದೇ ಕಾಲಕ್ಕೆ ಇತರೇ ಜಾತಿಗೂ ಇರುವ ಎಲ್ಲಾ ಬಗೆಯ ಸವಲತ್ತುಗಳ ನೀಡಿಕೆಯಲ್ಲಿ ತೋರಿಸಬೇಕಾದ ಪ್ರಾಮಾಣಿಕತೆ. ಇದು ಎಷ್ಟೋ ಬಾರಿ ಬಹಳ ಬ್ಯಾಲೆನ್ಸ್‌ಡ್ ಆದ ಕ್ರಮ. ಇದನ್ನು ನಾನು ಭರಣಯ್ಯನವರ ಕಾರ್ಯವೈಖರಿಯಲ್ಲಿ ಗುರುತಿಸಲು ಯತ್ನಿಸುತ್ತೇನೆ. ಅವರ ಯಶಸ್ಸಿನಲ್ಲಿ ಈ ಬ್ಯಾಲೆನ್ಸ್‌ಡ್ ಆದ ಕಾರ್ಯ ವೈಖರಿ ಸಾಕಷ್ಟು ಕೆಲಸ ಮಾಡಿದೆ ಎಂದೇ ತಿಳಿದಿದ್ದೇನೆ. ನಾನು ನಿರ್ವಹಿಸುವ ಕೆಲಸಗಳಲ್ಲಿ ಅದನ್ನು ನಾನು ಅನುಸರಿಸಿದ್ದೇನೆ. ಇದಕ್ಕೆ ನಾನು ಇತರೇ ದಲಿತ ಅಧಿಕಾರಿಗಳಿಗಿಂತ ಭಿನ್ನವಾಗಿರಬಹುದೇನೋ" ಎಂದು ಮಾತು ಮುಗಿಸಿದರು.

ನಮಗಾಗಿಯೇ ನಮ್ಮನ್ನು ಉಪಚರಿಸಲೆಂದೇ ಬಗೆ, ಬಗೆಯ ಅಡುಗೆ ಸಿದ್ಧಗೊಳಿಸಿದ್ದರು ಅವರ ಶ್ರೀಮತಿ ಮಂಜುಳಾ. ಸೋದರಿ ವಾತ್ಸಲ್ಯದಲ್ಲಿ ನಮಗೆ

ಖುದ್ದು ಬಡಿಸಿದರು. ತಂದೆ-ತಾಯಿಯವರು ನೀಡಿದ ಉಪಚಾರದ ಬಳುವಳಿ ಆ ಹೆಣ್ಣುಮಗಳಲ್ಲಿ ವ್ಯಕ್ತವಾಗುತ್ತಿತ್ತು. ಅಂಥ ದೊಡ್ಡಮನೆಯಲ್ಲಿ, ಆಳುಕಾಳುಗಳ ಉಪಸ್ಥಿತಿಯಲ್ಲಿ ತಾನೇ ನಿಂತು ಅನ್ನ ಹಾಕಿದ ಆ ಕೈಗಳಿಗೆ ಕೃತಜ್ಞತೆ ಹೇಳುತ್ತಾ ನಾವು ಎದ್ದು ನಡೆದವು. ನಮ್ಮೊಟ್ಟಿಗೆ ಊಟ ಮಾಡಿದ ಆ ದಂಪತಿಗಳು ನಮ್ಮ ಪ್ರಯತ್ನಕ್ಕೆ ಶುಭ ಕೋರಿದ್ದು ನಮ್ಮ ಕೆಲಸಕ್ಕೊಂದು ಗರಿನೆಟ್ಟಂತೆ ತೋರಿತು. ಆ ಹಿರಿಯ ಅಧಿಕಾರಿಯ ಸರಳತೆ ಖುಷಿಕೊಟ್ಟಿತು. ಅವರದು ನೆಮ್ಮದಿ ತುಂಬಿಕೊಂಡ ಸುಖಿ ಕುಟುಂಬ. ನಾವು ಮನೆಬಿಟ್ಟು ಹೊರಟಾಗ ವರ್ಲ್ಡ್‌ಸ್ಪೇಸ್ ರೇಡಿಯೋನಲ್ಲಿ ಬರುತ್ತಿದ್ದ ಜಮಾನದ ಹಿಂದಿ ಹಾಡುಗಳನ್ನು ಅಷ್ಟೇ ಸುಶ್ರಾವ್ಯವಾಗಿ ಹಾಡಿಕೊಳ್ಳುತ್ತಾ ಮಮತೆಯಿಂದ ನಮ್ಮನ್ನು ಬೀಳ್ಕೊಟ್ಟರು. ಆಗ ಭರಣಯ್ಯನವರ ಔದಾರ್ಯ ಮುಂದುವರಿಯುತ್ತಿರುವಂತೆ ಆ ಕ್ಷಣ ತೋರತೊಡಗಿತು. ಆದರೆ ದಲಿತ ಅಧಿಕಾರಿಯೊಬ್ಬರ ಬದುಕಿನಲ್ಲಿ ದಕ್ಷತೆಗೆ ಮಾತ್ರವೇ ಮನ್ನಣೆ ಇದೆಯೇ? ಜಾತಿಯ ಕಣ್ಣಲ್ಲಿ ಎಲ್ಲಾ ಮರೆತು ದಕ್ಷತೆಯನ್ನು ಮಾತ್ರ ಸ್ವೀಕರಿಸುವ ಔದಾರ್ಯ ಈ ಶ್ರೇಣೀಕೃತ ಸಮಾಜಕ್ಕೆ ಇರುವುದೇ? ಇದನ್ನು ಕಂಡಾಗ 'ಹೌದು' ಎಂಬ ನಂಬಿಕೆ ಮೂಡಿತು, ಮತ್ತೊಂದು ಕ್ಷಣ ಇಂಥ ಬದಲಾವಣೆಗೆ ನಮ್ಮ ಸಮಾಜ ತೆರೆದುಕೊಂಡಿರುವುದೇ ಎಂಬ ಅನುಮಾನವೂ ಕೂಡ ಮತ್ತೆ ಸುಳಿದು ಬಂದಂತೆ ತೋರಿತು!!

* * *




ಬಂದ ದಾರಿ ಮರೆಯದ ಗುರಿಕಾರ

ಚಿರಂಜೀವಿ ಸಿಂಗ್

ದೀನ-ದಲಿತರಿಗೆ ಆದ್ಯತೆ ನೀಡಿ ಕೆಲಸ ನಿರ್ವಹಿಸಲು ಸಾಧ್ಯವಾದದ್ದು ಆಗಿನ ನಾಲ್ವಡಿ ಕೃಷ್ಣರಾಜ ಒಡೆಯರು ಸೃಷ್ಟಿಸಿಕೊಟ್ಟಿದ್ದ ಸಾಮಾಜಿಕ ವಾತಾವರಣ ಮತ್ತು ಪ್ರೇರಣೆ. ಆ ಕಾಲದಲ್ಲಿ ಉನ್ನತ ಎಂದುಕೊಂಡಿದ್ದ ಜಾತಿ ಮತ್ತು ದಲಿತ ವರ್ಗದಿಂದ ಬಂದವರೆಲ್ಲರ ಮುಖ್ಯ ಕಾಳಜಿ ದಲಿತರ ಏಳಿಗೆಗಾಗಿ ಆದ್ಯತೆಯಲ್ಲಿ ದುಡಿಯುವುದಾಗಿತ್ತು. ಅಂಥ ವಾತಾವರಣ ಪ್ರೋತ್ಸಾಹ ಭರಣಯ್ಯನವರಿಗೂ ಸಿಕ್ಕಿದೆ. ಹೀಗಾಗಿಯೇ ಅವರು ಒಳ್ಳೆ ಕೆಲಸ ಮಾಡಿದ್ದಾರೆ. ಸಹಜವಾಗೆ ಅವರಿಗೆ ಬಡವರ ಮತ್ತು ದಲಿತರ ಬಗ್ಗೆ ಇದ್ದ ಅಂತಃಕರಣ ಅವರನ್ನು ಮತ್ತಷ್ಟು ಜನಪ್ರಿಯಗೊಳಿಸಿದೆ. ಅವರು ಯಾವತ್ತು ಬಡವರ ರಾಯಭಾರಿಯಾಗಿದ್ದರು. ಬಹಳ ಮುಖ್ಯವಾಗಿ ಅವರು ಬಂದ ದಾರಿಯನ್ನು ಮರೆಯಲಿಲ್ಲ. ಇಂದಿಗೂ ದಲಿತ ಕುಟುಂಬದಿಂದ ಬಂದವರು ತಮ್ಮ ಹಿಂದಣ ಹೆಜ್ಜೆಗಳನ್ನು ಮರೆಯಬಾರದು.

ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ – ಬೆಂಗಳೂರು



ಬಂದ ದಾರಿ ಮರೆಯದ ಗುರಿಕಾರ

ಚಿರಂಜೀವಿ ಸಿಂಗ್

ಆರ್. ಭರಣಯ್ಯನವರ ಜೀವನ–ಸಾಧನೆಗಳ ಹಾದಿಯನ್ನು ಹರಸುತ್ತಾ ಹೊರಟ ನಾವು ಕಂಡ ಪ್ರಮುಖರಲ್ಲಿ ಚಿರಂಜೀವಿಸಿಂಗ್ ಒಬ್ಬರು. ಅವರ ಭೇಟಿ ಮತ್ತು ಅವರೊಂದಿಗೆ ಕರ್ನಾಟಕದ ಅಧಿಕಾರಿಶಾಯಿ ಕುರಿತಂತೆ ನಡೆಸಿದ ಮಾತುಕತೆಗಳು

ಬಹಳ ವಿಶೇಷವೆನಿಸುವಂಥದ್ದು. ಚಿರಂಜೀವಿ ಸಿಂಗ್ ಭಾರತದ ಆಡಳಿತ ಸೇವೆಯಲ್ಲಿ ತಮ್ಮ ಸರಳತೆಯಿಂದ ಹೆಸರು ವಾಸಿಯಾಗಿರುವವರು ಅವರನ್ನು ಕಾಣಲೆಂದೇ ಅವರ ಮನೆಗೆ ಬಂದೆವು. ಹೀಮಾಂಶು ದೂರವಾಣಿ ಮೂಲಕ ನಮ್ಮ ಭೇಟಿಗೆ ಅರ್ಧ ತಾಸು ನೀಡಬೇಕೆಂದು ಕೋರಿದ್ದರು. ಆ ಬೆಂಗಳೂರಿನ ನಗರದ ಮಧ್ಯೆ ಒಂದು ಪುಟ್ಟ ಗುರುಕುಲವೋ, ಕಲಾ ಗ್ಯಾಲರಿಯೋ ಎಂಬಂತೆ ಜೀವ ತುಂಬಿಸಿಕೊಂಡಿದ್ದ ಮನೆ ಅದು. ಮನೆಯೊಡತಿ ಎಂದು ನೀವು ತಿಳಿದಿದ್ದರೆ ಮಾತ್ರ ನಮಸ್ಕರಿಸಬಹುದಾದಷ್ಟು ಸಾಮಾನ್ಯ ಹೆಂಗಸಂತೆ ಅವರ ಶ್ರೀಮತಿ ಬಂದು ಸ್ವಾಗತಿಸಿದರು. ಆ ಮನೆಯ ಅಂಗಳದಲ್ಲಿ ಹೋಗಿ ಕುಳಿತೆವು. ನಮ್ಮನ್ನು ಮೊದಲು ಅಲ್ಲಿನ ಚಿತ್ರಪಟಗಳು, ವಿವಿಧ ಸಾಧು–ಸಂತರ ಪೇಯಿಂಟಿಂಗ್ಸ್ ಕೆಲವು ಗೋಡೆಗಳನ್ನು ಅಲಂಕರಿಸಿದ್ದರೆ, ಮತ್ತೆ ಕೆಲವು ನೆಲದ ಮೂಲೆಗಳಲ್ಲಿ ಓರಣವಾಗಿದ್ದವು. ಬಂದ ಅತಿಥಿಗಳಿಗೆ ಅನುಕೂಲವಾಗಲೆಂದೇ ಇಟ್ಟಿದ್ದ ನಾಲ್ಕು ಸೋಫಾಗಳು. ಅಂಗಳದಲ್ಲಿ ಎತ್ತ ತಿರುಗಿ ನೋಡಿದರು ಪುಸ್ತಕಗಳು, ಪುಸ್ತಕಗಳು ಅಷ್ಟೆ! ಅದೇ ನಿರ್ಮಲ ನಗುವಿನಿಂದ ಬಂದ ಅವರಿಗೆ ನಮಸ್ಕರಿಸಿದೆವು. ನಮಸ್ಕಾರವನ್ನು ಸ್ವೀಕರಿಸಿ ಕುಳಿತರು. ಅವರ ಮೆಲುದನಿ ಸಂತನೊಬ್ಬನ ವಾಣಿಯಂತೆ ಮಧುರವಾಗಿ, ಹಿತವಾಗಿ ಕೇಳಿತು. ಟಿ. ಎಸ್. ವೇಣುಗೋಪಾಲ್ ವಿನೀತರಾಗಿ ಅವರನ್ನು ಮಾತನಾಡಿಸಲು ಸಿದ್ಧವಾದರು. ಹೀಮಾಂಶುರವರು ನಮ್ಮನ್ನು ಪರಿಚಯಿಸಿಕೊಟ್ಟ ನಂತರ ನಾವು ಮಾತಿಗಿಳಿದೆವು. ಆ ಸರಳತೆ ಕೊಡುವ ಕಷ್ಟದ ಅರಿವು ಪ್ರತ್ಯೇಕ್ಷವಾಗಿ ನಮ್ಮನ್ನು ಆವರಿಸಿಕೊಂಡಿತು. ಭರಣಯ್ಯನವರ ಒಂದು ಕಿರುಪರಿಚಯವನ್ನು ನಾವು ಕೊಡುತ್ತಿದ್ದಂತೆ ಅವರು 'ಹೌದು.. ಅವರ ಬಗ್ಗೆ ನಾನು ಕೇಳಿದ್ದೇನೆ' ಎಂದರು. ಅವರ ಬಗೆಗಿನ ನಮ್ಮ ಗೌರವ ಇಮ್ಮಡಿಸಿತು. ಏಕೆಂದರೆ ಕರ್ನಾಟಕದ ನೆಲ–ಜಲದಂತೆ, ಜನಮನವನ್ನು ಆಳವಾಗಿ ಕಂಡಿದ್ದ ಜೀವ ಅದು. ಒಂದು ಭೌಗೋಳಿಕ ನೆಲದಲ್ಲಿ ಕಾರ್ಯ ನಿರ್ವಹಿಸಬೇಕಾದರೆ ಒಬ್ಬ ಅಧಿಕಾರಿಗೆ ಇರಬೇಕಾದ ಭೂತ–ವರ್ತಮಾನದ ವಿವರಗಳು ಅವರಲ್ಲಿರುವುದು ಕಂಡು ಬೆರಗಾದೆವು. ಕರ್ನಾಟಕದ ಬಗ್ಗೆ ಅವರಿಗಿದ್ದ ಅಪಾರ ಜ್ಞಾನ – ತಿಳುವಳಿಕೆ ಬಗ್ಗೆ ಮಾತನಾಡುವ ಜನರಿಂದ ನಮಗೆ ಅನೇಕ ಸಂಗತಿಗಳು ಹಿಂದೆ ಕೂಡ ತಿಳಿದಿದ್ದವು. ಹೀಗಾಗಿ ಅವರು ತಮ್ಮ ಹಿರಿಯ ತಲೆಮಾರಿನ ಅಧಿಕಾರಿಯೊಬ್ಬರ ಬಗ್ಗೆ 'ನಾನು ಸ್ವಲ್ಪ ಬಲ್ಲೆನು' ಎಂದು ಹೇಳಿದುದು ನಮ್ಮ ಗೌರವ ಇಮ್ಮಡಿಗೊಳ್ಳಲು ಕಾರಣವಾಗಿತ್ತು. ಇದು ಸಹಜವಾಗಿ ವರ್ತಮಾನದ ಒಬ್ಬ ನಿಷ್ಠಾವಂತ ಅಧಿಕಾರಿ ಭೂತಕಾಲದ ಒಬ್ಬ ನಿಷ್ಠಾವಂತ ಅಧಿಕಾರಿಯ ಬಗ್ಗೆ ತಿಳಿದಿರಲು ಸಾಧ್ಯವೆಂಬ ಮಾತಿಗೆ ಉದಾಹರಣೆಯಂತೆ ನಮಗೆ ಅದು ತೋರಿತು.

ಚಿರಂಜೀವಿಸಿಂಗ್ ಭರಣಯ್ಯನವರ ಸ್ಮರಣೆ ಮಾಡಿಕೊಳ್ಳಲು ಇರಬಹುದಾದ ಕಾರಣದ ಬಗ್ಗೆ ನಾವು ಕುತೂಹಲ ವ್ಯಕ್ತಮಾಡಿದವು. ಅದಕ್ಕೆ ಅವರು 'ಅವರು ಒಬ್ಬ ನಿಷ್ಠಾವಂತ ದಲಿತ ಅಧಿಕಾರಿಯಾಗಿದ್ದರು. ಬಡವರ ಬಗ್ಗೆ ಬಹಳಷ್ಟು ಒಳ್ಳೆ ಕೆಲಸ ಮಾಡಿದ್ದಾರೆ ಎಂಬ ಮಾತು ಇದೆ. ಇದನ್ನೆಲ್ಲಾ ನಾನು ನನ್ನ ತಿಳುವಳಿಕೆಯ ವಿಸ್ತಾರಕ್ಕಾಗಿ ಅರಿತುಕೊಂಡಿದ್ದೆ' ಎಂದು ಹೇಳುವಾಗ ನಿಷ್ಠಾವಂತ ಲೋಕದ ಭೂತಕಾಲದ ಅವರ ಶೋಧ ಕರ್ನಾಟಕ ಆಡಳಿತ ಕ್ಷೇತ್ರದ ಅದೃಷ್ಟವೆಂಬಂತೆ ಗೋಚರಿಸತೊಡಗಿತು. ಮೇಲಾಗಿ ದಲಿತ ಜನ ಸಮುದಾಯದಿಂದ ಬಂದು ಬದ್ಧತೆಯಿಂದ ಕೆಲಸ ಮಾಡುವವರ ಬಗೆಗಿನ ಅವರ ಒಲುಮೆ ಖುಷಿಕೊಟ್ಟಿತು. ಈ ನಿಟ್ಟಿನಲ್ಲಿ ಅವರು ವ್ಯಕ್ತಮಾಡುತ್ತ ಹೋದ ದಲಿತ ಅಧಿಕಾರಿಗಳ ಬಗೆಗಿನ ಅವರ ಕಳಕಳಿ ಇದು; "ನಾವು ಸಾರ್ವಜನಿಕರ ಸೇವೆಗೆಂದು ಮೀಸಲಾದವರು. ಯಾವುದೇ ಜಾತಿಯಾಗಲಿ, ಜಾತಿ ಸ್ಟಿಗ್ಮವನ್ನು ಮೀರಿ ನಡೆಯಬೇಕಾದವರು. ಅದರಲ್ಲೂ ಒಬ್ಬ ದಲಿತ ಅಧಿಕಾರಿಗೆ ವಿಶೇಷವಾದ ಸಾಮಾಜಿಕ ಹೊಣೆಗಾರಿಕೆ ಇದೆ. ಏಕೆಂದರೆ ಆತ ಒಳ್ಳೆ ಕೆಲಸ ಮಾಡಿದರೆ, ಅದನ್ನು ಒಂದು ವಿಶೇಷತೆ ಎಂಬಂತೆ ಕಾಣಲಾಗುತ್ತದೆ. ಆದರೆ ಅದು ಆ ಇಡೀ ಸಮುದಾಯದ ಗೌರವವಾಗಿ ವಿಸ್ತಾರಗೊಳ್ಳುವುದಿಲ್ಲ! ಅಕಸ್ಮಾತ್ ತಪ್ಪಾದರೆ ಆ ಜಾತಿಯೇ ಹೀಗೆ ಎಂಬಂತೆ ನೋಡಲಾಗುತ್ತದೆ". ಈ ವಿಚಾರದಲ್ಲಿ ನಾನು ಭರಣಯ್ಯನವರ ವಿಶೇಷತೆಯನ್ನು ಕೇಳಿ ತಿಳಿದಿದ್ದೇನೆ ಹಾಗು ಗೌರವವಿರಿಸಿಕೊಂಡಿದ್ದೇನೆ" ಎಂದರು.

ಚಿರಂಜೀವಿ ಸಿಂಗ್ ತಂದೆ, ತಾಯಿ ಸ್ವಾತಂತ್ರ್ಯದ ಹೊಸ್ತಿಲಲ್ಲಿ ದೇಶ ಇಬ್ಭಾಗವಾದಾಗ ಪಾಕಿಸ್ತಾನದಿಂದ ಇಲ್ಲಿಗೆ ನಿರಾಶ್ರಿತರಾಗಿ ಬಂದವರು. ಆಗ ಇವರು ಹಸುಗೂಸು! ಅಂದರೆ 2-3 ವರ್ಷ ಪುಟ್ಟ ಪೋರ! ಮೂರು ವರ್ಷ ಮಗುವಿನ ಮನಸ್ಸಲ್ಲಿ ಏನು ತಾನೇ ಇದ್ದೀತು. ಅಪ್ಪ - ಅಮ್ಮನ ಸೆರಗ ಮರೆಯಲ್ಲಿ, ಭಾರತದತ್ತ ವಲಸೆ ಬಂದ ಕುಟುಂಬ ಅದು. ಅಂದು ಆ ಕುಟುಂಬ ಜೀವನ ಪ್ರೀತಿಯನ್ನು ಈ ನೆಲದಲ್ಲಿ ಹರಸಿ ಬಂದಿತ್ತು. ತಂದೆ ಶ್ರೀ ಹಾರೆನ್ ಸಿಂಗ್ ಕೃಷಿ ಇಲಾಖೆಯ ಸೇವೆಗೆ ಸೇರಿದ್ದರು. ಸರ್ಕಾರಿ ಸೇವೆಯ ಪರಿಶುದ್ಧತೆಯ ಮೊದಲ ಪಾಠವನ್ನು ಮಗನ ಕಿವಿಗೆ ಹಾಕಿಯೇ ಬೆಳೆಸಿದವರು. ತಾಯಿ ಪ್ರಕಾಶ್ ಕೌರ್ ಇವರನ್ನು ವಿಶೇಷ ಮಮತೆಯಿಂದ ಪೊರೆದ ಶ್ರೇಷ್ಠ ಜೀವ. ಆ ಸುದೀರ್ಘ ಪ್ರಯಾಣದಿಂದ ಬಂದು ನೆಲೆಗೊಂಡಿದ್ದು ಲೂದಿಯಾನದ ಖನ್ನಾ ಗ್ರಾಮದಲ್ಲಿ. ನಿರಾಶ್ರಿತರಾಗಿ ಬಂದವರಿಗೆ ಸರ್ಕಾರ ಆಗ ಭೂಮಿ ನೀಡಿತ್ತು. ಅಲ್ಲೆ ಉತ್ತಿ-ಬೆಳೆದು ಜೀವನ ನಿರ್ವಹಿಸಬೇಕಾದ ಕಡುಕಷ್ಟದ ಕಾಲ. ಕೃಷಿ ನೆಚ್ಚಿ ಬದುಕಿದ ಕುಟುಂಬದಲ್ಲಿ ಅರಳಿದ

ಪ್ರತಿಭೆ ಚಿರಂಜೀವಿ ಸಿಂಗ್. ಓದಿನ ದಿನಗಳು, ಬಾಲ್ಯವೆಲ್ಲ ಲೂದಿಯಾನದಲ್ಲಿ ಕಳೆಯಿತು. ಜೊತೆಗೆ ತಂದೆ ಸರ್ಕಾರಿ ಸೇವೆಯಲ್ಲಿದ್ದರಿಂದ ಕೆಲವು ಕಡೆ ಹೋಗಬೇಕಾಗುತ್ತಿತ್ತು. ಇದು ವಿವಿಧ ಜನಜೀವನದ ಬದುಕು ಬವಣೆಗಳನ್ನು ತಿಳಿಯುವುದಕ್ಕೆ ಅವಕಾಶವಾಗುತ್ತಿತ್ತು. ವಲಸೆ ಮತ್ತು ನಿರಾಶ್ರಿತ ಜೀವನದ ವಿಚಿತ್ರವನ್ನು ಬಲ್ಲ ಜೀವಕ್ಕೆ ಈ ನೆಲದ ಬಡವರ, ದೀನ ದಲಿತರ ಬದುಕು ಅರ್ಥವಾಗುತ್ತಿತ್ತು. 1969ರ ಸಂದರ್ಭಕ್ಕೆ ಐ.ಎ.ಎಸ್. ಪಡೆದರು. ಆಗ ಈ ಸೇವೆಯಲ್ಲಿ ತೊಡಗುವವರಿಗೆ ಮೂರು ರಾಜ್ಯಗಳಿಗೆ ತೆರಳಿ ಸೇವೆ ಸಲ್ಲಿಸುವುದಕ್ಕೆ ಅವಕಾಶವಿರುತ್ತಿತ್ತು. ಮೂರರಲ್ಲಿ ಯಾವುದಾದರೂ ಒಂದು ರಾಜ್ಯಕ್ಕೆ ತಮ್ಮ ಪ್ರಥಮ ಆಯ್ಕೆಯನ್ನು ತಿಳಿಸಬೇಕಿತ್ತು. ನಿಜಕ್ಕೂ ಅದು ಕನ್ನಡ ನೆಲದ ಅದೃಷ್ಟವೆನ್ನಬಹುದು, ಚಿರಂಜೀವಿ ಸಿಂಗ್‌ರವರು ಕರ್ನಾಟಕವನ್ನು ತಮ್ಮ ಮೊದಲ ಆಯ್ಕೆಯನ್ನಾಗಿ ಬರೆದು ತಿಳಿಸಿದರಂತೆ! ಅದಕ್ಕೆ ಅವರು ನೀಡಿದ ಕಾರಣ ಅವರ ಶುದ್ಧ ಮನಸ್ಸಿಗೊಂದು ಉದಾಹರಣೆಯಾಗಿದೆ. "ಈ ನೆಲದ ನೀರಿನ ಋಣ ಮತ್ತು ಪೂರ್ವಜನ್ಮದ ಋಣ ಸಂಬಂಧ ನಾನು ಕರ್ನಾಟಕ ರಾಜ್ಯಕ್ಕೆ ಬಂದೆನು. ಇಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕು – ಇದು ನನಗೆ ಅತ್ಯಂತ ಸಂತೋಷ ನೀಡಿದೆ" ಎಂದು ಅತ್ಯಂತ ಅಭಿಮಾನ ಪೂರ್ವಕ ಮಾತುಗಳಲ್ಲಿ ಹೇಳಿದರು.

ಅವರ ವ್ಯಕ್ತಿ ಪರಿಚಯದ ಸಂಕ್ಷಿಪ್ತ ವಿವರ ಪಡೆದ ನಂತರ ಭರಣಯ್ಯನವರ ಬಗ್ಗೆ ಅವರು ತಿಳಿದಿರುವುದು ಮತ್ತು ವಿಶೇಷವಾಗಿ ಕರ್ನಾಟಕದ ಸಂದರ್ಭದಲ್ಲಿ ಅಧಿಕಾರಶಾಹಿಯ ಅದರಲ್ಲೂ ದಲಿತ ಅಧಿಕಾರಿಗಳ ಬಗೆಗಿನ ಸಾರ್ವಜನಿಕ ಅಭಿಪ್ರಾಯಗಳ ಬಗ್ಗೆ ತಿಳಿಯಲಿಚ್ಛಿಸಿದೆವು. ದೀನ ದಲಿತರ ಬಗ್ಗೆ ದಕ್ಷತೆಯಿಂದ ಅಧಿಕಾರಶಾಹಿ ಕೆಲಸ ನಿರ್ವಹಿಸುವ ಅನಿವಾರ್ಯತೆಯನ್ನು, ಅದಕ್ಕೆ ಇದ್ದ ಪೂರಕವಾದ ವಾತಾವರಣದ ಬಗ್ಗೆ ಸಿದ್ಧಯ್ಯನವರು ಗುರುತಿಸಿಕೊಟ್ಟಂತಹ ಚಾರಿತ್ರಿಕ ವಿಚಾರ ಒಂದು ಕಡೆಯಾದರೆ, ಚಿರಂಜೀವಿ ಸಿಂಗ್ ಗುರುತಿಸಿಕೊಟ್ಟ ಇನ್ನೊಂದು ಐತಿಹಾಸಿಕ ಸಂದರ್ಭ ಬಹಳ ಮುಖ್ಯವಾದದ್ದು. "ನೋಡಿ ಅಧಿಕಾರಿಗಳು ದೀನ ದಲಿತರಿಗೆ ಆದ್ಯತೆ ನೀಡಿ ಕೆಲಸ ನಿರ್ವಹಿಸಲು ಸಾಧ್ಯವಾದದ್ದು ಆಗಿನ ನಾಲ್ವಡಿ ಕೃಷ್ಣರಾಜ ಒಡೆಯರು ಸೃಷ್ಟಿಸಿದ್ದ ವಾತಾವರಣ. ಆ ಕಾಲದಲ್ಲಿ ಉನ್ನತ ವರ್ಗಗಳಿಗೆ ಸೇರಿದ ಅಧಿಕಾರಿಗಳಿದ್ದರು. ಆದರೆ ಅವರ ಕಾಳಜಿಗಳು ಪ್ರಥಮ ಆದ್ಯತೆಯಾಗಿ ದಲಿತರ ಸೇವೆಗೂ ಇರಬೇಕಿತ್ತು. ಇದೇ ವಾತಾವರಣ ಮತ್ತು ಪ್ರೋತ್ಸಾಹ ಭರಣಯ್ಯನವರಿಗೂ ದೊರಕಿತ್ತು ಎಂದು ನಾನು ಭಾವಿಸುತ್ತೇನೆ. ಹೀಗಾಗಿಯೇ ಅವರು ಒಳ್ಳೆಯ ಸೇವೆ ನೀಡಿ ಹೆಸರಾಗಿದ್ದಾರೆ. ಸಹಜವಾಗಿ ಬಡವರ – ದಲಿತರ

ಬಗ್ಗೆ ಕಾಳಜಿ ಇದ್ದುದು ಸಹ ಅವರು ಜನಪ್ರಿಯರಾಗಲು ಮತ್ತಷ್ಟು ಕಾರಣವಾಗಿದೆ ಎನಿಸುತ್ತದೆ. ಜೊತೆಗೆ ತಾವು ಪಡೆದ ಅವಕಾಶವೊಂದರಿಂದಲೇ ಅವರು ಆ ಕಾಲದಲ್ಲಿ ಸಾಧನೆ ಮಾಡಿದ್ದು ದೊಡ್ಡ ಸಂಗತಿಯಾಗಿದೆ".

"ಭರಣಯ್ಯನವರಲ್ಲಿ ನಾವು ಮುಖ್ಯವಾಗಿ ಗುರುತಿಸಬೇಕಾದ್ದು ಏನೆಂದರೆ; ಅವರು ಬಂದ ದಾರಿಯನ್ನು ಮರೆತಿರಲಿಲ್ಲವೆನಿಸುತ್ತೆ. ಇದು ಮುಖ್ಯ. ದಲಿತ ಕುಟುಂಬದಿಂದ ಬಂದವರು ತಾವು ತಮ್ಮ ಹಿಂದಣ ಹೆಜ್ಜೆಗಳನ್ನು ಮರೆಯಬಾರದು. ಭರಣಯ್ಯನವರು ಹಾಗೆ ಬಂದವರು ತಮ್ಮ ಜನರನ್ನು ಮರೆಯದೆ ಸಹಾಯ ಮಾಡಿದರು. ಒಬ್ಬ ಒಳ್ಳೆಯ ಆಡಳಿತಗಾರ ಹೇಗೆ ಜನಪ್ರಿಯವಾಗುತ್ತಾನೆಂದರೆ ಆತ ಕಾನೂನಿನ ಚೌಕಟ್ಟಿನಲ್ಲಿ ಕರ್ತವ್ಯ ಪಾಲನೆ ಮಾಡುವುದರಿಂದ, ಸಾರ್ವಜನಿಕ ಸೇವೆಯನ್ನು ಬದ್ಧತೆಯಿಂದ ಮಾಡುವುದರಿಂದ. ಅಲ್ಲದೆ ಈ ಎರಡು ಅಂಶಗಳು ಭರಣಯ್ಯನವರಿಗಿದ್ದವು ಎಂಬುದನ್ನು ನಾವು ಕೇಳಿದ್ದೇವೆ. ಅದು ತುಂಬಾ ಮುಖ್ಯವಾದ ಮಾತು. ಇವರಿಂದ ಮತ್ತು ಇಂಥ ಸೇವೆಯಿಂದ ಹಳೇ ಮೈಸೂರಿನಲ್ಲಿ ದಲಿತ ಸಮುದಾಯದ ಬದುಕಿನಲ್ಲಿ ಒಂದಷ್ಟು ಸುಧಾರಣೆ ಆಗಿದೆ. ಇದನ್ನು ಮುಖ್ಯವಾಗಿ ಗಮನಿಸಬೇಕು".

ನಮ್ಮ ಪ್ರಶ್ನೆ **"ಸರ್ 'ಜಾತಿ' ಎಂಬುದು ಕೆಲಸ ಮಾಡುತ್ತಿರುವಾಗ ಆ ಸಂದರ್ಭದಲ್ಲಿ ಅವರಿಗೆ ಏನೆಲ್ಲ ಸವಾಲುಗಳು ಎದುರಾಗಿರಬಹುದು. ಒಬ್ಬ ಆಡಳಿತಗಾರನಿಗೆ ದಲಿತನೆಂಬ ಕಾರಣಕ್ಕೆ ಈಗಲೂ ಇರುವ ಸವಾಲುಗಳನ್ನು ತಾವು ಹೇಗೆ ಗುರುತಿಸುತ್ತೀರಿ?"**

"ಒಬ್ಬ ದಲಿತ ಅಧಿಕಾರಿಗೆ ಎರಡು ರೀತಿಯ ಸವಾಲುಗಳು ಎದುರಾಗುತ್ತವೆ. ಒಂದು ಆತ ಆಯಾ ಕ್ಷೇತ್ರದಲ್ಲಿರುವ ವರ್ಕ್‌ಕಲ್ಚರ್‌ಗೆ ಹೊಂದಿಕೊಳ್ಳಬೇಕು. ಇನ್ನೊಂದು ಇತರರು 20 ಕೆಲಸ ಮಾಡಿದರೆ ಈತ 21 ಕೆಲಸ ಮಾಡಬೇಕು. ಮೊದಲನೆಯ ವಿಷಯಕ್ಕೆ ನಾನು ನೀಡುವ ವಿವರವಿಷ್ಟೆ. ಒಂದೊಂದು ಕ್ಷೇತ್ರಕ್ಕೂ ಅದರದೇ ಆದ ವರ್ಕ್ ಕಲ್ಚರ್, ಸಂಸ್ಕೃತಿ ಅಂತರ್ಗತವಾಗಿರುತ್ತದೆ. ಇದಕ್ಕೆ ಒಬ್ಬ ದಲಿತ ಅಧಿಕಾರಿ ಹೊಂದಿಕೊಂಡು ತನ್ನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲು ಕಷ್ಟವಾಗಬಹುದು. ಅದಕ್ಕೆ ಶ್ರಮಬೇಕು. ಕೆಲವರು ನಿಭಾಯಿಸುತ್ತಾರೆ. ಯಶಸ್ಸು ಕೂಡ ಆಗ್ತಾರೆ. ಒಮ್ಮೊಮ್ಮೆ ಹೊಂದಾಣಿಕೆ ಕಷ್ಟವಾಗಬಹುದು. ಈ ಹೊಂದಿಕೊಳ್ಳುವ ಕಷ್ಟ ಏನೆಂದು ನಾನು ಬಲ್ಲೆ. ಮುಖ್ಯವಾಹಿನಿಯಲ್ಲಿ ಬೆರೆಯಲು ಕೆಲವು ಸ್ಟಿಗ್ಮಗಳನ್ನು ಪ್ರಜ್ಞಾಪೂರ್ವಕವಾಗಿ ಮೀರಿರಬೇಕು. ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ, ನನಗೀಗಲೂ ನೆನಪಿದೆ. ನಾವು ದೇಶ ಇಬ್ಭಾಗವಾದ ಸಂದರ್ಭದಲ್ಲಿ ಭಾರತಕ್ಕೆ ಬಂದಾಗ ಒಂದು ಕಡೆ ನೆಲೆ ನಿಂತಮೇಲೆ ನಮ್ಮ ತಂದೆ-ತಾಯಿ ಶಾಲೆಗೆ ಸೇರಿಸಿದರು. ಪ್ರತಿತಿಂಗಳು ಹೊರಗಿನಿಂದ

ಮೇಲ್ವಿಚಾರಣೆಗೆ ಒಬ್ಬರು ಶಾಲೆಗೆ ಬರುತ್ತಿದ್ದರು. ಅವರು ಬಂದ ಕೂಡಲೇ 'ಯಾರು ನಿರಾಶ್ರಿತರು ಕೈ ಎತ್ತಿ' ಎನ್ನುತ್ತಿದ್ದರು. ಆಗ ನಾವು ತುಂಬಾ ಸಂಕೋಚ, ಮುಜುಗರ ಹಿಂಸೆಪಟ್ಟುಕೊಂಡು ಕೈ ಎತ್ತುತ್ತಿದ್ದೆವು. ಈ ಬಗೆಯ ಹಿಂಜರಿಕೆ, ಸಂಕೋಚ ದಲಿತ ವರ್ಗದಿಂದ ಬಂದವರಿಗೆ ಎದುರಾಗುತ್ತದೆ. ಅವರು ಈ ಮುಜುಗರಗಳನ್ನು ಗೆಲ್ಲುವುದೇ ತಮ್ಮ ಪರಿಶ್ರಮದಿಂದ ಮತ್ತು ಕೆಲಸದಲ್ಲಿ ತೋರುವ ನಿಷ್ಠೆ ಮತ್ತು ಬದ್ಧತೆಯಿಂದ. ಅವರಿಗೆ ಜನಪ್ರಿಯತೆ ಬರುವುದೂ ಇದರಿಂದಲೇ – ಬಹುಶಃ ಭರಣಯ್ಯನವರು ತಮ್ಮ ಪರಿಶ್ರಮ ಮತ್ತು ದಕ್ಷತೆಯಿಂದಲೇ ಎಷ್ಟೋ ಸಲ ಯಶಸ್ವಿಯಾಗಿರಬಹುದು.

ಇನ್ನೊಂದು ಸಂಗತಿ ನಿಮಗೆ ನೆನಪಿಸುತ್ತೇನೆ. ನಮ್ಮ ಐ.ಟಿ. ಕ್ಷೇತ್ರದಲ್ಲಿ ಸಾಮಾನ್ಯವಾಗಿ ಕೇಳುವ ಮಾತು. ಹಳ್ಳಿಗಳಿಂದ ಬರುವ ಪ್ರತಿಭೆಗಳು ನಮ್ಮ ಐ.ಟಿ. ಕಂಪನಿಗೆ ಸೂಕ್ತವಲ್ಲ ಎಂಬ ಮಾತಿದೆ. ಇಂಥ ಮಾತನ್ನು ನಾವು ಒಪ್ಪುವುದು ಕಷ್ಟ. ಇದನ್ನು ಮೀರಲು ಹಳ್ಳಿಯ ಮಕ್ಕಳು ಶ್ರಮಿಸಬೇಕಾಗುತ್ತದೆ. ಆ ಕ್ಷೇತ್ರದ ಸಂಸ್ಕೃತಿಗೆ ಹೊಂದಿಕೊಳ್ಳಲು ಸತತ ಶ್ರಮ ಹಾಕ್ತಾರೆ. ಅದರಲ್ಲಿ ನಮ್ಮ ಐ.ಎ.ಎಸ್. ವರ್ಗದಲ್ಲಿ ಅದರದೇ ಆದ 'ಎಥೋಸ್' ಇರುತ್ತದೆ. ಅದನ್ನೆಲ್ಲಾ ಶ್ರಮ ವಹಿಸಿಯೇ ಗೆಲ್ಲಬೇಕು. ಇದನ್ನೆಲ್ಲಾ ದಾಟಿ ಬಂದವರನ್ನು ನೋಡಬೇಕು. ಅವರ ಬಗ್ಗೆ ನಾವು ಅದೇ ದೊಡ್ಡ ಸಾಧನೆ ಎಂದು ತಿಳಿಯಬೇಕು".

"ನಾನು ನೀಡುವ ಮತ್ತೊಂದು ಉದಾಹರಣೆ ಎಂದರೆ, ದಲಿತ ಅಧಿಕಾರಿ ಇತರ ಜಾತಿಯ ಅಧಿಕಾರಿಗಿಂತ ಎರಡು ಪಟ್ಟು ದಕ್ಷತೆಯಿಂದ ಕೆಲಸ ಮಾಡಬೇಕು. ಬೇರೆಯವರು 20 ಕೆಲಸ ಮಾಡಿದರೆ, ನಮ್ಮ ದಲಿತ ಅಧಿಕಾರಿ 22 ಕೆಲಸ ಮಾಡಬೇಕು. ಅಂಥ ಪ್ರೆಷರೂ ಕೂಡ ಅವರ ಮೇಲಿರುತ್ತದೆ. ಇಲ್ಲದಿದ್ದರೆ ಇವರನ್ನು ಸ್ಟಿರಿಯೋಟೈಪ್ಡ್ ವರ್ಕ್‌ಕಲ್ಚರ್‌ಗೆ ಸೇರಿಸಿಬಿಡುತ್ತಾರೆ".

ನಮ್ಮ ಪ್ರಶ್ನೆ. **"ಭ್ರಷ್ಟಾಚಾರ ವಿಷಯದಲ್ಲಿ ಹೆಚ್ಚಾಗಿ ದಲಿತ ವರ್ಗದ ಅಧಿಕಾರಿಗಳ ಬಗ್ಗೆ ದೂರುಗಳನ್ನು ಅಥವಾ ಕುಹಕವಾಡುವುದನ್ನು ನಾವು ಸಾಮಾನ್ಯವಾಗಿ ಕೇಳುತ್ತಿರುತ್ತೇವಲ್ಲ?".**

"ನಾನು ಹಿಂದೆಯೇ ಹೇಳಿದಂತೆ, ಇತರರು ಬೆಳಕಿಗೆ ಬರುವುದು ಸುಲಭ. ಆದರೆ ಇವರು ಖ್ಯಾತಿಗೆ ಬರಲು ಪರಿಶ್ರಮ ಅಪಾರ. ಎಲ್ಲಾ ಅಧಿಕಾರಿಗೂ ಪ್ರಾಮಾಣಿಕತೆ ಮತ್ತು ಬದ್ಧತೆಯೇ ಅಳತೆಗೋಲು. ಭ್ರಷ್ಟಾಚಾರವನ್ನು ಒಬ್ಬರ ಮೇಲೆ ಅಥವಾ ಒಂದು ಜನವರ್ಗದ ಮೇಲೆ ಹಾಕುವುದನ್ನು ನಾನು ಒಪ್ಪುವುದಿಲ್ಲ. ಈ ವರ್ಗದಲ್ಲಿ ಒಂದು ಸಣ್ಣ ಲೋಪವಾದರೂ ಅದನ್ನೇ ದೊಡ್ಡದೆಂದೇ ಮಾಡುತ್ತಾರೆ. ಇವರು ಸಾಧಿಸಿಕೊಂಡು ಬಂದದ್ದೆಲ್ಲ ನಗಣ್ಯವೆಂಬಂತೆ ಮಾಡಿಬಿಡುತ್ತಾರೆ. ನಿಮಗೆ


ಹೇಳುತ್ತೇನೆ. ನಾನು ನನ್ನ ವೃತ್ತಿ ಜೀವನದಲ್ಲಿ ಎಷ್ಟೋ ಜನ ದಲಿತ ಅಧಿಕಾರಿಗಳನ್ನು, ಸಹೋದ್ಯೋಗಿಗಳಾಗಿ ಇದ್ದವರನ್ನು ಕಂಡಿದ್ದೇನೆ. ತೀರಾ ಪ್ರಾಮಾಣಿಕರಾದವರು ನಮ್ಮ ಜೊತೆ ಬಹಳಷ್ಟು ಜನ ಇದ್ದರು. ಈಗಲೂ ಇದ್ದಾರೆ. ಇಂಟಿಗ್ರಿಟಿಯಲ್ಲಿ ಯಾರಿಗೂ ಕಮ್ಮಿ ಇಲ್ಲದ ದಲಿತ ಅಧಿಕಾರಿಗಳನ್ನು ನಾನು ಬೇಕಾದಷ್ಟು ಜನರನ್ನು ನೋಡಿದ್ದೇನೆ. ಸ್ನೇಹವೂ ಇದೆ. ಇದನ್ನು ಸಾಮಾನ್ಯಕರಿಸುವುದು ತಪ್ಪು. ನಮ್ಮೊಳಗಿನ ವರ್ಕ್ ಕಲ್ಚರ್‌ನ್ನು ರೂಢಿಸಿಕೊಂಡು ಅವರುಗಳು ನಮ್ಮ ಮಧ್ಯೆ ಬೆಳೆದು ಬಂದಿರುವುದೇ ಬಹು ದೊಡ್ಡ ಸಾಧನೆ. ಈ ಹಿನ್ನೆಲೆಯಲ್ಲೇ ಈಗಲೂ ದಲಿತ ಅಧಿಕಾರಿಗಳಿಗೆ ಸವಾಲುಗಳು ಇವೆ. ಅದಕ್ಕೆ ಕಾರಣ ಸಾಂಸ್ಕೃತಿಕ ವ್ಯತ್ಯಾಸಗಳು ಆಗಿರಬಹುದು. ಭರಣಯ್ಯನಂತಹವರು ಸಹ ಒಂದು ಕ್ಷೇತ್ರದಲ್ಲಿರುವ ವರ್ಕ್ ಕಲ್ಚರ್‌ನ್ನು ಮೀರಿಸಿಕೊಂಡು ಬೆಳೆದುಬಂದಿದ್ದು, ಮುಖ್ಯವಾದದ್ದು ಹಾಗೂ ಎಲ್ಲಾ ಜನವರ್ಗಗಳ ಪ್ರೀತಿ ಗಳಿಸಿದ್ದು ಸಾಧನೆ ಎಂದು ತಿಳಿಯಬೇಕು".

ಚಿರಂಜೀವಿ ಸಿಂಗ್ ಗುರುತಿಸಿಕೊಟ್ಟ ಎರಡು ಅಂಶಗಳು ವರ್ತಮಾನದಲ್ಲಿ ಬಹಳ ಮುಖ್ಯ ಪ್ರಶ್ನೆಗಳಾಗಿ ಪರಿಗಣಿಸಬೇಕಾಗುತ್ತದೆ. ದಲಿತ ಅಧಿಕಾರಿಗಳು ವಿಶೇಷವಾಗಿ ತಮ್ಮ ತಮ್ಮ ಕಾರ್ಯಕ್ಷೇತ್ರದಲ್ಲಿ ಯಶಸ್ಸುಗಳಿಸಲು ಎಷ್ಟು ಪರಿಶ್ರಮ ಹಾಕುತ್ತಿರಬಹುದು? ತಾವು ಕೆಲಸ ಮಾಡಲು ಆಯ್ದುಕೊಂಡ ಕ್ಷೇತ್ರದಲ್ಲಿ ಅಲ್ಲಿರುವ ವರ್ಕ್ ಕಲ್ಚರ್‌ಗೆ ಹೊಂದಿಕೊಳ್ಳಲು ಇರುವ ಇಕ್ಕಟ್ಟುಗಳನ್ನು ಹೇಗೆ ಎದುರಿಸುತ್ತಿದ್ದಾರೆ? ತಮ್ಮ ಬದ್ಧತೆಯ ಮೂಲಕವೇ? ತಮ್ಮ ಕಾರ್ಯ ನಿಷ್ಠತೆಯ ಮೂಲಕವೇ? ಇವರಿಗೆ ಎಲ್ಲಾ ಜನವರ್ಗಗಳನ್ನು ಸಂಭಾಳಿಸುತ್ತಾ ಎಲ್ಲ ಜನವರ್ಗಗಳಲ್ಲಿ ವಿಶ್ವಾಸ ಉಳಿಸಿಕೊಳ್ಳುತ್ತಾ ಹೋಗಲು ಸಾಧ್ಯವಾಗುತ್ತಿದೆಯಾ? ಕೇವಲ ದಲಿತರಿಗಷ್ಟೇ ತಮ್ಮ ಬದ್ಧತೆಯನ್ನು ತೋರ್ಪಡಿಸಿ ಕೆಲಸ ಮಾಡುವ ಅನಿವಾರ್ಯತೆ ಒತ್ತಡ ಇರುವುದೇ? ಪ್ರಸ್ತುತದಲ್ಲಿ ದಲಿತ ಆಡಳಿತಾಧಿಕಾರಿಯ ಮನಸ್ಥಿತಿ ಹೇಗಿರಬಹುದು? ಆತ / ಆಕೆಗೆ ಒಳ ಮತ್ತು ಹೊರಗಿನ ರಾಜಕೀಯ–ಸಾಂಸ್ಕೃತಿಕ ಪರಿಸರ ಎಷ್ಟರಮಟ್ಟಿಗೆ ಪೂರಕವಾಗಿರಬಹುದು? ಎಂಬುದೆಲ್ಲಾ ಒಟ್ಟಿಗೆ ಕಾಡತೊಡಗಿದವು. ಭರಣಯ್ಯನವರ ಯಶಸ್ಸನ್ನು ಆ ಕಾಲದ ವರ್ಕ್‌ಕಲ್ಚರ್ ಬಗ್ಗೆ, ಒತ್ತಾಸೆಯ ಕುರಿತು ಈ ಎಲ್ಲಾ ಪ್ರಶ್ನೆಗಳ ಮೂಲಕವೇ ಕಂಡುಕೊಳ್ಳಲು ಯತ್ನಿಸಬೇಕಾಗಿದೆ ಎಂತಲೂ ಎನಿಸಿತು.

ಅವರೊಡನೆ ಮಾತುಕತೆ ಮುಗಿಸಿ ಹೊರಡುವ ಮುನ್ನ ಚಿರಂಜೀವಿಸಿಂಗ್ ತಾವೇ ಖುದ್ದು ನೀಡಿದ ಟೀ–ಬಿಸ್ಕತ್‌ನ್ನು ಸವಿದೆವು. ಅತ್ಯುನ್ನತ ಅಧಿಕಾರಿಯಾಗಿ ಇದುವರೆಗೂ ಕಾರ್ಯನಿರ್ವಹಿಸುತ್ತಾ ಬಂದಿರುವ ಅವರು ಸೇವೆ ಪಡೆದುದಕ್ಕಿಂತ ಸೇವೆ ಮಾಡಿರುವುದೇ ಹೆಚ್ಚೆಂದು ಆ ಕ್ಷಣ ತೋರತೊಡಗಿತು. ಸೇವೆ

ಮಾಡುವುದರಲ್ಲಿರುವ ತೃಪ್ತಿ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿತ್ತು. ಕೃತಜ್ಞತೆಯನ್ನು ಹೇಳುತ್ತಾ, ವಿನೀತರಾಗಿ ತಲೆಬಾಗಿ ನಮಸ್ಕರಿಸಿದೆವು. ಅವರು ಬಾಗಿಲ ಹೊರಗೂ ಬಂದು ಬೀಳ್ಕೊಡುವಾಗ "ಭರಣಯ್ಯನವರಂತಹ ವ್ಯಕ್ತಿತ್ವವನ್ನು ನೀವು ದಾಖಲಿಸುವಂಥ ಅತ್ಯುತ್ತಮ ಕೆಲಸ ಮಾಡುತ್ತಿದ್ದೀರಿ, ಇದು ಎಂದೋ ಮಾಡಬೇಕಿದ್ದ ಕೆಲಸ ಅಲ್ಲವಾ?" ಎಂದರು. ಅವರ ಕಳಕಳಿ ಮತ್ತು ಮೆಚ್ಚುಗೆಗೆ ನಮಗೆ ಆಕಾಶ ಮೂರು ಗೇಣು ಎನ್ನುವಷ್ಟು ಖುಷಿ ಆಯ್ತು. ಮತ್ತೆ ನಮಸ್ಕರಿಸುತ್ತಾ ಹೊರಟು ಬಂದೆವು.

* * *



ಮಾದರಿ ಅಧಿಕಾರಿ

ಹನುಮಂತಪ್ಪ

ನಮ್ಮ ರಾಜಕಾರಣಿಗಳು, ಅಧಿಕಾರಿಗಳು "ಡಿಗ್ನಿಫೈಯರ್ ಸ್ಲೇವರಿ" ಯಿಂದ ಹೊರಬರಬೇಕು. ನಮ್ಮ ಜನರತ್ತ ಕಣ್ಣಿಟ್ಟು ಅವರ ಏಳಿಗೆಗೆ ದುಡಿಯಬೇಕು. ಅಂಬೇಡ್ಕರ್ ಮಾಡಿಕೊಟ್ಟಿರುವ ಅವಕಾಶವನ್ನು ಬಳಸಿಕೊಂಡು ಬಡವರ, ದೀನ-ದಲಿತರ ಕಣ್ಣೀರು ಒರೆಸಬೇಕು. ಭರಣಯ್ಯನವರು ಮಾಡಿರುವುದು ಅದನ್ನೇ, ಅದನ್ನು ಇಂದು ನಮ್ಮ ಅಧಿಕಾರಿಗಳು ಅರಿತು ನಡೆಯಲಿ.

ಮಾಜಿ ಸಂಸದರು ಹಾಗೂ ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರು
ಬೆಂಗಳೂರು



ಮಾದರಿ ಅಧಿಕಾರಿ

ಹನುಮಂತಪ್ಪ

ಕರ್ನಾಟಕದ ರಾಜಕೀಯ ಸಂದರ್ಭದಲ್ಲಿ ಹಿರಿಯ ತಲೆಮಾರಿನ ರಾಜಕಾರಣಿಗಳಲ್ಲಿ ಶ್ರೀ ಹನುಮಂತಪ್ಪನವರೂ ಒಬ್ಬರು. ರಾಷ್ಟ್ರ ಮತ್ತು ರಾಜಕಾರಣದ ಅನೇಕ ಏರಿಳಿತಗಳ ನಡುವೆ ಬೆಳೆದವರು. ಚಿತ್ರದುರ್ಗ ಜಿಲ್ಲೆ ಗುಡ್ಡದ ರಂಗವ್ವನ

ಹಳ್ಳಿಯಿಂದ ದಿಲ್ಲಿಯವರೆಗೆ ನಡೆದುಬಂದ ಅವರು ಪ್ರಸ್ತುತ ಬೆಂಗಳೂರಿನಲ್ಲಿ ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾಗಿದ್ದಾರೆ. ಆರ್. ಭರಣಯ್ಯನವರನ್ನು ಬಹಳ ಹತ್ತಿರದಿಂದ ಬಲ್ಲ ಅವರನ್ನು ಕಾಣಲು ಹೋದ ಗಳಿಗೆ, ತಮ್ಮದೇ ನಿಷ್ಠೆಯ ಮಾತುಗಳಿಂದ ತಮ್ಮ ಮನದಾಳದ ಮಾತುಗಳನ್ನು ತೆರೆದಿಟ್ಟರು. ಇದು ಆ ಮಾತುಕತೆಯ ಸಾರ;

"ನನ್ನ ಬಾಲ್ಯ, ವಿದ್ಯಾಭ್ಯಾಸ, ರಾಜಕೀಯ ಪ್ರವೇಶ, ಈ ಸಂಗತಿಗಳ ಕುರಿತ ಅನೇಕ ನೆನಪುಗಳಿವೆ. ನನ್ನ ಪ್ರಕಾರ ಈಗ ಅದು ನನಗೆ ಮುಖ್ಯವಲ್ಲ. ಆದರೂ ಭರಣಯ್ಯನವರಂತ ಉದಾತ್ತ ವ್ಯಕ್ತಿತ್ವದ ವ್ಯಕ್ತಿಯನ್ನು ನಾನು ಅಭಿಮಾನದಿಂದ ನೆನೆಪು ಮಾಡಿಕೊಳ್ಳುತ್ತೇನೆ. ಈ ಸಂದರ್ಭದ ನನ್ನ ಕಿರು ಪರಿಚಯ ಹೇಳುವುದಾದರೆ ಚಿತ್ರದುರ್ಗದ ಒಂದು ಪುಟ್ಟ ಹಳ್ಳಿಯಿಂದ ಬಂದವನು. ತಂದೆ ಮಹಾಲಿಂಗಪ್ಪ ತಾಯಿ ಚಿಕ್ಕಮ್ಮ – ನನ್ನ ಆರಂಭಿಕ ಓದು ಚಿತ್ರದುರ್ಗದಲ್ಲೇ ನಡೆಯಿತು. ನಮ್ಮ ತಂದೆ ಶಾಲಾ ಮಾಸ್ಟರು. ಆಗ 'ಪಂಚಮ ಶಾಲೆ'ಗಳೆಂದು ಇದ್ದುವು. ನಮ್ಮ ಎಸ್.ಸಿ., ಎಸ್.ಟಿ. ಜನ ಸಮುದಾಯಕ್ಕಾಗೇ ಇದ್ದ ಶಾಲೆಗಳವು. ನಮ್ಮ ತಂದೆ ಆ ಪಂಚಮ ಶಾಲೆ ಮಾಸ್ಟರಾಗಿದ್ದರು. ಅಲ್ಲಿ ಮೊದಲ ಓದಿನ ದಿನಗಳು ಕಳೆದವು ನಂತರ ಹಾಸನ–ಬೆಂಗಳೂರು ಇಲ್ಲೆಲ್ಲಾ ನನ್ನ ವ್ಯಾಸಂಗ ನಡೆಯಿತು".

ಈ ನಡುವೆ ಅವರ ಶಾಲಾ ದಿನಗಳಲ್ಲಿ ನಡೆದ ಒಂದೆರಡು ಸಂಗತಿಗಳು ನೆನೆದುಕೊಂಡರು. ಹಾಸನದಲ್ಲಿ ಹೈಸ್ಕೂಲ್ ಸೀಟಿಗಾಗಿ ತಾನು ಅತ್ಯುತ್ತಮ ದರ್ಜೆಯಲ್ಲಿ ಪಾಸಾಗಿದ್ದರೂ ಸೀಟು ನಿರಾಕರಿಸಿದ ಶಿಕ್ಷಕರ ವಿರುದ್ಧ ಸೆಟೆದು ನಿಂತದ್ದು, ಹಾಗಾಗಿಯೇ ಹಾಸ್ಟೆಲ್ಲಿನಲ್ಲಿ ಸೀಟು ಪಡೆದದ್ದು ನೆನದರು. ಈ ನೆನಪುಗಳಲ್ಲಿ ಇಳಿಯ ವಯಸ್ಸಿನಲ್ಲಿ ಈ ಒಂದು ಮಿಂಚು ಸಂಚಾರವಾದಂತೆ ಕಂಡರು. ಚರ್ಚೆ ಭರಣಯ್ಯನವರ ಬಗ್ಗೆ ಹೊರಳಿತು. ಕೊಂಚ ಗಂಭೀರ ದನಿಯಲ್ಲಿ ಮಾತು ಶುರುಮಾಡಿದರು. ಆ ದಿನದ ನೆನಪುಗಳು ಬಿಚ್ಚಿ ಕೊಳ್ಳತೊಡಗಿದವು. ಆ ನೆನಪುಗಳಲ್ಲಿ ಆರ್. ಭರಣಯ್ಯನವರ ಬಗ್ಗೆ ಪ್ರೀತಿ, ಗೌರವ, ಅಭಿಮಾನ ಎಲ್ಲಾ ಮೇಳೈಸಿಕೊಂಡಂತೆ ಬಂದವು.

"ಆರ್. ಭರಣಯ್ಯ ಒಬ್ಬ ದಕ್ಷ–ನಿಷ್ಠಾವಂತ ಅಧಿಕಾರಿ, ಇಂದಿಗೂ ನೀವು ಯಾವ ಅಧಿಕಾರಿಗೂ ಹೋಲಿಕೆ ಮಾಡಬಾರದು. ಅಂಥದೊಂದು ವಿಶಿಷ್ಠ ವ್ಯಕ್ತಿತ್ವ ಅವರದು. ಜಗಳೂರು ಪಾಳೆಗಾರರೆಂದರೆ ಎಣೆಯಿಲ್ಲದ ನಡವಳಿಕೆಯವರು. ಬಹುಪಾಲು ಎಲ್ಲರೂ Land lords. ಆ ಕಾಲದಲ್ಲಿ ಅವರ ಸಾರ್ವಜನಿಕ ಪಾಳೆಗಾರಿಕೆಯನ್ನು ಹದ್ದುಬಸ್ತಿನಲ್ಲಿಟ್ಟರು. ಇದು ಅವರತ್ತ ಎಲ್ಲರ ಹುಬ್ಬೇರುವಂತೆ ಮಾಡಿತು. ಅವರು ಕೆಲವೇ ದಿನಗಳಲ್ಲಿ ಕೃಷಿ, ಕೂಲಿಗಾರರೂ ಭೂ ಹೀನರೆಲ್ಲರ ಕಣ್ಮಣಿಯಾಗಿಬಿಟ್ಟರು. ಇದು ನಮ್ಮ ಜನ ಸಮುದಾಯಕ್ಕೊಂದು ಹೆಚ್ಚುಗಾರಿಕೆಯಂತೆ

ತೋರಿತು. ಚಿತ್ರದುರ್ಗಕ್ಕೆ ಪೋಲೀಸ್ ಸೂಪರಿಂಟೆಂಡೆಂಟ್ ಆಗಿ ಬಂದ ಮೊದಲ ದಿನಗಳಲ್ಲಿ ಮಾಡಿದ ವಿಶಿಷ್ಟ ಕೆಲಸ ಅದು. ಆ ಕಾಲದಲ್ಲಿ ಇದನ್ನು ಸಾಹಸ ಅಂತಲೇ ಹೇಳಬೇಕು. ಏಕೆಂದರೆ ಆ ಕಾಲದಲ್ಲಿ ನಾವು - ನಮ್ಮ ಜನಕ್ಕಿದ್ದ ಸಾಮಾಜಿಕ ಸ್ಥಿತಿಗತಿಗಳಲ್ಲಿ ಹೀಗೆ ನಮ್ಮವರೊಬ್ಬರು ಮಾಡಿದ ಕೆಲಸ ಅಚ್ಚರಿ ತರುವಂತಹುದು. ನಮ್ಮ ಜನರೆಂದರೆ ನೀರು ನೆರಳು ಕೂಡ ನೀಡದಿದ್ದ ಸಮಯ ಅದು!"

"ಇನ್ನೊಂದು ಪ್ರಸಂಗ ನೆನಪಾಗುತ್ತದೆ. ಸ್ವಾತಂತ್ರ್ಯ ಬಂದ ಗಳಿಗೆಯಲ್ಲಿ ನಡೆದ ಹಿಂದೂ-ಮುಸ್ಲಿಂ ಗಲಾಟೆಯನ್ನು ಬಹಳ ಚೆನ್ನಾಗಿ ನಿಯಂತ್ರಿಸಿದರು. ಅವರ ನಿಯಂತ್ರಣದಲ್ಲಿ ವಿಶೇಷವೆಂದರೆ ದಂಡಿಸುವುದಲ್ಲ! ತಿಳುವಳಿಕೆ ನೀಡುತ್ತಾ, ಸೌಹಾರ್ದಯುತ ಜೀವನದ ಉಪದೇಶ ನೀಡುತ್ತಾ ನಿಯಂತ್ರಣಕ್ಕೆ ತಂದಿದ್ದು ಮುಖ್ಯ. ಅದಕ್ಕಿಂತಲೂ ಮುಖ್ಯವಾಗಿ 'ಮೀನಾಕ್ಷಿಪುರಂ ಗಲಾಟೆ' ಯನ್ನು ಅವರು ನಿರ್ವಹಿಸಿದ್ದುದು ಆ ಕಾಲದ ಮುಖ್ಯ ಪ್ರಯತ್ನಗಳಲ್ಲಿ ಒಂದು. ವಿವರ ಬೇಡ. ಒಂದು ಸಾಲಿನಲ್ಲಿ ಹೇಳುವುದಾದರೆ ಪರಿಶಿಷ್ಟ ಜಾತಿಯ ಲಕ್ಷಾಂತರ ಜನ ಮುಸ್ಲಿಂ ಧರ್ಮಕ್ಕೆ ಮತಾಂತರ ನಡೆದ ಘಟನೆ ಅದು. ಸಾಮಾಜಿಕ ಕ್ಷೋಭೆಯನ್ನುಂಟುಮಾಡಿದ ಸಂದರ್ಭ ಅದು. ಕಾನೂನು ವ್ಯವಸ್ಥೆಯೇ ಅಯೋಮಯವಾಗಿಬಿಟ್ಟಿತು! ಅಂಥ ವೇಳೆ ಈ ಜಿಲ್ಲೆಯಲ್ಲಿ ಪೂರ್ಣಸುತ್ತಾಡಿ, ಇಂಥ ಪ್ರಯತ್ನಗಳಿಗೆ ಪ್ರೇರಣೆ ನೀಡುವವರಿಗೆ ಮತ್ತು ಪ್ರಚೋದನೆ ನೀಡುವವರಿಗೆ ಬುದ್ಧಿಹೇಳಿ ಎಲ್ಲೂ ಅನಾಹುತವಾಗದಂತೆ ನೋಡಿಕೊಂಡರು. ಇದು ಸಹಜವಾಗಿ ನಮ್ಮ ಜಿಲ್ಲೆಯಲ್ಲಿ ಅವರಿಗೆ ಎಲ್ಲರ ಕಡೆಯಿಂದ ಜನಪ್ರಿಯತೆ ತಂದು ಕೊಟ್ಟಿತೆಂದೇ ಹೇಳಬಹುದು".

"ನನಗೆ ನೆನಪಿರುವ ಇನ್ನೊಂದು ಮುಖ್ಯ ಸಂಗತಿ ಎಂದರೆ; ಸಹಕಾರ ಇಲಾಖೆಯಲ್ಲಿ ಮಾಡಿದ ವಿಶೇಷ ಕೆಲಸ. ಅಲ್ಲಿಗೆ ಅವರು ಬರುವ ವೇಳೆಗೆ ಅದೊಂದು ಇಲಾಖೆ ಇದೆ ಎಂಬುದೇ ಸಾರ್ವಜನಿಕರಿಗೆ ತಿಳಿದಿರಲಿಲ್ಲ. ಅದನ್ನು ಅತ್ಯುನ್ನತ ಮಟ್ಟಕ್ಕೆ ಬೆಳೆಸಿದರು. 'ಕೇಡರ್ ಅಂಡ್ ರಿಕ್ರೂಟ್‌ಮೆಂಟ್' ಮಾಡಿದರು. ಇದಕ್ಕೆ ಒಂದು ಸ್ವಂತ ಸಿಬ್ಬಂದಿಗಳಿರುವಂತೆ ವ್ಯವಸ್ಥೆ ಮಾಡಿದರು. ಅಷ್ಟೇ ಅಲ್ಲ ಎಲ್ಲಾ ಜನಸಮುದಾಯದ ಜನರಿಗೆ ಉದ್ಯೋಗದ ಅವಕಾಶವನ್ನು ತೆರೆದಿಟ್ಟರು. ನನಗೆ ಅನ್ನಿಸುವಂತೆ ಒಬ್ಬ ಅಧಿಕಾರಿಗೆ ಇಂಥ ನಿಲುವುಗಳು ಬಹಳ ಮುಖ್ಯ. ಅಧಿಕಾರ ಸಿಕ್ಕ ಕೂಡಲೇ ಮೈಮರೆಯುವುದಲ್ಲ. ಅಥವಾ ತಾನು-ತನ್ನ ಬಂಧುಬಳಗಕ್ಕೆ ಅಷ್ಟುಇಷ್ಟು ಮಾಡಿಕೊಂಡು ಹೊರಟು ಬಿಡುವುದಲ್ಲ. ಈಗ ಕೆಲವರನ್ನು ನೀವೇ ನೋಡಿದ್ದೀರಿ. ತಮ್ಮ ಸಂಸಾರ, ಹೆಂಡತಿ-ಮಕ್ಕಳಿಗೆ ಬಿಟ್ಟರೆ ಬೇರ್‍ಯಾರನ್ನು ಕಣ್ಣೆತ್ತಿಯೂ ನೋಡುವುದಿಲ್ಲ!" ಎಂದರು. ತಮ್ಮ ಸಾತ್ವಿಕ ಕೋಪವನ್ನು ಜನಾಂಗದ ಅಧಿಕಾರಿಗಳಾಗಿ ಮೈಮರೆಯುತ್ತಿರುವವರತ್ತ ತೋರಿದರು.

ಹನುಮಂತಪ್ಪನವರ ನೆನಪಿನಿಂದ ದೊರೆತ ಇನ್ನೊಂದು ಮುಖ್ಯಸಂಗತಿ ಆರ್. ಭರಣಯ್ಯನವರು ರಾಜಕೀಯಕ್ಕೆ ಬಂದುದರ ಕುರಿತು. ಈ ಬಗ್ಗೆ ಹನುಮಂತಪ್ಪನವರಿಗೆ ವಿಷಾದವೂ ಇದೆ, ಬೇಸರವೂ ಇದೆ. ಈ ಬಗ್ಗೆ ಅವರು ವ್ಯಕ್ತ ಮಾಡಿದ ಅನಿಸಿಕೆ ಇದು; "ಭರಣಯ್ಯನವರಿಗೆ ರಾಜಕೀಯ ಪ್ರೇರಣೆ ಉಂಟಾಗಲು ಏನು ಕಾರಣವೋ ಸ್ಪಷ್ಟವಾಗಿ ಹೇಳಲಾರೆ. ಆದರೆ ಅವರು ರಾಜಕಾರಣಕ್ಕೆ ಬರಬೇಕೆಂದುಕೊಂಡ ಕಾಲ ಅಷ್ಟು ಸೂಕ್ತವಾಗಿರಲಿಲ್ಲ. ಕರ್ನಾಟಕದಲ್ಲಿ ಆಗ ನಮ್ಮ ಪಾರ್ಟಿ ಒಡೆದುಹೋಗಿತ್ತು. ಇಂದಿರಾಗಾಂಧಿ v/s ನಿಜಲಿಂಗಪ್ಪ. ರಾಷ್ಟ್ರೀಯ ಪಕ್ಷವೊಂದರ ಮುಂದೆ ಪ್ರಾದೇಶಿಕ ಪಕ್ಷ ಆಗ ಎಲ್ಲ ರೀತಿಯಲ್ಲಿ ಸಜ್ಜುಗೊಂಡಿರದ ಸ್ಥಿತಿ. ಇವರೊಬ್ಬರು ಜನಪ್ರಿಯ ಅಧಿಕಾರಿ. ಒಬ್ಬ ಜನಪ್ರಿಯ ಅಧಿಕಾರಿಯಾದ ಮಾತ್ರಕ್ಕೆ ನೇರವಾಗಿ ರಾಜಕೀಯಕ್ಕೆ ಬಂದು ಗೆಲ್ಲಬಹುದೆಂದು ಅವರನ್ನು ಯಾರು ಪ್ರಚೋದಿಸಿದರೋ ತಿಳಿಯದು. ಆದರೆ ಅವರಿಗಿದ್ದ ಹೆಸರು, ಅಧಿಕಾರಿಯಾಗಿ ಅವರು ಪಡೆದಿದ್ದ ಗೌರವ-ಮನ್ನಣೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಬಹುದೆಂದು ಆಗಿನ ರಾಜಕೀಯ ಮುಖಂಡರಿಗೆ ಹೇಗೆ ಅನಿಸಿತೋ, ಏನೋ-ಆದರೆ ಮತ ನೀಡುವವರಿಗೆ ತಿಳಿಯಬೇಕಲ್ಲ! ಇಲ್ಲೊಂದಷ್ಟು ಲೆಕ್ಕಾಚಾರ ಬಿದ್ದಹೋಯಿತು. ಹೇಳಿ ಕೇಳಿ ಸ್ಥಳೀಯ ಮುಖಂಡರ ಬೆಂಬಲ ಯಾರಿಗೆ ಪ್ರಬಲವಾಗಿ ದೊರಕುತ್ತದೋ – ಅದೇ ಫಲಿತಾಂಶ ತಂದುಕೊಡುವುದು. ಅದರಲ್ಲಿ ಇಲ್ಲಿ ಪ್ರಾದೇಶಿಕ ಪಕ್ಷ ಆಗತಾನೇ ಹುಟ್ಟಿದ್ದು. ಇವರು ಅಧಿಕಾರಿಯಾಗಿ ಜನಪ್ರಿಯರಾದರು ರಾಜಕಾರಣಕ್ಕೆ ಹೊಸಬರು. ಜನರ ಒಳಗೆ ನಿರೀಕ್ಷೆಗಳು ಏನೇನು ಇರುತ್ತೋ ಎಲ್ಲವನ್ನು ಅರಿಯದೇ ಹೋದದ್ದು ಸೋಲಿಗೆ ಕಾರಣವಾಯಿತೆನ್ನಬಹುದು. ಇದು ನಮಗೆಲ್ಲ ಆದ ನೋವು ಮತ್ತು ಅವಮಾನ. ನಾವು ಇಷ್ಟು ವರ್ಷ ಸುದೀರ್ಘ ರಾಜಕಾರಣ ಮಾಡಿಕೊಂಡು ಬಂದಿದ್ದರೂ, ನಮ್ಮನ್ನೇ ತಲೆ ಎತ್ತದಂತೆ ಮಾಡುವ ಎಷ್ಟೋ ಘಟನೆಗಳು ಇಂದಿಗೂ ನಡೆಯುತ್ತಿವೆ. ಅಂಥದರಲ್ಲಿ ಅವರು ಆಗ ಬಂದ ಕಾಲ ಮತ್ತು ಆಗಿನ ಮುಖಂಡತ್ವಕ್ಕೆ ಇದ್ದ ಜನಾಭಿಪ್ರಾಯ ಎಲ್ಲವೂ ಇವರನ್ನು ಸೋಲಿನ ದವಡೆಗೆ ಸಿಲುಕಿಸಿತು".

"ನಮ್ಮ ಪಕ್ಷಕ್ಕೆ ಇವರ ಬಗ್ಗೆ ಗೌರವ ವಿಶ್ವಾಸಗಳಿದ್ದವು. ನಾವು ಕೆಲವರು ಇವರನ್ನು ಸಂಪರ್ಕಿಸಿ ಈ ವಿಚಾರವನ್ನು ಮುಟ್ಟಿಸಿದ್ದೆವು. ಆದರೆ ಈ ವ್ಯಕ್ತಿಗೆ ಎಂಥ ನಿಯತ್ತು ಇತ್ತು ಎಂದರೆ; "ಇಲ್ಲ ನಾನು ಈಗಾಗಲೇ ಆ ಪಕ್ಷದವರಿಗೆ ಮಾತು ನೀಡಿದ್ದೇನೆ. ನನ್ನ ಮಾತಿಂದ ನಾನು ಹಿಂದೆ ಸರಿಯಲಾರೆ – ನೋಡೋಣ" ಎಂದುಬಿಟ್ಟರು. ಇಂದು ಸಣ್ಣ ಸಣ್ಣ ಆಮಿಷಕ್ಕೆ ದಿನ ಬೆಳಗಾದರೆ ಹತ್ತಾರು ಪಕ್ಷದತ್ತ ಅಲೆದಾಡುವವರ ಮಧ್ಯೆ ಇಂದಿಗೂ ನನಗೆ ಅವರು ಮತ್ತು ಅವರ ಆ ನಡವಳಿಕೆ


ಅಚ್ಚರಿ ಮೂಡಿಸುತ್ತದೆ. ನೋಡಿ ನಿಮಗೆ ಈ ಸಂದರ್ಭದಲ್ಲಿ ಇನ್ನೊಂದು ಪ್ರಮುಖ ವಿಷಯ ತಿಳಿಸುತ್ತೇನೆ. ಭರಣಯ್ಯನವರು ನಮ್ಮ ಪಕ್ಷದ ಮಾತಿಗೆ ಕಿವಿಗೊಡಬೇಕಿತ್ತು. ಸ್ವಲ್ಪ ಮನಸ್ಸು ಬದಲಾಯಿಸಿ, ಕಿಂಚಿತ್ತಾದರೂ ಸ್ವಾರ್ಥ ತೋರಿಸಿದ್ದರೆ, ನಮ್ಮ ಪಕ್ಷ ಅವರನ್ನು ಯಾವುದಾದರೂ ರಾಜ್ಯಕ್ಕೆ 'ಗೌರ್ನರ್' ಮಾಡುವ ನಿರ್ಧಾರಕ್ಕೆ ಬಂದಿತ್ತು. ಅಂದು ಆ ಕಾಲದಲ್ಲೇ ನಮ್ಮ ಸಮುದಾಯದಲ್ಲಿ ಮೊಟ್ಟ ಮೊದಲ 'ರಾಜ್ಯಪಾಲ'ರಾಗಿ ಸೇವೆ ಸಲ್ಲಿಸುವ ಅವಕಾಶ ಪಡೆದುಬಿಡುತ್ತಿದ್ದರು. ಏನು ಮಾಡ್ತೀರಿ ಕಾಲ ಮತ್ತು ಅದೃಷ್ಟ ಅವಕಾಶ ನೀಡಲಿಲ್ಲ. ಒಬ್ಬ ಶ್ರೇಷ್ಠ ಮಾನವತಾವಾದಿಯನ್ನು, ದಕ್ಷನನ್ನು, ಸರ್ವಜನರೂ ಪ್ರೀತಿಸುತ್ತಿದ್ದ ಧೀಮಂತನೊಬ್ಬರನ್ನು ನಾವು ಕಳೆದುಕೊಂಡುಬಿಟ್ಟೆವು. ಈ ನಾಡು ನಮ್ಮ ಜನ ಅವರ ಸೇವೆ ಪಡೆದುಕೊಳ್ಳುವುದರಿಂದ ವಂಚಿತರಾಗಿಬಿಟ್ಟಿತು" ಎಂದರು – ಹನುಮಂತಪ್ಪನವರು. ಈ ಘಟನೆ ನೆನಸಿಕೊಂಡು ಒಂದು ಕ್ಷಣ ಮೌನವಾದರು – ಅವರಲ್ಲಿ ಏನೋ ಒಂದು ನೋವು ಸುಳಿದಾಡಿದಂತೆ ತೋರಿತು. ಮತ್ತೆ ಮೌನಮುರಿದು ಪ್ರಚಲಿತ ವಿಚಾರದತ್ತ ಬಂದರು.

"ಇವತ್ತಿನ ನಮ್ಮ ರಾಜಕಾರಣಿಗಳಾಗಲೀ, ಅಧಿಕಾರಿಗಳಾಗಲೀ ಒಂದು ತಿಳುವಳಿಕೆ ಹೇಳಿ 'ಡಿಗ್ನಿಫೈಡ್ ಸ್ಲೇವರಿ' ಯಿಂದ ಹೊರಬರುವಂತೆ. ನಮ್ಮ ಜನರತ್ತ ಕಣ್ಣಿಟ್ಟು ಅವರ ಏಳಿಗೆಗೆ ದುಡಿಯಲು ಹೇಳಿ. ಅಂಬೇಡ್ಕರ್ ಮಾಡಿಕೊಟ್ಟಿರುವ ಅವಕಾಶವನ್ನು ನಮ್ಮ ಜನರ ಕಣ್ಣೀರು ಒರೆಸಲು, ಬಳಸಿಕೊಳ್ಳಲು ತಿಳಿಸಿ. 'ಹಣ–ಹಣ' ಎಂದು ವ್ಯಕ್ತಿತ್ವ ಕಳೆದುಕೊಳ್ಳುವುದನ್ನು ಬಿಡಲು ಹೇಳಿ. ಭರಣಯ್ಯನವರು ಇಂಥ ವಿಚಾರದಲ್ಲಿ ಅತ್ಯಂತ ಪಾರದರ್ಶಕ ವೃತ್ತಿ ಜೀವನ ನಡೆಸಿದ್ದಾರೆ. ಭ್ರಷ್ಟಾಚಾರದ ಕೊಳಕು ಅವರನ್ನು ತಟ್ಟಲಿಲ್ಲ. ಎಷ್ಟರಮಟ್ಟಿಗೆ ಅಂದರೆ ಪ್ರವಾಸಕ್ಕೆ ಹೋದರೆ "ಬ್ರೆಡ್ಡ್ ಮತ್ತು ನೀರು"ನ್ನು ಜೊತೆಯಲ್ಲಿ ತೆಗೆದುಕೊಂಡು ಬರುತ್ತಿದ್ದರು. ಏಕೆಂದು ಕೇಳಿದರೆ, ಯಾರಿಂದಲೂ ನಿರೀಕ್ಷೆ ಇಟ್ಟುಕೊಂಡು ಹೊರಗೆ ಹೋಗಬಾರದು. ವೃತ್ತಿ ಜೀವನದಲ್ಲಿ ಕೆಳಗಿನವರಲ್ಲಿ ಇದು ತಪ್ಪು ಸಂದೇಶ ನೀಡುತ್ತದೆ. ಇನ್ನೊಂದು ಯಾರಾದರೂ ಜಾತಿಯ ಕಾರಣಕ್ಕೆ 'ನೀರು' ಕೊಡದಿದ್ದರೆ ನಾವಾಗಿ ಮುಂದಾಲೋಚನೆಯಿಂದ ನಮ್ಮ ಊಟ–ಉಪಹಾರ–ನೀರನ್ನು ತೆಗೆದುಕೊಂಡು ಹೋಗುವುದು ಸೂಕ್ತ' ಇದು ಆ ವ್ಯಕ್ತಿಯ ಸ್ವಾಭಿಮಾನ ಮತ್ತು ಶ್ರೇಷ್ಠತೆಗೆ ಹಿಡಿದ ಕನ್ನಡಿ ಎನ್ನಬಹುದು".

"ನಮ್ಮ ಯುವ ಜನತೆಗೆ ಹೊಸ ತಲೆಮಾರಿನ ಅಧಿಕಾರಿಗಳಿಗೆ ಭರಣಯ್ಯನವರ ನಡವಳಿಕೆ ಬರಬೇಕು. ಇಂದಿನವರು ಆಮಿಷಗಳಲ್ಲಿ ಕಳೆದು ಹೋಗಬಾರದು – ಬೆಂಕಿಯಂತಿರಿ. ನೀವು ಆದರ್ಶವಾಗುತ್ತೀರಿ. ಸ್ವಾಭಿಮಾನಿಗಳಾಗಿ ನಿಮ್ಮ ಬಗ್ಗೆ ಎಲ್ಲರಿಗೂ ಗೌರವ ಮೂಡುತ್ತದೆ. ಇದೇ ನಮಗೆ ಅಂಬೇಡ್ಕರ್ ನೀಡಿರುವ ಕಾಣ್ಕೆ

ಅದನ್ನು ನಾವು ಉಳಿಸಿಕೊಳ್ಳಬೇಕು. ನಮ್ಮ ಜನಸಮುದಾಯದ ಏಳಿಗೆಗಾಗಿ ದುಡಿಯಬೇಕು. ಇಷ್ಟು ವರ್ಷಗಳ ನಂತರವಾದರೂ ಅಂಥ ಧೀಮಂತ ಅಧಿಕಾರಿಯ ಬಗ್ಗೆ ಒಂದು ನೆನಪಿನ ಸಂಪುಟ ಮಾಡುತ್ತಿರುವುದು ನಿಜಕ್ಕೂ ಒಳ್ಳೆಯ ಕೆಲಸ. ನಿಮಗೆ ಮತ್ತು ಕಾರ್ಯದಲ್ಲಿ ಭಾಗಿಯಾಗಿರುವ ಎಲ್ಲರಿಗೂ ನಾನು ಶುಭ ಕೋರುತ್ತೇನೆ" ಎಂದು ನಮ್ಮ ಬೆನ್ನುತಟ್ಟಿ ಕಳುಹಿಸಿದರು. ಅವರ ವ್ಯಕ್ತಮಾಡಿದ ಅನಿಸಿಕೆಗಳಿಗೆ ನಾವು ಅಭಿನಂದಿಸಿ ಬಂದೆವು.

* * *



ಅಳಿಸದ ಹಾದಿ ಮೂಡಿಸಿರುವ ನನ್ನಪ್ಪ

ಬಿ. ಗುರುಪ್ರಸಾದ್

ನನ್ನಪ್ಪ ಅಂಬೇಡ್ಕರ್ ಅನುಯಾಯಿ. ಅವರ ಚಿಂತನೆಗಳನ್ನು ಸಾಕಷ್ಟು ಅರ್ಥಮಾಡಿಕೊಂಡಿದ್ದರು. ಜನೋಪಕಾರ ಅವರ ಜೀವನದ ಗುರಿಯಾಗಿತ್ತು. ಹೀಗಾಗಿ ತಮ್ಮ ವೃತ್ತಿ ಜೀವನದುದ್ದಕ್ಕೂ ಸಂಕಷ್ಟದಲ್ಲಿರುವವರ ನೆರವಿಗೆ ಧಾವಿಸುತ್ತಿದ್ದರು. ಸಮುದಾಯದ ತೊಂದರೆ, ಕಷ್ಟಗಳಿಗೆ **irrespective of caste** ಸ್ಪಂದಿಸಿದರು. ನಮ್ಮ ಪ್ರಸ್ತುತ ತಲೆಮಾರು ಅವರಿಂದ ಕಲಿಯುವುದು ಸಾಕಷ್ಟಿದೆ. ಅವರ ಸಮಷ್ಟಿ ದೃಷ್ಟಿಕೋನ, ಔದಾರ್ಯಗಳು ಎಂದೆಂದೂ ಅನುಕರಣೀಯ. ನಾವು ಅವರ ಸಾರ್ವಜನಿಕ ವ್ಯಕ್ತಿತ್ವದ ಅರಿವಿಲ್ಲದೆ ಬೆಳೆದವರು. ಈಗ ಸಮಾಜದ ನೂರಾರು ಜನರಲ್ಲಿ ಅವರ ಬಗ್ಗೆ ಇರುವ ಗೌರವ, ಪ್ರೀತಿ, ಕೃತಜ್ಞತೆಗಳನ್ನು ಕಂಡು ಸಾರ್ಥಕವೆನಿಸುತ್ತದೆ. ಅಂಥ ತಂದೆಯ ಮಕ್ಕಳಾಗಿ ನಾವು ಭಾಗ್ಯವಂತರು.

ಕಾರ್ಯಾಧ್ಯಕ್ಷರು ಮತ್ತು ಟ್ರಸ್ಟಿ ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಶನ್
ಹಾಗೂ ಮಾಜಿ ಶಾಸಕರು, ನೆಲಮಂಗಲ ಕ್ಷೇತ್ರ



ಅಳಿಸದ ಹಾದಿ ಮೂಡಿಸಿರುವ ನನ್ನಪ್ಪ

ಬಿ. ಗುರುಪ್ರಸಾದ್

ಬಿ. ಗುರುಪ್ರಸಾದ್ ಮಾಜಿ ಶಾಸಕರು. ಸಜ್ಜನಿಕೆಯ ರಾಜಕಾರಣಿ. ಆರ್. ಭರಣಯ್ಯನವರ ಗಂಡುಮಕ್ಕಳಲ್ಲಿ ಮೂರನೆಯವರು. ತಂದೆ-ತಾಯಿಯ ಬೆಚ್ಚನೆಯ ಪ್ರೀತಿ, ವಿಶೇಷವಾಗಿ ತಂದೆಯ ಸಾರ್ವಜನಿಕ ವ್ಯಕ್ತಿತ್ವದ ಪ್ರಖರ ಬೆಳಕಿನಲ್ಲಿ

ಬಾಲ್ಯ ಕಳೆದವರು. ತಮ್ಮ ಆರಂಭಿಕ ಓದು ಯುರೋಪಿಯನ್ ಬಾಯ್ಸ್ ಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ, ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಪದವಿ. ಹೆಚ್ಚಿನ ಓದಿಗೆ ತೆರಳಿದ್ದು ಅಮೇರಿಕಾ ದೇಶಕ್ಕೆ. ಅಮೇರಿಕಾದ ಯುನಿವರ್ಸಿಟಿ ಆಫ್ ಡಕೋಟದಲ್ಲಿ ರಾಜಕೀಯ ವಿಜ್ಞಾನ ಮತ್ತು ಅಂತರಾಷ್ಟ್ರೀಯ ಸಂಬಂಧಗಳು (Political Science and International Relations) ವಿಷಯದಲ್ಲಿ ಎಂ. ಎ. ನಂತರ ಸಾರ್ವಜನಿಕ ಆಡಳಿತ (Public Administration) ವಿಷಯದಲ್ಲಿ ಪಿ. ಎಂ. ಎ. ಪದವಿಗಳಿಸಿ ಕೆಲವು ಕಾಲ ಬೋಧಕರಾಗಿಯೂ ಕೆಲಸ ನಿರ್ವಹಿಸಿದರು.

1985ರಲ್ಲಿ ನೆಲಮಂಗಲ ಕ್ಷೇತ್ರದಿಂದ ಮೊದಲಬಾರಿಗೆ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾದರು. ಆ ಕಾಲದಲ್ಲಿ ಐದು ವರ್ಷಗಳು ಇಡೀ ಕ್ಷೇತ್ರದಲ್ಲಿ ನೂರಾರು ಜನಪರ ಕೆಲಸಗಳನ್ನು ಮಾಡಿ ಜನಪ್ರಿಯ ಶಾಸಕರೆನಿಸಿಕೊಂಡಿದ್ದು ಇವರ ಹೆಗ್ಗಳಿಕೆ. ಇಂದಿಗೂ ಆ ಕ್ಷೇತ್ರದಲ್ಲಿ ಜನ ಇವರನ್ನು ಅತ್ಯಂತ ಅಭಿಮಾನ ಮತ್ತು ಪ್ರೀತಿಯಿಂದ ಕಾಣುವುದನ್ನು ನೋಡಿದಾಗ 'ತಂದೆಯಂತೆ ಮಗ ಕೂಡ ಜನೋಪಕಾರಿ' ಎಂಬುದನ್ನು ಸಾರ್ಥಕಪಡಿಸಿ–ಕೊಂಡಿದ್ದಾರೆ. ಪ್ರಸ್ತುತ ಕಾಂಗ್ರೇಸ್ ಪಕ್ಷದಲ್ಲಿ ಸಕ್ರಿಯ ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ತಮ್ಮ ತಂದೆಯ ಹೆಸರಿನಲ್ಲಿ ತಮ್ಮ ಸಹೋದರ, ಸಹೋದರಿಯರೊಂದಿಗೆ ಕೂಡಿಕೊಂಡು ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಶನ್ ಸ್ಥಾಪಿಸಿದ್ದಾರೆ. ಈ ಫೌಂಡೇಶನ್ ಮೂಲಕ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಾ ಎಲೆಮರೆಕಾಯಂತಿದ್ದಾರೆ.

ನಮ್ಮ ಪ್ರೀತಿಯ ಒತ್ತಾಯಕ್ಕೆ ಮಣಿದು ತನ್ನ ಅಪ್ಪನ ಬಗ್ಗೆ ತಾನು ಬಾಲ್ಯದ ಕಣ್ಣಲ್ಲಿ ಕಂಡ ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಕನ್ನಡನಾಡಿನ ಜನಪರ ಕೆಲಸಗಳಲ್ಲಿ "ಅಳಿಸದ ಹಾದಿ ಮೂಡಿಸಿದ ತನ್ನ ಅಪ್ಪ" ಎಂದೇ ತಿಳಿದಿರುವ ಇವರ ಕೆಲವು ನೆನಪುಗಳು ಇಲ್ಲಿವೆ. ಡಾ. ಬಿ. ಆರ್. ಅಂಬೇಡ್ಕರ್‌ರವರ ಚಿಂತನೆಗಳ ಬಗ್ಗೆ ವಿಶೇಷ ಗ್ರಹಿಕೆ ಮತ್ತು ಅಭಿಪ್ರಾಯಗಳನ್ನು ಹೊಂದಿದ್ದು, ಅವರ ತತ್ವಾದರ್ಶಗಳನ್ನು ಅನುಸರಿಸುತ್ತಾ, ತನ್ನ ತಂದೆ ಮಾಡಿದ ಕೆಲಸಗಳ ಬಗ್ಗೆ ವಿಶ್ಲೇಷಣಾತ್ಮಕವಾಗಿ ಬಿಡಿಸಿಕೊಟ್ಟ ನೆನಪುಗಳು ಹೀಗಿವೆ. ಈ ಇಡೀ ನೆನಪುಗಳು ತಮ್ಮ ಕುಟುಂಬದ ಒಟ್ಟು ಕಣ್ನೋಟವಾಗಿ ಬಿಂಬಿತವಾಗಿವೆ.

ನಮಸ್ಕಾರ ಸರ್. ನಾವು ತಮ್ಮ ತಂದೆಯವರ ಬಗ್ಗೆ, ಅವರ ಜೀವನ, ಸಾಧನೆ ಕುರಿತಾಗಿ ಮಾಹಿತಿ ಸಂಗ್ರಹಿಸಿ ಅದನ್ನು ಪುಸ್ತಕರೂಪದಲ್ಲಿ ತರುತ್ತಿದ್ದೇವೆ. ಈ

ಸಂದರ್ಭದಲ್ಲಿ ತಮ್ಮನ್ನು ಸಂದರ್ಶಿಸಬೇಕು ಅಂತ ಸಲಹಾ ಸಮಿತಿಯ ಸೂಚನೆ ಮೇರೆಗೆ ನಿಮ್ಮನ್ನು ಭೇಟಿ ಮಾಡುತ್ತಿದ್ದೇವೆ. ತಮ್ಮ ತಂದೆಯವರ ಬಗ್ಗೆ ನೆನಪುಗಳನ್ನು ಹಂಚಿಕೊಂಡರೆ, ನಾಡಿನ ಜನಕ್ಕೆ ನೀವು ಕುಟುಂಬದಲ್ಲಿ ಹಾಗೂ ಮಕ್ಕಳಾಗಿ ತಂದೆಯ ಬಗ್ಗೆ, ಅವರ ಸಾಮಾಜಿಕ ವ್ಯಕ್ತಿತ್ವ ಇವುಗಳನ್ನು ನೀವು ಹೇಗೆ ಗ್ರಹಿಸುತ್ತಿದ್ದೀರಿ ಎನ್ನುವುದು ಕೂಡ ಮುಖ್ಯವಾಗುತ್ತೆ. ಹಾಗಾಗಿ ತಾವು ತಮ್ಮ ತಂದೆಯವರ ನೆನಪುಗಳನ್ನು ಹಂಚಿಕೊಳ್ಳಬೇಕು.

ಸಂತೋಷ. ತಾವು ಕೇಳಿದ ಪ್ರಶ್ನೆಗಳಿಗೆ ನಾನು ತಿಳಿದಷ್ಟು ಹಾಗೂ ನನ್ನ ನೆನಪಿನಲ್ಲಿ ಉಳಿದಷ್ಟು ಹೇಳ್ತೀನಿ.

ತಮ್ಮ ತಂದೆಯ ಬಗ್ಗೆ ನಿಮ್ಮಲ್ಲಿ ಅಚ್ಚಳಿಯದೆ ಉಳಿದ ಮೊಟ್ಟಮೊದಲ ನೆನಪು ಯಾವುದು?

1966–67ರ ಸಮಯ. ನಾನು ದಿನಾ ಬೆಳಿಗ್ಗೆ jogging ಹೋಗುತ್ತಿದ್ದೆ. ಸುಮಾರು 5.30ಕ್ಕೆ ಎದ್ದು. ನನ್ನ ತಂದೆಯವರು ಆಗ ಆಫೀಸ್ ರೂಮಿನಲ್ಲಿ ಕುಳಿತು ಫೈಲ್ ಕ್ಲಿಯರ್ ಮಾಡುತ್ತಿರುವುದು ನನಗೆ ಜ್ಞಾಪಕ. ಆವಾಗ ಅವರ ಹತ್ತಿರ ಜಾಗಿಂಗ್‌ಗೆ ಹೋಗುತ್ತೀನಿ ಎನ್ನುತ್ತಿದ್ದೆ. ಕಾಫಿ ಬೇಕಾ ಅಂತ ಕೇಳುತ್ತಿದ್ದೆ. ಕಾಫಿ ಕೊಡುತ್ತಿದ್ದೆ. ನಂತರ jogging ಹೋಗುತ್ತಿದ್ದೆ. ಸಾಮಾನ್ಯವಾಗಿ ಅವರು ನಾಲ್ಕು ಗಂಟೆಗೆ ಎದ್ದೇಳುತ್ತಿದ್ದರು. ಆವಾಗ Secretary, Development, Housing, Health, Panchayat Raj, Co-operation ಆಗಿದ್ದರು. ಅದೇ ಸಮಯದಲ್ಲಿ ಅಡಿಷನಲ್ ಚಾರ್ಜಸ್ ಕೂಡ ಇತ್ತು. ಹೌಸಿಂಗ್ ಬೋರ್ಡ್ MD ಆಗಿದ್ದರು. ಈ ಥರ ಅವರ ಕೆಲಸ. ದಿನಕ್ಕೆ 7–8 ಬಾಕ್ಸ್ ಫೈಲ್ ಬರುತ್ತಿತ್ತು ಮನೆಗೆ. ಆ ಫೈಲ್ಸ್ ಎಲ್ಲ ಕ್ಲಿಯರ್ ಮಾಡಬೇಕಿತ್ತು. ಒಬ್ಬ ಸೆಕ್ರೆಟರಿ ಆಗಿ ಅದು ಅವರ ಜವಾಬ್ದಾರಿ ಆಗಿತ್ತು. 4 ಬಾಕ್ಸ್ ಅಂತೂ ಮಿನಿಮಮ್ ಇರುತ್ತಿತ್ತು. ಅವರೇ ಎಲ್ಲ ಬಾಕ್ಸ್ ಓಪನ್ ಮಾಡಿಕೊಂಡು ಫೈಲ್ ತೆಗೆದುಕೊಂಡು ನೋಡುತ್ತಿದ್ದರು. ಇದು ಮೊದಲ ನೆನಪುಗಳಲ್ಲಿ ಉಳಿದಿರುವುದು.

ಸಾಮಾನ್ಯವಾಗಿ ಅವರು ಮನೆಯಲ್ಲಿ ಕೂರುತ್ತಿದ್ದ, ನಿಲ್ಲುತ್ತಿದ್ದ, ಓಡಾಡುತ್ತಿದ್ದ ಜಾಗಗಳು ಯಾವುವು?

ಬೆಳಿಗ್ಗೆ ಎದ್ದವರೇ ಆಫೀಸ್ ರೂಮಿನಲ್ಲಿ ಕುಳಿತು ಫೈಲ್ಸ್ ನೋಡುತ್ತಿದ್ದರು. 4ರಿಂದ 7.30ರ ವರೆಗೆ ಆ ಕೆಲಸ ಆಗುತ್ತಿತ್ತು. ಏಳೂವರೆಗೆಲ್ಲ ಜನ ಬರಲು

ಶುರುಮಾಡುತ್ತಿದ್ದರು. 9-9.30ರವರೆಗೆ ಆ ಕೆಲಸ ಆಗುತ್ತಿತ್ತು. ಆಮೇಲೆ ಐದು ನಿಮಿಷದಲ್ಲಿ ಸ್ನಾನ ತಿಂಡಿ ಮುಗಿಸಿ 9.45ಕ್ಕೆಲ್ಲ ವಿಧಾನಸೌಧಕ್ಕೆ ಹೊರಟುಬಿಡುತ್ತಿದ್ದರು.

ಆಫೀಸು ರೂಮಿನಿಂದ ಆಚೆ ಬಂದಮೇಲೆ ಒಂದು verandah? ಇದೆ. ಅಲ್ಲಿ ಅವರು ಪೆಚ್ಚಾಗಿ ಕೂರುತ್ತಿದ್ದರು. ಅಲ್ಲಿ ಕೂತು ಬಂದ ಜನರನ್ನೆಲ್ಲ ಮಾತನಾಡಿಸುತ್ತಿದ್ದರು. ಚೆಡ್ಡಿ ಹಾಕಿಕೊಂಡವರಿಂದ ಹಿಡಿದು ಕೋಟು, ಪೈಜಾಮ, ಖಾದಿ ಸೂಟು ಹಾಕಿಕೊಂಡ ಜನಗಳವರೆಗೆ ಎಲ್ಲ ತರದ ಜನರೂ ಬರುತ್ತಿದ್ದರು. ಅವರೆಲ್ಲರನ್ನೂ ಅಟೆಂಡ್ ಮಾಡುತ್ತಿದ್ದರು. ಇದು ಅವರ ನಿತ್ಯದ ದಿನಚರಿ.

ಆಗ ಒಬ್ಬ ಮಗನಾಗಿ ಏನು ಅನ್ನಿಸುತ್ತಿತ್ತು?

ಆಗ 10 ವರ್ಷ ನನಗೆ. ನಮಗೆ ಆಗ ಅವರ ಪವರ್, ಕೆಲಸ, ಎಲ್ಲ ಗೊತ್ತಿರಲಿಲ್ಲ. ನಾವು ಅದು ನಾರ್ಮಲ್ ಎಂದುಕೊಂಡುಬಿಟ್ಟಿದ್ದೆವು. ಆ ಸಮಯದಲ್ಲಿ ಬೇರೆ ಮನೆಗಳಿಗೆ ಹೋಗಿ ಅಲ್ಲೂ ಹೀಗೆ ನಡೀತಿದೆಯಾ ಎಂದೆಲ್ಲ ನೋಡುವ ಸಂದರ್ಭ ಇರಲಿಲ್ಲ. ನಮ್ಮ ತಂದೆ ಬಳಿ ಜನ ಬಂದು ನಿಮ್ಮಿಂದ ನಮ್ಮ ಕೆಲಸ ಆಯಿತು, ದೊಡ್ಡ ಉಪಕಾರ ಆಯಿತು ಎಂದೆಲ್ಲ ಹೇಳುವುದನ್ನು ಕೇಳುತ್ತಿದ್ದೆವು, ನೋಡುತ್ತಿದ್ದೆವು. ಅವರು ಒಬ್ಬ ಸರ್ಕಾರಿ ಅಧಿಕಾರಿಯಾಗಿ, ಮಾಮೂಲಿನಂತೆ ಅದನ್ನೆಲ್ಲ ಅವರು ತಮ್ಮ ಕರ್ತವ್ಯ ಮಾಡುತ್ತಿದ್ದಾರೆ ಅಂದುಕೊಂಡುಬಿಡುತ್ತಿದ್ದೇವು.

ನಿಮಗೆ ನೆನಪಿರುವ ಹಾಗೆ ಅಪ್ಪ ಅಮ್ಮ ಯಾವ ಯಾವ ಕಡೆ ಒಟ್ಟಿಗೆ ಹೋಗುತ್ತಿದ್ದರು?

ಒಂದೊಂದು ಸಾರಿ ಯಾವುದೋ ಪಾರ್ಟಿ ಇರುತ್ತಿತ್ತು. ಇಲ್ಲ ಮದುವೆ, ರಿಸೆಪ್ಷನ್ ಇತ್ಯಾದಿ ಫಂಕ್ಷನ್ ಇರುತ್ತಿತ್ತು. ಆಗೆಲ್ಲ ಆಫೀಸಿನಿಂದ ಫೋನ್ ಮಾಡಿ ಅಮ್ಮನಿಗೆ ರೆಡಿಯಾಗಿರೋಕೆ ಹೇಳುತ್ತಿದ್ದರು. ಪಾರ್ಟಿಗಳಿಗೆಲ್ಲ ನಮ್ಮಂತ ಚಿಕ್ಕ ಹುಡುಗರನ್ನು ಕರೆದುಕೊಂಡು ಹೋಗುವ ಹಾಗಿರಲಿಲ್ಲ. ಸಾಕಷ್ಟು ಸಲ ಸಭೆ, ಸಮಾರಂಭಗಳಿಗೆ ಅವರು ಅಮ್ಮನ ಜೊತೆ ಹೋಗಿ ಬರುತ್ತಿದ್ದ ಜ್ಞಾಪಕ ನನಗೆ.

ನಿಮ್ಮ ಕುಟುಂಬದವರೆಲ್ಲ ಜೊತೆ ಅವರು ಯಾವ ವಿಷಯವನ್ನು ಹಂಚಿಕೊಳ್ಳುತ್ತಿದ್ದರು ಅಥವಾ ನೀವು ಅಪ್ಪ ಹೇಳುವ ಯಾವ ವಿಷಯಗಳನ್ನು ಕೇಳಿಸಿಕೊಳ್ಳುತಿದ್ದಿರಿ?

'ಸಾರ್, ನನಗೆ ಕೆಲಸ ಇಲ್ಲ, ಹಾಗಾಗಿದೆ, ಈ ತೊಂದರೆ ಇದೆ' ಅಂತ ಜನ ಬರೋರು. ಸುಮಾರು ಬಾರಿ ಅವರ ಕಷ್ಟಗಳನ್ನು ಕೇಳಿ ನಮ್ಮಪ್ಪ ಅತ್ತಿದ್ದನ್ನು

ನೋಡಿದ್ದೀನಿ ನಾನು. ಜನರು ಈ ತರ ಕಷ್ಟ ಎಲ್ಲ ಹೇಳಿದಕೂಡಲೇ ಅಳು ಬಂದುಬಿಡುತ್ತಿತ್ತು ಅಪ್ಪನಿಗೆ. ನಾವು ನಗುತ್ತಿದ್ದೆವು, ಆ ವಯಸ್ಸಿನಲ್ಲಿ ಏನೂ ಅರ್ಥ ಆಗುತ್ತಿರಲಿಲ್ಲ ನಮಗೆ. ಜನರ ಆತಂಕ, ನೋವು ಎಲ್ಲ ಅರ್ಥಮಾಡಿಕೊಳ್ಳುವ ವಯಸ್ಸಾಗಿರಲಿಲ್ಲ ಅದು. ಏನಪ್ಪ ಅಷ್ಟು ದೊಡ್ಡವರಾಗಿ ಅಳುತ್ತಿದ್ದಾರಲ್ಲ ಅಂತ ನಗು ನಮಗೆ. ಆಮೇಲೆ ನೀನು ಇಂಥ ಜಾಗಕ್ಕೆ ಹೋಗು, ಅಲ್ಲಿ ಅವರನ್ನು ಕಾಣು ಅಂತೆಲ್ಲ ಹೇಳಿ ವ್ಯವಸ್ಥೆ ಮಾಡುತ್ತಿದ್ದರು. ಮುಖ್ಯವಾಗಿ ಈ ನಾಡಿನ ಬಡಜನರ ಬಗ್ಗೆ, ನಿರುದ್ಯೋಗದ ಬಗ್ಗೆ ಮಾತಾಡುತ್ತಿದ್ದ ನೆನಪುಗಳಿವೆ.

ನಿಮ್ಮ ಅಕ್ಕಂದಿರು, ನಿಮ್ಮ ಅಣ್ಣಂದಿರು, ನಿಮ್ಮ ತಂಗಿಯರು ಮತ್ತೆ ನಿಮಗೆ ತಂದೆಯವರು ಯಾವುದನ್ನು ಬೇಡ ಅನ್ನುತ್ತಿದ್ದರು ಮತ್ತು ಯಾವುದನ್ನು ಮೆಚ್ಚುತ್ತಿದ್ದರು.?

ಪ್ರಾಮಾಣಿಕವಾಗಿ ಹೇಳುವುದಾದರೆ ಹೆಂಗಿತ್ತು ಅಂದರೆ ನಮ್ಮದು ಮಾತೃ ಪ್ರಧಾನ ಕುಟುಂಬ. ಅಂದರೆ ಅಪ್ಪ ಏಳುತ್ತಲೇ ಫೈಲ್ಸ್ ಅದು ಇದು ಅಂತ ಕೆಲಸ ಮಾಡುತ್ತಿದ್ದರು. ಆಮೇಲೆ ಜನರ ಭೇಟಿ, ಆಮೇಲೆ ಆಫೀಸು. ಮನೆಗೆ ಬರುವುದು 7–8ಗಂಟೆ ಆಗುತ್ತಿತ್ತು.

ನಮ್ಮ ವಿದ್ಯಾಭ್ಯಾಸ ಎಲ್ಲ ಅಮ್ಮನೇ ಮೇಲ್ವಿಚಾರಣೆ ಮಾಡುತ್ತಿದ್ದರು. ಓದುವ ವಾತಾವರಣ ಮೊದಲಿನಿಂದಲೂ ಇತ್ತು ಮನೆಯಲ್ಲಿ. ಅಮ್ಮನ ಸಪೋರ್ಟ್ ಇತ್ತು. ಸ್ಕೂಲಿನಿಂದ ಬಂದು ಸ್ವಲ್ಪ ಆಟ ಆಡಿ ಸಂಜೆ 6–6.30ಕ್ಕೆಲ್ಲ ಓದಲು ಕುಳಿತುಬಿಡುತ್ತಿದ್ದೆವು. 8.30ರವರೆಗೆ ಓದು ಬರಹ, ಆಮೇಲೆ ಅಪ್ಪ ಬಂದಮೇಲೆ ಎಲ್ಲರೂ ಒಟ್ಟಿಗೆ ಊಟ. ಆಗೆಲ್ಲ ಅಪ್ಪ ಅದು ಇದು ಕತೆ ಹೇಳುತ್ತಿದ್ದರು. ಹಾಗಾಯಿತು, ಹೀಗಾಯಿತು ಅಂತ. ಆಮೇಲೆ 9–9.30ರ ಸಮಯಕ್ಕೆಲ್ಲ ಮಲಗಿಬಿಡುತ್ತಿದ್ದೆವು. ಹೀಗಾಗಿ ಈ ಸಂದರ್ಭಗಳು ಅಷ್ಟಾಗಿ ನೆನಪಿನಲ್ಲಿಲ್ಲ.

ಅವರು ಫೈಲ್ಸ್, ಜನಸೇವೆ ಕೆಲಸ ಇವುಗಳಲ್ಲಿ ಮುಳುಗಿದ್ದಾಗ ಅಪ್ಪನ್ನ ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದಿರಾ?

ಒಬ್ಬ ದೊಡ್ಡ ಅಧಿಕಾರಿ, ವಿಪರೀತ ಜವಾಬ್ದಾರಿಗಳ ಹುದ್ದೆ ಹೀಗಾಗಿ ಕೆಲವು ಬಾರಿ ಸಹಜವಾಗೇ ಮಿಸ್ ಆಗ್ತಿದ್ರು. ಆದರೆ ನಮ್ಮನ್ನೆಲ್ಲ ಕಂಡ್ರೆ ಬಹಳ ಪ್ರೀತಿ. ತಂದೆಯ ಪ್ರೀತೀನ ನಾವು ಸಾಕಷ್ಟು ಸವಿದಿದ್ದೇವೆ ಎಂದು ಹೇಳಬಹುದು. ನಮ್ಮ ತಂದೆಗೆ ನನ್ನ ಬಗ್ಗೆ ಅದೇನೋ ವಿಶೇಷ ಪ್ರೀತಿ. ನನ್ನಲ್ಲಿ ಅವರೇನು ಕಂಡಿದ್ದರೋ

ಗೊತ್ತಿಲ್ಲ. 66–67ರಲ್ಲಿ ನನ್ನನ್ನು ಯುರೋಪಿಯನ್ ಸ್ಕೂಲಿಗೆ ಸೇರಿಸಿದರು. ಅಲ್ಲಿ ಆಗಾಗ ಪೇರೆಂಟ್ಸ್ ಟೀಚರ್ ಮೀಂಟಿಗ್ ಇರುತ್ತಿತ್ತು. ತಂದೆಗೆ ಆಫೀಸು, ಪಾರ್ಟಿ ಅದು ಇದು ಕೆಲಸ ಇರುತ್ತಿತ್ತು. ಮೀಟಿಂಗಿಗೆ ಬರಲಾಗುತ್ತಿರಲಿಲ್ಲ. ಅಮ್ಮನಿಗೆ ಮನೆ ಕೆಲಸ ಅದು ಇದು ಅಂತ ದಣಿವಾಗಿರುತ್ತಿತ್ತು. ತಂದೆಗೆ ಬರಬೇಕು ಅಂದರೂ ಬರಲಾಗುತ್ತಿರಲಿಲ್ಲ. ಆ ಸಮಯದಲ್ಲಿ ನನಗೆ ಮಿಸ್ ಆಗುತ್ತಿತ್ತು ಅಷ್ಟೆ.

ನಾವು ಅದನ್ನು ಅರ್ಥಮಾಡಿಕೊಂಡಿದ್ದೆವು. ಅಪ್ಪ ಗಮನಿಸುತ್ತಿಲ್ಲ ಅಂತ ನಾವು ಯಾವ ಮಕ್ಕಳೂ ಕೆಟ್ಟದಾರಿಗೆ ಇಳಿಯಲಿಲ್ಲ. ಶಾಲೆಯಲ್ಲಿ ಕೀಟಲೆ ಮಾಡುತ್ತಿದ್ದೆವು. ಆದರೆ ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ. ಮನೆಯಲ್ಲಿ ಶಿಸ್ತು, ಸಂಸ್ಕೃತಿ ಎಲ್ಲ ಇತ್ತು.

ಅವರ ಬಗ್ಗೆ ಮತ್ತ್ಯಾವ ನೆನಪು ಅಚ್ಚಳಿಯದೆ ಉಳಿದಿದೆ?

ನನಗೆ ತಂದೆ ಇರಬೇಕಾದರೆ ಏನು ಅವರ ತೂಕ, ಅವರ ಪವರ್ ಅಂತ ಗೊತ್ತಿರಲಿಲ್ಲ. ಅವರ ಆಫೀಸ್ ಕೆಲಸ ಎಲ್ಲ ನೋಡಿದ್ದೆ. ಆದರೆ ಅಷ್ಟೆಲ್ಲ ಅರ್ಥ ಆಗುವ ವಯಸ್ಸಲ್ಲ ಅದು. ವೆರೀ ಇನ್ನೋಸೆಂಟ್ ಲೈಫ್ ಆವಾಗ. ಸ್ಕೂಲಿನಲ್ಲಿ ಅವರಿವರ ಮನೆಗಳಿಗೆ ಹೋದಾಗ ಬೇರೆಯವರ ಜೊತೆ ಬೆರೆಯುತ್ತಿದ್ದುದು ಬಿಟ್ಟರೆ ಸೋಷಿಯಲ್ ಇಂಟರಾಕ್ಷನ್ ಅಷ್ಟರಲ್ಲೇ ಇತ್ತು ಆವಾಗ.

ತಂದೆ ತೀರಿಕೊಂಡಾಗ ನನಗೆ ಒಂದು ದೊಡ್ಡ ಶಾಕ್ ಆಯಿತು. ಹೇಗೆ ಎಂದರೆ 4.30ಕ್ಕೋ ಏನೋ ಅವರು ತೀರಿಕೊಂಡರು. ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಆ ಸಂದರ್ಭದಲ್ಲಿ ಅವರು ತೀರಿಕೊಂಡಿದ್ದು ದೊಡ್ಡ ಎಕ್ಸೈಟ್‌ಮೆಂಟ್ ಅಲ್ಲ. ಆ ಸಮಯದಲ್ಲಿ ಮನೆಯಲ್ಲಿ ಇಬ್ಬರು ಅಣ್ಣನವರ ಸ್ಕೂಟರ್ ಇತ್ತು. ನನಗೆ ಸ್ಕೂಟರ್ ಓಡಿಸಲು ಖುಷಿ. ಆದರೆ ಯಾರೂ ನನಗೆ ಸ್ಕೂಟರ್ ಓಡಿಸಲು ಕೊಡುತ್ತಿರಲಿಲ್ಲ. ತಂದೆ ತೀರಿಕೊಂಡ ಸಂದರ್ಭದಲ್ಲಿ ಎಲ್ಲರಿಗೂ ತಿಳಿಸಬೇಕಲ್ಲ. ನನ್ನ ಕೈಲಿ ಸ್ಕೂಟರ್ ಕೊಟ್ಟು ಅಲ್ಲಿ ಇಲ್ಲಿ ಕಳಿಸುತ್ತಿದ್ದರು. ಆದರೆ ಅದೇ ಸಮಯಕ್ಕೆ 9ಗಂಟೆ ಹೊತ್ತಿಗೆಲ್ಲ ನಮ್ಮ ಮನೆಯ ಮುಂದೆ ಆಚೆ, ಈಚೆ ರಸ್ತೆಯೆಲ್ಲ ಜನರಿಂದ ತುಂಬಿಹೋಯಿತು. ಎಲ್ಲೆಲ್ಲೂ ಜನ. 11ಗಂಟೆ ಹೊತ್ತಿಗೆಲ್ಲ ಇಡೀ ಕುಮಾರ ಪಾರ್ಕ್ ಏರಿಯಾ ಎಲ್ಲ ಟ್ರಾಫಿಕ್ ಜಾಮ್ ಆಗಿಹೋಯಿತು. ನಮಗೆ ಅದನ್ನು ನೋಡಿದ್ದಾಯಿತು ಅಷ್ಟೆ. ಜನ ಬರೋರು ಹೋಗೋರು.. ನಾನು ಬರಿ ನೋಡಿದ್ದಷ್ಟೇ ಆಯಿತು. ಆ ವಯಸ್ಸಿನಲ್ಲಿ ನಾನು ಹೇಗೆ ಅರ್ಥಮಾಡಿಕೊಳ್ಳಬೇಕು ಆ ಸನ್ನಿವೇಶವನ್ನು.

ಆಮೇಲಿನಿಂದ ಜನ ಎಲ್ಲ ಬಂದು ನಮ್ಮ ತಂದೆಯ ಬಗ್ಗೆ ಹೇಳುವುದಕ್ಕೆ ಶುರುಮಾಡಿದಮೇಲೆ ಅವರ ಪವರ್, ಬೆಲೆ, ಕೊಡುಗೆ ಎಲ್ಲ ಅರಿವಾಗಲು

ಆರಂಭವಾಯಿತು. ಇದು ಬಹಳ ಕಾಲ ನನ್ನ ಮನಸ್ಸಲ್ಲಿ ಪರಿಣಾಮ ಬೀರಿತು ಎನ್ನಬಹುದು. Then I started analyzing what my father was.. ನನಗೆ ಆವಾಗಿಲಿಂದಲೇ ಒಳಗೊಳಗೆ ನಮ್ಮ ಅಪ್ಪನ ಬಗ್ಗೆ ಏನಾದರೂ ಒಂದು ಮಾಡಬೇಕು ಎನ್ನುವ ಕೊರೆತ ಶುರುಆಯಿತು. ಒಟ್ಟಿನಲ್ಲಿ ನಾನು ಒಬ್ಬ ಜನಪ್ರಿಯ ವ್ಯಕ್ತಿಯ ಮಗ ಎನ್ನುವುದು ಮನಸ್ಸಿಗೆ ಬಂತು. ಆವಾಗ ನನಗೆ ನಾನು ಯಾರು? ನನ್ನ ತೂಕ ಏನು? ಜವಾಬ್ದಾರಿ ಏನು? ಎನ್ನವುದು ಕೊರೆಯಲು ಸುರುವಾಯಿತು. In the last 52 years I have never expressed my feeling to anybody. ನನ್ನ ಮನಸ್ಸಿನಲ್ಲಿ ಮಾತ್ರ ಇ ವಿಚಾರ ಇತ್ತು ಅಷ್ಟೆ.

ನಿಮಗೆ ಆ ಬಾಲ್ಯದ ದಿನಗಳಲ್ಲೇ ಕಾಡಿದ ಅಥವಾ ನಮ್ಮ ಕುಟುಂಬದಲ್ಲಿ ಹೀಗೆ ಆಗಿದ್ದರೆ ಒಳ್ಳೆಯದಿತ್ತು, ಇತ್ಯಾದಿ ಅನ್ನಿಸಿದ ಸಂಗತಿಗಳಾವುದು?

ಸಾಮಾನ್ಯವಾಗಿ ಎಲ್ಲ ಕುಟುಂಬಗಳಲ್ಲೂ ಇರುವಂತೆ ಅಂತ ಚಿಕ್ಕಚಿಕ್ಕ ಸಂಗತಿಗಳು ಇರುತ್ತವೆ. But I shall remember my father's statement "Do not look at the flaws of others as you go through life.."ಅಂದರೆ ಬೇರೆಯವರ ತಪ್ಪುಗಳನ್ನ ಹುಡುಕುತ್ತಾ ಹೋಗಬೇಡ, ಅವರ ಒಳ್ಳೆಯತನ, ಅವರ virtue ನೋಡಿ, and make this a better place to live ಅಂತ ಹೇಳುತ್ತಿದ್ದರು. ಇಂತವುಗಳು ಬಹಳಷ್ಟಿವೆ.

ಆದರೆ ಒಂದು ಘಟನೆಯನ್ನು ನಾನು ಇನ್ನೂ ನೆನಪಿಟ್ಟುಕೊಂಡಿದ್ದೇನೆ. ಒಂದು ಸಲ ದಿನಸಿ ತರೋದಿಕ್ಕೆ ನಮ್ಮ ಖಾಯಂ ಅಂಗಡಿಗೆ ಪೀವನ್ ಜೊತೆ ಹೋಗಿದ್ದೆ. ಆ ಅಂಗಡೀಲಿ ಒಬ್ಬರು ಹಿರಿಯರು ಕುಳಿತಿದ್ದರು, ಅವರಿಗೆ ನಾನು ಭರಣಯ್ಯನವರ ಮಗ ಅಂತ ಗೊತ್ತಿತ್ತು. ಆವತ್ತು ಕೂಡ ಪೀವನ್ ಎಲ್ಲ ಸಾಮಾನು ಕಟ್ಟಿಸುತ್ತಿದ್ದ. ಇವರು ನನ್ನ ಕರೆದು ಏನ್ರೀ ಗುರು, ಬನ್ನಿ ಕುಳಿತುಕೊಳ್ಳಿ ಅಂತ ಕುರ್ಚಿಲಿ ಕೂರಿಸಿದರು. Abrupt ಆಗಿ 'ಗುರು ನಿಮಗೆ ಯಾರಾದರೂ ಕಪಾಳಕ್ಕೆ ಕೊಟ್ಟರೆ ಏನು ಮಾಡುತ್ತೀರಿ?" ಅಂತ ಒಂದು ಪ್ರಶ್ನೆ ಕೇಳಿದರು. ಏನು ಉತ್ತರ ಹೇಳಬೇಕು ನಾನು ಆವಾಗ? ಆವಾಗ ನನಗೆ 13–14 ವರ್ಷ ಅಷ್ಟೆ. 'ಏನು ಮಾಡೋದು?' ಅಷ್ಟೇ ಕೇಳಿದೆ ಮೊದಲು. ನಂತರ 'ಯಾಕೆ ಹೊಡೆದ ಅಂತ ಯೋಚಿಸುತ್ತೀನಿ. ಒಬ್ಬ ವ್ಯಕ್ತಿ ಸುಮ್ಮಸುಮ್ಮನೆ ಕಪಾಳಕ್ಕೆ ಯಾಕೆ ಹೊಡೆಯುತ್ತಾನೆ. ಏನಾದರೂ ತಪ್ಪು ನನ್ನಿಂದ ಆಗಿದ್ದರೆ ತಾನೇ?' ಅಂತ ಹೇಳಿದೆ. ಆವಾಗ ಆ ವ್ಯಕ್ತಿ 'ಏನ್ರೀ ನಾನು ಎಷ್ಟೋ ಜನಕ್ಕೆ ಇದೇ ಪ್ರಶ್ನೆಯನ್ನು ಕೇಳಿದ್ದೀನಿ. ಆದರೆ ಯಾರೂ ಈ ಉತ್ತರ

ಕೊಟ್ಟಿರಲಿಲ್ಲ' ಎಂದರು. ಅಂದರೆ ಕೆಲವಾರು ವಿಚಾರದಲ್ಲಿ ನನ್ನ ರಿಯಾಕ್ಷನ್ಸ್ ತಂದೆಯವರಿಂದ ಬಂದಿರುವಂತದ್ದಿರಬಹುದು. ಈಗ ಯೋಚಿಸಿದಾಗ ಹಾಗೆ ಅನ್ನಿಸುತ್ತೆ ನನಗೆ. ಅವರಿಂದ ಸಾಕಷ್ಟು ಪ್ರಭಾವಿತನಾಗಿದ್ದೇನೆ ನಾನು. ಆಗ ಅವರ ಜೊತೆ ಹಳ್ಳಿಗಳಿಗೆಲ್ಲ ಹೋಗುತ್ತಿದ್ದೆ, ವಿಸಿಟ್‌ಗೆ ಹೋದಾಗ ನನ್ನನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಹಳ್ಳಿಗಳಲ್ಲಿ ಮೀಟಿಂಗ್ ಮಾಡುವಾಗ ಅವರ ಜೊತೆಗೇ ಕುಳಿತಿರುತ್ತಿದ್ದೆ.

ತಂದೆಯವರ ಬಗ್ಗೆ ಸಾರ್ವಜನಿಕವಾಗಿ ನೀವು ಮೆಚ್ಚುಗೆಯ ಅಥವಾ ಟೀಕೆಯ ಯಾವ ಮಾತುಗಳನ್ನು ಹೆಚ್ಚು ಕೇಳಿದ್ದೀರಿ?

ಅವರ ಕುರಿತು ಟೀಕೆ ಅಂದರೆ ಒಂದೇ ಕೇಳಿದ್ದು ನಾನು. ಅದು ಅವರು ರಾಜಕೀಯಕ್ಕೆ ಹೋಗಬಾರದಾಗಿತ್ತು ಅಂತ. ಅದು ಬಿಟ್ಟರೆ ಇಲ್ಲೀತನಕ ಅವರ ಬಗ್ಗೆ ಒಂದೇ ಒಂದು ಕೆಟ್ಟಮಾತನ್ನು ಕೇಳಿಲ್ಲ. ಮೆಚ್ಚುಗೆಯ ಮಾತುಗಳು ಅಂದರೆ ಸಂಸ್ಕೃತ ಪಾಂಡಿತ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳಿದ್ದೀನಿ. ಯಾರದ್ದೇ ಕಷ್ಟಕ್ಕಾದರೂ ಸ್ಪಂದಿಸುತ್ತಿದ್ದ ತಾಯಿ ಕರುಳು ಅವರದ್ದು ಅಂತ ಕೇಳಿದ್ದೀನಿ. ಉನ್ನತ ಅಧಿಕಾರದಲ್ಲಿದ್ದರೂ ಸಹ ಲಂಚ ತೆಗೆದುಕೊಳ್ಳಲಿಲ್ಲ. ಸಾರ್ವಜನಿಕ ಹಣ, ಸ್ವತ್ತಿಗೆ ಎಂದೂ ಆಸೆಪಡಲಿಲ್ಲ, ಎಲ್ಲಾ ಜಾತಿಯವರಿಗೂ ಉಪಕಾರ ಮಾಡಿದ್ದಾರೆ ಇವೆಲ್ಲ ನಾನು ಅವರ ಬಗ್ಗೆ ಕೇಳಿದ ಮೆಚ್ಚುಗೆಯ ಮಾತುಗಳು.

ಅವರಿಗೆ ನಿಮ್ಮ ನೆಂಟರಲ್ಲಿ ತುಂಬ ಇಷ್ಟವಾದವರು, ಯಾವಾಗಲೂ ಅವರು ಮನಸ್ಸಿನಲ್ಲಿ ಇರಿಸಿಕೊಂಡಿದ್ದವರು, ಪ್ರಿಯವಾದವರು ಯಾರು? ಯಾಕೆ?

Generally, ಎಲ್ಲ ನೆಂಟರನ್ನೂ ಒಂದೇ ತರಹ ಟ್ರೀಟ್ ಮಾಡುತ್ತಿದ್ದರು. ಯಾರಿಗೂ ತಾರತಮ್ಯ ಮಾಡುತ್ತಿರಲಿಲ್ಲ. ಸಾಮಾನ್ಯವಾಗಿ ಒಬ್ಬರಲ್ಲ ಒಬ್ಬರು ನೆಂಟರು ನಮ್ಮನೆಯಲ್ಲಿ ಯಾವಾಗಲೂ ಇದ್ದೇ ಇರುತ್ತಿದ್ದರು. ನಾನು ಚಿಕ್ಕವನಿದ್ದಾಗ ಅವರ ಜೊತೆಯಲ್ಲಿ ಸೋಮನಾಥಪುರಕ್ಕೂ ಹೋಗುತ್ತಿದ್ದೆ. ಅವರು ಅಲ್ಲಿಗೆ ಬಂದ ತಕ್ಷಣ ನಮ್ಮ ಚಿಕ್ಕಪ್ಪ, ಅಕ್ಕಪಕ್ಕದ ಮನೆಯವರು, ಪಕ್ಕದ ಬೀದಿಗಳವರು ಎಲ್ಲ ಸುತ್ತ ಬಂದು ಕುಳಿತುಬಿಡುತ್ತಿದ್ದರು. ಚೌಡಯ್ಯನವರ ಅವರ ಮಗ ಶೇಷಪ್ಪ ಅಂತ ಇದ್ದರು. ಅವರು TDB ಮೆಂಬರ್ ಆಗಿದ್ದರು ಆವಾಗ. ಸುಭಾಷ್ ಭರಣಿಯವರ ತಂದೆ ರಂಗಪ್ಪ ಅಂತ ಇದ್ದರು. ನಮ್ಮ ತಂದೆಯ ಚಿಕ್ಕಪ್ಪ ಪಾಪಯ್ಯ ಅಂತ ಇದ್ದರು. ಕುಪ್ಪೆ ಮೇಷ್ಟ್ರು ಅಂತ ಇದ್ದರು. ಇವರೆಲ್ಲರೂ ಬಂದು ಅಪ್ಪನ ಕುಶಲ ವಿಚಾರಿಸುತ್ತಿದ್ದರು. ಅವರು TDB. ಅಪ್ಪ ಎಲ್ಲರನ್ನೂ ವೈಯಕ್ತಿಕವಾಗಿ

ವಿಚಾರಿಸಿಕೊಳ್ಳುತ್ತಿದ್ದರು. He never thought he was an officer.. ಅವರವರ ಸಮಸ್ಯೆ ತಿಳಿಯುವುದು ಅದಕ್ಕೆ ಪರಿಹಾರ ಸೂಚಿಸುವುದು ಅಷ್ಟೆ. ತಾನು ಐಎಎಸ್ ಆಫೀಸರ್ ಎನ್ನುವುದೂ ಕೂಡ ಅವರ ತಲೆಯಲ್ಲಿ ಇತ್ತೋ ಇಲ್ಲವೋ ಗೊತ್ತಿಲ್ಲ! He was like a spring. The spring doesn't know that it's a spring. ಅದು ಯಾರೇ ಬಂದರೂ ನೆರವು ಕೊಡುತ್ತದಲ್ಲ ಹಾಗೆ. ಇವರು ಯಾರೇ ಕಷ್ಟ ಹೇಳಿಕೊಂಡು ಬಂದರೂ ಉಪಕಾರ ಮಾಡುತ್ತಿದ್ದರು. His nature was like that.

ನಿಮ್ಮ ಮನೆಯಲ್ಲಿ ನೀವೆಲ್ಲ ಸೇರಿದಾಗ, ಅಣ್ಣಂದಿರು, ಅಕ್ಕಂದಿರು ತಂದೆ ಬಗ್ಗೆ ಯಾವ ಗುಣವನ್ನು ಹೆಚ್ಚು ಮಾತನಾಡುತ್ತಿದ್ದಿರಿ?

ಎಲ್ಲ ಸೇರಿದಾಗ ಅಪ್ಪನ ಬಗ್ಗೆ ಡಿಸ್ಕಷನ್ ಮಾಡಿದೀವಾ ಇಲ್ಲವಾ ಜ್ಞಾಪಕ ಇಲ್ಲ. ಆದರೆ ಒಂದು ನೆನಪು ಈಗಲೂ ಹಸಿಯಾಗಿದೆ. ಏನಂದ್ರೆ, ನಮ್ಮ ವಿದ್ಯಾಭ್ಯಾಸದಲ್ಲಿ ಮತ್ತು ನಮ್ಮ ನಡವಳಿಕೆ ವಿಷಯದಲ್ಲಿ ಸ್ಟ್ರಿಕ್ಟ್ ಡಿಸಿಪ್ಲೀನ್ಸ್ ಇತ್ತು. ನಾವು ಅಪ್ಪನ ಜೊತೆಗೆಲ್ಲ ಟೂರ್ ಹೋಗುತ್ತಿದ್ದೆವಲ್ಲ, ಕಾರಿನಲ್ಲಿ ಎಲ್ಲ, ಆಗ ಅಪ್ಪ ನಮ್ಮನ್ನು ನಿದ್ದೆ ಮಾಡಲು ಬಿಡುತ್ತಿರಲಿಲ್ಲ. ನಾವೇನಾದರೂ ಮಲಗಿದ್ದರೆ ಎಬ್ಬಿಸಿ 'ನೋಡು ಇದು ಭತ್ತದ ಜಮೀನು., ಇದು ಆ ಮರ ಅದು ಆ ಗಿಡ ಅಂತೆಲ್ಲ ನೇಚರ್ ತೋರಿಸಿ ವಿವರವಾಗಿ ಹೇಳುತ್ತಿದ್ದರು ನೇಚರ್ ಬಗ್ಗೆ. ನಮಗೆ ಆಗ ಹುಡುಗಾಟದ ವಯಸ್ಸು ಅದೆಲ್ಲ ಅರ್ಥವೇ ಆಗುತ್ತಿರಲಿಲ್ಲ. ನನಗೆ ಇವತ್ತೂ ರಸ್ತೆಯಲ್ಲಿ ಹೋಗುತ್ತಿರುವಾಗ ಗದ್ದೆಗಳು, ತೆಂಗಿನತೋಟಗಳು ಇವೆಲ್ಲ ಕಂಡಾಗ ಅವರ ಮಾತುಗಳು ರಿಕಾಲ್ ಆಗುತ್ತಿರುತ್ತವೆ. ಪರಿಸರ ಪ್ರಪಂಚ ಎಲ್ಲ ತಿಳಿಸಿಕೊಡೋರು ಆಗ.

ಒಂದೆರಡು ಜನ ಏನು ಅಭಿಪ್ರಾಯ ಪಟ್ಟಿದಾರೆ ಅಂದರೆ ತಮ್ಮ ಮಕ್ಕಳನ್ನ ಯಾವ ಜಾತಿ, ಜನಾಂಗ ಅಂತ ಗೊತ್ತೇ ಆಗದಂತೆ, ಅಷ್ಟು ಪ್ರೊಟೆಕ್ಟೆಡ್ ಆಗಿ ಬೆಳೆಸಿದರು ನಿಮ್ಮನ್ನು ಅಂತ. ನೀವು ಏನು ಹೇಳುತ್ತೀರಿ ಇದಕ್ಕೆ?

ಜನ ಹಾಗೆ ತಿಳಿದಿದ್ರೆ ಸಹಜ ಅನ್ಸುತ್ತೆ. ಮೊದಲನೇದಾಗಿ ನಮ್ಮ ಅಕ್ಕ, ಅಣ್ಣಂದಿರು ನಮ್ಮ ತಂದೆಯನ್ನು ಬಹಳ ಕಾಲ ನೋಡಿದವರು. ಅವರು ದೊಡ್ಡವರಿದ್ದರು. ನನಗೆ ತಿಳುವಳಿಕೆ ಬರುವುದಕ್ಕೆ ಶುರುವಾದಾಗ ಅವರು ಅಧಿಕಾರದ ಉತ್ತುಂಗದಲ್ಲಿದ್ದರು. ಆವಾಗ ಅವರು ಸರ್ವೆ ಸೆಟ್ಲ್‌ಮೆಂಟ್ ಕಮೀಷನರ್ ಆಗಿದ್ದರು. ಮತ್ತು ಪಿ.ಎಸ್.ಸಿ. ಮೆಂಬರ್ ಆಗಿದ್ದರು. ನನಗೆ ನಾವು ಎಸ್.ಸಿ. ಅಂತೇನೂ ಗೊತ್ತಿರಲಿಲ್ಲ. ಅದನ್ನೆಲ್ಲ ಮನೆಯಲ್ಲಿ ನಾವು ಚರ್ಚೆಯನ್ನೇ ಮಾಡುತ್ತಿರಲಿಲ್ಲ. ಬೆಳಿಗ್ಗೆ

ಎದ್ದು ಸ್ನಾನ ತಿಂಡಿ ಮುಗಿಸಿ ಶಾಲೆಗೆ ಹೋಗುವುದು. ಸಂಜೆ ಶಾಲೆಯಿಂದ ಬಂದು ಸ್ವಲ್ಪ ಆಟ ಆಡಿ ಓದಲು ಕೂರುವುದು. ಆಮೇಲೆ ಊಟ ನಿದ್ರೆ. ಇದು ನಮ್ಮ ದಿನಚರಿ ಆಗಿತ್ತು. Failure is not at all acceptable in our family. ಯಾಕೆ ಅಂದರೆ ನಮ್ಮ ತಂದೆ ಬಗ್ಗೆ ಹೆದರಿಕೆ ಅನ್ನುವುದಕ್ಕಿಂತ ಗೌರವ ಇತ್ತು. He was somebody, some where ಅಂತ ಗೊತ್ತಿತ್ತು ನಮಗೆ. ಅದನ್ನು ಮಾತಿನಲ್ಲಿ ವಿವರಿಸುವುದಕ್ಕೆ ಆಗುವುದಿಲ್ಲ.

ನಿಮಗೆ ಏನಾದರೂ ಗಿಫ್ಟ್ ಕೊಟ್ಟಿದ್ದರಾ ತಂದೆಯವರು?

ಆ ಥರ ಏನೂ ಕೊಟ್ಟಿದ್ದು ನೆನಪಿಲ್ಲ. ಬರೀ ಓದಬೇಕು, ಬರೆಯಬೇಕು, ಮುಂದೆ ಬರಬೇಕು ಅನ್ನುವುದೇ ಮೂಲ ಧ್ಯೇಯ. ಹಾಗೆ ನಮ್ಮನ್ನು ಬೆಳೆಸಿದ್ದರು ಅವರು. ಅದೇ ನಮ್ಮ ತಂದೆ ನನಗೆ ಕೊಟ್ಟ ದೊಡ್ಡ ಗಿಫ್ಟ್! ನನ್ನ ಬಗ್ಗೆ ಅವರಿಗೆ ಬಹಳ ಪ್ರೀತಿ ಇತ್ತು. He wanted to give me the best. ನನ್ನನ್ನ ಯುರೋಪಿಯನ್ ಸ್ಕೂಲಿಗೆ ಸೇರಿಸಿದರು. He is different from others ಅಂತ ಅವರ ಮನಸ್ಸಿನಲ್ಲಿ ಇತ್ತೊ ಏನೋ ಗೊತ್ತಿಲ್ಲ. ಅದಕ್ಕೆ ತಕ್ಕಂತೆ ನನಗೆ ಏನು ಮಾಡಬೇಕೋ ಎಲ್ಲ ಮಾಡಿದರು. ಆದರೆ ಅವರ ನಿರೀಕ್ಷೆಯ ಮಟ್ಟಕ್ಕೆ ನಾನು ಮುಟ್ಟಲಿಲ್ಲ ಅಂತ ಈಗಲೂ ಅನಿಸುತ್ತೆ ನನಗೆ. His assessment of me was far higher than what I am. I could have even broken that. ಆದರೆ ನಾನು ಏನೂ ಡಿಮ್ಯಾಂಡ್ ಮಾಡುತ್ತಿರಲಿಲ್ಲ. ಮಾಡಿದ್ದರೆ ನನಗೂ ಇನ್ನೂ ಮಾಡುತ್ತಿದ್ದರು ಅಪ್ಪ.

ನಮ್ಮ ಜಾತಿ ವರ್ಗದವರನ್ನಲ್ಲದೆ ಬೇರೆ ಜಾತಿಯ ಯಾವ ವ್ಯಕ್ತಿಗಳನ್ನು ಅವರು ಹೆಚ್ಚು ಮನಸ್ಸಿಗೆ ಹಚ್ಚಿಕೊಂಡಿದ್ದರು?

I miss all those things. ಜಾತಿಯ ವ್ಯಕ್ತಿಗಳು ಅನ್ನುವುದಕ್ಕಿಂತ ಬಡವರು ಯಾರೇ ಬಂದರೂ ಕಾಳಜಿ ತೋರಿಸುತ್ತಿದ್ದರು. ಎಲ್ಲರ ಬಳಿಯೂ ನೀವೆಲ್ಲ ವಿದ್ಯಾಭ್ಯಾಸ ಮಾಡಬೇಕು, ಓದಬೇಕು, ಓದಿ ಮುಂದೆಬರಬೇಕು ಎನ್ನುವ ಮಾತನ್ನು ಹೇಳಿಯೇ ಹೇಳುತ್ತಿದ್ದರು. He had very strong commitment about this statement for everyone.

ಇವತ್ತು, ವರ್ತಮಾನದಲ್ಲಿರುವ ಜನತೆ ಅಥವಾ ಇವತ್ತಿನ ತಲೆಮಾರಿನವರು ತಂದೆಯವರ ಯಾವ ವ್ಯಕ್ತಿತ್ವವನ್ನು ಅನುಸರಿಸಬೇಕು ಅಂತ ನಿಮಗನ್ನಿಸುತ್ತೆ?

ನಾನು ತಿಳಿದ ಮಟ್ಟಿಗೆ ನಮ್ಮ ತಂದೆಯವರಲ್ಲಿ ಒಳ್ಳೆಯತನ ಇತ್ತು. ಬರೀ ಒಳ್ಳೇದು ಮಾಡಬೇಕು ಎನ್ನುವುದಷ್ಟೇ ಅವರ ಮನಸ್ಸಿನಲ್ಲಿ ಇದ್ದಿದ್ದು. ಅಧಿಕಾರ ಬಳಸಿಕೊಂಡು ಯಾರನ್ನೋ ಕೆಳಗಿಳಿಸಬೇಕು, ಇನ್ನೇನೋ ಕಿತಾಪತಿ ಮಾಡಬೇಕು, ದುಡ್ಡು ಲೂಟಿ ಹೊಡೆಯಬೇಕು ಇದೆಲ್ಲ ಇರಲೇ ಇಲ್ಲ ಅವರಲ್ಲಿ. That's how even today its validity remains. ಒಳ್ಳೆಯದು ಮಾಡಬೇಕು ಎನ್ನುವ ಒಂದೇ ಗುಣ ಅವರಲ್ಲಿ ಇತ್ತು. ಇವತ್ತಿನ ಪೀಳಿಗೆ ಅದನ್ನು ಅನುಸರಿಸಬೇಕು ಅಂತ ಅನ್ನಿಸುತ್ತೆ ನನಗೆ.

ಇವತ್ತಿನ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಯಲ್ಲಿ ಇದು ಸಾಧ್ಯ ಇದೆಯಾ? ತಳಪಾಯವೇ ಪೂರ್ತಿ ಭ್ರಷ್ಟ ಆಗುತ್ತಿರುವಾಗ ನಾವು ಒಳ್ಳೆತನವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯ ಇದೆಯಾ?

ಯಾಕೆ ಭ್ರಷ್ಟಾಚಾರ, ಇದೆಲ್ಲ ಅವತ್ತೂ ಇರಲಿಲ್ಲವಾ!? ಒಳ್ಳೆಯದಾಗಬೇಕು ಅಂದರೆ ಮೊದಲು ನಮ್ಮಲ್ಲಿ ಒಳ್ಳೆಯತನ ಇರಬೇಕು. ಒಳ್ಳೆಯತನ ಬರಬೇಕು ಅಂದರೆ ನಮ್ಮಲ್ಲಿ stuff ಇರಬೇಕು. You cannot accept somebody who does not know how to use the screw driver as a mechanic. ಸ್ಕ್ರೂಡ್ರೈವರ್ ತಿರುಗಿಸಲಿಕ್ಕೆ ಬರದವನಿಂದ ನೀವು ಮೆಕ್ಯಾನಿಕ್ ಕೆಲಸ ಮಾಡಿಸಲು ಸಾಧ್ಯವಿಲ್ಲ. ಹಾಗೇಯೇ ಇದೂ.

ಇವತ್ತಿನ ಪರಿಸ್ಥತಿ ಏನಾಗಿದೆ ಅಂದರೆ ಸ್ಕ್ರೂಡ್ರೈವರ್ ತಿರುಗಿಸಲು ಗೊತ್ತಿಲ್ಲದವರು ಕೂಡ ಮೆಕ್ಯಾನಿಕ್ ಜಾಗದಲ್ಲಿ ಹೋಗಿ ಕುಳಿತಿದ್ದಾರೆ. ಇಂಜಿನಿಯರ್ ಆಗುತ್ತಾರೆ ಹೀಗಾದರೆ ಒಳ್ಳೆತನ ಹೇಗೆ ಬರುತ್ತದೆ? ನಮ್ಮ ಅಂತರಾಳದಲ್ಲಿ ಒಳ್ಳೆತನ ಇದ್ದರೆ ಬೇರೆಯವರಿಗೆ ಒಳ್ಳೆದು ಮಾಡಲು ಸಾಧ್ಯ. ಆದರೆ ಇವತ್ತು ಒಳ್ಳೆತನವನ್ನು ನಾವೆಲ್ಲ ಕಳೆದುಕೊಂಡಿದ್ದೀವಿ. ಆಸೆ ಎಲ್ಲರಿಗೂ ಇರುತ್ತೆ ನಿಜ, ಆದರೆ ದುರಾಸೆ ಯಾಕೆ? ಈ ದುರಾಸೆಯನ್ನು ಒಬ್ಬರು ತೋರಿಸಿದರೆ ಇನ್ನು ಹತ್ತು ಜನ ಅದೇ ಹಾದಿಯನ್ನು ತುಳಿಯುತ್ತಾರೆ. ಹಾಗೇ ಆ ಸಂಖ್ಯೆ ಜಾಸ್ತಿ ಆಗುತ್ತಾ ಹೋಗುತ್ತದೆ. ಅದಾಗಬಾರದು ಅಂದರೆ ನಮ್ಮಲ್ಲಿ ಮೊದಲು ಒಳ್ಳೆಯತನ ಇರಬೇಕು.

ತಂದೆಯವರ ಬಗ್ಗೆ ಟೀಕೆ ಕೇಳಿಲ್ಲ ಅಂದಿರಿ. ಅದು ಸತ್ಯ ಕೂಡ ಹೌದು. ನಿಮ್ಮ ಬಗ್ಗೆ ಟೀಕೆ ಇದೆ. ಏನಂದರೆ ಗುರುಪ್ರಸಾದ್ ಅವರನ್ನು (ಕೆಲವರು ಮಾತ್ರ) ಹೊರತುಪಡಿಸಿ ಭರಣಯ್ಯನವರ ಮಕ್ಕಳು ಅವರ ರೀತಿ ಯಾಕೆ ಆಗಲಿಲ್ಲ ಅನ್ನುವುದು. ಹೇಗೆ ಅರ್ಥೈಸುತ್ತೀರಿ ಇದನ್ನು?

ನಾನು ಮೊದಲೇ ಹೇಳಿದಂತೆ ನಮಗೆ ಈ ಜಾತಿ, ಜನಾಂಗ ಎಲ್ಲ ಗೊತ್ತಿರಲಿಲ್ಲ ಮೊದಲು. ಅಲ್ಲದೆ ಅಪ್ಪನ ಹತ್ತಿರ ಅಧಿಕಾರ ಇತ್ತು. ಜೊತೆಗೆ ಒಳ್ಳೇತನವೂ ಇತ್ತು. ಆದ್ದರಿಂದ ಜನರಿಗೆ ಅಷ್ಟೆಲ್ಲ ಮಾಡಿದರು. ಅವರು ತೀರಿಕೊಂಡಮೇಲೆಯೇ ನಮಗೆ ಅವರು ಮಾಡಿದ್ದು ಅಮೋಘ ಸಾಧನೆಗಳು ಅಂತ ಅರ್ಥ ಆಯಿತು. ನಮ್ಮದು ಪೊಲಿಟಿಕಲ್ ಫ್ಯಾಮಿಲಿ ಆಗಿರಲಿಲ್ಲ. ಅಪ್ಪ ಮಂತ್ರಿನೋ, ಶಾಸಕನೋ ಆಗಿರಲಿಲ್ಲ. so ನಮಗ್ಯಾರಿಗೂ ಒಂದು ಜಾಗ ಅಂತ ಇರಲಿಲ್ಲ. ಆದರೆ ಎಲ್ಲ ಜನರೂ ಬರುತ್ತಿದ್ದರು ನಮ್ಮ ಅಪ್ಪನನ್ನು ಕಾಣಲಿಕ್ಕೆ. ಯಾರ್ಯಾರೋ ಸ್ವಾಮೀಜಿಗಳೂ ಸಹ ಬಂದಿದ್ದರು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ನಾವು ಅವರಂತೆ ಮಾಡುವ ಅವಕಾಶ, ಅಧಿಕಾರ ಸಿಕ್ಕದಿದ್ದರೂ ಜನೋಪಕಾರ ಮಾಡುವ ಮನಸ್ಸು ಮತ್ತು ಕಳಕಳಿಯನ್ನು ಕಳೆದುಕೊಂಡಿಲ್ಲ ಅನ್ನೋದು ಮಾತ್ರ ಸತ್ಯ.

ನಾನು ಸಾಧ್ಯವಾದಷ್ಟು ಅಪ್ಪನ ಸಿದ್ಧಾಂತ, ಕಾರ್ಯವೈಖರಿ ಇವುಗಳನ್ನು ಜಾರಿಗೆ ತರುವಂತಹ ಹಾದಿಯಲ್ಲಿ ನಡೆದಿದ್ದೇನೆ. ಅವಕಾಶ ಸಿಕ್ಕಿದರೆ ಇನ್ನಷ್ಟು ಮಾಡಬೇಕು ಅಂತ ಇದೆ. ಅವಕಾಶ ಸಿಕ್ಕಿದರೆ ಖಂಡಿತ ಮಾಡುವೆ. ಅವರು ಮಾಡಿದಂತಹ ಮಹಾನ್ ಕಾರ್ಯಗಳು, ಅವರ ಸಾಧನೆ ಎಲ್ಲ ಗೊತ್ತಿದೆ. ನಾನೂ ಆ ದಾರಿಯಲ್ಲೇ ಸಾಗುವೆ.

ನೀವು ರಾಜಕೀಯಕ್ಕೆ ಬಂದು ಶಾಸಕರಾದಿರಿ, ಜನಪರ ಕೆಲಸಗಳನ್ನು ಮಾಡಿದಿರಿ. ಈಗ ನೀವು ನೆನಪುಮಾಡಿಕೊಂಡರೆ ನಿಮ್ಮ ತಂದೆಯ ರಾಜಕೀಯ ಪ್ರವೇಶದ ಬಗ್ಗೆ ಏನನ್ನಿಸುತ್ತೆ ನಿಮಗೆ?

ಇವತ್ತು ನಾನು ಬೈ ಮಿಸ್ಟೇಕ್ ರಾಜಕಾರಣದಲ್ಲಿದ್ದೀನಿ. ಆದರೆ ತಂದೆಯವರಿಗೆ ಹಾಗೆ ಆಗಲಿಲ್ಲ. ಅವರ ಸುತ್ತ ಇದ್ದವರೆಲ್ಲ ನೀವೇ ಇಂದ್ರ, ನೀವೇ ಚಂದ್ರ, ಕರ್ನಾಟಕಕ್ಕೇ ನೀವು ಫೇಮಸ್ಸು, ಎಲ್ಲ ಜನಾಂಗದವರೂ ನಿಮ್ಮನ್ನ ಇಷ್ಟ ಪಡುತ್ತಾರೆ ಅಂತೆಲ್ಲ ಹೇಳಿ, ರಾಜಕೀಯ ಮುಖಂಡರೆಲ್ಲ ಅವರ ಕಿವಿಗೆ ತುಂಬಿದ್ದರಿಂದ ಅವರು ರಾಜಕೀಯಕ್ಕೆ ಬಂದರು. ಅವರು ಅಧಿಕಾರಕ್ಕೋಸ್ಕರ ರಾಜಕೀಯಕ್ಕೆ ಬಂದವರಲ್ಲ. ಅದಕ್ಕಿಂತ ಮಿಗಿಲಾಗಿ ಇನ್ನೂ ಹೆಚ್ಚಿನ ಜನಸೇವೆ ಮಾಡಬಹುದೆಂಬ ಆಕಾಂಕ್ಷೆಯಿಂದ ಅವರು ಅಂತ ರಾಜಕೀಯಕ್ಕೆ ಬಂದರು. He wanted to keep on serving the people.

ನನಗೆ ಎಂ.ಎಲ್.ಎ. ಸೀಟು ಸಿಗಬೇಕಾದರೆ ರಾಮಕೃಷ್ಣ ಹೆಗಡೆಯವರು ಕಾರಣ. 1980ರ ಮೊದಲು ನಾನು ರಾಜಕೀಯವನ್ನು ದ್ವೇಷಿಸುತ್ತಿದ್ದೆ. ರಾಮಕೃಷ್ಣ

ಹೆಗಡೆಯವರಿಗೆ ನಮ್ಮ ತಂದೆಯವರ ಬಗ್ಗೆ ಚೆನ್ನಾಗಿ ಗೊತ್ತಿತ್ತು. He knew what my father was. ಅವರಿಗೆ ನನ್ನ ತಂದೆ ಕಂಡರೆ ಗೌರವ ಇತ್ತು. ಏಕೆಂದರೆ ಅವರು ಸಹಕಾರಿ ಇಲಾಖೆಯಲ್ಲಿ ಸೆಕ್ರೆಟರಿ ಆಗಿದ್ದಾಗ ಹೆಗಡೆಯವರು ಸಹಕಾರ ಮಂತ್ರಿ ಆಗಿದ್ದರು. ಹಾಗಾಗಿ ನನ್ನನ್ನ ನೋಡಿ ಇವನಿಗೆ ಏನಾದರೂ ಮಾಡಬೇಕು ಅಂತ ಅನ್ನಿಸಿ ಟಿಕೆಟ್ ಕೊಟ್ಟರು. ನನ್ನ ತಂದೆಯವರಿಂದಾಗಿ ನನಗೆ ಆ ಜಾಗ ಸಿಕ್ಕಿದೆ. ಆ ಸಮಯದಲ್ಲಿ ನನಗೆ ತಿಳಿದ ಮಟ್ಟಿಗೆ ಕೆಲಸ ಮಾಡಿದೆ.

ನೀವು ಒಬ್ಬ ರಾಜಕಾರಣಿಯಾಗಿ ಚುನಾವಣೆಯಲ್ಲಿ ಅವರ ರಾಜಕೀಯ ಸೋಲನ್ನು ಜನಾಂಗದ ದೃಷ್ಟಿಯಿಂದ ನೀವು ಹೇಗೆ ಅರ್ಥೈಸುತ್ತೀರಾ?

ಆವಾಗಿನ ಕಾಲದಲ್ಲಿ ಜನಕ್ಕೆ ಅಷ್ಟು ತಿಳುವಳಿಕೆ ಇರಲಿಲ್ಲ. ಕಾಂಗ್ರೆಸ್ (R)ನಲ್ಲಿ ಸೇರಿರಲಿಲ್ಲ ಅಂತ ಕಾಣುತ್ತೆ. ಜನರಲ್ಲಿ ಪ್ರೀತಿ ಇದೆ, ಗೆಲ್ಲಿಸುತ್ತಾರೆ. ಕೆಲಸ ಮಾಡಲಿಕ್ಕೆ ಯಾವ ಪಾರ್ಟಿ ಆದರೆ ಏನು ಅಂತ ಕಾಂಗ್ರೆಸ್ (ಓ) ಸೇರಿದರು. ಆ ಸಮಯದಲ್ಲಿ ಇಂದಿರಾಗಾಂಧಿ ಅಲೆ ತುಂಬಾ ಇತ್ತು. ಬ್ಯಾಂಕ್ ರಾಷ್ಟ್ರೀಕರಣ, 20 ಅಂಶಗಳ ಕಾರ್ಯಕ್ರಮ, ಗರೀಬಿ ಹಟಾವೋ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಅವರು ಜನಪ್ರಿಯತೆ ಗಳಿಸಿದ್ದರು. She was the most charismatic leader in the country.

ಆ ಸಮಯದಲ್ಲಿ ಕಾಂಗ್ರೆಸ್ (ಓ) ನಲ್ಲಿ ನಿಜಲಿಂಗಪ್ಪ ಇದ್ದರು. He could not match Indira Gandhi's popularity ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವೋಟ್ ಪವರ್, ಜನಬಲ ಎಲ್ಲ ಗಣನೆಗೆ ಬರುತ್ತವೆ. From peoples' point of view Indiraji was very powerful. ಅಲ್ಲಿನ ಜನರೂ ಕೂಡ ಮುಗ್ಧರಿದ್ದರು, ಪ್ರಪಂಚ ತಿಳಿದುಕೊಂಡಿರಲಿಲ್ಲ. ನಮ್ಮ ತಂದೆ ಸೋತರೂ ಕೂಡ ಅದಕ್ಕಾಗಿ ಅಲ್ಲಿಯ ಜನರನ್ನು ಯಾವತ್ತೂ ನಿಂದಿಸಲಿಲ್ಲ, ಅವರ ಮೇಲೆ ಆರೋಪ ಹೊರಿಸಲಿಲ್ಲ. ಇವತ್ತಿನ ಕಾಲದಲ್ಲಿ ತಿಳುವಳಿಕೆ ಇರುವವನೇ ತಪ್ಪು ಮಾಡುತ್ತಾನೆ ಅಂತದ್ದರಲ್ಲಿ ಅವರಿಗೆ ವಿದ್ಯಾಭ್ಯಾಸ ಏನೂ ಇರಲಿಲ್ಲ ಅವತ್ತು. ಅವರಿಗೆ ಆ ಮಟ್ಟದ ವಿವೇಚನೆ ಬರುವುದಕ್ಕೆ ಹೇಗೆ ಸಾಧ್ಯ!?

ಚುನಾವಣಾ ಪ್ರಚಾರಕ್ಕೆ ಹೋದಾಗ ತಂದೆಯವರು ಓಟು ಕೇಳುವುದಕ್ಕಿಂತ ಹೆಚ್ಚಾಗಿ ಜನರ ಕಷ್ಟ ಸುಖಗಳ ಬಗ್ಗೆ ಮಾತನಾಡುತ್ತಿದ್ದರು ಹಾಗಾಗಿ ಸೋತರು ಅಂತ ಜನ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಇಲ್ಲ ಇಲ್ಲ. ಹಾಗೆ ಹೇಳಿದ್ದರಿಂದ ಅಲ್ಲ. ಅವರು ಆ ಮಾತುಗಳ ಮೂಲಕ ನಾನು ರಾಜಕೀಯಕ್ಕೆ ಬಂದರೂ ಜನಪರತೆಯನ್ನು ಮರೆಯುವುದಿಲ್ಲ ಎಂಬುದನ್ನು ಸೂಚಿಸಲು ಹಾಗೆ ಹೇಳಿರಬಹುದು. ಆದರೆ ಸೋಲಿಗೆ ಮುಖ್ಯವಾದ ಕಾರಣ ಅಂದರೆ Ignorance of people and Indira Gandhi's wave. ಅದರಿಂದಾಗಿ ಆ ಎಲೆಕ್ಷನ್ನಿನಲ್ಲಿ ಎಂತೆಂಥವರೋ ಸೋತುಹೋದರು.

ಇದಾದಮೇಲೆ ಮನಸ್ಸಿನಲ್ಲಿ ಬಹಳ ವ್ಯಥೆಪಟ್ಟುಕೊಂಡರು ಅವರು. ಅದು ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿತು. He had suffered a lot during the last two years. 1972ರಲ್ಲಿ ಇದಾಗಿದ್ದು. ನನಗೆ ಆಗ ಹದಿನಾಲ್ಕು ವರ್ಷ. ನಾನು ಮಾನಸಿಕವಾಗಿ ಪ್ರಬುದ್ಧನಾಗುತ್ತಿದ್ದ ವರ್ಷ ಅದು. ಅವರು ಕೂತು ಏನೋ ಯೋಚನೆಮಾಡುತ್ತಿದ್ದಿದ್ದನ್ನ ನಾನು ಪ್ರತಿ ದಿನ ನೋಡಿದ ಹಾಗೆ ನೆನಪಿದೆ. ಒಂದು ರೀತಿ ನೀರಿನಿಂದ ಹೊರಗೆ ಬಿದ್ದ ಮೀನಿನಂತೆ ಆಗಿತ್ತು ಅವರ ಸ್ಥಿತಿ ಆಗ. ಆದರೂ ಬಂದ ಜನರ ಕೆಲಸ ಮಾಡಿಕೊಡುತ್ತಿದ್ದರು. ಕಾಂಗ್ರೆಸ್ ಆಫೀಸಿಗೆ ಹೋಗುತ್ತಿದ್ದರು. ಇಷ್ಟೆಲ್ಲ ಆದರೂ ಜನ ನನಗೆ ಮೋಸ ಮಾಡಿದರು ಎನ್ನುವ ಮಾತು ಅವರ ಬಾಯಲ್ಲಿ ಬರಲೇ ಇಲ್ಲ. ಇವತ್ತು ಅವರು ಇದ್ದಿದ್ದರೂ ಕೂಡ ಆ ಮಾತನ್ನು ಹೇಳುತ್ತಿರಲಿಲ್ಲ ಅವರು.

ಅವರ ಹೆಸರಿನಲ್ಲಿ ಒಂದು ಫೌಂಡೇಶನ್ ಸ್ಥಾಪಿಸಿದ್ದೀರಿ ಇದರ ಉದ್ದೇಶ ಏನು? ಏನು ಕನಸಿದೆ?

ನಮ್ಮ ಫೌಂಡೇಶನ್ ಮುಖ್ಯ ಉದ್ದೇಶ ಭರಣಯ್ಯನವರು ಯಾವ ದೀನ ದಲಿತರು, ಅಸಹಾಯಕರು ಇವರನ್ನು ಗುರಿಯಾಗಿಟ್ಟುಕೊಂಡು ಕೆಲಸ ಮಾಡಿದರೋ ನಾವೂ ಅವರ ಏಳಿಗೆಗೆ ಕೆಲಸ ಮಾಡುತ್ತೇವೆ. ಬಡವರು ಅಸಹಾಯಕರಿಗೆ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡುವುದು ನಮ್ಮ ಮೂಲ ಧ್ಯೇಯ. ನಮ್ಮ ಸ್ಲೋಗನ್ ಕೂಡ ಅದೇ. Providing hope to those who have none.

ಭರಣಯ್ಯನವರ ದಾನಧರ್ಮವನ್ನು ಫೌಂಡೇಶನ್ ಮೂಲಕ ಪೂರೈಸುತ್ತೀರಿ ಎಂದುಕೊಳ್ಳಬಹುದಾ?

ಅದೆಲ್ಲ ಅಲ್ಲ. That's not the idea behind this. ಇವತ್ತು ಜನರಲ್ಲಿ, ಸಮಾಜದಲ್ಲಿ ಬಹಳ ಸಮಸ್ಯೆ ಇದೆ. ಎಲ್ಲರೂ ಒಟ್ಟಾಗಿ ಸೇರಿ ಮಾಡಬೇಕಾದಂತಹ

ಕರ್ತವ್ಯವಾಗಿದೆ ಇದು. ನಮ್ಮಪ್ಪ ಮಾಡಿದ್ದನ್ನೇ ಆದಷ್ಟು ನಾವು ಮುಂದುವರಿಸುವ ಪ್ರಯತ್ನ ಮಾಡುತ್ತೀವಿ, ಅಂತಾ ಹೇಳಬಹುದು.

ತಂದೆಯವರ ಸಾಧನೆ, ಸಮಾಜಕ್ಕೆ ಅವರ ಕೊಡುಗೆ, ಸೇವೆ ಎಲ್ಲ ಸೇರಿಸಿ ಒಂದು ಗ್ರಂಥ ರಚನೆ ಮಾಡುತ್ತಿದ್ದೇವೆ. ಈ ಗ್ರಂಥ ಏನು ಗುರಿಯನ್ನು ಸಾಧಿಸಬೇಕು? ಈ ಗ್ರಂಥದಿಂದ ಜನ ಏನು ಪ್ರೇರೇಪಣೆ ಪಡೆಯಬೇಕು ಎಂಬುದು ನಿಮ್ಮ ಉದ್ದೇಶ?

ಮೊದಲನೆಯದಾಗಿ, ಇಲ್ಲಿಯವರೆಗೆ ಬಹಳ ಜನ ಆರ್. ಭರಣಯ್ಯನವರ ಬಗ್ಗೆ ಯಾವುದಾದರೂ ಪುಸ್ತಕ ಇದೆಯಾ ಎಂದು ಕೇಳಿಕೊಂಡು ಬಂದಿದ್ದಿದೆ. ಈಗ್ಗೆ 15–20 ವರ್ಷ ಮೊದಲೇ ಬಿಡುಗಡೆ ಆಗಬೇಕಿತ್ತು ಇದು. ನಾನೂ ಸ್ವಲ್ಪ ನನ್ನ ಬಗ್ಗೆ ಯೋಚನೆ ಮಾಡುತ್ತ ತಡ ಮಾಡಿದೆ. ಅಮೇರಿಕಕ್ಕೆ ಹೋದೆ. ಆಮೇಲೂ ಕೂಡ ತಂದೆಯವರ ಬಗ್ಗೆ ಈ ತರದ ಒಂದು ದಾಖಲೆ ಬಗ್ಗೆ ಬಹಳ ಡಿಮ್ಯಾಂಡ್ ಇತ್ತು. Irrespective of caste ಎಲ್ಲ ಜನರೂ ಬಂದು ಕೇಳುತ್ತಿದ್ದರು. ಆ ಬೇಡಿಕೆಯನ್ನು ಈಗ ನಾವು ಈಡೇರಿಸುತ್ತಿದ್ದೇವೆ.

ಎರಡನೆಯದು ಏನು ಸಾಧನೆ ಆಗುತ್ತೆ ಎಂದರೆ ನಮ್ಮ ಸಮಾಜದಲ್ಲಿ ಇವತ್ತಿಗೂ ಒಳ್ಳೆತನಕ್ಕೆ ಬೆಲೆ ಇದ್ದೇ ಇದೆ. ಅದೇ ಸಮಯಕ್ಕೆ ಈ ಜಾಗತೀಕರಣ, ಆಧುನಿಕರಣ ಇತ್ಯಾದಿಗಳಿಂದ ಸಾಮಾಜ, ಆರ್ಥಿಕ ಪರಿಸ್ಥಿತಿ ಬದಲಾಗುತ್ತಿದೆ. ಸಾಂಸ್ಕೃತಿಕ ಮೌಲ್ಯಗಳು, ಕೌಟುಂಬಿಕ ಮೌಲ್ಯಗಳು ಕಾಣೆಯಾಗುತ್ತಿವೆ. ಹಿರಿಯರನ್ನು ಗೌರವಿಸುವ ಪದ್ಧತಿ ಯುವ ಪೀಳಿಗೆಯಲ್ಲಿ ಮರೆಯಾಗುತ್ತಿದೆ. ಇವೆಲ್ಲ ಇಂದಿನ ಪೀಳಿಗೆಗೆ ತಿಳಿಯಬೇಕಿದೆ. ಈ ಸಂದರ್ಭದಲ್ಲಿ ಈ ಪುಸ್ತಕ ಬಂದರೆ ಇದು ಕೆಲವರ ಮೇಲಾದರೂ ಪ್ರಭಾವ ಬೀರುತ್ತೆ ಎನ್ನುವ ವಿಶ್ವಾಸ ನನಗಿದೆ. ಪುಸ್ತಕ ಓದಿದವರೆಲ್ಲ ಬದಲಾಗಿಬಿಡುತ್ತಾರೆ ಅಂತ ನಾನು ಹೇಳುವುದಿಲ್ಲ. ನೂರು ಜನರಲ್ಲಿ ಒಬ್ಬ ಬದಲಾಗಲಿ ಸಾಕು. ಆ ಒಬ್ಬ ವ್ಯಕ್ತಿಯೇ ಮುಂದೆ ದೊಡ್ಡ ಆಫೀಸರ್ ಆಗಬಹುದು, ಮುಖ್ಯಮಂತ್ರಿ ಆಗಬಹುದು, ಪ್ರಧಾನಿಯೇ ಆಗಬಹುದು ಬಲ್ಲವರು ಯಾರು? ಹಾಗೆ ಆದಾಗ ಇದರ ಇಂಪ್ಯಾಕ್ಟ್ ಅವರ ಮೇಲೆ ಇದ್ದೇ ಇರುತ್ತದೆ. ಆಗ ಅಟೋಮ್ಯಾಟಿಕಲಿ ಸಮಾಜಕ್ಕೆ ಆತ ಒಳ್ಳೆಯದು ಮಾಡೇ ಮಾಡುತ್ತಾನೆ. ಪುಸ್ತಕ ಓದಿ ಜನ ಇಂಪ್ಯಾಕ್ಟ್ ಆದಂತಹ ಉದಾಹರಣೆಗಳು ನಮ್ಮಮುಂದೆ ಸಾಕಷ್ಟಿವೆ. ಅಲ್ಲವೆ?

ಈಗ ನಾವು ಸಂಗ್ರಹಿಸಿ ಸಿದ್ದಪಡಿಸುತ್ತಿರುವ ಪುಸ್ತಕದ ಬಗ್ಗೆ ಹೇಳಿ.

See ಭರಣಯ್ಯವನರಿಗೆ ಬರೀ ಒಳ್ಳೆಯದು ಮಾಡುವುದಷ್ಟೇ ಗೊತ್ತಿತ್ತು. ಎಲ್ಲರಿಗೂ ಒಳ್ಳೆಯದು ಮಾಡಿದ್ದಾರೆ. ಇವತ್ತಿನ ದಿನ ಜನರು ಅವರನ್ನು ದೇವರು

ಅಂತ ಕರೆಯಬಹುದು, ಏನೇನೋ ಅವರ ಮಾತಿನಲ್ಲಿ ಭರಣಯ್ಯನವರನ್ನು ಗೌರವಿಸಿದ್ದಾರೆ, ಒಂದು ಸ್ಥಾನದಲ್ಲಿ ಕೂರಿಸಿದ್ದಾರೆ. ಅವರ ಅಭಿಪ್ರಾಯವನ್ನು ಭರಣಯ್ಯನವರ ಬಗ್ಗೆ ಇದ್ದಂತಹ ಗೌರವ ಇದನ್ನೆಲ್ಲ ನೀವು ಮತ್ತು ನಿಮ್ಮ ತಂಡದವರು ಸಂಗ್ರಹಿಸಿದ್ದೀರಿ. ನಿಮ್ಮ ತಂಡ ಉತ್ತಮ ಕೆಲಸಮಾಡಿದ್ದೀರಿ. ಜನ ಇದನ್ನು ಮೆಚ್ಚುತ್ತಾರೆ ಎಂದು ನಂಬಿದ್ದೀನಿ.

ಎಲ್ಲ ಮಹಾನ್ ವ್ಯಕ್ತಿಗಳೂ ಕೂಡ ನುಡಿದಂತೆ ಅವರವರ ಕಾಲದಲ್ಲಿ ನಡೆದು ಜೀವಿಸುತ್ತ, ಜನರಿಗೆ ಒಳ್ಳೆಯದು ಮಾಡುತ್ತ ಹೋದರು. ನಂತರ ಅವರ ನಡೆಗಳೇ ಅವರ ಫೀಲಾಸಫಿಯ ರೂಪ ಪಡೆದುಕೊಂಡು ಇಂದಿನ ಪೀಳಿಗೆಯವರೆಗೂ ಮುಂದುವರಿದುಕೊಂಡು ಬಂದಿವೆ. So like any other great man he has done his job, it will continue to remain ಅಂತ ನಾನು ಭಾವಿಸುತ್ತೀನಿ. ಈ ಪುಸ್ತಕ ಬಂದು 15–20 ವರ್ಷ ಆದಮೇಲೆ it's for them to analyze ಅಷ್ಟೆ.

ತಂದೆಯವರ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದೆಂದರೆ ಅಂಬೇಡ್ಕರ್ ಬಿಟ್ಟುಹೋದ ಕನಸುಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಮುಂದುವರೆಸಿದರು ಅಂತ. ಅಂಬೇಡ್ಕರ್‌ರವರು ಇಡೀ ರಾಷ್ಟ್ರಕ್ಕೆ ದಿಕ್ಕಾಗಿದ್ದರೆ ಇವರು ಕರ್ನಾಟಕದ ಅಂಬೇಡ್ಕರ್ ಅಂತ ಹೇಳಿದ್ದಾರೆ. ಹೇಗೆ ಅರ್ಥೈಸುತ್ತೀರಿ ಇದನ್ನು?

ಡಾ.ಬಿ.ಆರ್. ಅಂಬೇಡ್ಕರ್ ಅವರು ಸಮಾಜವನ್ನು ಬಹಳ...ಬಹಳ ವಿಸ್ತಾರವಾಗಿ ನೋಡಿ ಅರ್ಥಮಾಡಿಕೊಂಡಿದ್ದರು. ಆ ಒಂದು ವಿಸ್ತಾರದಲ್ಲಿ ಆ ಒಂದು ಬೃಹತ್ ಚಿತ್ರಣದಲ್ಲಿ from a cosmos point, from a universe point of view ಅರ್ಥಮಾಡಿಕೊಂಡಿದ್ದರು. ಅರ್ಥಮಾಡಿಕೊಂಡು ಆ ಒಂದು ಕಾಸ್ಮೋಸ್‌ನಲ್ಲಿ, ಯುನಿವರ್ಸ್‌ನಲ್ಲಿ ದಲಿತರು ಅಸ್ಪೃಶ್ಯತೆ ಅದನ್ನೆಲ್ಲ ಅರ್ಥಮಾಡಿಕೊಂಡಿದ್ದರು. ಪ್ರಪಂಚದ ವಿವಿಧ ದೇಶಗಳಲ್ಲಿ ಈ ರೀತಿಯ ಪರಿಸ್ಥಿತಿ ಯಾರ್‍ಯಾರಿಗೆ ಹೇಗೆ ಹೇಗೆ ಇದೆ ಎನ್ನುವುದನ್ನು ಅರ್ಥಮಾಡಿಕೊಂಡಿದ್ದರು. ಈ ಥರದ ಪರಿಸ್ಥಿತಿ ಇದ್ದಾಗ ಆ ಒಂದು ಸಮಾಜ ಏನು ಮಾಡಿದೆ, ಹೇಗೆ ಮಾಡಿದೆ ಅದರ ಆಗುಹೋಗುಗಳೇನು ಎನ್ನುವುದನ್ನೆಲ್ಲ ಅರ್ಥಮಾಡಿಕೊಂಡಿದ್ದರು. ಅಷ್ಟೇ ಇಲ್ಲ ಇದು ಸಮಾಜಕ್ಕೆ ಹೇಗೆ ಕಳಂಕ, ಆರ್ಥಿಕವಾಗಿ ಏನು ತೊಂದರೆ, ರಾಜಕೀಯವಾಗಿ, ಸಾಮಾಜಿಕವಾಗಿ ಏನು ತೊಂದರೆ ಎಂಬುದನ್ನೆಲ್ಲ ವಿಶ್ಲೇಷಿಸಿದ್ದರು. ಈ ಎಲ್ಲ ದೃಷ್ಟಿಕೋನಗಳಿಂದ ಆಲೋಚಿಸಿ, ಇದು ಸಮಾಜಕ್ಕೆ ಹೇಗೆ ಒಂದು ಪಿಡುಗಾಗಿ ಪರಿಣಮಿಸುತ್ತದೆ, ಈ ನೆಗೆಟಿವ್ ಫೋರ್ಸ್‌ಅನ್ನು ಪಾಸಿಟಿವ್ ಫೋರ್ಸ್ ಆಗಿ ಹೇಗೆ ಪರಿವರ್ತಿಸಬೇಕು ಎಂಬುದನ್ನೆಲ್ಲ ಯೋಚಿಸಿ ಒಂದು ಸ್ಟ್ರಾಟಜಿ ಮಾಡಿದರು.ಅಂತಹ ಮಹಾನ್ ವ್ಯಕ್ತಿ ಅಂಬೇಡ್ಕರ್.

ಅವರನ್ನು ಕೇವಲ ಒಬ್ಬ ದಲಿತ ನಾಯಕ ಎನ್ನುವ ದೃಷ್ಟಿಯಿಂದ ನೋಡಬಾರದು ಇವತ್ತು. He is a highly erudite man. ಜಾತಿ, ಮತ, ಪಂಥಗಳನ್ನೆಲ್ಲ ಮೀರಿ ಬೆಳೆದವರು ಅವರು. ಅವರ ಚಿಂತನೆಗಳನ್ನು ಬಹಳ ಆಳವಾಗಿ ಅರ್ಥಮಾಡಿಕೊಳ್ಳುವ ಕಾಲ ಬಂದಿದೆ ಈಗ. ಅವರು ಸಂಘಟಿತರಾಗಿ, ವಿದ್ಯಾವಂತರಾಗಿ ಅಂತ ಹೇಳಿದ್ದು ಬರೀ ದಲಿತರೊಬ್ಬರಿಗೇ ಅಲ್ಲ. He has never said this is only for Dalits. He has said irrespective of caste that you have to educate yourself, you have to organize. ಅಂತ ಹೇಳಿದ್ರು. His 'mantra' of Educate, Organize, Agitate has overarching. My assumption is a well founded education is capable of organizing one self. By organizing one self one can improve his position in society. By improving one's position in the society the dream of Dr. B.R. Ambedkar is realised. So, basicaly one has to agitate against the statusquo or the prevailing maladies or disesases of the society.

ಹೀಗೆ ಭರಣಯ್ಯನವರು ಅಂಬೇಡ್ಕರ್ ಅವರ ಈ ಚಿಂತನೆಯನ್ನು ಅರ್ಥಮಾಡಿ–ಕೊಂಡಿದ್ದರು. ಹಾಗಾಗಿ ಇಲ್ಲಿನ ಸಮಾಜದ ಒಂದು ಬೃಹತ್ ಚಿತ್ರಣ ಸಿಕ್ಕಿತ್ತು ಅವರಿಗೆ. ನಿಮ್ಮ ಮನೆಯಲ್ಲಿ ಏನಾದರೂ ತೊಂದರೆ ಆದರೆ ಹೇಗೆ ಎಲ್ಲರೂ ಅದನ್ನು ಸರಿಪಡಿಸಲು ಪ್ರಯತ್ನಿಸುತ್ತೀರೋ ಹಾಗೆ ಈ ಸಮಾಜದ ತೊಂದರೆ, ಕಷ್ಟಗಳಿಗೆ ಅವರು irrespective of caste ಸ್ಪಂದಿಸಿದರು. ಸಮಸ್ಯೆ ಪರಿಹಾರಕ್ಕೆ ತಮ್ಮ ಕೈಲಾದ ಸಹಾಯ, ಸಹಕಾರ ಕೊಟ್ಟರು. He is not a casteist. He has never been a casteist. He has always looked at the society, at the community, as a whole. ಇವತ್ತು ಎಲ್ಲ ಜಾತಿ ಜನಾಂಗದಲ್ಲೂ ಅವರದೇ ಆದ ಸಮಸ್ಯೆ, ತೊಡಕು ಇವೆ.

ಅಂಬೇಡ್ಕರ್ ಅವರ ಪ್ರಭಾವ ತಂದೆಯವರ ಮೇಲೆ ಇತ್ತಾ? ಅವರ ಯಾವ ಕಾಳಜಿ, ಕಳಕಳಿ ತಂದೆಯವರ ಮೇಲೆ ಪ್ರಭಾವ ಬೀರಿತ್ತು ಅಂತ ನೀವು ಗುರುತಿಸುತ್ತೀರಿ?

ಖಂಡಿತ ಇತ್ತು. ನೀವು ಚೆನ್ನಾಗಿ ಓದಿ ಮುಂದೆಬರುತ್ತೀರ ಅಂತ ಬರೀ ದಲಿತರಿಗೆ ಮಾತ್ರ ಹೇಳುತ್ತಿರಲಿಲ್ಲ irrespective of caste ಎಲ್ಲರಿಗೂ ಹೇಳುತ್ತಿದ್ದರು. ನೀವು ವಿದ್ಯಾವಂತರಾದರೆ ನಿಮ್ಮಲ್ಲಿ ಶಿಸ್ತು ಮೆಥಡಾಲಜಿ ಎಲ್ಲ ತಂತಾನೇ ಬರುತ್ತದೆ. ಇದನ್ನು

ತಂದೆಯವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಈ ಅಸ್ಪೃಶ್ಯತೆ, ಜಾತೀಯತೆ ಎಲ್ಲ ನಮ್ಮ ಸಮಾಜದಲ್ಲಿ ತಲತಲಾಂತರಗಳಿಂದ ಇದೆ. ಇದನ್ನು 50–70 ವರ್ಷದಲ್ಲಿ ಪೂರ್ತಿ ತೊಡೆದುಹಾಕಿ ಕ್ರಾಂತಿ ಮಾಡಿಬಿಡುತ್ತೀನಿ, ದಲಿತರೆಲ್ಲ ಸಮಾನ ಮಟ್ಟಕ್ಕೆ ಬಂದುಬಿಡುತ್ತಾರೆ ಅಂತೆಲ್ಲ ಹೇಳುವುದಕ್ಕೆ ಆಗುವುದಿಲ್ಲ. ಹಾಗಂತ ತಿಳಿದರೆ ನಾವು ದಡ್ಡರಾಗುತ್ತೀವಿ. ಇದು ಅಂಬೇಡ್ಕರ್ ಮತ್ತು ಭರಣಯ್ಯ ಅವರಿಗೆಲ್ಲ ಗೊತ್ತಿತ್ತು. ಇವತ್ತು ಇದನ್ನು ನಾನು ಕೂಡ ಸ್ವಲ್ಪ ಅರ್ಥಮಾಡಿಕೊಂಡಿದ್ದೀನಿ ಅಂತಹ ಮಹಾನ್ ವ್ಯಕ್ತಿಗಳಿಗೆ ಆ ವಿಷಯ ಗೊತ್ತಿರದೆ ಇತ್ತಾ? ಅದು ಗೊತ್ತಿದ್ದಿದ್ದರಿಂದಾನೇ ಹಂತಹಂತವಾಗಿ ಬದಲಾವಣೆ ತರುವ ಪ್ರಯತ್ನ ಮಾಡಿದರು ಅವರು. ಕ್ರಮೇಣವಾಗಿ ಮತ್ತು ನಿರಂತರವಾಗಿ ಆಗಬೇಕಾದ ಪ್ರಯತ್ನ ಅದು.

So ಅಂಬೇಡ್ಕರ್ ಅವರು ಇಡೀ ಮಾನವ ಕುಲಕ್ಕೇ ಸೇವೆ ಮಾಡಿದರು ಅದೇ ಕಾಳಜಿಯಿಂದ ಇವರು ತಮ್ಮ ಸುತ್ತಲಿನವರಿಗೆ ಸೇವೆ ಮಾಡಿದರು ಅಂತ ನಿಮಗೆ ತೃಪ್ತಿ ಇದೆಯಾ?

ಹೌದು. That's how it happened. I have seen many agitations in my career they agitate without any rhyme or reason. ಏನೋ ಬಾಯಿದೆ ಅಂತ ಮಾತನಾಡುವವರೆಲ್ಲ ಲೀಡರ್ ಆಗಲಿಕ್ಕೆ ಸಾಧ್ಯವಿಲ್ಲ. ಬರೀ ಭಾಷಣ ಮಾಡಿದವರೆಲ್ಲ ನಾಯಕರಾಗುವುದಿಲ್ಲ. ಸೈಕಾಲಜಿ, ಇತಿಹಾಸ, ಅರ್ಥಶಾಸ್ತ್ರ, ಸಾಮಾಜಿಕ ಸ್ಥಿತಿಗತಿ ಎಲ್ಲ ಗೊತ್ತಿರಬೇಕು ನಾಯಕ ಎನಿಸಿಕೊಳ್ಳಬೇಕಾದರೆ.

ಭರಣಯ್ಯನವರಿಗೆ ತಾವು ಬಂದಂತಹ ಜನಾಂಗದ ಸೈಕಾಲಜಿ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ ತುಂಬ ಚೆನ್ನಾಗಿ ಅರ್ಥ ಆಗಿದ್ದರಿಂದಲೇ ಅವರು ತಮ್ಮ ಅಧಿಕಾರವ್ಯಾಪ್ತಿಯಲ್ಲಿ ಉದ್ಯೋಗ ಕ್ರಾಂತಿ ಮಾಡಿದರಾ?

ಬರೀ ಅವರ ಜನಾಂಗವನ್ನು ಒಂದೆ ಅರ್ಥ ಮಾಡಿಕೊಳ್ಳಲಿಲ್ಲ ಅವರು. ಅವರದೇ ಆದ ರೀತಿಯಲ್ಲಿ ಎಲ್ಲ ಜಾತಿ, ಜನಾಂಗಗಳ ಸ್ಥಿತಿಯನ್ನು ಅರ್ಥಮಾಡಿಕೊಂಡರು. ಇವತ್ತಿನವರೆಗೂ ಯಾವುದೇ ಡಿಪಾರ್ಟ್‌ಮೆಂಟಿನಲ್ಲಿ ನಿಮಗೆ ಬ್ಯಾಕ್‌ಲಾಗ್ ಪೋಸ್ಟ್‌ನಲ್ಲಿ ಟಾಪ್ ಲೆವೆಲ್ ಪೋಸ್ಟ್ ನಿರ್ಮಾಣವಾಗುತ್ತಿದೆ. ಯಾಕೆ ನಿರ್ಮಾಣವಾಗುತ್ತಿದೆ? ಇದು ಎಂದಿನಿಂದಲೋ ನಡೆದುಕೊಂಡುಬಂದ ಬೆಳವಣಿಗೆ

ಈ ಹಂತ ತಲುಪಿದೆ. ಹಾಗೇ ಎಲ್ಲ ದಲಿತರೂ ಒಂದೇ ಸಲ ಐ.ಎ.ಎಸ್. ಆಫೀಸರ್ ಆಗಿಬಿಡುತ್ತೀವಿ ಅಂದರೆ ಆಗುವುದಿಲ್ಲ. ಸ್ಟೆಪ್ ಬೈ ಸ್ಟೆಪ್ ಆಗಬೇಕು ಅದು. ಎಲ್ಲೋ ಮಿರಾಕ್ಯಲರ್ ಆಗಿ ಅದು ಆಗಿರಬಹುದು ಅಷ್ಟೆ. ಎಲ್ಲೋ ಒಬ್ಬರು ಅಂಬೇಡ್ಕರ್, ಒಬ್ಬ ಭರಣಯ್ಯ ಆ ಮಟ್ಟದಲ್ಲಿ ಶೋಭಿಸಿದರು ಎಂದರೆ ಎಲ್ಲರಿಂದಲೂ ಸಾಧ್ಯ ಇಲ್ಲ ಅದು. ಭರಣಯ್ಯನವರ ಕೆಪಾಸಿಟಿಯಲ್ಲಿ ಒಂದು ಭಾಗ ನನಗಿದೆ ಎಂದು ಹೇಳುವ ಶಕ್ತಿ ನನಗೇ ಇಲ್ಲ!

ತಂದೆಯವರು ಬಹಳ ಮಾದರಿಯಾದ, ಸಮತೋಲನವಾದ ಆಡಳಿತವನ್ನು ಅವರ ಕಾಲದಲ್ಲಿ ಕೊಟ್ಟರು ಅಂತ ಬಹಳ ಜನ ಹೇಳಿದ್ದಾರೆ. ತಂದೆಯವರ ಆ ಆದರ್ಶವನ್ನು ಮುಂದಿಟ್ಟುಕೊಂಡರೆ ಇವತ್ತಿನ ದಲಿತ ಅಧಿಕಾರಿಗಳ ಬಗ್ಗೆ ತೃಪ್ತಿ ಇದೆಯಾ? ಇಲ್ಲ ಎಂದರೆ ಯಾಕೆ? ಭರಣಯ್ಯನವರ ಕೈಲಿ ಆಗಿದ್ದು ಇವರ ಕೈಲಿ ಯಾಕೆ ಆಗುತ್ತಿಲ್ಲ?

ನೋಡಿ, ದಲಿತ ಅಧಿಕಾರಿಯಾದ ಅಂದಕೂಡಲೇ ಆತ ಸೂಪರ್ ಹ್ಯೂಮನ್ ಅಂತೇನೂ ಅಲ್ಲ. ನೀವು ಅಂಬೇಡ್ಕರ್ ಮತ್ತು ಭರಣಯ್ಯನವರಿಗೆ ಹೋಲಿಸಿಕೊಳ್ಳುವುದಕ್ಕೆ ಹೋಗಬೇಡಿ. What I am saying is exceptions are not the rule. These persons are all exceptions. They are all unique people. ಅಂತವರು ಲಕ್ಷಕ್ಕೊಬ್ಬರು, ಕೋಟಿಗೊಬ್ಬರು ಹುಟ್ಟಿಕೊಳ್ಳುತ್ತಾರೆ. Don't club them together with common people. ಕೆಲವು ಅಧಿಕಾರಿಗಳು ಏನಾದರೂ ಮಾಡಬೇಕು ನಮ್ಮ ವ್ಯಾಪ್ತಿಯಲ್ಲಿ ಅಂತ ಮನಸ್ಸಿಟ್ಟುಕೊಂಡು ಕೆಲವರಿಗೆ ಸಾಧ್ಯವಿದೆ. ಅವರಿಗೆ ಕಾಳಜಿ ಇಲ್ಲವೋ, ಕಾಳಜಿ ಇದ್ದು ಹೇಗೆ ಮಾಡಬೇಕು ಅಂತ ಗೊತ್ತಿಲ್ಲವೋ ಇದನ್ನು ನಾನು ಹೇಳುವುದಕ್ಕಾಗಲ್ಲ. ಅಥವಾ ಅವರ ಪ್ರಯಾರಿಟಿ ಬೇರೆಯೇ ಇರಬಹುದೇನೋ ಗೊತ್ತಿಲ್ಲ.

Why you are angry with dalit bureaucrats?

See, ಅವರು ದಲಿತ ಅಧಿಕಾರಿ ಅಂತ ಅಲ್ಲ, ಯಾರೇ ಅಧಿಕಾರಿ ಆಗಿರಲಿ ತಮ್ಮತಮ್ಮ ವ್ಯಾಪ್ತಿಯಲ್ಲಿ ಜನರಿಗೆ ಒಳ್ಳೆಯದು ಮಾಡಿದರೆ ಇಡೀ ರಾಜ್ಯಕ್ಕೇ ಒಳ್ಳೆದಾಗುತ್ತೆ. ಅಂತಹ ಅಧಿಕಾರಿಗಳು ಸಾವಿರಾರು ಜನ ಇಲ್ಲವಾ ನಮ್ಮಲ್ಲಿ. ಒಬ್ಬ ಗ್ರಾಮ ಲೆಕ್ಕಿಗ ಅವನ ವ್ಯಾಪ್ತಿಯ ಹಳ್ಳಿಯಲ್ಲಿ ಒಳ್ಳೇದು ಮಾಡುತ್ತ ಬರಲಿ. ಅಂತಹ ಸಾವಿರಾರು ಗ್ರಾಮ ಲೆಕ್ಕಿಗರು ನಮ್ಮ ರಾಜ್ಯದಲ್ಲಿದ್ದಾರೆ. ಆಗ ಇಡೀ ರಾಜ್ಯದ ಹಳ್ಳಿಗಳೆಲ್ಲ

ಅಭಿವೃದ್ಧಿಯಾಗುತ್ತವೆ. ನಾನು ತಿಳಿದುಕೊಂಡ ಹಾಗೆ ಕೆಲ ದಲಿತ ಅಧಿಕಾರಿಗಳು some kind of inefficiency, some kind of backwardness, some kind of stigma, inhibition ಮುಂತಾದ ಹಿನ್ನೆಲೆಯಿಂದ ಬಂದಿರುತ್ತಾರೆ. ಅದನ್ನು ಆಚೆ ಹಾಕಲಿಕ್ಕೆ he strived all his years ಅನ್ನುತ್ತೆ.

ಅವರು ಹೋರಟು ಹೋದ ಆ ದಿನದ ನೆನಪು...

ಬೆಳಿಗ್ಗೆ 7–30ರ ಹೊತ್ತಿಗೆಲ್ಲ ಅವರು ಸತ್ತ ಸುದ್ದಿ ಹೆಚ್ಚಿನವರಿಗೆ ಗೊತ್ತಾಗಿತ್ತು. 10 ಗಂಟೆ ಹೊತ್ತಿಗೆ ವಿಪರೀತ ಜನ ನೋಡೋಕೆ ಬರಲು ಶುರು ಮಾಡಿದರು. ಎಲ್ಲರೂ ಅಳುತ್ತಿದ್ದರು. ಎಲ್ಲರ ಮುಖದಲ್ಲೂ ವಿಪರೀತ ಶೋಕ ಇತ್ತು. They were literally crying. They were shocked. They were in complete disbelief. ಇವತ್ತಿಗೂ ನಾನು ಆ ದೃಶ್ಯವನ್ನು ಮರೆತಿಲ್ಲ. ಆದರೆ ನನಗೆ ಆ ವಯಸ್ಸಿನಲ್ಲಿ ಇದೆಲ್ಲ ಸರಿಯಾಗಿ ಅರ್ಥ ಆಗುತ್ತಿರಲಿಲ್ಲ. ಕೆಲವು ಜನ ಎಲ್ಲ ನೀವು ಸೋಮನಾಥಪುರಕ್ಕೇ ತಂದು ಮಣ್ಣು ಮಾಡಬೇಕು. ಅವರು ಸೋಮನಾಥಪುರದವರು ಅಂತೆಲ್ಲ ಅಂದರು. ನಮ್ಮ ಅಮ್ಮ ಆ ಬಗ್ಗೆ ಖಚಿತ ನಿರ್ಧಾರ ತಳೆದು ಇಲ್ಲ, ಇಲ್ಲೇ ಮಾಡೋಣ ಅಂತ ಹೇಳಿದರು. ಹೀಗಾಗಿ ಇಲ್ಲೇ ಅವರ ಅಂತ್ಯಕ್ರಿಯೆ ಆಯ್ತು.

ಅವರು ಹೋಗಿ 36 ವರ್ಷದ ಮೇಲಾಯಿತು. ಈಗ ಕೂತು ಯೋಚಿಸುವಾಗ ಏನು ಫೀಲಾಗುತ್ತೆ?


This is very broad question. ಅವರು ಈಗ ಇದ್ದಿದ್ದರೆ ಕತೆ ಬೇರೆಯೇ ಇತ್ತು. ಎಲೆಕ್ಷನ್ ಗೆದ್ದು ಏನೇನೋ ಮಾಡುತ್ತಿದ್ದರು. It would have been fantastic. ಖಂಡಿತ. ಅವರು 24 ಗಂಟೆಯೂ ಕೆಲಸ ಮಾಡುತ್ತಿದ್ದರು. ಆಡಳಿತದ ಪೂರ್ತಿ ಜ್ಞಾನ ಇತ್ತು. ರಾಜಕೀಯ ಅಧಿಕಾರವೂ ಸಿಕ್ಕಿಬಿಟ್ಟಿದ್ದರೆ ಖಂಡಿತ ಜನರಿಗೆ ಏನೇನೋ ಸಹಾಯ ಮಾಡಿರುತ್ತಿದ್ದರು.

ಇವರು ವೇರ್‌ಹೌಸ್ ಕಾರ್ಪೋರೇಷನ್ ಸೇರಿದಾಗ ಕೆಲವೇ ಉಗ್ರಾಣಗಳಿದ್ದವು ಇಡೀ ರಾಜ್ಯಕ್ಕೆ. ಮುಂದಿನ ಎರಡೇ ವರ್ಷದಲ್ಲಿ ಇಡೀ ರಾಜ್ಯದಾದ್ಯಂತ ವೇರ್‌ಹೌಸ್‌ಗಳನ್ನು ಕಟ್ಟಿದರು. ಕೋ.ಆಪರೆಟಿವ್ ರಿಜಿಸ್ಟ್ರಾರ್ ಆದಾಗ ಬರೀ 100ರ ಸಂಖ್ಯೆಯಲ್ಲಿ ಉದ್ಯೋಗಿಗಳಿದ್ದರು ಅಲ್ಲಿ. ಮುಂದಿನ ವರ್ಷದಷ್ಟರಲ್ಲೇ ಸಾವಿರಾರು ಜನರಿಗೆ ಕೆಲಸ ಕೊಟ್ಟರು. ನೂರಾರು ಜನರನ್ನು ಹೈ ಪೋಸ್ಟಿಂಗ್‌ನಲ್ಲಿ ಕೂರಿಸಿದರು.

ಹೀಗೆ ಹೋದ ಎಲ್ಲ ಇಲಾಖೆಗಳಲ್ಲೂ ಜನರನ್ನು ಕರೆದು ಕೆಲಸ ಕೊಟ್ಟರು. ಇದರಿಂದ ಆ ಕುಟುಂಬಗಳಿಗೆ ಜೀವನಾಧಾರ ಆಯಿತು. ಹೀಗೆ ಆರ್ಥಿಕ ಬಲ ಬಂದಾಗ ವ್ಯಕ್ತಿ ಏನು ಮಾಡುತ್ತಾನೆ ಅಂದರೆ ತನ್ನ ಮನೆ, ಮಕ್ಕಳು, ಭವಿಷ್ಯ, ಸಮಾಜ ಅಂತೆಲ್ಲ ಚಿಂತನೆಗೆ ತೊಡಗುತ್ತಾನೆ ಆಗ ಆಟೋಮೆಟಿಕಲಿ ಸಮಾಜ ಪ್ರಗತಿಯತ್ತ ಚಲಿಸುವುದಕ್ಕೆ, ಬದಲಾವಣೆ ಬರುವುದಕ್ಕೆ ಅವಕಾಶ ಆಗುತ್ತದೆ.

ವೈಯಕ್ತಿಕವಾಗಿ ನಾನು ಏನು ಹೇಳುವುದು ಅಂದರೆ ನಮ್ಮ ದಲಿತರು ಬಹಳಷ್ಟು ಜನ ದೊಡ್ಡ ತಪ್ಪು ಮಾಡುತ್ತಿದ್ದಾರೆ. ಏನಂದರೆ in todays world they should not go for accumulation. ಕಲೆ, ಸಾಹಿತ್ಯ,, ನಾಟಕ, ಸಂಸ್ಕೃತಿ, ಸಂಗೀತ, ಬರವಣಿಗೆ ಎಲ್ಲರದರಲ್ಲಿಯು ತೊಡಗಿಸಿಕೊಳ್ಳಬೇಕು ಅವರು. ಹೀಗೆ ಮಾಡಿದಾಗ ನಮಗೆ stuff ಸಿಗುತ್ತೆ. ನಮ್ಮಲ್ಲಿ ಜ್ಞಾನ ಸಂಗ್ರಹಣೆ, ವಿಷಯ ಸಂಗ್ರಹಣೆ ಆಗುತ್ತಿದ್ದಾಗ ಆತ್ಮವಿಶ್ವಾಸ ಬರುತ್ತೆ ನಮಗೆ. ಈ ಸ್ಟಫ್ ಬಹಳ ಪವರ್‌ಫುಲ್ ಆದದ್ದು. ಇದು ಇದ್ದರೆ ಉಳಿದದ್ದೆಲ್ಲ ನಿಮಗೆ ತಂತಾನೇ ಬರುತ್ತದೆ. ಎಲ್ಲ ತಿಳಿದುಕೊಂಡು ಒಳಗಿಟ್ಟುಕೊಂಡರೆ ಅಗತ್ಯ ಬಿದ್ದಾಗ ಬಳಸಿ ನಮ್ಮ ಅಭಿವೃದ್ಧಿ ಮಾಡಿಕೊಳ್ಳಬಹುದು. ಇದನ್ನು ಅರ್ಥಮಾಡಿಕೊಳ್ಳದೆ ಹೋದರೆ ಭವಿಷ್ಯದಲ್ಲಿ ನಾವು ಒಳ್ಳೆಯ ಅವಕಾಶಗಳಿಂದ ವಂಚಿತರಾಗಿಬಿಡುತ್ತೇವೆ. ಹೀಗಾಗಿ ನಾವು ಬಹಳಷ್ಟು ವಿಷಯಗಳಿಗೆ ಮುಕ್ತವಾಗಿ ತೆರದುಕೊಳ್ಳಬೇಕಾಗುತ್ತದೆ.

* * *



ಬುದ್ಧ-ಬಸವ-ಅಂಬೇಡ್ಕರ್ ಚಿಂತನೆಗಳ ನೇಕಾರ

ಹೂವಯ್ಯ ಮೂರ್ತಿ

ಅವರು ಚುನಾವಣೆಗೆ ನಿಂತವರು ಪ್ರಚಾರಕ್ಕೆ ಬಂದರು. ಮತ ಕೇಳುವ ಬದಲು ದಲಿತ ಸಂಘಟನೆ ಬಗ್ಗೆ ಮಾತಾಡತೊಡಗಿದರು. ನಮ್ಮ ಕಣ್ಣಲ್ಲಿ ಅವರು ಒಬ್ಬ ತತ್ತ್ವಜ್ಞಾನಿಯಂತೆ, ಇಲ್ಲವೇ ರಾಜಕೀಯ ತತ್ತ್ವಕಾರನಂತೆ, ಮತ್ತೊಮ್ಮೆ ಅಪೂರ್ವ ದಲಿತ ಸಂಘಟಕನಂತೆ ಕಾಣತೊಡಗಿದರು. ಅವರ ಮಾತು ಕೇಳುತ್ತಾ ನಾವು ಅವರಲ್ಲಿ ಒಬ್ಬ ಸಮಾಜ ಚಿಂತಕನ ಕಂಡೆವು. ಆ ಮಾತಿನ ಮೋಡಿಗೆ ಬಿದ್ದ ನಮ್ಮ ಜನ ಅವರಿಗೆ ಮತ ಕೊಡುವುದನ್ನು ಮರೆತರು. ಇದು ನಾವೇ ನಮ್ಮ ಜನಾಂಗಕ್ಕೆ ಮಾಡಿಕೊಂಡ ಅನ್ಯಾಯ. "ಒಬ್ಬ ಮನುಷ್ಯನಾಗಿ ನಾನು ಮಾನವ ಕುಲಕ್ಕೆ ಏನು ಮಾಡಿದೆ ಎನ್ನುವುದರ ಆತ್ಮವಿಮರ್ಶೆ ಪ್ರತಿಯೊಬ್ಬರಲ್ಲೂ ಬರಬೇಕು" ಎಂಬ ನುಡಿಯನ್ನು ಆ ಕಾಲಕ್ಕೆ ಈ ಸೀಮೆಯಲ್ಲಿ ಆಡಿ, ಅರಿವು ತಂದುಕೊಟ್ಟಿದ್ದ ಧೀಮಂತ.

ಪ್ರಗತಿಪರ ಚಿಂತಕರು
ಕೊಳ್ಳೇಗಾಲ



ಬುದ್ಧ-ಬಸವ-ಅಂಬೇಡ್ಕರ್ ಚಿಂತನೆಗಳ ನೇಕಾರ

ಹೂವಯ್ಯ ಮೂರ್ತಿ

ಪೀಠಿಕೆ: ಭರಣಯ್ಯನವರನ್ನು ಕುರಿತು ನಾವು ಭೇಟಿ ಮಾಡಿದ ಎಲ್ಲ ಮಹನೀಯರು ಅವರ ಜೀವನಗಾಥೆ, ಜನೋಪಯೋಗಿ ಗುಣಗಳನ್ನು ಕುರಿತು ಹೇಳಿ ಕೊನೆಯಲ್ಲಿ ಒಂದು ವಾಕ್ಯ ಸೇರಿಸುತ್ತಿದ್ದರು. "ಭರಣಯ್ಯ ಚುನಾವಣೆಗೆ

ನಿಂತು ಸೋತರು. ನಂತರ ಅದೇ ಕೊರಗಿನಲ್ಲಿ ಹಾಸಿಗೆ ಹಿಡಿದರು. ಮಾನಸಿಕವಾಗಿ ಜರ್ಝರಿತಗೊಂಡು ತೀರಿಕೊಂಡರು" ಎಂದು. ಅಂದರೆ ಚುನಾವಣೆ ಎನ್ನುವ ಮಾಯೆ ಭರಣಯ್ಯನವರನ್ನು ಅದೆಷ್ಟು ಬೇಗ ಇತಿಹಾಸದ ಪುಟ ಸೇರಿಸಿಬಿಟ್ಟಿತು? ನಿಜಕ್ಕೂ ಆಗಿನ ಕಾಲದ ಚುನಾವಣೆ ಹೇಗಿತ್ತು? ಕೊಳ್ಳೇಗಾಲದ ಜನಜೀವನ ಚಿತ್ರಣ ಹೇಗಿತ್ತು? ಪ್ರಚಾರ, ಸಂಘಟನೆ ಹೇಗಿತ್ತು? ಎಂಬ ಪ್ರಶ್ನೆಗಳ ಜಾಡುಹಿಡಿದು ಕೊಳ್ಳೇಗಾಲಕ್ಕೆ ಹೊರಟ ನಮಗೆ ಅಲ್ಲಿ ಸಿಕ್ಕಿದು ಶ್ರೀಯುತ ಹೂವಯ್ಯಮೂರ್ತಿ. ಇವರು ಜಿಲ್ಲಾ ಕಾಂಗ್ರೆಸ್ ಮುಖಂಡರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮನಃಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದು ಒಂದು ಕಾಲದಲ್ಲಿ ಉಪನ್ಯಾಸಕರಾಗಿದ್ದವರು. ನಂತರ ಕೆಲಸಕ್ಕೆ ರಾಜೀನಾಮೆ ನೀಡಿ ಸಕ್ರಿಯ ರಾಜಕಾರಣಕ್ಕೆ ಧುಮುಕಿದರು. ಭರಣಯ್ಯ ಚುನಾವಣೆಗೆ ನಿಂತಿದ್ದ ಸಮಯದಲ್ಲಿ ಇವರು ಬಿ.ಎ. ಓದುತ್ತಿದ್ದರು. ಹೀಗಾಗಿ ಅಂದಿನ ರಾಜಕೀಯ ಚಿತ್ರಣ ಇವರಿಗೆ ಸಂಪೂರ್ಣ ತಿಳಿದಿರುತ್ತದೆಂಬ ಆಶಯದಲ್ಲಿ ಪ್ರಶ್ನೆಗಳ ಪಟ್ಟಿಯೊಂದನ್ನು ತಯಾರಿಸಿಕೊಂಡಿದ್ದೆವು. ಆದರೆ ಅವರ ಮಾತು ಪ್ರಾರಂಭವಾದ ಕೂಡಲೆ ನಮ್ಮ ಪ್ರಶ್ನೆಗಳ ಪಟ್ಟಿ ಅಗತ್ಯವೇ ಬರಲಿಲ್ಲ. ನಾವು ಕೇಳಬೇಕೆಂದಿದ್ದ ವಿಚಾರಗಳನ್ನು ಅವರೇ ಎಳೆ ಎಳೆಯಾಗಿ ಬಿಡಿಸಿಡುತ್ತಾ ಹೋದರು. ಹೂವಯ್ಯ ಮೂರ್ತಿ ಅವರು ಆರ್. ಭರಣಯ್ಯನವರ ಬಗ್ಗೆ ಕೊಟ್ಟ ಸಮಗ್ರ ಚಿತ್ರಣ ಹೀಗಿತ್ತು.

"ಆಗ ನಮ್ಮ ಬೆಳವಣಿಗೆ ಹೇಗಿತ್ತೆಂದರೆ, ನಾಯಕರುಗಳ ಆದರ್ಶಗಳನ್ನು ನಂಬಿ ಕ್ರಾಂತಿ ಮಾಡಬೇಕೆಂಬ ಹುಮ್ಮಸ್ಸಿನಲ್ಲಿದ್ದ ಬಿಸಿರಕ್ತದ ಯುವಕರ ಗುಂಪು. ಮಾನಸಗಂಗೋತ್ರಿಯ ಗ್ರಂಥಾಲಯಗಳಲ್ಲಿ ಸೆಮಿನಾರ್‌ಗೆ ಹೋದಾಗ ಭರಣಯ್ಯನವರ ಬಗ್ಗೆ ತಿಳಿದುಕೊಂಡಿದ್ದೆವು. ಆದರೆ ಅವರನ್ನೆಂದು ನೋಡಿರಲಿಲ್ಲ. ಬಹುಶಃ ಅಲ್ಲಿಯವರೆಗೂ ನಮಗೆ ಭರಣಯ್ಯ ಯಾರೆಂದು ಗೊತ್ತಿರಲಿಲ್ಲ! ಗಂಗೋತ್ರಿಯಲ್ಲಿ ನಮ್ಮದೊಂದು ಒಳ್ಳೆಯ ಟೀಮ್ ಇತ್ತು. ಅದರ ಮೂಲಕ ನಾವುಗಳು ಬಹಳ ಹೋರಾಟ ಮಾಡುತ್ತಿದ್ದೆವು. ಬಡಹುಡುಗರಿಗೆ ಸಹಾಯ ಮಾಡುವುದು, ಅವರಿಗೆ ವಸತಿ ಸೌಕರ್ಯ ಕಲ್ಪಿಸುವುದು, ಇನ್ನೂ ಮುಂತಾದ ಚಟುವಟಿಕೆಗಳನ್ನು ಮಾಡುತ್ತಿದ್ದೆವು. ಕೊಳ್ಳೇಗಾಲದಲ್ಲೂ ಸಹ ನಮ್ಮ ಸ್ನೇಹಿತರ ತಂಡವೊಂದು ಹೀಗೆಯೇ ಕೆಲಸ ಮಾಡುತ್ತಿತ್ತು. ನಾನು ಮೊಟ್ಟಮೊದಲು ಭರಣಯ್ಯನವರನ್ನು ನೋಡಿದ್ದು ಚುನಾವಣಾ ಸಮಯದಲ್ಲಿ. ಆಗ ನಾನು ಅಂಬೇಡ್ಕರ್ ಸಂಘಟನೆಯ ಕಾರ್ಯದರ್ಶಿಯಾಗಿದ್ದೆ".

"ಭರಣಯ್ಯನವರು ಚುನಾವಣೆಗೆ ಸ್ಪರ್ಧಿಸಿದ್ದಾಗ ಪ್ರಚಾರಕ್ಕೆಂದು ಕೊಳ್ಳೇಗಾಲಕ್ಕೆ ಬಂದರು. ಬಂದವರು "ಅಂಬೇಡ್ಕರ್ ಸಂಘಟನೆಯ ಅಧ್ಯಕ್ಷರು ಯಾರು?

ಕಾರ್ಯದರ್ಶಿ ಯಾರು?" ಎಂದು ಕೇಳಿ ನಮ್ಮನ್ನೆಲ್ಲ ಕರೆತರಲು ಕಾರು ಕಳುಹಿಸಿದ್ದರು. ಆಗ ನಾವೆಲ್ಲ ಕಾರಿನಲ್ಲಿ ಹೋಗುವುದೆಂದರೆ ಪ್ರತಿಷ್ಠೆಯೆಂದೇ ತಿಳಿದಿದ್ದೆವು. ಅಂತೆಯೇ ಸಂಘದ ಪದಾಧಿಕಾರಿಗಳೆಲ್ಲ ಹೋದೆವು. ಭರಣಯ್ಯನವರು ಕೊಳ್ಳೇಗಾಲದಲ್ಲಿ ಮನೆಯೊಂದನ್ನು ಬಾಡಿಗೆ ಪಡೆದುಕೊಂಡಿದ್ದರು. ನಾವೆಲ್ಲ ಅಲ್ಲಿಗೆ ಹೋದೆವು. ಅವರ ವೇಷಭೂಷಣ ನೋಡಿ ನಮಗಂತೂ ಅತೀವ ಸಂತೋಷವಾಗಿತ್ತು. ಅವರು ಕುಳಿತಿದ್ದರು. ಅಲ್ಲಿ ನಮ್ಮ ಜನಾಂಗದವರೆಲ್ಲರೂ ಸೇರಿದ್ದರು. ಆಗ ಭರಣಯ್ಯ "ನಾನು ಚುನಾವಣೆಗೆ ನಿಂತಿದ್ದೇನೆ. ನೀವೆಲ್ಲ ಸಹಕರಿಸಬೇಕು" ಎಂದು ಕೇಳಿಕೊಂಡರು. ನಮ್ಮ ಸಂಘದಲ್ಲಿ ತಿಳುವಳಿಕೆ ಇರುವಂತಹ ಕೆಲವು ಯಜಮಾನರಿದ್ದರು. ಅವರಿಗೆ ಅಕ್ಷರ ಜ್ಞಾನ ಇಲ್ಲದಿದ್ದರೂ ನೀತಿ ನಿಯತ್ತುಗಳನ್ನು ಅರಿತಿದ್ದರು. ಅವರೆಲ್ಲ ಭರಣಯ್ಯನವರಿಗೆ ಹೇಳಿದರು. "ಸ್ವಾಮಿ, ನಾವು ನಮ್ಮ ಅಂಬೇಡ್ಕರ್ ಸಂಘದ ಹುಡುಗರು, ಸದಸ್ಯರ ಜತೆ ಮಾತಾಡುತ್ತೇವೆ. ನಿಮಗೆ ಸಹಕರಿಸುತ್ತೇವೆ" ಎಂದು. ಆನಂತರ ನಾವೆಲ್ಲ ನಮ್ಮ ನಮ್ಮ ಪರಿಚಯ ಮಾಡಿಕೊಂಡೆವು. ಆಗ ಭರಣಯ್ಯ "ನೋಡಿಯಪ್ಪಾ ನಾನು ಚುನಾವಣೆಗೆ ನಿಂತಿದ್ದೀನಿ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದರು. ಅದಕ್ಕೆ ನಮ್ಮ ಅಂಬೇಡ್ಕರ್ ಸಂಘದ ಅಧ್ಯಕ್ಷರು, ಶ್ರೀನಿಧಿ ಪ್ರೆಸ್‌ನ ರಾಜಣ್ಣ "ಸ್ವಾಮಿ ನಾವು ನಿಮ್ಮನ್ನು ಖಂಡಿತಾ ಗೆಲ್ಲಿಸಿಕೊಡುತ್ತೇವೆ" ಎಂದು ಹೇಳಿದರು. ಆನಂತರ ಅವರಿಗೆ ಹಾರಹಾಕಿ ಅಭಿನಂದಿಸಿ ಕಾಫಿಯನ್ನು ತರಿಸಿಕೊಟ್ಟೆವು. ಅವರು ನಮ್ಮ ಸಂಘಟನೆಯ ಶಿಸ್ತನ್ನು ನೋಡಿ ಬಹಳ ಖುಷಿ ಪಟ್ಟರು. "ನಾನು ಸೋತರೂ ಚಿಂತೆಯಿಲ್ಲ. ನಿಮ್ಮಲ್ಲಿ ಒಂದು ಸಂಘಟನೆ ಇದೆಯಲ್ಲ ಅದು ಬೆಳೆಯಬೇಕು. ನೀವು ಯುವಕರು ಇದೇ ರೀತಿ ಇರಬೇಕು" ಎಂದು Guidence ಕೊಟ್ಟರು. ಅದು ಹೇಗಿತ್ತೆಂದರೆ ಅವರು ಅಂದು ಯಾರ್‍ಯಾರೋ ಕ್ರಾಂತಿಕಾರಿಗಳ ಹೆಸರನ್ನು ಹೇಳಿದರು. ಮುಖ್ಯವಾಗಿ ಚುನಾವಣೆಗೆ ಓಟು ಕೇಳಲು ಬಂದವರು ಕ್ರಾಂತಿ-ಸಂಘಟನೆ ಎಂದು ಮಾತಾಡಿದ್ದು ನಮಗೆಲ್ಲ ಸೋಜಿಗವೆನಿಸಿತ್ತು. ಅವರ ಬಗ್ಗೆ ವಿಚಿತ್ರವಾದ ಕುತೂಹಲ ಹುಟ್ಟಿತೆನ್ನಬಹುದು".

"ಭರಣಯ್ಯನವರು ಮುಖ್ಯವಾಗಿ ಹೇಳಿದ್ದು ಹೇಗೆ ನಾವು ಕ್ರಾಂತಿ ಮಾಡಬೇಕಾಗುತ್ತದೆ? ಯಾವ ಸಮಯದಲ್ಲಿ ಕ್ರಾಂತಿ ಮಾಡಬೇಕಾಗುತ್ತದೆ? ಶೋಷಣೆ, ಅನ್ಯಾಯವಾದರೆ ನಾವು ಯಾವ ರೀತಿ ನಡೆದುಕೊಳ್ಳಬೇಕಾಗುತ್ತದೆ? ಮಹಿಳಾ ವರ್ಗಕ್ಕೆ ಏನು ಅನ್ಯಾಯವಾಗುತ್ತಿದೆ? ಎಂಬುದನ್ನು ನೀವೆಲ್ಲ ತಿಳಿದುಕೊಳ್ಳಬೇಕು. ನಿಮಗೆಲ್ಲ Knowledge ಇದೆ ಎಂದು ನನಗೆ ಗೊತ್ತು. ನಿಮ್ಮನ್ನು ನೋಡಿದರೆ ಸಂತೋಷವಾಗುತ್ತಿದೆ ಎಂದು. ಜೊತೆಗೆ ರೂಸೋ, ಗ್ಯಾರಿಬಾಲ್ಡಿ, ಲಿಯೋಟಾಲ್‌ಸ್ಟಾಯ್

ಮುಂತಾದ ಕ್ರಾಂತಿಕಾರಿಗಳ ಹೆಸರುಗಳನ್ನು ಹೇಳಿದರು. ದೇವರಾಣೆಗೂ ಅವರು ಯಾರೆಂಬುದೇ ನಮಗೆ ಆಗ ಗೊತ್ತಿರಲಿಲ್ಲ. ಭರಣಯ್ಯ ಇವರ ಕುರಿತ ಪುಸ್ತಕಗಳನ್ನು ಕುರಿತು Refer ಮಾಡುವಂತೆ ಹೇಳಿದರು. ಇವರ ಮಾತಿನ ವೈಖರಿ ಒಮ್ಮೊಮ್ಮೆ ತತ್ತ್ವಜ್ಞಾನಿಯಂತೆ ಮತ್ತೊಮ್ಮೆ ರಾಜಕೀಯ ತತ್ತ್ವಕಾರನಂತೆ, ಇನ್ನೊಮ್ಮೆ ಅಪೂರ್ವ ದಲಿತ ಸಂಘಟಕನಂತೆ ತೋರುತ್ತಿತ್ತು. ವೃತ್ತಿ ರಾಜಕಾರಣಿಯ ಒಂದೇ ಒಂದು ಸೋಗು ಅಂದು ನಮಗೆ ಅವರಲ್ಲಿ ಕಾಣಲಿಲ್ಲ. ಇದು ಅವರ ಬಗ್ಗೆ ನಮ್ಮ ಕುತೂಹಲ ಹೆಚ್ಚುವಂತೆ ಮಾಡಿತು. ಜೊತೆಗೆ ಅಂಬೇಡ್ಕರ್ ಕುರಿತಾದ ತತ್ತ್ವಚಿಂತನೆಗಳು. ಸಂವಿಧಾನದ ಬಗ್ಗೆ ಹೇಳಿದರು. ಅಂಬೇಡ್ಕರರ Indian Philosophy ಓದುವಂತೆ ಹೇಳಿದರು. "ಅಂಬೇಡ್ಕರ್ ಪುಸ್ತಕಗಳು ನಿಮ್ಮ ಬಳಿ ಇವೆಯೇ? ಇಲ್ಲ ಅಂದರೆ ನಾನು ಕಳಿಸಿಕೊಡುತ್ತೇನೆ" ಎಂದೂ ಹೇಳಿದರು. ನಂತರ ಇದ್ದಕ್ಕಿದ್ದಂತೆ "ಈಗ Election ವಿಚಾರ ಬಿಟ್ಟುಬಿಡಿ" ಎಂದರು. "ನೀವೆಲ್ಲ ಅಂಬೇಡ್ಕರ್ ವಿಚಾರಗಳನ್ನು ಓದಬೇಕು. ನಿಮ್ಮ ಸಹಾಯಕ್ಕೆ ನಾವೆಲ್ಲ ಇದ್ದೇವೆ. ಒಳ್ಳೊಳ್ಳೆ ಲೀಡರ್‌ಗಳಿದ್ದಾರೆ" ಎಂದು ಭರವಸೆ ಕೊಟ್ಟರು. ಅವರು ಮಾತಿನ ಮಧ್ಯೆ ಬಿಳಿಗಿರಿರಂಗಯ್ಯನವರ ಬಗ್ಗೆ ಪ್ರಸ್ತಾಪಿಸಿದರು. ಅವರು ಒಂದು ಕಾಲದಲ್ಲಿ ಅಂಬೇಡ್ಕರ್ ಜೊತೆ ಸರಿಸಮಾನವಾಗಿ ಇದ್ದವರು. ಆಗ ಬಿಳಿಗಿರಿ ರಂಗಯ್ಯನವರು ಯಾರು ಎಂದು ಗೊತ್ತಾಯಿತು. ಅವರು ಅಂಬೇಡ್ಕರ್ ಜೊತೆ ಓದಿದ್ದವರು ಎಂಬುದೂ ತಿಳಿಯಿತು".

"ಅಂದ ಹಾಗೆ ನೀವು ನಿಮ್ಮ ಸಂಘಟನೆಯನ್ನು ಯಾವ ರೀತಿ ಮಾಡಿಕೊಂಡಿದ್ದೀರಿ? ಕೇವಲ ಹರಿಜನರ ಸಂಘವನ್ನೇ ಮಾಡಿಕೊಳ್ಳಬೇಡಿ. ಅದರ ಜೊತೆ ಇತರೆ ಹಿಂದುಳಿದವರು, ಪರಿಶಿಷ್ಟವರ್ಗದ ಜನರನ್ನೂ ಸೇರಿಸಿಕೊಳ್ಳಿ. 'ಹರಿಜನ' ಎಂಬುದು ಸೂಕ್ತ ಪದವಲ್ಲ 'ದಲಿತರು' ಎಂದು ಮಾಡಿಕೊಳ್ಳಿ ತಾಲ್ಲೂಕು ಮಟ್ಟದಲ್ಲಿ ಸಂಘವನ್ನು ಸಂಘಟಿಸಿ. ಪ್ರತಿ ಗ್ರಾಮದಲ್ಲೂ ಯುವಕರನ್ನು ಸಂಘಟಿಸಿ ಅಲ್ಲಿನ ಜನರ ಕಷ್ಟ, ಸುಖ, ಸಮಸ್ಯೆಗಳನ್ನು ಅರಿತುಕೊಳ್ಳಿ. ನೀವು ಎಷ್ಟು ಜನ ವಿದ್ಯಾವಂತರಿದ್ದೀರಿ. ಅವರ ಕಷ್ಟಗಳಿಗೆ ಪರಿಹಾರ ಹುಡುಕಿ. ಅವರಿಗೆ ಸರ್ಕಾರದ ಅನುದಾನಗಳು, ಯೋಜನೆಗಳು ತಲುಪಿದ್ದಾವಾ ಎಂಬುದನ್ನು ನೋಡಿಕೊಳ್ಳಿ. ಅವರ ಜೀವನಮಟ್ಟ ಹೇಗಿದೆ ಎಂಬುದನ್ನು ಗಮನಿಸಬೇಕು ತಮ್ಮಯ್ಯ. ನೀವು ಈ ರೀತಿ ಮಾಡುವುದಾದರೆ ನಾನು ನಿಮ್ಮ ಜೊತೆಯಿರುತ್ತೇನೆ. ನಮ್ಮ ಮುಖಂಡರು ನಿಮ್ಮ ಜೊತೆ ಇರುತ್ತಾರೆ. ಅವರನ್ನೆಲ್ಲ ಬಳಸಿಕೊಳ್ಳಿ. ಕೊಳ್ಳೇಗಾಲದಲ್ಲಿ ಒಳ್ಳೆಯ ಸಂಘಟನೆ ಮಾಡಿ. ನಮ್ಮ ಜನಾಂಗದ ಬಗ್ಗೆ ಕಳಕಳಿ ಇರುವಂತಹ ಮುಖಂಡರ ಮುಂದಾಳತ್ವದಲ್ಲಿ ಹೋರಾಟ ಮಾಡಿ" ಎಂದು ಕರೆಕೊಟ್ಟರು.

ಆಶ್ಚರ್ಯವೆಂದರೆ ಅವರು ಬಂದಿದ್ದು ಚುನಾವಣಾ ವಿಚಾರಕ್ಕೆ. ಅದನ್ನು ಮರೆತು ಸಂಘಟನೆ ಬಗ್ಗೆ ಮಾತನಾಡತೊಡಗಿದ್ದರು! "ನಾನು ಬರೀ ಚುನಾವಣಾ ಕಾರಣಕ್ಕೆ ಬರಲಿಲ್ಲ. ಬಸವಲಿಂಗಪ್ಪ ಹೇಳುತ್ತಿದ್ದರು, ಕೊಳ್ಳೇಗಾಲದಲ್ಲಿ Young Tigers ಹುಟ್ಟಿದ್ದಾರೆ ಅಂತ. ಅದನ್ನ ನೋಡೋಕೆ ಬಂದೆ" ಎಂದು ಹೇಳಿದರು. "ನಿಮ್ಮ ಸಂಘಟನೆ ನೋಡಿ ಬಹಳ ಸಂತೋಷವಾಯಿತು. ಮತ್ತೆ ನಮ್ಮ ಜನ ಎಲ್ಲಿಂದ ಎಲ್ಲಿವರೆಗೆ ಎಷ್ಟೆಷ್ಟು ಇದ್ದಾರೆ?" ಎಂದು ಕೇಳಿದರು. ಅದಕ್ಕೆ ನಮ್ ಯಜಮಾನರು "ಸ್ವಾಮಿ ನೀವು ನಮ್ಮ ಬೀದಿಗೆ ಬಂದರೆ ತೋರಿಸುತ್ತೇವೆ" ಎಂದರು. ತಕ್ಷಣವೇ ಭರಣಯ್ಯ "ಸರಿ ನಡೀರಿ" ಎಂದು ನಮ್ಮ ಬೀದಿಗಳನ್ನು ನೋಡಲು ಹೊರಟೇ ಬಿಟ್ಟರು. ಅವರ ಕಾರಿನಲ್ಲಿ ಹಲವಾರು ಜನ, ಮತ್ತೊಂದು ಕಾರಿನಲ್ಲಿ ಉಳಿದವರು ಹೊರಟೆವು. ನಮ್ಮ ಬೀದಿಗಳಲ್ಲಿ ಜನರೆಲ್ಲಾ ನಿಂತು ನೋಡುತ್ತಿದ್ದರು. ಭರಣಯ್ಯನವರನ್ನು ನಮ್ಮ ಬೀದಿಗೆ ಕರೆದುಕೊಂಡು ಬಂದೆವು. ಕೆಲವು ಜನಕ್ಕೆ ಭರಣಯ್ಯ ಯಾರೆಂದೇ ಗೊತ್ತಿರಲಿಲ್ಲ. ಕಂಡಕಂಡ ಜನರಿಗೆಲ್ಲ ಭರಣಯ್ಯ ಬಂದಿದ್ದಾರೆ ಎಂದು ಹೇಳುತ್ತಾ ಪರಿಚಯ ಮಾಡಿಕೊಡುತ್ತಿದ್ದೆವು. ಅವರು ಖಂಡಿತಾ ಪ್ರಚಾರಕ್ಕೆಂದು ಬಂದಿರಲಿಲ್ಲ. ಆ ಬೀದಿ ನೋಡಲೆಂದೆ ಬಂದಿದ್ದರು. ಯಾರಿಗೂ ಅವರು ಚುನಾವಣೆಗೆ ನಿಂತಿದ್ದಾರೆ, ಓಟು ಕೇಳಲು ಬಂದಿದ್ದಾರೆ ಎಂಬುದೇ ಗೊತ್ತಿರಲಿಲ್ಲ. ಬೀದಿಯ ಮೂಲೆಯಲ್ಲಿ ಕುಳಿತುಕೊಂಡು ಎಲ್ಲರನ್ನೂ ಮಾತನಾಡಿಸಿ ಬಹಳ ಸಂತೋಷ ಪಟ್ಟರು. ನಮಗೆಲ್ಲ ಅವರಿಗೆ ಜ್ಯೂಸ್, ನೀರು, ಎಳನೀರು ತಂದು ಕೊಡುವ ಕಾಯಕ. ಒಳ್ಳೆಯ ಕೋಟು ಧರಿಸಿದ್ದ ಭರಣಯ್ಯ ಎಳೆನೀರು ಕುಡಿದು ಸಂತೋಷಪಟ್ಟರು. ನಂತರ ನಮ್ಮ ಪಡ್ಡೆ ಹುಡುಗರ ಗ್ಯಾಂಗನ್ನು ಕರೆದು ಹೇಳಿದರು "ನೀವೆಲ್ಲ ಖಂಡಿತಾ ಸಹಾಯ ಮಾಡಬೇಕ್ರಪ್ಪಾ, ನಿಮಗೆ ಆರ್ಥಿಕ ತೊಂದರೆ ಆದ್ರೆ ನಮ್ಮನ್ನು ಬಂದು ಕಾಣಿರಿ" ಎಂದು. ನಮಗೇನು ದುಡ್ಡು ಕೊಡುತ್ತಿರಲಿಲ್ಲ. ನಮ್ಮ ಮುಖಂಡರ ಕೈಗೆ ಖರ್ಚಿಗಾಗುವಷ್ಟು ಹಣ ಕೊಡುತ್ತಿದ್ದರು. ನಮಗೆಲ್ಲಾ ಹೊಟ್ಟೆ ತುಂಬಾ ಊಟ ಕೊಡಿಸುತ್ತಿದ್ದರು. ನಂತರ ನಮಗೆ ಸಂಘಟನೆಯ ಬಗ್ಗೆ Guidence ಕೊಟ್ಟರು. ನಂತರ ಕೆಸ್ತೂರು ಬಸವರಾಜು ಎಂಬುವವರನ್ನು ಕಾಣಲು ಹೇಳಿದರು. ಅದರಂತೆ ನಾವು ಬಸವರಾಜು ಅವರನ್ನು ಭೇಟಿ ಆದೆವು. ನಮ್ಮನ್ನು ಭರಣಯ್ಯ ಕಳಿಸಿದರೆಂದು ಹೇಳಿದೆವು. ಅದುವರೆಗೂ ಕೆಸ್ತೂರು ಬಸವರಾಜು ಅಂಬೇಡ್ಕರ್ ಬಗ್ಗೆ ಪುಸ್ತಕ ಬರೆದಿದ್ದಾರೆಂಬುದೇ ನಮಗೆ ಗೊತ್ತಿರಲಿಲ್ಲ. ಆಗ ಬಸವರಾಜು ಹೇಳಿದರು "ಬೆಂಗಳೂರಿನಲ್ಲಿ ನಮ್ಮದೊಂದು ತಂಡವಿದೆ. ನೀವು ನಮಗೆ ಸಹಕಾರ ಕೊಡೋದಾದ್ರೆ ನಾವು ಇನ್ನೂ ಚೆನ್ನಾಗಿ ಬರೆಯಬಹುದು. ಅಂಬೇಡ್ಕರ್ ಬಗ್ಗೆ

ಕ್ಯಾಸೆಟ್ ಮಾಡುತ್ತಿದ್ದೇನೆ. ಒಂದು Script ಮಾಡಿದ್ದೇನೆ. ನೀವೆಲ್ಲ Co-oprate ಮಾಡಬೇಕು ತಮ್ಮಯ್ಯ" ಎಂದು. ಅದಕ್ಕೆ ನಾವೆಲ್ಲ ಪಿಕ್ಚರ್ ತೆಗೆಯುತ್ತಿದ್ದಾರಲ್ಲ ಎಂದು ಖುಷಿಯಿಂದ ಒಪ್ಪಿಕೊಂಡೆವು. ಅಂಬೇಡ್ಕರ್ ನಿಷ್ಠೆ ಎಂಬುದು ಕೊಳ್ಳೇಗಾಲದಲ್ಲಿ ರಕ್ತಗತವಾಗಿ ಬಂದುಬಿಟ್ಟಿದೆ. ಇಲ್ಲಿ ಯಾರಾದರೂ ಅಂಬೇಡ್ಕರ್ ವಿಚಾರಗಳಿಗೆ ವಿರುದ್ಧವಾಗಿ ಮಾತನಾಡಿದರೆ ಖಂಡಿತಾ ಕೊಲೆಯೇ! ಪ್ರತಿತಿಂಗಳೂ ವಿದ್ಯಾವಂತರೆಲ್ಲ ಸೇರುತ್ತಿದ್ದೆವು. ಪಿ. ಮಹದೇವ್, ಚೌಡಯ್ಯ, ರಾಜಣ್ಣ ಮುಂತಾದವರೆಲ್ಲ ಸೇರಿಕೊಂಡು ಸಭೆ ಕರೆದು ಅಂಬೇಡ್ಕರ್ ವಿಚಾರ ಸಂಕಿರಣಗಳನ್ನು ನಡೆಸುತ್ತಿದ್ದೆವು. ನಾವೆಲ್ಲ ಒಂದು ಕಾರು ಮಾಡಿಕೊಂಡು ಹಳ್ಳಿಹಳ್ಳಿಗೂ ಹೋಗಿ ಅಂಬೇಡ್ಕರ್ ವಿಚಾರ ಧಾರೆಗಳನ್ನು ತಿಳಿಸುತ್ತಿದ್ದೆವು. ಸುಮಾರು ಜನರ Support ಇತ್ತು. ಅವರೆಲ್ಲ ಭರಣಯ್ಯನವರನ್ನು ನಮ್ಮ ಹಳ್ಳಿಗೂ ಕರೆದುಕೊಂಡು ಬನ್ನಿ ಎಂದು ಹೇಳುತ್ತಿದ್ದರು. ದುರಾದೃಷ್ಟವಶಾತ್ ಆಗಲಿಲ್ಲ.

ಇನ್ನು ಚುನಾವಣಾ ವಿಷಯ. ನಾವೆಲ್ಲ ಪ್ರಚಾರಕ್ಕೆ ಹೋಗುತ್ತಿದ್ದೆವು. ನಮಗೊಂದು ಕಾರು ಕೊಟ್ಟಿದ್ದರು. ನಮಗೋ ಕಾರಿನಲ್ಲಿ ಕೂರುವುದೇ ಒಂದು ಖುಷಿ. ನಾನು ರಾಜಕೀಯಕ್ಕೆ ಬಂದು 25 ವರ್ಷಗಳಾಯಿತು. ಈಗೊಂದು ಸತ್ಯ ಹೇಳುತ್ತೇನೆ. ಸ್ವತಃ ಭರಣಯ್ಯನವರೇ ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ 'ಗೀತಾಭವನ್' ಹೋಟೆಲಲ್ಲಿ ಊಟ ಮಾಡಿಸಿದರು. ಎಂದಿಗೂ ಕಾಸಿನ ಆಸೆ ಹುಟ್ಟಿಸುತ್ತಿರಲಿಲ್ಲ. ಹೊಟ್ಟೆ ತುಂಬಾ ತಿನ್ನಿಸುತ್ತಿದ್ದರು. ಯಜಮಾನರುಗಳ ಹತ್ತಿರ ನಾಳೆ ಖರ್ಚಿಗಾಗುವಷ್ಟು ದುಡ್ಡು ಕೊಡುತ್ತಿದ್ದರು. ನಾವು ಕಾಸಿಗೆ ಆಸೆಪಟ್ಟ ಜನ ಅಲ್ಲ. ಕಾಸು ಕೊಡಿ ಎಂದು ಕೇಳಲು ನಾಚಿಕೆ ಆಗುತ್ತಿತ್ತು. ನಂತರ ನಾವೆಲ್ಲ ತಾಲ್ಲೂಕು ಮಟ್ಟದ ಸಭೆ ಕರೆದು ಭರಣಯ್ಯನವರನ್ನು ಗೆಲ್ಲಿಸಬೇಕೆಂದು ಹೇಳಿದೆವು. ಅದಕ್ಕೆ ಎಲ್ಲರೂ ಒಪ್ಪಿಕೊಂಡರು. ಆದರೂ ನಂತರ ಕೆಲವರು ಕೈ ಬಿಟ್ಟರು. ಚುನಾವಣೆಯಲ್ಲಿ ಭರಣಯ್ಯನವರ Opposite ಸಿದ್ಧಮಾದಯ್ಯ ಸ್ಪರ್ಧಿಸಿದ್ದರು. ಅವರು Innocent, ಏನು ಗೊತ್ತಿರಲಿಲ್ಲ. ಆದರೂ ಜನ ಸಿದ್ಧಮಾದಯ್ಯನಿಗೆ ಓಟುಹಾಕಿದರೇ ಹೊರತು ಭರಣಯ್ಯನವರಿಗೆ ಓಟುಹಾಕಲಿಲ್ಲ. ಈಗನ್ನಿಸುತ್ತದೆ, ಆ ಪುಣ್ಯಾತ್ಮ ಗೆದ್ದಿದ್ದರೆ ಕೊಳ್ಳೇಗಾಲದ ಕತೆಯೇ ಬೇರೆಯಾಗಿರುತ್ತಿತ್ತು. ಇಡೀ ಚಿತ್ರಣವೇ ಬದಲಾಗುತ್ತಿತ್ತು. ಅವರನ್ನು ಸೋಲಿಸಿ ಕೊಳ್ಳೇಗಾಲ ತಬ್ಬಲಿಯಾಯಿತು. ಆದರೆ ಭರಣಯ್ಯ ಅವರು ಗೆದ್ದಿದ್ದರೆ ಕೊಳ್ಳೇಗಾಲದ ಸಹಿತ ಮೈಸೂರು ಜಿಲ್ಲೆಯ ದಲಿತರಿಗೆ ಏನಾದರೊಂದು ವ್ಯವಸ್ಥೆ ಮಾಡುತ್ತಿದ್ದರು. ಭರಣಯ್ಯ ಮಾಡಿದ ಕೆಲಸಗಳ ಬಗ್ಗೆ ನಮ್ಮ ಜನರಿಗೆ ಆಗಾಗ ತಿಳಿಸುತ್ತಿದ್ದೆವು. ಜಿಲ್ಲಾಧಿಕಾರಿಯಾಗಿದ್ದ ನಂಜುಂಡಸ್ವಾಮಿ, ಪೂರಿಗಾಲಿ

ಕುಮಾರಸ್ವಾಮಿ ಮುಂತಾದವರು ಕೊಳ್ಳೇಗಾಲಕ್ಕೆ ಬಂದಾಗ ಭರಣಯ್ಯನವರ ಬಗ್ಗೆ ಹೇಳುತ್ತಿದ್ದರು. ಅವರು ನಮ್ಮ ಜನಾಂಗಕ್ಕೆ ಎರಡನೆ ಅಂಬೇಡ್ಕರ್ ಎಂದು ಹೇಳುತ್ತಿದ್ದರು. ಬಸವಲಿಂಗಪ್ಪನವರನ್ನು ನಮಗೆ ಪರಿಚಯಿಸಿದ್ದು ಭರಣಯ್ಯನವರೇ. ಆಗ ನಮಗೆ ಬಸವಲಿಂಗಪ್ಪ ಯಾರು ಅಂತ ಗೊತ್ತಿರಲಿಲ್ಲ. ಆದರೆ ನಂತರ ಬಸವಲಿಂಗಪ್ಪನವರನ್ನು ಮೆರೆದು ಕೊಂಡಾಡಿದ ಜನ ನಾವು. ಅವರನ್ನು ಮೆರವಣಿಗೆ ಮಾಡಿ ಕೊಳ್ಳೇಗಾಲದ ಇತಿಹಾಸದಲ್ಲಿ ಅವರು ಏನು ಎಂದು ತೋರಿಸಿಕೊಟ್ಟವರು ನಾವು. ಬಸವಲಿಂಗಪ್ಪನವರು ಅವರ ಭಾಷಣದಲ್ಲಿ ಭರಣಯ್ಯನವರ ಸೇವೆಯನ್ನು, ಜನರ ಜೊತೆ ಅವರ ಒಡನಾಟವನ್ನು ವಿವರವಾಗಿ ಹೇಳುತ್ತಿದ್ದರು. ಆದರೆ ಆ ಎರಡನೆ ಅಂಬೇಡ್ಕರರನ್ನು ಗೆಲ್ಲಿಸಲು ನಮಗೆ ಯೋಗ್ಯತೆ ಇಲ್ಲದ ಹಾಗಾಯಿತು.

ಇನ್ನೊಂದು ನನಗೆ ವೈಯಕ್ತಿಕವಾಗಿ ಅವರ ಪ್ರಭಾವ ಬೀರಿದ ಸಂಗತಿ ಇದೆ. ಒಮ್ಮೆ ಮೈಸೂರಿನ ಮಯೂರ ಹೊಟೇಲಿನಲ್ಲಿ ಒಂದು ಸಭೆ ಏರ್ಪಾಡಾಗಿತ್ತು. ಹಿರಿಯ ನಾಯಕರನ್ನೆಲ್ಲ ಕರೆದಿದ್ದರು. ನಾವು, ನಮ್ಮ ಯಜಮಾನರು ಎಲ್ಲ ಹೋದೆವು. ಭರಣಯ್ಯನವರು ಸಭೆಯ ನೇತೃತ್ವ ವಹಿಸಿದ್ದರು. ಆಗ ಅಂದಿನ ಸಭೆಯಲ್ಲಿ ಅವರು ಹೇಳಿದ ಎರಡು ವಿಚಾರಗಳು. ಈಗಲೂ ನನಗೆ ನೆನಪಿವೆ. "ಒಂದು, ಮನುಷ್ಯನಾಗಿ ಹುಟ್ಟಿದ ಮೇಲೆ ಮನುಕುಲಕ್ಕೆ ಏನು ಮಾಡಬೇಕು ಎಂಬುದು. ಎರಡನೆಯದು. ಜಗತ್ತು ನನಗೇನು ಮಾಡಿದೆ ಎನ್ನುವುದಕ್ಕಿಂತ ನಾನು ಜಗತ್ತಿಗೆ ಏನು ಮಾಡಿದೆ ಎಂಬುದು ಮುಖ್ಯ. ಯಾಕೆ ಜನ ವಿದ್ಯಾವಂತರಾಗುತ್ತಿಲ್ಲ. ಕಾರಣ ಏನು? ಯಾವ ನಿಟ್ಟಿನಲ್ಲಿ ನಾವು ತಪ್ಪು ಮಾಡುತ್ತಿದ್ದೇವೆ? ಯಾಕೆ ನಾವು ಸಂಘಟನೆ ಮಾಡಲು ಆಗುತ್ತಿಲ್ಲ?" ಎನ್ನುವ ವಿಚಾರಗಳನ್ನು ಒಂದೊಂದು ಉದಾಹರಣೆ ಕೊಟ್ಟು ಹೇಳುತ್ತಿದ್ದರು. Merits and demerits ಹೇಳುತ್ತಿದ್ದರು. Conclusion ಅವರೇ ತೆಗೆದುಕೊಳ್ಳುತ್ತಿದ್ದರು. ಅವರ ಆ ಭಾಷಣ ಕೇಳಿದಾಗಲೇ ನಮ್ಮ ಮನಸ್ಸು ಪರಿವರ್ತನೆ ಆದದ್ದು. ಆಗ ನಮಗೆಲ್ಲ ರಾಜಕೀಯ ಪ್ರಜ್ಞೆ ಇಲ್ಲದ ಪರಿಸ್ಥಿತಿ. ಯಾರೂ ನಮಗೆ ತಿಳುವಳಿಕೆ ಕೊಡುತ್ತಿರಲಿಲ್ಲ. ಭರಣಯ್ಯನವರ ಕುರಿತಾಗಿ ನಾವು ಏನು ಮಾಡಬೇಕೆಂದು ಗೊತ್ತಿರಲಿಲ್ಲ. ಯಾರೂ ಕೂಡ ಭರಣಯ್ಯನವರ ಬಗ್ಗೆ ಅಂದು ಬರಹದಲ್ಲಿ ದಾಖಲಿಸಲೂ ಇಲ್ಲ. ನೆನಪುಗಳ ಹೊರತಾಗಿ!

ನಾನು ಓದುತ್ತಿದ್ದಾಗ ಗಂಗೋತ್ರಿಯಲ್ಲಿ ನಮ್ಮದೊಂದು ಒಳ್ಳೆಯ ತಂಡವಿತ್ತು. ಅಲ್ಲಿನ ಹಾಸ್ಟೆಲ್‌ನಲ್ಲಿ ನಮಗೂ ಮಂಡ್ಯದವರಿಗೂ ಸ್ನಾನ ಮಾಡುವ ವಿಚಾರಕ್ಕೆ ಗಲಾಟೆ ಆಗುತ್ತಿತ್ತು. ಆಗ ದಲಿತರೆಂದರೆ ಅಸ್ಪೃಶ್ಯರಾಗಿದ್ದರು. ಉ. ಕಾ. ಸುಬ್ರಾಯಚಾರ್ಯರ ಅಧ್ಯಕ್ಷತೆಯಲ್ಲಿ ಶಾಂತಿ ಸಭೆ ನಡೆದಿತ್ತು. ಬಸವಲಿಂಗಪ್ಪನವರು

ಬಂದು ಬುದ್ಧಿ ಹೇಳಿದ್ದರು. ಆದರೆ ಗಲಾಟೆ ಆಗಾಗ ಮರುಕಳಿಸುತ್ತಿತ್ತು. ಒಮ್ಮೆ ಭರಣಯ್ಯನವರೇ ಮೈಸೂರಿಗೆ ಬಂದಿದ್ದರು. ಹಾಸ್ಟೆಲ್‌ಗೆ ಬಂದವರೆ ಕಿಡಿಕಾರುತ್ತಿದ್ದರು ಎಂದರೆ ಆ ಕೋಪ ಯಾರಿಗೂ ಇರಲಿಲ್ಲ. ಅವರು ಹಾಗೆ ಕೋಪಿಸಿಕೊಂಡಿದ್ದನ್ನು ನಾವು ಯಾವತ್ತು ನೋಡಿರಲಿಲ್ಲ. ನಮ್ಮ ಜನಾಂಗಕ್ಕೆ ದೌರ್ಜನ್ಯ ಆಗುತ್ತಿದೆ ಎಂದು ಸಿಡಿದು ಬೀಳುತ್ತಿದ್ದರು. ಆಗ ಜಿಲ್ಲಾಧಿಕಾರಿಯಾಗಿದ್ದ ಆರ್ಯಮಿತ್ರರು ಪ್ರವಾಸದಲ್ಲಿದ್ದರು. ಅವರನ್ನು ದೂರವಾಣಿಯಲ್ಲಿ ಕೋಪೋದ್ರಿಕ್ತರಾಗಿಯೇ ಸಂಪರ್ಕಿಸಿದರು. "ಬನ್ರೀ ಎಲ್ಲಿದ್ದೀರಾ? ಇಲ್ಲಿ ದಲಿತರಿಗೆ ಮೋಸ ಅನ್ಯಾಯ ಆಗುತ್ತಿದೆ. ನೀವು ಪ್ರವಾಸ ಮಾಡುತ್ತಿದ್ದೀರಲ್ರೀ.. ಬೇಗ ಬನ್ನಿ" ಎಂದು ಕರೆದರು. ಆದರೆ ಅದು ಸಾತ್ವಿಕ ಸಿಟ್ಟು. ಬೈಗುಳ ಸಭ್ಯತೆ ಮೀರುತ್ತಿರಲಿಲ್ಲ. ಕಣ್ಣಿನಲ್ಲಿ ನೀರು ತುಂಬಿಕೊಂಡು ಮಾತಾಡುತ್ತಿದ್ದರು. ಅಂತವರು ಯಾರೂ ಹುಟ್ಟಲಿಲ್ಲ. ಹುಟ್ಟುವುದೂ ಇಲ್ಲ.

ಚುನಾವಣೆಯಲ್ಲಿ ಸೋತಿದ್ದ ಭರಣಯ್ಯ ಕೊಳ್ಳೇಗಾಲದ ಜನರನ್ನು ಕಂಡರೆ ನಂತರದ ದಿನಗಳಲ್ಲಿ ಸಪ್ಪೆ ಮುಖ ಹಾಕಿಕೊಂಡು ಮಾತಾಡುತ್ತಿದ್ದರು. ಆದರೂ "ಪರವಾಗಿಲ್ಲ ಬಿಡಿ" ಎಂದು ಸಂಘಟನೆಯ ಬಗ್ಗೆ ಮಾತಾಡುತ್ತಿದ್ದರು. ಅವರಿಂದಾಗಿಯೇ ನಾವು ಅಂಬೇಡ್ಕರ್‌ರ ವಿಚಾರಗಳನ್ನು ತಿಳಿದುಕೊಳ್ಳುವಂತಾಯಿತು. ಆದರೆ ಅಂಥವರ ಬಗ್ಗೆ ಪುಸ್ತಕ ಹೊರತರದೇ ಹೋದದ್ದು ವಿಷಾದನೀಯ. ಅವರನ್ನು ಈಗಲೂ ಇಲ್ಲಿಯ ಜನ ಅಂಬೇಡ್ಕರ್ ಎಂತಲೇ ಪೂಜಿಸುತ್ತಾರೆ. ಅಂದು ಅವರು ಮಯೂರ ಹೋಟೇಲ್‌ನಲ್ಲಿ ಹೇಳಿದ ಒಂದೊಂದು ಮಾತುಗಳೂ ಇಂದಿಗೂ ನನ್ನ ಕಿವಿಯಲ್ಲಿ ಕೇಳಿಸುತ್ತಿವೆ. ಅವರು ಜೀವನದಲ್ಲಿ ತಿಂದಂತಹ ನೋವುಗಳನ್ನು ಒಂದೊಂದಾಗಿ ಮುಂದಿದ್ದವರ ಹೃದಯಕ್ಕೆ ನಾಟುವಂತೆ ಹೇಳುತ್ತಿದ್ದರು. ಪ್ರತಿಯೊಬ್ಬ ಯುವಕರಿಗೂ ಸ್ಫೂರ್ತಿ ತುಂಬುವಂತೆ ಮಾತಾಡುತ್ತಿದ್ದರು.

ಭರಣಯ್ಯನವರು ಆಕಸ್ಮಿಕವಾಗಿ ಗೆದ್ದು ಅಸೆಂಬ್ಲಿಗೆ ಬಂದಿದ್ದರೆ ವಿಧಾನಸಭೆಯ ಚಿತ್ರಣವೇ ಬದಲಾಗುತ್ತಿತ್ತು. ಹೇಗೆಂದರೆ ಅವರ ಮುಂದೆ ಯಾರೂ ಉತ್ತರ ಕೊಡಲು ಆಗುತ್ತಿರಲಿಲ್ಲ. ಸಂವಿಧಾನ, ಕಾನೂನುಗಳನ್ನು ಚೆನ್ನಾಗಿ ತಿಳಿದಿದ್ದರು. ಈಗಲೂ ಕೊಳ್ಳೇಗಾಲದಲ್ಲಿ ಏನೇ ಸಮಾವೇಷ ಮಾಡಿದರೂ ನಮ್ಮದು ಶಿಸ್ತಿನ ಸಂಘಟನೆಯಿದೆ. ಅದರ ಮುಖಾಂತರವೇ ನಾವು ಮಾಡುವುದು. ಸಣ್ಣ ಪುಟ್ಟ ಭಿನ್ನಾಭಿಪ್ರಾಯದ ಹೊರತಾಗಿ ನಾವು ಒಟ್ಟಿಗೆ ಇದ್ದೇವೆ. ಆಗೆಲ್ಲ ನಮಗೆ ಸಂಘಟನೆಯ ಆಳ, ಅಗಲ ಗೊತ್ತಿರಲಿಲ್ಲ. ಈಗ ಸಂಘಟನೆಯನ್ನು ಹೆಮ್ಮರವಾಗಿ ಬೆಳೆಸಿದ್ದೇವೆ. ಭರಣಯ್ಯನವರ ಮಾತುಗಳು ಈಗಲೂ ನಮಗೆ ನಿಜವೆನಿಸುತ್ತದೆ. ಪ್ರತಿಮಾತನ್ನು ಆತ್ಮಾಭಿಮಾನದಿಂದ ಹೇಳುತ್ತಿದ್ದರು. ಅವರ ವಿಚಾರಧಾರೆ ಅದ್ಭುತವಾಗಿತ್ತು.

ಪ್ರತಿಯೊಬ್ಬರಿಗೂ ನಾಟಬೇಕು. ಭರಣಯ್ಯನವರ ಮಾತಿನಿಂದ ಪ್ರೇರಿತರಾದ ನಾವು ಗಂಗೋತ್ರಿಯಲ್ಲಿ ಒಂದು ತಂಡ ಮಾಡಿಕೊಂಡು ಮುನ್ನಡೆಯುತ್ತಿದ್ದೆವು. ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಒಮ್ಮೆ ಭರಣಯ್ಯನವರ ಬಗ್ಗೆ ವಿಚಾರ ಸಂಕಿರಣ ನಡೆದಿತ್ತು. ಅದು ಭರಣಯ್ಯನವರ ಹೆಸರಿನಲ್ಲಿ ಯಾವುದೇ ಸಂಘ ಸಂಸ್ಥೆಗಳು, ಸಂಘಟನೆಗಳು ಯಾಕೆ ಬರಲಿಲ್ಲ? ಎಂಬುದರ ಬಗ್ಗೆ. ಆದರೆ ಭರಣಯ್ಯನವರಿಗೆ ಯಾವುದರಲ್ಲೂ ನಾನು, ನನ್ನಿಂದ ಎಂದು ಹೇಳಿಕೊಳ್ಳುವುದು ಇಷ್ಟವಿರಲಿಲ್ಲ. ಯಾವುದೇ ಸಭೆಯಲ್ಲೂ ಅವರು ಈ ಸಂಘಟನೆ ನನ್ನಿಂದಾಗಿದೆ, ಈ ಸಭೆ ಸೇರಿಸಿದ್ದು ನಾನೇ ಎಂದು ಹೇಳುತ್ತಿರಲಿಲ್ಲ! "ಎಲ್ಲ ಮಹನೀಯರು ಇದ್ದೀರ. ಸಂಘಟನೆ ಮಾಡಿ, ನಾನು ನಿಮ್ಮ ಜೊತೆ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿಯುತ್ತೇನೆ ಎನ್ನುತ್ತಿದ್ದರು".

"ಅಂದು ಬಸವಲಿಂಗಪ್ಪನವರು ಬೌದ್ಧಧರ್ಮದ ಅಗತ್ಯವನ್ನು ಒತ್ತಿ ಹೇಳಿದ್ದರು. ಆದರೆ ಅಲ್ಲಿಯೂ ಅಪಸ್ವರ ಎದ್ದಿತ್ತು. ಪಂಚಶೀಲ ತತ್ವಗಳನ್ನು ಅನುಸರಿಸಲು ಸಾಧ್ಯವಾ ಎಂದು? ನಾವೆಲ್ಲ ಅಂದು ಮನಸ್ಸು ಮಾಡಿ ಮುನ್ನುಗ್ಗಿದ್ದರೆ ಇಂದು ಶೇ 50ರಷ್ಟು ಸಾಧಿಸಬಹುದಿತ್ತು. ಆದರೆ ಆ ಸಮುದಾಯದಲ್ಲಿ ಎಡ-ಬಲ ಎಂದೆರಡು ಪಂಗಡ ಸೃಷ್ಟಿಯಾದವು. ಅಲ್ಲಿ ಬಾಬು ಜಗಜೀವನ್‌ರಾಮ್‌ರವರ ಹೆಸರೂ ಬಂತು. ಹೀಗೆ ಎಡ-ಬಲ ಹುಟ್ಟಿ ನಮ್ಮಲ್ಲಿ ಒಂದು ಎನ್ನುವುದು ಮಾಯವಾಯಿತು. ಹೀಗೆ ಎಡ-ಬಲದ ಪರಿಕಲ್ಪನೆ ಬೌದ್ಧಧರ್ಮ ಅನುಸರಿಸಲು ತೊಡಕಾಯಿತೆನ್ನಬಹುದು. ಬರಬರುತ್ತಾ ನಮ್ಮ ಜಾತಿಗಳಲ್ಲೇ ಉಪಜಾತಿಗಳು ಕ್ರಿಯೇಟ್ ಆದವು. ಇದು ನಮ್ಮ ಪ್ರಗತಿಯ ಓಟಕ್ಕೆ ಬಿದ್ದ ಬಹುದೊಡ್ಡ ಕೊಡಲಿ ಏಟು!"

"ನಮ್ಮಲ್ಲಿ ಆಗಲೂ ಬೆರಳೆಣಿಕೆಯ ಐ.ಎ.ಎಸ್. ಅಧಿಕಾರಿಗಳಿದ್ದರೂ ಅವರಿಗೆ ಅಂತಹ ಮಾನ್ಯತೆ ಇರಲಿಲ್ಲ. ಆದರೆ ಆಗ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ದಲಿತರ ಬಗ್ಗೆ ಕಾಳಜಿಯಿತ್ತು. ಆಗಲೇ, ನಮಗೆ ಗೊತ್ತಾಗಿದ್ದು ನಾಲ್ವಡಿ ಕೃಷ್ಣರಾಜ ಒಡೆಯರು ದಲಿತರ, ಪರಿಶಿಷ್ಟರ ಕೇರಿಗಳಲ್ಲಿ ಸಂಚರಿಸಿ ಅವರ ಕಷ್ಟ ಸುಖ ವಿಚಾರಿಸುತ್ತಿದ್ದರು ಎಂದು. ಇಲವಾಲದ ಅತಿಥಿ ಗೃಹದಲ್ಲಿ ಒಮ್ಮೆ ಮೀಟಿಂಗ್ ಇತ್ತು. ದೊಡ್ಡ ದೊಡ್ಡ ರಾಜಕಾರಣಿಗಳು ಬಂದಿದ್ದರು. ಎನ್. ರಾಚಯ್ಯ, ಟಿ.ಎನ್. ನರಸಿಂಹಮೂರ್ತಿ, ಡಿ. ಮಂಜುನಾಥ್ ಮೊದಲಾದವರು ಇದ್ದರು. ಆದರೆ ಅಲ್ಲಿ ಸಭೆ ನಡೆಯಲಿಲ್ಲ. ವಿ. ಶ್ರೀನಿವಾಸ ಪ್ರಸಾದ್ ಆಗತಾನೇ ರಾಜಕೀಯ ಪ್ರವೇಶ ಮಾಡಿದ್ದರು. ನಮ್ಮ ಅನೇಕ ಹೋರಾಟಗಳಿಗೆ ಬೂಸಾ ಚಳುವಳಿಯೇ ಅಂತಿಮ. ಬಸವಲಿಂಗಪ್ಪನವರಿಗೂ ಅದೇ ಅಂತಿಮ ಚಳುವಳಿ. ನಾವು ಹಾಸ್ಟೆಲ್‌ನಲ್ಲಿದ್ದಾಗ

ಯಾವುದೋ ಗಲಾಟೆಯಾಗಿ ನಮ್ಮನ್ನೆಲ್ಲ ಹೊಡೆದು ಆಚೆ ಹಾಕಿದ್ದರು. ಆಗ ನಾವು ನಿರಪರಾಧಿಗಳಾಗಿದ್ದೆವು. ನಿರಪರಾಧಿಗಳಿಗೆ ಹೊಡೆದರಲ್ಲ ಎಂಬುದೇ ನಮ್ಮ ರಾಜಕೀಯ ಪ್ರವೇಶಕ್ಕೆ ಕಾರಣ. ಅಲ್ಲಿಂದ ನಮ್ಮ ಸ್ವಂತ ಪ್ರತಿಭೆ, ಶಕ್ತಿಯಿಂದ ಬೆಳೆದು ಬಂದೆವು. ಈಗಲೂ ನಮ್ಮ ಜನರಿಗೆ ನಮ್ಮ ಕೈಲಾದ ಸಹಾಯ ಮಾಡುತ್ತಿದ್ದೇವೆ.

"ಭರಣಯ್ಯ ಸೋತ ನಂತರ ಯಾಕೆ ಕುಸಿದು ಹೋದರು?" ಎಂಬ ನಮ್ಮ ಪ್ರಶ್ನೆಗೆ, ಅವರು ಕುಸಿದು ಹೋದದ್ದು ಸೋತಿದ್ದಕ್ಕಲ್ಲ. ನಮ್ಮ ಜನ ಇನ್ನೂ ಸಂಘಟನೆ ಆಗಲಿಲ್ಲವಲ್ಲ ಎಂದು. ನಮ್ಮ ಜನ ಚುನಾವಣೆ ಎಂದರೇನು ಎಂಬುದು ತಿಳಿದಿಲ್ಲ. ಯಾವ ಸರ್ಕಾರ ಆರಿಸಬೇಕು ಎಂದು ತಿಳಿದಿಲ್ಲ. ಯಾರು ವಿದ್ಯಾವಂತರು, ಯಾರು ಅವಿದ್ಯಾವಂತರು ಎಂದು ಯೋಚಿಸುವ ಶಕ್ತಿಯಿಲ್ಲ. ಯಾವ ರೀತಿ ಕೆಲಸ ಮಾಡುತ್ತಾರೆ ಎಂದು ಗೊತ್ತಾಗಲಿಲ್ಲವಲ್ಲ ಎನಿಸುತ್ತಿದೆ".

ಅವರು ಮುಂದಿನ ಚುನಾವಣೆಗೆ ನಿಂತು ಗೆಲ್ಲಬಹುದಿತ್ತು. ಅಲ್ಲಿಯವರೆಗೆ ಜನತೆಗೆ ತಾನು ಏನು ಎಂದು ತೋರಿಸಬಹುದಿತ್ತು. ಆದರೆ ಅವರು ಬಹಳ ನೊಂದಿದ್ದರು. ಭರವಸೆ ಕಳೆದುಕೊಂಡಿದ್ದರು. "ಇನ್ನು ಯಾವಾಗ ಅರ್ಥಮಾಡಿಕೊಳ್ಳುತ್ತಾರೆ? ನಾನೇ ಆಗಬೇಕೆಂದಿಲ್ಲ, ಯಾರೇ ದಲಿತ ಬಂದರೂ ಜನ ಅವನನ್ನು ಗುರುತಿಸಲಿ, ಸಂಘಟನೆಯ ಮೂಲಕ ರಾಜಕೀಯ ಅಂದ್ರೆ ಏನೆಂದು ಅರ್ಥಮಾಡಿಕೊಳ್ಳಲಿ" ಎಂದು ಹೇಳುತ್ತಿದ್ದರು. ಅವರು ಆ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದರು. ಎಲ್ಲರಿಗೂ ತಿಳುವಳಿಕೆಯಿದ್ದಿದ್ದರೆ ಭರಣಯ್ಯ ಖಂಡಿತಾ ಸೋಲುತ್ತಿರಲಿಲ್ಲ. ಅಲ್ಲದೆ ನಾವೆಲ್ಲ ಪಡ್ಡೆ ಹುಡುಗರು ನಮಗೂ ಅಷ್ಟು ಪ್ರಜ್ಞೆ ಇರಲಿಲ್ಲ. ಆದರೆ ಅವರು ಮಾಡಿದ ಭಾಷಣಗಳು ಇಂದಿಗೂ ಪ್ರಸ್ತುತವಾಗಿವೆ. "ನಾನು ಚುನಾವಣೆಗೆ ಬಂದಿಲ್ಲಪ್ಪ, ನಿಮ್ಮಲ್ಲಿ ಸಂಘಟನಾ ಶಕ್ತಿ ತುಂಬಲು ಬಂದಿದ್ದೇನೆ" ಎಂದು ಹೇಳುತ್ತಿದ್ದರು. ಆಗ ನಾವೆಲ್ಲ 10ಪೈಸೆಯಂತೆ ಎಲ್ಲರ ಹತ್ತಿರ ಚಂದಾ ಪಡೆದು ಅವರಿಗೆ ಹಾರ ತಂದುಹಾಕಿದ್ದೆವು. ಕೋಟುಧರಿಸಿ ಶಿಸ್ತಿನ ಸಿಪಾಯಿಯಂತೆ ಕಾಣುತ್ತಿದ್ದರು. ಬಂಡವಾಳಶಾಹಿಗಳ ವಿರುದ್ಧ ನಿಂತ ರೂಸೋ, ಗ್ಯಾರಿಬಾಲ್ಡಿ ಮುಂತಾದವರ ಉದಾಹರಣೆಕೊಟ್ಟು, "ನಾವು ಬರೀ ದಲಿತರ ಬಗ್ಗೆ ಚಿಂತಿಸದೆ ಸಮಗ್ರ ಭಾರತದ ಬಗ್ಗೆ ಚಿಂತಿಸಬೇಕು. ಬಸವಣ್ಣ ಬಿಟ್ಟರೆ ನಂತರ ಅಂಬೇಡ್ಕರ್ ಮಾತ್ರ ಎಲ್ಲರ ಬಗ್ಗೆ ಚಿಂತಿಸಿದರು" ಎಂದರು. ಒಂದು ವೇಳೆ ಅಂಬೇಡ್ಕರ್ ಬಸವಣ್ಣನಿಗಿಂತ ಮೊದಲು ಹುಟ್ಟಿದ್ದರೆ, ಬಸವಣ್ಣನವರು ತಮ್ಮ ವಚನದಲ್ಲಿ ಅಂಬೇಡ್ಕರ್ ಬಗ್ಗೆ ಬರೆಯುತ್ತಿದ್ದರೇನೋ. ಒಟ್ಟಿನಲ್ಲಿ ಕರ್ನಾಟಕದ ಚರಿತ್ರೆಯೇ ಬದಲಾಗುತ್ತಿತ್ತು. ಭರಣಯ್ಯನವರೂ ಬೌದ್ಧಧರ್ಮದ ಬಗ್ಗೆ ಒಲವು ಹೊಂದಿದ್ದರು.

"ನಾವು ಬೌದ್ಧಧರ್ಮ ಸೇರಿಕೊಂಡರೆ ನಮಗೆ ಮೇಲ್ಜಾತಿಯವರಿಂದ ಆಗುವಂತಹ ಶೋಷಣೆ ನಿಲ್ಲುತ್ತದೆ. ನಮ್ಮನ್ನು ಅಸಹ್ಯವಾಗಿ ನೋಡುವುದು ತಪ್ಪುತ್ತದೆ. ಸರಿಸಮನಾದ ಪ್ರೀತಿ ಸಿಗುತ್ತದೆ. ಆಧ್ಯಾತ್ಮಿಕವಾದ ಪರಿಸರ ಉಂಟಾಗುತ್ತದೆ. ಶಿಸ್ತು ಬರುತ್ತದೆ. ನಮ್ಮ ಕೆಟ್ಟ ಕೆಲಸಗಳು ನಿಲ್ಲುತ್ತವೆ. ಬುದ್ಧನ ವಿಚಾರಗಳನ್ನು ಅಳವಡಿಸಿಕೊಂಡರೆ ಹಳ್ಳಿಗಳಲ್ಲಿ ಬೇರೆಯದೇ ಆದ ಪರಿಸರ ಸೃಷ್ಟಿಯಾಗುತ್ತದೆ. ಬಡತನ ಇದ್ದರೂ ಶುಚಿತ್ವ ಇರಬೇಕು. ಸ್ನಾನ ಮಾಡಿ ಕಾಲೇಜಿಗೆ ಹೋಗಬೇಕು. ಹಾಸ್ಟೆಲ್‌ನಲ್ಲಿ ಜಗಳ ಆಡಬಾರದು. ಎಲ್ಲ ಜನಾಂಗದವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕು. ಗ್ರಂಥಾಲಯಗಳಲ್ಲಿ ಒಳ್ಳೊಳ್ಳೆ ಪುಸ್ತಕಗಳು ಇವೆ. ಅವೆಲ್ಲವನ್ನು ಓದಬೇಕು" ಎಂದು ಪ್ರತಿಯೊಂದು ವಿಚಾರವನ್ನು ಮನದಟ್ಟಾಗುವಂತೆ ಹೇಳುತ್ತಿದ್ದರು.

"ನಮಗೆ ಎಡ-ಬಲದ ಅಗತ್ಯ ಇರಲಿಲ್ಲ. ಅದಕ್ಕೆ ಭರಣಯ್ಯನವರ ವಿರೋಧವಿತ್ತು. ಒಮ್ಮೆ ಸಭೆಯಲ್ಲಿ ಯಾವುದೇ ವಿಚಾರ ಮಾತಾಡುತ್ತಿದ್ದಾಗ ಯಾರೋ ಒಬ್ಬರು ಎದ್ದು ನಿಂತು ಎಡ-ಬಲದ ಬಗ್ಗೆ ಪ್ರಸ್ತಾಪಿಸಿದರು. ಆಗ ಭರಣಯ್ಯ ತುಂಬ ಕೋಪ ಮಾಡಿಕೊಂಡಿದ್ದರು. ಆಗವರು ಸಿಂಧೂ ಕಣಿವೆಯ ನಾಗರಿಕತೆಯ ಉದಾಹರಣೆ ಕೊಟ್ಟರು. ನಾವು ಯಾವ ಜನ? ನಮ್ಮ ಮೂಲವೇನು? ಮೂಲ ಆರ್ಯರು, ದ್ರಾವಿಡರು, ಎಲ್ಲರ ಸಹಿತ ವಿವರ ಕೊಟ್ಟರು. ಆದರೆ ಅಲ್ಲಿದ್ದ ಕೆಲವರಿಗೆ ಅರ್ಥವಾಗಲಿಲ್ಲ. "ಎಡ-ಬಲ ಎಂಬುದು ಸೃಷ್ಟಿಯಾದುದು ಯಾವುದೋ ದೇವಸ್ಥಾನದ ಪೂಜೆಯ ವಿಷಯಕ್ಕೆ. ಅಣ್ಣ ತಮ್ಮಂದಿರಲ್ಲಿ ಪೂಜೆ ಮಾಡುವ ವಿಷಯಕ್ಕೆ ಜಗಳವಾಯಿತು. ಆಗವರು ಎಡಬಲ ಎಂದು ಹಂಚಿಕೊಂಡರಂತೆ. ಅವರಿಗೆ ಹುಟ್ಟಿದ ಮಕ್ಕಳು ಎಡ-ಬಲ ಎಂದು ಬೇರೆ ಬೇರೆಯಾಗಿ ಬೆಳೆಯತೊಡಗಿದರು. ಅದು ಎಷ್ಟು ಸತ್ಯವೋ ಗೊತ್ತಿಲ್ಲ. ಆದರೆ ನಾವೆಲ್ಲ ದಾಯಾದಿಗಳು, ಅಣ್ಣತಮ್ಮಂದಿರ ಮಕ್ಕಳು" ಎಂದು ಹೇಳಿದರು. ಆ ಕಾರಣಕ್ಕೆ ನಾವೆಲ್ಲ ಭರಣಯ್ಯನವರ ಯಾವುದೇ ಸಭೆಗಳನ್ನು ಮಿಸ್ ಮಾಡಿಕೊಳ್ಳುತ್ತಿರಲಿಲ್ಲ. ತುಂಬಾ ಅರ್ಥಗರ್ಭಿತ ಸಭೆ ಅವರವು. ಆನಂತರ ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ದಲಿತರ ಪರವಾಗಿ ಕೆಲಸ ಮಾಡಲು ಪ್ರಾರಂಭಿಸಿದವು. ಆಗ ಹುಟ್ಟಿದ್ದೇ ದಲಿತ ಸಂಘ. ಸಿದ್ಧಲಿಂಗಯ್ಯ ಅಧ್ಯಕ್ಷರಾದರು. ಸಂಘಟನೆ ಚೆನ್ನಾಗಿ ನಡೆಯಿತು. ಆನಂತರ ಅವೆಲ್ಲ ಒಡೆದು ಹೋಳಾದವು. ಒಗ್ಗಟ್ಟು ಮಾಯವಾಯಿತು. ಒಬ್ಬೊಬ್ಬ ಮುಖಂಡರದು ಒಂದೊಂದು ಬಣ. ಸಿದ್ಧಲಿಂಗಯ್ಯನವರ ಬಣ ಹೇಗಾಯಿತೆಂದರೆ, ಆ ಬಣದವರೆಲ್ಲ ಗಾಂಧಿಯನ್ನು ಬೈಯುತ್ತಿದ್ದರಂತೆ. ಯಾವಾಗ ರಾಮಕೃಷ್ಣ ಹೆಗ್ಡೆ ಸರ್ಕಾರ ಸಿದ್ಧಲಿಂಗಯ್ಯನವರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡಿತೋ ಅಂದಿನಿಂದ ಬೈಯುವುದನ್ನು

ಬಿಟ್ಟುಬಿಟ್ಟರಂತೆ! ಆದರೆ ಅಂಬೇಡ್ಕರ್ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು. ಒಟ್ಟಿನಲ್ಲಿ ಒಂದೊಂದು ಬಣಕ್ಕೊಂದು ಬಣ್ಣ".

"ಏನೇ ಆಗಲಿ ನನಗೆ ವೈಯುಕ್ತಿಕವಾಗಿ ಈಗ ಅನಿಸುತ್ತಿರುವುದಿಷ್ಟು. ಭರಣಯ್ಯನವರು ರಾಜಕೀಯ ಪ್ರವೇಶದಲ್ಲಿ ಸ್ವಲ್ಪ ಆತುರ ಮಾಡಿದರು ಅನ್ನಿಸುತ್ತದೆ. ಅವರು ನಂತರ ಕಾಂಗ್ರೇಸ್ ಸೇರಿದ್ದರೆ ಅಲ್ಲಿ ಖಂಡಿತಾ ಟಿಕೆಟ್ ಕೊಡುತ್ತಿದ್ದರು. ಸಿದ್ಧಮಾದಯ್ಯ ಒಬ್ರೇ ಅಲ್ಲ. ಅವರೂ ಗೆಲ್ಲುತ್ತಿದ್ದರು. ಅವರು ಕಾಯಬೇಕಾಗಿತ್ತು. ಸಂಸ್ಥಾಕಾಂಗ್ರೇಸ್ ಯಾಕೆ ಆರಿಸಿಕೊಂಡರೆಂದು ತಿಳಿದಿಲ್ಲ. ಸವರ್ಣೀಯರದೂ ಅವರಿಗೆ ಬೆಂಬಲವಿತ್ತು. ಚೌಡಯ್ಯ ಎಂಬ ಸವರ್ಣೀಯ ನಾಯಕರು ಏನು ಹೇಳುತ್ತಿದ್ದರು ಗೊತ್ತೇ. "ಭರಣಯ್ಯ ಯಾರು ಗೊತ್ತೇನ್ರೀ...? ಸಾವಿರಾರು ಜನಕ್ಕೆ ಕೆಲಸ ಕೊಟ್ಟವರು. ನಿಮ್ಮ ಜನಾಂಗದ ಒಳ್ಳೆ ಲೀಡರ್. ಅವರನ್ನ ಗೆಲ್ಲಿಸಿ ಅಂದ್ರೆ ಸಿದ್ಧಮಾದಯ್ಯನ್ನ ಗೆಲ್ಲಿಸಿದರಲ್ರೀ..." ಅಂತ. ಅಲ್ಲದೆ ಚೌಡಯ್ಯನವರು ಬಂದು ಬಹಳವಾಗಿ ಭರಣಯ್ಯನವರ ಬಗ್ಗೆ ಇಲ್ಲಿ ಪ್ರಚಾರ ಮಾಡಿದ್ದರು. ಶಾಸಕರಾಗಿದ್ದ ಮಾಂಬಳ್ಳಿ ಬಿ. ಬಸವಯ್ಯನವರು ಸಹ ಭರಣಯ್ಯನವರ ಬಗ್ಗೆ ಜನರಿಗೆ ತಿಳಿಸಿದ್ದರು.

ಆದರೆ ಭರಣಯ್ಯನವರಿಗೆ ನಮ್ಮ ಹಿರಿಯ ರಾಜಕಾರಣಿಗಳು ಬೆಂಬಲ ಕೊಡಲಿಲ್ಲ. ಇದೂ ಅವರ ಸೋಲಿಗೊಂದು ಕಾರಣ. ಸೋತ ನಂತರ ಕೊಳ್ಳೇಗಾಲಕ್ಕೆ ಎರಡು ಬಾರಿ ಬಂದಿದ್ದರು. "ನಾನು ಸೋತರೂ ಚಿಂತೆಯಿಲ್ಲ, ನೀವು ಸಂಘಟನೆ ಮಾಡಿ" ಎಂದು ಹೇಳುತ್ತಿದ್ದರು. ಅಷ್ಟಾದರೂ ತಮ್ಮ ವಿರುದ್ಧ ಗೆದ್ದ ಸಿದ್ಧಮಾದಯ್ಯನವರ ಬಗ್ಗೆ ಕೆಟ್ಟದಾಗಿ ಮಾತಾಡಲಿಲ್ಲ. "ಸಿದ್ಧಮಾದಯ್ಯನವರು ಒಳ್ಳೆಜನ, ಆದರೂ ಅವರಿಗೆ ವಿಧಾನಸಭೆಯಲ್ಲಿ ಮಾತಾಡುವುದು ಗೊತ್ತಾ? ಏನು ಗೊತ್ತಿದೆ? ಅವರಿಗೆ ಓಟು ಕೊಟ್ಟಿರಿ, ಗೆಲ್ಲಿಸಿದಿರಿ ಸಂತೋಷ, ಆದರೆ ಕೆಲಸ ಮಾಡಿದವರನ್ನು ಗುರುತಿಸಲಿಲ್ಲ" ಎಂದು ಪರೋಕ್ಷವಾಗಿ ನಮ್ಮನ್ನು ಪ್ರಶ್ನಿಸುತ್ತಿದ್ದರು. ನಾವುಗಳು ಅವರ ಮಾತನ್ನು ಕೇಳಿ ಸಾಯಬೇಕಾ? ಇರಬೇಕಾ? ಅನ್ನಿಸುತ್ತಿತು. ಆದರೆ ಈ ರಾಜಕಾರಣಿಗಳು ಅವರನ್ನು ಪರಿಷತ್‌ಗೆ ನಾಮಕರಣ ಮಾಡಬಹುದಿತ್ತು. ಆದರೆ ಅದ್ಯಾವುದು ಆಗಲಿಲ್ಲ. ಒಮ್ಮೊಮ್ಮೆ ನರಸೀಪುರದ ಅವರ ಸ್ನೇಹಿತರ ಜೊತೆ ಚರ್ಚೆಮಾಡುತ್ತಿದ್ದರು. ನಾವಲ್ಲೇ ಹೋಗಿ ನಿಂತು ಕೇಳುತ್ತಿದ್ದೆವು. ನಾವು ಅವರ ಜೊತೆ ಇರುವುದೇ ಭಾಗ್ಯವೆಂದು ತಿಳಿದಿದ್ದೆವು. ಆ ವಿಷಯುವನ್ನು ಬೇರೆಯುವರ ಜೊತೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆವು".

"ಅಂಬೇಡ್ಕರ್ ಸಂವಿಧಾನ ರಚಿಸಿದಾಗ ಅದರ ಬಗ್ಗೆ ನಡೆದ ಸಭೆಯಲ್ಲಿ ಅವುಗಳನ್ನು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳುತ್ತಿದ್ದರಂತೆ. "ಇದು ಈ ಭಾರತ ದೇಶದಲ್ಲಿ

ಉಳಿಯುತ್ತಾ...? ನಮ್ಮ ರಾಜಕಾರಣಿಗಳು ಅನುಷ್ಠಾನಗೊಳಿಸುತ್ತಾರಾ? ಎಂದು ಹೇಳುತ್ತಿದ್ದರಂತೆ. "ಮುಂದೊಬ್ಬ ಮಹಾನ್ ಪುರುಷರು ಹುಟ್ಟುತ್ತಾರೆ. ಅವರಿಂದ ಭಾರತದ ರಾಜಕೀಯ ಚಿತ್ರಣವೇ ಬದಲಾಗುತ್ತದೆ" ಎಂದು ಆಶಿಸುತ್ತಿದ್ದರಂತೆ. ಬಹುಶಃ ಭರಣಯ್ಯನವರನ್ನು ನಾವು ಅಂದು ಆರಿಸಿಕೊಂಡಿದ್ದರೆ ಆಂಥ ಕನಸುಗಳು ಈಡೇರುತ್ತಿದ್ದವೇನೋ ಎಂದೂ ಈಗಲೂ ಅನ್ನಿಸುತ್ತಿದೆ. ನಮ್ಮ ಕೊಳ್ಳೇಗಾಲದ ಜನಕ್ಕೆ ಭರಣಯ್ಯನವರ ಬಗ್ಗೆ ಹೆಚ್ಚು ತಿಳಿಸಿಕೊಟ್ಟವರು ಎಂದರೆ ಬಿ. ಬಸವಯ್ಯನವರು. ಅವರಿಂದಾಗಿಯೇ ಕೊಳ್ಳೇಗಾಲದಲ್ಲಿ ಜನ ಭರಣಯ್ಯನವರನ್ನು ಗೌರವಿಸಲು ಪ್ರಾರಂಭಿಸಿದರು. ವೀರೇಂದ್ರ ಪಾಟೀಲರು ಚುನಾವಣೆ ಮುಗಿದ ನಂತರ ಒಮ್ಮೆ ಕೊಳ್ಳೇಗಾಲಕ್ಕೆ ಬಂದಿದ್ದರು. ಭಾಷಣ ಮಾಡುವಾಗ ದಲಿತ ನಾಯಕರ ಹೆಸರು ಹೇಳುತ್ತಾ ಭರಣಯ್ಯನವರ ವಿಚಾರ ಮಾತಾಡಿದರು. "ನೀವು ಕೊಳ್ಳೇಗಾಲದ ಜನ ನಿಮಗೆ ನೀವೇ ಮೋಸ ಮಾಡಿಕೊಂಡಿರಿ" ಎಂದರು. ಈ ಮಾತು ಕೇಳಿ ಆಗ ನಮಗೆಲ್ಲ ಬೇಸರವಾಯಿತು. ಭರಣಯ್ಯನವರ ಬಗ್ಗೆ ಸರ್ಕಾರದ ಮಟ್ಟದಲ್ಲಿ ತಿಳಿಸುವವರು ಕಡಿಮೆ. ಅವರ ಪುಸ್ತಕ ಹೊರತರುವ ಎಲ್ಲ ಅವಕಾಶಗಳಿದ್ದರೂ ಯಾರೂ ಮನಸ್ಸು ಮಾಡಲಿಲ್ಲ" ಹೀಗೆ ಭರಣಯ್ಯ ಮತ್ತು ಅಂದಿನ ರಾಜಕೀಯ ಚಿತ್ರಣದ ವಿವರಗಳನ್ನು ನಮ್ಮ ಮುಂದೆ ಹರವಿದ ಹೂವಯ್ಯಮೂರ್ತಿ ಕೊನೆಯದಾಗಿ ನುಡಿದದ್ದು ಧರ್ಮದ ಬಗ್ಗೆ.

"ಈ ಪ್ರಪಂಚದ ಜನ ಪೈಗಂಬರನನ್ನು ಮೆಕ್ಕಾದಿಂದ ಓಡಿಸಿದರು. ಏಸುವನ್ನು ಶಿಲುಬೆಗೇರಿಸಿದರು. ಬಸವಣ್ಣನನ್ನು ಅಟ್ಟಾಡಿಸಿ ಹೊಡೆದರು. ಇದೆಲ್ಲವನ್ನು ನೋಡಿದಾಗ ಧರ್ಮ ಏಕೆ ಬೇಕು ಅನ್ನಿಸುತ್ತದೆ. ಧರ್ಮದ ಪೊರೆ ಕಳಚಿ ಆಚೆ ಬರಬೇಕು ಎನ್ನಿಸುತ್ತದೆ. ತನ್ನ ಧರ್ಮದ ಬಗ್ಗೆ ನ್ಯಾಯ, ನೀತಿಯ ಕುರಿತು ಹೋರಾಟ ಮಾಡಿದವರನ್ನು ಈ ಜನಗಳು ಉಳಿಸಿಲ್ಲ" ಎಂದು ನಿಟ್ಟುಸಿರುಬಿಟ್ಟರು. "ಭರಣಯ್ಯನವರಂಥ ವ್ಯಕ್ತಿತ್ವಗಳು ಮೂಡಿಬಂದಲ್ಲಿ ಕಳೆದುಹೋದವೆಲ್ಲ ಮತ್ತೆ ಹುಟ್ಟುತ್ತವೆ" ಎಂದು ಭವಿಷ್ಯ ನುಡಿದರು.

* * *




ಜಾತಿ ಮೀರಿದ ಪ್ರೀತಿ

ಆರ್. ಚಂದ್ರಶೇಖರ್

ಆದರೆ ಅವರಲ್ಲಿದ್ದ ಕಳಕಳಿ, ಬಡವರನ್ನು ಕಂಡರೆ ಅವರಿಗೆ ಏನಾದರೂ ಮಾಡಬೇಕಲ್ಲ ಅನ್ನುವ ಮನೋಭಾವ, ಬಡವರು ಅಂತ ಅವರ ಮನಸ್ಸಿನಲ್ಲಿ ಬಂದ ತಕ್ಷಣ ಅವರಿಗೆ ಏನಾದರೂ ಸಹಾಯ ಮಾಡಲೇಬೇಕು. ಯಾವ ರೀತಿಯಲ್ಲಾದರೂ ಸರಿ – ಏನೂ ಇಲ್ಲ ಅಂದರೆ ಅವರ ಮನೆಯಲ್ಲಿ ಒಂದು ದಿನ ಊಟವಾದರೂ ಮಾಡಿಸಬೇಕು. ಅವರ ವೃತ್ತಿ ಜೀವನದಲ್ಲಿ ಅವರಿಗಿದ್ದ ಚಾಕಚಕ್ಯತೆ ಬಹಳ ಜನಕ್ಕೆ ಬರಲು ಸಾಧ್ಯವಿಲ್ಲ. ನಮ್ಮ Community ಜನರನ್ನೂ ಇತರ ಜನರನ್ನು ಬಹಳ Balanced ಆದ ಮಾರ್ಗದಲ್ಲಿ ಕರೆದೊಯ್ಯುತ್ತಿದ್ದರು.

ನಿವೃತ್ತ ಮುಖ್ಯ ಇಂಜಿನಿಯರ್
ಬೆಂಗಳೂರು



ಜಾತಿ ಮೀರಿದ ಪ್ರೀತಿ

ಆರ್. ಚಂದ್ರಶೇಖರ್

ತಮ್ಮ ಕುಟುಂಬ ಮತ್ತು ಹಿನ್ನೆಲೆ ಬಗ್ಗೆ ಪರಿಚಯ ಮಾಡಿಕೊಡಿ

ನನ್ನ ಕುಟುಂಬದ ಹಿನ್ನೆಲೆ ಎಲ್ಲ ನಿಮಗೆ ಗೊತ್ತಲ್ಲ! ನಾನು ಆರ್. ಚಂದ್ರಶೇಖರ್. ಭರಣಯ್ಯನವರಿಗೆ ಎರಡನೇ ಅಳಿಯ. ನಮ್ಮ ತಂದೆ ಬಿ.ರಾಚಪ್ಪ ಅಂತ. ಸೋಸಲೆಯವರು. ನಮ್ಮ ಕಮ್ಯುನಿಟಿಲಿ ಅವರು ಫಸ್ಟ್ ಗ್ರಾಜ್ಯುಯೇಟ್ ಆಗಿದ್ದರಂತೆ

ಬ್ರಿಟಿಷರ ಕಾಲದಲ್ಲಿ. ಅವರು ಫಸ್ಟ್ ಗ್ರಾಜುಯೇಟ್ ಆಗಿ ಬ್ರಿಟಿಷ್ ಟೈಮಿನಲ್ಲೇ ಅಮಲ್ದಾರ್ ಆಗಿ ನೇಮಕವಾಗಿದ್ದರು. ಕಮೀಷನರ್ ಫಾರ್ ಡಿಪ್ರೆಸ್ಡ್ ಕ್ಲಾಸ್ ಆಗಿ ರಿಟೈರ್ ಆದರು. ಈಗ ಅದನ್ನು social welfare department ಅಂತ ಕರೆಯುತ್ತಾರೆ. ಆವಾಗ, 1947ರಲ್ಲಿ ಸ್ವಾತಂತ್ರ್ಯ ಬಂದಮೇಲೆ ಮೊದಲನೆ ಸರ್ಕಾರ ರಚನೆ ಆಯಿತಲ್ಲ ಆಗ ಸೇವೆಯಲ್ಲಿದ್ದರು ನಮ್ಮ ತಂದೆ. ಅವರು ಇದ್ದ ಸಮಯ ಸುಮಾರು ಕೆಂಗಲ್ ಹನುಂತಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ಅನ್ಸುತ್ತೆ. ಹನುಂತಯ್ಯನವರಿಗೆ ಶೆಡ್ಯೂಲ್ಡ್ ಕಾಸ್ಟ್ ಬಗ್ಗೆ ಬಹಳ ಕಾಳಜಿ ಇತ್ತು. ಈ ಜನಾಂಗವನ್ನು ಇಂಪ್ರೂವ್ ಮಾಡಬೇಕು ಅಂತ ಕಾರ್ಯಕ್ರಮಗಳನ್ನ ಹಾಕಿಕೊಂಡಿದ್ದರು. ಬಹಳ ಆಸಕ್ತಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು.

ಕೆಂಗಲ್ ಅವರ ಬಗ್ಗೆ ಒಂದು ಇಂಟರೆಸ್ಟಿಂಗ್ ಸಂಗತಿ ಹೇಳುತ್ತೀನಿ. ಏನೆಂದರೆ ಅವರು ಯಾವಾಗ ಇಂಟರೆಸ್ಟ್ ತೆಗೆದುಕೊಂಡರು ಅಂದರೆ, ಹನುಮಂತಯ್ಯನವರು ಮೊದಲ ಬಾರಿಗೆ ಶೆಡ್ಯೂಲ್ಡ್ ಕಾಸ್ಟ್ ಬಗ್ಗೆ ಒಂದು "ಇಂಟರ್ ಕಾಸ್ಟ್ ಡಿನ್ನರ್" ಅಂತ ಮಾಡಿದರು. ಆ ಡಿನ್ನರ್‌ನ ಲಾಲ್‌ಬಾಗ್‌ನಲ್ಲಿ ಅರೇಂಜ್ ಮಾಡಿದ್ದರು. ಆವಾಗ ನಾನು ಓದ್ತಾ ಇದ್ದೆ. ಅದಕ್ಕೆ ಹಿನ್ನೆಲೆಯಲ್ಲಿ ನನ್ನ ಬ್ರದರ್ ಒಬ್ಬರು ಇದ್ದರು ಸೋಮಶೇಖರ್ ಅಂತ. He was studying in engineering college. He was a big orator. ಇಂಗ್ಲಿಷ್‌ನಲ್ಲಿ ಬಹಳ ಚೆನ್ನಾಗಿ ಮಾತಾಡೋನು.

ಅಷ್ಟರೊಳಗೆ ನಮ್ಮ ಕಾಲೇಜಿನಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಸೆಂಟಿನರಿ ಮಾಡಿದೆವು. ಆ ಸಮಾರಂಭದಲ್ಲಿ ಕೆಂಗಲ್ ಹನುಮಂತಯ್ಯನವರು ಮುಖ್ಯ ಅತಿಥಿ. ಸರ್.ಎಂ. ವಿಶ್ವೇಶ್ವರಯ್ಯನವರನ್ನು ನಮ್ಮ ಕಾಲೇಜಿಗೆ ಕರೆದಿದ್ದೆವು. ಆವಾಗ ನಾನು ಫೈನಲ್ ಇಯರ್‌ನಲ್ಲಿ ಇದ್ದೆ. ಬ್ರದರ್‌ದು ಕೋರ್ಸ್ ಮುಗಿದಿತ್ತು. ಆ ಸೆಂಟಿನರಿ ಮಾಡಿದಾಗ ಕಾಲೇಜಿನಲ್ಲಿ ನನ್ನ ಬ್ರದರ್‌ನ ಕರೆದು, ಮಾತಾಡಬೇಕು ಅಂತ ಕೇಳಿಕೊಂಡಾಗ ನನ್ನ ಬ್ರದರ್ ಆ ಫಂಕ್ಷನ್‌ನಲ್ಲಿ ಮಾತಾಡಿದರು. ಆವಾಗ ಹನುಂತಯ್ಯನವರು ಇವನು ಯಾರು? ಈ ಹುಡುಗ ಇಷ್ಟು ಚೆನ್ನಾಗಿ ಮಾತಾಡುತ್ತಾನೆ! ಅಂತ ಅವರಿಗೆ ಮನಸ್ಸಿನಲ್ಲಿ ಬಹಳ ಖುಷಿಯಾಯಿತು. ಯಾರು ಅಂತ ಕೇಳಿದರು. ನನ್ನ ಬ್ರದರ್ ರಾಚಪ್ಪನವರ ಮಗ ಅಂತ ಗೊತ್ತಾದಮೇಲೆ 'ರಾಚಪ್ಪ ನಿನ್ನ ಮಗ ಬಹಳ ಚೆನ್ನಾಗಿ ಮಾತಾಡುತ್ತಾನಲ್ಲ' ಅಂತ ನಮ್ಮ ತಂದೆಯವರ ಬಳಿ ಹೊಗಳಿದ್ದರಂತೆ. ಅದಾದ ಕೆಲವು ತಿಂಗಳಲ್ಲಿ ಒಂದು ಇಂಟರ್ ಕ್ಯಾಸ್ಟ್ ಡಿನ್ನರ್‌ಗೆ ನಮ್ಮನ್ನು ಕರೆಸಿದರು. ನಾನು ತಿಳಿದುಕೊಂಡ ಹಾಗೆ ಹನುಮಂತಯ್ಯನವರು He was dead against to Brahmins. ಅವರನ್ನ ಕಂಡರೆ ಆಗುತ್ತಿರಲಿಲ್ಲ. ಶೆಡ್ಯೂಲ್ಡ್ ಕಾಸ್ಟ್‌ನವರು

ಮುಂದೆ ಬರಲಿಕ್ಕೆ ಇವರು ಬಿಡುವುದಿಲ್ಲ. ಇವರದೇ ಒಂದು ಥರ ಅಂತ ಅವರು ಅಂದುಕೊಂಡಿದ್ದರು ಹೀಗಂತ ಜನ ಆಗಾಗ ಮಾತಾಡಿಕೊಳ್ಳೋರು.

ಆ ಸಮಯದಲ್ಲಿ ಭರಣಯ್ಯನವರು ಆಗಷ್ಟೆ ಅಧಿಕಾರಕ್ಕೆ ಸೇರಿದ್ದರು. ಅವರು ತಾಯಿ ಕಡೆಯಿಂದ ಮೆಟರ್ನ್ ಅಂಕಲ್ ಆಗಬೇಕು ನನಗೆ. ಅಂದರೆ ಇವರದ್ದು ಸೋಮನಾಥಪುರ. ನಮ್ಮ ತಾಯಿಯ ಊರು ಕೂಡ ಸೋಮನಾಥಪುರ.

ನೀವು ಎಲ್ಲೆಲ್ಲಿ ಕೆಲಸ ಮಾಡಿದ್ದೀರಿ?

ಲೋಕೋಪಯೋಗಿ ಇಲಾಖೆಯಲ್ಲಿ ಮೊದಲು ಬೆಂಗಳೂರಿನಲ್ಲಿ ಇದ್ದೆ. ಯಾಕೆ ಅಂದರೆ ನನಗೆ ಯಾವುದೋ ಸಂದರ್ಭದಲ್ಲಿ ಬಸವಲಿಂಗಪ್ಪನವರು ಪರಿಚಯ ಆಗಿಬಿಟ್ಟರು. ಆಮೇಲೆ ಅವರು ನನಗೆ ಮತ್ತೆಮತ್ತೆ ಹೇಳಿಕಳಿಸಿದರು. And he was doubtful! ಅಂದರೆ ಇವರೆಲ್ಲ ಆಫೀಸರ್ಸ್ ಮಕ್ಕಳು, ಏನು ಮಾಡುತ್ತಾರೆ? ಇವರೆಲ್ಲ ಬಹಳ ಅನುಕೂಲಸ್ಥರು. ಏನೂ ಮಾಡಲ್ಲ ಅಂತ ಅವರ ಮನಸ್ಸಿನಲ್ಲಿ! ಬಸವಲಿಂಗಪ್ಪನವರು ನನಗೆ ಹೇಳಿಕಳಿಸಿದಾಗ ಹೋದೆ. ಅವರಿಗೆ ಆಗಲೂ ಅನುಮಾನ! 'ನೋಡೋಣ ಇವನೇನಾದರೂ ಹೇಳಿದ ಕೆಲಸ ಮಾಡುತ್ತಾನಾ? ಅನುಕೂಲ ಆಗ್ತಾನಾ ಇವನು' ಅಂತ! ನನ್ನನ್ನ ಒಂದೆರಡು ಸಲ ಪರೀಕ್ಷೆ ಮಾಡಿದರು. ನಾನು ಅವರು ಹೇಳಿದ್ದನ್ನೆಲ್ಲ ಮಾಡಿದೆ. Then he started liking me! ಯಾಕೆಂದರೆ ಯಾವುದಾದರೂ ಸ್ಕೀಮ್ ಅವರ ಡಿಪಾರ್ಟ್‌ಮೆಂಟಿನಲ್ಲಿ ಇದ್ದಿದ್ದನ್ನು ನೋಡಿ ನನಗೆ ಗೊತ್ತಿದ್ದವರಿಗೆ ಹೇಳುತ್ತಿದ್ದೆ. ಹಾಗೇ ಬರ್ತಾ ಬರ್ತಾ ಅವರು ನನ್ನನ್ನ ಇಷ್ಟಪಡೋಕೆ ಶುರುಮಾಡಿದರು. ಅವರು ಇರೋವರೆಗೂ ಯಾರಿಗೂ ನನ್ನ ಮಾತಾಡಿಸೋಕೆ ಆಗಲಿಲ್ಲ ಡಿಪಾರ್ಟ್‌ಮೆಂಟಿನಲ್ಲಿ! ಎಲ್ಲಿ ಹೋದರೂ ಚೆನ್ನಾಗಿ ಕೆಲಸ ಮಾಡುತ್ತೀನಿ. ಶೆಡ್ಯೂಲ್ಡ್ ಕಾಸ್ಟ್‌ಗೆ ಕೈಲಾದ ಸಹಾಯ ಮಾಡುತ್ತೀನಿ ಅಂತ ಗೊತ್ತಾಯಿತು ಅವರಿಗೆ.

ನಿಮ್ಮ ಮಾವನವರಲ್ಲಿ ಕಾಣುವ ವಿಶೇಷತೆ ಏನು?

He became the leader of our society. ನಮ್ಮ ತಂದೆಯವರದ್ದು ಮಾವನವರದ್ದು ಎಲ್ಲ ದೊಡ್ಡ ಕುಟುಂಬ. ನಮ್ಮ ಕುಟುಂಬದಲ್ಲಿ ಎಲ್ಲರೂ ಓದಿದವರೇ. ಅಂದರೆ ಆವಾಗಿನ ಆಫೀಸರ್ಸ್ ಬಹಳ ಸಿನ್ಸಿಯರ್ ಆಗಿ ಇರುತ್ತಿದ್ದರು. ಆವಾಗ ಕೆಲಸ ಅಂದರೆ ಬರೀ ಸರ್ಕಾರದ ಕೆಲಸ. ಫಸ್ಟ್‌ಕ್ಲಾಸ್ ಆಗಿ ಮಾಡೋರು! ಭರಣಯ್ಯನವರೂ ಸಹ ಹೋದ ಇಲಾಖೆಯಲ್ಲೆಲ್ಲ ಹೆಸರು ಸಂಪಾದಿಸಿದ್ದಾರೆ. ನಮ್ಮ ತಂದೆ ಕೂಡ ಬ್ರಿಟಿಷ್ ಟೈಮಿನಲ್ಲೆ He had done a good name.

ನಿಮ್ಮ ಮಾವನವರ ಜೊತೆಗಿನ ನಿಮ್ಮ ಇತರೆ ವಿಶೇಷ ನೆನಪುಗಳನ್ನು ಹಂಚಿಕೊಳ್ಳಿ.

ಒಂದೇ ಒಂದು ಮಾತಿನಲ್ಲಿ ಹೇಳಬೇಕು ಅಂದರೆ, ಅವರು ಒಳ್ಳೆ ತಂದೆ ಆಗಿದ್ದರು. ಒಳ್ಳೆ ಮಾವನವರಾಗಿದ್ದರು. ಅದೆಲ್ಲಕ್ಕಿಂತಲೂ ಒಬ್ಬ ಜನಾನುರಾಗಿಯಾಗಿ ಬದುಕಿದವರು; ಅವರನ್ನ ಬಿಟ್ರೆ ಇನ್ನೊಬ್ಬರಿಲ್ಲ ಅಂತ ನನಗನ್ನಿಸುತ್ತದೆ. ನಾವೂ ಸರ್ವಿಸಿನಲ್ಲಿದ್ದು ಅಷ್ಟಿಷ್ಟು ಮಾಡಿದೀವಿ. ಆದರೆ ಅವರಲ್ಲಿದ್ದ ಕಳಕಳಿ, ಬಡವರನ್ನ ಕಂಡರೆ 'ಅವರಿಗೆ ಏನಾದರೂ ಮಾಡಬೇಕಲ್ಲ' ಅನ್ನುವ ಮನೋಭಾವ, ಬಡವರು ಅಂತ ಅವರ ಮನಸ್ಸಿನಲ್ಲಿ ಬಂದ ತಕ್ಷಣ ಅವರಿಗೆ ಏನಾದರೂ ಸಹಾಯ ಮಾಡಲೇಬೇಕು – ಯಾವರೀತಿಯಲ್ಲಾದರೂ ಸರಿ. ಏನೂ ಇಲ್ಲ ಅಂದರೆ ಅವರ ಮನೆಯಲ್ಲಿ ಒಂದು ದಿನ ಊಟಾನಾದರೂ ಮಾಡಿಸಬೇಕು. ಆ ರೀತಿ ಇತ್ತು ಅವರ ಕಳಕಳಿ.

ನಮಗೂ ಕಾಳಜಿ, ಅನುಕಂಪ ಎಲ್ಲ ಇತ್ತು ಬಡವರನ್ನು ಕಂಡರೆ. ಆದರೆ ಅವರಿಗೆ ಇದ್ದಷ್ಟು ಇನ್ನೊಬ್ಬರಿಗೆ ಇರಲಿಲ್ಲ ಅಂತ ನನಗನ್ನಿಸುತ್ತೆ. ಅಷ್ಟು ಸ್ಪಂದಿಸುತ್ತಿದ್ದರು ಬಡವರನ್ನ ಕಂಡರೆ. ಅದು ಅವನು ಕೆಲಸಕ್ಕೆ ಬರಲಿ ಅಥವಾ ಇನ್ನಾವುದಕ್ಕೇ ಬರಲಿ, ಸರ್ಕಾರಿ ಸೇವೆಯಲ್ಲಿದ್ದಾಗ ಬರಲಿ.... ಅಂದರೆ ಆಫೀಸರ್ಸ್ ಕಂಡರೆ ಓದಬೇಕು, ಓದಿ ಬಡವರಿಗೆ ಸಹಾಯ ಮಾಡಬೇಕು ಅಂತೆಲ್ಲ ಹೇಳುತ್ತಿದ್ದರು. ಅವರು ಮಾತಾಡುವಾಗ, ಬೇರೆಯವರ ಜೊತೆಯಲ್ಲಿ ಕೆಲಸ ಮಾಡುವಾಗ ಮುಖ್ಯವಾಗಿ ಅವರಲ್ಲಿ ಕಂಡುಬರುತ್ತಿದ್ದುದ್ದು ಅವರ ಕಳಕಳಿ. ಬಡಬಗ್ಗರಿಗೆ ಏನಾದರೂ ಸಹಾಯ ಮಾಡಬೇಕು, ಯಾವ ರೀತಿಯಲ್ಲಾದರೂ ಸಹಾಯ ಮಾಡಲೇಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಇರುತ್ತಿತ್ತು.

ನಿಮ್ಮ ತಂದೆಯವರ ಕೆಲಸದಲ್ಲೂ, ನಿಮ್ಮ ಮಾವನವರು ಮಾಡಿಕೊಂಡು ಬಂದ ಕೆಲಸದಲ್ಲೂ ಏನು ವ್ಯತ್ಯಾಸ ಗುರುತಿಸುತ್ತೀರಿ ನೀವು?

ನಮ್ಮ ತಂದೆ ಸರ್ಕಾರಿ ಕೆಲಸದಲ್ಲಿ ಇದ್ದರು. ಎಲ್ಲರಿಗೂ ಸಹಾಯ ಮಾಡಿದರು. ಬಡವರನ್ನ ಕಂಡರೆ ಅವರಿಗೂ ಕಳಕಳಿ ಇತ್ತು. ಆದರೆ ನಮ್ಮ ಮಾವನವರದೆ ಒಂದು ವಿಶೇಷ! ಒಂದು ರೀತಿ ಇತ್ತು. ಇವರಿಗೆ ಜಾಸ್ತಿ ಕಳಕಳಿ. ಅದಕ್ಕೆ ಒಂದು ಕಾರಣ ಏನು ಅಂದರೆ ನಮ್ಮ ತಂದೆ ಇದ್ದಿದ್ದು ಪೂರ್ತಿ ಬ್ರಿಟಿಷ್ ಅವಧಿಯಲ್ಲಿ. ಬ್ರಿಟಿಷರ ಕಾಲದ ಪರಿಸ್ಥಿತಿ ಏನು ಅಂತ ನಿಮಗೆ ಗೊತ್ತು. ಡಾ॥ ಅಂಬೇಡ್ಕರ್ ಅವರೇ ಒದ್ದಾಡಿದರು. ಏನೂ ಮಾಡೋಕೆ ಆಗುತ್ತಿರಲಿಲ್ಲ ಆವಾಗ. ಎಲ್ಲಾನೂ ನಮ್ಮ ವಿರುದ್ಧವಾಗೇ ಕೆಲಸ ಮಾಡೋರು. ಆ ಬ್ರಿಟಿಷ್ ಅವಧಿಯಲ್ಲಿದ್ದಾಗ ಅವರಿಗೆ

ಇಷ್ಟು ಸ್ವಾತಂತ್ರ್ಯ ಇರಲಿಲ್ಲ. ಆದರೆ ಇವರು ಇದ್ದಿದ್ದರಲ್ಲೇ ಏನು ಸರ್ಕಾರಿ ಯೋಜನೆಗಳಿವೆ ಅದನ್ನ ಕಡುಬಡವರಿಗೆ ತಲುಪಿಸುವುದರಲ್ಲಿ ಅತ್ಯಂತ ಮುತುವರ್ಜಿ ವಹಿಸಿದರು. ಮತ್ತು ತಮ್ಮ ಜೀವನದಲ್ಲಿ ಅದನ್ನ ಸಾಧಿಸಿದರು.

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿ ನೆನಪಾಗುತ್ತಿದೆ ನನಗೆ. ಏನೆಂದರೆ, ನಾಗರಾಜ್ ಅಂತ ಶಾಸಕರು ಇದ್ದರು, ಕೋಟೆ ಕಡೆಯವರು. ಅವರು ಒಂದು ಸಮಾರಂಭದಲ್ಲಿ ಮಾತನಾಡುತ್ತ ಒಂದು ವಿಚಾರ ಹೇಳಿದರು. "ನೋಡ್ರೀ ನೀವೆಲ್ಲ ಆಫೀಸರ್ಸ್ ಆಗಿ ನಿವೃತ್ತಿ ಆದ ತಕ್ಷಣ ಏನು ಮಾಡುತ್ತೀರಾ? ರಿಟೈರ್ಡ್ ಆದಾಗ ಬಂದ ದುಡ್ಡಿರುತ್ತೆ ಕೈಯಲ್ಲಿ; ನಾಕೈದು ಕಡೆ ಮನೆ ಮಾಡಿಕೊಂಡು ಆರಾಮವಾಗಿ ಇದ್ದುಬಿಡುತ್ತೀರ. ಎಲ್ಲಿಂದ ಬಂದಿದೀವಿ? ಬಂದಂತಹ ಸಮಾಜಕ್ಕೆ ಏನಾದರೂ ಮಾಡಬೇಕು ನಾನು ಅಂತ ಯೋಚನೆ ಮಾಡದೆ ಆರಾಮವಾಗಿ ಇದ್ದುಬಿಡುತ್ತೀರ." ಅದಕ್ಕೆ ನಮ್ಮ ಭರಣಯ್ಯನವರ ಸೇವೆ ಮತ್ತು ಕಾರ್ಯಶೈಲಿಯನ್ನು ತಿಳಿಸಿ, ಅವರಂತೆ ಒಳ್ಳೆಯ ಕೆಲಸ ಮಾಡಬೇಕು ಎಂದು ಉದಾಹರಣೆ ನೀಡಿದರು.

ಹೀಗೆ ಭರಣಯ್ಯನವರು ಎಲ್ಲೆಲ್ಲಿ ಸರ್ವಿಸ್ ಮಾಡಿದಾರೋ ಅಲ್ಲೆಲ್ಲಾ ಜನಾಂಗದ ಬಗ್ಗೆ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಇದೇ ಕೆಲಸ. ಶೆಡ್ಯೂಲ್ಡ್ ಕಾಸ್ಟ್ ಯಾರಾದರೂ ಕಾಲೋನಿಯಲ್ಲಿ ಸಿಕ್ಕಿದರು ಅಂದರೆ ಅವರಿಗೆ ಸಹಾಯ ಮಾಡೋದು; ಪರೋಕ್ಷವಾಗಿಯಾದರೂ! ಈ ಕಳಕಳಿ ನಮ್ಮ ಜನರಲ್ಲಿ ಇರುವುದು ಬಹಳ ಕಮ್ಮಿ. ಅವನು ನನ್ನ ಸಂಬಂಧಿಕನೇ ಅಂತ ಅಂದುಕೊಂಡು ಸಹಾಯ ಮಾಡೋಕೆ ಹೋಗುತ್ತಿದ್ದರು. ಅವನು ಯಾವನಾದರೂ ಆಗಲಿ. ಬೇಕಾದರೆ ಬಟ್ಟೆ ಹರಿದುಕೊಂಡು ಬರಲಿ, ಹೋ! ಇವನಿಗೇನಾದರೂ ಮಾಡಬೇಕಲ್ಲಪ್ಪ ಅಂತ. ಇದ್ದಕ್ಕಿದ್ದಂಗೆ ಅವರಿಗೆ ಏನಾದರೂ ಮಾಡಬೇಕು ಅನ್ನಿಸೋದು ಅವನಿಗೇನಾದರೂ ಒಂದೆಕರೆ ಭೂಮಿ ಕೊಡೋಕೆ ಅವಕಾಶ ಇದ್ದರೆ, ಸರಿ ತಗೊ ಅಂತ ಕೊಟ್ಟೇಬಿಡೋರು!

ಅವರ ಸೌಮ್ಯತೆ, ಆಮೇಲೆ ಬಡವರ ಬಗ್ಗೆ ಅನುಕಂಪ, ಆಸಕ್ತಿ ತೋರಿಸುವ ಗುಣ ಅವರಷ್ಟು ಇದ್ದದ್ದು ನಾನು ಇನ್ಯಾವ ಐ.ಎ.ಎಸ್. ಅಧಿಕಾರಿಗಳಲ್ಲೂ ನೋಡಲಿಲ್ಲ; ನಮ್ಮಲ್ಲೂ ಇಲ್ಲ! And he was very tough. ಯಾರಿಗೂ ಹೆದರುತ್ತಿರಲಿಲ್ಲ. ನಾನು ಅವರ ಜೊತೆಯಲ್ಲಿ ಎಸ್.ಸಿ.–ಎಸ್.ಟಿ. ಮೀಟಿಂಗಿಗೆಲ್ಲ ಹೋಗುತ್ತಿದ್ದೆ. ಇವರನ್ನು ಕಾಣಲು ಯಾರಾದರೂ ಬಡವರು ಬರುತ್ತಾರೆ ಎಂದರೆ ನಾಲ್ಕು ಗಂಟೆ ಆದರೂ ಊಟ ಮಾಡದೆ ಕಾಯ್ದುಕೊಂಡು ಇರುತ್ತಿದ್ದರು, ಅದೂ ಹಳ್ಳಿಗಳಲ್ಲಿ! ಈಗ ಅಂಥವರನ್ನ ಎಲ್ಲಿ ನೋಡ್ತೀರಿ!?

ಭರಣಯ್ಯನವರು ಜನೋಪಕಾರಿ, ಜನಾನುರಾಗಿ ಸರಿ. ಅದಕ್ಕಿಂತ ಆಚೆಗೆ ಅವರ ವ್ಯಕ್ತಿತ್ವ ಏನು? ಸಮುದಾಯ ಅವರನ್ನ ಅಷ್ಟು ಗೌರವಿಸುತ್ತೆ ಏಕೆ? ತೀವ್ರವಾಗಿ ಪ್ರೀತಿಸುತ್ತೆ ಅನ್ಸುತ್ತೆ?

ಅವರ ಕಳಕಳಿ. ಅವರ ಕೆಲಸದ ಚಾಕಚಕ್ಯತೆ ಬಹಳ ಚೆನ್ನಾಗಿತ್ತು. ಏನು ಅಂದರೆ ಈವಾಗ 10 ಜನಕ್ಕೆ ಪ್ರಮೋಷನ್ ಕೊಡಬೇಕು. ಅವರಲ್ಲಿ ಶೆಡ್ಯೂಲ್ ಕಾಸ್ಟ್ ಯಾರೂ ಇಲ್ಲ. ಅದೆಲ್ಲಿಂದಲೋ ಅವರನ್ನ ಹುಡುಕಿ ತಂದು ಆ ಒಂದಿಬ್ಬರನ್ನು ಸೇರಿಸಿ ಅವರಿಗೂ ನಿಯಮಾನುಸಾರ ಪ್ರಮೋಷನ್ ಕೊಡುವುದು. ಉಳಿದದ್ದು ಬೇರೆಯವರಿಗೆ. ಹೀಗೆ ಎರಡೂ ಕ್ಲಾಸ್‌ಗಳನ್ನು ಬ್ಯಾಲೆನ್ಸ್ ಮಾಡಿದರೆ ಯಾರಿಗೂ ಬೇಸರ ಆಗುವುದಿಲ್ಲ. ಯಾರೂ ಗಲಾಟೆ ಮಾಡುವುದಿಲ್ಲ ಅಂತ ಹಾಗೆ ಮಾಡುತ್ತಿದ್ದರು. ಉಳಿದ ಎರಡರಲ್ಲಾದರೂ ನಮ್ಮ ಕೆಲಸ ಮಾಡಿಕೊಳ್ಳಬಹುದಲ್ಲ ಅಂತ. ಅವರ ಯೋಚನೆ ಏನು ಅಂದರೆ ಯಾವ ರೀತಿಯಲ್ಲಾದರೂ, ಯಾವ ಪ್ರಾಜೆಕ್ಟೇ ಆಗಲಿ ಅಥವಾ ಯಾವುದರಲ್ಲಿ ಏನು ಬಂದರೂ ಮೊದಲು ಅವರ ಮನಸ್ಸಿಗೆ ಬರುತ್ತಿದ್ದುದು ಯಾರದರೂ ಶೆಡ್ಯೂಲ್ ಕಾಸ್ಟ್ ಇದಾನಾ? ಯಾಕಿಲ್ಲ? ನೇಮಕಾತಿ ಆಗಲಿ, ಮತ್ತೇನೋ ಸಹಾಯ ಮಾಡುವುದಕ್ಕೆ ಆಗಲಿ, ಭೂ ಹಂಚಿಕೆ ಆಗಿರಲಿ ಯಾರಾದರೂ ಶೆಡ್ಯೂಲ್ಡ್ ಕ್ಯಾಸ್ಟ್ ಇರಬೇಕು ಅಲ್ಲಿ! That was his concern! ಮೊದಲು ಅವರ ಕಾಳಜಿ, ಆದ್ಯತೆ ಶೆಡ್ಯೂಲ್ ಕಾಸ್ಟ್, ಅದು ಯಾವ ಪ್ರಾಜೆಕ್ಟ್ ಆದರೂ ಕೂಡ! ಇದೇ ಅವರನ್ನು Community ಜನ ಪ್ರೀತಿಸುವುದಕ್ಕೆ ಮತ್ತು ಗೌರವಿಸುವುದಕ್ಕೆ ಇರುವ ಮುಖ್ಯ ಕಾರಣಗಳು.

ಭರಣಯ್ಯನವರ ಜೊತೆ ನಿಮ್ಮ ಇಂಟರ್‍ಯಾಕ್ಷನ್ ಯಾವ ರೀತಿ ಇತ್ತು?

ಚಿಕ್ಕವನಿದ್ದಾಗ ಮನೆಗೆ ಬರುತ್ತಿದ್ದರು. ಆಮೇಲೂ ಆಗಾಗ ಬರುತ್ತಿದ್ದರು. ನಂದೇನಾದರೂ ಸಮಸ್ಯೆಗಳಿದ್ದರೆ ನನಗೆ ಗೈಡ್ ಮಾಡೋರು. ಪೋಸ್ಟಿಂಗ್ಸ್ ಯಾರಿಗಾದರೂ ಬೇಕು ಅಂತ ಹೇಳಿದಾಗ ಅದಕ್ಕೆ ಸಹಾಯ ಮಾಡೋರು. ಒಬ್ಬ ಶೆಡ್ಯೂಲ್ಡ್ ಕಾಸ್ಟ್ ವ್ಯಕ್ತಿ ಹೋಗಿ ನನಗೆ ಇಂಥ ತೊಂದರೆ ಇದೆ ಅಂತ ಹೇಳಿದರೆ ತಕ್ಷಣ ಸಹಾಯ ಮಾಡೋರು. ಯಾರ ಶಿಫಾರಸ್ಸೂ ಬೇಕಾಗಿರಲಿಲ್ಲ.! ನಾನೂ ಹೇಳಬೇಕಾಗಿರಲಿಲ್ಲ. ನನಗೆ ತಿಳಿದಂತೆ ಅವರಿಗೆ ಬೇರೆ ಯಾವುದೇ ಆಸೆ ಇರಲಿಲ್ಲ. ಮನೆ, ಆಫೀಸು, ಕೆಲಸ, ಮನೆ ಇಷ್ಟೇ!

ಏನು ಅಂದರೆ ಸರ್ವಿಸಿನಲ್ಲಿ ನಾನು ನೋಡಿದಹಾಗೆ ಎಲ್ಲರೂ ಒಟ್ಟಿಗೆ ಇದ್ದರೆ ಶೆಡ್ಯೂಲ್ಡ್ ಕಾಸ್ಟ್‌ಗೆ ಸಹಾಯ ಮಾಡಬಹುದು. ಅವರದ್ದು ವಿಶೇಷವಾದ ಸಂಗತಿ ಅಂದರೆ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವುದು. ಅವರು ಮಾಡಿದ್ದನ್ನು

ಯಾರೂ ಬೇಡ ಅನ್ನುತ್ತಿರಲಿಲ್ಲ. ಆ ವಿಚಾರದಲ್ಲಿ ಅವರು ತಪ್ಪು ಮಾಡುತ್ತಿರಲಿಲ್ಲ. Other communities also liked him. That is the good effect ಬೇರೆ ಕಮ್ಯುನಿಟಿಯವರು ಅವರು OBC ಆಗಿರಬಹುದು, Even ಲಿಂಗಾಯಿತರು, ಒಕ್ಕಲಿಗರು, ಬ್ರಾಹ್ಮಣರು – ಯಾರಾದರೂ ಆಗಿರಬಹುದು. ಎಲ್ಲರಿಗೂ ಅವರನ್ನು ಕಂಡರೆ ಗೌರವ. ಏಕೆಂದರೆ ಎಲ್ಲರನ್ನೂ ಒಂದೇತರ ಟ್ರೀಟ್ ಮಾಡೋರು. ಯಾರಿಗೂ ವಿರೋಧ ಆಗಿ ಮಾತನಾಡುತ್ತಿರಲಿಲ್ಲ. ಆದರೆ ಜಾಸ್ತಿ ಅನುಕಂಪ ಇದ್ದಿದ್ದು ದಲಿತ ಜನತೆಯ ಕಡೆಗೆ.

ಆಗಾಗ ಒಂದು ಉದಾಹರಣೆ ನನಗೆ ಹೇಳುತ್ತಿದ್ದರು "ನಮಗೆ ಅಧಿಕಾರದ ಅವಕಾಶ ಸಿಕ್ಕಾಗ ನಮ್ಮ ಜನಕ್ಕೆ ಉಪಯೋಗ ಮಾಡಬೇಕು ಅನ್ನಿಸಿದಾಗ ವರ್ಗಾವಣೆಯೋ; ಉದ್ಯೋಗ ನೀಡುವಾಗಲೋ ಆಯ್ಕೆ ಮಾಡುವ ಸಮಯದಲ್ಲಿ 10 ಜನರನ್ನ ಸೆಲೆಕ್ಟ್ ಮಾಡುವಾಗ ಮಧ್ಯದಲ್ಲಿ 4–5 ಶೆಡ್ಯೂಲ್ಡ್ ಕಾಸ್ಟ್‌ನವರನ್ನು ಮಾಡಿದಾಗ ಯಾರಿಗೂ ಹರ್ಟ್ ಆಗಲ್ಲ. ಇವರು ಬರೀ ಶೆಡ್ಯೂಲ್ಡ್ ಕಾಸ್ಟ್‌ಗೆ ಮಾಡಿದ್ದಾರೆ ಅಂತ ಯಾರೂ ಗಲಾಟೆ ಮಾಡಲ್ಲ." ಎನ್ನುತ್ತಿದ್ದರು. ಇದು ಅವರ ಮೆಥೆಡ್! ಸಹಾಯ ಮಾಡೋಕೆ ಒಂದು ದಾರಿ. ಹೇಗಾದರೂ ಮಾಡಿ ನಮ್ಮ ಜನರು ಮುಂದೆ ಬರಲಿ ಎಂಬುದೇ ಅವರ ಈ ಮನೋಭಾವಕ್ಕೆ ಕಾರಣ.

ಸರ್ವಿಸ್ ವಿಷಯಗಳನ್ನ ಬಿಟ್ಟು ಮತ್ತೆ ಯಾವ ವಿಷಯಗಳನ್ನ ನೀವು ಚರ್ಚೆ ಮಾಡುತ್ತಿದ್ದಿರಿ?

ಹಲವಾರು ವಿಷಯಗಳನ್ನು ಚರ್ಚೆ ಮಾಡುತ್ತಿದ್ದೆವು. ಆದರೆ ನಾವು ರಾಜಕೀಯವನ್ನ ಚರ್ಚೆ ಮಾಡುತ್ತಿರಲಿಲ್ಲ.

ಅವರು ಚುನಾವಣೆಗೆ ನಿಂತಾಗ?

ಆವಾಗ ನಾವು ಸಹಜವಾಗೇ ಮಾರಲ್ ಸಪೋರ್ಟ್‌ಗೆಂದು ಮಾತ್ರ ಹೋಗಿದ್ದೆವು ಹೊರತು ಇತರೆ ಕಾರಣಗಳಿಗಲ್ಲ! ನೋಡಿ ರಾಜಕೀಯ ಅಂದರೆ ಹೇಗೆ ಆಗುತ್ತೆ ಅಂತ! ನಮ್ಮ ತಂದೆಯವರು ಹೆಚ್.ಡಿ. ಕೋಟೆಯಲ್ಲಿ ನಿಂತಾಗಲೂ ಸೋತರು. ಇವರೂ ಸೋತರು. Because of just politics! ಇವರಿಗೆ ಮಾಡಿದ್ದೂ ಇದೇ ಥರ. ಎಲ್ಲ ರಾಜಕೀಯ! So politics is different from administration. ಎಷ್ಟೇ ಸಹಾಯ ಮಾಡಿದ್ದರೂ ಕೂಡ ನಮ್ಮ ಜನಕ್ಕೆ ಕೃತಜ್ಞತೆ ಇಲ್ಲದೇ ಹೋಯಿತು. ನಾನು ಎರಡು ದಿನ ಹೋಗಿ ಇದ್ದೆ ಕೊಳ್ಳೇಗಾಲದಲ್ಲಿ. ಅವರ ಎದುರಿಗೆ ನಿಂತವರು

ಸಿದ್ಧಮಾದಯ್ಯ ಅಂತ. ಅವರೊಬ್ಬ ಮುಗ್ಧರಾದ ಒಬ್ಬ ಅನಕ್ಷರಸ್ಥ! ಅವರು ಆ ಹಳ್ಳಿಯ ಮಟ್ಟದಲ್ಲಿ He was more popular. Popular in the sense ಇವನು ನಮ್ಮ ಕೈಗೆ ಸಿಗುತ್ತಾನೆ ಅಂತ. ಯಾಕೆ ಅಂದರೆ ಬಂದು ನಮ್ಮ ಪಕ್ಕ ಕುಳಿತುಕೊಳ್ಳುತ್ತಾನೆ. ಇವರು ಭರಣಯ್ಯನವರು ಜನೋಪಕಾರಿ, ಒಳ್ಳೆಯವರು ಎಲ್ಲ ಸರಿ. ಆದರೆ ಅವರು ದೊಡ್ಡ ಆಫೀಸರ್, ಅಂತ ಅವರ ಭಾವನೆ. ಇವರು ನಮಗೆ ಎಟುಕುವವರಾ!? ಎಂಬ ಮನೋಧರ್ಮ ಅಷ್ಟೆ. ನಾವು ಹಳ್ಳಿಗಳಲ್ಲಿ ಎಷ್ಟೋ ಸಲ ಕೆಳಗಡೆ ಕುಳಿತುಕೊಂಡು ಮಾತಾಡೋದಿಲ್ವಾ? ಆದರೂ ಇವರು ಅಲ್ಲಿ ಬೆಂಗಳೂರಿನಲ್ಲಿ ಇರುತ್ತಾರೆ ನಮಗೆ ಹೇಗೆ ಸಹಾಯ ಮಾಡುತ್ತಾರಪ್ಪಾ? ಅಂತ ಆ ಜನ ತಪ್ಪು ತಿಳಿದುಕೊಂಡುಬಿಟ್ಟಿದ್ದರು. ಆದರೆ ಸಿದ್ಧಮಾದಯ್ಯನ ಬಗ್ಗೆ ಜನರಿಗೆ ಇದ್ದ ಭಾವನೆ ಎಂದರೆ; ಈತ ನಮ್ಮ ಹಳ್ಳಿಯವನೇ. ಇಲ್ಲೇ ಹಳ್ಳಿಯಲ್ಲೇ ಇರುತ್ತಾನೆ. ಮನೆಯಲ್ಲಿ ಯಾವುದಾದರೂ ಫಂಕ್ಷನ್ ಆದರೆ ಹೋಗುತ್ತಾನೆ. ನಮ್ಮ ಕೈಗೆ ಸಿಗುತ್ತಾನೆ... ಹೀಗೆ. ಏನೇನು ಕೆಲಸ ಮಾಡಿದರೂ ಇದೆಲ್ಲಾ ಅವರಿಗೆ ಅರ್ಥವಾಗಲ್ಲ ಅನ್ನಿಸುತ್ತೆ. ಚುನಾವಣೆಯಲ್ಲಿ ಭರಣಯ್ಯನವರು ಸೋತರು.

ಚುನಾವಣೆಯಲ್ಲಿ ಸೋತ ಮೇಲೆ ಅವರ ಮನಸ್ಸಿಗೆ ಸ್ವಲ್ಪ ಆಘಾತ ಆಯಿತು. ಸರ್ವಿಸ್‌ನಲ್ಲಿ ಇದ್ದವರು ರಾಜಕೀಯದಲ್ಲಿ ಮೇಲೆ ಬರುವುದು ಸ್ವಲ್ಪ ಕಷ್ಟವೇ. ಅದನ್ನು ಸ್ವಲ್ಪ ಅವರು ಮನಸ್ಸಿಗೆ ಹಚ್ಚಿಕೊಂಡರು. ಆ ಆಘಾತದಿಂದ ಅವರು ಹೊರಗೆ ಬರಲೇ ಇಲ್ಲ!

ಅವರ ಕೊನೆ ದಿನಗಳು ನಿಮಗೆ ನೆನಪಿದೆಯಾ?

ಅವರು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ಅವರಿಗೆ ಮಕ್ಕಳ ಮೇಲೆ ಪ್ರೀತಿ ಜಾಸ್ತಿ. ಬಂದಾಗ ಚೆನ್ನಾಗಿ ಮಾತುಕತೆ ಆಡಿಕೊಂಡು ಹೋಗೋರು. ನಾವೂ ಆಗಾಗ ಹೋಗುತ್ತಿದ್ದೆವು. ಅದೇ ಹೀಗೆಲ್ಲ ಆದಮೇಲೆ ಚುನಾವಣೆ ಬೇಸರದಲ್ಲಿ ಒಂದಷ್ಟು ಕಾಲ ಮೌನವಾಗಿದ್ದರು. ಆದರೂ ಅವರು ಒಳ್ಳೇ ಪ್ರೀತಿ ವಾತ್ಸಲ್ಯದಿಂದ ನಮ್ಮನ್ನೆಲ್ಲ ಕಡೇವರೆಗೂ ನೋಡುತ್ತಿದ್ದರು. ನಾವು ಮನೆಗೆ ಹೋದಾಗ ಪ್ರೀತಿಯಿಂದ ಮಾತಾಡಿಸುತ್ತಿದ್ದರು.

ಒಟ್ಟಾರೆ ನಿಮ್ಮ ನೆನಪುಗಳಲ್ಲಿ ಅವರ ಬಗ್ಗೆ ಇರುವ ಅನಿಸಿಕೆ ಏನು?

ನಮ್ಮ ಜನ ಹೀಗೆ ರಾಜಕೀಯವಾಗಿ ಅವರನ್ನ ಕಡೆಗಣಿಸಿದ್ದು ಈಗಲೂ ನನಗೆ ವಿಸ್ಮಯವಾಗಿ, ವಿಚಿತ್ರವಾಗಿ ಕಾಣುತ್ತೆ. ತಮ್ಮ ಅಧಿಕಾರಾವಧಿಯಲ್ಲಿ ನನ್ನ

ತಂದೆ, ಇವರು ಎಲ್ಲರೂ ಕಷ್ಟಗಳನ್ನು ಅನುಭವಿಸಿದ್ದಾರೆ. ಅದರ ನಡುವೆಯೂ ಜನಾಂಗದ ಅಭಿವೃದ್ಧಿಗೆ ನಿಷ್ಠೆಯಿಂದ ತಮ್ಮ ಜೀವನಪೂರ್ತಿ ಸೇವೆ ಮಾಡಿದ್ದಾರೆ. ನಾನು ತಿಳಿದಂತೆ ಮತ್ತು ಅವರು ಆಗಾಗ ಹೇಳುತ್ತಿದ್ದಂತೆ ಹಳ್ಳಿಗಳಿಗೆ ಹೋದರೆ ಇವರಿಗೆ ನೀರು ಕೂಡ ಕೊಡುತ್ತಿರಲಿಲ್ಲ. ಮರದ ಕೆಳಗೆ ಎಲ್ಲ ಕುಳಿತು ಮೀಟಿಂಗ್ ಮಾಡಿ ಬರುತ್ತಿದ್ದರು. ನಮ್ಮ ತಂದೆಯವರು ಅನುಭವಿಸಿದ್ದನ್ನೇ ನಮ್ಮ Father in law ಕೂಡ ಅನುಭವಿಸಿದ್ದಾರೆ. ಆದರೂ ಅಂಥ ಸ್ಥಿತಿಯಲ್ಲೂ ಅವರು ಜನೋಪಕಾರಿಯಾಗಿ ಅದನ್ನೆಲ್ಲ ನೋಡಿದರೆ ನಾವು ಸಾವಿರ ಪಾಲಿಗೆ ಉತ್ತಮ.

ಇವರು ಮಾಡಿದ್ದ ಕೆಲಸಗಳು ಎಷ್ಟರಮಟ್ಟಿಗೆ ಅಂದರೆ, ಎಷ್ಟೋ ಜನ ಇವರನ್ನ ದೇವರು ಅಂತಲೇ ಅಂದುಕೊಂಡಿದ್ದಾರೆ. Because not only for giving a job but the way he advised to them. ಬರೀ ಕೆಲಸ ಕೊಟ್ಟರು ಅಂತ ಅಲ್ಲ. ಯಾವ ಥರ ಮುಂದೆ ಬರಬೇಕು, ಆಮೇಲೆ ನೀನು ಶೆಡ್ಯೂಲ್ಡ್ ಕಾಸ್ಟ್‌ಗೆ ಹೇಗೆ ಸಹಾಯ ಮಾಡುತ್ತೀಯ? ಈ ರೀತಿ. ಅಷ್ಟೊಂದು ತಾಳ್ಮೆ ಎಲ್ಲ ಇತ್ತು ಅವರಿಗೆ. ಆ ಕಳಕಳಿ ಆ ಮಟ್ಟದಲ್ಲಿ ನಮ್ಮಲ್ಲಿ ಯಾರಿಗೂ ಇಲ್ಲ. ಅಂತಹ ಯಾವ ಆಫೀಸರನ್ನೂ ನೋಡಿಲ್ಲ ನಾನು. ಇಂಥ ವ್ಯಕ್ತಿಯ ಬಂಧುವಾಗಿರುವುದು ನನಗೆ ಧನ್ಯವೆನಿಸಿದೆ. ಆದರೆ ಅವರ ರಾಜಕೀಯ ಜೀವನಕ್ಕೆ ಎದುರಾದ ಸಮಸ್ಯೆ ಮಾತ್ರ ಅವರನ್ನ ಬಾಧಿಸಿದ್ದು, ಕೊನೆಯ ದಿನಗಳಲ್ಲಿ ಅಂಥ ವ್ಯಕ್ತಿಗೆ ಆ ಆಘಾತ ಆಗಬಾರದಿತ್ತು ಎಂದು ಈಗಲೂ ನನಗೆ ಅನ್ನಿಸುತ್ತದೆ. ಈ ಎಲ್ಲದರ ನಡುವೆಯೂ ಅವರು ನಮ್ಮ ಸಮುದಾಯದ ಏಳಿಗೆಯಲ್ಲಿ ಮರೆಯಬಾರದ ವ್ಯಕ್ತಿಯಾಗಿ ಶ್ರೇಷ್ಠ ವ್ಯಕ್ತಿತ್ವವುಳ್ಳವರಾಗಿದ್ದರು ಎಂಬುದು ನನ್ನ ಅನಿಸಿಕೆ.

* * *



ಅಕ್ಷರ ಬೆಳಕಿನ ಕೈಮರ

ಶ್ರೀಮತಿ ಶಾರದಮ್ಮ

ನಮ್ಮ ಜನಾಂಗದವರು ಚೆನ್ನಾಗಿ ಓದಬೇಕು. ಅದಕ್ಕೆ ಹಾಸ್ಟಲ್ ತೆರೆಯಬೇಕು. ಅಲ್ಲಿ ಒಳ್ಳೆ ಟೀಚಿಂಗ್ ಕೊಡಿಸಬೇಕು ಎಂಬುದು ಅವರ ಕನಸಾಗಿತ್ತು. ಅವರು ಸಭೆ ಸಮಾರಂಭಗಳಲ್ಲಿ ಎಲ್ಲರೂ ವಿದ್ಯಾವಂತರಾಗಿ ಬನ್ನಿ ಕೆಲಸ ಕೊಡಿಸುವೆ ಎಂದು ಕೈಮುಗಿದು ಕೇಳಿಕೊಳ್ಳುತ್ತಿದ್ದರು. ಇಂಥವರು ಈಗ ಎಷ್ಟು ಜನರಿದ್ದಾರೆ?

ಕೆಪಿಎಸ್‌ಸಿ ಮಾಜಿ ಸದಸ್ಯೆ
ಬೆಂಗಳೂರು



ಅಕ್ಷರ ಬೆಳಕಿನ ಕ್ರೈಮರ

ಶ್ರೀಮತಿ ಶಾರದಮ್ಮ

ನಮಸ್ಕಾರ ಮೇಡಂ. ನಿಮ್ಮ ಪರಿಚಯದೊಂದಿಗೆ ಆರ್. ಭರಣಯ್ಯನವರ ಬಗ್ಗೆ ನಿಮ್ಮ ಒಡನಾಟವನ್ನು ಮತ್ತು ಅವರ ಬಗ್ಗೆ ತಮಗೆ ತಿಳಿದಿರುವ ಅಂಶಗಳನ್ನು ತಿಳಿಸಿಕೊಡಿ.

ನನ್ನ ಹೆಸರು ಶಾರದಮ್ಮ. ನಾನು ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದೇನೆ. ನಂತರ K.P.S.C.ಗೆ ಸದಸ್ಯರಾಗಿ ಕಾರ್ಯನಿರ್ವಹಿಸಿದೆ. ನನ್ನ ತಂದೆ ಎಲ್. ಲಿಂಗಯ್ಯನವರು. ಆಗಿನ ಕಾಲಕ್ಕೆ ಉನ್ನತ ಅಧಿಕಾರಿಗಳ

ಸ್ಥಾನದಲ್ಲಿ ಕಾರ್ಯನಿರ್ವಹಿಸಿದವರು. ನನಗೆ ಒಳ್ಳೆಯ ಶಿಕ್ಷಣ ಕೊಡಿಸಿದರು. ನನ್ನ ತಂದೆ ಮತ್ತು ಆರ್. ಭರಣಯ್ಯನವರು ಸಮಕಾಲೀನರು. ಆಗ ನಾನು ಬಹಳ ಚಿಕ್ಕವಳು. ನನ್ನ ತಂದೆ ಬೆಳಗಿನ ವಾಕಿಂಗ್ ಮುಗಿಸಿಕೊಂಡು ಆರ್. ಭರಣಯ್ಯನವರ ಮನೆ, ಹೊಂಬಾಳಯ್ಯನವರ ಮನೆಗೆ ಭೇಟಿ ನೀಡಿ ಬರುತ್ತಿದ್ದರು.

ನಾನು ಆರ್. ಭರಣಯ್ಯನವರನ್ನು ನೋಡಿದ್ದು, ಮಾತನಾಡಿದ್ದು, ನಾನು ಚಿಕ್ಕವಳಾಗಿದ್ದಾಗ. ನಾನು ಎಂತಹ ಅದೃಷ್ಟವಂತಳು ಎಂದರೆ ನಾನು ಆಗಿನ ಅತ್ಯುನ್ನತ ಅಧಿಕಾರದಲ್ಲಿದ್ದ ಶ್ರೀ ಬಿ.ರಾಚಯ್ಯ, ಶ್ರೀ ಆರ್. ಭರಣಯ್ಯನವರು, ಶ್ರೀ ಹೊಂಬಾಳಯ್ಯನವರು, ಶ್ರೀ. ಎಲ್. ಶಿವಲಿಂಗಯ್ಯ ಇಂಥವರ ಹಾರೈಕೆಯಲ್ಲಿ, ಆರ್ಶಿರ್ವಾದದಿಂದ ಅವರ ಸ್ಪರ್ಶದಿಂದ ಬೆಳದವಳು. ನಮ್ಮದು ಮಕ್ಕಳ ಗುಂಪು ಹೊಂಬಾಳಯ್ಯನವರ ಮಕ್ಕಳು, ಆರ್. ಭರಣಯ್ಯನವರ ಮಕ್ಕಳು ನಾವು ಒಟ್ಟಿಗೆ ಆಡಿ ಬೆಳೆದವರು. ನಮ್ಮದು ಮಕ್ಕಳ ಗುಂಪು ಸ್ವಚ್ಛಂದವಾಗಿ ಆಡಿಕೊಂಡು, ಹೊಂಬಾಳಯ್ಯನವರ ಮನೆಯಿಂದ, ಭರಣಯ್ಯನವರ ಮನೆಗೆ ನಂತರ ನಮ್ಮ ಮನೆಗೆ ಅಡ್ಡಾಡಿಕೊಂಡು ಬೆಳಿಗ್ಗೆ ತಿಂಡಿ ಒಬ್ಬರ ಮನೆಯಲ್ಲಿ, ಮಧ್ಯಾಹ್ನ ಊಟ ಒಬ್ಬರ ಮನೆಯಲ್ಲಿ, ರಾತ್ರಿ ಊಟ ಮತ್ತೊಬ್ಬರ ಮನೆಯಲ್ಲಿ ಎಂಬಂತೆ ನಾವು ಅತ್ಯಂತ ಪ್ರೀತಿಯಿಂದ, ನಿಷ್ಕಲ್ಮಶವಾಗಿ ಬೆಳದವರು.

ನಾವು ದೊಡ್ಡ ಸಾಹೇಬರ ಮಕ್ಕಳು ಎಂಬ ಅರಿವು ನಮಗೆ ಇರಲಿಲ್ಲ. ನಮಗೆ ಜಾತಿಯ ಅರಿವಿರಲಿಲ್ಲ. ಹಾಗೆ ನಮ್ಮನ್ನು ಬೆಳೆಸಿದರು. ನಮ್ಮದು Freedom of Exchange ಹಾಡಿ;ಕುಣಿದು ಕುಪ್ಪಳಿಸಿ ಬೆಳೆದ ಅದೃಷ್ಟವಂತರು. ಆರ್. ಭರಣಯ್ಯನವರ ಮನೆಯವರ ಮನೆಯ ಊಟ, ತಿಂಡಿ, ಕಾಫಿ, ಅವರ ಪ್ರೀತಿ, ಅವರ ಮಕ್ಕಳು, ಪದ್ದು, ಹೊಂಬಾಳಯ್ಯನವರ ಮಕ್ಕಳು ಇವರ ಜೊತೆ ಆಡಿ ಬೆಳೆದವಳು. ಆಗಿನ ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ನಾವು ಮಕ್ಕಳು ಬೆಳದ ಹಾಗೆ ನಮ್ಮಲ್ಲಿ ವಿಶ್ವಾಸ, ಧೈರ್ಯ, ಓದುವ ಆಸಕ್ತಿ ಬೆಳೆಸಿತು. ಆ ಪರಿಸರ ನನ್ನನ್ನು ಬೆಳೆಸಿತು ಎನ್ನಬಹುದು.

ಆರ್. ಭರಣಯ್ಯನವರು ದೈವಭಕ್ತರು. ಕಟ್ಟುನಿಟ್ಟಿನ ಶಿಸ್ತಿನ ಸಿಪಾಯಿ. ಆಗಿನ ಬ್ರಿಟಿಷ್ ಕಾಲದಲ್ಲಿ ಕುದುರೆ ಸವಾರಿ ಮಾಡುವುದನ್ನು ಕಲಿತಿದ್ದರು. ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಗಳಿಸಿದ್ದರು. ನಮ್ಮ ಜನಾಂಗದಲ್ಲಿ ಸಂಸ್ಕೃತ ಕಲಿತ ಒಬ್ಬರು ಇರಲಿಲ್ಲ. ಆದರೆ ಇವರು ಅಸಾಧಾರಣ ಪ್ರತಿಭೆಹೊಂದಿ ಸಂಸ್ಕೃತದಲ್ಲಿ ಭಾಷಣ ಮಾಡುತ್ತಿದ್ದರು. ನಮಗೆ ಹೆಮ್ಮೆ ಎನಿಸುತ್ತಿತ್ತು. ಬೆಳಗಿನ ಜಾವ ಅವರು ಪೂಜೆಮಾಡಿ ಹಣೆಗೆ ಚಂದನವನ್ನು ಇಟ್ಟು ಹೊರಗೆ ಬಂದರೆ ಅವರ ಬಗ್ಗೆ ಪೂಜ್ಯ ಭಾವನೆ ಬರುತ್ತಿತ್ತು.

ಅವರ Dress Code ಕೂಡ ಅಷ್ಟೇ ಅಚ್ಚುಕಟ್ಟು. ಸೂಟು, ಬೂಟು ಹಾಕಿಕೊಂಡು ಶುಭ್ರವಾಗಿ ತಯಾರಾಗಿ, ಸರಿಯಾದ ಸಮಯಕ್ಕೆ ಕಾರಿನಲ್ಲಿ ಕಛೇರಿ ತಲುಪುತ್ತಿದ್ದರು. ಅವರನ್ನು ನೋಡಿದ ನನಗೆ ಅವರ ಆ ಶಿಸ್ತು, ಘನತೆ, ದೈವಭಕ್ತಿ ನನ್ನ ಮೇಲೆ ಚಿಕ್ಕಂದಿನಲ್ಲಿ ತುಂಬಾ ಪರಿಣಾಮ ಬೀರಿತು.

ಆರ್. ಭರಣಯ್ಯನವರಿಗೆ ಬೇರೆ ರೀತಿ ಕಾಲ ಕಳೆಯುವುದು ಗೊತ್ತಿರಲಿಲ್ಲ. ಅವರು ಪುಸ್ತಕ ಪ್ರಿಯರು. ಅವರಲ್ಲಿ ಬಹಳಷ್ಟು ಪುಸ್ತಕಗಳ ಸಂಗ್ರಹದ ಭಂಡಾರವೇ ಇತ್ತು. ಸದಾ ಓದಿನಲ್ಲಿ ಮಗ್ನರಾಗಿರುತ್ತಿದ್ದರು. ಅವರು ಓದುವಾಗ ನಾನು ಆ ಕಡೆ ಓಡಾಡುತ್ತಿದ್ದರೆ, ನನ್ನನ್ನು ಕರೆದು ಮಾತನಾಡಿಸಿ ತಿಂಡಿ ತಿಂದಿಯಾ, ಯಾವ ಪುಸ್ತಕ ಓದಿದೆ. ಒಳ್ಳೆಯ ಪುಸ್ತಕಗಳನ್ನು ಓದಬೇಕು ಎಂದು ನನಗೆ ತಿಳುವಳಿಕೆ ಹೇಳುತ್ತಿದ್ದರು. ಇದು ನನ್ನಲ್ಲಿ ಪುಸ್ತಕ ಪ್ರೀತಿಯನ್ನು ಬೆಳೆಸಿತು. ಮಾತ್ರವಲ್ಲ ಓದಲು ನನ್ನನ್ನು ಪ್ರೇರೇಪಿಸಿತು. ಹಾಗಾಗಿ ಅವರ ಹಾರೈಕೆಗಳಿಂದ ನಾನು ಚೆನ್ನಾಗಿ ಓದಿ ಒಳ್ಳೆಯ ಉದ್ಯೋಗಕ್ಕೆ ಸೇರುವಂತಾಯಿತು.

ಆರ್. ಭರಣಯ್ಯನವರ ವಿದ್ಯೆ, ಪಾಂಡಿತ್ಯ, ಅನುಭವ ಇವೆಲ್ಲದರ ಮೂಸೆಯಿಂದ ಹೊರಬಂದಿದ್ದೆ "ದಲಿತರ ಪರ ಕಾಳಜಿ" ಅಂತಹ ಅಧಿಕಾರಿಯ ಗುಣವನ್ನು ಇಂದು ನಾವು ಕಾಣಲು ಸಾಧ್ಯವಾಗುತ್ತಿಲ್ಲ. Concern, dedication, quality output is not there today among our community officer's. Thats why Mr. Bharaniah is different from others.

ನಮ್ಮ ತಂದೆ ಶ್ರೀ ಎಲ್. ಲಿಂಗಯ್ಯ, ಶ್ರೀ ಆರ್. ಭರಣಯ್ಯನವರು, ಶ್ರೀ ಬಿ.ರಾಚಯ್ಯ, ಶ್ರೀ ಹೊಂಬಾಳಯ್ಯನವರು ಒಟ್ಟಿಗೆ ಸೇರಿ ದಲಿತ Community ಯವರಿಗೆ ಏನಾದರೂ ಮಾಡಬೇಕು ಎಂಬ ಕಾಳಜಿಯನ್ನು ಹೊಂದಿ ಒಂದೆಡೆ ಕುಳಿತು ಚರ್ಚಿಸುತ್ತಿದ್ದರು. ಅಂಬೇಡ್ಕರ್ ಕಾಲದಲ್ಲೂ ಕುರಿ, ಕೋಳಿ, ಹಸು, ಅಪ್ಪ, ಅಮ್ಮ, ಮಗ, ಮಕ್ಕಳು, ಮೊಮ್ಮಕ್ಕಳು ಎಲ್ಲರು ಹಂದಿಗೂಡಿನಂತಹ ಸೂರಿನಲ್ಲಿ ಜೀವನ ಸಾಗಿಸುತ್ತಿದ್ದರು. ಅಂದಿಗೂ ಇಂದಿಗೂ ಏನು ವ್ಯತ್ಯಾಸವಿಲ್ಲ. ಇವರ ಬದುಕಿಗೆ ಏನಾದರೂ ಮಾಡಬೇಕು ಎಂದು ಚರ್ಚಿಸುತ್ತಿದ್ದರು. ಆದರೆ ಇಂದು ಅಂತಹ ದಲಿತಪರ ಕಾಳಜಿ ಮರೆಯಾಗಿದೆ. ನಾವು ಒಂದೆಡೆ ಕುಳಿತು ಚರ್ಚಿಸುವ ಗೋಜಿಗೆ ಹೋಗುವುದಿಲ್ಲ. ಮಾತ್ರವಲ್ಲ ದಲಿತ ಅಧಿಕಾರಿಗಳಲ್ಲೇ ಬಿರುಕುಗಳು ಉಂಟಾಗಿದೆ. ಎಡ–ಬಲ ಎಂಬುದು ಇಂದು ದೊಡ್ಡ ವಿಷಯ ಆಗಿದೆ. ಯಾರು ಮೇಲು, ಯಾರು ಕೀಳು ಎಂಬ ಭೇದ ನಮ್ಮ ದಲಿತ ಸಮುದಾಯದ ಒಳಗೆ ಬಂದರೆ ನಮ್ಮ ಸಮುದಾಯದ ಅಭಿವೃದ್ಧಿಯಾಗುವುದೇ? ಈ ಪರಿಸ್ಥಿತಿ ಬದಲಾಗಬೇಕಿದೆ. ಇಂತಹ ಸಂದರ್ಭದಲ್ಲಿ ಆರ್. ಭರಣಯ್ಯನಂತವರು ಪದೇ ಪದೇ ನೆನಪಾಗುವರು.

ಅವರ ಕಾಲದಲ್ಲಿ ನಮ್ಮ ಜನಾಂಗಕ್ಕೆ ಸಹಾಯ ಮಾಡಬೇಕು. ಅದಕ್ಕೆ ದಾರಿ ಮಾಡಬೇಕು. ನಮ್ಮ ಜನಾಂಗದವರು ಚನ್ನಾಗಿ ಓದಬೇಕು. Officer's ಆಗಬೇಕು. ಅದಕ್ಕೆ ಹಾಸ್ಟೆಲ್ ತೆರೆಯಬೇಕು, ಶಾಲೆ ತೆರೆಯಬೇಕು, ಒಳ್ಳೆಯ ಟೀಚಿಂಗ್ ಕೊಡಿಸಬೇಕು ಎಂಬ ಆಲೋಚನೆಗಳು ಅಂದಿನ ಅಧಿಕಾರಿಗಳಲ್ಲಿ ಮುಖ್ಯವಾಗಿ ಆರ್. ಭರಣಯ್ಯನವರಲ್ಲಿ ಕಾಣುತ್ತಿದ್ದೆವು. ಆರ್. ಭರಣಯ್ಯನವರು ಸಭೆ ಸಮಾರಂಭದ ಭಾಷಣದಲ್ಲಿ ತಮ್ಮ ನೋವುಗಳನ್ನು ಹೇಳಿಕೊಳ್ಳುತ್ತಿದ್ದರು. ನನ್ನಲ್ಲಿ ನೂರಾರು ಜನರು ಬರುತ್ತಾರೆ ಸಹಾಯ ಕೇಳುತ್ತಾರೆ, ನಾನು ಅವರಿಗೆ ಹೇಗೆ ಸಹಾಯ ಮಾಡಲಿ ಎಂದು ಕೊರಗುತ್ತಿದ್ದರು. ಓದಿಲ್ಲ, ಬರೆಯೋಕೆ ಬರಲ್ಲ ಸಹಾಯಮಾಡಿ ಎಂದರೆ ಹೇಗೆ ಮಾಡಲಿ. ದಯಮಾಡಿ ಎಲ್ಲರೂ ವಿದ್ಯಾವಂತರಾಗಿ ಬನ್ನಿ ಖಂಡಿತ ಕೆಲಸ ಕೊಡಿಸುವೆ ಎಂದು ಕೈ ಮುಗಿದು ಕೇಳಿಕೊಳ್ಳುತ್ತಿದ್ದರು. ಹೇಳಿ ಇಂದು ಇಂತಹ ಅಧಿಕಾರಿಗಳು ಎಷ್ಟು ಜನರಿದ್ದಾರೆ. ಸೇವೆ ಮಾಡುವಂಥ ಅಧಿಕಾರಿಗಳ ಬದಲಾಗಿ ಭ್ರಷ್ಟಾಚಾರಕ್ಕೆ ಗುರಿಯಾಗಿ ಲೋಕಾಯುಕ್ತರಿಂದ ರೈಡ್ ಮಾಡಿಸಿಕೊಳ್ಳುವ ಮಟ್ಟಿಗೆ ಇಂದು ನಮ್ಮ ಅಧಿಕಾರಿಗಳು ಬಂದು ನಿಂತಿದ್ದಾರೆ. ಸೇವೆಗೆ ಇಂದು ಅರ್ಥ ಕಳೆದುಕೊಂಡಿದೆ. ಈ ರೀತಿಯ ಧೋರಣೆ ದಲಿತ ಅಧಿಕಾರಿಗಳಲ್ಲಿ ಬದಲಾಗಬೇಕು. ಆರ್. ಭರಣಯ್ಯನಂತಹ ಅಧಿಕಾರಿಗಳು ಉದ್ಯೋಗವನ್ನು ಜನಸೇವೆಯೆಂದು ನಂಬಿದವರು. ಅಂಥವರನ್ನು ಅನುಸರಿಸುವುದು ಇಂದಿಗೆ ಅಗತ್ಯವಿದೆ. ನಮ್ಮ ಸಮುದಾಯದ ಮೇಲೆ ಇಂದಿಗೂ ಸಮಾಜದಲ್ಲಿ ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆ ತಾಂಡವಾಡುತ್ತಿದೆ. ಆದ್ದರಿಂದ ದಲಿತ ಅಧಿಕಾರಿಗಳು ಎಚ್ಚೆತ್ತು ಜನಜಾಗೃತಿ ಉಂಟುಮಾಡಿ ನಮ್ಮವರ ಏಳಿಗೆಗೆ ಕೆಲಸ ಮಾಡದೇ ಹೋದರೆ ನಮ್ಮ ಜನರ ಶೋಷಣೆ ನಿಲ್ಲುವುದಿಲ್ಲ. ನಮ್ಮ ಜನಾಂಗ ಅಭಿವೃದ್ಧಿಯಾಗುವುದಿಲ್ಲ ಎಂಬುದನ್ನು ವಿಷಾದದಿಂದ ಹೇಳಲೇಬೇಕಿದೆ.

ಆರ್. ಭರಣಯ್ಯನವರ ಅಧಿಕಾರದ ಅವಧಿಯಲ್ಲಿ ಮಾಡಿದ ಕೆಲಸಗಳ ಬಗ್ಗೆ ಸ್ವಲ್ಪ ತಿಳಿಸಿ.

ಭರಣಯ್ಯನವರು ಯಾವುದೇ ಇಲಾಖೆಗೆ ಹೋಗಲಿ ಅತ್ಯಂತ ಬುದ್ಧಿವಂತಿಕೆಯಿಂದ ನಮ್ಮ ಜನರಿಗೆ ಕೆಲಸ ಕೊಡುತ್ತಿದ್ದರು. ಅವರಿಗೆ ಬುದ್ಧಿವಂತಿಕೆ ಮಾತ್ರವಲ್ಲ ಚಾಣಾಕ್ಷ್ಯ ತಂತ್ರವು ಇತ್ತು ಎಂದು ನನಗೆ ಅನಿಸುತ್ತದೆ. ಅಂದಿನ ಚಾಣಕ್ಯನಿಗೂ ಸಂಸ್ಕೃತ ತಿಳಿದಿತ್ತು. ನಮ್ಮ ಭರಣಯ್ಯನವರಿಗೂ ಸಂಸ್ಕೃತ ತಿಳಿದಿತ್ತು. ಹಾಗಾಗಿ ಚಾಣಕ್ಯತನದಿಂದ ದಲಿತರಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಲು ಹಿಂದು ಮುಂದು ನೋಡುತ್ತಿರಲಿಲ್ಲ.

ಸರ್ಕಾರಿ ಸೇವೆ ಎಂದರೆ ಒಂದು ಸಮುದಾಯಕ್ಕೆ ನಿಸ್ವಾರ್ಥ ಸೇವೆ ಮಾಡುವ ದೊಡ್ಡ ಅವಕಾಶ ಎಂದು ನಂಬಿದವರು ಭರಣಯ್ಯನವರು. ಸಹಕಾರ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, K.P.S.C. ಸದಸ್ಯರಾದಾಗ, ಇತರೆ ಇಲಾಖೆಯಲ್ಲಿ ಉದ್ಯೋಗ ಕೊಡುವ ಅಧಿಕಾರ ಭರಣಯ್ಯನವರಿಗೆ ಇತ್ತು. ಇದನ್ನು ಅತ್ಯಂತ ದಕ್ಷತೆಯಿಂದ ಬಳಸಿದವರಲ್ಲಿ ಆರ್. ಭರಣಯ್ಯನವರು ಮೊದಲ ಸ್ಥಾನದಲ್ಲಿ ನಿಲ್ಲುತ್ತಾರೆ. ಭರಣಯ್ಯನವರ ಹತ್ತಿರ ಯಾರಾದರೂ ಕಷ್ಟ ಹೇಳಿಕೊಂಡರೆ ಅವರ ಮನಸ್ಸು ಕರಗಿ ನೀರಾಗುವುದು. ಒಮ್ಮೊಮ್ಮೆ ಅತ್ತು ಬಿಡುತ್ತಿದ್ದರು. ಒಂದು ಬಿಳಿ ಹಾಳೆಯಲ್ಲಿ ಒಂದು ಅರ್ಜಿ ಬರೆಸಿಕೊಂಡು ನಾಳೆ ಕಛೇರಿಗೆ ಬಂದು ಭೇಟಿ ಮಾಡು ಎಂದು ಹೇಳಿ ಕಳುಹಿಸುತ್ತಿದ್ದರು. ನಾಳೆ ಅವನು ಬಂದರೆ ಒಂದು ಪತ್ರ ರೆಡಿ ಮಾಡಿ ಇಂಥವರನ್ನು ಭೇಟಿಮಾಡು ನಿನಗೆ ಕೆಲಸ ಕೊಡುತ್ತಾರೆ ಎಂದು ಹೇಳುತ್ತಿದ್ದರು. ಇದು ಬಡವರ ಪರ ಕಾಳಜಿ. ಅಂತಹ ದೊಡ್ಡ ಉದ್ಯೋಗದಲ್ಲಿ ಒಬ್ಬ ಸಾಮಾನ್ಯ ಬಡವನಪರ ಕಾಳಜಿ ವಹಿಸುವ ಅಧಿಕಾರಿಗಳನ್ನು ಇಂದು ಎಲ್ಲಿ ಹುಡುಕೋಣ? ಭರಣಯ್ಯನವರು ಅಂತಹ ಶ್ರೇಷ್ಠತೆಯ ಸ್ಥಾನದಲ್ಲಿ ನಿಲ್ಲುತ್ತಾರೆ. ಅವರಿಗೂ ಮತ್ತೊಬ್ಬರು ಸಾಟಿಯಾಗಿ ಬರಬೇಕಿದೆ. ಇಂದು ಬಿಳಿಹಾಳೆ ಜೊತೆಗೆ ಕಂತೆ, ಕಂತೆ ನೋಟು ಕೊಟ್ಟು ಐವತ್ತು ಸಲ ಅಲೆದರೂ ಕೆಲಸ ಗಿಟ್ಟಿಸುವುದು ಕನಸಿನ ಮಾತೇ ಸರಿ. ಕಾಲ ಕೆಟ್ಟಿದೆ. ವ್ಯವಸ್ಥೆಯೂ ಕೆಟ್ಟಿದೆ. ದಲಿತ ಅಧಿಕಾರಿಗಳೂ ಕೆಟ್ಟಿದ್ದಾರೆ ಕೆಲವೇ ಅಧಿಕಾರಿಗಳು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರು ಪ್ರಚಾರದಲಿಲ್ಲ ಎಲೆಮರೆಕಾಯಿಯಾಗಿ ಕಾರ್ಯನಿರ್ವಹಿಸುತ್ತಾ ತಮ್ಮ ಕೈಲಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಹಾಗಿದ್ದರೆ ದಲಿತರ ಏಳಿಗೆ ಯಾವಾಗ ?

ದಲಿತ ಜನಾಂಗದ ಬಡವರೆಲ್ಲಾ ಒಂದಾಗಬೇಕು. ಎಸ್.ಸಿ. ಜಾತಿಯಲ್ಲೇ ಹಲವು ಪಂಗಡಗಳಿವೆ. ನಮ್ಮ ಜನಾಂಗದ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗುವಂತೆ ಆಗಬೇಕು. ಒಳ್ಳೆಯ ಸರ್ಕಾರಿ ಸೇವೆ ಮಾಡುವ ಅವಕಾಶ ಕಲ್ಪಿಸಬೇಕು. ನಮ್ಮ ಮಕ್ಕಳು ಒಳ್ಳೆಯ ಮೇರಿಟ್‌ನಲ್ಲಿ ವಿದ್ಯಾಭ್ಯಾಸ ಮಾಡಿ ಒಳ್ಳೆಯ ಉದ್ಯೋಗದಲ್ಲಿ ಕೆಲಸ ನಿರ್ವಹಿಸುವಂತೆ ಆಗಬೇಕು. ಸ್ಪರ್ಧಾತ್ಮಕ ಯುಗಕ್ಕೆ ನಮ್ಮವರನ್ನು ಸಜ್ಜುಗೊಳಿಸಬೇಕು. ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ನಿಸ್ವಾರ್ಥ ಸೇವೆಯಿಂದ ಕೆಲಸ ನಿರ್ವಹಿಸಿದರೆ ಇಂದಿಗೂ ದಲಿತರಿಗೆ ಬಡವರಿಗೆ ಒಳ್ಳೆಯ ಅವಕಾಶ ಇವೆ ಎಂಬುದೇ ನನ್ನ ನಂಬಿಕೆ.

ಆರ್. ಭರಣಯ್ಯನವರು ಚುನಾವಣೆಯಲ್ಲಿ ಸೋತರು. ಈ ಬಗ್ಗೆ ನಿಮಗೆ ಹೇಗೆ ಅನಿಸುತ್ತದೆ?

ಬಹಳ ದುಃಖವಾಗುತ್ತದೆ. ದಲಿತರಪರ ಕಾಳಜಿ ಇದ್ದು ಕೆಲಸ ಮಾಡಿದ ಒಬ್ಬ ದಕ್ಷ ಆಡಳಿತ ಸೇವೆ ಮಾಡಿದ, ಜನಪರ ವ್ಯಕ್ತಿಯನ್ನು ದಲಿತರೇ ಸೋಲಿಸಿದರು ಎಂದರೆ ತಪ್ಪಾಗಲಾರದು. ಅಷ್ಟು ಒಳ್ಳೆಯ ಕೆಲಸ ಮಾಡಿದ ಭರಣಯ್ಯನವರು ಚುನಾವಣೆಗೆ ಸ್ಪರ್ಧಿಸದೇ ಇದ್ದಿದ್ದರೆ ಬಹಳ ಕಾಲ ಬದುಕುತ್ತಿದ್ದರು ಎನ್ನುವುದು ನನ್ನ ಅಭಿಪ್ರಾಯ. ಅವರು ಅಂತ್ಯಕಾಲದಲ್ಲಿ ನೊಂದು ಬೆಂದವರು. ಅದೇ ಅವರ ಕೊನೆಯುಸಿರೆಳೆಯಲು ಕಾರಣವಾಯಿತೇ ಎಂಬುದು ಕಾಡುತ್ತದೆ.

ನನ್ನ ತಂದೆ ಕಾಲವಾದ ನಂತರ ಆರ್. ಭರಣಯ್ಯನವರೇ ನನಗೆ ತಂದೆ. ನಾನು ಅವರನ್ನು ಅಪ್ಪಾಜಿ ಎಂದೇ ಕರೆಯುತ್ತಿದ್ದೆ. ಅವರು ಕೂಡ ನನ್ನನ್ನು ಅತ್ಯಂತ ಸಲಿಗೆಯಿಂದ ಪ್ರೀತಿಯಿಂದ, ವಿಶ್ವಾಸದಿಂದ ನೋಡುತ್ತಿದ್ದರು. ನನಗೆ ಅವರೊಡನೆ ಯಾವುದೇ ಸಂಕೋಚವಿರಲಿಲ್ಲ, ಅವರ ನೆರಳಿನಲ್ಲಿ ಬೆಳೆದ ಕಾರಣ ಅವರ ಕೆಲವು ಗುಣಗಳನ್ನು ಮೈಗೂಡಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.


ಅವರದು ತುಂಬು ಸಂಸಾರದ ಕುಟುಂಬ. ನನ್ನ ಮೇಲೆ ಪ್ರಭಾವ ಬೀರಿತು. ಅವರು ಹೆಂಡತಿ ಮಕ್ಕಳನ್ನು ಪ್ರೀತಿಸುತ್ತಿದ್ದ ಪರಿ, ಕಾಳಜಿ ನೋಡಿ ಇದು ಸಂಸ್ಕಾರವಂತರ ಕುಟುಂಬ ಎಂದೇ ಭಾವಿಸಿದೆ. ಅವರ ಮನೆಗೆ ಯಾರೇ ಹೋಗಲಿ ಕಾಫಿ, ತಿಂಡಿ ನೀಡದೆ ಕಳುಹಿಸುತ್ತಿರಲಿಲ್ಲ. ಅನ್ನದಾತ ಸುಖೀಭವಾ ಎನ್ನುವ ವಾಕ್ಯಕ್ಕೆ ಆರ್. ಭರಣಯ್ಯನವರು ಸೂಕ್ತ. ಒಬ್ಬ ಒಳ್ಳೆಯ ವ್ಯಕ್ತಿಯ ಗುಣ, ನಡತೆ, ಅತ್ಯಂತ ಸಂಸ್ಕೃತ ವಿದ್ಯಾವಂತ ಹೇಗೆ ತಾನೇ ನನ್ನ ಮೇಲೆ ಪ್ರಭಾವಬೀರಲಾರದು ಆಕರ್ಷಣೆಯಾಗದೆ ಇರಲು ಸಾಧ್ಯ. ನಮ್ಮ ಜನಾಂಗದ ಹಿರಿಯ ಅಧಿಕಾರಿ. ಅವರ ಕೆಲಸದಲ್ಲಿನ ದಕ್ಷತೆ, ಜನರ ನೋವು ದುಃಖಗಳಿಗೆ ಸ್ಪಂದಿಸುತ್ತಿದ್ದ ಪರಿ, ಅನುಕಂಪ, ದಯಾಳುತನ ನನ್ನನ್ನು ಅವರ ಆದರ್ಶಕ್ಕೆ ಸೆಳೆಯಿತು.

ಇವತ್ತಿನ ಯುವಪೀಳಿಗೆಗೆ ಆರ್. ಭರಣಯ್ಯನವರನ್ನು ಹೇಗೆ ನೆನಪಿಸಿಕೊಳ್ಳಬಹುದು?

ಭರಣಯ್ಯನವರ ಜೀವನದಲ್ಲಿ ಆಗಿಹೋದ ಘಟನೆಗಳನ್ನು ಮತ್ತು ಅವರು ಮಾಡಿದ ಕೆಲಸಗಳಿಂದ ನಾವು ಸಂದೇಶ ಪಡೆದುಕೊಂಡು ಅವರ ದಾರಿಯಲ್ಲಿ ಬದುಕಲು ಪ್ರಯತ್ನಿಸಬೇಕು. ಅವರು ಅಂದು ನೀಡಿದ ಸಂದೇಶ ಇಂದಿಗೂ ಪ್ರಸ್ತುತ. ದಲಿತ ಜನಾಂಗದ ಒಬ್ಬ ವ್ಯಕ್ತಿಯಾಗಿ, ಅಧಿಕಾರಿಯಾಗಿದ್ದರೂ ದಲಿತರಲ್ಲಿ ದಲಿತರಾಗಿ ಬದುಕಿದವರು. ತಮ್ಮ ವ್ಯಕ್ತಿತ್ವ ಯಾವುದೇ ಕಾರಣಕ್ಕೂ ಮಾಸಿ ಹೋಗಲಿಕ್ಕೆ ಬಿಡಲಿಲ್ಲ.

ಇಂದಿನ ಸರ್ಕಾರಗಳು ಇವರ ಪೂರ್ಣ ವ್ಯಕ್ತಿತ್ವದ ಪರಿಚಯವನ್ನು ಭವಿಷ್ಯದ ಸಮಾಜಕ್ಕೆ ಮಾಡಿಕೊಡಲು ಅವರ ಹೆಸರಿನಲ್ಲಿ ದಲಿತ ಜನಾಂಗಕ್ಕೆ ಉಪಯೋಗವಾಗುವಂತೆ ಕೆಲಸ ಮಾಡಲು ಮನಸ್ಸು ಮಾಡಬೇಕು. ಅವರದು ಕನ್ನಡನಾಡಿನಲ್ಲೇ ಮೇರು ಸದೃಶ ವ್ಯಕ್ತಿತ್ವ. ದಲಿತ ಸಮುದಾಯದ ಪುನಶ್ಚೇತನ ನೀಡಲು ಶ್ರೀ ಭರಣಯ್ಯನವರು ಮತ್ತೊಮ್ಮೆ ಹುಟ್ಟಿ ಬರಲಿ ಎಂಬಂತಹ ಕೆಲಸವನ್ನು ಸರ್ಕಾರ, ಸಂಘಸಂಸ್ಥೆಗಳು ಮಾಡಲಿ ಎಂದು ಆಶಿಸುತ್ತೇನೆ.

* * *



ಬದುಕು ರೂಪಿಸಿದ ಚೇತನ

ಡಾ. ಎನ್. ಎಸ್. ಶಂಕರ್

ದಲಿತ ಸಮುದಾಯಕ್ಕೆ ಸಹಾಯವಾಗುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಅವು ಬಡರೈತರು ಮತ್ತು ಕೃಷಿ ಕಾರ್ಮಿಕರ ಏಳಿಗೆಗಾಗಿ ರೂಪಿಸುತ್ತಿದ್ದ ಯೋಜನೆಗಳಾಗುತ್ತಿದ್ದುದರಿಂದ ಸರ್ಕಾರ ಕೂಡ ಅನುಮೋದನೆ ನೀಡುತ್ತಿತ್ತು. ಯಾವುದೇ ಅನುಕೂಲಗಳನ್ನು ಅವರು ಅನುಷ್ಠಾನಕ್ಕೆ ತರುವ ಮುನ್ನ ತನ್ನ ಸಹೋದ್ಯೋಗಿಗಳ ಜೊತೆ ಅದರ ನೀತಿ-ನಿಯಮಗಳನ್ನು ಚರ್ಚಿಸಿ, ಅದಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತಿದ್ದರು. ಅವರು ಒಬ್ಬ ರೋಲ್‌ಮಾಡೆಲ್ ಅಧಿಕಾರಿ – ಎಂದೆಂದಿಗೂ ಸರ್ಕಾರಕ್ಕೆ ಅಂಥ ಅಧಿಕಾರಿಗಳು ಬೇಕು. ಹೀಗಾಗಿ ಅವರು ಅಂದು ನೀಡಿದ ಜಮೀನುಗಳಿಂದ ಎಷ್ಟೋ ಜನ ಜಮೀನುದಾರರಾಗಿದ್ದಾರೆ. ವಸತಿ ಹೀನರು ಮನೆ ಮಹಡಿ ಕಟ್ಟಿಕೊಂಡು ನಿಶ್ಚಿಂತೆಯ ಜೀವನ ನಡೆಸುತ್ತಿದ್ದಾರೆ.

ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ – ಶಿವಮೊಗ್ಗ



ಬದುಕು ರೂಪಿಸಿದ ಚೇತನ

ಡಾ. ಎನ್. ಎಸ್. ಶಂಕರ್

ಪೀಠಿಕೆ :

ಅದು 1957ರ ಸಮಯ. ಶಿವಮೊಗ್ಗ ಜಿಲ್ಲೆಯ ಜೋಗದಲ್ಲಿ ಶರಾವತಿ ವಿದ್ಯುತ್ ಯೋಜನೆಯ ಕಾರ್ಯಭಾರ ಸಾಗುತ್ತಿತ್ತು. ಜೊತೆಗೆ ಜಿಲ್ಲೆಯ ಭದ್ರಾವತಿ ತಾಲ್ಲೂಕಿನಲ್ಲಿ ಅದಾಗಲೇ ಸ್ಥಾಪನೆಗೊಂಡಿದ್ದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯೂ

ಬಿರುಸಿನ ಚಟುವಟಿಕೆ ನಡೆಸುತ್ತಿತ್ತು. ಹಳ್ಳಿಗಾಡುಗಳು ನಿಧಾನವಾಗಿ ಬದಲಾವಣೆಯ ದಿಕ್ಕಿನತ್ತ ಮುನ್ನಡೆದಿದ್ದವು. ಒಟ್ಟಿನಲ್ಲಿ ಅಚ್ಚ ಮಲೆನಾಡಿನ ಶಿವಮೊಗ್ಗ ಜಿಲ್ಲೆ ನಿಧಾನವಾಗಿ ನಗರೀಕರಣದತ್ತ ಕಾಲಿಡುತ್ತಿತ್ತು.

ಈ ಅವಧಿಯಲ್ಲಿ ಆರ್. ಭರಣಯ್ಯನವರು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಬಂದರು. ಇಲ್ಲಿನ ಪರಿಸ್ಥಿತಿ, ರೈತರ ಸಮಸ್ಯೆ, ಈ ಪ್ರದೇಶದ ಆಗುಹೋಗುಗಳನ್ನು ಶೀಘ್ರದಲ್ಲೇ ಅರಿತುಕೊಂಡು ಅವುಗಳನ್ನು ನಿವಾರಿಸಲು ಮುಂದಾದರು. ತಮ್ಮ ಎಂದಿನ ಜನಪರ ಕಾಳಜಿಯಿಂದ ಇದ್ದ ಸ್ವಲ್ಪ ಸಮಯದಲ್ಲೇ ಇಲ್ಲಿನ ನೂರಾರು ಕುಟುಂಬಗಳಿಗೆ ನೆರವಾದರು. ಜಾತಿ, ಮತದ ಎಲ್ಲೆ ಮೀರಿ ಹತ್ತಾರು ಜನರಿಗೆ ನಾನಾ ರೀತಿಯ ಉದ್ಯೋಗ ಸೃಷ್ಟಿಸಿಕೊಟ್ಟು ಅನ್ನದಾತರೆನಿಸಿದ್ದರು.

ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಎರಡೇ ವರ್ಷದ ಅವಧಿಯಲ್ಲಿ ಅವರು ಮಾಡಿದ ಜನಪರ ಕೆಲಸಗಳು ಅಪಾರ. ಜಿಲ್ಲೆಯ ಬಡವರು, ದೀನದಲಿತರು, ಭೂರಹಿತರನ್ನು ಗುರುತಿಸಿ ಅವರಿಗೆಲ್ಲ ನೂರಾರು ಎಕರೆ ಜಮೀನು ಕೊಡಿಸಿದರು. ತೀರ್ಥಹಳ್ಳಿ, ಹೊಸನಗರ, ಭದ್ರಾವತಿ ತಾಲ್ಲೂಕುಗಳಲ್ಲಿ ಭೂ ರಹಿತರಿಗೆ ಸರ್ಕಾರಿ ಜಮೀನು ಕೊಡಿಸಿದರು. ಮನೆ ಕಟ್ಟಲು ಸೈಟು, ಸಾಲ ಸೌಲಭ್ಯಗಳನ್ನೂ ಕೂಡ ಕೊಡಿಸಿ ಸರ್ವಜನಾಂಗದ ಶಾಂತಿಯ ತೋಟದ ನಿರ್ಮಾತೃ ಎನಿಸಿದ್ದರು. ಇದರ ಫಲವಾಗಿ ಇಂದಿಗೂ ಕೂಡ ನೂರಾರು ಕುಟುಂಬಗಳು ಜಮೀನಿನ ಒಡೆಯರೆನಿಸಿ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವೆಲ್ಲ ಇಂದಿಗೂ ಕಣ್ಣೆದುರಿಗೆ ಗೋಚರಿಸುವ ಭರಣಯ್ಯನವರ ಸಾಧನೆಗಳು. ತಲೆಮಾರಿನ ಅಂತರದ ಕಾರಣ ಅವರು ಮಾಡಿದ ಕೆಲಸಕಾರ್ಯಗಳು ಇಂದು ಹೆಕ್ಕಿ ತೆಗೆಯಲು ಸಾಧ್ಯವಾಗದೆ ಕಾಲಗರ್ಭದೊಳಕ್ಕೆ ಹುದುಗಿ ಹೋಗಿರುವುದು ಇನ್ನೆಷ್ಟಿವೆಯೋ! ಇರುವಂತಹ ಕೆಲವರನ್ನು ಹುಡುಕಿ ಅವರನ್ನು ಗತಕಾಲಕ್ಕೆ ಕರೆದೊಯ್ದು ಅವರ ಕಣ್ಣಿನಲ್ಲಿ ಆರ್. ಭರಣಯ್ಯನವರನ್ನು ಕಾಣುವ ಪ್ರಯತ್ನ ಮಾಡಲಾಗಿದೆ. ಅಂತಹ ವ್ಯಕ್ತಿಗಳೊಡನೆ ನಡೆಸಿದ ಯಥಾವತ್ ಮಾತುಕತೆಯ ಸಾರವಿದು.

ನಮಸ್ಕಾರ. ತಮ್ಮ ಸಂಕ್ಷಿಪ್ತ ಪರಿಚಯ ಮಾಡಿಕೊಂಡು ಆರ್. ಭರಣಯ್ಯನವರ ಬಗ್ಗೆ ನೀವು ತಿಳಿದಿರುವುದನ್ನು ಹೇಳಿ.

ನಾನು ಎನ್. ಎಸ್. ಶಂಕರ್. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕನಾಗಿ ಕಳೆದ 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ನನ್ನ ವೃತ್ತಿ ಜೀವನವನ್ನು ಆರಂಭಿಸಿದೆ.

ಭರಣಯ್ಯನವರು ನನ್ನ ತಾಯಿಯ ಸ್ವಂತ ಚಿಕ್ಕಪ್ಪನ ಮಗ. ನಮ್ಮ ತಂದೆ ಮತ್ತು ಆರ್. ಭರಣಯ್ಯ ಒಂದೇ ಓರಗೆಯವರಾಗಿದ್ದರು. ನನ್ನ ತಂದೆ ಜನನ ಆಗಿದ್ದು ಸೋಮನಾಥಪುರದಲ್ಲೇ. ನನ್ನ ಹುಟ್ಟೂರು ಕೂಡ ಅದೇನೇ. ಆರ್. ಭರಣಯ್ಯನವರು ಈ ರಾಜ್ಯ ಕಂಡ ಮೊಟ್ಟ ಮೊದಲ ದಲಿತ ಐ.ಎ.ಎಸ್. ಅಧಿಕಾರಿ. ಧೀಮಂತ ವ್ಯಕ್ತಿತ್ವ ಉಳ್ಳವರಾಗಿದ್ದರು. ದಲಿತ ಜನಾಂಗದಲ್ಲಿ ಮೊದಲ ಬಾರಿಗೆ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದವರಾಗಿದ್ದರು. ಅಂಬೇಡ್ಕರ್ ಬಿಟ್ಟರೆ ಅಷ್ಟು ಪಾಂಡಿತ್ಯ ಪಡೆದವರು ಇವರೇ ಇರಬೇಕು. ಶಿವಮೊಗ್ಗದಲ್ಲಿ 1957ರ ಸಮಯದಲ್ಲಿ ಅಂದರೆ ಶರಾವತಿ ಪ್ರಾಜೆಕ್ಟ್ ಆಗುವಾಗ ಅವರು ಡಿ. ಸಿ. ಆಗಿದ್ದರು. ದಲಿತ ಸಮುದಾಯಕ್ಕೆ ಸಹಾಯವಾಗುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರು. ಸರಕಾರ ಕೂಡ ಅವರು ಏನೇ ಯೋಜನೆ ಹಾಕಿಕೊಂಡರೂ ಸಹ ಅದಕ್ಕೆ ಸ್ಪಂದಿಸುತ್ತಿತ್ತು. ಅದನ್ನು ಅನುಷ್ಠಾನಗೊಳಿಸುವಲ್ಲಿ ಪೂರ್ಣ ನೆರವು ನೀಡುತ್ತಿತ್ತು. ಅವರು ಯಾವುದೇ ಯೋಜನೆ ರೂಪಿಸಿದರೂ ಕೂಡ ಅದು ದಲಿತರು ಮತ್ತು ದೀನರ ಬಗ್ಗೆ ಸಾಕಷ್ಟು ಕಳಕಳಿ ಇಟ್ಟುಕೊಂಡು ಮಾಡುವ ಯೋಜನೆಗಳಾಗಿರುತ್ತಿದ್ದವು. ಅದು ಅವರಿಗೆ ತುಂಬಾ ಇಷ್ಟವಾದಂತಹ ಕೆಲಸವಾಗಿತ್ತು.

ದಲಿತರಲ್ಲಿ ಓದಿರುವಂತ ವ್ಯಕ್ತಿಗಳಿಗೆ, ಅವರನ್ನ ಗುರುತಿಸಿ ಕೆಲಸಗಳನ್ನ ಕೊಡಿಸುತ್ತಿದ್ದರು ಅಂತ ಕೇಳಿದೀವಿ.

ಹೌದು. ಅಂತಹ ವ್ಯಕ್ತಿಗಳು ಅವರ ಗಮನಕ್ಕೇನಾದರೂ ಬಂದರೆ ಅವರೇ ಕರೆಯುತ್ತಿದ್ದರು. ಅವರು ಯಾರೇ ಇರಲಿ! ಈಗ ಶೆಡ್ಯೂಲ್ಡ್ ಕಾಸ್ಟ್‌ನಲ್ಲಿ 101 ಜಾತಿ ಇದೆ. ಎಸ್.ಟಿ.ಯಲ್ಲಿ 45 ಜಾತಿ ಇದೆ. ಅದಲ್ಲದೆ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಇವರಲ್ಲಿ ಯಾರು ವಿದ್ಯಾವಂತರಾಗಿದ್ದಾರೆ, ಅವರನ್ನೆಲ್ಲ ಇವರ ಗಮನಕ್ಕೆ ಯಾರಾದರೂ ತಂದರೆ ಕೂಡಲೇ ಅಂತವರನ್ನು ಕರೆಸಿ 'ನೀವು ಇಂಥ ಕೆಲಸ ಮಾಡಿ' ಅಂತ ಹೇಳಿ ಆ ದಿನವೇ ನೇಮಕಾತಿ ಆದೇಶ ಕೊಟ್ಟಂತಹ ನಿದರ್ಶನಗಳೂ ಇವೆ.

ಅಂಥ ನಿದರ್ಶನಗಳಲ್ಲಿ ನೀವು ಕಂಡಿದ್ದು ಯಾವುದಾದರೂ ಒಂದೆರಡನ್ನ ಹೇಳಬಹುದಾ?

ಭದ್ರಾವತಿ ತಾಲ್ಲೂಕಿನ ಸಂಜೀವನಗರದವರು ಒಬ್ಬರು. ಹೆಸರು ನರಸಿಂಹಯ್ಯ ಅಂತ. ಅವರು ನನಗೆ ಪರಿಚಿತರೇ. ಅವರೇ ಸ್ವತಃ ನನಗೆ ಹೇಳಿದ್ದು ಇದು. ಅವರು ನಾಗಮಂಗಲ ತಾಲ್ಲೂಕಿನ ಒಂದು ಗ್ರಾಮದವರು. ಅವರ ತಂದೆಯವರು ಈ

ಭದ್ರಾವತಿ ತಾಲ್ಲೂಕಿಗೆ ವಲಸೆ ಬಂದಿರುತ್ತಾರೆ. ನರಸಿಂಹಯ್ಯನವರು ಆಗಿನ ಕಾಲದಲ್ಲೇ ಸಹ್ಯಾದ್ರಿ ಕಾಲೇಜಿನಲ್ಲಿ ಡಿಗ್ರಿ ಮುಗಿಸಿದ್ದರು. ಆದರೂ ಸಾಧಾರಣ ರೈತನಂತೆ ಅವರು ಉಳುಮೆ ಹೊಲದಲ್ಲಿ ಮಾಡುತ್ತಿದ್ದರು! ಒಮ್ಮೆ ಸಾಹೇಬರು ಅಧಿಕೃತ ಪ್ರವಾಸ ಹೊರಟಿದ್ದರು. ಅವರ ಪ್ರವಾಸವೆಂದರೆ ಹಳ್ಳಿಹಳ್ಳಿಗೆ ಭೇಟಿ ನೀಡುವುದು, ಸಾರ್ವಜನಿಕ ಸಭೆ ನಡೆಸುವುದು, ಜನರ ಕುಂದುಕೊರತೆಗಳನ್ನು ಚರ್ಚಿಸುವುದು ಮತ್ತು ಅವುಗಳಿಗೆ ಸ್ಥಳೀಯವಾಗೇ ಪರಿಹಾರ ದೊರಕುವಂತೆ ಮಾಡುವುದು – ಇದು ಅವರ ಕಾರ್ಯವೈಖರಿ.

ಹೀಗಿರುವಾಗ ನರಸಿಂಹಯ್ಯನವರ ಭೇಟಿ ಆಗುತ್ತದೆ. ಅದು ಒಂದು ಹೊಲದಲ್ಲಿ, ನರಸಿಂಹಯ್ಯ ಹೊಲದಲ್ಲಿ ಉಳುಮೆ ಮಾಡುತ್ತಿರುತ್ತಾರೆ. ವಿಷಯ ತಿಳಿದ ಭರಣಯ್ಯನವರು ಹೊಲದ ಬಳಿಗೆ ಹೋಗುತ್ತಾರೆ. ಅಲ್ಲಿ ನರಸಿಂಹಯ್ಯನವರ ಜೊತೆಯಲ್ಲಿ ಅಲ್ಲಿರುವ ರೈತರನ್ನೆಲ್ಲ ಕರೆದು ಮಾತನಾಡಿಸುತ್ತಾರೆ;

'ಏನ್ರಪ್ಪಾ, ನಿಮಗೆ ಏನಾದರೂ ಸಮಸ್ಯೆ, ತಾಪತ್ರಯ ಇದ್ದರೆ ಹೇಳಿ. ಇಲ್ಲಿ, ನಿಮ್ಮಲ್ಲಿ ಓದಿರುವವರು ಯಾರಾದರೂ ಇದ್ದೀರಾ?' ಅಂತ ಕೇಳುತ್ತಾರೆ.

'ಇದ್ದಾರೆ ಸ್ವಾಮಿ. ಇವರು ನರಸಿಂಹಯ್ಯ ಅಂತ. ಡಿಗ್ರಿ ಮಾಡಿದ್ದಾರೆ.' ಅಂತ ಒಬ್ಬ ರೈತರು ನರಸಿಂಹಯ್ಯನವರನ್ನು ತೋರಿಸಿ ಹೇಳುತ್ತಾರೆ. ಆವಾಗ ಭರಣಯ್ಯನವರು ನರಸಿಂಹಯ್ಯನವರನ್ನ ಪ್ರತ್ಯೇಕವಾಗಿ ಕರೆದು ಮಾತನಾಡುತ್ತಾರೆ.

'ನರಸಿಂಹಯ್ಯನವರೇ, ನಿಮಗೆ ಸರ್ಕಾರಿ ಕೆಲಸ ಕೊಟ್ಟರೆ ನೀವು ಮಾಡುತ್ತೀರಾ?'

'ಮಾಡ್ತೀನಿ ಸ್ವಾಮಿ. ಹಲವಾರು ಬಾರಿ ನಾನು ಕೆಲಸಕ್ಕೆ ಅಂತ ಬೆಂಗಳೂರಿಗೆ ಹೋಗಿ ಬಂದೆ. ಆದರೂ ಕೆಲಸ ಆಗಲಿಲ್ಲ. ನೀವೇನಾದರೂ ಹೇಳಿದರೆ ನಾನು ಖಂಡಿತ ಮಾಡ್ತೀನಿ ಸ್ವಾಮಿ'

'ನೀವು ಈ ದಿನ 5 ಗಂಟೆ ಹೊತ್ತಿಗೆ ಶಿವಮೊಗ್ಗಕ್ಕೆ, ನನ್ನ ಕಚೇರಿಗೆ ಬರೋದಿಕ್ಕೆ ಆಗುತ್ತಾ?'

'ಆಗಬಹುದು ಸ್ವಾಮಿ ಬರುತ್ತೀನಿ'

'ನಿಮಗೆ ಕಚೇರಿಗೆ ಬರೋದಿಕ್ಕೆ ವ್ಯವಸ್ಥೆ ಮಾಡಬೇಕಾ?'

'ಇಲ್ಲ ಸ್ವಾಮಿ ನಾನು ಖಂಡಿತಾ ಬರುತ್ತೀನಿ.' ಅಂತ ನರಸಿಂಹಯ್ಯನವರು ಹೇಳುವರು.

ಅಷ್ಟರಲ್ಲಿ ಭರಣಯ್ಯನವರು ಭದ್ರಾವತಿಯ ಭೇಟಿ ಮುಗಿಸಿಕೊಂಡು ಮಧ್ಯಾಹ್ನ ತಮ್ಮ ಕಚೇರಿಗೆ ತೆರಳಿದರು. ಅಲ್ಲಿರುವ ಸಿಬ್ಬಂದಿಯ ಜೊತೆ ಚರ್ಚೆ ಮಾಡಿ; 'ಡಿಗ್ರಿ

ಆದವರಿಗೆ ಕಾನೂನು ಬದ್ಧವಾಗಿ, ನಿಯಮಾನುಸಾರವಾಗಿ ಏನೇನು ಕೆಲಸಗಳನ್ನ ಕೊಡಬಹುದು ಆ ಪಟ್ಟಿ ತೆಗೆದುಕೊಂಡು ಬನ್ನಿ ನೋಡೋಣ. ಒಬ್ಬ ವ್ಯಕ್ತಿಯನ್ನ ನಾನು ಇವತ್ತು ಗುರುತಿಸಿದ್ದೀನಿ. ಆತ ಡಿಗ್ರಿ ಮಾಡಿ ಹೊಲದಲ್ಲಿ ಕೆಲಸ ಮಾಡುತ್ತಿದ್ದಾನೆ! ನೋಡಿದರೆ ಪ್ರತಿಭಾವಂತನಂತೆ ಕಾಣುತ್ತಾನೆ. ಅವನಿಗೆ ಸಹಾಯ ಮಾಡಬೇಕು. ಆತನಿಗೆ ಒಂದು ಕೆಲಸ ಕೊಡಬೇಕು ನಾನು. ಮತ್ತೆ ಆತ ಬರುವುದರೊಳಗೆ, ಇವತ್ತೇ ಕೆಲಸದ ಆದೇಶ ತಯಾರಾಗಿರಬೇಕು' ಅಂತ ಹೇಳುತ್ತಾರೆ.

ಅಂದರೆ ಅಷ್ಟರಮಟ್ಟಿಗೆ ಉನ್ನತ ಅಧಿಕಾರ ಇದ್ರೂ ಕೂಡ ಆರ್. ಭರಣಯ್ಯನವರು ಯಾವುದೇ ನಿರ್ಧಾರವನ್ನು ಏಕಪಕ್ಷೀಯವಾಗಿ, ಸರ್ವಾಧಿಕಾರಿ ಧೋರಣೆಯಿಂದ ತೆಗೆದುಕೊಳ್ಳುತ್ತಿರಲಿಲ್ಲ. ತಮ್ಮ ಸಹೋದ್ಯೋಗಿಗಳ ಜೊತೆ ಚರ್ಚಿಸಿ ವಿವರ ಪಡೆದೇ ನೆರವು ನೀಡಲು ಮುಂದಾಗುತ್ತಿದ್ದರು ಅಲ್ವಾ?

ಹೌದು. ಯಾಕೆ ಅಂದರೆ ಮುಂದೆ ಕಾನೂನಿನ ತೊಡಕು ಬರಬಾರದು ಅಂತ ದೂರದೃಷ್ಟಿ ಇಟ್ಟುಕೊಂಡು ಅವರು ಸಿಬ್ಬಂದಿಯ ಜೊತೆಯಲ್ಲಿ ಚರ್ಚೆ ಮಾಡಿಯೇ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಅಲ್ಲದೆ ಸಿಬ್ಬಂದಿಯ ಜೊತೆಯಲ್ಲಿ ಒಳ್ಳೆಯ ಒಡನಾಟ ಕೂಡ ಇರುತ್ತಿತ್ತು. ಈ ದಿಕ್ಕಿನಲ್ಲಿ ಅವರು ಯೋಚನೆ ಮಾಡಿ ನಿರ್ಧಾರಗಳನ್ನ ತೆಗೆದುಕೊಳ್ಳುತ್ತಿದ್ದರು. ಮತ್ತೆ ಕೆಲವು ಸಮಯ ಡಿ.ಸಿ.ಯವರಿಗೆ ಇರತಕ್ಕಂತಹ ಅಧಿಕಾರ ಏನಿದೆ ಅದನ್ನು ತೆಗೆದುಕೊಳ್ಳುವುದರಲ್ಲಿ ಅವರು ಖಂಡಿತವಾಗಿಯೂ ಹಿಂದೆ ಮುಂದೆ ನೋಡುತ್ತಿರಲಿಲ್ಲ! ನಂತರ ಈ ನರಸಿಂಹಯ್ಯನವರು ಸುಮಾರು 5ಗಂಟೆ ಸಮಯಕ್ಕೆ ಅಲ್ಲಿಗೆ ಹೋದರು.

ಆಗ ಭರಣಯ್ಯನವರು 'ಏನಪ್ಪಾ ನೀನು ಈ ದಿನವೇ ಕೆಲಸಕ್ಕೆ ಸೇರುತ್ತೀಯಾ?' ಅಂದರು.

'ಈಗಾಗಲೇ ವೇಳೆ ಆಗಿಬಿಟ್ಟಿದೆಯಲ್ಲ ಸ್ವಾಮಿ, ತಾವು ಸಮಯ ನೀಡಿದರೆ ಆಗಬಹುದು.'

'ನೀವು ಇವತ್ತೇ, ಈ ಕೂಡಲೇ ಕೆಲಸಕ್ಕೆ ವರದಿ ಮಾಡಿಕೊಳ್ಳಿ. 5.30ರ ನಂತರ ನೀವು ಹೋಗಬಹುದು. ನಾಳೆ ಬೆಳಿಗ್ಗೆ ಯಥಾಪ್ರಕಾರ ಡ್ಯೂಟಿಗೆ ಬನ್ನಿ.'

ಹೀಗೆ ಆದೇಶ ಕೊಟ್ಟಾಗ ಅವರಿಗೆ ನಂಬಲಿಕ್ಕೇ ಆಗುವುದಿಲ್ಲ. 'ಇದೇನು ಭ್ರಮೆಯೋ? ಕನಸೋ? ಇಷ್ಟು ಬೇಗ ಕೆಲಸದ ಆದೇಶ ಕೊಡುವುದು ಅಂದರೆ! ನನ್ನ ಹೆಸರು ಕೇಳಿ ತಿಳಿದುಕೊಂಡಿದ್ದು ಅಷ್ಟೆ. ತಂದೆ ಹೆಸರು ಕೂಡ ಕೇಳಿರಲಿಲ್ಲ'

ಅಂತ ಆಶ್ಚರ್ಯ ಆಗುತ್ತೆ ಅವರಿಗೆ. ಜೊತೆಗೆ ತುಂಬಾ ಸಂತೋಷವೂ ಆಗುತ್ತೆ. ತುಂಬಾ ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ನಂತರ ಕೆಲವಾರು ವರ್ಷ ಇಲ್ಲಿ ಕೆಲಸ ಮಾಡಿ ಬೆಂಗಳೂರಿಗೆ ಹೊರಟುಹೋಗುತ್ತಾರೆ ಅವರು. ಅಲ್ಲಿ ಉನ್ನತಾಧಿಕಾರಿಯಾಗಿ ಕೆಲಸ ಮಾಡುತ್ತಾರೆ. ಈಗ ಇಲ್ಲ ಅವರು.

ಆರ್. ಭರಣಯ್ಯನವರು ಆ ಮಟ್ಟದ ಉನ್ನತ ಅಧಿಕಾರದಲ್ಲಿದ್ದರೂ ಕೂಡ ಜನಸಾಮಾನ್ಯರ ಬಗ್ಗೆ ಕಳಕಳಿ, ಕಾಳಜಿ ಉಳ್ಳವರಾಗಿದ್ದರು ಅಂತ ಹೇಳಿದ್ದೀರಿ. ಇದಕ್ಕೆ ಇನ್ನೂ ಯಾವುದಾದರೂ ನಿದರ್ಶನ ಕೊಡುತ್ತೀರಾ?

ಅಬ್ದುಲ್ ರಶೀದ್ ಅಂತ ಒಬ್ಬ ಮುಸಲ್ಮಾನರಿದ್ದರು ಶಿವಮೊಗ್ಗದಲ್ಲಿ. ಅವರು ತಳ್ಳುಗಾಡಿ ಎಳೆಯುವ ಕೆಲಸ ಮಾಡುತ್ತಿದ್ದರು. ನೋಡಲಿಕ್ಕೆ ದೃಢಕಾಯರಾಗಿದ್ದರು. ಮನೆಯಲ್ಲಿ ಸಿಕ್ಕಾಬಟ್ಟೆ ಬಡತನ ಇತ್ತು. ಒಮ್ಮೆ ಭರಣಯ್ಯನವರು ನಗರ ಸಂಚಾರ ಮಾಡುವಾಗ ಇವರ ವಾಹನಕ್ಕೆ ಅವರ ತಳ್ಳುಗಾಡಿ ಅಡ್ಡಬಂದುಬಿಡುತ್ತೆ. ಸ್ವಲ್ಪ ತಗುಲಿದಹಾಗೆ ಆಗುತ್ತೆ. ಕೂಡಲೇ ಸುತ್ತಮುತ್ತ ಇದ್ದ ಪೊಲೀಸಿನವರೆಲ್ಲ ಆತನನ್ನ ತರಾಟೆಗೆ ತೆಗೆದುಕೊಳ್ಳುವಂತಹ ಪ್ರಸಂಗ ನಡೆಯುತ್ತದೆ. ಭರಣಯ್ಯನವರು ತಕ್ಷಣ ಕಾರು ನಿಲ್ಲಿಸಿ ಇಳಿದು ಬರುತ್ತಾರೆ. ತಮ್ಮ ಸಿಬ್ಬಂದಿಗೆ ತಿಳಿವಳಿಕೆ ಹೇಳುತ್ತಾರೆ;

'ಹಾಗೆಲ್ಲ ಮಾಡಲಿಕ್ಕೆ ಹೋಗಬೇಡಿ. ನೋಡಿ, ನಿಮ್ಮ ವಾಹನಗಳಿಗೆ ಬ್ರೇಕ್ ಇದೆ. ಬೇಕೆಂದಲ್ಲಿ ನೀವು ಬ್ರೇಕ್ ಹಾಕಿ ನಿಲ್ಲಿಸಬಹುದು. ಆದರೂ ಕೂಡ ನೀವೂ ಸಾಕಷ್ಟು ಅಪಘಾತ ಮಾಡುತ್ತೀರಿ. ಆದರೆ ಈತನ ಗಾಡಿಗೆ ಯಾವುದೇ ರೀತಿಯ ಬ್ರೇಕ್ ಇಲ್ಲ. ಆಯ ತಪ್ಪಿ ಸ್ವಲ್ಪ ತಗುಲಿರಬಹುದು. ಅದನ್ನ ನೀವು ಇಷ್ಟೊಂದು ದೊಡ್ಡದು ಮಾಡೋದಿಕ್ಕೆ ಹೋಗಬೇಡಿ' ಅಂತ ಬುದ್ಧಿ ಹೇಳುತ್ತಾರೆ.

ಆತನನ್ನ ಕರೆದು ಅವನ ಬಗ್ಗೆ ವಿಚಾರಿಸುತ್ತಾರೆ. ನಿಂತಲ್ಲೇ ಆತನ ಬಗ್ಗೆ ಮಾಹಿತಿ ತಿಳಿಯುವ ಕುತೂಹಲ ಭರಣಯ್ಯನವರಿಗೆ. ಆಗ 'ಏನಪ್ಪಾ, ವಿದ್ಯಾಭ್ಯಾಸ ಮಾಡಿದ್ದೀಯಾ?' ಅಂತ ಕೇಳುತ್ತಾರೆ.

'ಹೌದು ಸ್ವಾಮಿ ಲೋಯರ್ ಸೆಕೆಂಡರಿ ಓದಿದೀನಿ'

'ನೋಡೋದಿಕ್ಕೆ ದೃಢಕಾಯನಾಗಿ ಇದೀಯ ನೀನು. ಪೋಲಿಸ್ ಇಲಾಖೆಗೆ ಸೇರಿಸಿದರೆ ಕೆಲಸ ಮಾಡುತ್ತೀಯಾ?'

'ಸರಿ ಸ್ವಾಮಿ. ಅಗತ್ಯವಾಗಿ ಮಾಡುತ್ತೀನಿ.' ಆತ ಕೃತಜ್ಞತೆಯಿಂದ ಬೆರಗಾಗಿ ನಿಲ್ಲುತ್ತಾನೆ.

'ಹಾಗಾದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸ್ತೀನಿ. ನಾಳೆ ಅವರನ್ನ ಹೋಗಿ ಕಾಣು.'

ಅವರ ಮಾತಿನಂತೆ ಆ ಬಡ ಮುಸ್ಲಿಂ ಯುವಕ ಸಂಬಂಧಪಟ್ಟವರನ್ನು ಮರುದಿನವೇ ಹೋಗಿ ಕಾಣುತ್ತಾರೆ. ಪೊಲೀಸ್ ಇಲಾಖೆಯಲ್ಲಿ ಕೆಲಸ ಸಿಗುತ್ತದೆ. ಇಲ್ಲೇ, ಶಿವಮೊಗ್ಗ ಜಿಲ್ಲೆಯಲ್ಲೇ ಆತ ನಿವೃತ್ತಿ ಆಗುವವರೆಗೂ ಸೇವೆ ಸಲ್ಲಿಸಿದ್ದಾರೆ.

ಆರ್. ಭರಣಯ್ಯನವರು ಮ್ಯಾಮ್‌ಕೋಸ್ (MAMCOS)ಗೆ ಕೂಡ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಭೂಸುಧಾರಣೆಯನ್ನ ಆ ಹೆಸರಿನಲ್ಲಿ ಅಲ್ಲದಿದ್ದರೂ ಅದೇ ಮಾದರಿಯ ಕಾರ್ಯಕ್ರಮವನ್ನ ಜಾರಿಗೆ ತಂದಿದ್ದರು. ಅದರಲ್ಲಿ ಭೂರಹಿತರಿಗೆ ಭೂಮಿ ಕೊಡಿಸಿದರು ಅಂತ ಕೇಳಿದೀವಿ. ಅದರ ಬಗ್ಗೆ ವಿವರಿಸುತ್ತೀರಾ?

ಹೌದು. ಅದಕ್ಕೆ ಅವರಿಗೆ ಸ್ಫೂರ್ತಿ ಯಾರು ಅಂದರೆ ನಾಲ್ವಡಿ ಕೃಷ್ಣರಾಜ ಒಡೆಯರು. ಅವರಲ್ಲಿದ್ದಂತಹ ದೂರದೃಷ್ಟಿ ಇವರನ್ನ ಬಹಳ ಪ್ರಭಾವಿಸಿತ್ತು ಎಂದೇ ಹೇಳಬಹುದು. ಅದನ್ನ ಭರಣಯ್ಯನವರು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರುತ್ತಿದ್ದರು. ಆ ನಿಟ್ಟಿನಲ್ಲಿ ಹಿಂದೆ ಈ ಭೂಸುಧಾರಣೆ ಯಾವುದೇ ರಾಜ್ಯದಲ್ಲೂ ಅನುಷ್ಠಾನಕ್ಕೆ ಬಂದಿರದಿದ್ದ ಕಾಲದಲ್ಲಿ, ಆ ರೀತಿಯ ಯೋಜನೆಯಲ್ಲಿ ಇವರು ಪೂರ್ವಭಾವಿಯಾಗಿಯೇ ಕಾರ್ಯ ಪ್ರಾರಂಭಿಸಿದವರು.

ಭೂಸುಧಾರಣೆ ಅಂದರೆ ಹೀಗೀಗೆ ಇರಬೇಕು. ಇಷ್ಟಿಷ್ಟು ಸರ್ಕಾರಿ ಜಮೀನಿದೆ. ಜಮೀನಿರದ ರೈತರು ಎಷ್ಟಿದ್ದಾರೆ ಇತ್ಯಾದಿ ಎಲ್ಲ ಪರಿಶೀಲಿಸಿ, ಎಲ್ಲ ಜಾತಿಯವರೂ ಕೂಡ ಈ ಸೌಲಭ್ಯವನ್ನು ಬಳಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದರು. ಬರೀ ಪರಿಶಿಷ್ಟ ಜಾತಿ ಅಂತ ಅಲ್ಲ, ಹಿಂದುಳಿದವರು, ಭೂ ರಹಿತರು, ಅಲ್ಪಸಂಖ್ಯಾತರು ಇವರನ್ನೆಲ್ಲ ಗುರುತಿಸಿ, ಈಗಾಗಲೇ ಹಾಲಿ ಒಡೆತನದಲ್ಲಿರುವವರಿಗೆ ತೊಂದರೆ ಆಗದ ರೀತಿಯಲ್ಲಿ ಸರ್ಕಾರಿ ಜಮೀನುಗಳು ಏನಿದ್ದವು ಅದನ್ನೆಲ್ಲ ಅಂತವರಿಗೆ ಹಂಚಿಕೆ ಮಾಡುತ್ತಿದ್ದರು. ಅಂತಹ ನಿದರ್ಶನಗಳು ಸಾಕಷ್ಟಿವೆ. ನಾನು ತಿಳಿದ ಹಾಗೆ ಸುತ್ತಮುತ್ತ ಸುಮಾರು 50 ಗ್ರಾಮಗಳನ್ನು ಅವರು ಕೆಲವು ಯೋಜನೆಗಳನ್ನ ಹಾಕಿಕೊಂಡು ನಿವೇಶನಗಳನ್ನ ಕೊಡಿಸುವಂತಹದ್ದು, ಮನೆಗಳನ್ನ ಕಟ್ಟಿಕೊಡುವಂತದ್ದನ್ನೆಲ್ಲ ಮಾಡಿದ್ದಾರೆ. ಹೆಚ್ಚಿನ ಭಾಗದಲ್ಲಿ ಹೊಸನಗರ ತಾಲ್ಲೂಕಿನ ಹಳ್ಳಿಗಳು, ತೀರ್ಥಹಳ್ಳಿ ತಾಲ್ಲೂಕಿನ ಹಳ್ಳಿಗಳು ಮತ್ತೆ ಜಾಸ್ತಿ – ಅಂದರೆ ಶೇ.75 ಭಾಗ ಭದ್ರಾವತಿ ತಾಲ್ಲೂಕಿನಲ್ಲಿ ಹಂಚಿಕೆ ಮಾಡಿದ್ದಾರೆ.

ಆರ್. ಭರಣಯ್ಯನವರ ಸಂಸ್ಕೃತ ಪಾಂಡಿತ್ಯದ ಬಗ್ಗೆ ಮಾತನಾಡುವಾಗ ಕಲ್ಯಾಣ್ ರಾವ್ ಎಂಬುವವರ ಘಟನೆಯನ್ನ ಹೇಳಿದಿರಿ. ಅದನ್ನ ಸ್ವಲ್ಪ ವಿವರಿಸಬಹುದಾ?

ಕಲ್ಯಾಣ್ ರಾವ್ ಅವರು ಕೆ.ಹೆಚ್. ರಂಗನಾಥ್ ಅವರ ಒಡನಾಡಿಯಾಗಿದ್ದರು. ಕಾಂಗ್ರೆಸ್‌ನ ಆ ಕಾಲದ ಮುಖಂಡರು. ಅವರು ಬೆಂಬಲಿಗರ ಜೊತೆಯಲ್ಲಿ ಒಮ್ಮೆ ಯಾವುದೋ ತುರ್ತಿನ ಕೆಲಸಕ್ಕೆ ಅಂತ ಭರಣಯ್ಯನವರನ್ನ ಕಾಣಲು ಹೋಗುತ್ತಾರೆ. ಆಗತಾನೇ ಡಿ.ಸಿ. ಆಗಿ ಬಂದಿರುತ್ತಾರೆ ಆರ್. ಭರಣಯ್ಯನವರು. ಇವರೆಲ್ಲ ತಮ್ಮ ಬೆಂಬಲಿಗರೊಡನೆ ಭರಣಯ್ಯನವರ ಮನೆಗೇ ಹೋಗುತ್ತಾರೆ. ಬೆಳಗಿನ 7–7.30ರ ಸಮಯ. ಭರಣಯ್ಯನವರು ಪೂಜೆಗೆ ಕುಳಿತಿರುತ್ತಾರೆ. ಮತ್ತೆ ಸಂಸ್ಕೃತ ಶ್ಲೋಕಗಳನ್ನ ತಪ್ಪಿಲ್ಲದಂತೆ ಸ್ಪಷ್ಟವಾಗಿ ಉಚ್ಛರಿಸುತ್ತ ಪೂಜೆ ಮಾಡುತ್ತಿರುತ್ತಾರೆ. ಆಗ ಕಲ್ಯಾಣ್‌ರಾವ್ ಮತ್ತವರ ಸಂಗಡಿಗರು ಏನು ಮಾತಾಡಿಕೊಳ್ಳುತ್ತಾರೆ ಅಂದರೆ;

“ಯಾರೋ ಬ್ರಾಹ್ಮಣ ಜನಾಂಗಕ್ಕೆ ಸೇರಿದವರೇ ಇರಬಹುದು ಇವರು. ಏಕೆಂದರೆ ಉಚ್ಚಾರಣೆ ಎಲ್ಲ ನೋಡಿದರೆ ದಲಿತರಿಗೆ ಆ ಪಾಂಡಿತ್ಯ ಬರೋದು ಕಡಿಮೆ' ಅಂತ ಇವರಿವರೇ ಮಾತಾಡಿಕೊಳ್ಳುತ್ತಾರೆ.

ಭರಣಯ್ಯನವರ ಆರ್ಡರ್ಲಿ 'ಕಲ್ಯಾಣರಾವ್ ಅವರೆಲ್ಲ ನಿಮ್ಮನ್ನ ಕಾಣೋಕೆ ಬಂದಿದ್ದಾರೆ.' ಅಂತ ಹೇಳಿದಾಗ

'ಅವರನ್ನೆಲ್ಲ ಕೂರಿಸಿ ಕಾಫಿ ತಿಂಡಿ ಕೊಡು.' ಅಂತ ಹೇಳಿ ಇವರು ಪೂಜೆ ಮುಗಿಸಿ ಬರುತ್ತಾರೆ. 'ಆಗ ಪೂಜೆ ಮಾಡುತ್ತಾ ಇದ್ದವರು, ಶ್ಲೋಕ ಹೇಳುತ್ತಾ ಇದ್ದವರು ಯಾರು ಸ್ವಾಮಿ?' ಅಂತ ಕಲ್ಯಾಣ್ ರಾವ್ ಕೇಳುತ್ತಾರೆ.

'ನಾನೇ'

'ತಾವೆಲ್ಲಿ ಸಂಸ್ಕೃತ ವ್ಯಾಸಂಗ ಮಾಡಿದ್ದು?'

'ನಾನು ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿದೆ. ಅದಕ್ಕೆಲ್ಲ ಸ್ಫೂರ್ತಿ ನಮ್ಮ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ನನಗೆ ಸಂಸ್ಕೃತದಲ್ಲಿ ಮೊದಲಿನಿಂದಲೂ ಆಸಕ್ತಿ ಇತ್ತು. ಅದನ್ನ ಮಹಾರಾಜರ ಜೊತೆ ಪ್ರಸ್ತಾಪ ಮಾಡಿದಾಗ 'ನೀವು ನಮ್ಮ ಪಾಠಶಾಲೆಯಲ್ಲೇ ಯಾಕೆ ಓದಬಾರದು' ಅಂತ ಅಂದು ಅವಕಾಶ ಕೊಟ್ಟರು. ಆದ್ದರಿಂದ ಅಲ್ಲಿಂದಲೇ ಸಂಸ್ಕೃತ ವಿಷಯದಲ್ಲಿ ಪದವಿ ಪಡೆದೆ.'

ಆವಾಗ ನಮ್ಮ ಕಾಂಗ್ರೆಸ್ ಮುಖಂಡರಿಗೆ ತುಂಬಾ ಮೇರು ರೂಪದ ವ್ಯಕ್ತಿತ್ವ ಇವರದ್ದು ಅಂತ ಹೆಮ್ಮೆ ಆಗುತ್ತೆ. ಮತ್ತೆ ಕಲ್ಯಾಣ್ ರಾವ್ ಅವರಿಗೆ ಆಗಬೇಕಾದ ಕೆಲಸ ಎಲ್ಲ ತಿಳಿದುಕೊಂಡು,

'ನೀವು ಕಚೇರಿಗೆ ಬನ್ನಿ ಈ ದಿನವೇ ಮಾಡಿಕೊಡುತ್ತೀನಿ' ಅಂತ ಹೇಳುತ್ತಾರೆ.

ಭರಣಯ್ಯನವರು ಯಾವುದೇ ವಿಳಂಬ ನೀತಿ ಅನುಸರಿಸುತ್ತಿರಲಿಲ್ಲ. ಸರ್ಕಾರಿ ಕೆಲಸ ಅಂದರೆ ನಿಜವಾದ ಅರ್ಥದಲ್ಲಿ ದೇವರ ಕೆಲಸ ಅಂತ ತಿಳಿದುಕೊಂಡಿದ್ದರು. ಸರ್ಕಾರದ ಆಜ್ಞೆಯನ್ನ ಅಚ್ಚುಕಟ್ಟಾಗಿ ಪಾಲನೆ ಮಾಡುತ್ತಿದ್ದರು. ಅದಕ್ಕೆ ತಕ್ಕಂತೆ ಸರ್ಕಾರ ಕೂಡ ಇವರ ಎಲ್ಲ ಕೆಲಸಕ್ಕೂ ಸ್ಪಂದಿಸುತ್ತಿತ್ತು. ಇವರು ಯಾವುದೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿದರೂ ಕೂಡ ಅದು ಕೂಡಲೇ ಜಾರಿಗೆ ಬರುವಂತಹ ಆದೇಶವನ್ನು ಸರ್ಕಾರ ಹೊರಡಿಸುತ್ತಿತ್ತು.

ಭರಣಯ್ಯನವರ ಸಂಸ್ಕೃತದ ಆಸಕ್ತಿಯ ಬಗ್ಗೆ ಇನ್ನೊಂದು ವಿಷಯ ಅಂದರೆ – ನಮ್ಮ ಪಕ್ಕದೂರು ಶ್ರೀರಂಗರಾಜಪುರ ಅಂತ ಇದೆ. ಅದನ್ನ ಆಡುಭಾಷೆಯಲ್ಲಿ 'ಮೋಳೆ' ಅಂತ ಕರೀತಾರೆ. ಆ ಊರಿನಲ್ಲಿ ಸಾಕಷ್ಟು ಅಯ್ಯಂಗಾರ್ ವಂಶಸ್ಥರೆಲ್ಲ ಈಗಲೂ ಇದಾರೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ತಾತನ ಊರು ಕೂಡ ಹೌದು ಅದು. ಅಲ್ಲಿಂದ ಪ್ರತೀ ವಾರ, ಬಹುಶಃ ಭಾನುವಾರ ಇರಬಹುದು ಅಂತ ಕಾಣುತ್ತೆ. ಪಂಡಿತರೊಬ್ಬರು ಬಂದು ಸಂಸ್ಕೃತ ಶ್ಲೋಕಗಳನ್ನ ಸೋಮನಾಥಪುರದ ಈ ದಲಿತ ಹುಡುಗರುಗಳಿಗೆ ಪಾಠ ಹೇಳಿಕೊಡುತ್ತಿರುವಂತದ್ದನ್ನ ನಾನೂ ನೋಡಿದೀನಿ. ಅದು ಕೂಡ ಭರಣಯ್ಯನವರಿಗೆ ಸಂಸ್ಕೃತದಲ್ಲಿ ಆಸಕ್ತಿ ಹುಟ್ಟಲು ಪ್ರೇರಣೆಯಾಗಿರಬಹುದು.

ಆರ್.ಭರಣಯ್ಯನವರು ಕೊಳ್ಳೇಗಾಲದಲ್ಲಿ ಚುನಾವಣೆಗೆ ನಿಂತಿದ್ದರು ಅಂತ ಕೇಳಿದೀವಿ. ಆ ಘಟನೆ ಬಗ್ಗೆ ಸ್ವಲ್ಪ ಹೇಳಿ.

ಸಾಮಾನ್ಯವಾಗಿ ಆಗಿನ ಕಾಲದ ಜನ, ಇವರು ಮಾಡಿರುವಂತಹ ಒಳ್ಳೆ ಕೆಲಸಗಳ ಬಗ್ಗೆ ಎಲ್ಲರೂ – ಎಲ್ಲ ಜಾತಿಯವರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಗಾಗಿ ನೀವ್ಯಾಕೆ ಚುನಾವಣೆಗೆ ನಿಲ್ಲಬಾರದು ಅಂತ ನಮ್ಮ ಜನಗಳೇ ಪ್ರೇರೇಪಣೆಕೊಟ್ಟರು. ಚುನಾವಣೆಗೆ ನಿಂತರೆ ನೀವು ಸಫಲವಾಗುತ್ತೀರ. ಖಂಡಿತ ಆರಿಸಿ ಬರುತ್ತೀರಿ ಆವಾಗ ಇನ್ನೂ ಚೆನ್ನಾಗಿ ಸೇವೆ ಮಾಡಬಹುದು ನೀವು ಅಂತ ಅವರನ್ನ ಹುರಿದುಂಬಿಸುತ್ತಾರೆ. ಬಹುಶಃ ಅವರಿಗೆ ಅಷ್ಟು ಆಸಕ್ತಿ ಇರಲಿಲ್ಲ ಮೊದಲು. ಆದರೂ ಆ ಜನಗಳ ಒತ್ತಡಕ್ಕೆ ಮಣಿದು ನಿಲ್ತಾರೆ. ಆದರೆ ಈ ಅಧಿಕಾರ ವರ್ಗವೇ ಬೇರೆ, ರಾಜಕೀಯವೇ ಬೇರೆ! ಆವಾಗ ಏನಾಗುತ್ತೆ ಅಂದರೆ ಭರಣಯ್ಯನವರು ಚುನಾವಣೆಯಲ್ಲಿ ಸೋಲುತ್ತಾರೆ.

ಈ ಮಾತುಗಳನ್ನು ಹೇಳುತ್ತಿರುವಾಗ ಶಂಕರ್ ಅವರಿಗೂ ಕೂಡ ಭರಣಯ್ಯನವರಂತ ಒಬ್ಬ ಜನಪರ ವ್ಯಕ್ತಿಯನ್ನು ಗೆಲ್ಲಿಸದ ವ್ಯವಸ್ಥೆಯ ಬಗ್ಗೆ ಬೇಸರ, ವ್ಯಕ್ತವಾಯಿತು. ಶಂಕರ್ ಅವರು ನಂತರ ಆಡಿದ ಮಾತುಗಳನ್ನು ಕೇಳಿದರೆ ಬಹುಶಃ ಸ್ವತಃ ಭರಣಯ್ಯನವರಿಗೂ ಕೂಡ ಈ ವ್ಯವಸ್ಥೆಯ ಚದುರಂಗದಾಟ ಬೇಸರ ತರಿಸಿರಬಹುದು ಎನ್ನಿಸುತ್ತದೆ. ಚುನಾವಣೆಯ ಸೋಲು ಭರಣಯ್ಯನವರಿಗೆ ಬಹಳ ಬೇಸರ ಉಂಟುಮಾಡುತ್ತದೆ. 'ನಾನು ಖುದ್ದು ಇಷ್ಟೆಲ್ಲ ಕೆಲಸ ಕಾರ್ಯಗಳನ್ನು ಮಾಡಿಕೊಟ್ಟರೂ ಜನ ನನ್ನನ್ನು ಗುರುತಿಸಿ ಓಟು ಹಾಕಲಿಲ್ಲ. ಈ ರಾಜಕೀಯ ನಮಗಲ್ಲ. ಎಂಬಂತಹ ನಿರ್ಧಾರಕ್ಕೆ ಅವರು ಬರುತ್ತಾರೆ. ತಮ್ಮ ನಿರ್ಧಾರವನ್ನು ಅಂದಿನ ಯುವಕರುಗಳ ಮುಂದೆ ಅವರು ಕಿವಿಮಾತಿನ ರೂಪದಲ್ಲಿ ತೆರೆದಿಡುತ್ತಾರೆ. ಅದನ್ನು ಶಂಕರ್ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿದ್ದು ಹೀಗೆ:

ಈ ಸೋಲಿನ ನಂತರ ಬಹಳ ಬೇಸರ ಆಗುತ್ತೆ ಭರಣಯ್ಯ ಅವರಿಗೆ. ಆಗ ಭರಣಯ್ಯನವರು ಒಂದು ಸಲ ಆ ಭಾಗದ ಕೆಲ ವಿದ್ಯಾವಂತ ಯುವಕರನ್ನೆಲ್ಲ ಕುರಿತು ಹೇಳ್ತಾರೆ –

"ನೋಡಿ, ನಿಮಗೆ ರಾಜಕೀಯದಲ್ಲಿ ನಿಜವಾದ ಆಸಕ್ತಿ ಇದ್ದರೆ ಮೊದಲಿನಿಂದಲೇ ತೊಡಗಿಸಿಕೊಳ್ಳಿ. ಆನಂತರದ ದಿನಗಳಲ್ಲಿ ಸೇವೆ ಮಾಡಿ ರಾಜಕೀಯದಲ್ಲಿ ಮೇಲೆ ಬರುತ್ತೀನಿ ಅಂತ ಆಸೆ ಮಾತ್ರ ಇಟ್ಟುಕೊಳ್ಳಬೇಡಿ ನೀವು. ನಿಮಗೆ ನಿಜವಾಗಲೂ ಇಷ್ಟ ಇದ್ದರೆ ಮೊದಲೇ ತೊಡಗಿಸಿಕೊಳ್ಳಿ, ಆನಂತರ ಹೋಗೋದು ಅಷ್ಟು ಒಳ್ಳೆದಲ್ಲ."

ಆರ್. ಭರಣಯ್ಯನವರು ಅಂದೆಂದೋ ಆಡಿದ ಈ ಮಾತು ನಮ್ಮ ವರ್ತಮಾನದ ರಾಜಕೀಯ ವ್ಯವಸ್ಥೆಗೂ ಹಿಡಿದಂತಹ ಕೈಗನ್ನಡಿಯಾಗಿದೆ. ಏಕೆಂದರೆ ಆ ನಂತರ ಕೂಡ ಅಧಿಕಾರಿವರ್ಗದವರಲ್ಲಿ ಹಲವರು ನಿವೃತ್ತಿಯ ನಂತರ ರಾಜಕೀಯ ಪ್ರವೇಶ ಮಾಡಿದವರಿದ್ದಾರೆ; ಇಂದಿಗೂ ಮಾಡುತ್ತಿದ್ದಾರೆ. ಆದರೆ ಅವರಲ್ಲಿ ತಾವು ಅಧಿಕಾರಿಗಳಾಗಿದ್ದಾಗ ಮಾಡಿದ ಜನಪರ ಕಾರ್ಯಕ್ರಮದಿಂದಾಗಿಯೇ ರಾಜಕೀಯ ಜೀವನದಲ್ಲಿ ಯಶಸ್ಸು ಕಂಡಿದ್ದು ಬಹಳ ವಿರಳ. ಇಲ್ಲವೇ ಇಲ್ಲ ಎಂದರೂ ಅತಿಶಯೋಕ್ತಿಯಲ್ಲ!

ಆರ್. ಭರಣಯ್ಯನವರ ಆ ಮಾತು ಸೋಲಿನ ಹತಾಶೆಯಿಂದ ಆಡಿದ ಮಾತು ಅಂತ ಹಲವರಿಗೆ ಅನ್ನಿಸಿಬಿಡಬಹುದು. ಆದರೆ ಆ ಮಾತಿನ ಹಿಂದೆ ನಮ್ಮ ರಾಜಕೀಯ ವ್ಯವಸ್ಥೆಯ ನಿಜ ಚಿತ್ರಣವಿರುವುದು ಮಾತ್ರ ಹೌದು. ವರ್ತಮಾನದಲ್ಲಿ ಕೂಡ ಪರಿಸ್ಥಿತಿ ಅಂದಿಗಿಂತ ಬದಲಾಗಿಲ್ಲ ಎಂಬುದೂ ಕೂಡ ಸತ್ಯ.

ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಭರಣಯ್ಯನವರಂತ ವ್ಯಕ್ತಿಯ ಸೋಲು ನಮ್ಮ ವ್ಯವಸ್ಥೆಗೆ ಅಥವಾ ವಿದ್ಯಾವಂತರೆಂದು ಕರೆಯಲ್ಪಡುವ ನಮ್ಮ ವಿವೇಚನೆಗೆ ಒಡ್ಡಿದ

ಸವಾಲೇ ಸರಿ. ಯಾವ ದೃಷ್ಟಿಕೋನದಿಂದ ನೋಡಿದರೂ ಭರಣಯ್ಯನವರು ಗೆಲ್ಲಲೇಬೇಕಾದಂತಹ ಅಭ್ಯರ್ಥಿಯೇ. ಆದರೂ ರಾಜಕೀಯ ಚದುರಂಗದಾಟದಿಂದಾಗಿ ಸೋಲುಕಂಡರು. ಇಲ್ಲಿ ಭರಣಯ್ಯನವರು ಸೋತರು ಎಂಬುದಕ್ಕಿಂತ ಜನರ ವಿವೇಚನೆ, ಆತ್ಮಸಾಕ್ಷಿ ಪ್ರಜಾಸತ್ತೆಗೆ ನ್ಯಾಯ ಸಲ್ಲಿಸುವಲ್ಲಿ ವಿಫಲವಾಯಿತು ಎಂಬುದು ಸರಿಯಾಗಬಹುದೇ ಹೊರತು ಅದು ಭರಣಯ್ಯನವರ ವ್ಯಕ್ತಿತ್ವಕ್ಕೆ ಆದ ಸೋಲಲ್ಲ. ವರ್ತಮಾನದ ಚುನಾವಣಾ ಕಣದಲ್ಲಿ ಕೂಡ ಇಂತಹ ಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮರುಕಳಿಸುತ್ತಿರುವುದು ನಾವು ಇನ್ನೂ ಇದ್ದಲ್ಲೇ ಇದ್ದೇವೆ ಎಂಬುದನ್ನು ಸೂಚಿಸುತ್ತದೆ ಎಂದರೂ ತಪ್ಪಲ್ಲ.

ಆ ಘಟನೆಯ ಕುರಿತು ಶಂಕರ್ ಅವರ ಅಂತಿಮ ಮಾತುಗಳು ಹೀಗಿದ್ದವು.

ನನಗೇನನ್ನಿಸುತ್ತೆ ಅಂತ ಅಂದರೆ ರಾಜಕೀಯಕ್ಕೆ ಬಂದ ನಂತರ ಎಂತಹ ಒಳ್ಳೆಯ ವ್ಯಕ್ತಿ ಆದರೂ ಕೂಡ ಈ ರಾಜಕೀಯದ ಒತ್ತಡ, ಆ ಸ್ಥಿತಿಗತಿಗಳು ಅವನನ್ನು ಬದಲಾವಣೆ ಮಾಡಬಹುದು ಅನ್ನುವ ಒಂದು ಭಾವನೆಯೂ ಇತ್ತು ಅಂತ ಹೇಳುತ್ತಾರೆ. ಒಂದು ಬಣ ರಾಜಕೀಯ ಬೇಡ ಅಂತ ಅವರಿಗೆ ಸೂಚನೆಯನ್ನೂ ಕೊಟ್ಟಿದ್ದರು. ಆದರೆ ಬೆಂಬಲ ನೀಡಿದವರ ಪ್ರಮಾಣ ದೊಡ್ಡದಿತ್ತು. ಆದ್ದರಿಂದ ಆಸಕ್ತಿ ವಹಿಸಿದರು.

ಈ ಸಂದರ್ಭದಲ್ಲಿ ನಾವು ಚರ್ಚೆಗೆ ಕುಳಿತಾಗ ಬಂದಂತಹ ವಿಚಾರವೊಂದು ನನ್ನ ಮನಸ್ಸಿನಲ್ಲಿ ಬಂತು. ನಮ್ಮ ಭೇಟಿಯ ಸಂದರ್ಭದಲ್ಲಿ ಭರಣಯ್ಯನವರು ಚುನಾವಣೆಗೆ ನಿಂತಿದ್ದಕ್ಕೆ ಕಾರಣ ಅವರಿಗೆ ಅಧಿಕಾರದ ಆಸೆ ಇತ್ತು ಎಂಬರ್ಥದ ಅಭಿಪ್ರಾಯಗಳು ಕೆಲವರಿಂದ ವ್ಯಕ್ತವಾಗಿದ್ದವು. ಸಾಮಾನ್ಯವಾಗಿ ರಾಜಕೀಯ ಎಂಬುದು ಕಿವಿಗೆ ಬಿದ್ದೊಡನೆಯೇ ಅಧಿಕಾರ, ಐಶಾರಾಮದ ಕಲ್ಪನೆಗಳು ತಕ್ಷಣ ಮೂಡಿಬಿಡುತ್ತವೆ. ಆ ಅರ್ಥದಲ್ಲೇ ಕೆಲವರು ಭರಣಯ್ಯನವರನ್ನೂ ತರ್ಕಿಸಿರಬೇಕು. ಆದರೆ ಭರಣಯ್ಯನವರ ಬಗ್ಗೆ ತಿಳಿಯುತ್ತಾ ಹೋದಂತೆ ಅವರು ಸ್ವಭಾವತಃ ಅಧಿಕಾರ ಲಾಲಸಿಯಲ್ಲ ಮತ್ತು ಅಧಿಕಾರಕ್ಕಾಗಿಯೇ ರಾಜಕೀಯ ಪ್ರವೇಶ ಮಾಡುವಂತಹ ವ್ಯಕ್ತಿತ್ವ ಅಲ್ಲ ಎಂಬುದು ಎಂತವರಿಗೂ ಅರ್ಥವಾಗುತ್ತದೆ. ಹಾಗಾಗಿಯೇ ಶಂಕರ್ ಅವರ ಬಳಿ ಈ ಅಭಿಪ್ರಾಯವನ್ನು ವ್ಯಕ್ತಮಾಡಿದಾಗ. ಅದಕ್ಕೆ ಶಂಕರ್ ಕೊಟ್ಟಂತಹ ಉತ್ತರ ಹೀಗಿತ್ತು:

ಇಲ್ಲ. ರಾಜಕೀಯ ಸೇರಿ ಅಧಿಕಾರ ಅನುಭವಿಸಬೇಕು, ಇನ್ನೂ ಹಣ ಮಾಡಬೇಕು ಎನ್ನುವ ಆಸೆ ಅವರಿಗೆ ಇರಲಿಲ್ಲ. ಜನಗಳ ಒತ್ತಾಯದ ನಂತರ ಎಲ್ಲೋ ಒಂದು

ಕಡೆ ರಾಜಕೀಯದ ಬಗ್ಗೆ ಅವರಿಗೆ ಆಸಕ್ತಿ ಮೂಡಿರಬಹುದು. ಶಾಸಕನಾಗಿ ಯಾಕೆ ಇನ್ನೂ ಚೆನ್ನಾಗಿ ಕೆಲಸ ಮಾಡಬಾರದು? ರಾಜಕಾರಣಿಯಾಗಿ ಸರ್ಕಾರಿ ಕಾರ್ಯಕ್ರಮಗಳನ್ನೂ ಎಲ್ಲರಿಗೂ ತಲುಪಿಸಬಹುದು ಅನ್ನೋ ಆಸೆ ಮೂಡಿರಬಹುದು. ಇದರ ಹೊರತಾಗಿ ಬೇರೆ ಆಸೆ ಅವರಿಗೆ ಇರಲಿಲ್ಲ.

ಆರ್. ಭರಣಯ್ಯನವರ ಕುಟುಂಬ ಜೀವನದ ಬಗ್ಗೆ ನೀವು ಕಂಡ ವಿಶೇಷತೆ ಬಗ್ಗೆ ಹೇಳಿ.

ಮೊದಲು ಒಂದು ಮದುವೆ ಆಗಿದ್ದರು. ಮೊದಲನೆ ಹೆಂಡತಿ ತೀರಿಕೊಂಡಾಗ ನಂತರ ಎರಡನೆಯವರನ್ನ ಮದುವೆ ಆಗುತ್ತಾರೆ. ತುಂಬು ಕುಟುಂಬ ಅವರದ್ದು. ಒಟ್ಟು ಮೂರು ಜನ ಗಂಡುಮಕ್ಕಳು. ಹೆಣ್ಣುಮಕ್ಕಳು ಆರು ಜನ ಅಂತ ಕಾಣುತ್ತೆ. ಅವರಲ್ಲಿ ನಮ್ಮ ಗುರುಪ್ರಸಾದ್ ಕೂಡ ಹೌದು. ಅವರಿಗೂ ಅಕ್ಕ-ತಂಗಿಯರಿದಾರೆ. ರಾಜಕೀಯದ ವಿಷಯದಲ್ಲಿ ಹೇಳೋದಾದರೆ, ಗುರುಪ್ರಸಾದ್ ಕೂಡ ಒಮ್ಮೆ ಶಾಸಕರಾಗಿದ್ದರು. ಸಾಕಷ್ಟು ಜನಪರ ಕೆಲಸಗಳನ್ನೂ ಮಾಡಿದ್ದರು. ಆದರೆ ಎರಡನೇ ಬಾರಿ ಪ್ರಯತ್ನ ಪಟ್ಟಾಗ ಅವರಿಗೂ ಶಾಸಕರಾಗಲು ಆಗಲಿಲ್ಲ. ಆದರೂ ಇವರೂ ಕೂಡ ತಂದೆಯವರ ಆಕಾಂಕ್ಷೆ ಏನಿದೆ ಅದನ್ನ ಕಾರ್ಯರೂಪಕ್ಕೆ ತರಬೇಕು ಅನ್ನೋ ಉದ್ದೇಶ ಇಟ್ಟುಕೊಂಡಿರೋ ಉತ್ಸಾಹಿ ಮತ್ತು ಜನಪರ ಕಾಳಜಿ ಇರುವವರು. ದೀನದಲಿತರ ಬಗ್ಗೆ ಸಾಕಷ್ಟು ಆಸಕ್ತಿ ಉಳ್ಳವರು. ನಾಡು-ನುಡಿಗಾಗಿ ಕೆಲಸ ಮಾಡಬೇಕು ಅನ್ನೋ ಆಸೆ ಇಟ್ಟುಕೊಂಡಿರುವವರು. ಬಹುಶಃ ಅದು ಗುರುಪ್ರಸಾದ್‌ರಿಗೆ ತಂದೆಯಿಂದ ಬಂದ ಬಳುವಳಿ ಆಗಿರಬಹುದು.

ಅಧಿಕಾರಸ್ಥರ, ಸಾರ್ವಜನಿಕ ವ್ಯಕ್ತಿಗಳ ಕೌಟುಂಬಿಕ ವಿಚಾರಕ್ಕೆ ಬಂದಾಗ, ಕುಟುಂಬಸ್ಥರಲ್ಲಿ ಅವರಿಂದ ನಿರೀಕ್ಷೆಗಳು ತಾನಾಗಿಯೇ ಹುಟ್ಟಿಕೊಳ್ಳುತ್ತವೆ. ಅವರ ಪ್ರಾಮಾಣಿಕತೆಯಿಂದಾಗಿಯೋ ಅಥವಾ ಬೇರೆ ಇನ್ನಾವುದೇ ಕಾರಣಗಳಿಂದ ಕುಟುಂಬಸ್ಥರ ನಿರೀಕ್ಷೆ ಮುಟ್ಟಲಾಗದಿದ್ದರೆ 'ಮನೆಗೆ ಮಾರಿ ಪರರಿಗೆ ಉಪಕಾರಿ' ಎಂಬ ಬಿರುದು ಕುಟುಂಬ ವಲಯದಲ್ಲಿ ತಾನಾಗಿಯೇ ಅಂಟಿಕೊಳ್ಳುತ್ತದೆ.

ಬಹುಶಃ ಆರ್. ಭರಣಯ್ಯನವರನ್ನೂ ಅದು ಬಿಡಲಿಲ್ಲ ಎಂದು ಕಾಣುತ್ತದೆ. ಏಕೆಂದರೆ ನಮ್ಮ ಭೇಟಿಯ ಸಂದರ್ಭದಲ್ಲಿ ಭರಣಯ್ಯನವರು ಅಷ್ಟು ಉನ್ನತ ಹುದ್ದೆಯಲ್ಲಿದ್ದರೂ ತಮ್ಮ ಕುಟುಂಬದವರಿಗೆ ಏನೂ ಮಾಡಲಿಲ್ಲ ಎಂಬಂತಹ ಕೆಲವು ಅಭಿಪ್ರಾಯಗಳು ಕೆಲವುಕಡೆ ಬಂದಿದ್ದವು. ಇದು ನಿಜವೇ? ಎಂದು ಪ್ರಶ್ನಿಸಿದಾಗ ಶಂಕರ್ ಹೀಗೆ ಹೇಳಿದರು. ಕಾರಣ ಅಂದರೆ ನಮ್ಮ ಕುಟುಂಬವರ್ಗದವರಿಗೆ ಅಂಥ ಸಮಸ್ಯೆ ಏನೂ ಇರಲಿಲ್ಲ. ಎಲ್ಲ ಸ್ಥಿತಿವಂತರೇ. ಸಾಕಷ್ಟು ಆಸ್ತಿಪಾಸ್ತಿ

ಉಳ್ಳವರಾಗಿದ್ದರು. ಅಲ್ಲದೆ ಎಲ್ಲ ವಿದ್ಯಾವಂತರಾಗಿದ್ದು ಕೆಲಸಗಳಿಗೆ ಸೇರಿಕೊಂಡಿದ್ದರು. ಈ ಕಾರಣದಿಂದ ಅವರು ತಮ್ಮ ಕುಟುಂಬಕ್ಕಿಂತ ಅಗತ್ಯ ಇರುವ ಇತರರಿಗೆ ಸಹಾಯ ಮಾಡಲು ಮುಂದಾದರು. ಆದರೆ ಅಣ್ಣತಮ್ಮಂದಿರ ಮಕ್ಕಳಿಗೆ ಅವರು ಅಗತ್ಯವಿದ್ದಾಗಲೆಲ್ಲಾ ನೆರವು ನೀಡಿದ್ದಾರೆ. ಅದನ್ನು ಮರೆತು ಮಾತನಾಡಿದರೆ ಏನುಮಾಡಲು ಸಾಧ್ಯ!?

ಇವತ್ತಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯಲ್ಲಿ ಭರಣಯ್ಯನವರಂತಹ ವ್ಯಕ್ತಿಗಳು ಅಧಿಕಾರಿಗಳಾಗಿ ಹಾಗೂ ಒಬ್ಬ ಜನಪರ ಕಾಳಜಿಯ ಸಾರ್ವಜನಿಕ ವ್ಯಕ್ತಿಯಾಗಿ ಬೇಕು ಅನ್ನಿಸುತ್ತಾ? ಆ ದೃಷ್ಟಿಯಲ್ಲಿ ಹೇಳುವುದಾದರೆ ಆರ್. ಭರಣಯ್ಯನವರ ವ್ಯಕ್ತಿತ್ವ ಇಂದಿಗೂ ಕೂಡ ಪ್ರಸ್ತುತ ಅಂತ ನಿಮಗನ್ನಿಸುತ್ತಾ?

ಖಂಡಿತ ಅನ್ನಿಸುತ್ತೆ. ಈ ಬ್ಯೂರೋಕ್ರಸಿ ಬಗ್ಗೆ ನಾನು ಹೆಚ್ಚು ಮಾತನಾಡೋದಿಲ್ಲ. ಆದರೆ ಈಗ ಭರಣಯ್ಯನವರ ರೀತಿಯ ವ್ಯಕ್ತಿಗಳೇ ವಿರಳ. ಈಗ ಇರುವ ವ್ಯವಸ್ಥೆ ಬಂದಂತಹ ಅಧಿಕಾರಿಗಳಿಗೆ ಆ ರೀತಿ ಮಾಡುತ್ತೋ ಏನೋ. ಆದರೂ ಕೆಲವಾರು ಅಧಿಕಾರಿಗಳು ಈಗಲೂ ಇದ್ದಾರೆ. ಉದಾಹರಣೆಗೆ ನಮ್ಮ ಡಾ॥ ಸುಭಾಷ್ ಭರಣಿ. ಅವರು ಪೊಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅದೇ ರೀತಿ ಇತ್ತೀಚಿನ ಐ.ಎ.ಎಸ್. ಅಧಿಕಾರಿಗಳಲ್ಲಿ ಭರತ್‌ಲಾಲ್ ಮೀನಾ ಅವರು ತುಂಬಾ ಇಷ್ಟ ಆಗುತ್ತಾರೆ ನನಗೆ. ಇಂಥವರು ತಾವು ಇದ್ದ ಇಲಾಖೆಗಳಲ್ಲಿ ಬದಲಾವಣೆಗಳನ್ನ ತರುತ್ತಿದ್ದಾರೆ, ರಚನಾತ್ಮಕವಾಗಿ ಕೆಲಸ ಮಾಡುತ್ತಾರೆ.

ಒಬ್ಬ ಅಧಿಕಾರಿಯಾಗಿ ಆರ್. ಭರಣಯ್ಯನವರು ರೋಲ್ ಮಾಡೆಲ್ ಆಗಿದ್ದಂತವರು. ಅವರಂಥ ಅಧಿಕಾರಿಗಳು ದೊಡ್ಡ ಸಂಖ್ಯೆಯಲ್ಲಿ ನಮ್ಮ ಸರ್ಕಾರಕ್ಕೆ ಅಗತ್ಯ ಇದೆ. ಇಂದಿನ ಯುವ ಪೀಳಿಗೆ ಕೂಡ ಆ ದಾರಿಯಲ್ಲಿ ಹೋದರೆ ಖಂಡಿತವಾಗಿಯೂ ನಮ್ಮ ಕೇಂದ್ರ ಸರ್ಕಾರದಲ್ಲೇ ಆಗಲಿ, ರಾಜ್ಯ ಸರ್ಕಾರದಲ್ಲೇ ಆಗಲಿ ಯಾವ ಸಮಸ್ಯೆಗಳು ಉದ್ಭವಿಸಿದರೂ ಸಮರ್ಥವಾಗಿ ಎದುರಿಸಬಹುದು. ಅಂತಹ ಅಧಿಕಾರಿವರ್ಗ ಯಾವುದೇ ಆಗಿರಲಿ ಬರಬೇಕಾದ ಅಗತ್ಯ ಇದೆ.

ಅರ್. ಭರಣಯ್ಯನವರನ್ನ ಇವತ್ತಿನ ಸಮಾಜದ ಮುಂದೆ ಒಂದು ದಾಖಲೆ (ಪುಸ್ತಕದ) ರೂಪದಲ್ಲಿ ಇಡುವುದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಈಗಾಗಲೇ ತುಂಬಾ ತಡವಾಗಿದೆ. ಆದರೂ ದಾಖಲೆ ಹೊರತರುತ್ತಿರುವುದು ಸಂತೋಷದ ವಿಷಯ. ಈ ರೀತಿಯ ವ್ಯಕ್ತಿತ್ವ ಇರುವವರು ಇದ್ದರು, ಇವರನ್ನ ಆದರ್ಶವಾಗಿ ನಾವು ಯಾಕೆ ಇಟ್ಟುಕೊಂಡು ಮುಂದುವರಿಯಬಾರದು? ಎಂಬುದು


ಇವತ್ತಿನ ಪೀಳಿಗೆಗೆ ತಿಳಿಯಬೇಕು. ಅವರಂತೆ ನಾವೂ ಆಗಬೇಕೆಂಬ ಸ್ಫೂರ್ತಿ, ಪ್ರೇರಣೆ ಈ ದಾಖಲೆಯಿಂದ ದೊರಕಬೇಕು. ಸಾಕಷ್ಟು ಸಾಮಾಜಿಕ ಕಟ್ಟುಪಾಡುಗಳಿದ್ದಂತ ದಿವಸಗಳಲ್ಲೇ ಅವರು ಸಾಕಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿರುವಂತವರು. ಇಂದು ಏನೆಲ್ಲಾ ಅನುಕೂಲಗಳು, ತಂತ್ರಜ್ಞಾನದ ಲಭ್ಯತೆ ಎಲ್ಲಾ ಇದೆ. ಈಗ ಇನ್ನೂ ಪರಿಣಾಮಕಾರಿಯಾಗಿ ನಾವು ಕೆಲಸ ಮಾಡುವಂತೆ ಇಲ್ಲಿನ ಮಾಹಿತಿಗಳು ಮೂಡಿಬರಬೇಕು. ಇದನ್ನೆಲ್ಲ ನಾವು ಹಿಸ್ಟಾರಿಕಲ್ ಡಾಕ್ಯುಮೆಂಟ್ ಮಾಡಿಡಬೇಕು ಅಂತ ನನ್ನ ಅಭಿಪ್ರಾಯ. ನಮ್ಮ ಜನಾಂಗಕ್ಕಾಗಿ ಕೆಲಸ ಮಾಡಿರುವ ಅಂತವರನ್ನೆಲ್ಲ ನಾವು ಇಟ್ಟುಕೊಳ್ಳಬೇಕು. ನೀವು ಮಾಡುತ್ತಿರುವ ಈ ಪ್ರಯತ್ನ ಶ್ಲಾಘನೀಯ.

ಹೀಗೆಂದು ಮಾತು ಮುಗಿಸುತ್ತಿದ್ದಂತೆ ಶಂಕರ್ ಭರಣಯ್ಯನವರ ನೆನಪಿನಿಂದ ಪೂರ್ತಿಯಾಗಿ ಹೊರಬಂದಿರಲಿಲ್ಲ. ತಟ್ಟನೆ ಭರಣಯ್ಯನವರ ನಿಷ್ಕಲ್ಮಶ ಮನಸ್ಸಿಗೆ ಸಾಕ್ಷಿಯಾಗುವಂತಹ ಘಟನೆಯೊಂದನ್ನು ನೆನಪಿಸಿಕೊಂಡರು. ಭರಣಯ್ಯನವರು ಯಾವ ಸಹಾಯ – ಸಹಕಾರ ಮಾಡಿದರೂ ಅದರ ಹಿಂದೆ ಹೆಸರು, ಕೀರ್ತಿಯಂತಹ ಪ್ರತಿಫಲಾಪೇಕ್ಷೆ ಇಟ್ಟುಕೊಳ್ಳುತ್ತಿರಲಿಲ್ಲ. ಇದು ಭರಣಯ್ಯನವರನ್ನು ಕಂಡವರೆಲ್ಲರೂ ಹೇಳುವ ಮಾತು. ಶಂಕರ್ ಅವರು ನಮ್ಮ ಮುಂದೆ ತೆರೆದಿಟ್ಟ ಈ ಘಟನೆ ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂದರೂ ತಪ್ಪಲ್ಲ.

ಭರಣಯ್ಯನವರು ಊರಿನವರಿಗೆ ಅನುಕೂಲ ಆಗಲಿ ಅಂತ ಸೋಮನಾಥಪುರದ ತಮ್ಮ ಮನೆಯ ಆವರಣದಲ್ಲಿ ಒಂದು ಬಾವಿ ತೆಗೆಸಿದ್ದರು. ಈಗಲೂ ಇದೆ ಆ ಬಾವಿ. ಕಾವೇರಿ ನೀರು ಚೆನ್ನಾಗಿ ಹರಿಯುವುದರಿಂದ ನೀರಿನ ವ್ಯವಸ್ಥೆ ಚೆನ್ನಾಗಿದೆ ನಮಗೆ. ಆದರೂ ಪ್ರತೀತಿ ಏನು ಅಂದರೆ ಆ ಬಾವಿಯ ನೀರಿನಲ್ಲಿ ಅಡುಗೆ ಮಾಡಿದರೆ ಬೇಳೆ ಚೆನ್ನಾಗಿ ಬೇಯುತ್ತೆ, ಸಿಹಿ ನೀರಿನ ಬಾವಿ. ಆ ನೀರಿನಲ್ಲಿ ಸಾರು ಎಲ್ಲ ಚೆನ್ನಾಗಿ ಆಗುತ್ತೆ. ಸಾಮಾನ್ಯವಾಗಿ ಮಾಂಸಾಹಾರಿಗಳು ನಾವು. ಆ ಸಾರು ಕೂಡ ಆ ಬಾವಿಯ ನೀರಿನಲ್ಲಿ ಚೆನ್ನಾಗಿ ಆಗುತ್ತೆ ಅನ್ನೋದು ಇದೆ.

ಆವಾಗ ಭರಣಯ್ಯನವರು ಆ ಬಾವಿ ತೆಗೆಸಿದರಲ್ಲ ಅಂದುಬಿಟ್ಟು ಭರಣಯ್ಯನವರ ಚಿಕ್ಕಪ್ಪ ಒಬ್ಬರು ಇದ್ದರು. ಅವರು ಕೂಡ ಒಂದು ಬಾವಿ ತೆಗೆಸುತ್ತಾರೆ. ಭರಣಯ್ಯನವರ ಎದುರು ಮನೆಲೇ! ಆದರೆ ಆ ಬಾವಿಯಲ್ಲಿ ನೀರು ಈ ಬಾವಿಯಂತೆ ಬರಲಿಲ್ಲ. ಭರಣಯ್ಯನವರು ತೆಗೆಸಿದ ಬಾವಿಯ ನೀರಿನ ರುಚಿ ಇದಕ್ಕೆ ಬರಲಿಲ್ಲ. ಭರಣಯ್ಯನವರ ನಿಷ್ಕಲ್ಮಶ ಮನಸ್ಸಿನ ಕೆಲಸಕ್ಕೆ ಉದಾಹರಣೆ ಯಾಕಾಗಬಾರದು ಇದು ಅಂತಲೂ ನನಗೆ ಅನ್ನಿಸುತ್ತದೆ.

* * *




ಹೊಂಗೆ ನೆರಳ ತಂಪು

ಡಾ. ಜಿ. ಗೋಪಾಲ್

"ಪಂಚಮ ಬೋರ್ಡಿಂಗ್ ಹೋಂ" ಆ ಕಾಲದ ಬಡಬಗ್ಗರ ಮಾತೃತಾಣ. ನಂತರ ನರಸಿಂಹರಾಜ ಹಾಸ್ಟೆಲ್ ಎಂದು ನಾಮಕರಣಗೊಂಡಿತು. ದಲಿತ ಪ್ರಜ್ಞಾ ಪ್ರಚಾರಕ ಭರಣಯ್ಯ ಓದಿದ್ದು ಅಲ್ಲಿ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಪರಿಚಯಿಸಿದ್ದು ದಲಿತೋದ್ಧಾರಕರಲ್ಲೊಬ್ಬರಾದ ಆರ್. ಗೋಪಾಲಸ್ವಾಮಿ ಅಯ್ಯರ್. ದುರ್ಗದಲ್ಲಿ ಪೊಲೀಸ್ ಆಗಿ ದಕ್ಷತೆ ಮೆರೆದು ಜನಾಂಗದ ಹಿರಿಮೆ ಹೆಚ್ಚಿಸಿದರು. ಎಲ್ಲಿಹೋದರಲ್ಲಿ ಅವರ ಹೆಸರು ಹೇಳಿಕೊಂಡೆ ಗೌರವ ಸಂಪಾದಿಸಿದ ಭಾಗ್ಯ ನಮ್ಮದು! ಹಸಿದವರಿಗೆ ಮೊದಲು ಅನ್ನ ಹಾಕಿ ನಂತರ ತಾನು ಉಂಡಿದ್ದನ್ನು ನಾನು ಜೀವನದುದ್ದಕ್ಕೂ ಕಂಡಿರುವೆ. ಅಂಥ ಮನಸ್ಸು ನಮಗೆ ಬರಲು ಸಾಧ್ಯವಿಲ್ಲ. ಅವರ ವ್ಯಕ್ತಿತ್ವವೇ ಬೇರೆ!

ನಿವೃತ್ತ ವೈದ್ಯಾಧಿಕಾರಿ, ಬೆಂಗಳೂರು



ಹೊಂಗೆ ನೆರಳ ತಂಪು

ಡಾ. ಜಿ. ಗೋಪಾಲ್

ಡಾ. ಗೋಪಾಲ್ ಆರ್. ಭರಣಯ್ಯನವರ ಸಮೀಪದ ಬಂಧು. ಇವರನ್ನು ಒಮ್ಮೆ ಕಂಡು ಆರ್. ಭರಣಯ್ಯನವರ ಬಗ್ಗೆ ತಮ್ಮ ನೆನಪುಗಳನ್ನು ಹಂಚಿಕೊಳ್ಳಲು ಕೇಳಿಕೊಂಡೆವು. ಭರಣಯ್ಯನವರ ಹೆಸರನ್ನು ಕೇಳಿದ್ದೆ ತಡ ಹೃದಯ ತುಂಬಿ

ಮಾತಾಡಿದರು. ತಮ್ಮ ಇಳಿ ವಯಸ್ಸಿನಲ್ಲೂ ಅವರನ್ನು ಕಣ್ಣು ತುಂಬಿಕೊಂಡಿರುವ ಅವರ ನೆನಪುಗಳು ಚೇತೋಹಾರಿ. ಅವರು ನಮ್ಮೊಡನೆ ಹೇಳಬೇಕೆಂದುಕೊಂಡದ್ದನ್ನು ಬರೆದುಕೊಟ್ಟರು. ನಮ್ಮ ಬೆನ್ನು ತಟ್ಟಿ 'ಒಳ್ಳೆ ಕೆಲಸ ಮಾಡುತ್ತಿದ್ದೀರಿ' ಎಂದು ಶುಭ ಹಾರೈಸಿದರು. ಅವರು ತಮ್ಮದೇ ಶೈಲಿಯಲ್ಲಿ ಬರೆದು ಹಂಚಿಕೊಂಡಿರುವ ನೆನಪುಗಳನ್ನು ಇಲ್ಲಿ ನೀಡಿದೆ. ಈ ನೆನಪುಗಳಲ್ಲಿ ಅವರು ಸಮೀಪದ ಪರಿಚಯಸ್ಥರ ನೆನಪುಗಳನ್ನು ಮೊಗೆದು ಒಂದು ಪುಟ್ಟ ಲೇಖನ ಮಾಡಿ ನುಡಿನಮನ ಸಲ್ಲಿಸಿದ್ದಾರೆ. ಅದರ ಪೂರ್ಣ ಪಾಠವಿದು:

ನಾಲ್ವಡಿ ಕೃಷ್ಣರಾಜ ಒಡೆಯರ ಅಪ್ಪಣೆ ಪಡೆದು ನಂಜುಂಡರಾಜೇ ಅರಸ್, ಅಂಬಳೆ ಅಣ್ಣಯ್ಯ ಪಂಡಿತರೂ 1914ರಲ್ಲಿ ಚರಿತ್ರಾರ್ಹವಾದ "ಪಂಚಮರ ಬೋರ್ಡಿಂಗ್ ಹೋಂ" ಒಂದನ್ನು ಸ್ಥಾಪಿಸಿದರು. ರಾಜಸೇವಾ ಪ್ರಸಕ್ತ ಶ್ರೀ ನಂಜುಂಡರಾಜೇ ಅರಸ್, ಶ್ರೀ ಆಲಿಖಾನ್ ಸಾಬ್ ಮತ್ತಿತರರು ಬೋರ್ಡಿಂಗ್ ಹೋಂನ ಸದಸ್ಯರಾದರು. ಪಂಚಮರಿಗೆ ಪಾಠ ಹೇಳಿಕೊಡಲು ಯಾರೂ ಒಪ್ಪಲಿಲ್ಲ. ಇವರ ಅನ್ವೇಷಣೆಯಲ್ಲಿ ಅನೇಕ ದಿನಗಳೇ ಕಳೆದವು. ಕೊನೆಗೆ ವರದರಾಜ್ ಐಯ್ಯಂಗಾರ್ ಪಾಠ ಹೇಳಿಕೊಡಲು ಸಮ್ಮತಿಸಿದರು. ನಂತರ ತಲಕಾಡಿನ ರಂಗೇಗೌಡರೂ ಒಪ್ಪಿ, ಅವರೇ ಮೊದಲ ಗುರುಗಳಾದರು. ಈ ಬೋರ್ಡಿಂಗ್ ಹೋಂ ಮೈಸೂರಿನ ನಜ಼ರ್‌ಬಾದ್‌ನಲ್ಲಿ ಸ್ಥಾಪಿತವಾಯಿತು.

ಸ್ಕೂಲ್‌ಗಳಿಗೆ ಪಂಚಮರ ಹುಡುಗರು ಸಿಗದೆ ಹೋದ್ದರಿಂದ ಆರ್. ಗೋಪಾಲಸ್ವಾಮಿ ಐಯ್ಯರ್ ಅವರು ರಂಗೇಗೌಡರೊಡನೆ ಹೊಲಗದ್ದೆಗಳಲ್ಲಿ, ರಸ್ತೆಗಳಲ್ಲಿ, ಜೀತದಾಳುಗಳಾಗಿ ದನಕರು ಮೇಯಿಸುವ, ಕೂಲಿ ಮಾಡುವ ಅಸ್ಪೃಶ್ಯರ ಹುಡುಗರಿಗಾಗಿ ಅವರಿದ್ದ ಜಾಗಗಳಿಗೇ ಹೋಗಿ ವಿದ್ಯೆಯ ಬಗ್ಗೆ ಉಪದೇಶಿಸುತ್ತಿದ್ದರು. ಕೆಲವು ಕಡೆ ತಂದೆತಾಯಿಯರಿಗೆ ಸಮಾಧಾನ ಹೇಳಿ ಬಲತ್ಕಾರದಿಂದ ಹುಡುಗರನ್ನು ಎಳೆದುಕೊಂಡು ಹೋಗುತ್ತಿದ್ದರು. ಹೀಗೆ ಎಳೆದು ತಂದ ಹುಡುಗರಿಗೆ ಬಟ್ಟೆ ಹೊಲೆಸಿ, ಕ್ರಾಪ್ ಮಾಡಿಸಿ ಬೋರ್ಡಿಂಗ್ ಮತ್ತು ಪಂಚಮರ ಶಾಲೆಗಳಿಗೆ ದಾಖಲು ಮಾಡುತ್ತಿದ್ದರು.

ಈ ತ್ರಿಮೂರ್ತಿಗಳು ಅಂದರೆ ಆರ್. ಗೋಪಾಲ್‌ಸ್ವಾಮಿ ಐಯ್ಯರ್, ವರದರಾಜ್ ಐಯ್ಯಂಗಾರ್ ಮತ್ತು ರಂಗೇಗೌಡರು. ಸೋಸಲೆ ಗ್ರಾಮಕ್ಕೊಮ್ಮೆ ವಿದ್ಯಾರ್ಥಿಗಳ ಅನ್ವೇಷಣೆಗೆ ಹೊರಟರು. ಆ ಸಮಯದಲ್ಲಿ 14–15 ವರ್ಷದ ಕೌಪೀನಧಾರಿಯಾಗಿದ್ದ ಹುಡುಗರನ್ನು ತಲೆತಲಾಂತರದಿಂದ ಜೀತಮುಕ್ತರನ್ನಾಗಿ ಮಾಡಿದ ರಂಗೇಗೌಡರಿಗೆ ಇವರೇ ಅಸ್ಪೃಶ್ಯರೆಂದು ಗುರುತಿಸುವುದು ಸುಲಭವಾಯಿತು. ಸರಿ ತ್ರಿಮೂರ್ತಿಗಳು ಜಟಕಾದಿಂದ ಇಳಿದು ಇವರ ಬೇಟೆಗೆ ಹೊಂಚುಹಾಕಿದರು. ಆ ಕಾಲದಲ್ಲಿ

ಕೆ.ಆರ್.ಸಾಗರ ಅಣೆಕಟ್ಟು ಕಟ್ಟುತ್ತಿದ್ದು ಹೊಲೇರ ಹುಡುಗರನ್ನು ಹಿಡಿದು ಅಲ್ಲಿ ಬಲಿಕೊಡುತ್ತಾರೆಂಬ ವದಂತಿ ಹಬ್ಬಿತ್ತು. ಆ ಕಾರಣದಿಂದ ಈ ತ್ರಿಮೂರ್ತಿಗಳೇ ಆ ಕಳ್ಳರೆಂದು ಭಾವಿಸಿ ಹುಡುಗರು ಎದ್ದು ಬಿದ್ದು ಹೆದರಿ ದೌಡಾಯಿಸಿದರು. ಅವರನ್ನು ಹಿಡಿಯಲು ಹೊಂಚುಹಾಕಿ ಐಯ್ಯರ್ ಅವರು ತೆವರಿಯ ಮೇಲೆ ಮುಗ್ಗರಿಸುತ್ತ ಓಡಿ ಹೋಗಿ ಆ ಹುಡುಗರನ್ನು ಶಾಲೆಗೆ ಕರೆತರುತ್ತಿದ್ದರು. ಉಳಿದಿಬ್ಬರು ಆಪದ್ಭಾಂದವರ ಸಹಾಯದಿಂದ ತಮಗೆ ಸಿಕ್ಕ ಹುಡುಗರಿಬ್ಬರನ್ನಿಡಿದು ಜಟಕಾದಲ್ಲಿ ಕೂರಿಸಿ ಮೈಸೂರಿಗೆ ಕರೆತಂದರು. ತಂದೆ ತಾಯಿಯರನ್ನು ಕರೆಸಿ ಬುದ್ಧಿವಾದ ಹೇಳಿ ಹುಡುಗರನ್ನು ಹಾಸ್ಟಲ್ಲಿಗೆ ಸೇರಿಸಿದರು. ಅವರಲ್ಲೊಬ್ಬ ಇಂದಿನ ಘನವಿದ್ವಾಂಸ, ದಲಿತ ಪ್ರಜ್ಞಾ ಪ್ರಚಾರಕ, ಸಮಾಜ ಸೇವಾ ಧುರೀಣ, ನಿಷ್ಕಳಂಕ ನಿರತ ಸರ್ಕಾರಿ ಸೇವೆಯಲ್ಲಿ ತಲ್ಲೀನನಾಗಿದ್ದ ಸರ್ವಮತ ಪ್ರೇಮಿ ದಿವಂಗತ ಆರ್. ಭರಣಯ್ಯನವರು.

1923ರಲ್ಲಿ ಬೆಂಗಳೂರಿನಲ್ಲೊಂದು 'ಪಂಚಮ ಬೋರ್ಡಿಂಗ್ ಹೋಂ' ಸ್ಥಾಪಿತವಾಯಿತು. ಅದರ ನಾಮಾಂಕಿತವನ್ನು ಶ್ರೀ ನರಸಿಂಹ ರಾಜ್ ಹಾಸ್ಟಲ್ ಎಂದು ಬದಲಾಯಿಸಿ 21-02-1923ರಲ್ಲಿ ಉದ್ಘಾಟನೆಯಾಯಿತು. ಮಹಾತ್ಮಗಾಂಧಿಯವರು ಮೈಸೂರು ಸಂಸ್ಥಾನಕ್ಕೆ ದಯಮಾಡಿಸಿದಾಗ ಗೋಪಾಲಸ್ವಾಮಿ ಐಯ್ಯರ್ ಅವರು ಗಾಂಧೀಜಿಯವರನ್ನು ಆಹ್ವಾನಿಸಿ ಶ್ರೀ ನರಸಿಂಹರಾಜ ಹಾಸ್ಟಲ್‌ಗೆ ಕರೆತಂದು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಮಹಾತ್ಮರಿಗೆ ಪರಿಚಯ ಮಾಡಿಕೊಟ್ಟರು.

"ಇವನು ಹ್ಯಾರಿಸ್ ಆಫ್ರಿಕಾದಲ್ಲಿ ಜನಿಸಿದವನು. ಜಾಲ್ ಡ್ಯಾನ್ಸ್ ಮಾಡುತ್ತಾನೆ".

"ಇವನು ಕೆ. ಟಿ. ರಾಮಸ್ವಾಮಿ, ಹರಿಕಥೆ ಮಾಡುತ್ತಾನೆ"

"ಇವನು ಆರ್. ಭರಣಯ್ಯ ತುಂಬಾ ಬುದ್ಧಿವಂತ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸುತ್ತಾನೆ. ಸಂಸ್ಕೃತ ಅಭ್ಯಾಸಮಾಡುತ್ತಿದ್ದಾನೆ".

".."

".."

ಅವರಿಗೆ ಈ ಬಡಮಕ್ಕಳನ್ನು ಪರಿಚಯಿಸುತ್ತಾರೆ. ಈ ಹೊತ್ತಿನಲ್ಲಿ ಭರಣಯ್ಯನವರು ಮಹಾತ್ಮರಿಂದ ಅಪಾರ ಮೆಚ್ಚುಗೆ ಗಳಿಸುತ್ತಾರೆ. ಎಡತೊರೆಯಲ್ಲಿ 1938 ನೇ ಮಾರ್ಚ್ ತಿಂಗಳಲ್ಲಿ ಹರಿಜನರ ಸಮ್ಮೇಳನ ಒಂದು ನಡೆದು ಅಲ್ಲಿ 'ಹರಿಜನ ಭಜನಾಮಂಡಳಿ' ಎಂಬ 5000 ಕೈಪಿಡಿಗಳನ್ನು ಹಂಚಲಾಯಿತು. ಅದರ ಪ್ರೇರಣೆ ಭರಣಯ್ಯನವರಲ್ಲಿ ಉಂಟಾದುದನ್ನು ಮುಂದೆ ನೋಡುತ್ತೇವೆ. ಬಹಳ ದೈವಭಕ್ತ. ಹರಿಜನ ಭಜನಾ ಮಂಡಳಿಯ ಪ್ರೇರಣೆ ಪಡೆದು ಮುಂದೆ ಒಂದಷ್ಟು ಭಜನೆಗಳನ್ನು

ಅಭ್ಯಾಸಮಾಡಿ ಹಾಡುತ್ತಿದ್ದದು ನಾವೆಲ್ಲ ಕಂಡಿದ್ದೇವೆ. ಭರಣಯ್ಯನವರು ಯಾವುದೇ ಹುದ್ದೆಯಲ್ಲಿರಲಿ ತಮ್ಮ ಸ್ವಂತ ಊರಾದ ಸೋಮನಾಥಪುರಕ್ಕೆ ಬರುವುದನ್ನು ತಪ್ಪಿಸುತ್ತಿರಲಿಲ್ಲ. ಇಲ್ಲಿನ ತಮ್ಮ ಜನಕ್ಕೆ ತಿಳುವಳಿಕೆ ಹೇಳುವುದು. ಅವರ ಮನೆ ಬಾಗಿಲುಗಳಿಗೆ ಹೋಗಿ ಅವರ ಕಷ್ಟ ಸುಖ ವಿಚಾರಿಸುತ್ತಿದ್ದುದು ಸರ್ವೆ ಸಾಮಾನ್ಯವಾಗಿತ್ತು. ಬರೀ ಜನಾಂಗದವರಿಗೆ ಮಾತ್ರವಲ್ಲ ಇತರೇ ಜನಾಂಗದವರ ಕಷ್ಟಸುಖಗಳನ್ನು ವಿಚಾರಿಸುತ್ತಿದ್ದರು. ಹೀಗೆ ರಜಾದಿನಗಳಲ್ಲಿ ಬಂದಾಗ ತಪ್ಪದೆ ಮನೆಯಲ್ಲಿದ್ದ ಹಾರ್ಮೋನಿಯಂ ನುಡಿಸಿ ಭಜನೆ ಮಾಡುತ್ತಿದ್ದರು.

ನಾನು 1962ರಲ್ಲಿ ಚಿತ್ರದುರ್ಗ ಟೌನ್‌ನಲ್ಲಿ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ ಆರ್. ಎಂ. ಓ ಆಗಿ ಕೆಲಸಮಾಡುತ್ತಿದ್ದೆ. ಆಸ್ಪತ್ರೆಯಿಂದ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಆಫಿಸರ್ಸ್ ಕ್ಲಬ್ ಒಂದಿತ್ತು. ಕ್ಲಬ್‌ನಲ್ಲಿ ಎಂದಿನಂತೆ ಇಸ್ಪೀಟು ಆಟ ಆಡುತ್ತಿದ್ದೆವು. ಅಲ್ಲಿ ಟೆನ್ನಿಸ್ ಕೋರ್ಟ್ ಇತ್ತು. ಬಿಲಿಯರ್ಡ್‌ಗೂ ಅವಕಾಶವಿತ್ತು. ಒಂದು ಭಾನುವಾರ ಬೆಳಿಗ್ಗೆ ವಿಶೇಷವಾಗಿ ಸದಸ್ಯರಿಗಾಗಿ 'ಟೀ' ಏರ್ಪಡಿಸಲಾಗಿತ್ತು. ಅಲ್ಲಿನ ಮುಖ್ಯ ಅತಿಥಿಗಳಲ್ಲಿ ನಾನು ಒಬ್ಬ. ಸಭೆಗೆ ನನ್ನ ಪರಿಚಯ ಮಾಡಿಕೊಟ್ಟರು. ಅಂದಿನ ಸಭೆಯಲ್ಲಿ 'ನನ್ನ ಶ್ರೀಮತಿಯವರಿಗೆ ಆರ್. ಭರಣಯ್ಯನವರು ಸೋದರಮಾವ ಎಂದು ತಿಳಿಸಿದರು. ಮತ್ತೆ ಆ ಸಭೆಯನ್ನು ಶ್ರೀ ಭರಣಯ್ಯನವರು ಚಿತ್ರದುರ್ಗದಲ್ಲಿದ್ದಾಗ ಮಾಡಿದ ಕೆಲಸಗಳನ್ನು ಅಭಿಮಾನದಿಂದ ಪರಿಚಯಿಸಿದರು. ಅದೇನೆಂದರೆ; ಅಲ್ಲೊಬ್ಬರು "ಡಾಕ್ಟರ್ ಗೋಪಾಲ್ ಅವರೆ ಭರಣಯ್ಯನವರ ಹೆಸರು ಕೇಳಿದಾಗ ಒಂದು ವಿಷಯವನ್ನು ತಿಳಿಸಬೇಕೆಂಬ ಅಭಿಲಾಸೆ ನನ್ನಲ್ಲಿ ಒತ್ತಿ ಹೇಳುತ್ತಿದೆ. ಆರ್. ಭರಣಯ್ಯನವರು 1945ರಲ್ಲಿ ದುರ್ಗದಲ್ಲಿ ಸೂಪರಿಂಟೆಡೆಂಟ್ ಆಫ್ ಪೊಲೀಸ್ ಆಗಿದ್ದರು. ಮಹಾ ಧೈರ್ಯಶಾಲಿ. ಕಾನೂನು ಪರಿಪಾಲಕ. ಆ ಸಮಯದಲ್ಲೇ ಎ. ಸಿ. ನಿರ್ವಾಣೆ ಗೌಡರು ದುರ್ಗದ ಡೆಪ್ಯೂಟಿ ಕಮಿಷನರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಅವರೂ ಅಷ್ಟೆ ಪ್ರಾಮಾಣಿಕ ದಕ್ಷ ಅಧಿಕಾರಿ.

ಒಮ್ಮೆ ಅವರಿಬ್ಬರೂ ಕ್ಲಬ್‌ನಲ್ಲಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆ ಸಮಯದಲ್ಲಿ 'ದುರ್ಗದ ಗಂಡು' ಎಂದು ಹೆಸರು ಮಾಡಿದ್ದ ಜೂಜುಗಾರ ಕೃಷ್ಣನಾಯಕ ಬಿಳಿಕುದುರೆ ಮೇಲೆ ಕುಳಿತು ಬೆಳಗಿನ ಸವಾರಿ ಮಾಡುತ್ತ ಕ್ಲಬ್‌ನಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ. ಈ ಇಬ್ಬರು ಅಧಿಕಾರಿಗಳ ಎದುರೇ ಮೀಸೆ ತಿರುವಿಕೊಂಡು ವಿಜೃಂಭಿಸಿ ಸವಾರಿ ಮಾಡಿಕೊಂಡು ಹೋರಟುಹೋದ. ಒಬ್ಬ ಡೆಪ್ಯೂಟಿ ಕಮೀಷನರ್ ಎದುರು ಅದರಲ್ಲೂ ಒಬ್ಬ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಇರುವಾಗ ಒಬ್ಬ ಕಳ್ಳ-ಖದೀಮ ಮಿಸೆ ತಿರುವಿಕೊಂಡು ಹೋಗುವುದೆಂದರೇನು ಎಂದು, ಕೋಪಗೊಂಡ

ನಿರ್ವಾಣೆಗೌಡರು "ಮಿಸ್ಟರ್ ಭರಣಯ್ಯ ಏನಿದು?" ಎಂದು ಕ್ಲಬ್ಬಿನಿಂದ ಎದ್ದು ಹೋರಟೇ ಹೋದರು. ಭರಣಯ್ಯನವರು ಏನೇ ಸಮಜಾಯಿಷಿ ನೀಡಲು ಹೋದರು. ಆದರೆ ಇವರ ಮಾತು ಮುಗಿಸುವ ಮೊದಲೆ ನಡದೇ ಬಿಟ್ಟರು. ಆಗ ಭರಣಯ್ಯನವರು ಅವರನ್ನು ತಡೆದು "ನಾಳೆ ತಮ್ಮ ಮುಂದೆ ಆತನನ್ನು ಎಳೆದು ತರುತ್ತೇನೆ. ಸಾರ್" ಎಂದು ಅಲ್ಲಿಂದ ಕ್ಷಮೆ ಕೇಳಿ ಎದ್ದು ಹೋದರು.

ಆ ನಾಯಕ ಅಂದಿನ ಚಟಾಕುವಿನಲ್ಲಿ ಚಿನ್ನದ ಉಂಗುರಗಳನ್ನು ತುಂಬಿ ಒಂದೊಂದು ಇಸ್ಪೀಟ್ ಆಟಕ್ಕೆ ಒತ್ತೆಯಿಡುತ್ತಿದ್ದನಂತೆ! ಅವನ ಮನೆ ಪತ್ತೆ ಹಚ್ಚಿ ಪೊಲೀಸ್ ಸರ್ಪಗಾವಲು ಹಾಕಿ ಹಿಡಿದು ಕೈಗೆ ಬೇಡಿ ಹಾಕಿ. ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕರೆತಂದು ನಿರ್ವಾಣೆಗೌಡರ ಮುಂದೆ ನಿಲ್ಲಿಸಿದರಂತೆ. ಮತ್ತೇನೂ ಶಿಕ್ಷೆಕೊಡದೆ ಆತನನ್ನು ಬಿಟ್ಟರಂತೆ. ಆತ ಆದ ಅವಮಾನ ತಡೆಯಲಾಗದೆ ಒಂದು ತಿಂಗಳು ಎದೆನೋವಿನಿಂದ ನರಳಿ ಆಮೇಲೆ ಏನೇನೋ ಆಗಿ ಒಂದು ದಿನ ಅಸು ನೀಗಿದನಂತೆ! ಅಂತ ಧೀಮಂತನ ಬಂಧು ನೀವು ಎಂದು ಅಭಿಮಾನದಿಂದ ನನ್ನ ಹೊಗಳಿದರು!

ಅವರೊಟ್ಟಿಗೆ ನನ್ನ ಇನ್ನೊಂದು ನೆನಪು ಇದು. ಒಂದು ದಿನ ನನಗೆ ಪೋನ್ ಬಂತು. ಯಾರೆಂದು ವಿಚಾರಿಸಲಾಗಿ "ನಾನು ಭರಣಯ್ಯ. ಕೆಲಸದನಿಮಿತ್ತ ಚಿತ್ರದುರ್ಗಕ್ಕೆ ಬಂದಿದ್ದೇನೆ. ನಿಮ್ಮನ್ನ ಹಾಗೆ ಮಾತಾಡಿಸಿಕೊಂಡು ಹೋಗೋಣ ಎನ್ನಿಸಿತು. ತಾಯಿ ಚೆನ್ನಾಗಿದ್ದಾಳೆಯೇ? ನೀವೂ ಸೌಖ್ಯವಾಗಿದ್ದೀರಾ?" ಎಂದು ಫೋನ್ ಮಾಡಿದರು. ತುಂಬಾ ಸಂತೋಷವಾಗಿ ಮನೆಗೆ ಆಹ್ವಾನಿಸಿದೆ.

ಅದಕ್ಕೆ ಅವರು "ಥಾಂಕ್ಸ್. ಬರ್ತೇನೆ. ನಿಮ್ಮನ್ನು ನೋಡುವ ಆಸೆ ಇದೆ" ಎಂದರು. ಬಂದರು. ಒಟ್ಟಿಗೆ ಊಟ ಮಾಡಿದೆವು. ಅದೊಂದು ಅಪರೂಪದ ಸಂದರ್ಭ. ಊಟವಾದ ನಂತರ ಸಂತುಷ್ಟರಾದವರಂತೆ ಕಂಡರು. ನೀವು ಇಲ್ಲಿ ಆರ್.ಎಂ.ಓ. ಆಗಿರುವುದು ಬಹಳ ಸಂತೋಷ. ಒಳ್ಳೆ ಹೆಸರಿದೆ ನಿಮಗೆ. ನಾನಿಲ್ಲಿ ಇದ್ದಾಗ ರಾಮಜೋಯಿಸ್ ಅವರಲ್ಲಿ ಸಂಸ್ಕೃತದ ಬಗ್ಗೆ ಆಗಾಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೆ. ಅವರೊಬ್ಬ ತುಂಬಾ ವಿದ್ವತ್ ಸಂಪಾದಿಸಿದವರು. ಅಷ್ಟೆ ಗುಣವಂತರು ಎಂದು ಜೋಯಿಸರನ್ನು ನೆನೆಸಿಕೊಂಡು ಸಂತೋಷಪಟ್ಟರು. ನನ್ನ ಶ್ರೀಮತಿಯನ್ನು ಕುರಿತು "ಏನ್ ತಾಯಿ ಚೆನ್ನಾಗಿದ್ದೀಯ? ಅಪ್ಪ, ಅಮ್ಮ ಬಂದಿದ್ದರೆ! ಬಹಳ ಸಂತೋಷ ಅಮ್ಮ ನೀವಿಲ್ಲಿರುವುದು. ಬರ್ತೀನಿ" ಎಂದು ಹೇಳಿ ಬಿಳ್ಕೊಂಡರು. ತನ್ನ ಜನ ಓದಿ ವಿದ್ಯಾವಂತರಾಗಿ ಒಳ್ಳೆ ಹುದ್ದೆ ಅಲಂಕರಿಸಿದರೆ ಅವರಿಗೆ ಅಪಾರ ಆನಂದ, ಹೆಮ್ಮೆ ಒಟ್ಟಿಗಾಗುತ್ತಿದ್ದವು. ನನ್ನನ್ನು ನಮ್ಮ ಕುಟುಂಬವನ್ನು ತುಂಬು ಮನಸ್ಸಿನಿಂದ ಹಾರೈಸಿ ಹೋರಟರು. ಅಂತ ಪ್ರೀತಿಯ ವ್ಯಕ್ತಿತ್ವವುಳ್ಳ ವ್ಯಕ್ತಿ ನಮ್ಮ ನಡುವೆ ಇದ್ದುದೇ ಪುಣ್ಯ!


1942ರಲ್ಲಿ ನಾನು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಎಂ.ಎಸ್. ವಿದ್ಯಾರ್ಥಿಯಾಗಿ ಸ್ಪೆಷಲ್ ವಾರ್ಡ್‌ನಲ್ಲಿ ಕಾರ್ಯೋನ್ಮುಖನಾಗಿದ್ದೆ. ಆ ಸ್ಪೆಷಲ್ ವಾರ್ಡ್ ಹೆಸರು ಪೆವಿಲಿಯನ್ ಎಂದು. ಪ್ರೊ. ಎನ್. ಎ. ನಾರಾಯಣ ಸ್ವಾಮಿ ಸರ್ಜನ್. ಅವರಿಗೆ ಅಸಿಸ್ಟೆಂಟ್ ಆಗಿದ್ದೆ. ಇದೇ ಜೋಯಿಸ್ ಅವರು ಪ್ರಾಷ್ಟೇಟ್‌ಂಟ್ ಗ್ರಂಥಿ ದೊಡ್ಡದಾಗಿ ಮೂತ್ರಕ್ಕೆ ತೊಂದರೆಯಾದ್ದರಿಂದ ಪೆವಿಲಿಯನ್ ವಾರ್ಡ್‌ಗೆ ಸೇರಿಕೊಂಡಿದ್ದರು. ಅವರು ಚಿತ್ರದುರ್ಗದವರೆಂದು ಅರಿತು ನಾನು ಅಲ್ಲಿ ಆರ್. ಎಂ. ಓ. ಆಗಿದ್ದೆ ಎಂದು ಹೇಳಿದಾಗ ಓ!ಹೋ ನಿಮ್ಮ ಹೆಸರು ಕೇಳಿದ್ದೇನೆ. ನೀವು ಹರಿಜನರಲ್ಲವೆ? ಎಂದು ಮಂದಹಾಸದಿಂದ ಕೇಳಿದರು. "ಹೌದೆಂದೆ. ತಪ್ಪು ತಿಳಿಯಬೇಡಿ. ನಿಮ್ಮಲ್ಲಿ ಎಂತೆಂಥ ಮೇಧಾವಿಗಳಿದ್ದಾರೆ. ಆರ್. ಭರಣಯ್ಯನವರು ದುರ್ಗದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್‌ರಾಗಿದ್ದರು ಎಂದರು. ತಕ್ಷಣ ನಾನು ಅವರ ನೆಂಟ. ಅವರ ಬಳಗದಿಂದಲೇ ಬಂದವರು ನನ್ನ ಮಡದಿ ಎಂದಾಗ ಮತ್ತಷ್ಟು ಹೆಮ್ಮೆಪಟ್ಟರು. ಅವರ ಮಗ ಶ್ರೀನಿವಾಸ ಅವರು ಡೈರೆಕ್ಟರ್ ಆಫ್ ಹೆಲ್ತ್ ಸರ್ವಿಸ್‌ನಲ್ಲಿ ಗುಮಾಸ್ತರಾಗಿದ್ದು ಅವರ ಪರಿಚಯವಾಯಿತು. ಶ್ರೀನಿವಾಸ "ಸಾರ್ ಏನಾದರೂ ನಮ್ಮ ಆಫೀಸ್‌ನಲ್ಲಿ ಕೆಲಸವಿದ್ದರೆ ಹೇಳಿ. ಮಾಡಿಸಿಕೊಡುತ್ತೇನೆ" ಎಂದರು. ನಾನು ಹೌಸ್ ಬಿಲ್ಡಿಂಗ್ ಅಡ್ವಾನ್ಸ್‌ಗೆ ಅರ್ಜಿ ಹಾಕಿ ಸುಮಾರು ಆರು ತಿಂಗಳು ಕಳೆದಿತ್ತು. ಅವರಿಗೆ ತಿಳಿಸಿದೆ. ಮುಂದಿನ 15 ದಿನಗಳಲ್ಲಿ ಲೋನ್ ಸ್ಯಾಂಕ್ಷನ್ ಆಯಿತು. ಇದು ಆರ್. ಭರಣಯ್ಯನವರು ಅಪಾರ ಹೆಸರು ಗಳಿಸಿದ್ದಕ್ಕೊಂದು ಸಣ್ಣ ಉದಾಹರಣೆ.

ನಾನು 1968–69ರಲ್ಲಿ ಇಂಗ್ಲೆಂಡ್‌ನಲ್ಲಿ ಮಕ್ಕಳ ಶಸ್ತ್ರ ಚಿಕಿತ್ಸೆ ತರಬೇತಿ ಪಡೆದು ವಾಪಸ್ಸಾಗಿದ್ದೆ. ಆ ಸಮಯದಲ್ಲಿ ಭರಣಯ್ಯನವರು ಹೆಲ್ತ್ ಸೆಕ್ರೆಟರಿಯಾಗಿದ್ದರು. ಅವರನ್ನು ಭೇಟಿಮಾಡಿ ಪ್ರಮೋಶನ್‌ಗೆ ಪ್ರಯತ್ನಪಟ್ಟೆ. ಒಂದು ಮಕ್ಕಳ ಶಸ್ತ್ರ ಚಿಕಿತ್ಸಾ ವಿಭಾಗವನ್ನೇ ತೆರೆಯಬೇಕಾಗಿತ್ತು. ಗುರುತರವಾದ ಪ್ರಶ್ನೆ. ಒಂದು ವರ್ಷಕಾಲ ಓಡಾಡಿದ ಮೇಲೆ ನನಗೆ ಪ್ರಮೋಶನ್ ಸಿಕ್ಕಿತು. ನನ್ನನ್ನು ಬರಮಾಡಿಕೊಂಡು 'ಕನ್‌ಗ್ರ್ಯಾಜುಲೇಷನ್' ಎಂದೇಳಿ ಅವರ ಕಣ್ಣಲ್ಲಿ ಬಂದ 'ಆನಂದಭಾಷ್ಪಗಳನ್ನು' ಒರಿಸಿಕೊಂಡರು. ಅವರಿಗೆ ಇದೊಂದು ಹೆಮ್ಮೆಯ ವಿಷಯ.

ಮತ್ತೊಂದು ದಿನ ಅವರನ್ನು ಕಾಣಲು ಆಫೀಸ್‌ಗೆ ಹೋದೆ. ಆಗ ಘಂಟೆ ಸುಮಾರು ಮಧ್ಯಾಹ್ನದ ಒಂದುವರೆ. ಜವಾನ ಒಳಗಿಂದ ಬಂದು "ಸಾರ್, ಊಟ ರೆಡಿಯಾಗಿದೆ" ಎಂದ. "ಡಾಕ್ಟರ್ ಬನ್ನಿ ಊಟ ಮಾಡೋಣ ಎಂದರು" ನನಗೆ ಊಟ ಆಗಿದೆ ಎಂದು ತಿಳಿದು "ಗುಮಾಸ್ತನ" ಕೆಲಸಕ್ಕಾಗಿ ಕಾಯ್ದು ಕುಳಿತಿದ್ದ ಹಳ್ಳಿಯವನೊಬ್ಬನನ್ನು ಕುರಿತು ಊಟ ಆಯಿತೆನಪ್ಪ ಎಂದು ಕೇಳಿದರು. ಈಗ

ಹೋಗ್ತಿನಿಸಾರ್ ಎಂದಾಗ ಅವರ ಜವಾನನನ್ನು ಕರೆದು "ನೋಡು, ನನ್ನ ಊಟದಲ್ಲಿ ಇವನಿಗೆ ಅರ್ಧ ಬಡಿಸು, ಹೋಗಪ್ಪ ಒಳಗೆ" ಎಂದು ಅವನಿಗೂ ಊಟ ಹಾಕಿಸಿ ತಾನು ಊಟ ಮಾಡಿದರು. ತನ್ನೆದುರಿಗೆ ಯಾರು ಹಸಿದವರು ಬಂದರೂ ಮೊದಲು ಅವರಿಗೆ ಅನ್ನ ಹಾಕಬೇಕು. ನಂತರ ಕೆಲಸ! ಇದು ಅವರು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದು. ಇಂಥ ಎಷ್ಟೋ ಸಂಗತಿಗಳನ್ನು ನಾನು ನೋಡಿದ್ದೇನೆ. ನಮಗ್ಯಾರಿಗೂ ಅಂಥ ಮನಸ್ಸು ಬರಲು ಸಾಧ್ಯವಿಲ್ಲ. ಅವರ ವ್ಯಕ್ತಿತ್ವವೇ ಬೇರೆ. ಅದು ಅಪರೂಪ. ಆ ಕಾಲದಲ್ಲಿ ಆಗಿನ ಪರಿಸ್ಥಿತಿಯಲ್ಲಿ ಇಂಥ ಮನಸ್ಸು ಉಳ್ಳವರಲ್ಲಿ ಇವರೇ ಮೊದಲಿಗರು ಎನಿಸುತ್ತೆ. ಒಬ್ಬ ಅಧಿಕಾರಸ್ಥನಾದರೂ ಸರಳತೆಯಲ್ಲಿ ಸರಳತೆ ಮೆರೆದರು. ಪ್ರಾಮಾಣಿಕವಾಗಿ ಜನಸೇವೆ ಮಾಡಿದರು. ಹೀಗಾಗಿಯೇ ಬೇರೆಲ್ಲರಿಗಿಂತ ಅವರು ಭಿನ್ನರಾಗಿರುವುದು. ಒಟ್ಟಾರೆ ಹೇಳಬೇಕೆಂದರೆ ಶ್ರೀ ಭರಣಯ್ಯನವರು ಒಬ್ಬ ಮಹಾನ್ ಮಾನವತಾವಾದಿ, ಕರುಣಾಸಂಪನ್ನರು. ಇಂದಿಗೂ ನಾನು ನೆನಪು ಮಾಡಿಕೊಳ್ಳುವುದು ಅವರನ್ನು ಈ ರೀತಿಯಲ್ಲೇ.

* * *



ಯುವ ಪೀಳಿಗೆಗೆ ಆದರ್ಶ ಮಾದರಿ

ಬಿ. ಎಸ್. ಕೀರ್ತಿಕುಮಾರ್

ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲವರು ಓದುತ್ತಿದ್ದರು. ನಮ್ಮ ಕಮ್ಯೂನಿಟಿಯ ವಿದ್ಯಾರ್ಥಿಗಳು ಯಾರು ಡಿಗ್ರಿ ತಗೋತ್ತಾರೆ ಅದರ ಬಗ್ಗೆ ಮಾಹಿತಿ ತರಿಸಿಕೊಳ್ಳುತ್ತಿದ್ದರು. ಡಿಗ್ರಿ ಪಡೆದ ವಿದ್ಯಾರ್ಥಿಗಳಿಗೆ ಕಾನ್ವಕೇಷನ್ ಆದ ಮರುದಿನ ಡಿನ್ನರ್ ಇಟ್ಟು ಅವರನ್ನು ಉಪಚರಿಸಿ ಅಭಿನಂದಿಸುತ್ತಿದ್ದರು. ಅಂದೇ ಅಲ್ಲಿನ ವಿದ್ಯಾರ್ಥಿಗಳಲ್ಲಿ ಅರ್ಹರಾದವರಿಗೆ ಉದ್ಯೋಗಾಕಾಂಕ್ಷಿಗಳಿಗೆ ಕೆಲಸ ನೀಡುತ್ತಿದ್ದರು ಇಲ್ಲವೇ ತಮಗೆ ತಿಳಿದ ಕಡೆ ಶಿಫಾರಸ್ಸು ಮಾಡಿಕೊಡುತ್ತಿದ್ದರು. ಇನ್ನು ಓದಲಿಚ್ಛಿಸುವವರಿಗೆ ಮಾರ್ಗದರ್ಶನ ಮಾಡುತ್ತಿದ್ದರು... ಇಂದು ಇಂಥ ಕೆಲಸ ಮಾಡುವವರನ್ನು ಎಲ್ಲಿ ಕಾಣುವುದು?

ನಿವೃತ್ತ ಡೆಪ್ಯೂಟಿ ಚೀಫ್ ಇಂಜಿನಿಯರ್ (ಕೆಇಬಿ)
ಬೆಂಗಳೂರು



ಯುವ ಪೀಳಿಗೆಗೆ ಆದರ್ಶ ಮಾದರಿ

ಬಿ. ಎಸ್. ಕೀರ್ತಿಕುಮಾರ್

ಪರಿಚಯ : ಬಿ.ಎಸ್. ಕೀರ್ತಿಕುಮಾರ್. ಬಿ. ಇ. ಎಲೆಕ್ಟ್ರಿಕಲ್, FIECE ಡೆಪ್ಯೂಟಿ ಚೀಫ್ ಇಂಜಿನಿಯರ್ (ನಿವೃತ್ತ) ಕೆ,ಇ.ಬಿ. ಅವರು ಆರ್. ಭರಣಯ್ಯನವರ ಬಗ್ಗೆ ಅತ್ಯಂತ ಅಭಿಮಾನ ಇಟ್ಟುಕೊಂಡಿರುವವರು. ಇವರು ಭರಣಯ್ಯನವರೊಂದಿಗಿನ ಒಡನಾಟದ ತಮ್ಮ ಅನುಭವವನ್ನು, ಅನಿಸಿಕೆಗಳನ್ನು ಹೀಗೆ ಹಂಚಿಕೊಂಡಿದ್ದಾರೆ.

ತಾವು ಆರ್. ಭರಣಯ್ಯನವರನ್ನು ಹತ್ತಿರದಿಂದ ಕಂಡವರು. ಅವರು ಹೇಗೆ ಪರಿಚಯ ನಿಮಗೆ?

ನಮ್ಮ ಸ್ನೇಹಿತರಾದ ಬಿ. ಕೆಂಪಯ್ಯನವರು ಅವರ ಬಗ್ಗೆ ಬಹಳ ಹೇಳುತ್ತಿದ್ದರು. ಅವರು, ಭರಣಯ್ಯನವರು ಎಲ್ಲ ಅಕ್ಕಪಕ್ಕದ ಊರಿನವರು. ಹೀಗಾಗಿ ಭರಣಯ್ಯನವರು ನಮ್ಮ ತಾಯಿಯ ತಾಯಿ ಊರಿನವರು. ನಮಗೆಲ್ಲ ಗೊತ್ತಿರುವವರೇ!

ಆಮೇಲೆ?

ಆಮೇಲೆ ಅವರ ಬಗ್ಗೆ ಕೇಳಿದ್ದು ಸಹಕಾರ ಇಲಾಖೆಯಲ್ಲಿದ್ದಾಗ. ಅವರು ಅಲ್ಲಿ ರಿಜಿಸ್ಟ್ರಾರ್ ಆಗಿದ್ದರು. ಅದುವರೆಗೂ ಆ ಇಲಾಖೆಯಲ್ಲಿ ನಮ್ಮವರು ಯಾರೂ ಅಫಿಸಿಯಲ್ಸ್ ಇರಲಿಲ್ಲ. ಆಗ ಒಬ್ಬರು ಎಂ.ಕೆ. ಬಾಲರಾಜು ಅಂತ, ಮಳವಳ್ಳಿಯವರು. ಅವರನ್ನು ಮೊದಲು ಸೇರಿಸಿದವರೂ ಅವರೇ. ಈಗ ಅವರು ಡೆಪ್ಯೂಟಿ ರಿಜಿಸ್ಟ್ರಾರ್ ಆಗಿ ನಿವೃತ್ತಿಯಾಗಿದ್ದಾರೆ.

ಅವರಿಂದ ಭರಣಯ್ಯನವರ ಸೇವಾಪರತೆ ಬಗ್ಗೆ ಒಂದಷ್ಟು ತಿಳಿದುಕೊಂಡೆ. ಆವಾಗ ನಮ್ಮ ಹುಡುಗರು ಸಾಯಂಕಾಲದ ಸಮಯ ನೂರಾರು ಜನ ಅವರ ಬಳಿ ಕೆಲಸಕ್ಕೆ ಹೋಗುತ್ತಿದ್ದರಂತೆ. ಹೋದವರಿಗೆಲ್ಲ ಅವರ ವಿದ್ಯಾರ್ಹತೆ ಆಧಾರದ ಮೇಲೆ ಸಹಕಾರ ಇಲಾಖೆಯಲ್ಲಿ ನೇರವಾಗಿ ನೇಮಕಾತಿ ಮಾಡುತ್ತಿದ್ದರಂತೆ. ನಾನು ಒಮ್ಮೆ ಈ ಸಂಗತಿ ನೋಡಲು ಅವರ ಕಛೇರಿಗೆ ಹೋದೆ. ಹೋಗಿದ್ದು ಸಾಯಂಕಾಲ ಏಳು ಘಂಟೆಮೇಲೆ ಆಗಿತ್ತು. ಎಲ್ಲರನ್ನೂ ಒಂದು ಕಡೆಯಿಂದ ವಿಚಾರಣೆ ಮಾಡಿ ತಿಳಿದುಕೊಂಡು ನೀನು ಇಂಥ ಕೆಲಸಕ್ಕೆ ಹೋಗು, ನೀನು ಪೊಲೀಸ್ ಡಿಪಾರ್ಟಮೆಂಟಿಗೆ ಸೇರು.... ಹೀಗೆ, ಬಂದವರಿಗೆಲ್ಲ ಮಾರ್ಗದರ್ಶನ ಮಾಡುತ್ತಿದ್ದರು. ನನ್ನ ಸರದಿಯೂ ಬಂತು. ನನ್ನ ಎತ್ತರ ಕಡಿಮೆ ಇದ್ದುದರಿಂದ ನಾನು ಸರ್ವೆ ಸೆಟ್ಲ್‌ಮೆಂಟ್ ಇಲಾಖೆಗೆ ಹೋಗುತ್ತೇನೆ. ಅಲ್ಲಿ ಬಂದು ನನ್ನನ್ನ ನೋಡಪ್ಪ' ಅಂತ ಹೇಳಿದರು. ಆದರೆ ನಾನು ಮುಂದೆ ಕಾಲೇಜಿಗೆ ಸೇರಿಕೊಂಡೆ.

ಇನ್ನೊಂದು ಅವರ ಬಗ್ಗೆ ನಾನು ಕೇಳಿರುವ ಪ್ರಶಂಸೆಯ ಮಾತೆಂದರೆ ಬೇರೆ ಕಮ್ಯುನಿಟಿಗೂ ತೊಂದರೆ ಆಗದಂತೆ ನಮ್ಮವರನ್ನು ನೇಮಕ ಮಾಡುತ್ತಿದ್ದರು. ಪೋಸ್ಟ್‌ಗಳನ್ನ ಹೊಸದಾಗಿ ಸೃಷ್ಟಿಮಾಡೋರು. ಯಾಕೆಂದರೆ ಪೋಸ್ಟ್‌ಗಳು ಕಡಿಮೆ ಇರುತ್ತಿದ್ದವಲ್ಲ! ಹಾಗಾಗಿ ಅವರು ಆಥರ ಬೇರೆಯವರಿಗೆ ತೊಂದರೆ ಆಗದಂತೆ, ಅಪವಾದ ಬರದಂತೆ ಬಹಳ ಸೂಕ್ಷ್ಮವಾಗಿ ಕೆಲಸ ಮಾಡುತ್ತಿದ್ದರು. ಜನಗಳು

ಅವರು ಮಾಡಿದ ಕೆಲಸಗಳನ್ನು ನಿಂದಿಸುತ್ತಿರಲಿಲ್ಲ. ಯಾಕೆಂದರೆ ಅವರು ಬೇರೆ ಜನಗಳಿಗೂ ಸಹ ಅಚ್ಚುಮೆಚ್ಚಾಗಿ ಪ್ರೀತಿಯಿಂದ ಮಾತಾಡೋರು.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಅವರು ನಿರ್ದೇಶಕರಾಗಿದ್ದರು. ವಿಧಾನಸೌಧದಲ್ಲಿ ಆಗ ನಾನು ಮತ್ತು ಇನ್ನೊಬ್ಬರು ನಮ್ಮ ಸ್ನೇಹಿತರು ಮಲ್ಲಯ್ಯ ಅಂತ ಇದ್ದರು. ಸಬ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಅಪ್ಲಿಕೇಷನ್ ಬರೆದುಕೊಂಡು ಹೋಗಿ, ಇನ್ನೊಬ್ಬ ಗೆಳೆಯರು ಪುರಿಗಾಲಿ ರಂಗಸ್ವಾಮಿ ಅಂತ. ಅವರ ಮುಖಾಂತರ ಭರಣಯ್ಯನವರನ್ನು ಭೇಟಿ ಮಾಡಿದೆವು. ಅವತ್ತೆ ಅದೇನೋ ಮಾಡಿ ಸಬ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಆರ್ಡರ್ ಕೊಟ್ಟುಬಿಟ್ಟರು.

ಎಸ್. ಮಾದಯ್ಯ ಅಂತ ನಮ್ಮ ಒಬ್ಬರು ಸಂಬಂಧಿ ಇದ್ದರು. ಮಲ್ಲಿನಾಥಪುರದವರು. ಅವರ ತಂದೆ ಕೂಲಿ ಮಾಡಿಕೊಂಡು ಬಾಂಡೆಡ್ ಲೇಬರ್ ಥರ ಕೂಲಿ ಮಾಡುತ್ತಿದ್ದಾಗ ಇವರೂ ಕೆಲಸಕ್ಕೆ ಹೋಗೋದನ್ನ ನಾನೂ ನೋಡಿದ್ದೆ. ಆಗ ನಾನೇ ಒಂದು ಅರ್ಜಿ ಬರೆದು ಸಹಿ ಮಾಡಿಕೊಟ್ಟೆ. ಅವರಿಗೆ ಆವಾಗ ಪೊಲೀಸ್ ಕೆಲಸಕ್ಕೆ ಕರೆ ಬಂತು. ಅವರ ಸಂಬಂಧಿ ಒಬ್ಬರು ನರಸಿಂಹಯ್ಯ ಅಂತ, ಪಿ.ಎಸ್.ಐ. ಆಗಿದ್ದರು. ಅವರ ಮುಖಾಂತರ ಇವರಿಗೆ ಕೆಲಸ ಆಗುವಂತೆ ನೋಡಿಕೊಂಡರು.

ಇನ್ನೊಂದು ನನ್ನ ನೆನಪಿನಲ್ಲಿರುವ ಸಂಗತಿ ಏನೆಂದರೆ; ಅವರು ಹೇಗೆ ಸೇವೆ ಮಾಡೋರು ಅನ್ನೋದನ್ನ ಆಗಾಗ ಕೆಲವರಿಂದ ಮತ್ತು ಖುದ್ದಾಗಿ ಎಲ್ಲ ತಿಳಿದುಕೊಳ್ಳುತ್ತಿದ್ದರು. ಆಗ ಮೈಸೂರು ಯೂನಿವರ್ಸಿಟಿ ಒಂದೇ ಇತ್ತು. ಯೂನಿವರ್ಸಿಟೀಲಿ ಪ್ರತೀ ವರ್ಷ ಡಿಗ್ರಿ ಪಾಸ್ ಮಾಡಿಕೊಂಡು, ಯಾರು ಘಟಿಕೋತ್ಸವಕ್ಕೆ ಹೋಗುತ್ತಾರೆ ಎಂಬುದನ್ನು ತಿಳಿದುಕೊಂಡು ಅವರನ್ನೆಲ್ಲ ಒಂದೆಡೆ ಸೇರಿಸುತ್ತಿದ್ದರಂತೆ. ಅಲ್ಲಿ ಅವರಿಗೆಲ್ಲ ಲಂಚ್, ಬ್ರೇಕ್‌ಫಾಸ್ಟ್ ವ್ಯವಸ್ಥೆ ಮಾಡಿ, ಸಂದರ್ಶನ ಮಾಡಿ ಅವರನ್ನೆಲ್ಲ ಕೆಲವು ಕೆಲಸಗಳನ್ನು ನೀಡಿ ಇಲ್ಲವೇ ತಮಗೆ ಪರಿಚಯವಿರುವವರ ಬಳಿ ಕಳಿಸಿಕೊಡುತ್ತಿದ್ದರು ಅಂತ ಕೇಳಿದ್ದೆ.

ಭರಣಯ್ಯನವರ ಬಗ್ಗೆ ನಿಮಗೆ ಏಕೆ ಅಭಿಮಾನ?

ಬಹಳ ಜನರಿಗೆ ಅವರು ಹೋದ ಇಲಾಖೆಗಳಲ್ಲೆಲ್ಲ ಸರ್ವಿಸ್ ಮಾಡ್ತಾರೆ ಅಂತ. ಅವರ ಬಗ್ಗೆ ತುಂಬಾ ಪ್ರೀತಿ, ಅಭಿಮಾನ ಮತ್ತು ಗೌರವ. ನಾನು ಕಬ್ಬನ್ ಪೇಟೆ ರೂಮಿನಲ್ಲಿ ಇದ್ದೆ ಒಬ್ಬ ನನ್ನ ರೂಮ್‌ಮೇಟ್ ನರಸೀಪುರದ ಕಡೆಯವರು.

ಮಹೇಂದ್ರಕುಮಾರ್ ಅಂತ ಅವರ ಹೆಸರು. ಈಗ ಮೈಸೂರಿನಲ್ಲಿದ್ದಾರೆ ಭರಣಯ್ಯನವರು ಲೆಟರ್ ಬರೆದಿದ್ದಾರೆ "ಕೆಲಸ ಕೊಡುತ್ತೀನಿ ಅಂತ" ಅಂತ ಹೇಳ್ತಾ ಇದ್ದ. ನಾನು ನಗುತ್ತಿದ್ದೆ. ಭರಣಯ್ಯನವರ ಸ್ಟೇಟಸ್ ಏನು? ಇವನಿಗೆ ಕಾಗದ ಬರೆದು ಕೆಲಸ ಕೊಡುತ್ತೀನಿ ಅನ್ನೋ ಸ್ಥಿತೀಲಿ ಅವರಿದಾರಾ? ಅಂತ ನಾನು ಅಂದುಕೊಳ್ಳುತ್ತಿದ್ದೆ ಸ್ಟೂಡೆಂಟ್ ಲೈಫಲ್ಲಿ!

ಅವರು ಬಂದು ನನ್ನ ಫ್ರೆಂಡ್‌ಗೆ ಹೇಳುವಾಗ ನನಗೂ ಫ್ರೆಂಡ್ ಆದರು. ಹತ್ತಿರದ ಊರಿನವರೇ! ಆಗ ನನಗೆ ಎಷ್ಟು ಸುಲಭವಾಗಿ ಇವರು ಭರಣಯ್ಯನವರು ಲೆಟರ್ ಬರೆದಿದ್ದಾರೆ ಅಂತ ಹೇಳುತ್ತಿದ್ದಾರಲ್ಲ ಅಂತ ಆಶ್ಚರ್ಯವಾಯಿತು. ಆಮೇಲೆ ಅದು ನಿಜ. ಹೌದು ಅಂತ, ತಡವಾಗಿ ತಿಳಿದುಕೊಂಡೆ. ಇನ್ನೊಬ್ಬರು ಮರಿಯಪ್ಪ ಅಂತ ನರಸೀಪುರದವರೇ. ನನ್ನ ಕಸಿನ್ ಕೆ.ಎಂ. ಮಾದಯ್ಯ ಅಂತ ಅವರು ಕರೆದುಕೊಂಡು ಬಂದಿದ್ದರು. ನಾನು ಆವಾಗ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ನಲ್ಲಿ ಇದ್ದೆ. ಬಂದು; 'ನಾಳೆ ಇವನನ್ನ ಕೆಲಸಕ್ಕೆ ಸೇರಿಸಿಬಿಡುತ್ತೀನಿ. ಸಾಹೇಬರು ಕರೆದುಕೊಂಡು ಬರಲು ಹೇಳಿದ್ದಾರೆ' ಅಂದರು. ಏನು ಇವರು ಇಷ್ಟು ಸುಲಭವಾಗಿ ಕರೆದುಕೊಂಡು ಬಂದು ಕೆಲಸ ಕೊಡಿಸಿಬಿಡುತ್ತೀನಿ ಅಂತಾರಲ್ಲ, ನನಗೆ ಆಶ್ಚರ್ಯ!

ಆದರೆ ಅವರು ಹೌಸಿಂಗ್ ಡಿಪಾರ್ಟ್‌ಮೆಂಟಲ್ಲಿ ಅವನನ್ನು ಕೆಲಸಕ್ಕೆ ಸೇರಿಸಿಯೇ ಬಿಟ್ಟರು. ಈಗ ಅವರ ಒಬ್ಬ ಮಗ ಡಾಕ್ಟರ್. ಇನ್ನೊಬ್ಬ ಮಗನಿಗೆ ಕಂಪೆನಿ ಕೆಲಸ. ಹೆಂಡತೀನೂ ಕೆಲಸದಲ್ಲಿದ್ದು ನಿವೃತ್ತಿ ಆಗಿದ್ದಾರೆ. ಒಟ್ಟಿನಲ್ಲಿ ಸಂತೋಷವಾಗಿದ್ದಾರೆ. ಅಂದ್ರೆ ಅವರು ಬಂದು ಹೇಳಿದಾಗ ಭರಣಯ್ಯನವರು ಅಂದ್ರೆ ಅಷ್ಟು ಸುಲಭವಾಗಿ, ಹಗುರವಾಗಿ ತಗಳಕ್ಕೆ ಸಾಧ್ಯನಾ ಅಂತಿದ್ದೆ. ಅಷ್ಟು ಸಹಾಯ ಮಾಡೋರು. ಇದೆಲ್ಲ ನಾವು ಬಹಳ ಆಶ್ಚರ್ಯ ಮತ್ತು ಕುತೂಹಲದಿಂದ ಕೇಳುತ್ತಿದ್ದೆವು. ಎಲ್ಲವೂ ಸತ್ಯವಾಗಿರುತ್ತಿತ್ತು. ಹೀಗಾಗಿ ನನಗೆ ಅವರ ಬಗ್ಗೆ ಎಲ್ಲಿಲ್ಲದ ಗೌರವವಿದೆ.

ಇನ್ನೊಂದು ನನ್ನ ವೃತ್ತಿ ಜೀವನಕ್ಕೆ ಸಂಬಂಧಿಸಿದ್ದು. ನನಗೆ ಫಸ್ಟ್ ಅಪಾಯಿಂಟ್‌ಮೆಂಟ್ ಸಿಕ್ಕಿತು. ಮೊದಲ ಸಲವೇ ನನಗೆ ಮೈಸೂರಿನ ಕೆ.ಆರ್. ನಗರಕ್ಕೆ ಪೋಸ್ಟಿಂಗ್ ಮಾಡಿದ್ದರು. 45 ಜನಕ್ಕೆ ಆರ್ಡರ್ ಕೊಟ್ಟು ನಮ್ಮವರಿಗೆ ಒಂದು ಪೋಸ್ಟ್ ಇಲ್ಲಿ ಕೊಡಬಹುದಾಗಿತ್ತು. ಬೆಂಗಳೂರಿನಲ್ಲಿ ಯಾರಿಗೂ ಕೊಟ್ಟಿಲ್ಲವಲ್ಲ ಅಂತ ಮೇಲಿನವರಿಗೆ ಬಂದು ಕೇಳಿದೆ. ಯಾರು ನೆರವಿಗೆ ಬರಲಿಲ್ಲ. ಎಲ್ಲೆಲ್ಲೋ ಎಡತಾಕಿ ನಾನು ಭರಣಯ್ಯನವರ ಬಳಿ ಹೋದೆ. ಅವರಿಗೆ ನನ್ನ ಪರಿಪಾಟಲನ್ನು ವಿವರಿಸಿದೆ.

ಅಂದು ಅವರು ಪ್ರೀತಿಯಿಂದ ಮಾತನಾಡಿಸಿದರು. ವಿವರ ತಿಳಿದುಕೊಂಡರು. ನಮ್ಮನ್ನ ಕೂರಿಸಿ ಕಾಫಿ ಕೊಡಿಸಿದರು. ನಂತರ ಚೀಫ್ ಇಂಜಿನಿಯರ್‌ಗೆ ಫೋನ್

ಮಾಡಿದರು. ಅವರ ಪರಿಚಯ ಮಾಡಿಕೊಂಡರು. 'ನಮ್ಮ ಕ್ಯಾಂಡಿಡೇಟ್ ಒಬ್ಬರು ತುಂಬ ತೊಂದರೆಯಲ್ಲಿದ್ದಾರೆ. Please do it ಅವರ ಸರ್ವಿಸ್ ಬೇಕಾಗಿದೆ ಬೆಂಗಳೂರಿಗೆ. ದಯವಿಟ್ಟು ಇಲ್ಲಿಗೇ ಹಾಕಿಸಿಕೊಡಿ ಅಂತ ಒಂದೇ ಮಾತಲ್ಲಿ ವಿನಂತಿ ಮಾಡಿಕೊಂಡರು. ನಂತರ ಅವರನ್ನು ಭೇಟಿ ಮಾಡಲು ಹೇಳಿ ನನ್ನನ್ನು ಕಳುಹಿಸಿದರು.

11.30ಕ್ಕೆ ನಾನು ಹೋದದ್ದು 1 ಗಂಟೆಗೆ ವಾಪಸ್ ಬರೋ ಹೊತ್ತಿಗೆ, ನಮ್ಮ ಡೆಪ್ಯೂಟಿ ಚೀಫ್ ಇಂಜಿನಿಯರ್ ಸುಜ್ಞಾನ ಅಂತ ಇದ್ದಾರೆ. ಇಲ್ಲೇ ಇದ್ದಾರೆ ಈಗ ಬನಶಂಕರಿಲಿ. ಆಗ ಅವರು ಆರ್ಡರ್ ರೆಡಿ ಮಾಡಿ ಜೇಬಿನಲ್ಲಿಟ್ಟುಕೊಂಡಿದ್ದರು – ಟ್ರಾನ್ಸ್‌ಫರ್ ಟು ಬೆಂಗಳೂರ! ಅಂಥ ಇಲ್ಲೇ ಉಳಿಯುವಂತಾಯಿತು.

ಆವಾಗ ನಾನು ಪೀಣ್ಯಕ್ಕೆ ಬಂದು ರಿಪೋರ್ಟ್ ಮಾಡಿಕೊಂಡೆ. ಒಂಬತ್ತೂವರೆ ವರ್ಷ ಅಲ್ಲೆ ಇದ್ದೆ. ಆಮೇಲೆ ಪ್ರಮೋಷನ್ ಬಂತು. ಆಗೇನಾದ್ರೂ ಅಕಸ್ಮಾತ್ ನಾನು ಮೈಸೂರಿಗೆ ಹೋಗಿದ್ದರೆ ನಾನು ಬೆಂಗಳೂರಿನಲ್ಲಿ ಇರುವ ಸನ್ನಿವೇಶ ಬರುತ್ತಿರಲಿಲ್ಲ. ಆ ಕಡೆ ಸೆಟಲ್ ಆಗಿಬಿಡುತ್ತಿದ್ದೆವು. ಬೆಂಗಳೂರಿನ ಲಿಂಕ್ ಬಿಟ್ಟುಹೋಗೋದು. ಆದರೆ ಫಸ್ಟ್ ಟೈಮ್ ಅಪಾಯಿಂಟ್‌ಮೆಂಟ್ ಒಂದೇ ದಿನದಲ್ಲಿ ಕೇವಲ 2 ಘಂಟೆಯಲ್ಲಿ ನನ್ನ ಬೇಡಿಕೆಯನ್ನು ನಮ್ಮ ಮೇಲಾಧಿಕಾರಿಗೆ ಮನವರಿಕೆ ಮಾಡಿ ಚೇಂಜ್ ಮಾಡಿಸಿಕೊಟ್ಟರಲ್ಲ ಅನ್ನೋದೆ ಒಂದು ಕ್ರೆಡಿಟ್.

ಅವರಿಂದಲೇ ನಾನು ಇಷ್ಟು; ಈ ಮಟ್ಟಕ್ಕೆ ಬಂದಿದ್ದು. ನನಗೇನೂ ಅಂಥ ಹಿನ್ನೆಲೆ ಸಹ ಇರಲಿಲ್ಲ. ನಮ್ಮ ಸಂಬಂಧಿಕರು ಅಂದರೆ ಬಹಳ ಆಸಕ್ತಿ ತೆಗೆದುಕೊಳ್ಳುತ್ತಿದ್ದರು. ಇದು ಅವರಿಗಿದ್ದ ದೊಡ್ಡತನ.

ಹಲವು ಬಗೆಯಲ್ಲಿ ನಾವು ನೆನೆದುಕೊಳ್ಳಬೇಕು. ನಾವು ನಮ್ಮ ಕೈಲಾದದ್ದನ್ನು ಮಾಡಬೇಕು. ನಮ್ಮಿಂದ ಅವರಿಗೇನೂ ಸಹಾಯ ಆಗಲಿಲ್ಲ. ನಾವು ಈಗಲೂ ಅವರನ್ನ ನೆನೆಸಿಕೊಳ್ಳುತ್ತೇವೆ. ಅವಕಾಶ ಸಿಕ್ಕಿದರೆ ಅವರ ಪೀಳಿಗೆಗಾದರೂ ಸಹಾಯ ಮಾಡಬೇಕು ಅನ್ನಿಸುತ್ತದೆ.

ಅವರ ಬಗ್ಗೆ ಮತ್ತ್ಯಾವ ಸಂಗತಿ ಹಂಚಿಕೊಳ್ಳಬಯಸುತ್ತೀರಿ?


ಅವರು ಕೊಳ್ಳೇಗಾಲದಲ್ಲಿ ಚುನಾವಣೆಗೂ ನಿಂತರು; ಆಗ ನಾವು ಏನೂ ಸಹಾಯ ಮಾಡಲು ಆಗಲಿಲ್ಲ. ಏಕೆಂದರೆ ಫಸ್ಟ್ ಹೊಸ ಅಪಾಯಿಂಟ್‌ಮೆಂಟ್ ಆದ್ದರಿಂದ ಓಡಾಡೋಕೆ ಆಗುತ್ತಿರಲಿಲ್ಲ. ಇದು ನನ್ನನ್ನು ಸದಾ ಕಾಡುತ್ತದೆ. ಅವರಿಗಿದ್ದ ಜನಪ್ರಿಯತೆಗೆ ನಮ್ಮ ಜನ ಮೋಸ ಮಾಡಿದರು. ಉಳಿಸಿಕೊಂಡಿದ್ದರೆ ಎಷ್ಟೋ ಏಳಿಗೆ ಆಗುತ್ತಿತ್ತು. ಎಲ್ಲಾ ವಿಧಿ ಆಟ.

ಆದರೆ ಅವರು ತೀರಿಕೊಂಡಾಗ ನಾನು ತಕ್ಷಣ ಓಡೋಗಿ, ಕೊನೆವರೆಗೂ ಇದ್ದು, ಕೊನೆಗೆ ಒಂದು ವಂದನೆ ಅರ್ಪಿಸಿ, ಕೃತಜ್ಞತೆಯಿಂದ ಕೈ ಮುಗಿದು ಬಂದಿದ್ದೇನೆ ಅಷ್ಟೆ. ಅಂಥವರು ಮತ್ತೆ ಬರುವರೇ ಎನ್ನಿಸುತ್ತದೆ. ಅವರು ಸಂಸ್ಕೃತ ಪಂಡಿತರಾಗಿ ಪ್ರತಿನಿತ್ಯ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರಾಗಿದ್ದಾಗ ಎಷ್ಟೊಂದು ಜನ ಅವರಿಗಾಗಿ ಕಾಯುತ್ತಿದ್ದರು. ಪ್ರತಿಯೊಬ್ಬರಿಗೂ ತಾಳ್ಮೆಯಿಂದ ಉತ್ತರ ನೀಡಿ ಸಲಹೆ-ಸಮಾಧಾನ ಹೇಳುತ್ತಿದ್ದರು. ನಾನು ಅವರ ಬಗ್ಗೆ ತಿಳಿದುಕೊಳ್ಳುವ ಹೊತ್ತಿಗೆ ಅವರು ಬೇಕಾದಷ್ಟು ಸರ್ವಿಸ್ ಮಾಡಿದ್ದರು ಕಮ್ಯುನಿಟಿಗೆ.

ಭರಣಯ್ಯನವರ ಸ್ಮರಣಾರ್ಥ ನಿಮಗೆ ಒಂದು ಸನ್ಮಾನ ಮಾಡಿದರು ಅಂತ ಕೇಳಿದೆ. ಏನದು ಸರ್?

ಅದು ಶಿವಲಿಂಗಯ್ಯನವರ 75ನೇ ಹುಟ್ಟುಹಬ್ಬ ಮಾಡಿದಾಗ ಮಾಡಿದ್ದು. ನಮ್ಮ ಜನಾಂಗದ ಒಬ್ಬ ಶ್ರೇಷ್ಠ ವ್ಯಕ್ತಿಯ ಹೆಸರಲ್ಲಿ ಒಂದೊಂದು ಸನ್ಮಾನ ನಡೀತು. ಆಗ ನನಗೆ ಸನ್ಮಾನ ಮಾಡಿದರು. ನನಗೆ ಆಗ ಆರ್. ಭರಣಯ್ಯನವರ ಸ್ಮರಣಾರ್ಥ ಅಂಥೇಳಿ ಸನ್ಮಾನ ಪತ್ರವನ್ನು ಕೊಟ್ಟು ಗೌರವಿಸಿದರು.

* * *



A pleasing personality..

ಸಿದ್ಧಬಸವಯ್ಯ

No doubt he really feels about humanity........... Yes he is our man. Yes, he is the only man to sarve our community with full of love and concern.... ಭರಣಯ್ಯನವರಿಗೆ ಬಡವರ ಬಗ್ಗೆ ಅದೇನೋ ಕರುಣೆ ಮತ್ತು ಪ್ರೀತಿ. ಅಧಿಕಾರ ಇರುವುದೇ ಜನಸೇವೆಗೆ ಎಂದು ತಿಳಿದಿದ್ದ ಅಪರೂಪದ ವ್ಯಕ್ತಿತ್ವ ಅವರದು.

ನಿವೃತ್ತ ಅಧಿಕಾರಿ, ಸಹಕಾರಿ ಇಲಾಖೆ, ಬೆಂಗಳೂರು



A pleasing personality..

ಸಿದ್ಧಬಸವಯ್ಯ

"ಎಲ್ಲವನ್ನೂ ಕೊಟ್ಟಿರುವೆ ಏನ ಬೇಡಲಿ.... ಜಗವ ನನಗೆ ಬಿಟ್ಟಿರುವೆ ಏನ ಕೇಳಲಿ......." ಎಂದು ಹೇಳಿ ಬದುಕಿನ ಮುಸ್ಸಂಜೆಯಲ್ಲಿ, ಹಸನ್ಮುಖಿಯಾಗಿ ಕುಳಿತಿರುವ ಸಿದ್ಧಬಸವಯ್ಯನವರು ವೇದಾಂತಿಯಾಗಿದ್ದರು. ನಾನು ಮತ್ತು ಡಾ. ನರೇಂದ್ರಕುಮಾರ್

ಇಬ್ಬರೂ ಅವರ ಮನೆಗೆ ಭೇಟಿ ನೀಡಿದ ಆ ದಿನ (21-05-09 ಸಂಜೆ 5.30) ನಮ್ಮ ಭೇಟಿಯ ಉದ್ದೇಶ ಕೇಳಿ ಆನಂದಿಸಿದರು. ಮೈಸೂರಿನ ಸಿದ್ಧಾರ್ಥನಗರದ 'ವಿನಯ ಮಾರ್ಗ'ದಲ್ಲಿದ್ದ ತಮ್ಮ ಮನೆಯಂಗಳಕ್ಕೆ ಕೈ ಹಿಡಿದು ಬರಮಾಡಿಕೊಳ್ಳುತ್ತಾ, ಸಹಜ ವಿನಯ ತೋರಿದರು. ನಿವೃತ್ತಿಯ ನಂತರ ಜೀವನ ಮುನ್ನಡೆಸಲು ಹೆಣಗುವ ಕೆಲವರನ್ನು ನೋಡಿದ ಅನುಭವವಿರುವ ನಮಗೆ ಇವರ ಬತ್ತದ ಲವಲವಿಕೆ ಕಂಡು ನಿಜಕ್ಕೂ ಖುಷಿ ಅನಿಸಿತು. ಅಸಾಧ್ಯ ಜೀವನಾನುಭವ, ಅಷ್ಟೆ ಜ್ಞಾಪಕ ಶಕ್ತಿ. ಸಂವಾದದುದ್ದಕ್ಕೂ ನಗುತ್ತಲೇ ಮಾಹಿತಿ ನೀಡುತ್ತಾ ಹೋದರು.

ವ್ಯಕ್ತಿಗತ ಪರಿಚಯಕ್ಕಾಗಿ ಕೋರಿದ ನಮ್ಮತ್ತ ನಗೆ ಬೀರುತ್ತಾ ಒಮ್ಮೆ ಕಣ್ಮುಚ್ಚಿ ತನ್ನ ತಾಯಿನೆಲದತ್ತ ನಡೆದೇ ಬಿಟ್ಟರು. ತಿರುಮಕೂಡಲು ನರಸೀಪುರ 'ತ್ರಿವೇಣಿ ಸಂಗಮ'ದ ಬೀಡು, ಆ ಪುಣ್ಯ ಕ್ಷೇತ್ರದ ಹೊಳೆಯಲ್ಲಿ ಮಿಂದು ಎದ್ದಭಾವದಲ್ಲಿ ತಾ ಹುಟ್ಟಿದ ಊರು ಕುಕ್ಕೂರು ನೆನೆಯುತ್ತಾ, "ಅ ಹಾ.. ಎಂಥ ಚಂದವಿತ್ತು ನಮ್ಮ ಬಾಲ್ಯ, ಆಡುತ್ತಿದ್ದೋ, ಹಗಲು-ಇರಳು ಒಂದು ಮಾಡಿ ಆಡುತ್ತಿದ್ದ ಆಟ! ಒಂದೇ-ಎರಡೇ, ನಮ್ಮ ಬಾಲ್ಯದ ನಮ್ಮ ಆಟಗಳು ಬಹು ಸೊಗಸು. ಅದು ನಮ್ಮ ಪುಣ್ಯ. ಹೊಳೆ ಬಂದಾಗಲೆಲ್ಲ ಊರಿಗೇ ಊರೇ ಮುಳುಗಡೆ, ಅದೇನು ಚಂದ ಅಂತೀರಿ. ನಿತ್ಯಮುಳುಗಡೆ, ನೀರಿಳಿದ ಮೇಲೆ ಎದ್ದೆಳುವುದು ಸಾಕಾಗಿತ್ತು ಅನ್ನಿಸುತ್ತೆ, ದಡದತ್ತ ಊರನ್ನೇ ಅನಾಮತ್ತಾಗಿ ಎತ್ತಿ ಸರಿಸಿಬಿಟ್ಟರು ನಮ್ಮ ಹಿರೀಕರು!. ಮುಳುಗದೇ ಬಾಳಿ ಬದುಕಿದ ಬದುಕ ನೆನೆದು ಆನಂದಪಟ್ಟರು. ಆಗ ನಮ್ಮೂರಲ್ಲಿ ಶಾಲೆ ಇರಲಿಲ್ಲ. ಅಪ್ಪ ದೊಡ್ಡರಾಚಯ್ಯ - ಅವ್ವ ನಂಜಮ್ಮ ಅಂಗೈಯಲ್ಲಿ ಸಾಕಿದರು. ಆದರೆ ನಮ್ ತಾತ ಬಹಳ ಜೂರತ್‌ಗಾರ ಗಂಡಸು! ತಾತ ಸಿದ್ದನಂಜಯ್ಯ ಸುತ್ತಲ ಊರಿಗೆ ಹೆಸರುವಾಸಿ. ಬಹಳ ಒಳ್ಳೆಯ ನ್ಯಾಯಗಾರ. ಆತನ ಮೊಮ್ಮಗ ನಾನು ಬರೀ ಆಟವಾಡಿಕೊಂಡು ಕಾಲ ನೂಕುವುದೇ? ಸಾಧ್ಯವೇ ಇರಲಿಲ್ಲ. ಅವನ ಕಣ್ಣೆದುರಿಗೆ ಕೂತು ಓದಬೇಕು. ಬರೀ ಆಟ ನಡೆಯುತ್ತಿರಲಿಲ್ಲ. ಓದಬೇಕು. ಒಳ್ಳೆ ದಾರೀಲಿ ನಡಿಬೇಕು. ಒಂಥರಾ ಗಟ್ಟಿಕುಳ. ಕಂಡರೆ ಹೆದರಿಕೆ. ಹೀಗಾಗಿ ಆತನ ಎದುರು ಒಳ್ಳೆಯವರಾಗಿ ನಡೆಯದೇ ಬೇರೆ ದಾರಿ ಇರಲಿಲ್ಲ" ಹೀಗೆ ಸಿದ್ಧಬಸವಯ್ಯ ತಮ್ಮ ಪರಿಚಯ ಮಾಡಿಕೊಳ್ಳುವಾಗ ತಿರಮಕೂಡಲು ನರಸೀಪುರದ ಆ ಹೊಳೆ ದಂಡೆ, ಆ ಕೂಕ್ಕುರು, ಆ ತಾತ, ಆ ಆಟ ಒಂದೇ ಎರಡೇ ಅರಗಳಿಗೆ ಪುಟ್ಟ ಬಾಲಕನಾಗಿ ಕಳೆದುಹೋದರು. ಮಾತಿನಲ್ಲೇ ನಲಿದಾಡಿದರು.

ಅಪಾರ ಅನುಭವದ ಗಣಿ, ಮಾತು ಉದ್ದೇಶಕ್ಕೆ ತಿರುಗಿಬಂತು. ಮತ್ತೆ ಅದೇ ಬಾಲ್ಯದ ಸುಂದರ ಚಿತ್ರಣಗಳನ್ನು ಬಿಡಿಸುತ್ತಾ ಹೋಯಿತು. "ತಾತ ಆಟಕ್ಕೆ ಬಿಡದೆ

ನಮ್ಮ ಹಿಡಿ ಕೋಪಕ್ಕೆ ತುತ್ತಾಗುತ್ತಿದ್ದ. ಆದರೆ ವಿಧಿ ಇರಲಿಲ್ಲ! ತಲಕಾಡಿಗೆ ಬ್ರಿಟಿಷ್‌ರು ಬಂದರು. ಪೀಕ್‌ದೊರೆ ಅಂತ ಹೆಸರು. ಅವರ ಕಾಲ್ನೆಡೆಯಿಂದ ಶಾಲೆ ಬಂತು. ಊರಿಂದ ಮೂರು ಮೈಲಿ ದೂರ ಆ ಶಾಲೆ ತಲುಪಲು. ಪೀಕ್‌ದೊರೆ ದೊಡ್ಡವನು. ತಾರತಮ್ಯದ ಮಾತೇ ಇಲ್ಲ. ಎಲ್ಲರೂ ಕಲಿಯಲು ಅವಕಾಶಮಾಡಿ ಕೊಟ್ಟ ಪುಣ್ಯಾತ್ಮ. ಬ್ರಿಟಿಷರ ಆಗಮನದ ಬಗ್ಗೆ ಏನೋ ಆದರ ಒಸರಿತು. ಜಾತಿ ಮರೆತು ಪ್ರೀತಿ ಸಿಕ್ಕಿರಬಹುದಾದ ಗಳಿಗೆಯೊಂದು ಮಿಂಚಿ ಮರೆಯಾಯಿತು. ಆಗ ಕಲಿಕೆ ಎಂದರೆ ಆಟ. ಆಟವಾಡುತ್ತಾ ಕಲಿತೆವು. ಗಣಿತ ನನ್ನ ಅಚ್ಚುಮೆಚ್ಚಿನ ವಿಷಯ. ಅವ್ವ ಅಪ್ಪರ ಮಧ್ಯೆ ಅಡಗಿಕೊಂಡು ಮಲಗುತ್ತಾ 19ರ ವರೆಗೆ ತಪ್ಪದೇ ಮಗ್ಗಿ ಹೇಳುತ್ತಿದ್ದೆ. ಇಲ್ಲ ಅಪ್ಪ ಮಲಗುವ ವೇಳೆ ಬಿಡದೆ ಹೇಳಿಸುತ್ತಿದ್ದ. ಆಗ ಅವ್ವ ನನ್ನ ಪರವಾಗಿ ವಾದಿಸಿ ಮಗ್ಗಿಗೆ ಬ್ರೇಕ್ ಹಾಕುತ್ತಿದ್ದಳು.

ಆ ಇಂಗ್ಲಿಷ್ ಪೀಕ್‌ದೊರೆಯ ಪ್ರಭಾವದ ಕಾರಣ ಅನುಭವಿಸಿದ್ದನ್ನು ಹೇಳಬೇಕು. ಅಕ್ಷರ ಕಲಿಕೆ ಮಧ್ಯೆ ಧರ್ಮಬೋಧನೆ ಮಾಡುತ್ತಿದ್ದ. ಅವನು ರೂಪಿಸಿಕೊಟ್ಟ ದೇವರ ಮುಂದೆ ನಮ್ಮ ಮದ್ದೂರಮ್ಮ, ಮಾರಮ್ಮ, ದೊಡ್ಡಮ್ಮತಾಯಿ ಎಲ್ಲಾ ಕ್ಯಾಬಿನೈ!! ಆದರೆ ಅತ್ತ ಅವನ ದೇವರ ಬಳಿಗೂ ಹೋಗಲಿಲ್ಲ. ಇತ್ತ ನಮ್ಮ ಮಾರಿ ಮಸಣಿಯರನ್ನು ನಾನು ಕ್ಯಾರೆ ಅನ್ನಲಿಲ್ಲ. ನನ್ನ ಚುರುಕು ಮತ್ತು ಮೊನಚು ಮನೋಧರ್ಮ ಬೆಳೆಸಿತು. ಓದಿನ ಲೋಕ ಅಪ್ಪಿಕೊಂಡೆ. 'ಮರೆತೆ' ನೋಡಿ' ಎಂದು ಪೀಕ್ ದೊರೆ ಆಗಾಗ ಶಾಲೆಗೆ ಬಂದು ಬೋಧನೆ ಮಾಡುತ್ತಿದ್ದುದು ನೆನೆದರು. ಪೀಕ್‌ದೊರೆ ಹೇಳಿದ ಕಥೆ ಸಾರ ಇದು.

"ಮನುಷ್ಯರೆಲ್ಲ ಒಂದು ದಿನ ಸಾಯುತ್ತಾರೆ. ಒಳ್ಳೆ ಕೆಲಸ ಮಾಡಿದವರು, ಧರ್ಮಮಾರ್ಗದಲ್ಲಿ ನಡೆದವರು ಸ್ವರ್ಗಕ್ಕೆ ಹೋಗುತ್ತಾರೆ. ಉಳಿದವರಿಗೆ ನರಕ! ನರಕವೆಂದರೆ ಗೊತ್ತಲ್ಲ, ನಾನು, ನೀನು ಎಲ್ಲರೂ!" ಎಂದರು. ನನಗೆ ದಿಗಿಲಾಯಿತು. ಯಾರಾದರೂ ಸರಿ ನನ್ನ ಅಪ್ಪ-ಅವ್ವ ನರಕಕ್ಕೆ ಹೋಗಬಾರದೆಂಬ ಚಿಂತೆ ಅದ್ಯಾಕೋ ಶುರುವಾಯಿತು. ಅದಕ್ಕಾಗಿ ನಾನೇನಾದರೂ ಮಾಡಲೇಬೇಕು ಎಂದು ಹಠತೊಟ್ಟೆ. ಹೀಗಾಗಿ ಅವರ ಮೊಗ್ಗಲಲ್ಲೇ ಮಲಗಿಕೊಳ್ಳುತ್ತಿದ್ದೆ. ಅವರನ್ನು ಯಾರು ನರಕಕ್ಕೆ ಎಳೆದೊಯ್ಯಬಾರದೆಂದು ಕಾವಲು ಮಲಗಿ ಕೊಳ್ಳುತ್ತಿದ್ದೆ" ಮುಗ್ಧ ಬಾಲಕನ, ಅಪ್ಪ-ಅವ್ವನ ಬಗೆಗಿನ ಅದಮ್ಯ ಪ್ರೀತಿ ಮತ್ತೆ ಮೊಗೆದು ನೀಡಿದಂತೆ ತೋರಿತು. ಈಗಲೂ ಅಪ್ಪ-ಅವ್ವ ಸ್ವರ್ಗದಲ್ಲೇ ಇದ್ದಾರೆ ಎಂದು ಭಾವಿಸಿ, ನಂಬುಗೆಯ ಭಾವವೊಂದು ಮಿಂಚಿ ಮಾಯವಾಯಿತು. ಜಾನಪದ ಕಥಾ ರೂಪಕವೊಂದು ಮೈತಳೆದಂತೆ ಭಾಸವಾಗತೊಡಗಿತು. ಮುಸ್ಸಂಜೆಯಲ್ಲೂ ಅಪ್ಪ-ಅವ್ವನನ್ನು ಸ್ವರ್ಗಕ್ಕೆ ಕಳುಹಿಸಿರುವ

ತೃಪ್ತಿ ಇದ್ದಂತೆ ಆಗ ಕಂಡಿತು. ಪಿಕ್‌ದೊರೆಗೆ ಸವಾಲೆಸೆದು ನರಕದ ಬಾಗಿಲು ಮುಚ್ಚಿಸಿ ಗೆದ್ದಂತೆ ನಕ್ಕಿದ್ದು ಮೋಜೆನಿಸಿತು. ಇಂಥ ಅಪ್ಪ-ಅವ್ವರ ಜೊತೆ ಸ್ವರ್ಗದಲ್ಲೇ ಇರುವ ಇನ್ನೊಂದು ಶ್ರೇಷ್ಠ ಜೀವ 'ಭರಣಯ್ಯ'ನವರೆಂದು ಮಾತಿಗೆ ಬಂದರು.

"ಭರಣಯ್ಯನಂತವರ ಜನೋಪಕಾರಿ, ಬದುಕಿದ್ದಾಗಲೇ ಅವರಿಂದ ಅನುಕೂಲಪಡೆದವರೇ ಪುಣ್ಯವಂತರು. ಅಂಥ ವ್ಯಕ್ತಿ ಇಂದು ನಮ್ಮ ಮಧ್ಯೆ ಭೌತಿಕವಾಗಿಲ್ಲದಿರಬಹುದು. ಆದರೆ ಅವರು ಮಾಡಿದ, ಅವರಿಂದ ಉಪಯೋಗ ಪಡೆದ ನಾನು ಮತ್ತು ನನ್ನಂಥವರು ಇದ್ದೇವೆ. ಸದ್ಯಕ್ಕೆ ಅವರು ಅಲ್ಲಿ ಸ್ವರ್ಗದಲ್ಲೇ ಇದ್ದಾರೆ" ಎಂದು ಭಾವುಕರಾದರು.

ದಲಿತ ಜನಾಂಗದ ಕಣ್ಬೆಳಕಾಗಿದ್ದ ಆರ್. ಭರಣಯ್ಯನವರ ಕುರಿತು ನೆನಪಿನಂಗಳಕ್ಕೆ ಜಿಗಿದರು. ಆ ಕಾಲದಲ್ಲಿ ಅವರು ಕಂಡ ಹಿರಿತಲೆಗಳಿಂದ ಮಾಹಿತಿ ಕ್ರೋಢೀಕರಿಸಲೆಂದು ಹೋಗಿದ್ದ ನಮ್ಮನ್ನು ಶ್ರೀ ಸಿದ್ಧಬಸವಯ್ಯನವರು ತಿರಮಕೂಡಲು ನರಸೀಪುರ, ಕುಕ್ಕೂರಿನ ಹೊಳೆದಂಡೆ, ತಲಕಾಡಿನ ಪಿಕ್ ಸಾಹೇಬರು, ತಾತನ ಕಟ್ಟುನಿಟ್ಟಿನ ಲೋಕ, ಅಲ್ಲಿಂದ ದಾಟಿ ಅಪ್ಪ-ಅವ್ವರ ಸ್ವರ್ಗ-ನರಕದ ಲೋಕದಿಂದ ಬಿಡಿಸಿಕೊಂಡು ಅವರು ಭರಣಯ್ಯನವರ ನೆನಪಿನಂಗಳಕ್ಕೆ ಬಂದವರು ಒಮ್ಮೇಲೆ ಕಣ್ಮುಚ್ಚಿ ಮತ್ತೊಮ್ಮೆ ತಮ್ಮ ಹರೆಯದ ದಿನಗಳತ್ತ ನಡೆಯಲು ಅಣಿಗೊಂಡರು.

ಅವರು ಮಾತಿಗೆ ಮೊದಲು "ಎಂಥ ಶ್ರೇಷ್ಠ ಕೆಲಸ! ಕುಲ ಮೆಚ್ಚುವ ಕೆಲಸ. ಆ ಮಹಾನ್ ವ್ಯಕ್ತಿ ಬಗ್ಗೆ ನೀವು ಹುಡಿಕಿ ಬಂದು ನಮ್ಮನ್ನು ಕೇಳಿದ್ದೆ ನನ್ನ ಅದೃಷ್ಟ" ಕ್ಷಣಕಾಲ ಮುದಗೊಂಡರು, ಭಾವುಕರಾದರು. ಆನಂದಪರವಶತೆಯಲ್ಲಿ ಮಾತಿಗೆ ತೊಡಗಿದರು.

"ಶ್ರೀ ಆರ್. ಭರಣಯ್ಯ He is a God man ದೇವತಾ ಮನುಷ್ಯ. ಬರಿ ಪರಿಶಿಷ್ಟ ಸಮುದಾಯಕ್ಕೆ ಅಷ್ಟೇ ಅಲ್ಲ. ಇಡೀ ನಾಡಿನ ಜನಸಮುದಾಯಕ್ಕೆ, ಡಾ. ಅಂಬೇಡ್ಕರ್ ನಂತರ ಅಭಿಮಾನದಿಂದ ಹೇಳಬಹುದಾದ ಹೆಸರು ಭರಣಯ್ಯನವರದು. ಬಡಬಗ್ಗರ ಬಗ್ಗೆ ತಾಯಿಪ್ರೇಮ ತೋರುತ್ತಿದ್ದ ಧೀಮಂತ. ಹೌದೌದು ತಾಯ್ಗರುಳಿನ ಮನುಷ್ಯ" ಸಿದ್ಧಬಸವಯ್ಯ ಮತ್ತೆ ಭಾವಪರವಶರಾದರು. ಭರಣಯ್ಯನವರ ಹೆಸರನ್ನು ಒಳಗೊಳಗೆ ಗುನುಗಿಕೊಂಡರು. ಆನಂದಿಸಿದರು. ಕಣ್ತುಂಬಿಕೊಂಡರು. ಭರಣಯ್ಯನವರ ಬಗ್ಗೆ ನಿರ್ವ್ಯಾಜ್ಯ ಪ್ರೀತಿ ಇನ್ನು ಹಸಿರಾಗಿರುವಂತೆಯೇ ತೋರಿತು. "No doubt he really and genuinelly feels about humanity" ಮತ್ತೆ ಹೇಳಿದರು "Yes, he is our man. Yes, he is the only man to serve our community with full of love and concern". ಭರಣಯ್ಯನವರಿಗೆ ಬಡವರ ಬಗ್ಗೆ

ಅದೇನೋ ಕರುಣೆ, ಪ್ರೀತಿ. ಅಧಿಕಾರ ಇರುವುದೇ ಜನಸೇವೆಗೆ ಎಂದು ತಿಳಿದಿದ್ದ ಅಪರೂಪದ ವ್ಯಕ್ತಿತ್ವ".

"ಅವರು ಬದುಕಿದ್ದಾಗಲೇ ದಂತ ಕಥೆಯಾಗಿದ್ದರು. ನಾನು ಆಗತಾನೇ ಮೆಟ್ರಿಕ್ ನಂತರದ ಓದುಮುಗಿಸಿ ಪೋಸ್ಟಲ್ ಇಲಾಖೆಗೆ ಸೇರಿದ್ದೆ. ಲೆಕ್ಕಾಚಾರ ನಿರ್ವಹಿಸಬೇಕಾದ ವೃತ್ತಿ. ಕೊಂಚ ಏರುಪೇರಾದರೂ ಮೇಲಿನವರ ಕೆಂಗಣ್ಣಿಗೆ ಗುರಿಯಾಗಬೇಕಾಗಿತ್ತು. ಎಲ್ಲಾದರೂ ಬೇರೆ ಕೆಲಸ ಸಿಕ್ಕರೆ ಸಾಕು ಎಂದು ತವಕಿಸುತ್ತಿದ್ದೆ. I want to quit this job as soon as possible ಅಂತ ತವಕಿಸುತ್ತಿದ್ದೆ. ಅಂಥದೊಂದು ಗಳಿಗೆ ಬಂದೇ ಬಿಟ್ಟಿತು. That is my good day! I was relieved and moved to Mr. Bharanaiah ಅವರ ಭೇಟಿ ನನಗೆ ನೇರವಾಗಿ ಆಗಿದ್ದಿಲ್ಲ. ಮಂತ್ರಿಗಳಾಗಿದ್ದ ಮಲ್ಲಿಕಾರ್ಜುನಸ್ವಾಮಿಯವರು ನನ್ನನ್ನು ಅವರ ಬಳಿಗೆ ಕಳುಹಿಸಿದರು. 1964 ಅಂತ ಕಾಣುತ್ತೆ. ಅವರನ್ನು ಕಾಣಲು ಬೆಂಗಳೂರಿಗೆ ಹೋದೆ. Oh..! that was great experience to me. ಅವರು ಆಗ Co-operative Society govt of Karnataka ಇಲ್ಲಿ Registrar ಆಗಿದ್ದರು. At that time Bangalore was a growing city ಇಷ್ಟು ಬೃಹತ್ ಗಾತ್ರದಲ್ಲಿ ಬೆಳೆದಿರ್ಲಿಲ್ಲ". ಬೆಂಗಳೂರಿನ ಬೃಹತ್ ಬೆಳೆವಣಿಗೆಯ ಕುರಿತು ಒಮ್ಮೆ ದುಗುಡುಗೊಂಡು ಮತ್ತೆ ಮಾತಿಗೆ ಮರುಳಿದರು. "ಸೂಟ್‌ದಾರಿ ಭರಣಯ್ಯನವರ ಕೊಠಡಿಯ ಮುಂದೆ ನೂರಾರು ಜನರು. ಒಳಗೂ–ಹೊರಗೂ. ಎಲ್ಲರನ್ನು ಸಹಜವಾಗಿ ಮಾತನಾಡಿಸುತ್ತಾ, ಎಲ್ಲರನ್ನು ವಿಚಾರಿಸಿಕೊಳ್ಳುತ್ತಾ ಬಂದವರಿಗೆಲ್ಲಾ ಏನಾದರು ಒಂದು ಉಪಯುಕ್ತ ಕೆಲಸ ಮಾಡಿಕೊಟ್ಟು ಕಳುಹಿಸುತ್ತಿದ್ದರು. ದೂರದಿಂದಲೇ ನೋಡಿ ಆನಂದಿಸಿದೆ. ಬಹಳ ಅಳುಕಿನಿಂದಲೇ ನಿಂತಿದ್ದೆ. ಜನರನ್ನು ನೋಡಿ ಮಾತಾಡಿಸುತ್ತಿದ್ದ ವೈಖರಿ ಕಂಡು ಧೈರ್ಯ ಬಂತು. ನನ್ನ ಸರದಿ ಬಂತು. ನಾವು ನೀವು ಮಾತಾಡುವಂತೆ ಪ್ರೀತಿ ತುಂಬಿದ ಕಂಗಳಿಂದ ಅವರು ಮಾತಾಡಿದರು. "ಏನಪ್ಪಾ.. ಏನಾಗಬೇಕು" ಎಂದರು ಮಲ್ಲಿಕಾರ್ಜುನ ಸ್ವಾಮಿಯವರು ಕಳುಹಿಸಿದ್ದ ವಿವರ ನೀಡಿದೆ. 'ಕೊಡು' ಏನೇನು ದಾಖಲೆ ತಂದಿರುವೆ ಎಂದರು, ನೀಡಿದೆ. ಅದೇ ಅರ್ಜಿ ಮೇಲೆ ಏನೋ ಬರೆದರು. ನಾಳೆ ಬಂದು Appointment Order ತಗೊಂಡು ಹೋಗು ಎಂದರು. ಭಾಗ್ಯವೇ ಬಂದಂತೆ ಅನಿಸಿತು. ಕುಣಿದಾಡುವಂತಾಯಿತು. ನನ್ನ ಸಂತೋಷಕ್ಕೆ ಪಾರವೇ ಇಲ್ಲ. I have got a job in co-operative societies as a co-operative extension officer ಮಂಡ್ಯ ಜಿಲ್ಲೆ ಮಳವಳ್ಳಿಗೆ Postings ಕೊಟ್ಟರು. ನಿಂತಲ್ಲಿಯೇ ಕೈ ಮುಗಿದೆ. 'ಒಳ್ಳೆಯದಾಗಲಪ್ಪ' ಎಂದರು".


"ನಿಜ ಹೇಳ್ತೀನಿ. ನಾನು ಕನಸು ಮನಸ್ಸಲ್ಲಿ ಎಣಿಸಿರಲಿಲ್ಲ. ಅಂದು ಅವರನ್ನ ನಾನು ಭೇಟಿ ಮಾಡುತ್ತೇನೆಂಬ ಕನಸೂ ಇರಲಿಲ್ಲ. ಕೆಲಸ ಸಿಗುತ್ತದೆಂಬ ನಂಬಿಕೆಯೂ ಇರಲಿಲ್ಲ. ಸ್ವರ್ಗ ಮೂರೇ ಗೇಣು!! ಇತ್ತಿಂದ ಹೋದವನು ಅತ್ತಿಂದ ಕೆಲಸದ Order ಹಿಡಿದುಕೊಂಡು ಬಂದೆ. ನನ್ನ ತಂದೆ ತಾಯಿ, ಬಂಧುಬಳಗ ಎಲ್ಲಾ ಖುಷಿ ಪಟ್ಟರು. ನನ್ನ ಜೀವನದ ಬಾಗಿಲು ತೆರೆಯಿತು. He was my God and God Father. ನನ್ನಂಥ ಎಷ್ಟೋ ಜನಕ್ಕೆ ಇಂಥ ಉಪಕಾರವನ್ನು ಎಣಿಕೆ ಇಲ್ಲದಷ್ಟು ಮಾಡಿದ್ದಾರೆ. ನಾವು ಇಂಥವರು ಇಂಥ ಜನ ವರ್ಗದವರೆಂದರೇ ಸಾಕು. ಅದೇನೋ ಮಮಕಾರ ಪ್ರೀತಿ. ಅಷ್ಟೇ ಅಲ್ಲ ಇತರೇಯವರಿಗೂ ಅಷ್ಟೆ. Irrespective of community ಅವರೆಂದೂ ಕೈ ಹಿಂದೆ ತೆಗೆದವರೇ ಅಲ್ಲ. ಎಲ್ಲಾ ಕೋಮಿನ ಬಡಜನಕ್ಕೆ ಆಸರೆ ನೀಡಿದ್ದಾರೆ. ವಿಶೇಷವೆಂದರೆ, ಅಧಿಕಾರವಿದ್ದಾಗ ಕಿಂಚಿತ್ತು ಪ್ರತಿಫಲಾಪೇಕ್ಷೆ ಪಡದೆ ಸೀದಾ ನೇರ ಉಪಕಾರಕ್ಕೆ ಹಾತೊರೆಯುತ್ತಿದ್ದ ಜೀವವಾಗಿತ್ತು. ಅದೇ ಅವರ ವಿಶೇಷತೆ. ಯಾರು ಕಷ್ಟ ಅಂತ ಬಂದರೂ, ಅವರ ಅರ್ಹತೆಗೆ ತಕ್ಕ ಒಂದು ಕೆಲಸ ಕೊಟ್ಟುಬಿಡುತ್ತಿದ್ದರು. ಕಷ್ಟ ಹೇಳಿಕೊಂಡು ಅವರ ಬಳಿ ಬಂದವನೇ "ಭಾಗ್ಯವಂತ..!" ಸಿದ್ಧಬಸವಯ್ಯನವರು ಭೂತಕಾಲದಿಂದ ಭವಿಷ್ಯಕ್ಕೆ ಜಿಗಿದರು. ಇವತ್ತಿನ ಅಧಿಕಾರವಲಯದ ಬಗ್ಗೆ ತಮ್ಮದೇ ಕೋಮಿನ 'ಕೆಲವು' ಅಧಿಕಾರಿಗಳ ಬಗ್ಗೆ ನೆನೆದುಕೊಂಡರು. ಎಲ್ಲಿ ಹೋಯ್ತು ಆ ಉಪಕಾರದ ಮನಸ್ಸುಗಳು. ಇವರೇನಾ ಅಂಬೇಡ್ಕರ್‌ಗೆ ಹೆಸರು ತರುವವರು ಅನ್ನಿಸುತ್ತೆ. ನಾವು ಯಾವುದಾದರು ಕಛೇರಿಗೆ ಹೋದರೆ ಚೀಟಿಕೊಟ್ಟು ಕಾಯಬೇಕು. ಅವರು ಕರೆದರೆ ಉಂಟು ಇಲ್ಲದಿದ್ದರೆ ಮುಗೀತು. ಅಲ್ಲಾ ಸ್ವಾಮಿ... ನಮ್ಮ ಅಧಿಕಾರಿಗಳತ್ರ ಚೀಟಿ ಕೊಟ್ಟು ನೋಡೊಕ್ಕೆ ಬರೋವರು ನಮ್ಮ ಜನ, ಬಡಜನ. ಅಲ್ಲದೆ ಪ್ರೆಸಿಡೆಂಟ್ ಆಫ್ ಇಂಡಿಯಾ ಬಂದು ಚೀಟಿಕೊಟ್ಟು ಕಾಯ್ತಾರಾ?". ಪ್ರಶ್ನಿಸಿ ಜೋರು ನಗೆಯ ಚೆಲ್ಲಿ ನಮ್ಮನ್ನು ನಗಿಸಿದರು. ವ್ಯಂಗ್ಯ ಭರಿತ ಆ ದನಿಯಲ್ಲಿ ವಿಷಾದವಿತ್ತು. ವರ್ತಮಾನದ ದಲಿತ 'ಕೆಲವು' ಅಧಿಕಾರಿಗಳ ವರ್ತನೆಗೆ ಕನ್ನಡಿಯಾಗಿತ್ತು. "ಭರಣಯ್ಯನವರ ವ್ಯಕ್ತಿತ್ವ ಮಾದರಿ ವ್ಯಕ್ತಿತ್ವ. ಬಡಬಗ್ಗರನ್ನು – ಶ್ರೀಮಂತರನ್ನು ಒಂದೇ ಭಾವದಲ್ಲಿ ನೋಡುವ ಮನೋಧರ್ಮ ಅಪರೂಪದ್ದು. ಅದಕ್ಕೆ ಅವರು ಎಲ್ಲರಂತಿದ್ದರೂ ವಿಭಿನ್ನವಾಗಿ ಮುಖ್ಯವಾಗಿ ಕಾಣುತ್ತಾರೆ. ಸೇವಾ ಮನೋಭಾವ ಸುಮ್ಮನೆ ಬರುವುದಿಲ್ಲ. ಅದಕ್ಕೆ ವ್ಯಕ್ತಿತ್ವವೂ ಬೇಕು. ಬದ್ಧತೆಯೂ ಇರಬೇಕು. ಜನಾಂಗದ ಏಳಿಗೆ ಬಗ್ಗೆ ಸಂಕಲ್ಪವು ಹೊಂದಿರಬೇಕು. ಎಲ್ಲರೂ ಉಪಕಾರಿಯಾಗಿರಲು ಸಾಧ್ಯವಾಗುವುದಿಲ್ಲ". ವರ್ತಮಾನದಲ್ಲಿ ಅಧಿಕಾರಶಾಹಿ ಹೊಂದಿರಬೇಕಾದ ಮನೋಧರ್ಮದ ಬಗ್ಗೆ ಖಚಿತ ನಿಲುವಿನಲ್ಲಿ ಮಾತನಾಡುತ್ತಿದ್ದರು.

ತಾವೇ ಒಬ್ಬರು ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಬಡವರಿಗೆ, ಜನ ಸಮುದಾಯಕ್ಕೆ ಮಾಡಿದ ಕೆಲಸ ಕಾರ್ಯಗಳಿಗೆ ಭರಣಯ್ಯನವರನ್ನೇ ಮಾದರಿಯಾಗಿಟ್ಟುಕೊಂಡು ಕೆಲಸ ನಿರ್ವಹಿಸಿದ್ದಾಗಿ ಹೇಳಿದರು.

ಸಿದ್ಧಬಸವಯ್ಯನವರು ಕಡೆಯದಾಗಿ ಹೇಳಿದ ಪ್ರಸಂಗ ಶ್ರೀ ಭರಣಯ್ಯನವರ ವ್ಯಕ್ತಿತ್ವಕ್ಕೆ ಉತ್ತಮ ಉದಾಹರಣೆಯಾಗಿರುವಂತೆ ತೋರಿತು. "ನಾಡಿನ ಹೆಸರಾಂತ ಅಧಿಕಾರಿಯಾಗಿದ್ದ ಜಿ. ವಿ. ಕೆ. ರಾವ್ ಯಾವುದೋ ಇಲಾಖೆಯ ಕಮೀಷನರ್ ಆಗಿದ್ದರು. ಒಬ್ಬ ದಲಿತ ಬಂಧು ಮತ್ತಾವುದೊ ಇಲಾಖೆಯಲ್ಲಿದ್ದು ಸಸ್ಪೆಂಡ್ ಆಗಿದ್ದ. ಯಾವುದೋ ಅಧಿಕೃತ ಕಾರಣಕ್ಕೆ ಬಹಳ ಇಕ್ಕಟ್ಟಿಗೆ ಸಿಕ್ಕಿ ನಲುಗಿಹೋಗಿದ್ದ. ನಾನು ಅವರನ್ನು ಭರಣಯ್ಯನವರ ಬಳಿ ಕರೆದೊಯ್ದೆ. ಎಂದಿನಂತೆ ಅವರ ಮುಂದೆ ಹತ್ತಾರು ಜನ ಸಾಲುಗಟ್ಟಿ ನಿಂತು ಕೆಲಸ ಮಾಡಿಸಿಕೊಳ್ಳುತ್ತಿದ್ದರು. ನಮ್ಮ ಸರದಿ ಬಂತು. ವಿಚಾರ ತಿಳಿಸಿದೆವು. ತಮ್ಮ ಸಹಾಯಕರನ್ನು ಕರೆದು ಜಿ. ವಿ. ಕೆ. ರಾವ್ ರವರಿಗೆ ಫೋನ್ ತೆಗೆದುಕೊಳ್ಳಲು ಹೇಳಿದರು. ಇತ್ತಿಂದ "ನಮಸ್ಕಾರ ಸಾರ್. ನಾನು ಭರಣಯ್ಯ ಸಾರ್. ನಮ್ಮ ಹುಡುಗ ಸಾರ್. ಬಹಳ ಬಡವ ಸಾರ್. ಅವನ ತಪ್ಪನ್ನು ಹೊಟ್ಟೆಗೆ ಹಾಕೋಳ್ಳಿ ಸಾರ್. ಸಾರ್ ದಯವಿಟ್ಟು ಅವನಿಗೆ ಸಸ್ಪೆಂಡ್ ಆರ್ಡರ್ನ್ನ ವಾಪಸ್ಸು ಮಾಡಿಸಿಬಿಡಿ ಸಾರ್. ಅವನು ಮಕ್ಕಳೊಂದಿಗ. ಅವನನ್ನು ನಾನು ಕಣ್ಣಾರೆ ನೋಡಿದ್ದೇನೆ. Please ಕೈ ಬಿಡಬೇಡಿ ಸಾರ್ A Pleasing personality" ಸಿದ್ಧಬಸವಯ್ಯ, ಘಟನೆ ನೆನದು ಗದ್ಗದಿಸಿದರು. ಹನಿಗಣ್ಣಾದರು. ಕ್ಷಣಮೌನ. ನಂತರ ಸಿದ್ಧಬಸವಯ್ಯನವರು ಮಾತಾಡಿದರು. "ಹೇಳಿ ಸಾರ್ ಕಷ್ಟದಲ್ಲಿರುವವರಿಗೆ ತಾನು ಉನ್ನತ ಅಧಿಕಾರಿಯಾಗಿದ್ದರೂ, ಬೇಡಿಕೊಂಡ ರೀತಿ ನೋಡಿ ಈಗಲೂ ಕರುಳು ಚುರುಕ್ ಅನ್ನುತ್ತೆ. ಇಂದು ಎಷ್ಟು ಜನ ಇಂಥವರಿದ್ದಾರೆ. ಅದಕ್ಕೆ ಅವರು ವಿಶೇಷವೆನಿಸುವುದು. ಇವತ್ತಿನ ತಲೆಮಾರು ಓದಿ ಮುಂದೆ ಬರಬೇಕು. ಅವರಂತಾಗಬೇಕು. ಅದಕ್ಕಾಗಿ ನೀವು ಇಂಥ ಮಹಾನ್ ವ್ಯಕ್ತಿತ್ವವನ್ನು ಮುಂದಿನ ತಲೆಮಾರಿಗೆ ಒಟ್ಟುಮಾಡಿ ಕೊಡುತ್ತಿರುವುದು ಶ್ರೇಷ್ಠ ಕೆಲಸ. ನಿಮ್ಮಂತವರಿಗೆ ಆಯಸ್ಸು ಆರೋಗ್ಯ ಹೆಚ್ಚಿಗೆ ಕೊಡಲಿ ಎಂದು ಕೇಳಿಕೊಳ್ಳುವೆ. I won't believe the god. But I believe the man. God is with Every one that I belive god with every Good work. You people have done a great job. May I wish all success in your work" ಮನಸ್ಸು ತುಂಬಿ ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತಾಡುತ್ತಾ, ಅಭಿಮಾನ ತೋರುತ್ತಾ ಹೇಳಿದರು. ತಮ್ಮ ಮಗನ ಹುಟ್ಟಿದ ಹಬ್ಬಕ್ಕೆ 1965 ಮೇ –1ನೇ ತಾರೀಖು ಭರಣಯ್ಯನವರು

ಕಳುಹಿಸಿದ ಶುಭ ಸಂದೇಶದ ಜೆರಾಕ್ಸ್ ಪ್ರತಿ ನೀಡಿದರು. ಅದನ್ನು ಅತೀ ಅಮೂಲ್ಯವೆಂದು ಭಾವಿಸಿದ್ದ ಅವರ ಅಭಿಮಾನ ನಮ್ಮ ಕೃತಜ್ಞತೆ ಹೆಚ್ಚಿಸಿತು. ಸಿದ್ಧಬಸವಯ್ಯ "ನೋಡಿ ಒಬ್ಬ ಸಾಮಾನ್ಯ ವ್ಯಕ್ತಿಯ ಕುಟುಂಬಕ್ಕೆ ಅವರು ತೋರುತ್ತಿದ್ದ ಪ್ರೀತಿಗೆ ಇದಕ್ಕಿಂತ ದಾಖಲೆಬೇಕೆ" ಎಂದು ಮತ್ತೆ ಅಭಿಮಾನ ತೋರಿದರು. ಅವರು ಆ ಅಭಿಮಾನದ ಆ ಪ್ರತಿ ಕೊಟ್ಟರು. ಆ ಪತ್ರದಲ್ಲಿ ತುಂಬಿಕೊಂಡಿದ್ದ ಪ್ರೀತಿಯ ಮಾತುಗಳು, ಹಾರೈಕೆಗಳು ಸಿದ್ಧಬಸವಯ್ಯನವರ ಕುಟುಂಬದ ತುಂಬಾ ಹಂಚಿಕೊಂಡಿರುವುದು ಎದ್ದು ಕಾಣುತ್ತಿತ್ತು. ಅದು ನಿಜವೇ ಎಂಬಂತೆ ಅವರ ಶ್ರೀಮತಿ ಮತ್ತು ಮಗಳು –ಮೊಮ್ಮಗ ಎಲ್ಲರೂ ಕೂಡಿ ನೀಡಿದ, ಕಾಫಿ–ಫಲಹಾರ ತಿನ್ನುತ್ತಾ ಅವರಿಗೆ ವಂದಿಸಿ ನಡೆದವು. ವಿನಯ ಮಾರ್ಗದ ಆ ಮನೆಯಲ್ಲಿ ಭರಣಯ್ಯನವರ ಸ್ಮರಣೆ ತುಂಬಿಕೊಂಡಿದ್ದು ನಿಜಕ್ಕೂ ಖುಷಿ ಎನಿಸುವಂತಿತ್ತು. "ಎಲ್ಲಾ ನೀಡಿ ಅಳಿಸಲಾಗದ ಅಭಿಮಾನ ಬಿಟ್ಟು ಹೋಗಿರುವ" ಭರಣಯ್ಯನವರ ಬಗ್ಗೆ ಗೌರವ ಭಾವ ನಮ್ಮೊಳಗೂ ಇಮ್ಮಡಿಗೊಂಡಿತು.

* * *



R. Bharaniah, I.A.S.,
Commissioner for Settlement and
Land Records.

Bangalore.
Dated 1st May 1965.

D.O. No.

Dear Sri Siddabasavaiah,

Thank you for your kind invitation for the birthday celebrations of your little son Chi.Madhusudhana. I am unable to attend the function on 3rd as I am pre-occupied. However my sweet wishes to your son and pray almighty to shower his blessings on him with long life and prosperity. I also congratulate on your appointment as Co-operative Extention Officer.

Yours sincerely,
R. Bharaniah
1.5.65

Shri R.Siddabasavaiah, B.sc.,
Co-Operative Extension Officer,
Malavalli, (Mandya District)

ಆರ್. ಭರಣಯ್ಯನವರ ಹಸ್ತಾಕ್ಷರವಿರುವ ಶುಭಾಷಯ ಪತ್ರ




ಸದಾ ನೆರಳಿನಂತಿದ್ದ ವ್ಯಕ್ತಿತ್ವ

ವೀರಭದ್ರಯ್ಯ

ಸೇವೆ ಮತ್ತು ರಾಜಕೀಯ ಉತ್ತರ ದಕ್ಷಿಣ ಧ್ರುವಗಳು. ಹೀಗಿರುವಾಗ ಅವರು ಕಾಂಗ್ರೇಸ್ ಒಡೆದು ಹೋಗಿದ್ದ ಕಾಲದಲ್ಲಿ ಕಾಂಗ್ರೇಸ್ ವಿರುದ್ಧ ಚುನಾವಣೆಗೆ ನಿಂತರು! ರಾಜಕೀಯ ರಂಗದಲ್ಲಿ ಇವರು ಚದುರಂಗದಾಟ ಆಡಲಿಲ್ಲ. ಕಾರಣ ಅಂದರೆ 'ಆಮಿಷ' ಅನ್ನೋ ಪದಾನೇ ಅಂದು ಅವರು ಉಪಯೋಗಿಸಿರಲಿಲ್ಲ. ಚುನಾವಣೆಯಲ್ಲಿ ಎಲ್ಲರಿಗೂ ವಿನಂತಿಸಿ ಮತ ಕೇಳಿದರೆ ವಿನಃ ಬೇರೆ ರೀತಿಯಲ್ಲಿ ಅಲ್ಲ. ಇದನ್ನ ನಮ್ಮ ಜನ ಅರ್ಥಮಾಡಿಕೊಳ್ಳದೇ ಹೋದರು. ಬಡವರಿಗಾಗಿ ಸದಾ ತುಡಿಯುತ್ತಿದ್ದ ಧೀಮಂತನೊಬ್ಬನನ್ನು ರಾಜಕೀಯದಲ್ಲಿ ಉಳಿಸಿಕೊಳ್ಳದೆ ಹೋದದ್ದು ನಮ್ಮ ವ್ಯವಸ್ಥೆಯ ದುರಂತವೆನ್ನಬಹುದು...

ನಿವೃತ್ತ ಡಿ.ಸಿ.ಪಿ.
ಬೆಂಗಳೂರು



ಸದಾ ನೆರಳಿನಂತಿದ್ದ ವ್ಯಕ್ತಿತ್ವ

ವೀರಭದ್ರಯ್ಯ

ಭರಣಯ್ಯನವರನ್ನು ತಾವು ಪ್ರಪ್ರಥಮ ಬಾರಿಗೆ ಭೇಟಿ ಮಾಡಿದಂತಹ ಸನ್ನಿವೇಶವನ್ನು ತಿಳಿಸುವಿರಾ?

ನಾನು ಹೈಸ್ಕೂಲು ವಿದ್ಯಾರ್ಥಿ ಆಗಿದ್ದಾಗ ಶೇಷಾದ್ರಿಪುರಂ ಹಾಸ್ಟೆಲ್‌ನಿಂದ ಮಲ್ಲೇಶ್ವರಂ ಹೈಸ್ಕೂಲಿಗೆ ಹೋಗುತ್ತಿರುವ ಕಾಲದಲ್ಲಿ ಮಲ್ಲೇಶ್ವರಂ ಮುಖ್ಯ ರಸ್ತೆಯಲ್ಲಿ ಭರಣಯ್ಯ ಸಾಹೇಬರ ಕಾರು ನಿಂತಿತ್ತು. ನನಗೆ ಗೊತ್ತಿರಲಿಲ್ಲ. ನನ್ನ ಸ್ನೇಹಿತರು ಹೇಳಿದರು,

'ನೋಡು ಇದು ಭರಣಯ್ಯ ಸಾಹೇಬರ ಕಾರು. ಅವರ ಮಕ್ಕಳು, ಮನೆಯವರು ಇಳಿದು ಅಂಗಡಿಗೆ ಹೋಗುತ್ತಿದ್ದಾರೆ.' ಅಂತ ತಿಳಿಸಿದರು. ನಾನು ಕುತೂಹಲದಿಂದ ಕಾರಿನ ಹತ್ತಿರ ಹೋಗಿ ನೋಡಿದಾಗ ಸಾಹೇಬರು ಕಾರಿನಲ್ಲಿ ಕೂತಿದ್ದರು. ನಾನು 'ನಮಸ್ಕಾರ ಸರ್' ಅಂದೆ. ಅವರೂ ನಮಸ್ಕಾರಪ್ಪ' ಅಂದರು. ಅಷ್ಟೆ. ನಾನು ಮುಂದೆ ಶಾಲೆಗೆ ಹೋದೆ. ವಿದ್ಯಾವಂತರಾಗಿ ಒಳ್ಳೆ ಪದವಿ ಪಡೆದು, ಉತ್ತಮ ಶ್ರೇಣಿಯ ನೌಕರಿ ಪಡೆದು ಈ ಮಟ್ಟಕ್ಕೆ ಬಂದಿರುವುದು ನಮ್ಮಲ್ಲಿ ವಿರಳ; ಅದರಲ್ಲೂ ಇವರು ಮೂರನೆಯವರೋ ನಾಲ್ಕನೆಯವರೋ ಆಗಿದ್ದಾರೆ ಅನ್ನೋದು ಗೊತ್ತಾಯಿತು. ಇದು ನನ್ನ ಮೊದಲ ಭೇಟಿ ಎಂದು ಹೇಳಬಹುದು.

ನಂತರ ಯಾವ ಸಂದರ್ಭದಲ್ಲಿ ಇವರನ್ನ ಭೇಟಿ ಮಾಡುವಂತಹ ಅವಕಾಶ ತಮಗೆ ಸಿಕ್ಕಿತು?

ಈಗ ಹಾಲಿ ಶೇಷಾದ್ರಿಪುರಂನಲ್ಲಿರುವ ಥಿಯೇಟರ್ ಆವರಣದಲ್ಲಿ ಕಾಲೇಜು ಹಾಸ್ಟೆಲ್ ನಂ.2 ಅಂತ ಆ ಕಾಲದಲ್ಲಿ ಇತ್ತು. ನಾನು ಆಗ ಫೈನಲ್ ಬಿ.ಎಸ್ಸಿ. ಓದುತ್ತಿರುವ ಕಾಲಕ್ಕೆ ಮಾನ್ಯ ಭರಣಯ್ಯನವರು ಆ ಹಾಸ್ಟೆಲ್‌ಗೆ ಭೇಟಿ ಕೊಟ್ಟು, ಎಲ್ಲಾ ವಿದ್ಯಾರ್ಥಿವೃಂದದವರ ಪರಿಚಯ ಮಾಡಿಕೊಂಡರು. ಆಗ ವಿದ್ಯಾರ್ಥಿಗಳ ಕಷ್ಟ ಕಾರ್ಪಣ್ಯಗಳನ್ನ ವಿಚಾರಿಸುತ್ತಿದ್ದರು. ನಮಗೆಲ್ಲ ಆಶ್ಚರ್ಯ. ಏನು ದೊಡ್ಡ ಸಾಹೇಬರು ಹಾಸ್ಟಲ್‌ಗೆ ಬಂದಿದ್ದಾರಲ್ಲಾಂತ. ಆಗ ನೇರವಾಗಿ ಸಾಹೇಬರು ಒಂದು ಮಾತು ಹೇಳಿದರು – "ಈಗ ಹಾಲಿ ಯಾರು ಗ್ರ್ಯಾಜುಯೇಟ್ ಆಗಿರೋರು ಅರ್ಜಿ ಕೊಟ್ಟರೆ ನಾನು ತಕ್ಷಣ ಕೆಲಸ ಕೊಡುತ್ತೀನಿ" ಅಂತ ತಿಳಿಸಿದರು. ಇದು ನಮ್ಮೆಲ್ಲರಿಗೂ ಇನ್ನೊಂದು ರೀತಿಯ ಆಶ್ಚರ್ಯ! ಮನಸ್ಸಲ್ಲಿ ಒಂದು ಮಿಂಚಿನ ಸಂಚಾರವಾಯಿತು.

ಆ ಸಂದರ್ಭದಲ್ಲಿ ನಮ್ಮ ಸ್ನೇಹಿತರು ಕೆಲವರು ಅರ್ಜಿಗಳನ್ನು ಕೊಟ್ಟರು. ಅವರಿಗೆಲ್ಲ ಮಾರನೆ ದಿನವೇ ಅವರ ಯೋಗ್ಯತೆ ಅನುಸಾರ ಕೆಲಸಗಳು ಸಿಕ್ಕಿದವು. ಇದನ್ನು ನೋಡಿದಾಗ ಸಾಹೇಬರು ವಿದ್ಯಾರ್ಥಿಗಳನ್ನು ಕುರಿತು ಮಾತಾಡಲಿಕ್ಕೆ ಬಂದವರು ಅವರಿಗೆ ಕೆಲಸ ನೀಡುತ್ತೇನೆಂದು ಕೆಲಸ ನೀಡಿದ್ದು ವಿಸ್ಮಯ ತರಿಸಿತು. ಅಂದರೆ, ಅವರ ಕಳಕಳಿ ಏನೆಂಬುದು ನಮಗೆ ಆಗ ಅರಿವಾಯಿತು. ಜೊತೆಗೆ ಎಲ್ಲರನ್ನೂ ಉದ್ದೇಶಿಸಿ, 'ಇಷ್ಟಕ್ಕೇ ತೃಪ್ತಿಪಡದೆ ಚೆನ್ನಾಗಿ ಓದಿ ಮೇಲೆ ಬಂದು ಇನ್ನೂ ಉತ್ತಮವಾದ ಹುದ್ದೆಯನ್ನು ಅಲಂಕರಿಸಿ' ಅಂತ ಹೇಳಿದರು. ಇದು ಒಂದು ರೀತಿಯ ಸ್ಫೂರ್ತಿ ತುಂಬಿದ ಗಳಿಗೆ ಆ ಒಂದು ಸ್ಫೂರ್ತಿ ಮತ್ತು ಗುಂಗಿನಲ್ಲೇ ನಾನು ಪದವೀಧರನಾದೆ ಅಂತ ಹೇಳಲಿಕ್ಕೂ ಹೆಮ್ಮೆಪಡುತ್ತೇನೆ.

ಆಮೇಲೆ ನಾನು ಎಸ್.ಐ. ಆಗಿ ಡಿ.ಎಸ್.ಪಿ. ಪರೀಕ್ಷೆ ಬರೆದಾಗ ಆ ವೇಳೆಯಲ್ಲಿ ಸಾಹೇಬರು ಪಿ.ಎಸ್.ಸಿ. ಸದಸ್ಯರಾಗಿದ್ದರು. ಅವರನ್ನ ಭೇಟಿ ಮಾಡಿ ಅವರನ್ನ ವಿನಂತಿಸಿಕೊಳ್ಳುವ ಆಲೋಚನೆಯಲ್ಲಿ ಇದ್ದಾಗ; ನನ್ನ ಮಾವ ಅಂದರೆ ದಿ॥ ಕೆ. ಚಿಕ್ಕಣ್ಣನವರು ಆಗಿನ ಕಾಲದಲ್ಲಿ ಜಸ್ಟೀಸ್ ಎಂಬ ಪತ್ರಿಕೆಯನ್ನು ಮಾಡುತ್ತಿದ್ದರು. ಬನ್ನಿ ಸಾಹೇಬರನ್ನ ನೋಡೋಣ ಅಂತ ಹೇಳಿ ಕರೆದುಕೊಂಡು ಹೋದರು. ಹತ್ತು ನಿಮಿಷ ಆದಮೇಲೆ ಒಳಗೆ ಕರೆದರು. ಕರೆದಾಗ ಸಾಹೇಬರು ಆ ಹುದ್ದೆಯಲ್ಲಿದ್ದರೂ ಕೂಡ ನಮ್ಮ ಮಾವನವರಿಗೆ ಕ್ಷಮಿಸಿ ಚಿಕ್ಕಣ್ಣನವರೆ. ನಾನು ಮುಖ್ಯವಾದ ಕೆಲಸದಲ್ಲಿದ್ದಿದ್ದರಿಂದ ನಿಮ್ಮನ್ನ ಕಾಯಿಸಿದೆ ಅಂತ ಹೇಳಿದರು. ನಂತರ ಅವರೇ ಮಾತು ಮುಂದುವರಿಸಿ "ಚಿಕ್ಕಣ್ಣೋರೆ ನಾನು ನನ್ನ ಸ್ಟೆನೋಗೆ ನಮ್ಮ ಜನಾಂಗದ ಮೀಸಲಾತಿಯ ಬಗ್ಗೆ ಒಂದು ನೋಟ್ಸ್ ಡಿಕ್ಟೇಟ್ ಮಾಡ್ತಿದ್ದೆ. ಏನಂದ್ರೆ ಒಂದು ವೇಳೆ ಸೂಕ್ತ ಅಭ್ಯರ್ಥಿ ನಮ್ಮಲ್ಲಿ ಇಲ್ಲವಾದಲ್ಲಿ ಬೇರೆಯವರಿಗೆ ಕೊಡುವಂತ ಪದ್ಧತಿ ಇದ್ದಿದ್ದನ್ನು ತಡೆಗಟ್ಟಲು ಸರ್ಕಾರಕ್ಕೆ ಆ ಮೀಸಲಾತಿಯನ್ನು ಮುಂದಿನ ಬಾರಿಗೆ ಸೇರಿಸುವಂತೆ ಶಿಫಾರಸ್ಸು ನೋಟ್ ಡಿಕ್ಟೇಟ್ ಮಾಡುತ್ತಿದ್ದೆ. ಅದಕ್ಕೇ ನಿಮ್ಮನ್ನ ತಡವಾಗಿ ಕರೆದೆ" ಅಂತ ಹೇಳಿದರು. ನನಗೆ ಆಗ ಅನ್ನಿಸಿತು ನನ್ನ ಡಿ.ಎಸ್.ಪಿ. ಸಿಕ್ಕಿದರೂ ಸರಿ; ಇಲ್ಲದಿದ್ದರೂ ಸರಿ, ಸಾಹೇಬರು ನಮ್ಮ ಹಕ್ಕನ್ನ ಬೇರೆಯವರಿಗೆ ಕೊಡಬಾರದು ಅದನ್ನ ಮುಂದಿನ ವರ್ಷಕ್ಕಾದರೂ ಪಡೀಬೇಕು, ನಮ್ಮ ಅಭ್ಯರ್ಥಿಗಳಿಗೆ ಅದು ಸಫಲವಾಗಬೇಕು ಅಂತ ಹೇಳಿ ಈ ಹಿಂದೆ ಯಾರೂ ಮಾಡದಿದ್ದಂತಹ ಪ್ರಯತ್ನ ಮಾಡಿದ್ದು ನೋಡಿ ನನಗನ್ನಿಸಿತು. ನನ್ನ ಜೀವನ ಶೈಲಿಯಲ್ಲಿ ಕೊನೆ ಪಕ್ಷ ಇವರ ನೆರಳಿನಲ್ಲಿ ನಾನು ಸೇವೆ ಮಾಡಬೇಕು ಅನ್ನೋದು ಆಗ ಮನದಟ್ಟಾಯಿತು.

ಅಂದರೆ ಅವರ ಶ್ರೇಷ್ಠ ಮಟ್ಟದ ಗುಣ ಏನೆಂಬುದು ನನಗೆ ಅರಿವಾಯಿತು. ನಂತರ ನಮ್ಮ ಮಾವನವರು ನನ್ನನ್ನ ಸಾಹೇಬರಿಗೆ ಪರಿಚಯ ಮಾಡಿದರು. 'ಇವರು ನನ್ನ ಮೊದಲನೆ ಅಳಿಯ. ಎಸ್.ಐ. ಆಗಿದ್ದಾರೆ. ಇವರು ಈಗ ಡಿ.ಎಸ್.ಪಿ. ಪರೀಕ್ಷೆ ಬರೆದಿದಾರೆ. ಇವರಿಗೆ ನೀವು ಸಹಾಯ ಮಾಡಿ ಡಿ.ಎಸ್.ಪಿ. ಮಾಡಿ ಎಂದರು! ಅದಕ್ಕೆ ಸಾಹೇಬರು 'ಹೇಗೆ ಪರೀಕ್ಷೆ ಬರೆದಿದ್ದೀಯಪ್ಪಾ?' ಅಂತ ಕೇಳಿದರು. 'ನನಗೆ ತಿಳಿದ ಮಟ್ಟಿಗೆ ಚೆನ್ನಾಗಿ ಮಾಡಿದೀನಿ ಸರ್. ಆದರೆ ಒಂದೇ ಒಂದು ಹುದ್ದೆ ಮೀಸಲಾತಿ ಇದೆ ಎಂದೆ'. ನಾನು ಎಲ್ಲಾ ಪ್ರಯತ್ನ ಮಾಡ್ತೀನಿ ಅಂತ ಹೇಳಿದರು. ಆದರೆ ಆ ಸಂದರ್ಭದಲ್ಲಿ ಅವರು ಹೇಳಿದ ಮಾತು ನನ್ನ ಡಿ.ಎಸ್.ಪಿ. ಹುದ್ದೆಗಿಂತ ಇನ್ನೂ ಉತ್ತೇಜನ ಕೊಡ್ತು.

ಭರಣಯ್ಯನವರ ವ್ಯಕ್ತಿತ್ವವನ್ನ ಯಾವ ರೀತಿ ವ್ಯಾಖ್ಯಾನ ಮಾಡುತ್ತೀರಿ?

ಅವರ ವ್ಯಕ್ತಿತ್ವ ವಿಶಿಷ್ಟವಾದದ್ದು. ಅದಕ್ಕೆ ನಾನು ಕಂಡು ಕೇಳಿದ ವಿಚಾರ ಹೇಳ್ತಿನಿ. ಅವರು ಎಲ್ಲೇ ಹೋಗಲಿ; ಸಮಸ್ಯೆಗಳನ್ನು ಪರಿಪೂರ್ಣವಾಗಿ ಆಲಿಸುತ್ತಿದ್ದರು. ಆ ಸಮಸ್ಯೆಗೆ ಯೋಜನೆ ಯಾವುದು ಸೂಕ್ತ ಪರಿಹಾರ ಅನ್ನೋದನ್ನ ಮಾಡುತ್ತಿದ್ದರು. ಇದೇ ಅವರ ಜೀವನದ ಗುರಿ ಅಂತ ನನಗನ್ನಿಸುತ್ತಿತ್ತು. ಅವರು ಸರ್ವೆ ಸೆಟ್ಲಮೆಂಟ್ ಕಮೀಷನರಾಗಿದ್ದಾಗ ಅಲ್ಲಿ ಇನ್ನೂ ವಿಶೇಷವಾಗಿ ನಮ್ಮ ಜನಕ್ಕೆ ಮತ್ತು ಇತರೆ ಜನಾಂಗದವರಿಗೆ ಕೆಲಸಗಳನ್ನ ಕೊಟ್ಟರು. ಕರೆದು ಕರೆದು ಅರ್ಜಿ ಪಡೆದು ಕೆಲಸ ಕೊಡುತ್ತಿದ್ದರು ಅನ್ನೋದು ನಮಗೆ ಕಂಡುಬಂತು. ಆ ಕಾಲದಲ್ಲಿ ಒಬ್ಬ ದೊಡ್ಡ ಅಧಿಕಾರಿ ಯಾರಾದರೂ ನಮಸ್ಕಾರ ಮಾಡಿದರೆ ತಿರುಗಿ ಅವರು ನಮಸ್ಕಾರ ಅನ್ನೋದೆ ದೊಡ್ಡ ಸಮಸ್ಯೆಯಾಗಿತ್ತು! ಅಂತದ್ದರಲ್ಲಿ ಇವರು ಎಲ್ಲರನ್ನೂ ಕರೆದು ಸಿಕ್ಕಿದವರಿಗೆ ಹೇಳಿ ಅರ್ಜಿ ಪಡೆದು ಕೆಲಸ ಕೊಟ್ಟರು ಅಂದರೆ ಅವರಿಂದ ಎಷ್ಟೊಂದು ಸಂಸಾರಗಳು ಮುಂದೆ ಬಂದವು! ಅವರು ನೀಡಿದ ನೆರವು ನಮ್ಮ ಸಮುದಾಯ ಎತ್ತರಕ್ಕೆ ಹೋಗಲು ಸಾಧ್ಯವಾಯಿತು ಅಂತ ನನಗನ್ನಿಸುತ್ತದೆ.

ಭರಣಯ್ಯನವರ ಬಗ್ಗೆ ತಮ್ಮ ನೆನಪಿನಲ್ಲಿ ಅಚ್ಚಳಿಯದೇ ಉಳಿದ ನೆನಪುಗಳಿವೆಯಾ?

ಹೌದು. ಇದೆ. ನಾನು ಬಲ್ಲಂತೆ ಆ ಕಾಲದಲ್ಲಿ ಉತ್ತಮ ಶ್ರೇಣಿಯಲ್ಲೇ ಪದವಿ ಪಡೆದವರು. ಅವರಿಗೆ ಸಂಸ್ಕೃತ ಭಾಷೆ ಕೂಡ ತಿಳಿದಿತ್ತು. ಎಕ್ಸಲೆಂಟ್ ಸ್ಪೀಕರ್ ಅಂತ ಎಲ್ಲರೂ ಹೇಳುತ್ತಿದ್ದದ್ದನ್ನ ನಾನು ಕೇಳಿದ್ದೇನೆ. ಇದೊಂದು ನೆನಪು. ಇನ್ನೊಂದು ಅವರು ಒಮ್ಮೆ ಡೆಲ್ಲಿಯಲ್ಲಿ ಒಂದು ಸಮಾರಂಭದಲ್ಲಿ ಅವರು ಭಾಷಣ ಮಾಡುತ್ತಿರುವ ಕಾಲದಲ್ಲಿ ಆಗಿನ ಪ್ರಧಾನಮಂತ್ರಿ ಜವಹರಲಾಲ್ ನೆಹರೂ ಮತ್ತು ಅವರ ಪುತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರೆಲ್ಲ ಭಾಗವಹಿಸಿದ್ದರಂತೆ. ಆ ಸಂದರ್ಭದಲ್ಲಿ ಇವರ ಸಂಸ್ಕೃತ ಪರಿಣಿತಿಯನ್ನು ನೋಡಿ ನೆಹರೂ ಅವರು ಮತ್ತು ಇಂದಿರಾ ಗಾಂಧಿಯವರು ಇವರಿಗೆ ಶಬ್ಬಾಸ್‌ಗಿರಿ ನೀಡಿ ಷೇಕ್ ಹ್ಯಾಂಡ್ ಕೊಟ್ಟು ಕಳುಹಿಸಿದರಂತೆ. ನನಗಾಗಲೇ ಅನ್ನಿಸುತ್ತಿತ್ತು. ಜಾತಿ ಯಾವುದಾದರೇನಂತೆ, ಪ್ರತಿಭೆಗಳಿಸಿದರೆ ಜಾತಿ ಏನೂ ಮಾಡೋಕೆ ಸಾಧ್ಯವಿಲ್ಲ.

ಭರಣಯ್ಯನವರು ಚುನಾವಣೆಗೆ ನಿಂತು ಸೋತರು ಅಂತ ನಾವು ಕೇಳಿದ್ದೇವೆ. ಇಷ್ಟೊಂದು ಜನಪ್ರಿಯ ಇಷ್ಟೆಲ್ಲಾ ಜನಾನುರಾಗಿಯಾಗಿದ್ದ ಇಂಥ ಒಬ್ಬ ವ್ಯಕ್ತಿಯನ್ನು ಚುನಾವಣೆಗೆ ನಿಂತಾಗ ಯಾಕೆ ಜನ ಅವರನ್ನ ಗೆಲ್ಲಿಸೋದಕ್ಕೆ ವಿಫಲರಾದರು?

ಸೇವೆ ಮತ್ತೆ ರಾಜಕೀಯ ಉತ್ತರ ದಕ್ಷಿಣ ಧ್ರುವಗಳು. ಇವರು ತಮ್ಮ ಸೇವಾ ಅವಧಿಯಲ್ಲಿ ಎಲ್ಲಾ ಜನಾಂಗದವರಿಗೂ ಪ್ರೋತ್ಸಾಹ ಮಾಡಿದವರು ನಿಜ. ಆದರೆ ಆ ಕಾಲದಲ್ಲಿ ಕಾಂಗ್ರೆಸ್ ಒಡೆದು ಹೋಗಿತ್ತು. ಆ ಸಂದರ್ಭದಲ್ಲಿ ಇವರು ನೌಕರಿಲಿದ್ದು ಸೇವೆ ಮಾಡಿದ್ದಾರೆ. ಜೊತೆಗೆ ರಾಜಕೀಯಕ್ಕೆ ಬಂದರೆ ಸೌಕರ್ಯಗಳನ್ನ ಇಮ್ಮಡಿ ಮಾಡುತ್ತಾರೆ ಅನ್ನುವ ಅಭಿಪ್ರಾಯ ಇದ್ದರೂ ಕೂಡ ಸ್ಥಳೀಯ ವಾತಾವರಣದಿಂದ ಎಲ್ಲಾ ಹಾಳಾಗಿ ಹೋಯಿತು. ಇದಕ್ಕೆ ಮುಖ್ಯ ಕಾರಣ ಇಷ್ಟೆ. ರಾಜಕೀಯ ರಂಗದಲ್ಲಿ ಇವರು ಚದುರಂಗ ಆಟ ಆಡಲಿಕ್ಕೆ ಆಗಲಿಲ್ಲ. ಕಾರಣ ಅಂದರೆ 'ಆಮಿಷ' ಅನ್ನೋ ಒಂದು ಪದಾನ ಇವರು ನಮ್ಮ ಜನಕ್ಕೆ ಉಪಯೋಗಿಸಲಿಲ್ಲ. ಯಾವುದೇ ಸಂದರ್ಭದಲ್ಲೂ ವಿನಂತಿಸಿ ಮತ ಕೇಳಿದರೇ ವಿನಃ ಬೇರೆ ರೀತಿಯಲ್ಲಿ ಅವರು ರಾಜಕೀಯ ರಂಗದ ವೈಖರಿಯನ್ನು ಉಪಯೋಗಿಸಲಿಲ್ಲ. ಇದೊಂದು ಕಾರಣ. ಎರಡನೇ ಕಾರಣ ಬಹುಶಃ ಕಾಂಗ್ರೆಸ್ ಎರಡಾಗದೇ ಇದ್ದಿದ್ದರೆ ಇವರು ಒಂದೇ ಕಾಂಗ್ರೆಸ್ ಇದ್ದಾಗ ಅಭ್ಯರ್ಥಿಯಾಗಿದ್ದರೆ ಖಂಡಿತ ಗೆಲ್ಲುತ್ತಿದ್ದರು. ಈ ಎರಡು ಕಾರಣದಿಂದ ಅವರಿಗೆ ಗೆಲುವು ಸಫಲ ಆಗಲಿಲ್ಲ ಅಂತ ವೈಯಕ್ತಿಕ ಅನಿಸಿಕೆ.

ಸರ್, ಭರಣಯ್ಯನವರಿಗೆ ರಾಜಕೀಯದಲ್ಲಿ ಹೇಗೆ ಸೋಲಾಯ್ತೋ ಡಾ.ಬಿ.ಆರ್. ಅಂಬೇಡ್ಕರ್‌ಗೂ ಇದೇ ರೀತಿ ಸೋಲನ್ನ ನಮ್ಮ ಜನ ಉಂಟುಮಾಡಿದರು ಅಲ್ವಾ?

ಹೌದು. ರಾಜಕೀಯದಲ್ಲಿ ಅಂಬೇಡ್ಕರ್ ಅವರನ್ನ ಯಾವ ರೀತಿ ತುಳಿದರು ಅನ್ನೋದು ಇಡೀ ಭಾರತಕ್ಕೇ ಗೊತ್ತು. ಅವರು ಈ ಜನಾಂಗದ ಏಳಿಗೆಗೆ ಶ್ರಮಿಸಿದ್ದರಿಂದಲೇ ಇವರನ್ನ ಮೇಲೆ ತಂದರೆ ಇನ್ನೂ ಏನೇನು ಮಾಡಿಬಿಡುತ್ತಾರೋ ಅಂತ ತುಳಿದರು. ಅದೇ ರೀತಿ ಭರಣಯ್ಯನವರು ಅವರ ಕ್ಷೇತ್ರದಲ್ಲಿ ರಾಜಕೀಯಕ್ಕೆ ಬಂದರೆ ಮೇಲೆ ಬರ್ತಾರೆ. ಅನ್ನೋ ಒಂದು ತಪ್ಪು ಕಲ್ಪನೆ ಕೂಡ ಇತ್ತು ಅನ್ಸುತ್ತೆ.

ಒಟ್ಟಾರೆ ಹೇಳೋದಾದ್ರೆ, ಯಾವ ನೌಕರಿಯವರೇ ಆಗಲಿ ನಿವೃತ್ತಿ ಹೊಂದಿದ ನಂತರ ರಾಜಕೀಯ ಪ್ರವೇಶ ಮಾಡದೆ ತಮ್ಮ ಕೈಲಾದ ಸೇವೆಯನ್ನು ನೊಂದವರಿಗೆ ಮಾಡಿದರೆ ಅದಕ್ಕಿಂತ ಉತ್ತಮವಾದ ಶ್ರೇಷ್ಠ ಜೀವನ ಮತ್ತಿಲ್ಲ ಅಂತ ನಾನು ಪೂರ್ಣ ನಂಬಿರುವವನು. ಇನ್ನೊಂದು ವಿಷಾದದ ನೆನಪೂ ಇದೆ. ಏನಂದ್ರೆ ಅದು ಒಂದು ದುಃಖದ ಸಂಗತಿ. ಅವರೂರಿನಲ್ಲಿ ಜಮೀನು ವಿಚಾರದಲ್ಲಿ ಸ್ವಂತ ಜನವೇ ಇವರಿಗೆ ಕೈ ಮಾಡಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದ್ದರು. ಈ ವಿಚಾರ ತಿಳಿದು ನೋಡಲು ಹೋದೆ. ನನಗೆ ನಿಜಕ್ಕೂ ಕಣ್ಣಲ್ಲಿ ನೀರು ಬಂತು. ಕಾರಣ ಇಂಥ ಮಹಾಪುರುಷರು,


ಮೇಧಾವಿ, ಎಲ್ಲರನ್ನೂ ಪ್ರೀತಿ ವಾತ್ಸಲ್ಯದಿಂದ ನೋಡುತ್ತಿದ್ದಂತವರಿಗೆ ಮೂರ್ಖರು ಹೊಡೆದಿದ್ದರು. ನಮ್ಮ ಜನ ಯಾವಾಗ ಏಳಿಗೆ ಆಗ್ತಾರೋ ವಿವೇಕ ಸಂಪಾದಿಸ್ತಾರೋ ಅಂತ. ಸಂಕಟ ಕೂಡ ಆಯ್ತು.

ಆಗ ಅವರು ಒಂದು ಮಾತು ಹೇಳಿದ್ರು. ಮರೆಯಬಾರದಂತಹ ಮಾತು. 'ಇದೆಲ್ಲಾ ನಡೀತಾನೇ ಇರುತಪ್ಪ. ನನಗೂ ಒಂದು ಅನುಭವ ಆಯಿತು' ಅಂತ ಹೇಳಿದರು. ಅದನ್ನ ನೋಡಿದಾಗ ಬಹುಶಃ ಎಲ್ಲರ ಸಂಕಟಗಳನ್ನ ಕೇಳಿ ಅವರಿಗೆ ಅನುಕೂಲ ಮಾಡುವವರಿಗೆ ಇಂಥ ವಿಪತ್ತು ಇದ್ದೇ ಇರುತ್ತದೆ ಅನ್ನೋದು ನನಗೆ ಭಾಸವಾಯಿತು.

ಇವತ್ತಿನ ಯುವ ಜನತೆಗೆ ನಾಳಿನ ತಲೆಮಾರಿಗೆ ಇವರನ್ನು ಉಳಿಸಿಕೊಡುವ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

ಇಲ್ಲಿ ನನಗೆ ಹೇಳಲಿಕ್ಕೆ ಬಹಳ ಹೆಮ್ಮೆ ಆಗುತ್ತೆ. ಭರಣಯ್ಯನವರು ನಮ್ಮ ಆದರ್ಶ. ಅವರು ಅಂಬೇಡ್ಕರ್ ಅವರ ಅನುಯಾಯಿ. ಮತ್ತೆ ಅವರ ಸಿದ್ಧಾಂತಗಳನ್ನು ನೆರವೇರಿಸಲು ಪ್ರಯತ್ನಪಟ್ಟರು. ಜೊತೆ ಜೊತೆಗೆ ನಮ್ಮ ಜನಾಂಗದ ಬೆಳಕಾಗಿದ್ದಂತ ಮಾನ್ಯ ಶ್ರೀ ಆರ್. ಗೋಪಾಲಸ್ವಾಮಿ ಅಯ್ಯರ್ ಅವರ ಒಡನಾಡಿ ಮತ್ತೆ ಅವರ ಆಶೀರ್ವಾದದಿಂದಲೇ ಇವರು ಇಷ್ಟು ಎತ್ತರಕ್ಕೆ ಬೆಳೆದರು. ಬಹುಶಃ ಮುಂದಿನ ಪೀಳಿಗೆಗೆ ಇವರ ಬದುಕು–ಸಾಧನೆಗಳನ್ನು ಪರಿಚಯಸಿದರೆ ಅವರ ಬಗ್ಗೆ ಸ್ಪಷ್ಟ ಚಿತ್ರಣ ಎಲ್ಲಾ ಕಡೆಗೂ ದೊರಕುವಂತೆ ಮಾಡಿದರೆ ಹೊಸ ತಲೆಮಾರಿಗೆ ಅವರು ದಾರಿದೀಪವಾಗುವರು ಎನಿಸುತ್ತದೆ. ಇಂದು ಅವರು ನಮ್ಮೊಂದಿಗಿದ್ದರೆ ನಮ್ಮ ಸಮುದಾಯ ಮತ್ತಷ್ಟು ವಿಕಾಸಗೊಳ್ಳುತ್ತಿತ್ತು. ನಮ್ಮ ಯುವ ತಲೆಮಾರಿಗೆ ಖಂಡಿತ ಸ್ಫೂರ್ತಿದಾಯಕವಾಗಿರುತ್ತಿದ್ದರು. ವಿಚಿತ್ರವೆಂದರೆ, ಮುಂದುವರಿದ ಜನಾಂಗ ಭರಣಯ್ಯನವರ ಬಗ್ಗೆ ಮಾಹಿತಿ ಪಡೆದಿದ್ದರೂ ಅನೇಕರಿಗೆ ಅವರ ಬಗ್ಗೆ ಮಾಹಿತಿ ಇಲ್ಲ. ಜೊತೆಗೆ ಇತ್ತೀಚಿನ ಪೀಳಿಗೆಗೆ ಅವರ ಸದ್ಭಾವನೆಗಳು ಮುಟ್ಟಲಿಕ್ಕೆ ಅವಕಾಶ ಸಿಗ್ತಾ ಇಲ್ಲ. ಈಗ ನೀವು ಏನು ಮಾಡ್ತಾ ಇದೀರಿ, ಇದರಿಂದ ಮುಂದಿನ ಪೀಳಿಗೆಗೆ ಬೆಳಕಾಗಬಹುದು. ಅವರ ಜೀವನಾದರ್ಶಗಳು ಹೊಸ ತಲೆಮಾರಿಗೆ ಬೆಳಕಾಗಬಹುದು.

* * *




ಅಪೂರ್ವ ಕಾಯಕ ಜೀವಿ

ಪಿ. ಸಂಪತ್ ಕುಮಾರ್

ಭರಣಯ್ಯನವರು ಅಧಿಕಾರಿವರ್ಗದಲ್ಲಿದ್ದರಿಂದ ಆತ್ಮಸಾಕ್ಷಿ ಒಪ್ಪುವಂತೆ ಕೆಲಸ ಮಾಡುತ್ತಿದ್ದರು. ಸಮಾಜಕ್ಕೆ ಏನು ಸಹಾಯ ಮಾಡಬೇಕೆನಿಸುತ್ತದೆ ಅದನ್ನು ಹೇಳದೆ ಮಾಡುತ್ತಿದ್ದರು. ಸಹಕಾರ ಇಲಾಖೆ ಮತ್ತು ಸರ್ವೆ ಸೆಟ್ಲಮೆಂಟ್ ಇಲಾಖೆಯಲ್ಲಿ ಪರಿಶಿಷ್ಟ ಜನವರ್ಗಕ್ಕೆ ಮಾತ್ರವೇ ಅಲ್ಲ ಪ್ರತಿಯೊಂದು ಜಾತಿಯ ಜನಕ್ಕೂ ಕೆಲಸ ನೀಡಿರುವರು. ಅವರ ಕಾರ್ಯಶೈಲಿ ಎಂದರೆ ಊರೂರಿನ ಜನಪ್ರತಿನಿಧಿಗಳನ್ನು, ಸಮಾಜಸೇವಕರನ್ನು ಆಹ್ವಾನಿಸುವುದು, ಅವರಿಂದ, ಊರಿನ ಜನಸಮೂಹಕ್ಕೆ ಒಟ್ಟಾರೆ ಉಪಯುಕ್ತವಾಗುವ ಕೆಲಸಗಳನ್ನು ಕೇಳಿ ತಿಳಿದುಕೊಳ್ಳುವುದು – ಅದಕ್ಕೆ ತಕ್ಕಂತ ಕೆಲಸಗಳನ್ನು ಮಾಡಿಕೊಡುವುದು.

ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್
ಲೋಕೋಪಯೋಗಿ ಇಲಾಖೆ



ಅಪೂರ್ವ ಕಾಯಕ ಜೀವಿ

ಪಿ. ಸಂಪತ್ ಕುಮಾರ್

ಪಿ. ಸಂಪತ್‌ಕುಮಾರ್, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿದ್ದಾರೆ. ಸದ್ಯಕ್ಕೆ ಅವರು ಅಧ್ಯಕ್ಷರು, ಸಿದ್ಧಾರ್ಥ ಕನ್ನಡ ಕ್ಷೇಮಾಭಿವೃದ್ಧಿ ಮತ್ತು ಕಲ್ಯಾಣ ಸಂಘ ಇಲ್ಲಿ ಅವರು

ಸೇವೆ ಸಲ್ಲಿಸುತ್ತಿದ್ದಾರೆ. ಸಂಪತ್ ಕುಮಾರ್ ಅವರು ಭರಣಯ್ಯನವರ ಜೊತೆಯಲ್ಲಿ ಕಳೆದಂತಹ ಗಳಿಗೆಗಳನ್ನು, ಅನುಭವಗಳನ್ನು ಮತ್ತು ಅವರ ಜೊತೆಯಲ್ಲಿ ಕಂಡುಕೊಂಡಂತಹ ಹಲವಾರು ವಿಚಾರಗಳನ್ನು ಇಲ್ಲಿ ತಮ್ಮದೇ ಮಾತುಗಳಲ್ಲಿ ಹೇಳಿದ್ದಾರೆ. ಅದರ ಪೂರ್ಣ ಪಾಠವಿದು.

ತಮ್ಮ ಸ್ವ ಪರಿಚಯದೊಂದಿಗೆ ಮಾತು ಆರಂಭಿಸಿ ಭರಣಯ್ಯನವರ ಬಗ್ಗೆ ನೀಡಿದ ಪೀಠಿಕೆ ಈ ಮುಂದಿನದು.

"ನಾನು ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್. ನಿವೃತ್ತಿಯಾಗಿ 12 ವರ್ಷ ಕಳೆದು 13ನೇ ವರ್ಷ ನಡಿತಾ ಇದೆ ಈಗ. ನಾನು ನಮ್ಮ ನಾಯಕರುಗಳು ಸೇರಿದಂತೆ ನಮ್ಮ ಜಾತಿಯಲ್ಲಿ ಯಾರೇ ಆಗಲಿ ಅವರನ್ನು ನಾನೇ ಸ್ವತಃ ಹೋಗಿ ಪರಿಚಯ ಮಾಡಿಕೊಂಡು ನಮ್ಮ ಆಗುಹೋಗುಗಳು, ಜಾತಿಯ ಆಗು ಹೋಗುಗಳು, ಅನುಭವಗಳನ್ನು ಜೊತೆಯಲ್ಲಿ ಪರಸ್ಪರ ಹಂಚಿಕೊಳ್ಳುತ್ತೇನೆ. ಕಷ್ಟದಲ್ಲಿರುವವರಿಗೆ ಸ್ಪಂದಿಸುತ್ತೇನೆ. ಇದಕ್ಕೆ ಪ್ರೇರಣೆ ಇಬ್ಬರು, ಒಬ್ಬರು ಬಿ. ಬಸವಲಿಂಗಪ್ಪನವರು, ಇನ್ನೊಬ್ಬರು ಆರ್. ಭರಣಯ್ಯನವರು.

ಅವರನ್ನು ನಾನು ವಿದ್ಯಾರ್ಥಿ ದೆಸೆಯಿಂದಲೇ ಪರಿಚಯ ಮಾಡಿಕೊಂಡು ಅವರು ಯಾವ ರೀತಿ ನಮ್ಮ ಜನಕ್ಕೆ ಸಹಾಯ ಮಾಡುತ್ತಿದ್ದರು ಎಂಬುದನ್ನು ನಾನು ನೋಡಿ ತಿಳಿದಿದ್ದೇನೆ. ನಾನು ಅವರು ಅಧಿಕಾರದಲ್ಲಿದ್ದಾಗ ನೋಡಿದ ಇಲಾಖೆಗಳು ಅಂದರೆ ಸಹಕಾರ ಇಲಾಖೆ ಮತ್ತು Director of land records and survey settlements.

ಆರ್. ಭರಣಯ್ಯ ಒಬ್ಬ ನಿಷ್ಠಾವಂತ ಅಂಬೇಡ್ಕರ್ ವಾದಿಗಳು. ಅಂಬೇಡ್ಕರ್ ಸಿದ್ಧಾಂತ ಏನು? ಎತ್ತ? ಅಂತ ತುಂಬಾ ಚೆನ್ನಾಗಿ ತಿಳಿದಿದ್ದರು. ಅವರೇನು ಕೇವಲ ಜಾತಿ ಅಭಿಮಾನದ ಮೇಲೆ ಕೆಲಸ ಮಾಡಿಲ್ಲ. ಯಾಕೆಂದರೆ ಅಂಬೇಡ್ಕರ್ ಜಾತಿವಾದಿಯಲ್ಲ. ಅವರೇನಿದ್ದರೂ ದೀನ ದಲಿತರು, ಬಡವರು, ಅವಿದ್ಯಾವಂತರನ್ನು ಸುಸಂಸ್ಕೃತರನ್ನಾಗಿ ಮಾಡಿ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಒಳ್ಳೆಯವರನ್ನಾಗಿ ಮಾಡಬೇಕು ಎಂಬುದೊಂದೇ ಧ್ಯೇಯ. ಅಂಥ ಕಳಕಳಿ ಉಳ್ಳವರಲ್ಲಿ ಆರ್. ಭರಣಯ್ಯನವರು ಒಬ್ಬರು. ಬಸವಲಿಂಗಪ್ಪನವರ ವಿಚಾರ ಕರ್ನಾಟಕಕ್ಕೇ ಗೊತ್ತಿದೆ. ಬಸವಲಿಂಗಪ್ಪನವರು ಹೇಳಿ ಮಾಡುತ್ತಿದ್ದರು. ಸಮಾಜದಲ್ಲಿ ಯಾರಿಗೂ ಕೂಡ ಹೆದರುತ್ತಿರಲಿಲ್ಲ".

ಆರ್. ಭರಣಯ್ಯನವರಿಗೂ ಬಸವಲಿಂಗಪ್ಪನವರಿಗೂ ಏನು ವ್ಯತ್ಯಾಸವನ್ನು ಗಮನಿಸಿದ್ದೀರಿ?

ಭರಣಯ್ಯನವರಿಗೂ ಬಸವಲಿಂಗಪ್ಪನವರಿಗೂ ವ್ಯತ್ಯಾಸ ಏನು ಅಂದರೆ, ಬಸವಲಿಂಗಪ್ಪನವರು ಹೇಳಿ ಮಾಡುತ್ತಿದ್ದರು. ಭರಣಯ್ಯನವರು ಅಧಿಕಾರ ವರ್ಗದಲ್ಲಿ

ಇದ್ದುದರಿಂದ ಆತ್ಮಸಾಕ್ಷಿಯಾಗಿ ಸಮಾಜಕ್ಕೆ ಏನು ಸಹಾಯ ಮಾಡಬೇಕು, ಸೇವೆ ಸಲ್ಲಿಸಬೇಕು ಎಂಬುದನ್ನು ಹೇಳದೆ ಮಾಡುತ್ತಿದ್ದರು. ಅವರು ಸಹಕಾರ ಇಲಾಖೆಯಲ್ಲಿ, ಸರ್ವೆ ಸೆಟ್ಲಮೆಂಟ್ ಇಲಾಖೆಯಲ್ಲಿ ಜನಗಳಿಗೆ ಕೊಟ್ಟ ಉದ್ಯೋಗ ಬರಿ ಪರಿಶಿಷ್ಟರಿಗೆ ಮಾತ್ರವೇ ಅಲ್ಲ. ಪ್ರತಿಯೊಂದು ಜಾತಿಗೂ ಕೊಟ್ಟರು.

ಆರ್. ಭರಣಯ್ಯನವರ ವ್ಯಕ್ತಿತ್ವದ ವಿಶಿಷ್ಟತೆ ಏನು?

ನಿಜಕ್ಕೂ ಒಳ್ಳೆ ಪ್ರಶ್ನೆ. ಅವರು ಬಹಳ ವಿಶಿಷ್ಟ ವ್ಯಕ್ತಿತ್ವ ಮಾತಿಗೆ ನಿಲುಕದ ಪ್ರತಿಭೆ. ನಿಜ ಹೇಳಬೇಕೆಂದರೆ, ಭರಣಯ್ಯನವರನ್ನು ನೆನೆಸಿಕೊಂಡರೆ ಇವತ್ತೂ ಕಣ್ಣಲ್ಲಿ ನೀರು ಬರುತ್ತದೆ. ಯಾಕೆಂದರೆ ಅವರ ದಕ್ಷತೆ, ಅವರ ನಿಷ್ಠೆ ಏನಿತ್ತು ಅಂದರೆ, ಅಂಬೇಡ್ಕರ್ ಏನು ಲಿಖಿತದಲ್ಲಿ ಹೇಳಿದ್ದರು, ಅದನ್ನು ಕಾರ್ಯತಃ ಮಾಡಿದಂತಹ ಅಧಿಕಾರಿಗಳಲ್ಲಿ ಇವರೇ ಮುಖ್ಯರು. ನಾನು ವಿದ್ಯಾರ್ಥಿಯಾಗಿದ್ದಾಗಲೇ ನನ್ನ ಜನ, ಇತರರರು ಯಾರೇ ಆಗಲಿ, ನಾನು ಮನನೊಂದು ಅವರಿಗೆ ಏನಾದರೂ ಸಹಾಯ ಮಾಡಬೇಕು ಅಂದರೆ ಈ ಭರಣಯ್ಯನವರ ಬಳಿ ಹೋಗಿ ಕೈಮುಗಿದು ನಿಲ್ಲುತ್ತಿದ್ದೆ. “ಏನ್ರೀ ಸ್ಟೂಡೆಂಟ್ ಆಗಿ ಬಂದಿದೀರಲ್ಲ?” ಅಂತ ಕೇಳಿದಾಗ “ನೋಡಿ ಸರ್ ಇವರು ನನ್ನ ಸಂಬಂಧಿಗಳೇನಲ್ಲ. ಆದರೆ ತೀರಾ ಬಡವರು. ಅವರ ಮನೇಲಿ ಇಷ್ಟು ಜನ ಇದಾರೆ. ಇವರ ಮೇಲೆಯೇ ಅವರೆಲ್ಲ ಭರವಸೆ ಇಟ್ಟುಕೊಂಡು ಜೀವನ ಮಾಡಬೇಕು. ಇವರು ನಿರುದ್ಯೋಗಿ ಸರ್. ದಯವಿಟ್ಟು ಒಂದು ಉದ್ಯೋಗ ಕೊಟ್ಟರೆ ನಿಮ್ಮೆಸರಿನಲ್ಲಿ ಜೀವನ ಮಾಡುತ್ತಾರೆ.” ಅಂತ ಹೇಳಿದಾಗ ‘ನಾಳೆ ಒಂದು ಅಪ್ಲಿಕೇಶನ್ ತಾರಪ್ಪ.’ ಎಂದು ಹೇಳಿ ಅಂದಿನ ದಿನವೇ ಅವರು ಆರ್ಡರ್ ಕೊಡುತ್ತಿದ್ದರು. ಇಂತಹ ವ್ಯಕ್ತಿಗಳು ವಿರಳ.

ಭರಣಯ್ಯನವರ ವ್ಯಕ್ತಿತ್ವವನ್ನು ನಾವು ಎಷ್ಟು ಹೇಳಿದರೂ ಸಾಲದು. ಎಲ್ಲಾ ಇಲಾಖೆಯಲ್ಲಿ, ಅಂಬೇಡ್ಕರ್ ಅವರ ಜೀವನದಲ್ಲಿ ಇತರ ಜಾತಿಯವರಿಂದ ನಿಂದನೆಗೆ, ತಿರಸ್ಕಾರಕ್ಕೆ ಎಷ್ಟರಮಟ್ಟಿಗೆ ಅವರು ಗುರಿಯಾಗಿ ಅನುಭವಿಸಿದರೋ; ಅದನ್ನು ಭರಣಯ್ಯನವರೂ ಕೂಡ ತಮ್ಮ ಸೇವಾವಧಿಯಲ್ಲಿ ಅನುಭವಿಸಿದ್ದಾರೆ. ಅವರು ಆಫೀಸಿನಲ್ಲಿ, ಮನೆಯಲ್ಲಿ ಕೆಲಸ ಮಾಡುವಾಗ ಈ ಜಾತಿಯತೆಯನ್ನೇ ಮುಂದಿಟ್ಟುಕೊಂಡು ಬೇರೆ ಜಾತಿಯವರು ಅನೇಕ ತೊಂದರೆಗಳನ್ನು ಕೊಟ್ಟಿದ್ದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಕಣ್ಣಾರೆ ನೋಡದಿದ್ದರೂ, ನಮ್ಮ ಅಧಿಕಾರಿಗಳು ಎಷ್ಟೆಷ್ಟು ಅನುಭವಿಸಿದ್ದಾರೆ. ಈ ಜಾತೀನ ಉದ್ಧಾರ ಮಾಡಬೇಕು, ಜಾತೀಯತೆ ತೆಗೀಬೇಕು ಎಂದರೂ ಯಾರ ಕೈಲೂ ಇಲ್ಲೀ ತನಕ ಆಗಲೇ ಇಲ್ಲ.

ಅವರ ಬಗ್ಗೆ ನಿಮ್ಮ ಮನಸ್ಸಲ್ಲಿ ಉಳಿದಿರುವ ಅಥವಾ ಕಾಡುವ ವಿಶೇಷ ನೆನಪು ಯಾವುದು?

ಅವರು ಚುನಾವಣೆಗೆ ನಿಂತು ಸೋತ ವಿಷಯ ನನ್ನನ್ನು ಬಹಳ ಕಾಡಿದೆ. ಭರಣಯ್ಯನವರಲ್ಲಿ ಇನ್ನೂ ವಯಸ್ಸಿತ್ತು. ದಕ್ಷತೆ ಇತ್ತು. ವ್ಯಕ್ತಿತ್ವ ಇತ್ತು. ಹೀಗಾಗಿ ಅವರು ಕೊಳ್ಳೇಗಾಲದಲ್ಲಿ ಹೋಗಿ ಚುನಾವಣೆಗೆ ನಿಂತರು. ಆದರೆ ನಮ್ಮ ದಡ್ಡ ಜನ ವ್ಯಕ್ತಿತ್ವಕ್ಕೆ ಬೆಲೆ ಕೊಡದೆ ಪಾರ್ಟಿ ಮೇಲೆ ಅವರನ್ನು ಸೋಲಿಸಿದರು. ಆ ಸೋಲೇ ಅವರ ಜೀವನದಲ್ಲಿ ಆಘಾತ ತಂದಿತು. ನಾವೆಲ್ಲಾ ಇವತ್ತಿನ ದಿನ ವ್ಯಥೆ ಪಡಬೇಕು. ಇವತ್ತಿನ ದಿನ ಅವರು ಬದುಕಿದ್ದಿದ್ದರೆ ಒಂದಲ್ಲ ಎರಡಲ್ಲ ಸಾವಿರಾರು ಜನಕ್ಕೆ ಒಂದಲ್ಲ ಒಂದು ವಿಧದಲ್ಲಿ ಅನುಕೂಲವಾಗುತ್ತಿತ್ತು. ಅಂತಹ ವ್ಯಕ್ತಿಯನ್ನು ಕಳೆದುಕೊಂಡೆವಲ್ಲ ಎಂದು ನಾವು ವ್ಯಥೆ ಪಡಬೇಕಾಗಿದೆ.

ಐ.ಎ.ಎಸ್. ನಲ್ಲಿ ನಮ್ಮ ಜಾತಿಯಲ್ಲಿ ವೈ.ಸಿ. ಹೊಂಬಾಳಯ್ಯನವರು ಅಷ್ಟೇ ಹಿರಿಯರು ಆಗಿರಬಹುದು, ಭರಣಯ್ಯನವರೂ ಅಷ್ಟೇ ಹಿರಿಯರು ಹೌದು. ಆದರೆ ಅವರ ಸಾಧನೆ, ಗುರಿ, ನೀತಿ ನಿಯಮ, ದಕ್ಷತೆ ವಿಭಿನ್ನವಾದದ್ದು. ವೈ.ಸಿ. ಹೊಂಬಾಳಯ್ಯನವರು ಒಳ್ಳೆ ಕಡಿವಾಣ ಕುದುರೆ ಇದ್ದಹಾಗೆ. ನಮ್ಮ ಭರಣಯ್ಯನವರು ಬೇರೆ ರೀತಿ ಕಡಿವಾಣವೇ ಇಲ್ಲ. ತೆರೆದ ಹೃದಯದ, ಒಳ್ಳೆಯ ಮನೋಭಾವದ ದಕ್ಷ ಅಧಿಕಾರಿ ಕಷ್ಟ ಎಂದವರಿಗೆ ಮೊದಲು ನೆರವು ನೀಡುತ್ತಿದ್ದರು. ಅವರನ್ನು ನೆನೆಸಿಕೊಂಡಾಗ ಈಗಲು ನನಗೆ ಕೃತಜ್ಞತೆ ಉಕ್ಕಿ ಬರುತ್ತಿದೆ.

ಅವರ ಮತ್ತ್ಯಾವ ಗುಣ ನಿಮ್ಮ ನೆನಪುಗಳಲ್ಲಿದೆ?

ಅವರ ಅನೇಕ ಗುಣಗಳು ನನ್ನನ್ನು ಪ್ರಭಾವಿಸಿವೆ. ಮತ್ತೊಂದು ನೆನಪು ಹಂಚಿಕೊಳ್ಳಲು ಇಷ್ಟಪಡುವೆ. ನಾನು ಆಗಾಗ ಭರಣಯ್ಯನವರ ಬಳಿ ಹೋಗುತ್ತಿದ್ದೆ. ಇಲ್ಲದೆ ಹೋದಾಗ ವೈಯಕ್ತಿಕವಾಗಿ ಕೂಡ ಕರೆಯುತ್ತಾ ಇದ್ದರು. ಕರೆದು ಏನು ಹೇಳುತ್ತಿದ್ದರು ಅಂದ್ರೆ 'ನನ್ನ ಜನರು ಬಹಳ ಜನ ಅವಿದ್ಯಾವಂತರಿದ್ದಾರೆ. ಅವರಿಗೆ ಯಾರದೂ ಸಹಕಾರ ಇಲ್ಲ. ಅವರಿಗೆ ನಾನೇನಾದರೂ ಶಾಶ್ವತವಾದಂತ ನೆರವನ್ನು ಮಾಡಬೇಕು. ಅವರಿಗೆ ಸಹಾಯ ಮಾಡಬೇಕು ಅಂತಾ ಅನ್ನಿಸುತ್ತೆ. ಹೀಗಾಗಿ ಅಂಥ ಜನರನ್ನು ಗುರುತಿಸಿ ಕರೆದು ತಾ. ನೀನು ನನ್ನ ಜಾತಿಯವನೇ ಅಂತ ಅಲ್ಲ; ಬಡವರು ಯಾರೇ ಆಗಲಿ ಕರೆದುಕೊಂಡು ಬಾ. ಅವರಿಗೆ ಏನು ಸಹಾಯ ಮಾಡಬೇಕು ಅಂಬೇಡ್ಕರ್ ಹೆಸರಿನಲ್ಲಿ ಮಾಡೋಣ. ಆಗ ಅವರ ಆತ್ಮಕ್ಕೂ ಶಾಂತಿ ಆಗುತ್ತದೆ' ಎಂದು ಹೇಳುತ್ತಿದ್ದರು. ಇದು ನನ್ನ ನೆನಪಿನಲ್ಲಿ ಸದಾ ಉಳಿದಿದೆ. ನಾನು ಅದನ್ನೇ ಅನುಸರಿಸಿಕೊಂಡು ಅನೇಕ ಸೂಕ್ತ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿ ಪರಿಚಯ ಮಾಡಿಸಿ, ಅವರ ಕೆಲಸಗಳನ್ನು

ಮಾಡಿಸಿಕೊಡುತ್ತಿದ್ದೆ. ಭರಣಯ್ಯನವರು ಹೇಳುವ ನೀತಿಗಳು, ಸೂಕ್ತ ಸಲಹೆಗಳನ್ನು ಕೇಳಿ ಅವರ ಎದುರಿಗೇ ಅಳುತ್ತಿದ್ದೆ. 'ನಮ್ಮ ಜಾತಿಯಲ್ಲಿ ನಿಮ್ಮಂತವರು ಇನ್ನೊಂದಷ್ಟು ಜನ ಇದ್ದಿದ್ದರೆ ಎಷ್ಟೋ ಉದ್ಧಾರವಾಗಿತಿತ್ತು. ನಿಮ್ಮಂತವರು ನಮಗೆ ಒಬ್ಬೊಬ್ಬರಾದರೂ ಇದ್ದಾರಲ್ಲ ಸರ್. ಅದೇ ನನಗೆ ಬಹಳ ಸಂತೋಷ' ಎಂದು ಎಷ್ಟೋ ಸಲ ಹೇಳುತ್ತಿದ್ದೆ. ಆಗ ಆನಂದಲ್ಲಿ ಅವರಿಗೆ ಕಣ್ಣೀರು ತುಂಬಿ ಬರುತ್ತಿತ್ತು.

ಮುಂದಿನ ನೆನಪುಗಳು?

ನಾನು 1965ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದೆ. ನಾನು ಕೆಲಸಕ್ಕೆ ಸೇರಿದ ಕೆಲವೇ ವರ್ಷಗಳಲ್ಲಿ ಅವರು ನಿವೃತ್ತರಾದರು. ಆಮೇಲೆ ಚುನಾವಣೆಗೆ ನಿಂತ ವೇಳೆಯಲ್ಲಿ ನಾನೂ ಹೋಗಿದ್ದೆ. ಆದರೆ ಚುನಾವಣೆಯಲ್ಲಿ ಅವರು ಗೆಲ್ಲಲಿಲ್ಲ. ಆದರೆ ನಾನು ಹೇಳಲು ಬಯಸುವುದು ಎಂದರೆ, ನಮ್ಮ ಸಮಾಜದಲ್ಲಿ ಆ ವ್ಯಕ್ತಿತ್ವಕ್ಕೆ ಯಾರೂ ಬೆಲೆ ನೀಡಲಿಲ್ಲ. ಇವರ ಜೊತೆ ನಾನು ನೆನಪಿಸಿಕೊಳ್ಳುವುದು ಎನ್. ಸಿ. ಬಿಳಿಗಿರಿ ರಂಗಯ್ಯನವರನ್ನು ಅಷ್ಟೆ. ನಮ್ಮ ಜನ ಕೈ ಹಿಡಿಯಲಿಲ್ಲ. ಅವರ ವ್ಯಕ್ತಿತ್ವವನ್ನು ಗೌರವಿಸಲಿಲ್ಲ. ಅಂಬೇಡ್ಕರ್ ಬಳಿ ಒಡನಾಡಿಯಾಗಿ, ಅವರ ಪ್ರೀತಿಗೆ ಪಾತ್ರರಾಗಿದ್ದವರು ಎಂದರೆ ನಮ್ಮ ಕರ್ನಾಟಕದಲ್ಲಿ ಎನ್.ಸಿ. ಬಿಳಿಗಿರಿರಂಗಯ್ಯನವರು ಒಬ್ಬರೇ! ಏನು ಮಾಡೋದು, ರಾಜಕೀಯ! ದುರದೃಷ್ಟ. ರಾಜಕೀಯ ಬರಿ ಭ್ರಷ್ಟರಿಗೆ, ಕೆಲವು ನೀತಿ ಇಲ್ಲದವರಿಗೆ ಮಾತ್ರ; ನಮ್ಮ ಭರಣಯ್ಯನವರಾಗಲಿ, ಎನ್. ಸಿ. ಬಿಳಿಗಿರಿರಂಗಯ್ಯನವರಾಗಲಿ ಈ ರಾಜಕೀಯದಾಟದ ಮುಂದೆ ಸೋತರು. ಅದು ಅವರ ಸೋಲಲ್ಲ. ನಮ್ಮ ಸಮುದಾಯದ ಸೋಲು ಎಂದೆನಿಸುತ್ತದೆ?

ಭರಣಯ್ಯನವರಂತಹ ವ್ಯಕ್ತಿಗಳು ಆರಿಸಿಬರಬೇಕಾಗಿತ್ತು. ಏನು ಮಾಡೋಕಾಗುತ್ತೆ. ಈ ಸಮಾಜದಲ್ಲಿ ಬುದ್ಧಿ ಇಲ್ಲದ ಜನ ಯಾವುದೋ ಒಂದು ಆಮಿಷಕ್ಕೆ ಮರುಳಾಗಿ ದೊಡ್ಡ ದೊಡ್ಡ ವ್ಯಕ್ತಿತ್ವವನ್ನು ಮರೆಯುತ್ತಾರೆ. ಇದೇ ವಿಚಿತ್ರ! ಆ ಅಧಿಕಾರ ವರ್ಗದಲ್ಲಿ ಕೆಲಸಮಾಡಿ ನಮ್ಮ ಜಾತೀನೇ ಆಗಲಿ; ಇನ್ನೊಬ್ಬ ಜಾತಿಯೇ ಆಗಲಿ ನಿಂತು ಗೆದ್ದಿರುವುದು, ನಾನು ಕಂಡಹಾಗೆ – ಒಬ್ಬರು ಕೋದಂಡರಾಮಯ್ಯನವರು, ಇನ್ನೊಬ್ಬರು ಜೆ. ಅಲೆಗ್ಸಾಂಡರ್ ಅವರು. ಮತ್ತೆ ಯಾರೂ ನನ್ನ ನೆನಪಿಗೆ ಬರುತ್ತಿಲ್ಲ. ಇದು ಅತಿ ವಿರಳ.

ಅಧಿಕಾರವರ್ಗದಲ್ಲಿ ಇದ್ದು ಸಮಾಜದಲ್ಲಿ, ರಾಜಕೀಯದಲ್ಲಿ ಹೆಸರು ತಗೆದುಕೊಳ್ಳಬೇಕು ಎಂದರೆ ಆಗುತ್ತಿರಲಿಲ್ಲ. ಅದೇ ರೀತಿ ಭರಣಯ್ಯನವರ ಎಲೆಕ್ಷನ್ ಟೈಮಲ್ಲಿ ಯಾರೂ ಕೂಡ ಅವರಿಂದ ಒಂದು ನಯಾ ಪೈಸೆ ತೆಗೆದುಕೊಳ್ಳುತ್ತಿರಲಿಲ್ಲ. ಕಾರಣ ಏನೆಂದರೆ ಅವರ ವ್ಯಕ್ತಿತ್ವವೇ ಹಾಗಿತ್ತು. ನಾವು ಭರಣಯ್ಯನವರಿಗೆ ಈ

ರೀತಿಯಾದರೂ ನಮ್ಮ ಸೇವೆ ಸಲ್ಲಿಸಿದರೆ ನಮಗೂ ಒಂದು ಸ್ಫೂರ್ತಿ, ಆತ್ಮತೃಪ್ತಿ ಎಂದು ಕೆಲಸ ಮಾಡಿದರು. ಆದರೆ ಸರಳ ಜೀವಿಗಳು ಗೆದ್ದು ಬರುವುದು ಕಷ್ಟ. ಏನು ಮಾಡುತ್ತೀರಿ? ರಾಜಕೀಯದಲ್ಲೂ ಕೂಡ ಈ ವ್ಯಕ್ತಿ ಬಗ್ಗೆ ಇದ್ದ, ಕಾರಣವೇ ಇಲ್ಲದ ವಿರೋಧಗಳು, ಹೊಟ್ಟೆಕಿಚ್ಚು ಇವೆಲ್ಲ ಭರಣಯ್ಯನವರಂಥ ದೊಡ್ಡ ವ್ಯಕ್ತಿತ್ವದವರನ್ನು ಗುರುತಿಸಲಿಲ್ಲ. ಅವರನ್ನು ಜನ ಸೋಲಿಸಿದ್ದು ದೊಡ್ಡ ಅನ್ಯಾಯ.

ಭರಣಯ್ಯನವರನ್ನು ನಿಜವಾಗಿಯೂ ಕರ್ನಾಟಕದಲ್ಲಿ ಮೊದಲನೇ ಅಂಬೇಡ್ಕರ್ ಅಂತಲೇ ಹೇಳಬಹುದು. ಯಾಕೆಂದರೆ ಅಧಿಕಾರದಲ್ಲಿದ್ದುಕೊಂಡು ನಿಷ್ಠೆಯಿಂದ, ಸ್ವಾಭಿಮಾನವನ್ನು ಉಳಿಸಿಕೊಂಡು, ಅಂಬೇಡ್ಕರ್ ನೀತಿ ನಿಯಮಗಳನ್ನು ಅನುಸರಿಸಿ ಸಾರ್ವಜನಿಕರಿಗೆ ಸಹಾಯ ಮಾಡಿರುತ್ತಾರಲ್ಲ ಅವರೇ ನಿಜವಾದ ಅಂಬೇಡ್ಕರ್ ಪ್ರತಿನಿಧಿಗಳು.

ಭರಣಯ್ಯನವರ ಬಹುಮುಖ್ಯ ಕೆಲಸಗಳ ಉದಾಹರಣೆ ಕೊಡ್ತೀರಾ?

ಹಳ್ಳಿ ಜನಕ್ಕೆ ಏನು ಅನುಕೂಲ ಮಾಡಬೇಕು? ಹೇಗೆ ಸ್ಪಂದಿಸಬೇಕು ಅಂತ ಇದ್ದಿದ್ದನ್ನು ನಮ್ಮಂತಹ ನೂರಾರು ಜನ, ಊರೂರಿನ ಜನರನ್ನು ಕರೆಯುತ್ತಿದ್ದರು. 'ನೋಡ್ರೀ, ಏನೇನು ಮಾಡಬೇಕು ಅಂತ ದೀರ್ಘವಾಗಿ ಯೋಚನೆ ಮಾಡಿ, ಯಾರಿಗೂ ಅನಾನುಕೂಲ ಆಗದಿದ್ದ ಹಾಗೆ, ಏನು ಕೆಲಸ ಬೇಕೋ ಬನ್ನಿ ನಾನು ಮಾಡಿಕೊಡ್ತೀನಿ ಎಂದು ಹೇಳುತ್ತಿದ್ದರು. ನಿಮ್ಮ ಸ್ವಾರ್ಥಕ್ಕೆ ಸಲುವಾಗಿ ನನ್ನ ಹತ್ರ ಬರಬೇಡಿ.' ಜನ ಉದ್ಧಾರ ಆಗಬೇಕಾದ್ರೆ ಏನು ಮಾಡಬೇಕು? ಏನು? ಎತ್ತ? ಅಂತ ಒಂದು ತಿಂಗಳಿಗೆ, 2 ತಿಂಗಳಿಗೆ, ಆರು ತಿಂಗಳಿಗೆ ಒಂದೊಂದು ಮೀಟಿಂಗ್ ಕರೆಯುತ್ತಿದ್ದರು. ಎಲ್ಲ ಅಧಿಕಾರಿವರ್ಗದವರನ್ನು ಕರೆಯೋರು. ಆಮೇಲೆ ಎಲ್ಲ ಸಮಾಜ ಸೇವಕರನ್ನು ಕರೆಯುತ್ತಿದ್ದರು. ಕರೆದು ಅದೇ ರೀತಿ ಸೂಕ್ತವಾಗಿ ಸಲಹೆ – ಸೂಚನೆ ಕೊಟ್ಟು ನಾವು ತೆಗೆದುಕೊಂಡು ಹೋಗುತ್ತಿದ್ದ ಕೋರಿಕೆಗಳನ್ನು, ಬೇಡಿಕೆಗಳನ್ನು ಪರಿಶೀಲಿಸಿ ಕೆಲಸ ಮಾಡಿಕೊಡುತ್ತಿದ್ದರು. ನಿಜವಾಗಲೂ ಹೇಳಬೇಕೆಂದರೆ ಭರಣಯ್ಯನವರು ಎಷ್ಟರ ಮಟ್ಟಿಗೆ ಸಹಾಯ ಮಾಡಿದ್ದಾರೆ ಅಂದರೆ, ಎಲ್ಲ ಜಾತಿಯವರೂ ಇವತ್ತಿನ ದಿನ ಅವರ ಫೋಟೋ ಇಟ್ಟುಕೊಂಡು ಕೈ ಮುಗಿಯುತ್ತಿದ್ದಾರೆ. ಭರಣಯ್ಯನವರು ಸಮಾಜಕ್ಕೆ ಪ್ರತಿನಿಧಿಗಳ ಮುಖಾಂತರ ಹಳ್ಳಿ ಜನಕ್ಕೆ ಸೇವೆ ಮಾಡಿದರು. ಹಳ್ಳಿ ಜನಗಳ ಪ್ರತಿನಿಧಿಗಳು, ನಮ್ಮಂತವರು ಆವಾಗ ಬೇಕಾದಷ್ಟು ಜನ ಇದ್ದರು. ಖಾದಿ ಹಾಕಿಕೊಂಡಿರಲಿ, ಹಾಕದೇ ಇರಲಿ, ಭರಣಯ್ಯನವರು ಅಂದ್ರೆ ಓಪನ್ ಡೋರ್ ಇದ್ದಂಗೆ ಇತ್ತು. ಅವರು ದಿನಕ್ಕೆ ನಮ್ಮಂತವರ ಸಲುವಾಗಿ ಒಂದಷ್ಟು ಸಮಯ ಇಟ್ಟುಬಿಟ್ಟಿದ್ದರು. Even after office hour.

ನಾವು ಇವತ್ತು ಇಲ್ಲಿ ಬದುಕಿರುವುದರಿಂದ ಹೂವಿನ ಹೆಸರಲ್ಲಿ ನಾರೂ ಸ್ವರ್ಗ ಸೇರಿತು ಅನ್ನುವ ಹಾಗೆ ಅಂಬೇಡ್ಕರ್ ಹೆಸರಿನಲ್ಲಿ ಭರಣಯ್ಯನವರ ಹೆಸರಿನಲ್ಲಿ ಬಸವಲಿಂಗಪ್ಪನವರ ಹೆಸರಿನಲ್ಲಿ ಪ್ರಯೋಜನ ಪಡೆದಿದ್ದೇವೆ. ಇವರಿಂದ ಸಮಾಜಕ್ಕೇ ಆಗಲೀ, ಸ್ನೇಹಿತರಿಗೇ ಆಗಲೀ, ನಂಬಿದವರಿಗೇ ಆಗಲಿ ವಂಚನೆ ಇರಲಿಲ್ಲ. ಆದರೆ ಎಷ್ಟೋ ಜನ ಅವರಿಗೂ ದ್ರೋಹ ಬಗೆದಿದ್ದಾರೆ. ಭರಣಯ್ಯನವರ ವಿಚಾರವನ್ನು ಹಳ್ಳಿ ಜನ ಇವತ್ತೂ ನಾನು ಹೋದಾಗಲೂ ಹೇಳುತ್ತಾರೆ. ಅವರು ಹಳ್ಳಿ ಬಡಜನರಿಗೆ, ನಿರುದ್ಯೋಗಿಗಳಿಗೆ, ಅವಿದ್ಯಾವಂತರಿಗೆ ಸಹಾಯ ಮಾಡುತ್ತಾರೆ.

ನಾನಿಲ್ಲಿ ಬಂದಾಗ ದಕ್ಷ, ಯುವ ವಕೀಲರು, ಅದೂ ರಿಸರ್ವೇ ಆಗಿದ್ದರು. ಬಸವಲಿಂಗಪ್ಪನವರು, ಎನ್. ರಾಚಯ್ಯನವರು ಹಾಗೆಯೇ ಇವತ್ತು ಮೆಂಟೈನ್ ಮಾಡಕ್ಕೆ ಆಗ್ತಾ ಇಲ್ಲ. ಏನೇ ಆದರೂ ರಾಚಯ್ಯನವರು, he is a great man. ಮನುಷ್ಯನಿಗೆ ಊರು ಬಿಟ್ಟರೂ ಹುಟ್ಟುಗುಣ ಹೋಗೋದಿಲ್ಲ ಅಂತ ಜನ ಹೇಳುತ್ತಾರೆ. ನಾನು ಅದನ್ನ ಎನ್. ರಾಚಯ್ಯನವರಲ್ಲಿ ಕೇಳಿದ್ದೇವೆ. when I was a student I used to both the leaders.

ಎನ್. ರಾಚಯ್ಯನವರ ಹತ್ರ ಹೋಗಿ 'ಸರ್ ನಮ್ಮೂರಲ್ಲಿ ಇಂತ ಪ್ರಾಬ್ಲಂ ಇದೆ. ನೋಡಿ ಇವರಿಬ್ಬರನ್ನ ಕರೆದುಕೊಂಡು ಬಂದಿದೀನಿ. ಇವರು ಊರನ್ನು ಪ್ರತಿನಿಧಿಸ್ತಾ ಇದ್ದಾರೆ.' ಅಂತ ಹೇಳುತ್ತಿದ್ದೆ. ಆವಾಗ ಎನ್. ರಾಚಯ್ಯನವರು ಹಾಗಾದರೆ ಭರಣಯ್ಯನವರ ಬಳಿ ಹೋಗಿ ಎನ್ನುತ್ತಿದ್ದರು. ಭರಣಯ್ಯನವರ ಹತ್ತಿರ ಮೊದಲೇ ಹೋಗಿದ್ದರೂ ಇವರ ನಿರ್ದೇಶನದ ಮೇಲೆ ಹೋಗಲೇಬೇಕಲ್ಲ! ಆಗ ಹೋದಾಗ 'ಏನ್ರೀ ಈ ಹುಡುಗನ ಕೆಲಸ. Though he is a student, how he is rendring the service to their socity! ಇಂಥ ಜನ ಇರಬೇಕು ಕಣ್ರೀ' ಅಂತ ಭರಣಯ್ಯನವರು ಮತ್ತೆ ಎನ್. ರಾಚಯ್ಯನವರು ನನ್ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಹೇಳುತ್ತಿದ್ದರು.

ಇವರು ಶಿವಮೊಗ್ಗದಲ್ಲಿ ಇದ್ದಾಗ ಬಹಳ ಜನ ಒಂದಲ್ಲ ಒಂದು ರೀತಿಯಲ್ಲಿ ನಾನಾ ಕಾರಣಗಳನ್ನು ಹಿಂದೆ ಇಟ್ಟುಕೊಂಡು ಇವರಿಗೆ ಕೆಟ್ಟ ಹೆಸರು ಬರಬೇಕು ಅಂತ ಹೇಳಿ ಏನೇನೊ ಮಾಡಿದ್ದಾರೆ ಅಂತ ಕೇಳಿದೆ. ಯಾವ ಇಲಾಖೆಯಲ್ಲೇ ಇರಲಿ, ನೋಡಿ, ನಿಸ್ವಾರ್ಥದಿಂದ, ಸಮಾಜದ ಯಾರಾದರೂ ಆಗಲಿ ಅವರಿಗೆ ಸಹಾಯ ಮಾಡಬೇಕು ಅಂತ ಹೋದಾಗ, ಕೆಲವು ಜನ ಅಡ್ಡಗಾಲಾಗುತ್ತಿದ್ದರು. ಆದರೆ ಭರಣಯ್ಯನವರು ಇದ್ಯಾವುದು ಲೆಕ್ಕಿಸದೆ ಛಲವಂತಿಕೆಯಿಂದ ಆ ಸಾಧನೆ ಮಾಡುತ್ತಿದ್ದರು. ಹೀಗೆ ಜನಗಳಿಗೋಸ್ಕರ ಯಾವ ಅಡ್ಡಿ ಆತಂಕಕ್ಕೂ ಹೆದರದೆ ನೆರವು ನೀಡುತ್ತಿದ್ದ

ಪ್ರಪ್ರಥಮ ವ್ಯಕ್ತಿ ಅಂದರೆ the most and best able leader Mr. R. Bharanaiah in the official capacity and the great Basavalingappa in the political. ಅಂಥ ವ್ಯಕ್ತಿಗಳು ಮುಂದೆ ಸಿಗೋಲ್ಲರೀ! ಏನು ಮಾಡೋದು.

ಇನ್ನೊಂದು ಮುಖ್ಯ ನೆನಪು ಅಥವಾ ಅನಿಸಿಕೆ ಹೇಳ್ತಿನಿ. ಬಸವಲಿಂಗಪ್ಪನವರಿಗೆ ವಾರಕ್ಕೆ ಮೂರು ದಿನ ಪ್ಯಾಲೇಸ್ ಗ್ರೌಂಡ್‌ಗೆ ನಾನು ವಾಕಿಂಗ್ ಕರೆದುಕೊಂಡು ಹೋಗುತ್ತಿದ್ದೆ. ನಮ್ಮನೇನ 5:45ಕ್ಕೆ ಬಿಟ್ಟರೆ 6:20ಕ್ಕೆ ಅವರ ಮನೆ ಹತ್ರ ಹೋಗುತ್ತಿದ್ದೆ. ಆಗ ಅವರು ಅಂಬಲಿ ಕುಡೀತಾ ಇರೋರು. ನಾನು ಹೋದಮೇಲೆ ಒಂದು ಲೋಟ ಕಾಫಿ ಕೊಡೋರು. ಆವಾಗ ನನ್ನ ಕಾರಲ್ಲಿ ಕರೆದುಕೊಂಡು ಹೋಗಿ ಪ್ಯಾಲೇಸ್ ಗ್ರೌಂಡ್‌ಗೆ ಬಿಟ್ಟರೆ ಮುಕ್ಕಾಲು ಗಂಟೆ ತಿರುಗಾಡಿಕೊಂಡು ಬರೋರು. ಒಂದು ಕಲ್ಲುಕಟ್ಟೆ ಮೇಲೆ ಕುಳಿತುಕೊಂಡು ಎಲ್ಲ ವಿಚಾರಾನೂ ನನ್ನ ಜೊತೆ ಮಾತಾಡೋರು. ಅವರು ನನ್ನನ್ನ ಒಂದು ದಿನಾನೂ ಹೋಗೋ, ಬಾರೋ ಏನೋ ಅಂತ ಕರೆದವರಲ್ಲ. 'ಬಾಪ್ಪ, ಹೋಗಪ್ಪ ಅಂತಲೇ ಕರೀತಾ ಇದ್ದರು. ಕೆಲವು ಜನ ಬಂದರೆ ಬೈದುಬಿಡೋರು. ಕಠಿಣವಾಗೇ ಬಯ್ಯೋರು. ಯಾಕೆಂದರೆ, ಅವರ ಆತ್ಮದಲ್ಲಿ ನಾನು ಕಠಿಣವಾಗಿ ಮಾತಾಡಿದಾಗ ನನ್ನ ಜನರಲ್ಲಿ ಸ್ಫೂರ್ತಿ ಬರಲಿ ಅಂತ. ನಾನು ಯಾವಾಗಲೂ ಪಕ್ಕದಲ್ಲೇ ಇರುತ್ತಿದ್ದೆನಲ್ಲ. ಅದೇ ರೀತಿ ಭರಣಯ್ಯನವರ ಹತ್ತಿರವೂ ಅಷ್ಟೆ. ಯಾವಾಗಲಾದರೂ ಹೋಗಿ ಕುಳಿತುಕೊಂಡಾಗ, 'ಅಲ್ಲಿ ಕೂತ್ಕೋಳಪ್ಪ' ಅನ್ನೋರು. ಅವರ ಪಿ.ಎ.ಗಳನ್ನ ಕರೆದು, 'ಅವನು ಬಂದಿದ್ದನಲ್ಲ, ಅವನದೇನು ಕೆಲಸ? ಎತ್ತ? ನೋಡಿ ಇವತ್ತೇ ಆಗಬೇಕು ಕಣ್ರೀ' ಅಂತ ಹೇಳಿ ಕೆಲಸ ಮಾಡಿಕೊಡುತ್ತಿದ್ದರು ಪಾಪ. ಇಬ್ಬರಲ್ಲೂ ಅದೊಂದು ಜನೋಪಕಾರದ ಗುಣವನ್ನು ನಾನು ತುಂಬಾ ನೋಡಿದ್ದೇನೆ.


ಬಸವಲಿಂಗಪ್ಪನವರು ಯಾವ ಇಲಾಖೆಯ, ಯಾವ ಮಂತ್ರಿಯೇ ಆಗಲಿ, ಬಸವಲಿಂಗಪ್ಪನವರ ಹೆಸರು ಅಂದಮೇಲೆ ಯಾರೂ ಮರುಮಾತು ಆಡುತ್ತಿರಲಿಲ್ಲ. Even ಭರಣಯ್ಯನವರೂ ಹಾಗೇನೇ! ಎಷ್ಟೋ ವೇಳೆ ಬಹಳ ನಾಜೂಕಾಗಿ ಕೆಲಸ ಮಾಡುತ್ತಿದ್ದರು ಮತ್ತು ಮಾಡಿಸಿಕೊಡುತ್ತಿದ್ದರು. ಅದು ಅವರ ಕಾರ್ಯಶೈಲಿಯ ಭಾಗವಾಗಿತ್ತು.

ನಮ್ಮ ಭರಣಯ್ಯನವರಲ್ಲಿ ಏನು ದಕ್ಷತೆ ಇತ್ತು ಅಂದರೆ ಒಬ್ಬ ವ್ಯಕ್ತಿಗೆ ಏನಾದರೂ ಸಹಾಯ ಮಾಡಬೇಕು ಅಂತ ಅಂದಾಗ, ಆ ದರ್ಪ, ದಕ್ಷತೆ, ಎಲ್ಲಾನೂ ಮರೆತು ಸಂಯಮದಿಂದ ಇತರ ಅಧಿಕಾರಿಗಳ ಹತ್ತಿರ ಹೋಗಿ, ಅವರ ಹತ್ತಿರ ಕುಳಿತುಕೊಂಡು ಕೆಲಸ ಮಾಡಿಸುತ್ತಿದ್ದರು. ಬಸಲಿಂಗಪ್ಪನವರದ್ದು ಹಾಗಲ್ಲ. ದರ್ಪ ದರ್ಪವೇ! ಯಾಕೆಂದರೆ ಅವರಿಗೆ ಗೊತ್ತಿತ್ತು. ನಾವು ಏನಾದರೂ ದರ್ಪ ಬಿಟ್ಟು ಬೇರೆ ತರದಲ್ಲಿ ಮಾತನಾಡಿದರೆ

ಈ ನನ್ನಮಕ್ಕಳು ನನ್ನನ್ನ ದುರುಪಯೋಗಪಡಿಸಿಕೊಂಡು ಬಿಡುತ್ತಾರೆ ಅನ್ನೋದು ಒಂದೇ ಧ್ಯೇಯ. ಬಸವಲಿಂಗಪ್ಪ never bend his head to anybody! ಅವರ ಜೀವನದಲ್ಲಿ ಯಾರಿಗೂ ತಗ್ಗಿದವರೇ ಅಲ್ಲ.

ನಮ್ಮ ಭರಣಯ್ಯನವರು ಏನು ಮಾಡುತ್ತಿದ್ದರು ಗೊತ್ತ? ಆಫೀಸ್ ಬಿಡುವಾಗ ಇನ್ನೂ ಯಾರಿಗೂ ಏನಾದರೂ ಕೆಲಸ ಆಗಬೇಕು ಅಂತಾದರೆ ತನಗಿಂತ ಮೇಲಿನ ರಾಜಕೀಯದವರ ಬಳಿಯೇ ಆಗಲಿ, ಅಧಿಕಾರವರ್ಗದವರ ಬಳಿಯೇ ಆಗಲಿ ಸಂಯಮದಿಂದ ಹೋಗಿ, ಕೂತು, ಬೆರೆತು ಸಂವಾದಮಾಡಿ 'ನೋಡಿ ಇಂತವರದ್ದು, ಇಂತಹ ಕೆಲಸ ಇದೆ. ಇದನ್ನು ಮಾಡಿಕೊಡಬೇಕು ಎಂದಾಗ 75% – 80% ಭರಣಯ್ಯನವರು ಪ್ರಪೋಸ್ ಮಾಡಿದ್ದು ಯಾವ ಕೆಲಸಗಳೂ ಆಗಿಲ್ಲ ಅಂತ ಅವರು ಅಧಿಕಾರದಲ್ಲಿದ್ದಾಗ ನಾವು ಕೇಳಿದ್ದೇ ಇಲ್ಲ. ಭರಣಯ್ಯನವರ ವಿಚಾರದಲ್ಲಿ ಇಲ್ಲಿಯ ತನಕ ನಮ್ಮ ಜಾತಿ ಜೊತೆಗೆ ಇತರ ಜಾತೀನಲ್ಲೂ ಕೂಡ ಎರಡನೇ ಮಾತು ಆಡಿದಂತಹ ವ್ಯಕ್ತಿಗಳನ್ನು ನಾನು ಇಲ್ಲಿಯತನಕ ಭೇಟಿಯೂ ಆಗಿಲ್ಲ; ಕಿವಿಯಲ್ಲೂ ಕೇಳಿಲ್ಲ. ಇಂಥ ವ್ಯಕ್ತಿಯ ವಿಚಾರದಲ್ಲಿ ಏನು ಹೇಳಿದರೂ ಸಾಲದು. ಅಂತವರು ಬದುಕಿರಬೇಕಾಗಿತ್ತು.

* * *




ಬಡತನಕೆ ಮಿಡಿದ ಜೀವ

ಎ. ಡಿ. ಕೃಷ್ಣಯ್ಯ

ಕಷ್ಟದ ಜೊತೆಗೆ ಬಡವರ ಸಂಕಟ ಹಂಚಿಕೊಂಡ ಮಾದರಿ ಪುರುಷ ಭರಣಯ್ಯ. ಈಗ ಅಂಥವರು ನಮ್ಮ ನಡುವೆ ಕಡಿಮೆ. ನಮ್ಮ ಅಧೋಗತಿ ನಮ್ಮ ಅಜ್ಞಾನ ಮತ್ತು ನಮ್ಮಲ್ಲಿರುವ ಒನ್ನೆಸ್ ಅಂತೀವಲ್ಲ ಏಕತೆ ಅದು ಇರದೇ ಹೋಗಿರುವುದೇ ಕಾರಣ. ಅವರಲ್ಲಿ ಎಲ್ಲರನ್ನೂ ಒಟ್ಟಿಗೆ ಸಮಾನವಾಗಿ ಕಂಡು ಕರೆದೊಯ್ಯುವ ಗುಣವಿತ್ತು. ಅವರು ಬಹಳ ದೊಡ್ಡ ಮನುಷ್ಯ.

ನಿವೃತ್ತ ಪ್ರಾಧ್ಯಾಪಕರು
ಯುವರಾಜ ಕಾಲೇಜು, ಮೈಸೂರು





ಬಡತನಕೆ ಮಿಡಿದ ಜೀವ

ಎ. ಡಿ. ಕೃಷ್ಣಯ್ಯ

ಪೀಠಿಕೆ:

ಎ.ಡಿ. ಕೃಷ್ಣಯ್ಯನವರು ಮೂಲತಃ ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನಹಳ್ಳಿಯವರು. ಶ್ರೀಯುತರು ಜಾತಿ ಕಟ್ಟುಪಾಡುಗಳ ಸಂಕೋಲೆಗಳು ಬಿಗಿಯಾಗಿದ್ದಂತಹ ಸಂದರ್ಭದಲ್ಲಿ ಬಹಳ ಪರಿಶ್ರಮದಿಂದ ಜೀವನದಲ್ಲಿ ಮೇಲೆ ಬಂದವರು. ಮೈಸೂರಿನ

ಯುವರಾಜ ಕಾಲೇಜಿನಲ್ಲಿ 36 ವರ್ಷ ಉಪನ್ಯಾಸಕನಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದಾರೆ. ಕೃಷ್ಣಯ್ಯನವರದು ದೀನದಲಿತರ ಕಷ್ಟ ಕಾರ್ಪಣ್ಯಕ್ಕೆ ಮಿಡಿಯುವ ವ್ಯಕ್ತಿತ್ವ. ನಿವೃತ್ತಿಯ ನಂತರ ಈ ಜನಾಂಗವನ್ನು ಜಾಗೃತಗೊಳಿಸುವ ಸಾಹಿತ್ಯ ಸೃಷ್ಟಿಕ್ರಿಯೆಯಲ್ಲಿ ಕೃಷ್ಣಯ್ಯನವರು ತೊಡಗಿಕೊಂಡಿದ್ದಾರೆ. ಅಂಬೇಡ್ಕರ್ ಅವರ 'ಬುದ್ಧ ಮತ್ತು ಆತನ ಧಮ್ಮ' ಕೃತಿಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. 'ಛಲವಾದಿ ಜನಾಂಗ', 'ಛಲದಂಕಮಲ್ಲ ಮತ್ತು ಅವನ ಪರಂಪರೆ', 'ಭಾರತದ ಧೀರ ಮಹಿಳೆ ಒನಕೆ ಓಬವ್ವ' ಇವು ಕೃಷ್ಣಯ್ಯನವರ ಪ್ರಮುಖ ಕೃತಿಗಳು. ಜಾತಿ, ಮತದ ಸಂಕೀರ್ಣತೆಗಳು, ಬಡತನ ಇತ್ಯಾದಿ ಅಂಶಗಳು ಬೀರುವ ಪರಿಣಾಮ ಏನೆಂಬುದನ್ನು ಕೃಷ್ಣಯ್ಯನವರು ಅನುಭವದಿಂದ ಬಲ್ಲವರು. ಹಾಗಾಗಿಯೇ ದಲಿತ ಸಮುದಾಯದ ಯಾರೊಬ್ಬ ವ್ಯಕ್ತಿಯ ಬಗ್ಗೆ ಮಾತಿಗೆ ಕುಳಿತರೂ ಅದರ ಜೊತೆಗೆ ಜನಾಂಗದ ಏಳಿಗೆಯ ವಿಚಾರಗಳೂ ಸ್ಥಾನ ಪಡೆದುಕೊಳ್ಳುತ್ತವೆ. ಶ್ರೀಯುತರು ಚಿತ್ರದುರ್ಗದಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಆರ್. ಭರಣಯ್ಯನವರು ಅಲ್ಲಿ ಡಿ.ಎಸ್.ಪಿ. ಆಗಿ ಸೇವೆ ಸಲ್ಲಿಸುತ್ತಿದ್ದರು. ಕೃಷ್ಣಯ್ಯನವರು ಭರಣಯ್ಯನವರೊಂದಿಗಿನ ಒಡನಾಟದ ಬಗ್ಗೆ ಮಾತನಾಡುವ ಜೊತೆಜೊತೆಗೆ ಈ ಜನಾಂಗದ ಭೂತ-ವರ್ತಮಾನಗಳ ಸ್ಥಿತಿಗತಿಗಳ ಚಿತ್ರಣವನ್ನೂ ಸಹ ತಮ್ಮ ಮಾತಿನಲ್ಲಿ ತೆರೆದಿಟ್ಟಿರುವರು.

ಭರಣಯ್ಯನವರು ಸದಾ ನೆನಪಿಟ್ಟುಕೊಳ್ಳಬೇಕಾದ ಮಾದರಿ ಪುರುಷ ಎಂದೇ ಮಾತಿಗಾರಂಭಿಸಿದರು. ಭರಣಯ್ಯನವರು ತಮಗೆ ಮೊದಲ ಪರಿಚಯ ಆದ ಸನ್ನಿವೇಶದ ಕ್ಷಣಗಳನ್ನು ನೆನಪಿಸಿಕೊಂಡು ಕೆಲ ಕ್ಷಣ ಗದ್ಗದಿತರಾದರು. ದಲಿತ ಜನಾಂಗವನ್ನು ಮೇಲೆ ತರಲು ಅವರು ಶ್ರಮಿಸುತ್ತಿದ್ದ ರೀತಿಯನ್ನು ಕಣ್ಣಮುಂದೆ ತಂದುಕೊಂಡರು.

ನೀವು ಕಂಡಹಾಗೆ ದಲಿತ ಜನಾಂಗದ ಸ್ಥಿತಿಗತಿ ಭರಣಯ್ಯನವರು ನಮ್ಮ ಸಮುದಾಯಕ್ಕಾಗಿ ಮಾಡಿದ ಕೆಲಸಗಳ ಬಗ್ಗೆ ಹೇಳಿ.

ಇವತ್ತು ನಮ್ಮ ಜಾತಿ ಬಹಳ ವಿಭಜನೆ ಆಗಿದೆ. ನಾವು ಒಂದಾಗಬೇಕು, ಒಂದು ಯುನಿಟ್ ಪ್ರಾರಂಭ ಮಾಡಿಕೊಂಡು ನಾವು ಉದ್ಧಾರವಾಗಬೇಕು ಎನ್ನುವ ಭಾವನೆ ನಮ್ಮಲ್ಲಿ ಯಾರಿಗೂ ಇಲ್ಲ. Including so called IAS, KAS officers.. ಅವರಿಗೂ ಈ ಭಾವನೆ ಬರಲಿಲ್ಲ. ಹಾಗಾಗಿ ನಾವು ಇವತ್ತು ಎಲ್ಲಿ ನಿಂತು ನಾವೆಲ್ಲ ಒಂದೇ ಅಂತ ಹೇಳಿದರೂ ಕೂಡ ನಾವೆಲ್ಲ ಒಂದು ಎನ್ನುವ ಭಾವನೆ ನಮ್ಮ ಮನಸ್ಸಿನಲ್ಲಿ ಬರುವುದಿಲ್ಲ. ನಾವು ಒಂದೇ ಅಂತ ಹೇಳಿದರೂ

ಕೂಡ ನಮ್ಮ ನಮ್ಮ ಒಳಗಡೆ ಯಾರೊಬ್ಬರಲ್ಲೂ ಕೂಡ ನಾವೆಲ್ಲ ಒಂದು ಎನ್ನುವ ಒಳ್ಳೆಯ ಭಾವನೆಯನ್ನು ನಾನು ನೋಡಲಿಲ್ಲ.

ಇದರಿಂದಾಗಿ ನಮಗೆ ಬರುವಂತಹ ಸೌಕರ್ಯಗಳನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳದೆ ಯಾರ‍್ಯಾರಿಗೋ ನಾವು ಬಿಟ್ಟುಕೊಡುತ್ತಿದ್ದೇವಲ್ಲ ಎನ್ನುವ ಭಾವನೆ ನಮ್ಮಲ್ಲಿ ಇದುವರೆಗೂ ಯಾರಿಗೂ ಬಂದಿಲ್ಲ. ನಮ್ಮವರಲ್ಲೂ ಕೂಡ ಯಾರೋ ಇನ್‌ಫ್ಲುಯೆನ್ಸ್ ಇದ್ದವರಿಗೆ ಸಿಗುತ್ತೆ, ಉಳಿದವರನ್ನು ಕೇಳುವವರಿಲ್ಲ. ಆ ಮಟ್ಟಕ್ಕೆ ನಾವು ಬಂದ್ದಿದೀವಿ. ನಮ್ಮ ಜಾತಿಯ ಅಧೋಗತಿಗೆ ಇದೇ ಮುಖ್ಯ ಕಾರಣ. ಭರಣಯ್ಯನವರು ಈ ನಮ್ಮ ಸ್ಥಿತಿಯನ್ನು ಆ ಕಾಲದಲ್ಲೇ ಅರಿತಿದ್ದರು. ಅದಕ್ಕಾಗಿಯೇ ತಮಗೆ ಸಿಕ್ಕಿದ ಅವಕಾಶಗಳನ್ನೆಲ್ಲ ನಮ್ಮ ಏಳಿಗೆಗಾಗಿಯೇ ಬಳಸುತ್ತಾ ಹೋದರು. ಆದರೂ..

ನಮ್ಮ ಅಧೋಗತಿಗೆ ಮುಖ್ಯ ಕಾರಣ ಅಂದರೆ ನಮ್ಮಲ್ಲಿರುವ ಒನ್ನೆಸ್ ಅಂತೀವಲ್ಲ; ಏಕತೆ – ಆ ಭಾವನೆ, ಆ ಸಂಕಲ್ಪ ನಮಗೆ ಅಂದಿನಿಂದ ಅವರು ನಮಗಾಗಿ ಮಾಡಿದ ಅನೇಕ ಸ್ಮರಣೀಯ ಕೆಲಸದಿಂದ ಮೊದಲ್ಗೊಂಡು ಇದುವರೆಗೂ ಒಂದಾಗಿ ಕಾಣಿಸುತ್ತಿಲ್ಲ. ಅವರ ವ್ಯವಹಾರವೇ ಬೇರೆ ನಮ್ಮ ವ್ಯವಹಾರವೇ ಬೇರೆ ಎನ್ನುವ ಭಾವನೆ ಇದೆಯೇ ವಿನಃ ಇದನ್ನು ಒಂದಾಗಿ ಸೇರಿಸಬೇಕು ಎಂದು ಮನಃಪೂರ್ವಕವಾಗಿ ಹೇಳುವ ಜನ ನನಗೆ ಇನ್ನೂ ಸಿಕ್ಕಿಲ್ಲ. ಇದಕ್ಕೆ ನಮ್ಮಲ್ಲಿರುವ ಅಜ್ಞಾನವೇ ಕಾರಣ.

ಇದೇ ವೇಳೆ ನನ್ನ ಆರಂಭಿಕ ಜೀವನದ ಒಂದೆರಡು ನೆನಪು ಇಲ್ಲೆ ಹೇಳ್ತಿನಿ. ನನ್ನೂರೂ ಸಿದ್ದವ್ವನ ಹಳ್ಳಿಯಲ್ಲಿ 'ಜಾತಿಯತೆ' ತಾಂಡವವಾಡ್ತಿತ್ತು. ಯಾರೊಬ್ಬರೂ ನಮ್ಮನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಮಾಧ್ಯಮಿಕ ಶಾಲೆ ಸರ್ಕಾರದ್ದಾದರೂ ಕೂಡ ಮೇಷ್ಟ್ರು ಏನಾದರೂ ನಾವು ತಪ್ಪು ಮಾಡಿದರೆ ಹೊಡಿಬೇಕು ಅಂದಾಗ ಬೆತ್ತ ತೆಗೆದುಕೊಂಡು ದೂರದಿಂದಲೇ ಬೀಸಿ ಹೊಡೆಯುತ್ತಿದ್ದರು. ಕೈ ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಇತರರಿಗೆ ಕೈ ಮುಟ್ಟಿ ಹೊಡೆಯುತ್ತಿದ್ದರು. ಅಂತಹ ಸನ್ನಿವೇಶ ಇತ್ತು. ಇವತ್ತು ಅಂತ ಸನ್ನಿವೇಶ ಬದಲಾಗಿದೆ. ಅದು ಬೇರೆ ಮಾತು. ಆದರೆ ಇಂಥ ಸನ್ನಿವೇಶದಲ್ಲಿ ಓದುವಾಗ ಕಿಂಚಿತ್ತು ಅನುಕೂಲವಿರಲಿಲ್ಲ. ಹೊಟ್ಟೆಪಾಡಿಗಾಗಿ ನಾವು ಮದುವೆಗೆ, ಮೇಳಕ್ಕೆ ಓಲಗ ಮಾಡುತ್ತಿದ್ದೆವು. ನಮ್ಮ ತಂದೆಗೆ ಬಹಳ ಚೆನ್ನಾಗಿ ಸಂಗೀತ ಬರುತ್ತಿತ್ತು. ವಾದ್ಯದಲ್ಲಿ ಬಹಳ ಪರಿಣಿತಿ ಇತ್ತು. ಮದುವೆ ಮುಂಜಿಗಳಿಗೆ ಓಲಗ ಬಾರಿಸಿ ದುಡಿದ ದುಡ್ಡನ್ನು ನನಗೆ ಕಳಿಸಿಕೊಡುತ್ತಿದ್ದರು ಆನರ್ಸ್ ಓದುವ ಸಮಯದಲ್ಲಿ. ಆ ದುಡ್ಡಿನಲ್ಲೇ ನಾನು ಹೊಂದಿಸಿಕೊಂಡು ಎಲ್ಲವನ್ನೂ ಮಾಡಿಕೊಳ್ಳಬೇಕಾಗಿತ್ತು.

ಆವತ್ತಿನ ಸಂದರ್ಭದಲ್ಲಿ ಅಷ್ಟೊಂದು ಜಾತೀಯತೆಯ ಸಮಸ್ಯೆ ಇದ್ದಾಗಲೂ ಬಿ.ಎಸ್ಸಿ. ಆನರ್ಸ್ ಮುಗಿಸಿ ನಾನು ಕೆಲಸಕ್ಕೆ ಹೋಗಿಬಿಟ್ಟೆ. ಮೊದಲ ಕೆಲಸ ಯುವರಾಜ ಕಾಲೇಜಿನಲ್ಲಿ. ಆವಾಗ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಬಯೋ ಕೆಮೆಸ್ಟ್ರಿ ಎಂ.ಎಸ್ಸಿ. ತರಗತಿಗಳನ್ನು ಮಾಡುತ್ತಿದ್ದರು. ಅಲ್ಲೇ ಎಂ.ಎಸ್ಸಿ. ಮಾಡಿದೆ. 56–57ನೇ ಇಸವಿಯಲ್ಲಿ ವಿದೇಶಕ್ಕೆ ಹೋಗುವ ಅವಕಾಶ ಬಂತು. ಆದರೆ ಆ ಸಂದರ್ಭದಲ್ಲಿ ನಾನು ಹುಷಾರು ತಪ್ಪಿಬಿಟ್ಟೆ. ಹಾಗಾಗಿ ಹೋಗಲಿಕ್ಕೆ ಆಗಲಿಲ್ಲ. ಯುವರಾಜ ಕಾಲೇಜಿನಲ್ಲಿ ಓದುವಾಗ ನಾನು ಸಾಕಷ್ಟು ಸಮಸ್ಯೆಯನ್ನು ಎದುರಿಸಿದ್ದೇನೆ. ಆಗ ನನ್ನ ಒಳ ಅಂತರಂಗ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿದೆ ಎಂಬ ನಂಬಿಕೆ. ಈಗಲೂ ಈ ದಲಿತರು ಎನ್ನುವ ಒಂದು ಜಾತಿ ಭೇದದಿಂದ ಎಷ್ಟು ನೊಂದುಬಿಟ್ಟಿದೀವಿ ಎಂದರೆ ಆ ಕಾಲದಲ್ಲಿ ಸ್ಟಾಫ್ ಯಾರಾದರೂ ಕಾರ್ಯಕ್ರಮ ಮಾಡಿದರೆ ಊಟ / ಉಪಹಾರದ ವೇಳೆ ಎಲ್ಲರಿಗೂ ಸರ್ವ್ ಮಾಡಿದರೆ ನನಗೆ ಕೊಡುತ್ತಿರಲಿಲ್ಲ. ಅಂಥವರಲ್ಲಿ ನಾನು ಸಾವಿರಾರು ವಿದ್ಯಾರ್ಥಿಗಳನ್ನು ಒಳ್ಳೆ ಮನಸ್ಸಿಂದ ಬೆಳೆಸಿದ್ದೀನಿ. ಈಗಲೂ ನನ್ನ ಶಿಷ್ಯಂದಿರು ಬೇಕಾದಷ್ಟು ಜನ ಇದ್ದಾರೆ. ಈಗ ಹೆಚ್ಚು ಕಡಿಮೆ ಎಲ್ಲ ಆಫೀಸಿನಲ್ಲೂ ನನ್ನ ವಿದ್ಯಾರ್ಥಿಗಳೇ ಇದ್ದಾರೆ. ವಿರೋಧಪಕ್ಷದ ನಾಯಕ ಸಿದ್ಧರಾಮಯ್ಯ ಬಿಎಸ್ಸಿಯಲ್ಲಿ ನನ್ನ ವಿದ್ಯಾರ್ಥಿ. ಹಲವಾರು ಬಾರಿ ನಾನು ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ನೋಡಿ, ಮಾತಾಡಿಸಿ ನನ್ನನ್ನು ಕಾರಿನಲ್ಲಿ ಮನೆಗೆ ಬಿಟ್ಟು ಹೋಗಿದ್ದಾರೆ. ಅದೆಲ್ಲ ನಮ್ಮ ವ್ಯಕ್ತಿಗತ ನಡವಳಿಕೆ ಮತ್ತು ಸಂಪರ್ಕದಿಂದ ಬಂದ ವ್ಯವಹಾರವೇ ಹೊರತು ಕೇವಲ ಒಂದು ಕಮ್ಯುನಿಟಿಯ ಕಾರಣಕ್ಕೆ ನಮಗೆ ಸಿಕ್ಕ ಗೌರವ ಅಲ್ಲ.

ನಿಮಗೆ ಆರ್. ಭರಣಯ್ಯನವರ ಸಂಪರ್ಕ ಹೇಗೆ ಉಂಟಾಯಿತು?

1950ನೇ ಇಸವಿಯಲ್ಲಿ ಅವರ ಮೊದಲನೆ ಪರಿಚಯ ಆಗಿದ್ದು ನನಗೆ. ಅವರು ಚಿತ್ರದುರ್ಗದಲ್ಲಿ ಡಿ.ಎಸ್.ಪಿ ಆಗಿದ್ದರು. ಆ ಸಮಯದಲ್ಲಿ ನಮ್ಮ ಅಣ್ಣ ಅಲ್ಲಿ ಗುಮಾಸ್ತರಾಗಿದ್ದರು. ಅವರಿಂದ ಪರಿಚಯ ನನಗೆ. ಎರಡು–ಮೂರು ಸಾರಿ ಅವರ ಮನೆಗೆ ಹೋಗಿ ಊಟ ಮಾಡಿಕೊಂಡು ಬಂದಿದ್ದೀನಿ. ಅವರು ಬಹಳ ದೊಡ್ಡ ಮನುಷ್ಯರು. ಈ ಜಾತಿಯ ವ್ಯವಹಾರಗಳನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಜೊತೆಗೆ ಯಾರೊಬ್ಬರಿಗೂ ಕೂಡ ಅಫೆಂಡ್ ಆಗುವ ಸ್ಥಿತಿಯಲ್ಲಿ ಅವರು ಯಾವತ್ತೂ ಮಾತನಾಡುತ್ತಿರಲಿಲ್ಲ. ಆ ದೊಡ್ಡ ಗುಣ ಭರಣಯ್ಯನವರೊಬ್ಬರಲ್ಲಿ ನಾನು ಕಂಡಿದ್ದೇನೇಯೆ ವಿನಃ ಬೇರೆ ಯಾರಲ್ಲೂ ಕಾಣಲಿಲ್ಲ. ನಮ್ಮಣ್ಣ ಕರೆದುಕೊಂಡು

ಹೋಗಿ 'ನನ್ನ ತಮ್ಮ ಇವನು, ಓದುತ್ತಿದ್ದಾನೆ ಸರ್' ಅಂತ ಪರಿಚಯಿಸಿದ. ಅವರು ನನ್ನ ಬಳಿಗೆ ಬಂದು ನನ್ನ ಕೈ ಹಿಡಿದುಕೊಂಡು ಇನ್ನೂ ಚೆನ್ನಾಗಿ ಓದಿ ಇನ್ನೂ ಉತ್ತಮ ಕೆಲಸಕ್ಕೆ ಬರಬೇಕು' ಅಂತ ಹೇಳಿ ನನಗೆ ಆಶೀರ್ವಾದ ಮಾಡಿದ್ದರು.

ಆಮೇಲೆ ನಾನು ಮೈಸೂರಿನಲ್ಲಿ ಕೆಲಸಕ್ಕೆ ಸೇರಿದೆ. ಅವರು ಬೇರೆ ಬೇರೆ ಊರುಗಳಿಗೆ ಹೋದರು. ಹಾಗಾಗಿ ನನಗೂ ಅವರಿಗೂ ಹೆಚ್ಚು ಸಂಪರ್ಕ ಇರಲಿಲ್ಲ. ಆದರೆ ಅವರನ್ನು ನೋಡಿ ನನಗೆ 'ತುಂಬಾ ದೊಡ್ಡ ಮನುಷ್ಯರು ಇವರು. ಇಂತಹ ವ್ಯಕ್ತಿತ್ವ ಇರುವುದರಿಂದಲೇ ಇವರು ಇಷ್ಟು ಚೆನ್ನಾಗಿ ಉದ್ಧಾರ ಆಗಿದ್ದಾರೆ.' ಅಂದುಕೊಂಡೆ ನನ್ನ ಮನಸ್ಸಿನಲ್ಲಿ. ಈಗಲೂ ಸಹ ಅದನ್ನು ನೆನೆದು ಸಮಾಧಾನ ಪಟ್ಟುಕೊಳ್ಳುತ್ತೇನೆ.

ಆರ್. ಭರಣಯ್ಯನವರು ತಮ್ಮ ಅಧಿಕಾರದ ಅವಧಿಯಲ್ಲಿ ನಮ್ಮ ಜನರಿಗೆ ಸಾಕಷ್ಟು ಕೆಲಸ ಕೊಟ್ಟಿದ್ದಾರೆ. ಅದರ ಬಗ್ಗೆ ತಮಗೇನನ್ನಿಸುತ್ತೆ?

ಆ ಕೆಲಸವನ್ನು ಬಹಳ ಸೊಗಸಾಗಿ ಮಾಡಿದ ವ್ಯಕ್ತಿ ಅಂದರೆ ಆರ್. ಭರಣಯ್ಯನವರು. ಅವರನ್ನು ಬಿಟ್ಟರೆ ಇನ್ಯಾರೂ ಈ ಕೆಲಸ ಮಾಡಿದವರನ್ನು ನಾನು ಕಂಡಿಲ್ಲ. ಅವರು ಯಾರೊಬ್ಬರಿಗೂ ಕೂಡ ಅನ್ಯಾಯವಾಗದಂತೆ, ಕೆಲಸ ಮಾಡಿದ್ದಾರೆ. ಇವತ್ತಿಗೂ ಅವರನ್ನು ನೆನಪಿಸಿಕೊಳ್ಳುವವರು ಬೇಕಾದಷ್ಟು ಜನ ಇದ್ದಾರೆ ಅದನ್ನು ನೋಡಿದ್ದೀನಿ.

ಆರ್. ಭರಣಯ್ಯನವರಂತಹ ಅಧಿಕಾರಿಗಳು ನಮ್ಮ ಜನಾಂಗಕ್ಕೆ ಬಹಳ ಶ್ರೇಷ್ಠ ಮಟ್ಟದ ಕೆಲಸವನ್ನು ಮಾಡಿದ್ದಾರೆ. ಅವರಿಗೂ ಇವತ್ತಿನ ಅಧಿಕಾರಿಗಳಿಗೂ ತಾವು ಏನು ವ್ಯತ್ಯಾಸ ಗಮನಿಸಿದ್ದೀರಿ.

ಮೊದಲನೆಯದು ಭರಣಯ್ಯನವರು ಎಲ್ಲಾ ಬಡವರತ್ತ ಸಹಾಯ ಹಸ್ತ ನೀಡುತ್ತಿದ್ದರು. ನಮ್ಮವರತ್ತ ವಿಶೇಷ ಗಮನ ನೀಡಿದ್ದರು. ಇವತ್ತಿನವರಲ್ಲಿ ಆ ಮನೋಭಾವನೆ ಕಡಿಮೆ. ಮುಖ್ಯವಾಗಿ ನಮ್ಮ ಬಡತನ, ನಾವು ಹುಟ್ಟಿರುವ ಸನ್ನಿವೇಶ, ಆಮೇಲೆ ಬೇರೆ ಜನಗಳು ನಮ್ಮನ್ನು ಕಾಣುವ ದೃಷ್ಟಿ–ಆ ದೃಷ್ಟಿ ಯಾವತ್ತೂ ಬದಲಾವಣೆಯಾಗಿಲ್ಲ.

ಎರಡನೆಯದು ನಾವು ಎಷ್ಟೇ ಉತ್ತೇಜನ ಕೊಟ್ಟರೂ ಕೂಡ ಇತರೆ ಮಕ್ಕಳಿಗೂ ಕೂಡ ಅಷ್ಟೇ ಉತ್ತೇಜನ ಕೊಡಬೇಕು ಎನ್ನುವ ಧ್ಯೇಯ ಇದೆಯಲ್ಲ, ಆ ಧ್ಯೇಯವನ್ನು

ಎಲ್ಲರೂ ಪರಿಪಾಲನೆ ಮಾಡಲು ಆಗುತ್ತಿಲ್ಲ. ಯಾಕೆಂದರೆ ಪ್ರತಿಯೊಂದು ಸಮುದಾಯದಲ್ಲೂ ನನ್ನ ಜನಾಂಗವನ್ನು ಉದ್ಧಾರ ಮಾಡಬೇಕು, ನಾನು ಅದರಲ್ಲಿ ಪ್ರಾಶಸ್ತ್ಯ ಪಡೆಯಬೇಕು ಎನ್ನುವಂತಹ ಅಧಿಕಾರಿಗಳು ಬಂದರೇ ವಿನಃ ಎಲ್ಲಾ ಜನಾಂಗಕ್ಕೂ ಕೂಡ ಒಂದೇ ವಿಧವಾದ ಉತ್ತೇಜನ ಕೊಟ್ಟು ಎಲ್ಲರನ್ನೂ ಮೇಲೆ ತರಬೇಕು ಎನ್ನುವ ಭಾವನೆ ಜನಗಳಲ್ಲಿ ಕಡಿಮೆಯಾಯಿತು. ನಮ್ಮಲ್ಲಿ ಮೊದಲೇ ಇರಲಿಲ್ಲ. ಇನ್ನು ನಮ್ಮವರ ಬಗ್ಗೆ ಇರುವ ದೂರು ಹಣ ಹೊಡೆಯುತ್ತಿದೆ ಅಂತ. ಇದಕ್ಕಾಗಿ ನನ್ನ ಅನಿಸಿಕೆ ಏನೆಂದರೆ, ಒಬ್ಬನು ಕೆಲಸಕ್ಕೆ ಹೋಗಬೇಕು ಅಂದರೆ ಎಷ್ಟೋ ಅವನ ಕೈಲಾದಷ್ಟು ದುಡ್ಡು ಖರ್ಚುಮಾಡಿಕೊಂಡೇ ಆ ಕೆಲಸಕ್ಕೆ ಹೋಗಬೇಕೇ ವಿನಃ ಅವನು ನನ್ನ ವಿದ್ಯೆ, ಅರ್ಹತೆಗೆ ಸರ್ಕಾರ ಕೆಲಸ ಕೊಟ್ಟಿತು ಅಂತ ಹೇಳಿ ಧೈರ್ಯದಿಂದ ಹೋಗಿ ಆ ಕೆಲಸಕ್ಕೆ ಸೇರುವ ಸನ್ನಿವೇಶ ಈಗಿನ ಕಾಲದಲ್ಲಿ ಇಲ್ಲವೇ ಇಲ್ಲ. ಈ ಭಾವನೆಯಿಂದ ನಾವು ಕೆಲಸಕ್ಕೆ ಹೋದ ತಕ್ಷಣವೇ ಅನೇಕರು ಬಹಳ ಉತ್ತಮವಾಗಿದ್ದರೂ ಸಹ ದುಡ್ಡು ತೆಗೆದುಕೊಳ್ಳುವುದಕ್ಕೆ ನಿರಾಸೆ ಇದ್ದರೂ ಸಹ ಸನ್ನಿವೇಶಗಳು ಅವರನ್ನು ಎಳೆದುಕೊಂಡು ಹೋಗಿ ದುಡ್ಡು ಕೊಡಿಸುವಂತಹ ಸಂದರ್ಭಗಳು ಇದಾಗಿದೆ. ನಾನೇನೂ ಕೇಳಲಿಲ್ಲಪ್ಪ ಅವರೇ ತಂದುಕೊಡುತ್ತಾರೆ ಎನ್ನುವ ಭಾವನೆ ಈಗಿನ ಕಾಲದಲ್ಲಿ ಬೆಳೆದಿದೆ. ಬೆಳೆಯುತ್ತಲೇ ಇದೆ. ಇದಕ್ಕೆ ಕೊನೆ ಎನ್ನುವುದಿಲ್ಲ. ಈ ವ್ಯವಹಾರಕ್ಕೆ ನಮ್ಮ ಬಡತನವೇ ಕಾರಣ. ಆ ಬಡತನವೇ ನಮ್ಮನ್ನು ಕರೆದುಕೊಂಡು ಹೋಗಿ ಅಂತಹ ಕೆಲಸ ಮಾಡು, ಇಂತಹ ಕೆಲಸ ಮಾಡು, ಅಂತಹ ಕೆಲಸ ಮಾಡು ಅಂತ ಮಾಡಿಸುತ್ತಿದೆ ಎನಿಸುತ್ತೆ. ಈ ವಿಚಾರದಲ್ಲಿ ಭೇದವೇ ಇಲ್ಲ. ಎಲ್ಲ ಮನುಷ್ಯರೂ ಹಣಕಾಸಿನ ವ್ಯವಹಾರದಲ್ಲಿ ಆ ನ್ಯಾಯ ನಿಷ್ಠೆಯನ್ನು ಬಿಟ್ಟುಬಿಟ್ಟಿದಾರೆ ಈಗ. ಇದೇ ಸಂದರ್ಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ನೆನಪಾಗುತ್ತಾರೆ ನನಗೆ. ಅವರು ಅಷ್ಟು ಉನ್ನತ ಸ್ಥಾನದಲ್ಲಿದ್ದು, ಎಲ್ಲ ಅಧಿಕಾರಗಳನ್ನೂ ಅನುಭವಿಸಿ, ನಮ್ಮ ಜನಾಂಗಕ್ಕೆ ಅಷ್ಟು ಒಳ್ಳೆಯ ಕೆಲಸ ಮಾಡಿ ಇತಿಹಾಸ ಸೇರಿದ್ದಾರೆ. ಅದೇ ಅಂಬೇಡ್ಕರ್ ಹಣಕ್ಕಾಗಿ ಎಂದೂ ಆಸೆ ಪಡಲಿಲ್ಲ. ಬುದ್ಧನ ಅನುಯಾಯಿ ಆದರು. ಆತ ಏನು ಆಸೆಯೇ ದುಃಖಕ್ಕೆ ಮೂಲ ಎಂದು ಹೇಳಿದ್ದ ಅದನ್ನೇ ಇವರು ಪರಿಪಾಲಿಸಿದರು. ಇವತ್ತು ಅವರ ಹೆಸರಿನಲ್ಲಿ ಇವರು ಏನೆಲ್ಲ ಮಾಡುತ್ತಾರೆ. ನೀನು ಈ ರೀತಿ ಮಾಡುತ್ತೀಯಪ್ಪ ಅಂತ ಯಾರಿಗಾದರೋ ಒಬ್ಬನಿಗೆ ಹೇಳಿದರೆ He becomes the First victim. ನೀನು ಮಾಡುತ್ತಿರುವುದು ತಪ್ಪು. ಈ ರೀತಿ ಮಾಡಬಾರದು ಎಂದು ಹೇಳಿದರೆ That man becomes the first person in the eyes of many present officers. ಯಾಕೆ ಅಂದರೆ ಅವರಲ್ಲಿ ಹೆಚ್ಚಿನವರು ನ್ಯಾಯವಾಗಿ

ಆ ಕೆಲಸಕ್ಕೆ ಹೋಗಿರುವುದಿಲ್ಲ. ಅದು ಮುಖ್ಯವಾದ ಅಂಶ. ಈಗ ಕೆಲಸಕ್ಕೆ ಅರ್ಜಿ ತೆಗೆದುಕೊಳ್ಳುವಾಗಲೇ ಹಣ ಕೊಡಬೇಕು. ಆಮೇಲೆ ಸಂದರ್ಶನದಲ್ಲಿ ತೇರ್ಗಡೆಯಾಗಲು ದುಡ್ಡು, ನೇಮಕಾತಿ ಆದೇಶ ತೆಗೆದುಕೊಳ್ಳಬೇಕಾದರೆ ದುಡ್ಡು. ಈ ರೀತಿಯಾಗಿ ನಾವು ಬೆಳೆಸಿಕೊಂಡುಬಂದಿರುವುದರಿಂದ ನಾವು ಯಾರನ್ನು ಅಂತ ಬೆರಳುಮಾಡಿ ತೋರಿಸೋಕಾಗುತ್ತೆ? ಯಾರಿಗೆ ಹೇಳಿದರೂ ಕೂಡ 'ಅಯ್ಯೋ ನಮ್ಮ ಕಷ್ಟ ನಿಮಗೇನು ಗೊತ್ತು?' ಎನ್ನುತ್ತಾರೆ. ಎಂಥ ದೊಡ್ಡ ಮನುಷ್ಯರನ್ನೇ ಕೇಳಿ ನೀವು ಇದೇ ಮಾತು ಬರುತ್ತೆ ಅವರಿಂದ. ವಿಚಿತ್ರ ಸನ್ನಿವೇಶದಲ್ಲಿ ಆ ಕಾಲಕ್ಕೆ, ಈ ಕಾಲಕ್ಕೆ ಮಾದರಿ ವ್ಯಕ್ತಿತ್ವ ಎನಿಸಿಕೊಂಡವರು, ಪರಿಶುದ್ಧವಾಗಿ ಉಳಿದವರು ಎಂದರೆ ಭರಣಯ್ಯನವರು ಮಾತ್ರ.

ಇದಕ್ಕೆ ಕೊನೆ ಹೇಗೆ ಸರ್?

ಕೊನೆಯೇ ಇಲ್ಲವೇನೋ ಅನ್ನಿಸುತ್ತೆ ನನಗೆ. ಇದು ಹೀಗೇ ಬೆಳೆದುಕೊಂಡು ಹೋಗುತ್ತಾ ಇರುತ್ತೆ ಆಂಜನೇಯನ ಬಾಲದ ಹಾಗೆ! ಮಹಾಪುರುಷರ ತತ್ವ, ಸಿದ್ಧಾಂತ ಎಲ್ಲ ಮೇಲುನೋಟಕ್ಕೆ ತೋರಿಸುವುದಕ್ಕೆ ಒಂದು ಮಾರ್ಗವಾಗಿಬಿಟ್ಟಿದೆ ಈಗ. ಇಂಥವರು ಹೀಗೆ ಇದ್ದರು ಅಂತ ತೋರಿಸುವುದಕ್ಕೇ ಹೊರತು ನಾವು ಅವರ ಹಾಗೆ ಇರೋಣ ಎಂದು ಅಕ್ಷರಶಃ ಪಾಲಿಸುವವರು ಬಹಳ ಕಡಿಮೆ ಈಗ. ಆದರೆ ಆ ಉದಾಹರಣೆಯನ್ನು ನಮ್ಮ ಜೀವನದಲ್ಲಿ ಅನುಸರಿಸಿಕೊಂಡು ಹೋಗಬೇಕು ಎನ್ನುವ ಆಲೋಚನೆ ನಮ್ಮಲ್ಲಿ ಯಾರಿಗೂ ಬರುವುದಿಲ್ಲ.

ಡಾ ಅಂಬೇಡ್ಕರ್‌ರಂತೆ ಬದುಕಬೇಕು ಅನ್ನುವವರು ಇಲ್ಲ. ಭರಣಯ್ಯನವರು ಹಾಕಿಕೊಟ್ಟ ಮಾರ್ಗಗಳಲ್ಲಿ ಮುನ್ನಡೆಯುವವರ ಕೊರತೆ ಇದೆ. ಜೊತೆಗೆ ಇದಕ್ಕೆ ಬೇಕಾದಷ್ಟು ಕಾರಣಗಳಿವೆ. ಒಬ್ಬನ ಆರ್ಥಿಕ ಸ್ಥಿತಿ ಎಷ್ಟೇ ಚೆನ್ನಾಗಿದೆ ಅಂದರೂ ಕೂಡ ಅವನು ಪೂರ್ಣವಾದ ಆತ್ಮತೃಪ್ತಿಯಿಂದ ಇರುವ ಸರ್ಕಾರಿ ಅಧಿಕಾರಿ ಯಾರಾದರೂ ಇದ್ದಾರಾ ಅಂತ ನಾನು ಆಗಾಗ ಆಲೋಚನೆ ಮಾಡುತ್ತಿರುತ್ತೀನಿ. ಅಂತಹ ಸನ್ನಿವೇಶ ಬಂದಿದೆ ಈಗ. ಕಾರಣ ಇಷ್ಟೆ– ಎಷ್ಟು ಬಂದರೂ ಕೂಡ ಇನ್ನೂ ನನಗೆ ಬರಬೇಕು ಎನ್ನುವ ಆಸೆ, ಅದಾದ ಮೇಲೆ ಅತಿ ಆಸೆ. 1950ನೇ ಇಸವಿಯಲ್ಲಿ ನಮಗೆ 100ರೂ. ಸಂಬಳ. ಅದರಲ್ಲಿ ಮನೆ ಬಾಡಿಗೆಗೆ 25ರೂ. ಹೋಗುತ್ತಿತ್ತು. ಉಳಿದ್ದಿದ್ದರಲ್ಲಿ ತಿಂಗಳ ಇಡೀ ಸಂಸಾರದ ಖರ್ಚನ್ನೆಲ್ಲ ತೂಗಿಸುತ್ತಿದ್ದೆವು. ಅಂತಹ ಕಾಲದಲ್ಲೂ ನಾವು ಜೀವನ ಮಾಡಿಕೊಂಡು ಬಂದೆವು. ಅದು ಹೇಗೆ ಸಾಧ್ಯವಾಯಿತು ಅಂದರೆ ನಾವು ಇಲ್ಲದ್ದನ್ನು ಬಯಸಲು ಹೋಗಲಿಲ್ಲ, ಇದ್ದುದರಲ್ಲೇ ತೃಪ್ತಿ ಪಟ್ಟುಕೊಂಡೆವು. ಅವನಿಗೆ ಅಷ್ಟಿದೆ ನಮಗಿಲ್ಲವಲ್ಲ ಎನ್ನುವ ಸಂಕಟ ನಮಗೆ


ಬರಲೇ ಇಲ್ಲ. ಆ ಸಂತೃಪ್ತಿಯ ಧ್ಯೇಯವೇ ನಮ್ಮನ್ನು ಈ ಮಟ್ಟಕ್ಕೆ ತೆಗೆದುಕೊಂಡುಬಂದಿದೆಯೇ ಹೊರತು ಬೇರೆ ಇನ್ನಾವುದೂ ಅಲ್ಲ.

ವರ್ತಮಾನದಲ್ಲಿ – ಭರಣಯ್ಯನವರನ್ನು ಹೇಗೆ ನೆನಪುಮಾಡಿಕೊಳ್ಳೋಣ ಸರ್?

ಕೇವಲ ಇಂದಿಗೆ ಮಾತ್ರ ಅಂತ ಅಲ್ಲ ಅವರನ್ನು ಸದಾ ನೆನಪಿಟ್ಟುಕೊಳ್ಳಬೇಕು. ಅವರು ಒಬ್ಬ ಮಾದರಿ ಪುರುಷ. ಅದರಲ್ಲಿ ಯಾವ ದೃಷ್ಟಿಯಿಂದಲೂ ಕೂಡ ಅನುಮಾನ ಇಲ್ಲ. ಆದರೆ ಇವತ್ತಿನ ಸನ್ನಿವೇಶದಲ್ಲಿ ಆರ್. ಭರಣಯ್ಯನವರಂತಹ ಉತ್ತಮ ಕೆಲಸ ಮಾಡುವ ಜನ ಇದ್ದಿದ್ದರೆ ಬಹುಶಃ ಅವರನ್ನು ಇರಲಿಕ್ಕೆ ಬಿಡುತ್ತಿದ್ದರೋ ಇಲ್ಲವೋ ಅಂತ ಅನ್ನಿಸುತ್ತೆ ನನಗೆ. ಆ ಆಧಾರದಲ್ಲೇ ಆರ್. ಭರಣಯ್ಯನವರನ್ನು ತೆಗೆದುಕೊಳ್ಳೋಣ. ಅವರು ಇದುವರೆಗೂ ಬದುಕಿದ್ದಿದ್ದರೆ ಎರಡು ಆಯ್ಕೆಗಳಿರುತ್ತಿದ್ದವು ಅವರ ಮುಂದೆ– ಒಂದು ಅವರ ಕೆಲಸಕ್ಕೆ ರಾಜಿನಾಮೆ ಕೊಟ್ಟು ಮನೆಯಲ್ಲಿರಬೇಕಿತ್ತು. ಅಥವಾ ಅವರೂ ಇತರೆಯವರೆಲ್ಲ ಹೇಗೆ ಕಲೆಕ್ಷನ್ ಮಾಡಿಕೊಂಡು ಜೀವನ ಮಾಡುತ್ತಾರೊ ಹಾಗೆ ಮಾಡಬೇಕಾಗಿತ್ತು. ಇದು ಅನಿವಾರ್ಯವಾಗುತ್ತಿತ್ತು ಅವರಿಗೆ. ಆದರೆ ಅವರು ಬಹುಶಃ ಇದ್ದಿದ್ದರೆ ಖಂಡಿತ ಕೆಲಸಕ್ಕೆ ರಾಜಿನಾಮೆ ಕೊಡುತ್ತಿದ್ದರೇ ಹೊರತು ತಮ್ಮ ನಿಷ್ಠೆ, ಧ್ಯೇಯವನ್ನು ಅವರು ಬದಲಾಯಿಸಿಕೊಳ್ಳುತ್ತಿರಲಿಲ್ಲ. ಕಾರಣ ಇಷ್ಟೆ. ಒಬ್ಬ ಒಳ್ಳೆಯ ಮನುಷ್ಯನಿಗೆ ತನ್ನ ಧ್ಯೇಯವನ್ನು ಬದಲಾಯಿಸಿಕೊಳ್ಳುವುದು ಬಹಳ ಕಷ್ಟ. ಕಷ್ಟಕ್ಕಿಂತಲೂ ಸಂಕಟವನ್ನು ಹಂಚಿಕೊಂಡು ತಿನ್ನುವುದೇ ವಾಸಿ ಎಂದು ತಿಳಿದು ಬದುಕಿದವರು ಅವರು.

ಇದರಲ್ಲಿ ನಾನು ಯಾವುದೇ ಒಳಗೊಂದು ಹೊರಗೊಂದು ಭಾವ ಇಲ್ಲದೆ, ದುರ್ಭಾವ ಇಲ್ಲದೆ ಒಂದೇ ಚಿತ್ತದಿಂದ, ಸಮ ಭಾವದಿಂದ ನನ್ನಲ್ಲಿರುವ ವಿಚಾರಗಳನ್ನು ತಮ್ಮೆದುರು ತೆರೆದಿಟ್ಟಿದ್ದೇನೆ. ನಾನು ಕಂಡಂತಹ ವಿಷಯಗಳನ್ನು ನೇರವಾಗಿ ಹೇಳಿದ್ದೇನೆ. ಈ ಕಾರಣಕ್ಕಾಗಿಯೇ ನನ್ನನ್ನು ನಮ್ಮ ಜನ ಯಾರೂ ಕೂಡ ಯಾವುದಕ್ಕೂ ಕರೆಯುವುದಿಲ್ಲ. ಕಾರಣ ಇಷ್ಟೆ: ನಾನು ಏನೇ ಇದ್ದರೂ ನೇರವಾಗಿ ಅವರಿಗೆ ಹೇಳಿಬಿಡುತ್ತೀನಿ. ಆ ನೇರ ಹಲವರಿಗೆ ಇಷ್ಟವಾಗುವುದಿಲ್ಲ. ಅದರ ಬಗ್ಗೆ ನನಗೆ ಏನೂ ವಿಷಾದವಿಲ್ಲ. ಒಳ್ಳೆತನವನ್ನು ಬಳಸಿಕೊಳ್ಳಬೇಕು ಎನ್ನುವ ಆಲೋಚನೆ, ಯೋಗ್ಯತೆ ಇದ್ದರೆ ಬಳಸಿಕೊಳ್ಳುತ್ತಾರೆ. ಇಲ್ಲದಿದ್ದರೆ ಇಲ್ಲ. ಅಷ್ಟೆ! ಇದು ನನ್ನ ದೃಷ್ಟಿಕೋನ.

* * *



ಸಮಾಜ ಬದ್ಧತೆಯ ದಯಾಳು

ಪಿ. ಮಹಾದೇವಯ್ಯ

ಬದ್ಧತೆಯಿಂದ ಕೆಲಸ ಮಾಡುವವರನ್ನು ಉಳಿಸಿಕೊಂಡು ಪ್ರೋತ್ಸಾಹಿಸುತ್ತಿದ್ದರು. ಸಹಕಾರ ಇಲಾಖೆಗೆ ಹೊಸತಿರುವು ನೀಡಿದರು. ಸಹಾಯ ಮಾಡುವಾಗ ತಾನು, ತನ್ನವರು, ಇತರರು ಎಂಬ ಭೇದವಿರುತ್ತಿರಲಿಲ್ಲ. ಪ್ರವಾಸ ಹೊರಟರೆ ಕೆಲಸ ಖಾಲಿ ಇರುವ ವಿವರಗಳನ್ನು ಜೊತೆಗೆ ಕೊಂಡೊಯ್ಯುತ್ತಿದ್ದರು. ಜೊತೆಗೆ ಟೈಪ್‌ರೇಟರ್ ಮತ್ತು ಒಬ್ಬ ಸಹಾಯಕರನ್ನು ಕರೆದೊಯ್ಯುತ್ತಿದ್ದರು. ಅರ್ಜಿ ಹಿಡಿದು ಬಂದವರಿಗೆ ಅವರವರ ಅರ್ಹತೆಗೆ ತಕ್ಕಂತೆ ಕೆಲಸ ಕೊಡುತ್ತ ಹೋಗುವುದು ಅವರ ಕಾರ್ಯಶೈಲಿ. ಈಗ ಅಂಥವರನ್ನು ಹುಡುಕಿಕೊಡಿ! ಇವರಿಂದ ಬಾಳಬುತ್ತಿ ಕಟ್ಟಿಕೊಂಡವರು ನಮ್ಮ ನಡುವೆ ಈಗಲೂ ಅಸಂಖ್ಯಾತರಿದ್ದಾರೆ.

ನಿವೃತ್ತ ಜಂಟಿ ನಿಬಂಧಕರು
ಸಹಕಾರ ಇಲಾಖೆ – ಬೆಂಗಳೂರು



ಸಮಾಜ ಬದ್ಧತೆಯ ದಯಾಳು

ಪಿ. ಮಹಾದೇವಯ್ಯ

ತಮ್ಮ ಪರಿಚಯ ಮಾಡಿಕೊಡಿ.

ನಾನು ಮಹದೇವಯ್ಯ ಅಂತ. ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದವನು. ಭರಣಯ್ಯನವರ ಹೆಂಡತಿ ನಮ್ಮ ಗ್ರಾಮದವರೇ. ನಮ್ಮ ಸಂಬಂಧಿಕರೇ. ನಮ್ಮ ಮಿಸೆಸ್ ದೊಡ್ಡಮ್ಮ ಅವರು. ನಮ್ಮ ಅತ್ತೆ ಎರಡನೆಯವರು. ನಾನು ಓದಿದ್ದು ಮದ್ರಾಸ್. ಕೊಯಮತ್ತೂರಿನಲ್ಲಿ ಬಿ.ಎ. ತನಕ. ನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ.

ಆರ್. ಭರಣಯ್ಯನವರ ಬಗ್ಗೆ ತಮ್ಮ ನೆನಪುಗಳನ್ನು ಹಂಚಿಕೊಳ್ತಿರಾ?

ಆಗಲಿ, ರಾಜ್ಯ ಪುನರ್ವಿಂಗಡನೆ ಆದಾಗ ನಮ್ಮ ತಾಲ್ಲೂಕು ಮೈಸೂರಿಗೆ ಸೇರಿತು. ಆವಾಗಿನಿಂದಲೂ ಆರ್. ಭರಣಯ್ಯನವರ ಬಗ್ಗೆ ಚೆನ್ನಾಗಿ ತಿಳಿದಿದ್ದೆವು. ಭರಣಯ್ಯನವರಿಗೆ ಇವರು ಮೂರನೇ ಹೆಂಡತಿ. ಮೊದಲನೆಯವರು ಕೊಳ್ಳೇಗಾಲ ತಾಲ್ಲೂಕಿನ ಕಾಮಗೆರೆಯವರು. ಒಂದು ವರ್ಷ ಆಗಿದ್ದಂಗೆ ತೀರಿಕೊಂಡರು. ಎರಡನೆಯವರು ಸೋಸಲೆಯವರು. ಮೂರನೆಯವರು ಈಗಿರುವವರು ಶಾಂತಮ್ಮ ಅಂತ. ಈಗಿನವರನ್ನು ಮದುವೆ ಆಗುವಾಗ ಜೋತಿಷ್ಯ ಹೇಳಿದ್ದರಂತೆ ಒಬ್ಬರು ಕಳ್ಳಿಗಿಡಕ್ಕೆ ತಾಳಿ ಕಟ್ಟಿ ಆಮೇಲೆ ಇವರಿಗೆ ತಾಳಿ ಕಟ್ಟಿ ಇಲ್ಲದಿದ್ದರೆ ಮೊದಲಿನ ಹಾಗೇ ಆಗುತ್ತೆ ಅಂತ. ಆ ರೀತಿ ಮದುವೆ ಆಯಿತು. ಶಾಂತಮ್ಮನವರು ಬಂದಮೇಲೆ ಅವರ ಮನೆ ಬಹಳ ವಿಜೃಂಭಣೆಯಿಂದ ಪ್ರಗತಿ ಆಯಿತು.

ಆರ್. ಭರಣಯ್ಯನವರು ಹಳ್ಳಿಗೆ ಬರುತ್ತಿದ್ದಾಗ ಎಲ್ಲ ಮಕ್ಕಳನ್ನೂ ಕರೆದು ಕೂರಿಸಿಕೊಂಡು ನಿಮ್ಮಲ್ಲಿ ವಿದ್ಯಾವಂತರು ಎಷ್ಟು ಜನ ಇದ್ದೀರಿ? ಅಂತ ಕೇಳುತ್ತಿದ್ದರು. ಯಾವ ಉದ್ಯೋಗ ಮಾಡುತ್ತಿದ್ದೀರಿ ಅಂತ ಕೇಳುತ್ತಿದ್ದರು. ಇದು ಅವರ ಅಭ್ಯಾಸ. ಆಮೇಲೆ ನಾನು ಎಂ.ಎ. ಮುಗಿಸಿಕೊಂಡು ಇಲ್ಲಿಗೆ ಬಂದಮೇಲೆ ನಾನು ಅವರ ಸಲಹೆ ಮೇರೆಗೆ ನಮ್ಮವರನ್ನು ಮದುವೆ ಆಗಿದ್ದು. ನಾನಿಲ್ಲಿ ಐ.ಎ.ಎಸ್. ಕೋಚಿಂಗ್‌ಗೆ ಹೋಗುತ್ತಿದ್ದೆ. ಎಂ.ಜಿ. ರೋಡಿನ ಸಂಸ್ಥೆಯೊಂದಕ್ಕೆ. ಹಾಗೆ ಒಂದು ಸಲ ಸಾಹೇಬರು ಅಲ್ಲಿಗೆ ಬಂದರು. ಎಲ್ಲರನ್ನೂ ಕೂರಿಸಿಕೊಂಡು ಊರು ಕೇರಿ ಇತ್ಯಾದಿ ಕೇಳತೊಡಗಿದರು. ಆವಾಗ ನಾನು ಸೆಂಟ್ರಲ್ ಎಕ್ಸೈಜ್‌ಗೆ ಆಯ್ಕೆ ಆಗಿದ್ದೆ. ನಮ್ಮನ್ನೆಲ್ಲ ಭರಣಯ್ಯನವರು ನಮ್ಮ ಮನೆಗೆ ಬನ್ನಿ ಅಂತ ಕರೆದರು. ಆಗಾಗ ಹೋಗುತ್ತಿದ್ದರೂ ಅಷ್ಟು ಪರಿಚಯ ಇರಲಿಲ್ಲ. ಸ್ವಂತ ಎಂದೂ ಹೇಳಿಕೊಂಡಿರಲಿಲ್ಲ ನಾನು. ಹಾಗೆ ಇರುವಾಗ ಒಂದು ಸಾರಿ ನಮ್ಮ ಮಿಸೆಸ್ ಅಪ್ಪ ಆರ್. ಭರಣಯ್ಯನವರ ಮನೆಗೆ ಬಂದಿದ್ದರು. ಆಗ ಅಲ್ಲಿ ಅವರು ನನ್ನನ್ನ ನೋಡಿ ಇವರು ನಮ್ಮವರೇ ಅಂತ ಹೇಳಿದರು. ಹೀಗೆ ಅವರಿಗೆ ಹತ್ತಿರವಾದೆ.

ನಂತರ ನನಗೆ ಕೆ.ಎ.ಎಸ್. ಬರೆಯುವ ಬಯಕೆ ಇತ್ತು. ಪರೀಕ್ಷೆ ಕಟ್ಟಿದೆ. ಅದಕ್ಕಿಂತ ಮುಂಚೆ ನನ್ನ ವಿದ್ಯಾರ್ಹತೆಗೆ ಸೂಕ್ತವಾದ ಒಂದು ಹುದ್ದೆ ನೀಡಿದರು. ಇಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಆಗಿ ಸೇರಿದೆ. ಆಮೇಲೆ 5 – 6 ತಿಂಗಳ ನಂತರ ಸೆಂಟ್ರಲ್ ಎಕ್ಸೈಜ್‌ಗೆ ಒಂದು ಆರ್ಡರ್ ಬಂತು. ಆಗ ಭರಣಯ್ಯನವರು ಏನು ಹೇಳಿದರು ಅಂದರೆ "ಸೆಂಟ್ರಲ್‌ಗೆ ಹೋದರೆ ಆಲ್ ಇಂಡಿಯಾ ಕೋರ್ಸು. ನಿಮ್ಮನ್ನ ಎಲ್ಲಾದರೂ ಹಾಕಿಬಿಡ್ತಾರೆ" ಅಂದರು. ಇವರು

ಆಗ ಕಮೀಷನರ್ ಫಾರ್ ಸೆಂಟರ್ ಕೋ ಆಪರೇಟಿವ್ ಆಗಿದ್ದರು. ಆವಾಗ ಒಬ್ಬರು ನನ್ನ ಸೀನಿಯರ್ಸ್‌ಗೆ ಹೇಳಿ "ಈ ಹುಡುಗ ಬಿಟ್ಟುಹೋಗ್ತಾನೆ, ಅದಕ್ಕೆ ಆಸ್ಪದ ಕೊಡಬೇಡಿ. ಈ ಸ್ಟೇಟಲ್ಲೇ ಇದ್ದರೆ ಬೇಗ ಮೇಲಕ್ಕೆ ಬರುತ್ತಾನೆ. ಬೇಗ ಬಡ್ತಿ ಸಿಗುತ್ತೆ. ಅಲ್ಲಿ ಹೋದರೆ ಏನೋ ಹೇಗೋ. ಇಲ್ಲಿನ ಜನಕ್ಕೆ ಏನೂ ಉಪಯೋಗ ಆಗುವುದಿಲ್ಲ. ಅಂತ ಹೇಳಿ ನನ್ನ ರಿಟೈನ್ ಮಾಡಿಸಿದರು. ನಾನು ಐಎಎಸ್ ಬರೆದಾಗಲೂ ಡೆಪ್ಯೂಟಿ ರಿಜಿಸ್ಟ್ರಾರ್‌ಗೆ ಬಂತು. ಆವಾಗಲೂ ಇವರು ಬಿಡಲಿಲ್ಲ. 'ನೋಡಪ್ಪ, ಇಲ್ಲೇ ಇರು. ಪ್ರಮೋಷನ್ ಕೂಡ ಸಿಗುತ್ತೆ,. ನಾವೆಲ್ಲ ಇರುತ್ತೀವಿ ಇಲ್ಲಿ' ಅಂದುಬಿಟ್ಟು, ನಮ್ಮ ಹೆಂಗಸರು, ನಮ್ಮ ಮಾವ ಎಲ್ಲರಿಗೂ ಹೇಳಿಬಿಟ್ಟರು, ಇಲ್ಲೇ ಇರಿಸಿಕೊಳ್ಳಿ, ಬೇರೆ ಕಡೆ ಹೋಗುವುದು ಬೇಡ ಅಂತ ಹೇಳಿದರು. ನಾನು ಆಯಿತು ಅಂದೆ. ಮತ್ತೆ ನಾನು ಅವರಜೊತೆ ಹೋಗ್ತಾ ಬರ್ತಾ ಇರತೊಡಗಿದೆ. ಹೀಗೆ ಇರಬೇಕಾದರೆ ಅವರ ಒಂದೊಂದು ಗುಣಗಳೂ ಗೊತ್ತಾದವು. ಅವರ ರೀತಿ ಏನು ಅಂದರೆ ಯಾವ ಜಾತಿಯೇ ಆಗಲಿ, ತಂದೆ ತಾಯಿ ಯಾರೇ ಆಗಲಿ, ಬಂಧು ಬಳಗ ಹೀಗೆ ಬಹಳ ಬಾಂಧವ್ಯ ಬೆಳೆಸಿಕೊಂಡಿದ್ದರು. ಅವರು ಹಿಂದೆ ಮಾತಾಡುತ್ತಿದ್ದ ವಾಕ್ಯಗಳನ್ನು ನೆನಸಿಕೊಂಡರೆ ನನಗೆ ಈಗ ಅಳು ಬರುತ್ತೆ. ಅಂಥ ತಾಯ್ತನದ ವ್ಯಕ್ತಿತ್ವ ಅವರದು. ಒಂದು ಸಲ ಮನೆಗೆ ಒಬ್ಬರು ಲಿಂಗಾಯಿತರು ಬಂದರು. ಆ ಹುಡುಗ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ.

"ನಿಂದು ಯಾವ ಊರಪ್ಪ?" ಎಂದರು.

"ನಂದು ನಿಮ್ಮ ಪಕ್ಕದ ಊರೇ ಸರ್' ಎಂದ ಅವನು. ಯಾರ ಮಗ ನೀನು? ಎಂದರು. ಅದಕ್ಕೆ ಅವನು My father is an insignificant sir ಅಂದ. ಆವಾಗ ಇವರು ಯಾವನಯ್ಯಾ ನೀನು ತಂದೆಯನ್ನೇ insignificant ಅಂತೀಯಲ್ಲ. ಅವರಿಗೆ ಹುಟ್ಟಿರುವವನು ನೀನು. Insignificant ಅಂದರೆ ಏನರ್ಥ. ಅವರು ಪ್ರಪಂಚದಲ್ಲೇ ಇಲ್ಲವಾ? ಅವರಿಗೆ 10–15 ಎಕರೆ ನೀರಾವರಿ ಜಮೀನು ಇದೆ. ಇಷ್ಟು ಇದ್ದುಕೊಂಡೂ insignificant ಅಂತೀಯಲ್ಲ, my father is also an insignificant in that case. ಅವರೇನಾಗಿದ್ದರು? ಅವರಿಗೆ ಸ್ವಲ್ಪ ಆಸ್ತಿ ಇತ್ತು ಸೋಮನಾಥಪುರದಲ್ಲಿ ಆದರೆ ವಿದ್ಯಾವಂತರಲ್ಲ. ನಾನು ಓದಿಕೊಂಡು ದೊಡ್ಡ ಆಫೀಸರ್ ಆಗಿಲ್ವಾ? ಅವರಿಂದ ಬಂದವನು ನೀನು ಈಗ ಕೆಲಸಕ್ಕೆ ಸೇರಿಲ್ಲವಾ? ಅಂಥ ತಂದೆಯನ್ನು ನೀನು insignificant ಅಂತೀಯಲ್ಲ ಯಾವನಯ್ಯಾ ನೀನು ಅಂಥ ಚೆನ್ನಾಗಿ ಬೈದರು ಅವನಿಗೆ".

ಕಡೆಗೆ ಆ ಬೇಜಾರಿನ ನಡುವೆಯೂ ನಿನಗೆ ಏನಾಗಬೇಕಿತ್ತು ಅಂತ ಕೇಳಿದರು. ಆತ 'ಸರ್ ನನಗೆ ಹೆಚ್.ಡಿ. ಕೋಟೆಗೆ ಹಾಕಿದಾರೆ. ಮೈಸೂರಿನಲ್ಲಿ ಪೋಸ್ಟಿಂಗ್

ಆಗಬೇಕು ಸರ್' ಅಂದ. ಈ ದೊಡ್ಡ ಕೆಲಸಕ್ಕೆ ನೀನು ತಂದೆಯನ್ನು insignificant ಅಂದೆಯಲ್ಲಯ್ಯ ಅಂತ ಹೇಳಿ ವಿಷಾದಪಟ್ಟುಕೊಂಡರು. ನಂತರ ಫೋನ್ ತೆಗೆದುಕೊಂಡು ಆತ ಹೇಳಿದ ಇಲಾಖೆಯ ಡಿಪಾರ್ಟ್‌ಮೆಂಟ್ ಹೆಡ್‌ಗೆ ಫೋನ್ ಮಾಡಿ ಅವನನ್ನು ಮೈಸೂರಿಗೆ ಹಾಕಿಸಿಕೊಟ್ಟರು.

ಮತ್ತೆ ಅವರ ಇನ್ನೊಂದು ದೊಡ್ಡ ಗುಣ ಏನು ಅಂದರೆ ಅವರು ಎಲ್ಲಿಗಾದರೂ ಟೂರ್ ಹೋದರೆ ಸ್ಟೆನೋ, ಟೈಪ್‌ರೈಟರ್, ಎಲ್ಲವನ್ನೂ ಕರೆದುಕೊಂಡು ಹೋಗುತ್ತಿದ್ದರು. ನಾನೇ ನೋಡಿದ ಪ್ರಕಾರ ಮೈಸೂರಿನ ಚಾಮುಂಡಿ ಗೆಸ್ಟ್‌ಹೌಸಿನಲ್ಲಿ ಬಂದಾಗ ಅವರನ್ನು ಕಾಣಲು ಗುಂಪು ಗುಂಪೇ ಬರುತ್ತಿತ್ತು. ಎಲ್ಲ ಬೇರೆ ಜಾತಿಯವರು. ನಮ್ಮ ಜಾತಿಯವರು ಗೇಟ್‌ನಿಂದ ಹೊರಗೆ ನಿಲ್ಲುತ್ತಿದ್ದರು. ಲಿಂಗಾಯಿತರು, ಗೌಡರು ಎಲ್ಲ ಅವರ ಬೆಡ್ ರೂಮ್ ತನಕ ಹೋಗುತ್ತಿದ್ದರು. ಅಂದರೆ ನಮ್ಮವರಿಗೆ ಇವರು ದೊಡ್ಡವರು, ಏನೋ ಹೇಗೋ ಅನ್ನುವ ಭಯ.! ಆದರೆ ಎಲ್ಲರನ್ನು ಸಮೀಪ ಕರೆಸಿಕೊಂಡು ಅವರಿಗೆ ಬೇಕಾದ ಕೆಲಸ ಮಾಡಿಕಳುಹಿಸುತ್ತಿದ್ದರು.

"ಆವಾಗ ಎಂಪ್ಲಾಯ್‌ಮೆಂಟ ರಿಜಿಸ್ಟರಿನಲ್ಲಿ ಕೆಲಸ ಬೇಕಾದವರು ಹೆಸರು ದಾಖಲಿಸಬೇಕಿತ್ತು. ಆಗ ಆ ಆಫೀಸಿನವರು ಒಂದು ನಂಬರ್ ಕೊಡುತ್ತಿದ್ದರು. ಅದನ್ನು ಕೊಟ್ಟರೆ ಖಾಲಿ ಇರುವ ಒಂದು ಕೆಲಸ ಸಿಗುತ್ತಿತ್ತು. ಹೀಗಾಗಿ ಭರಣಯ್ಯನವರು ಯಾರಾದರೂ ಕೆಲಸ ಬಯಸಿ ಬಂದರೆ, ನೀನು ರಿಜಿಸ್ಟರ್ ಮಾಡಿಸಿದೀಯಾ? ಇಲ್ಲವಾ? ಹಾಗಾದರೆ ನಾಳೆಯೇ ಮಾಡಿಸು. ಅನ್ನುತ್ತಿದ್ದರು. ನೋಡಿ ಇವರಿಗೆ ಎಸ್.ಡಿ.ಎ ಅಥವಾ ಎಫ್.ಡಿ.ಎ ಹೀಗೆ ಅವರ ಅರ್ಹತೆಗೆ ಯಾವ ಕೆಲಸ ಕೊಡಬಹುದು ಅದನ್ನು ಕೊಡಿ ಅಂತ ಕೆಳಗಿನ ಅಧಿಕಾರಿಗಳಿಗೆ ಹೇಳಿಬಿಡುತ್ತಿದ್ದರು. ಅವರ ಸಹಾಯಕ ವೇಕೆನ್ಸಿಗಳ ಒಂದು ಪಟ್ಟಿಯನ್ನೇ ಜೊತೆಗೆ ಹಿಡಿದುಕೊಂಡಿರುತ್ತಿದ್ದ! ಅದರಂತೆ ಕೆಲಸಗಳನ್ನು ಅವರ ಅರ್ಹತೆಗೆ ತಕ್ಕಂತೆ ನೀಡುತ್ತಿದ್ದರು. ಆ ರೀತಿಯ ಜನ ಯಾರು ಸಿಗುತ್ತಾರೆ ಈಗ?

ನೀವು ಕೆಲಸ ಮಾಡುತ್ತಿದ್ದಾಗ ಸಹಕಾರ ಇಲಾಖೆ ಕಾರ್ಯ ವಿಧಾನ ಎಲ್ಲಾ ಹೇಗಿತ್ತು?

ಆಗ ಹೌಸಿಂಗ್ ಸ್ಕೀಮ್, ಕೃಷಿ, ತೋಟಗಾರಿಕೆ ಎಲ್ಲದಕ್ಕೂ ಫೈನಾನ್ಸ್ ಮಾಡುವುದು, ಬಾವಿ ತೋಡುವುದು ಹೀಗೆ ಎಲ್ಲ ಸ್ಕೀಮ್‌ಗಳೂ ಇದ್ದವು. ಫೈನಾನ್ಸ್ ರೂಟ್‌ಔಟ್ ಮಾಡುವುದು ಹೀಗೆ ಇವೆಲ್ಲ ಕೋ-ಆಪರೇಟಿವ್ ಇಲಾಖೆಯಡಿಯಲ್ಲಿ ಬರುತ್ತಿತ್ತು. ಆದರೆ ಯಾವುದೂ ನಿಜವಾದ ಫಲಾನುಭವಿಗಳಿಗೆ ಮುಟ್ಟುತ್ತಿರಲಿಲ್ಲ. ನಾನು ಇನ್ಸ್‌ಪೆಕ್ಷನ್ನಿಗೆ ಹೋದಾಗ ಕಣ್ಣೀರು ಬರುತ್ತಿತ್ತು. ಅಕ್ಷರಶಃ ಕಣ್ಣೀರು ಹಾಕಿದ್ದೀನಿ

ನಾನು. ಆದರೆ ನನ್ನಿಂದ ಏನೂ ಮಾಡಲಾಗುತ್ತಿರಲಿಲ್ಲ ವ್ಯವಸ್ಥೆ ಹಾಗಿತ್ತು. ಏನೂ ಮಾಡಲಾಗಲಿಲ್ಲ ನಾನು. ಅಂತಹ ಇಲಾಖೆಯಲ್ಲಿ ನನ್ನನ್ನು ಉಳಿಸಿಕೊಂಡರು ಇವರು. ಆದರೆ ಇವರು ಕೆಲಸ, ಫಂಡ್ಸ್ ಎಲ್ಲಕೊಡುತ್ತಿದ್ದರು. ಅವರಿಗೆ ನನ್ನ ಮೇಲೆ ವಿಶೇಷವಾದ ಪ್ರೀತಿ, ಬಾಂಧವ್ಯ ಇತ್ತು. ಯಾವ ಡಿಪಾರ್ಟ್‌ಮೆಂಟಿಗೇ ಹೋದರೂ ನನ್ನನ್ನು ಪಕ್ಕಕ್ಕೆ ಕೂರಿಸಿಕೊಂಡು ಇವರು ನಮ್ಮವರು ಎಂದೆಲ್ಲ ಬಹಳ ಅಭಿಮಾನದಿಂದ ಹೇಳುತ್ತಿದ್ದರು. ಮತ್ತೆ ಈ ಸ್ಟ್ಯಾಂಪ್ಸ್ ಆ್ಯಂಡ್ ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಎಲ್ಲೋ ಡಿವಿಜನ್ನಿಗೆ ಒಂದೆರಡು ಪೋಸ್ಟ್ ಇರುತ್ತಿದ್ದವು ಅಷ್ಟೆ. ಆ ಇಲಾಖೆಯುಲ್ಲಿ ಬಡ್ತಿ ಅಂತ ಕಂಡುಬಂದಿದ್ದು ಇವರು ಆ ಇಲಾಖೆಗೆ ಹೋದಮೇಲೆಯೇ! ಈಗಲೂ ಎಷ್ಟೋ ಜನ ಅವರ ಫೋಟೊ ಇಟ್ಟುಕೊಂಡು ಈ ಮಹಾನುಭಾವರಿಂದ ನಮಗೆ ಎಷ್ಟೋ ವರ್ಷಗಳಿಂದ ಹೆಲ್ಡ್‌ಅಪ್ ಆಗಿದ್ದ ಇಂಕ್ರಿಮೆಂಟ್, ಪ್ರಮೋಷನ್, ಹಣಕಾಸಿನ ನೆರವು ಎಲ್ಲ ಸಿಕ್ತು' ಅಂತ ಯಾರಾದರೂ ಸಿಕ್ಕರೆ ಈಗಲೂ ಹೇಳುತ್ತಿರುತ್ತಾರೆ.

ಆದರೆ ಇವರದು ಏನು ಧಾರಾಳತ್ವ ಎಂದರೆ ಈ ಜಾತಿ – ಗೀತಿ ಎಲ್ಲ ನೋಡುತ್ತಿರಲಿಲ್ಲ ಸಹಾಯಮಾಡುವಾಗ. ಸ್ವಲ್ಪ ನಾನು, ನನ್ನವರು ಎನ್ನುವುದು ಇತ್ತು. ಆದರೆ ಎಲ್ಲರಿಗೂ ಸಹಾಯ ಮಾಡುತ್ತಿದ್ದರು. ಇನ್ನೊಂದು ವಿಷಯ ಅಂದರೆ ಒಮ್ಮೆ ಇವರ ಮನೆಗೆ ಒಬ್ಬರು ಹೊಸದಾಗಿ ಮದುವೆಯಾದವರು ಬಂದರು. ಹುಡುಗಿ ಒಬ್ಬಳು ವೇಶ್ಯೆಯ ಮಗಳು, ಹುಡುಗ ಒಬ್ಬ ಲಿಂಗಾಯಿತರವನು. ಲವ್ ಮ್ಯಾರೇಜ್ ಆಗಿಬಿಟ್ಟಿದ್ದರು ಅವರು. ಎಲ್ಲೋ ಮದುವೆ ಮಾಡಿಕೊಂಡು ಇವರಲ್ಲಿಗೆ ಬಂದಿದ್ದರು. ಆ ಹುಡುಗಿ ಪರಿಶಿಷ್ಟ ಜಾತಿಯವಳು.

ಆಮೇಲೆ ಆ ಹುಡುಗ ಲಿಂಗಾಯಿತರ ಹುಡುಗ 'ಸಾರ್, ಈ ಹುಡುಗಿ ಮಾದರಗಿತ್ತಿ ಆದರೂ ನಾನು ಮದುವೆ ಮಾಡಿಕೊಂಡೆ ಆದರೆ ಇವಳ ಗುಣ, ರೂಪ ನೋಡಿ ಅಲ್ಲ ಅಥವಾ ಬೇರೆ ಯಾವ ಕಾರಣದಿಂದಲೂ ಅಲ್ಲ. ಏನೋ ಒಂದು ಸಂದರ್ಭ ಬಂತು. ಯಾಕೆ ನಾನು ಮಾಡಿಕೊಳ್ಳಬಾರದು ಅಂತ ಧೈರ್ಯದಿಂದ ಮಾಡಿಕೊಂಡೆ' ಅಂತ ಹೇಳಿದಾಗ ಇವರಿಗೆ ಬಹಳ ಖುಷಿ ಆಯಿತು. ಮೆಲ್ಲಗೆ ಪಕ್ಕದಲ್ಲಿದ್ದ ನನ್ನನ್ನು ತಿವಿಯುತ್ತ ಹೇಳಿದರು – 'ನೋಡಿ ಇದು ಬಹಳ ಹೆಮ್ಮೆ ಪಡುವಂತಹ ವಿಚಾರ. ಯಾವ ಆಸೆ, ಆಮಿಷ ಇಲ್ಲದೆ ನಿಸ್ಪೃಹತೆಯಿಂದ ಹುಡುಗ ಮದುವೆ ಆಗಿದ್ದಾನೆ. ಒಳ್ಳೆಯದು' ಅಂದರು.

ಆದರೆ ಅಲ್ಲಿ ಸಮಸ್ಯೆ ಏನಾಗಿತ್ತು ಅಂದರೆ ಅವರ ಮನೆಯವರು, ಈ ಹುಡುಗಿ ಸ್ವಲ್ಪ ಕೆಂಪಗೆ ಮೈಕೈ ತುಂಬಿಕೊಂಡು ಚೆನ್ನಾಗಿದ್ದಾಳೆ. ಆದರೆ ಅವರ ಕುಲಬಾಂಧವರೆಲ್ಲ

ಕಪ್ಪಗಿದ್ದಾರೆ, ಇವಳು ಮಾತ್ರ ಚೆನ್ನಾಗಿದ್ದಾಳೆ, ಯಾಕೆ ಅಂತ ಕೇಳಿದರೆ ಅವಳು ಹುಟ್ಟಿರುವುದೇ ಲಿಂಗಾಯಿತರಿಗೆ. ಆ ಲಿಂಗಾಯಿತರ ಮನೆಯಲ್ಲಿ ಒಬ್ಬ ಒಕ್ಕಲಿಗ ಹುಡುಗ ಜೀತಕ್ಕಿದ್ದಾನೆ. ಅವರಿಗೆ ಆ ಒಕ್ಕಲಿಗನಿಗೆ ಇವಳನ್ನು ಮದುವೆ ಮಾಡಬೇಕು ಅಂತ ಐಡಿಯ! ಇದೆ ಒಕ್ಕಲಿಗರ ಬೀದಿಗೆ ಗೊತ್ತಾಗಿ ಈ ಹುಡುಗಿಯನ್ನು ಮತ್ತು ಆ ಲಿಂಗಾಯಿತರ ಹುಡುಗನನ್ನು ಸಾಯಿಸಲು ಊರಿಗೆ ಊರೇ ಎದ್ದುಬಂದಿದ್ದಾರೆ' ಎಂದ. ಅದನ್ನು ತಾಳಲಾಗದೆ ಇವರು ಭರಣಯ್ಯನವರ ಹತ್ತಿರ ಸಹಾಯಕ್ಕೆ ಬಂದಿದ್ದರು.

ಆಗ ಇವರು 'ನಿಮಗೆ ಏನೂ ತೊಂದರೆ ಇಲ್ಲದಿದ್ದಹಾಗೆ ನಾನು ಮಾಡುತ್ತೀನಿ. ಭಯಪಡಬೇಡಿ' ಅಂತ ಹೇಳಿದರು. ತಕ್ಷಣ ಡಿ.ಸಿ.ಗೆ ಫೋನ್ ಮಾಡಿ, 'ಇವರಿಗೆ ರಕ್ಷಣೆ ಕೊಡಿ ಇಲ್ಲದಿದ್ದರೆ ತೊಂದರೆ ಆಗುತ್ತೆ' ಅಂತ ಹೇಳಿದರು. ಆಗ ಡಿ.ಸಿ. ಮೂಲಕ ಆ ಹುಡುಗನ ತಂದೆಯನ್ನು ಕರೆಸಿದರು. ಜೀತಕ್ಕೆ ಇಟ್ಟುಕೊಂಡಿದ್ದವನನ್ನೂ ಕರೆಸಿದರು. ಆಮೇಲೆ ನ್ಯಾಯ ಪಂಚಾಯಿತಿಯ ಮಾಡಿ ಎರಡು ದಿನ ಆ ದಂಪತಿಗಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡಿದ್ದರು. ನಂತರ ಅವರಿಗೆ ಧೈರ್ಯ ಹೇಳಿ ಕಳುಹಿಸಿಕೊಟ್ಟರು. ಈಗ ಇಂಥ ರಕ್ಷಣೆಗೆ ಧಾವಿಸುವವರ ಒಬ್ಬರನ್ನು ತೋರಿಸಿ.

ಮತ್ತೆ ಸ್ವಂತದಲ್ಲಿ ಯಾರಾದರೂ ಏನಾದರೂ ಕೇಳಿದರೂ ಕೂಡ ಅವರು ಇಲ್ಲ ಅಂತ ಹೇಳುತ್ತಲೇ ಇರಲಿಲ್ಲ. ಅವರಿಗೆ ಜ್ಯೋತಿಷಿಗಳು ಮತ್ತು ಬ್ರಾಹ್ಮಣರನ್ನು ಕಂಡರೆ ತುಂಬಾ ಪ್ರೀತಿ ಇತ್ತು. ಅವರಿಗೂ ಜ್ಯೋತಿಷ್ಯ ಗೊತ್ತಿತ್ತು. ಸಂಸ್ಕೃತ ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಆ ಕಾಲದಲ್ಲಿ ಬ್ರಾಹ್ಮಣೇತರ ಒಬ್ಬ ಸಂಸ್ಕೃತ ಕಲಿತರೆ ತಲೆ ಹೋಳಾಗುತ್ತೆ ಎಂಬಂತಹ ಮೌಢ್ಯತೆ ಚಾಲನೆಯಲ್ಲಿದ್ದ ಕಾಲ ಅದು. ಬ್ರಾಹ್ಮಣೇತರರು ಯಾರೂ ಸಂಸ್ಕೃತ ತೆಗೆದುಕೊಳ್ಳುತ್ತಲೇ ಇರಲಿಲ್ಲ. ಇವರಿಗೆ ಸಂಸ್ಕೃತ ಕಲಿಯಲು ಉತ್ತೇಜಿಸಿದ್ದು ಸೋಮನಾಥಪುರದಲ್ಲಿ ಒಬ್ಬ ಬ್ರಾಹ್ಮಣನೇ ಅಂತೆ. ಎಲ್ಲ ಶ್ಲೋಕ, ಮಂತ್ರ ಎಲ್ಲವನ್ನೂ ಚೆನ್ನಾಗಿ ಹೇಳುತ್ತಿದ್ದರು. ಭರಣಯ್ಯನವರ ಮನೆ ದೇವರು ಚೌಡೇಶ್ವರಿ. ಆ ಚೌಡೇಶ್ವರಿ ದೇವಿಗೆ ಒಮ್ಮೆ ಪೂಜೆ ಮಾಡಲು ಹೋದಾಗ ಇವರನ್ನು ಒಳಗೆ ಬಿಡಲಿಲ್ಲ ಪೂಜಾರಿ. ಆವಾಗ ಊರಿನವರೆಲ್ಲ ಏನು ಮಾಡಿದರು ಎಂದರೆ ಸ್ವಲ್ಪ ಜನ ಸಾಹೇಬರು ಒಳಗೆ ಹೋಗಲಿ ಅನ್ನೋದು; ಇನ್ನೊಂದಷ್ಟು ಜನ ಬೇಡ ಗಲಾಟೆ ಆಗಿಬಿಡುತ್ತೆ ಎನ್ನುವುದು ಹೀಗೆಲ್ಲ ಆಯಿತು. ಇವರು ಹೋದಮೇಲೆ ಎರಡೂ ಜಾತಿಗೂ ಗಲಾಟೆ ಆಗಿಬಿಡುತ್ತೆ ಅನ್ನುವ ಸನ್ನಿವೇಶ ಸೃಷ್ಟಿಯಾಯಿತು. ಆಗ ಸಾಹೇಬರು 'ಬೇಡ ನಾನು ಹೊರಗಡೆಯೇ ಇರುತ್ತೀನಿ ನೀವು ಪೂಜೆಮಾಡಿ ಅಂತ ಹೊರಗಡೆಯೇ ನಿಂತರು. ಆ ಸಂಸ್ಕೃತ ಶ್ಲೋಕ ಹೇಳುತ್ತಿದ್ದವನು ತಪ್ಪುತಪ್ಪು ಹೇಳುತ್ತಿದ್ದನಂತೆ. ಯಾವ

ಸಂದರ್ಭಕ್ಕೆ ಯಾವ ಮಂತ್ರ ಹೇಳಬೇಕೋ ಅದನ್ನ ಹೇಳುತ್ತಿರಲಿಲ್ಲವಂತೆ. ಇವರು ನೀವು ತಪ್ಪು ಹೇಳುತ್ತಿದ್ದೀರಿ, ಸರಿಯಾದ ಮಂತ್ರ ಇದು ಅಂತ ಅದೆಲ್ಲಿಂದಲೇ ಪುಸ್ತಕ ಎಲ್ಲ ತರಿಸಿ ತೋರಿಸಿ ಹೇಳಿದರಂತೆ.

ಇವರು ಒಮ್ಮೆ ರಾಘವೇಂದ್ರ ಸ್ವಾಮಿ ದೇವಸ್ಥಾನಕ್ಕೆ, ಮಂತ್ರಾಲಯಕ್ಕೆ ಹೋದರು. ಅಂಗಿ ಎಲ್ಲ ತೆಗೆದು ಹೋಗಬೇಕು. ನಮ್ಮಲ್ಲೂ ಒಂದೆರಡು ದೇವಸ್ಥಾನಗಳಲ್ಲಿ ಆ ಪದ್ಧತಿ ಇದೆ. ಅದು ಮೊದಲ ಬಾರಿ ಅಲ್ಲದಿದ್ದರೂ ತೆಗೆದರಂತೆ. ಆವಾಗ ಇವರು ಹೇಳಿದರಂತೆ ರಾಘವೇಂದ್ರ ಸ್ವಾಮಿ ಮುಂದೆಯೇ ಹೀಗೆ ಮಾಡುವವರು ಈ ಜನಾಂಗಕ್ಕೆ ನೀವು ಬೇರೆ ಕಡೆ ಹೇಗೆ ಸಹಾಯ ಮಾಡುತ್ತೀರ? ಇದಕ್ಕಾಗಿ ಇಷ್ಟು ದೊಡ್ಡ ಸಂಸ್ಥೆ ಕಟ್ಟಿ ಆಳುತ್ತಿರುವುದಾ? ಅಂತ ಹೇಳಿಬಂದರಂತೆ.

ಸಾಹೇಬರು ಒಮ್ಮೆ ಗುಲ್ಬರ್ಗಾಕ್ಕೆ ಹೋಗಿದ್ದಾಗ ಅಲ್ಲಿನ ದೇವಸ್ಥಾನದ ಒಳಗೆ ಬಿಡಲು ನಿರಾಕರಿಸಿದ್ದರಂತೆ. ಆಗ ಒಬ್ಬರು ಅದೇನೋ ಸಿಂಗ್ ಅಂತ ಡಿ.ಸಿ. ಆಗಿದ್ದವರು ಗುಲ್ಬರ್ಗದಲ್ಲಿ. ಅವರು ಒತ್ತಾಯಪೂರ್ವಕವಾಗಿ ಇವರನ್ನು ಕರೆದುಕೊಂಡು ಹೋಗಲು ಮಾಡಿದರಂತೆ. ಸ್ವಲ್ಪ ದೂರ ಹೋಗುತ್ತಿದ್ದಂತೆ ಮಠದ ಸ್ವಾಮಿ ಅಲ್ಲಿಗೆ ಹಗ್ಗ ತೆಗೆದುಕೊಂಡು ಬಂದು ಕುಳಿತುಬಿಟ್ಟರಂತೆ. ಅವರನ್ನ ಅಲ್ಲಿಂದ ಬೇಗ ಹೊರಗೆ ಕರೆಯಿಸಿ. ಇಲ್ಲದಿದ್ದರೆ ನಾನು ಹ್ಯಾಂಗ್ ಮಾಡಿಕೊಂಡು ಸತ್ತುಹೋಗುತ್ತೇನೆ ಅಂತ ಹೇಳಿದರಂತೆ. ಆಗ ಸಾಹೇಬರು 'ಡಿ.ಸಿ.ಯವರು ಒತ್ತಾಯ ಮಾಡಿದ್ದಕ್ಕೆ ನಾನು ಬಂದೆ. ಇಲ್ಲದಿದ್ದರೆ ಹಾಗೇ ಹೋಗುತ್ತಿದ್ದೆ. ಇಲ್ಲಿ ಬಂದರೆ ಹೊಡೆದಾಟ ಬಡಿದಾಟ ಆಗುತ್ತೆ ಅಂತ ನನಗೆ ಗೊತ್ತಿದೆ' ಅಂತ ಹೇಳಿ ಹೊರಗೆ ಬಂದರಂತೆ. ಬಂದು ಆ ಸ್ವಾಮೀಜಿಗೆ ಹೇಳಿದರಂತೆ 'ಮಾಡಿರುವುದು ತಪ್ಪಾಯಿತು. ದಯವಿಟ್ಟು ತಪ್ಪು ತಿಳಿಯಬೇಡಿ ಇನ್ನುಮೇಲೆ ನಾನಿಲ್ಲಿ ಕಾಲಿಡುವುದಿಲ್ಲ' ಅಂತ ಹೇಳಿ ವಾಪಸ್ ಬಂದರಂತೆ.

ಬೀದರ್‌ನಲ್ಲಿ ನಮ್ಮವರಿಗೂ ಮುಸ್ಲಿಮರಿಗೂ ಜಗಳ ಆದಾಗ ಬಹಳಷ್ಟು ಜನ ನಮ್ಮವರನ್ನು ಸಾಯಿಸಿಬಿಟ್ಟಿದ್ದರಂತೆ ಮುಸ್ಲಿಮರು. ಅದೂ ಏನು ಬಹಳ ಸಿಂಪಲ್ ರೀಸನ್! ಅದು ಒಂದು ಸೆಕ್ಷುವಲ್ ಅಫೇರ್. ನಮ್ಮ ಹುಡುಗಿ ಮತ್ತು ಮುಸ್ಲಿಂ ಹುಡುಗ ಇಬ್ಬರೂ ಕ್ಲಾಸ್‌ಮೇಟ್ ಅಂತೆ. ಇವರು ನ್ಯಾಯ ಮಾಡುವುದಕ್ಕೆ ಹೋದಾಗ ಇವರ ಮೈಮೇಲೆ ಏರಿ ಬಂದರಂತೆ ಮುಸ್ಲಿಮರು. ಅವರು ಏನು ಮಾಡಿದ್ದಾರೆ ಆ ಹುಡುಗಿ ಮನೆಯವರನ್ನೆಲ್ಲ ಊರುಬಿಟ್ಟು ಓಡಿಸಿಬಿಟ್ಟಿದ್ದಾರೆ. ಇವರು ಅವರ ಬಗ್ಗೆ ಕಾಳಜಿವಹಿಸಿ ಹೇಗಾದರೂ ನ್ಯಾಯಮಾಡಿ ಆ ಹುಡುಗಿ ಜೀವ ಉಳಿಸಿ ಬಾಳುವಂತೆ ಮಾಡಬೇಕು ಅಂದಿದ್ದಕ್ಕೆ ಅವರು ಮೊದಲು ಬಗ್ಗಲಿಲ್ಲ. ಅವರೇನು ಮಾಡಿದ್ದಾರೆ

ಈ ಹುಡುಗಿ ಮುಸ್ಲಿಂ ಆಗಿ ಮತಾಂತರ ಆಗಬೇಕು ಅಂತ ಹಠ ಹಿಡಿದಿದ್ದಾರೆ. ಅದಕ್ಕೆ ನಮ್ಮವರು ಒಪ್ಪುತ್ತಿಲ್ಲ. ಕಡೆಗೂ ನ್ಯಾಯ ಮಾಡಿದರಂತೆ ಇವರು – 'ನೋಡಿ ಈ ಹುಡುಗಿ ಸಾಯುವವರೆಗೂ ಎಸ್.ಸಿ. ಆಗೇ ಸಾಯುತ್ತದೆ. ಅದೇ ಕನ್ವರ್ಷನ್ ಆದರೆ ದೊಡ್ಡ ಜಾತಿಗೆ ಸೇರಿ ಈ ಹುಡುಗಿಗೆ ಒಂದು ಬಾಳುವೆ ಅಂತ ಆಗುತ್ತದಲ್ಲ ಮತ್ತೆ ಹುಡುಗಿಯೂ ಚೆನ್ನಾಗಿ ಇರುತ್ತಾಳೆ ಅಂತ ಎಲ್ಲ ಎಸ್.ಸಿ. ಜನರನ್ನೂ ಕರೆಸಿ ತಿಳಿಸಿ ಹೇಳಿದಾಗ ಒಪ್ಪಿದರಂತೆ.

ಇವರು ರಾಜಕೀಯ ಸೇರಬೇಕಾದರೆ ಇವರಾಗೇ ಬಲವಂತವಾಗಿ ಸೇರಲಿಲ್ಲ. ಆವಾಗ ರೆಡ್ಡಿ ಕಾಂಗ್ರೆಸ್ ಇಂದಿರಾ ಕಾಂಗ್ರೆಸ್ ಅಂತ ಇಬ್ಭಾಗ ಆಗಿತ್ತು. ಇವರು ಏನಾದರೂ ಇಂದಿರಾ ಕಾಂಗ್ರೆಸ್ ಸೇರಿದ್ದರೆ ಖಂಡಿತ ಆರಿಸಿಬರುತ್ತಿದ್ದರು. ಇದಕ್ಕೆ ಟಿ.ಎನ್. ನರಸಿಂಹಮೂರ್ತಿಯವರೂ ಕೂಡ ಕಾರಣ. ನಮ್ಮ ಎನ್. ರಾಚಯ್ಯನವರ ತಮ್ಮ. ಆ ಯಪ್ಪ ಏನೂ ಹೇಳದಿದ್ದರೆ ಇವರು ಇಂದಿರಾ ಕಾಂಗ್ರೆಸ್‌ಗೆ ಸೇರುತ್ತಿದ್ದರು. ಏಕೆಂದರೆ ಇಂದಿರಾ ಅವರನ್ನು ಕಂಡರೆ ಇವರಿಗೆ ಪ್ರೀತಿ. ಅವರ ಮನೆಯಲ್ಲಿ ಇವರಿಗೆ ಐ.ಎ.ಎಸ್. ಸಿಕ್ಕಿದಾಗ ಅವರಿಗೆ ಸತ್ಕರಿಸುತ್ತಿರುವ ಫೋಟೊ ಇದೆ.

ರೆಡ್ಡಿ ಕಾಂಗ್ರೆಸ್‌ನಲ್ಲಿ ಲಿಂಗಾಯಿತರು ಜಾಸ್ತಿ. ಇವರು ಅಪ್ರೋಚ್ ಮಾಡಿದವರೆಲ್ಲ ಲಿಂಗಾಯಿತರು. ಗೆಲ್ಲಬಹುದೇನೋ ಅಂತ ಬೈಚಾನ್ಸ್ ಒಪ್ಪಿಕೊಂಡುಬಿಟ್ಟಿದ್ದಾರೆ. ಆವಾಗ ಇಂದಿರಾ ಅಷ್ಟು ಪ್ರಖ್ಯಾತಿ ಇರಲಿಲ್ಲ. ಪ್ರಖ್ಯಾತಿ ಇದ್ದರೂ ಲೋಕಲ್ ಪಾಲಿಟಿಕ್ಸ್‌ನಲ್ಲಿ ಅವರ ಪಾರ್ಟಿ ಬರುತ್ತೆ ಅಂತ ಖಾತ್ರಿ ಇರಲಿಲ್ಲ. ಏಕೆಂದರೆ ಇಲ್ಲಿ ದೊಡ್ಡ ದೊಡ್ಡ ಲೀಡರ್ಸ್ ಎಲ್ಲ ರೆಡ್ಡಿ ಕಾಂಗ್ರೆಸ್ ಸೇರಿಕೊಂಡಿದ್ದರು. ಅದಕ್ಕೆ ಇವರು ಏನು ಮಾಡಿದ್ದಾರೆ ಎಂದರೆ ಬರುತ್ತೆ ಬಿಡಿ ಅಂತ ಸೇರಿಕೊಂಡರು. ಇವರ ವಿರುದ್ಧ ನಿಂತವರು ಸಿದ್ಧಮಾದಯ್ಯ ಅಂತ. ಅವರಿಗೆ ಅಕ್ಷರವೇ ಗೊತ್ತಿಲ್ಲ, ಹೆಬ್ಬೆಟ್ಟಿನ ಜನ. ಆದರೂ ಅವರನ್ನು ಗೆಲ್ಲಿಸಿಬಿಟ್ಟರು. ಇವರಿಗೆ ಸೋಲಾಯಿತು. ಸೋಲಿಸಿದವರೇ ನಮ್ಮವರು.

ಆಮೇಲೆ ಅವರು ಎಲೆಕ್ಟ್ ಆದರು. ಆಗ ಇವರ ದೊಡ್ಡ ಗುಣ ನೋಡಿ. ಆ ತಾಲ್ಲೂಕು ಆಫೀಸ್ ಎದುರುಗಡೆ ಇದ್ದ ಸಿದ್ದಮಾದಯ್ಯನನ್ನು ಇವರೇ ಹುಡುಕಿಕೊಂಡು ಹೋಗಿ ಒಂದು ದೊಡ್ಡ ಹೂವಿನಹಾರವನ್ನು ಇವರ ದುಡ್ಡಿನಲ್ಲೇ ತೆಗೆದುಕೊಂಡು ಹೋಗಿ ಅವನಿಗೆ ಹಾಕಿ "ನೀವು ನಮ್ಮವರು, ನೀವು ಬೇರೆಯವರಲ್ಲ,. ನೀವು ಈ ಕ್ಷೇತ್ರಕ್ಕೆ ಬೇಕಾದವರು. ಅದಕ್ಕಾಗಿಯೇ ನಿಮ್ಮನ್ನು ಎಲೆಕ್ಟ್ ಮಾಡಿದ್ದಾರೆ. ನಾನು ಅದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಚೆನ್ನಾಗಿ ಕೆಲಸ ಮಾಡಿ.' ಅಂತ ಹೇಳಿ ಶೇಕ್‌ಹ್ಯಾಂಡ್ ಕೊಟ್ಟು ಬಂದರು. ಇವತ್ತಿನ ಕಾಲದಲ್ಲಿ ಹಾಗೆ ಯಾವ ರಾಜಕಾರಣಿ ಮಾಡುತ್ತಾರೆ, ಅಂತಹ ನಿಷ್ಕಲ್ಮಶ ಗುಣವನ್ನು ಬೇರೆ ಯಾರಲ್ಲೂ ಕಾಣಲಿಲ್ಲ ನಾನು.

ಇವರು ಆ ಚುನಾವಣೆಗೆ ನಿಲ್ಲದಿದ್ದರೆ ಇನ್ನೂ ಬಹಳ ಕಾಲ ಬದುಕುತ್ತಿದ್ದರೇನೋ ಅಂತ ಅನ್ನಿಸುತ್ತೆ ನನಗೆ. ಅಲ್ಲಿ ಸೋತಿದ್ದು ಒಂದು ಏಟು. ಆವಾಗ ರಿಟೈರ್ಡ್ ಆಗಿಬಿಟ್ಟಿದ್ದರು, ಚುನಾವಣೆಯ ಸೋಲೇ ಅವರ ಸಾವಿಗೆ ಕಾರಣವಾಯಿತೋ ಅನ್ನಿಸುತ್ತೆ ನನಗೆ.

"ಅವರಿಗೆ ಬಹಳ ದೈವಭಕ್ತಿ ಇತ್ತು. ಅವರನ್ನು ಕೆಟ್ಟವರು ಅಂತ ಹೇಳಿಕೊಳ್ಳೋಕೆ ಒಂದು ಸಂದರ್ಭವೂ ಜನಕ್ಕೆ ಸಿಗಲಿಲ್ಲ. ಆದರೆ ಈ ಜಾತಿಯಲ್ಲಿ ಹುಟ್ಟಿರುವುದೇ ಅವರದ್ದು ತಪ್ಪಾಯಿತು. ಆ ಥರದ ವ್ಯಕ್ತಿತ್ವ, ವಿದ್ಯಾವಂತ, ಪ್ರತಿಭೆ ಇತ್ತು. ಬೇರೆ ಕಮ್ಯುನಿಟಿಯಲ್ಲಿ ಹುಟ್ಟಿದ್ದರೆ ಎಷ್ಟು ಸ್ಮಾರಕಗಳು ನಿರ್ಮಾಣವಾಗುತ್ತಿದ್ದವೋ?

ಈಗ ಏನಾಗಿದೆ ದೇಶ ನಡೆಯುತ್ತಿರುವುದೇ ಶಾಸ್ತ್ರದ ಮೇಲೆ ಅಂತ ಆಗಿಬಿಟ್ಟಿದೆ. ಒಂದೊಂದು ಟಿ.ವಿ. ಚಾನಲ್‌ನಲ್ಲೂ ಒಬ್ಬೊಬ್ಬ ಜ್ಯೋತಿಷಿ ಬರುತ್ತಾರೆ. ಆ ದೇವಸ್ಥಾನಕ್ಕೆ ಹೋಗಿ, ಅಲ್ಲಿ ಹೋಗಿ, ಇಲ್ಲಿ ಹೋಗಿ ಎನ್ನುತ್ತಾರೆ. ಅದೇ ದೇವರು ನಾವಿರುವಲ್ಲೇ ಇರುವುದಿಲ್ಲವೇ? ಬಡವರೆಲ್ಲ ವಿಪರೀತ ದುಡ್ಡು ಖರ್ಚುಮಾಡಿಕೊಂಡು ಅಲ್ಲಿಗೆ ಹೋಗುವುದಕ್ಕಾಗುತ್ತದೆಯೇ? ಈ ರೀತಿ ಅನಾರೋಗ್ಯಕರ, ಅವೈಜ್ಞಾನಿಕ ಬೆಳವಣಿಗೆಗಳು ಈಗ ಅತಿಯಾಗಿವೆ.

ಭರಣಯ್ಯನವರಿಗೆ ವೈಯಕ್ತಿಕ ಜೀವನದಲ್ಲಿ ಯಾವ ಕೆಟ್ಟ ಅಭ್ಯಾಸಗಳು ಏನೂ ಇರಲಿಲ್ಲ. ಮಕ್ಕಳೊಂದಿಗಿನ ಅವರ ಬಾಂಧವ್ಯವೂ ಚೆನ್ನಾಗಿತ್ತು. ಹುಟ್ಟೂರಿನಲ್ಲೂ ಯಾವ ವೈರತ್ವವೂ ಇರಲಿಲ್ಲ. ಬರೀ ಸಹಾಯ ಮಾಡುವುದೇ ಕೆಲಸ ಅವರಿಗೆ.

ನೀವು ವೈಯಕ್ತಿಕವಾಗಿ ಯಾವ ಕಾರಣಕ್ಕೆ ಅವರನ್ನು ಸದಾ ನೆನಪಿಸಿಕೊಳ್ಳುತ್ತೀರಿ?

ಅವರ ದಾರಾಳತ್ವ, ದಯಾಳು ಬುದ್ಧಿ ಇದನ್ನೆಲ್ಲ ನನಗೆ ಮರೆಯುವುದಕ್ಕೇ ಸಾಧ್ಯವಿಲ್ಲ. ಅಷ್ಟು ಮಾತ್ರ ಅಲ್ಲ ಇಂದಿನ ಹೊಸ ಪೀಳಿಗೆ ಅಳವಡಿಸಿಕೊಳ್ಳಬೇಕಾದ ಬಹಳಷ್ಟು ಸದ್ಗುಣಗಳಿದ್ದವು ಅವರಲ್ಲಿ. ಹಾಗಾಗಿ ಅವರ ಲೈಫ್ ಹಿಸ್ಟರಿಯನ್ನು ಸಂಕ್ಷಿಪ್ತಮಾಡಿ ಬರೆದು ಪ್ರೈಮರಿ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿಗೆ ಒಂದು ಪಾಠ ಇಡಬೇಕು. ಯಾವುದೇ ಮಠದ ಸ್ವಾಮಿಗಳಿಗಿಂತ, ಯಾವ ಧರ್ಮಗುರುಗಳಿಗಿಂತ ಏನೂ ಕಡಿಮೆ ಇಲ್ಲ ಇವರು. ಇವರಿಗೆ ಒಂದು ಮಠ ಕಟ್ಟಿ ಇವರನ್ನೇ ದೇವರು ಅಂತ ಪೂಜೆ ಮಾಡಿದರೂ ಅತಿಶಯೋಕ್ತಿ ಏನಿಲ್ಲ! ಏಕೆಂದರೆ ತಮಿಳುನಾಡಿನಲ್ಲಿ ಫಿಲ್ಮ್‌ಸ್ಟಾರ್‌ಗಳಿಗೆ, ರಾಜಕಾರಣಿಗಳಿಗೆ ದೇವಸ್ಥಾನ ಕಟ್ಟಿದ್ದಾರೆ. ಚಿರಂಜೀವಿ, ಎಂ.ಜಿ.ಆರ್., ಎನ್.ಟಿ.ಆರ್. ಅಣ್ಣಾದೊರೈ ಇವರಿಗೇ ದೇವಸ್ಥಾನ ಕಟ್ಟಿರುವಾಗ, ಇವರೆಲ್ಲ ಏನು? ರಾಜಕೀಯದಲ್ಲಿ, ಸಿನಿಮಾ ರಂಗದಲ್ಲಿ ದೊಡ್ಡ ನಡೆ ನಡೆದರು

ಅಷ್ಟೆ. ಹಾಗಿರುವಾಗ ಸಮಾಜಕ್ಕೆ ಅಷ್ಟೆಲ್ಲ ಉಪಕಾರಮಾಡಿರುವ ಭರಣಯ್ಯನವರಿಗೆ ನಾವು ಯಾಕೆ ದೇವಸ್ಥಾನ ಮಾಡಬಾರದು? ಎನ್.ಟಿ.ಆರ್., ಚಿರಂಜೀವಿ ಅವರಿಗೆಲ್ಲ ಒಂದೊಂದು ದೇವಸ್ಥಾನ! ಅವರಿಗೆ ದೇವಸ್ಥಾನ ಕಟ್ಟಿ ಪೂಜೆ ಮಾಡುತ್ತಾರೆ ಅಂದಮೇಲೆ ಇವರಿಗೆ ಯಾಕೆ ಆಗಬಾರದು ಅಂತ ನನ್ನವಾದ.

ಯಾಕೆಂದರೆ ಜನರ ನೆನಪು ಬಹಳ ಕ್ಷಣಿಕ. ಈಗ ಗಾಂಧಿಯದೇ ಉದಾಹರಣೆ ತಗೋಳಿ. ನಮ್ಮ ಕಾಲದಲ್ಲಿ ಗಾಂಧಿ ಅಂದರೆ ದೇವರಿಗೆ ಸಮ ಆಗಿದ್ದರು. ಈಗಿನ ಪೀಳಿಗೆಯ ಕಣ್ಣಲ್ಲಿ He is a historical man ಅಷ್ಟೆ. ನಿಮ್ಮ ಮಕ್ಕಳು, ಮೊಮ್ಮಕ್ಕಳು ಗಾಂಧಿಗೆ ಯಾವ ಪ್ರಾಧಾನ್ಯತೆ ಕೊಡುತ್ತಾರೆ ಹೇಳಿ? ಗಾಂಧಿಯದು ಒಂದು ಪಾಠ ಇದೆ, ಓದಿಸುತ್ತೇವೆ ಅವರು ಓದುತ್ತಾರೆ ಅಷ್ಟೆ. ಹಾಗೇ ಇದೂ ಆಗಿಬಿಡಬಾರದು. ಇವರ ಎಲ್ಲ ಒಳ್ಳೆ ಕೆಲಸಗಳನ್ನೂ ಕ್ರೋಢೀಕರಿಸಿ ಒಂದು ಬಾಲಬೋಧೆ ಬರುತ್ತಲ್ಲ ಅದರಲ್ಲಿ ಒಂದು ಅಧ್ಯಾಯ ಯಾಕೆ ಹಾಕಿಸಬಾರದು? ಶಾಲಾ ಪಠ್ಯದಲ್ಲಿ ಯಾಕೆ ಸೇರಿಸಬಾರದು? ಯಾವುದೂ ಮಾಡಬಾರದ್ದು ಅಂತ ಇಲ್ಲ, ಅಷ್ಟೊಂದು ಸದ್ಗುಣ ಇತ್ತು ಅವರಿಗೆ. ಗಾಂಧಿ ನಮ್ಮನ್ನು ಹರಿಜನ ಅಂತ ಕರೆದಾಗ ಅಂಬೇಡ್ಕರ್ ಅವರು 'ನೀವು ಯಾರು ಅವರನ್ನು ಹರಿಜನ ಅಂತ ಹೆಸರಿಡುವುದಕ್ಕೆ? ಅವರು ಹರಿಜನ ಅಲ್ಲ. ಹರಿ ಎಂದರೆ ಕೃಷ್ಣ. ಕೃಷ್ಣ ಈ ದೇಶದವನೇ ಅಲ್ಲ. ರಾಮನೂ ಅಲ್ಲ. ಅವರೆಲ್ಲ ಏಷ್ಯಾ ಮೈನರ್‌ನಿಂದ ಆರ್ಯರು ಬಂದರಲ್ಲ ಅವರಿಂದ ಬಂದವರು. ಅವರು ಇಲ್ಲಿ ರಾಜ ಆಗಿದ್ದವರು. ರಾಮ, ಕೃಷ್ಣ ಎಲ್ಲರೂ ರಾಜರೇ ತಾನೇ! ಅವರ ಮಾತು ಕೇಳುತ್ತೀವಲ್ಲ ನಾವು, ಇದು ಹೇಗೆ ಆಗುತ್ತೆ? ಈ ಜಾತಿಪದ್ಧತಿ, ಸಂಸ್ಕೃತ ಎಲ್ಲ ಆರ್ಯರಿಂದ ಬಂದಿದ್ದು. ನಾವು ಹರಿಜನ ಹೇಗೆ ಆಗುತ್ತೀವಿ? ನಾವು ದ್ರಾವಿಡರು.


ಹರಿ ಮತ್ತು ರಾಮ ಆರ್ಯರು. ನಮ್ಮನ್ನು ಮೂಲನಿವಾಸಿಗಳು ಅಂತಲೇ ಕರೆಯುತ್ತಿದ್ದಿದ್ದು. ಅವರು ಬಂದಿದ್ದರಿಂದ ದ್ರಾವಿಡಿಯನ್ಸ್ ಉತ್ತರದಲ್ಲಿ ಇದ್ದರಲ್ಲ ಅವರನ್ನು ದಕ್ಷಿಣಕ್ಕೆ ತಳ್ಳಿದರು. ಇಲ್ಲ ಅಂದ್ರೆ ನಾವೆಲ್ಲ ಅಲ್ಲೇ ಇರುತ್ತಿದ್ದೆವು. ನಾವು ಹರಿಜನ್ಸ್ ಅಂತ ಹೇಳಿಕೊಳ್ಳಬಾರದು. ಈ ಜಾತಿಗೆ ಟಚೆಬಲ್ಸ್ ಎಲ್ಲ ಸೇರಿಕೊಂಡು ನಮ್ಮನ್ನು ಇನ್ನಷ್ಟು ಕೆಳಗೆ ದಬ್ಬುತ್ತಿದ್ದಾರೆ.

ಉದಾಹರಣೆ ಹೇಳಬೇಕು ಅಂದರೆ ಮಹದೇಶ್ವರ ಒಬ್ಬ ದನಕಾಯುವ ಹುಡುಗ. ಅವನು ಎಡಗೈನವನು. ಅವನು ಮಹದೇವ ಆದದ್ದು ಒಂದು ಪವಾಡ. ಅಷ್ಟು ಭಕ್ತಿ ಇತ್ತು ಅವನಲ್ಲಿ. ಒಂದು ಹುಲಿ ಹುಡುಗನಿಗೆ ಹೆದರುವುದು ಎಂದರೆ ಏನು? ಆಮೇಲೆ ಇವನೇ ಹೋಗಿ ಲಿಂಗದಲ್ಲಿ ಲೀನವಾಗಿ He has become god.

ಈಗ ಆ ಇತಿಹಾಸವನ್ನು ಹೈಲೈಟ್ ಮಾಡುತ್ತಿಲ್ಲ. ಏಕೆಂದರೆ ಅವನು ಎಸ್.ಸಿ. ಹೆಚ್ಚಿಗೆ ಹೈಲೈಟ್ ಮಾಡಿದರೆ ಇವರು ಮೇಲೆ ಬಂದುಬಿಡುತ್ತಾರೆ ಅಂತ ಮಾಡಲ್ಲ. ಬಸವಣ್ಣ ಜನ್ಮತಃ ಬ್ರಾಹ್ಮಣ. ಅವನನ್ನು ಬಹಳ ಜನ ಲೈಕ್ ಮಾಡುವುದಿಲ್ಲ. ಎಲ್ಲರಿಗೂ ಸಹಾಯ ಮಾಡಿದ್ದಾನೆ ಅವನು, ಎಸ್.ಸಿ.ಗೇ ಸಹಾಯ ಮಾಡಿರುವುದು ಜಾಸ್ತಿ. ಬೆಳಗಾವಿ, ರಾಯಚೂರು, ಬಿಜಾಪುರ ಈ ಜಿಲ್ಲೆಗಳಲ್ಲಿ ಇರುವ ಶಿವಭಕ್ತರೆಲ್ಲ ಕನ್ವರ್ಟ್ ಹಾಗಿರುವವರೇ! ಹೀಗೆ ಬಸವಣ್ಣ ಕನ್ವರ್ಟ್ ಮಾಡಿದ ಎಸ್.ಸಿ.ಗಳಲ್ಲೇ 8 ಪಂಗಡ ಇದೆ. ಅಂದರೆ ಎಸ್.ಸಿ.ಗಳಲ್ಲೇ ಮೈನಾರಿಟೀಸ್‌ಗಳಾದ ಕುರುಬರು, ಕ್ಷೌರಿಕರು, ಬೋವಿ ಇತ್ಯಾದಿಗಳೆಲ್ಲ ಒಂದೊಂದು ಜಾತಿ ಆಗಿಬಿಟ್ಟಿದೆ. ಮತ್ತೆ ಹೆಣ್ಣು ತರುವುದಕ್ಕೆ ಇವರಿವರಲ್ಲೇ ಹುಡುಕುತ್ತಾರೆ, ಎಡ ಬಲ ಅಂತೆಲ್ಲ ನೋಡುತ್ತಾರೆ.

ಇಂಥ ಅಧೋಗತಿ ಇದೆ ನಮ್ಮವರಿಗೆ. ಇದನ್ನೆಲ್ಲ ಹೋಗಲಾಡಿಸುವ ಬಗ್ಗೆ ಯಾರೊಬ್ಬರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ನಿಜವಾದ ಬಡವರ ಬಗ್ಗೆ, ಇನ್ನೂ ಕೆಳ ಹಂತದಲ್ಲಿರುವ ನಮ್ಮವರ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಭರಣಯ್ಯನವರು ಈ ರೀತಿ ಎಲ್ಲ ತರತಮ ಮಾಡಿದ್ದಾರಾ? ಇಲ್ಲವಲ್ಲ. ಆದರೂ ಅವರು ಒಂದು ಮನೆ ಕಟ್ಟಿಸಿದಾಗ ಅದನ್ನೇ ನಿಜಲಿಂಗಪ್ಪನವರು ಎನ್‌ಕ್ವಯರಿ ಮಾಡಿಸಲು ಹೊರಟಿದ್ದರಂತೆ!

* * *



ಕಾರುಣ್ಯ ಮೂರ್ತಿ

ಗೊ. ರು. ಚನ್ನಬಸಪ್ಪ

........ನೊಂದ ಸಮುದಾಯದಿಂದ ಬಂದವರಿಗೆ ಎಲ್ಲಾ ಜನರ ನೋವುನಲಿವುಗಳು ತಿಳಿದಿರುತ್ತವೆ. ಆದ್ದರಿಂದಲೇ ಭರಣಯ್ಯನವರು ನೊಂದವರ, ನಿರ್ಗತಿಕರ ಬಗ್ಗೆ ಸದಾ ಚಿಂತಿಸುತ್ತಿದ್ದರು. ಹೊಸ ತಲೆಮಾರಿಗೆ ಅವಮಾನದ, ನೋವಿನ ಅರಿವಿರದು. ಹೊಸ ತಲೆಮಾರು ಮೊದಲು ಇದನ್ನ ತಿಳಿಯಬೇಕು. ಭರಣಯ್ಯನವರು ಬದುಕಿನ ಉದ್ದಕ್ಕೂ ನಡೆದು ಬಂದ ದಾರಿ, ಮಾಡಿದ ಜನಪರ ಕೆಲಸಗಳು ಇಂದಿನವರೆಗೂ ಆದರ್ಶ ಅನುಕರಣೀಯ. ಬಡವರ ಬಗ್ಗೆ ಅವರಿಗಿದ್ದ ಅನುಕಂಪ, ಶ್ರದ್ಧೆ, ಆಸಕ್ತಿ ಹಾಗೂ ಅದಕ್ಕಾಗಿ ಅವರು ಬದುಕಿನ ಬಹುಭಾಗವನ್ನು ಮೀಸಲಿಟ್ಟಿದ್ದು ಎಂದೆಂದೂ ಸ್ಮರಿಸಬೇಕಾದ್ದೆ. ಅವರು ಸಹಜವಾಗಿ ಎಲ್ಲಾ ಜನವರ್ಗಗಳ ಜೊತೆ ಬೆರೆತು, ಕಷ್ಟಸುಖ ಅರಿತು ಕೆಲಸ ಮಾಡಿಕೊಡುತ್ತಿದ್ದರು. ಅವರಲ್ಲಿ ಕೃತಕತೆ ಇರಲಿಲ್ಲ. ತಾನು ವ್ಯಕ್ತಿಯಾಗಿ ಶುದ್ಧನಾದುದರಿಂದ ಅವರಲ್ಲಿ ಆತ್ಮವಿಶ್ವಾಸ ಹುಟ್ಟಿತ್ತು. ಇದೇ ಇಂದಿನ ಅಧಿಕಾರಿಗಳು ಅವರಿಂದ ಅರಿಯಬೇಕಾದ್ದು.

ಅಧ್ಯಕ್ಷರು, ಜಾನಪದ ಅಕಾಡೆಮಿ, ಬೆಂಗಳೂರು
ಅಧ್ಯಕ್ಷರು, ಶರಣ ಸಾಹಿತ್ಯ ಪರಿಷತ್, ಬೆಂಗಳೂರು



ಕಾರುಣ್ಯ ಮೂರ್ತಿ

ಗೊ. ರು. ಚನ್ನಬಸಪ್ಪ

ಬನ್ನಿ, ಬನ್ನಿ, ನನ್ನ ಗಡಿಯಾರ ನೋಡಿಕೊಂಡೆ. 12 ಗಂಟೆಗೇ ಸರಿಯಾಗಿ ಬಂದಿದ್ದೀರಿ. ಈ ಸಮಯ ಪಾಲನೆ ಮನುಷ್ಯನಿಗೆ ಬಹಳ ಮುಖ್ಯ. ಇದು ದೇಶ ಮತ್ತು ಸಮಾಜ ಎರಡಕ್ಕೂ ಒಳ್ಳೆಯದು. ಸಮಯ ಪಾಲನೆ ಮಾಡುವವರನ್ನ ಕಂಡರೆ ನನಗೆ ಗೌರವ, ಅಕ್ಕರೆ. ಕುಳಿತುಕೊಳ್ಳಿ.

ನೀವು ನಿಮ್ಮ ಎಲ್ಲಾ ಕೆಲಸದ ಒತ್ತಡದ ನಡುವೆ ನಾಳೆ ಮುಂಬೈನಲ್ಲಿ ನಡೆಯುವ ಶರಣ ಸಾಹಿತ್ಯ ಸಮ್ಮೇಳನಕ್ಕೆ ಹೊರಡಲು ತಯಾರಿಮಾಡಿಕೊಂಡಿದ್ದೀರಿ. ಇಂತಹ ಸಂದರ್ಭದಲ್ಲಿ ನೀವು ನನಗೆ ಸಮಯ ಕೊಟ್ಟಾಗ ಅದಕ್ಕೆ ಗೌರವ ಸಲ್ಲಿಸಬೇಕಾದ್ದು ನನ್ನಂತಹ ಕಿರಿಯವನ ಕೆಲಸ.

ನಿಮ್ಮ ಜೊತೆ ಈಗಾಗಲೇ ಮಾತನಾಡಿದ ಹಾಗೆ ಆರ್. ಭರಣಯ್ಯನವರ ಕುರಿತು ಮಾಡುತ್ತಿರುವ ಪುಸ್ತಕಕ್ಕೆ ನಿಮ್ಮ ಸಂದರ್ಶನ ಆ ಪುಸ್ತಕದ ತೂಕ, ಘನತೆ ಹೆಚ್ಚುಮಾಡುತ್ತೆ. ನೀವು ಅವರ ನೆಪದಲ್ಲಿ ಒಂದಷ್ಟು ಮಾತಾಡಿ ಸರ್.

ಬಹಳ ಸಂತೋಷ. ನನಗೆ ಪ್ರಿಯವಾದ, ಇಷ್ಟಪಟ್ಟ ವ್ಯಕ್ತಿಯೊಬ್ಬರ ಬಗ್ಗೆ ಪುಸ್ತಕ ಮಾಡುತ್ತೀದ್ದೀರಿ. ನನ್ನ ನೆನಪಿನಲ್ಲಿರುವುದನ್ನು ನೆನಪುಮಾಡುಕೊಂಡು ಹೇಳಬಯಸುತ್ತೇನೆ. ಸ್ವಾತಂತ್ರ್ಯಪೂರ್ವಕ್ಕೂ – ವರ್ತಮಾನಕ್ಕೂ ಅಧಿಕಾರ – ಪ್ರಾಮಾಣಿಕತೆ – ದಕ್ಷತೆಗಳ ಕುರಿತು ಹಲವು ಮುಖಗಳ ಪರಿಚಯ ನಿಮಗೆ ಇದೆ. ಬಹುಶಃ ಸ್ವಾತಂತ್ರ್ಯ ಬಂದ ಆರಂಭದಲ್ಲಿ ನಮ್ಮ ಜನಗಳಿಗೆ ಸಹಜವಾಗಿ ರಾಷ್ಟ್ರೀಯ ಅಭಿಮಾನ, ರಾಷ್ಟ್ರ ಪ್ರಜ್ಞೆ, ಅದೆಲ್ಲಾ ಇತ್ತು. ಬಹುಷಃ ಒಂದೆರೆಡು ಚುನಾವಣೆಗಳ ನಂತರ ಕ್ರಮೇಣ ಮತ್ತೇ ರಾಜಕೀಯ ಶಕ್ತಿಗಳ ಕೈಮೇಲಾದಾಗ ರಾಷ್ಟ್ರಶಕ್ತಿ ಕುಂದುತ್ತಾ ಬಂದಿತು. ಆಗ ಅಧಿಕಾರಕ್ಕೆ ಬಂದವರೆಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರಾಗಿದ್ದರು. ಅವರಿಗೆ ಅದರ ನೋವು ಅದರ ಪ್ರಾಮುಖ್ಯತೆ, ಗಾಂಭೀರ್ಯತೆಯೆಲ್ಲಾಗೊತ್ತಿತ್ತು. ಆದರೆ ದುರಾದೃಷ್ಟವಶಾತ್ ಆನಂತರ ಬಂದವರೆಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದಿರುವ ಜನರೇ ಅಧಿಕಾರಕ್ಕೆ ಬಂದರು. ಇವರಿಗೆ ಸ್ವಾತಂತ್ರ್ಯ, ಬಲಿದಾನಗಳ ಮಹತ್ವ ಅಷ್ಟು ಪರಿಣಾಮ ಮಾಡಲಿಲ್ಲ. ಇವರಿಗೆ ಅಧಿಕಾರ ಮುಖ್ಯ ಆಯಿತೆ ವಿನಹಃ ಸೇವಾ ಪ್ರಜ್ಞೆ ಹೋಯಿತು. ಇದು ಬಹಳ ದುರದೃಷ್ಟಕರ ಬೆಳವಣಿಗೆ. ಸ್ವಾತಂತ್ರ್ಯ ಬಂದು ಹತ್ತಾರುವರುಷ ಬಹುಶಃ 1960ರವರಗೆ ಪರವಾಗಿಲ್ಲ. ಆನಂತರ ಕ್ರಮೇಣ ತುಂಬಾ ದುಸ್ಥಿತಿ ಬಂದಿತು. ಆನಂತರ ಸ್ವಾತಂತ್ರ್ಯ ನಂತರದಲ್ಲಿ ಹುಟ್ಟಿದವರು ಅಧಿಕಾರದಲ್ಲಿ ಇರುವಂತವರು. ಅವರಿಗೆ ಹೋರಾಟದ ಲವಲೇಶವೂ ಪರಿಚಯ ಇಲ್ಲ. ಅಧಿಕಾರದ ಜೊತೆಗೆ, ಚುನಾವಣಾ ಭ್ರಷ್ಟತೆ, ಹೆಚ್ಚಾಗಿ ಹಣಗಳಿಸುವುದು ಮುಖ್ಯ ಗುರಿಯಾಯಿತು. ಹಾಗಾಗಿ ಅನೇಕ ಯೋಜನೆಗಳು ಸಹ ಹಣದ ಗಳಿಕೆಯ ದೃಷ್ಟಿಯಿಟ್ಟುಕೊಂಡು ರೂಪಿತವಾದವು. ಜನಹಿತದ ಯೋಜನೆ ಬದಲಾಗಿ ತನ್ನ ಹಿತರಕ್ಷಣೆ ಮಾಡುವ ಯೋಜನೆಗಳೇ ರೂಪಿಸಲು ಆರಂಭವಾಯಿತು. ಹೀಗಾಗಿ ಪ್ರಾಮಾಣಿಕತೆ, ಅಧಿಕಾರದ ದುರುಪಯೋಗ

ಎನ್ನುವುದು ಸಾಮಾನ್ಯ ವಿಷಯವಾಯಿತು. ಪ್ರಾಮಾಣಿಕತೆಯನ್ನು ನಿಘಂಟಿನಲ್ಲಿ ನೋಡಬೇಕಾದ ದುರಂತ ಬಂದೀತು. ಸೇವೆ ಎನ್ನುವಂತದ್ದು ದೂರ ಉಳಿದುಬಿಟ್ಟಿದೆ. ಅಂದ ಮಾತ್ರಕ್ಕೆ ಯಾರು ಸೇವೆ ಮಾಡುತ್ತಿಲ್ಲ ಎಂದಲ್ಲ. ಬೇಕಾದಷ್ಟು ಒಳ್ಳೆಯ ಜನಸೇವಕರು ಇದ್ದಾರೆ. ಕೆಲವು ಸ್ವಯಂಸೇವಾ ಸಂಸ್ಥೆಗಳು ಇವೆ. ಸ್ವಯಂಸೇವಾ ಸಂಸ್ಥೆಯ ಹೆಸರಿನಲ್ಲಿ ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡುವುದೂ ಇದೆ. ಸುಮಾರು ಸ್ವಯಂಸೇವಾ ಸಂಸ್ಥೆಗಳು ಎಷ್ಟೋ ಕೋಟಿ ರೂಪಾಯಿ ಅನುದಾನ ಪಡೆದು ಸರ್ಕಾರಕ್ಕೆ ಲೆಕ್ಕ ನೀಡದೆ ಇರುವಂತದ್ದು ಇದೆ. ಅಂತಹ ಸಂಸ್ಥೆಗಳು ಯಾವುದು ಎಂದು ನೋಡಲು ಹೋದರೆ ಸಂಸ್ಥೆಗಳೇ ಅಸ್ಥಿತ್ವದಲ್ಲಿ ಇಲ್ಲದಿರುವ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ನಮ್ಮದೇ ಆದ ಸ್ವಾತಂತ್ರ್ಯ ಬಂದ ಕೂಡಲೇ ಮೊದಲು ಮಾಡಬೇಕಾದಂತಹ ಕರ್ತವ್ಯ ಏನಾಗಿತ್ತು ಅಂದರೆ, ಭಾರತೀಯ ಪರಂಪರೆಗೆ, ಪರಿಸ್ಥಿತಿಗೆ, ಪರಿಸರಕ್ಕೆ, ಸಂಸ್ಕೃತಿ, ಭಾಷೆಗೆ ಎಲ್ಲದಕ್ಕೂ ಹೊಂದುಕೊಳ್ಳುವಂತಹ ನಿರ್ದಿಷ್ಟವಾದ ಶಿಕ್ಷಣ ನೀತಿಯನ್ನು ರೂಪಿಸಬೇಕಾಗಿತ್ತು. ಆದರೆ ಆ ಶಿಕ್ಷಣ ನೀತಿ ರೂಪಿಸದೇ ತಾತ್ಕಾಲಿಕ ಪ್ರಯೋಗಗಳನ್ನ ಮಾಡುತ್ತಾ ಬಂದರು. ಪ್ರತಿಯೊಬ್ಬ ಶಿಕ್ಷಣ ಸಚಿವರು ಬಂದಾಗೆಲ್ಲಾ ಪಾಲಿಸಿಗಳನ್ನು ಮಾಡುತ್ತಾ ಬಂದಿದ್ದಾರೆ. ಶಿಕ್ಷಣ ಎಂಬುದು ಆಟಿಕೆ ವಸ್ತುವಲ್ಲ. ಒಂದು ಬಾರಿ ಶಿಕ್ಷಣ ನೀತಿ ಜಾರಿಗೆ ಬಂದರೆ ಪೂರ್ವ ಪ್ರಾಥಮಿಕದಿಂದ ಹಿಡಿದು ಸ್ನಾತಕೋತ್ತರದವರೆಗೆ ವಿದ್ಯಾರ್ಥಿ ಆ ಶಿಕ್ಷಣ ನೀತಿಗೆ ಅನುಗುಣವಾಗಿ ಶಿಕ್ಷಣ ಪಡೆದುಕೊಳ್ಳಲು ಅವಕಾಶವಿರಬೇಕು. ಮಧ್ಯದಲ್ಲೇ ಅನೇಕ ಪ್ರಯೋಗಗಳನ್ನು ಮಾಡಿದರೆ, ಇದು ಹೇಗಾಗುತ್ತೇ ಎಂದರೆ "ಒಂದು ಸಸಿ ನೆಟ್ಟು ಬೆಳಿಗ್ಗೆನೇ ಬಗೆದು ನೋಡಿದಂತಾಗುತ್ತದೆ" ಹೀಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಹಳ ದೊಡ್ಡ ಕೆಲಸ ಆಗಬೇಕಿದೆ. ಇವತ್ತು ಬದಲಾವಣೆಯ ವಾತಾವರಣದಲ್ಲಿ ಶಿಕ್ಷಣವನ್ನು "ಮಾರುಕಟ್ಟೆಯ ಬೆಲೆಗೆ ಹೊಂದಿಸುವಂತಾಗಿದೆಯೇ ಹೊರತು, ಈ ನೆಲಕ್ಕೆ ಹೊಂದಿಸುವಂತಹ ಕೆಲಸ ಆಗುತ್ತಿಲ್ಲ" ಇದು ಬಹಳ ಕೆಟ್ಟ ಬೆಳವಣಿಗೆ. ಹೀಗಾಗಿ ಇಂತಹ ಶಿಕ್ಷಣ ಪಡೆದು ಬಂದಂತಹ ಜನ ಏನು ಮಾಡಬಲ್ಲರು ಎಂದು ಹೇಳಬೇಕಾಗಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಅಭಿವೃದ್ಧಿ ಕೆಲಸ ಆಗಿಲ್ಲವೆಂದಲ್ಲ. ಆದರೆ ಪ್ರಾಮಾಣಿಕವಾಗಿ ಅಧಿಕಾರಿಗಳು ಮತ್ತು ರಾಜಕೀಯ ಅಧಿಕಾರಸ್ಥರು ಕೆಲಸ ಮಾಡಿದ್ದರೆ ಬಹುಶಃ ಜಗತ್ತಿನಲ್ಲಿ ಮೊಟ್ಟ ಮೊದಲ ರಾಷ್ಟ್ರವಾಗುತ್ತಿತ್ತು ಭಾರತ. ಅದಕ್ಕೆ ಅವಕಾಶವಾಗಲಿಲ್ಲ ಮತ್ತೇ ಕಾಲ ಸರಿಪಡಿಸಬೇಕು. ನಿರೀಕ್ಷೆ ಮಾಡಬೇಕು ಅಷ್ಟೆ.

ಇದಕ್ಕೆ ಸಂಬಂಧಿಸಿದಂತೆ ಸಿಂಪಿಲಿಂಗಣ್ಣನವರು ಒಂದು ಚುಟುಕ ಬರೆದಿದ್ದಾರೆ:

"ಸ್ವಾತಂತ್ರ್ಯ ಯಾರಿಗೊ ಸಿಕ್ಕಿದೆಯಂತೆ

ಸಿಕ್ಕಿದವರಿಗಷ್ಟೆ ದಕ್ಕಿದೆಯಂತೆ

ಅಡಿಗೆ ಮನೆಯಲ್ಲಿ ಬೆಕ್ಕಿದೆಯಂತೆ

ಕೆನೆಯನ್ನೆಲ್ಲಾ ನೆಕ್ಕಿದೆಯಂತೆ"

ಈ ಮಾತು ಇಂದಿನ ರಾಜಕೀಯ ಪರಿಸ್ಥಿತಿಗೆ ಅರ್ಥವತ್ತಾದ ಮಾತು. ಅಡುಗೆ ಮನೆಯಲ್ಲಿರುವ ಬೆಕ್ಕಿಗೆ ಯಾವುದು ಅಡುಗೆ ಮನೆ ಎಂದು ಹೇಳಬೇಕಿಲ್ಲ. ಅದು ಕೆನೆಯನ್ನೆಲ್ಲಾ ನೆಕ್ಕಿದ ಮೇಲೆ ಅದರಲ್ಲಿ ಬೆಣ್ಣೆ, ತುಪ್ಪ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಇಂತಹ ಒಂದು ಸ್ಥಿತಿ ಇಂದು ಇದೆ. ಈ ಹಿಂದೆ ಶಾಸಕರಿಗೆ ಸುತ್ತೂರು ಮಠದಲ್ಲಿ ಒಂದು ಶಿಬಿರ ಏರ್ಪಡಿಸಲಾಗಿತ್ತು. Planning Commission Member's ಅಣ್ಣಾ ಹಜಾರೆಯಂತಹ ಸಾಮಾಜಿಕ ಸೇವಾಕಾರ್ಯಕರ್ತರು ಪ್ರಕಾಶ್ ಆಮ್ಟೆಯಂತವರನ್ನೂ ಕರೆಸಿದ್ದೆವು. 226 ಶಾಸಕರಲ್ಲಿ ಬಂದವರು 60–70 ಜನರು ಮಾತ್ರ. ಬಂದವರು ಸಮಾಧಾನಪಟ್ಟುಕೊಂಡರು. ಸಾರ್ವಜನಿಕರ ಆಸ್ತಿ ಹಣಕಾಸಿಗೆ ಹೇಗೆ ಧರ್ಮದರ್ಶಿಗಳಾಗಬೇಕು ಇಂತಹ ಒಂದು ಕಲ್ಪನೆ ಸಾರ್ವಜನಿಕ ಆಡಳಿತ ನಡೆಸುವವರಿಗೆ ಇಲ್ಲದಿದ್ದರೆ ಯಾವುದೇ ದೃಷ್ಟಿಯಿಂದ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಯಾವಾಗ ರಾಜಕೀಯ ಅಧಿಕಾರಸ್ಥರು ಅಪ್ರಮಾಣಿಕರಾಗಿರುತ್ತಾರೆ ಅಥವಾ ವಂಚನೆಯಂತಹ ಸರ್ಕಾರಿ ಅಧಿಕಾರಿಗಳನ್ನು ನಿಯಂತ್ರಣ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಭರಣಯ್ಯನವರು ನೆನಪಾಗುತ್ತಾರೆ. ಅವರ ಕಾಲಘಟ್ಟದಲ್ಲಿ ರಾಜಕೀಯ ವ್ಯವಸ್ಥೆ ಇಷ್ಟೊಂದು ಹದಗೆಟ್ಟಿರಲಿಲ್ಲ. ಆಗ ಯಾರಾದರೂ ಹೊಸಬರು ರಾಜಕೀಯಕ್ಕೆ ಬಂದರೆ ಭರಣಯ್ಯ ನಂತಹ ಪ್ರಾಮಾಣಿಕ ಅಧಿಕಾರಿಗಳು ತಿಳುವಳಿಕೆ ಹೇಳುತ್ತಿದ್ದರು. ಹೀಗೆ ಮಾಡಬೇಕು, ಹೀಗೆ ಆಗಬೇಕು, ಹೀಗೆ ಮಾಡಬಾರದು, ಸರಿಯಲ್ಲ. ಅಧಿಕಾರಿಗಳು ಆದವರು ರಾಜಕೀಯ ಅಧಿಕಾರಸ್ಥರಿಗೆ ತಿಳಿಸುವುದು ಆಗಬೇಕು. ಹೀಗ ಏನಾಗಿದೆ ಅಂದರೆ ಜನಪ್ರತಿನಿಧಿಗಳ ದೌರ್ಬಲ್ಯವಿರುವುದರಿಂದ, ಜನಪ್ರತಿನಿಧಿಗಳ ಬಗ್ಗೆ ಈಗ ಪತ್ರಿಕೆಗಳಲ್ಲಿ ಬರುತ್ತಿರುವ ಸುದ್ದಿ ಅವರ ವೈಯಕ್ತಿಕ ಶೀಲಚಾರಿತ್ರ್ಯ, ಭಷ್ಟಾಚಾರ, ಹಣ ದುರ್ಬಳಕೆ ಸುದ್ದಿ ಬರುತ್ತಿರುವುದರಿಂದ ಅಧಿಕಾರಿಗಳು ಮೇಲುಗೈ ಸಾಧಿಸುತ್ತಾರೆ. ಜನಪ್ರತಿನಿಧಿಗಳ ಮಾತುಗಳನ್ನೇ ಕೇಳುವುದಿಲ್ಲ ಅಥವಾ ಜನಪ್ರತಿನಿಧಿಗಳನ್ನು ತೃಪ್ತಿಪಡಿಸಲು ಹೋಗಿ ಜನರಿಗೆ ದ್ರೋಹ ಆಗುತ್ತದೆ. ಇದು ಈಗ ನಡೆಯುತ್ತಿರುವ ಕೆಲಸ. ಹೀಗಾಗಿ ಅಧಿಕಾರದ ಹೆಸರಿನಲ್ಲಿ ಪ್ರಾಮಾಣಿಕತೆ, ದಕ್ಷತೆ ಮರೆಯಾಗಿದೆ.

ಆಗಿದ್ದರೆ ಸೇವೆಗೆ ಯಾವ ಅರ್ಥವನ್ನು ಕಾಣಬೇಕೆನ್ನುತ್ತೀರಿ.

ನಾನು ಒಂದು ಗ್ರಾಮೀಣ ಪ್ರದೇಶದಿಂದ ಹುಟ್ಟಿ ಬಂದವನು. ನನ್ನ ತಾಯಿ ಕೂಲಿ ಮಾಡುತ್ತಿದ್ದರು, ನಾನೂ ಮಾಡುತ್ತಿದ್ದೆ. ನನ್ನ ತಾಯಿಗೆ ಮೂರು ಆಣೆ ನನಗೆ ಒಂದುವರೆ ಆಣೆ ಕೂಲಿ ಕೊಡುತ್ತಿದ್ದರು. ತಾಯಿ ಎಷ್ಟು ಕಷ್ಟಪಟ್ಟರು ಎಂದರೆ ನಾನು ನಾಲ್ಕು ಅಕ್ಷರ ಕಲಿಯಬೇಕೆಂಬುದು ಅವಳ ಆಸೆಯಾಗಿತ್ತು. ಜಮೀನ್ದಾರನ ಹೊಲಕ್ಕೆ ಕೂಲಿಗೆ ಹೋದರೆ, ನನ್ನ ಕೈ ಎಳೆಕೈ. ಆ ಕಳೆ ಕೀಳಲಾರದೆ ರಕ್ತ ಬರುತ್ತಿತ್ತು. ತಾಯಿ ತನ್ನ ಭಾಗದ ಮುಂಚಿನ ಕಳೆಕಿತ್ತು ಅವಸರದಲ್ಲಿ ಮತ್ತೆ ನನ್ನ ಭಾಗದಲ್ಲಿ ಬಂದು ಕಳೆ ಕೀಳುತ್ತಿದ್ದಳು. ಏಕೆಂದರೆ ಒಂದೂವರೆ ಆಣೆ ಬರಬೇಕಿತ್ತು. ಅವತ್ತು ನಮಗೆ ಮುಖ್ಯವಾಗಿದ್ದುದು. ಈ ಒಂದೂವರೆ ಆಣೆಗಿಂತ ಅವರು ಕೊಡುತ್ತಿದ್ದ ಮಧ್ಯಾನ್ಹದ ಹಿಟ್ಟು, ರೊಟ್ಟಿ. ಅದು ಬೆಲೆ ಬಾಳುವಂತಹದ್ದು. ಏಕೆಂದರೆ ಹಸಿವಿನ ಪ್ರಶ್ನೆ. ಮಧ್ಯಾನ್ಹ ಊಟ ಸಿಗುತ್ತಿತ್ತು. ಶನಿವಾರ ಭಾನುವಾರ ಕೂಲಿಗೆ ಹೋಗುತ್ತಿದ್ದೆ. ಸ್ಕೂಲ್‌ನಿಂದ ಬರುವ ದಾರಿಯಲ್ಲಿ ಹೊಲದಲ್ಲಿ ಕಳೆಕಿತ್ತು ರಾತ್ರಿ ಬರುತ್ತಿದ್ದವು. ಈ ಹಿನ್ನೆಲೆ ಏನಿದೆ. ಆದು ನಮ್ಮ ಬದುಕಿನ ಮೇಲೆ ತುಂಬಾ ಪರಿಣಾಮ ಬೀರಿತು. ನಾವು ಕಣ್ಣೀರು ಹಾಕಿದ್ದೀವಿ. ಇನ್ನೊಬ್ಬರ ಕಣ್ಣೀರನ್ನೂ ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಸಾಧ್ಯವೆ! ಎನ್ನುವುದು ಸಹಜವಾಗಿ ಒಳಗೆ ಹುಟ್ಟಿಬಿಟ್ಟಿತ್ತು. ನನ್ನ ತಂದೆ ಕೂಡ ತುಂಬಾ ಕಷ್ಟಪಟ್ಟವರು. ಗ್ರಾಂಡ್ ಸ್ಕೂಲ್ ಮಾಸ್ಟರ್. ಅವರಿಗೆ 7 ರೂಪಾಯಿ ಸಂಬಳ. ಅವರು ಪಟ್ಟಪಾಡು, ನಮ್ಮ ತಾಯಿ ಪಟ್ಟಪಾಡು ಇವೆಲ್ಲ ನಮ್ಮ ಮೇಲೆ ಪರಿಣಾಮ ಬೀರಿದೆ. ಅಷ್ಟೊತ್ತಿಗೆ ನಾನು ಹೈಸ್ಕೂಲಿಗೆ ಬಂದಿದ್ದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಆರಂಭಿಸಿದೆ.

ಕ್ಲಾಸಿನಿಂದ ಹೊರಬಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದು ಆಗ ಕಂಡಂತಹ ದೃಶ್ಯಗಳು, ಕೇಳಿದ ಮಾತುಗಳು ನನ್ನ ಮೇಲೆ ಪರಿಣಾಮಬೀರಿತು. ನಾವು ಏನು ಮಾಡಿದರೂ ಹಳ್ಳಿಗಾಡಿಗೆ ಏನಾದರೂ ಮಾಡಬೇಕು ಎಂದು ಮನಸ್ಸಿನಲ್ಲಿ ಮೂಡಿತು. ನಾನು ಹೆಚ್ಚು ಓದಲು ಸಾಧ್ಯವಾಗಲಿಲ್ಲ. ಎಸ್.ಎಸ್.ಎಲ್.ಸಿ. ಆದ ಕೂಡಲೇ ನೌಕರಿಗೆ ಹೋಗಲೇಬೇಕಾಗಿತ್ತು. ಅಷ್ಟೊತ್ತಿಗೆ ಸ್ವಾತಂತ್ರ್ಯ ಕೂಡ ಬಂದಿತು. ನಾನು ಸ್ವಾತಂತ್ರ್ಯ ಹೋರಾಟ ಬಿಸಿ ಅನುಭವಿಸಿದ್ದ ಕಾರಣ ಹಾಗೂ ಪ್ರಾಥಮಿಕ ಶಾಲಾ ಅಧ್ಯಾಪಕನಾದ ಕಾರಣ ಏನಾದರೂ ಸೇವೆ ಮಾಡಬೇಕು ಎನ್ನುವುದು ನನ್ನೊಳಗೆ ಮೂಡಿತು. ಆಗ ನಾವು 1949–50ನೇ ಇಸವಿಯಲ್ಲಿ ಎಲ್ಲಾ ಶಿಕ್ಷಕರನ್ನೆಲ್ಲಾ ಸೇರಿಸಿಕೊಂಡು ನಾಟಕ ಮಾಡುತ್ತಿದ್ದೆವು. ಪ್ರಾಯೋಜಿತ ಕಾರ್ಯಕ್ರಮ, ಟಿಕೆಟ್ ಮಾಡಿ ಹಣ ಸಂಗ್ರಹಿಸುತ್ತಿದ್ದೆವು. ಇವತ್ತು ಅಕ್ಷರ ದಾಸೋಹ ಅಥವಾ ಅನ್ನದಾಸೋಹ

ಎಂದು ಏನೆಲ್ಲಾ ಮಾಡುತ್ತಿದ್ದಾರೆ. ಅವತ್ತು ಏನೂ ಇಲ್ಲದ ಕಾಲದಲ್ಲಿ ನಾಟಕದಿಂದ ಬಂದ ಹಣದಿಂದ ನಾಲ್ಕು-ಐದು ಮೈಲಿಗಳಿಂದ ಶಾಲೆಗೆ ಬರುತ್ತಿದ್ದ ಮಕ್ಕಳಿಗೆ ಮಧ್ಯಾಹ್ನ ಹೊತ್ತು ಕಡಲೆಕಾಳು ಇನ್ನಿತರೆ ತಿಂಡಿ ಮಾಡಿಕೊಡುತ್ತಿದ್ದೆವು. ಆಗ ಇಷ್ಟೊಂದು ಸ್ಕೂಲ್ ಇರಲಿಲ್ಲ. ಒಂದೊ ಎರಡೊ ಮೂರೋ ತರಗತಿ ಮಕ್ಕಳೆಲ್ಲಾ ರಾತ್ರಿ ಮಲಗಬೇಕು. ಬೆಳಿಗ್ಗೆ ಹಳ್ಳಕ್ಕೆ ಕರೆದುಕೊಂಡು ಹೋಗಿ ಮುಖ, ಹಲ್ಲು ಹುಜ್ಜಿ ಎಲ್ಲಾ ತೊಳೆದು ತಿಂಡಿಗೆ ಮನೆಗೆ ಕಳುಹಿಸುತ್ತಿದ್ದೆವು. ತಿಂಡಿ ತಿಂದು ಮತ್ತೆ ಶಾಲೆಗೆ ಬರುತ್ತಿದ್ದರು. ಆಟ ಆಡಿ ರಾತ್ರಿ ಶಾಲೆಯಲ್ಲೇ ಮಲಗಬೇಕು. ಸಂಪ್ರದಾಯದ ಹಳ್ಳಿಯಾದರೂ ಎಲ್ಲಾ ಜನಾಂಗದ ಮಕ್ಕಳು ಲಿಂಗಾಯಿತರು, ಕುರುಬರು, ದೇವಾಂಗದವರು ಒಂದೇ ಶಾಲೆಯಲ್ಲಿ ಮಲಗುವಂತೆ ಮಾಡುತ್ತಿದ್ದೆವು. ಮಧ್ಯಾಹ್ನದ ಉಪಹಾರವನ್ನು ಜೊತೆಯಲ್ಲಿ ಮಾಡುವುದು. ಈ ರೀತಿ ಮಕ್ಕಳು ಬೆಳೆಯುತ್ತಿದ್ದರು. ಇದರಿಂದ ಶಾಲೆಯಲ್ಲಿ ನನ್ನಂತಹ ಉಪಾಧ್ಯಾಯರ ಮೇಲೆ ಒಳ್ಳೆಯವರಿಗೆ ಸಹಜವಾಗಿ ಒಳ್ಳೆಯ ಅಭಿಪ್ರಾಯ ಬಂದಿತು. ಮಕ್ಕಳಲ್ಲಿ, ಜಾನಪದ ಹಾಡು, ಮಾರ್ನವಮಿ ಹಾಡು, ಮಕ್ಕಳ ಜೊತೆ ಹಾಡಿ ನಲಿದದ್ದು ಸಂತೋಷದ ಅನುಭವ. ಇವೆಲ್ಲಾ ಒಂದು ವಾತಾವರಣ ಸೃಷ್ಟಿಯಾಯಿತು. ಇದರಿಂದ ಗ್ರಾಮೀಣ ಜನರ ಜೊತೆ ಸಂಪರ್ಕ ಬೆಳೆಯಲಿಕ್ಕೆ ಸಾಧ್ಯವಾಯಿತು. ಆಗ ಹಳ್ಳಿಯಲ್ಲಿ ಒಂದು 'ಹಳ್ಳಿಯ ಬಳಗ' ಯುವಕರ ಸಂಘ ಕಟ್ಟಿದೆ. ಊರನ್ನು ಸ್ವಚ್ಛಗೊಳಿಸುವುದು, ಊರಿನಲ್ಲಿ ವಾರದಲ್ಲೊಮ್ಮೆ ಭಜನೆ ಮಾಡುವುದು ಇದೆಲ್ಲಾ ಚಾಲ್ತಿಮಾಡಿ ಕೆಲಸ ಮಾಡಿಸಿದೆವು. ನಮ್ಮ ಊರಿಗೆ ಎಲ್ಲಾ ರಾಜಕಾರಣಿಗಳು ಇತ್ತೀಚಿನವರನ್ನು ಬಿಟ್ಟು ಎಲ್ಲರೂ ಮುಖ್ಯಮಂತ್ರಿ ಹಾದಿಯಾಗಿ ಬಂದು ಹೋಗಿದ್ದಾರೆ. ನಮ್ಮ ಊರಿನಲ್ಲಿ ಗ್ರಂಥಭಂಡಾರದ ಮೂಲಕ ಸಾಕಷ್ಟು ಪುಸ್ತಕಗಳನ್ನು ಸಂಗ್ರಹಿಸಿದ್ದೇವೆ. ಚೆನ್ನಾಗಿ ನಡೆಯಿತು. ನಾನು ನೌಕರಿಯಲ್ಲಿದ್ದ ಕಾರಣ ಮೊದಲಿನ ಬಡತನ ಇರಲಿಲ್ಲ. ಊಟಕ್ಕೆ ಅನುಕೂಲವಾಯಿತು. ಬಂದವರೆಲ್ಲಾ ನಮ್ಮ ಮನೆಗೆ ಬರುತ್ತಿದ್ದರು. ಅಜ್ಜಪುರಂನಲ್ಲಿದ್ದ ಹರಿಜನ ಬಂಧುಗಳು ನಮ್ಮ ಮನೆಯಲ್ಲಿ ಬಂದು ಊಟ ಮಾಡಿಬಿಟ್ಟರು. ಈಗಿನಷ್ಟು ಜಾಗೃತಿ ಉಂಟಾಗಿರಲಿಲ್ಲ. ನನ್ನ ಮೇಲೆ ಗೌರವ ಇದ್ದಿದ್ದರಿಂದ ಊರಿನವರು ಮಾತನಾಡಲಿಲ್ಲ. ಆದರೆ ಪಕ್ಕದ ಊರಿನವರು ಮಾತಾಡಲು ಶುರು ಮಾಡಿದರು. ನನ್ನ ತಾಯಿಗೆ ಹೇಳಿ ಏನ್ ಹಿಂಗೆಲ್ಲಾ ಅಂತಾರಲ್ಲ ಎಂದು. ನನ್ನ ತಾಯಿ ಓದಿರದ ಅನಕ್ಷರಸ್ಥ ಮಹಿಳೆ. ಆಕೆ ಅಂದು ಹೇಳಿದ ಮಾತು ಇನ್ನೂ ಚೆನ್ನಾಗಿ ನೆನಪಿದೆ. "ಅವರ ಮೈ ಚಿಗಟಿದರೂ ಒಂದೇ ರಕ್ತ, ನಮ್ಮ ಮೈ ಜಿಗಿಟಿದರೂ ಒಂದೇ ರಕ್ತ. ಮಾತಾಡಲಿ ಬಿಡಪ್ಪ" ಅಂದಳು. ನನಗೆ ಒಬ್ಬ ಅನಕ್ಷರಸ್ಥ

ಮಹಿಳೆ ಹೇಳಿದ ಈ ಮಾತುಗಳು ನನ್ನ ಮೇಲೆ ತುಂಬಾ ಪರಿಣಾಮಬೀರಿತು. ಒಬ್ಬ ವಿಧವೆಯನ್ನು ಕೂಡ ಮದುವೆ ಮಾಡಿದೆ. 1958ರಲ್ಲಿ ಸಾಹುಕಾರನ ಮಕ್ಕಳು 'ನವಜೀವನ ಮಂಟಪ' ಎಂದು ಕರೆದು ಎಲ್ಲರೂ ಒಂದೇ ಚಪ್ಪರದ ಅಡಿಯಲ್ಲಿ ಮದುವೆ ಮಾಡಿದೆವು. ಆಗ ಚನ್ನಪಟ್ಟಣದ ಸಿಲ್ಕ್ ಸ್ಯಾರಿಯನ್ನು ಬಡವನ ಮಗಳು, ಶ್ರೀಮಂತನ ಮಗಳು ಇಬ್ಬರು ಒಂದೇ ಸೀರೆ ಉಡಬೇಕು. ಇದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ಗುರುಕುಮಾರ್ ಆಶ್ರಮದಲ್ಲಿ ವರ್ಷಕ್ಕೆ ಒಂದು ಬಾರಿ ಧಾರ್ಮಿಕ ಸಮ್ಮೇಳನ ನಡೆಯುತ್ತಿತ್ತು. ನಾವು ಗುರುಕುಲ ಸ್ವಚ್ಛಮಾಡುವುದು, ಬಂದವರಿಗೆ ಊಟ ಬಡಿಸುವುದು ನಮ್ಮ ಯುವಕ ಸಂಘದವರು ಮಾಡುತ್ತಿದ್ದೆವು. ಯಾರದೇ ಮನೆಯಲ್ಲಿ ಮದುವೆ ಆದರೆ ನಮ್ಮ ಸಂಘದ ಯುವಕರು ಚಪ್ಪರ ಹಾಕುವ, ಊಟ ಬಡಿಸುವ ಕೆಲಸ ಮಾಡುತ್ತಿದ್ದರು. ಇದಕ್ಕೆ 3–4 ರೂಪಾಯಿಗಳನ್ನ ಸಂಘಕ್ಕೆ ನೀಡುತ್ತಿದ್ದರು. ಆಗ ಇದನ್ನೆಲ್ಲಾ ಸೇರಿಸಿ ನಿಧಿ ಮಾಡುತ್ತಿದ್ದೆವು. ಭಜನೆಯನ್ನು ಮನೆಯಿಂದ ಮನೆಗೆ ಮಾಡುತ್ತಿದ್ದೆವು. ಆ ಸಂದರ್ಭದಲ್ಲಿ ಕೊಡುತ್ತಿದ್ದ ಬೆಲ್ಲವನ್ನು ಸಂಗ್ರಹಿಸಿ ಅದನ್ನ ಹರಾಜು ಹಾಕಿ ಅದರಿಂದ ಬಂದ ಹಣವನ್ನು ಸಂಘಕ್ಕೆ ಹಾಕುವುದು. ಆ ಮೂಲಕ ಸಾಮೂಹಿಕ ಬದುಕನ್ನ ರೂಪಿಸಿ ಗುಂಪಿನಲ್ಲಿ ಬದುಕುವುದು. ಜಾನಪದ ಕಲೆಯಾದ ವೀರಗಾಸೆ ಮತ್ತಿತರ ಸಾಂಸ್ಕೃತಿಕ ಚಟುವಟಿಕೆ ಮೂಲಕ ಕಲಾಪ್ರದರ್ಶನ ಮಾಡುತ್ತಿದ್ದೆವು. ಹೀಗಾಗಿ ಗ್ರಾಮೀಣ ಬದುಕಿನ ಹತ್ತಿರವೇ ಇರಬೇಕು ಅನಿಸಿತು.

ಮುಂದೆ ನಾನು ಗಾಂಧಿ ಗ್ರಾಮದಲ್ಲಿ ತರಬೇತಿ ಪಡೆದುಕೊಳ್ಳುವ ಸುಯೋಗ ಒದಗಿಬಂದಿತು. 1962ರಲ್ಲಿ ಚೀನಾ ಭಾರತ ಯುದ್ಧ ನಡೆಯುತ್ತಿತ್ತು. ಗಾಂಧಿ ಗ್ರಾಮದಲ್ಲಿ ನಾನು ತುಂಬಾ ಪ್ರೇರಣೆ ಪಡೆದುಕೊಂಡೆ. ಸೇಲಂನಲ್ಲಿ ಈ ಸಂಸ್ಥೆ ಅತ್ಯಂತ ದೊಡ್ಡ ಸಂಸ್ಥೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ದೊಡ್ಡ ದೊಡ್ಡ ಪ್ರಾಧ್ಯಾಪಕರು ತರಗತಿ ಮಾಡುತ್ತಿದ್ದರು. ಒಂದು ಪತ್ರ ಕೊಡಲು ಕ್ಲಾಸ್ ರೂಂನ ಹತ್ತಿರ ಅವರೇ ಬರುತ್ತಿದ್ದರು. ನಾವು ಇಲ್ಲಿ ಎಲ್ಲದಕ್ಕೂ ಪೀವನ್, ಪೀವನ್ ಎಂದು ಕರೆಯುತ್ತೀವಿ. ಅಷ್ಟೊಂದು ದೊಡ್ಡ ಪಂಡಿತರು, ಮೇಧಾವಿಗಳು ಇಂತಹ ಸಣ್ಣ ಕೆಲಸವನ್ನು ತಾವೇ ಮಾಡುವುದು, ಅಡಿಗೆ ಮನೆಯಲ್ಲಿ ಅಡಿಗೆಯವರಿಗೆ ತರಕಾರಿ ಹಚ್ಚಿಕೊಡುವುದು, ಇದೆಲ್ಲಾ ನನ್ನ ಮೇಲೆ ಪರಿಣಾಮಬೀರಿತು. ಇದರಿಂದ ವಿನಮ್ರವಾಗಿ ಏನಾದರೂ ಸೇವೆ ಮಾಡಬೇಕು ಅನಿಸಿತು. ನಾನು ಅಭಿಮಾನದಿಂದ ಹೇಳುತ್ತೇನೆ. ನನ್ನ ಊರಿನ್ನು ಒಂದು ಮಾದರಿ ಹಳ್ಳಿಯನ್ನಾಗಿ ಮಾಡಿದ್ದೇನೆ. ಗ್ರಂಥ ಪ್ರಕಟಿಸಿದ್ದೇವೆ. ಜಾನಪದ ಗೀತೆಗಳ ಸಂಗ್ರಹ ಕೆಲವು ಪ್ರಕಟಣೆ ಮಾಡಿದೆವು. ಜಾನಪದ ಗಾಯಕಿ

ಬಾಗೂರು ನಾಗಮ್ಮನವರ ಹಾಡುಗಳನ್ನು ಸಂಗ್ರಹ ಮಾಡಿ ಹಳ್ಳಿ ಬಳಗದಿಂದ ಪ್ರಕಟಣೆ ಮಾಡಿದೆವು. ಡಿಸಿ ಬಸಪ್ಪ, ತರಿಕೆರೆ ಎಂ.ಎಲ್.ಎ, ಇವರು ಭರಣಯ್ಯನವರಿಗೆ ಆತ್ಮೀಯರು. ಅವರ ನೆನಪಿನಲ್ಲಿ 'ನೆನಪು' ಎಂಬ ಒಂದು ಗ್ರಂಥ ತಂದೆವು. ಮುದ್ರಣ ಸೌಲಭ್ಯ ಇಲ್ಲದಿರುವ ಆ ಕಾಲದಲ್ಲಿ ಮುದ್ರಣ ಮಾಡಿಸಿದೆವು. ಆಗ 'ನಮ್ಮ ಹಳ್ಳಿ ಮಾದರಿ ಗ್ರಾಮ' ಎಂದು ಪ್ರಶಸ್ತಿ ಬಂದಿತು. ನಮ್ಮ ಜನಗಳ ಸಹಾಯದಿಂದ ಸಮುದಾಯ ಭವನ, ದಾಸೋಹ ಭವನ, ಬಯಲು ರಂಗಭೂಮಿ, ನಮ್ಮ ತಂದೆ ತಾಯಿ ಹೆಸರಿನಲ್ಲಿ ಊರಿನಲ್ಲಿ ಶುದ್ಧ ಕುಡಿಯುವ ನೀರಿನ ಟ್ಯಾಂಕ್ ಕಟ್ಟಿಸಿದ್ದೇನೆ. ನಾವು ವಾಸವಾಗಿದ್ದ ಹಳ್ಳಿಯ ಮನೆಯನ್ನು ಗ್ರಾಮೀಣ ಮಾಹಿತಿ ಕೇಂದ್ರವನ್ನಾಗಿ ಮಾರ್ಪಡಿಸಿದೆವು. ಹಳ್ಳಿಗರಿಗೆ ಆಧುನಿಕ ಮಾಹಿತಿ ದೊರಕಿಸುವುದು ಇದರ ಉದ್ದೇಶವಾಗಿದೆ ಇದು ಉದ್ಘಾಟನೆ ಆಗಬೇಕಿದೆ. 'ವಿಶ್ವರಂಗ ದಿನಾಚರಣೆ'ಯನ್ನ ಆಚರಿಸಿದೆವು. ಎಲ್ಲಾ ನಟ–ನಟಿಯರು ಹಳ್ಳಿಗಳಿಗೆ ಬಂದು 'ಒಂದು ಮನೆಯ ಕಥೆ' ಚಿತ್ರೀಕರಣ ಮಾಡಿದರು. ಹೀಗೆ ನಾನು ನನ್ನ ಹಳ್ಳಿಗಾಗಿ ನನ್ನನ್ನು ತೊಡಗಿಸಿಕೊಳ್ಳುವ ಮೂಲಕ 'ಸೇವೆ'ಗೆ ಅರ್ಥವನ್ನು ಕಂಡುಕೊಂಡಿದ್ದೇನೆ ಅಂತ ನನಗೆ ಅನಿಸಿದೆ. ಇದಕ್ಕೆ ವ್ಯಾಖ್ಯಾನ ಅಗತ್ಯವಿಲ್ಲವೆಂದು ಬಾವಿಸುವೆ.

ನಿಮ್ಮ ಹಾಗೂ ಆರ್. ಭರಣಯ್ಯನವರ ಒಟನಾಟ ಕುರಿತು ಹೇಳಿ

ಟೀಚರ್ ಆದ ಮೇಲೆ Social Education Organiser ಸಮಾಜ ಶಿಕ್ಷಣ ಸಂಘಟಕ ಎಂಬ ಒಂದು ಪೋಸ್ಟ್ ಇತ್ತು. ಆಗ ಭರಣಯ್ಯನವರು ಸೆಕ್ರೆಟರಿ, ಕಮ್ಯುನಿಟಿ ಡೆವೆಲಪ್‌ಮೆಂಟ್ ಆಗಿದ್ದರು. ಅಂದು ತಾಲ್ಲೂಕಿಗೆ ಒಂದು 'ಸಮಾಜ ಶಿಕ್ಷಣ ವಿಸ್ತರಣಾ ಅಧಿಕಾರಿ' ಎಂಬ ಹುದ್ದೆ ಇತ್ತು. ಆಗ ಎ.ಸಿ. ದೇವಗೌಡರು, ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕರು ಇದ್ದರು. ಭರಣಯ್ಯನವರಿಗೆ ನಿಕಟರಾದವರು. ಅವರು ಒಂದು ಸಲಹೆಯನ್ನು ಭರಣಯ್ಯನವರಿಗೆ ಕೊಟ್ಟರು. ಒಳ್ಳೆಯ ಪ್ರತಿಭಾವಂತ ಶಿಕ್ಷಕರು ಇದ್ದಾರೆ. ಹಳ್ಳಿಯ ಪರಿಚಯ ಇರುವವರನ್ನು ಆರಿಸಿದರೆ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ಸೂಚಿಸಿದರು. 20 ಜನರನ್ನು ಜಿಲ್ಲೆಗೆ ಒಬ್ಬರಂತೆ ಆರಿಸಿದರು. ನಮ್ಮ ಜಿಲ್ಲೆಯಿಂದ ಎರಡು ಜನರನ್ನು ಆರಿಸಿದರು. ನಾನೂ ಒಬ್ಬ ಅದರಲ್ಲಿ. Community development ಆಗಿ ಆಯ್ಕೆಯಾದೆ. ಶಿವಮೊಗ್ಗ ಜಿಲ್ಲೆಗೆ ಬಂದೆ. ಪಂಚಾಯತ್ ರಾಜ್‌ನಿಂದ ಒಂದು ಪತ್ರಿಕೆ ಬರುತ್ತಿತ್ತು. ಈಗ ಕರ್ನಾಟಕ ವಿಕಾಸ ಎಂದು ಹೆಸರು ಬದಲಾಯಿಸಲಾಗಿದೆ. ಆ ಪತ್ರಿಕೆಗೆ ಸಹ ಸಂಪಾದಕನ ಅಗತ್ಯವಿತ್ತು. ಸಂದರ್ಶನಕ್ಕೆ ಕರೆದಿದ್ದರು, ಹೋದೆ. ಅದಕ್ಕೆ ಆಯ್ಕೆಯಾದೆ.

ಈ ಮೂಲಕ ವಾರ್ತಾ ಇಲಾಖೆ ಸೇರಿಕೊಂಡೆ. ಆಗ ನನಗೆ ಭರಣಯ್ಯನವರ ಪರಿಚಯವಾಯಿತು. ಅವರು ಸೆಕ್ರಟರಿಯಾಗಿದ್ದ ಕಾರಣ, ಕಮ್ಯುನಿಟಿ ಬಗ್ಗೆ ರೇಡಿಯೋದಲ್ಲಿ ಮಾತಾಡಬೇಕಾದ ಭಾಷಣ ಸಿದ್ಧಪಡಿಸುವುದು, ಲೇಖನ ಸಿದ್ಧಪಡಿಸುವುದು, ಸಮಾರಂಭದಲ್ಲಿ ಭಾಷಣ ಬರೆಯುವುದನ್ನು ನಾನೇ ಮಾಡುತ್ತಿದ್ದೆ. ಆಗ ಕ್ಷೇತ್ರದಲ್ಲಿ, ಬ್ಲಾಕ್‌ನಲ್ಲಿ ಏನೆಲ್ಲಾ ಆಗಬೇಕು, ಎಂಬುದರ ಬಗ್ಗೆ ಭರಣಯ್ಯನವರ ಜೊತೆ ಆಗಾಗ್ಗೆ ಚರ್ಚೆ ಮಾಡುತ್ತಿದ್ದೆವು. ಅವರು ಎಷ್ಟು ಸರಳ ವ್ಯಕ್ತಿ ಎಂದರೆ ನಾನು ಊಹೆ ಮಾಡಲು ಸಾಧ್ಯವಿಲ್ಲ. ನಾನು ಅನೇಕ ಸೆಕ್ರೆಟರಿಯವರನ್ನು ನೋಡಿದ್ದೇನೆ. ಆದರೆ ಇವರೊಡನೆ ಇರುವಷ್ಟು ನಿಕಟತೆ ಬೇರೆಯರೊಡನೆ ಇರಲಿಲ್ಲ. ವಾಸ್ತವವಾಗಿ ಅವರ ಕೆಳಗಿನ ನೌಕರಿ ಹಂತ ನಮ್ಮದು. ಆದರೆ ಒಮ್ಮೆಯೂ ನನಗೆ ಆ ಭಾವನೆ ಬರಲು ಅವಕಾಶಕೊಡಲಿಲ್ಲ. ಎಂತಹ ಸಂಸ್ಕಾರವಂತ ಆ ಪುಣ್ಯಾತ್ಮ ಎಂದರೆ 'ಜೀವಕಾರುಣ್ಯ' ವ್ಯಕ್ತಿತ್ವ. ಕಷ್ಟದಲ್ಲಿರುವವರಿಗೆ, ನೊಂದವರ ಬಗ್ಗೆ ಕನಿಕರ ಪಡುತ್ತಿದ್ದರು. ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಅಪಾರ ಅನುಕಂಪ ಮತ್ತು ಕಾಳಜಿ. ಅವರು ನಾವು ಏನು ಮಾತಾಡಿದರೂ ಇದರಿಂದ ಹಳ್ಳಿಗರಿಗೆ ಏನೂ ಉಪಯೋಗ ಎಂದು ಕೇಳುತ್ತಿದ್ದರು. ಹಾಗಾಗಿ ಕಮ್ಯುನಿಟಿ ಡೆವಲಪ್‌ಮೆಂಟ್ ಯೋಜನೆ ಅವರ ಕಾಲದಲ್ಲಿ ಸಾರ್ಥಕವಾಯಿತು. ಎಂತಹ ಸೋಗಸಾದ ಯೋಜನೆ. ಎಸ್.ಕೆ.ಡೇ ಎನ್ನುವವರ ಪರಿಕಲ್ಪನೆ ಅದಾಗಿತ್ತು. ಆಗಲೇ ಕಮ್ಯುನಿಟಿ ಡೆವಲಪ್‌ಮೆಂಟ್ ಬಗ್ಗೆ ನೆಹರುರವರು ಮಾಡಿದ ಭಾಷಣವನ್ನು ಭಾಷಾಂತರ ಮಾಡಿದ್ದೆ. ಕೇಂದ್ರ ಸರ್ಕಾರ ಪ್ರಕಟಣೆ ಮಾಡಿತ್ತು. ಅಂತಹ ಯೋಜನೆಹೋಯಿತು. ಪ್ರತಿ ಹೆಜ್ಜೆಹೆಜ್ಜೆಯಲ್ಲೂ ಜನರು ಪಾಲುದಾರಿಕೆ ಈ ಯೋಜನೆಯಲ್ಲಿ ಇತ್ತು. ಜನರು ತಮ್ಮ ಭಾಗದ ಕೆಲಸ ಮಾಡಿ ತಮ್ಮ ಪಾಲು ಪಡೆದುಕೊಳ್ಳುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾಲುದಾರಿಕೆ ಇಲ್ಲದೆ ಯಾವುದೇ ಗ್ರಾಮೀಣಾಭಿವೃದ್ಧಿ ಯಶಸ್ವಿಯಾಗುವುದಿಲ್ಲ. ಈಗ ಸಮುದಾಯದ ಎಲ್ಲಾ ಕಾರ್ಯಗಳು ಬಹುಪಾಲು ಗುತ್ತಿಗೆದಾರರ ಪಾಲಾಗುತ್ತವೆ. ಅಲ್ಲಿ ಕಾಮಗಾರಿ ಗುಣಮಟ್ಟ ಕಳಪೆಯಾಗುತ್ತಿದೆ. ಎಲ್ಲ ಅವ್ಯವಸ್ಥೆ. ಈಗಲೂ ಕೂಡ ಸಮುದಾಯ ಅಭಿವೃದ್ಧಿ ಕೆಲಸಗಳು ಹಿಂದಿನಂತೆ ಜನರ ಭಾಗವಹಿಸುವಿಕೆಯಲ್ಲಿ ಜಾರಿಯಾಗಬೇಕು ಅನಿಸುತ್ತದೆ.

ಸರ್ಕಾರದಲ್ಲಿ ಸುತ್ತೋಲೆ ಹೊರಡಿಸುವಾಗ ಭರಣಯ್ಯನವರು ನನ್ನೊಡನೆ ಚರ್ಚೆ ಮಾಡುತ್ತಿದ್ದರು. ಇದರಿಂದಾಗಿ ಅವರೊಡನೆ ಮಾತನಾಡುವ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶ ದೊರೆಯಿತು. ಅವರು ನಿವೃತ್ತಿಯಾದ ಮೇಲೆ ಪಿ.ಎಸ್.ಸಿ. ಸದಸ್ಯರಾದರು. ಆಗಾಗ ನಾನು ಅವರನ್ನು ಕಾಣುತ್ತಿದ್ದೆ. ಆಗ

ನಾನು ಒಂದು ವಿಷಯವನ್ನು ಭರಣಯ್ಯನವರ ಜೊತೆ ಚರ್ಚಿಸಿದೆ. ಸರ್ ನೀವು ಸಂದರ್ಶನ ಮಾಡುವಾಗ ನಗರ-ಗ್ರಾಮೀಣ ಅಭ್ಯರ್ಥಿಗಳಿಗೆ ಒಂದೇ ರೀತಿಯ ಪ್ರಶ್ನೆಗಳನ್ನು ಹಾಕುತ್ತೀರಿ. ಆಗ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ವಿಮಾನ ನಿಲ್ದಾಣದ ಬಗ್ಗೆ ಕೇಳಿದರೆ ಅವನಿಗೆ ಹೇಗೆ ಉತ್ತರ ಹೇಳಲು, ನಾವು ಏನು ಹೇಳಿಕೊಟ್ಟಿದ್ದೇವೆ. ಹಾಗೇ ನಗರದ ವಿದ್ಯಾರ್ಥಿಗಳಿಗೆ ಬಿತ್ತನೆ ಬೀಜ ಗೊಬ್ಬರದ ಬಗ್ಗೆ ಕೇಳಿದರೆ ಉತ್ತರ ಕೊಡಲಾರ. ಆದ್ದರಿಂದ ವಿದ್ಯಾರ್ಥಿಯ ಪ್ರತಿಭೆ ಕಂಡುಕೊಳ್ಳಬೇಕಾದರೆ ಆಯಾ ಪರಿಸರದ ಹಿನ್ನೆಲೆ ನೋಡಿ ಪ್ರಶ್ನೆ ಸಿದ್ಧಪಡಿಸಿಕೊಂಡರೆ ಸೂಕ್ತ ಎಂದು ಹೇಳಿದೆ. ಅವರು ತುಂಬ ಮೆಚ್ಚಿಕೊಂಡರು. ಇದನ್ನ ಮಾಡೋಣ ಎಂದರು. ಅಷ್ಟೊತ್ತಿಗೆ ಅವರು ನಿವೃತ್ತಿಯಾದರು. ಭರಣಯ್ಯ ಗ್ರಾಮೀಣ ಪ್ರದೇಶದವರಿಗೆ ಹೆಚ್ಚು ಆದ್ಯತೆ ಕೊಟ್ಟವರು. ಎಷ್ಟು ಜನರು ಅವರ ಸಹಾಯ ಪಡೆದುಕೊಂಡಿರಬಹುದೆಂದು ಲೆಕ್ಕವಿಲ್ಲ. ಅವರಿಗೆ ವಚನ ಸಾಹಿತ್ಯದ ಬಗ್ಗೆ ತುಂಬಾ ಜ್ಞಾನವಿತ್ತು. ಬಸವಣ್ಣನವರ ಬಗ್ಗೆ ವಿಶೇಷವಾದ ಗೌರವವಿತ್ತು.

ಹನ್ನೆರಡನೇ ಶತಮಾನದಲ್ಲಿದ್ದ ಸಂಪ್ರದಾಯಿಕ, ಸನಾತನ ಹಿಡಿತದಲ್ಲಿದ್ದ ವ್ಯವಸ್ಥೆಯನ್ನು ಬದಲಾಯಿಸಲು ಬಸವಣ್ಣ ಮಾಡಿದಂತಹ ಕೆಲಸ ಅದ್ಭುತವಾದದ್ದು. ಆ ಒಂದು ವೈಚಾರಿಕ ಸಂಗತಿಗಳು ಇವತ್ತಿಗೂ ಅನ್ವಯವಾಗಬೇಕು ಎಂದು ಭರಣಯ್ಯನವರು ನನ್ನೊಡನೆ ಹೇಳುತ್ತಿದ್ದರು. ದುರಾದೃಷ್ಟವಶಾತ್ ಇವತ್ತು ಬಸವಣ್ಣನವರ ವಚನ ಹೇಳುವಂತಾಗಿದೆ. ಆದರೆ ವಚನದಂತೆ ಪರಿಪಾಲಿಸದಿರುವುದು ವ್ಯಸನದ ಸಂಗತಿ. ಹೀಗೆ ನನ್ನ ಅವರ ಸಂಬಂಧ ಸಮಚಿಂತನೆಯೊಂದಿಗೆ ಸಾಗಿತ್ತು.

ಅನೇಕ ಸಂಕಷ್ಟಗಳ ನಡುವೆಯೂ ಭರಣಯ್ಯನವರಿಗೆ ಕೆಲಸ ಮಾಡಲು ಸಾಧ್ಯವಿತ್ತು. ಆದರೆ ಇಂದು ಅದು ಸಾಧ್ಯವಾಗುತ್ತಿರುವುದೇ?

ಯಾರೇ ಮಾಡಲಿ. ಅದೇ ಸಮುದಾಯದಿಂದ ಬಂದಂತಹ ವ್ಯಕ್ತಿಗಳಿಗೆ ಉಳಿದವರಿಗಿಂತ ಹೆಚ್ಚಿನ ಕಾಳಜಿ ಇರಬೇಕಾಗಿತ್ತು. ಉಳಿದವರಿಗೆ ಆ ನೋವು. ತಲೆಮಾರಿಗಳಿಂದ ಅನುಭವಸಿದಂತಹ ಅವಮಾನದ ಅರಿವಿರುವುದಿಲ್ಲ. ಅನುಕಂಪ, ಶ್ರದ್ಧೆ, ಆಸಕ್ತಿ ಅದಕ್ಕಾಗಿ ತನ್ನ ಬದುಕು ಮೀಸಲಿಡುವ ಸಂಕಲ್ಪ ಇರಬೇಕಾಗಿತ್ತು. ಭರಣಯ್ಯ ಆ ಕೆಲಸ ಮಾಡಿದರು. ಅವರ ಬದುಕಿನ ಉದ್ದಕ್ಕೂ ಹೋರಾಟ ಮಾಡಿದರು. ಇಷ್ಟಾದರೂ ಕೂಡ ಅವರು ಯಾವುದೆ ವರ್ಗದವರೊಡನೆ ಸಂಘರ್ಷಕ್ಕಿಳಿಯಲಿಲ್ಲ. ಅದೊಂದು ವಿಶೇಷ. ಯಾಕೆಂದರೆ ಅವರು ಅಷ್ಟು ಸಹಜವಾಗಿ ಕೆಲಸ ಮಾಡುತ್ತಿದ್ದರು.

ಅದರಲ್ಲಿ ಕೃತಕವಾಗಿ ಏನೂ ಮಾಡುತ್ತಿರಲಿಲ್ಲ. ವ್ಯಕ್ತಿ ಶುದ್ಧನಾಗಿದ್ದರಿಂದ, ಅವರಲ್ಲಿ ವಿಶ್ವಾಸವಿತ್ತು. ಯಾರೊಡನೆ ಬೇಕಾದರೂ ಮಾತಾಡಬಹುದಾಗಿತ್ತು. ಪ್ರಶ್ನೆ ಮಾಡಬಹುದಿತ್ತು. ವ್ಯಕ್ತಿಶೀಲವಂತ ಮತ್ತು ಶುದ್ಧವನಾಗಿದ್ದರೆ ಎಲ್ಲವನ್ನ ಸಾಧಿಸಬಲ್ಲ. ಅದು ಭರಣಯ್ಯನವರಿಗಿತ್ತು. ವ್ಯಕ್ತಿಯಲ್ಲಿ ಲೋಪ ಇದ್ದರೆ, ಎಲ್ಲ ಅಳಕು ಇರುತ್ತದೆ. ಆ ಅಳಕು, ಉಳುಕು ಮುಚ್ಚಿಕೊಳ್ಳಲು ಭ್ರಷ್ಟತೆಗೆ ಇಳಿಯುತ್ತಾನೆ. ಅವನ ಮೇಲ್ಪಟ್ಟವನಿಗೆ ಒಪ್ಪಿಸಲು ಹಣ ಕೊಡಬೇಕಾಗುತ್ತದೆ. ಮೇಲೆ ಹಣ ಕೊಡಬೇಕಾದರೆ ಕೆಳಗಿನಿಂದ ಹಣ ಮಾಡಬೇಕಾಗುತ್ತದೆ ಇದು ಎಲ್ಲಾ ಕಡೆ ಕಾಣುತ್ತಿದೆ.

ಆದರೆ ನನ್ನ ಅಭಿಪ್ರಾಯದಲ್ಲಿ ಆ ಸಮುದಾಯದ ಬಂದವರು ಈಗ ಸ್ವಾತಂತ್ರ್ಯ ನಂತರ ಅಧಿಕಾರ ಪಡೆದವರು ಅವರೆಲ್ಲಾ ಮನಸ್ಸು ಮಾಡಿದ್ದರೆ, ಈಗಿರುವ ಅನೇಕರನ್ನು ನೋಡಿದ್ದೀನಿ ಅವರು ಆಸ್ತಿ ಮಾಡಿದ್ದಾರೆ. ಶ್ರೀಮಂತರಾಗಿದ್ದಾರೆ, ಬಂಗಲೇ ಕಟ್ಟಿದ್ದಾರೆ, ಅದೆಲ್ಲಾ ಸರಿ, ಆದರೆ ನನ್ನ ಹಿಂದೆ ಬಂದಂತಹ ಜನಗಳ ಬದುಕು ಏನು ಎಂದು ಯೋಚಿಸುವವರು ಕಣ್ಮರೆಯಾಗುತ್ತಿದ್ದಾರೆ. ನಿವೃತ್ತರಾದ ಅಧಿಕಾರಿಗಳಿಗೆ ನನ್ನ ಕೋರಿಕೆ – ನೀವು ಹುಟ್ಟಿದ ಹಳ್ಳಿಗೆ ಏನಾದರೂ ಕೆಲಸ ಮಾಡಿ ಭಾರತ ಉದ್ಧಾರ ಆಗುತ್ತೆ, ಬೇರೆ ಏನೂ ಮಾಡಬೇಕಾಗಿಲ್ಲ. ರೂ. 25 ವೇತನ ಪಡೆಯುತ್ತಿದ್ದವನಿಗೆ ಇಂದು ವಿಶ್ರಾಂತಿ ವೇತನ ರೂ. 15,000 ದೊರೆಯುವುದು. ಏನು ಸಾಮಾನ್ಯವೇ? ಅದರಲ್ಲಿ ಒಂದು ಸಣ್ಣ ಭಾಗ ಹಳ್ಳಿಗೆ ವಿನಿಯೋಗವಾಗಬಾರದೆ? ನಮ್ಮಷ್ಟಕ್ಕೆ ನಾನು ನಗರಕ್ಕೆ ಬಂದು ಮನೆ ಕಟ್ಟಿಕೊಂಡು ನಮ್ಮಷ್ಟಕ್ಕೆ ಇದ್ದು ಬಿಟ್ಟರೆ ಹಳ್ಳಿಯವರನ್ನು ನೋಡುವವರು ಯಾರು? ಹಳ್ಳಿಯಲ್ಲಿರುವ ನಿರುದ್ಯೋಗಿಗಳಿಗೆ ನಮ್ಮ ಪರಿಚಯಸ್ಥರಿಗೆ ಹೇಳಿ ಒಂದು ಉದ್ಯೋಗ ಕೊಡಿಸುವ ಮೂಲಕ ನಿರುದ್ಯೋಗವಿಲ್ಲದಂತೆ ಮಾಡಲು ಸಾಧ್ಯವಿಲ್ಲವೆ? ಹಾಸ್ಟಲ್‌ನಲ್ಲಿ ಒಬ್ಬ ಬಡವ ವಿದ್ಯಾರ್ಥಿಗೆ ಸೀಟು ಕೊಡಿಸಲು ಸಾಧ್ಯವಿಲ್ಲವೆ? ಇದಕ್ಕೆ ಯಾವ ಬಂಡವಾಳ ಬೇಕು ನಮ್ಮ ಜನರನ್ನು ನಮ್ಮ ಹತ್ತಿರವೇ ನಾವು ಬಿಟ್ಟುಕೊಳ್ಳುವುದಿಲ್ಲ. ಯಾರೇ ಇರಲಿ ಯಾವುದೇ ಜನಾಂಗದವನು ಇರಲಿ ಎಲ್ಲೆಲ್ಲಿ ಅವಕಾಶವಿದೆ, ಪ್ರಯತ್ನ ಪಟ್ಟು ಎಲ್ಲಾ ಅಧಿಕಾರಸ್ಥರು ಇದನ್ನು ಮಾಡಲಿ. ಭಾರತ ಮತ್ತು ಹಳ್ಳಿ ಉದ್ಧಾರವಾಗುತ್ತೆ. ಸಹಾಯಮಾಡಬಹುದು.

ನಮ್ಮ ನೋವನ್ನು ನಿವಾರಣೆ ಮಾಡಲು ನಮ್ಮ ನೆಲದ ಭಾಷೆ, ಸಂಸ್ಕೃತಿ ತಿಳಿಯದೆ ಬಂದಿರುವ IAS ಅಧಿಕಾರಿಯಿಂದ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ನಮ್ಮವರಿಂದ ನಾವು ನಿರೀಕ್ಷೆ ಮಾಡುತ್ತೇವೆ. ಯಾಕೆಂದರೆ ಇವರು ನೋವನ್ನು ಅನುಭವಿಸಿದ್ದಾರೆ. ಇವರು ಅನುಭವಿಸದಿದ್ದರೂ ತಂದೆ ತಾಯಿ ಅನುಭವಿಸಿದ್ದಾರಲ್ಲ. ನಮ್ಮ ತಾಯಿ–ತಂದೆ ಹೇಗೆ ನಮ್ಮನ್ನು ಕಷ್ಟಪಟ್ಟು ಮೇಲಕ್ಕೆ ತಂದಿದ್ದಾರೆ ಎಂಬುದನ್ನು

ಇಂದಿನವರು ಅಧಿಕಾರದ ಅಮಲಿನಲ್ಲಿ ಮರೆತುಬಿಟ್ಟಿದ್ದಾರೆ. ಇದರ serious-ness ಬರಬೇಕು. ಈಗ ಈ ಜನಾಂಗದಲ್ಲಿ ಸಾಕಷ್ಟು ಅಧಿಕಾರಿಗಳು ಈ ಉನ್ನತ ಹುದ್ದೆಗೆ ಬಂದಿದ್ದಾರೆ. ಅವರು ಮನಸ್ಸು ಮಾಡಿದರೆ ಕಷ್ಟದಲ್ಲಿರುವವರನ್ನು ಪಾರು ಮಾಡಬಹುದು. ವೈಯುಕ್ತಿಕವಾಗಿ ಹಾಳಾಗಿದ್ದರೆ ನಾವು ಸರಿಮಾಡಲು ಸಾಧ್ಯವಿಲ್ಲವೇ, ಬಿಡಿ. ಆದರೆ ಇದ್ದುದರಲ್ಲಿ ಸಮುದಾಯಕ್ಕೆ ಸಹಾಯ ಮಾಡಲು ಸಾಧ್ಯವಿದೆ. ಭರಣಯ್ಯನವರು ತಮ್ಮ ಕಾಲದಲ್ಲಿ ಸಾಕಷ್ಟು ಕೆಲಸ ಮಾಡಿದರು. ಅನೇಕರಿಗೆ ಉದ್ಯೋಗ ಕೊಡಿದ್ದಾರೆ. ಪ್ರಾಮಾಣಿಕವಾಗಿ ಕಷ್ಟ ಎಂದು ಬಂದವರನ್ನು ಕೈಹಿಡಿದು ಕಾಪಾಡಿದ್ದಾರೆ. ಇಂದು ಅಂಥವರು ಬೇಕು. ಆದರೆ ಇಂದು ಸರಕಾರದ ಎಷ್ಟೋ ಸವಲತ್ತುಗಳು, ಅವಕಾಶಗಳು ಯಾರೋ ಮಧ್ಯಸ್ಥರು, ದಲ್ಲಾಳಿಗಳ ಕೈವಶವಾಗುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಗುಡ್ಡಗಾಡಿನವರಿಗೆ ಮೀಸಲಿರುವ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ. ಈ ಬಗ್ಗೆ ಆ ಸಮುದಾಯದಿಂದ ಬಂದ ಅಧಿಕಾರಿಗಳು ಚಿಂತಿಸಿ–ಗಂಭೀರವಾಗಿ ಗಮನಹರಿಸಬೇಕು. ಇದು ಜನಾಂಗದ ದೃಷ್ಟಿಯಿಂದ ಅಗತ್ಯವಿದೆ. ಭರಣಯ್ಯನವರಲ್ಲಿ ಆ ಕಾಳಜಿ ಮತ್ತು ನಿಷ್ಠೆ ಇದ್ದುದನ್ನು ನಾವು ನೆನೆಯಬೇಕು.

ಭರಣಯ್ಯನವರನ್ನು ಇವತ್ತಿನ ವರ್ತಮಾನಕಾಲಕ್ಕೆ ಹೇಗೆ ನೆನಸಿಕೊಂಡರೆ ಸಾರ್ಥಕವೆನಿಸುತ್ತದೆ.

ನಾವು ಕಣ್ಣಮುಂದೆ ಇಲ್ಲದಿರುವವರ ಬಗ್ಗೆ ಹೇಳಬಹುದಾದದ್ದು, ಅವರು ಮಾಡಿರುವ ಒಳ್ಳೆಯ ಕೆಲಸದ ಬಗ್ಗೆ ಮಾತ್ರ. ಇಂತಹ ಆದರ್ಶ ವ್ಯಕ್ತಿಗಳನ್ನು ಪರಿಚಯ ಮಾಡಿಕೊಟ್ಟರೆ 100 ಜನರಿಗೆ ಪರಿಚಯ ಮಾಡಿಕೊಟ್ಟರೆ 10 ಜನರಿಗಾದರೂ ಪರಿಣಾಮ ಬೀರುವಂತೆ ಮಾಡುತ್ತದೆ. ಇದು ಸದಾ ನಡೆಯುತ್ತಿರಬೇಕು ಎಂಬ ವಿಶ್ವಾಸ ನನಗಿದೆ. ಇಷ್ಟು ದೊಡ್ಡ ಸಮುದಾಯವನ್ನು ಒಂದೇ ಸಾರಿ ಪರಿವರ್ತನೆ ಮಾಡಿಬಿಡುತ್ತೇವೆ. ಎಲ್ಲರನ್ನು ಭರಣಯ್ಯನವರಂತೆ ಮಾಡಿ ಎಂಬುದು ಭ್ರಮೆಯಾಗುತ್ತದೆ. ಆದರೆ ಭರಣಯ್ಯನವರು ಇಂತಹ ಧ್ಯೇಯಕ್ಕಾಗಿ ಬದುಕಿದ್ದವರು ಎಂಬುದನ್ನು ಪರಿಚಯಿಸಿಕೊಡಬೇಕು. ಅವರ ಬದುಕು ಮತ್ತು ಒಳ್ಳೆಯ ಕೆಲಸಗಳನ್ನು ಇವತ್ತಿನ ತಲೆಮಾರಿಗೆ ಪ್ರಭಾವಪೂರ್ಣವಾಗಿ ತಿಳಿಸುವಂತೆ ನಾವು ಮಾಡಬೇಕು. ಈಗಿನ ತಲೆಮಾರಿನಲ್ಲಿ ಯಾರನ್ನು ನಾವು ಮಾಡೆಲ್‌ಂತ ನೋಡಬೇಕು ಎಂಬುದರ ಅರಿವಿನ ಕೊರತೆ ಇದೆ. ಹೀಗಾಗಿ ಗಾಂಧೀಜಿ, ಬಸವಣ್ಣ, ಅಂಬೇಡ್ಕರ್ ಇವರ ಆದರ್ಶವನ್ನು ಹೇಳುತ್ತಾ ಹೋಗಬೇಕು.

ಭರಣಯ್ಯನವರು ಜನಸೇವೆ ಮಾಡುವ ಬಯಕೆಯಿಂದ ಚುನಾವಣೆಗೆ ನಿಂತರು. ಆದರೆ ಸೋಲಾಯಿತು. ಈ ಬಗ್ಗೆ ಹೇಳಿ.

ಅವರು ಚುನಾವಣೆಗೆ ನಿಂತಿದ್ದು ತಪ್ಪಲ್ಲ. ಗೆದ್ದಿದ್ದರೆ ಅದುವರೆಗಿನ ಅವರ ಎಲ್ಲಾ ಆಡಳಿತ ಅನುಭವವನ್ನು ಬಳಸಿಕೊಂಡು ಸಮುದಾಯಕ್ಕೆ ಸೇವೆಮಾಡುವ ಅವಕಾಶ ದಕ್ಕುತ್ತಿತ್ತು. ಅವರು ಚುನಾವಣೆಯಲ್ಲಿ ಗೆದ್ದಿದ್ದರೆ ಅವರು ನಿರ್ಧಿಷ್ಟ ಸಮುದಾಯಕ್ಕೆ ಮಾತ್ರ ಅವರ ಸೇವೆ ದೊರೆಯುತ್ತಿರಲಿಲ್ಲ. ಸಮಸ್ತ ಹಾಗೂ ನಾಡಿಗೇ ಅವರ ಸೇವೆ ಸಂದಾಯವಾಗುತ್ತಿತ್ತು. ಇಂತಹ ಪ್ರಾಮಾಣಿಕ ಅಧಿಕಾರಿಗಳು ನಿವೃತ್ತರಾದ ಮೇಲೆ ರಾಜಕೀಯಕ್ಕೆ ಹೋಗುವುದು ತಪ್ಪಲ್ಲ. ಹೋಗಬೇಕು. ಏಕೆಂದರೆ ಅವರಿಗೆ ಕಾನೂನು, ಸಂವಿಧಾನ, ರಾಜ್ಯಾಂಗ, ಆಡಳಿತ, ಜನರ ನಾಡಿಮಿಡಿತ, ಅವರ ಸಮಸ್ಯೆಗಳ ಅರಿವು, ತಿಳಿವಳಿಕೆ ಹೇಗೆ ಕೆಲಸ ಮಾಡಬೇಕು ಎನ್ನುವುದು ತಿಳಿದಿರುತ್ತದೆ. ಇದಾವುದನ್ನು ತಿಳಿಯದಿರುವ ಜನರು ಅಧಿಕಾರಕ್ಕೆ ಬರುವುದರಿಂದ ಕಾನೂನು ಪಾಲಿಸುವುದಿಲ್ಲ. ಸಂವಿಧಾನಕ್ಕೆ ಗೌರವವೂ ಬರುವುದಿಲ್ಲ. ಅಂತವರಿಂದ ರಾಜ್ಯದ ಭವಿಷ್ಯಕ್ಕೆ ಒಳ್ಳೆಯದೂ ಆಗುವುದಿಲ್ಲ. ಭರಣಯ್ಯನವರು ಚುನಾವಣೆಯಲ್ಲಿ ಯಾಕೆ ಸೋತರು ಎಂದರೆ ಅಷ್ಟೊತ್ತಿಗೆ ಭ್ರಷ್ಟತನ ತಾಂಡವವಾಡುತ್ತಿತ್ತು. ಹಣಬಲ ಚುನಾವಣೆಯಲ್ಲಿ ಕೆಲಸ ಮಾಡಲು ಆರಂಭಿಸಿತ್ತು. ಚುನಾವಣೆಯಲ್ಲಿ ನಡೆಯುವ ಭ್ರಷ್ಟತೆಯಿಂದಾಗಿಯೇ ಇಂತಹ ಸಭ್ಯರು ಸೋತು ಹೋಗುವರು.

ದಲಿತ ಅಧಿಕಾರಿಗಳು – ದಲಿತ ಸಂಘಟನೆಗಳು ಭರಣಯ್ಯನವರನ್ನು ಹೇಗೆ ನೆನಸಿಕೊಂಡರೆ ಇವತ್ತಿನ ಸಮುದಾಯಕ್ಕೆ ಹೊಸಸಂಕಲ್ಪ ಉಂಟಾಗಬಹುದು.

ಅವರನ್ನ ನೆನೆಯುವುದು ನನಗೆ ಅನುಮಾನ. ಎಷ್ಟು ಜನ ಅಂಬೇಡ್ಕರನ್ನು ಅವರ ಸಿದ್ಧಾಂತವನ್ನು ತಿಳಿದಿದ್ದಾರೆ ತಿಳಿಯದು. ಅವರನ್ನು ಇವತ್ತು ನಾವು ನೆನೆಯಲೇಬೇಕು. ಹಾಗೆಯೇ ಭರಣಯ್ಯನವರನ್ನೂ. ಇವರು ನಮ್ಮ ಕಣ್ಣ್ ಮುಂದೆ ಇದ್ದಂತಹ ವ್ಯಕ್ತಿ. ಕಣ್ಣೆದುರಿನ ಆದರ್ಶ. ಹೆಜ್ಜೆ ಹೆಜ್ಜೆಗೂ ನೆನಸಿಕೊಳ್ಳಬೇಕಾದ ಸಾಂಸ್ಕೃತಿಕ ಜೀವ. ಅವರ ಬಗ್ಗೆ ಆಗಿಂದಾಗ್ಗೆ ಚಿಂತನೆ, ವಿಚಾರ ಸಂಕಿರಣ ನಡೆಯಬೇಕು. ಭರಣಯ್ಯನವರನ್ನು ವ್ಯಕ್ತಿಗತವಾಗಿ ಹೊಗಳುವುದು ಎಂದಲ್ಲ. ಅವರು ಮಾಡಿದ ಕೆಲಸ, ಭಾವನೆ ಇಂದಿನ ತಲೆಮಾರಿಗೆ ಗೊತ್ತಾಗಬೇಕು. ಭರಣಯ್ಯನವರಿಗೆ ಎಂದೂ ಕೀಳರಿಮೆ ಇರಲಿಲ್ಲ. ದುರಾದೃಷ್ಟ ನಮ್ಮಲ್ಲಿ ಅದು ಕಾಡುತ್ತದೆ. ಬರೀ ವೇದಿಕೆ ಮೇಲೆ ದಲಿತರು ಉದ್ಧಾರ ಆಗಬೇಕು ಎಂದು ಹೇಳಿದರೆ ಸಾಲದು. ಸಾಂಸ್ಕೃತಿಕವಾಗಿ ಧಾರ್ಮಿಕ ರಾಜಕೀಯವಾಗಿ, ಆರ್ಥಿಕವಾಗಿ ಅವಕಾಶವನ್ನು ದಲಿತರಿಗೆ ಕಲ್ಪಿಸಿದರೆ ಮಾತ್ರ ನಿಜವಾದ ದಲಿತರ ಉದ್ಧಾರವಾಗುತ್ತದೆ.

ಆದರೆ ಹಣ ಮಾಡುವ ಪದ್ಧತಿ ಸರಿಯಲ್ಲ. ದುಡಿಮೆಗೆ ತಕ್ಕ ಪ್ರತಿಫಲ ಸಿಗಬೇಕು. ಕೆಲವು ಸಬ್ಸಿಡಿ ದುಡಿಮೆ ಮಾಡದಂತೆ ಮಾಡಿಬಿಟ್ಟಿದೆ. ದಲಿತವರ್ಗಕ್ಕೆ ಅಲ್ಲ ಎಲ್ಲಾ

ವರ್ಗಕ್ಕೆ ಅನ್ವಯಿಸುವ ಈ ಸಬ್ಸಿಡಿ ಕೆಟ್ಟ ಯೋಜನೆ. ಸುಮ್ಮನೆ ಸಬ್ಸಿಡಿ ಕೊಡುವುದಕ್ಕೆ ಕಷ್ಟಪಟ್ಟು ಸಬ್ಸಿಡಿ ಮತ್ತು ಇನ್ಸ್‌ಟೀವ್ ಕೊಡುವುದಕ್ಕೂ ವ್ಯತ್ಯಾಸವಿದೆ. ಕಷ್ಟಪಟ್ಟವನಿಗೆ ನೀಡಿದರೆ ಸಮಾಜದಲ್ಲಿ ಒಳ್ಳೆಯ ಕೆಲಸ ಆಗುತ್ತದೆ. ಬೇಕಾದಷ್ಟು ಪ್ರತಿಭೆಗಳು ಆ ಸಮುದಾಯದಲ್ಲಿ ಇದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ ಇದು ಭರಣಯ್ಯನವರ ಕಾಲದ್ದು. ಚೀನಾ ವಾರ್ ನಡೆಯುವ ಕಾಲಘಟ್ಟದ್ದು, ರೇಷನ್ ಕಾರ್ಡ್ ಮೂಲಕ ಪಡೆಯುವ ಸಂದರ್ಭ, ನಾನು ಟೀಚರ್ ಆಗಿದ್ದ ಆ ಹಳ್ಳಿಯಲ್ಲಿ ಒಬ್ಬ ಹರಿಜನ ಮಹಿಳೆ ಬಂದು ಪಡೆದುಕೊಂಡು ಹೋಗಬೇಕಿತ್ತು. ಅವಳಿಗೆ ಉಷಾರಿರಲಿಲ್ಲ. ಆಗ ನನ್ನ ಬಳಿ ಬಂದು ಮೇಷ್ಟ್ರೇ ನನ್ನ ಮಗನನ್ನು ಕಳುಹಿಸುತ್ತೇನೆ. ತೆಗೆದುಕೊಡಿಸಿ ಎಂದು ಕೋರಿದಳು. ನಾನು ಆಯಿತು ಕಳುಹಿಸಿ ಎಂದು ಹೇಳಿ ನನ್ನ ಮುಂದಿನ ಸಾಲಿನಲ್ಲಿ ನಿಲ್ಲಿಸಿಕೊಂಡೆ. ರೇಷನ್ ಕೊಡುವವರು ಹುಡುಗರಿಗೆ ರೇಷನ್ ಕೊಡಲ್ಲ, ಅವರ ಅಪ್ಪ ಅಮ್ಮ ಬಂದು ತೆಗೆದುಕೊಳ್ಳಬೇಕು ಎಂದು ಹೇಳಿದ. ಅದಕ್ಕೆ ಆ ಹುಡುಗ ತಕ್ಷಣ ಅವನ ಹಿಂದೆ ದಲಿತ ವರ್ಗದ ಇನ್ನೊಬ್ಬ ಹುಡುಗ ಹೇಳಿದ. ಕಂದಾಯ ವಸೂಲಿ ಮಾಡಲು ನೀನು ಬರಬೇಡ. ಡೆಪ್ಯುಟಿ ಕಮೀಷನರ್ ಕಳುಹಿಸಬೇಕು ಎಂದು ಹೇಳಿದ. ನಾನು ಬಹಳ ಸಂತೋಷ ಪಟ್ಟೆ. ಅವನು ಕೊಂಚ ಗಲಿಬಿಲಿಗೊಂಡು ನಂತರ ರೇಷನ್ ಕೊಟ್ಟ. ಇಂತಹ ಪ್ರತಿಭಾವಂತರು ಬೇಕಾದಷ್ಟು ಜನ ಹಳ್ಳಿಯಲ್ಲಿದ್ದಾರೆ. ಆದರೆ ಅವರಿಗೆ ಅವಕಾಶ ಸಿಗಬೇಕು. ದಲಿತ ವರ್ಗದ ಅಧಿಕಾರಿಗಳು ಇವತ್ತು ದಲಿತ ವರ್ಗದವರನ್ನೇ ಎಷ್ಟು ಮಟ್ಟಿಗೆ ಪ್ರೀತಿಯಿಂದ ಅಪ್ಪಿಕೊಂಡು ಸಹಾಯ ಮಾಡುತ್ತಿದ್ದಾರೆ ಎಂಬುದನ್ನು ಆತ್ಮಪರೀಕ್ಷೆ ಮಾಡಿಕೊಂಡು ಹೇಳಬೇಕು.

ಭರಣಯ್ಯನವರ ಬಗ್ಗೆ ನೀವು ಪ್ರೀತಿಯಿಂದ ಹೇಗೆ ನೆನೆಯುತ್ತೀರಿ.

ನನಗೆ ಭರಣಯ್ಯನವರ ಬಗ್ಗೆ ಹೆಚ್ಚು ಗೌರವ, ಪ್ರೀತಿ ವಿಶ್ವಾಸ ಹೆಚ್ಚು ಆಗಲು ಕಾರಣ ಅವರ ಸಭ್ಯತೆ. ಅವರ ನಡುವಳಿಕೆ, ನಾನು ಎಲ್ಲರಿಂದಲೂ ನಿರೀಕ್ಷಿಸುವುದು ಅದನ್ನೇ, ಇಂದು ಸಾರ್ವಜನಿಕ ಸಭ್ಯ ನಡವಳಿಕೆ ಹಾಳಾಗಿ ಹೋಗಿದೆ ಅಂತಹ ಸಭ್ಯ ಅಧಿಕಾರಿಗಳು ಬೇಕು. ಗ್ರಾಮೀಣ ಕಾಳಜಿ ಇರುವವವರು ಬೇಕು. ಜೀವನ ಕಾಳಜಿಯನ್ನು ಬೆಳೆಸಿಕೊಳ್ಳುವುದಾದರೆ ಆಡಳಿತ ಚೆನ್ನಾಗಿ ನಡೆಯುತ್ತದೆ. ಹೀಗಾಗಿ ನನಗೆ ಭರಣಯ್ಯನವರ ಕಾರ್ಯವಿಧಾನ, ಜೀವನ ವಿಧಾನ ಇವತ್ತಿನ ಅಧಿಕಾರಿಗಳಿಗೆ ಮುಟ್ಟುವ ಹಾಗೆ ಮಾಡಬೇಕು. ಅವತ್ತಿನ ಕಮ್ಯುನಿಟಿಯಲ್ಲಿ ಇದ್ದ ಒಬ್ಬ ಪ್ರಾಮಾಣಿಕ ಅಧಿಕಾರಿ ಇವತ್ತಿನ ಅಧಿಕಾರಿಗೆ ಗೊತ್ತಾಗಬೇಕು ಅದನ್ನ ಎಷ್ಟು ಸಾಧ್ಯವೋ ಅಷ್ಟು ಯಾವ ಯಾವ ಮೂಲಗಳು, ಮಾಧ್ಯಮಗಳು, ಪ್ರಕಾರಗಳ ಮೂಲಕ ಮುಟ್ಟಿಸಲು

ಸಾಧ್ಯವಾದರೆ ಒಳ್ಳೆಯದು. ಎಲ್ಲಾ ಅಧಿಕಾರಿಗಳು ಭರಣಯ್ಯನವರಂತೆ ಕೆಲಸ ಮಾಡಬೇಕೆಂಬುದು ಆಸೆ. ಆದರೆ ಎಷ್ಟರಮಟ್ಟಿಗೆ ಸಾಧ್ಯ ನೋಡಬೇಕು. ಇವತ್ತಿನ ಯುವ ಅಧಿಕಾರಿಗಳಲ್ಲಿ ಡೈನಾಮಿಕ್ ತರದವರು ಇದ್ದಾರೆ. ಅವರಲ್ಲಿ ಅಷ್ಟಾಗಿ ಜಾತಿ ಕಂಡುಬರುತ್ತಿಲ್ಲ. ಆದರೆ ರಾಜಕೀಯ ಶಕ್ತಿ ಮೇಲ್‌ಗೈಯಾದರೆ ಅವರು ಕೂಡ ಅಸಹಾಯಕರಾಗುತ್ತಾರೆ. ನಮ್ಮ ಸ್ಥಾನ ಹೋದರೂ ಹೋಗಲಿ ತ್ಯಾಗ ಮಾಡುವ ಎನ್ನುವ ಕಾಲಮಾನ ಅಲ್ಲ ಇದು. ಈ ಸಂದರ್ಭದಲ್ಲಿ ಭರಣಯ್ಯನವರು ನೆನಪಾಗುತ್ತಾರೆ. ಅವರು ತುಂಬಾ ಮುಕ್ತವಾದ ಮನಸ್ಸಿನವರು ಹಾಗೂ ಸಜ್ಜನಿಕೆಯ ನಡವಳಿಕೆ ಅವರದು. ಇವರೆಡು ಅವರನ್ನು ಬಹಳ ಎತ್ತರಕ್ಕೆ ನಿಲ್ಲಿಸಿತು. ಆದರೆ ಈಗ ಇವತ್ತಿನವರಿಗೆ ಅವರ ವ್ಯಕ್ತಿತ್ವ ಅರ್ಥವಾಗುವುದಿಲ್ಲ. ಅವರನ್ನು ನೋಡಿದರವರಿಗೆ ಮಾತ್ರ ಅರ್ಥವಾಗುತ್ತದೆ. ನಾವು ಕಣ್ಣಾರೆ ಕಂಡವರಾದ್ದರಿಂದ ಮಾತಿನಲ್ಲಿ ಹೇಳಲಾಗದ ಅನಿರ್ವಚನೀಯ ಅನುಭವ. ಆದರೆ ಇಂದಿನವರೆಗೆ ಅವರ ಬಗ್ಗೆ ಹೇಳುವ ಮೂಲಕ ಪರಿಚಯ ಮಾಡಿಕೊಡಬೇಕು ಅಷ್ಟೆ. ಭರಣಯ್ಯ ನನ್ನ ಅಭಿಪ್ರಾಯದಲ್ಲಿ ಅತ್ಯಂತ ಸಜ್ಜನಿಕೆ, ಸಭ್ಯತೆ, ಸಾತ್ವಿಕ ವ್ಯಕ್ತಿ. ವಿಶೇಷವಾಗಿ ಜೀವಕಾರುಣ್ಯದ ಪ್ರತಿಮೂರ್ತಿ. ಕಷ್ಟದಲ್ಲಿ ನೊಂದವರ ಬಗ್ಗೆ ಅವರಿಗಿದ್ದ ಅನುಕಂಪ ಅದ್ಭುತ.

* * *

ಅಲೆ - ಮೂರು

ನೆನೆದವರ ಮನಗಳಲ್ಲಿ

ನೆನೆದವರ ಮನಗಳಲ್ಲಿ ಮಿಡಿದ ಮಾತುಗಳು

ಗ್ರಾಮ ಪುನರ್‌ನಿರ್ಮಾಣಕ್ಕೆ ಆಸರೆಯಾದ ಅಧಿಕಾರಿ.

ಕೆಲಸದಲ್ಲಿ ಸಿನ್ಸಿಯರ್, ಅವರದೇ ಆದ ವರ್ಕ್ ಡಿಸಿಪ್ಲಿನ್ ಇತ್ತು.

ಅವರ ಕಾಲವನ್ನು ಈಗ ಕಲ್ಪನೆಯಲ್ಲಿ ಕಾಣಲಿಕ್ಕೂ ಸಾಧ್ಯವಿಲ್ಲ!

ನಮ್ಮ ಹಳ್ಳಿ ಜನಕ್ಕೆ ತಿಳಿಯುವ ಸರಳ ಭಾಷೆಯಲ್ಲಿ ಮಾತಾಡುತ್ತಿದ್ದರು, ಬರೆಯುತ್ತಿದ್ದರು.

ಭರಣಯ್ಯನವರ ಆದರ್ಶವನ್ನು ಇಂದಿನವರು ತಿಳಿದು ನಡೆಯಲಿ ಸಾಕು.

ಅವರು ಇತಿಹಾಸ ತಿಳಿದಿದ್ದವರು. ಹಾಗಾಗಿ ಸೇವೆಯೇ ತನ್ನ ಗುರಿ ಎಂದುಕೊಂಡಿದ್ದರು. ಸಂಶೋಧನೆಗೆ ನೆರವು ನೀಡುತ್ತಿದ್ದರು.

ಪ್ರಾಚೀನ ವಸ್ತುಗಳ ಸಂಗ್ರಹಣೆಯ ಮಹತ್ತ್ವ ತಿಳಿದಿತ್ತು!

"ಜನರ ನೋವು ನಲಿವುಗಳಿಗೆ ಸ್ಪಂದಿಸದಿದ್ದರೆ ನಾನು ಏಕೆ ಅಧಿಕಾರಿಯಾಗಿರಬೇಕು?" ಎನ್ನುತ್ತಿದ್ದರು.

ಉಪಕಾರ ಮಾಡಿದರೆಂದು ನೀವೇನಾದರೂ ಕೊಡಲು ಹೋದರೆ ವಾಪಸ್ಸು ಕಳುಹಿಸುತ್ತಿದ್ದರು.


ಅವರೊಬ್ಬ ಮಾನವತಾವಾದಿ.

ಡಾ. ಅಂಬೇಡ್ಕರ್ ಮತ್ತು ಆರ್. ಭರಣಯ್ಯನವರ ಆದರ್ಶಗಳನ್ನುಳ್ಳ ಯುವಸಂಘಟನೆ ಬೇಕು.

ಇಂದು ಅವರು ನಮ್ಮೊಡನಿದ್ದಿದ್ದರೆ ಇವತ್ತಿನ ಸಮಾಜ ನೋಡಿ ಬಹಳ ಸಂಕಟಪಟ್ಟುಕೊಳ್ಳುತ್ತಿದ್ದರು.

ಈ ಆದರ್ಶ ವ್ಯಕ್ತಿಯ ಬಗ್ಗೆ ನಮ್ಮ ಶಾಲಾ ಕಾಲೇಜು ಪಠ್ಯಗಳಲ್ಲಿ ಪಠ್ಯವಸ್ತು ನೀಡಬೇಕು.

ಅಸ್ಪೃಶ್ಯತೆ ಆಚರಣೆ ಮಾಡುವ ಸವರ್ಣೀಯರನ್ನು ಕರೆದು ತಿಳುವಳಿಕೆ ನೀಡುತ್ತಿದ್ದರು. ಕಟ್ಟೆಮನೆ ಪಂಚಾಯ್ತಿಗೆ ಆಹ್ವಾನಿತರಾಗಿದ್ದ ಮೊದಲ ಅಧಿಕಾರಿ. ಇದು ಅವರು ಗಳಿಸಿದ ಗೌರವಕ್ಕೆ ಸಾಕ್ಷಿ.



ಊರು ಕಟ್ಟಲು ಜೊತೆಯಾದ ಜನೋಪಕಾರಿ

ಹೆಚ್. ಗಣಪತಿಯಪ್ಪ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಾಗರ

ಪೀಠಿಕೆ: ಶಿವಮೊಗ್ಗ ಜಿಲ್ಲೆಯು ಸಾಂಸ್ಕೃತಿಕ, ಪ್ರಾಕೃತಿಕ ಸಂಪತ್ತು – ಸೌಂದರ್ಯದಲ್ಲಿ ಒಂದು ತೂಕವಾದರೆ 40–50ರ ದಶಕದಲ್ಲಿ ಜಿಲ್ಲೆಯಲ್ಲಿ ನಡೆದ ರಾಜಕೀಯ, ಸಾಮಾಜಿಕ ಚಟುವಟಿಕೆಗಳ ತೂಕವೇ ಬೇರೆ ತೆರನಾದದ್ದು. ದೇಶದ ಗಮನ ಸೆಳೆದ ಕಾಗೋಡು ಸತ್ಯಾಗ್ರಹ, ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಚಳುವಳಿಗಳು ಜಿಲ್ಲೆಯನ್ನು ರಾಜಕೀಯ ಚಟುವಟಿಕೆಗಳ ಕೇಂದ್ರವನ್ನಾಗಿಸಿದ್ದವು. ಆ ಜಿಲ್ಲೆಯಲ್ಲಿ ಕಾಗೋಡು ಗಣಪತಿಯಪ್ಪ, ಮುಂತಾದ ನೂರಾರು ಜನಮುಖಿ ಚಿಂತಕರು, ಹೋರಾಟಗಾರರು ಹಾಗೂ ವ್ಯಕ್ತಿಗಳು ಜಮೀನ್ದಾರಿ ಪದ್ಧತಿಯ ವಿರುದ್ಧ ಹೋರಾಟ ಆರಂಭಿಸಿದ್ದರು.

ಲೋಹಿಯಾ ಅವರ ಸಮಾಜವಾದಿ ಚಳುವಳಿಯ ಅಲೆ ಬೀಸಲಾರಂಭಿಸುತ್ತಿದ್ದಂತೆ ಇಡೀ ಜಿಲ್ಲೆ ಸಮಾಜವಾದಿ ಚಳುವಳಿಗೆ ಪ್ರಮುಖ ಭೂಮಿಕೆಯಾಯಿತು. ಕಡಿದಾಳು ಮಂಜಪ್ಪ, ಜೆ. ಹೆಚ್. ಪಟೇಲ್, ಕೋಣಂದೂರು ಲಿಂಗಪ್ಪ, ಕಡಿದಾಳು ಶಾಮಣ್ಣ ಮುಂತಾದವರು ಸಮಾಜವಾದಿ ಚಳುವಳಿಯಲ್ಲಿ ಧುಮುಕಿದರು. ಜಿಲ್ಲೆಯ ಸಾವಿರಾರು ಮಂದಿ ಭೂರಹಿತ ಗೇಣಿದಾರರಿಗೆ ಭೂಮಿ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಗ ಭರಣಯ್ಯನವರು 1957ರ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾಗಿ ಬಂದಾಗ ಜಿಲ್ಲೆಯಲ್ಲಿ ರಾಜಕೀಯ ಚಟುವಟಿಕೆ ಬಿರುಸಾಗಿಯೇ ಇತ್ತು. ಜನೋಪಕಾರಿ ಕೆಲಸ ಮಾಡುವಲ್ಲಿ ಹೆಸರಾಗಿದ್ದ ಆರ್. ಭರಣಯ್ಯನವರ ಕಾರ್ಯವೈಖರಿ ಜನಸಾಮಾನ್ಯರಿಗೆ ಮಾತ್ರವಲ್ಲದೆ ಜಿಲ್ಲೆಯ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿರುವ ವ್ಯಕ್ತಿಗಳಿಗೂ ಮೆಚ್ಚುಗೆಯಾಯಿತು. ಅವರುಗಳೂ ಕೂಡ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಭರಣಯ್ಯನವರನ್ನು ಸಹಜವಾಗೇ ಭೇಟಿ ಮಾಡತೊಡಗಿದರು. ಹಾಗಾಗಿ ಅವರೆಲ್ಲರಿಗೆ ಆರ್. ಭರಣಯ್ಯನವರೊಂದಿಗೆ ಸೌಹಾರ್ದಯುತ ಸಂಬಂಧ ಬೆಳೆಯಿತು. ಶಿಸ್ತು ಮತ್ತು ಕಾರ್ಯದಕ್ಷತೆಯಲ್ಲಿ ನಿಪುಣರಾಗಿದ್ದ ಭರಣಯ್ಯನವರಿಗೆ ಸಲೀಸಾಗಿ ಕೆಲಸ ನಿರ್ವಹಿಸಿಕೊಂಡು ಹೋಗಲು ಇದು ಸಹಕಾರಿಯಾಯಿತು. ಒಂದು ಬಹುಮುಖ್ಯ ಚಳುವಳಿಯ ಬೆನ್ನಿಗೆ ಒಬ್ಬ ಅಧಿಕಾರಿ ನಿಂತಿದ್ದು ಈ ಚಳುವಳಿಯ ಕೆಲವು ಬೇಡಿಕೆಗಳು ಈಡೇರಲು ಕಾರಣವಾಯಿತು. ಆ ಕಾಲದಲ್ಲಿ ಜನತೆಗಾಗಿ ಹಲವು ಬೇಡಿಕೆಗಳನ್ನು ಪಡೆಯಲು ದುಡಿದ ಒಂದಷ್ಟು ಮನಸ್ಸುಗಳು ಇಲ್ಲಿ ಮಾತನಾಡಿವೆ. ಜೊತೆಗೆ ಭರಣಯ್ಯನವರಿಂದ ದೊರಕಿದ ಸಹಕಾರವನ್ನು ಮನಃಪೂರ್ತಿ ನೆನೆದಿವೆ. ಅಂಥ ಆಯ್ದ ಕೆಲವು ನೆನಪುಗಳಿವು;

ಪರಿಚಯ: 85 ವರ್ಷದ ಗಣಪತಿಯಪ್ಪನವರು ರಾಜ್ಯದ ಹಿರಿಯ ಸ್ವಾತಂತ್ರ್ಯಹೋರಾಟಗಾರರು, ಗಾಂಧೀವಾದಿಗಳು. ರಾಜ್ಯದ ಪ್ರಮುಖ ಚಳುವಳಿಯಲ್ಲಿ ಒಂದಾದ ಕಾಗೋಡು ಸತ್ಯಾಗ್ರಹದ ರೂವಾರಿಗಳು ಇವರು. ಸಾಗರದ ವಡ್ನಾಳ ಗ್ರಾಮದಲ್ಲಿ ವಾಸವಾಗಿರುವ ಇವರು ಕ್ವಿಟ್‌ಇಂಡಿಯಾ ಚಳುವಳಿಯಲ್ಲೂ ಭಾಗವಹಿಸಿದವರು. ಇವರ ಅಮೂಲ್ಯ ಸೇವೆಯನ್ನು ಗುರುತಿಸಿ 1992ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ, 2004ರಲ್ಲಿ ದೇವರಾಜ ಅರಸು ಪ್ರಶಸ್ತಿ ಇವರನ್ನು ಅಲಂಕರಿಸಿವೆ. ಕುವೆಂಪು ವಿಶ್ವವಿದ್ಯಾನಿಲಯ 2008ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಇವರು ಗಾಂಧೀಜಿಯವರ ಆದೇಶದಂತೆ ವಡ್ನಾಳ ಗ್ರಾಮಕ್ಕೆ ಬಂದು ಈ ಗ್ರಾಮ ಪುನರ್‌ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಅದೇ ಸಂದರ್ಭಕ್ಕೆ ಜಿಲ್ಲಾಧಿಕಾರಿಯಾಗಿ ಶಿವಮೊಗ್ಗಕ್ಕೆ ಬಂದ ಭರಣಯ್ಯನವರು ಇವರಿಗೆ ಹಲವು ಬಗೆಯಲ್ಲಿ ನೆರವಾಗಿದ್ದರು. ಗ್ರಾಮ

ಪುನರ್‌ನಿರ್ಮಾಣದ ಕೆಲಸಗಳ ನೆನಪುಗಳ ಜೊತೆಗೆ ಭರಣಯ್ಯನವರ ಕಾರ್ಯವೈಖರಿ, ವ್ಯಕ್ತಿತ್ವದ ವಿಚಾರವಾಗಿಯೂ ಇಲ್ಲಿ ಗಣಪತಿಯಪ್ಪನವರು ಮಾತನಾಡಿದ್ದಾರೆ.

ಭರಣಯ್ಯನವರ ಬಗ್ಗೆ ಮೊದಲು ತಮಗೆ ಪರಿಚಯವಾದದ್ದನ್ನು ವಿವರಿಸಿದ್ದು ಹೀಗೆ:

ನಾನು ಮೊದಲು ಅವರನ್ನು ಕಂಡಿದ್ದು, ಕಡಿದಾಳು ಮಂಜಪ್ಪನವರ ಜೊತೆ. ಅವರು ಕಡಿದಾಳು ಮಂಜಪ್ಪಗೌಡರ ಜೊತೆಗೆ ಬಂದಿದ್ದರು. ಆಗ ಕಡಿದಾಳರು ರೆವಿನ್ಯೂ ಮಂತ್ರಿ ಆಗಿದ್ದರು. ಭರಣಯ್ಯನವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದರು. ನಾನು ಕಾಗೋಡಿನಿಂದ ವಡ್ನಾಳಕ್ಕೆ ಬಂದು 3–4 ವರ್ಷ ಆಗಿತ್ತು. ಆಗ ಅಲ್ಲೊಂದು ಇಲ್ಲೊಂದು ಮನೆಗಳಿದ್ದವು. ಇಲ್ಲಿ ವ್ಯವಸ್ಥಿತವಾದ ಊರು ಅಂತ ಆಗಿರಲಿಲ್ಲ. ಆಗ ನಾನು ಅವುಗಳನ್ನೆಲ್ಲ ತೆಗೆಸಿಬಿಟ್ಟು ಹತ್ತು ಎಕರೆ ಜಮೀನನ್ನು ಸ್ವಚ್ಛ ಮಾಡಿಸಿ, ಸೈಟುಗಳನ್ನ ಮಾಡಿಸಿದೆ. ಕೊನೆಗೆ ಎಲ್ಲ ದಾಖಲೆಗಳನ್ನೂ ಅವರವರ ಹೆಸರಿಗೆ ಮಾಡಿಸಿ ತಹಸೀಲ್ದಾರರಿಂದ ಸಹಿ ಕೂಡ ಮಾಡಿಸಿಕೊಟ್ಟೆ.

ಆ ಸಂದರ್ಭದಲ್ಲಿ ಈ ಊರು ಕಟ್ಟುವುದಕ್ಕೆ ಸಹಾಯ ಮಾಡಿದವರೇ ಭರಣಯ್ಯನವರು. ಕಡಿದಾಳು ಮಂಜಪ್ಪನವರು ನಮ್ಮ ಊರಿಗೆ ಭೇಟಿ ನೀಡಿದಾಗ ಭರಣಯ್ಯನವರೂ ಜೊತೆಗೆ ಬಂದಿದ್ದರು. ಆಗ ಮಂಜಪ್ಪನವರು 'ಇವರು ಹೊಸ ಗ್ರಾಮ ನಿರ್ಮಾಣ ಮಾಡುತ್ತಿದ್ದಾರೆ ಇಲ್ಲಿ. ಗಾಂಧೀಜಿಯವರ ಆದೇಶದ ಪ್ರಕಾರ ಈ ಹಳ್ಳಿ ಆರಿಸಿಕೊಂಡು ಬಂದಿದ್ದಾರೆ. ಇವರು ತಮ್ಮ ಸ್ವಾರ್ಥಕ್ಕಾಗಿ ಏನೂ ಮಾಡುವುದಿಲ್ಲ. ಆದ್ದರಿಂದ ಇವರಿಗೆ ನೀವು ಸರ್ಕಾರದಿಂದ ಬೇಕಾದ ಸಹಾಯ ಮಾಡಿ. ಸರ್ಕಾರದಿಂದ ಏನು ಹೆಚ್ಚಿನ ಸೌಲತ್ತುಗಳನ್ನು ಕೊಡಲಿಕ್ಕೆ ಸಾಧ್ಯ ಇದೆ ಅವೆಲ್ಲವನ್ನೂ ಕೊಡಿ. ಗಣಪತಿಯಪ್ಪ ಶಿಷ್ಯ ನನಗೆ" ಎಂದಿದ್ದರು. ಇದು ನಾನು ಮೊದಲು ಅವರನ್ನು ಭೇಟಿ ಮಾಡಿದ ಸನ್ನಿವೇಶ. (ಅವರು ಮಾತುಕತೆಯಾಡುತ್ತಾ ಕುಳಿತಿದ್ದ ಮನೆ ತೋರಿಸಿ) "ನೋಡಿ ನಾನು ಈ ಮನೆ ಕಟ್ಟಿದ್ದು ಭರಣಯ್ಯನವರು ಕೊಟ್ಟ ನಾಟಗಳಿಂದಲೇ! ಇಡೀ ಊರಿಗೆ ಆಗುವಷ್ಟು ನಾಟಾ ಫ್ರೀ ಆಗಿ ಕೊಟ್ಟಿದ್ದರು ಅವರು. ಆಗ ಜೋಗದಿಂದ ಶಿವಮೊಗ್ಗಕ್ಕೆ ಎಲೆಕ್ಟ್ರಿಕ್ ಪವರ್ ಲೈನ್ ಹಾಕುತ್ತಿದ್ದರು. ಆಗ ಅದರಡಿಯ ಎಲ್ಲ ಮರಗಳನ್ನು ಕಡಿದು ಹರಾಜು ಮಾಡುತ್ತಿದ್ದರು. ಅದನ್ನ ಭರಣಯ್ಯನವರು ಒಂದು ಆರ್ಡರಿಗೆ ರುಜು ಹಾಕಿ ನನಗೆ ತೆಗೆದುಕೊಂಡು ಹೋಗಲು ಅನುಮತಿ ಕೊಟ್ಟು – 'ಗಣಪತಿಯಪ್ಪನವರೇ, ಬೇಕಾದಷ್ಟು ನಾಟಗಳನ್ನು ತೆಗೆದುಕೊಂಡು ಹೋಗಿ. ಆರ್ಡರ್ ನಾನು ಕೊಡುತ್ತೀನಿ. ನೀವು ಇವುಗಳನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ ಅಂತ ನನಗೆ ಖಂಡಿತ ಗೊತ್ತು. ನಂಬಿಕೆಯೂ ಇದೆ" ಅಂದರು.

ಇದಾದ ನಂತರ ಭರಣಯ್ಯನವರು 2–3 ತಿಂಗಳಿಗೆ ಒಮ್ಮೆ ಇಲ್ಲಿಗೆ ಭೇಟಿ ಕೊಡುತ್ತಿದ್ದರು. ಅವರು ಶಿವಮೊಗ್ಗದಲ್ಲಿ ಇರುವ ತನಕವೂ ಇದೇ ಪರಿಪಾಠ ಇತ್ತು. ಬಂದಾಗೆಲ್ಲ 'ಗಣಪತಿಯಪ್ಪನವರೇ ನಿಮಗೆ ಏನಾದರೂ ಸಹಾಯ ಸವಲತ್ತು ಬೇಕಿದ್ದರೆ ನನ್ನ ಹತ್ತಿರ ಹೇಳಿ. ಮಾಡಿಕೊಡುತ್ತೀನಿ' ಎನ್ನುತ್ತಿದ್ದರು.

ನನ್ನ ಜೀವಮಾನದಲ್ಲೇ ಅಂತಹ ಅಧಿಕಾರಿಯನ್ನು ನಾನು ನೋಡಿಲ್ಲ. ಅವರ ಸಹಾಯದಿಂದ ನಾನು ಮಾಡುತ್ತಿದ್ದಂತಹ ಗ್ರಾಮ ನಿರ್ಮಾಣ ಕಾರ್ಯ ಸುಗಮವಾಗಿ ಆಯಿತು. ಭರಣಯ್ಯನವರಂತಹ ಒಬ್ಬ ಜಿಲ್ಲಾಧಿಕಾರಿ ಸಿಕ್ಕಿದ್ದರಿಂದ ಈ ಊರು ಕಟ್ಟುವುದಕ್ಕೆ ಸಾಧ್ಯ ಆಯಿತು ನನಗೆ. ಈಗಲೂ ಕೂಡ ನಾನು ಅವರ ಆತ್ಮಕ್ಕೆ ಕೃತಜ್ಞತೆ ಅರ್ಪಿಸುತ್ತೇನೆ.

ಅವರು ಊರಿಗೆ ಭೇಟಿ ನೀಡುವಾಗಲೆಲ್ಲ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮನೆಯ ಜಗಲಿಯ ಮೇಲೆ ಅವರೂ ನಾನು ಅಕ್ಕಪಕ್ಕ ಕುಳಿತುಕೊಂಡು ಎಷ್ಟೋ ಬಾರಿ ಊಟ ಮಾಡಿದ್ದೇವೆ. ಅಷ್ಟು ಸಭ್ಯ, ಸರಳ ಮನುಷ್ಯ ಅವರು. ಜನರೊಂದಿಗೆ ವ್ಯವಹರಿಸುವಾಗಲೂ ಕೂಡ ಹಾಗೆ. ಸಣ್ಣ ಜನರನ್ನೂ ಕೂಡ ಗೌರವದಿಂದ ಮಾತನಾಡಿಸುತ್ತಿದ್ದರು. ಆವಾಗ ಪಟೇಲರು, ಶಾನುಭೋಗರುಗಳೇ ಎಲ್ಲ ದರ್ಪ ತೋರಿಸುತ್ತಿದ್ದ ಕಾಲ. ಅಂಥಹದರಲ್ಲಿ ಇವರ ನಡವಳಿಕೆ ಆದರ್ಶಪ್ರಾಯವಾಗಿತ್ತು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬರುತ್ತಿದ್ದರು. ತಾನು ಒಬ್ಬ ಡಿ.ಸಿ. ಇವರೆದುರಿಗೆ ದೊಡ್ಡಸ್ತಿಕೆ ತೋರಿಸಿಕೊಳ್ಳಬೇಕು ಅಂತೆಲ್ಲ ಮನೋಭಾವ ಅವರಿಗೆ ಇರಲೇ ಇಲ್ಲ. ಒಬ್ಬ ಸಾಮಾನ್ಯ ಅತಿಥಿ ಮನೆಗೆ ಬರುವಂತೆ ನಮ್ಮ ಮನೆಗೆ ಬಂದು ಕುಳಿತುಕೊಳ್ಳುತ್ತಿದ್ದರು.

ಹೀಗೆ ಒಮ್ಮೆ ನಮ್ಮ ಮನೆಯಲ್ಲಿ ಮಾತನಾಡುತ್ತ ಕುಳಿತಾಗ 'ಗಣಪತಿಯಪ್ಪನವರೇ ನಿಮ್ಮನ್ನು ನೋಡಿದರೆ ನನಗೆ ತುಂಬಾ ಗೌರವ ಮತ್ತು ಸಂತೋಷವೆನಿಸುತ್ತಿದೆ. ನಿಸ್ವಾರ್ಥ ಸೇವೆ ಮಾಡುವಂತಹ ಜನರು ಇವತ್ತು ಎಲ್ಲಿಯೂ ಕಾಣುವುದಿಲ್ಲ. ಆದರೆ ನೀವು ಗಾಂಧೀಜಿ ಎಲ್ಲೋ ಹರಿಜನ ಪತ್ರಿಕೆಯಲ್ಲಿ ಗ್ರಾಮ ನಿರ್ಮಾಣದ ಬಗ್ಗೆ ಲೇಖನ ಬರೆದಿದ್ದನ್ನೇ ಅವರ ಆಜ್ಞೆ ಎಂಬಂತೆ ಜಾರಿಗೆ ತಂದಿದ್ದೀರಿ. ಈ ಊರಿಗಾಗಿ ಕೆಲಸ ಮಾಡಿದ್ದೀರಿ. ನೀವು ನಮಗಿಂತ ದೊಡ್ಡವರು. ನಾವು ಸಂಬಳ ತೆಗೆದುಕೊಂಡು ಅಧಿಕಾರ ಮಾಡುತ್ತೇವೆ. ನೀವು ನಿಸ್ವಾರ್ಥವಾಗಿ ಜನರ ಸೇವೆ ಮಾಡುತ್ತಿದ್ದೀರಿ' ಅಂತ ಅವರು ನನ್ನ ಬಗ್ಗೆ ಅಭಿಮಾನದಿಂದ ಆಡಿದ ಮಾತುಗಳು ಇನ್ನೂ ನೆನಪಿವೆ. ಅಂತಹ ಸಂಪನ್ನ ಮನುಷ್ಯ. ಕಡಿದಾಳು ಮಂಜಪ್ಪನವರೂ ಕೂಡ ಒಬ್ಬ ಮಂತ್ರಿಯಾಗಿಯೂ ಸಾಮಾನ್ಯ ಮನುಷ್ಯನಂತೆ ಇದ್ದರು. ಮಂಜಪ್ಪನವರಿಗೂ ಭರಣಯ್ಯನವರಿಗೂ ಬಹಳ ಹೊಂದಾಣಿಕೆ ಇತ್ತು. ಅವರು ಮಂತ್ರಿ, ಇವರು ಡಿ.ಸಿ. ಆದರೂ ಅವರಿಬ್ಬರಲ್ಲಿ ಅಣ್ಣತಮ್ಮಂದಿರೇನೋ ಎನ್ನುವಂತಹ ವರ್ತನೆ ಇತ್ತು. ನಾನು ಹಲವಾರು ವ್ಯಕ್ತಿಗಳ ಜೀವನಚರಿತ್ರೆ, ಅಭಿನಂದನಾ ಗ್ರಂಥಗಳಿಗೆ

ಲೇಖನ ಬರೆದುಕೊಟ್ಟಿದೀನಿ. ಹೋದವರ್ಷ ಕಡಿದಾಳು ಮಂಜಪ್ಪನವರ ಶತಮಾನೋತ್ಸವದಲ್ಲಿ ನಾನು ಬರೆದ ಲೇಖನದಲ್ಲಿ ಭರಣ್ಯಯನವರ ಉಲ್ಲೇಖ ಮಾಡಿದ್ದೇನೆ.

ಇವತ್ತಿನ ಆಡಳಿತಶಾಹಿಗೂ ಭರಣಯ್ಯನವರಿಗೂ ಹೋಲಿಕೆ ಮಾಡುತ್ತಾ ಅವರು ಹೇಳಿದ್ದು ಇದು:

ಭರಣಯ್ಯನವರ ನೆನಪಾಗುವಾಗ ನನಗೆ ಅನ್ನಿಸುವ ಇನ್ನೊಂದು ಮುಖ್ಯ ಅಂಶವೆಂದರೆ, ಇವತ್ತೂ ಒಳ್ಳೆಯ ಅಧಿಕಾರಿಗಳು ಇಲ್ಲವೇ ಇಲ್ಲ ಅಂತ ನಾನು ಹೇಳುವುದಿಲ್ಲ. ಆದರೆ ಹೋಲಿಕೆ ಮಾಡಿದಾಗ ಆರ್. ಭರಣಯ್ಯನವರಂತಹ ಒಳ್ಳೆಯ, ಸಭ್ಯ ಮತ್ತು ಅಷ್ಟು ಕಾಳಜಿಯಿಂದ ಜನಸೇವೆ ಮಾಡುವವರು ಅತೀ ಅಪರೂಪ. ಈಗಿನ ಕಾಲದಲ್ಲಿ ಒಬ್ಬ ಎಂ.ಎಲ್.ಎ. ಆದವರನ್ನ, ಜಿಲ್ಲಾ ಪಂಚಾಯತ್ ಸದಸ್ಯನಾದವರನ್ನ ಬೇಡ ಒಬ್ಬ ಗ್ರಾಮಪಂಚಾಯತ್ ಮೆಂಬರ್ ಆದರೆ ಅವನನ್ನ ಮಾತನಾಡಿಸಲು ಸಾಧ್ಯವಿಲ್ಲ. ತಾನು ದೊಡ್ಡ ಅಧಿಕಾರಿ ಅನ್ನೋ ದರ್ಪ ತೋರಿಸುತ್ತಾರೆ. ಆದರೆ ಭರಣಯ್ಯನವರು ಅಷ್ಟು ಉನ್ನತ ಅಧಿಕಾರ ಇದ್ದರೂ ಕೂಡ ಜನರಲ್ಲಿ ಒಬ್ಬರಾಗಿ ಜನಸೇವೆ ಮಾಡುತ್ತಿದ್ದರು.

ನನಗೆ ಆಗಾಗ ಅವರು 'ಗಣಪತಿಯಪ್ಪನವರೇ, ನಿಮ್ಮಲ್ಲಿ ಯಾರಾದರೂ ಕಲಿತವರಿದ್ದರೆ, ಎಸ್.ಎಸ್.ಎಲ್.ಸಿ. ಆದರೂ ಪರವಾಗಿಲ್ಲ, ಇದ್ದರೆ ಹೇಳಿ. ಅವರಿಗೆ ನಾನು ಕೆಲಸ ಕೊಡುತ್ತೀನಿ. ಅಂತ ಹೇಳುತ್ತಿದ್ದರು. ಆದರೆ ಆಗ ಇಲ್ಲೆಲ್ಲ ಬಡತನ ಮತ್ತು ಓದಿಗೆ ಅಷ್ಟು ಸೌಕರ್ಯವೂ ಇರಲಿಲ್ಲ. ಹಾಗಾಗಿ ನಮ್ಮೂರಿನಲ್ಲಿ ಯಾರಿಗೂ ಕೆಲಸ ಕೊಡಿಸಲಿಕ್ಕೆ ಆಗಲಿಲ್ಲ ನನಗೆ. ಆದರೆ ಬೇರೆ ಕಡೆಗಳಲ್ಲಿ ಅವರು ಬಹಳ ಜನ ವಿದ್ಯಾವಂತರನ್ನು ಹುಡುಕಿ, ಕರೆದು ಕೆಲಸ ಕೊಟ್ಟಂತಹ ನಿದರ್ಶನಗಳನ್ನು ಕೇಳಿದ್ದೀನಿ ನಾನು. ಅಷ್ಟು ಮಾತ್ರ ಅಲ್ಲ. ನಾನು ಯಾರಾದರೂ ರೈತರನ್ನ ಕೆಲಸ ಮಾಡಿಸಿಕೊಡಲು ಕರೆದುಕೊಂಡು ಹೋದರೆ 'ಗಣಪತಿಯಪ್ಪನವರು ಕರೆದುಕೊಂಡು ಬಂದಿದ್ದಾರೆ ಅಂದರೆ ಕಣ್ಣುಮುಚ್ಚಿಕೊಂಡು ಮಾಡಿಕೊಡಬಹುದು' ಎಂದು ಹೇಳುತ್ತ ಆರ್ಡರ್‌ಗೆ ಸಹಿ ಹಾಕಿಕೊಡುತ್ತಿದ್ದರು. ಅವರ ಮಾತಿನ ವೈಖರಿಯನ್ನು ನಾನು ಯಾವಾಗಲು ಇಷ್ಟಪಡುತ್ತಿದ್ದೆ. ಕಾರಣವಿಷ್ಟೆ, ಕನ್ನಡದಲ್ಲೂ ಕೂಡ ಬಹಳ ಸೊಗಸಾಗಿ ಮಾತನಾಡುತ್ತಿದ್ದರು. ಸಂಸ್ಕೃತದಲ್ಲಿ ಬಹಳ ಪಾಂಡಿತ್ಯ ಇತ್ತು. ಭಗವದ್ಗೀತೆಯಲ್ಲಿದ್ದ ಶ್ಲೋಕಗಳನ್ನೆಲ್ಲ ಮಾತಿನ ಮಧ್ಯೆ ಹೇಳಿ ಉದಾಹರಣೆ ಕೊಟ್ಟು ಮಾತನಾಡುತ್ತಿದ್ದರು.

ಭರಣಯ್ಯನವರು ಚುನಾವಣೆಗೆ ಸ್ಪರ್ಧೆ ಮಾಡಿದ್ದರ ಬಗ್ಗೆ ಗಣಪತಿಯಪ್ಪನವರ ವಿಶ್ಲೇಷಣೆ ಚಿಂತನೆಗೆ ಹಚ್ಚುವಂತಿತ್ತು. ಇವತ್ತಿಗೂ ಅದು ಅನ್ವಯಿಸುವಂತ ಸಂಗತಿಯಾಗಿ ತೋರಿತು. ಈ ಬಗ್ಗೆ ಅವರ ನೆನಪುಗಳನ್ನು ಹಂಚಿಕೊಂಡಿದ್ದು ಹೀಗೆ;

ನಿವೃತ್ತಿಯ ನಂತರ ಅವರು ಚುನಾವಣೆಗೆ ನಿಂತ ಆ ವಿಚಾರ ಕೇಳಿದ್ದೇನೆ. ಬಹಳ ಬೇಸರ ಆಗುತ್ತೆ ನೆನೆಸಿಕೊಂಡರೆ. ಮನುಷ್ಯ ಮನುಷ್ಯನಿಗೆ ಮಾಡಿದ ಸಹಾಯವನ್ನು ನೆನಪಿಟ್ಟುಕೊಂಡು ಮತ ಹಾಕುವ ಹಾಗಿದ್ದಿದ್ದರೆ ಖಂಡಿತ ಭರಣಯ್ಯನವರೇ ಗೆಲ್ಲುತ್ತಿದ್ದರು. ಆದರೆ ಈಗಲೂ ಆ ಕಾಲ ಬಂದಿಲ್ಲ. ಏನಾಗುತ್ತೆ ಅಂದರೆ ಚುನಾವಣೆಯ ಕಾಲದಲ್ಲಿ ಜನಗಳು, ಜಾತಿ, ಸಂಘ–ಸಂಸ್ಥೆಗಳು ಇತ್ಯಾದಿ ನೆಲೆಗಟ್ಟಿನಲ್ಲಿ ಹೋಗಿಬಿಡುತ್ತಾರೆ. ಅವರು ಯಾರೇ ಆದರೂ ಉಪಕಾರ ಮಾಡಿದವನಿಗೆ ಮತ ಕೊಡಬೇಕು, ಅವರು ಮುಂದಕ್ಕೆ ನಮಗೆ ಒಳ್ಳೆಯದು ಮಾಡುತ್ತಾರೆ – ಈ ಭಾವನೆ ಜನರಲ್ಲಿ ಇಲ್ಲ. ದುಡ್ಡುಕೊಟ್ಟರೆ, ಜಾತಿಯವನಾದರೆ, ವೈಯಕ್ತಿಕ ಸಹಾಯ ಮಾಡಿದ್ದರೆ ನೆನಪಿಟ್ಟುಕೊಂಡು ಮತ ಹಾಕಿಬಿಡುವ ಮನೋಭಾವ ನಮ್ಮ ಹಲವು ಜನರಲ್ಲಿ ಈಗಲೂ ಇದೆ.

ಭರಣಯ್ಯನವರು ಆ ಚುನಾವಣೆಯಲ್ಲಿ ಗೆಲ್ಲಬೇಕಾಗಿತ್ತು. ಗೆದ್ದಿದ್ದರೆ ಈ ರಾಜ್ಯಕ್ಕೆ, ಈ ದೇಶಕ್ಕೆ ಒಬ್ಬ ಒಳ್ಳೆಯ ಜನಪ್ರತಿನಿಧಿ ದೊರಕಿದಂತೆ ಆಗುತ್ತಿತ್ತು. ಈ ರಾಜ್ಯವನ್ನು ಪ್ರಗತಿಪಥದಲ್ಲಿ ಒಯ್ಯುವ ಒಬ್ಬ ನಿಸ್ವಾರ್ಥ ಶಾಸಕ ಆಗುತ್ತಿದ್ದರು ಅವರು. ಅಂದಿನ ಆ ಚುನಾವಣೆ ,ಅದು ಜನರ ಮೌಢ್ಯಕ್ಕೆ ಆಗಿರುವ ಜಯವೇ ಹೊರತು ಅದನ್ನು ಭರಣಯ್ಯನವರಿಗೆ ಆದ ಸೋಲು ಅಂತ ನಾನು ಹೇಳುವುದಿಲ್ಲ. ಅಂಥವರು ಸಾಕಷ್ಟು ಕಾಲ ಇರಬೇಕಿತ್ತು. ಅಕಾಲಿಕವಾಗಿ ಅವರು ಹೋದದ್ದು ಸಮಾಜಕ್ಕಾದ ಅನ್ಯಾಯ.

ಅವರ ಬಗೆಗಿನ ಅನೇಕ ಜನರ ನೆನಪುಗಳನ್ನು ದಾಖಲಿಸುತ್ತಿದ್ದೇವೆ. ಈ ಬಗ್ಗೆ ತಮ್ಮ ಅಭಿಪ್ರಾಯವೆಂದಾಗ ನುಡಿದದ್ದು ಇದು;

ಒಬ್ಬ ಅಮರ ಜೀವಿಯ ನೆನಪುಗಳನ್ನು ದಾಖಲಿಸುವಲ್ಲಿ ನೀವು ಮಾಡುತ್ತಿರುವ ಪ್ರಯತ್ನ ನೋಡಿ ಬಹಳ ಸಂತೋಷ ಆಗುತ್ತದೆ ನನಗೆ. ಅಂತಹ ಮಹಾನ್ ವ್ಯಕ್ತಿಗಳ ಬಗ್ಗೆ ಪುಸ್ತಕ ಮಾಡಿದರೆ ಅದೂ ಒಂದು ಜನಸೇವೆಯೇ. ಅಂತಹ ವ್ಯಕ್ತಿಗಳಲ್ಲಿದ್ದ ಆದರ್ಶವನ್ನು ಎತ್ತಿ ಹೇಳದೆಹೋದರೆ ಇನ್ನೊಬ್ಬ ವ್ಯಕ್ತಿ ತಾನು ಆದರ್ಶಯುತವಾಗಿ ಬದುಕಬೇಕು ಎನ್ನುವ ಭಾವನೆಗೆ ಪ್ರಚೋದನೆಯೇ ಸಿಗುವುದಿಲ್ಲ. ಒಬ್ಬ ವ್ಯಕ್ತಿಯಲ್ಲಿ ಆ ಭಾವನೆ ಇದ್ದರೆ ಮಾತ್ರ ಸಾಲದು. ಅದಕ್ಕೆ ಸೂಕ್ತ ಪ್ರಚೋದನೆ ಕೂಡ ಸಿಗಬೇಕು. ಅದು ಇಂತಹ ದಾಖಲೆಗಳಿಂದ ಆಗಬೇಕಾದ ಕೆಲಸ. ಅದರಲ್ಲೂ ಇಂದಿನ ಪೀಳಿಗೆಯಲ್ಲಿ ರೋಲ್ ಮಾಡೆಲ್ ಅಂದರೆ ಕಲ್ಪನೆಯೇ ಬೇರೆ ಇದೆ. ಹಾಗಾಗಿ ನಾವು ಯುವ ತಲೆಮಾರಿಗೆ ಭರಣಯ್ಯನವರಂತಹ ವ್ಯಕ್ತಿಗಳ ಆದರ್ಶಗಳ ಬಗ್ಗೆ ಅರಿವು ಮೂಡಿಸಬೇಕು. ಹಾಗಾಗಿ ಈ ಕೆಲಸ ಬಹಳ ಪ್ರಸ್ತುತ ಅಂತ ನನ್ನ ಅಭಿಪ್ರಾಯ.



ಸೋಮನಾಥಪುರದ ಸುಪುತ್ರ

ಡಾ. ಜೆ. ಸೋಮಶೇಖರ್

ನಿರ್ದೇಶಕರು, ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ, ಮೈಸೂರು.

ಶಾಲೆಯ ದಿನಗಳಲ್ಲಿ ಕ್ರಿಸ್‌ಮಸ್ ಮತ್ತು ಬೇಸಿಗೆ ರಜೆಗಳಲ್ಲಿ ತಾತ-ಅಜ್ಜಿಯ ಜೊತೆ ಸೋಮನಾಥಪುರ ಗ್ರಾಮದಲ್ಲಿ ಕಳೆಯುತ್ತಿದ್ದ ನೆನಪು, ಭರಣಯ್ಯ ಅವರನ್ನು ಕುರಿತು ಬರೆಯಲು ಪ್ರೇರಣೆಯಾಯಿತು. ನನ್ನ ಅಜ್ಜಿ ಇವರ ಸಹೋದರಿ. ಇವರದು ಇಂದಿಗೂ ಪ್ರಸಿದ್ಧವಾದ ಬಾವಿ ಮನೆ. ಅಜ್ಜಿಯ ಮನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಚಿಕ್ಕಗಂಡು ಈ ಬಾವಿಯಿಂದ ನೀರು ತರಲು ಹೋಗುತ್ತಿದ್ದ ದಿನಗಳು ನನಲ್ಲಿ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿದವು. ಭರಣಯ್ಯ ಅವರು ತಮ್ಮ ಮನೆಯ ಸರಹದ್ದಿಗೆ ಹೊಂದಿಕೊಂಡಂತೆ ಬಾವಿಯನ್ನು ಕಟ್ಟಿಸಿದ್ದರು. ಅದರಿಂದ ತಮ್ಮ ಸಮುದಾಯದ ಜನರಿಗೆ ಸುಲಭವಾಗಿ ನೀರು ದೊರೆಯುತ್ತಿತ್ತು. ಇದು ಅವರ ಗ್ರಾಮದ ಬಹುಮುಖ್ಯ ಸೇವೆಯಲ್ಲಿ ನಿಲ್ಲುವ ಸಂಕೇತವಾಗಿದೆ. ಸದಾ ಬೀಗವನ್ನು ಹಾಕಿರುತ್ತಿದ್ದ ಆರ್.ಸಿ.ಸಿ. ಮನೆ. ಗ್ರಾಮದ ಜನರಿಗೆ ಸುಲಭವಾಗಿ ನೀರನ್ನು ಕೊಡುತ್ತಿತ್ತು. ಇಂದು ಈ ಮನೆಯಲ್ಲಿ ಕ್ರಿಕೆಟ್ ರಂಗದ ಶ್ರೇಷ್ಠ ಸ್ಪಿನ್ ಮಾಂತ್ರಿಕರಾಗಿದ್ದ ಶ್ರೀ ವಿಜಯ ಕೃಷ್ಣ ಅವರು ತಂದೆಯಂತೆ ಬಡಜನರ ಸೇವೆಯನ್ನು ಮುಂದುವರಿಸಿದ್ದಾರೆ. ಇಂದು ಅವರ ಗ್ರಾಮ ಸಾರ್ವಜನಿಕ ಆಡಳಿತದಲ್ಲಿ ಕೆಲವು ಅಧಿಕಾರಿಗಳನ್ನು ಹೊಂದಿದೆ. ಅದಕ್ಕೆಲ್ಲ ಸ್ಫೂರ್ತಿ ಇವರೇ. ಇವರ ಕುಟುಂಬದ ವಿದ್ಯಾವಂತರು ಅವರ ಹೆಸರುಗಳ ಮುಂದೆ "ಭರಣಿ" ಎಂದು ಸೇರಿಸಿಕೊಳ್ಳುವ ಮೂಲಕ ಭರಣಯ್ಯ ಅವರ ಹೆಸರನ್ನು ಜೀವಂತಗೊಳಿಸಿದ್ದಾರೆ ಮತ್ತು ಅವರು ನಡೆದ ಹಾದಿಯಲ್ಲಿ ನಡೆಯಲು ಬಯಸಿದ್ದಾರೆ.

ಶ್ರೀ ಆರ್. ಭರಣಯ್ಯ ಅವರು ವ್ಯಕ್ತಿಯಾಗಿ ಹಾಗೂ ಆಡಳಿತಗಾರರಾಗಿ ಜನಮಾನಸದಲ್ಲಿ ವಿಶೇಷ ಮನ್ನಣೆಯನ್ನು ಪಡೆದುಕೊಂಡ ಸೋಮನಾಥಪುರದ ಸುಪುತ್ರ. ವಿಧಾನಸೌಧದ ಮೊಗಸಾಲೆಯಿಂದ ಹಿಡಿದು ತಾವು ಕಾರ್ಯನಿರ್ವಹಿಸಿದ ಸ್ಥಳಗಳವರೆಗೆ ಎಲ್ಲರ ಮೆಚ್ಚುಗೆಯನ್ನು ಪಡೆದುಕೊಂಡಿದ್ದರಲ್ಲದೆ, ಸಚಿವಾಲಯ (Secretariat) ಮತ್ತು ಕರ್ನಾಟಕ ಲೋಕಸೇವಾ ಆಯೋಗ - ಇವುಗಳಲ್ಲಿಯೂ ಭರಣಯ್ಯ ಅವರ ಹೆಸರು ಪ್ರಬಲವಾಗಿತ್ತು. ತಮ್ಮ ಬಳಿ ನೊಂದು

ಬಂದವರಿಗೆ ತಕ್ಷಣ ಪರಿಹಾರವನ್ನು ಒದಗಿಸಿಕೊಟ್ಟ ಹಲವಾರು ನಿದರ್ಶನಗಳು ಸಿಗುತ್ತವೆ. ಅವುಗಳಲ್ಲಿ ಬನ್ನೂರು ಸಮೀಪದಲ್ಲಿರುವ ಒಂದು ಗ್ರಾಮದ ಶ್ರೀ ಸಿದ್ಧಯ್ಯ ಅವರೂ ಒಬ್ಬರು. ಇವರ ತಂದೆ ನುರಿತ ಎತ್ತುಗಳ ವ್ಯಾಪಾರಿ. ಭರಣಯ್ಯ ಅವರಿಗೆ ಉತ್ತಮ ರಾಸುಗಳನ್ನು ಖರೀದಿಸುವಲ್ಲಿ ಇವರು ಸಹಾಯವಾಗುತ್ತಿದ್ದರು. ಶಿವಮೊಗ್ಗದಲ್ಲಿ ಜಿಲ್ಲಾಧಿಕಾರಿ ಆಗಿದ್ದ ಸಂದರ್ಭದಲ್ಲಿ ತಮ್ಮ ಮಗನಿಗೆ ಒಂದು ಜೀವನ ಮಾರ್ಗವನ್ನು ಕೇಳಲು ನೇರವಾಗಿ ಶಿವಮೊಗ್ಗಕ್ಕೆ ಮೈಸೂರಿನಿಂದ ರಾತ್ರಿ ಬಸ್ಸಿನಲ್ಲಿ ಕುಳಿತು ಪ್ರಯಾಣಿಸಿದರು. ಬೆಳಿಗ್ಗೆ ಅವರ ಮನೆಯ ಸಮೀಪ ತಿರುಗಾಡುತ್ತಿದ್ದುದನ್ನು ಗಮನಿಸಿದ ಭರಣಯ್ಯ ಅವರು ತಕ್ಷಣವೇ ಪೊಲೀಸ್ ಪೇದೆಯನ್ನು ಕಳುಹಿಸಿ ಅವರನ್ನು ಬರಮಾಡಿಕೊಂಡು ಬೆಳಗಿನ ಉಪಹಾರವನ್ನು ಜೊತೆಯಲ್ಲಿಯೇ ಸೇವಿಸಿದರು. ಭರಣಯ್ಯ ಅವರ

ತುಡಿತವೇನೆಂಬುದನ್ನು ತಿಳಿಯಬಹುದು. ತಿಂಡಿ ತಿಂದ ಬಳಿಕ ಬಂದ ವಿಷಯವನ್ನು ಹೇಳಿ ಮಗನಿಗಾಗಿ ಒಂದು ಉದ್ಯೋಗವನ್ನು ನೀಡಿ ಎಂದು ಕೇಳಿದಾಗ, ತಕ್ಷಣವೇ ಸಿದ್ಧಯ್ಯ ಅವರಿಂದ ಅರ್ಜಿಯನ್ನು ಬರೆಸಿ ತೀರ್ಥಹಳ್ಳಿಯ ತಾಲ್ಲೂಕು ಪಂಚಾಯಿತಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚನೆಯನ್ನು ತಮ್ಮ ಕಛೇರಿಯಿಂದ ಕೊಡಿಸಿಕೊಟ್ಟರು. ಅಷ್ಟರಲ್ಲಿ ಭದ್ರಾವತಿಯ ತಾಲ್ಲೂಕು ಕಛೇರಿಯಲ್ಲಿ ಒಂದು ಸ್ಥಳ ಖಾಲಿ ಇದೆ ಎಂಬುದನ್ನು ಸಿದ್ಧಯ್ಯ ಅವರ ತಂದೆ ತಿಳಿಸಿದ ತಕ್ಷಣ ತೀರ್ಥಹಳ್ಳಿಯ ಆದೇಶವನ್ನು ರದ್ದುಪಡಿಸಿ ಭದ್ರಾವತಿಗೆ ಕರ್ತವ್ಯಕ್ಕೆ ನಿಯೋಜಿಸಿದ್ದು ಭರಣಯ್ಯ ಅವರ ಬಡವರ ಪರವಾದ ಸಹಾಯದ ಮನಸ್ಸಿನ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಭರಣಯ್ಯ ಅವರು ಇಂತಹ ಮನಸ್ಸಿನಿಂದ ಅನೇಕರಿಗೆ ಉದ್ಯೋಗವನ್ನು ನೀಡಿದ್ದಾರೆ. ಅವರಿಂದ ಉದ್ಯೋಗವನ್ನು ಪಡೆದವರು ಇಂದಿಗೂ ಉತ್ತಮವಾಗಿ ಬದುಕುತ್ತಿದ್ದಾರೆ. ಭರಣಯ್ಯ ಅವರು ಅವರೆಲ್ಲರನ್ನೂ "ಒಂದು ಕಾಣಿಕೆ ನೀಡಿ" ಎಂದು ಕೇಳುತ್ತಿದ್ದರಂತೆ, ಅವರೆಲ್ಲರೂ ಭರಣಯ್ಯ ಅವರನ್ನು ಆತಂಕದಿಂದ "ಯಾವ ಕಾಣಿಕೆ" ಎಂದು ಕೇಳಿದರೆ, ಭರಣಯ್ಯ ಅವರು "ನೀವುಗಳು ನಿಮ್ಮ ನಿಮ್ಮ ಅಧಿಕಾರಿಗಳಿಂದ ಉತ್ತಮ ನೌಕರ ಎಂದು ಎನ್ನಿಸಿಕೊಳ್ಳುವುದೇ ನಾನು ಕೇಳುವ ಕಾಣಿಕೆಯಾಗಿದೆ" ಎನ್ನುತ್ತಿದ್ದರು. ಇದು ಅವರು ಆಡಳಿತ ಕ್ಷೇತ್ರದಲ್ಲಿ ನಿರೀಕ್ಷಿಸುತ್ತಿದ್ದ ಧಾಟಿ. ಉತ್ತಮ ನೌಕರ ಎಂದು ಹೆಸರುಮಾಡಿ ದಲಿತರು ತಮ್ಮ ಇರುವಿಕೆಗೆ ಅರ್ಥವನ್ನು ಕೊಡಬೇಕು ಮತ್ತು ಅದಕ್ಕಾಗಿ ಅವರು ಕಷ್ಟಪಡಬೇಕು. ಕೆಲಸ ನಿರ್ವಹಿಸುವುದನ್ನು ಚೆನ್ನಾಗಿ ಕಲಿಯಬೇಕು. ದಲಿತೇತರ ನೌಕರರಿಗಿಂತ ಧೈರ್ಯವಾಗಿ

ಕೆಲಸ ಮಾಡುವುದನ್ನು ಕಲಿತರೆ ದಲಿತೇರರು ಅಂತಹ ನೌಕರನಿಗೆ ಗೌರವವನ್ನು ಕೊಡುತ್ತಾರೆ ಎಂಬುದು ಅವರ ಸಲಹೆಯಾಗಿತ್ತು.

ಸರ್ಕಾರದ ಯೋಜನೆಗಳನ್ನು ಬಡವರಿಗೆ ಒದಗಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತಿದ್ದರು. ಭದ್ರಾವತಿ ತಾಲ್ಲೂಕಿನಲ್ಲಿ ಅಂತರಗಂಗೆಯ ಗ್ರಾಮಸ್ಥನೊಬ್ಬ ಇವರ ಆಡಳಿತ ಅವಧಿಯಲ್ಲಿ ಇವರಿಂದ ಭೂಮಿ ಪಡೆದುಕೊಂಡಿದ್ದು, ಇಂತಹ ಉದಾಹರಣೆಗಳು ಸಾಕಷ್ಟು. ಇವುಗಳನ್ನು ನೋಡಿ ತಿಳಿಯಲು ನನಗೆ ಬಿ. ಬಸವಲಿಂಗಪ್ಪ ಅವರ ಸ್ಮರಣ ಸಮಿತಿ ಕಾರ್ಯದರ್ಶಿಯಾಗಿ ಶಿವಮೊಗ್ಗ ಮತ್ತು ಈಗಿನ ದಾವಣಗೆರೆ ಜಿಲ್ಲಾದ್ಯಂತ ಸಂಚರಿಸಿದಾಗ ಭರಣಯ್ಯ ಅವರ ಆಡಳಿತ ಶೈಲಿ ಮತ್ತು ಅವರ ಜನಪರ ನಿಲುವುಗಳು ಎಂತಹದು ಎಂದು ತಿಳಿಯುವ ಅವಕಾಶ ದೊರೆಯಿತು. ಅದಲ್ಲದೆ ಇವರು ಅನೇಕ ನೇಮಕಾತಿಯ ಸಮಿತಿಗಳಲ್ಲಿ ಸದಸ್ಯರಾಗಿ ಶೋಷಿತರ ಧ್ವನಿಯಾಗಿ ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸಿದ್ದಾರೆ. ಇವರಿಂದ ಸಂದರ್ಶನಕ್ಕೆ ಒಳಪಟ್ಟ ಅಭ್ಯರ್ಥಿಗಳಿಗೆ ಕೇಳುವ ಪ್ರಶ್ನೆಗಳಲ್ಲಿ ಸ್ವಾರಸ್ಯವೂ ಅಡಗಿರುತ್ತಿತ್ತು. ಅಭ್ಯರ್ಥಿಗಳಿಗೆ ಸಂದರ್ಶನದ ಸಂದರ್ಭದಲ್ಲಿ ಉತ್ತೇಜನವನ್ನು ನೀಡುತ್ತಿದ್ದರು. ಸರಳ ಪ್ರಶ್ನೆಗಳನ್ನು ನೀಡುವ ಮೂಲಕ ಅಭ್ಯರ್ಥಿಯಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಿ, ಕಠಿಣ ಪ್ರಶ್ನೆಗಳಿಗೂ ಉತ್ತರವನ್ನು ನೀಡಬಲ್ಲ ಅಭ್ಯರ್ಥಿ ಎನಿಸಿದರೆ, ಅಂತವರಿಗೆ ಕಠಿಣ ಪ್ರಶ್ನೆಗಳನ್ನು ಕೇಳುತ್ತಿದ್ದರು. ಇವರ ಕಠಿಣ ಪ್ರಶ್ನೆಗೆ ಉತ್ತರಿಸದೆ ಇದ್ದ ಅಭ್ಯರ್ಥಿಗಳು ಸಹ ಇವರಿಂದ ಆಯ್ಕೆಯಾಗಿರುವ ಪ್ರಸಂಗಗಳು ಕಂಡುಬರುತ್ತವೆ. ಇದರ ಉದ್ದೇಶ ಸಾರ್ವಜನಿಕ ಆಡಳಿತದಲ್ಲಿ ದಲಿತರ ಪ್ರವೇಶವೇ ಅವರ ಬದುಕಿನ ಬೆಳಕನ್ನು ಕಟ್ಟಿಕೊಡುತ್ತದೆ. ಆದ ಕಾರಣ ಇವರು ನೇಮಕಾತಿಯ ಸಂದರ್ಭಗಳಲ್ಲಿ ತಮ್ಮ ವ್ಯಾಪ್ತಿಗೂ ಮೀರಿ ಸಹಾಯ ಮಾಡಿರುವ ಘಟನೆಗಳು ಹಲವಾರು.

ಮಾನವೀಯತೆಯು ವ್ಯಕ್ತಿತ್ವವನ್ನು ಅವರು ಆಡಳಿತ ನಡೆಸಿದೆಲ್ಲೆಡೆ ಅನುಷ್ಠಾನಗೊಳಿಸಿದ ದಕ್ಷ ಆಡಳಿತಗಾರರು. ಸಿಬ್ಬಂದಿಯ ಸಹಕಾರ ಮತ್ತು ಅವರೆಲ್ಲರನ್ನೂ ಪ್ರೇರೇಪಿಸಿ ಸರ್ಕಾರದ ಕೆಲಸವನ್ನು ಮನಃಪೂರ್ವಕವಾಗಿ ತಮ್ಮ ಅಧೀನ ನೌಕರರಿಂದ ಮಾಡಿಸುತ್ತಿದ್ದರು ಎಂದು ಅವರನ್ನು ಸಮೀಪದಿಂದ ಬಲ್ಲ ಅವರ ಸ್ನೇಹಿತರು ಹೇಳುತ್ತಿದ್ದರು. ಆಡಳಿತದಲ್ಲಿ ಶಿಸ್ತನ್ನು ಕಠಿಣವಾಗಿ ಅನುಸರಿಸುತ್ತಿದ್ದ ಭರಣಯ್ಯ ಅವರು ಕೆಲವು ಸಂದರ್ಭಗಳಲ್ಲಿ ಕಠಿಣ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರು. ಮೇಲಾಧಿಕಾರಿಗಳೊಂದಿಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಿದ್ದರು. ಅಂದು ಆಡಳಿತ ವೃಂದದಲ್ಲಿಯೇ ಸಮಗ್ರತೆಯನ್ನು ಸಾಧಿಸುವ ಅಧಿಕಾರಿಗಳಲ್ಲಿಯೇ ಭರಣಯ್ಯ

ಅವರು ಮುಂಚೂಣಿ ಅಧಿಕಾರಿಯೆಂದು ಸರ್ಕಾರದ ವಲಯದಲ್ಲಿ ಗುರುತಿಸಲ್ಪಟ್ಟಿತು. ಯಾವುದೇ ಇಲಾಖೆಗೂ ವರ್ಗಾಯಿಸಲ್ಪಟ್ಟರೂ ತಮ್ಮ ಆಡಳಿತ ಶೈಲಿಯ ಮೂಲಕ ವಿಶೇಷವಾಗಿ ಗುರುತಿಸುವಿಕೆಯನ್ನು ಕರ್ನಾಟಕ ಆಡಳಿತದಲ್ಲಿ ಸಾಧಿಸಿದ ಕೀರ್ತಿ ಇವರದು.

ಒಬ್ಬ ಸಂಯಮಶೀಲರಾಗಿ ಭರಣಯ್ಯ ಅವರು ವಿಚಾರಣೆಗಳನ್ನು ಮತ್ತು ಕ್ಷೇತ್ರ ಭೇಟಿಗಳನ್ನು ಕೈಗೊಳ್ಳುತ್ತಿದ್ದರು. ಸದಾ ನಿರ್ಗತಿಕರ ಪರವಾದ ಆಡಳಿತ ಧ್ವನಿ ಇವರದಾಗಿತ್ತು. ಜಟಿಲ ಸಮಸ್ಯೆಗಳನ್ನು ತಮ್ಮ ಆಡಳಿತದ ಚಾಣಾಕ್ಷತನದಿಂದ ಬಗೆಹರಿಸುತ್ತಿದ್ದರು. ಕಡತಗಳ ಮೇಲೆ ಅವರ ಬರಹಗಳೇ ಆಡಳಿತಯಂತ್ರದ ದಿಕ್ಸೂಚಿಗಳಾಗಿವೆ. ಎಷ್ಟೋ ಸಮಯದಲ್ಲಿ ಭರಣಯ್ಯ ಅವರ ನಿರ್ಧಾರಗಳನ್ನು ಅವರಿಂದ ತೆರೆವಾದ ಸ್ಥಳಕ್ಕೆ ಬಂದ ಅಧಿಕಾರಿಗಳು ಅವುಗಳನ್ನು ಪ್ರಸಂಶಿಸಿ ವಿಸ್ತರಿದ್ದುಂಟು. ಸದಾ ಗಂಭೀರದ ಸ್ವರೂಪಿಯಾದ ಭರಣಯ್ಯ ಅವರು ತಮ್ಮ ಸಹಪಾಟಿಗಳ ಮೆಚ್ಚುಗೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಮಂತ್ರಿಗಳ ಜೊತೆ ಉತ್ತಮ ಬಾಂದವ್ಯವನ್ನು ಭರಣಯ್ಯ ಅವರು ಹೊಂದಿದ್ದರು. ದಲಿತ ಮಂತ್ರಿಗಳು ಇವರಿಗೆ ಪ್ರೋತ್ಸಾಹದ ಜೊತೆಗೆ, ಇವರಿಂದ ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದರು. ಇವರ ಕ್ಷೇತ್ರದವರೇ ಆದ ಶ್ರೀ ಎನ್. ರಾಚಯ್ಯ ಅವರು ಇವರ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದವರಾಗಿದ್ದರು. ಶ್ರೀ ಬಿ. ಬಸವಲಿಂಗಪ್ಪ, ಶ್ರೀ ಕೆ.ಎಚ್. ರಂಗನಾಥ್, ಶ್ರೀ ಮಲ್ಲಿಕಾರ್ಜುನಸ್ವಾಮಿ, ಇವರಂತಹವರಿಂದ ಭರಣಯ್ಯ ಅವರು ತಮ್ಮ ಕಾರ್ಯದಕ್ಷತೆಗೆ ಅಪಾರ ಮೆಚ್ಚುಗೆಗಳನ್ನು ಪಡೆದುಕೊಳ್ಳುತ್ತಿದ್ದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರಪಾಟೀಲ್ ಮತ್ತು ಶ್ರೀ ಡಿ. ದೇವರಾಜ ಅರಸು ಅವರುಗಳ ನಿಕಟವರ್ತಿ ಅಧಿಕಾರಿಗಳಲ್ಲಿ ಭರಣಯ್ಯ ಅವರು ಒಬ್ಬರಾಗಿದ್ದರು.

ಭರಣಯ್ಯ ಅವರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಕಾಳಜಿಯನ್ನು ಹೊಂದಿದವರಾಗಿದ್ದರು. ನಾಟಕ, ಹಾಡುಗಾರಿಕೆ ಮತ್ತು ಸಂಗೀತದ ವಾದ್ಯಗಳ ಮಿಡಿತಕ್ಕೆ ತಲೆದೂಗುತ್ತಿದ್ದರು. ಓದುವ ಅಭಿರುಚಿಯಲ್ಲಿ ಮುಂದಿದ್ದರು. ಕುಟುಂಬ, ಸಂಬಂಧಿಕರು, ಗ್ರಾಮದವರು ಮತ್ತು ತಮ್ಮ ಜನಾಂಗದವರನ್ನು ವಿಶೇಷವಾಗಿ ನೋಡಿಕೊಳ್ಳುತ್ತಿದ್ದ ಆಧಾರಸ್ವರೂಪದ ವ್ಯಕ್ತಿತ್ವ ಇವರಲ್ಲಿ ಸದಾ Creative ಆಗಿ ಇರುತ್ತಿತ್ತು. ಗುಣಮಟ್ಟದ ಸಿನಿಮಾಗಳನ್ನು ನೋಡುವ ಅಭಿರುಚಿಯ ಜೊತೆಗೆ ಪ್ರಯಾಣದ ಸೊಬಗನ್ನು ಸವಿಯುತ್ತಿದ್ದ ಹೃದಯವಂತ. ನಿವೃತ್ತಿ ನಂತರವೂ ಲವಲವಿಕೆಯಿಂದ ಇರುತ್ತಿದ್ದರು. ಅಂತಿಮ ದಿನಗಳಲ್ಲಿ ಏಕಾಂಗಿಯಾಗಿರಲು ಬಯಸುತ್ತಿದ್ದರು. ತಮ್ಮ ಅಧಿಕಾರದ ಅವಧಿಯಲ್ಲಿ ತಮ್ಮ ಬಳಿ ಬಂದವರೆಲ್ಲರಿಗೂ

ಬದುಕನ್ನು ಕಟ್ಟಿಕೊಟ್ಟ ಈ ಧೀಮಂತಿಕೆ, ರಾಜಕಾರಣದ ಪ್ರಹಸನ ಇವರಿಗೆ ಆಘಾತವನ್ನೊ ತಂದೊಡ್ಡಿತ್ತು. ಚುನಾವಣ ರಾಜಕಾರಣ ದೇಶದಲ್ಲಿ ಅಂಬೇಡ್ಕರ್ ಅವರನ್ನೇ ಚುನಾಯಿಸಲಿಲ್ಲ. ಕೊಳ್ಳೇಗಾಲದ ಕ್ಷೇತ್ರವು ಕೂಡ ಭರಣಯ್ಯ ಅವರ ಸೋಲಿಗೆ ಮತ್ತೆ ಅಂತ್ಯಕ್ಕೆ ನಾಂದಿಯಾಯಿತು. ಉತ್ತಮ ಆಡಳಿತಗಾರ ಉತ್ತಮ ರಾಜಕಾರಣಿಯಾಗುವುದು ಕರ್ನಾಟಕದಲ್ಲಿ ಅದರಲ್ಲೂ ಹೊಲೆಯರಲ್ಲಿ ಇನ್ನೂ ಪ್ರಶ್ನೆಯಾಗಿಯೇ ಉಳಿದುಕೊಂಡಿದೆ. ಈ ಪ್ರಶ್ನೆಗೆ ಉತ್ತರಿಸುವ ಚುನಾವಣಾ ರಾಜಕಾರಣ ಅಸ್ತಿತ್ವಕ್ಕೆ ತರುವ ಎಲ್ಲಾ ಪ್ರಯತ್ನಗಳನ್ನು ಪ್ರಭುತ್ವದ ರಾಜಕಾರಣ ಸಾಧ್ಯವಾಗಿಸಬೇಕಾಗಿದೆ.

ದಕ್ಷತೆಗೆ ಗೌರವ ಪಡೆದವರು

ಹೆಚ್. ರಘುಪತಿ ರಾವ್, ಮತ್ತಿಕೊಪ್ಪ, ಸಾಗರ.

ಪರಿಚಯ: ರಘುಪತಿ ರಾವ್ ಅವರು ಸಾಗರ ತಾಲ್ಲೂಕಿನ ಮತ್ತಿಕೊಪ್ಪ ಗ್ರಾಮದವರು. ಅವರಿಗೆ ಈಗ 70 ವರ್ಷ ವಯಸ್ಸು. ಬಹಳ ಹಿಂದಿನಿಂದಲೂ ಸಾರ್ವಜನಿಕ ರಂಗದಲ್ಲಿದ್ದವರು. ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿದವರು. ಇದಕ್ಕಿಂತಲೂ ಸಹಕಾರ ಕ್ಷೇತ್ರದಲ್ಲಿ ಬಹಳ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಸಹಕಾರಿ ಕ್ಷೇತ್ರದಲ್ಲೇ ತಮ್ಮನ್ನು ಗುರುತಿಸಿಕೊಂಡ ರಘುಪತಿ ರಾಯರಿಗೆ ಭರಣಯ್ಯನವರ ನಿಕಟ ಒಡನಾಟ ಇತ್ತು. ಅವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದಾಗ ಮಾತ್ರವಲ್ಲದೆ ಕೋಆಪರೇಟಿವ್ ನಿರ್ದೇಶಕರಾದಾಗಲೂ ಸಂಪರ್ಕ ಇತ್ತು. ಶ್ರೀಯುತರು ಆ ನೆನಪುಗಳನ್ನು ಹಂಚಿಕೊಂಡಿದ್ದು ಹೀಗೆ;

"ನಾನು ಬಹಳ ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ನನಗೂ ಆರ್. ಭರಣಯ್ಯನವರಿಗೂ ಹೆಚ್ಚಿನ ಪರಿಚಯ ಆಯಿತು. 5–6 ವರ್ಷ ಮ್ಯಾಮ್‌ಕೋಸ್ ಸಂಸ್ಥೆಯ ನಿರ್ದೇಶಕನೂ ಆಗಿದ್ದೆ. ಆಗ ಅವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದರು. ಅಲ್ಲದೆ ಅವರು ಕೋ–ಆಪರೇಟಿವ್ ರಿಜಿಸ್ಟ್ರಾರ್ ಆಗಿದ್ದಂತಹ ಸಂದರ್ಭದಲ್ಲಿ ನಾನು ಅನೇಕ ಸಂದರ್ಭಗಳಲ್ಲಿ ಅವರನ್ನ ಮನೆಗೆ ಹೋಗಿ ಕಾಣುತ್ತಿದ್ದೆ. ಅವರೂ ನಮ್ಮನ್ನು ಭೇಟಿ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕ್‌ಗೆ ಸರ್ಕಾರದ ನಾಮಿನೇಷನ್‌ನಲ್ಲಿ ಅವರು ನನಗೆ ಬಹಳ

ಸಹಾಯ ಮಾಡಿದ್ದಾರೆ. ಅವರು ಶಿವಮೊಗ್ಗದಿಂದ ಹೋದ ನಂತರವೂ ಬೆಂಗಳೂರಿಗೆ ಹೋದ ಸಂದರ್ಭಗಳಲ್ಲೆಲ್ಲ ಅವರನ್ನು ಭೇಟಿ ಮಾಡುತ್ತಿದ್ದೆ.


ಆ ಸಂದರ್ಭದಲ್ಲಿ ಶರಾವತಿ ಯೋಜನೆ ನಡೆಯುತ್ತಿತ್ತು. ಅದರಿಂದ ಜಮೀನು ಕಳೆದುಕೊಂಡವರಿಗೆ ಎಕರೆಗೆ 2000, 3000 ಅಷ್ಟೆ ಪರಿಹಾರ ಕೊಟ್ಟು ಸರ್ಕಾರ ಕೈ ತೊಳೆದುಕೊಂಡಿತು. ಆಗ ಸುಮಾರು ಕೇಸ್ ಕೋರ್ಟಿಗೆ ಹೋಗಿತ್ತು. ಅನೇಕ ಅಧಿಕಾರಿಗಳು ಪರಿಹಾರ ಬರಲಿಕ್ಕೆ ಅಡೆತಡೆ ಉಂಟುಮಾಡಿದ್ದರು. ಆಗ ಭರಣಯ್ಯನವರು ಅಗತ್ಯವಾದ ದಾಖಲೆಗಳನ್ನೆಲ್ಲ ಒದಗಿಸಿ ಆ ಎಲ್ಲಾ ಕೆಲಸ ಸುಸೂತ್ರವಾಗುವಂತೆ ಮಾಡಿಕೊಟ್ಟರು. ಪರಿಹಾರವನ್ನು ದೊರಕಿಸಿಕೊಡುವಲ್ಲಿ ಅಪಾರ ನೆರವಿತ್ತರು. ಆ ಸಂದರ್ಭದಲ್ಲಿ ಭೂಪಾಳಂ ಚಂದ್ರಶೇಖರ್, ಮಂಚಾಲೆ ಗಣಪತಿಯಪ್ಪ ಮತ್ತು ನಾನು ಸೇರಿಕೊಂಡು ಸುಮಾರು ಕೆಲಸ ಮಾಡಿದ್ದೆವು.

ಬಹಳ ಒಳ್ಳೆಯ ಮನುಷ್ಯ. ನಿಗರ್ವಿ. ಅಷ್ಟು ದೊಡ್ಡ ಅಧಿಕಾರಿಯಾಗಿದ್ದರೂ ಸ್ವಲ್ಪವೂ ಅಹಂಕಾರ ಇರಲಿಲ್ಲ. ಕೆಲಸದಲ್ಲಿ ಬಹಳ ಸಿನ್ಸಿಯರ್ ಆಗಿದ್ದರು. ಅವರದ್ದೇ ಆದ ವರ್ಕ್ ಡಿಸಿಪ್ಲೀನ್ ಇತ್ತು. ಯಾವುದೇ ಕೆಲಸವನ್ನೂ ಬಹಳ ದಕ್ಷತೆಯಿಂದ ಮಾಡುತ್ತಿದ್ದರು. ಕಚೇರಿಯಲ್ಲಿ ಕಟ್ಟುನಿಟ್ಟಿನಿಂದ ಇದ್ದರು. ಅವರ ಕೆಳಗಿನ ಅಧಿಕಾರಿಗಳು ಬಹಳ ಗೌರವ ಕೊಡುತ್ತಿದ್ದರು ಅವರಿಗೆ. ಜನರೊಂದಿಗೂ ಕೂಡ ಬಹಳ ಮೃದುವಾಗಿ ವರ್ತಿಸುತ್ತಿದ್ದರು. ನಾನು ಡಿ.ಸಿ., ದೊಡ್ಡ ಅಧಿಕಾರಿ ಅನ್ನುವ ಮನೋಭಾವ ಇರಲಿಲ್ಲ ಅವರಲ್ಲಿ. ಸಂಸ್ಕೃತದಲ್ಲಿ ಬಹಳ ಪಾಂಡಿತ್ಯ ಇತ್ತು ಅವರಿಗೆ. ಬಹಳ ಅಥಾರಿಟಿಯಿಂದ, ಸಂಸ್ಕೃತ ಮಾತನಾಡುತ್ತಿದ್ದರು. ಕನ್ನಡದಲ್ಲೂ ಬಹಳ ಚೆನ್ನಾಗಿ ಭಾಷಣ ಮಾಡುತ್ತಿದ್ದರು. ಸಮಯ ಪ್ರಜ್ಞೆಯೂ ಬಹಳ ಇತ್ತು. ಯಾವುದಾದರೂ ಸಮಾರಂಭಕ್ಕೆ ಕರೆದರೆ ಹೇಳಿದ ಸಮಯಕ್ಕೆ ಸರಿಯಾಗಿ ಹಾಜರಿರುತ್ತಿದ್ದರು. ಅಷ್ಟು ಪಂಕ್ಚುಯಲ್ ಆಗಿದ್ದರು. ನಿಯಮಿತವಾಗಿ ಹಳ್ಳಿಗಳಿಗೆ ಭೇಟಿ ಕೊಟ್ಟು ಜನರ ಕಷ್ಟಸುಖ ವಿಚಾರಿಸುತ್ತಿದ್ದರು.

ಭರಣಯ್ಯನವರು ಅಷ್ಟು ಪಾಂಡಿತ್ಯ, ದಕ್ಷತೆ ಇದ್ದಂತಹ ಅಧಿಕಾರಿ ಆದರೂ ಇಲ್ಲಿ ಬಂದ ಮೊದಲಿಗೆ ನಾನು ಹಿಂದುಳಿದವನು ಅಂತ ಅವರಲ್ಲಿ ಸ್ವಲ್ಪ ಅಳುಕಿತ್ತು. ಇಲ್ಲಿನ ಜನ ಬೆಂಬಲ ಕೊಡುತ್ತಾರೋ ಇಲ್ಲವೋ ಅಂತ ಇತ್ತು. ಆದರೆ ಈ ಭಾಗದ ಜನ ಅವರ ವ್ಯಕ್ತಿತ್ವ, ದಕ್ಷತೆಯನ್ನು ಪರಿಗಣಿಸಿದರೇ ಹೊರತು ಅವರ ಜಾತಿ ನೋಡಲಿಲ್ಲ. ನನ್ನ ಬಗ್ಗೆ ಅವರಿಗೆ ವಿಶ್ವಾಸ ಬಂದಿದ್ದೂ ಅದೇ ಕಾರಣಕ್ಕೆ. ನಾನು ಒಬ್ಬ ಬ್ರಾಹ್ಮಣ ಆದರೂ ಅವರೊಂದಿಗೆ ಬೆರೆಯುತ್ತಿದ್ದಿದ್ದು, ವಿಶ್ವಾಸದಿಂದ ಇರುತ್ತಿದ್ದಿದ್ದು ನೋಡಿ ನನ್ನನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಒಮ್ಮೆ ಯಾವುದೋ ಕೆಲಸಕ್ಕೆ ಅವರ ಮನೆಗೆ ಹೋಗಿದ್ದೆ. ಆವಾಗ 'ನೀವು ನಮ್ಮ ಮನೆಯಲ್ಲಿ ಕಾಫಿ, ಟಿ ಕುಡಿಯುತ್ತೀರೋ ಇಲ್ಲವೋ ಹಾಲು ಕೊಡುತ್ತೇನೆ' ಅಂದರು. ನಾನು 'ಹಾಗೆಲ್ಲ ಏನೂ ಇಲ್ಲ ಕಾಫಿನೇ ಕೊಡಿ' ಅಂದೆ. ಆದರೂ ಕೇಳದೆ

ಹಾಲನ್ನೇ ಕೊಟ್ಟರು. ಅಷ್ಟು ಸಂಸ್ಕಾರ ಇತ್ತು ಅವರಲ್ಲಿ. ಅವರೊಡನೆ ಒಡನಾಡಿದರೆ ಅವರೊಬ್ಬ ಹಿಂದುಳಿದ ವರ್ಗದಿಂದ ಬಂದವರು ಅನ್ನಿಸುತ್ತಿರಲಿಲ್ಲ. ಯೋಗ್ಯವಾದಂತಹ ವ್ಯಕ್ತಿತ್ವವುಳ್ಳವರು ಅಂತಲೇ ಹೇಳಬಹುದು ಹಾಗಿತ್ತು ಅವರ ಗುಣ – ನಡತೆ.

ಆದರೆ ಇವತ್ತಿನ ಕಾಲದಲ್ಲಿ ಇಂಥ ಅಧಿಕಾರಿಗಳು ಸಿಗುವುದು ಅಪರೂಪದಲ್ಲಿ ಅಪರೂಪ. ಒಂದೊಮ್ಮೆ ಸಿಕ್ಕರೂ ಕೆಲವು ದಿನ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಆಮೇಲೆ ಈ ವ್ಯವಸ್ಥೆಯೊಳಗೆ ಅವರೂ ಮುಳುಗೆದ್ದು ಭ್ರಷ್ಟರಲ್ಲೇ ಅತೀ ಭ್ರಷ್ಟರಾಗಿಬಿಡುತ್ತಾರೆ. ಯಾವುದೋ ಕೆಲಸ ಆಗಬೇಕು ಅಂತ ಇವತ್ತು ಅಧಿಕಾರಿಗಳ ಬಳಿ ಹೋದರೆ ನಾಳೆ ಬನ್ನಿ, ನಾಡಿದ್ದು ಬನ್ನಿ ಅಂತ ಸತಾಯಿಸುತ್ತಾರೆ. ಆದರೆ ಭರಣಯ್ಯನವರು ಹಾಗಿರಲಿಲ್ಲ. ಯಾವುದೇ ಕೆಲಸವನ್ನೂ ಅವರು ಪೆಂಡಿಂಗ್ ಇಡುತ್ತಿರಲಿಲ್ಲ. ಹೇಳಿದ ಕೆಲಸವನ್ನು ತಕ್ಷಣ ಮಾಡಿಸಿಕೊಡುತ್ತಿದ್ದರು. ಅವರಷ್ಟು ಕಾಳಜಿಯಿಂದ, ಪ್ರಾಮಾಣಿಕತೆಯಿಂದ ಕೆಲಸಮಾಡಿದ ಸರ್ಕಾರಿ ಅಧಿಕಾರಿಯನ್ನು ಈ 25 ವರ್ಷಗಳಿಂದ ಯಾರನ್ನೂ ನೋಡಿಲ್ಲ ನಾನು. ಸಮಾಜಕ್ಕಾಗಿ ಕೆಲಸ ಮಾಡಿದಂತಹ ಇಂತಹ ವ್ಯಕ್ತಿಗಳ ಬಗ್ಗೆ ದಾಖಲೆ ಅಗತ್ಯವಾಗಿ ಬೇಕು. ಸಮಾಜಕ್ಕಾಗಿ, ದುರ್ಬಲರಿಗಾಗಿ ಕೆಲಸ ಮಾಡಿದವರನ್ನ ಜನ ಬಹಳ ಬೇಗ ಮರೆತುಬಿಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಭೂಪಾಳಂ ಚಂದ್ರಶೇಖರ್ ಅವರು ಶರಾವತಿ ಮುಳುಗಡೆ ಸಂತ್ರಸ್ತರಿಗಾಗಿ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟವರು. ಇವತ್ತು ಸರ್ಕಾರಕ್ಕಿರಲಿ, ಈ ಭಾಗದ ಜನರಿಗೇ ನೆನಪಿಲ್ಲ ಅವರು! ಕಾಲ ಇನ್ನೂ ಮುಂದೆ ಸರಿಯುತ್ತಾ ಹೋದಂತೆ ಇಂತಹ ವ್ಯಕ್ತಿಗಳ ಹೆಸರೂ ಇಂದಿನ ಪೀಳಿಗೆಗೆ ಮರೆತುಹೋಗುವ ಸನ್ನಿವೇಶ ಇದೆ ಈಗ. ಭರಣಯ್ಯನವರಂತಹ ವ್ಯಕ್ತಿಗಳೂ ಕೂಡ ಆ ಸಾಲಿಗೆ ಸೇರಿ ಮರೆಯಾಗಿಬಿಡಬಾರದು".



ಕಳಂಕವಿಲ್ಲದ ವ್ಯಕ್ತಿತ್ವ

ಸಿ. ಗೋಪಾಲಕೃಷ್ಣ ರಾವ್. ಚಿಪ್ಪಳಿ, ಸಾಗರ.

ಪರಿಚಯ: ಶ್ರೀ ಗೋಪಾಲಕೃಷ್ಣ ರಾವ್ ಅವರು ಸಾಗರ ಸಮೀಪದ ಚಿಪ್ಪಳಿ ಗ್ರಾಮದವರು. ಇವರು ವೃತ್ತಿಯಿಂದ ಅಡಿಕೆ ಬೆಳೆಗಾರರು ಮತ್ತು ಅಡಿಕೆ ವರ್ತಕರು. ಇವರ ಊರಿಗೆ ಸಮೀಪ ಇರುವ ವರದಾಮೂಲ ಗ್ರಾಮ ವರದಾ ನದಿ ಉಗಮಿಸುವ ಸ್ಥಳ. ಭರಣಯ್ಯನವರು ಜಿಲ್ಲಾಧಿಕಾರಿಗಳಾಗಿದ್ದಾಗ ವರದಾಮೂಲಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ರಾವ್ ಅವರ ಆಹ್ವಾನದ ಮೇರೆಗೆ ಅವರ ಮನೆಗೂ ಭೇಟಿ

ಕೊಟ್ಟಿದ್ದರು. ರಾವ್ ಅವರು ಆ ನೆನಪುಗಳ ಜೊತೆಗೆ ಭರಣಯ್ಯನವರ ವ್ಯಕ್ತಿತ್ವ, ಕೆಲಸಕಾರ್ಯಗಳ ಕುರಿತು ಇಲಿ ಅನುಭವ ಹಂಚಿಕೊಂಡಿದ್ದಾರೆ:

ಭರಣಯ್ಯನವರನ್ನು ಮೊದಲು ಭೇಟಿ ಆದ ಸನ್ನಿವೇಶವನ್ನು, ಅವರ ಒಡನಾಟವನ್ನು ಗೋಪಾಲಕೃಷ್ಣ ರಾವ್ ನೆನದುಕೊಂಡಿದ್ದು ಹೀಗೆ;


ಭರಣಯ್ಯನವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದಾಗ ಅವರನ್ನು ನೋಡಿದ್ದೇನೆ. ಒಮ್ಮೆ ನಮ್ಮ ಊರಿನ ಮಾರ್ಗವಾಗಿ ಅವರು ವರದಾಮೂಲಕ್ಕೆ ಹೋಗುವಾಗ ನನ್ನ ಮನೆಗೆ ಆಹ್ವಾನಿಸಿದ್ದೆ. ಸಂತೋಷದಿಂದ ಬಂದು ಟೀ ತೆಗೆದುಕೊಂಡು ಮಾತುಕಥೆ ಆಡಿಕೊಂಡು ಹೋಗಿದ್ದರು. ಅವರೊಂದಿಗೆ ವಿಶೇಷ ಅನ್ನುವಂತಹ ಒಡನಾಟ ಇಲ್ಲದಿದ್ದರೂ ಅವರ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಅವರು ಸಂಸ್ಕೃತದಲ್ಲಿ ಒಳ್ಳೆಯ ವಿದ್ವಾಂಸರಾಗಿದ್ದರು. ಒಳ್ಳೆಯ ಅಧಿಕಾರಿಗಳಾಗಿದ್ದರು. ಯಾವುದೇ ಆಸೆ ಆಮಿಷಕ್ಕೆ ಒಳಗಾಗದೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಕೊಡುತ್ತಿದ್ದರು.

ಆ ಕಾಲದಲ್ಲಿ ಸಾಮಾಜಿಕ ವಾತಾವರಣ ಸಾಕಷ್ಟು ಚೆನ್ನಾಗಿತ್ತು. ಆದರೆ ಆರ್ಥಿಕವಾಗಿ ಹಿಂದುಳಿದ ಪ್ರದೇಶ. ಅಡಿಕೆಗೆ ಬೆಲೆ ಇರಲಿಲ್ಲ. ಇದಕ್ಕೆಲ್ಲ ಒಬ್ಬ ಅಧಿಕಾರಿಯಾಗಿ ಹೇಗೆ ಸ್ಪಂದಿಸಬೇಕೋ ಆ ರೀತಿಯಲ್ಲಿ ಉತ್ತಮವಾಗಿಯೇ ಕೆಲಸ ಮಾಡಿದರು ಭರಣಯ್ಯನವರು. ಇಲ್ಲಿನ ಸಮಾಜ ಅವರನ್ನು ಸಾಕಷ್ಟು ಗೌರವದಿಂದ ನೋಡಿಕೊಂಡಿತು. ಅವರು ಹಿಂದುಳಿದ ವರ್ಗದಿಂದ ಬಂದವರೆಂದು ತಾರತಮ್ಯವನ್ನೇನೂ ಮಾಡಲಿಲ್ಲ. ಅದಕ್ಕೆ ಅವರಲ್ಲಿದ್ದಂತಹ ವಿದ್ವತ್ತು, ಅವರ ವ್ಯಕ್ತಿತ್ವ ಮತ್ತು ಅಧಿಕಾರಿಯಾಗಿದ್ದರೂ ಸರಳತೆ ಇದ್ದುದು ಇದಕ್ಕೆ ಕಾರಣ.

ಅವರು ಶಿವಮೊಗ್ಗ ಬಿಟ್ಟುಹೋದಮೇಲೆ ನಂತರದ ನೆನಪುಗಳು ಕಡಿಮೆ. ಏಕೆಂದರೆ ನೇರ ಸಂಪರ್ಕ ಇರಲಿಲ್ಲ. ಭರಣಯ್ಯನವರು ಚುನಾವಣೆಗೆ ನಿಂತಿರುವರೆಂದು ಒಮ್ಮೆ ತಿಳಿಯಿತು. ಸೋತಿದ್ದು ಕೇಳಿ ಬೇಸರವೆನಿಸಿತು. ಆಡಳಿತಮಾಡಿ ಪ್ರತ್ಯಕ್ಷ ಅನುಭವ ಇರುವಂತಹ ವ್ಯಕ್ತಿ ರಾಜಕಾರಣಿ ಆಗುತ್ತಾರೆ ಅಂತಾದರೆ ಜನ ಅವರನ್ನ ಗೆಲ್ಲಿಸಬೇಕಾಗಿತ್ತು. ಗೆಲ್ಲಿಸಿದ್ದಿದ್ದರೆ ಅವರಿಂದ ಇನ್ನೂ ಉತ್ತಮವಾದ ಸೇವೆಯನ್ನು ಪಡೆಯಬಹುದಾಗಿತ್ತು. ಅವರನ್ನು ಸೋಲಿಸಿದ್ದು ಆ ಭಾಗದ ಜನರ ದೌರ್ಭಾಗ್ಯವೇ ಹೊರತು, ಅದರಿಂದ ಭರಣಯ್ಯನವರ ವ್ಯಕ್ತಿತ್ವಕ್ಕೆ ಕಿಂಚಿತ್ತೂ ಕಳಂಕ ಇಲ್ಲ ಅಂತಲೇ ಈಗಲೂ ಭಾವಿಸುತ್ತೇನೆ ನಾನು. ಅಷ್ಟು ದೊಡ್ಡ ವ್ಯಕ್ತಿತ್ವ ಅವರದ್ದು. ಅವರ ಸೋಲು ಆ ಭಾಗದ ಜನರಿಗೆ ಆದ ನಷ್ಟವೇ ಹೊರತು ಭರಣಯ್ಯನವರಿಗೆ ಆದ ಸೋಲಲ್ಲ ಅದು.

ಇವತ್ತು ಅವರ ಕಾಲವನ್ನು ಕಲ್ಪನೆಯಲ್ಲಿ ಕಾಣುವುದಕ್ಕೂ ಸಾಧ್ಯವಿಲ್ಲ ಅಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಎಲ್ಲಾ ಕ್ಷೇತ್ರದಲ್ಲೂ. ರಾಜಕೀಯದಿಂದ ಆರಂಭಿಸಿ ಸಣ್ಣ ಗುಮಾಸ್ತರವರೆಗೂ

ಹಬ್ಬಿಕೊಂಡಿದೆ ಭ್ರಷ್ಟಾಚಾರ. ಆವತ್ತು ಹಾಗಿರಲಿಲ್ಲ. ಆಡಳಿತದಲ್ಲಿ ಶುದ್ಧಹಸ್ತರಿಗೆ ಜನರೂ ಬೆಂಬಲ ಕೊಡುತ್ತಿದ್ದರು, ಗೌರವಿಸುತ್ತಿದ್ದರು. ಇಂದಿನ ಕಾಲಕ್ಕೂ ಅವರ ಕಾಲಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಅಂತಹ ಮಹಾನ್ ವ್ಯಕ್ತಿತ್ವವುಳ್ಳವರು ಅಧಿಕಾರಿಗಳಾಗಿ ಮಾಡಿರುವಂತಹ ಕೆಲಸಗಳು ಇಂದಿನವರಿಗೆ ಮಾದರಿ ಆಗಬೇಕು. ಆವತ್ತಿನ ಕಾಲದಲ್ಲಿ ಈಗಿರುವಷ್ಟು ಸೌಲಭ್ಯ, ಸವಲತ್ತು ಇರಲಿಲ್ಲ. ಆದರೂ ಅವರು ಕಳಕಳಿಯಿಂದ ಕೆಲಸ ಮಾಡಿದರು. ಅವರಂತಹ ವ್ಯಕ್ತಿಗಳು ಇಂದಿನ ಪೀಳಿಗೆಗೆ ಮಾದರಿ ಆಗಬೇಕು. ಇಂದಿನವರು ಅವರಿಂದ ಸ್ಫೂರ್ತಿ ಪಡೆದು ಬದುಕುವಂತಾಗಬೇಕು".



ತಾರತಮ್ಯ ತೋರದ ಅಧಿಕಾರಿ

ಕೋಣಂದೂರು ಲಿಂಗಪ್ಪ – ಸಮಾಜವಾದಿ ಚಿಂತಕ

ಪರಿಚಯ: ಕೋಣಂದೂರು ಲಿಂಗಪ್ಪನವರು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನ ಮಾಜಿ ಸದಸ್ಯರು. ವಯಸ್ಕರ ಶಿಕ್ಷಣ ಸಮಿತಿಯ ಮಾಜಿ ಅಧ್ಯಕ್ಷರು. ಕಾಲೇಜು ದಿನಗಳಿಂದಲೆ ನಾಯಕತ್ವದಲ್ಲಿ, ಸಮಾಜವಾದಿ ಚಳುವಳಿಯಲ್ಲಿ ಗುರುತಿಸಿಕೊಂಡವರು. ಶಾಂತವೇರಿ ಗೋಪಾಲಗೌಡರು ಇವರ ರಾಜಕೀಯ ಗುರುಗಳು. ಜೊತೆಗೆ ಜೆ.ಹೆಚ್. ಪಟೇಲ್, ಪರಮೇಶ್ವರಪ್ಪ, ಎಸ್.ಎಸ್. ಭರ್ಮಪ್ಪ ಅವರುಗಳ ಗರಡಿಯಲ್ಲಿ ಪಳಗಿದವರು. ಲೋಹಿಯಾ ಸಿದ್ಧಾಂತವನ್ನು ಅಕ್ಷರಶಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು. ಅವರು ಕಾಲೇಜು ವ್ಯಾಸಂಗ ಮಾಡುವ ಸಂದರ್ಭದಲ್ಲಿ ಭರಣಯ್ಯನವರು ಅವರಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದರು. ಅವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹ ಕೊಡುತ್ತಿದ್ದರು. ಮಾರ್ಗದರ್ಶನ ಮಾಡುತ್ತಿದ್ದರು. ಹಾಗಾಗಿ ನಂತರವೂ ಲಿಂಗಪ್ಪನವರು ಭರಣಯ್ಯನವರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದರು. ಅವರ ಹಾಗೂ ಭರಣಯ್ಯನವರ ಮೊದಲ ಭೇಟಿಯಿಂದ ಹಿಡಿದು ಅವರ ವ್ಯಕ್ತಿತ್ವ, ಕಾರ್ಯದಕ್ಷತೆ, ಪ್ರತಿಭೆ–ಪಾಂಡಿತ್ಯಗಳ ಕುರಿತು ಮಾತನಾಡಿದ್ದು ಇದು.

"ನಾನು ಕೋಣಂದೂರಿನಲ್ಲೆ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿಕೊಂಡು ಇಂಟರ್‌ಮೀಡಿಯೆಟ್‌ಗೆ ಶಿವಮೊಗ್ಗಕ್ಕೆ ಬಂದೆ 56–57ರ ಸಮಯದಲ್ಲಿ. ಆಗ ಶಿವಮೊಗ್ಗ ಇಂಟರ್‌ಮೀಡಿಯೆಡ್ ಕಾಲೇಜ್ ಅಂತ ಇತ್ತು. ಅದೇ ವರ್ಷ ನಮ್ಮ ಕಾಲೇಜು ಪಿಯುಸಿ ಕಾಲೇಜ್ ಆಗಿ ಪರಿವರ್ತನೆ ಆಯಿತು. ಆ ಸಮಯದಲ್ಲಿ ಭರಣಯ್ಯನವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದರು. ಅವರು ಒಮ್ಮೆ ನಮ್ಮ ವಿದ್ಯಾರ್ಥಿಸಂಘದ

ಉದ್ಘಾಟನೆಗೆ ಬಂದಿದ್ದರು. ಅದೇ ಸಂಘವನ್ನು ಕಾಲೇಜು ಕರ್ನಾಟಕ ಸಂಘ ಅಂತ ಮಾಡಿದೆವು. ಆ ಸಂಘದ ಪ್ರಥಮ ಚುನಾವಣೆಗೆ ನಾನು ಸ್ಪರ್ಧಿಸಿ ಗೆದ್ದು ಅಧ್ಯಕ್ಷನಾದೆ. ಆಗ ಭರಣಯ್ಯನವರನ್ನ ಉದ್ಘಾಟನೆಗೆ ಬರಬೇಕು ಅಂತ ನಾನೇ ಹೋಗಿ ಆಹ್ವಾನ ಕೊಟ್ಟೆ. ವಿಷಯ ತಿಳಿಸಿದಾಗ ಸಂತೋಷದಿಂದ ಒಪ್ಪಿಕೊಂಡರು.

ಸಮಾರಂಭದ ದಿನ ಅರ್ಧ ಗಂಟೆ ಮುಂಚೆಯೇ ಬಂದರು. ಕೋಟು, ಟೈ ಎಲ್ಲ ಹಾಕಿಕೊಂಡು ಎಷ್ಟು ಶಿಸ್ತಿನಿಂದ ಬಂದಿದ್ದರು ಅಂದರೆ ನನಗೆ ಡಾ. ಅಂಬೇಡ್ಕರ್ ಭಾವಚಿತ್ರ ನೋಡಿದಾಗಲೆಲ್ಲ ಭರಣಯ್ಯನವರೇ ನೆನಪಾಗುತ್ತಾರೆ ಇವತ್ತಿಗೂ! ಅವರು ಆವತ್ತು ಬಹಳ ಒಳ್ಳೆಯ ಭಾಷಣ ಮಾಡಿದರು. ಆನಂತರ ನಾವು ಒಂದು ಅಂತರಕಾಲೇಜು ಚರ್ಚಾಕೂಟ ಮಾಡಿದೆವು. ಅದರ ಅಧ್ಯಕ್ಷತೆಗೆ ಭರಣಯ್ಯನವರನ್ನು ಕರೆದಿದ್ದೆವು. ನಾನೂ ಅದರಲ್ಲಿ ಭಾಗವಹಿಸಿದ್ದೆ. ಸ್ಪರ್ಧೆ ಎಲ್ಲ ಮುಗಿದಮೇಲೆ ಅವರು ಮಾಡಿದ ಅಧ್ಯಕ್ಷೀಯ ಭಾಷಣ ಇವತ್ತಿಗೂ ಒಂದು ಸವಿನೆನಪಾಗಿ ಉಳಿದುಕೊಂಡಿದೆ ನನ್ನಲ್ಲಿ.

ಬಹಳಷ್ಟು ಜನ ಭರಣಯ್ಯನವರನ್ನು ಹಿಂದುಳಿದವರು ಹಾಗೆ ಹೀಗೆ ಅಂತೆಲ್ಲ ತಿಳಿದುಕೊಂಡಿದ್ದರು. ಆದರೆ ಅವರು ಏನು ಅನ್ನುವುದನ್ನು ತಿಳಿದುಕೊಳ್ಳಲಿಕ್ಕೆ ಅವರು ಆವತ್ತು ಮಾಡಿದ ಭಾಷಣ ಸಾಕ್ಷಿಯಾಗಿತ್ತು. ಸಂಸ್ಕೃತದಲ್ಲಿ ಅವರಿಗೆ ಆಳವಾದ ಪಾಂಡಿತ್ಯ ಇತ್ತು. ಆವತ್ತು ಅವರು ಭಗವದ್ಗೀತೆಯ ಕರ್ಮಯೋಗದ ಶ್ಲೋಕಗಳನ್ನು ಹೇಳಿ ಬಹಳ ತಿಳಿಯಾದ ಭಾಷೆಯಲ್ಲಿ ಅದರ ಅರ್ಥವನ್ನು ವಿವರಿಸಿ ಹೇಳಿದರು. ಅವರ ಆ ಕಾಲದ ಸಂಸ್ಕೃತ ಭಾಷಣ ನೆನಪುಮಾಡಿಕೊಂಡರೆ ಇವತ್ತಿಗೂ ಅವರು ಅಷ್ಟು ಸಂಸ್ಕೃತ ಪಾಂಡಿತ್ಯ ಗಳಿಸಿದ್ದು ನಮಗೆ ಆಶ್ಚರ್ಯ ಆಗುತ್ತೆ. ಜೊತೆಗೆ ಹೆಮ್ಮೆಯೂ ಆಗುತ್ತದೆ.

ನೀವೆಲ್ಲ ವಿದ್ಯಾರ್ಥಿಗಳು. ಕರ್ಮಯೋಗಿಗಳಾಗಬೇಕು ನೀವು. ವಿದ್ಯಾಭ್ಯಾಸ ನಿಮ್ಮ ಇವತ್ತಿನ ಕರ್ಮ. ಅದನ್ನು ನಿಷ್ಠೆಯಿಂದ, ಶ್ರದ್ಧೆಯಿಂದ ಮಾಡಬೇಕು, ಎಂದು ಬಹಳ ಮನಮುಟ್ಟುವಂತೆ ಹೇಳಿದರು. ಅದಾದಮೇಲೆ ಶಿಕ್ಷಣದ ಬಗ್ಗೆ ಹೇಳಿದರು. 'ಶ್ರದ್ಧೆಯಿಂದ ಶಿಕ್ಷಣ ಪಡೆಯಬೇಕು ನೀವುಗಳು. ದುರಭ್ಯಾಸಗಳನ್ನು ಬೆಳೆಸಿಕೊಳ್ಳಬಾರದು. ಬೇರೆ ವಿಷಯಗಳತ್ತ ಮನಸ್ಸು ಹರಿಸಬಾರದು' ಎಂದು ಬಹಳ ಪ್ರೌಢವಾದ ಭಾಷಣ ಮಾಡಿದರು. ಚರ್ಚಾಕೂಟ ಎಲ್ಲ ಆಗಿ ಮೊದಲನೆಯ ಬಹುಮಾನ ನನಗೆ ಬಂತು. ನಂತರ ಅವರು ವಾಪಸ್ ಹೋಗುವಾಗ ಪ್ರಿನ್ಸಿಪಾಲರ ಹತ್ತಿರ ನನ್ನ ಹೆಸರು ಹೇಳಿ ಅವನನ್ನು ನಾಳಿದ್ದು ಭಾನುವಾರ ಮನೆಗೆ ಬಂದು ನನ್ನನ್ನು ಕಾಣಲು ಹೇಳಿ ಅಂತ ಹೇಳಿದ್ದರಂತೆ. ಮರುದಿನ ನಾನು ಕಾಲೇಜಿಗೆ ಹೋದಾಗ ಈ ವಿಷಯ ನನಗೆ ತಿಳಿಯಿತು.

ಆ ಭಾನುವಾರ 11ಗಂಟೆ ಹೊತ್ತಿಗೆ ನಾನು ಅವರ ಮನೆಗೆ ಹೋದೆ. ಆವಾಗ ಹೆಚ್ಚುಕಡಿಮೆ ಅವರು ನನ್ನನ್ನೇ ನಿರೀಕ್ಷೆ ಮಾಡುತ್ತಿದ್ದರೇನೋ ಅನ್ನಿಸಿಬಿಟ್ಟಿತು ಅವರ ಮುಖಭಾವ, ವರ್ತನೆ. ಹೋದಕೂಡಲೇ ನೆಂಟರನ್ನು ಕರೆಯುವಂತೆ 'ಬನ್ನಿ.. ಬನ್ನಿ..'

ಅಂತ ಬಹುವಚನದಲ್ಲೇ ಮಾತಾಡಿಸಿ ಕರೆದು ಒಳಗೆ ಕೂರಿಸಿದರು. ಬಹಳ ಆತ್ಮೀಯವಾಗಿ ಮಾತಾಡಿದರು. ನನ್ನ ಬಗ್ಗೆ, ಮನೆಯ ಸ್ಥಿತಿಗತಿ, ತಂದೆ–ತಾಯಿ ಎಲ್ಲವನ್ನೂ ವಿಚಾರಿಸಿದರು. ನಾನು ಇದ್ದ ಸತ್ಯ ಸಂಗತಿ ಹೇಳಿದೆ. ಕಾಫಿ ತಿಂಡಿ ಎಲ್ಲ ಕೊಟ್ಟರು. 'ಸರಿಯಪ್ಪ ಶ್ರದ್ಧೆಯಿಂದ ಓದಿ ಚೆನ್ನಾಗಿ ಮುಂದೆಬರಬೇಕು. ಹಿಂದುಳಿದ ವರ್ಗದಿಂದ ಬಂದವನು ನೀನು. ನೀನು ಮುಂದೆ ಬರುತ್ತೀಯ, ಆ ಶಕ್ತಿ ಇದೆ ನಿನ್ನಲ್ಲಿ' ಅಂತ ಆಶೀರ್ವದಿಸಿದರು.

ನನಗೆ ವಿಪರೀತ ಆನಂದದ ಜೊತೆಗೆ ಆಶ್ಚರ್ಯವೂ ಆಯಿತು. ನಮ್ಮ ಕಾಲದಲ್ಲಿ ಒಬ್ಬ ಶೇಕ್ದಾರರು, ಶಾನುಭೋಗರನ್ನು ಮಾತಾಡಿಸುವುದೇ ಕಷ್ಟವಾಗಿತ್ತು. ಹಾಗಿರುವಾಗ ನನ್ನಂತಹ ಒಬ್ಬ ಸಾಮಾನ್ಯ ವಿದ್ಯಾರ್ಥಿಯನ್ನು ಡಿ.ಸಿ. ಸಾಹೇಬರು ಮನೆಗೆ ಕರೆದು ಮಾತಾಡಿಸುವುದು ಎಂದರೆ ಆಗಿನ ಕಾಲದಲ್ಲಿ ಅದೊಂದು ಅದ್ಭುತವೇ ಸರಿ! ಮಾತುಕತೆ ಎಲ್ಲ ಆಯಿತು.

'ಸರಿ ಸರ್ ಹೊರಡುತ್ತೀನಿ' ಅಂತ ಎದ್ದುನಿಂತೆ.

'ಒಂದು ನಿಮಿಷ ಇರಿ' ಎಂದು ಒಳಗೆ ಹೋದರು. ಹೋಗಿ ಬಂದು ನನಗೆ ಒಂದು ಎನ್ವಲಪ್ ಕವರ್ ಕೊಟ್ಟರು.

'ಇದನ್ನು ನೀವು ಇಟ್ಟುಕೊಳ್ಳಿ. ನಿಮ್ಮ ಸ್ಥಿತಿಗತಿ ಎಲ್ಲ ನನಗೆ ಗೊತ್ತಾಯಿತು. ಇದನ್ನು ಉಪಯೋಗಿಸಿಕೊಳ್ಳಿ' ಎಂದರು.

'ಏನು ಸರ್ ಇದು. ಇದೆಲ್ಲ ಬೇಡ' ಎಂದೆ.

'ಅದು ಏನೇ ಇರಲಿ ಇಟ್ಟುಕೊಳ್ಳಿ' ಎಂದರು.

ಎಷ್ಟು ಬೇಡ ಎಂದರೂ ವಾಪಸ್ ತೆಗೆದುಕೊಳ್ಳಲೇ ಇಲ್ಲ. ಸರಿ ಎಂದು ರೂಮಿಗೆ ಬಂದು ಕವರ್ ತೆಗೆದು ನೋಡುತ್ತೀನಿ ಸರಿಯಾಗಿ 500 ರೂಪಾಯಿ ಇತ್ತು ಅದರಲ್ಲಿ! ಆ ಕಾಲದಲ್ಲಿ ನನಗೆ 500 ರೂಪಾಯಿ ಕೊಟ್ಟ ಒಬ್ಬರೇ ಒಬ್ಬರು ಅಂದರೆ ಆರ್. ಭರಣಯ್ಯನವರು. ಅವರು ಅಂದು ಕೊಟ್ಟ 500 ರೂಪಾಯಿ ಆ ವರ್ಷಪೂರ್ತಿ ನನಗೆ ಪ್ರಯೋಜನಕ್ಕೆ ಬಂತು. ಬಹಳ ಉಪಕಾರವಾಯಿತು ನನಗೆ ಅದರಿಂದ. ಅದನ್ನು ನಾನು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಅವರ ಆಡಳಿತ ವೈಖರಿಯ ನೆನಪುಗಳನ್ನು ಇಲ್ಲಿ ದಾಖಲಿಸುವುದು ಮುಖ್ಯ.

ಇಡೀ ಶಿವಮೊಗ್ಗ ಜಿಲ್ಲೆಯನ್ನು ತಿಂಗಳಿಗೆ ಒಂದು ಬಾರಿಯಾದರೂ ಸುತ್ತಾಡಿ ರಸ್ತೆ, ಮೋರಿ, ಸೇತುವೆ ಹೀಗೆ ಮೂಲಭೂತ ವ್ಯವಸ್ಥೆ ಎಲ್ಲ ಸುಸ್ಥಿತಿಯಲ್ಲಿದೆಯಾ ಅಂತ ಪರೀಕ್ಷಿಸುತ್ತಿದ್ದರು. ಅದಕ್ಕಿಂತ ಮುಖ್ಯವಾಗಿ ಹೋದ ಕಡೆ ಎಲ್ಲ ಶಾಲೆಗಳಿಗೆ ಆಕಸ್ಮಿಕ ಭೇಟಿ ಕೊಟ್ಟು ಅಲ್ಲಿಯ ಸ್ಥಿತಿಗತಿಗಳನ್ನು ನೋಡುತ್ತಿದ್ದರು. ಆಮೇಲೆ ಮುಖ್ಯಸ್ಥರನ್ನು ಭೇಟಿಮಾಡಿ ಅದರ ಅಭಿವೃದ್ಧಿಯ ಬಗ್ಗೆ ಹೇಳಿಕೇಳಿ ಮಾಡುತ್ತಿದ್ದರು. ಜೊತೆಗೆ ಸರ್ಕಾರದಿಂದ ಏನೇನು ಸವಲತ್ತು ಕೊಡಿಸುವುದಕ್ಕೆ ಸಾಧ್ಯವೋ ಅದನ್ನೆಲ್ಲ ಕೊಡಿಸುತ್ತಿದ್ದರು. ಅನೇಕ ಶಾಲೆಗಳಿಗೆ

ವಿಶೇಷ ಸೌಕರ್ಯಗಳನ್ನು ಕೊಡಿಸಿದ್ದೂ ಇದೆ. ಕೋಣಂದೂರಿನ ಶಾಲೆಗೂ ಕೊಡಿಸಿದ್ದಾರೆ. ಹಳ್ಳಿಗಳಿಗೆ ಹೋದಾಗ ಮೊದಲು ಶಾಲೆಗೆ ಭೇಟಿ ಕೊಟ್ಟು ನಂತರ ಪಂಚಾಯಿತಿಗೆ ಭೇಟಿ ಕೊಟ್ಟು ಆಮೇಲೆ ಕಷ್ಟಸುಖ ವಿಚಾರಿಸಲು ಜನರ ಬಳಿಗೆ ಹೋಗುತ್ತಿದ್ದರು.

ಆ ಸಂದರ್ಭದಲ್ಲಿ ಜನರ ಜೊತೆ ತುಂಬಾ ಆತ್ಮೀಯವಾಗಿ ವರ್ತಿಸುತ್ತಿದ್ದರು. ಎಲ್ಲರ ಬಳಿಯೂ ಪ್ರೀತಿ ವಿಶ್ವಾಸದಿಂದಲೇ ಮಾತಾಡುತ್ತಿದ್ದರು. ಎಂತಹ ಹಳ್ಳಿ ಜನಕ್ಕೂ ತಿಳಿಯುವ ಸರಳ ಭಾಷೆಯಲ್ಲೇ ಮಾತುಕತೆ ನಡೆಸುತ್ತಿದ್ದರು. ಎಷ್ಟು ಸರಳತೆ ಅಂದರೆ ಒಂದೊಂದು ಹಳ್ಳಿಗಳಲ್ಲಿ ಇವರು ಡಿ.ಸಿ. ದೊಡ್ಡ ಅಧಿಕಾರಿಗಳು ಅಂತ ಜನರೇ ಇವರ ಬಳಿ ಬರಲು ಸಂಕೋಚ ಪಡುತ್ತಿದ್ದರು. ಅಧಿಕಾರ ಇದ್ದರೂ ಕೂಡ ಅಷ್ಟು ನಿಗರ್ವಿಯಾಗಿ ಕೆಲಸ ಮಾಡುತ್ತಿದ್ದರು. ಅವರ ರೀತಿನೀತಿಗಳನ್ನು ಈಗಿನ ಅಧಿಕಾರಿಗಳಲ್ಲಿ ಕಲ್ಪಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ ಹಾಗಿದ್ದರು ಅವರು. ಯಾರೇ ಬಂದರೂ ಅವರ ಸಮಸ್ಯೆಯನ್ನು ಆಸಕ್ತಿಯಿಂದ ಕೇಳಿ ತಿಳಿದುಕೊಂಡು ಅದಕ್ಕೆ ಸೂಕ್ತವಾದ ಪರಿಹಾರವನ್ನು ಕೊಡುತ್ತಿದ್ದರು. ಇಡೀ ಜಿಲ್ಲೆಯಾದ್ಯಂತ ಇದನ್ನು ಕಾರ್ಯತಃ ಮಾಡಿ ತೋರಿಸಿದ್ದರು.

ಆ ಸಮಯದಲ್ಲಿ ಇಲ್ಲಿನ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಅಷ್ಟಾಗಿ ಚೆನ್ನಾಗಿರಲಿಲ್ಲ. ಬಹಳ ಹಿಂದುಳಿದ ಪ್ರದೇಶ. ಹಳ್ಳಿಗಳಲ್ಲಿ ಶಾಲೆ – ಕಾಲೇಜುಗಳಿಗೆ ಹೋದವರೇ ಕಡಿಮೆ. ಇವರು ಜನರ ಸಭೆ ನಡೆಸುವಾಗ ಪ್ರತೀ ಬಾರಿ ಎಲ್ಲರನ್ನೂ ಕುರಿತು ' ನೀವು ವಿದ್ಯೆ ಕಲಿಯಬೇಕು. ಮಕ್ಕಳನ್ನಂತೂ ತಪ್ಪದೆ ಓದಿಸಬೇಕು. ಜೊತೆಗೆ ನೀವೂ ಕಲಿಯಿರಿ. ಕಡೇ ಪಕ್ಷ ಪೇಪರ್ ಓದೋದು, ಸಹಿ ಮಾಡೋದು ಇಷ್ಟನ್ನಾದರೂ ಕಲಿಯಿರಿ' ಎಂದೆಲ್ಲ ಹೇಳುತ್ತಿದ್ದರು. ಮಕ್ಕಳನ್ನಂತೂ ನೀವು ಶಾಲೆಗೆ ಕಳಿಸಲೇಬೇಕು' ಅಂತ ಕಟ್ಟುನಿಟ್ಟಾಗಿ ಹೇಳುತ್ತಿದ್ದರು.

ಆಮೇಲೆ ವಿದ್ಯಾಭ್ಯಾಸ ಮಾಡಿದಂತವರು ಯಾರಾದರೂ ಇದ್ದರೆ ಅವರನ್ನು ಕರೆದು ಕೆಲಸವನ್ನೂ ಕೊಟ್ಟಿದಾರೆ. ನಾನು ತಿಳಿದಹಾಗೆ 2–3 ಹಳ್ಳಿಯ ಬಡಜನರಿಗೆ ಅವರ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ಜನರಿಗೆ ಗುಮಾಸ್ತೆ, ಮೇಷ್ಟ್ರ ಕೆಲಸವನ್ನೂ ಕೊಡಿಸಿದ್ದಾರೆ. ಜಮೀನಂತೂ ಬೇಕಾದಷ್ಟು ಜನರಿಗೆ ಕೊಡಿಸಿದ್ದಾರೆ.

ಭರಣಯ್ಯನವರು ಶಿವಮೊಗ್ಗದಿಂದ ಹೋದಮೇಲೂ ಹೆಚ್ಚುಕಡಿಮೆ ಅವರು ಬದುಕಿರುವವರೆಗೂ ಸಂಪರ್ಕ ಇತ್ತು. ಅವರು ಇಲ್ಲಿಂದ ಹೋದಮೇಲೂ ಅನೇಕಬಾರಿ ಅವರನ್ನು ಭೇಟಿ ಮಾಡಿದ್ದೀನಿ. ನಾನು ಹೋದರೆ ಹೆಸರು ಪರಿಚಯ ಹೇಳಿಕೊಳ್ಳುವ ಪ್ರಮೇಯವೇ ಇರಲಿಲ್ಲ. ನನ್ನ ಮುಖ ಕಂಡತಕ್ಷಣ 'ನೀವು ಲಿಂಗಪ್ಪನವರು, ಗೊತ್ತು ಬನ್ನಿ' ಅಂತ ಕರೆದು ಮಾತಾಡಿಸುತ್ತಿದ್ದರು. 'ಚೆನ್ನಾಗಿ ಓದಬೇಕು, ಜೀವನದಲ್ಲಿ ಮುಂದೆ ಬರಬೇಕು. ಬರುತ್ತೀರಿ ನೀವು, ನಿಮಗೆ ದೇವರು ಅಂತಹ ಶಕ್ತಿ ಕೊಟ್ಟಿದ್ದಾನೆ, ಪ್ರತಿಭೆ ಕೊಟ್ಟಿದ್ದಾನೆ ಅದನ್ನು ಸದುಪಯೋಗ ಮಾಡಿಕೊಳ್ಳಿ' ಅಂತ ನನಗೆ ಸಾಕಷ್ಟು ಸಾರಿ ಪ್ರೋತ್ಸಾಹ ಕೊಟ್ಟಿದ್ದಾರೆ.

ಭರಣಯ್ಯನವರ ವ್ಯಕ್ತಿತ್ವದ ಇನ್ನೊಂದು ವೈಶಿಷ್ಟ್ಯ ಅಂದರೆ ಅವರು ನ್ಯಾಯ ಸಮ್ಮತವಾದ ರೀತಿಯಲ್ಲಿ ಉಪಕಾರ ಮಾಡುವಾಗ ಜಾತಿಯ ತಾರತಮ್ಯ ಇಲ್ಲದೆ ಬಡವರು ಯಾರಿದ್ದಾರೆ ಅವರೆಲ್ಲರಿಗೂ ಸಹಾಯಮಾಡುತ್ತಿದ್ದರು. ಅವರ ರೀತಿನೀತಿ, ನಿತ್ಯದ ನಡವಳಿಕೆಗಳಲ್ಲಿ ಜಾತೀಯತೆಯನ್ನು ಎಂದೂ ತೋರಿಸಿಕೊಂಡವರಲ್ಲ. ಆ ತರಹದ ಪಕ್ಷಪಾತ ಮಾಡಿದವರೇ ಅಲ್ಲ. ಇದು ನನ್ನ ಅನುಭವದ ಮಾತು. ಈ ವಿಚಾರದಲ್ಲಿ ಯಾರನ್ನೂ ಹೋಲಿಸಲಾಗದು. ಹೀಗಾಗಿ ಭರಣಯ್ಯನವರಿಗೆ ಭರಣಯ್ಯನವರೇ ಸಾಟಿ. ಆದರೆ ನನಗೆ ಗೊತ್ತಿದ್ದಹಾಗೆ ಕಳಕಳಿಯಿಂದ ಕೆಲಸ ಮಾಡಿದವರು, ಮಾಡುವವರು ಇದ್ದಾರೆ. ಇಲ್ಲವೇ ಇಲ್ಲ ಅಂತ ಹೇಳುವ ಹಾಗಿಲ್ಲ. ಆದರೆ ಆವತ್ತಿನ ಹಾಗೆ ಕೆಲಸ ಮಾಡಲು ಇವತ್ತಿನ ವ್ಯವಸ್ಥೆಯಲ್ಲಿ ಅವಕಾಶವೂ ಕಡಿಮೆ. ಇತ್ತೀಚೆಗಂತೂ ಬರೀ ರಾಜಕೀಯ ದೃಷ್ಟಿಕೋನ, ರಾಜಕೀಯ ಲಾಭನಷ್ಟದಿಂದಲೇ ಎಲ್ಲವನ್ನೂ ನೋಡುವ ಪರಿಪಾಠ ಬೆಳೆದುಬಿಟ್ಟಿದೆ. ಹಾಗೆ ಮಾಡಿದರೆ ಯಾರೂ ಉದ್ಧಾರ ಆಗುವುದಿಲ್ಲ. ಅದನ್ನು ಬಿಟ್ಟು ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ಸಲ್ಲಬೇಕಾದ ಸ್ಥಾನಮಾನ, ಗೌರವ ಕೊಟ್ಟರೆ ಉತ್ತಮವಾಗಿ ಕೆಲಸ ಮಾಡುವುದರ ಜೊತೆಗೆ ಮುಂದಿನವರಿಗೆ ಒಳ್ಳೆಯ ಮಾರ್ಗದರ್ಶನವನ್ನೂ ಮಾಡುತ್ತಾರೆ.

ಲಿಂಗಪ್ಪನವರು ಅವರ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟ ನಂತರ ವಿವರಿಸಿದ್ದು ಭರಣ್ಣಯ್ಯನವರು ಚುನಾವಣೆಗೆ ಸ್ಪರ್ಧಿಸಿದ್ದರ ಬಗ್ಗೆ.


ಚುನಾವಣೆಯಲ್ಲಿ ಭರಣಯ್ಯನವರಂತಹ ವ್ಯಕ್ತಿಗಳು ಸೋಲುವುದಿದೆಯಲ್ಲ ಅದಕ್ಕಿಂತಲೂ ದುರಂತ ಇಲ್ಲ. ನಮ್ಮ ವ್ಯವಸ್ಥೆಯೊಳಗೆ ಪಕ್ಷಭೇದ, ಜಾತಿಗೀತಿ ಎಲ್ಲ ಬಂದು ನುಸುಳಿ ಒಬ್ಬ ಸಮರ್ಥ ವ್ಯಕ್ತಿ, ಆದರ್ಶವ್ಯಕ್ತಿ ಆರಿಸಿಬರುವುದಕ್ಕೆ ಆಗದಿದ್ದಹಾಗೆ ಮಾಡಿಬಿಡುತ್ತೆ. ಉದಾಹರಣೆಗೆ ನಮ್ಮ ದೇಶಕ್ಕೆ ರಾಜ್ಯಾಂಗವನ್ನೇ ಕೊಟ್ಟಂತಹ ಬಿ.ಆರ್. ಅಂಬೇಡ್ಕರ್ ಅವರನ್ನು ಪಕ್ಷ ಪಕ್ಷ ಅಂತ ಸೋಲಿಸಿದರು.

ಆದರೆ ಈಗಿನ ಸ್ಥಿತಿಗೆ ಹೋಲಿಸಿದರೆ ಆವಾಗ ಒಂದು ಸಂತೋಷದ ವಿಚಾರ ಅಂದರೆ ಚುನಾವಣೆ ನಡೆದಾಗ ತತ್ವ ಸಿದ್ಧಾಂತದ ಸಂಘರ್ಷ ಇರುತ್ತಿತ್ತೇ ಹೊರತು ಈಗಿನಂತೆ ವೈಯಕ್ತಿಕ ಮಟ್ಟದಲ್ಲಿ ಅಥವಾ ಇನ್ನಾವುದೇ ನೆಲೆಗಟ್ಟಿನಲ್ಲಿ ಸ್ಪರ್ಧೆ ಇರುತ್ತಿರಲಿಲ್ಲ. ಹಾಗಾಗಿ ಅಲ್ಲಿ ಅಂಬೇಡ್ಕರ್ ಇಲ್ಲಿ ಭರಣಯ್ಯ ಸೋತರು. ಸೋತರು ಅನ್ನುವುದಕ್ಕಿಂತ ಸೋಲಿಸಿದರು ಅಂದರೇ ಸರಿ ಆಗುತ್ತೆ. ಆವಾಗ ಜನರಿಗೆ ಇನ್ನೂ ಆ ಮಟ್ಟದ ತಿಳುವಳಿಕೆ ಬಂದಿರಲಿಲ್ಲ. ವಿದ್ಯಾಭ್ಯಾಸವೇ ಇರಲಿಲ್ಲವಲ್ಲ! Who is who ಅನ್ನುವುದೇ ಗೊತ್ತಾಗುತ್ತಿರಲಿಲ್ಲ. ಹಾಗಾಗಿ ಭರಣಯ್ಯನವರಿಗೆ ವೈಯಕ್ತಿಕವಾಗಿ ಆದಂತಹ ಸೋಲಲ್ಲ

ಅದು. ಅವರು ವೈಯಕ್ತಿಕವಾಗಿ ಗೆದ್ದಿದ್ದಾರೆ. ರಾಜಕಾರಣಿಯಾಗದಿದ್ದರೂ ಒಬ್ಬ ಅಧಿಕಾರಿಯಾಗಿಯೇ ಅವರ ನಂತರವೂ ಚಿರವಾಗಿ ಉಳಿಯುವಂತಹ ಎಷ್ಟೋ ಕೆಲಸಗಳನ್ನು ಮಾಡಿದ್ದಾರೆ. ಅವರು ಅಮರಜೀವಿ. ಅದರಲ್ಲಿ ಯಾವ ಸಂಶಯವೂ ಇಲ್ಲ. ಯಾರು ಏನೇ ಹೇಳಿದರೂ ಸರಿ. ನನಗೆ ಈಗಲೂ ಆ ನಂಬಿಕೆ ಇದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಇವತ್ತಿನ ಸಂದರ್ಭದಲ್ಲಿ ಭರಣಯ್ಯನವರಂತಹ ವ್ಯಕ್ತಿಗಳನ್ನು ಸ್ಮರಣೆ ಮಾಡಿಕೊಳ್ಳುವುದೇ ಒಂದು ಪುಣ್ಯದ ಕೆಲಸ. ಅವರ ಒಂದು ಸಮರ್ಪಕ ದಾಖಲೆ ಹೊರಬಂದರೆ ಅದೇ ಅವರಿಗೆ ನಾವು ಸಲ್ಲಿಸುವ ದೊಡ್ಡ ಕೃತಜ್ಞತೆ. ಜಿಲ್ಲಾಧಿಕಾರಿಯಂತಹ ಉನ್ನತ ಸ್ಥಾನದಲ್ಲಿದ್ದವರು ಜನಸಮಾನ್ಯರ ಸೇವೆ ಮಾಡುವಲ್ಲಿ, ಅವರಿಗೆ ಉಪಕಾರ ಮಾಡುವುದರಲ್ಲಿ ಎಷ್ಟು ತಾದಾತ್ಮ್ಯ ಹೊಂದಿದ್ದರು, ಎಷ್ಟು ಜನರಿಗೆ ಉಪಕಾರ ಮಾಡುತ್ತಿದ್ದರು, ಅವರ ವ್ಯಕ್ತಿತ್ವ ಎಂತದಿತ್ತು ಅನ್ನುವುದಕ್ಕೆ ದಾಖಲೆ ಇದ್ದರೆ ಮುಂದಿನವರಿಗೆ ಮಾರ್ಗದರ್ಶಿಯಾಗುತ್ತದೆ. ಯಾಕೆ ಎಂದರೆ ಇವತ್ತು ಹಿಂದುಳಿದ ವರ್ಗದಿಂದ ಬಂದರೂ ಕೂಡ ಅಧಿಕಾರ, ಸ್ಥಾನಮಾನ ಸಿಕ್ಕಿದಕೂಡಲೇ ತಮ್ಮ ಜಾತಿಯ ಬಡವರು, ದೀನದಲಿತರನ್ನೇ ಮರೆತು ತಾವು, ತಮ್ಮ ಕುಟುಂಬವರ್ಗಕ್ಕೆ ಮಾತ್ರ ಅನುಕೂಲ ಮಾಡಿಕೊಡುವಂತಹದ್ದನ್ನು ನಾವು ಕಾಣುತ್ತಿದ್ದೇವೆ.

ಭರಣಯ್ಯನವರ ಬಗೆಗಿನ ದಾಖಲೆಗಳನ್ನು ಈ ಕಾಲದಲ್ಲಿ ಇರುವ ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಲ್ಲಿ ಮೇಲೆ ಬಂದವರು ಓದಬೇಕು. ಓದಿ ಅವರ ಆದರ್ಶವನ್ನು ಅವರವರ ಜಾತಿಯ ಬಡವರಿಗೇ ಉಪಕಾರ ಮಾಡಲಿ ಅದು ಸಾಕು. ಅವರವರ ಹಳ್ಳಿಗಳನ್ನು ಉದ್ಧಾರ ಮಾಡಲಿ ಸಾಕು. ಅದರಷ್ಟು ದೊಡ್ಡ ಸಾರ್ಥಕವಾದ ಸೇವೆ ಮತ್ತೊಂದಿಲ್ಲ. ಸ್ಥಾನಬಲ, ಅಧಿಕಾರಬಲ ಇದ್ದವರು ಭರಣಯ್ಯನವರ ಆದರ್ಶವನ್ನು ನೆನಪಿನಲ್ಲಿಟ್ಟುಕೊಂಡು ಆ ಕೆಲಸವನ್ನು ಮಾಡಿದರೆ ಇಡೀ ದೇಶ, ರಾಜ್ಯ ಎಲ್ಲದಕ್ಕೂ ಒಳಿತಾಗುತ್ತದೆ.



ಮಹಾನ್ ಚೇತನಗಳ ಕೊಂಡಿಯಾಗಿ..

ಕುಮಾರ್-ಮಹೇಶ್, ಸೈಲೋಟಮ್ ಕ್ರಿಯೇಷನ್ಸ್,
ಸರಸ್ವತಿಪುರಂ, ಮೈಸೂರು.

ಮೊದಮೊದಲಿಗೆ ನನಗೆ ಭರಣಯ್ಯನವರ ಬಗ್ಗೆ ಏನೇನೂ ತಿಳಿದಿರಲಿಲ್ಲ. ಅವರು ಅಧಿಕಾರಿಯಾಗಿರುವಾಗ ಬಹಳಷ್ಟು ಜನರಿಗೆ ಸರ್ಕಾರಿ ಕೆಲಸವನ್ನು ಕೊಡಿಸಿದರೆಂದು,

ದಲಿತ ಸಮುದಾಯಕ್ಕೆ ಸೇರಿದವರೆಂದೂ, ಈಗಲೂ ಅವರ ಹೆಸರನ್ನು ನೆನೆದು, ಅವರ ಫೋಟೋವನ್ನು ಮನೆಯಲ್ಲಿ ಪೂಜಿಸುತ್ತಾರೆಂದು ಕೇಳಿದ್ದೆ ಅಷ್ಟೆ. ನನಗೆ ಯಾವಾಗಲೂ ಸದ್ದಿಲ್ಲದೆ ತಮ್ಮ ಕೆಲಸ ಮಾಡುತ್ತಾ, ತಮ್ಮ ಕೈಲಾದಷ್ಟು ಸಹಾಯವನ್ನು ಸುತ್ತಮುತ್ತಲಿರುವ ಜನರಿಗೆ ಮಾಡುತ್ತಾ, ಹಾಗೆಯೇ ಇತಿಹಾಸದ ಪುಟಗಳಲ್ಲಿ ಎಲ್ಲಿಯೂ ಸ್ಥಾನವನ್ನು ಬಯಸದ ವ್ಯಕ್ತಿಗಳ ಬಗ್ಗೆ ಕುತೂಹಲವಿದ್ದದ್ದೆ.

ಹೀಗೆ ಭರಣಯ್ಯನವರ ಬಾಲ್ಯ, ಯೌವನ, ವಿದ್ಯಾಬ್ಯಾಸ, ಜೀವನಕ್ರಮ, ಕೆಲಸಕಾರ್ಯ, ಆದರ್ಶ ಇನ್ನಿತರ ವಿಷಯಗಳ ಬಗ್ಗೆ ತಿಳಿಯಲು ನಾವು ಅವರ ಹುಟ್ಟೂರಾದ ಸೋಮನಾಥಪುರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಾಗೂ ಅಲ್ಲಿ ಇರಬಹುದಾದ ಅವರ ಸಂಬಂಧಿಕರು, ಒಡನಾಡಿಗಳನ್ನು ಭೇಟಿ ಮಾಡಿ ವಿಚಾರ ಸಂಗ್ರಹಿಸಲು ಶುರುಮಾಡಿದಂತೆ ನನಗೆ ಎಲ್ಲೂ ಕೇಳರಿಯದ, ಯಾವ ಸಭೆ ಸಮಾರಂಭದಲ್ಲೂ ಸೊಲ್ಲೆತ್ತಿಸಿಕೊಳ್ಳದ, ಯಾವ ದಿನಾಚರಣೆಗಳನ್ನೂ ಆಚರಿಸಲ್ಪಡದ ಒಂದು ವ್ಯಕ್ತಿತ್ವ ಇಲ್ಲೇ ಬದುಕಿ, ಜನಸಾಮಾನ್ಯನಿಗೆ ಉಪಕಾರವನ್ನು ಮಾಡುತ್ತಾ ಅವರ ಜೀವನಕ್ಕೆ ಆಧಾರವಾಗುತ್ತಾ ಅವರ ಮನಗಳಲ್ಲಿ ಅವರವರ ಭಾವಾಮೂರ್ತಿಯಾಗಿ ವಿಜೃಂಭಿಸಿದ ಆರ್. ಭರಣಯ್ಯನವರ ಚಿತ್ರಣವು ತೆರೆಯುತ್ತಾ ಹೋಯಿತು.

ಗದ್ದೆ ಕೆಲಸ ಮಾಡುವ, ಹಿತ್ತಲಿನ ಕೆಲಸಮಾಡುವ, ನಿವೃತ್ತಿ ಹೊಂದಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ, ಅರಳಿ ಕಟ್ಟೆಮೇಲೆ, ಟೀ ಅಂಗಡಿ ಮುಂದೆ ಕುಳಿತು ಜೀವನದ ಸಂಜೆಯನ್ನು ಕಳೆಯುತ್ತಿರುವವರ ಹತ್ತಿರ 'ಆರ್. ಭರಣಯ್ಯನವರ ಬಗ್ಗೆ ನಿಮಗೆ ಗೊತ್ತಾ' ಎಂದು ಕೇಳುತ್ತಾ, ಆರ್. ಭರಣಯ್ಯ ಎಂಬ ಹೆಸರು ಕೇಳುತ್ತಲೇ ಮುಖದಲ್ಲಿ ಉಂಟಾಗುವ ಭಾವವನ್ನು ಗುರುತಿಸುತ್ತಾ, ಅವರು ಹೇಳಿದ್ದನ್ನು ಕೇಳಿಕೊಳ್ಳುತ್ತಾ ಹೋದಂತೆ, ಒಬ್ಬ ವ್ಯಕ್ತಿ ಉನ್ನತ ಅಧಿಕಾರಿಯಾಗಿದ್ದವರು ಇಷ್ಟರ ಮಟ್ಟಿಗೆ ಕೆಳಸ್ಥರದ ಜನರಿಗೆ ಪರಿಚಯವಿರುವುದು, ಹಾಗೂ ಭರಣಯ್ಯನವರ ಸ್ವಭಾವವನ್ನು ತಮ್ಮ ಮನೆಯ ಸದಸ್ಯರಂತೆಯೇ 'ಅವರು ಹೀಗೆಯೇ' ಎಂದು ಹೇಳುವಂತಾ ಸನ್ನಿವೇಶಗಳು ರೋಚಕವೆನಿಸಿದವು.

ಹೀಗೆ ಒಬ್ಬೊಬ್ಬರನ್ನೂ ಹುಡುಕಿ ಮಾತಾನಾಡಿಸುತ್ತಾ ಹೋದಂತೆ ಭರಣಯ್ಯನವರ ವ್ಯಕ್ತಿತ್ವ ಇವರುಗಳ ಮುಖೇನ ಬಿಡಿಬಿಡಿಯಾಗಿ ತೋರ್ಪಡಿಸುತ್ತಾ, ಭರಣಯ್ಯನವರ ಚಿತ್ರ ಮೂಡಿಸುತ್ತಾ, ನಮ್ಮನ್ನು ಭರಣಯ್ಯನವರ ಕಾಲಕ್ಕೆ ಕರೆದುಕೊಂಡು ಹೋಗುತ್ತಿತ್ತು.

ನಮಗೆ ಸಿಕ್ಕ ಮಾಹಿತಿಗಳ ಅನುಸಾರವಾಗಿ ಭರಣಯ್ಯನವರನ್ನು ಚಿತ್ರಿಸುತ್ತಾ ಹೋದಂತೆ, ಅವರಲ್ಲಿ ವಿಶಿಷ್ಟವೆನ್ನಬಹುದಾದ ಕೆಲವು ವಿಚಾರಗಳು ನನಗೆ ಹೊಳೆಯಿತು. ಸದಾ ಹಸನ್ಮುಖಿಗಳಾಗಿರುತ್ತಿದ್ದರು. ತಮ್ಮ ಕೆಲಸಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದರು.

ತಮ್ಮೂರಿನ ಜನರನ್ನು ಗುರುತು ಹಚ್ಚಿ ಮಾತನಾಡಿಸುತ್ತಿದ್ದರು. ಅವರಿಗೆ ಯಾವರೀತಿಯಲ್ಲಾದರೂ ಸರಿ, ಸಹಾಯಮಾಡುತ್ತಿದ್ದರು. ಸರ್ಕಾರಿ ಅಂಗಸಂಸ್ಥೆಗಳಲ್ಲಿ ಕೆಲಸಗಳನ್ನು ಸೃಷ್ಟಿಸಿ ಕೊಡುತ್ತಿದ್ದರು. ಇವರಿಗೆ ವಿವಿಧ ಸಂಸ್ಥೆಗಳ ಅಧಿಕಾರಿ ವರ್ಗದವರ ಬೆಂಬಲ ಸಹ ಇತ್ತು. ಹೀಗೆ ಭರಣಯ್ಯನವರ ಬಗ್ಗೆ ಯೋಚಿಸುತ್ತಾ, ಅವರಿಗಿದ್ದ ಆದರ್ಶವೇನು? ಅಂಬೇಡ್ಕರರ ಓದು ಅವರನ್ನು ಹೇಗೆ ಪ್ರಭಾವಿಸಿತ್ತು? ಅವರ ಸಾಮಾಜಿಕ ಧೋರಣೆಗಳೇನು? ಜಾತಿ ವಿನಾಶದ ಬಗ್ಗೆ ಅವರ ಅಭಿಪ್ರಾಯವೇನು? ಹೀಗೆ ಹಲವು ಪ್ರಶ್ನೆಗಳು ನನ್ನಲ್ಲಿ ಮೂಡುತ್ತಿದ್ದವು.

ಗ್ರಾಮೀಣ ಜನರಿಗೆ ಇತಿಹಾಸದ ತಿಳುವಳಿಕೆ ಹೆಚ್ಚಾಗಿ ಇಲ್ಲದಿರುವುದು ಒಂದು ಕಾರಣವಾಗಿ ತೋರಿ, ಅವರಿಗೆ ವ್ಯಕ್ತಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಾಣದಿರುವುದು, ಇನ್ನೊಬ್ಬರ ಬದುಕನ್ನು ಅವಲೋಕಿಸುವ ಸಮಯ, ವಿಚಾರ ಅವರಲ್ಲಿಲ್ಲದಿರುವುದು ತೋರುತ್ತಿತ್ತು. ಇದೆಲ್ಲಾ ಕಾರಣದಿಂದ ಭರಣಯ್ಯನವರನ್ನು ಅವರ ಸ್ವಗ್ರಾಮದಲ್ಲಿ ಹುಡುಕುತ್ತಿದ್ದ ನಮಗೆ ಅವರ ಸಂಪೂರ್ಣ ವ್ಯಕ್ತಿತ್ವದ ವಿವರಗಳು ನಿರೀಕ್ಷಿಸಿದಷ್ಟು ದೊರಕಲಿಲ್ಲ.

ಇಷ್ಟೆಲ್ಲಾ ವಿವರಗಳನ್ನು, ಅನುಭವಗಳನ್ನು ದಾಖಲಿಸುತ್ತಾ ಬಂದಂತೆ. ನನ್ನಲ್ಲಿ ಒಂದು ಪ್ರಶ್ನೆ ಮೂಲಭೂತವಾಗಿ ಕಾಡುತ್ತಾ ಕುಳಿತ್ತಿತ್ತು. ಅದೇನೆಂದರೆ, ಒಬ್ಬ ವ್ಯಕ್ತಿ ಇಷ್ಟರ ಮಟ್ಟಿಗೆ ಜನಸೇವೆಯನ್ನೇ ತನ್ನ ಕಾಯಕವನ್ನಾಗಿ ಮಾಡಿಕೊಂಡಿರುವುದು ಹೇಗೆ ಸಾಧ್ಯವಾಯಿತು. ಅವರ ಆದರ್ಶಗಳೇನು, ಅವರ ಉದ್ದೇಶಗಳೇನು, ಅವರ ಸಿದ್ಧಾಂತಗಳೇನು ಎಂದು.

ಎಂಥಾ ಮೂರ್ಖ ಪ್ರಶ್ನೆ ನನ್ನದು. ಒಬ್ಬ ವ್ಯಕ್ತಿ ಪ್ರೀತಿಯಿಂದ ನೊಂದವರಿಗೆ ಸಹಾಯ ಮಾಡಲು ಆದರ್ಶಗಳಿರಬೇಕೆ? ಸಿದ್ಧಾಂತಗಳಿರಬೇಕೆ? ಎಂಬುದು ನಂತರ ಅರಿವಾಯಿತು.

ಸಮಾಜದಲ್ಲಿ ಒಳ್ಳೆಯದರ ಬಗ್ಗೆ ಒಲವು ಪ್ರತಿಯೊಬ್ಬನಿಗೂ ಇರುತ್ತದೆ. ಇಂತಹದೇ ಒಲವುಗಳು ಒಂದು ವ್ಯಕ್ತಿತ್ವದ ರೂಪತಾಳಿ ಕಾಲಕಾಲಕ್ಕೆ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿಯಂತಹ ಮಹಾನ್ ಚೇತನಗಳು ತಮ್ಮ ಪ್ರೀತಿಯಿಂದ, ಮಾನವಪ್ರೀತಿಯನ್ನು ಕಟ್ಟಿದ್ದಾರೆ. ಇತಂಹವರ ಸಾಲಿನಲ್ಲೇ ಆರ್. ಭರಣಯ್ಯನವರು ನನ್ನ ಮೆದುಳಿನಲ್ಲಿ ನಿಂತಿದ್ದಾರೆ. ಇಂತಹ ಮಹಾನ್ ಚೇತನಗಳ ಮಾತುಗಳು, ಅನುಭವಗಳು, ಜೀವನಶೈಲಿ ಜನಸಾಮಾನ್ಯರನ್ನು ಬೆರೆಯುವಂತಾದರೆ, ಮತ್ತೆ ಇವರುಗಳು ಈ ನಾಡಿನಲ್ಲಿ ಹುಟ್ಟಿಬರಲು ಸಾಧ್ಯವಾಗುವುದಾದರೆ..

ಇತಿಹಾಸ ಪ್ರಜ್ಞೆಯ ಮನಸು

ಕೆಳದಿ ಗುಂಡಾ ಜೋಯಿಸ್, ಇತಿಹಾಸ ಸಂಶೋಧಕರು. ಕೆಳದಿ, ಸಾಗರ.

ಪರಿಚಯ: ಶ್ರೀ ಗುಂಡಾಜೋಯಿಸ್ ಅವರು ರಾಜ್ಯದ ಪ್ರಮುಖ ಇತಿಹಾಸಕಾರರು, ಸಂಶೋಧಕರು. ಕೆಳದಿ ಚೌಡಪ್ಪನಾಯಕನ ರಾಜಪುರೋಹಿತರ ವಂಶದವರು. 78 ವರ್ಷ ವಯಸ್ಸಾದರೂ ಕೂಡ ಇಂದಿಗೂ ಇತಿಹಾಸ ಸಂಶೋಧನೆಯ ವೃತ್ತಿಯನ್ನು ಮುಂದುವರೆಸುತ್ತಿದ್ದಾರೆ. ಕೆಳದಿ ಇತಿಹಾಸಕ್ಕೆ ಸಂಬಂಧಿಸಿದಂತೆ ಮಹತ್ವದ ಸಂಶೋಧನೆಗಳನ್ನು ಮಾಡಿದ್ದಾರೆ. ಇತಿಹಾಸಕ್ಕೆ ಸಂಬಂಧಿಸಿದಂತೆ ಇಕ್ಕೇರಿ ಅರಸರು, ಕೆಂಪೇಗೌಡ, ಬಿದನೂರಿನ ಕೆಳದಿ ನಾಯಕರು, ತಂಜಾವೂರಿನ ಇತಿಹಾಸ, ಗೋಕರ್ಣದ ಶಾಸನಗಳು ಮುಂತಾದ ಕೃತಿಗಳನ್ನೂ ಕೂಡ ರಚಿಸಿದ್ದಾರೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಇತಿಹಾಸ ಸಮ್ಮೇಳನ, ವಿಚಾರಸಂಕಿರಣಗಳಲ್ಲಿ 250ಕ್ಕೂ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ ಕನ್ನಡ ಮೋಡಿಲಿಪಿಯ ತರಬೇತಿಯನ್ನೂ ನೀಡುತ್ತಾರೆ. ಕೆಳದಿ ವಸ್ತುಸಂಗ್ರಹಾಲಯದ ಸ್ಥಾಪಕ ಅಧಿಕಾರಿಗಳಾಗಿರುವರು. ಇವರು 2004ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿವಿಜೇತರೂ ಹೌದು.

ಇತಿಹಾಸದಲ್ಲಿ ಆಸಕ್ತಿಯಿದ್ದ ಭರಣಯ್ಯನವರು ಶಿವಮೊಗ್ಗದಲ್ಲಿದ್ದಾಗ ಕೆಳದಿ, ಇಕ್ಕೇರಿಗೆ ಆಗಾಗ ಭೇಟಿ ಕೊಡುತ್ತಿದ್ದರು. ಗುಂಡಾಜೋಯಿಸರ ಇತಿಹಾಸ ಸಂಶೋಧನೆಗೆ ಪ್ರೋತ್ಸಾಹ ಕೊಡುತ್ತಿದ್ದರು. ಆ ವಿಚಾರಗಳನ್ನು ಶ್ರೀ ಗುಂಡಾಜೋಯಿಸರು ಹಂಚಿಕೊಂಡಿದ್ದು ಹೀಗೆ;

ಕೆಳದಿ ಚೌಡಪ್ಪನಾಯಕನ ಕಾಲದಲ್ಲಿ ವೆಂಕಟಾದ್ರಿ ಜೋಯಿಸರು ಪ್ರಮುಖರು. ಇವರು ಆನೆಗೊಂದಿಯಲ್ಲಿ ವಿಜಯನಗರದ ಅಚ್ಯುತರಾಯನ ಕುಲಪುರೋಹಿತರಾಗಿದ್ದರು. ನಮ್ಮ ಮೂಲ ವಂಶಸ್ಥರು ಅವರು. ಅವರ ಕಾಲದಿಂದ ಇವತ್ತಿಗೂ ಈ ಮನೆಯಲ್ಲಿಯೇ ಇದ್ದೇವೆ ನಾವು. ಭರಣಯ್ಯನವರನ್ನು ಮೊದಲು ಭೇಟಿ ಆಗಿದ್ದು ಇಲ್ಲೇ ನಾನು. ನಮ್ಮ ವಂಶವೃಕ್ಷ, ಮನೆಯ ವಿಚಾರ ಎಲ್ಲ ಕೇಳಿದ ಭರಣಯ್ಯನವರು 'ಓ ಇದು ಧರ್ಮದ ಮನೆ ಹಾಗಾದರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅದು ನಮ್ಮ ಮೊದಲನೆಯ ಭೇಟಿ.

ನಂತರವೂ ಆಗಾಗ ಭರಣಯ್ಯನವರೂ ನಮ್ಮ ಮನೆಗೆ ಭೇಟಿ ಕೊಡುತ್ತಿದ್ದರು. ಆ ಸಮಯದಲ್ಲೆಲ್ಲ ಭರಣಯ್ಯನವರು ಕೆಳದಿ ಇತಿಹಾಸ ಸಂಶೋಧನೆಯ ಬಗ್ಗೆ ನನ್ನ ಬಳಿ ಸಾಕಷ್ಟು ಮಾಹಿತಿ ಸಂಗ್ರಹವನ್ನೂ ಕೂಡ ಮಾಡುತ್ತಿದ್ದರು. ಅವರಲ್ಲಿ ಸಂಸ್ಕೃತ ಸಾಹಿತ್ಯದ ಅಧ್ಯಯನ ಬಹಳ ಚೆನ್ನಾಗಿತ್ತು. ಭಗವದ್ಗೀತೆಯನ್ನೂ ಸಾಕಷ್ಟು ಆಳವಾಗಿ ಅಧ್ಯಯನ ಮಾಡಿದ್ದರು. ಅವರಿಗೆ ಅಮರಕೋಶ ಸಂಪೂರ್ಣವಾಗಿ ಬಾಯಿಗೆ

ಬರುತ್ತಿತ್ತು. ಇನ್ನೂ ಸ್ಪಷ್ಟವಾಗಿ ಹೇಳಬೇಕು ಅಂದರೆ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ನರಸಿಂಹಯ್ಯ ಅಂತ ಸಂಸ್ಕೃತ ಪಂಡಿತರಿದ್ದರು. ಅವರ ಮಟ್ಟದಲ್ಲಿ ಇವರು ಸಂಸ್ಕೃತ ಪಾಂಡಿತ್ಯ ಹೊಂದಿದ್ದರು. ಹಿಂದೆ ಕೆಳದಿಯಲ್ಲಿ ಒಂದು ಸಂಸ್ಕೃತ ವೇದ ಪಾಠಶಾಲೆ ಇತ್ತು. ಭರಣಯ್ಯನವರ ಕಾಲದಲ್ಲೂ ಇತ್ತು ಅದು. ಅಲ್ಲಿಗೂ ಭೇಟಿ ಕೊಟ್ಟಿದ್ದರು ಭರಣಯ್ಯನವರು. ಮುಜರಾಯಿ ಇಲಾಖೆಯಿಂದ ತಿಂಗಳಿಗೆ 30 ರೂ. ಬರುತ್ತಿತ್ತು. ನಂತರದಲ್ಲಿ ಎಲ್ಲ ರಾಜಕೀಯ ಮಾಡಿ ಅದನ್ನು ಮುಚ್ಚಿಹಾಕಿಬಿಟ್ಟರು.

ನಾನು ನೋಡಿದ ಹಾಗೆ ಭರಣಯ್ಯನವರ ಮನೆಯಲ್ಲಿ ಯಾವುದೇ ವಿಧವಾದ ಜಾತಿ ಸೂಚಕ ಭಾವನೆ, ತಾರತಮ್ಯ ಇರಲಿಲ್ಲ. ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ: ಶಿವಮೊಗ್ಗದ ಲಿಂಗಾಜೋಯಿಸರು ಎನ್ನುವವರು ಭರಣಯ್ಯನವರ ಮನೆಗೆ ಆಗಾಗ ಪೌರೋಹಿತ್ಯಕ್ಕೆ ಬರುತ್ತಿದ್ದರು. ಭರಣಯ್ಯನವರು ಸ್ವತಃ ಹೋಗಿ ಅವರನ್ನು ಕರೆತರುತ್ತಿದ್ದರು. ಬಹುಶಃ ನಾನು ತಿಳಿದಹಾಗೆ ಲಿಂಗಾಜೋಯಿಸರು ಬೇರೆ ಯಾವ ಹಿಂದುಳಿದವರ ಮನೆಗೂ ಪೌರೋಹಿತ್ಯಕ್ಕೆ ಹೋದವರಲ್ಲ. ಆದರೆ ಭರಣಯ್ಯನವರ ವ್ಯಕ್ತಿತ್ವ, ವಿದ್ವತ್ತು ನೋಡಿ ಯಾವುದೇ ಕಾರ್ಯಕ್ರಮಕ್ಕೆ ಕರೆದರೂ ಅವರ ಮನೆಗೆ ಬರುತ್ತಿದ್ದರು. ಭರಣಯ್ಯನವರಲ್ಲಿ ತಾನು ಒಬ್ಬ ಡಿ.ಸಿ., ದೊಡ್ಡ ಅಧಿಕಾರಿ ಎನ್ನುವ ಅಹಂ ಯಾವಾಗಲೂ ಇರಲಿಲ್ಲ. ಸಾಮಾನ್ಯ ಜನರೊಂದಿಗೂ ಸಲೀಸಾಗಿ ಬೆರೆಯುತ್ತಿದ್ದರು. ಸೇವೆಯೇ ತಮ್ಮ ಗುರಿ ಎನ್ನುವ ಭಾವನೆ ಇಟ್ಟುಕೊಂಡಿದ್ದರು. ಮತ್ತೆ ಶಾಲೆ, ದೇವಾಲಯ ಮತ್ತು ವಿದ್ಯಾವಂತರು – ಈ ವಿಷಯಗಳಿಗೆ ಬಹಳ ಮಾನ್ಯತೆ ಕೊಡುತ್ತಿದ್ದರು. ಭರಣಯ್ಯನವರು ಒಬ್ಬ ಅಧಿಕಾರಿಯ ದರ್ಪದಿಂದ ಯಾವತ್ತೂ ಕೆಲಸ ಮಾಡಿದವರಲ್ಲ. ಯಾರೇ ಬಂದರೂ ಅವರ ಚೇಂಬರಿನೊಳಕ್ಕೆ ಹೋಗಿ ಅವರನ್ನು ಕಾಣಬಹುದಿತ್ತು. ಈಗಿನಂತೆ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಬೇಕು, ಕಾಯಬೇಕು ಅನ್ನುವ ಸನ್ನಿವೇಶವೇ ಇರಲಿಲ್ಲ. ಬಂದವರ ಕಷ್ಟಸುಖ ಕೇಳಿ ತಿಳಿದುಕೊಂಡು ತಮಗೆ ಸಾಧ್ಯವಾದಷ್ಟು ಶಕ್ತಿ ಮೀರಿ ಕೂಡಲೇ ಸಹಾಯ ಮಾಡುತ್ತಿದ್ದರು. ಅಂತಹ ಗಂಭೀರ ಸಮಸ್ಯೆ ಇದ್ದರೆ ಅದನ್ನೂ ಕೂಡ ವಿಳಂಬ ಮಾಡದೆ ಬೇಗ ಪರಿಹರಿಸುತ್ತಿದ್ದರು. ಯಾವುದೇ ಸ್ಥಾನಕ್ಕೆ ಏರಿದರೂ ಅದೊಂದು ದೊಡ್ಡ ಗುಣವನ್ನು ಕಡೆತನಕ ಕಾಯ್ದುಕೊಂಡು ಬಂದಿದ್ದರು ಅವರು. ಕೆಲಸ ಮಾಡಿಕೊಡುವುದರಲ್ಲೇ ಆತ್ಮತೃಪ್ತಿ ಇತ್ತು ಅವರಿಗೆ. ಭ್ರಷ್ಟಾಚಾರ ಅವರಲ್ಲಿ ಇರಲೇ ಇಲ್ಲ. ಅವರು ಬೇಕಿದ್ದರೆ ಎಷ್ಟೋ ಮನೆ, ಆಸ್ತಿ ಪಾಸ್ತಿ ಮಾಡಬಹುದಿತ್ತು. ಆ ತರಹದ ದುರಾಸೆ ಇರಲಿಲ್ಲ ಅವರಿಗೆ. ಪ್ರಾಮಾಣಿಕ ಅಧಿಕಾರಿಯಾಗಿದ್ದರು.

ಒಂದೆರಡು ಬಾರಿ ಹೇಳಿಕೊಂಡಿದ್ದರು ಕೂಡ "ನನಗಿನ್ನೇನೂ ಇಲ್ಲ. ನನ್ನ ಅಧಿಕಾರದ ಅವಧಿಯಲ್ಲಿ ಎಂದಿಗೂ ನಮ್ಮ ಜನರಿಗೆ ಯಾವುದೇ ತೊಂದರೆ ಆಗಬಾರದು. ಅವರು ಯಾರೇ ಇರಲಿ, ಯಾವ ವರ್ಗದವರೇ ಇರಲಿ. ಅದು ನನ್ನ ಕರ್ತವ್ಯ. ನನಗೆ ಬರುತ್ತಿರುವ

ಸಂಬಳ ಸಾಕು. ಅದು ಬಿಟ್ಟು ಅವರಿಂದ ಏನನ್ನೂ ನಾನು ನಿರೀಕ್ಷೆ ಮಾಡುವುದಿಲ್ಲ. ಅವರ ಕೆಲಸ ಮಾಡಿಕೊಟ್ಟರೇ ನನಗೆ ತೃಪ್ತಿ." ಅಂತ.

ಆರ್. ಭರಣಯ್ಯನವರಿಗೆ ಇತಿಹಾಸದ ಪ್ರೀತಿ ಬಹಳ ಚೆನ್ನಾಗಿತ್ತು. ಅದರಲ್ಲೂ ಕೆಳದಿ ಇತಿಹಾಸದ ಬಗ್ಗೆ ಆಸಕ್ತಿ ಜಾಸ್ತಿ ಇತ್ತು ಅವರಿಗೆ. ಆಗಾಗ ಇಲ್ಲಿಗೆ ಭೇಟಿ ಕೊಡುತ್ತಿದ್ದರು. ಕೆಳದಿ ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ತಿಳಿದುಕೊಂಡಿದ್ದರು. ನಮಗೆಲ್ಲ ಸಂಶೋಧನೆಗೆ ಪ್ರೋತ್ಸಾಹ ಕೊಡುತ್ತಿದ್ದರು. ಪ್ರಾಚೀನ ವಸ್ತುಗಳ ಸಂಗ್ರಹಣೆ ಮಾಡುವ ಹವ್ಯಾಸವೂ ಇತ್ತು. ವೇದ, ಸಂಸ್ಕೃತ ಓದಿದವರಿಗೆ ತುಂಬಾ ಗೌರವ ಕೊಡುತ್ತಿದ್ದರು. ಒಂದು ಘಟನೆ ವಿವರಿಸುತ್ತೇನೆ ಕೇಳಿ;

ಇತಿಹಾಸದಲ್ಲಿ ಆದಿಕರ್ನಾಟಕದವರಿಗೆ ಮೊಟ್ಟಮೊದಲು ಅಂದರೆ 1499ರಲ್ಲೇ ಪ್ರಮುಖ ಸ್ಥಾನ ಕೊಟ್ಟವರು ಕೆಳದಿಯ ಅರಸರು. ಹಿಂದೆ ಚೌಡಪ್ಪನಾಯಕನ ಕಾಲದಲ್ಲಿ ರಾಜ್ಯಸ್ಥಾಪನೆ ಆಗುವಾಗ ಎಡಮುರಾರಿ ಮತ್ತು ಬಲಮುರಾರಿ ಎನ್ನುವವರು ಸ್ವಯಂ ಪ್ರೇರಣೆಯಿಂದ ದೇಹತ್ಯಾಗ ಮಾಡಿದರು. ಇವರಿಬ್ಬರು ಆದಿಕರ್ನಾಟಕದವರು ಅವರು ಜೀವದಾನ ಮಾಡಿದ ಸ್ಥಳದಲ್ಲಿ ಸ್ಮಾರಕ ಇವತ್ತಿಗೂ ಕೆಳದಿಯಲ್ಲಿ ಇದೆ. ಅವರ ಸ್ಮರಣಾರ್ಥವಾಗಿ ರಾಮೇಶ್ವರ ದೇವಸ್ಥಾನದ ರಥೋತ್ಸವದಲ್ಲಿ ಇವತ್ತಿಗೂ ಅವರ ಸ್ಮಾರಕಕ್ಕೆ ಹೂ ಇಟ್ಟು ಪೂಜೆ ಸಲ್ಲಿಸುತ್ತಾರೆ. ಒಮ್ಮೆ ರಥೋತ್ಸವದ ಸಂದರ್ಭದಲ್ಲಿ ಬಂದಿದ್ದಂತಹ ಭರಣಯ್ಯನವರು ಅದನ್ನು ನೋಡಿ 'ರಾಜಕೀಯ ಮುಖಂಡರೆಲ್ಲ ಹರಿಜನರಿಗೆ ಪ್ರಾಮುಖ್ಯತೆ ನೀಡಬೇಕು ಅಂತ ಈಗ ಹೋರಾಟ ಮಾಡುತ್ತಾರೆ, ನೀವು ಐತಿಹಾಸಿಕವಾಗಿಯೇ ಆದಿಕರ್ನಾಟಕರಿಗೆ ಸ್ಥಾನ ನೀಡಿದ್ದೀರಿ' ಅಂತ ಸಂತೋಷದಿಂದ ಹೇಳಿದ್ದರು.

ಒಬ್ಬ ಇತಿಹಾಸ ಸಂಶೋಧಕನಾಗಿ ಹೇಳುವುದಾದರೆ ಭರಣಯ್ಯನವರಂತಹ ಮಹಾನ್ ವ್ಯಕ್ತಿಗಳ ಬಗ್ಗೆ ಮುಂದಿನ ಪೀಳಿಗೆಗೆ ದಾಖಲೆರೂಪದಲ್ಲಿ ಸಂಗ್ರಹ ಮಾಡಿಡುವುದು ಬಹಳ ಅಗತ್ಯ ಮತ್ತು ಅದು ನಮ್ಮ ಧರ್ಮವೂ ಹೌದು. ಈ ವಿಷಯಕ್ಕೆ ಬಂದರೆ ನನಗೆ ಬಹಳ ಬೇಸರ ಆಗುತ್ತದೆ. ನಮ್ಮ ಈ ಜಿಲ್ಲೆಯಲ್ಲಿ ಈವರೆಗೆ ಆಗಿ ಹೋದ ಎಲ್ಲ ಜಿಲ್ಲಾಧಿಕಾರಿಗಳೂ ಏನೇನು ಕೆಲಸ ಮಾಡಿದ್ದಾರೆ, ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮ ಕಾರ್ಯಗತ ಮಾಡಿದ್ದಾರೆ ಅನ್ನುವ ಎಲ್ಲ ದಾಖಲೆಯೂ ಕ್ಯಾಟಲಾಗ್ ರೂಪದಲ್ಲಿ ಇತ್ತು. ಮೆಕೆಂಜಿಯಿಂದ ಹಿಡಿದು ಮೆಕೆನನ್‌ವರೆಗೆ ಎಲ್ಲರ ಮಾನೋಗ್ರಾಫ್ ಕೂಡ ಇತ್ತು. ಅದರಲ್ಲಿ ಭರಣಯ್ಯನವರದ್ದೂ ಇದ್ದಿದ್ದನ್ನು ನಾನು ನೋಡಿದೀನಿ. ಬಹುಶಃ ಈಗ ಅವೆಲ್ಲ ನಾಶ ಆಗಿದ್ದರೂ ಆಗಿರಬಹುದು. ಆ ದಾಖಲೆಗಳು ಇದ್ದಿದ್ದರೆ ಭರಣಯ್ಯನವರ ಬಗ್ಗೆ ಇನ್ನಷ್ಟು ಮಹತ್ವದ ವಿಷಯಗಳು ಸಿಗುತ್ತಿದ್ದವು. ಅದು ಇತಿಹಾಸಕ್ಕೆ ಆದ ನಷ್ಟವೇ ಸರಿ. ಹಾಗಾಗಿ ಭರಣಯ್ಯನವರ ಬಗ್ಗೆ ಈಗಲಾದರೂ ನೀವು ದಾಖಲಿಸುತ್ತಿರುವುದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಶುಭವಾಗಲಿ.

ಜನಸೇವೆಯಲ್ಲೇ ಆತ್ಮತೃಪ್ತಿ

ಜಿ.ಆರ್.ಜಿ ನಗರ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಾಗರ.

ಪರಿಚಯ: 83 ವರ್ಷದ ಜಿ. ಆರ್. ಗುರುರಾಜ ನಗರ್ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಸಮಾಜವಾದಿ ಪಕ್ಷದ ಸಂಸ್ಥಾಪಕ ಸದಸ್ಯರು. ಇವರು ಮೂಲತಃ ಜಮೀನ್ದಾರಿ ಕುಟುಂಬದಿಂದ ಬಂದವರು. ಆದರೆ ವೃತ್ತಿಜೀವನದಲ್ಲಿ ಬಾಲ್ಯದಿಂದಲೂ ಜಮೀನ್ದಾರಿ ಪದ್ಧತಿ, ರೈತರ ಶೋಷಣೆ ಇವುಗಳ ವಿರುದ್ಧ ದನಿ ಎತ್ತುತ್ತಲೇ ಬಂದರು. ಹೈಸ್ಕೂಲಿನಲ್ಲಿರುವಾಗಲೇ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿದರು. ಸಮಾಜವಾದಿ ಚಳವಳಿ ಮುಂಚೂಣಿಯಲ್ಲಿದ್ದಾಗ ಶಾಂತವೇರಿ ಗೋಪಾಲಗೌಡ, ರಾಮಮನೋಹರ ಲೋಹಿಯಾ ಅವರೊಂದಿಗೆ ಕಾಗೋಡು ಸತ್ಯಾಗ್ರಹದಲ್ಲೂ ಭಾಗವಹಿಸಿದ್ದರು. ಆರ್. ಭರಣಯ್ಯನವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದಾಗ ಅವರೊಂದಿಗೆ ನಿಕಟ ಸಂಪರ್ಕದಲ್ಲಿದ್ದವರು ಶ್ರೀ ಜಿ.ಆರ್. ಜಿ. ನಗರ್. ಅವರು ಭರಣಯ್ಯನವರೊಂದಿಗಿನ ಒಡನಾಟದ ನೆನಪುಗಳನ್ನು ತೆರೆದಿಟ್ಟಿದ್ದು ಹೀಗೆ;

1957ರ ಸಮಯ ಇರಬಹುದು. ಆಗ ಶಿವಮೊಗ್ಗದಲ್ಲಿ ರಾಜಕೀಯ ವಾತಾವರಣ ಬಹಳ ಬಲವಾಗಿತ್ತು. ಕಾಗೋಡು ಸತ್ಯಾಗ್ರಹ ಆಗಿ ಸಮಾಜವಾದಿ ಸಿದ್ಧಾಂತ ಜಿಲ್ಲೆಯಲ್ಲಿ ಬೇರೂರಿದ ಮೇಲೆ ಜನ ರಾಜಕೀಯ ವಿಚಾರವಂತಿಕೆಯನ್ನು ಬೆಳೆಸಿಕೊಂಡಿದ್ದರು. ರಾಜಕೀಯ ಚಟುವಟಿಕೆಗಳು ಬಹಳ ಚುರುಕಾಗಿದ್ದಂತಹ ಸಮಯ ಅದು. ಆಗ ಒಮ್ಮೆ ನಾನು ಶಿವಮೊಗ್ಗಕ್ಕೆ ಯಾವುದೋ ರೆಪ್ರೆಸೆಂಟೇಷನ್‌ಗೆ ಅಂತ ಹೋಗಿದ್ದವನು ಭರಣಯ್ಯನವರ ಕಚೇರಿಗೆ ಹೋದೆ. ಒಳಗೆ ಹೋಗಲಿಕ್ಕೆ ಪರ್ಮಿಷನ್ ಸಿಗಬೇಕಲ್ಲ ಅಂತ ಹೊರಗಡೆ ನಿಂತಿದ್ದೆ. ಭರಣಯ್ಯನವರು ನಾನು ನಿಂತಿದ್ದನ್ನು ನೋಡಿದರು ಅಂತ ಕಾಣುತ್ತೆ. ಒಬ್ಬ ಅಟೆಂಡರ್‌ನ ಕಳಿಸಿ ಒಳಗೆ ಬರುವಂತೆ ಹೇಳಿದರು.

ಆಗ ನನ್ನನ್ನು ಜಿಆರ್‌ಜಿ ಅಥವಾ ಗುರಣ್ಣ ಅಂತ ಕರೆಯುತ್ತಿದ್ದರು. ಆ ಹೆಸರೂ ಕೂಡ ಗೊತ್ತಿತ್ತು ಅವರಿಗೆ. ನಾನು ಒಳಗೆ ಹೋದಾಗ

'ಬನ್ನಿ ಗುರಣ್ಣ. ಯಾಕೆ? ಬಂದವರು ಹೊರಗೇ ನಿಂತಿಬಿಟ್ಟಿರಿ' ಎಂದರು.

'ಸ್ವಾಮಿ ಪರ್ಮಿಷನ್ ತೆಗೆದುಕೊಳ್ಳಬೇಕಲ್ಲ' ಅಂದೆ.

'ಅಯ್ಯೋ ಆ ಪದ್ಧತಿಗಳನ್ನೆಲ್ಲ ಬಿಡಿ. ನಾವು ನಿಮಗಾಗಿಯೇ ಇರುವವರು. ಜನಕ್ಕೋಸ್ಕರ ನಾನು ಜಿಲ್ಲಾಧಿಕಾರಿಯಾಗಿರುವುದು. ಜನರ ನೋವು ನಲಿವುಗಳಿಗೆ

ಸ್ಪಂದಿಸದಿದ್ದರೆ ನಾನು ಜಿಲ್ಲಾಧಿಕಾರಿಯಾಗಿದ್ದು ಏನು ಪ್ರಯೋಜನ ಹೇಳಿ?' ಎಂದರು. ಅಷ್ಟು ದೊಡ್ಡ ಗುಣ ಇತ್ತು ಅವರಲ್ಲಿ. ಅದೇ ನಮ್ಮ ಮೊದಲನೆಯ ಭೇಟಿ.

ಅವರ ವಿಚಾರಶೀಲತೆ, ಶುದ್ಧಹಸ್ತ, ಶಾಂತಿ – ಸಹನೆ, ಸಾಹಿತ್ಯದ ಬಗ್ಗೆ ಅವರಿಗಿದ್ದ ಒಲವು ಇದರ ಬಗ್ಗೆ ಎಲ್ಲ ನನಗೆ ಬಹಳ ಮೆಚ್ಚುಗೆ ಇದೆ. ಭರಣಯ್ಯನವರು ಸ್ವಭಾವತಃ ಬಹಳ ಕ್ರಿಯಾಶೀಲ ವ್ಯಕ್ತಿ. ಹಸಿವಿನಿಂದ ನೊಂದಿರುವ ವರ್ಗ – ಅದು ದಲಿತರು ಮಾತ್ರ ಅಂತ ಅವರು ಎಂದಿಗೂ ನೋಡಲಿಲ್ಲ. ಅವರು ಯಾವ ವರ್ಗಕ್ಕೇ ಸೇರಿರಲಿ ಎಲ್ಲಾ ವರ್ಗದಲ್ಲೂ ಅವರು ದಲಿತರನ್ನು ಕಂಡಿದ್ದರು. ಆ ವರ್ಗಕ್ಕೆ ಯಾರಿಂದ ಅನ್ಯಾಯ ಆದರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಈಗಿರುವಷ್ಟು ಸವಲತ್ತುಗಳು ಇರಲಿಲ್ಲ ಆಗ. ಆದರೂ ಸೀಮಿತವಾದ ಒಂದಷ್ಟು ಸವಲತ್ತುಗಳು ಏನೆಲ್ಲ ಸಿಗುತ್ತಿದ್ದವು ಅದನ್ನು ದೊರಕಿಸಿಕೊಡುವಲ್ಲಿ ಬಹಳ ಪ್ರಯತ್ನ ಮಾಡುತ್ತಿದ್ದರು.

ಜನಕ್ಕೆ ಸಹಾಯ ಮಾಡುವುದರಲ್ಲಿ ತೆರೆದ ಹಸ್ತ ಅವರದ್ದು. ಅವರ ಸಂಬಳದಲ್ಲಿ ಎಷ್ಟು ಮನೆಗೆ ನೀಡುತ್ತಿದ್ದರೋ ಅಂತ ಆಶ್ಚರ್ಯ ಆಗುತ್ತಿತ್ತು ನನಗೆ. ಯಾರನ್ನೂ ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ವಿದ್ಯಾರ್ಥಿಗಳಿಗಂತೂ ಸಾಕಷ್ಟು ಸಹಾಯ ಮಾಡಿದ್ದಾರೆ. ಒಮ್ಮೆ ಸಾಗರ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ಮಾರ್ಗವಾಗಿ ಸಾಹೇಬರು ಯಾವುದೋ ಸರ್ಕಾರಿ ಕೆಲಸಕ್ಕೆ ಹೋಗುತ್ತಿದ್ದರು. ಅಲ್ಲಿ ರಸ್ತೆಯಂಚಿನ ಗುಡಿಸಲಲ್ಲಿ ಕೂಲಿಮಾಡುವವರ ಒಬ್ಬ ಹೆಣ್ಣುಮಗಳು ಹೆರಿಗೆ ನೋವಿನಿಂದ ಒದ್ದಾಡುತ್ತಿದ್ದಳು. ವಾಹನ ಸೌಕರ್ಯಕೂಡ ಈಗಿನಷ್ಟು ಇರಲಿಲ್ಲ ಆವಾಗ. ಇದನ್ನು ಕಂಡ ತಕ್ಷಣ ಭರಣಯ್ಯನವರು ತಮ್ಮ ವಾಹನವನ್ನೇ ಕಳಿಸಿ ಸಾಗರದಿಂದ ಒಬ್ಬರು ದಾದಿ ಕರೆಸಿ ಅಲ್ಲೇ ಸುರಕ್ಷಿತವಾಗಿ ಹೆರಿಗೆ ಆಗುವಂತೆ ಮಾಡಿದರು. ಯಾರಾದರೂ ಅವರ ಮನೆಗೆ ಹೋದರೆ ವಾಪಸ್ಸು ಬರುವಾಗ ಬರಿಗೈಯಲ್ಲಿ ಬರುವಹಾಗೆಯೇ ಇರಲಿಲ್ಲ. ಅವರ ಮನೆಯೊಳಗೆ ಹೊರಗಿನ ಯಾವ ವಸ್ತುಗಳಿಗೂ ಪ್ರವೇಶ ಇರಲಿಲ್ಲ. ಇವರು ನಮಗೆ ಉಪಕಾರ ಮಾಡಿದ್ದಾರೆ ಅಂತ ನೀವೇನಾದರೂ ಕೊಡುವುದಕ್ಕೆ ತೆಗೆದುಕೊಂಡು ಹೋದರೆ ತೆಗೆದುಕೊಳ್ಳುತ್ತಿರಲಿಲ್ಲ ಅವರು. ವಾಪಸ್ ಕಳಿಸಿಬಿಡುತ್ತಿದ್ದರು. ಹೊರಗಡೆ ಎಲ್ಲಾದರೂ ಬಂದಾಗ ಕೆಳಗಿನ ಅಧಿಕಾರಿಗಳಿಗೋ ಅಥವಾ ಇನ್ನಾರಿಗೋ 'ನನಗೆ ಊಟದ ವ್ಯವಸ್ಥೆ ಮಾಡಿ' ಎಂದು ಹೇಳುವ ಸನ್ನಿವೇಶವೇ ಇರಲಿಲ್ಲ. ಡಬ್ಬಿಯಲ್ಲಿ ಊಟ ತಂದುಬಿಡುತ್ತಿದ್ದರು. ಹಾಗೇನಾದರೂ ಬೇರೆ ಕಡೆ ಊಟ ಮಾಡಬೇಕಾಗಿ ಬಂದಾಗ ಊಟ ಹಾಕಿದವರಿಗೆ ದುಡ್ಡು ಕೊಟ್ಟೇ ಅಲ್ಲಿಂದ ಹೊರಡುತ್ತಿದ್ದರು. ಇವತ್ತಿನ ಕಾಲದಲ್ಲಿ ಅಂತಹ ಅಧಿಕಾರಿಗಳನ್ನು ಎಲ್ಲಿ ಕಾಣುತ್ತೇವೆ ಹೇಳಿ!? ಅವರೊಬ್ಬ ಮಾನವತಾವಾದಿ. ಅಂಬೇಡ್ಕರ್, ಲೋಹಿಯಾ ಅವರೆಲ್ಲರ ಹಾಗೆ ಕರ್ನಾಟಕದಲ್ಲಿ ನಾನು ಕಂಡ ಮಾನವತಾವಾದಿ ಅಂದರೆ ಆರ್. ಭರಣಯ್ಯನವರು. ಅವರು ದಲಿತರ ಸಂಘಟನೆಯ ಬಗ್ಗೆ ಬಹಳ ವಿವೇಚನೆಯಿಂದ

ಮಾತಾಡುತ್ತಿದ್ದರು. ಅವರಲ್ಲಿ ದಲಿತರು ಅಂದರೆ ಬೇರೆ ದೃಷ್ಟಿಕೋನವೇ ಇತ್ತು. ಹೀಗೇ ಒಮ್ಮೆ ಮಾತನಾಡುತ್ತಿರುವಾಗ ಅವರು ಒಂದು ಮಾತು ಹೇಳಿದ್ದರು.

"ನಮ್ಮಲ್ಲಿ ವಿದ್ಯಾವಂತರದೇ ಒಂದು ವರ್ಗ ಆಗಿ ಅದು ಮೇಲ್ವರ್ಗ ಆಗಿದೆ. ಇದು ಆಗಬಾರದು. ದಲಿತರನ್ನು ನಾವು ಕೇವಲ ಹರಿಜನ – ಗಿರಿಜನ ಅನ್ನುವ ಮಟ್ಟದಲ್ಲಿ ಕಾಣುವುದು ತಪ್ಪು. ಎಲ್ಲಾ ವರ್ಗದಲ್ಲೂ ದಲಿತರಿದ್ದಾರೆ. ಎಲ್ಲಾ ವರ್ಗದಲ್ಲೂ ಬಡವರಿದ್ದಾರೆ. ಅವರನ್ನೆಲ್ಲ ಒಂದೇ ವೇದಿಕೆಗೆ ತರುವಂತಹ ವ್ಯವಸ್ಥೆ ಮಾಡಬೇಕು." ಇದು ಅವರ ದೀನ ದಲಿತರ ಉದ್ಧಾರದ ಪರಿಕಲ್ಪನೆ ಆಗಿತ್ತು.

ಆಗ ನನಗೆ ಅನ್ನಿಸಿತ್ತು ಈ ವರ್ಗದಲ್ಲಿ ಹುಟ್ಟಿ ಆರ್. ಭರಣಯ್ಯನಂತವರು ಜಿಲ್ಲಾಧಿಕಾರಿಯ ಮಟ್ಟಕ್ಕೆ ಏರಿ ಬಂದಿರುವಾಗ ಈ ವರ್ಗದ ಉಳಿದ ಜನ ಯಾಕೆ ಹಿಂದೇಟು ಹೊಡೆಯುತ್ತಿದ್ದಾರೆ? ವಿದ್ಯೆಯ ಕೊರತೆಯೇ? ಆರ್ಥಿಕ ತೊಂದರೆಯೇ? ಏನು ಕಾರಣ ಅಂತ ನನಗೆ ಪ್ರಶ್ನೆ ಹುಟ್ಟಿತು. ಅದನ್ನು ಭರಣಯ್ಯನವರ ಮುಂದಿಟ್ಟಾಗ ಅವರು ಹೇಳಿದ್ದರು –

"ನಮ್ಮವರು ಆರ್ಥಿಕ ಕಾರಣದಿಂದ, ಬಡತನದಿಂದ ಅಲ್ಲ ಹಿಂದುಳಿದಿರುವುದು ಬದಲಾಗಿ ನಮ್ಮ ಹಲವರಲ್ಲಿ ಮೈಚಳಿ ಬಿಟ್ಟು ಕೆಲಸ ಮಾಡುವ ಮನೋಭಾವ ಇಲ್ಲ. ಹೇಗಾದರೂ ಮಾಡಿ ಆರಾಮವಾಗಿ ಜೀವನ ಮಾಡಬೇಕು ಅನ್ನುವ ಭಾವನೆ ಹಲವರಲ್ಲಿ ಇದೆ. ಜೀವನದಲ್ಲಿ ಮುಂದೆ ಬರಬೇಕು ಅನ್ನುವ ಭಾವನೆ ಸಮುದಾಯದ ಯಾರೋ ಒಂದಿಬ್ಬರಲ್ಲಿ ಬಂದರೆ ಯಾವುದೇ ವರ್ಗದ ಉದ್ಧಾರ ಸಾಧ್ಯವಿಲ್ಲ. ತನ್ನ ಕಾಲಮೇಲೆ ತಾನು ನಿಲ್ಲಬೇಕು ಎಂಬ ಛಲ ಎಲ್ಲರಲ್ಲೂ ಬಂದಾಗ ಮಾತ್ರ ಒಂದು ಸಮುದಾಯ ಮುಂದೆಬರುತ್ತೆ." ಅಂದಿದ್ದರು.

ಆದರೆ ಈಗೀಗ ನೋಡಿದರೆ ದಲಿತರು ದಲಿತರನ್ನೇ ಶೋಷಣೆ ಮಾಡುವ ಒಂದು ವರ್ಗ ಕಾಣುತ್ತಿದೆ ಇತ್ತೀಚೆಗೆ. ಯಾಕೆಂದರೆ ಪ್ರತಿಯೊಬ್ಬರೂ ನಾನು ದಲಿತ ಮುಖಂಡ ಅನ್ನುತ್ತಾರೆ. ಜಿಲ್ಲಾ ಕಚೇರಿಯಲ್ಲೋ, ಬೆಂಗಳೂರಿನಲ್ಲೋ ಕುಳಿತುಕೊಳ್ಳುವುದು, ಅಲ್ಲಿನ ಅಧಿಕಾರಿಗಳನ್ನು ಹೆದರಿಸುವುದು, ಬಡ ದಲಿತರು ಯಾರಾದರೂ ಕೆಲಸ ಮಾಡಿಸಿಕೊಳ್ಳಲು ಬಂದರೆ ಅವರನ್ನು ಶೋಷಣೆ ಮಾಡುವುದನ್ನು ಬಹಳ ಜನ ಮಾಡುತ್ತಿದ್ದಾರೆ. ಇವರು ನಿಜವಾಗಿ ದಲಿತರ ಉದ್ಧಾರ ಮಾಡುವ ಇಚ್ಛೆ ಉಳ್ಳವರಾದರೆ ಗ್ರಾಮಾಂತರ ಪ್ರದೇಶಕ್ಕೆ ಹೊರಡಬೇಕು. ಅವರಿಗೆ ವಿದ್ಯೆ ಇಲ್ಲವಾ? ಅವರಿಗೆ ಏನೂ ಸೌಲಭ್ಯ ಇಲ್ಲವಾ? ಇದನ್ನೆಲ್ಲ ನೋಡಬೇಕು. ಅದಕ್ಕೆ ಈ ಮುಖಂಡರು ತಯಾರಿಲ್ಲ. ಆ ಬಡವನೇ ಇವರನ್ನ ಹುಡುಕಿಕೊಂಡು ಇವರಿದ್ದಲ್ಲಿಗೆ ಬರಬೇಕು. ಹೀಗಾದರೆ ದಲಿತರ ಉದ್ಧಾರ ಹೇಗೆ ಆಗುತ್ತೆ?

ಇನ್ನೂ ಒಂದು ಬೇಸರದ ವಿಷಯ ಅಂದರೆ ಸರ್ಕಾರ ಕೊಡುವ ಹಲವಾರು ಯೋಜನೆಗಳನ್ನು ಈ ಮುಖಂಡರು ಅಂತ ಕರೆಸಿಕೊಳ್ಳುವವರು ಯಾರನ್ನೋ ತೋರಿಸಿ

ಅವರೇ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇವರ ದೆಸೆಯಿಂದಾಗಿ ನಿಜವಾದ ದಲಿತ ನಾಯಕರನ್ನೂ ಅನುಮಾನದಿಂದ ನೋಡುವ ಸನ್ನಿವೇಶ ನಿರ್ಮಾಣವಾಗಿಬಿಟ್ಟಿದೆ. ಒಂದು ದಿಕ್ಕಿನಿಂದ ಇಂತಹ ತಥಾಕಥಿತ ಮುಖಂಡರೂ ದಲಿತರ ಏಳಿಗೆಗೆ ಮುಳ್ಳಾಗಿದ್ದಾರೆ. ಇನ್ನೊಂದು ವಿಷಯ ಅಂದರೆ ಸಂಘಟನೆಗಳೂ ಕೂಡ ಸಾಕಷ್ಟು ಆದವು. ಹಾಗಾಗಿ ದಲಿತರ ಉದ್ಧಾರವನ್ನು ವಿರೋಧಿಸುವ ಶಕ್ತಿಗಳು ಏನಿವೆ ಅವೆಲ್ಲ ಈ ಸಂಘಟನೆಗಳೊಳಗೆ ಒಡಕು ಹುಟ್ಟಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಇದನ್ನೆಲ್ಲ ಹೋಗಲಾಡಿಸುವ ಯುವಶಕ್ತಿ ಹುಟ್ಟಬೇಕು. ಅಂಬೇಡ್ಕರ್ ಹಾಗೂ ಭರಣಯ್ಯ ಅವರ ಆದರ್ಶಗಳನ್ನು ಇಟ್ಟುಕೊಂಡು ಕೆಲಸಮಾಡುವ ಸಂಘಟನೆ ಈ ರಾಷ್ಟ್ರದಲ್ಲಿ ಏನಾದರೂ ಸೃಷ್ಟಿ ಆದರೆ ಮಾತ್ರ ಭರಣಯ್ಯನವರ ಕನಸಿನ ದಲಿತರ ಉದ್ಧಾರ ಆಗುತ್ತದೆ.

ಇನ್ನೊಂದು ಪ್ರಮುಖ ನೆನಪು ಇದು; ಅವರಿಗೆ ಸಂಸ್ಕೃತದಲ್ಲಿ ಬಹಳ ಪಾಂಡಿತ್ಯ ಇತ್ತು. ಅದಕ್ಕೆ ಸಂಬಂಧಿಸಿದಂತೆ ಒಂದು ಘಟನೆ ನೆನಪಿದೆ ನನಗೆ. ಶಿವಮೊಗ್ಗದ ಹತ್ತಿರ ಮತ್ತೂರು ಅಂತ ಒಂದು ಗ್ರಾಮ ಇದೆ. ಸಂಸ್ಕೃತ ಪಂಡಿತರು ಆ ಭಾಗದಲ್ಲಿ ಬಹಳ ಜನ ವಾಸಿಸುತ್ತಾರೆ. ಅಲ್ಲಿ ನಿತ್ಯದ ಮಾತುಕತೆ ಎಲ್ಲ ಹೆಚ್ಚುಕಡಿಮೆ ಸಂಸ್ಕೃತದಲ್ಲೇ ನಡೆಯುವುದು. ಹಾಗಾಗಿ ಸಂಸ್ಕೃತ ಗ್ರಾಮ ಎಂದೇ ಕರೆಯುತ್ತಾರೆ ಅದನ್ನು. ಅಲ್ಲಿ ಒಂದು ಕಾರ್ಯಕ್ರಮಕ್ಕೆ ಭರಣಯ್ಯನವರು ಹೋಗಿದ್ದರು. ಸಾರ್ವಜನಿಕ ಸಮಾರಂಭ ಅದು. ಅಲ್ಲಿ ಮಾತನಾಡುವಾಗ ಗೀತೋಪನಿಷತ್ತಿನ ಬಗ್ಗೆ ವಿಮರ್ಶೆ ಮಾಡಿದರು ಭರಣಯ್ಯನವರು. ಅದನ್ನು ಕೇಳಿ ಮತ್ತೂರಿನ ಸಂಸ್ಕೃತ ಪಂಡಿತರುಗಳೆಲ್ಲ ತಲೆದೂಗಿಬಿಟ್ಟರು. ಈ ಮನುಷ್ಯನಿಗೆ ಇಷ್ಟೊಂದು ಸಂಸ್ಕೃತ ಜ್ಞಾನ ಇದೆಯಲ್ಲ ಅಂತ ಬೆರಗಾದರು ಅವರು. ಭರಣಯ್ಯನವರ ಬಗ್ಗೆ ಆ ಪಂಡಿತರಿಗೂ ಗೌರವ ಹುಟ್ಟುವಂತೆ ಆ ಕಾರ್ಯಕ್ರಮ ಆಯಿತು.

ಅವರ ಕನ್ನಡವೂ ಅಷ್ಟೆ. ಬಹಳ ಸುಲಲಿತವಾಗಿ, ಸ್ಪಷ್ಟವಾಗಿ ಇತ್ತು. ಜೊತೆಗೆ ಸಾಹಿತ್ಯ ಇತಿಹಾಸದ ಬಗ್ಗೆಯೂ ಆಸಕ್ತಿ ಇತ್ತು. ಯಾವುದಾದರೂ ಇತಿಹಾಸದ ಒಂದು ಸುಳಿವು ಸಿಕ್ಕಿತು ಅಂದರೆ ಅಲ್ಲಿ ಹೋಗಿ ಆ ಇತಿಹಾಸದ ಮೂಲ ಹುಡುಕುತ್ತಿದ್ದರು. ಇತಿಹಾಸದಲ್ಲಿ ಬಹಳ ಆಸಕ್ತಿ ಇತ್ತು ಅವರಿಗೆ. ಶಿವಮೊಗ್ಗದಲ್ಲಿದ್ದಾಗಲೂ ಕೆಳದಿಗೆ, ಇಕ್ಕೇರಿಗೆ ಆಗಾಗ ಭೇಟಿ ಕೊಡುತ್ತಿದ್ದರು. ಪ್ರಾಚೀನ ವಸ್ತುಗಳನ್ನು ಶೇಖರಣೆ ಮಾಡುವ ಹವ್ಯಾಸವೂ ಇತ್ತು.

ಒಬ್ಬ ಜಿಲ್ಲಾಧಿಕಾರಿಯಾಗಿ ಅವರ ಕಾರ್ಯದಕ್ಷತೆಯನ್ನು ದಾಖಲಿಸಬೇಕು. ಕಂದಾಯ, ಜಮಾಬಂದಿಯ ವಿಚಾರದಲ್ಲಿ ವಿಶೇಷ ಪರಿಣಿತಿ ಇತ್ತು ಅವರಿಗೆ. ಪ್ರತಿಯೊಂದು ಗ್ರಾಮದ ಕಂದಾಯದ ಅಂಕಿಅಂಶಗಳನ್ನು ಡೈರಿ ನೋಡಿ ಹೇಳಿದಂತೆ ಕರಾರುವಾಕ್ಕಾಗಿ ಬಾಯಲ್ಲೇ ಹೇಳಿಬಿಡುತ್ತಿದ್ದರು. ಪ್ರತಿ ಹೋಬಳಿವಾರು ಎಲ್ಲ ವಿವರಗಳ ಪರಿಚಯ

ಇತ್ತು ಅವರಿಗೆ. ಸರ್ಕಾರಕ್ಕೆ ಬರಬೇಕಾದ ಆದಾಯವನ್ನು ತಪ್ಪದೇ ಪಡೆಯುತ್ತಿದ್ದರು. ಜೊತೆಗೆ ಸರ್ಕಾರದಿಂದ ಜನರಿಗೆ ಏನೇನು ಸವಲತ್ತು ಸಿಗಬೇಕು ಅದೆಲ್ಲವನ್ನೂ ಕೊಡಿಸುತ್ತಿದ್ದರು. ಮತ್ತೆ ಜಿಲ್ಲೆಯಲ್ಲಿ ಎಲ್ಲೇ ತೊಂದರೆ ಆಗಲಿ ಆ ಜಾಗದಲ್ಲಿ ಖುದ್ದು ಅವರು ಹಾಜರಿರುತ್ತಿದ್ದರು.


ಇವತ್ತಿನ ಪರಿಸ್ಥಿತಿಗೆ ಹೋಲಿಸಿದರೆ ಒಂದಷ್ಟು ವ್ಯತ್ಯಾಸಗಳನ್ನು ನೀವು ಗುರುತಿಸಬಹುದು. ಗಾಂಧೀಜಿ ಕನಸು ಕಂಡಿದ್ದರಲ್ಲ ರಾಮರಾಜ್ಯ, ಅದರ ಚಿಂತನೆ ಮಾಡಿದರೆ ಆ ಜಾಗಕ್ಕೆ ಭರಣಯ್ಯನವರು ಬರುತ್ತಾರೆ. ಈಗ ದುಡ್ಡು ಮುಖ್ಯ ಎಲ್ಲರಿಗೂ! ಇನ್ನೂ ಸ್ಪಷ್ಟವಾಗಿ ಹೇಳಬೇಕು ಅಂದರೆ ನನ್ನ ಶಿಷ್ಯರೇ ಹಲವರು ಮಂತ್ರಿಗಳು ಎಂ.ಪಿಗಳು, ಶಾಸಕರು ಆಗಿದ್ದಾರೆ. ಅವರು ಯಾವ ತತ್ವ, ಸಿದ್ಧಾಂತ, ಹೋರಾಟದ ಸೂರಿನಲ್ಲಿ ಬೆಳೆದರೋ ಅವರೂ ಕೂಡ ಭ್ರಷ್ಟರಾಗಿಬಿಟ್ಟಿದ್ದಾರೆ. ಕೆಲವರಂತೂ ಭ್ರಷ್ಟಾಚಾರದ ತುತ್ತತುದಿ ಮುಟ್ಟಿಬಿಟ್ಟಿದ್ದಾರೆ. ಅವರ ಸಮಾಜಕ್ಕೂ ಉಪಕಾರ ಮಾಡುವುದಿಲ್ಲ. ಅವರಾಯಿತು ಅವರ ಕುಟುಂಬವರ್ಗ, ಅವರ ರಕ್ತಸಂಬಂಧಿಗಳು ಇಷ್ಟೇ ಪ್ರಪಂಚ. ತಾನು ಆಮೇಲೆ ತನ್ನ ಮಗ, ಸೊಸೆ, ಮೊಮ್ಮಗ – ಹೀಗೆ ಬೆಳೆಯುತ್ತಾ ಹೋಗುತ್ತೆ ಪಟ್ಟಿ. ಒಟ್ಟಾರೆ ಅಧಿಕಾರ ತಮ್ಮ ಕೈಲೇ ಇರಬೇಕು. ಅದನ್ನು ಬಿಟ್ಟು ಜನಸೇವೆ ಮಾಡುವ ಮನೋಭಾವ ಯಾರಲ್ಲೂ ಇಲ್ಲ. ಅಧಿಕಾರಿಗಳನ್ನು ಭ್ರಷ್ಟರನ್ನಾಗಿಸುವವರೂ ಕೂಡ ರಾಜಕಾರಣಿಗಳೇ. ಅಭಿವೃದ್ಧಿಯ ಮಾತು ತೆಗೆದರೆ 'ನನಗೆ ಇಷ್ಟು ಪರ್ಸೆಂಟ್ ಕೊಡು ಎನ್ನುವ ವ್ಯವಸ್ಥೆ ಆದಾಗ ಅಭಿವೃದ್ಧಿ ಎಲ್ಲಿಂದ ಆಗುತ್ತೆ?

ನಾನು ರಾಜಪ್ರಭುತ್ವದ ವಿರೋಧಿ. ಆದರೂ ಆಗಿನ ವ್ಯವಸ್ಥೆಯ ಕೆಲವು ಒಳ್ಳೆಯ ಅಂಶಗಳು ಈಗಲೂ ಮೆಚ್ಚುಗೆಯಾಗುತ್ತೆ ನನಗೆ. ಈಗಿನಷ್ಟು ಸಾರಿಗೆ ಸಂಪರ್ಕ ಇಲ್ಲದ ಆವತ್ತಿನ ಕಾಲದಲ್ಲಿ ಮಿರ್ಜಾ ಇಸ್ಮಾಯಿಲ್ ಒಬ್ಬ ದಿವಾನರಾಗಿದ್ದು ಇಡೀ ಮೈಸೂರು ರಾಜ್ಯ ಸುತ್ತಿ ಕೆಲಸ ಮಾಡಿದರು. ವಿಶ್ವೇಶ್ವರಯ್ಯ ಈ ಜಿಲ್ಲೆಗೆ ಎಷ್ಟು ಉಪಕಾರ ಮಾಡಿದರು. ಭದ್ರಾವತಿಯಲ್ಲಿ ಕಾರ್ಖಾನೆ ಸ್ಥಾಪಿಸಿದರು. ಜೋಗದಲ್ಲಿ ವಿದ್ಯುದಾಗಾರ ಮಾಡಿದರು. ಈಗ ನೂರಾರು ಜನ ಇರುವರು. ಊರಿಗೊಬ್ಬ ಗಲ್ಲಿಗೊಬ್ಬ ಅಂತ. ಆದರೂ ಮಿರ್ಜಾ ಅವರಂತವರು ಮಾಡಿದ ಕೆಲಸವನ್ನು ಇವರ್‍ಯಾರೂ ಮಾಡಲು ಸಾಧ್ಯವಾಗಿಲ್ಲ.

ಒಟ್ಟಾರೆ ಬಡಜನತೆಗೆ ಕೆಲಸ ಮಾಡಿದವರ ಬಗ್ಗೆ ದಾಖಲೆಗಳೇ ಅಪರೂಪ. ಇದುವರೆಗಿನ ಸಾಹಿತ್ಯ ಕ್ಷೇತ್ರದಲ್ಲಿ ಇಂಥದ್ದನ್ನು ಮಾಡದಿರುವುದರಿಂದಲೇ ಈ ದೇಶ ಇವತ್ತು ಅಧೋಗತಿಗೆ ಹೋಗಿದೆ. ಹೋರಾಟಗಾರರ ಪರಿಚಯ ಮಾಡುವುದಕ್ಕೇ ಯಾರೂ ಮುಂದಾಗುತ್ತಿಲ್ಲ ಈಗ. ಸಮಾಜಕ್ಕಾಗಿ ಹೋರಾಡಿದಂತವರು ಸಾಗರದಲ್ಲೂ ಬೇಕಾದಷ್ಟು ಜನ ಇದ್ದಾರೆ. 'ನಾನು ಕೆಲವರ ಹೆಸರು, ವಿವರ, ಮಾಹಿತಿ ಎಲ್ಲ ಹೇಳುತ್ತೇನೆ ಅದನ್ನೆಲ್ಲ ಒಂದು ಕಡೆ ದಾಖಲೆ ಮಾಡಿ ಇಡಿ' ಎಂದರೆ ಅದಕ್ಕೆ ಯಾರೊಬ್ಬರೂ

ತಯಾರಿಲ್ಲ. ಈಗ ಈ ಭಾಗದಲ್ಲಿ ನಾನು, ಗಣಪತಿಯಪ್ಪನವರು ಇಬ್ಬರು ಸತ್ತರೆ ಆ ಹೋರಾಟದ ಇತಿಹಾಸವೇ ಬೆಳಕಿಗೆ ಬರುವುದಿಲ್ಲ.

ಆದರೆ ಆರ್. ಭರಣಯ್ಯನವರಂತಹ ವ್ಯಕ್ತಿಗಳ ಬಗ್ಗೆ ಪುಸ್ತಕ ಹೊರಬರುವುದು ಇಂದಿನ ಸ್ಥಿತಿಯಲ್ಲಿ ಬಹಳ ಪ್ರಸ್ತುತ. ಒಬ್ಬ ಸರ್ಕಾರಿ ಅಧಿಕಾರಿಯಾಗಿದ್ದರೂ ಯಾವೊಬ್ಬ ಸಮಾಜಸುಧಾರಕನಿಗೂ ಕಮ್ಮಿ ಇಲ್ಲದಂತೆ ಜನರಿಗಾಗಿ ಜೀವ ಮುಡುಪಾಗಿಟ್ಟಿದ್ದರು ಅವರು. ಭರಣಯ್ಯನವರು ಮಾತ್ರವಲ್ಲ ಬಿ. ಬಸವಲಿಂಗಪ್ಪ, ಜೆ.ಹೆಚ್. ಪಟೇಲ್, ಕಡಿದಾಳು ಮಂಜಪ್ಪ ಇವರೆಲ್ಲರ ಸೇವೆ, ಸಾಧನೆಯ ಬಗ್ಗೆಯೂ ಇಂದಿನ ಪೀಳಿಗೆ ತಿಳಿದುಕೊಳ್ಳಬೇಕು. ಅವರನ್ನು ತಮ್ಮ ಆದರ್ಶವಾಗಿ ಇಟ್ಟುಕೊಳ್ಳಬೇಕು. ತಾವು ಮುಂದುವರಿಯುವ ಜೊತೆಗೆ ಇತರ ವರ್ಗದ ಹಿಂದುಳಿದವರನ್ನೂ ಮೇಲೆತ್ತುವ ಸಮದೃಷ್ಟಿ, ಸಮಷ್ಟಿ ಗುಣ ನಮ್ಮ ಯುವಕರಲ್ಲಿ ಹುಟ್ಟಬೇಕು. ಸಮದೃಷ್ಟಿಯನ್ನು ಅಳವಡಿಸಿಕೊಂಡು ಸಮಾಜಕ್ಕೆ ಕೊಡುಗೆ ಕೊಡುವ ವ್ಯವಸ್ಥೆಯನ್ನು ಯುವ ಪೀಳಿಗೆ ಮಾಡಬೇಕು. ಆಗ ಮಾತ್ರ ನಮ್ಮ ದೇಶದ ಚಿತ್ರಣ ಬದಲಾಗುತ್ತೆ. ಇದನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ ಈ ದೇಶವನ್ನು ಉದ್ಧಾರ ಮಾಡಲು ಈ ವ್ಯವಸ್ಥೆಯಲ್ಲಿ ಯಾವ ಮಹಾತ್ಮ ಗಾಂಧೀ, ಯಾವ ವಿವೇಕಾನಂದ ಹುಟ್ಟಿ ಬರುತ್ತಾರೆ ಹೇಳಿ?



ಪಠ್ಯವಸ್ತು ವಿಷಯವಾಗಬಲ್ಲ ಸಾಧಕ

ಟಿ. ಮಹಾಬಲೇಶ್ವರ ಭಟ್, ಸಾಹಿತಿಗಳು. ಬೇದೂರು, ಸಾಗರ.

ಪರಿಚಯ : ಶ್ರೀ ಟಿ. ಮಹಾಬಲೇಶ್ವರ ಭಟ್ ಇವರು ಸಾಗರ ಸಮೀಪದ ಬೇದೂರು ಗ್ರಾಮದವರು. ಖ್ಯಾತ ಸಾಹಿತಿಗಳು ಮತ್ತು ಚಿಂತಕರು. ಈವರೆಗೆ ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಸಾಗರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರ ಬದುಕು – ಬರಹ ಕುರಿತೇ ಈವರೆಗೆ ಮೂರು ಜನ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಇವರು ಮ್ಯಾಮ್‌ಕೋಸ್ ಸಹಕಾರಿ ಸಂಸ್ಥೆಯ ನಿರ್ದೇಶಕರಾಗಿ 24 ವರ್ಷ ಸೇವೆ ಸಲ್ಲಿಸಿದ್ದಾರೆ. ಆರ್. ಭರಣಯ್ಯನವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದ ಸಮಯದಲ್ಲಿ ಮ್ಯಾಮ್‌ಕೋಸ್ ಸಂಸ್ಥೆಗೆ ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಭಟ್ಟರು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಅವರು ತಾವು ಕಂಡಂತಹ ಭರಣಯ್ಯನವರ ವ್ಯಕ್ತಿತ್ವ, ಆಡಳಿತ ವೈಖರಿ ಇತ್ಯಾದಿಯಾಗಿ ನಮ್ಮೊಂದಿಗೆ ಮಾತನಾಡಿದ್ದಾರೆ.

"ಭರಣಯ್ಯನವರು ಈ ಜಿಲ್ಲೆಗೆ ಬರುವ ಮೊದಲು ನನಗೆ ಪರಿಚಯ ಇರಲಿಲ್ಲ. ಅವರು 1958ನೇ ಇಸವಿಯಲ್ಲಿ ಶಿವಮೊಗ್ಗಕ್ಕೆ ಜಿಲ್ಲಾಧಿಕಾರಿಯಾಗಿ ಬಂದರು. ನಾನು

ಆ ಸಂದರ್ಭದಲ್ಲಿ ಮ್ಯಾಮ್‌ಕೋಸ್ ಸಹಕಾರಿ ಸಂಘಕ್ಕೆ ಉಪಾಧ್ಯಕ್ಷನಾಗಿದ್ದೆ. ಈ ಸಂಘ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದೆ. ಸಂಘದ ಬೈಲಾ ಪ್ರಕಾರ ಜಿಲ್ಲಾಧಿಕಾರಿಗಳಾಗಿ ಯಾರು ಇರುತ್ತಾರೋ ಅವರೇ ಸಂಘದ ಅಧ್ಯಕ್ಷರಾಗಿರುತ್ತಾರೆ. ಅದರಂತೆ ಭರಣಯ್ಯನವರು ಮ್ಯಾಮ್‌ಕೋಸ್‌ನ ಅಧ್ಯಕ್ಷರಾಗಿದ್ದರು. ಹಾಗಾಗಿ ಭರಣಯ್ಯನವರು ಮತ್ತು ನನ್ನ ನಡುವೆ ಪರಿಚಯ, ಆತ್ಮೀಯತೆ ಬೆಳೆದಿತ್ತು.

ಅವರು ಇಲ್ಲಿ ಇದ್ದಂತಹ ಎರಡು ವರ್ಷಗಳಲ್ಲಿ ಅವರ ಸಂಪೂರ್ಣ ವ್ಯಕ್ತಿತ್ವ, ಅವರ ದಕ್ಷತೆ, ಆಡಳಿತ ನಡೆಸುತ್ತಿದ್ದ ರೀತಿ ಮತ್ತು ಅವರ ಸಾಂಸ್ಕೃತಿಕ ಜೀವನ – ಇದು ಬಹಳ ನನಗೆ ಮೆಚ್ಚುಗೆಯಾಗಿರುವಂತದ್ದು. ಯಾಕೆಂದರೆ ಸಾಮಾನ್ಯವಾಗಿ ಜಿಲ್ಲಾಧಿಕಾರಿಯಾಗಿ ಬಂದಂತಹವರು ತಮ್ಮ ಕೆಲಸವೇನು ಅಷ್ಟಕ್ಕೇ ಸೀಮಿತವಾಗಿ ಇರುತ್ತಾರೆ. ಆದರೆ ಇವರು ಹಾಗಿರಲಿಲ್ಲ. ಸಾಂಸ್ಕೃತಿಕ ಮತ್ತು ಸಾಹಿತ್ಯಕ ಬದುಕಿನಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.

ಅವರಲ್ಲಿರುವ ಸಾಂಸ್ಕೃತಿಕ ಪ್ರಜ್ಞೆಯನ್ನು; ಅದೆಲ್ಲಕ್ಕಿಂತಲೂ ಹೆಚ್ಚಾಗಿ ಅವರು ಸಂಸ್ಕೃತದಲ್ಲಿ ಮಾಡಿದ ಅಧ್ಯಯನವನ್ನು ನಾನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ. ಅವರು ಯಾವುದೇ ಸಾಹಿತ್ಯ ಸಮಾರಂಭ ಆಗಲಿ ಅಥವಾ ಯಾವುದೇ ಸಾರ್ವಜನಿಕ ಸಮಾರಂಭ ಅಥವಾ ತಮ್ಮ ಆಡಳಿತಕ್ಕೆ ಸಂಬಂಧಪಟ್ಟ ಕೆಲಸಕಾರ್ಯದ ಸಮಾರಂಭ ಆಗಲಿ ಎಲ್ಲ ಕಡೆ ಸಾಹಿತ್ಯ ಮತ್ತು ಶಿಕ್ಷಣದ ಬಗ್ಗೆ ಮಾತನಾಡುವುದನ್ನು ಅವತ್ತು ನಾನು ಗಮನಿಸಿದ್ದೇನೆ. ಅಲ್ಲದೆ ಅವರ ಇನ್ನೊಂದು ವಿಶೇಷ ಅಂದರೆ ಮಾತನಾಡುವಾಗ ಭಗವದ್ಗೀತೆಯ ಶ್ಲೋಕಗಳನ್ನು ಬಹಳ ಸೊಗಸಾಗಿ ತಮ್ಮ ಭಾಷಣದ ಸನ್ನಿವೇಶಕ್ಕೆ ಹೊಂದಿಸಿಕೊಂಡು ಹೇಳುತ್ತಿದ್ದರು. ಒಟ್ಟಾರೆ ಭರಣಯ್ಯನವರು ಸಾರ್ವಜನಿಕರನ್ನು ಆಕರ್ಷಣೆ ಮಾಡುವ ಕಲೆಯನ್ನು ತಮ್ಮ ಮಾತಿನಲ್ಲಿ ಸಿದ್ಧಿಸಿಕೊಂಡಿದ್ದರು.

ಅಧಿಕಾರಿಗಳಾಗಿ ಹಳ್ಳಿಗಳಿಗೆ ಹೋದಾಗ ಅವರು ಅಲ್ಲಿರುವ ಜನರ ಸಂಕಷ್ಟಗಳ ಬಗ್ಗೆ ಬಹಳ ಕರುಣೆ ಮತ್ತು ಆತ್ಮೀಯತೆಯಿಂದ ವಿಚಾರಿಸುತ್ತಿದ್ದರು. ಮತ್ತು ಯಾವುದೇ ವಿಳಂಬ ಮಾಡದೆ ಜನರ ಕೆಲಸವನ್ನು ಮಾಡಿಕೊಡುತ್ತಿದ್ದ ರೀತಿ ನನಗೆ ಬಹಳ ಮೆಚ್ಚುಗೆಯಾಗಿರುವಂತದ್ದು. ಅದು ಯಾವುದೇ ಸ್ಕೂಲಿಗೆ ಸಂಬಂಧಿಸಿದ್ದಿರಲಿ, ಆಸ್ಪತ್ರೆಗೆ ಸಂಬಂಧಿಸಿದ್ದಿರಲಿ ಅಥವಾ ವ್ಯಕ್ತಿಗಳ ಕೆಲಸವೇ ಆಗಲಿ ತಮ್ಮ ವ್ಯಾಪ್ತಿ ಮತ್ತು ಅಧಿಕಾರದಲ್ಲಿ ಏನು ಬರುತ್ತೆ ಅದನ್ನ ತಕ್ಷಣ ಮಾಡಿಕೊಡುವಂತಹ ಕಾರ್ಯವಿಧಾನವನ್ನ ಅಳವಡಿಸಿಕೊಂಡಿದ್ದರು. ಅಂತಹ ಗುಣ ಬಹುಶಃ ಎಲ್ಲ ಅಧಿಕಾರಿಗಳಲ್ಲೂ ಇರುತ್ತೆ ಅನ್ನುವುದನ್ನ ನಾನು ನಂಬುವುದಿಲ್ಲ. ಆದರೆ ಭರಣಯ್ಯನವರಲ್ಲಿ ಇತ್ತು. ಅವರ ಇಡೀ ಜೀವನವೇ ಸುಸಂಸ್ಕೃತಿಯ ಪ್ರತೀಕವಾಗಿರುವಂತದ್ದನ್ನ ನಾನು ಕಂಡಿದ್ದೇನೆ. ಹಾಗಾಗಿ ಅವರ ಎರಡು ವರ್ಷಗಳ ಸೇವೆ ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಅಮೂಲ್ಯವಾದದ್ದು ಅಂತ ನನ್ನ ಗ್ರಹಿಕೆ.

ಅವರ ಬಗ್ಗೆ ನಾನು ಯಾವಾಗಲೂ ಚಿಂತಿಸುವ ಅಂಶವೆಂದರೆ, ಇಂತಹ ಒಬ್ಬ ಜನಪರ ಅಧಿಕಾರಿ ನಿವೃತ್ತಿಯ ನಂತರ ಚುನಾವಣೆಗೆ ನಿಂತಾಗ ಜನ ಅವರನ್ನ ಗೆಲ್ಲಿಸಲಿಲ್ಲ. ಇದು ಅನ್ಯಾಯ. ಚುನಾವಣೆ ಅಂದರೆ ಅದು ರಾಜಕೀಯ ಪ್ರೇರಿತವಾಗಿರುವುದರಿಂದ ಅದರಲ್ಲಿ ಸಾಹಿತಿ, ಸಜ್ಜನರು ಇಂಥವರನ್ನೆಲ್ಲ ಆರಿಸುವುದು ಕಷ್ಟ. ಅಲ್ಲಿ ರಾಜಕೀಯಕ್ಕೆ ಹೆಚ್ಚು ಮಹತ್ತ್ವ ಅಂತ ನನ್ನ ಭಾವನೆ. ಉದಾಹರಣೆಗೆ ಗೋಪಾಲಕೃಷ್ಣ ಅಡಿಗರು ಬೆಂಗಳೂರಿನಲ್ಲಿ ಕೆ. ಹನುಮಂತಯ್ಯನವರ ಎದುರಿನಲ್ಲಿ ನಿಂತರು. ಆದರೆ ಸೋತರು. 'ಯಾಕೆ ಸೋತರು, ಅವರಿಗೆ ಅರ್ಹತೆ ಇರಲಿಲ್ಲವಾ?' ಅಂತ ಕೇಳಿದರೆ, ಅರ್ಹತೆ ಇತ್ತು ಆದರೆ ಜನ ಆರಿಸಲಿಲ್ಲ!

ಒಂದು ಕ್ಷೇತ್ರದ ಎಲ್ಲ ಜನರೂ ವೈಚಾರಿಕ ಪ್ರಜ್ಞೆಯಿಂದ ಆಲೋಚನೆ ಮಾಡುತ್ತಾರೆ, ಎಲ್ಲರೂ ಸಜ್ಜನರಾಗಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಹಾಗಾಗಿ ರಾಜಕೀಯ ಕ್ಷೇತ್ರಕ್ಕೂ ಆಡಳಿತ ಕ್ಷೇತ್ರಕ್ಕೂ ಬಹಳ ವ್ಯತ್ಯಾಸ ಇದೆ. ಜನರು ಏನು ಮಾಡುತ್ತಾರೆ ಯಾರ ಹಿಂದೆ ಹೋದರೆ ತಕ್ಷಣ ನಮ್ಮ ಕೆಲಸ ಆಗುತ್ತೆ ಅಂತ ತಮ್ಮ ಸ್ವಾರ್ಥ ಭಾವನೆಯನ್ನು ಇಟ್ಟುಕೊಂಡು ಸಾಮಾನ್ಯ ಜನರು ಇರುತ್ತಾರೆಯೇ ಹೊರತು ವಿದ್ಯಾವಂತರನ್ನ, ಸುಶಿಕ್ಷಿತರನ್ನ ಆರಿಸಬೇಕು ಎಂದರೆ ಅವರು ಇಷ್ಟಪಡುವುದಿಲ್ಲ.

ಅಲ್ಲದೆ ಈ ಸಜ್ಜನರು, ಸಾಹಿತಿಗಳಿಗೆ ಆರ್ಥಿಕ ಕಾರಣವೂ ಒಂದು ಕೊರತೆಯಾಗಿಬಿಡುತ್ತೆ ಅಂತ ನನ್ನ ಭಾವನೆ. ಈ ಕಾರಣದಿಂದ ಒಬ್ಬ ಸಜ್ಜನ ಚುನಾವಣೆಗೆ ನಿಂತರೆ ಅವನಿಗೆ ಎದುರಾಳಿಯನ್ನು ಎದುರಿಸುವ ಶಕ್ತಿ ಕಡಿಮೆಯಾಗಿಬಿಡುತ್ತದೆ. ಹಾಗಾಗಿಯೇ ಇವತ್ತಿಗೂ ಕೂಡ ಈ ಸಜ್ಜನ ಪದಕ್ಕೆ ವಿರುದ್ಧವಾಗಿ ಇನ್ನೊಂದು ಪದ ಇದೆಯಲ್ಲ; ಆ ಜನರೇ ಹೆಚ್ಚಾಗಿ ಆರಿಸಿಬರುವಂತದ್ದನ್ನ ನಾವು ಕಾಣುತ್ತಿದ್ದೇವೆ. ಇವತ್ತು ರಾಜಕೀಯ ಯಾವ ಸ್ಥಿತಿಗೆ ತಲುಪಿದೆ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ! ಅವರು ಗೆದ್ದಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಅಧಿಕಾರಿಗಳಾಗಿರುವಾಗ ಅವರು ಏನು ಜನರ ಕಷ್ಟ, ನೋವುಗಳನ್ನ ಪ್ರತ್ಯಕ್ಷ ಕಂಡಿದ್ದರು ಅದನ್ನು ಯಥಾವತ್ತಾಗಿ ವಿಧಾನಸಭೆಯಲ್ಲಿ ಪ್ರತಿಪಾದಿಸಲಿಕ್ಕೆ ಸಮರ್ಥರಿದ್ದರು ಅವರು. ಇವತ್ತಿನ ಬೆಳವಣಿಗೆಗಳನ್ನ ನೋಡಿದರೆ ಒಬ್ಬ ಪ್ರಾಮಾಣಿಕ ಅಧಿಕಾರಿಯಾಗಿ, ಸಾಮಾಜಿಕ ಪ್ರಜ್ಞೆ ಇರುವ ವ್ಯಕ್ತಿಯಾಗಿ ಭರಣಯ್ಯನವರು ಇವತ್ತು ಇರಬೇಕಾಗಿತ್ತು. ಅವರು ಇದ್ದಿದ್ದರೆ ಇವತ್ತಿನದೆಲ್ಲವನ್ನೂ ನೋಡಿ ಬಹಳ ಸಂಕಟ ಪಡುತ್ತಿದ್ದರು ಅಂತ ನನ್ನ ಭಾವನೆ. ಇವತ್ತಿನ ರಾಜಕಾರಣವನ್ನ, ಆಡಳಿತವನ್ನ ಮತ್ತು ಇವತ್ತಿನ ಭ್ರಷ್ಟಾಚಾರವನ್ನ ಅವರು ಖಂಡಿತ ಸಹಿಸುತ್ತಿರಲಿಲ್ಲ. ಮತ್ತು ಖಂಡಿತ ಒಪ್ಪಿಕೊಳ್ಳುತ್ತಿರಲಿಲ್ಲ. ಅಂತಹ ಒಂದು ಅಪೂರ್ವವಾದ ವ್ಯಕ್ತಿತ್ವ ಅವರಲ್ಲಿತ್ತು.

ಇಂದಿಗೂ ನನಗೆ ಪ್ರಾಮಾಣಿಕವಾಗಿ ಅನ್ನಿಸುವ ಒಂದು ಅನಿಸಿಕೆ ಏನೆಂದರೆ ನಮ್ಮ ನಡುವೆ ಇದ್ದ ಇಂಥ ವ್ಯಕ್ತಿಯ ಬಗ್ಗೆ ನಮ್ಮ ಶಾಲಾ ಕಾಲೇಜು ಪಠ್ಯಗಳಲ್ಲಿ ಈ

ನಮ್ಮ ಅಧಿಕಾರಿಯ ಆದರ್ಶ ಜೀವನವನ್ನು ಪಾಠವಾಗಿ ಕೊಡುವಂಥದ್ದು ಒಳ್ಳೆಯದು. ಈ ಪಠ್ಯಪುಸ್ತಕ ಸಮಿತಿಯಲ್ಲಿ ವಿದ್ಯಾವಂತರು ಸುಸಂಸ್ಕೃತ ಜನವೇ ಇರುತ್ತಾರೆ. ಈ ಬಗ್ಗೆ ಅಂಥವರು ಯೋಚಿಸುವುದು ಸೂಕ್ತ.

ಈ ನಿಟ್ಟಿನಲ್ಲಿ ನೀವು ಅವರ ಜೀವನ, ಸಾಧನೆ ಕುರಿತು ದಾಖಲಿಸುತ್ತಿರುವುದು ತುಂಬಾ ಒಳ್ಳೆಯದು ಮತ್ತು ಆಗಲೇಬೇಕಾಗಿದ್ದ ಕೆಲಸ. ಇವತ್ತು ಏನಾಗಿದೆ ಅಂದರೆ ರಾಜಕಾರಣಿಗಳ ಆದರ್ಶವನ್ನೇ ನಾವು ಅವಲಂಬಿಸಬೇಕಾಗಿದೆ – ಅವನು ಎಷ್ಟು ಅಯೋಗ್ಯನಾಗಿದ್ದರೂ ಸಹ 'ಅವನು ಯೋಗ್ಯ' ಎನ್ನುವಂತಹ ಪಡೆಗಳನ್ನ ನಾವು ಸೃಷ್ಟಿಸಿಕೊಂಡುಬಿಟ್ಟಿದ್ದೇವೆ. ಆದರೆ ಸಜ್ಜನರು ಆ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಮಾಡೋದೂ ಇಲ್ಲ ಅವರು; ಅವರಿಗೆ ಅದು ಬೇಕಾಗಿಯೂ ಇಲ್ಲ. ಹಾಗಾಗಿ ನಮಗೆ ಹಿಂದೆ ಇದ್ದ ಇಂತಹ ಮಹಾನುಭಾವರನ್ನು ಇಂದಿನವರಿಗೆ ನೆನಪುಮಾಡಿಕೊಟ್ಟು ಆದರ್ಶಯುತ ಮೇಲ್ಪಂಕ್ತಿ ಹಾಕಿಕೊಡಲು ಇಂತಹ ಕೆಲಸ ಬಹಳ ಅಗತ್ಯ. ಅದನ್ನು ನೀವು ಮಾಡುತ್ತಿದ್ದೀರಿ. ಬಹಳ ಸಂತೋಷ.

ಜನಕಾಳಜಿಯ ಸೇವಕ

ನಾ. ಡಿಸೋಜ, ಸಾಹಿತಿಗಳು, ಸಾಗರ.

ಪರಿಚಯ : ಕನ್ನಡನಾಡಿನಲ್ಲಿ ನಾ. ಡಿಸೋಜಾ ಸಾಹಿತಿಯಾಗಿ ಸಂಸ್ಕೃತಿ ಚಿಂತಕರಾಗಿ ಪ್ರಸಿದ್ಧರಾದವರು. ಅವರು ಈವರೆಗೆ ಈಗಲೂ ಕನ್ನಡದ ಹೆಸರಾಂತ ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಅವರ ಕಥೆ, ಸಾಹಿತ್ಯಕ್ಕೆ ಸಂಬಂಧಿಸಿದ ಬರಹಗಳು ಪ್ರಕಟವಾಗುತ್ತಲೇ ಇರುತ್ತವೆ. ಅವರು ಬರೆದ ದ್ವೀಪ ಕಾದಂಬರಿ ಚಲನಚಿತ್ರ ಕೂಡ ಆಗಿದೆ. ನಾ. ಡಿಸೋಜಾ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಜೋಗದಲ್ಲಿ ಶರಾವತಿ ಯೋಜನೆಯ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಅಲ್ಲಿ ಕೆಲಸ ಮಾಡಿದವರು. ಆಗ ಅವರು ಆರ್. ಭರಣಯ್ಯನವರನ್ನು ನೋಡಿದ ಬಗ್ಗೆ ಇರುವ ನೆನಪುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಆರ್. ಭರಣಯ್ಯನವರನ್ನು ಸುಮಾರು 60–61ನೇ ಇಸವಿಯಲ್ಲಿ ನೋಡಿದ ನೆನಪು ನನಗೆ. ನಾನು 1959ರಲ್ಲಿ ಶರಾವತಿ ಯೋಜನೆಗೆ ಕೆಲಸಕ್ಕೆ ಸೇರಿದೆ. ಆ ಸಂದರ್ಭದಲ್ಲಿಯೇ ಮುಳುಗಡೆ ಸಂತ್ರಸ್ತರಿಗಾಗಿ ಒಂದು ಸಮಿತಿಯನ್ನು ಸರ್ಕಾರ ಮಾಡಿತ್ತು. ಆ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳಾದ ಭರಣಯ್ಯನವರು ಇದ್ದರು. ಮಾತ್ರವಲ್ಲ ಮುಳುಗಡೆ ಸಂತ್ರಸ್ತರ

ಬಗ್ಗೆ ಅವರು ಕಾಳಜಿ ತೆಗೆದುಕೊಂಡು ಅವರಿಗೆ ಕೊಡಿಸಬೇಕಾದ ಭೂಮಿ, ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಅವರು ತುಂಬಾ ಕೆಲಸ ಮಾಡಿದವರು.

ಶರಾವತಿ ಯೋಜನಾ ಪ್ರದೇಶಕ್ಕೆ ಅವರು ಸಾಕಷ್ಟು ಸಾರಿ ಬಂದಾಗ ನಾನು ಅವರನ್ನ ನೋಡಿದ ನೆನಪು ನನಗಿದೆ. ಆದರೆ ನಮ್ಮ ಇಲಾಖೆ ಬೇರೆಬೇರೆ ಆಗಿದ್ದರಿಂದ ಚೀಫ್ ಇಂಜಿನಿಯರುಗಳ ಜೊತೆಯಲ್ಲಿ ಇದ್ದಂತಹ ನಿಕಟ ಒಡನಾಟ ನನಗೆ ರೆವೆನ್ಯೂ ಆಫೀಸರ್‌ಗಳ ಜೊತೆ ಇರಲಿಲ್ಲ. ಹೀಗಾಗಿ ನಾನು ಭರಣಯ್ಯನವರನ್ನು ನೋಡಿ ಬಲ್ಲೆನೇ ಹೊರತು ಅವರ ಹತ್ತಿರದ ಒಡನಾಟ ನನಗೆ ಸಿಗಲಿಲ್ಲ.

ಆದರೆ ಅವರ ಕೆಲಸಕಾರ್ಯಗಳ ಬಗ್ಗೆ ಎಲ್ಲ ಕೇಳಿದ್ದೇನೆ. ಕೆಲವೊಮ್ಮೆ ಸಮೀಪದಿಂದ ಕಂಡಿದ್ದೇನೆ. ಮುಖ್ಯವಾಗಿ ಅವರು ಮುಳುಗಡೆ ಸಂತ್ರಸ್ತರಿಗೆ ನೆರವಾಗುತ್ತಿದ್ದ ಪ್ರಸಂಗಗಳು. ಆವಾಗ ಮುಳುಗಡೆ ಸಂತ್ರಸ್ತರು ತಮಗೆ ಪರಿಹಾರ ಕಡಿಮೆ ಆಯಿತು ಅಂತ ಹೋರಾಟ ಮಾಡಿದರು. ಆ ಪರಿಹಾರವನ್ನ ಹೆಚ್ಚಿಗೆ ಮಾಡುವುದರಲ್ಲಿ ಭರಣಯ್ಯನವರ ಪಾತ್ರ ಇತ್ತು ಅನ್ನುವುದನ್ನ ನಾನು ಬಹಳ ಜನರ ಬಾಯಲ್ಲಿ ಕೇಳಿದ್ದೇನೆ. ಈ ಸಮಸ್ಯೆ ನ್ಯಾಯಾಲಯದ ಮೂಲಕ ಬಗೆಹರಿದಿದ್ದರೂ ಕೂಡ ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಭರಣಯ್ಯನವರು ಬಹಳ ಆಸಕ್ತಿ ತೆಗೆದುಕೊಂಡು ಕೆಲಸ ಮಾಡಿದ್ದರು.

ಅವರ ಇಡೀ ವ್ಯಕ್ತಿತ್ವವೇ ಬಹಳ ಉನ್ನತಮಟ್ಟದ್ದಾಗಿತ್ತು. ಅವರ ಮಾತುಗಳನ್ನು ಕೆಲವು ವೇಳೆ ಕೇಳಿದ್ದೇನೆ. ಬಹಳ ಒಳ್ಳೆಯ ಮಾತುಗಾರರು. ಒಬ್ಬ ದಾರ್ಶನಿಕ ಮಾತಾಡಿದ ಹಾಗೆ ಇರುತ್ತಿತ್ತು ಅವರ ಮಾತುಗಳು. ಮುಳುಗಡೆ ಸಂತ್ರಸ್ತರನ್ನು ಕುರಿತು ಮಾತನಾಡುವಾಗಲೇ ಇವರು ಬಹಳ ರೀಸನಬಲ್ ಆಗಿ ಮಾತನಾಡುತ್ತಾರೆ ಅಂತ ಅನ್ನಿಸುತ್ತಿತ್ತು. ಕಾರ್ಗಲ್ ಸುತ್ತಮುತ್ತ ಇರುವ ಸಣ್ಣಸಣ್ಣ ಹಳ್ಳಿಗಳಿಗೆ ಹೋಗಿ ಅಲ್ಲಿರುವವರನ್ನ ಮಾತಾಡಿಸಿ ಅವರ ಕಷ್ಟಸುಖ ವಿಚಾರಿಸಿಕೊಂಡು ಬರುತ್ತಿದ್ದರು. ಹಾಗೆ ಹಳ್ಳಿಯ ಜನಕ್ಕೆಲ್ಲ ಬಹಳ ಹತ್ತಿರವಾಗಿದ್ದರು ಅವರು.

ತಮ್ಮ ಜನಾಂಗದವರಿಗೂ ಕೂಡ ಬಹಳ ಕೆಲಸ ಮಾಡಿದ್ದಾರೆ ಅವರು. ಇವತ್ತು ಎಸ್.ಸಿ. ಎಸ್.ಟಿ.ಗೆ ಸರ್ಕಾರದ ಸೌಲಭ್ಯ ಸಾಕಷ್ಟು ಸಿಗುತ್ತಿದೆ. ಇವತ್ತಿನ ಸಮಾಜದಲ್ಲೂ ಕೂಡ ಆ ಜನಾಂಗಕ್ಕೆ ಸೌಲಭ್ಯಗಳನ್ನು ಕೊಡಬೇಕು ಅನ್ನುವ ಪ್ರಜ್ಞೆ ಇದೆ. ಈಗೆ 40 ವರ್ಷಗಳ ಹಿಂದೆ ಈ ರೀತಿಯ ಸಾಮಾಜಿಕ ಪರಿವರ್ತನೆಗಳು ಇನ್ನೂ ಆಗಿರಲಿಲ್ಲ. ದಲಿತರನ್ನು ಸಮಾಜ ಇನ್ನೂ ಸಂಕುಚಿತವಾಗಿ ನೋಡುತ್ತಿದ್ದ ಕಾಲ ಅದು. ಅಂತಹ ಸಂದರ್ಭದಲ್ಲೂ ಕೂಡ ತಮ್ಮ ಜನಾಂಗದವರನ್ನ, ಅವರಿಗೆ ಶಿಕ್ಷಣ, ಉದ್ಯೋಗ ಕೊಡಿಸುವುದರ ಮೂಲಕ ತುಂಬಾ ನೆರವಾದವರು ಭರಣಯ್ಯನವರು. ಇವತ್ತು ನಮಗೆ

ಅಂತಹ ಅಧಿಕಾರಿಗಳು ಬೆರಳೆಣಿಕೆಯಷ್ಟು ಮಂದಿಯೂ ಸಿಗುವುದಿಲ್ಲ ಎಂದರೆ ತಪ್ಪಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಆವತ್ತಿನ ಅಧಿಕಾರಿಗಳು ಏನಿದ್ದರು ಅವರೆಲ್ಲ ಬ್ರಿಟಿಷರ ಕೈಯಲ್ಲಿ ಪಳಗಿದವರು. ಹಾಗಾಗಿ ಶಿಸ್ತು, ನೀತಿನಿಯಮ, ದೇಶಾಭಿಮಾನ ಇದನ್ನೆಲ್ಲ ಅವರು ಬೆಳೆಸಿಕೊಂಡಿದ್ದರು. ನನಗೆ ಗೊತ್ತಿರುವ ಹಾಗೆ ಅಂತಹ ಅಧಿಕಾರಿಗಳಲ್ಲಿ ಬಹಳ ಒಳ್ಳೆಯ ಆಡಳಿತಗಾರರೂ ಇದ್ದರು. ನಮ್ಮ ಭರಣಯ್ಯನವರೂ ಕೂಡ ಬ್ರಿಟಿಷರ ಪ್ರಭಾವಕ್ಕೆ ಒಳಗಾದವರು. ಹೀಗಾಗಿ ಅವರಲ್ಲಿ ಒಬ್ಬ ಒಳ್ಳೆಯ ಆಡಳಿತಗಾರ, ದಕ್ಷ ಅಧಿಕಾರಿ ಇದ್ದ. ಈಗ ಅಂತಹವರು ಸಿಗುವುದು ಕಷ್ಟ ಅನ್ನುವುದಕ್ಕಿಂತಲೂ ಇಲ್ಲವೇ ಇಲ್ಲ ಅಂತಲೇ ಹೇಳಬಹುದು. ಆಮೇಲೆ ಅವರು ಚುನಾವಣೆಗೆ ನಿಂತು ಸೋತ ವಿಚಾರವನ್ನ ಬೇರೆ ಯಾರಿಂದಲೋ ಕೇಳಿದೆ. ಅಂತಹ ಒಬ್ಬ ಜನಪರ ಅಧಿಕಾರಿಗೆ ಸೋಲಾಗಿದ್ದು ಕೇಳಿ ಬೇಸರ ಆಯಿತು ನನಗೆ.

ನಮ್ಮ ಜನ ಈ ರಾಜಕಾರಣಿಗಳನ್ನ ಮತ್ತು ಆಡಳಿತಗಾರರನ್ನ ಪ್ರತ್ಯೇಕವಾಗಿ ನೋಡುತ್ತಾರೇನೋ ಅಂತ ನನಗೆ ಅನ್ನಿಸುತ್ತೆ. ಆಡಳಿತಗಾರರು ಎಷ್ಟೇ ಜನಪರ ವ್ಯಕ್ತಿಗಳೆಯಾದರೂ ಆಯಾ ಇಲಾಖೆಗೆ ಅಥವಾ ಪ್ರದೇಶಕ್ಕೆ ಅವರ ಜನಪ್ರಿಯತೆ ಸೀಮಿತವಾಗಿಬಿಡುತ್ತಾರೆ. ಆದರೆ ರಾಜಕಾರಣಿ ಹಾಗಲ್ಲ ಸಿಗುವ ಸ್ವಲ್ಪ ಸಮಯದಲ್ಲೇ ಪ್ರಸಿದ್ಧಿಗೆ ಬಂದುಬಿಡುತ್ತಾರೆ ಮತ್ತು ಅವರು ಹೇಗೇ ಇದ್ದರೂ ಸಮಾಜ ಅವರನ್ನ ಮೆಚ್ಚುವುದಕ್ಕೆ ಶುರುಮಾಡುತ್ತೆ, ಹಾಗಾಗಿ ಆರ್. ಭರಣಯ್ಯನವರಿಗೆ ಚುನಾವಣೆಯಲ್ಲಿ ಸೋಲಾಯಿತು ಅನ್ನುವುದು ಅವರ ವೈಯಕ್ತಿಕ ಸೋಲಲ್ಲ; ನಮ್ಮ ವ್ಯವಸ್ಥೆಯ ರೀತಿಯೇ ಹಾಗಿತ್ತು ಅನ್ನಿಸುತ್ತೆ ನನಗೆ. ಬೇಸರದ ವಿಷಯ ಅಂದರೆ ಇವತ್ತೂ ಕೂಡ ಸ್ವಲ್ಪ ಹೆಚ್ಚು ಕಡಿಮೆ ಆ ಸ್ಥಿತಿಯೇ ಇದೆ.

ಆರ್. ಭರಣಯ್ಯನವರ ಬಗ್ಗೆ, ಅವರ ಕೆಲಸ, ಜನಪರ ಕಾಳಜಿಯ ಬಗ್ಗೆ ಬಹಳಷ್ಟು ಕೇಳಿದ್ದೀನಿ ನಾನು. ಈಗ ನೀವು ಅವರ ಬಗ್ಗೆ ಮಾಹಿತಿ ಸಂಗ್ರಹಿಸಬೇಕು ಅಂತ ಇಷ್ಟು ಕಷ್ಟಪಡುತ್ತಿರುವುದನ್ನು ನೋಡಿದರೆ ನಮ್ಮ ಜನರಲ್ಲಿ ಒಳ್ಳೆ ವ್ಯಕ್ತಿತ್ವದ ನೆನಪುಗಳು ಉಳಿಸುವಲ್ಲಿ ಅನೇಕ ಜನ ಚಿಂತಿಸುವವರು ನಮ್ಮ ನಡುವೆ ಇರುವುದೇ ಸಂತೋಷ. ಈ ಮೊದಲೇ ಅವರ ಬಗ್ಗೆ ಪುಸ್ತಕರೂಪದಲ್ಲೋ ಅಥವಾ ಬೇರಾವ ರೂಪದಲ್ಲೋ ದಾಖಲೆ ಮಾಡಿಟ್ಟಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಹಾಗಾಗಿ ನೀವು ಮಾಡುತ್ತಿರುವ ಕೆಲಸ ಒಳ್ಳೆಯದೇ.! ನಮ್ಮ ಜಿಲ್ಲೆಯಲ್ಲೂ ಸಾಕಷ್ಟು ಕೆಲಸ ಮಾಡಿದಂತಹವರು, ಮುಳುಗಡೆ ಸಂತ್ರಸ್ತರಿಗೆ ನೆರವಾದವರು ಅವರು. ಅವರ ಬಗ್ಗೆ ಈ ಪ್ರದೇಶದ ಜನರೂ ತಿಳಿದುಕೊಂಡರೆ ಒಳ್ಳೆಯದು. ಹಾಗಾಗಿ ಈ ಕೆಲಸ ಬಹಳ ಸಮಂಜಸವಾದದ್ದು ಅಂತ ನನಗನ್ನಿಸುತ್ತೆ. ಒಳ್ಳೆಯದಾಗಲಿ.

ಸ್ಫೂರ್ತಿಚೇತನ

ಎಲ್. ಟಿ. ತಿಮ್ಮಪ್ಪ ಹೆಗಡೆ, ಮಾಜಿ ಶಾಸಕರು, ಲಿಂಗದಳ್ಳಿ, ಸಾಗರ.

ಪರಿಚಯ : ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆಯವರು ಸಾಗರ ಸಮೀಪದ ಲಿಂಗದಹಳ್ಳಿ ಗ್ರಾಮದವರು. ಹೆಗಡೆಯವರು ಬಹಳ ಸಣ್ಣ ವಯಸ್ಸಿನಲ್ಲಿಯೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟವರು. ಊರಿನ ಮಾಧ್ಯಮಿಕ ಶಾಲೆಯಿಂದ ಆರಂಭಿಸಿ ಸಾಗರದಲ್ಲಿ ಪದವಿ ಕಾಲೇಜು ಸ್ಥಾಪನೆಯವರೆಗೂ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. 1978ರಿಂದ ಎರಡು ಅವಧಿಗೆ ಸಾಗರ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿಯೂ ಕೆಲಸ ಮಾಡಿದ್ದಾರೆ.

ಲಿಂಗದಹಳ್ಳಿಯಲ್ಲಿ ಹೆಗಡೆಯವರು ಕಟ್ಟಿದ ಶಾಲೆಯ ಉದ್ಘಾಟನೆಗೆ ಆರ್. ಭರಣಯ್ಯನವರು ಬಂದಿದ್ದರು. ಆ ಸಂದರ್ಭದಲ್ಲಿ ತಾವು ಕಂಡ ಭರಣಯ್ಯನವರ ವ್ಯಕ್ತಿತ್ವ, ಪ್ರತಿಭೆಯ ಕುರಿತು ಹೆಗಡೆಯವರು ನಮ್ಮೊಂದಿಗೆ ಮಾತನಾಡಿದ್ದಾರೆ.

ನಾನು ಆಗಷ್ಟೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟಿದ್ದೆ. ಸುಮಾರು 1956–57ರಲ್ಲಿ ಊರಿನ ಮಾಧ್ಯಮಿಕ ಶಾಲೆಯನ್ನು ಕಟ್ಟಲು ಪ್ರಾರಂಭ ಮಾಡಿದೆವು. ಆ ಕಾಲದಲ್ಲಿ ಸಾಗರ ತಾಲ್ಲೂಕು ಕೇಂದ್ರದಲ್ಲಿ ಬಿಟ್ಟರೆ ಒಂದೆರಡು ಕಡೆ ಮಾತ್ರ ಶಾಲೆಗಳಿತ್ತು. ಹಾಗಾಗಿ ನಮ್ಮೂರಿಗೆ ಹೊಸದಾಗಿ ಒಂದು ಶಾಲೆಯನ್ನು ಮಂಜೂರು ಮಾಡಿಸಿದೆವು. ಶಾಲೆಯ ಕಟ್ಟಡ ಕಟ್ಟಿ ಅದರ ಉದ್ಘಾಟನೆ ಮಾಡಲು ಆರ್. ಭರಣಯ್ಯನವರನ್ನ ಆಹ್ವಾನಿಸಿದೆವು. ಅವರು ಆಗ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದರು. ಅವರನ್ನ ಕರೆದು ಆ ಶಾಲೆಯನ್ನ ಉದ್ಘಾಟನೆ ಮಾಡಿಸಿದೆವು. ಅವತ್ತು ಆ ಉದ್ಘಾಟನಾ ಸಮಾರಂಭಕ್ಕೆ ಅವರು ಬಂದಿದ್ದು, ಉದ್ಘಾಟನೆಯ ಉಪನ್ಯಾಸ ಮಾಡಿದ್ದು – ಅವರ ವ್ಯಕ್ತಿತ್ವ, ಅವರ ಹಿರಿಮೆ, ಅವರ ಸಂಸ್ಕಾರ, ಪ್ರತಿಭೆಗೆ ಸಾಕ್ಷಿಯಾಗಿತ್ತು. ಆ ಸಂದರ್ಭ ನನ್ನ ಸಾರ್ವಜನಿಕ ಜೀವನಕ್ಕೆ ಸ್ಫೂರ್ತಿ ಕೊಟ್ಟಂತಹ ನೆನಪುಗಳಲ್ಲಿ ಒಂದಾಗಿದೆ.

ಮತ್ತೊಂದು ವಿಷಯ ಅಂದರೆ 'ಮ್ಯಾಮ್‌ಕೋಸ್' ಅಂತ ನಮ್ಮ ಅಡಿಕೆ ಬೆಳೆಗಾರರದ್ದು ಸಹಕಾರ ಸಂಘ ಇದೆ. ಜಿಲ್ಲಾಧಿಕಾರಿಗಳೇ ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಅದೇ ರೀತಿ ಭರಣಯ್ಯನವರು ಜಿಲ್ಲಾಧಿಕಾರಿಗಳಾಗಿದ್ದಾಗ ಮ್ಯಾಮ್‌ಕೋಸ್‌ಗೆ ಅಧ್ಯಕ್ಷರೂ ಆಗಿದ್ದರು. ನಾನು ಶಾಲೆಯ ಕಟ್ಟಡ ಕಟ್ಟಿದ್ದೂ ಆವಾಗಲೇ. ಆಗ ಮಂತ್ರಿಗಳು ಮತ್ತು ಇತರೆ ಪ್ರಮುಖರು ಎನ್ನಿಸಿಕೊಂಡವರನ್ನು ಕರೆಸಿ ಉದ್ಘಾಟನೆ ಮಾಡಿಸುವುದಕ್ಕಿಂತ ಭರಣಯ್ಯನವರಂತಹ ಹಿರಿಯರು, ನಮಗೆ ಡಿ. ಸಿ.ಯೂ ಹೌದು; ಅವರನ್ನೇ ಕರೆಯೋಣ.

ನಮ್ಮ ಶಾಲೆಗೆ ಮತ್ತು ನಮಗೆ ಗೌರವ ಅಂತ ಕಮಿಟಿಯ ಮುಂದೆ ಇಟ್ಟಾಗ ಎಲ್ಲರೂ ಒಪ್ಪಿಕೊಂಡರು. ತದನಂತರ ನಾವು ಮಾನ್ಯ ಭರಣಯ್ಯನವರನ್ನು ಉದ್ಘಾಟನೆಗೆ ಕರೆದೆವು.

ಉದ್ಘಾಟನೆಗೆ ಅವರು ಬಂದಾಗ ಎಲ್ಲರಿಗೂ ಮೆಚ್ಚುಗೆ ಆದದ್ದು ಎಂದರೆ ಉದ್ಘಾಟನೆಯಲ್ಲಿ ಒಬ್ಬ ಪುರೋಹಿತರು ಏನು ಮಂತ್ರ ಹೇಳಬಹುದೋ ಆ ರೀತಿಯಲ್ಲಿ ಉದ್ಘಾಟನೆ ಮಾಡುವಾಗ ಮತ್ತು ಕಟ್ಟಡದ ಒಳ ಪ್ರವೇಶ ಮಾಡುವಾಗ ಅವರು ಸಂಬಂಧಪಟ್ಟಂತಹ ಮಂತ್ರಗಳನ್ನು ಹೇಳಿದರು. ಹಾಗೆ ಹೇಳಿದ್ದು ಅಲ್ಲಿದ್ದ ಪುರೋಹಿತರಿಗೂ ಸಹ ಮೆಚ್ಚುಗೆ ಆಯಿತು. ಆಮೇಲೆ ಸುಮಾರು ಮುಕ್ಕಾಲು ಗಂಟೆಗಳ ಕಾಲ ಸಭೆಯನ್ನು ಕುರಿತು ಮಾತನಾಡಿದರು. ಅಂದು ಅವರು ಆಡಿದಂತಹ ಮಾತುಗಳು ಇಂದಿಗೂ ಕೂಡ ಮರೆಯುವಂತದ್ದಲ್ಲ. ಹಾಗಿತ್ತು ಅವರ ಭಾಷಣ! ಆದರೆ ನಮಗೆ ಆವಾಗ ರೆಕಾರ್ಡಿಂಗ್ ವ್ಯವಸ್ಥೆ ಎಲ್ಲ ಇರಲಿಲ್ಲ. ಹಾಗಾಗಿ ಅವರಾಡಿದ ಮಾತುಗಳನ್ನು ದಾಖಲೆಯಾಗಿ ಉಳಿಸಿಕೊಳ್ಳಲು ಆಗಲಿಲ್ಲ. ಅಂದು ಅವರಾಡಿದ ಪ್ರತಿಯೊಂದು ಮಾತುಗಳೂ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಜನರಿಗೆ ಉತ್ತೇಜನ ಕೊಟ್ಟು, ಬೆನ್ನು ತಟ್ಟಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಏನು ಪರಿಶುದ್ಧತೆ ಇರಬೇಕು, ಬದ್ಧತೆ ಮತ್ತು ವಿಚಾರಶುದ್ಧಿ, ಪಾರದರ್ಶಕತೆ ಇರಬೇಕು ಎನ್ನುವುದನ್ನು ಒತ್ತಿ ಹೇಳಿದರು.

ಅವರು ಅಂದು ಆಡಿದಂತಹ ಕೆಲವು ಮಾತುಗಳು ನನಗೆ ಮುಂದಿನ ನನ್ನ ಸಾರ್ವಜನಿಕ ಜೀವನದಲ್ಲಿ ಮಾರ್ಗದರ್ಶಿಯಾದವು. ಆಗ ನನ್ನ ಸಾರ್ವಜನಿಕ ಜೀವನದ ಆರಂಭದ ದೆಸೆ. ನಾನು ಮುಂದೆ ತಾಲ್ಲೂಕು, ಜಿಲ್ಲೆ ಮಟ್ಟದಲ್ಲಿ ಹಲವು ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಭರಣಯ್ಯನವರು ಆವತ್ತು ಏನು ಮಾತುಗಳನ್ನ ಹೇಳಿದ್ದರು ಅದೇ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ, ನನ್ನ ಕೆಲಸಕ್ಕೆ ಸ್ಫೂರ್ತಿ ಆಗಿದೆ ಅಂದರೂ ತಪ್ಪಲ್ಲ.

ಆವತ್ತು ಅವರು ಶಿಕ್ಷಣದ ಮಹತ್ತ್ವ ಕುರಿತು ಆಡಿದ ಮಾತುಗಳು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುವ ವ್ಯಕ್ತಿ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದಂತಹ ಮಾತುಗಳಾಗಿದ್ದವು. ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಶಿಕ್ಷಣ ಎಷ್ಟು ಪ್ರಮುಖವಾದುದು ಎಂಬುದನ್ನ ಬಹಳ ಚೆನ್ನಾಗಿ ಹೇಳಿದರು ಮತ್ತು ಶಿಕ್ಷಣ ಒಂದೇ ಹೇಗೆ ಈ ದೇಶವನ್ನು ಸುಧಾರಿಸಲಿಕ್ಕೆ ಸಾಧ್ಯ ಎಂಬುದನ್ನ ಹೇಳಿ; ಎಂಥವರೂ ಕೂಡ ಶಿಕ್ಷಣದಿಂದ ಹೇಗೆ ಸುಸಂಸ್ಕೃತರಾಗುತ್ತಾರೆ ಎಂಬುದನ್ನು ವಿವರಿಸಿದ್ದರು. ಶಿಕ್ಷಣದಿಂದ ಸಮಾಜವೂ ಕೂಡ ಮುಂದೆಬರುತ್ತೆ, ಇಡೀ ಜನಾಂಗವೇ ಮುಂದೆ ಬರಲು ಸಹಾಯ ಆಗುತ್ತೆ ಎಂದು ಹಲವು ಉದಾಹರಣೆಗಳ ಸಹಿತ ತಿಳಿಸಿದ್ದರು. ಎಲ್ಲ ಕೆಲಸವನ್ನೂ ಬಿಟ್ಟು ಮೊದಲು ಶಿಕ್ಷಣದ ಕಡೆ ಗಮನ ಕೊಡಬೇಕು ಎಂಬುದನ್ನು ಅವರು ಒತ್ತಿ ಹೇಳಿದ್ದರು.


ಅದರಲ್ಲೂ ಪ್ರಾರಂಭಿಕ ಹಂತವಾದ ಪ್ರೈಮರಿ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ಹೆಚ್ಚಾಗಿ ತೆರೆಯಬೇಕೆಂಬುದು ಅವರ ನಿಲುವಾಗಿತ್ತು. ಇದರಿಂದ ಗ್ರಾಮೀಣ ಜೀವನ ಏಳಿಗೆ ಹೊಂದುತ್ತದೆ ಎಂಬುದು ಅವರ ಅನಿಸಿಕೆ. ಹೀಗಾಗಿ ಮೂಲ ಶಿಕ್ಷಣಕ್ಕೆ ಒತ್ತುಕೊಟ್ಟು ಮೂಲ ಸೌಕರ್ಯ ಒದಗಿಸಬೇಕು. ಒಂದಿಡೀ ತಾಲ್ಲೂಕೇ ಆ ಮಾದರಿಯಲ್ಲಿ ಕೆಲಸ ಮಾಡಬೇಕು ಅಂತ ಅವರು ಒತ್ತಾಸೆ ನೀಡಿದ್ದರು. ಅವರು ಏನು ಹೇಳಿದ್ದರು ಅವತ್ತು, ಅದೇ ಮುಂದೆ ನಾನು ಶಾಸಕನಾದಾಗಲೂ 2–3 ಮೈಲಿ ಒಳಗೆ ಪ್ರಾಥಮಿಕ ಶಾಲೆ, 4–5 ಮೈಲಿ ಒಳಗೆ ಮಾಧ್ಯಮಿಕ ಶಾಲೆ, ಹಾಗೇಯೇ ಅಷ್ಟರಲ್ಲೇ ಪ್ರೌಢಶಾಲೆಗಳು ಇರಬೇಕು ಎಂದು ಯೋಚನೆ ಮಾಡಿ ನಮ್ಮ ತಾಲ್ಲೂಕಿಗೆ ಅನೇಕ ಶಾಲೆಗಳನ್ನು ಮಂಜೂರು ಮಾಡಲು ಪ್ರೇರಣೆ ಆಯಿತು. ನಂತರ ಸಾಗರದಲ್ಲಿ ಕಾಲೇಜು ಸ್ಥಾಪನೆಗೆ ಕೆಲಸಮಾಡಲೂ ಕೂಡ ಸ್ಫೂರ್ತಿ ನೀಡಿತು. ಇವತ್ತು ನಮ್ಮ ತಾಲ್ಲೂಕಿನ ಮನೆಮನೆಯಲ್ಲೂ ಪದವೀಧರರಿದ್ದಾರೆ. ಶಿಕ್ಷಣದಿಂದ ಇಡೀ ತಾಲ್ಲೂಕು ಮುಂದೆ ಬರುತ್ತೆ ಅಂತ ಅವತ್ತು ಭರಣಯ್ಯನವರು ಏನು ಹೇಳಿದ್ದರು; ಅದರ ಪ್ರಯೋಜನ ನಮಗೆ ಇವತ್ತು ಕಂಡಿದೆ.

ಸಾಮಾನ್ಯವಾಗಿ ಒಂದು ವರ್ಷ – ಎರಡು ವರ್ಷಕ್ಕೆ ಜಿಲ್ಲಾಧಿಕಾರಿಗಳು ಬದಲಾಗುತ್ತಾರೆ. ಆದರೆ ಭರಣಯ್ಯನವರ ರೀತಿಯಲ್ಲಿ ನೆನಪಿನಲ್ಲುಳಿಯತಕ್ಕವರು ಒಂದೋ ಎರಡೋ ಜನ ಅಷ್ಟೇ! ಭರಣಯ್ಯನವರ ಹಾಗೆ ಸಾಮಾಜಿಕ ಕಳಕಳಿ ಇದ್ದು, ಕೆಲಸ ಮಾಡುವುದರಲ್ಲಿ ಭೇದ ಇಲ್ಲದೆ ಜನಕ್ಕೆ ಅದು ಸಲ್ಲಬೇಕು ಎನ್ನುವ ಉದ್ದೇಶದಿಂದ ಕೆಲಸ ಮಾಡಿದ ಇನ್ನೊಬ್ಬ ಅಧಿಕಾರಿಯನ್ನು ನಾನು ಈವರೆಗೆ ನೋಡಿಲ್ಲ. ಆ ವಿಷಯದಲ್ಲಿ ಭರಣಯ್ಯನವರಿಗೆ ಭರಣಯ್ಯನವರೇ ಸಾಟಿ ಎಂದರೂ ಅತಿಶಯೋಕ್ತಿ ಆಗಲಿಕ್ಕಿಲ್ಲ!

ಅಂಥ ಧೀಮಂತ ವ್ಯಕ್ತಿತ್ವದವರನ್ನು ನಮ್ಮ ವ್ಯವಸ್ಥೆ ಚುನಾವಣೆಗೆ ನಿಲ್ಲಿಸಿ ಸೋಲಿಸಿತು. ನಾನು ಒಬ್ಬ ಜನಪ್ರತಿನಿಧಿಯಾಗಿ ಹೇಳುವುದಾದರೆ, ಚುನಾವಣೆಯ ಸೋಲು – ಗೆಲುವಿಗೂ ಅವರ ವ್ಯಕ್ತಿತ್ವಕ್ಕೂ ಯಾವ ಸಂಬಂಧವೂ ಇಲ್ಲ. ವ್ಯಕ್ತಿತ್ವ ಚೆನ್ನಾಗಿದ್ದವರೆಲ್ಲ ಚುನಾವಣೆಯಲ್ಲಿ ಗೆಲ್ಲುತ್ತಾರೆ ಅಂತ ಹೇಳುವುದಕ್ಕೂ ಸಾಧ್ಯವಿಲ್ಲ. ಚುನಾವಣೆಯಲ್ಲಿ ಗೆಲ್ಲುವ ಗುಣಧರ್ಮಗಳೇ ಪ್ರತ್ಯೇಕ. ಅದನ್ನ ಅಳವಡಿಸಿಕೊಂಡರೆ ಗೆಲುವು ಸಾಧ್ಯವೇ ಹೊರತು ಬೇರೆಯವರಿಗೆ ಅದು ಸಾಧ್ಯವಿಲ್ಲ. ಒಂದು ಉದಾಹರಣೆ ಹೇಳಬೇಕು ಅಂದರೆ ಮಹಾ ವಿಚಾರವಾದಿಗಳಾಗಿದ್ದಂತಹ ಶಿವರಾಮ ಕಾರಂತರು, ಅಡಿಕೆ ಬೆಳೆಗಾರರಿಗೆ ನೆರವಾಗಿದ್ದಂತಹ ರಾಮಕೃಷ್ಣ ಹೆಗಡೆಯವರು, ಗೋಪಾಲಕೃಷ್ಣ ಅಡಿಗರು ಇವರೆಲ್ಲ ಚುನಾವಣೆಯಲ್ಲಿ ಸೋತ ವಿಚಾರ ನಮ್ಮ ಎದುರಿಗೇ ಇದೆ. ನಾನೂ ಕೂಡ ಚುನಾವಣೆಯಲ್ಲಿ ಸೋಲು ಗೆಲುವು ಎರಡನ್ನೂ ಅನುಭವಿಸಿದವನು. ಹಾಗಾಗಿ ಗೆದ್ದಾಕ್ಷಣ ಅವನು ಮಹಾ ಜನಬಲ ಇರುವವನು, ಪ್ರಾಮಾಣಿಕ ಅಂತಾಗಲಿ; ಸೋತಾಕ್ಷಣ ಅವನು ಏನೂ ಅಲ್ಲ ಅಂತಾಗಲೀ

ಅಲ್ಲ. ಅಂದರೆ ಚುನಾವಣೆಯ ಕಾಲದಲ್ಲಿ ಜನ ಮರುಳಾಗುವಂತಹ ವಿಚಾರಗಳೇ ಪ್ರತ್ಯೇಕ. ಒಂದು ಹೋಲಿಕೆ ಹೇಳಿದರೆ ಸ್ಪಷ್ಟವಾಗುತ್ತದೆ ನಿಮಗೆ – ಈ ದೀಪಾವಳಿ ಸಂದರ್ಭದಲ್ಲಿ ಜಾನುವಾರುಗಳಿಗೆ ಹೂವು –ಬಾಸಿಂಗ, ಗೆಜ್ಜೆ ಎಲ್ಲ ಹಾಕಿ ಅಲಂಕಾರ ಮಾಡಿ ಜಾಗಟೆ ಬಡಿದುಬಿಟ್ಟರೆ ಅದು ಎಂಥ ಸಾಧು ಸ್ವಭಾವದ್ದಾದರೂ ಕೂಡ ಗೊತ್ತು ಗುರಿ ಇಲ್ಲದೆ ಓಡುತ್ತೆ. ಹಾಗೆ ಚುನಾವಣೆಯಲ್ಲಿ ಜನರೂ ಕೂಡ ನಾನಾ ರೀತಿಯಲ್ಲಿ ಎಚ್ಚರ ತಪ್ಪಿ ಈ ಚುನಾವಣೆಗಳು ತಮ್ಮ ಮೇಲೆ, ತಮ್ಮ ಜನಾಂಗದ ಮೇಲೆ, ಆ ಪ್ರದೇಶದ ಮೇಲೆ ಯಾವ ಪರಿಣಾಮವನ್ನು ಬೀರುತ್ತವೆ ಅಂತ ವಿಚಾರ ಮಾಡುವ ವ್ಯವದಾನವನ್ನ ಕಳೆದುಕೊಂಡುಬಿಡುತ್ತಾರೆ. ಹಾಗೆ ವ್ಯವದಾನದಿಂದ ಮತ ನೀಡುವ ಸಂದರ್ಭ ಇನ್ನೂ ಬಂದಿಲ್ಲ ಅಂತಲೇ ಅನ್ನಿಸುತ್ತೆ ನನಗೆ.

ಹಾಗಾಗಿ ಇಂಥ ಘಟನೆಗಳು ನಡೆದು, ಧೀಮಂತರು, ವಿಚಾರ ಶುದ್ಧರಾದ ವ್ಯಕ್ತಿಗಳು ರಾಜಕೀಯದಿಂದ ವಿಮುಖರಾಗಬಾರದು ಅಂತಲೇ ನಮ್ಮ ರಾಜ್ಯಾಂಗದಲ್ಲಿ ಮೇಲ್ಮನೆ ಅಥವಾ ಹಿರಿಯರ ಸಂಸತ್ತಿಗೆ ಮೇಧಾವಿಗಳನ್ನ ಆಯ್ಕೆ ಮಾಡಿಕೊಳ್ಳುವ ಅವಕಾಶ ಇಟ್ಟುಕೊಂಡಿರಬಹುದು ಅಂತಲೂ ಅನ್ನಿಸುತ್ತೆ. ಇರಲಿ ಬಿಡಿ. ಇವತ್ತು ಅವರ ಸ್ಮರಣೆಗೆ ಒಂದು ಅವಕಾಶವಾದರು ನಿಜಕ್ಕೂ ಖುಷಿ ಸಂಗತಿ. ಪುಸ್ತಕದ ರೂಪದಲ್ಲಿ ಸಮಾಜಕ್ಕೆ ಪರಿಚಯಿಸುತ್ತಿರುವುದು ನಿಜಕ್ಕೂ ಅಭಿಮಾನದ ಸಂಗತಿ. ತಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿ ನಾಳಿನ ಸಮಾಜಕ್ಕೆ ಮಾದರಿ ಎನಿಸಿಕೊಂಡಿದ್ದಾರೆ. ಅವರು ಮಾಡಿದ ಕೆಲಸಗಳು ನಡೆದುಹೋದ ದಾರಿ ನಮ್ಮ ನಾಳಿನ ಪೀಳಿಗೆಗೆ ದೊರಕುವಂತಾಗಬೇಕು. ನಿಮ್ಮ ಕೆಲಸಕ್ಕೆ ಶುಭ ಹಾರೈಕೆಗಳು.



ಊರು ಕಟ್ಟಿದ ಊರುಗೋಲು

ಮರಿಯಪ್ಪ, ಹೊಸ ನಂಜಾಪುರ

ಮರಿಯಪ್ಪನವರು ಹೊಸ ನಂಜಾಪುರ ಗ್ರಾಮ ಕಟ್ಟುವಾಗ ಭರಣಯ್ಯನವರೊಂದಿಗೆ ಓಡಾಡಿದ್ದವರು. ಬಹಳ ಚಟುವಟಿಕೆಯಿಂದ ಕೆಲಸ ಮಾಡಿದಂತಹವರು. ಆದರೆ ಪಾರ್ಶ್ವವಾಯು ತಂದಿಟ್ಟ ಅನಾರೋಗ್ಯದಿಂದ ಆ ಬಗ್ಗೆ ಹೆಚ್ಚಿನ ವಿಷಯಗಳು ಮರೆತುಹೋಗಿವೆ. ಹಾಗಾಗಿ ಅಂದಿನ ಕೂಲಂಕಷ ವಿಷಯಗಳು ನಮಗೆ ದೊರೆಯಲಿಲ್ಲ. ಆದರೆ ಭರಣಯ್ಯನವರ ವ್ಯಕ್ತಿತ್ವದ ಚಿತ್ರಣ ಹಾಗೂ ಅವರು ಮಾಡಿದ ಉಪಕಾರ

ಮರಿಯಪ್ಪನವರ ಮನಸ್ಸಿನಿಂದ ಒಂದಷ್ಟೂ ಮರೆಯಾಗಿರಲಿಲ್ಲ. ತಮ್ಮ ನೆನಪಿನಲ್ಲಿದ್ದ ಸಂಗತಿಗಳನ್ನು ಹಂಚಿಕೊಂಡರು.

ಮರಿಯಪ್ಪನವರದು ಕೊಂಚ ಭಾವುಕ ಮನಸ್ಸು. ಭರಣಯ್ಯನವರ ವಿಷಯ ತೆಗೆದ ಕೂಡಲೇ ಗತಕಾಲದ ನೆನಪುಗಳಿಂದ ಭಾವುಕರಾಗಿ ಕಣ್ಣೀರು ತಂದುಕೊಂಡರು. ನಂತರ ಸಾವರಿಸಿಕೊಂಡು ಮಾತನಾಡಿದರು.

"ಈ ಊರು ಕಟ್ಟಿದವರೇ ನಾವು" ಎಂಬ ಹೆಮ್ಮೆಯ ನುಡಿಗಳಿಂದಲೇ ಮಾತು ಪ್ರಾರಂಭಿಸಿದರು ಮರಿಯಪ್ಪನವರು.

"ಭರಣಯ್ಯನವರ ಸಹಾಯವನ್ನು ತೆಗೆದುಕೊಂಡು ಇದನ್ನ ಊರು ಮಾಡಿಕೊಂಡೆವು. ಹಾಗೇ ಈ ಊರು ಮುಂದುವರೆಯಿತು. ಭರಣಯ್ಯನವರು ನಮ್ಮ ಜನಾಂಗಕ್ಕೆ ಬಹಳ ಸಹಾಯ ಮಾಡಿದ್ದಾರೆ. ನಮಗೆಲ್ಲ ಜಮೀನು ಮಾಡಿಕೊಟ್ಟಿದಾರೆ. ಎಲ್ಲರಿಗೂ ಒಂದೊಂದು ಎಕರೆ ಹೊಲ ಕೊಟ್ಟಿದ್ದಾರೆ. ಮನೆ ಕಟ್ಟಿಕೊಳ್ಳಲು ಜಾಗ ಕೊಟ್ಟಿದ್ದಾರೆ. ಈ ಊರಿನಲ್ಲಿ ನಮ್ಮವರು ಒಟ್ಟಿಗೆ ಇರಲಿ ಎಂದು ಅವರು ಆಸೆಪಟ್ಟಿದ್ದರು. ಅದರಂತೆ ನಮ್ಮವರೇ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದೇವೆ.

ನಾನು ವಿ.ಎಸ್.ಐ.ಎಲ್‌ನಲ್ಲಿದ್ದೆ. ಆವಾಗ ಅವರು ಅದರ ಸೆಕ್ರೆಟರಿ ಆಗಿದ್ದರು. ನಮ್ಮ ಜನಾಂಗದ ವಿದ್ಯಾವಂತರು ಯಾರ್‍ಯಾರು ಇದ್ದಾರೆ ಅಂತ ಹುಡುಕಿ ಕೆಲಸ ಕೊಡಿಸುತ್ತಿದ್ದರು. ಇಲ್ಲಿ ಚಿಕ್ಕಯ್ಯ ಅಂತ ಇದ್ದರು. ಅವರು ನಾನು ಭರಣಯ್ಯನವರ ಬಳಿಗೆ ಹೋಗುತ್ತಿದ್ದೆವು. ಜೊತೆಗೆ ನಮ್ಮ ಜನರಲ್ಲಿ ಓದಿದ ಮಕ್ಕಳ ವಿವರಗಳನ್ನ ಪಟ್ಟಿಮಾಡಿಕೊಂಡು ಕೊಡುತ್ತಿದ್ದೆವು. ಆಗ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮಾಡಿದವರಿಗೆಲ್ಲ ಕೆಲಸ ಕೊಡುತ್ತಿದ್ದರು. ಕೆಲಸ ತೆಗೆದುಕೊಂಡವರ ಹೆಸರುಗಳು ನನಗೆ ಈಗ ನೆನಪಿಲ್ಲ. ಕಾರ್ಖಾನೆಯಲ್ಲೂ ಬೇಕಾದಷ್ಟು ಕೆಲಸ ಕೊಡಿಸಿದ್ದಾರೆ. ಇದರಿಂದ ಅವರ ಕಾಲದಲ್ಲಿ ನಮ್ಮ ಜನಾಂಗಕ್ಕೆ ಹಾಗೂ ನಮಗೆಲ್ಲ ಬೇಕಾದಷ್ಟು ಅನುಕೂಲ ಆಯಿತು.

ಒಂದೇ ಮಾತಿನಲ್ಲಿ ಹೇಳಬೇಕು ಅಂದರೆ ಅವರ ಸಮಕ್ಕೆ ಇನ್ನೂ ಯಾರೂ ಹುಟ್ಟಿಲ್ಲ. ಇನ್ನು ಹುಟ್ಟಿದರೆ ಹುಟ್ಟಬೇಕು ಅಷ್ಟೆ. ಅಂಥ ವ್ಯಕ್ತಿ ಅವರು. ನಮ್ಮ ಜನಾಂಗದವರಿಗಾಗಿ ಹೊಡೆದಾಡಿದರು. ನಮ್ಮ ಜನಾಂಗವನ್ನು ಮೇಲೆ ತಂದಂತಹ ವ್ಯಕ್ತಿ ಅವರು. ನಮ್ಮವರಿಗೆ ಕುಳಿತುಕೊಳ್ಳಲು ಜಾಗ ಇರಲಿಲ್ಲ. ದೂರ ಓಡಿಸುತ್ತಿದ್ದರು. ನಾನು ವೈಯಕ್ತಿಕವಾಗಿ ಅಂತಹ ಅವಮಾನಗಳನ್ನು ಅನುಭವಿಸಿದ್ದೇನೆ. ಅದನ್ನೆಲ್ಲ ಬಂದ್ ಮಾಡಿ ಎಲ್ಲರ ಸಮಕ್ಕೆ ನಾವೂ ಕುಳಿತುಕೊಳ್ಳಬಹುದು ಹಾಗೆ ಮಾಡಿದರು. ಡಿ.ಸಿ. ಆಗಿದ್ದರಿಂದ ಅವರ ಕೈಯಲ್ಲಿ ಅಧಿಕಾರ ಇತ್ತು. ಜೊತೆಗೆ ನಮ್ಮ ಜನಗಳ ಬವಣೆ

ಕೂಡ ಅರಿತವರಾಗಿದ್ದರು. ಹೀಗೆ ನಮಗೆ ನಾನಾ ಬಗೆಯಲ್ಲಿ ದಿಕ್ಕಾಗಿದ್ದು ಸಲುಹಿದರು. ಅಂಬೇಡ್ಕರ್ ಅಲ್ಲಿ ದೇಶದ ಮಟ್ಟದಲ್ಲಿ ಹೇಳಿದ್ದನ್ನ ಇವರು ತಮ್ಮ ಜೀವನದಲ್ಲಿ, ಇಲ್ಲಿ ಕಾರ್ಯರೂಪಕ್ಕೆ ತಂದರು.

ಅಷ್ಟು ದೊಡ್ಡ ಅಧಿಕಾರಿಯಾಗಿದ್ದರೂ ನಮ್ಮಂತ ಸಾಮಾನ್ಯ ಜನರ ಜೊತೆಯಲ್ಲಿ ಬೆರೆತು ಕೆಲಸ ಮಾಡಿದರು. ಒಂದು ಸಲ ಭೇಟಿ ಆದಮೇಲೆ ಯಾವುದೇ ಅಳುಕಿಲ್ಲದೆ ಅವರ ಮನೆಗೆ ಹೋಗಿಬಂದು ಮಾಡುತ್ತಿದ್ದೆವು. ಅವರನ್ನ ನೋಡಿದರೆ ಸಂತೋಷ ಆಗುತ್ತಿತ್ತು. ಎಂಥ ವ್ಯಕ್ತಿ ಇಲ್ಲಿ ಬಂದು ನಮಗೆ ಸಹಾಯ ಮಾಡುತ್ತಿದ್ದಾರಲ್ಲ ಅಂತ ಹೆಮ್ಮೆ ಆಗುತ್ತಿತು, ನಮಗೆ. ಏನು ಸಹಾಯ ಬೇಕಾದರೂ ಮಾಡಿಕೊಡೋರು ಆ ಮನುಷ್ಯ. ಭರಣಯ್ಯನವರ ಮಕ್ಕಳೂ ನಮ್ಮನ್ನ ಪ್ರೀತಿಯಿಂದ ಕಾಣೋರು. ನಾವು ಹೋದಾಗಲೆಲ್ಲ ಕಾಫಿ, ತಿಂಡಿ ಕೊಡದೆ ಕಳುಹಿಸುತ್ತಿರಲಿಲ್ಲ.

ಹೀಗನ್ನುತ್ತ ಮರಿಯಪ್ಪನವರು ತಮ್ಮ ಜೀವನದ ಆ ಸುದಿನಗಳನ್ನು ಮತ್ತೊಮ್ಮೆ ನೆನೆದು ಭಾವುಕರಾದರು. ದಿಕ್ಕು ದೆಸೆಯಂತೆ ಕಾಪಾಡಿದ ಭರಣಯ್ಯನವರನ್ನು ಕಣ್ಣುಮುಂದೆ ತಂದುಕೊಂಡು ಸಂಭ್ರಮಿಸಿದರು. ಮತ್ತೆ ಭರಣಯ್ಯನವರ ಬಗ್ಗೆ ಏನನ್ನೋ ನೆನಪಿಸಿಕೊಂಡು ಮಾತನಾಡಲಾರಂಭಿಸಿದರು:

"ಎಲ್ಲೋ ಹುಟ್ಟಿಬೆಳೆದ ಅವರು; ಇಲ್ಲಿ ಎಲ್ಲೋ ಇರುವ ನಾವು – ಆ ದೇವರೆ ಇವರನ್ನು ನಮಗಾಗಿ ಕರೆತಂದು ಬಿಟ್ಟಿರಬಹುದೆನ್ನಿಸುತ್ತಿತು ನಮಗೆ.! ಅಂಥ ಕಾಲ ಮತ್ತೆ ಬರುತ್ತಾ? ಖಂಡಿತ ಇಲ್ಲಾ ಅನ್ನಿಸುತ್ತೆ. ನಮ್ಮವರು ಬಂದರೆ ಏನೋ ನೆಮ್ಮದಿ ಎಲ್ಲಾ ಕಾಲಕ್ಕೂ.

ಅವರ ಅಳಿಯ ಸಿದ್ದಯ್ಯ ಅಂತ ಡಿ.ಸಿ. ಆಗಿ ಬಂದರು. ಅವರನ್ನು ಬಿಟ್ಟರೆ ಭರಣಯ್ಯನವರಂತ ಅಧಿಕಾರಿಗಳು ಆಮೇಲೆ ಯಾರೂ ಬರಲಿಲ್ಲ. ಸಿದ್ದಯ್ಯನವರು ನಮಗೆ ಬಹಳ ಸಹಾಯ ಮಾಡಿದರು. ನಮಗೆ ಕರೆಂಟು, ರಸ್ತೆ ಎಲ್ಲ ಮಾಡಿಕೊಟ್ಟರು ಸಿದ್ದಯ್ಯನವರು. ಅವರ ಮನೆಗೂ ನಾವು ಹೋಗುತ್ತಿದ್ದೆವು. ಅವರೂ ನಮ್ಮನ್ನ ಕಂಡರೆ ಪ್ರೀತಿ – ವಿಶ್ವಾಸ ತೋರಿಸುತ್ತಿದ್ದರು. ನಂತರ ಅವರಿಗೆ ವರ್ಗವಾಯಿತು. ಪುನಃ ಯಥಾಸ್ಥಿತಿ ಮುಂದುವರೆದಿದೆ.

ಅವರು ಕೊಳ್ಳೇಗಾಲದಲ್ಲಿ ಚುನಾವಣೆಯ ವಿಚಾರದಲ್ಲೂ ಅವರಿಗೆ ಮೋಸವಾಯಿತು. ಅವರು ನಿಂತಿದ್ದು ಕೇಳಿದೀವಿ. ನಾವು ಹೋಗಲು ಆಗಲಿಲ್ಲ ಆ ಸಮಯದಲ್ಲಿ. ಇಲ್ಲಿಂದಲೇ ನಮ್ಮ ಕೈಲಾದ ಸೇವೆ ಮಾಡಿದೆವು. ಆದರೆ ಅವರನ್ನ ಸೋಲಿಸಿದ್ದು ತಪ್ಪು. ಅವರು ಆರಿಸಿ ತರಬೇಕಾಗಿತ್ತು. ತಂದಿದ್ದರೆ ನಮ್ಮ ಜನಾಂಗವನ್ನು ಬಹಳ ಚೆನ್ನಾಗಿ ಉದ್ಧಾರ

ಮಾಡುತ್ತಿದ್ದರು" ಹೀಗೆ ಭರಣಯ್ಯನವರ ಸೋಲಿಗೆ ಖೇದ ವ್ಯಕ್ತಪಡಿಸುತ್ತಲೇ ಮರಿಯಪ್ಪನವರು ಪುನಃ ಭಾವುಕರಾದರು. ಅಂದು ಭರಣಯ್ಯನವರಿಗೆ ಆಗಿರಬಹುದಾದ ನೋವನ್ನು ಕಣ್ಣೆದುರು ತಂದುಕೊಂಡು ಅಕ್ಷರಶಃ ಅತ್ತೇಬಿಟ್ಟರು. ಅವರ ಅಭಿಮಾನವನ್ನು ಕಂಡು ಮಾತೇ ಹೊರಡಲಿಲ್ಲ. ವಿದಾಯವನ್ನಷ್ಟೆ ಹೇಳಿ ಬಂದೆವು".

ಭೂದಾನಿ

ಕೆ. ಸಿದ್ದರಾಜು, ಭದ್ರಾವತಿ

ಆರ್. ಭರಣಯ್ಯನವರು ಭದ್ರಾವತಿ ತಾಲ್ಲೂಕಿನಲ್ಲಿ ಕಟ್ಟಿದ ಪ್ರಮುಖ ಗ್ರಾಮವೆಂದರೆ ಸಂಜೀವನಗರ. ಇಲ್ಲೂ ಕೂಡ ಭೂಮಿ, ಮನೆ ಇಲ್ಲದೆ ಫ್ಯಾಕ್ಟರಿ ಕೆಲಸಗಾರರಾಗಿದ್ದ ದಲಿತ ಜನಾಂಗದವರಿಗೆ ಜಮೀನು – ಸೂರು ಮಾಡಿಕೊಟ್ಟವರು ಭರಣಯ್ಯನವರು. ಆವತ್ತು ಆರ್. ಭರಣಯ್ಯನವರೊಂದಿಗೆ ಖುದ್ದು ಓಡಾಡಿದ ಊರಿನ ಹಿರಿಯರಲ್ಲಿ ಹೆಚ್ಚಿನವರು ತೀರಿಹೋಗಿದ್ದಾರೆ. ಉಳಿದವರಲ್ಲಿ ಕೆ. ಸಿದ್ದರಾಜು ಮತ್ತು ಚೆಲುವಯ್ಯ ಎಂಬ ಇಬ್ಬರು ವ್ಯಕ್ತಿಗಳು ಮಾತ್ರ. ಆ ಪೈಕಿ ಸಿದ್ದರಾಜು ಅವರು ಭರಣಯ್ಯನವರೊಂದಿಗೆ ಸ್ವಲ್ಪ ಹೆಚ್ಚಿಗೆ ಅನ್ನಿಸುವಂತಹ ಒಡನಾಟ ಇದ್ದವರು. ಅವರು ಭರಣಯ್ಯನವರ ಸಾಧನೆ – ವ್ಯಕ್ತಿತ್ವಗಳನ್ನು ಕುರಿತು ಹೇಳಿದ್ದು ಇದು.

ವಿ.ಎಸ್.ಐ.ಎಲ್. ಉದ್ಯೋಗಿಯಾಗಿದ್ದ ಸಿದ್ದರಾಜು ಅವರಿಗೆ ಈಗ 87 ವರ್ಷ. ವೃದ್ಧಾಪ್ಯ ತಂದಿಟ್ಟ ಮರೆವು ಭರಣಯ್ಯನವರ ಕುರಿತಾಗಿ ಬಹಳಷ್ಟು ವಿಷಯಗಳನ್ನು ಅವರ ನೆನಪಿನಿಂದ ಅಳಿಸಿಹಾಕಿದೆ. ಆದರೂ ನೆನಪಲ್ಲಿರುವುದಷ್ಟನ್ನು ಹೇಳಿದರು.

"ನಾನು ವಿ.ಎಸ್.ಐ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದಾಗ ಭರಣಯ್ಯನವರು ಅಲ್ಲಿ ಚೇರ್‌ಮನ್ ಆಗಿದ್ದರು. ನಂತರ ಡಿ.ಸಿ ಆದರು. ಅಷ್ಟರಲ್ಲಿ ನಾವು ಈ ಜಾಗಕ್ಕೆ ಅಪ್ಲಿಕೇಷನ್ ಹಾಕಿಕೊಂಡಿದ್ದೆವು. ಈ ಜಾಗ ಎಲ್ಲ ಗೋಮಾಳ ಆಗಿತ್ತು ಆಗ. 'ನಾವು 54 ಸಂಸಾರದವರು ಇಂತಿಷ್ಟು ಜನ ಇದೀವಿ. ನಮಗೆ ಜಮೀನು ಮಂಜೂರು ಮಾಡಿಸಿಕೊಡಬೇಕು' ಅಂತ ಕೇಳಿಕೊಂಡೆವು. ಆಗ ಅವರು ತಕ್ಷಣ ಅದನ್ನು ಗ್ರಾಂಟ್ ಮಾಡಿಕೊಟ್ಟರು.


ನಾವು ಇಲ್ಲಿಗೆ ಬಂದಿದ್ದು ಮಂಡ್ಯ ಜಿಲ್ಲೆ ಪಾಂಡವಪುರದ ಕಾಮನಾಯಕನಹಳ್ಳಿಯಿಂದ. ತಂದೆ ತಾಯಿ ತೀರಿಕೊಂಡಿದ್ದರು. ಇಲ್ಲಿ ನಮ್ಮ ಮಾವ ಜಕ್ಕನಹಳ್ಳಿ ತೋಪಯ್ಯ ಅಂತ ಒಬ್ಬರಿದ್ದರು. ಭದ್ರಾವತಿ ದೊಡ್ಡಬಂಗಲೆಯಲ್ಲಿ ಕೆಲಸ ಮಾಡಿಕೊಂಡಿದ್ದರು. ಅವರ

ಬೆಂಬಲದಲ್ಲಿ ನಾವು ಇಲ್ಲಿಗೆ ಬಂದೆವು. ನಾವು 1946ರಲ್ಲಿ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡೆವು 51–52ರಲ್ಲಿ ನಮಗೆ ಸಾಗುವಳಿಗೆ ಜಮೀನು ಸಿಕ್ಕಿತು. ಮುಂಚೆ ಇದೆಲ್ಲ ಕಾಡು. ಆವಾಗಿನಿಂದ ನಾವು ಕಾಡು ಕಡಿದು ಜಮೀನು ಮಾಡಿಕೊಂಡು ಬಂದೆವು. ಆಗ ನಮಗೆ 54 ಸಂಸಾರಕ್ಕೆ ಐದ್ಯೆದು ಎಕರೆಯಂತೆ 1. ವೀರಾಪುರದ ಗಡಿ 2. ಕೋಮಾರನಹಳ್ಳಿ ಗಡಿ. 3. ಗುಡ್ಡದನೇರಲಕೆರೆ ಗಡಿ ಅಂತ 3 ಸರ್ವೆ ನಂಬರ್‌ಗಳಲ್ಲಿ 54 ಸಂಸಾರಕ್ಕೆ ಒಟ್ಟು 265 ಎಕರೆ ಜಮೀನನ್ನು ಮಂಜೂರು ಮಾಡಿಕೊಟ್ಟರು. 54 ಜನಕ್ಕೆ ಒಂದೊಂದು ನೇಗಿಲು, 54 ಜೊತೆ ಎತ್ತು ಎಲ್ಲವನ್ನೂ ಇಲ್ಲೇ ಜಾತ್ರೆಯಲ್ಲಿ ಕೊಡಿಸಿಕೊಟ್ಟರು. ಆಮೇಲೆ 54 ತೆಂಗಿನ ಸಸಿ, ಮನೆ ಕಟ್ಟಿಕೊಳ್ಳಲು ಅನುಕೂಲ ಆಗಲಿ ಅಂತ ಎಲ್ಲರಿಗೂ 300 ರೂಪಾಯಿ 'ತಕ್ಕಾವಿ ಸಾಲ' ಅಂತ ತಾಲ್ಲೂಕು ಆಫೀಸಿನಲ್ಲಿ ಕೊಡಿಸಿದರು.

ಸಂಜೀವಯ್ಯನವರು ಮಂತ್ರಿ ಆಗಿದ್ದರಲ್ಲ. ಭರಣಯ್ಯನವರೂ ಆಗಲೇ ಡಿ.ಸಿ. ಆಗಿದ್ದರೋ ಏನೋ ನೆನಪಿಲ್ಲ ಸರಿಯಾಗಿ. ಒಮ್ಮೆ ಸಂಜೀವಯ್ಯನವರು ಶಿವಮೊಗ್ಗಕ್ಕೆ ಟೂರ್ ಬಂದಿದ್ದರು. ಆಗ ನಾವು ಅವರನ್ನು ಇಲ್ಲಿಗೆ ಕರೆದುಕೊಂಡು ಬಂದೆವು. ಊರಿಗೂ ಅವರ ಹೆಸರೇ ಇಟ್ಟುಕೊಂಡೆವು. ಒಂದೇ ಮಾತಿನಲ್ಲಿ ಹೇಳುವುದಾದರೆ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಸಹಾಯ ಮಾಡಿದ್ದಾರೆ ನಮಗೆ. ಅಂತದ್ದರಲ್ಲೂ ಅವರಿಗೆ ಮೋಸ ಮಾಡಿದವರೂ ಇದ್ದಾರೆ. ಆದರೂ ಅವರು ಬೇಸರ ಮಾಡಿಕೊಳ್ಳುತ್ತಿರಲಿಲ್ಲ. ಅವರ ಕೈಯಿಂದ ಆಗುವ ಕೆಲಸಕ್ಕೆ ಯಾರ ಶಿಫಾರಸ್ಸಿಗೂ ಕಾಯುತ್ತಿರಲಿಲ್ಲ. ತಕ್ಷಣ ಮಾಡಿಕೊಡುತ್ತಿದ್ದರು. ಬಹಳ ಒಳ್ಳೇ ಮನುಷ್ಯ. ನಮ್ಮ ಮನೆಗೆ ಬಂದಿದ್ದರು. ಅವರು ಕೊಟ್ಟ ತೆಂಗಿನ ಸಸಿಗಳು ಫಲ ಬಿಟ್ಟಾಗ ಅವರಿಗೆ ಕೊಟ್ಟಿದ್ದೆವು. ಎಳನೀರು ಕುಡಿದು ತುಂಬಾ ಸಂತೋಷಪಟ್ಟಿದ್ದರು. ಈಗಿನವರಿಗೆ ಹೋಲಿಸಿಕೊಂಡರೆ ಅವರು ದೇವರು ಅಂತಲೇ ಹೇಳಬಹುದು. ನಮ್ಮನ್ನೆಲ್ಲ ಮುಂದೆ ತರಬೇಕು ಅಂತ ಅಪಾರ ಕನಸು ಕಟ್ಟಿದ್ದ ಏಕೈಕ ಅಧಿಕಾರಿ ಅವರು. ನಮ್ಮ ಜನಕ್ಕೆ ಎಲ್ಲ ಕಡೆ ಕಾಲೋನಿ ಮಾಡಿದ್ದಾರೆ. ನಮಗೆ ಸೂರು ಅಂತ ಆಗಿದ್ದೇ ಭರಣಯ್ಯನವರು ಬಂದಮೇಲೆ. ಈಗಿನ ಅಧಿಕಾರಿಗಳಲ್ಲಿ ಅಂತಹ ಮುತುವರ್ಜಿಯನ್ನು ಕಾಣೆ!

ಭರಣಯ್ಯನವರಿಗೂ ಎಷ್ಟೊಂದು ಅನ್ಯಾಯ ಆಯಿತು ಚುನಾವಣೆಗೆ ಅಂತ ನಿಂತಾಗ. ನಮ್ಮ ಜನ ಹಾಗೆ ಮಾಡಬಾರದಾಗಿತ್ತು. ಮೊದಲು ಯಾವ ಮಟ್ಟದಲ್ಲಿ ಇದ್ದೆವು ನಾವು. ನಮಗೆ ಇಲ್ಲಿ ಕರಟದಲ್ಲಿ ಕಾಫಿ ಕೊಡುತ್ತಿದ್ದರು. ಮನೆ ಹತ್ತಿರ ಸೇರಿಸುತ್ತಿರಲಿಲ್ಲ. ಹೋಟೆಲ್‌ಗೆ ಹೋದರೂ ನಾವು ಕುಡಿದ ಲೋಟವನ್ನು ನಾವೇ ತೊಳೆದಿಡಬೇಕಿತ್ತು. ನಮಗೆ ಯಾರೂ ಹೇರ್‌ಕಟಿಂಗ್ ಮಾಡುತ್ತಿರಲಿಲ್ಲ. ಹಾಗಿರುವಾಗ

ಭರಣಯ್ಯನಂತವರು ನಮ್ಮ ಬಳಿ ಬಂದು ಒಂದು ಊರು ಕಟ್ಟುವುದಕ್ಕೆ ಸಹಾಯಮಾಡಿದರು ಅಂದರೆ ಸಾಮಾನ್ಯವೇ!? ಆಮೇಲೆ ಅವರ ನಂತರ ಈವರೆಗೆ ನಮ್ಮ ಜನಾಂಗದಲ್ಲಿ ಅಂತಹ ಅಧಿಕಾರಿಯನ್ನು ನಾನು ನೋಡಿಲ್ಲ. ಅಂಥ ಮಹಾನ್ ವ್ಯಕ್ತಿಯ ಬಗ್ಗೆ ನೀವು ದಾಖಲೆ ಮಾಡುತ್ತಿರುವುದು ನಿಜಕ್ಕೂ ಶ್ರೇಷ್ಠವಾದ ಕೆಲಸ. ಈಗಲಾದರೂ ಇಂತಹ ಒಳ್ಳೆಯ ಕೆಲಸ ಆಗುತ್ತಿದೆಯಲ್ಲ! ಅವರು ನೆಡೆದಂತಹ ಹಾದಿ ನಾಲ್ಕು ಜನರು ಅನುಸರಿಸುವಂತದ್ದು. ಇಂದಿನ ಪೀಳಿಗೆಗೆ ಅಂತಹ ವ್ಯಕ್ತಿಗಳ ಆದರ್ಶಬೇಕು. ಅವರ ವ್ಯಕ್ತಿತ್ವ, ಸಾಧನೆಗಳು ಎಲ್ಲ ಪರಿಚಯ ಆಗಬೇಕು. ಇಂದಿನ ಜನಾಂಗಕ್ಕೆ ಭರಣಯ್ಯನಂತವರು ರೋಲ್‌ಮಾಡೆಲ್‌ಗಳಾಗಬೇಕು. ಆವಾಗ ಸಮಾಜ ಮುಂದುವರೆಯುತ್ತೆ.



ಜನಮುಖಿ ಅಧಿಕಾರಿ

ಚೆಲುವಯ್ಯ, ಸಂಜೀವನಗರ

ಚೆಲುವಯ್ಯನವರು ಸುಮಾರು 68 ವರ್ಷ ವಯಸ್ಸಿನ ವ್ಯಕ್ತಿ. ಭರಣಯ್ಯನವರನ್ನು ನೋಡಿ ಬಲ್ಲ ಸಂಜೀವನಗರದ ಎರಡನೆಯ ವ್ಯಕ್ತಿ. ವಯೋಸಹಜವಾದ ಮರೆವಿನಿಂದಾಗಿ ಭರಣಯ್ಯನವರ ಕುರಿತಾಗಿ ಸಾಮಾನ್ಯ ಮಾಹಿತಿ ಬಿಟ್ಟರೆ ವಿಶೇಷವಾಗಿ ಹೆಚ್ಚಿನದೇನೂ ಲಭಿಸಲಿಲ್ಲ. ಸಿಕ್ಕಿದ್ದು ಈ ಕೆಳಗಿನ ಸಂಕ್ಷಿಪ್ತ ಮಾಹಿತಿ ಮಾತ್ರ.

"ನಾವು ಮೊದಲು ವಿ.ಎಸ್.ಐ.ಎಲ್.ನಲ್ಲಿದ್ದೆವು. ಭೂಮಿ, ಜಮೀನು ಏನೂ ಇರಲಿಲ್ಲ. ಭರಣಯ್ಯನವರೇ ಮಾಡಿಕೊಟ್ಟಿದ್ದು ಇದೆಲ್ಲ. ಅವರನ್ನು ನಾನು ನೋಡಿದ್ದು 1952–53ರಲ್ಲಿ ಇರಬೇಕು. ನಮಗೆ ಭೂಮಿ ಕೊಟ್ಟು ಒಂದು ಪ್ರತ್ಯೇಕ ಕಾಲೋನಿಯನ್ನೇ ಮಾಡಿಕೊಟ್ಟರು. ಸ್ಮಶಾನಕ್ಕೆ ಅಂತ ಐದು ಎಕರೆ ಭೂಮಿಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಟ್ಟರು. ಈ ಪ್ರದೇಶವನ್ನೆಲ್ಲ ಅಭಿವೃದ್ಧಿ ಮಾಡಿದವರು ಅವರೇ. ಯಾರಾದರೂ ವಿದ್ಯಾವಂತರು ಕೆಲಸಬೇಕು ಅಂತ ಹೋದರೆ ಕೆಲಸ ಕೊಡಿಸುತ್ತಿದ್ದರು. ಯಾರ್‍ಯಾರಿಗೆ ಕೊಡಿಸಿದ್ದಾರೆ ಅಂತ ವಿವರ ನೆನಪಿಲ್ಲ. ನಮ್ಮ ಮುಖಂಡರು ಬಿ. ನೀಲಪ್ಪ ಅಂತ ಇದ್ದರು. ಏನಾದರೂ ಕೆಲಸ ಆಗಬೇಕಾದರೆ ಅವರು ನಮ್ಮನ್ನೆಲ್ಲರನ್ನೂ ಸಾಹೇಬರ ಹತ್ತಿರ ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಬಹಳ ಚೆನ್ನಾಗಿ ಒಡನಾಟ ಇತ್ತು ಭರಣಯ್ಯನವರೊಂದಿಗೆ. ಸಾಹೇಬರು ನಮ್ಮೂರಿಗೂ ಎಷ್ಟೋ ಸಲ ಬಂದಿದ್ದಾರೆ. ನಮ್ಮ ಯಾವುದೇ ಸಮಸ್ಯೆ ಹೇಳಿದರೂ ಕೇಳಿಸಿಕೊಂಡು ತಕ್ಷಣ ಪರಿಹಾರ ಕೊಡಿಸುತ್ತಿದ್ದರು.

ಬಹಳ ಒಳ್ಳೆಯ ವ್ಯಕ್ತಿ. ಯಾವುದಕ್ಕೂ ಹೆದರದಹಾಗೆ ಕೆಲಸ ಮಾಡಿಕೊಡುತ್ತಿದ್ದಂತಹ ಜನ ಅವರು. ವೈಯಕ್ತಿಕವಾಗಿ ಅವರಿವರನ್ನು ಕರೆದುಕೊಂಡುಹೋಗಬೇಕು ಅಂತೆಲ್ಲ ಇರಲಿಲ್ಲ. ನೇರವಾಗಿ ಅವರನ್ನೇ ಭೇಟಿ ಮಾಡಬಹುದಿತ್ತು. ಯಾರ ಶಿಫಾರಸ್ಸೂ ಬೇಕಿರಲಿಲ್ಲ. ನಾಳೆ ಬನ್ನಿ, ನಾಡಿದ್ದು ಬನ್ನಿ ಅಂತೆಲ್ಲ ಹೇಳುತ್ತಿರಲಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ 'ಈ ಕೆಲಸ ಆಗಬೇಕು ಮಾಡಿಕೊಡಿ' ಅಂತ ಹೇಳಿಬಿಡುತ್ತಿದ್ದರು.

ಈಗ ಅಂತಹ ಆಫೀಸರ್ಸ್‌ಗಳನ್ನು ನೋಡುವುದು ಕಷ್ಟ. ನಾವು ಎಷ್ಟೇ ಹೇಳಿದರೂ ಅಷ್ಟೇ. ಆವಾಗ ಈವಾಗ ಅಂತ ಹೇಳುತ್ತಾರೆ ಹೊರತು ಕೆಲಸ ಮಾಡಿಕೊಡುವುದಿಲ್ಲ. ಭರಣಯ್ಯನವರಂತಹ ವ್ಯಕ್ತಿ ಈಗ ಸಿಗುವುದಿಲ್ಲ. ಅಂತಹ ಮೇರು ವ್ಯಕ್ತಿತ್ವದ ಮನುಷ್ಯ ಅವರು. ಅವರ ಜೊತೆ ಸ್ವಲ್ಪ ಕಾಲವಾದರೂ ಒಡನಾಟ ಮಾಡಿದ್ದೆವಲ್ಲ; ನಾವು ಪುಣ್ಯವಂತರು ಅಂತ ಈಗ ಹೆಮ್ಮೆ ಆಗುತ್ತೆ ನಮಗೆ."



ನಮಗೆ ಅವರೇ ಮಾರ್ಗದರ್ಶಿ

ಹುಚ್ಚಯ್ಯ – ಭದ್ರಾವತಿ

ನಂಜಾಪುರ ಮತ್ತು ಸಂಜೀವನಗರದ ಹಿರಿಯರನ್ನು ಮಾತನಾಡಿಸಿದ ನಂತರ ಭರಣಯ್ಯನವರ ಕೆಲಸ ಕಾರ್ಯಗಳನ್ನು ಬಲ್ಲ, ನಂಜಾಪುರ, ಸಂಜೀವನಗರ ಗ್ರಾಮಗಳನ್ನು ಕಟ್ಟಿದ ವಿಚಾರವನ್ನು ತಿಳಿದಿದ್ದ ಮತ್ತೊಬ್ಬ ವ್ಯಕ್ತಿ ಭದ್ರಾವತಿಯಲ್ಲಿ ಇರುವ ವಿಷಯ ತಿಳಿಯಿತು. ಅವರು ಶ್ರೀ ಹುಚ್ಚಯ್ಯನವರು. ಇವರ ಮೂಲ ಊರು ಮಂಡ್ಯ ಜಿಲ್ಲೆಯ ನಾಗಮಂಗಲ. ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಪಡೆದು ವಿ.ಎಸ್.ಐ.ಎಲ್.ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಹುಚ್ಚಯ್ಯನವರು ವಿ.ಎಸ್.ಐ.ಎಲ್.ನಲ್ಲಿ ಸೇವೆಗೆ ಸೇರುವ ಸಂದರ್ಭದಲ್ಲಿ ತೊಂದರೆ ಆದಾಗ ಆರ್. ಭರಣಯ್ಯನವರು ಅದನ್ನು ನಿವಾರಿಸಿಕೊಟ್ಟರು. ತದನಂತರದಲ್ಲೂ ಹುಚ್ಚಯ್ಯನವರು ಸಂಘ – ಸಂಸ್ಥೆಗಳಲ್ಲಿ ತೊಡಗಿಕೊಂಡು ಭರಣಯ್ಯನವರೊಂದಿಗೆ ಒಡನಾಟ ಹೊಂದಿದ್ದರು. ಇವರು ಭರಣಯ್ಯನವರ ವ್ಯಕ್ತಿತ್ವ, ವಿಚಾರಗಳ ಜೊತೆಗೆ ಇಡೀ ಜಿಲ್ಲೆಗೆ ಅವರು ಮಾಡಿದ ಕೆಲಸಕಾರ್ಯಗಳ ವಿಷಯವನ್ನು ಹಂಚಿಕೊಂಡಿದ್ದು ಹೀಗೆ;

"ನಾನು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮಾಡಿ ವಿ.ಐ.ಎಸ್.ಎಲ್.ನಲ್ಲಿ ಅಪ್ರೆಂಟಿಸ್ ಆಗಿ ಕೆಲಸಕ್ಕೆ ಸೇರಿಕೊಂಡೆ. ಅದು ದಿನಗೂಲಿ

ಲೆಕ್ಕದಲ್ಲಿ. ಆವಾಗ ಬಹಳ ತೊಂದರೆ ಆಯಿತು. ಆಗ ಶ್ರೀ ರಂಗಸ್ವಾಮಿಯವರು 'ಫೋರ್‌ಮನ್ ಹುದ್ದೆಗೆ ಅವಕಾಶ ಸಿಗುತ್ತೆ. ಟೆಕ್ನಿಕಲ್ ಮ್ಯಾನ್ ಆಗಿದ್ದೀಯ ಯಾಕೆ ಪ್ರಯತ್ನ ಮಾಡಬಾರದು?' ಅಂತ ಹೇಳಿದರು.

ಇಲ್ಲಿ ನಮ್ಮ ಕಾರ್ಖಾನೆಯಲ್ಲಿ ಲಿಂಗಾಯಿತರು ಹೆಚ್ಚಿಗೆ ಇದ್ದರು. ನಮ್ಮವರಿಗೆ ಕೊಡಲಿಕ್ಕೆ ಇಚ್ಛೆ ಇಲ್ಲ ಅವರಿಗೆ. ಆದರೂ ಇವರು 'ನೀನು ಬೆಂಗಳೂರಿಗೆ ಹೋಗಿ ಬಾ. ಅಲ್ಲಿ ಹೊಂಬಾಳಯ್ಯ ಅಂತ ಒಬ್ಬರಿದ್ದಾರೆ. ಅವರು ಪಿ.ಎಸ್.ಸಿ. ಮೆಂಬರ್ ಆಗಿದ್ದರು ಆವಾಗ ಅವರ ಬಳಿ ಹೋಗಿ ನೇರವಾಗಿ ಕೇಳು, ನಿನಗೆ ಆ ಪೋಸ್ಟ್ ಸಿಗುತ್ತೆ ಅಂತ ಹೇಳಿದರು. ಈ ಲಿಂಗಾಯಿತರು ನನ್ನನ್ನು ಕರೆದುಕೊಂಡು ಹೋಗಲಿಲ್ಲ. ನಾನೇ ಸ್ವತಃ ಬೆಂಗಳೂರಿಗೆ ಹೋದೆ. ಅಟೆಂಡರ್ ಆಫೀಸ್ ಒಳಗೆ ಸೇರಿಸಲಿಲ್ಲ. ನಾನು ರಂಗಸ್ವಾಮಿಯವರ ಕಡೆಯವನು ಕಣಯ್ಯ ಅಂತ ಹೇಳಿದಾಗ ಬಿಟ್ಟ.

ಆಮೇಲೆ ಅವರು ನನ್ನನ್ನ ಸಂದರ್ಶನ ಮಾಡಿದರು. ಟೆಕ್ನಿಕಲ್‌ಗೆ ಸಂಬಂಧಪಟ್ಟ ಹಾಗೆ ಇಲ್ಲಿ ವಿ.ಐ.ಎಸ್.ಎಲ್‌ನಿಂದ ಕರೆಸಿದ್ದ ಇಂಜಿನಿಯರ್ಸ್‌ಗಳು ಪರೀಕ್ಷೆ ಮಾಡಿದರು. ನಾನು ಎಲ್ಲ ಉತ್ತರ ಹೇಳಿದೆ ಆಮೇಲೆ ಭರಣಯ್ಯನವರು ವಿಷಯ ತಿಳಿದು 'ಇವರು ಸಮರ್ಥರಿದ್ದಾರೆ. ಯಾಕ್ರೀ ಪೋಸ್ಟ್ ಮಾಡಬಾರದು? ಕೊಡಿ ಅವರಿಗೆ' ಅಂತ ಹೇಳಿದರು. ಅವರಿಂದ ಕೆಲಸವಾಯ್ತು.

ಮೊದಲು ನನಗೆ ಭರಣಯ್ಯನವರ ಪರಿಚಯ ಆಗಿದ್ದು ಎಸ್. ಎಂ. ನಂಜುಂಡಯ್ಯನವರ ಕಡೆಯಿಂದ. ನಾನು ಹರಿಜನ ಸೇವಾ ಸಂಘದ ಖಜಾಂಚಿ ಸ್ಥಾನದಲ್ಲಿ ಇದ್ದೆ. ಆ ಮೂಲಕ ಪರಿಚಯ. ಅಂದರೆ ಬಹಳ ಒಡನಾಟ ಇರಲಿಲ್ಲ. ನಮ್ಮ ಸಂಘದಿಂದ ಅದುಇದು ಕೆಲಸ ಮಾಡುವಾಗ ಏನಾದರೂ ಅಗತ್ಯ ಬಿದ್ದರೆ ಅವರನ್ನು ಹೋಗಿ ಕಾಣುತ್ತಿದ್ದೆವು. ಆದರೆ ಸುತ್ತಮುತ್ತ ಅವರು ಮಾಡಿದಂತಹ ಸೇವಾ ಕೆಲಸಗಳೆಲ್ಲ ಗೊತ್ತು.

ನಾನು ಬಲ್ಲಂತೆ ನಂಜಾಪುರ ಊರು ಉದ್ಧಾರ ಮಾಡಿದವರು ಅವರೇ. ಸಂಜೀವನಗರ ಕಟ್ಟಿದವರೂ ಅವರೇ. ತುಳಸಿಕಟ್ಟೆ, ತೆಂಗಿನಸಸಿ ಮೊದಲುಗೊಂಡು ಕೊಟ್ಟರು. ಮನೆ ಸಾಮಗ್ರಿ ಎಲ್ಲ ಕೊಟ್ಟರು. ಎತ್ತು ಕೊಟ್ಟರು. ಎಲ್ಲ ತರದ ಸೌಕರ್ಯಗಳನ್ನೂ ಒದಗಿಸಿಕೊಟ್ಟವರು ಅವರೇನೇ. ಇವೆರಡಲ್ಲದೆ ಇನ್ನೊಂದು ತಾಷ್ಕೆಂಟ್ ನಗರ ಅಂತ. ಅಲ್ಲಿರುವವರು ಬೋವಿ ಜನಾಂಗದವರು. ಅವರೂ ಕೂಡ ಎಸ್.ಸಿ. ಗ್ರೂಪ್‌ಗೆ ಸೇರುತ್ತಾರೆ. ಅವರಿಗೂ ಜಮೀನೆಲ್ಲ ಕೊಡಿಸಿದರು. ಗ್ರಾಮ ಠಾಣಾ ಮಾಡಿಕೊಟ್ಟರು. ಎಲ್ಲ ಸೌಕರ್ಯಗಳನ್ನು ನಿರ್ಮಿಸಿ ಹೊಸ ಊರು ಕಟ್ಟುವುದಕ್ಕೆ ಗ್ರಾಮಠಾಣಾ ಎನ್ನುತ್ತಿದ್ದರು ಆಗ.

ಅದಕ್ಕೋಸ್ಕರ ವಿಶೇಷ ಶೆಕ್ದಾರರನ್ನೇ ನೇಮಕ ಮಾಡಿದ್ದರು. ಬೇರೆ ಜನಾಂಗದವರಿಂದ ತೊಂದರೆ ಬಂದುಬಿಡುತ್ತೆ. ಇವರಿಗೆ ಅನುಕೂಲ ಕುಂಠಿತವಾಗುತ್ತೆ ಎಂಬ ದೂರದೃಷ್ಟಿಯಿಂದ

ಅದೇ ಕೆಲಸಕ್ಕಾಗಿ ಲಿಂಗಪ್ಪ ಎನ್ನುವವರನ್ನ ನೇಮಕ ಮಾಡಿದ್ದರು. ಲಿಂಗಪ್ಪನವರಿಗೆ ತಾಷ್ಕೆಂಟ್ ನಗರದ್ದೇ ಕೆಲಸ. ಅಲ್ಲಿನ ಜನಗಳಿಗೆ ಎತ್ತು ಕೊಡಿಸುವುದು, ಗಾಡಿ ಕೊಡಿಸುವುದು ಇತ್ಯಾದಿ. ಅಷ್ಟು ವ್ಯವಸ್ಥೆಮಾಡಿಕೊಟ್ಟವರು ಭರಣಯ್ಯನವರೇ ಹೊರತು ಇನ್ಯಾರೂ ಅಲ್ಲ.

ನಮ್ಮ ಸಂಘದಿಂದ ಸ್ಕೂಲಿಗೆ ಸೀಟು ಕೊಡಿಸುತ್ತಿದ್ದೆವು. ವಿದ್ಯಾರ್ಥಿವೇತನ ಕೊಡಿಸುತ್ತಿದ್ದೆವು. ಅಗತ್ಯ ಇದ್ದಾಗಲ್ಲೆಲ್ಲ ಭರಣಯ್ಯನವರು ಸಹಾಯ ಮಾಡುತ್ತಿದ್ದರು. ನಾವು ನಮ್ಮ ಜನರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಕೊಡಿಸುತ್ತಿದ್ದಾಗ 'ನೋಡಿ ಇಂಥ ಕಡೆ ಕಳಿಸಿ, ಇವರನ್ನ ಭೇಟಿ ಮಾಡಿ ಕೆಲಸ ಆಗುತ್ತೆ' ಅಂತೆಲ್ಲ ಮಾರ್ಗದರ್ಶನ ಮಾಡುತ್ತಿದ್ದರು. ಅದರಂತೆ ನಾವು ಕಾಲೇಜಿನ ಸೀಟು ಕೊಡಿಸುವುದು, ಕೆಲಸ ಕೊಡಿಸುವುದು ಎಲ್ಲ ಮಾಡುತ್ತಿದ್ದೆವು. ನಾವು ಯಾವಾಗ ಹೋದರೂ ಅವರು ಭೇಟಿಗೆ ಅವಕಾಶ ಮಾಡಿಕೊಡುತ್ತಿದ್ದರು.

ಅವರ ವ್ಯಕ್ತಿತ್ವದಲ್ಲಿ ನನಗೆ ನೆನಪಿನಲ್ಲಿ ಅಚ್ಚಳಿಯದೆ ಉಳಿದಿರುವುದು ಅವರ ಶಾಂತ ಸ್ವಭಾವ. ಸಿಟ್ಟು, ಬೇಜಾರು ಅನ್ನುವುದು ಇರಲಿಲ್ಲ. ಯಾರೇ ಹೋದರೂ 'ನೀವು ವಿದ್ಯಾವಂತರಾಗಿ, ಬುದ್ಧಿವಂತರಾಗಿ' ಅಂತ ಹೇಳುತ್ತಿದ್ದರು. "ನಮ್ಮ ಜನಾಂಗ ಒಂದು ಲೆವೆಲ್ಲಿಗೆ ಬರಬೇಕು ಅಂದರೆ ನೀವು ವಿದ್ಯಾವಂತರಾಗಬೇಕು. ಅಷ್ಟೇ ಅಲ್ಲ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೂ ಅವಕಾಶ ಮಾಡಿಕೊಡಿ" ಅನ್ನುತ್ತಿದ್ದರು. ವರ್ಷಕ್ಕೊಂದು ಬಾರಿ ನಮ್ಮ ಸಂಘದಿಂದ ಅಂಬೇಡ್ಕರ್ ದಿನಾಚರಣೆ ಮಾಡುತ್ತಿದ್ದೆವು. ಆವಾಗೆಲ್ಲ ಕರೆದರೆ ಸಮಾರಂಭಕ್ಕೆ ಬರುತ್ತಿದ್ದರು. ಇನ್ನೊಂದು ಮುಖ್ಯವಾದ ವಿಚಾರ ಹೇಳ್ತಿನಿ.

ಇಲ್ಲಿನ ಭದ್ರಾ ನದಿಯಿಂದ ದಾವಣಗೆರೆಯ ತನಕ ನೀರಿನ ವ್ಯವಸ್ಥೆ ಮಾಡಿಕೊಟ್ಟವರು ಭರಣಯ್ಯನವರೇ. ಭದ್ರಾವತಿಯಿಂದ ತರಿಕೆರೆ ರಸ್ತೆಯಲ್ಲಿ ಒಂದು ನಾಲೆ ಹೋಗುತ್ತದಲ್ಲ ಅದೇ ದಾವಣೆಗೆರೆಗೆ ನೀರು ಸರಬರಾಜು ಆಗುವ ನಾಲೆ. ಅದರಿಂದಲೇ ದಾವಣಗೆರೆಯಲ್ಲಿ ಇವತ್ತು ಸೋಂಪಾಗಿ ನೀರಿದೆ. ನಂಜಾಪುರದಲ್ಲಿ ಸಣ್ಣನೀರಾವರಿ ಯೋಜನೆ ಆಗಿದ್ದು ಅವರ ಕಾಲದಲ್ಲೇ. ಭದ್ರಾವತಿಯಿಂದ ಶಿವಮೊಗ್ಗ ಕಡೆಗೆ ಒಂದು ನಾಲೆ ಹೋಗುತ್ತೆ ಅದನ್ನು ಮಾಡಿಸಿದವರೂ ಅವರೇ. ನಮ್ಮ ಜನಾಂಗಕ್ಕೆ ನೀರಾವರಿ, ಜಮೀನು ಎಲ್ಲ ಸೌಕರ್ಯ ಆಗಬೇಕು ಅಂತ ಅವರ ಮನಸ್ಸಿನಲ್ಲಿತ್ತು. ಯಾಕೆ ಅಂದರೆ ನಮ್ಮಲ್ಲಿ ಬಹಳ ಬಡತನ, ಹೆಚ್ಚಿನವರಿಗೆ ವಿದ್ಯೆ ಇಲ್ಲ. ಎಲ್ಲ ಬೇರೆ ಜನರ ಕೈಕೆಳಗೆ ಕೂಲಿಮಾಡಿ ಜೀವನ ಮಾಡಬೇಕು ಎಂಬುದೆಲ್ಲ ಅವರಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಇಲ್ಲಿಯಾದರೂ ಚೆನ್ನಾಗಿರಲಿ ಅಂತ ಅವರು ಯೋಚನೆ ಮಾಡಿ ಈ ಅನುಕೂಲತೆಯನ್ನೆಲ್ಲ ಕಲ್ಪಿಸಿಕೊಟ್ಟರು. ಇನ್ಯಾರೂ ಮಾಡಿಲ್ಲ ಅಷ್ಟು ಕೆಲಸವನ್ನ. ಅವರು ಇಲ್ಲಿ ಇದ್ದಿದ್ದು ಎರಡೇ ವರ್ಷ ಆದರೂ ಒಳ್ಳೆಯ ಅನುಕೂಲತೆ ಮಾಡಿಕೊಟ್ಟರು ನಮಗೆ.

ಇವತ್ತು ನಾವು ಇಷ್ಟು ಚೆನ್ನಾಗಿರೋಕೆ ಅವರೇ ಕಾರಣ. ಇವತ್ತಿಗೂ ನಾವು ತಿನ್ನುತ್ತಿರುವುದು ಅವರದೇ ಅನ್ನ. ನಾನು ವಿ.ಎಸ್.ಐ.ಎಲ್.ನಲ್ಲಿ ಇಂಜಿನಿಯರ್ ಆಗಿದ್ದೂ ಅವರ ಕಡೆಯಿಂದಲೇ. ಇವತ್ತು ನಾನು ಈ ಮಟ್ಟಿಗೆ ಇರುವುದು ಅವರಿಂದಲೇ. ಅವರನ್ನ ಪೂಜೆ ಮಾಡಿದರೂ ಕಡಿಮೆಯೇ. ಮನುಷ್ಯ ಅಂತ ಕರೆಯಬಾರದು ಅವರನ್ನ, ದೇವರು ಅವರು. ಬೇರೆಯವರ ಕೈಕೆಳಗೆ ಒದ್ದಾಡುತ್ತಿದ್ದವರನ್ನು ಮುಂದೆ ತಂದವರು ಅವರೇ. ನಾವು ಅಂಬೇಡ್ಕರ್ ಅವರನ್ನು ಯಾವ ರೀತಿ ಗುರುಗಳು ಅಂತ ಕಾಣುತ್ತೇವೋ ಭರಣಯ್ಯನವರನ್ನೂ ಅದೇ ರೀತಿ ಕಾಣಬೇಕು. ಬೇರೆ ಜಾತಿಯವರಿಗೆಲ್ಲ ಗುರುಗಳಿದ್ದಾರೆ. ನಮಗೆ ಇವರೇ ಗುರುಗಳು.

ಒಮ್ಮೆ ಯಾರೋ ಲಿಂಗಾಯಿತರು ನನ್ನನ್ನು ಕೇಳಿದರು – 'ನಮಗೆಲ್ಲ ಗುರುಗಳಿದ್ದಾರೆ. ನಿಮಗೆ ಇದ್ದಾರಾ?' ಅಂತ.


'ಹೌದು ಸ್ವಾಮಿ ಇದ್ದಾರೆ ನಮ್ಮ ಗುರುಗಳು. ಅವರು ಉಣ್ಣಕ್ಕೆ, ತಿನ್ನಕ್ಕೆ, ನಡೆಯಕ್ಕೆ ಅವಕಾಶ ಮಾಡಿಕೊಟ್ಟು, ಸಮಾಜದಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋಗೋಕೆ ಅವಕಾಶ ಮಾಡಿಕೊಟ್ಟವರು. ಅಂಥ ಒಬ್ಬ ಗುರು ಇದ್ದರು ಡಾ. ಬಿ.ಆರ್. ಅಂಬೇಡ್ಕರ್ ಅಂತ. ಗೊತ್ತಾ ನಿಮಗೆ?' ಅಂದೆ. 'ಹೌದು' ಅಂತ ಒಪ್ಪಿಕೊಂಡರು. ನಮಗೆ ಜಾತೀಯತೆ ಹೋಗಲಾಡಿಸೋಕೆ ಇನ್ನೊಬ್ಬರು ಇದ್ದರು ಬಸವಣ್ಣನವರು ಅಂತ. ಅವರು ಎಲ್ಲರಿಗೂ ಲಿಂಗಧಾರಣೆ ಮಾಡಿಸಿದರು. ಆದರೆ ಅದು ಅವರ ಕಾಲಕ್ಕೇ ಮುಗಿದುಹೋಯಿತು.

ಅಂಬೇಡ್ಕರ್ ಅಲ್ಲಿ ದೇಶದ ಮಟ್ಟದಲ್ಲಿ ಮಾಡಿದ್ದನ್ನು ಭರಣಯ್ಯನವರು ಇಲ್ಲಿ ಮಾಡಿದರು ಅಂತ ನನಗೆ ಅನ್ನಿಸುತ್ತೆ. ಇವತ್ತೂ ಕೂಡ ಭರಣಯ್ಯನವರ ಅನ್ನ ತಿನ್ನುತ್ತಿದ್ದೇವೆ ನಾವು ಅದನ್ನ ಮರೆಯಬಾರದು. ಅವರು ಮಾಡಿರುವ ಕೆಲಸಗಳು ಶಾಶ್ವತವಾಗಿವೆ. ಅವರು ಸ್ವರ್ಗಸ್ಥರಾದರೂ ಅವರು ಮಾಡಿರೋ ಕೆಲಸಗಳು ಇನ್ನೂ ಇವೆ. ಅದರ ಮೂಲಕ ಅವರ ಹೆಸರು ಇದೆ. ಅವರು ಮಾಡಿರುವ ಕೆಲಸಗಳು ನಿರಂತರವಾಗಿ ಉಳಿದುಕೊಂಡಿವೆ.

ಆದರೆ ಬೇಸರದ ಸಂಗತಿ ಎಂದರೆ, ಅವರಂತಹ ಅಧಿಕಾರಿಗಳನ್ನ ಈ ಕಾಲಮಾನದಲ್ಲಿ ಕಾಣಲಿಲ್ಲ ನಾನು, ಇಡೀ ಜಿಲ್ಲೆಯಲ್ಲೇ! ಈಗಲೂ ಕೆಲವು ಅಧಿಕಾರಿಗಳು ನಮಗೆ ನೆರವಾಗುತ್ತಿದ್ದಾರೆ ಇಲ್ಲ ಅಂತ ಅಲ್ಲ ಆದರೆ ಅವರಂತಹವರು ಯಾರೂ ಇಲ್ಲ.

ಈ ನಿಟ್ಟಿನಲ್ಲಿ ಅವರನ್ನು ಶಾಶ್ವತವಾಗಿ ಉಳಿಸುವ ವಿಚಾರದಲ್ಲಿ ನೀವು ಮಾಡುತ್ತಿರುವ ಕೆಲಸ ಬಹಳ ಒಳ್ಳೆಯದು. ತುಂಬಾ ಸಂತೋಷ. ಅವರನ್ನ ಪ್ರಚಾರ ಮಾಡಿದಷ್ಟೂ ಒಳ್ಳೆಯದೇ. ಇವತ್ತು ಕ್ರೈಸ್ತರು ಏಸುಕ್ರಿಸ್ತನನ್ನು ಮುಂದಿಟ್ಟುಕೊಂಡು ಪ್ರಚಾರ ಮಾಡುತ್ತಾರಲ್ಲ ಹಾಗೆ ಯಾಕೆ ನಾವು ನಮ್ಮ ಭರಣಯ್ಯನವರನ್ನ, ಅವರ ಕೆಲಸಗಳನ್ನ ಮುಂದಿಟ್ಟುಕೊಂಡು ಪುಸ್ತಕದಲ್ಲಿ ಪ್ರಕಟಿಸಿ, ಪತ್ರಿಕೆಯಲ್ಲಿ ಪ್ರಕಟಿಸಿ, ಪರಿಚಯ ಮಾಡಬೇಕು. ನನಗೆ ಇನ್ನೂ

ಒಂದು ಅನ್ನಿಸುತ್ತೆ. ಶಾಲಾ ಪಠ್ಯಪುಸ್ತಕದಲ್ಲಿ ಇವರ ಬಗ್ಗೆ ಒಂದು ಪಾಠವನ್ನು ಯಾಕೆ ಇಡಬಾರದು. ಯಾರ್‍ಯಾರದ್ದೋ ಕಥೆ ಇಡುವ ಬದಲು 'ಭರಣಯ್ಯನವರ ಸಾಧನೆ' ಅಂತ ಒಂದು ಶೀರ್ಷಿಕೆ ಕೊಟ್ಟು, ಪ್ರೈಮರಿ, ಹೈಸ್ಕೂಲುಗಳಿಗೆಲ್ಲ ಯಾಕೆ ಇಡಬಾರದು ಅಂತ? ಮಕ್ಕಳೂ ತಿಳಿದುಕೊಳ್ಳಲಿ, ನಮ್ಮ ತಂದೆ, ತಾತನ ಕಾಲದಲ್ಲಿ ಇಂಥವರೊಬ್ಬರು ಇದ್ದರಂತೆ, ಇಷ್ಟೆಲ್ಲ ಕೆಲಸ ಮಾಡಿದ್ದಾರಂತೆ ಅಂತ ಅವರು ಓದಿ ತಿಳಿದುಕೊಳ್ಳುತ್ತಾರೆ. ನೀವು ಸರ್ಕಾರಕ್ಕೆ, ಸಂಬಂಧಪಟ್ಟ ಇಲಾಖೆ ಗಮನಕ್ಕೆ ತಂದರೆ ಖಂಡಿತ ಕೆಲಸ ಆಗುತ್ತೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಷ್ಟೆ.



ವೀರಭೂಮಿಯ ಘನತೆ ಬೆಳೆಸಿದವರು

ಸಜ್ಜನಕೆರೆ ಸಿದ್ದಲಿಂಗಪ್ಪ, ಚಿತ್ರದುರ್ಗ.

ಪೀಠಿಕೆ:

ಆರ್. ಭರಣಯ್ಯನವರು ವೀರ ಭೂಮಿ ವೀರವನಿತೆ ತಾಯಿ ಓಬವ್ವನ ಮಂದಿರ, ದುರ್ಗಸ್ತಮಾನದ ನೆಲೆ, ಮದಕರಿ ನಾಯಕನು ಆಳ್ವಿಕೆ ಮಾಡಿದ ವೀರಭೂಮಿ ಚಿತ್ರದುರ್ಗದಲ್ಲೂ ಬಹಳ ಕಾಲ ಸೇವೆ ಸಲ್ಲಿಸಿದ್ದರು. ಅವರು 1942-1945ರವರೆಗೆ ಚಿತ್ರದುರ್ಗದಲ್ಲಿ ಎಸ್.ಪಿ ಯಾಗಿದ್ದರು. ಕಾಲದ ವಿಚಿತ್ರವೆಂದರೆ 40-50 ವರ್ಷದ ನಂತರ ಒಬ್ಬ ಸಾಧಕನ ಬದುಕನ್ನು ಹರಸಿಕೊಂಡು ನಡೆಸಿದ ಈ ಕಾರ್ಯಕ್ಕೆ ಬರಿ 'ಇಲ್ಲ', 'ಗೊತ್ತಿಲ್ಲ'ಗಳ ಉತ್ತರವೆ. ನಿರಾಸೆಯಿಂದ ಸುಮ್ಮನಾಗುವ ಕಾಲಕ್ಕೆ ನಮಗೆ ಸಿಕ್ಕಿದ್ದು ಬಾಳ ಸಂಧ್ಯಕಾಲದಲ್ಲಿ ಮರಳುಗಾಡಿನಲ್ಲಿ ಓಯಸಿಸ್‌ನಂತೆ ಭೇಟಿಯಾದವರು ಹಿರಿಯ ಜೀವ ಎ. ಡಿ. ಸಣ್ಣರಾಮಯ್ಯನವರು. ಆರ್. ಭರಣಯ್ಯನವರ ಹೆಸರು ಹೇಳಿದ ತಕ್ಷಣ ಒಂದು ಕ್ಷಣ ಮೂಕವಿಸ್ಮಿತರಾದರು. ನಂತರ ಭರಣಯ್ಯನವರ ಬಗ್ಗೆ ತನಗಿಂತ ತಿಳಿದವರೊಬ್ಬರ ಮಾಹಿತಿ ನೀಡಿದರು. ಅವರ ಮಾಹಿತಿ ಅನುಸರಿಸಿ ನೆಹರು ನಗರಕ್ಕೆ ಭೇಟಿ ನೀಡಿದೆವು.

ನೆಹರು ನಗರದ ಸಿದ್ದಲಿಂಗಪ್ಪನವರ ಮನೆಗೆ ಭೇಟಿ ನೀಡಿದಾಗ ಅವರು ಬಹಳ ಅಕ್ಕರೆಯಿಂದ ಆತ್ಮೀಯವಾಗಿ ಸ್ವಾಗತಿಸಿದರು. ಸಜ್ಜನಕೆರೆ ಸಿದ್ದಲಿಂಗಪ್ಪ ಅವರ ಧರ್ಮಪತ್ನಿ ಮನೆಯಲ್ಲಿ ಕುಳಿತ ಕ್ಷಣಮಾತ್ರದಲ್ಲೇ ಮಜ್ಜಿಗೆಯನ್ನು ನೀಡಿ ಮನ ತಂಪು ಮಾಡಿದರು. ನಂತರ ಸಿದ್ಧಲಿಂಗಪ್ಪನವರು ಭರಣಯ್ಯನವರ ಬಗ್ಗೆ ಮಾತಾಡುತ್ತಾ ಹೋದರು. ಅವರ ಮಾತಿನ ಪಾಠ ಇದು.


ಭರಣಯ್ಯನವರು ಅಧಿಕಾರದಲ್ಲಿ ಬಹಳ ನಿಷ್ಠೆಯಿಂದ ಮತ್ತು ದಕ್ಷತೆಯಿಂದ ನಡೆದುಕೊಂಡವರು. ಚಿತ್ರದುರ್ಗದಲ್ಲಿ ಆಗಿನ ಕಾಲದಲ್ಲಿ ನಗ್ಗಿನಕೆರೆ ಗೌಡರು ಅಂತ ಇದ್ರು. ಬಹಳ ಪ್ರಳಯಾಂತಕ ಅವರನ್ನು ಹಿಡಿಯುವವರೇ ಇಲ್ಲ! ಅವರನ್ನು ಎದುರಿಸುವವರು ಆ ತಾಲ್ಲೂಕಿನಲ್ಲಿಯೇ ಯಾರೂ ಇರಲಿಲ್ಲ. ಆಗ ಭರಣಯ್ಯನವರು ದಕ್ಷತೆಯಿಂದ ಎದೆಗುಂದದೆ ರಾತ್ರೋರಾತ್ರಿ ಅಧಿಕಾರಿಗಳ ಸಹಾಯದಿಂದ ಬಂಧಿಸಿದರು. ಮತ್ತೊಬ್ಬರು ವೀರಬಸಪ್ಪ. ಇಸ್ಪೀಟಾಟದಲ್ಲಿ ಬಹಳ ನಿಸ್ಸೀಮ. ಆತನನ್ನು ಯಾರು ಮಾತಾಡಿಸಲು ಸಾಧ್ಯವಿರಲಿಲ್ಲ! ಅತನನ್ನು ಸಹ ರಾತ್ರಿ ವೇಳೆಯಲ್ಲಿ ಬಂಧಿಸಿ ಹಣವನ್ನು ವಶಪಡಿಸಿಕೊಂಡಿದ್ದರು. ಅಂತಹ ಧೈರ್ಯ, ಸಾಹಸದ ವ್ಯಕ್ತಿತ್ವ ಅವರದು. ಅದೇ ರೀತಿ ಆ ಕಾಲದ ಹತ್ತಾರು ಬಗೆಯ ಸವಾಲುಗಳನ್ನು ನಿವಾರಿಸುತ್ತಿದ್ದರು. ಜೊತೆಗೆ ಸಮಾಜದಲ್ಲಿ ಬೆರೆತು ಒಂದಾಗಿ ಕೆಲಸ ಮಾಡಿ ಬೇರೆಯವರ ಕಷ್ಟ ಅರಿಯುತ್ತಿದ್ದರು. ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದರು.

ಆಗೆಲ್ಲ ಅಸ್ಪೃಶ್ಯತೆ ಇಂದಿಗಿಂತಲೂ ಹೆಚ್ಚು ತಾಂಡವವಾಡುತ್ತಿತ್ತು. ಯಾರನ್ನೂ ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲ. ಆಗ ಭರಣಯ್ಯ ಎದೆಗುಂದದೆ ಕೆಲಸ ಮಾಡುತ್ತಿದ್ದರು. ಅವರ ಜತೆ ಹೆಚ್. ಎನ್. ಹನುಮಯ್ಯ ಎಂಬ ವಿಶೇಷ ಅಧಿಕಾರಿಗಳಿದ್ದರು. ಸಜ್ಜನಕೆರೆ ಹನುಮಯ್ಯ, ಚಳ್ಳಕೆರೆ ದೊಡ್ಡಕೆಂಚಪ್ಪ, ಚಳ್ಳಕೆರೆ ಮಲ್ಲಯ್ಯ ಎನ್ನುವವರ ಜೊತೆಗೂಡಿ ಚಲವಾದಿ ಸಮುದಾಯವನ್ನು ಒಗ್ಗೂಡಿಸಿದರು. ಚಲವಾದಿ ಸಮುದಾಯದಲ್ಲಿ ಕಟ್ಟೆಮನೆಗಳು ಅಂತ ಒಂದು ಪದ್ಧತಿ ಇತ್ತು. ಚಲವಾದಿ ಸಮುದಾಯದಲ್ಲಿ ಮದುವೆ ಒಂಭತ್ತು ದಿನಗಳ ಕಾಲ ನಡೆಯುತ್ತಿತ್ತು. ಆಗ ಅದನ್ನು ಕಡಿಮೆ ಅವಧಿಗೆ ಇಳಿಸಿದವರೇ ಇವರು. ಆಗ ಮದುವೆಗೆ ಸಾರ್ವಜನಿಕವಾಗೇ ಕುರಿಕುಯ್ದು ಅಡುಗೆ ಮಾಡುವ ಸಂಪ್ರದಾಯವಿತ್ತು. ಅದನ್ನು ನಿಲ್ಲಿಸಿದರು. ಇಂತಹ ಶುಭಕಾರ್ಯದಲ್ಲಿ ಹೀಗೆ ಪ್ರಾಣಿ ಬಲಿ ಕೊಟ್ಟು ಸಮಾರಂಭ ನಡೆಸಬಾರದೆಂದು ಜನಾಂಗಕ್ಕೆ ತಿಳುವಳಿಕೆ ಹೇಳುತ್ತಿದ್ದರು. ಅಲ್ಲದೆ ಚಲವಾದಿ ಸಮುದಾಯದ ಮುಖಂಡರ ಸಭೆ ಕರೆದು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಡಾ. ಅಂಬೇಡ್ಕರ್‌ರವರ ತತ್ತ್ವ ನಿಷ್ಠೆಗಳನ್ನು ಪಾಲಿಸಿಕೊಂಡು ಹೋಗುವಂತೆ ಮಾರ್ಗದರ್ಶನ ಮಾಡುತ್ತಿದ್ದರು. ಸಮಾಜಕ್ಕಾಗಿ ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಜನರನ್ನು ಸಂಘಟಿಸಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿ ಬುದ್ಧಿವಂತರನ್ನಾಗಿ ಮಾಡಬೇಕೆಂದು ತಿಳಿಸುತ್ತಿದ್ದರು. ವ್ಯವಸಾಯದಲ್ಲಿ ಆಸಕ್ತಿವಹಿಸಿ ಎಂದು ಹೇಳುತ್ತಿದ್ದರು. 'ಕಾಯಕವೇ ಕೈಲಾಸ' ಎಂಬ ನುಡಿಯನ್ನು ನಂಬಿದ್ದರು.

ಕೈಯಲ್ಲಿ ಕತ್ತಿ, ಕಠಾರಿಗಳು ಇಲ್ಲದಿದ್ದರೂ ಸೈನ್ಯ ಒಗ್ಗೂಡಿಸಿ ಹೋರಾಡಿದ ಒನಕೆ ಓಬವ್ವ ನಮಗೆಲ್ಲ ಮಾದರಿ. ನಾವೂ ಅವಳಂತೆ ಸಮಾಜದಲ್ಲಿ ಬಾಳಬೇಕು ಎಂದು

ಹೇಳುತ್ತಿದ್ದರು. ಅಷ್ಟೇ ಅಲ್ಲ ಹಿಂದೆ ಇದ್ದ ಸಾಧ್ವಿ ಶಿರೋಮಣಿ "ವೀರ ಹನುಮಕ್ಕ" ಎಂಬುವವರ ಉದಾಹರಣೆಯನ್ನು ಕೊಡುತ್ತಿದ್ದರು. ಆಕೆ ಕೂಡ ಅಸ್ಪೃಶ್ಯಳು. ಗಂಡನ ಮನೆಯ ಕಷ್ಟ ಸಹಿಸಿಕೊಂಡು ಬಾಳುತ್ತಿದ್ದಳು. ತನ್ನ ಮಡಿಲಿನಲ್ಲಿ ನೀರು ತುಂಬಿದ ಪವಾಡ ಮೆರೆದ ಮಹಿಳೆಯ ಕತೆ ಅದು. ನಮಗೆಲ್ಲ ಅದನ್ನು ಹೇಳುತ್ತಿದ್ದರು. ತಮ್ಮ ಜನಾಂಗದವರು ತಮ್ಮ ಕಸುಬಿನ ಬಗ್ಗೆ ತಿಳುವಳಿಕೆ ಹೊಂದಬೇಕೆಂದು ಹೇಳುತ್ತಿದ್ದರು.

ಅಧಿಕಾರಿ ಅನ್ನೊ ಅಹಂ ಇರಲಿಲ್ಲ. ಜಾತಿ ಧರ್ಮದ ಭೇದ ಇರಲಿಲ್ಲ. ಆಗೆಲ್ಲ ದಲಿತರಿಗೆ ಮತ್ತು ಚಲವಾದಿ ಸಮುದಾಯದವರಿಗೆ, ಊರಿನ ನಲ್ಲಿಯಲ್ಲಿ ನೀರು ಕೊಡುತ್ತಿರಲಿಲ್ಲ. ಹೊಟೇಲ್ ಒಳಗೆ ಪ್ರವೇಶವಿರಲಿಲ್ಲ. ಕ್ಷೌರ ಮಾಡುತ್ತಿರಲಿಲ್ಲ. ಆಗ ಭರಣಯ್ಯನವರು ಸವರ್ಣೀಯರಿಗೆ ಕರೆದು, ಇಲ್ಲವೇ ತಾವೇ ಕಂಡು ಬುದ್ಧಿ ಹೇಳುತ್ತಿದ್ದರಂತೆ. ಮಕ್ಕಳು ಹೇಸಿಗೆ ಮಾಡಿದಾಗ ನಾಯಿ ಕರೆಯುತ್ತೀರಿ. ಆಗ ಅದು ಮನೆ ಒಳಗೆ ಬರುತ್ತದೆ. ಆದರೆ ನಿಮ್ಮಂತೆಯೇ ಮನುಷ್ಯರಾದ ದಲಿತರ ಬಗ್ಗೆ ಯಾಕೆ ಈ ತಾತ್ಸಾರ? ಎಂದು ಪ್ರಶ್ನಿಸುತ್ತಿದ್ದರು.




ಅಸಾಧಾರಣ ಧೈರ್ಯಗಾರ!

ದೊಡ್ಡರಾಮಪ್ಪ, ಚಿತ್ರದುರ್ಗ.

ಅವರ ಮನೆಯ ಬಾಗಿಲಿಗೆ ಅಲಂಕಾರಕ್ಕೆಂದು ನೇತುಹಾಕಿದ್ದ ಆನೆಯ ಸೊಂಡಿಲು, ಹುಲಿಯ ಉಗುರು, ಜಿಂಕೆಯ ಕೊಂಬುಗಳನ್ನು ನೋಡಿದಾಗ ಹೀಗೆ ಅನ್ನಿಸಿತು. ಮೂಲತಃ ಬೇಟೆಗಾರರ ಮನೆತನದವರಾಗಿದ್ದ ದೊಡ್ಡರಾಮಪ್ಪ ಒಂದು ಕಾಲಕ್ಕೆ ಸಾಕಷ್ಟು ಸಾಹಸಮಯಿ ಜೀವನ ನಡೆಸಿದವರು. ಅದಕ್ಕೆ ಉದಾಹರಣೆಯಂತೆ ಅವರ ಮನೆ ಇತ್ತು. ಅವರು ಭರಣಯ್ಯನವರ ವಿಚಾರ ಸಾಹಸ ಪ್ರತಿಭೆಗಳ ಬಗ್ಗೆ ವಿವರಿಸಿದ್ದು ಹೀಗೆ;

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಮೆದ್ನೆಕೆರೆ ಗ್ರಾಮದ ಕಲ್ಲಿಂಗಪ್ಪಗೌಡ ಎಂಬುವನು ಸುತ್ತಮುತ್ತ 30 ಹಳ್ಳಿಗಳಿಗೂ ದೊಡ್ಡ ಮಟ್ಟದ ದರೋಡೆಕೋರನಾಗಿದ್ದನು. ಇವನು ಕಳ್ಳತನ, ದರೋಡೆ, ಮಹಿಳೆಯರ ಮಾನಭಂಗ ಮುಂತಾದ ಕೃತ್ಯಗಳಲ್ಲಿ ಭಾಗವಹಿಸುತ್ತಿದ್ದನು. ಇವನನ್ನು ದಕ್ಷ ಅಧಿಕಾರಿಯಾದ ಹಾಗೂ ಹೊಸದಾಗಿ ಎಸ್.ಪಿ.ಯಾಗಿ ಬಂದ ಭರಣಯ್ಯನವರು ತಮ್ಮ ಚಾಣಾಕ್ಷತನದಿಂದ ಬಂಧಿಸಿದರು. ಅಂಥ ಅಸಾಧಾರಣ ಧೈರ್ಯಗಾರರಾಗಿದ್ದರು. ನಂತರ ಭರಣಯ್ಯನವರ ಮೇಲೆ ಸೇಡು ತೀರಿಸಿಕೊಳ್ಳಲು ಕಲ್ಲಿಂಗಪ್ಪನವರ ಕಡೆಯವರು ಭರಣಯ್ಯನವರಿಗೆ ಒಂದು ಸನ್ಮಾನ

ಸಮಾರಂಭವನ್ನು ಏರ್ಪಡಿಸಿ, ಒಬ್ಬ ಮಹಿಳೆಯ ಕೈಯಿಂದ ಹಾರ ಹಾಕಿಸಿದರು. ನಂತರ ಆಕೆಯು ಭರಣಯ್ಯನವರನ್ನು ತನ್ನ ಮನೆಗೆ ಆಹ್ವಾನಿಸುವಂತೆ ತಂತ್ರ ಏರ್ಪಡಿಸಿ ಆಕೆಯ ಮನೆಗೆ ಊಟಕ್ಕೆ ಬರುವಂತೆಮಾಡಿ. ಮನೆಗೆ ಬಂದ ಭರಣಯ್ಯನವರು ತನ್ನ ಮಾನಭಂಗಕ್ಕೆ ಪ್ರಯತ್ನಿಸಿದ್ದರು ಎಂದು ಆಕೆಯಿಂದ ದೂರು ಕೊಡಿಸಿಬಿಟ್ಟರು. ಅದು ಕುತಂತ್ರವೆಂದು ತಿಳಿಯುವ ಹೊತ್ತಿಗೆ ಕಾಲ ಮೀರಿತ್ತು. ಅವರಿಗೆ ಅವಮಾನ ಮಾಡಲೆಂದೇ ಮಾಡಿದ ಕುತಂತ್ರವದು. ಆದರೆ ಸರ್ಕಾರಕ್ಕೆ ಇವರ ಬಗ್ಗೆ ಅಪಾರ ನಂಬಿಕೆ ಇತ್ತು. ಆದರೂ ಈ ಘಟನೆ ಬಗ್ಗೆ ಸಾರ್ವಜನಿಕರಿಂದ ಒತ್ತಡ ಹೇರಿಸಿ, ಚಿತ್ರದುರ್ಗದಿಂದ ಭರಣಯ್ಯನವರನ್ನು ಜಿದ್ದಿನ ಮೇಲೆ ವರ್ಗಮಾಡಿಸಿಬಿಟ್ಟರು. ಆದರೆ ಅವರ ಧೀಮಂತಿಕೆ ಮಾತ್ರ ಈಗಲೂ ಹಸಿರಾಗಿದೆ.



ಎಣೆಯಿಲ್ಲದ ದಿಟ್ಟತನ

ಚಿದಾನಂದಯ್ಯ, ಚಿತ್ರದುರ್ಗ, ಸ್ವಾತಂತ್ರ್ಯ ಹೋರಾಟಗಾರರು.


ಭರಣಯ್ಯನವರು ಆ ಕಾಲದ ದಕ್ಷ ಅಧಿಕಾರಿ ಇವರ ಅವಧಿಯಲ್ಲಿ ಕಳ್ಳಕಾಕರನ್ನು ಹಾಗೂ ದರೋಡೆಕೋರರನ್ನು ಹಿಡಿದು ಮಟ್ಟ ಹಾಕಿದ್ದರು. ಕಳ್ಳಕಾಕರನ್ನು ಬಹಳಷ್ಟು ಮಟ್ಟಿಗೆ ನಿಯಂತ್ರಣದಲ್ಲಿಟ್ಟಿದ್ದರು. ಸೂಪರಿಂಟೆಂಡೆಂಟ್ ಸಾಹೇಬ್ರು ಬರ್ತಾರೆ ಅಂದರೆ ಜನ ಹೆದರಿ ಹೋಗುತ್ತಿದ್ದರು, ಭಯ ಬಿದ್ದು ಓಡುತ್ತಿದ್ದರು ಆ ಕಾಲದಲ್ಲಿ ಪೊಲೀಸಿನವರನ್ನು ಜನರು ಬ್ರಿಟೀಷರೆಂದೇ ಭಾವಿಸುತ್ತಿದ್ದರು. ಇವರು ಅನೇಕ ಬಾರಿ ಜರ್ತಾರಿ ಪೇಟ ತೊಡುತ್ತಿದ್ದರು ಹಾಗೂ ಕುದುರೆಯಲ್ಲಿ ಓಡಾಡುತ್ತಿದ್ದರು.

ಆ ಕಾಲದಲ್ಲಿ ಕಳ್ಳತನ ಮಾಡುತ್ತಿದ್ದವರು "ಇಂದು ನಿನ್ನ ಮನೆಗೆ ಬಂದು ಕಳ್ಳತನ ಮಾಡುತ್ತೇನೆ" ಎಂದು ಹೇಳಿ ಹೋಗಿ ಕಳ್ಳತನ ಮಾಡುತ್ತಿದ್ದರು. ಅಷ್ಟು ಪ್ರಾಮಾಣಿಕತೆ ಅಂದಿನ ಕಾಲದ ಕಳ್ಳರಲ್ಲಿ ಆ ಕಾಲದಲ್ಲಿತ್ತು!! ಭರಣಯ್ಯನವರು ನೀತಿವಂತರು ಹಾಗೂ ಗುಣವಂತರು ಸಹ ಆಗಿದ್ದರು. ಭರಣಯ್ಯನವರ ಅವಧಿಯಲ್ಲಿ ರಾತ್ರಿ 12ರ ಸಮಯದಲ್ಲೂ ಸಹ ಜನ ಓಡಾಡುತ್ತಿದ್ದರು. ಓದುವ ಹುಡುಗರಿಗೆ, ಸಹಾಯ ಮಾಡಿ ಉತ್ತೇಜನ ನೀಡಿ, ಮಾರ್ಗದರ್ಶನ ನೀಡುತ್ತಿದ್ದರು.

ಭರಣಯ್ಯನವರ ದಿಟ್ಟತನಕ್ಕೆ ಹೇಳಲೇಬೇಕಾದ ಇನ್ನೊಂದು ಸಂಗತಿ ಏನೆಂದರೆ ಆ ಕಾಲದಲ್ಲಿ ಯಾವುದೇ ಜನಾಂಗದ ಮಹಿಳೆಗೆ ಅತ್ಯಾಚಾರ ನಡೆದರೆ, ಅದನ್ನು ಮಾಡಿದವರನ್ನು ಹಿಡಿದು ಆಕೆಯೊಂದಿಗೆ ವಿವಾಹ ಮಾಡಿಸುತ್ತಿದ್ದರು! ಆ ಕಾಲದಲ್ಲಿ

ನಮ್ಮ ಸೀಮೆಯಲ್ಲಿ ಛಲವಾದಿ ಜನಾಂಗದವರನ್ನು ಚಂಡಾಲರೆಂದು ಕರೆಯಲಾಗುತ್ತಿತ್ತು. ಅಂತಹವರನ್ನು ಮನೆಗೆ ಸೇರಿಸುತ್ತಿರಲಿಲ್ಲ. ಅಂತಹವರ ಮನೆಯಲ್ಲಿ ಬೇರೆ ಜನಾಂಗದವರು ಊಟ ಮಾಡಿದರೂ ಸಹ ಅವರನ್ನು ಚಂಡಾಲರೆಂದು ಕರೆಯಲಾಗುತ್ತಿತ್ತು. ಇಂತಹ ಅಸ್ಪೃಶ್ಯತೆಯನ್ನು ತಡೆಗಟ್ಟಲು ತಮ್ಮದೇ ರೀತಿಯಲ್ಲಿ ಪ್ರಯತ್ನಿಸುತ್ತಿದ್ದರು. ಇವರು ತಮ್ಮ ಜನಾಂಗದವರೇ ಅಲ್ಲದೇ ಬೇರೆ ಜನಾಂಗದವರಿಗೂ, ಅವರಿಗೆ ಸಹಿ ಮಾಡಲು ಬಾರದೇ ಇದ್ದರೂ ಸಹ ಹೆಬ್ಬೆಟ್ಟಿನ ಸಹಿ ಮಾಡಿದರೆ ಕೆಲಸ ನೀಡುತ್ತಿದ್ದರು. ಆಗ ನಾನು ಇವರ ಅವಧಿಯಲ್ಲೇ ವಿವಾಹವಾದೆ ನನ್ನ ಮದುವೆಗೂ ಸಹ ಭರಣಯ್ಯನವರನ್ನು ಕರೆಯುವುದಕ್ಕೆ ಆಗಲಿಲ್ಲ. ಏಕೆಂದರೆ ನಾನು ಆಚಾರ, ವಿಚಾರಕ್ಕೆ ಕಟ್ಟುಬಿದ್ದಿದ್ದೆ. ಆಗ ಜಾತಿಪದ್ಧತಿ ಅಷ್ಟು ಬಿಗಿಯಾಗಿತ್ತು. ದಲಿತ, ಹಿಂದುಳಿದವರಿಗೆ ಅವರು ಅವರ ಅಧಿಕಾರಾವಧಿಯಲ್ಲಿ ಬಹಳಷ್ಟು ಸಹಾಯ ಮಾಡಿದ್ದರು. ಚಿತ್ರದುರ್ಗ, ದಾವಣಗೆರೆಯಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ಆ ಕಾಲದಲ್ಲಿ ಅಂತಹ ಒಬ್ಬ ದಕ್ಷ ಅಧಿಕಾರಿ ಇದದ್ದು ನಮ್ಮೆಲ್ಲರ ಪುಣ್ಯ.

ನನಗೆ ಜ್ಞಾಪಕ ಇರುವಂತೆ ಕಟ್ಟೆಮನೆ ಪಂಚಾಯ್ತಿಗಳಿಗೆ ಅಧಿಕಾರಿಗಳನ್ನು ಸೇರಿಸುತ್ತಿರಲಿಲ್ಲ. ನ್ಯಾಯ ಪಂಚಾಯ್ತಿ ಮಾಡುವಾಗ ಅಂದರೆ 1944ರಲ್ಲಿ ಒಂದು ಹೆಣ್ಣುಮಗಳ ವಿಷಯಕ್ಕೆ ಸಂಬಂಧಿಸಿದಂತೆ ಕಟ್ಟೆಮನೆಗಳ ಪಂಚಾಯ್ತಿ ಕಟ್ಟೆಗೆ ಇವರನ್ನು ಆಹ್ವಾನಿಸಿದರು. ಇವರ ಸಮ್ಮುಖದಲ್ಲೇ ನ್ಯಾಯ ತೀರ್ಮಾನ ಮಾಡಲಾಯಿತು. ಇದು ಇವರು ಆ ಕಾಲಕ್ಕೆ ಗಳಿಸಿದ ಗೌರವಕ್ಕೆ ಸಾಕ್ಷಿ.




ಒಳ್ಳೆಯ ಅಧಿಕಾರಿ

ಮಹಮ್ಮದ್ ಗಫಾರ್ ಖಾನ್, ಚಿತ್ರದುರ್ಗ.

ಶ್ರೀ ಭರಣಯ್ಯನವರು ಚಿತ್ರದುರ್ಗದಲ್ಲಿ ಎಸ್.ಪಿ. ಆಗಿದ್ದಾಗ ಅವರ ಜೊತೆ ಕೆಲಸಮಾಡಿದ್ದ ನಿವೃತ್ತ ಸಬ್‌ಇನ್ಸ್‌ಪೆಕ್ಟರ್ ಮಹಮ್ಮದ್ ಗಫಾರ್ ಖಾನ್ ಭರಣಯ್ಯನವರೊಂದಿಗಿನ ತಮ್ಮ ಸೇವಾವಧಿಯನ್ನು ನೆನಪು ಮಾಡಿಕೊಂಡರು. ಈಗ ಅವರಿಗೆ 91 ವರ್ಷ. ಮಾಸಿದ ನೆನಪಿನ ಪುಟಗಳಿಂದ ಅವರು ನೀಡಿದ್ದು ಇಷ್ಟು:

ಅವರು ದಕ್ಷ ಅಧಿಕಾರಿಯಾಗಿದ್ದರು. ಹಲವಾರು ರಿವಾರ್ಡ್‌ಗಳನ್ನು ಪಡೆದಿದ್ದರು. ಆಗ ನಮ್ಮನ್ನು ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಿದ್ದರು. ಆಗ ಜಾಸ್ತಿ ಕುದುರೆಯಲ್ಲೇ ನಮ್ಮ ಓಡಾಟ ಜಾಸ್ತಿಯಾಗಿರುತ್ತಿತ್ತು. ನಾವು ಸಹ ಅವರೊಂದಿಗೆ ದರೋಡೆಕೋರರನ್ನು ಮಟ್ಟಹಾಕುವುದರಲ್ಲಿ ಭಾಗವಹಿಸಿದ್ದೆವು. ಒಳ್ಳೆಯ ಅಧಿಕಾರಿ ಅವರು.




ಪುಂಡರನ್ನು ಅಡಗಿಸಿಬಿಟ್ಟರು!

ಗೋವಿಂದಪ್ಪ, ನಿವೃತ್ತ ಶಿಕ್ಷಕರು, ಚಿತ್ರದುರ್ಗ

ಆರ್. ಭರಣಯ್ಯನವರು ಚಿತ್ರದುರ್ಗದಲ್ಲಿ ಎಸ್.ಪಿ.ಯಾಗಿ ಕೆಲಕಾಲ ಕಾರ್ಯನಿರ್ವಹಿಸಿದ್ದರು. ಅನೇಕ ಪರಿಶಿಷ್ಟ ಜಾತಿಯ ಯುವಕರನ್ನು ಪೇದೆಗಳನ್ನಾಗಿ ನೇಮಿಸಿಕೊಂಡರು. ಚಿನ್ನವೀರಪ್ಪ ಎಂಬ ಕ್ಲಬ್ ಮಾಲೀಕನನ್ನು ಬಂಧಿಸಿ ಸಾರ್ವಜನಿಕವಾಗಿ ಮೆರವಣಿಗೆ ಮಾಡಿ ಸ್ಟೇಷನ್ನಿಗೆ ಕರೆತಂದಿದ್ದರು. ಮತ್ತಿಕೆರೆ ಗೌಡನಂತಹ ಪುಂಡರನ್ನು ಅಡಗಿಸಿದ್ದರು.

ಒಟ್ಟಾರೆ ಚಿತ್ರದುರ್ಗದಲ್ಲಿ ಮಾತಾಡಿದವರ ನೆನಪಿನಂಗಳದಲ್ಲಿ ಅವರೊಬ್ಬ ವೀರ, ದಿಟ್ಟ, ಸುಧಾರಕ, ದಲಿತ ಜನಸಮೂಹದ ಅರಿವಿಗಾಗಿಯೇ ಮೂಡಿ ಬಂದ ಚೇತನ ಎಂಬ ಅಭಿಮಾನದ ಸಂಗತಿಗಳೇ ಹೆಚ್ಚು. ಅವರ ಅಷ್ಟೇ ದಿನಗಳ ಸೇವೆಯಲ್ಲಿ ಸರ್ವಜಾತಿಗಳಿಗೂ ದಿಕ್ಕಾಗಿದ್ದರು. ಕಾನೂನು ರಕ್ಷಣೆ ನೀಡುವಲ್ಲಿ ದಕ್ಷತೆ ಮೆರೆದರು ಎಂಬುದನ್ನು ಬಹಳ ಖುಷಿಯಿಂದ ಹೇಳಿಕೊಳ್ಳುತ್ತಾರೆ. ದಲಿತ ಅಧಿಕಾರಿಯಿಂದ ತಾವು ನಿರೀಕ್ಷೆ ಮಾಡುವುದು ರಕ್ಷಣೆಯೋ, ಉಪಕಾರವೋ, ಎಲ್ಲ ಜಾತಿ-ವರ್ಗಗಳಲ್ಲಿ ಪಡೆದುಕೊಳ್ಳುವ ಜನಾನುರಾಗದ ಸಂಗತಿಯೋ, ಸ್ಪಷ್ಟವೆನಿಸುವುದಿಲ್ಲ. ಆದರೂ ತಮ್ಮ ಸಮುದಾಯದ ಒಬ್ಬ ಅಧಿಕಾರಿಯ ಒಳ್ಳೆಯ ಕೆಲಸಗಳು ತಮ್ಮ ಸಂಭ್ರಮ ಹಾಗೂ ಸಂತೋಷಕ್ಕೆ ಕಾರಣವಾಗುತ್ತದೆ ಎಂಬುದನ್ನು ಅರಿತಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಅವರ ಒಡನಾಟದಲ್ಲಿದ್ದವರಲ್ಲಿ, ಪರಿಚಯಸ್ಥರ ಎಷ್ಟೋ ಜನ ಬದುಕೇ ಇಲ್ಲ! ಇದ್ದವರಲ್ಲಿ ಬಹಳ ಜನ ಬಾಳಿನ ಮುಸ್ಸಂಜೆಯಲ್ಲಿದ್ದಾರೆ! ನೆನಪುಗಳು ಕೈಕೊಡುತ್ತಿವೆ. ಅಳಿದುಳಿದ ನೆನಪುಗಳಷ್ಟೇ ಬಸಿದುಕೊಳ್ಳಲು ಸಾಧ್ಯವಾಯಿತು.




ಕ್ರೀಡಾಪ್ರಿಯ

ಆರ್. ಎ. ನಾಥನ್, ಶಿವಮೊಗ್ಗ.

1958ರಲ್ಲಿ ಭರಣಯ್ಯ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದರು. ನಮ್ಮ ಒಂದು ಅರ್ಜಿಗೆ ಕೆಲಸ ಕೊಟ್ಟಿದ್ದರು. ಭರಣಯ್ಯ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ತುಂಬಾ

ಪ್ರೋತ್ಸಾಹ ಕೊಡುತ್ತಿದ್ದರು. ಬ್ರಿಟೀಷ್‌ರ ದಬ್ಬಾಳಿಕೆಯನ್ನು ನಾಟಕದ ಮೂಲಕ ಜನರ ಮುಂದಿಡುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಅದು ಶಿವಮೊಗ್ಗದಲ್ಲಿ ಮೂರು ದಿನ ನಡೆಯಿತು.

ನಾನು ಓದುತ್ತಿದ್ದಾಗ, ಭರಣಯ್ಯ ಅವರನ್ನು ಭೇಟಿಯಾದೆ. ಆಗ ಭರಣಯ್ಯ ಅವರು ನನಗೆ ಕೆಲಸದ ಅವಶ್ಯಕತೆ ಮನಗಂಡು ಒಂದು ಅರ್ಜಿಕೊಡಲು ಹೇಳಿದರು. ಅರ್ಜಿಕೊಟ್ಟ ತಕ್ಷಣ ಕೆಲಸ ದೊರಕಿತು. ಅಲ್ಲಿನ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿ ಕೆಲಸ ಸಿಕ್ಕಿತು. ಭರಣಯ್ಯ ದಕ್ಷ ಆಡಳಿತಗಾರರು. ಬಡವರು ಹಿಂದುಳಿದವರ ಬಗ್ಗೆ ಕರುಣೆ ಪ್ರೀತಿಯಿಂದ ಮಾತಾಡುತ್ತಿದ್ದರು. ಅಪ್ರತಿಮ ಭಾಷಣಕಾರರಾಗಿದ್ದರು. ಶಿಕ್ಷಣಕ್ಕೆ, ಚೆನ್ನಾಗಿ ಓದುವವರಿಗೆ ಆದ್ಯತೆ ಕೊಡುತ್ತಿದ್ದರು. ಸಾಂಸ್ಕೃತಿಕ ಚಟುವಟಿಕೆಗಳೆಂದರೆ ತುಂಬ ಪ್ರೀತಿಯಿತ್ತು. ಕ್ರೀಡೆಗೂ ಉತ್ತೇಜನ ಕೊಡುತ್ತಿದ್ದರು. ಮಾತಿನಲ್ಲಿ ಪ್ರೀತಿಯಿದ್ದರೂ ಆಡಳಿತದಲ್ಲಿ ಬಿಗಿ ಇತ್ತು. ತಮ್ಮ ಹುದ್ದೆಯ ಬಗ್ಗೆ ಎಂತಹ ಗೌರವ ಇತ್ತು ಎಂದರೆ ಜಿಲ್ಲಾಧಿಕಾರಿ ಕಛೇರಿ ಪ್ರವೇಶಿಸುವಾಗ ಈಚೆ ಚಪ್ಪಲಿ ಬಿಟ್ಟು ಹೋಗುತ್ತಿದ್ದರು. ಜನ ಅವರ ಮುಂದೆ ನಿಂತು ಮಾತಾಡಲು ಹಿಂಜರಿಯುತ್ತಿದ್ದರು. ಆದರೆ ಇವರು ಮುಕ್ತವಾಗಿ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಒಂದು ಕೆಂಪು ವ್ಯಾನ್ ಇಟ್ಟುಕೊಂಡಿದ್ದರು. ಆಗ ಜನಸಂಖ್ಯೆ ಸ್ವಲ್ಪ ಕಡಿಮೆ ಇತ್ತು. ಅಬ್ಬರ ಇರಲಿಲ್ಲ. ಒಂದು ವಾಕಿಂಗ್ ಸ್ಟಿಕ್ ಉಪಯೋಗಿಸುತ್ತಿದ್ದರು. ಉಡುಪಿನಲ್ಲೂ ಸಭ್ಯತೆ ಇತ್ತು.



ಜೀವನ್ಮುಖಿ

ಎ. ಡಿ. ರಾಮಪ್ಪ, ಶಿವಮೊಗ್ಗ

"ಭರಣಯ್ಯ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ನಾನು ವಾಸಿಸಲು ಮನೆಯಿಲ್ಲದೆ ಅಲೆಮಾರಿಯಾಗಿದ್ದೆ. ಛಲವಾದಿ ಮತ್ತು ಇತರ ಹಿಂದುಳಿದ ಜನಾಂಗದವರಿಗೆ ವಾಸಿಸಲು ಮನೆ ಹಾಗೂ ವ್ಯವಸಾಯ ಮಾಡಲು ಸರ್ಕಾರದಿಂದ ಜಮೀನು ಮಂಜೂರು ಮಾಡಿಕೊಟ್ಟಿದ್ದರು. ಒಂದು ಹೊತ್ತಿನ ಊಟಕ್ಕೂ ಕಷ್ಟವಿದ್ದ ಆ ಕಾಲದಲ್ಲಿ ಜನರ ನೋವು ನಲಿವುಗಳನ್ನು ಹತ್ತಿರದಿಂದ ಕಂಡ ಸರ್ಕಾರದ ಪ್ರತಿನಿಧಿಯಾಗಿ ಹಾಗೂ ಜನರ ಸೇವಕನಾಗಿ ಕೆಲಸಮಾಡಿ ಪ್ರಾಮಾಣಿಕ, ದಕ್ಷ ಆಡಳಿತಗಾರರಾಗಿ ಶಿವಮೊಗ್ಗ ಜಿಲ್ಲೆಯಾದ್ಯಂತ ಹಲವಾರು ಬಡವರಿಗೆ ಹಾಗೂ ಸಮಾಜದ ಹಿಂದುಳಿದ ಜನಾಂಗದವರಿಗೆ

ಮನೆ ಹಾಗು ಜಮೀನುಗಳನ್ನು ಮಂಜೂರು ಮಾಡಿದ ಕೀರ್ತಿ ಭರಣಯ್ಯನವರಿಗೆ ಸಲ್ಲುತ್ತದೆ" ಎಂದು ಶಿವಮೊಗ್ಗದ ಹೊಳೆಹೊನ್ನೂರಿನ ಎ. ಡಿ. ರಾಮಪ್ಪ ಈಗಲೂ ನೆನೆದು ಅವರಿಗೆ ಕೈಮುಗಿಯುತ್ತಾರೆ. ಇವರು ಚಲುವಾದಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ.

ಇಂತಹ ಕೆಲಸ ಆಗಿನ ಕಾಲದಲ್ಲೇ ಭರಣಯ್ಯನವರಿಗೆ ಸಾಧ್ಯವಾಗಿತ್ತು. ಆದರೆ ಈಗಿನ ಸರ್ಕಾರಗಳಿಗೆ ಹಿಂದುಳಿದವರಿಗೆ ಮನೆಯನ್ನಾಗಲೀ ಅಥವಾ ಜಮೀನುಗಳನ್ನಾಗಲೀ ನೀಡಲು ಸಾಧ್ಯವಾಗುತ್ತಿಲ್ಲ, ಏಕೆ? ಎಂದು ಪ್ರಶ್ನಿಸುತ್ತಾರೆ. ಈಗಿನ ಅಧಿಕಾರಿಗಳು ರೈತರ ಜಮೀನನ್ನೇ ಭೂಸ್ವಾಧೀನ ಪ್ರಕ್ರಿಯೆಯಿಂದ ವಶಪಡಿಸಿಕೊಳ್ಳುತ್ತಾರೆಯೇ ಹೊರತು, ಅವರಿಗೆ ಹಂಚಿದ ನಿದರ್ಶನಗಳೇ ಕಡಿಮೆ. ಹೀಗೆ ಇಂದಿನ ಅಧಿಕಾರಶಾಹಿಯನ್ನು ಟೀಕಿಸಿದ ರಾಮಪ್ಪನವರು. ಭರಣಯ್ಯನವರು ಶಿವಮೊಗ್ಗ ಜಿಲ್ಲೆಯಾದ್ಯಂತ ದಲಿತರು, ಹಿಂದುಳಿದವರಿಗೆ ಮನೆ ಮತ್ತು ಭೂಮಿಯನ್ನು ಮಂಜೂರು ಮಾಡಿಕೊಟ್ಟ ವಿವರಗಳನ್ನು ದಾಖಲೆ ಸಹಿತ ನೀಡಿದರು. ಅವರು ಹೇಳಿದ ಭರಣಯ್ಯನವರ ಕಾಯಕ ಪ್ರಸಂಗಗಳಿವು;

ಪ್ರಸಂಗ-1 : ಕೊಡ್ಲಿಗೇರೆ ಹೋಬಳಿ

'ಅರಬಿಳಿಚಿ', ಚಲವಾದಿ ಜನಾಂಗದವರಿಗೆ 3 ಮನೆ ನಿರ್ಮಾಣಮಾಡಿ, 4 ಎಕರೆ ಜಮೀನಿನಂತೆ ಮುಂಜೂರು ಮಾಡಿದರು. ಮಾದಿಗ ಜನಾಂಗದವರಿಗೂ ಕೂಡ 7 ಮನೆ ನಿರ್ಮಾಣಮಾಡಿ 5 ಜನಕ್ಕೆ 2 ಎಕರೆಯಂತೆ ಜಮೀನು ಮಂಜೂರು ಮಾಡಿದರು. ಹಾಲಿ ಅನುಭವದಲ್ಲಿರುತ್ತಾರೆ.

ಇದೇ ಹೋಬಳಿಗೆ ಸೇರಿದ 'ಕಲ್ಲಾಪುರ' ಗ್ರಾಮದಲ್ಲಿ ಚಲವಾದಿ ಜನಾಂಗದವರಿಗೆ 12 ಜನಕ್ಕೆ 3 ಮನೆ ನಿರ್ಮಾಣ ಮಾಡಿದರು. ಇನ್ನು 12 ಜನಕ್ಕೆ 5 ಎಕರೆಯಂತೆ ಜಮೀನು ಮುಂಜೂರು ಮಾಡಿರುತ್ತಾರೆ. ಇದರಲ್ಲಿ ಕೆಲವರು ಮಾರಾಟ ಮಾಡಿರುತ್ತಾರೆ. ಕೆಲವರು ಅನುಭವದಲ್ಲಿರುತ್ತಾರೆ.

ಪ್ರಸಂಗ-2 : ಶಂಕರಘಟ್ಟ ಹೋಬಳಿ

'ಮಾಳಾನಳ್ಳಿಗೆ' ಸೇರಿದ ಚಲವಾದಿ ಜನಾಂಗದವರಿಗೆ 2 ಮನೆ, 5 ಎಕರೆಯಂತೆ 2 ಜನಕ್ಕೆ ಜಮೀನು ಮಂಜೂರು ಮಾಡಿರುತ್ತಾರೆ. ಹಾಲಿ ಅನುಭವದಲ್ಲಿರುತ್ತಾರೆ. ಮಾದಿಗ ಜನಾಂಗದವರಿಗೆ 2 ಮನೆ ಮತ್ತು 2 ಎಕರೆ ಜಮೀನಿನಂತೆ 2 ಜನಕ್ಕೆ ಜಮೀನು ಮಂಜೂರು ಮಾಡಿರುತ್ತಾರೆ ಹಾಲಿ ಅನುಭವದಲ್ಲಿರುತ್ತಾರೆ.

ಪ್ರಸಂಗ – 3 : ಶಿವಮೊಗ್ಗ ತಾಲ್ಲೂಕು

ಶಿವಮೊಗ್ಗ ತಾಲ್ಲೂಕು 'ಗಾಜನೂರು' ಚಲವಾದಿ ಜನಾಂಗದವರಿಗೆ 20 ಮನೆ ನಿರ್ಮಾಣ ಮಾಡಿದರು. 2 ಜನಕ್ಕೆ 5 ಎಕರೆ ಜಮೀನು ಮಂಜೂರು ಮಾಡಿರುತ್ತಾರೆ. ಹಾಲಿ ಅನುಭವದಲ್ಲಿರುತ್ತಾರೆ. ಮಾದಿಗ ಜನಾಂಗದವರಿಗೂ ಸಹ 20 ಮನೆ ನಿರ್ಮಾಣ ಮಾಡಿರುತ್ತಾರೆ. 3 ಜನಕ್ಕೆ ಜಮೀನು ಮಂಜೂರು ಮಾಡಿರುತ್ತಾರೆ. ಹಾಲಿ ಅನುಭವದಲ್ಲಿರುತ್ತಾರೆ.

'ಸಿರಿಗೆರೆ' ಗ್ರಾಮದಲ್ಲಿ ಚಲವಾದಿ ಜನಾಂಗದವರಿಗೆ 20 ಮನೆ ನಿರ್ಮಾಣ ಮಾಡಿದರು. 15 ಜನಕ್ಕೆ 4 ಎಕರೆ, 5 ಎಕರೆಯಂತೆ ಜಮೀನು ಮಂಜೂರು ಮಾಡಿರುತ್ತಾರೆ. ಹಾಲಿ ಅನುಭವದಲ್ಲಿರುತ್ತಾರೆ.

ಪ್ರಸಂಗ–4 : ಶಿಕಾರಿಪುರ ತಾಲ್ಲೂಕು

'ಶಿಕಾರಿಪುರ'ದಲ್ಲಿ ಚಲವಾದಿ ಜನಾಂಗಕ್ಕೆ 9 ಮನೆ ನಿರ್ಮಾಣಮಾಡಿ 6 ಜನಕ್ಕೆ 4.3 ಎಕರೆಯಂತೆ ಜಮೀನು ಮಂಜೂರು ಮಾಡಿದರು.

ಪ್ರಸಂಗ–5 : ಭದ್ರಾವತಿ ತಾಲ್ಲೂಕು

ಭರಣಯ್ಯನವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಚಲವಾದಿ ಜನಾಂಗದವರಿಗೆ ಮತ್ತು ಮಾದಿಗ ಜನಾಂಗದವರಿಗೆ ಹೊಳೆಹೊನ್ನೂರು ಹೋಬಳಿ ಮತ್ತು 'ಹೊಳೆಹೊನ್ನೂರಿ'ನಲ್ಲಿ ಚಲವಾದಿ ಜನಾಂಗದವರಿಗೆ 10 ಕಪ್ಪುಹಂಚಿನ ಮನೆಗಳನ್ನು ನಿರ್ಮಾಣ ಮಾಡಿದರು. ಮಾದಿಗ ಜನಾಂಗದವರಿಗೂ ಕೂಡ ಸುಮಾರು 20 ಮನೆಗಳನ್ನು ನಿರ್ಮಾಣ ಮಾಡಿದರು.

ಪ್ರಸಂಗ–6 : ಸಿದ್ಗೀಪುರ ಗ್ರಾಮ

ಇದೇ ಹೋಬಳಿಗೆ ಸೇರಿದ 'ಸಿದ್ಗೀಪುರ' ಗ್ರಾಮದಲ್ಲಿ ಎ. ಡಿ. ನೀಲಪ್ಪ ಎಂಬುವರ ಮಗ ಎ. ಡಿ. ರಾಮಪ್ಪ ಇವರು ಒಳಗೊಂಡಂತೆ ಚಲವಾದಿ ಜನಾಂಗದವರಿಗೆ 5 ಮನೆಗಳನ್ನು ನಿರ್ಮಾಣ ಮಾಡಿದರು. ಅದರಂತೆ ಮಾದಿಗ ಜನಾಂಗದವರಿಗೆ 6 ಮನೆಗಳನ್ನು ನಿರ್ಮಾಣ ಮಾಡಿದರು. ಮತ್ತು ಸಿದ್ಗೀಪುರ ಗ್ರಾಮದ ರಿ. ಸ. ನಂ. 61ನೇ 5ನೇ ಬ್ಲಾಕ್‌ನಲ್ಲಿ 5 ಜನಕ್ಕೆ ಪ್ರತಿಯೊಬ್ಬರಿಗೂ ಕೂಡ 5 ಎಕರೆಯಂತೆ, ಗೋಮಾಳ ಜಮೀನು ಒಟ್ಟು 25 ಎಕರೆ ಜಮೀನನ್ನು ಮಂಜೂರು ಮಾಡಿದರು. ಇದರಲ್ಲಿ ಎ. ಡಿ. ನೀಲಪ್ಪನವರ ಮಗನಾದ ಎ. ಡಿ. ರಾಮಪ್ಪ ಇವರು ಇಂದಿಗೂ ಕೂಡ 5 ಎಕರೆ ಜಮೀನನ್ನು

ಅನುಭವದಲ್ಲಿರುತ್ತಾರೆ. ಇದೇ ರೀತಿ ಮಾದಿಗ ಜನಾಂಗದವರಿಗೂ ಕೂಡ ರಿ.ಸ.ನಂ. 32ರಲ್ಲಿ 4 ಎಕರೆ 5 ಎಕರೆಯಂತೆ ಸುಮಾರು 12 ಜನಕ್ಕೆ ಮಂಜೂರು ಮಾಡಿರುತ್ತಾರೆ. ಇದು ಉಂಬಳಿ ಜಮೀನಾಗಿರುತ್ತದೆ. ಇದನ್ನು ಎಲ್ಲರೂ ಸಹ ಮಾರಾಟ ಮಾಡಿರುತ್ತಾರೆ.

ಪ್ರಸಂಗ–7 : ನಾಗಸಂದ್ರ

ಆನವೇರಿ II ಹೋಬಳಿಗೆ 'ನಾಗಸಮುದ್ರ' ಚಲವಾದಿ ಜನಾಂಗಕ್ಕೆ 5 ಮನೆ ಕಟ್ಟಿಸಿಕೊಟ್ಟರು. 3 ಜನಕ್ಕೆ 3 ಎಕರೆಯಂತೆ ಜಮೀನು ಮಂಜೂರು ಮಾಡಿದರು. ಈಗ ಸುಮಾರು ಸ.ನಂ. 48ರಲ್ಲಿ 1 ಎಕರೆಯಂತೆ ಸುಮಾರು 15 ಜನಕ್ಕೆ ಜಮೀನು ಮುಂಜೂರು ಮಾಡಿರುತ್ತಾರೆ ಮತ್ತು ಹಾಲಿ ಅನುಭವದಲ್ಲಿರುತ್ತಾರೆ. ಇದೇ ರೀತಿ ಮಾದಿಗ ಜನಾಂಗದವರಿಗೆ 8 ಮನೆ ನಿರ್ಮಾಣ ಮಾಡಿರುತ್ತಾರೆ. ಸುಮಾರು 11 ಜನಕ್ಕೆ 2 ಎಕರೆ 3 ಎಕರೆಯಂತೆ ಜಮೀನು ನೀಡಿದರು ಮತ್ತು ಹಾಲಿ ಅನುಭವದಲ್ಲಿರುತ್ತಾರೆ. 'ಎಸ್. ಕೆ. ಮಗ್ಗೆ'ಯಲ್ಲಿ ಮಾದಿಗರಿಗೆ 11 ಮನೆ ನಿರ್ಮಾಣ ಮಾಡಿರುತ್ತಾರೆ. 11 ಜನಕ್ಕೆ 3 ಎಕರೆಯಂತೆ ಜಮೀನು ಮಂಜೂರು ಮಾಡಿದರು. ಇವರು ಹಾಲಿ ಅನುಭವದಲ್ಲಿರುತ್ತಾರೆ.

ಪ್ರಸಂಗ–8 : ನಿಂಬೆಗೊಂದಿ


'ನಿಂಬೆಗೊಂದಿ'ಯಲ್ಲಿ ಚಲವಾದಿ ಜನಾಂಗದವರಿಗೆ 8 ಮನೆ ನಿರ್ಮಾಣ ಮಾಡಿರುತ್ತಾರೆ. ಹಾಗೂ 9 ಜನಕ್ಕೆ 2 ಎಕರೆಯಂತೆ ಜಮೀನು ಮಂಜೂರು ಮಾಡಿದರು. ಹಾಲಿ ಅನುಭವದಲ್ಲಿದ್ದಾರೆ. ಇದರಂತೆ ಮಾದಿಗ ಜನಾಂಗದವರಿಗೆ 13 ಮನೆ ನಿರ್ಮಾಣ ಮಾಡಿದರು. 13 ಜನಕ್ಕೆ 2 ಎಕರೆಯಂತೆ ಜಮೀನು ಮಂಜೂರು ಮಾಡಿದರು.

ಪ್ರಸಂಗ – 9 : ಅರಹತೊಳಲು

'ಅರಹತೊಳಲು' ಚಲವಾದಿ ಜನಾಂಗದವರಿಗೆ 5 ಮನೆ ನಿರ್ಮಾಣ ಮಾಡಿದರು ಮತ್ತು ಮಾದಿಗ ಜನಾಂಗದವರಿಗೆ 5 ಮನೆ ನಿರ್ಮಾಣ ಮಾಡಿದರು.

ಇಂಥ ಸಾಧನೆಯನ್ನು ಕೇವಲ 2 ವರ್ಷ ಜಿಲ್ಲಾಧಿಕಾರಿಯಾಗಿದ್ದು ಮಾಡಿದ್ದು ಕಡಿಮೆ ಸಂಗತಿಯೇ!?.


ಇದು ರಾಮಪ್ಪನವರ ನೆನಪಿನಲ್ಲಿ ಅಚ್ಚಳಿಯದೆ ಉಳಿದಿರುವ ಮತ್ತು ಅಭಿಮಾನಪೂರ್ವಕ ಸಂಗತಿ.



ನಿರಕ್ಷರಿಗೂ ಕೆಲಸ ಕೊಟ್ಟರು!

ಶಿವಲಿಂಗಯ್ಯ ಶಿವಮೊಗ್ಗ

ಶ್ರೀ ಭರಣಯ್ಯನವರು ಡಿ.ಸಿಯಾಗಿ ಬಂದಾಗ ಹೆಬ್ಬೆಟ್ಟು, ನಿರಕ್ಷರಿಗಳನ್ನು ಸಹಾಯಕರಾಗಿ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದರು. ಯಾವುದೇ ದೇವಸ್ಥಾನಕ್ಕೆ ಹೋದರೂ ರುದ್ರಾಭಿಷೇಕ ಮಾಡಿಸುತ್ತಿದ್ದರು. ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದ್ದರು. ಅವರು ಯಾವುದೇ ಕಾರ್ಯ ಬಡವರ ವಿರುದ್ಧ ಇರುತ್ತಿರಲಿಲ್ಲ. ಸರ್ಕಾರದ ಎಲ್ಲ ಸವಲತ್ತುಗಳನ್ನು ಜನರಿಗೆ ತಲುಪಿಸುತ್ತಿದ್ದರು. ಅವರ ನಂತರ ಬಂದ ಅಧಿಕಾರಿಗಳು ಅವರ ರೀತಿ ಕೆಲಸ ಮಾಡಲಿಲ್ಲ. ಶಿವಮೊಗ್ಗದಲ್ಲಿ ಕೇವಲ ಒಂದುವರೆ ವರ್ಷ ಇದ್ದರು. ಆದರೆ ಜನ ಎಂದಿಗೂ ಮರೆಯದ ಛಾಪನ್ನು ಒತ್ತಿದ್ದಾರೆ. ಜನಗಳು ಅವರ ಬಗ್ಗೆ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದರು.



ಮಂತ್ರದ ಉಚ್ಚಾರಣೆಗಳನ್ನು ತಿದ್ದುತ್ತಿದ್ದರು

ವಿಶ್ವೇಶ್ವರ ಐತಾಳ್, ಕೃಷಿಕರು, ಶಿವಮೊಗ್ಗ

ಭರಣಯ್ಯ ಯಾರಿಗೂ ತೊಂದರೆ ಮಾಡುವಂತಹ ಮನುಷ್ಯ ಅಲ್ಲ. ಆಮೇಲೆ ಅಪಾರ ದೈವ ಭಕ್ತರು. ಜೊತೆಗೆ ಮಾನವೀಯತೆ ಇತ್ತು. ಯಾವುದಾದರೂ ದೇವಸ್ಥಾನಕ್ಕೆ ಹೋದರೆ ಅಲ್ಲಿ ಚಕ್ಕಳ ಮಕ್ಕಳ ಹಾಕಿ ಕುಳಿತು ಬಿಡುತ್ತಿದ್ದರು. ದೇವರಿಗೆ ರುದ್ರಾಭಿಷೇಕ ಮಾಡಿಸುತ್ತಿದ್ದರು. ಪುರೋಹಿತರು ಹೇಳುವ ಮಂತ್ರವನ್ನು ಶ್ರದ್ಧೆಯಿಂದ ಕೇಳಿಸಿಕೊಳ್ಳುತ್ತಿದ್ದರು. ಎಲ್ಲಾದರೂ ಪುರೋಹಿತರು ತಪ್ಪು ಹೇಳಿದರೆ. "ನೀವು ಈ ಮಂತ್ರ ತಪ್ಪು ಹೇಳುತ್ತಿದ್ದೀರಿ" ಎಂದು ಎಚ್ಚರಿಸುತ್ತಿದ್ದರು. ಸಂಸ್ಕೃತದಲ್ಲಿ ಅಂತಾ ಪಾಂಡಿತ್ಯ ಇತ್ತು. 'ಅಂಬುತೀರ್ಥ' ಎಂಬ ದೇವಸ್ಥಾನಕ್ಕೆ ಒಮ್ಮೆ ಹೋಗಿದ್ದರು. ಅಲ್ಲಿನ ಪುರೋಹಿತರಿಗೆ ರುದ್ರಾಭಿಷೇಕ ಮಾಡಲು ಹೇಳಿ ಕುಳಿತರು. ಅಲ್ಲಿಯೂ ಕೂಡ ಪುರೋಹಿತರು ಒಂದು ಮಂತ್ರವನ್ನು ತಪ್ಪಾಗಿ ಉಚ್ಚರಿಸಿದರು. ತಕ್ಷಣ ಭರಣಯ್ಯ ಅವರ ಮಂತ್ರ ನಿಲ್ಲಿಸಿ ಆ ಸಾಲನ್ನು ಮತ್ತೆ ಹೇಳುವಂತೆ ಹೇಳಿದರು. ಆಗ ಪೂಜಾರಿಗೆ ತನ್ನ ತಪ್ಪಿನ ಅರಿವಾಯಿತು.


ಅವರು ಡಿಸಿಯಾಗಿದ್ದರೂ ದೇವಸ್ಥಾನಕ್ಕೆ ಬಂದಾಗ ಕುರ್ಚಿಹಾಕಿದರೆ ಬೇಡವೆಂದು ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದರು. ತಮ್ಮ ಅಧಿಕಾರಾವಧಿಯಲ್ಲಿ ಸಾಧ್ಯವಾದಷ್ಟು ಉಪಕಾರವನ್ನು ಜನತೆಗೆ ಮಾಡಿದರು. ಸರಳ ಜೀವಿ. ಎಂತಹ ಬಡವರು ಕರೆದರೂ ಅವರ ಮನೆಗೆ ಹೋಗುತ್ತಿದ್ದರು. ಎಲ್ಲಿಯೂ ಒಂದು ರೂ ಲಂಚ ಮುಟ್ಟಿದವರಲ್ಲ.



ಜಗಳ ಬಿಡಿಸಿದರು!!

ಗುರುರಾವ್, ಅಟೆಂಡರ್, ಸಹ್ಯಾದ್ರಿ ಕಾಲೇಜ್, ಶಿವಮೊಗ್ಗ

ಭರಣಯ್ಯ ದೈವಭಕ್ತರಾದುದರಿಂದ ದೇವರ ಕುರಿತ ಧ್ಯಾನ ಭಜನೆಗಳಿಗೆ ಅನುಮತಿ ಕೊಡುತ್ತಿದ್ದರು. ಸಂಸ್ಕೃತ ಶ್ಲೋಕಗಳನ್ನು ಚೆನ್ನಾಗಿ ಬಾಯಿಪಾಠ ಮಾಡಿದ್ದರು. ಮಹಾಭಾರತ, ರಾಮಾಯಣ ಮುಂತಾದವುಗಳನ್ನು ಓದಿಕೊಂಡಿದ್ದರು. ಕೃಷ್ಣಸ್ವಾಮಿ ಎಂಬ ಸೂಪರಿಂಟೆಂಡೆಂಟ್ ಇದ್ದಕಾಲದಲ್ಲಿ ಕ್ರಿಕೆಟ್ ನಡೆಯುವಾಗ ವಿದ್ಯಾರ್ಥಿಗಳಲ್ಲಿ ಜಗಳವಾಗಿತ್ತು. ಆದ್ದರಿಂದ ಎರಡು ಮೂರುದಿನ ಕಾಲೇಜು ನಡೆಯಲಿಲ್ಲ. ಜಗಳ ಪರಿಹರಿಸಲು ಬಂದ ಡಿ.ಸಿ. ಭರಣಯ್ಯನವರಿಗೆ ಕಾಲೇಜಿನ ಪ್ರಾಂಶುಪಾಲರು ಜಗಳವನ್ನು ನಾವೇ ಪರಿಹರಿಸುತ್ತೇವೆ ಎಂದು ಅವರನ್ನು ವಾಪಸ್ ಕಳುಹಿಸಿದ್ದರು.




ಧರ್ಮಾನುಸಾರ ಆದೇಶ ನೀಡುತ್ತಿದ್ದರು

ಎ. ಎನ್. ಮಾಧವ, ನಿವೃತ್ತ ಗ್ರಾಮಲೆಕ್ಕಿಗ, ಶಿವಮೊಗ್ಗ

ಶಿಕಾರಿಪುರ ತಾಲ್ಲೂಕಿನಲ್ಲಿ ಮಾಧ್ವರು ಗ್ರಾಮಲೆಕ್ಕಿಗರಾಗಿದ್ದಾಗ ಭರಣಯ್ಯ ಜಿಲ್ಲಾಧಿಕಾರಿ. ಜಮಾಬಂದಿ ಕಾಲಕ್ಕೆ ಗ್ರಾಮಪಂಚಾಯಿತಿ – ತಾಲ್ಲೂಕು ಪಂಚಾಯತಿಗೆ ಭೇಟಿ ನೀಡಿ ಸೂಕ್ತ ಸಲಹೆ ಸೂಚನೆ ಕೊಡುತ್ತಿದ್ದರು. ಕಾನೂನು, ನಿಯಮಗಳನ್ನು ತಿಳಿಸಿ ಹೇಳುತ್ತಿದ್ದರು. ಏನೇ ಆದೇಶ ಕೊಟ್ಟರೂ ಕಾನೂನು ಮತ್ತು ಧರ್ಮಕ್ಕನುಸರಿಸಿ ಕೊಡುತ್ತಿದ್ದರು. ಮುಖ ನೋಡಿ ಮಣೆ ಹಾಕುತ್ತಿರಲಿಲ್ಲ. ಯಾವುದೇ ಉದಾಹರಣೆ ಕೊಡಬೇಕಾದರೆ ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದರು. ರೆವಿನ್ಯೂ ಇಲಾಖೆಗೆ ಉತ್ತಮ ಆಡಳಿತ ನೀಡುತ್ತಿದ್ದರು. ಅಧಿಕಾರಿಗಳಿಗೆ, ರೈತರಿಗೆ ಅವರ ಕಷ್ಟ ತಿಳಿದು ಸಹಕರಿಸುತ್ತಿದ್ದರು.


ರಾಜಕಾರಣಿಗಳಿಗೂ ಸಹ ಬುದ್ಧಿವಾದ ಹೇಳುತ್ತಿದ್ದರು! ಅವರು ಕೇಳದಿದ್ದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಮುಂದಾಗುತ್ತಿದ್ದರು!



ಒಳ್ಳೆಯ ಮಾತುಗಾರ

ಸತ್ಯನಾರಾಯಣ, ನಿವೃತ್ತ ಎಲೆಕ್ಟ್ರಿಷಿಯನ್ (ವಿಐಎಸ್‌ಎಲ್)

ಭರಣಯ್ಯನವರು ಒಳ್ಳೆಯ ಆಡಳಿತಾಧಿಕಾರಿಯಾಗಿದ್ದರು. ಆ ಕಾಲದಲ್ಲಿ ಅಧಿಕಾರಿಗಳನ್ನು ಕಾಣಬೇಕಾದರೆ ದೇವರನ್ನು ಕಾಣುವ ರೀತಿಯಲ್ಲಿ ಕಾಣಬೇಕು. ಯಾವಾಗಲೋ ಬರುತ್ತಿದ್ದರು, ಹೋಗುತ್ತಿದ್ದರು, ನನಗೆ ಜ್ಞಾಪಕ ಇರುವಂತೆ ಶಾರದ ಮಂದಿರಕ್ಕೆ ಸಭೆ ಸಮಾರಂಭಕ್ಕೆ ಭಾಷಣಗಳಿಗೆ ಕರೆಸುತ್ತಿದ್ದರು. ನನಗೆ ಜ್ಞಾಪಕವಿರುವಂತೆ ಭರಣಯ್ಯನವರು ಭಾಷಣದಲ್ಲಿ ಯಾವಾಗಲೂ "Man Power is most important power in the world" ಎಂದು ಹೇಳುತ್ತಿದ್ದರು, ಅಲ್ಲದೇ ಕಾರ್ಮಿಕರಿಗೆ ಹಣ ನೀಡುವವನು ಮಾಲೀಕನಲ್ಲ ಅವನು ಬರೀ ಹಸ್ತಾಂತರಿಸುತ್ತಾನೆ, ಹಣ ನೀಡುವುದು ಗುಣಮಟ್ಟ ಮಾತ್ರವೇ ಎಂದು ಹೇಳುತ್ತಿದ್ದರು. ಅಂದರೆ ವಸ್ತುಗಳು Quality ಯಾಗಿರಬೇಕು. ಸಭೆ ಸಮಾರಂಭಗಳ ಭಾಷಣಗಳಲ್ಲಿ ಕಾರ್ಮಿಕರಿಗೆ ತಿಳಿ ಹೇಳುತ್ತಿದ್ದರು, ಒಳ್ಳೆಯ ವ್ಯಕ್ತಿತ್ವ ಅವರದು ಅವರು. ಇದ್ದದ್ದು ಸ್ವಲ್ಪವೇ ದಿನ ಮಾತ್ರ.



ಒಳ್ಳೆಯ ಆಡಳಿತಗಾರ

ಬಾಲಕೃಷ್ಣ ಎಸ್. ಎನ್. (ನಿವೃತ್ತ ಇಂಜಿನಿಯರ್) ಹಾಗೂ ವಿ.ಐ.ಎಸ್.ಎಲ್ ನ ನಿವೃತ್ತ ನೌಕರರ ಸಂಘದ ಮಾಜಿ ಅಧ್ಯಕ್ಷರು, ಭದ್ರಾವತಿ

ಭರಣಯ್ಯನವರು ವಿಐಎಸ್‌ಎಲ್‌ನಲ್ಲಿ Board of Director ನ Secretary ಆಗಿದ್ದರು. ಬಹಳ Short Period ಮಾತ್ರ ಇದ್ದದ್ದು very good administrator ಅವರು. ಆದರೆ ಅವರ Periodನಲ್ಲಿ Development change ಏನೂ ಆಗಲಿಲ್ಲ. ಏಕೆಂದರೆ ಅವರು ಇದ್ದದ್ದು ಬಹಳ ಕಡಿಮೆ ಅವಧಿ ಒಂದು ವರ್ಷವೂ ಸಹ ಇರಲಿಲ್ಲವೇನೋ. ಅದರೆ

ಒಬ್ಬ ಒಳ್ಳೆಯ ಸಂಸ್ಕೃತ ವಿದ್ವಾಂಸ. ನಾನು ಬ್ರಾಹ್ಮಣ ಜನಾಂಗದವನಾಗಿರುವುದರಿಂದ ಸಂಸ್ಕೃತದ ಬಗ್ಗೆ ನನ್ನೊಂದಿಗೂ ಸಹ ಚರ್ಚಿಸುತ್ತಿದ್ದರು. ಅವರು Factory ಗಿಂತ D. C. ಯಾಗಿ ಒಳ್ಳೆಯ ಹೆಸರು ಗಳಿಸಿದ್ದರು. ಒಳ್ಳೆಯ ಆಡಳಿತಗಾರ ಶಿವಮೊಗ್ಗದಲ್ಲಿ ಅವರ ಹೆಸರು ಜನಜನಿತ, ಡಿ.ಸಿಯಾಗಿ ಅವರ ಸೇವೆ ಅನನ್ಯ. ಅದರೆ ಇಲ್ಲಿ ಅವರಿಂದ ಅಭಿವೃದ್ಧಿ ಸಾಧ್ಯವಾಗಲಿಲ್ಲ. ಏಕೆಂದರೆ ಕಡಿಮೆ ಅವಧಿ, ಅಲ್ಲದೇ ಇವರ ಮೇಲಿನ ಸ್ಥಾನದಲ್ಲಿ Vice President ಇರುತ್ತಿದ್ದರು. ಇಷ್ಟು ವಿಷಯ ಮಾತ್ರ ನನಗೆ ಜ್ಞಾಪಕವಿದೆ.

* * *


ಭರಣಯ್ಯನವರು ಶಿವಮೊಗ್ಗದಲ್ಲಿ 27-03-1957 ರಿಂದ 24-11-1958ರವರೆಗೆ ಜಿಲ್ಲಾಧಿಕಾರಿಯಾಗಿದ್ದರು. ಈ ಅವಧಿಯಲ್ಲಿ ಕೆಲಸ ಮಾಡಿದ ಬಹಳಷ್ಟು ಮಂದಿ ನೌಕರರು ಇಲ್ಲ. ಭರಣಯ್ಯನವರೇ ನೇಮಕಾತಿ ಮಾಡಿದ ವ್ಯಕ್ತಿ ನಾಥನ್‌ರವರು ಮಾತ್ರ ಸಾಕಷ್ಟು ವಿಷಯವನ್ನು ಭರಣಯ್ಯನವರ ಬಗ್ಗೆ ನೀಡಿದರು.

ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದರಂತೆ. 1957ರಲ್ಲಿ ನಡೆದ "1857ರ ಪ್ರಥಮ ಸ್ವಾತಂತ್ರ ಸಂಗ್ರಾಮ"ದ ಶತಮಾನೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಲವಾರು ರೀತಿಯ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಅದರಲ್ಲಿ ವಿಜೇತರಾದವರನ್ನು ಗುರುತಿಸಿ ಗೌರವಿಸಿ ಹಾಗೂ ಉದ್ಯೋಗಗಳನ್ನು ಸಹ ನೀಡಿದ್ದಾರೆ.

ಇವರು ತಮ್ಮ ಅವಧಿಯಲ್ಲಿ ಜನರಿಗೆ ಉಪಯೋಗವಾಗುವ ಕಾನೂನುಗಳನ್ನೇ ಮಾಡುತ್ತಿದ್ದರಂತೆ. ಆದ್ದರಿಂದ 50-55 ವರ್ಷವಾದರೂ ಸಹ ಅವರ ಹೆಸರು ಶಿವಮೊಗ್ಗ ಜಿಲ್ಲೆಯಾದ್ಯಂತ ಈಗಲೂ ಉಳಿದವರಲ್ಲಿ ಚಿರಪರಿಚಿತವಾಗಿದೆ.

ಈ ಅವಧಿಯಲ್ಲಿ ಭರಣಯ್ಯನವರು, ಶಿವಮೊಗ್ಗ ಜಿಲ್ಲಾಧಿಕಾರಿಯಾಗಿ, City Club Chair Person ಆಗಿ MAM Cos, Malnad Area Marketing Co-operative society ಯ ಅಧ್ಯಕ್ಷರಾಗಿ, Government Officers Co-operative Society ಅಧ್ಯಕ್ಷರಾಗಿ ಮತ್ತು ಜಿಲ್ಲಾ ವಯಸ್ಕರ ಶಿಕ್ಷಣ ಬೋರ್ಡ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

* * *


1857 Centenary Celebration of 1957

THE FIRST WAR OF INDEPENDENCE.

Shimoga District 1957.

This is to Certify that Sri/ ~~Srimati~~ Indaya Nathan

Participated in the following items of activities organised to celebrate the centenary of

THE FIRST WAR OF INDEPENDENCE OF 1857.

1 Exhibition Cricket Match
2
3
4
5
6

SHIMOGA
Dated the 16th August 1957.


Convener,
SUB-COMMITTEE.

President,
CENTENARY CELEBRATION COMMITTEE,
SHIMOGA

ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವ ನೆನಪಿಗೆ ವ್ಯಕ್ತಿಯೊಬ್ಬರಿಗೆ ನೀಡಿರುವ ಸರ್ಟಿಫಿಕೆಟ್.


ಅಲೆ – ನಾಲ್ಕು

ಲೇಖನಗಳು



ಮಹಾನ್ ಮಾನವತಾವಾದಿ ಡಾ|| ಅಂಬೇಡ್ಕರ್ ಹಚ್ಚಿದ ಬೆಳಕನ್ನು ದಲಿತರ ಮನ-ಮನೆಗಳತ್ತ ಕೊಂಡೊಯ್ದವರು ಹಲವರು. ಶೈಕ್ಷಣಿಕ ಮಾರ್ಗದಲ್ಲಿ, ಸಾಮಾಜಿಕ ಹೋರಾಟಗಳ ಮೂಲಕ, ರಾಜಕೀಯ ಅವಕಾಶಗಳ ಮೂಲಕ ಅಂಬೇಡ್ಕರ್‌ರವರ ಚಿಂತನೆಗಳನ್ನು ಸಾಕಾರಗೊಳಿಸಲು ದುಡಿದರು ಮತ್ತೆ ಹಲವರು. ಬಹುಸಂಖ್ಯಾತ ಅನಕ್ಷರಸ್ಥರಿಂದಲೇ ತುಂಬಿ ತುಳುಕುತ್ತಿದ್ದ ಈ ಜನ ಸಮುದಾಯಕ್ಕೆ ಕೈಚಾಚಿ ಸಲಹಿದವರು ಮತ್ತೆ ಕೆಲವರು. ಇಂಥವರಲ್ಲಿ ಆರ್. ಭರಣಯ್ಯನವರು ಒಬ್ಬರು. ಇಂಥದೊಂದು ಚೇತನ, ದೀನ-ದಲಿತರಿಗಾಗಿ ಹೇಗೆ ಹಂಬಲಿಸುತ್ತಲಿತ್ತು ಎಂಬುದರ ನೆನಪನ್ನು ಮುಂದಿನ ಪೀಳಿಗೆಗೆ ಕಟ್ಟಿಕೊಡಬೇಕಾಗಿದೆ. ಆರ್. ಭರಣಯ್ಯನವರು ತಮ್ಮ ಜೀವಿತಕಾಲದಲ್ಲಿ ಅಂಬೇಡ್ಕರ್ ಚಿಂತನೆಗಳನ್ನು ಹೇಗೆ ಮುನ್ನಡೆಸಿದರು ಎಂಬುದನ್ನು ಮುಂದಿನವರಿಗೆ ತೋರಿಸಿಕೊಡುತ್ತಲೇ, ಇಂದಿನವರನ್ನು ಅವರ ಕೆಲಸಗಳನ್ನು ಮುನ್ನಡೆಸುವುದಕ್ಕೆ ಸಜ್ಜುಗೊಳಿಸುವ ಅವಶ್ಯಕತೆ ಕೂಡ ಇದೆ. ಈ ನಿಟ್ಟಿನಲ್ಲಿ ಹಿಂದಿನ ತಲೆಮಾರಿನ ಒಳ್ಳೆ ಕೆಲಸಗಳ ನೆನೆದು ಅದನ್ನು ಪರಂಪರೆಯ ಸ್ಮರಣೆಯಂತಾಗಿಸುವುದು ಅತ್ಯಂತ ಆದ್ಯತೆಯ ಕೆಲಸವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಾಡಿನ ಹೆಸರಾಂತ ಚಿಂತಕರು ಮತ್ತು ಪ್ರಗತಿಪರರನ್ನು ಸಂಪರ್ಕಿಸಲಾಯಿತು. ಅವರು ಭರಣಯ್ಯನವರ ನೆನಪಿನ ನೆಪದಲ್ಲಿ ಈ ನಾಡಿನ ದಲಿತ ಬದುಕು-ಬವಣೆಗಳ ಒಳ-ಹೊರಗನ್ನು ದಲಿತ ಅಧಿಕಾರಷಾಯಿಯ ಸ್ಥಿತಿಗತಿಯನ್ನು ನೆನೆದಿದ್ದಾರೆ. ದಲಿತ ಲೋಕದ ಸ್ಮರಣೆಯಲ್ಲಿ ನಿಧಾನಕ್ಕೆ ಅಳಿಯುತ್ತಿರುವ ಜನೋಪಕಾರಿ ಅಧಿಕಾರಿಗಳನ್ನು, ಕಾಲದ ದೃಷ್ಟಿಯಿಂದ ಉಳಿಸಿಕೊಳ್ಳುವುದು ಅಗತ್ಯವಾಗಿದ್ದು, ಅಂಥವರ ಸ್ಮರಣೆಯೊಂದಿಗೆ ವರ್ತಮಾನಕ್ಕೆ, ಭವಿಷ್ಯಕ್ಕೆ, ಅಧಿಕಾರಿಷಾಹಿ ಮೂಲಕ ದಲಿತ ಜನಜೀವನದ ಬದುಕು ನಿರ್ವಹಣೆಗೊಂಡಿರುವುದನ್ನು ದಾಖಲಿಸುವ ಒಂದು ಪುಟ್ಟ ಪ್ರಯತ್ನವಾಗಿ ಈ ಭಾಗದ ಲೇಖನಗಳು ನುಡಿದಿವೆ.



Remembering Shri R. Bharaniah

Zafar Saifullah, I.A.S., (Retired)

The Observance of the 98th birth anniversary of my former service colleague and good friend, Shri R. Bharaniah, I.A.S., provides a fine opportunity to recall his persona, and remember a few vignettes of my interactions with him which were both incisive and interesting.

I met Shri R. Bharaniah for the first time when, along with my batch-mate, Shri G.V. Vishwanath, I touched Karnataka (then Mysore State) to start my career in the State of my choice. I was an outsider - domiciled in Bombay City, educated there, and a complete stranger to the State, never having visited it and without a soul who even remotely could be called a relative. Then why did I choose or opt for Mysore State for being allotted to its IAS Cadre?

That is itself a strange story. I had the privilege of being the All - India topper of my IAS batch (1958). On the day I applied for admission to the Union Public Service Commission (UPSC) examination, I read a news item in the Times of India of that morning that the Government of India had approved the constitution of the Jammu and Kashmir (J&K) State Cadre of the IAS. And, because it was a beautiful State which I had not till then even visited, I just opted for it as my first choice. I had decided to appear for the exam only because some people whose opinions and views I valued greatly, told me that the IAS, etc. examination was the toughest test and to top it was a singular achievement. In my mind, the challenge registered and I appeared, not with the idea of joining the Service, but only to see if I could top - and of course, to prove to those very people that I could! I was well on course to qualify as a Charted Accountant – a profession which my family favoured, because it meant following in my father's footsteps. I got busy with my Law studies and preparations for my CA Preliminaries – almost forgetting about the UPSC examination. In any case, at that stage, I was below the minimum qualifying age limit to be admitted to the examination. But, a few other friends, a year or two senior to me in age, appeared and one of them qualified. That revived the challenge in my mind – and I sat for the examination. And, as I said, by the grace of God, I topped.

The scheme of cadre allotment in those years was the following: The vacancies in each State were divided into two equal halves - one half to be filled by candidates belonging to the State; and the other half by candidates domiciled outside the State. Within this formula, allotments were made strictly on the basis of merit, that is, ranking in the UPSC's list of successful candidates. So, by right, I should have been allotted to the J&K cadre. However, at the request of Bakshi Ghulam Mohammed Saheb, the then Prime Minister of Kashmir {Now called Chief Minister of Jammu and Kashmir}, Pandit Jawaharlal Nehru, our revered Prime Minister, agreed that for the first couple of years, the vacancies in the State would be filled up entirely by officers of the State Civil Service who qualified for being seconded to the IAS. That decision conferred on me two distinctions. I was the only UPSC topper of the IAS who did not get allotted to the State of his choice; and I was the only officer appointed to the IAS who was invited to restate his cadre preference after being appointed to and joining the Service. That was when I chose Mysore (now Karnataka) - a decision which, not for a day, did I have any occasion to regret.

When B. Guruprasad, Shri Bharaniah's third son, approached me to write a piece for their forthcoming publication about their father, I had no hesitation in agreeing. How could I decline to write about a person whose portly, amiable, totally committed and dedicated persona had struck me and impressed me from my very first meeting with him?

We met first informally in the Vidhana Soudha corridors, introduced by another senior colleague who was taking us around that day through our meetings in his Department. Though a casual meeting, it did not stop at a formal "Hello" but covered a few minutes

of informal conversation. I remember how warmly he shook my hand and said "Welcome to Mysore; you will be very well received here. You could not have asked for a better State" words which were to prove entirely prophetic. He enquired when we were visiting him during our stint of "Secretariat Training" and said that he should be reminded a day in advance so that he could keep himself absolutely free to attend to us - and give us a nice treat also. Wasn't that utterly disarming!

He had taken over as Director of Social Welfare in Karnataka. He had started making waves already by organising the distribution of the budgeted amounts in a unique manner. There had been complaints of corruption and of the grants - either entirely or in substantial part - being siphoned off before they reached the beneficiary. Time was short. So, Shri Bharaniah asked the Deputy Commissioners to select the beneficiaries and, accompanied by some responsible officials to identify them, send them to his office in Bangalore, where, over the last few days of the financial year, he personally supervised the handing over of the sanctioned benefits to each respective beneficiary.

Shri Bharaniah was not a person to stand on ceremony. He was a civil servant; but with the touch and magic of a true representative and even a leader of people. He loved mixing with people, hearing them narrate their problems and, then, trying his best to find solutions in whatever way he could, to help. In this way, he was far more popular than some of his political bosses - quite a few of whom were so conscious of his popularity that they elevated him to a status above themselves.

I succeeded him a few years down the line to the same office - something which I could never have anticipated when I met him for the first time and interacted with him in his chamber. The staff

remembered him very fondly; and, though his methods sometimes imposed a severe strain on them, there was not one person who had an unkind reference to make about him. One thing which they all agreed with - he was a man who was fair and humane to his finger tips, very generous and very positive in his outlook.


Times have changed vastly since those days. The sheer weight of the growth in the volume of work would make it impossible to adopt some of his methods today. But, the enduring memory of his contribution to the bureaucracy of those days, which would be as significant today as it was then, was his attitude and the frame of mind he brought to bear upon his responsibilities - to be a problem-solver and not a problem-creator; to find ways within the system to redress a grievance rather than offer the system as an excuse for not doing anything to redress it.

The plans which the Foundation named after him has adopted and drawn up could not have been closer to his heart, as far as I can assess. Upliftment of the backwards, the deprived and the downtrodden irrespective of their caste or creed, and using education, culture and skill development for the purpose - that would be the agenda which he himself would lay down for the Foundation. That his children have come forward to carry the torch and bring light and hope to the lives of those who may otherwise have just faded away - is the best tribute that they can pay their worthy father.

May their effort succeed fully!!!

Former Cabinet Secretary,
Government of India

* * *



ಧಮ್ಮದೀಕ್ಷೆ: ಯಶೋಧರೆಯರ ಕಷ್ಟಗಳು

ಪ್ರೊ. ರಹಮತ್ ತರೀಕೆರೆ

ನನಗೊಮ್ಮೆ ಕರ್ನಾಟಕದ ಬೌದ್ಧಧರ್ಮಕ್ಕೆ ಸಂಬಂಧಿಸಿದ ಜನರನ್ನೂ ಜಾಗಗಳನ್ನೂ ಕಣ್ಣಾರೆ ಕಾಣುವ ಆಸೆ ಮೊಳೆಯಿತು. ಆಸೆಯನ್ನು ಧಾರವಾಡದ ವೈದ್ಯಮಿತ್ರ ಸಂಜೀವ ಕುಲಕರ್ಣಿಯವರಲ್ಲಿ ಹಂಚಿಕೊಂಡೆ. ಬೌದ್ಧಧರ್ಮದ ಬಗ್ಗೆ

ಒಳಸೆಳೆತವುಳ್ಳ ಅವರು ಸೈಯೆಂದು ಒಪ್ಪಿಕೊಂಡರು. ನಾವಿಬ್ಬರೂ ಸೇರಿ, ತಿರುಗಾಟದ ಪಥವನ್ನು, ಜಾಗಗಳನ್ನು, ಕಾಣಬೇಕಾದ ಜನರನ್ನು ಗುರುತು ಮಾಡಿಕೊಳ್ಳುತ್ತ ತಯಾರಿ ನಡೆಸಲಾರಂಭಿಸಿದೆವು. ಇದನ್ನು ಹೇಗೊ ಪತ್ತೆಮಾಡಿದ ಮೈಸೂರಿನ ಗೋವಿಂದಯ್ಯನವರು ನಾನೂ ಬರುತ್ತೇನೆಂದು ಗಂಟುಬಿದ್ದರು. ಕಡೆಗೆ ತಂಡಕ್ಕೆ ಯುವಕವಿ ಅರುಣ್ ಜೋಳದಕೂಡ್ಲಿಗಿಯನ್ನು ಸೇರಿಸಿಕೊಂಡೆವು.

ನಾವು ನಾಲ್ವರು, ಆಕಸ್ಮಿಕವಾಗಿ ನಮಗೇ ಅರಿಯದಂತೆ ಸಮಾಜದ ನಾಲ್ಕು ಸ್ತರಗಳಿಂದ ಬಂದವರಾಗಿದ್ದು, ಬುದ್ಧನ ನೆಪದಲ್ಲಿ ಒಂದಾಗಿದ್ದೆವು. ನಮಗೆ ಆಯಾ ದಿನ ಸಿಕ್ಕ ಅನುಭವವನ್ನು ನಾಲ್ವರೂ ಸೇರಿ ಚರ್ಚಿಸುತ್ತಿದ್ದೆವು. ನಮ್ಮ ಜತೆ ಒಂದು ಹೆಂಜೀವವೂ ಇದ್ದಿದ್ದರೆ, ತಂಡಕ್ಕೆ ಬೇರೊಂದು ಕಣ್ಣು ಒದಗಿರುತ್ತಿತ್ತೇನೊ? ಆದರೆ ಹೊರಡುವಾಗ ಹಾಗೆ ಯಾರೂ ನಮಗೆ ಸಿಗಲಿಲ್ಲ. ನಿಜ ಹೇಳಬೇಕೆಂದರೆ, ನಾವು ಈ ದಿಸೆಯಲ್ಲಿ ಚಿಂತಿಸಲಿಲ್ಲ. ಮನೆಮಡದಿ ಯಶೋಧರೆಯ ಹಂಗಿಲ್ಲದೆ ತಿಳಿವಳಿಕೆಯ ಹುಡುಕಾಟಕ್ಕೆ ಹೊರಟ ಬುದ್ಧನ ನಾಡಿನವರು ತಾನೇ ನಾವು?

ಧಾರವಾಡದಿಂದ ಪಯಣವನ್ನು ಆರಂಭಿಸಿ ಕರ್ನಾಟಕವನ್ನು ಅದರ ಅಂಚಿನಲ್ಲೇ ಚಲಿಸುತ್ತ ಒಂದು ಸುತ್ತು ಹಾಕಿದೆವು. ಸುಮಾರು 1500 ಕಿಮಿ ಉದ್ದದ 15 ದಿನಗಳ ಪಯಣ. ಇದರಲ್ಲಿ ನಾವು ಬೌದ್ಧ ವಿಹಾರಗಳನ್ನೂ ಚೈತ್ಯಾಲಯಗಳನ್ನೂ ಬೌದ್ಧಮೂರ್ತಿಗಳನ್ನೂ ಕಂಡೆವು; ಧಮ್ಮಸ್ವೀಕಾರದ ಬಳಿಕ ಅಶೋಕನು ಕರ್ನಾಟಕದಲ್ಲಿ ಹಾಕಿಸಿದ ಶಾಸನಗಳನ್ನು ಕಂಡೆವು; ಬೌದ್ಧಧರ್ಮದ ಬೋಧನೆ ನಡೆಯುತ್ತಿದ್ದ ಗುರುಕುಲಗಳನ್ನೂ ಬುದ್ಧನ ಹೆಸರಲ್ಲಿ ಕಟ್ಟಲಾಗಿರುವ ಶಿಕ್ಷಣ ಸಂಸ್ಥೆಗಳನ್ನೂ ಭೇಟಿಮಾಡಿದೆವು; ಬೌದ್ಧ ಚಿಂತಕರನ್ನು, ಭಂತೆಗಳನ್ನು ಹಾಗೂ ಸಾಧಕರನ್ನು ಕಂಡು ಮಾತಾಡಿದೆವು. ತಮ್ಮ ರಾಜಕೀಯ ಕಾರ್ಯಕ್ರಮದ ಭಾಗವಾಗಿ ಧಮ್ಮಪ್ರಸಾರ ಕೈಗೊಂಡಿರುವ ಬಿಎಸ್‌ಪಿ ಕಾರ್ಯಕರ್ತರ ಜತೆ ಚರ್ಚಿಸಿದೆವು. ಬೌದ್ಧಸಂಪ್ರದಾಯದಲ್ಲಿ ಲಗ್ನವಾಗಿರುವ ದಂಪತಿಗಳನ್ನೂ ಧಮ್ಮದೀಕ್ಷೆ ಪಡೆದು ಹೊಸಬದುಕನ್ನು ನಡೆಸುತ್ತಿರುವ ಕುಟುಂಬಗಳನ್ನೂ ಕಂಡೆವು. ಒಟ್ಟಿನಲ್ಲಿ ಅದೊಂದು ಅಪೂರ್ವ ಅನುಭವದ ಯಾನ.

ಈ ಯಾನದಲ್ಲಿ ಎರಡು ಮುಖ್ಯ ಸಂಗತಿ ಗೋಚರಿಸಿದವು. ಅವೆಂದರೆ, 1. ಕರ್ನಾಟಕದಲ್ಲಿ ಒಂದು ಕಾಲಕ್ಕೆ ವ್ಯಾಪಕ ಅಸ್ತಿತ್ವವನ್ನು ಹೊಂದಿದ್ದ ಬೌದ್ಧಧರ್ಮವು, ಸದ್ಯಕ್ಕೆ ತನ್ನ ಗತಕಾಲದ ಅವಶೇಷಗಳ ಮೂಲಕ ಉಸಿರೆಳೆಯುತ ಇದ್ದುದು; 2. ಧಮ್ಮದೀಕ್ಷೆ ಸ್ವೀಕರಿಸಿರುವ ಸಾವಿರಾರು ಜನರ ಬಾಳಿನಲ್ಲಿ ಹೊಸಹೊಸ ರೂಪದಲ್ಲಿ ನೆಲೆಯೂರುತ್ತ ಇದ್ದುದು. ಒಂದು, ಚರಿತ್ರೆಯ ಸ್ಥಗಿತ ದರ್ಶನವಾದರೆ, ಮತ್ತೊಂದು ವರ್ತಮಾನದ ಚಲನಶೀಲ ದರ್ಶನ; ಒಂದು, ಭಗ್ನತೆಯ ಮುಖವಾದರೆ, ಇನ್ನೊಂದು

ಹೊಸಹುಟ್ಟಿನ ಮುಖ. ಒಂದು ಸ್ಮಾರಕಗಳ ಜಗತ್ತಾದರೆ ಇನ್ನೊಂದು ಭಾವನೆಗಳ ಮಾನುಷ ಜಗತ್ತು.

ಸಮಸ್ಯೆಯೆಂದರೆ, ಈ ಧಮ್ಮವು ನೆಲೆಯೂರುತ್ತಿರುವ ಕಡೆ, ಸಣ್ಣಗಿನ ಬಿರುಕೊಂದು ಕಾಣುತ್ತಿತ್ತು. ಈ ಬಿರುಕು ಧಮ್ಮದೀಕ್ಷೆ ಪಡೆದ ಕುಟುಂಬದಲ್ಲಿ ವ್ಯಕ್ತಿವ್ಯಕ್ತಿಗಳ ನಡುವೆ; ಕೇರಿ ಮತ್ತು ಕುಟುಂಬಗಳ ನಡುವೆ, ಮತ್ತು ದಲಿತರ ಎರಡು ಬಣಗಳ ನಡುವೆ ನಡೆಯುತ್ತಿದ್ದ ಸಂಘರ್ಷದ ರೂಪದಲ್ಲಿತ್ತು. ಬಹುಶಃ ಯಾವುದೇ ಹಳೆಯ ರೂಪದ ಜಾಗವನ್ನು ಹೊಸತೊಂದು ಆಕ್ರಮಿಸುವಾಗ, ಇಂತಹ ಸಂಘರ್ಷ ಸಾಮಾನ್ಯವೆಂದು ಕಾಣುತ್ತದೆ. ಹೊಸತು ಮತ್ತು ಹಳತುಗಳ ಈ ಸಂಘರ್ಷವು ಕೆಲವು ಕಾಲದ ಬಳಿಕ ಸಾಮರಸ್ಯಗೊಂಡು ಮೂರನೆಯ ಹೊಸರೂಪವಾಗಿ ಸಿದ್ಧವಾಗಬಹುದು. ಆದರೆ ಅಂತಹ ಹೊಸರೂಪವೊಂದು ಸಿದ್ಧವಾಗುವ ತನಕ ಈ ಬಗೆಯ ಜಗ್ಗಾಟಗಳು ಸಹಜ. ಸಮಸ್ಯೆಯೆಂದರೆ ಸಾಮಾಜಿಕ ಧಾರ್ಮಿಕ ಮಾನಸಿಕ ಹಾಗೂ ಸಾಂಸ್ಕೃತಿಕವಾದ ಈ ಜಗ್ಗಾಟಗಳ ನಡುವೆ ನಲುಗುತ್ತಿರುವ ವ್ಯಕ್ತಿಗಳ ತೊಳಲಾಟ, ಹತಾಶೆಗಳನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಂಡಂತೆ ಕಾಣುತ್ತಿರಲಿಲ್ಲ. ಮಾನವೀಯವೂ ಸಂಕೀರ್ಣವೂ ಆಗಿರುವ ಈ ನೋವು ಸಂಕಟಗಳನ್ನು ಸರಿತಪ್ಪುಗಳೆಂದು ಸರಳವಾಗಿ ತೀರ್ಮಾನಿಸುವುದು ಕಷ್ಟ. ಬದಲಿಗೆ ಇವು ಯಾಕೆ ಮತ್ತು ಹೇಗೆ ಮೂಡಿರಬಹುದು ಎಂದು ಅರ್ಥಮಾಡಿಕೊಳ್ಳಲು ಯತ್ನಿಸಬಹುದು.

ಎರಡು ವಾರಗಳ ನಮ್ಮ ಧಮ್ಮಯಾನದಲ್ಲಿ ಧಮ್ಮದೀಕ್ಷೆ ಪಡೆದ ಹತ್ತಕ್ಕಿಂತಲೂ ಹೆಚ್ಚು ಕುಟುಂಬಗಳನ್ನು ನಾವು ಭೇಟಿ ಮಾಡಿದೆವು. ಇವುಗಳಲ್ಲಿ ಏಳು ದಲಿತ ಕುಟುಂಬಗಳು. ಒಂದು ಬ್ರಾಹ್ಮಣ. ಎರಡು ಬಂಟರವು. ಕೊನೆಯ ಮೂರು ಕರಾವಳಿಯವಾದರೆ, ಮೊದಲ ಏಳು ದಲಿತ ಕುಟುಂಬಗಳು ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ಗುಲಬರ್ಗ ಜಿಲ್ಲೆಗೆ ಸೇರಿದವು. ಎಲ್ಲ ಕುಟುಂಬಗಳೂ ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡವು; ಉಡಲುಣ್ಣಲು ಹೋರಾಟವಿಲ್ಲದ ಮಧ್ಯಮವರ್ಗಕ್ಕೆ ಸೇರಿದವು. ಈ ಕುಟುಂಬಗಳ ಜತೆ ನಾವು ಬೆರೆತೆವು. ಮಾತಾಡಿದೆವು. ಜತೆಗೆ ಕುಳಿತು ಊಟಮಾಡಿದೆವು. ನಮಗೆ ನಾಲ್ಕು ಬಗೆಯ ದಾಂಪತ್ಯಗಳು ಕಂಡವು.

ಒಂದು. ಇಡಿಯಾಗಿ ಧಮ್ಮೀಕರಣಗೊಂಡಿರುವ ದಾಂಪತ್ಯಗಳು. ಇಲ್ಲಿನ ದಂಪತಿಗಳಲ್ಲಿ ಸತಿಪತಿಗಳೊಂದಾದ ಭಕ್ತಿಯ ಸಾಮರಸ್ಯವಿತ್ತು. ಸಮಾನಮನಸ್ಕತೆ ಸಾಧ್ಯವಾಗಿತ್ತು. 'ಹಿಂದೂ' ಎನ್ನಲಾಗುವ ಸಂಪ್ರದಾಯಗಳನ್ನು ಕೈಬಿಡಲಾಗಿತ್ತು. ಮಕ್ಕಳಿಗೆ ಬೌದ್ಧಹೆಸರುಗಳನ್ನು ಇಡುವುದೇ ಮುಂತಾಗಿ ಬೌದ್ಧ ಆಚರಣೆಗಳನ್ನು ತರಲಾಗಿತ್ತು. ಇವು ದೀಕ್ಷೆಯಾಗಿ ದಶಕಗಳೇ ಕಳೆದ ಕುಟುಂಬಗಳು. ಗುಲಬರ್ಗದ

ಬುದ್ಧವಿಹಾರದಲ್ಲಿದ್ದ ಶ್ರೀಮತಿ ಖರ್ಗೆಯವರಲ್ಲಿ, ಮಲ್ಲಿಕಾರ್ಜುನ ಖರ್ಗೆಯವರಷ್ಟೇ ಧರ್ಮದ ಉಮೇದಿತ್ತು. ಆದರೂ ಹೆಚ್ಚಿನ ಕಡೆ ಗಂಡನೇ ಸಾಧಕನಾಗಿದ್ದು, ಅವನಿಗೆ ಸಹಚರಳಾಗಿ ಮಡದಿ ಹಿಂಬಾಲಿಸಿದಂತೆ ಇತ್ತು.

ಎರಡು. ಇನ್ನೂ ಹೊಂದಾಣಿಕೆಯ ಪ್ರಕ್ರಿಯೆಯಲ್ಲಿರುವ ದಾಂಪತ್ಯಗಳು. ಇಲ್ಲಿ ಹೊಸಧರ್ಮದ ಬಗ್ಗೆ ಪೂರಾ ಒಪ್ಪಿಗೆ ಸಾಧ್ಯವಾಗದೆ ಇದ್ದರೂ, ಹಳತರ ಜತೆಗೆ ಒಂದು ಬಗೆಯ ಸಾಮರಸ್ಯ ಮಾಡಲು ಯತ್ನ ನಡೆದಿತ್ತು. ಉದಾಹರಣೆಗೆ, ಒಂದು ಮನೆಯಲ್ಲಿ ಹೊರಬಾಗಿಲ ಹಲಗೆಯ ಮೇಲೆ ಕೆತ್ತಲಾಗಿದ್ದ ಬುದ್ಧಮೂರ್ತಿಯ ಹಣೆಗೆ ವಿಭೂತಿಯನ್ನು ಬಳಿಯಲಾಗಿತ್ತು. ಅದು ಬುದ್ಧನನ್ನು ಪಳಗಿಸುತ್ತ ಸ್ಥಳೀಕರಿಸುತ್ತಿರುವಂತೆ ತೋರಿತು; ಇನ್ನೊಂದು ಮನೆಯ ದೇವರಕೋಣೆಯಲ್ಲಿ ಬುದ್ಧನ ಮೂರ್ತಿಯ ಜತೆಗೆ ಅಂಬೇಡ್ಕರ್ ಮತ್ತು ಮಲೆಮಾದೇಶ್ವರನ ಫೋಟೊವನ್ನು ಇಡಲಾಗಿತ್ತು. ಇವೆಲ್ಲ ಧಮ್ಮದೀಕ್ಷೆಯಾಗಿ ಒಂದೆರಡು ವರ್ಷಗಳಾಗಿದ್ದ ಕುಟುಂಬಗಳು.

ಮೂರು. ಸಾಮರಸ್ಯದ ಸಾಧ್ಯವಾಗಿರದೆ ತೊಳಲಾಟ ನಡೆಯುತ್ತಿರುವ ಕುಟುಂಬಗಳು. ಇಲ್ಲಿ ಧಮ್ಮಸ್ವೀಕಾರದ ವಿಷಯದಲ್ಲಿ ಸತಿಪತಿಗಳು ಸಮಾನ ಮನಸ್ಕರಾಗಿರಲಿಲ್ಲ. ಹೊಸಧಮ್ಮದ ವಿಷಯದಲ್ಲಿ ಗಂಡ ಉತ್ಸಾಹಿಯಾಗಿದ್ದರೆ, ಹೆಂಡತಿಯ ಮೊಗದಲ್ಲಿ ಮ್ಲಾನತೆಯಿತ್ತು. ಗಂಡನಿಗೆ ಬೇಸರವಾಗಬಾರದೆಂದೊ ಅಥವಾ ಭಿನ್ನಮತವನ್ನು ಬಂದವರೆದುರು ತೋರಬಾರದೆಂದೊ ಆಕೆ 'ಅಳುವೇ ತುಟಿಗೆ ಬಂದಂತೆ' ಮೌನವಹಿಸಿದಂತೆ ಕಾಣುತ್ತಿತ್ತು. ಗಂಡನ ಮುಖದಲ್ಲಿ ಮನೆಯಲ್ಲಿ ನೆಲೆಸುತ್ತಿರುವ ಧಮ್ಮಸಂಸ್ಕೃತಿಯ ಬಗ್ಗೆ ಸಂತೋಷದ ಭಾವವಿದ್ದರೆ, ಆಕೆಯ ಮುಖದಲ್ಲಿ ಆತಂಕವಿತ್ತು. ಆಕೆ ಗಂಡನ ಒತ್ತಡಕ್ಕೆ ಬೌದ್ಧ ಆಚರಣೆಗಳನ್ನು ಅನಿವಾರ್ಯವಾಗಿ ಅನುಸರಿಸುತ್ತಿದ್ದಂತಿತ್ತು.

ನಾಲ್ಕು. ಸಾಮರಸ್ಯ ಸಾಧ್ಯವೇ ಆಗದೆ ಸಂಬಂಧ ಕುಸಿದುಬಿದ್ದಿರುವ ಕುಟುಂಬಗಳು. ಇಲ್ಲಿ ಮಹಿಳೆಗೆ ತಾನು ಹುಟ್ಟಿ ಬೆಳೆದು ಬಂದ ಪಾರಂಪರಿಕ ಧಾರ್ಮಿಕ ಸಂಸ್ಕೃತಿಯನ್ನು ಬಿಟ್ಟುಕೊಡುವುದು ಕಷ್ಟವಾಗಿತ್ತು. ಆಕೆಗೆ ಬುದ್ಧನ ಬಗ್ಗೆ ಅಸಹನೆಯೇನಿರಲಿಲ್ಲ. ಆದರೆ ತನ್ನನ್ನು ಬಾಲ್ಯದ ದೈವಗಳಿಂದ ಬಿಡಿಸುತ್ತಿರುವ ಮತ್ತು ಬುದ್ಧನನ್ನು ಹೇರುತ್ತಿರುವ ಗಂಡನ ಬಗ್ಗೆ ಅಸಮಾಧಾನವಿತ್ತು. ನಮ್ಮ ಧಾರ್ಮಿಕ ಸ್ವಾತಂತ್ರ್ಯಕ್ಕೆ ಮನ್ನಣೆಯಿಲ್ಲವಲ್ಲ ಎಂಬ ಕೊರಗು ಒಳಗೊಳಗೇ ಆವಿಗೆಯ ಬೆಂಕಿಯಂತೆ ಸುಳಿಯುತ್ತಿತ್ತು. ಇದು ಒಂದು ಕಡೆ ಲಾವರಸದಂತೆ ಆಸ್ಫೋಟಗೊಂಡಿತು ಕೂಡ. ಕರ್ನಾಟಕದ ಲೀವಿಂಗ್ ಬುದ್ಧಿಸಂನ ಅಧ್ಯಯನಕ್ಕೆ ಹೊರಟ ನಮಗೆ ಇದು ಹೊಸದೊಂದು ಅರಿವಿನ ಕೋನವನ್ನು ನೀಡಿತು.

ಈ ಆಸ್ಫೋಟ ಸಂಭವಿಸಿದ ಕುಟುಂಬ ದಲಿತರದ್ದು. ಇಲ್ಲಿ ಗಂಡ ಹೆಂಡತಿಯಿಬ್ಬರೂ ಉನ್ನತ ಶಿಕ್ಷಣ ಪಡೆದವರು. ಸರ್ಕಾರಿ ನೌಕರರು. ಇವರಲ್ಲಿ ಗಂಡ ಧಮ್ಮದೀಕ್ಷೆ ಸ್ವೀಕರಿಸಿದ್ದರು; ಮಾತ್ರವಲ್ಲ ಕಾಷಾಯ ವಸ್ತ್ರಧಾರಣೆ ಮಾಡಿ, ತಮ್ಮ ಹೆಸರನ್ನು ಬದಲಿಸಿಕೊಂಡು ಭಂತೆ ಕೂಡ ಆಗಿದ್ದರು. ಧಮ್ಮ ಪ್ರಸಾರದಲ್ಲಿ ತಮ್ಮನ್ನು ಕೊಂಚ ಅತಿಯಾದ ಉತ್ಸಾಹದಲ್ಲೇ ತೊಡಗಿಸಿಕೊಂಡಿದ್ದರು. ಅವರನ್ನು ಕಾಣುವುದು ನಮ್ಮ ಉದ್ದೇಶವಾಗಿತ್ತು. ಆದರೆ ಅವರು ಮನೆಯಲ್ಲಿ ಇಲ್ಲವೆಂದೂ ಬಿಹಾರದ ಬೌದ್ಧಗಯಾಕ್ಕೆ ಹೋಗಿದ್ದಾರೆಂದೂ ತಿಳಿಯಿತು. ಆದರೂ ಅವರ ಮನೆಗೆ ಹೋಗಿ, ಅವರ ಮಡದಿಯ ಅಭಿಪ್ರಾಯವನ್ನು ಪಡೆಯೋಣವೆಂದು ಹೊರಟೆವು. ಸಂಜೆ ಏಳುಗಂಟೆಯ ಹೊತ್ತಾಗಿರಬಹುದು. ಮನೆಗೆ ಹೋಗಿ ಬಾಗಿಲನ್ನು ತಟ್ಟಿದೆವು. ಒಳಗಿಂದ ಒಬ್ಬರು ಮಹಿಳೆ ಬಾಗಿಲನ್ನು ಅರೆತೆಗೆದು ಏನು ಬೇಕಿತ್ತು ಎಂಬಂತೆ ನಮ್ಮನ್ನು ನೋಡಿದರು. ಅವರ ಹಣೆಯಲ್ಲಿ ವಿಭೂತಿಯಿತ್ತು. "ನಾವು ಬೌದ್ಧಧರ್ಮದ ಅಧ್ಯಯನ ಮಾಡುವುದಕ್ಕೆ ಬಂದವರು. ಭಂತೇಜಿಯಿದ್ದರೆ ಅವರ ಜತೆ ಮಾತಾಡಬೇಕಿತ್ತು" ಎಂದೆವು. 'ಬೌದ್ಧ' 'ಭಂತೆ' ಎಂಬ ಶಬ್ದಗಳನ್ನು ಕೇಳುತ್ತಿದ್ದಂತೆ ಆಕೆಯ ಮುಖ ಬಿರುಸಾಯಿತು. ಕಣ್ಣು ಕನಲಿದವು. ಗಡುಸಾದ ದನಿಯಲ್ಲಿ "ನಿಮ್ಮ ಭಂತೇಜಿ ಮನೆಬಿಟ್ಟು ಯಾವುದೋ ದೇಶಕ್ಕೆ ಬುದ್ಧನ್ನ ಹುಡಕ್ಕೊಂಡು ಹೋಗಿದಾರೆ. ಅವರು ಬಂದಮೇಲೆ, ಹೊರಗಡೆ ಎಲ್ಲಾದರೂ ಮಾತಾಡಿಕೊಳ್ಳಿ. ಈ ಮನೆಯಲ್ಲಿ ಮಾತ್ರ ಅವರ ಸುದ್ದಿ ತಗೀಬೇಡಿ. ಬುದ್ಧನ ಸುದ್ದೀನೂ ತಗೀಬೇಡಿ. ದಯವಿಟ್ಟು ಹೊರಟುಹೋಗಿ' ಎಂದು ಹೇಳಿದರು. ನಮಗಿದು ಅನಿರೀಕ್ಷಿತವಾಗಿತ್ತು. ಸೂಕ್ಷ್ಮಮನಸ್ಸಿನ ಡಾ. ಸಂಜೀವ್ ಗಾಬರಿಯಿಂದ "ಗೋವಿಂದಯ್ಯ, ಕಮಾನ್, ಲೆಟಸ್ ಗೋಬ್ಯಾಕ್' ಎಂದರು. ಆದರೆ ಗೋವಿಂದಯ್ಯನವರು ಅದನ್ನು ಕಿವಿಗೆ ಹಾಕಿಕೊಳ್ಳದೆ "ಮೇಡಂ, ಬೇಜಾರು ಮಾಡಿಕೊಳ್ಳಬೇಡಿ. ನಿಮ್ಮ ಯಜಮಾನರು ಇಲ್ಲದೇ ಹೋದರೆ ಏನಂತೆ. ನಿಮ್ಮ ಜತೆಯಲ್ಲೇ ಮಾತಾಡ್ತೀವಿ. ಬೌದ್ಧಧರ್ಮದಿಂದ ನಿಮಗೆ ಏನು ಕಷ್ಟವಾಗಿದೆ. ಅದನಾರೂ ಒಸಿ ತಿಳಕೊಳ್ಳುವ ಬಂದಿದೀವಿ, ಅದನ್ನೇ ಹೇಳಿ" ಎಂದು ವಿನಂತಿಸಿದರು. "ಇಲ್ಲ ಸಾರ್, ನೀವು ಕೇಳೋದು ಬೇಡ. ನಾನು ಹೇಳೋದೂ ಬೇಡ. ಬುದ್ಧನ ಹೆಸರು ಹೇಳಿಕೊಂಡು ಬರೋ ಯಾರ ಹತ್ರಾನೂ ಮಾತಾಡೋಕೆ ನನಗೆ ಇಷ್ಟವಿಲ್ಲ' ಎಂದರು. ಅದಕ್ಕೆ ಗೋವಿಂದಯ್ಯ "ಅಮ್ಮಾ, ನನ್ನ ಜತೆ ವಿದ್ವಾಂಸರು ಲೇಖಕರು ಇದಾರೆ. ಒಂದೈದು ನಿಮಿಷ ನಿಮ್ಮಜೊತೆ ಮಾತಾಡ್ತೀವಿ" ಎಂದು ವಿನಂತಿಸಿದರೂ ಪ್ರಯೋಜನವಾಗಲಿಲ್ಲ. "ನಿಮ್ಮ ಲೇಖಕರು ವಿದ್ವಾಂಸರನ್ನ ಕಟ್ಕೊಂಡು ನನಗೇನಾಗಬೇಕಿದೆಯಪ್ಪ? ಆ ಬುದ್ಧನಿಂದ ನನ್ನ ಸಂಸಾರವೇ ಹಾಳಾಗಿದೆ ಹೊರಟುಹೋಗಿ. ನಮ್ಮ ಪಾಡಿಗೆ ಬದುಕಲು ನಮಗೆ

ಬಿಡಿ"' ಎಂದು ಆಕ್ರೋಶದಿಂದ ಹೇಳಿದರು. ಈಗ ಸಂಜೀವ್‌ಗೆ ತಡೆಯಲು ಆಗಲಿಲ್ಲ. "ತರೀಕೆರಿ, ಏನ್ರೀ ಇದು? ಆ ಹೆಣಮಗಳು ನಮಗ ಗೆಟ್‌ಔಟ್ ಅಂತಿದಾರೆ, ಆದರೂ ನಾವು ಅವರಿಗೆ ಮಾತಾಡಿ ಅಂತಿದೀವಿ. ಅವರಿಗೆ ಹಿಂಸೆ ಕೊಡಬಾರದು. ಗೋವಿಂದಯ್ಯನವರನ್ನ ಹಿಂದಕ್ಕೆ ಕರೀರಿ" ಎಂದು ಚಡಪಡಿಸಿದರು. ಆದರೆ ಗೋವಿಂದಯ್ಯ ಬರಲಿಲ್ಲ. ಛಲ ಬಿಡದ ತಿವಿಕ್ರಮನಂತೆ ಅವರು ಆಕೆಯನ್ನು ಒಲಿಸುತ್ತ "ಆಯ್ತು ಮೇಡಂ, ನೀವು ನಮ್ಮ ಜತೆ ಮಾತಾಡದೆ ಇದ್ದರೂ ಪರವಾಯಿಲ್ಲ. ಒಂದು ಲೋಟ ನೀರಾದರೂ ಕೊಡಿ" ಎನ್ನತೊಡಗಿದರು. ನಾನು ಬಹಳ ಇಕ್ಕಟ್ಟಿನಲ್ಲಿದ್ದೆ. ಬೈಸಿಕೊಂಡಾದರೂ ಈ ಸೋದರಿಯ ಅಳಲನ್ನು ಅರಿತೇ ಹೋಗಬೇಕೆಂದು ನಿಂತಿದ್ದೆ.

ನಮ್ಮ ಗದ್ದಲಕ್ಕೆ ಬೀದಿಯ ಕೆಲವು ಕಿಟಕಿ ಮತ್ತು ಬಾಗಿಲು ತೆರೆದುಕೊಂಡವು. ಕೆಲವರು ಹೊರಬಂದು ಅಂಗಳದಲ್ಲಿ ನಿಂತು ನೋಡತೊಡಗಿದರು. ಅಷ್ಟುಹೊತ್ತು ಹೊರಗೇ ನಿಲ್ಲಿಸಿ ಮಾತಾಡಿದ ಆ ಮಹಿಳೆ, ಗೋವಿಂದಯ್ಯನವರ ನೀರಬೇಡಿಕೆ ಈಡೇರಿಸಲು, ಒಳಗೆ ಹೋದರು. ಅದೇ ಹೊತ್ತಲ್ಲಿ ನಾವು ಭಂಡತನದಿಂದ ಒಳಗೆ ಹೋದೆವು. ಆಕೆ ಚೊಂಬಿನಲ್ಲಿ ತಂದ ನೀರನ್ನು ಒಂದು ಲೋಟಕ್ಕೆ ಬಗ್ಗಿಸಿ ಕೊಟ್ಟರು. ಅವರ ವಿಶ್ವಾಸ ಗಳಿಸಲು ಬಾಯಾರಿಕೆ ಇಲ್ಲದಿದ್ದರೂ ಕುಡಿದೆವು. ನಂತರ ತಮ್ಮ ದನಿಗೆ ರೋದನದ ಒಂದು ಎಳೆಯನ್ನು ಬೆರೆಸಿ, ಆಕೆ ತಮ್ಮ ಕಷ್ಟಪರಂಪರೆಯನ್ನು ಅರುಹತೊಡಗಿದರು. "ಸಾರ್, ನನ್ನ ಕಷ್ಟಾವ ಏನೂಂತ ಹೇಳಲಿ? ನಮ್ಮ ಮನೇವರು ದೀಕ್ಷೆ ತಕ್ಕಂಡ ಮೇಲ ನಮ್ಮ ಮನೆಯ ಪರಿಸ್ಥಿತಿಯೇ ಬದಲಾಗಿದೆ. ಅವರು ನಮ್ಮನ್ನ ಬೀದಿಪಾಲು ಮಾಡಿ ತಿರಗಾಟಕ್ಕೆ ಹೋಗಿದಾರೆ. ಮನೆಯನ್ನ ನಾನೊಬ್ಬಳೇ ಸಂಭಾಳಿಸಬೇಕು. ನೀ ಸತ್ತ್ಯಾ ಬದುಕಿದೆಯಾ ಅಂತ ಕೇಳಲ್ಲ. ಇರೋದೊಂದು ಈ ಕೂಸಿಗೆ ಏನು ಓದ್ತೀದಿಯಾ ಅಂತ ಕೇಳೋಕೂ ಅವರಿಗ ಪುರುಸೊತ್ತಿಲ್ಲ. ಯಾವಾಗಲೂ ಬುದ್ಧಬುದ್ಧ ಅಂತ ಓಡಾಡ್ತಿರ್ತಾರೆ. ನನ್ನ ಮೇಲೂ ಬುದ್ಧನನ್ನು ಹೇರತಾ ಅವರೆ. ನನಗೆ ಅವರ ಬುದ್ಧಬೇಡ. ನನಗೆ ನನ್ನ ಮಂಟೆಸ್ವಾಮೀನೇ ಸಾಕು. ನನಗ ನನ್ನ ಮಾದೇಶ್ವರ ಬೇಕು. ನನಗೂ ನನ್ನದೇ ಧರ್ಮ ಇಲ್ಲವಾ? ನನಗೆ ಮನಶ್ಶಾಂತಿ ಕೊಡೋ ದೇವರನ್ನ ಪೂಜೆ ಮಾಡುವ ಹಕ್ಕಿಲ್ಲವಾ? ನನಗೂ ಎಲ್ಲರ ಹಾಗೆ ಸಂಸಾರ ಮಾಡಬೇಕು ಅನ್ನೋ ಆಸೆಯಿಲ್ಲವಾ?" ಎಂದು ಆವೇಶದಿಂದ ಮಾತಾಡತೊಡಗಿದರು. ಅವರಿಗೆ ಅರಿಯದಂತೆ ಕಣ್ಣಲ್ಲಿ ನೀರು ಇಳಿಯತೊಡಗಿತು.

ಯಾಕೊ ನನಗೆ ಬುದ್ಧನು ಹೇಳದೆ ಬಿಟ್ಟುಹೋದ ಬಳಿಕ ಶೋಕಿಸಿರಬಹುದಾದ ಯಶೋಧರೆಯ ನೆನಪಾಯಿತು. ಈ ಯಶೋಧರೆಗೆ ಧಮ್ಮವು ತನ್ನಿಂದ ತನ್ನ

ಗಂಡನನ್ನೂ ತನ್ನ ಮಗುವಿನಿಂದ ಅದರ ತಂದೆಯನ್ನೂ ಕಿತ್ತುಕೊಂಡಿದೆ, ಪರಂಪರೆಯಿಂದ ಬಂದ ದೈವಗಳ ಸಂಬಂಧವನ್ನೂ ಅದು ಕಿತ್ತುಕೊಳ್ಳುತ್ತಿದೆ ಎಂಬ ನೋವಿತ್ತು. ಎಲ್ಲ ಹೊಸ ಧರ್ಮಗಳ ಸ್ವೀಕಾರದ ಸಂದರ್ಭದಲ್ಲಿ ಇಂತಹದೊಂದು ಕೌಟುಂಬಿಕ ಛಿದ್ರತೆ ಸಂಭವಿಸುತ್ತದೆ ಅನಿಸುತ್ತದೆ.

ನನಗೆ ಬಸವಣ್ಣನ ವಚನವೊಂದು ನೆನಪಿಗೆ ಬಂದಿತು. "ಗಂಡ ಶಿವಭಕ್ತ. ಹೆಂಡತಿ ಮಾರಿಮಸಣಿಯ ಭಕ್ತೆ, ಗಂಡ ಕೊಂಬುದು ಪಾದೋದಕ ಪ್ರಸಾದ. ಹೆಂಡತಿ ಕೊಂಬುದು ಸುರೆಮಾಂಸ"; 12ನೇ ಶತಮಾನದಲ್ಲಿ ಗಂಡ ಏಕಪಕ್ಷೀಯವಾಗಿ ಲಿಂಗದೀಕ್ಷೆ ಪಡೆದ ಕುಟುಂಬವೊಂದರಲ್ಲಿ ಹುಟ್ಟಿರುವ ಭಗ್ನತೆಯನ್ನು ಈ ವಚನ ಸೂಚಿಸುತ್ತಿದೆ. ಸಾಮಾಜಿಕ ಮುಂಚಲನೆಯನ್ನು ನೀಡುವ ಎಲ್ಲ ಹೊಸಧರ್ಮಗಳನ್ನು ಸಾಮಾನ್ಯವಾಗಿ ಮೊದಲು ಸ್ವೀಕರಿಸುವವರು ಗಂಡಸರೇ ಆಗಿರುತ್ತಾರೆ. ನಿರ್ವಾಹವಿಲ್ಲದೆ ಅವರ ಹಿಂದೆ ಮಹಿಳೆಯರು ಹಿಂಬಾಲಿಸಿರುತ್ತಾರೆ. ಗಂಡುಪ್ರಧಾನ ಸಮಾಜದಲ್ಲಿ ಇದು ವಿಶೇಷವೇನಲ್ಲ. ಈ ಏಕಪಕ್ಷೀಯತೆ ಧರ್ಮದ ವಿಷಯದಲ್ಲಿ ಮಾತ್ರವಲ್ಲ, ಎಲ್ಲ ಹೊಸ ಆಚರಣೆಗಳ ಸಂದರ್ಭದಲ್ಲೂ ಸಂಭವಿಸುತ್ತದೆ. ಸಸ್ಯಾಹಾರದ ಹಿನ್ನೆಲೆಯಿಂದ ಬಂದ ಮೇಲುಜಾತಿಯ ಗಂಡಸರು, ಮಾಂಸಾಹಾರದ ಅಭ್ಯಾಸ ಮಾಡಿಕೊಂಡ ಬಳಿಕ, ತಮ್ಮ ಹೊಸ ಆಹಾರಪದ್ಧತಿಗೆ ನೈತಿಕ ಸಮರ್ಥನೆ ಒದಗಿಸಿಕೊಳ್ಳಲೆಂದು ಅದನ್ನು ಮಡದಿಯರ ಮೇಲೂ ಹೇರಲು ಯತ್ನಿಸುವುದನ್ನು ನಾನು ಗಮನಿಸಿದ್ದೇನೆ. ಇದಕ್ಕೆ ಪ್ರತಿಯಾಗಿ, ಮೇಲುಜಾತಿಯ ಹುಡುಗಿಯನ್ನು ಲಗ್ನವಾದ ದಲಿತರು ಮಾಂಸಾಹಾರ ಬಿಟ್ಟಿರುವ ನಿದರ್ಶನಗಳೂ ಇರಬಹುದು. ಆದರೆ ಇಂತಹ ನಿದರ್ಶನಗಳು ಕಡಿಮೆ.

ಯಾವತ್ತೂ, ಆಹಾರ ಧರ್ಮ ಉಡುಗೆ ಇವುಗಳ ವಿಷಯದಲ್ಲಿ ಏಕಪಕ್ಷೀಯವಾದ ಒತ್ತಾಯವು ವಿಚಿತ್ರವಾದ ಪ್ರತಿರೋಧಗಳನ್ನು ಹುಟ್ಟಿಸುತ್ತದೆ. ಉದ್ದೇಶ ಒಳ್ಳೆಯದಿದ್ದರೂ ಅದರ ಜಾರಿಗೆ ಮಾಡುವ ವಿಧಾನವು ಅಸೂಕ್ಷ್ಮವಾಗಿದ್ದರೆ ವ್ಯತಿರಿಕ್ತ ಪರಿಣಾಮಗಳನ್ನೇ ತರುತ್ತದೆ. ಆದರೆ ಅನೇಕ ಮಹಿಳೆಯರು ಗಂಡ ಸ್ವೀಕರಿಸಿದ ಧರ್ಮವನ್ನು ಕುರುಡಾಗಿ ಅನುಸರಿಸಲು ಒಪ್ಪದೆ, ತಮ್ಮ ಪಾರಂಪರಿಕ ದೈವ ಧರ್ಮಗಳನ್ನು ಉಳಿಸಿಕೊಂಡಿರುವ ನಿದರ್ಶನಗಳುಂಟು. ರಾಮಾನುಜರ ಪ್ರೇರಣೆಯಿಂದ ಶ್ರೀವೈಷ್ಣವ ಧರ್ಮವನ್ನು ಹೊಯ್ಸಳದೊರೆ ಬಿಟ್ಟಿದೇವನು ಸ್ವೀಕರಿಸಿದನು. ಆದರೆ ಅವನ ಮಡದಿ ಶಾಂತಲೆ ಶೈವಧರ್ಮದಲ್ಲೇ ಮುಂದುವರೆದಳು. ಜೈನಧರ್ಮದಲ್ಲೂ ಹೀಗೆ ಆಯಿತು. ಜೈನನಾದ ಗಂಡ ಜೈನನಾಗದ ಮಡದಿ ಇರುವ ಕುಟುಂಬಗಳ ಬಗ್ಗೆ ಕವಿ ಧರ್ಮಶಿವ ತನ್ನ 'ಸಮಯ ಪರೀಕ್ಷೆ'ಯಲ್ಲಿ

ಅಸಹನೆಯಿಂದ ಪ್ರಸ್ತಾಪ ಮಾಡುತ್ತಾನೆ. ಲಂಕೇಶರ 'ಸಂಕ್ರಾಂತಿ' ನಾಟಕವು ಲಿಂಗದೀಕ್ಷೆ ಸ್ವೀಕರಿಸಿ ಬದಲಾಗಿರುವ ತನ್ನ ಪ್ರಿಯಕರನ್ನು ತಿರಸ್ಕರಿಸುವ ಹೆಣ್ಣಿನ ಪಾತ್ರ ಸೃಷ್ಟಿಸಿದೆ. ಕುಲಧರ್ಮವನ್ನು ಬಿಟ್ಟು ಶಿಷ್ಟಧರ್ಮವನ್ನು ಸೇರಿದ ಮಗನನ್ನು ಒಪ್ಪದ ತಂದೆಯ ಪಾತ್ರವನ್ನೂ ಸೃಷ್ಟಿಸಿದೆ. ಈ ಪಾತ್ರಗಳ ಮೂಲಕ ಸಾಮಾಜಿಕವಾಗಿ ಕ್ರಾಂತಿಕಾರಕವಾದ ಧರ್ಮವು ತನ್ನ ಜಾರಿಯಾಗುವಿಕೆಯಲ್ಲಿ ಮಾಡುತ್ತಿರುವ ವ್ಯಕ್ತಿಗತ ಭಾವನೆಗಳ ಘಾಸಿಯನ್ನು ಚಿತ್ರಿಸುತ್ತದೆ. ನಾಟಕದ ಮಹತ್ವವಿರುವುದು ಅದರ ಕಲಾತ್ಮಕ ಯಶಸ್ಸಿನಲ್ಲಿ ಮಾತ್ರವಲ್ಲ, ಇಂತಹ ಸಾಂಸ್ಕೃತಿಕ ಸಂಕಟಗಳನ್ನು ಪರಿಭಾವಿಸಿರುವುದರಲ್ಲಿ ಕೂಡ.

ಹೊಸಧರ್ಮಗಳ ಸ್ವೀಕಾರವು ಅಸಮಾನತೆಯುಳ್ಳ ಭಾರತೀಯ ಸಮಾಜದಲ್ಲಿ ವೈಯಕ್ತಿಕ ಬೇಕುಬೇಡಗಳಿಗೆ ಸಂಬಂಧಿಸಿದ್ದಲ್ಲ. ಇದು ದಮನಿತ ಸಮುದಾಯಗಳಿಗೆ ಸಾಮಾಜಿಕ ಚಲನಶೀಲತೆಯನ್ನು ಕೊಟ್ಟಿದೆ. ಆಧ್ಯಾತ್ಮಿಕ ಸಮಾನತೆಯ ಹಂಬಲವನ್ನು ಈಡೇರಿಸುವ ಮಾಧ್ಯಮವಾಗಿದೆ. ಆದರೂ ಹೊಸಧರ್ಮವನ್ನು ಒಳಗೆ ಬಿಟ್ಟುಕೊಳ್ಳುವಲ್ಲಿ ಮಹಿಳೆಯರು ಮತ್ತು ವಯಸ್ಸಾದ ಜನ ಯಾಕೆ ಹಿಂಜರಿಕೆ ತೋರುತ್ತಾರೆ? ಹಳೆಯ ಧರ್ಮವನ್ನು ಬಿಟ್ಟುಕೊಡಲಾಗದ ಜಿಗುಟುತನ ಪ್ರದರ್ಶಿಸುತ್ತಾರೆ? ಅಥವಾ ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಬುದ್ಧನಿಗೆ ಎಂದು ನಾವುಮಾಡುವ ಅಪೇಕ್ಷೆಯೇ ತಪ್ಪಾಗಿದೆಯೊ? ಇವೆಲ್ಲ ಜಟಿಲವಾದ ಪ್ರಶ್ನೆಗಳು. ಸದ್ಯಕ್ಕೆ ಹೊಸಧಮ್ಮ ಸ್ವೀಕಾರದಲ್ಲಿ ಹುಟ್ಟುವ ಬಿಕ್ಕಟ್ಟುಗಳ ಕಾರಣವನ್ನು ಸದ್ಯಕ್ಕೆ ಹೀಗೆ ನಿರ್ವಚಿಸಬಹುದು.

1. ಹೊಸಧರ್ಮವು ದೈವಪದ್ಧತಿಯನ್ನು ಮಾತ್ರವಲ್ಲ ಉಡುವ ಉಣ್ಣುವ ಪದ್ಧತಿಯನ್ನು ಬದಲಾಯಿಸುತ್ತದೆ. ಆಲೋಚನ ವಿಧಾನವನ್ನು ಬದಲಿಸುತ್ತದೆ. ಮೊದಲ ಹಂತದಲ್ಲಿ ಅದು ಸಮುದಾಯದ ಜತೆ ವ್ಯಕ್ತಿಗೆ ಇರುವ ಸಾವಯವ ಆಪ್ತ ಸಂಬಂಧವನ್ನು ಭಗ್ನಗೊಳಿಸುತ್ತದೆ; ವೈಚಾರಿಕ ಪ್ರಜ್ಞೆಯುಳ್ಳ ಗಂಡಸರು ಈ ಬಗೆಯ ಸಂಬಂಧ ನಷ್ಟವನ್ನು ಕೆಲಮಟ್ಟಿಗೆ ಸಹಿಸಬಲ್ಲರು. ಸಾರ್ವಜನಿಕ ಬದುಕಿನಲ್ಲಿರುವ ಅವರಿಗೆ ಪರ್ಯಾಯ ಸಂಬಂಧಗಳು ಸೃಷ್ಟಿಯಾಗುವ ಕಾರಣ, ಇದು ಅಷ್ಟು ದೊಡ್ಡ ಸಮಸ್ಯೆಯೆನಿಸುವುದಿಲ್ಲ. ಆದರೆ ಮನೆ ಮತ್ತು ಕೇರಿಗಳ ಪುಟ್ಟಜಗತ್ತಿನಲ್ಲೇ ಹೆಚ್ಚು ಸಮಯ ಕಳೆಯುವ ಅಷ್ಟೊಂದು ವೈಚಾರಿಕ ಸಿದ್ಧತೆಯಿಲ್ಲದ ಮಹಿಳೆಯರಿಗೆ, ಹೀಗೆ ಸಂಬಂಧ ಕಡಿದುಕೊಂಡು ಬದುಕುವುದು ಕಷ್ಟವಾಗುತ್ತದೆ. ಅದರಲ್ಲೂ ತಾವು ನಂಬಿದ ದೈವವನ್ನು ಕೈಬಿಡಲು ಏನು ಕೇಡಾಗುತ್ತದೆಯೊ ಎಂದು ಮನಸ್ಸು ಅಳುಕುತ್ತದೆ.

2. ಹಾಗೆಂದು ಮಹಿಳೆಯರು ಹೊಸಧರ್ಮ ಹೊಸದೈವಗಳ ವಿರೋಧಿಗಳಲ್ಲ. ಅವರ ಧಾರ್ಮಿಕ ಉದಾರತೆಗೆ ಅವರು ದರ್ಗಾ ಮತ್ತು ಮೊಹರಂ ಆಚರಣೆಗಳಲ್ಲಿ

ತೊಡಗಿರುವುದೇ ಸಾಕ್ಷಿ. ಅವರು 'ಅನ್ಯ' ದೈವಗಳನ್ನು ಹಳತರ ಜತೆಗೇ ಸ್ವೀಕರಿಸಿಯಾರು; ಆದರೆ ಹಳೆಯವನ್ನು ಪೂರಾ ಕೈಬಿಟ್ಟು ಸ್ವೀಕರಿಸಬೇಕೆಂದಾಗ, ಹೊಸಧರ್ಮವು ತಮ್ಮ ನಂಬಿಕೆಯ ಬೇರುಗಳನ್ನು ಅಲುಗಿಸಿದಾಗ, ಅವರಿಗೆ ಕಷ್ಟವಾಗುತ್ತದೆ.

3. ಧಮ್ಮದೀಕ್ಷೆಯಿಂದ ಬಂಧುಗಳ ಸಾಮಾಜಿಕ ಸಂಬಂಧ ಮತ್ತು ಧಾರ್ಮಿಕ ನಂಬಿಕೆಗಳಲ್ಲಿ ಹುಟ್ಟುವ ಬಿರುಕುಗಳನ್ನು ನಿರ್ವಹಿಸುವ ಬೇಕಾದ ಸೋಶಿಯಲ್ ಮತ್ತು ಮಾನಸಿಕ ಮೆಕ್ಯಾನಿಸಂ ಕರ್ನಾಟಕದಲ್ಲಿ ರೂಪುಗೊಂಡಂತೆ ಕಾಣುವುದಿಲ್ಲ. ಮಹಿಳೆಯರು ಮೊದಲಿಗರಾಗಿ ಹೊಸಧರ್ಮವನ್ನು ಸ್ವೀಕರಿಸಿ, ಅದನ್ನು ತಮ್ಮ ಪುರುಷರು ಅನುಸರಿಸುವಂತೆ ಮಾಡಿರುವ ಒಂದೇ ಒಂದು ನಿದರ್ಶನ ನಮಗೆ ಸಿಗಲಿಲ್ಲ. ಆದರೆ ದೀಕ್ಷೆತೆಗೆದುಕೊಂಡ ಪುರುಷರು, ತಮ್ಮಂತೆ ಉಳಿದವರೂ ಧಮ್ಮವನ್ನು ಒಪ್ಪಿಕೊಳ್ಳಬೇಕು ಎಂಬ ಒತ್ತಾಯ ಮಾಡುತ್ತಿರುವುದು ಕಂಡಿತು. ಈ ಒತ್ತಾಯದ ಹಿಂದೆ ಅವರು ಪುರುಷರಾಗಿರುವ, ಯುವಕರಾಗಿರುವ, ನೌಕರಸ್ತರಾಗಿರುವ, ಅಕ್ಷರಸ್ತರಾಗಿರುವ, ಪ್ರಜ್ಞಾವಂತರಾಗಿರುವ ಇಗೋಗಳು ಕೆಲಸ ಮಾಡುತ್ತಿದ್ದವು. ಈ ಇಗೋಗಳು ಪರೋಕ್ಷವಾಗಿ ಉಳಿದವರಲ್ಲಿ ಒಂದು ಬಗೆಯ ಬುದ್ಧದ್ವೇಷವನ್ನು ಹುಟ್ಟಿಸಿದಂತಿದ್ದವು. ಅದರಲ್ಲೂ ಧಮ್ಮಕ್ಕೆ ಬಾರದ ಹಿರಿಯ ತಲೆಮಾರಿನವರು ಧಮ್ಮವಂತರಾಗಿರುವ ಮಕ್ಕಳಿಂದ ದೂರವಾಗಿ ಹೊಸ ಅಸ್ಪೃಶ್ಯತೆ ಮತ್ತು ಅನಾಥಪ್ರಜ್ಞೆ ಅನುಭವಿಸುತ್ತಿರುವರೆಂದು, ಧಮ್ಮ ಸ್ವೀಕರಿಸಿರುವ ತಲೆಮಾರು ಸ್ವೀಕರಿಸಿಟಟರ ಜತೆ ಸಹನೆಯಿಂದ ಒಡನಾಟ ಮಾಡುತ್ತಿಲ್ಲವೆಂದು ತೋರಿತು.

ಸಮಸ್ಯೆಯೆಂದರೆ, ಈ ಬಗೆಯ ಸಾಮಾಜಿಕ ಮಾನವೀಯ ಸಂಬಂಧಗಳ ಬಿರುಕು ಕೇವಲ ಕುಟುಂಬಗಳ ಒಳಗೆ ಮಾತ್ರವಲ್ಲ, ಹೊಸಧರ್ಮ ಸ್ವೀಕಾರ ಮಾಡಿದ ಕುಟುಂಬದ ಜತೆ, ಹಾಗೆ ಸ್ವೀಕಾರ ಮಾಡದೆ ಉಳಿದಿರುವ ಸಮುದಾಯದ ನಡುವೆ ಕೂಡ ಕಾಣಿಸಿತು. ಈಗಾಗಲೇ ಆಧುನಿಕ ತಲೆಮಾರಿನವರ ಶಿಕ್ಷಣ, ಸರ್ಕಾರಿ ಉದ್ಯೋಗ, ನಗರವಾಸ ಮತ್ತು ಮಧ್ಯಮವರ್ಗಕ್ಕೆ ಏರುವಿಕೆಗಳು, ಅನಕ್ಷರಸ್ತ ಗ್ರಾಮೀಣ ಕೆಳವರ್ಗದ ದಲಿತರ ಜತೆಗೆ ಒಂದು ಸಣ್ಣಬಿರುಕನ್ನು ಹುಟ್ಟಿಸಿವೆ; ಈ ಬಿರುಕು ಹೊಸಧರ್ಮ ಸ್ವೀಕಾರದ ಜತೆಗೆ ಮತ್ತಷ್ಟು ಅಗಲವಾಗುತ್ತಿದೆ. ಅನೇಕ ಕಡೆ ಧಮ್ಮಸ್ವೀಕಾರ ಮಾಡಿದ ಶಿಷ್ಟದಲಿತರು, ಪಾರಂಪರಿಕ ಮತಗಳಲ್ಲೇ ಉಳಿದ ತಮ್ಮ ಬಂಧುಗಳ ಬಗ್ಗೆ ಅವರು ಅಜ್ಞಾನಿಗಳು ಎಂಬ ದನಿಯಲ್ಲಿ ಅನಾದರದಿಂದ ಮಾತಾಡುತ್ತಿದ್ದರು. ತಮ್ಮ ಹಿರೀಕರು ಮಾರಮ್ಮ ಊರಮ್ಮಗಳಿಗೆ ನಡೆದುಕೊಳ್ಳುವುದು, ಕೋಳಿ ಕೋಣ ಬಲಿಕೊಡುವುದು, ಮಾಂಸಾಹಾರ ಮದ್ಯಪಾನ ಮಾಡುವುದು ಇತ್ಯಾದಿಯನ್ನು ಅವರು ಅಸಹನೆಯಿಂದ ಕಾಣುತ್ತಿದ್ದರು. ಇದಕ್ಕೆ ತಕ್ಕಂತೆ ಕೆಲವು

ದಲಿತ ಭಂತೆಗಳು ಮಾಂಸಾಹಾರ ಸೇವನೆ ಮತ್ತು ಕುಡಿತಗಳನ್ನು ಹೀನ ಆಚರಣೆಗಳೆಂದೂ ಅವನ್ನು ದಲಿತರು ಬಿಟ್ಟುಬಿಡಬೇಕೆಂದೂ ಪ್ರತಿಪಾದಿಸುತ್ತಿದ್ದರು.

ಧಮ್ಮಸ್ವೀಕಾರದಿಂದ ಹುಟ್ಟಿದ ಈ ಬಿರುಕು, ಹೈದರಾಬಾದ್ ಕರ್ನಾಟಕದ ಊರುಗಳಲ್ಲಿ ಇನ್ನೊಂದು ತೆರನಾಗಿ ಕೆಲಸಮಾಡುತ್ತಿತ್ತು. ಅಲ್ಲಿ ಧಮ್ಮದೀಕ್ಷೆಯನ್ನು ಕೇವಲ ಚಲುವಾದಿಗಳು (ಬಲಗೈ ಹೊಲೆಯರು) ಮಾಡಿದ್ದರು. ಧಮ್ಮದೀಕ್ಷೆ ಸ್ವೀಕರಿಸಿದ ಬಳಿಕ ಮಲ್ಲಿಕಾರ್ಜುನ ಖರ್ಗೆಯವರು ಗುಲಬರ್ಗದಲ್ಲಿ ದೊಡ್ಡದೊಂದು ಬೌದ್ಧ ಚೈತ್ಯಾಲಯವನ್ನು ನಿರ್ಮಿಸಿದ್ದರು. ಬೀದರ್ ಗುಲಬರ್ಗ ಜಿಲ್ಲೆಗಳಲ್ಲಿ ಬಲಗೈಯವರು ಧಮ್ಮದೀಕ್ಷೆ ಪಡೆಯಲು, ಮಹಾರರೇ ಪ್ರಮುಖವಾಗಿರುವ ಮಹಾರಾಷ್ಟ್ರದ ರಿಪಬ್ಲಿಕನ್ ಪಾರ್ಟಿಯೂ ಒಂದು ಕಾರಣ. ಪಾರ್ಟಿಯು ಧಮ್ಮದೀಕ್ಷೆ ಪಡೆದ ಅಂಬೇಡ್ಕರ್ ಅವರನ್ನು ರಾಜಕೀಯ ಸಾಂಸ್ಕೃತಿಕ ನಾಯಕನೆಂದು ಭಾವಿಸಿತು. ಇದು ದಲಿತರ ಎಡಗೈ ಬಣವನ್ನು ಮತ್ತೊಂದು ಬಗೆಯಲ್ಲಿ ಸಂಘಟಿತವಾಗಲು ಪ್ರಚೋದಿಸಿತು. ಸರ್ಕಾರಿ ಪರಿಭಾಷೆಯಲ್ಲಿ ಎಸ್‌ಸಿ ಎಂಬ, ಸವರ್ಣೀಯರ ಬಾಯಲ್ಲಿ 'ಹರಿಜನ'ವೆಂಬ ಹಾಗೂ ಸಾಂಸ್ಕೃತಿಕ ರಾಜಕಾರಣದ ಪರಿಭಾಷೆಯಲ್ಲಿ ದಲಿತರು ಎಂಬ ಏಕೀಕೃತ ಪರಿಭಾಷೆಯಲ್ಲಿ ಕರೆಯಿಸಿಕೊಳ್ಳುವ ಸಮುದಾಯವು, ವಾಸ್ತವಿಕವಾಗಿ ದೈನಿಕ ಬದುಕಿನಲ್ಲಿ ಎಡಗೈ ಬಲಗೈಯಾಗಿ ಒಡೆದಿತ್ತು. ಹೀಗೆ ಒಡೆದ ಬಣಗಳು ದಾಯಾದಿಗಳಂತೆ ಇದ್ದವು. ಬಲಗೈನವರು ಅಂಬೇಡ್ಕರ್ ಅವರನ್ನು ನಾಯಕರನ್ನಾಗಿಸಿಕೊಂಡ ಕಾರಣಕ್ಕಾಗಿ ಎಡಗೈವರು ಜಗಜೀವನರಾಮರನ್ನು ನಾಯಕರಾಗಿಸಿಕೊಂಡಿದ್ದರು; ಇದೇ ತೆರನಾಗಿ ಬಲಗೈನವರು ಧಮ್ಮಸ್ವೀಕಾರ ಮಾಡತೊಡಗಿದ ಮೇಲೆ ಎಡಗೈವರು ಕ್ರೈಸ್ತಧರ್ಮದತ್ತ ಚಲಿಸಿದ್ದರು. ಹೀಗೆ ಕುಟುಂಬ, ಸಮುದಾಯ ಮತ್ತು ಕೇರಿಗಳ ನಡುವೆ ಧಮ್ಮವು ಬೇರೊಂದು ಬಗೆಯಲ್ಲಿ ಬಿರುಕಿಗೆ ಕಾರಣವಾದಂತೆ ತೋರಿತು.

ಹೊಸಧರ್ಮಗಳು ಎಷ್ಟೇ ನಾಗರಿಕವಾಗಿರಲಿ, ದಮನಿತರಿಗೆ ಸಾಮಾಜಿಕ ಚಲನಶೀಲತೆ ಕೊಡುವಂತಹದ್ದಾಗಿರಲಿ, ಅವನ್ನು ಮಾನಸಿಕ ಸಿದ್ಧತೆಯಿಲ್ಲದ ಜನರ ಮೇಲೆ ಹೇರಿದಾಗ ಅವು ಹಿಂಸ್ರಕವಾಗಿ ರೂಪಾಂತರಗೊಳ್ಳುತ್ತವೆ. ಯಾವುದೇ ಕ್ರಾಂತಿಕಾರ ಸಿದ್ಧಾಂತವನ್ನು ಸಹ ಅತ್ಯವರಸರದಲ್ಲಿ ಉತ್ಸಾಹದಲ್ಲಿ ಹೇರಿಕೊಂಡಾಗ ಅನೇಕ ಮಾನವೀಯ ಸೂಕ್ಷ್ಮತೆಗಳು ಕಳೆದುಹೋಗಿಬಿಡುತ್ತವೆ. ಈಗಿನ ಮುಸ್ಲಿಮರಲ್ಲಿ ಬಹಳ ಪ್ರಭಾವಶಾಲಿಯಾಗಿರುವ ತಬ್ಲೀಕ್ ಎಂಬ ನವಇಸ್ಲಾಮಿಕ್ ಚಳುವಳಿಯಿಂದ ಸಾವಿರಾರು ಕುಟುಂಬಗಳಲ್ಲಿ ಸತಿಪತಿಗಳೊಂದಾಗದ ಭಕ್ತಿಯು ಏರ್ಪಟ್ಟು, ಮಾನವೀಯ ಸಂಬಂಧಗಳು ಕಂಗೆಟ್ಟಿವೆ. ಧರ್ಮಪ್ರಸಾರಕ್ಕೆ ತಮ್ಮನ್ನು ಬಿಟ್ಟು

ತಿಂಗಳುಗಟ್ಟಲೆ ಹೋಗುವ, ಯಾವಾಗಲೂ ಮಸೀದಿಗಳಲ್ಲಿ ಬೀಡುಬಿಟ್ಟಿರುವ ಗಂಡಂದಿರ ವರ್ತನೆಯಿಂದ ಅನೇಕ ಮಹಿಳೆಯರು, ಡಿಪ್ರೆಶನ್ ಕಾಯಿಲೆಯಿಂದ ನರಳುತ್ತಿದ್ದಾರೆ. ಕೆಲವರು, ಹೊಸಪುರುಷನನ್ನು ಅರಸಿ ಮನೆಯನ್ನು ಬಿಟ್ಟುಹೋಗಿರುವುದೂ ಉಂಟು.

ಕರ್ನಾಟಕದಲ್ಲಿ ಸಾಮೂಹಿಕ ಧಮ್ಮದೀಕ್ಷೆ ನೀಡುವ ಚಳುವಳಿಯು ನಡೆಯುತ್ತಿದೆ. ಅದು ಕರ್ನಾಟಕ ಸಾಮಾಜಿಕ ಸಮೀಕರಣವನ್ನು ಬದಲಿಸುವಷ್ಟು ಶಕ್ತಿವಾಗಿದೆ. ಅಸ್ಪೃಶ್ಯತೆಯ ಕಾಯಿಲೆಯನ್ನು ಮಾತ್ರವಲ್ಲದೆ, ಕೋಮುವಾದದ ರೋಗಕ್ಕೂ ಅದು ಮದ್ದಿನಂತಿದೆ. ಇದು ಸರಿ, ಆದರೆ ಇದಕ್ಕಾಗಿ ಬೆಲೆ ತೆರುತ್ತಿರುವವರು ಯಾರು? ಧಮ್ಮದೀಕ್ಷೆ ನೀಡುತ್ತಿರುವವರು ಇದರಿಂದಾಗುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಗಂಭೀರವಾಗಿ ಪರಿಭಾವಿಸಿದ್ದಾರೆಯೇ? ಇಲ್ಲವೆಂದೇ ಅನಿಸುತ್ತದೆ. ಹೀಗಾಗಿ ನಾವು ಕಂಡ ಬಹುತೇಕ ಯಶೋಧರೆಯರಲ್ಲಿ ಬುದ್ಧದ್ವೇಷವಿತ್ತು. ಇದಕ್ಕೆ ಕಾರಣವಾಗಿದ್ದು ಧಮ್ಮವಲ್ಲ. ಧಮ್ಮವನ್ನು ನೆಲೆಗೊಳಿಸುತ್ತಿರುವ ವಿಧಾನ.

ಈ ಚರ್ಚೆಯನ್ನು ಧರ್ಮಸ್ವೀಕಾರ ದುಷ್ಪರಿಣಾಮಗಳ ಚರ್ಚೆಯೆಂದು ಭಾವಿಸಬೇಕಿಲ್ಲ. ನಮ್ಮ ಬೌದ್ಧಯಾನದಲ್ಲಿ ಅನೇಕ ದಲಿತ ಕುಟುಂಬಗಳಲ್ಲಿ ಧಮ್ಮಸ್ವೀಕಾರವು ಹೊಸ ಆತ್ಮಾಭಿಮಾನವನ್ನು ಹೊಸ ಬದುಕಿನ ಕ್ರಮವನ್ನು ತಂದಿತ್ತಿರುವ ಹಲವಾರು ನಿದರ್ಶನಗಳನ್ನು ನಾವು ಕಂಡೆವು. ಆದರೆ ಎಲ್ಲ ಬಗೆಯ ಪರಿವರ್ತನೆಗಳ ಹೊತ್ತಲ್ಲಿ ಪ್ರತಿರೋಧ ಹತಾಶೆ ಅಸಹಾಯಕತೆಗಳನ್ನು ಕಂಡೆವು. ನಮಗೆ ಬೌದ್ಧಧರ್ಮಕ್ಕೆ ಸೇರಿದ ಶಾಸನ, ವಿಗ್ರಹ ಚೈತ್ಯಾಲಯಗಳು ಭಗ್ನಾವಸ್ಥೆಯಲ್ಲಿ ಇದ್ದುದು ಕಂಗೆಡಿಸಲಿಲ್ಲ; ಧಮ್ಮಸ್ವೀಕಾರದ ವಿಷಯವು ಮನುಷ್ಯರ ಮತ್ತು ಕುಟುಂಬಗಳ ನಡುವೆ ಭಗ್ನತೆ ಹತಾಶೆ ತಂದಿರುವುದು ಕಂಗಾಲು ಮಾಡಿತು.

ಈ ದೇಶದಲ್ಲಿ ಯಶೋಧರೆಯರ ಕಷ್ಟಗಳಿಗೆ ಕೊನೆಯೇ ಇಲ್ಲವೇ?

'ಸೂಫಿ', ಎಂ.ಪಿ. ಪ್ರಕಾಶ ನಗರ,
ಹೊಸಪೇಟೆ (ಬಳ್ಳಾರಿ ಜಿಲ್ಲೆ)



ಅಸ್ಪೃಶ್ಯತೆ ಸಮಸ್ಯೆ, ನಿವಾರಣೆ: ಒಂದು ಚಿಂತನೆ

ಪ್ರೊ. ಎಂ. ಎಸ್. ಶೇಖರ್

ಜಗತ್ತಿನಲ್ಲಿ ಸಮಸ್ಯೆಗಳಿಲ್ಲದ ದೇಶಗಳೆ ಇಲ್ಲ. ಆರ್ಥಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ...... ಹೀಗೆ. ಆದರೆ ಅಲ್ಲೆಲ್ಲ ಈ ಯಾವ ಸಮಸ್ಯೆಗಳೂ ಶಾಶ್ವತವಾಗಿ ಉಳಿಯುತ್ತಿಲ್ಲ. ಹಲವು ಏರಿಳಿತಗಳ ನಡುವೆಯೂ ಅವುಗಳದೆ ಆದ

ಪರಿಹಾರವನ್ನು ಕಂಡುಕೊಳ್ಳುತ್ತಿವೆ. ಇಂಡಿಯಾದಲ್ಲಿಯೂ ಈ ಬಗೆಯ ಎಲ್ಲ ಸಮಸ್ಯೆಗಳೂ ಇವೆ. ಆದರೆ; ಅತಿ ಅಮಾನವೀಯವಾದ, ಮೌಢ್ಯದ, ಕ್ರೂರವಾದ ಸಮಸ್ಯೆ ಎಂದರೆ ಅಸ್ಪೃಶ್ಯತೆ ಹಾಗೂ ಜಾತಿಪದ್ಧತಿ. ಇವುಗಳೆರಡೂ ಭಾರತಕ್ಕೆ ಕಪ್ಪುಚುಕ್ಕೆ. ನಿಧಾನವಿಷ. ಪ್ರಗತಿಗೆ ಬಹುಮುಖ್ಯ ಅಡ್ಡಿ. ಇವುಗಳೆರಡೂ ಭಾರತದ ಸಾಮಾಜಿಕ ವ್ಯವಸ್ಥೆಯ ನರನಾಡಿಗಳಾಗಿ ಬೇರು ಬಿಟ್ಟಿರುವುದು ದುರಂತದ ಸಂಗತಿ.

ಈ ಜಾತಿ ಶ್ರೇಣಿ ವ್ಯವಸ್ಥೆಯಲ್ಲಿ ಸಾಮಾಜಿಕ ನೆಮ್ಮದಿಯೆ ಇಲ್ಲ. ಪಿರಮಿಡ್ಡುಗಳಂತೆ ಸಾವಿರಾರು ಜಾತಿ–ಉಪಜಾತಿಗಳ ಶ್ರೇಷ್ಟತೆಯ ವ್ಯಸನದಲ್ಲಿ ಮುಳುಗಿರುವ **ಭಾರತವೇ ಸಾಮಾಜಿಕ ಮನೋರೋಗಿಗಳ** ತಾಣವಾಗಿದೆ. ಒಂದು ಜಾತಿಯ ಕಾಲುಗಳು ಮತ್ತೊಂದು ಜಾತಿಯ ತಲೆಯ ಮೇಲಿವೆ. ತಮ್ಮ ತಲೆಯ ಮೇಲೆ ಸಾವಿರಾರು ಕಾಲುಗಳಿದ್ದರೂ ಬೇಸರಿಸದ, ನಮ್ಮ ಕಾಲುಗಳು ಇನ್ನೊಂದು ಜಾತಿಯ ತಲೆಯ ಮೇಲಿದೆಯಲ್ಲಾ ಸಾಕು; ಎಂಬ ವಿಕೃತ ಸಮಧಾನದ, ಮೇಲುತ್ವದ ಅತಿಭ್ರಮಣೆಯಲ್ಲಿರುವ, ಈ ಕೀಳುಮನೋರೋಗದ ಬೇರನ್ನು ಬುಡಸಮೇತ ಕಿತ್ತೊಗೆಯಲು ಅದ್ಯಾವ ಔಷಧಿಯನ್ನು ಕಂಡುಹಿಡಿಯುವುದು, ಅನ್ನುವುದೆ ಬೃಹತ್ ಸಮಸ್ಯೆಯಾಗಿದೆ. ತುಂಬ ನೋವಿನ ಸಂಗತಿ ಎಂದರೆ; ಜಾತಿ ಶ್ರೇಣಿಯ ಕಟ್ಟಕಡೆಯವರಿಗೆ ನೀವು ಅಸ್ಪೃಶ್ಯರು ಎಂದು ಬಲವಂತವಾಗಿ ಸಾವಿರಾರು ವರ್ಷಗಳಿಂದ ಹೇರಿರುವ ಈ ಎಲ್ಲಾ ಮೇಲುಭ್ರಮೆಯ ಭಾರವನ್ನು ಆ ಜನಾಂಗಗಳು ಹೊತ್ತು ಜೀವಂತವಾಗಿ ಉಳಿದು ಬಂದಿರುವುದು. ಒಂದರ್ಥದಲ್ಲಿ ಈ ಜನಾಂಗಗಳ ಬದುಕೆ ಗರಿಕೆ ಹಾಗೆ. ಜನಪದ ಇದ್ದಂತೆ. ನಾಶದ ಪ್ರಶ್ನೆಯೆ ಇಲ್ಲ. ತಮ್ಮ ಪಾಡುಗಳನ್ನೆಲ್ಲ ಹಾಡಾಗಿಸುತ್ತ, ಕಥೆಯಾಗಿಸುತ್ತ, ಕಲೆಯಾಗಿಸುತ್ತ ಜೀವಂತ ಸೆರೆಯಾಗಿ ಉಳಿದುಕೊಂಡು ಬಂದಿರುವುದಿದೆಯಲ್ಲಾ...! ಆ ಮನೋಸ್ಥೈರ್ಯ ಯಾವ ಬಗೆಯದು ಅಂಥಾ....! ಈ ನೆಲದ ಮೂಲ ಮಕ್ಕಳಾದ ಇವರನ್ನು ದಿವ್ಯಮೌನದ ಈ ಭೂಮಿ ತಾಯಿ ತಬ್ಬಿಕೊಂಡಿರಬಹುದೇ? ನಿಜ ಸಂಸ್ಕೃತಿ ಕೆನೆಯ ನಿಮ್ಮ ಸಹನೆಯಿಂದ ನಾನು ಬದುಕುಳಿಯಬೇಕಿದೆ ಎಂದು ಪ್ರೇರೇಪಿಸುತ್ತಿರಬಹುದೇ? ಒಂದು ಕಾಲದಲ್ಲಿ ಭವ್ಯವಾಗಿ ಬದುಕಿದ ಈ ಜನಾಂಗಗಳ ಜೀವರಕ್ತ ನಿರಂತರವಾಗಿ ಸಾಗುತ್ತ ಆ ಭವ್ಯತೆ ಮರುಕಳಿಸುವ ಸಾಧ್ಯತೆಗಳ ಕನಸು ಕಾಣುತ್ತಿರಬಹುದೆ.....? ನಿಸರ್ಗವೆ ಹೇಳಬೇಕಾಗಿದೆ.

ಕ್ರೂರವಾದ, ಹೀನವಾದ ಈ ಸ್ಥಿತಿಗೆ ತಳ್ಳಲ್ಪಟ್ಟಿದ್ದರೂ; ಅವರ ಎದೆಯ ಗೂಡೊಳಗಿರುವ ಅಗಾಧವಾದ ಹೃದಯವಂತಿಕೆ, ಅಸಾಧಾರಣವಾದ ತಾಳ್ಮೆ, ತಾಯಿಕರುಳ ಮಮಕಾರದಿಂದ, ನಿತ್ಯ ಬೆವರುಬಸಿದು ಬೇರೆಯವರಿಗೆ ಸುಖಸೋಪಾನ ಕೊಟ್ಟು, ಅರೆಹೊಟ್ಟೆ – ಅರೆಬಟ್ಟೆಯಿಂದಲೆ ಬದುಕುಳಿದಿರುವ **ಮಹಾನ್‌ತ್ಯಾಗದ ಈ ಜನಾಂಗಗಳ ಮಾನವೀಯ ಗುಣಗಳನ್ನು ಇಂಡಿಯಾದ ಸಾಮಾಜಿಕ ವ್ಯವಸ್ಥೆ ಅರ್ಥಮಾಡಿಕೊಳ್ಳದೆ**

ಹೋದದ್ದು ದುರಂತ ಎನಿಸುತ್ತದೆ. ಸಮಾಧಾನದ ಸಂಗತಿ ಎಂದರೆ; ನಿಸರ್ಗ ಎಂದೂ ಬತ್ತಿಹೋಗುವುದಿಲ್ಲ. ಕರುಳು ಇರುವವರು ಹುಟ್ಟಿಯೇ ಹುಟ್ಟುತ್ತಾರೆ. ಹಾಗಾಗಿ; ಬುದ್ಧಗುರು, ಬಸವಣ್ಣ, ನಾಲ್ವಡಿಕೃಷ್ಣರಾಜ ಒಡೆಯರ್, ಅಂಬೇಡ್ಕರ್, ಗಾಂಧಿ, ನಾರಾಯಣಗುರು, ಕುದ್ಮಲ್ ರಂಗರಾಯರು, ಜ್ಯೋತಿಬಾಫುಲೆ, ಶಾಹುಮಹಾರಾಜ್ ಮುಂತಾದ ಮಾನವಪರ ಚಿಂತಕರು, ಸುಧಾರಕರುಗಳು ಈ ಅಮಾನವೀಯವಾದ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸಿದ್ದಾರೆ. ಇವರುಗಳಲ್ಲಿ; ಈ ಕ್ರೂರ ಅಸ್ಪೃಶ್ಯತೆ, ಜಾತಿಪದ್ಧತಿ ಹಾಗೂ ಅರ್ಥವಿಲ್ಲದ ಮತಧರ್ಮಗಳ ಮೌಢ್ಯತೆಗಳನ್ನೆಲ್ಲ, ಅತ್ಯಂತ ವೈಜ್ಞಾನಿಕವಾದ, ಪ್ರಬುದ್ಧ ವೈಚಾರಿಕತೆಯಿಂದ ಸೈದ್ಧಾಂತಿಕವಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಹೋರಾಡಿದವರೆಂದರೆ ಮಹಾನ್ ಮಾನವತಾವಾದಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರೊಬ್ಬರೇ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅವರು ಮಾಡಿದ ಹೋರಾಟಗಳು, ತಂದ ಕ್ರಾಂತಿಕಾರಕ ಬದಲಾವಣೆಗಳು, ಚಿಂತನೆಗಳು, ಸಂಶೋಧನೆಗಳು, ಬರಹಗಳು ಭಾರತದ ಇತಿಹಾಸದ ಪ್ರಧಾನ ಭಾಗವೆ ಆಗಿವೆ. ಸಾಮಾಜಿಕ ನ್ಯಾಯವನ್ನು ಗುರುತರವಾಗಿ ಪ್ರತಿಪಾದಿಸಿ ರೂಪಿಸಿದ ಸಂವಿಧಾನ ಮಾರ್ಗದರ್ಶಿಯಾಗಿಯೂ ನಿಂತಿದೆ.

ಸ್ವತಃ ಬಾಲ್ಯದಲ್ಲಿ ಅನುಭವಿಸಿದ ತುಂಬ ಅಮಾನವೀಯವಾದ ಕಹಿ ಅನುಭವಗಳು, ತುಂಬಾ ಸೂಕ್ಷ್ಮಸಂವೇದಿಯಾಗಿದ್ದ ಅಂಬೇಡ್ಕರ್ ಅವರಿಗೆ, ಅವರ ಆಲೋಚನಾ ದಿಕ್ಕನ್ನೇ ಬದಲಾಯಿಸಿ ಬಿಟ್ಟವು. ಹಾಗಾಗಿ ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳಲೇಬೇಕು ಎಂಬ ಧೀಕ್ಷೆಯನ್ನು ತೊಡುತ್ತಾರೆ. ಈ ಸೋಗಲಾಡಿ ನಿಧಾನವಿಷಕ್ಕೆ ಕೇವಲ ಸಿಟ್ಟು, ಆಕ್ರೋಶ, ಅತೃಪ್ತಿಯಿಂದ ಯಾವ ಬದಲಾವಣೆಯನ್ನು ತರಲು ಸಾಧ್ಯವಿಲ್ಲ ಎಂಬುದನ್ನು ಅರಿತ ಆಳದ ವಿವೇಕ ಅವರದು. ಹಾಗಾಗಿ ಅಂಬೇಡ್ಕರ್ ಅವರು ಆಯ್ಕೆ ಮಾಡಿಕೊಂಡಿದ್ದು ಮಹಾನ್ ಮಾರ್ಗ. **ಅದು ತಪಸ್ಸು ರೀತಿಯ ಅಧ್ಯಯನ, ಗಾಢಚಿಂತನೆ.** ಈ ದೇಶದ ಚರಿತ್ರೆ, ಪುರಾಣ, ಆರ್ಥಿಕ ಇತಿಹಾಸ, ಸಾಮಾಜಿಕ ಇತಿಹಾಸ, ಧಾರ್ಮಿಕ ಇತಿಹಾಸ, ಸಾಂಸ್ಕೃತಿಕ ಇತಿಹಾಸ ಮುಂತಾದವುಗಳನ್ನೆಲ್ಲ ತುಂಬು ಪರಿಶ್ರಮದಿಂದ ಅಧ್ಯಯನ ನಡೆಸಿದರು. ತಮ್ಮ ಅಸಾಧಾರಣವಾದ ಪ್ರತಿಭೆ, ಜ್ಞಾನ, ವಿವೇಕ ಹಾಗು ತಮ್ಮ ಅನನ್ಯ ಒಳನೋಟಗಳ ಮೂಲಕ ಈ ದೇಶದ ನಿಜವಾದ ಇತಿಹಾಸದ ಪದರಗಳನ್ನು, ಗಟ್ಟಿಯಾದ ಸೈದ್ಧಾಂತಿಕ ಆಧಾರಗಳ ಮೇಲೆಯೇ ಬಿಚ್ಚಿ ತೋರಿಸಿದರು. ಅಸ್ಪೃಶ್ಯತೆಯಂಥ ಅತಿಹೀನ ಪದ್ಧತಿ ಹಾಗೂ ಜಾತಿಪದ್ಧತಿಗಳೆರಡೂ ಹೇಗೆ ಅವೈಜ್ಞಾನಿಕವಾದವುಗಳು ಎಂಬುದನ್ನು ಸಾಬೀತುಪಡಿಸಿದರು. ನಿಜ ಮನುಷ್ಯ ಘನತೆಯನ್ನು ಎತ್ತಿ ತೋರಿಸಿದರು.

ಅಂಬೇಡ್ಕರ್ ಅವರ ಪ್ರತಿಭಾಶಕ್ತಿಯನ್ನು ಗುರುತಿಸಿ; ಜ್ಯೋತಿಬಾಫುಲೆ, ಶಾಹುಮಹಾರಾಜ್ ಅವರಂತ ಮಹನೀಯರು ದೇಶ–ವಿದೇಶದ ಉನ್ನತ ಶಿಕ್ಷಣಕ್ಕೆ

ಊರುಗೋಲಾಗಿ ನಿಂತದ್ದು ಕೂಡ ತುಂಬ ಮಹತ್ವದ ಸಂಗತಿಯೆ ಆಗಿದೆ. ಧ್ಯಾನದ ಅಧ್ಯಯನ, ಚಿಂತನೆ ನಡೆಸುತ್ತಲೇ; ಅನ್ಯಾಯ, ಅಸಮಾನತೆ, ಮೌಢ್ಯತೆ ಹಾಗೂ ಅಸ್ಪೃಶ್ಯತೆಯ ವಿರುದ್ಧ ತಮ್ಮ ಪ್ರಖರ ವೈಚಾರಿಕಶಕ್ತಿ, ಅಪ್ರತಿಮವಾದ ಮಹಾನ್ ನೈತಿಕತೆಯ ಸಂಘಟನಾ ಶಕ್ತಿಯಿಂದಲೇ ಐತಿಹಾಸಿಕ ಹೋರಾಟಗಳನ್ನು ರೂಪಿಸಿದರು. ಸಮಯಕ್ಕೆ ಬಹಳ ದೊಡ್ಡ ಆದ್ಯತೆಯನ್ನು ನೀಡುತ್ತಿದ್ದ ಅಂಬೇಡ್ಕರ್ ಅವರು, ತನ್ನ ವೈಯಕ್ತಿಕ ಸುಖ–ಸಂತೋಷ, ನೆಮ್ಮದಿಗಳನ್ನೆಲ್ಲ ತ್ಯಾಗ ಮಾಡಿದರು. ಆ ಫಲವಾಗಿಯೇ ಒಟ್ಟು ಸಮಾಜಕ್ಕೆ ಮಾನವೀಯವಾದ ಹೊಸ ಬೆಳಕನ್ನು ಬೀರುವಂಥ ಅನರ್ಘ್ಯರತ್ನಗಳಂಥ ಅಸಾಧಾರಣ ಬರಹಗಳ ಸಾಧನೆಯನ್ನು ಮಾಡಿದರು. ಸಮಸಮಾಜದ ಆಶಯದ ಸಂವಿಧಾನವನ್ನು ರೂಪಿಸಿದ ಅಂಬೇಡ್ಕರ್ ಅವರು; ಒಬ್ಬ ವ್ಯಕ್ತಿ ಈ ಎಲ್ಲವನ್ನು ಮಾಡಲು ಸಾಧ್ಯವೆ? ಎನ್ನುವಂತೆ **ಪವಾಡ (Miracle) ಸದೃಶವಾಗಿ** ಮಾಡಿತೋರಿಸಿದ್ದು ಮಹಾಇತಿಹಾಸವೆ ಆಗಿದೆ.

ನಮ್ಮ ಸಂವಿಧಾನದ ನಿಯಮ ಪ್ರಕಾರ ಅಮಾನವೀಯವಾದ ಅಸ್ಪೃಸ್ಯತಾ ಆಚರಣೆ ಘೋರ ಅಪರಾದ. ಆಚರಿಸಿದವರಿಗೆ ದಂಡ ಹಾಗೂ ಜೈಲು ಶಿಕ್ಷೆ ಇದೆ. ಈ ಶಿಕ್ಷೆ ಇದ್ದರೂ ಕೂಡ ಇದನ್ನು ಕಟ್ಟುನಿಟ್ಟಾಗಿ ಪಾಲಿಸದ, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು, ವ್ಯವಸ್ಥೆಯ ಅಜ್ಞಾನ ಹಾಗೂ ರಾಜಕಾರಣಿಗಳ ಕೊಳಕುತನದಿಂದ ಅಸ್ಪೃಶ್ಯತಾ ಪದ್ಧತಿ ಅವ್ಯಾಹತವಾಗಿ ನಡೆಯುತ್ತಲೇ ಇರುವುದು ವಿಷಾದದ ಸಂಗತಿ. ಕೆಲವು ಕಡೆ ನೇರ ಅಲ್ಲದಿದ್ದರೂ ಚಾಪೆಯ ಅಡಿಯಲ್ಲಿ ನುಸಿಯುತ್ತಾ ಅಪ್ರತ್ಯಕ್ಷವಾಗಿಯೂ ನಡೆಯುತ್ತಿದೆ. ನಾಚಿಕೆ ಆಗಬೇಕು ಈ ವ್ಯವಸ್ಥೆಗೆ. ಇಪ್ಪತ್ತೊಂದನೆ ಶತಮಾನದ ಹೊಸ್ತಿಲಲ್ಲಿರುವ ಐ.ಟಿ., ಬಿ.ಟಿ.... ಕಂಪ್ಯೂಟರ್ ಲೋಕದ ಬರಾಟೆಯಲ್ಲಿರುವ ಈ ಕಾಲದಲ್ಲೂ ಪ್ರಾಣಿ–ಪಕ್ಷಿಗಳು, ನಾಯಿನರಿಗಳು ಕುಡಿದು ತೇಗುವ ಕೆರೆ ಕಟ್ಟೆಗಳಲ್ಲಿ ದಲಿತರು ಮುಟ್ಟಿ ನೀರು ಕುಡಿಯುವಂತಿಲ್ಲದಿರುವುದು ದುರಂತದಲ್ಲಿ ದುರಂತ ಸಂಗತಿ ಎನಿಸುತ್ತದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಎತ್ತ ಸಾಗುತ್ತಿದೆ. ಸರ್ಕಾರಗಳೇನಾದರೂ ಇವೆಯಾ? ಬಸವಣ್ಣನವರ ವಿಚಾರಗಳು ಏನಾಗುತ್ತಿವೆ? ಕುವೆಂಪು ವಿಚಾರಗಳು ಎಲ್ಲಿ ಹೋಗಿವೆ? ಪ್ರಗತಿಪರ ಸಂಘಟನೆಗಳ ಕಣ್ಣಿಗೆ ಏನು ಕವಿದಿದೆ....? ಎಂಬ ಹೆದರಿಕೆ ಉಂಟಾಗುತ್ತದೆ. 2009ರ ಪ್ರಾರಂಭದಲ್ಲಿ ಅನ್ನಿಸುತ್ತೆ. ಪ್ರಜಾವಾಣಿ ಒಂದು ವರದಿ ಮಾಡಿತ್ತು. ಉತ್ತರ ಕರ್ನಾಟಕದ ಅದರಲ್ಲೂ ಬಸವಣ್ಣನವರು ಅಡ್ಡಾಡಿರಬಹುದಾದ ನಾಡಿನಲ್ಲಿಯೇ ದಲಿತರು ಊರ ಕೆರೆಯ ನೀರನ್ನು ಮುಟ್ಟುವಂತಿಲ್ಲ. ಸವರ್ಣೀಯರು ನೇಮಿಸಿರುವ ಒಬ್ಬನಿಂದ ಸಾಲಿನಲ್ಲಿ ನಿಂತು ಅವನು ಕೊಡದಲ್ಲಿ ನೀರನ್ನು ಕೆರೆಯಿಂದ ತೆಗೆದು ಹುಯ್ದು ಕೊಡುವುದು. ಅವನು ಬರುವವರೆಗೂ ಬಿಸಿಲ ಜಳದಲ್ಲಿ ತಲೆಮೇಲೆ ಮುಸುಕಾಕಿಕೊಂಡು ವಯಸ್ಸಾದವರು,

ಹೆಂಗಸರು ಗಂಡಸರೆನ್ನದೆ ಕಾಯ್ದು ಕುಳಿತಿರುವುದು... ಆ ವರದಿಯನ್ನು ನೋಡಿಯೆ ರೋಮ ನಿಮಿರುತ್ತದೆ..... ಏನಾಗಿದೆ ಈ ವ್ಯವಸ್ಥೆಗೆ ಅಂತ, ದುಃಖ ಉಮ್ಮಳಿಸುತ್ತದೆ.

ಕೆಲವು ಕಡೆ ಮಾತ್ರ ಕನಿಷ್ಠ ಆ ಕಾನೂನಿನ ಭಯಕ್ಕಾದರೂ ಎಷ್ಟೋ ಪ್ರಮಾಣದ ಅಸ್ಪೃಶ್ಯತಾ ಆಚರಣೆ ಕಡಿಮೆ ಆಗುತ್ತಿರುವುದಂತೂ ನಿಜ. ಈ ಕಾನೂನಿನ ಭಯವೂ ಕೂಡ ಇಲ್ಲದಿದ್ದರೆ ಅದು ಇನ್ನೂ ಭೀಕರವಾಗಿರುತ್ತಿತ್ತೇನೋ; ಕಲ್ಪನೆಗೂ ನಿಲುಕುವುದಿಲ್ಲ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಗಳಿಂದ ಪ್ರಭಾವಿತಗೊಂಡು, ಸದಾ ಸಾಮಾಜಿಕ ಆರೋಗ್ಯವನ್ನು ಬಯಸುವ ಆಶಯದಿಂದ 1970ರ ದಶಕದಲ್ಲಿ ಹುಟ್ಟಿಕೊಂಡ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸ್ಥಾಪನೆಯಾಗದಿದ್ದರೆ ಹೇಗಿರುತ್ತಿತ್ತು? ಈ ಸಮಾಜದ ಸ್ಥಿತಿಗತಿ ಎಂಬುದನ್ನು ಕಲ್ಪನೆ ಮಾಡಿಕೊಳ್ಳಲು ನನ್ನಂಥವನಿಗೆ ಭಯವಾಗುತ್ತದೆ. ದಲಿತ ಸಂಘರ್ಷ ಸಮಿತಿ ಅಂದರೆ, ಭ್ರಷ್ಟ ಅಧಿಕಾರಿಶಾಯಿ ಹಾಗು ಪಟ್ಟಭದ್ರ ರಾಜಕಾರಣಿಗಳಿಗೆ ನಡುಕ ಉಂಟು ಮಾಡುವ ಕಾಲ ಕೂಡ ಇತ್ತಲ್ಲಾ....! ಇಂದು ಛಿದ್ರಗೊಂಡಿರುವ ದಲಿತ ಸಂಘರ್ಷ ಸಮಿತಿಗಳ ಬಗ್ಗೆ ಭಿನ್ನಾಭಿಪ್ರಾಯ, ಟೀಕೆಗಳೇನೆ ಇದ್ದರೂ ಕೂಡ, ಇಂದಿಗೂ ಪ್ರಾಮಾಣಿಕವಾಗಿ ಹಳ್ಳಿಗಾಡಿನಲ್ಲಿ ಸಂಘಟನೆ ಕಟ್ಟುತ್ತಾ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಂದ, ಮುಖಂಡರಿಂದ, ದಲಿತ ಜನಾಂಗಗಳು ಅದೆಷ್ಟೊ ಪ್ರಮಾಣದ ಅಪಮಾನ, ಹಲ್ಲೆ, ಶೋಷಣೆ ಮುಂತಾದ ಅಮಾನವೀಯ ನಡತೆಗಳು ಕಡಿಮೆ ಆಗುತ್ತಿವೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ.

ಅಸ್ಪೃಶ್ಯತೆ ಸಮಸ್ಯೆ ಇದೊಂದು ಭಾರತದ ಮನಸ್ಸಿಗಂಟಿರುವ ಮಹಾನ್ ಜಾಢ್ಯ. ಇದು ಅಳಿಯಲೇಬೇಕಾಗಿದೆ. ಇದಕ್ಕೆ ದಲಿತರು; ಅಂಬೇಡ್ಕರ್ ಹಾಕಿಕೊಟ್ಟಿರುವ ದಾರಿಯಲ್ಲಿ ಸಾಗಿ, ಶಿಕ್ಷಣ ಪಡೆದು, ಜಾಗೃತರಾಗಿ, ಸಂಘಟನೆಗೊಂಡು ವೈಚಾರಿಕ ಹೋರಾಟಗಳ ಮೂಲಕ ಬದುಕನ್ನು ಕಟ್ಟಿಕೊಳ್ಳಬೇಕಾದ ದಾರಿ ಒಂದಾದರೆ; ಅಸ್ಪೃಶ್ಯತೆಯ ಈ ಮಹಾಮಾರಿಯನ್ನು ಇಂಡಿಯಾದ ಮನಸ್ಸುಗಳಿಂದ ಹೊಡೆದೋಡಿಸಲು ಇಷ್ಟೇ ಖಂಡಿತಾ ಸಾಕಾಗುವುದಿಲ್ಲ. ಮಾನವಪರವಾಗಿರುವ ದಲಿತೇತರ ವೈಚಾರಿಕ ಮನಸ್ಸುಗಳ ಪ್ರಯತ್ನ ಕೂಡ ಬಹಳ ಮುಖ್ಯ. ಈ ಕಟುವಾಸ್ತವವನ್ನು ಸಮಾಜ ಅರಿಯಬೇಕಾಗಿದೆ. ಅಸ್ಪೃಶ್ಯ ಜನಾಂಗಗಳದು ಒಂದು ಸಮಸ್ಯೆಯಾದರೆ; ಶ್ರೇಣಿಕೃತ **ಜಾತಿ ವ್ಯವಸ್ಥೆಯಲ್ಲಿ ಯಾವ ಜಾತಿಗೆ ತಾನೆ ನೆಮ್ಮದಿ ಇದೆ?** ಒಬ್ಬರ ತಲೆಯ ಮೇಲೆ ಇನ್ನೊಬ್ಬರು ಕಾಲು ಇದ್ದೇ ಇದೆಯಲ್ಲಾ! ಒಬ್ಬರಿಗಿಂತ ಒಬ್ಬರು ಮೇಲು ಕೀಳು ಎಂಬ ಜಾತಿ-ಉಪಜಾತಿಗಳ ಶ್ರೇಣಿಯಲ್ಲಿ ಎಲ್ಲರು ಒಂದಲ್ಲ ಒಂದು ರೀತಿಯಲ್ಲಿ ಕೀಳರಿಮೆಯ ಮನೋರೋಗದಿಂದ ನರಳುತ್ತಿರುವವರೆ. **ಮನುಪ್ರಣೀತ ವ್ಯವಸ್ಥೆ ಭಿತ್ತಿದ ಈ ವಿಷಕ್ಕೆ ನರಳದ ಜನಾಂಗಳೆ ಇಲ್ಲ.** ಹಾಗಾಗಿ ಈ ವಿಷಜಾಲ ಕುಣಿಕೆಯೊಳಗಿರುವ ಜಾತಿಶ್ರೇಣಿ ಎಂಬುದೆ ಅವಾಸ್ತವ.

ಅಸ್ಪೃಶ್ಯತೆ ಎಂಬುದಂತೂ ಮಹಾಪಾಪಿಗಳ, ಕೀಳುಮನೋರೋಗಿಗಳಿಂದ ಅತಿ ಸ್ವಾರ್ಥದಿಂದ, ಸೃಷ್ಟಿಯಾಗಿರುವ ಮನೋರ್ರೋಗ ಎಂಬುದನ್ನು ಅಗತ್ಯವಾಗಿ ಮನಗಾಣಬೇಕು. ಅಸ್ಪೃಶ್ಯ ಹಿನ್ನೆಲೆಯಿಂದಲೆ ಅಂಬೇಡ್ಕರ್ ಅವರಂಥ ಮಹಾಜ್ಞಾನಿ ಬಂದಿದ್ದಾರೆ. ಸಾವಿರಾರು ಜಾತಿ ಉಪಜಾತಿಗಳು, ವಿವಿಧ ಧರ್ಮಿಯರು, ಸಾವಿರಾರು ಬುಡಕಟ್ಟುಗಳು ಬದುಕುತ್ತಿರುವ, ವಿಶ್ವದ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರಕ್ಕೆ, ಅಕ್ಷರವನ್ನು ಗುತ್ತಿಗೆಯಾಗಿ ಪಡೆದುಕೊಂಡಿದ್ದ ಜನ ಸಮುದಾಯದಿಂದ ಸಾಧ್ಯವಾಗದ ಸಾಮಾಜಿಕ ನ್ಯಾಯದ ತಾಯಿ ಕರುಳಿನ ಸಂವಿಧಾನ ರೂಪಿಸಿಕೊಟ್ಟಂಥ ಮಹಾತ್ಮ ಬಂದ ಮೇಲೆ, ಆ ಸಮುದಾಯಗಳು ಯಾವ ದೃಷ್ಟಿಕೋನದಲ್ಲಿ ನೋಡಿದರೂ ಕಡಿಮೆ ಅಲ್ಲ ಅಲ್ಲವೇ? ಯಾವುದೆ ಬಗೆಯ ಸಾಧನೆಗೆ ಒಳ್ಳೆಯ ವ್ಯಕ್ತಿತ್ವ ಬಹಳ ಮುಖ್ಯ. ಬಾಯಲ್ಲಿ ಹುಟ್ಟಿದವರು, ತೋಳಿನಲ್ಲಿ ಹುಟ್ಟಿದವರು, ಸೊಂಟದಲ್ಲಿ ಹುಟ್ಟಿದವರು, ಕಾಲಲ್ಲಿ ಹುಟ್ಟಿದವರು ಎಂಬ ಮನುಪ್ರಣೀತ ಕುತಂತ್ರವೆ, ಹುರುಳಿಲ್ಲದ್ದು. ಮೋಸದ್ದು. ಕೃತಕವಾಗಿ ಗಾಳಿ ತುಂಬಿ ನಿಲ್ಲಿಸಿರುವ ಬೆಲೂನು ಎಂಬುದನ್ನು ಸೂಕ್ಷ್ಮವಾಗಿ ಇಡೀ ವ್ಯವಸ್ಥೆ ಅರಿಯಬೇಕಾಗಿದೆ.

ನಿಜವಾದ ಭಾರತವನ್ನು ಕಟ್ಟಬೇಕಾದರೆ; ಎಲ್ಲ ಸಮುದಾಯದ ಬದುಕು ಸುಧಾರಣೆ ಆಗಬೇಕಾದರೆ ಅಸ್ಪೃಶ್ಯತೆಯ ಪಿಡುಗನ್ನು ತೊಡೆದು ಹಾಕದೆ, ಸಾಧ್ಯವೆ ಇಲ್ಲ ಎಂಬ ಅರಿವು ಇಡಿ ಒಟ್ಟು ಸಮಾಜಕ್ಕೆ ಅಗತ್ಯವಾಗಿ ಬರಬೇಕಾಗಿದೆ. ನನ್ನಂತೆಯೆ ಇರುವ ಮನುಷ್ಯನಿಗೆ ಪರಮ ಅಜ್ಞಾನದ ಅತಿರೇಕದ ಪೈಶಾಚಿತನದಿಂದ ಹೇಲುತಿನ್ನಿಸಿ, ಉಚ್ಚೆಕುಡಿಸಿ, ನರಮೇಧ ಮಾಡುವುದಿದೆಯಲ್ಲಾ...! ಇದು ಯಾಕೆ ನಡೀತಾ ಇದೆ ಅಂದರೆ; ಮೇಲು ಕೀಳು ಎಂಬ ಭೂತ ಬೌದ್ಧಿಕ ದಾರಿದ್ರ್ಯರಿಗೆ ತಲೆಹೊಕ್ಕು ಕೂತಿರುವುದರಿಂದ. ಒಂದು ಮನುಷ್ಯನ ಜೀವಕ್ಕೆ ಎಷ್ಟು ಮೌಲಿಕವಾದ ಮಹತ್ವ ಇದೆ ಎಂಬ ತಿಳಿವಳಿಕೆ ಇಲ್ಲದ್ದರಿಂದ. ಮನುಷ್ಯತ್ವದ ಘನತೆ ತಿಳಿಯಬೇಕಾದರೆ ನಿಜವಾದ ಶೈಕ್ಷಣಿಕ ಅರಿವು ಎಲ್ಲರಲ್ಲೂ ಮೂಡಬೇಕಾಗಿದೆ. ಶೋಷಿತರು ಹಾಗೂ ಶೋಷಣೆ ಮಾಡುವ ಎಲ್ಲ ಸಮುದಾಯಗಳು ಅರ್ಥಪೂರ್ಣವಾದ ವೈಚಾರಿಕೆ ಜಾಗೃತಿಯನ್ನು ಅಗತ್ಯವಾಗಿ ಕಂಡುಕೊಳ್ಳಬೇಕಾಗಿದೆ. ಈ ದೇಶದ ರಾಜಕಾರಣಿಗಳು, ಮಠಾಧೀಶರು ಅಧಿಕಾರಿಶಾಯಿ, ಬೋಧಕರು, ಸುಧಾರಕರು, ಸಂಘಟಕರು, ವಿದ್ಯಾರ್ಥಿಗಳು, ಮಹಿಳೆಯರು, ರೈತಸಮುದಾಯ, ಬುಡಕಟ್ಟು ಜನಾಂಗ... ಹೀಗೆ ಭಾರತದ ನರನಾಡಿಗೆ ಮನುಷ್ಯತ್ವದ ವೈಚಾರಿಕ ಪ್ರಜ್ಞೆಯ ಹೊಸ ರಕ್ತ ಹರಿಯಬೇಕಾಗಿದೆ. ಇದಕ್ಕೆ ಅಗತ್ಯವಾಗಿ ಪ್ರಾಥಮಿಕ ಶಿಕ್ಷಣದಿಂದಲೇ ನಮ್ಮ ಸಂವಿಧಾನ ರೂಪಿಸಿರುವ ಜಾತ್ಯಾತೀತ (Secular) ವಿಚಾರಗಳನ್ನು ಪಠ್ಯಕ್ಕೆ (Syllabus) ಕಡ್ಡಾಯವಾಗಿ ಅಳವಡಿಸಬೇಕು. ಎಳೆಯ ಮನಸ್ಸಿನಿಂದಲೇ ಕಡ್ಡಾಯವಾಗಿ ಮನುಷ್ಯಪರವಾದ ಜಾತ್ಯಾತೀತ ವಿಚಾರಗಳನ್ನು

ಬಿತ್ತಬೇಕಾಗಿದೆ. ಇದು ಯಶಸ್ವಿಯಾಗಿ ಆಗಬೇಕಾದರೆ ಮುಖ್ಯವಾಗಿ ಬೋಧಕ ಪಡೆಗೆ ದೊಡ್ಡಮಟ್ಟದ ಪುನಶ್ಚೇತನ ಕಾರ್ಯವನ್ನು (Refresher programe) ಸರ್ಕಾರ ಬಹಳ ಒಳ್ಳೆಯ ಜವಾಬ್ದಾರಿಯಿಂದ ಮಾಡಬೇಕಾಗಿದೆ. ಸರ್ಕಾರ ಇದನ್ನು ಅತಿ ಗಂಭೀರವಾದ **ಮೂಲಭೂತ ಸಮಸ್ಯೆ** ಎಂದು ಪರಿಗಣಿಸಬೇಕು. ನಮ್ಮಂತೆಯೆ ಇರುವ ಮನುಷ್ಯನನ್ನು ನಿನ್ನನ್ನು ಮುಟ್ಟಿಸಿಕೊಳ್ಳುವುದಿಲ್ಲ. ನಿನ್ನ ವೃತ್ತಿಯೆ ಕೀಳಾದುದು ಎಂದು ಕ್ರೂರವಾಗಿ ಪ್ರಾಣಿ–ಪಕ್ಷಿ ನಾಯಿನರಿಗಳಿಗಿಂತ ಕೀಳಾಗಿ ಕಾಣುವುದಿದೆಯಲ್ಲಾ....! ಇದು ಮಾನವಂತ ಸಮಾಜಕ್ಕೆ ತಕ್ಕುದಲ್ಲ. ಅಸ್ಪೃಶ್ಯ ಸಮಸ್ಯೆಗಿಂತ ಭೀಕರ ಕೆಟ್ಟ ಪರಿಣಾಮವನ್ನುಂಟುಮಾಡುವ ಕ್ರೂರ ಸಮಸ್ಯೆ ಇನ್ನೊಂದಿಲ್ಲ ಎಂಬುದು ಸರ್ಕಾರಕ್ಕೆ, ಸಮಾಜಕ್ಕೆ ಮೊದಲು ಅರ್ಥವಾಗಬೇಕಾಗಿದೆ. ಹಾಗಾಗಿ **ಅಸ್ಪೃಶ್ಯತೆ ನಿವಾರಣೆಯ ಕೆಲಸ ಜರೂರಾದ, ತುಂಬ ಅಗತ್ಯವಾದ ಮಾನವೀಯ** ಕೆಲಸ ಎಂಬುದನ್ನು ಅರಿತು ಸರ್ಕಾರ ಅಸ್ಪೃಶ್ಯತಾ ನಿವಾರಣ ಕಾರ್ಯಕ್ರಮವನ್ನು ತೀವ್ರತರವಾಗಿ, ಪ್ರಾಮಾಣಿಕವಾಗಿ ಹಮ್ಮಿಕೊಳ್ಳಬೇಕಾಗಿದೆ.

ಅಗತ್ಯವಾಗಿ; ಬುದ್ಧಗುರು, ಬಸವಣ್ಣ, ಕನಕದಾಸರು, ಸಂತಶಿಶುನಾಳ ಷರೀಪ, ನಾರಾಯಣಗುರು, ಕುದ್ಮುಲ್ ರಂಗರಾಯರು, ಜ್ಯೋತಿಬಾಫುಲೆ, ಶಾಹುಮಹಾರಾಜ್, ನಾಲ್ವಡಿಕೃಷ್ಣರಾಜ ಒಡೆಯರ್, ಪೆರಿಯಾರ್, ಕೋವೂರ್, ಅಂಬೇಡ್ಕರ್, ಗಾಂಧಿ, ಲೋಹಿಯಾ, ಕುವೆಂಪು... ಮುಂತಾದ ಮನುಷ್ಯ ಘನತೆಗೆ ಅಸಾಮಾನ್ಯ ಕೊಡುಗೆ ನೀಡಿರುವ ಮಹನೀಯರ ವಿಚಾರಧಾರೆಗಳನ್ನು, ಈ ಬೋಧಕಪಡೆಗೆ ಬಹಳ ದೊಡ್ಡ ಮಟ್ಟದಲ್ಲಿಯೆ ಜವಾಬ್ದಾರಿಯಿಂದ ಸರ್ಕಾರವೆ ಎಲ್ಲ ಪ್ರಗತಿಪರ ಸಂಘಟನೆಗಳ ನೆರವಿನೊಂದಿಗೆ ವೈಜ್ಞಾನಿಕವಾದ, ವೈಚಾರಿಕವಾದ, ದೊಡ್ಡ ಕಾರ್ಯಗಾರಗಳನ್ನು (Work-shop) ನಡೆಸಬೇಕು. ಇಂತಹ ಒಂದು ವೈಚಾರಿಕ ದೊಡ್ಡಪಡೆಯನ್ನು ರೂಪಿಸಬೇಕು. ಆರೋಗ್ಯಕರ ಶಿಕ್ಷಕ ಪಡೆಯಿಂದ ಆ ವಿಚಾರವನ್ನು ಮಕ್ಕಳಿಗೆ ಪ್ರಾಥಮಿಕ ಶಾಲೆಯಿಂದಲೆ ಬಿತ್ತರಿಸಬೇಕು. ಇಂತಹ ಒಂದು ನಾಂದಿ ಪ್ರಾಥಮಿಕ ಹಂತದಲ್ಲಿಯೇ ಚಿಗುರಿ – ನಂತರ ಮಾಧ್ಯಮಿಕ, ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ ಮಟ್ಟದಲ್ಲಿಯೂ ಈ ಬಗೆಯ ವೈಚಾರಿಕ ವಿಚಾರಧಾರೆಗಳು ಕಡ್ಡಾಯವಾಗಿ ಪಠ್ಯವಾಗಿ ಇರುವಂತೆ ನೋಡಿಕೊಳ್ಳಬೇಕು.

ಇನ್ನು ಸರ್ಕಾರ ಮತ್ತು ಅದರ ಅಂಗಸಂಸ್ಥೆಗಳು ನೌಕರರನ್ನು ನೇಮಕಾತಿ ಮಾಡಿಕೊಳ್ಳುವಾಗಲೆ ಕಡ್ಡಾಯವಾಗಿ **ಅಸ್ಪೃಶ್ಯತಾ ನಿವಾರಣೆಯ ಕೆಲಸವನ್ನು ನಿಮ್ಮ ನಿಮ್ಮ ಹಂತದಲ್ಲಿ ಪ್ರಾಮಾಣಿಕವಾಗಿ ತೊಡೆದು ಹಾಕಲು ಕಡ್ಡಾಯವಾಗಿ ಪ್ರಯತ್ನ ಮಾಡಬೇಕು ಎಂಬ ಕಠಿಣ ಷರತ್ತನ್ನು ವಿಧಿಸಬೇಕು** ಜೊತೆಗೆ ಆ ಮಟ್ಟದ ಮಾನಸಿಕ ತಯಾರಿಯನ್ನು ಅವರಿಗೆ ನೀಡಬೇಕು. ಪ್ರತಿವರ್ಷವೂ ಅಸ್ಪೃಶ್ಯತಾ ನಿವಾರಣೆಯ ಕೆಲಸವನ್ನು ಯಾವ

ಪ್ರಮಾಣದಲ್ಲಿ ಮಾಡಿದ್ದೀರಿ ಎಂಬ ಪ್ರಗತಿಯನ್ನು ಜವಾಬ್ದಾರಿ ಇರುವ ಮೇಲುಸ್ತುವಾರಿಯ ಮೇಲಾಧಿಕಾರಿಗಳು ಪರಿಶೀಲಿಸಿದ ನಂತರವೆ, ಈ ಬಗೆಗಿನ ಅವರ ಕಾರ್ಯದಕ್ಷತೆ ಸಮರ್ಪಕವಾಗಿ ಇದ್ದರೆ ಮಾತ್ರವೆ ಅವರಿಗೆ ವಾರ್ಷಿಕವಾಗಿ ನೀಡುವ ಇನ್‌ಕ್ರಿಮೆಂಟುಗಳನ್ನು ನೀಡಬೇಕು. ಬಡ್ತಿಯನ್ನು ನೀಡುವಾಗಲಂತೂ ಅಸ್ಪೃಶ್ಯತಾ ನಿವಾರಣೆಯ ಕೆಲಸ ಮಾಡಿರುವ ಪ್ರಗತಿ ವರದಿಯನ್ನು ಕಡ್ಡಾಯಗೊಳಿಸಬೇಕು. ಅದರಲ್ಲಿ ನಿಜವಾದ ಕೆಲಸ ಮಾಡಿ ಅರ್ಹರಾದವರಿಗೆ ಮಾತ್ರವೆ ಬಡ್ತಿ ನೀಡಬೇಕು. ಇದು ಉನ್ನತ ಅಧಿಕಾರಿಗಳಿಗೂ ಕಾಲೇಜು, ವಿಶ್ವವಿದ್ಯಾನಿಲಯದ ಅಧ್ಯಾಪಕ, ಪ್ರಾಧ್ಯಾಪಕರುಗಳಿಗೂ ಕಡ್ಡಾಯವಾಗಿ ಅನ್ವಯವಾಗಬೇಕು.

ಮುಖ್ಯವಾಗಿ ಸರ್ಕಾರದ ಆಡಳಿತದ ವಿವಿಧ ಇಲಾಖೆಗಳ ಎಲ್ಲ ಹಂತದಲ್ಲಿಯೂ ಅಸ್ಪೃಶ್ಯತಾ ನಿವರಣಾ ಕಾರ್ಯಕ್ರಮ ಅವರ ಆಡಳಿತ ಒಂದು ಭಾಗವೆ ಆಗಿರಬೇಕು. ಬಹಳ ಮುಖ್ಯವಾಗಿ ನಮ್ಮ ಸಮಾಜ ಕಲ್ಯಾಣ ಇಲಾಖೆಗಳಿದ್ದಾವಲ್ಲಾ. ಇವು ಕೇವಲ ಹಾಸ್ಟೆಲ್ ನಡೆಸಿಕೊಂಡು ಹೋಗುವುದಷ್ಟೆ ಇವರ ಕೆಲಸವಾಗಬಾರದು. ರೆವಿನ್ಯೂ ಇಲಾಖೆಗೆ ಕಂದಾಯ ಕಟ್ಟಿಸಿಕೊಂಡು ಪಹಣಿ ಕೊಡುವುದಷ್ಟೆ ಇವರ ಕೆಲಸವಾಗಬಾರದು. ದಲಿತರು ಅಪಮಾನಸಿಕೊಂಡು, ಹಲ್ಲೆಗೊಳಗಾಗಿ ಬಂದ ಮೇಲೆ ಕಾಟಾಚಾರಕ್ಕೆ ಕೇಸು ಜಡಿಯುವುದಷ್ಟೆ ಪೊಲೀಸ್ ಇಲಾಖೆಯ ಕೆಲಸವಲ್ಲ. ಸಮಸ್ಯೆ ಆಗಿ ಬಂದಮೇಲೆ ಗೋಜಲು ಗೋಜಲಾಗಿ ತಡಕಾಡುವುದಕ್ಕಿಂತ ಸಮಸ್ಯೆ ಬರುವ ಮೊದಲೆ ಜಾಗೃತರಾಗಬೇಕು. **'ಸಮಸ್ಯೆಯ ಮೂಲ ಎಲ್ಲಿದೆಯೋ ಅದನ್ನು ಅರಿತುಕೊಂಡು ಕಾರ್ಯಶೀಲರಾಗಬೇಕು'** ಅದೇನೆಂದರೆ; ಸಮಾಜದ ಸುಧಾರಣೆಯನ್ನು ಮಾಡುವ ಘನ ಉದ್ದೇಶವನ್ನೇ ಹೊಂದಿರುವ ಸಮಾಜ ಕಲ್ಯಾಣ ಇಲಾಖೆ ಇದರ ಸಂಚಾಲಕತ್ವ ವಹಿಸಿಕೊಳ್ಳಬೇಕು. ತಾಲೊಕು ಮಟ್ಟದಲ್ಲಿ ತಹಶೀಲ್ದಾರ್, ತಾಲೂಕು ಪಂಚಾಯತಿ ಕಾರ್ಯ ನಿರ್ವಹಣಾ ಅಧಿಕಾರಿಗಳು ಕ್ಷೇತ್ರಶಿಕ್ಷಣಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವಯಸ್ಕರ ಶಿಕ್ಷಣಾಧಿಕಾರಿಗಳು, ಈ ಎಲ್ಲರನ್ನೂ ಒಳಗೊಂಡ **ಅಸ್ಪೃಶ್ಯತ ನಿವಾರಣೆ ಕಮಿಟಿಯೊಂದನ್ನು** ಸ್ಥಾಪಿಸಬೇಕು. ಈ ಕಮಿಟಿಯು ಹೋಬಳಿ – ಗ್ರಾಮ ಮಟ್ಟದಲ್ಲಿರುವ ತಮ್ಮ ಇಲಾಖೆಯ ಸಿಬ್ಬಂದಿಯ ಕೆಳಹಂತದ ಕಮಿಟಿಗಳನ್ನು ರಚಿಸಿಕೊಳ್ಳಬೇಕು. ಅಲ್ಲಿ ತಪ್ಪದೆ ಗ್ರಾಮ ಪಂಚಾಯತಿ ಸದಸ್ಯರುಗಳು, ತಾಲೂಕು ಪಂಚಾಯತಿ ಸದಸ್ಯರುಗಳು, ಜಿಲ್ಲಾ ಪಂಚಾಯತಿ ಸದಸ್ಯರುಗಳು ಇರಬೇಕು. ಆಯಾಯ ಗ್ರಾಮದ ಎಲ್ಲ ಜನಾಂಗದ ಮುಖಂಡರುಗಳು, ಹಿರಿಯರು, ಮಹಿಳೆಯರು, ಇರಬೇಕು. ಈಗ ಗ್ರಾಮಗಳಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರು, ಅಂಗನವಾಡಿ ಶಿಕ್ಷಕಿಯರು ಈ ಎಲ್ಲ ಸಂಘಸಂಸ್ಥೆಯ, ಜೊತೆಗೆ ಆಯಾಯ ಭಾಗದ ಪ್ರಗತಿಪರ ಸಂಘಟನೆ (ದಲಿತ ಸಂಘರ್ಷ ಸಮಿತಿ, ರೈತ ಸಂಘಟನೆಯ ಕಾರ್ಯಕರ್ತರು)ಗಳ ಸದಸ್ಯರುಗಳನ್ನೆಲ್ಲ ಸೇರಿಸಿಯೆ

ಅಸ್ಪೃಶ್ಯತಾ ನಿವಾರಣಾ ಸಂಘವನ್ನು ರಚಿಸಬೇಕು. ತಹಶೀಲ್ದಾರ್ ಅಧ್ಯಕ್ಷರಾಗಿರುವ; ತಾಲೋಕು ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಯ ಸಂಚಾಲಕತ್ವದಲ್ಲಿ ವರ್ಷಕ್ಕೆ ಇಂತಿಷ್ಟು ಗ್ರಾಮಗಳನ್ನು ಮಾತ್ರವೆ ಆಯ್ಕೆ ಮಾಡಿಕೊಳ್ಳುವ ಯೋಜನೆಯನ್ನು ವೈಜ್ಞಾನಿಕವಾಗಿ, ತಾಳ್ಮೆಯಿಂದ, ವಿವೇಕದಿಂದ ಹಾಕಿಕೊಳ್ಳಬೇಕು. ಆಯ್ಕೆ ಮಾಡಿಕೊಂಡ ಗ್ರಾಮಗಳಿಗೆ ಮೇಲಿನ ಎಲ್ಲ ಅಧಿಕಾರಿವರ್ಗ ಹಾಗು ಅದರ ಸಂಘ ಸಂಸ್ಥೆಗಳ, ಪ್ರಗತಿಪರ ಸಂಘಟನೆಗಳ, ಊರ ಹಿರಿಯರ ಗಮನಕ್ಕೆ ತಂದು ಗ್ರಾಮ ಸಭೆಯನ್ನು ನಿಗಧಿಗೊಳಿಸಿಕೊಂಡು ಗ್ರಾಮಸಭೆಯನ್ನು ಮಾಡಬೇಕು. ತಾಲೋಕಿನ ದಂಡಾಧಿಕಾರಿಗಳಾದ ತಹಶೀಲ್ದಾರರೆ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕು. ಇಂತಹ ಸಭೆಯಲ್ಲಿ ಪ್ರಗತಿಪರ ವಿಚಾರವಂತರನ್ನೂ ಆಹ್ವಾನಿಸಿ ಅಸ್ಪೃಶ್ಯತೆ ಆಚರಣೆ ಎಷ್ಟು ಕ್ರೂರವಾದುದು, ಎಂಬ ತಿಳಿವಳಿಕೆ ನೀಡಿಸಬೇಕು. ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸಿರುವ ಬುದ್ಧ, ಬಸವಣ್ಣ, ಕನಕದಾಸ, ಅಂಬೇಡ್ಕರ್, ಗಾಂಧಿ, ಪೆರಿಯಾರ್, ನಾರಾಯಣಗುರು ಕುದ್ಮಲ್ ರಂಗರಾಯರು, ನಾಲ್ವಡಿಕೃಷ್ಣರಾಜ ಒಡೆಯರ್, ಕುವೆಂಪು ಮುಂತಾದ ಮಹನೀಯರ ವಿಚಾರಧಾರೆಗಳನ್ನು, ಭ್ರಾತೃತ್ವದ ವಿವರವನ್ನು ಸರಳ ಭಾಷೆಯಲ್ಲಿಯೆ ತಿಳಿಯಾಗಿ ಹೇಳಿಸಬೇಕು. ಅರ್ಥವಿಲ್ಲದ ಮೌಢ್ಯ, ಕಂದಾಚಾರಗಳ ಬಗ್ಗೆಯೂ ಉಪನ್ಯಾಸ ನೀಡಿಸಬೇಕು. ಇಲ್ಲಿ ಈ ಬಗೆಯ ಒಳ್ಳೆಯ ವಿಚಾರಗಳು ಪಸರಿಸುವ ದೃಷ್ಟಿಯಿಂದ ವಾರ್ತಾ ಮತ್ತು ಪ್ರಚಾರ ಇಲಾಖೆ, ಮಾಧ್ಯಮಗಳ ಮೂಲಕ ಈ ಅಸ್ಪೃಶ್ಯತಾ ನಿವಾರಣ ಕಾರ್ಯಕ್ರಮದ ಗ್ರಾಮಸಭೆಯ ವಿಚಾರಗಳನ್ನು ತಮ್ಮ ಮಾಧ್ಯಮಗಳ ಮೂಲಕ ಪ್ರಚಾರಮಾಡುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕು. ಎಷ್ಟೋ ಮನಸ್ಸುಗಳು ಈ ಬಗೆಯ ವಿಚಾರಗಳನ್ನು ತಿಳಿದುಕೊಂಡಾಗ ಮುಗ್ಧವಾಗಿ ತಿಳಿಯದೆಯೆ ತಪ್ಪು ಮಾಡುತ್ತಿರುವ ಎಷ್ಟೋ ಮನಸ್ಸುಗಳು ಬದಲಾವಣೆ ಆಗುವ ಸಾಧ್ಯತೆ ಇದ್ದೇ ಇರುತ್ತದೆ. ಇದರ ಜೊತೆಗೆ ಅಸ್ಪೃಶ್ಯತೆಯನ್ನು ಆಚರಿಸಿದರೆ ಸಂವಿಧಾನದ ನಿಯಮಗಳ ಪ್ರಕಾರ ಅಪರಾಧವಾಗುತ್ತದೆ. ದಂಡ ಕಟ್ಟಬೇಕಾಗುತ್ತದೆ. ಜೈಲು ಶಿಕ್ಷೆ ಆಗುತ್ತದೆ ಎಂಬ ವಿವರಗಳನ್ನು ನೀಡಬೇಕು. ಇದುವರೆಗೂ ಅಸ್ಪೃಶ್ಯತಾ ಆಚರಣೆಯಿಂದ ಆಗಿರುವ ದಂಡ ಹಾಗೂ ಜೈಲುಶಿಕ್ಷೆಯಾಗಿರುವ ವಿವರಗಳನ್ನು ಅಂಕಿಅಂಶಗಳ ಸಮೇತ ನೀಡಬೇಕು. ತಹಶೀಲ್ದಾರ್ ಸಮ್ಮುಖದಲ್ಲಿಯೆ, ರೆವಿನ್ಯೂ ಇನ್‌ಸ್ಪೆಕ್ಟರ್, ಗ್ರಾಮಲೆಕ್ಕಿಗರು ಅಸ್ಪೃಶ್ಯತಾ ಆಚರಣೆಯನ್ನೂ ಕಡ್ಡಾಯವಾಗಿ ಆಚರಿಸಬಾರದು. ಆಚರಿಸುವವರಿಗೆ ಖಂಡಿತವಾಗಿಯೂ ಪಹಣಿ ನೀಡುವುದಿಲ್ಲ. ಆದಾಯ ಇತರೆ ಸರ್ಕಾರಿ ಪ್ರಮಾಣಪತ್ರಗಳನ್ನು ನೀಡುವುದಿಲ್ಲ. ಇತರೆ ಸರ್ಕಾರಿ ಸೌಲಭ್ಯಗಳು ಸಿಗುವುದಿಲ್ಲ ಎಂಬ ಎಚ್ಚರಿಕೆಯನ್ನು ಸೂಕ್ಷ್ಮವಾಗಿಯೆ ಸಣ್ಣ ಎಚ್ಚರಿಕೆಯ ರೂಪದಲ್ಲಿ ತಿಳಿಸಬೇಕು. ಪೊಲೀಸ್

ಅಧಿಕಾರಿಗಳು ಈ ಬಗ್ಗೆ ಇದೇ ಸಭೆಯಲ್ಲಿ ಎಚ್ಚರಿಕೆಯನ್ನು ನೀಡಲಿ. ಗ್ರಾಮದ ಹಿರಿಯರು, ಮಹಿಳೆಯರು, ಪ್ರಗತಿಪರ ಸಂಘಟಕರು, ಗ್ರಾಮಪಂಚಾಯಿತಿ ಸದಸ್ಯರುಗಳು ತಾಲೋಕು ಪಂಚಾಯಿತಿ ಸದಸ್ಯರುಗಳು, ಜಿಲ್ಲಾ ಪಂಚಾಯತಿ ಸದಸ್ಯರುಗಳು ತಪ್ಪದೇ ಈ ಸಭೆಯಲ್ಲಿ ಭಾಗವಹಿಸಿ ಇದನ್ನು ಅನುಮೋದಿಸಲಿ. ಇನ್ನು ಮುಖ್ಯವಾಗಿ ಗ್ರಾಮ ಪಂಚಾಯಿತಿ, ತಾಲೋಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಅಸ್ಪೃಶ್ಯತಾ ಆಚರಣೆಯಲ್ಲಿ ತೊಡಗಿದ ಆರೋಪಗಳಿವೆಯೇ? ಇಲ್ಲವೇ? ಪರಿಶೀಲಿಸಿಕೊಳ್ಳಬೇಕು. ಅಂತಹ ಆರೋಪಗಳಿದ್ದಲ್ಲಿ ಆ ಅಭ್ಯರ್ಥಿಯ ಅರ್ಜಿಯನ್ನೇ ತಿರಸ್ಕರಿಸಬೇಕು. ಜೊತೆಗೆ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ಇದು ಕಡ್ಡಾಯ ಆದರೆ ಇನ್ನೂ ಒಳಿತು. ಜೊತೆಗೆ ಸರ್ಕಾರ ಯಾವುದೇ ಬಗೆಯ ಕಂಟ್ರಾಕ್ಟ್ ನೀಡುವಾಗ ಅಸ್ಪೃಶ್ಯತಾ ಆಚರಣೆಯಲ್ಲಿ ತೊಡಗಿರುವುದಿಲ್ಲ ಎಂಬ ಘೋಷಣಾ ಪತ್ರವನ್ನು ಕಡ್ಡಾಯಗೊಳಿಸಬೇಕು. ಅಸ್ಪೃಶ್ಯತಾ ನಿವಾರಣೆಯ ಕೆಲಸದಲ್ಲಿ ಪಾಲ್ಗೊಂಡವರಿಗೆ ಮೊದಲ ಆದ್ಯತೆ ನೀಡಬೇಕು. ಹಾಗೆಯೇ ಶಾಸನಸಭೆ, ಲೋಕಸಭೆಗೆ ಆಯ್ಕೆಗೊಳ್ಳುವ ಸದಸ್ಯರುಗಳಿಗೂ ಇದನ್ನು ಅನ್ವಯಿಸುವ ಕಾನೂನನ್ನು ಜಾರಿಗೆ ತರಬೇಕು. ಅಂತಿಮವಾಗಿ ಜಿಲ್ಲಾಮಟ್ಟದಲ್ಲಿ; ಜಿಲ್ಲಾಧಿಕಾರಿಗಳು, ಜಿಲ್ಲಾ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಗಳೂ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಈ ಜವಾಬ್ದಾರಿಯನ್ನು ಹೊತ್ತು ವರ್ಷಕ್ಕೆ ಜಿಲ್ಲೆಯಲ್ಲಿ ಇಂತಿಷ್ಟು ಮಾತ್ರ ಹಳ್ಳಿಗಳಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮವನ್ನು ರಚನಾತ್ಮಕವಾಗಿ ಹಾಕಿಕೊಂಡು ಮೇಲುಸ್ತುವಾರಿಯನ್ನು ವಹಿಸಿಕೊಳ್ಳಬೇಕು. ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುವ ಈ ತಂಡವು ಜಿಲ್ಲೆಯಲ್ಲಿ ಅಸ್ಪೃಶ್ಯತಾ ಆಚರಣೆ ಆಗದ ಹಾಗೆ, ಅಂತಹ ವಾತಾವರಣವನ್ನು ಸೃಷ್ಟಿಸಬೇಕು. ಜಿಲ್ಲೆಯಲ್ಲಿ ಅಸ್ಪೃಶ್ಯತಾ ಆಚರಣೆ ಪದ್ಧತಿ ಜಾರಿಯಾಗುತ್ತಿದ್ದಲ್ಲಿ ಅದಕ್ಕೆ ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಗಳನ್ನೇ ಹೊಣೆ ಮಾಡಬೇಕು. ಜಿಲ್ಲೆಯಲ್ಲಿ ದಲಿತರ ಮೇಲೆ ಹಲ್ಲೆಗಳು ನಡೆದಲ್ಲಿ ಜಿಲ್ಲಾ ವರಿಷ್ಠಾಧಿಕಾರಿಗಳನ್ನು ಹೊಣೆ ಮಾಡಬೇಕು. ಈ ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮದ ಯಶಸ್ವಿ ಯೋಜನೆಗಾಗಿ ಸರ್ಕಾರ ವಿಶೇಷವಾದ ಒಂದು ಯೋಜನೆಯನ್ನೆ ಹಾಕಿಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟಂತೆ ಆ ಸರ್ಕಾರದ ಆಯವ್ಯಯದಲ್ಲಿ ವಿಶೇಷ ಅನುದಾನವನ್ನೇ ಸೃಷ್ಟಿಸಿಕೊಳ್ಳಬೇಕು. ಈ ಬಗೆಯ ಅಸ್ಪೃಶ್ಯತಾ ನಿವಾರಣೆ ಕೆಲಸವನ್ನು ವರ್ಷಕ್ಕೆ ಇಂತಿಷ್ಟು ಹಳ್ಳಿಗಳು ಎಂದು ಯೋಜನೆ ಹಾಕಿಕೊಂಡು ಕೆಲಸ ಮಾಡಿದಲ್ಲಿ, ನಿರ್ದಿಷ್ಟ ವರ್ಷಗಳಲ್ಲಿ ಈ ಬಗೆಯ ಜಾಗೃತಿಯ ಕೆಲಸವನ್ನು ಮಾಡಿ ಮುಗಿಸಬಹುದು.

ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿರುವ ಜನಾಂಗಗಳಿಗೆ ಶಿಕ್ಷಣದ ಕೊರತೆಯಿಂದ ಮುಗ್ಧವಾಗಿಯೇ ಈ ಕ್ರೂರ ಪದ್ಧತಿಗೆ ಅಂಟಿಕೊಂಡಿರುತ್ತಾರೆ. ಆ ಮುಗ್ಧರಿಗೆ ಈ ಬಗೆಯ ಸರ್ಕಾರದ ಜವಾಬ್ದಾರಿ ಇರುವ ಅಧಿಕಾರಿ ವರ್ಗವು ಆತ್ಮೀಯವಾಗಿಯೆ ಮನದಟ್ಟು ಮಾಡಿಕೊಡುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದಲ್ಲಿ; ಜೊತೆಗೆ ಅಸ್ಪೃಶ್ಯತಾ ಆಚರಣೆ ಮಾಡಿದರೆ, ಜೈಲು-ದಂಡದ ಜೊತೆಗೆ; ಪಹಣಿ, ಆದಾಯ ಪ್ರಮಾಣಪತ್ರಗಳನ್ನು ಕೊಡುವುದಿಲ್ಲ. ಸರ್ಕಾರದ ಯಾವುದೇ ಸೌಲಭ್ಯಗಳನ್ನು ನೀಡಲು ಸಾಧ್ಯವಿಲ್ಲ ಎಂಬ ವಿಚಾರವನ್ನು ತಿಳಿಸಿದ ಮೇಲೂ ಗ್ರಾಮೀಣಭಾಗದ ರೈತ ಸಮುದಾಯದವರು ಮೊಂಡಧೈರ್ಯವನ್ನು ಮಾಡಲಾರರು ಅನ್ನಿಸುತ್ತದೆ.

ಇನ್ನು; ಯಾವ ಕಾಲದಲ್ಲಿಯೂ ಸಮಾಜದಲ್ಲಿ ಕಡಿಮೆ ಪ್ರಮಾಣದಲ್ಲಿಯಾದರೂ ಸಹ ಆರೋಗ್ಯಕರ ಮನಸ್ಸುಗಳು ಇದ್ದೇ ಇರುತ್ತವೆ. ಮುದ್ದುಮುದ್ದಾಗಿದ್ದ, ತನ್ನ ಅಸಾಧಾರಣ ಪ್ರತಿಭೆಯ, ಮುಗ್ಧ ಕಣ್ಣೊಳಗಿನ ಪ್ರಭೆಯಿಂದಲೆ ಗಮನ ಸೆಳೆದ ಬಾಲಕ ಭೀಮ್‌ರಾವ್ ಅವರಿಗೆ, ತುಂಬು ಪ್ರೀತಿ, ಅಭಿಮಾನದಿಂದಲೆ ಅಂಬೇಡ್ಕರ್ ಎಂಬ ಅವರ ಗುರು ಒಬ್ಬರು ತಮ್ಮ ಹೆಸರನ್ನೇ ಇಟ್ಟು ಪ್ರೀತಿ ತೋರಲಿಲ್ಲವೇ? ಆ ಹೆಸರು ಮುಂದೆ ಚರಿತ್ರೆಯನ್ನೆ ಸೃಷ್ಟಿಸಲಿಲ್ಲವೇ? ಮುಂದೆ ಅಂಬೇಡ್ಕರ್ ಅವರ ಅಸಾಧಾರಣ ಪ್ರತಿಭೆ, ಸಮಾಜದಲ್ಲಿ ಮುಂದೆ ಗಹನವಾದ ಕೆಲಸವನ್ನು ಮಾಡುತ್ತದೆ ಎಂಬುದನ್ನು ಅರಿತು, ತುಂಬು ಕಾಳಜಿ ಹಾಗೂ ಅಭಿಮಾನದಿಂದಲೆ ಜ್ಯೋತಿಬಾಫುಲೆ, ಶಾಹುಮಹಾರಾಜರಂಥ ಹೃದಯವಂತರು ಪ್ರೋತ್ಸಾಹಿಸಲಿಲ್ಲವೇ? ಅಂಬೇಡ್ಕರ್ ಅವರು ಅತ್ಯಂತ ಹೃದಯ ವೈಶಾಲ್ಯದಲ್ಲಿ ಮಾನವಪರವಾದ ನಿಲುವಿನಿಂದ ರೂಪಿಸಿದ ಸಾವಿರಾರು ಹೋರಾಟಗಳಲ್ಲಿ; ಅಂಬೇಡ್ಕರ್ ಅವರ ನಿಜವಾದ ಮಾನವೀಯ ಕಾಳಜಿಗೆ ಮಾರುಹೋಗಿ ದಲಿತೇತರು ಪ್ರೋತ್ಸಾಹಿಸಲಿಲ್ಲವೇ? ಚೌಡರಕೆರೆ ನೀರು ಕುಡಿಯುವ ಚಳುವಳಿ, ಕಾಳಾರಾಂ ದೇವಸ್ಥಾನ ಪ್ರವೇಶದಂಥ ಚಾರಿತ್ರಿಕ ಹೋರಾಟ ಚಳುವಳಿಗಳಲ್ಲಿ; ಸಹಸ್ರಬುದ್ಧೆ, ನಾಮಾಸಾಹಿಬ್, ಸುರ್ವಾಟಿಫ್ನಿಸ್, ಬಿ.ಜಿ. ಖೇರ್ ಮುಂತಾದ ದಲಿತೇತರ ಆರೋಗ್ಯಕರ ಮನಸ್ಸುಗಳು ಭಾಗವಹಿಸಿ ಅಂಬೇಡ್ಕರ್ ಅವರ ಬೆಂಬಲಕ್ಕೆ ನಿಂತಿದ್ದು ಮಹತ್ವದ ಸಂಗತಿಗಳಲ್ಲವೇ? ವೈದಿಕ ಹಿನ್ನೆಲೆಯ ಕುದ್ಮುಲ್ ರಂಗರಾಯರು ತಮ್ಮ ಜೀವನವನ್ನೇ ಅಸ್ಪೃಶ್ಯತಾ ನಿವಾರಣೆಗಾಗಿ ಮುಡಿಪಾಗಿಟ್ಟು ದುಡಿದಿದ್ದು ನಮ್ಮ ಕಣ್ಣ ಮುಂದಿಲ್ಲವೇ? ರಾಮಮನೋಹರ ಲೋಹಿಯಾ ಅವರು **ಅಸ್ಪೃಶ್ಯತೆ, ಅಸ್ಪೃಶ್ಯರ ಸಮಸ್ಯೆ ಮಾತ್ರ ಅಲ್ಲ. ಅದು ಈ ಸಮಾಜಕ್ಕೆ ಅಂಟಿರುವ ಜಾಢ್ಯ** ಎಂಬ ಅಭಿಪ್ರಾಯ ತಳೆದು ಅದನ್ನು ತೊಡೆದು ಹಾಕಲು ಶ್ರಮಿಸಿಲ್ಲವೇ? ಗಾಂಧಿ ಅವರು ತಮಗನ್ನಿಸಿದ ರೀತಿಯಲ್ಲಿಯೆ ಸುಧಾರಣೆಯ ರೀತಿಯಲ್ಲಿಯೆ ಅಸ್ಪೃಶ್ಯತಾ ನಿವಾರಣೆಯನ್ನು ಹೋಗಲಾಡಿಸಲು ಪ್ರಯತ್ನಿಸಲಿಲ್ಲವೆ? ಕುವೆಂಪು ಅವರಂಥ ದಾರ್ಶನಿಕ

ಲೇಖಕರು ಅಸ್ಪೃಶ್ಯ ಮಗುವೊಂದು ನೀರಿನಲ್ಲಿ ಮುಳುಗುತ್ತಿದ್ದಾಗ ಅದನ್ನು ರಕ್ಷಿಸದೆ, ಮಡಿವಂತಿಕೆ ತೋರಿದರೆ ನಿಮ್ಮ ಧರ್ಮ, ಸಂಸ್ಕೃತಿಗಳಿಗೆ ಅರ್ಥವೆ ಇಲ್ಲ ಎಂಬುದನ್ನು ತೋರಿಸಿಕೊಡಲಿಲ್ಲವೇ? ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿಯೆ ಕ್ರಾಂತಿಕಾರಕ ಕೆಲಸ ಮಾಡಲಿಲ್ಲವೇ? ಇಪ್ಪತ್ತಾರು ಶತಮಾನಗಳ ಹಿಂದೆಯೆ ಬುದ್ಧಗುರು ಮನುಷ್ಯತ್ವದ ಘನತೆಯನ್ನು ಎತ್ತಿ ಹಿಡಿಯಲಿಲ್ಲವೇ?........... ಹೀಗೆ ಎಲ್ಲ ಕಾಲಕ್ಕೂ ಈ ಬಗೆಯ ಆರೋಗ್ಯಕರ ಮನಸ್ಸಿನ ಧೀಮಂತರು ಎಲ್ಲ ಕಾಲಘಟ್ಟಗಳಲ್ಲಿಯೂ ಇದ್ದೇ ಇರುತ್ತಾರೆ. ಆ ಎಲ್ಲ ನೈತಿಕ ಬಲದಿಂದಲೂ ಅಸ್ಪೃಶ್ಯತೆಯಂಥ ಅನಿಷ್ಟ ಪದ್ಧತಿಯನ್ನು ಬುಡಮಟ್ಟ ಕೀಳಬೇಕು. ಸಮಾಜದಲ್ಲಿರುವ ಎಲ್ಲಾ ಬಗೆಯ ಆರೋಗ್ಯಕರ ಮನಸ್ಸುಗಳನ್ನು ಬಳಸಿಕೊಂಡೆ ಅದನ್ನು ನಿರ್ಮೂಲ ಮಾಡಬೇಕು. ಜವಾಬ್ದಾರಿ ಇರುವ ಸರ್ಕಾರ – ಜನಪ್ರತಿನಿಧಿಗಳು ಪ್ರಗತಿಪರ ಸಂಘಟನೆಗಳು, ಒಟ್ಟಾರೆ ಸಮಾಜದ ಎಲ್ಲ ಮನಸ್ಸುಗಳು ಕೂಡ ಗ್ರಾಮೀಣ ಪ್ರದೇಶದಿಂದಿಡಿದು ನಗರವ್ಯಾಪ್ತಿಯಲ್ಲೂ ಕೂಡ ಈ ಮೇಲಿನ ಎಲ್ಲ ಅರಿವಿನಿಂದ ಜಾಗೃತಿಯನ್ನು ಮೂಡಿಸಿದಲ್ಲಿ ಮನಸ್ಸುಗಳು ಪರಿವರ್ತನೆ ಆಗುತ್ತವೆ. ಈ ಅರಿವನ್ನು, ಜಾಗೃತಿಯನ್ನು ಕೊಡದೆ ಕೇವಲ ಪೊಲೀಸ್ ಇಲಾಖೆಗಳ ಮೂಲಕ ಕೇಸುಗಳನ್ನು ಹಾಕಿ ಕೈತೊಳೆದುಕೊಳ್ಳುವುದರಿಂದಲೆ ಬಗೆಹರಿಯುವಂಥ ಸಮಸ್ಯೆ ಇದಲ್ಲ.

ಇದು ಮೂಲತಃ ಮನುಷ್ಯನ ಮನಸ್ಸಿಗೆ ಸಂಬಂಧಿಸಿದ್ದು. ಹಾಗಾಗಿ ಆ ಮನಸ್ಸುಗಳ ಪ್ರಯತ್ನದಿಂದಲೆ ಈ ಸಮಸ್ಯೆ ಬಗೆ ಹರಿಯಬೇಕಾಗಿದೆ. ಬಗೆಹರಿಯಲು ಸಾಧ್ಯವೆ ಇಲ್ಲ ಅಂತ ಕೈಕಟ್ಟಿ ಕೂರಬೇಕಾಗಿಲ್ಲ. ಏಕೆಂದರೆ ಇದನ್ನು ಅದೃಶ್ಯವಾದ ಯಾವ ಶಕ್ತಿಯೂ ಸೃಷ್ಟಿಸಿಲ್ಲ. ತುಂಬಾ ಕ್ರೂರವಾದ, ಮನೋರೋಗದ ಕೀಳು ಸ್ವಾರ್ಥದವರಿಂದ ಸೃಷ್ಟಿಯಾಗಿರುವ ಅಮಾನವೀಯವಾದ ಸಮಸ್ಯೆ ಇದು. ಇಡಿ ಸಮಾಜ ನೆಮ್ಮದಿಯಿಂದ ಬದುಕಬೇಕೆಂಬ ಆಶಯ ನಮ್ಮದಾಗಬೇಕು. ಆ ಇಚ್ಛಾಶಕ್ತಿಯಿಂದ ತುಂಬಾ ಪ್ರಾಮಾಣಿಕವಾಗಿ, ಇಡೀ ಸಮಾಜ ಹೃದಯವಂತಿಕೆಯಿಂದ ಶ್ರಮಿಸಿದರೆ ಕೀಳು ಸ್ವಾರ್ಥದಿಂದ ಕೃತಕವಾಗಿ ನಿರ್ಮಿಸಿರುವ, ಅಸ್ಪೃಶ್ಯತೆಯಂಥ ಅತಿಹೀನ ಪದ್ಧತಿಯನ್ನು, ಒಳ್ಳೆಯ ಮನಸ್ಸಿನ ಸಾಮೂಹಿಕ ಯತ್ನದಿಂದ ಖಂಡಿತಾ ಹೋಗಲಾಡಿಸಬಹುದು.. ಆದರೆ ಇಡೀ ಸಮಾಜಕ್ಕೆ ತುಂಬ ಪ್ರಾಮಾಣಿಕವಾದ ಪ್ರಬಲವಾದ ಇಚ್ಛಾಶಕ್ತಿ ಬೇಕು ಅಷ್ಟೇ.....!

ಆರ್–7, ರೀಡರ್ಸ್ ಕ್ವಾಟ್ರಸ್
4ನೇ ಕ್ರಾಸ್, ಮಾನಸಗಂಗೋತ್ರಿ,
ಮೈಸೂರು – 570 006



ದಲಿತ ಅಧಿಕಾರ – ಮನುಕುಲ ಸುಧಾರಣೆಯೆಡೆಗೆ

ಡಾ. ಎಸ್. ಚಂದ್ರಕಿರಣ್ ಕುಳವಾಡಿ

ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲ ಆಯಾಮಗಳು ಶಿಥಿಲಗೊಂಡಿವೆ. ಅಧಿಕಾರದ ಅಪಾರ ದಾಹ ಹಾಗೂ ವ್ಯಾಪಕವಾದ ಭ್ರಷ್ಟಾಚಾರದ ಆಚರಣೆಯಲ್ಲಿ ಪ್ರಜಾಪ್ರಭುತ್ವದ ಸಮಾನತೆಯ ಕನಸು ಭಗ್ನಗೊಂಡು; ರಾಜ್ಯಾಂಗದ ಆಶಯ

ಛಿದ್ರಗೊಂಡಿವೆ. ದಲಿತ ಅಧಿಕಾರಶಾಹಿಯು ರಾಜಕಾರಣದ ಆಟದಲ್ಲಿ ದಾಳವಾಗಿದೆ. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಶಕ್ತಿ ಕೇಂದ್ರವಾದ ದಲಿತ ರಾಜಕಾರಣ ಮತ್ತು ದಲಿತ ಅಧಿಕಾರಶಾಹಿ ವಿಘಟನೆಗೊಂಡು ದುರ್ಬಲವಾಗಿವೆ. ಮೇಲ್ವರ್ಗದವರು ಮಾತ್ರವಲ್ಲದೆ ತಳವರ್ಗ ಸಮುದಾಯಗಳು ಕೂಡ ಇನ್ನಿಲ್ಲದ ಜಾತಿಸಂಘಟನೆಯಲ್ಲಿ ನಿರತವಾಗಿದ್ದು ಪ್ರಜಾಪ್ರಭುತ್ವದ ಆದರ್ಶ ಸಾಮಾಜಿಕ ವ್ಯವಸ್ಥೆಯನ್ನೂ ದುರಂತದ ಕಡೆಗೆ ತಳ್ಳುತ್ತಿರುವ ಆತ್ಮಘಾತುಕತನವು ಹೆಚ್ಚಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವಕ್ಕೆ ಅರ್ಧಶತಮಾನ ದಾಟಿದ ವರ್ತಮಾನದಲ್ಲಿ ಜಾತಿಯ ದರ್ಪ ಮತ್ತು ಫ್ಯೂಡಲ್ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಯ ಕ್ರೌರ್ಯಗಳು ಅಧಿಕೃತಗೊಂಡು ಅವೇ ಆಡಳಿತ ವ್ಯವಸ್ಥೆಯಾಗಿರುವಾಗ ದಲಿತ ಅಧಿಕಾರಶಾಹಿಯ ಬಗೆಗೆ ಆಲೋಚಿಸುವುದೆಂದರೆ; ಅದು ಈ ನೆಲದ ವಿವೇಕವಾಗಿರುವ ಸಂವಿಧಾನದ ಬಗೆಗೆ ಆಲೋಚಿಸುವಂಥದ್ದೆ ಆಗಿರುತ್ತದೆ ಎಂಬ ನಿಲುವು ನನ್ನದು.

ಸಂವಿಧಾನದ ಮೂಲಕ ದಲಿತರಿಗೆ ಸಾಮಾಜಿಕ ಸ್ಥಾನಮಾನ ಮತ್ತು ಬದುಕಿನ ಅವಕಾಶಗಳನ್ನು ಕಾನೂನು ಬದ್ಧಗೊಳಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರು ತಮ್ಮ ಬದುಕಿನ ಕೊನೆಕಾಲದಲ್ಲಿ ಕಡು ದುಃಖದಲ್ಲಿ ಬೆಂದು ಬಸವಳಿದಿದ್ದರು. ಅವರು ಮರಣಿಸಿದಾಗ ಅವರ ಶವ ಸಂಸ್ಕಾರಕ್ಕೆ ಬೇಕಾದ ಕನಿಷ್ಠ ಹಣವಿಲ್ಲದ ಸ್ಥಿತಿ ಅವರದ್ದಾಗಿತ್ತು. ಆದರೆ ಅವರ ಹೋರಾಟದ ಫಲವಾಗಿ ಸಾಮಾಜಿಕ ಸ್ಥಾನಮಾನ / ರಾಜಕೀಯ ಅಧಿಕಾರ / ಬದುಕಿನ ಭದ್ರ ಅಸ್ತಿತ್ವವನ್ನೂ ಕಂಡುಕೊಂಡು ನೆಮ್ಮದಿಯಿಂದ ಇದ್ದ ಸ್ವಾತಂತ್ರ್ಯೋತ್ತರ ಅರ್ಧಭಾರತ ತನ್ನ ಪರಮ ಸ್ವಾರ್ಥ ಸುಖದಲ್ಲಿ ಮುಳುಗಿತ್ತು. ತಾವು ಬೆಳೆದು ಬಂದ ದಾರಿಗಳಿಗೆ ಬೆಳಕು ತಂದ ಮಹಾತ್ಮನನ್ನು ಮರೆತು ಸುಖಲೋಲುಪತೆಯಲ್ಲಿ ಕಾಲ ಕಳೆಯುತ್ತಿತ್ತು. ಈ ಹೊತ್ತಿನ ಸಂದರ್ಭದಲ್ಲಿ ಕೇವಲ ದಲಿತರು ಅಷ್ಟೇ ಅಲ್ಲದೆ ಸ್ವಾತಂತ್ರ್ಯೋತ್ತರ ಪೂರ್ಣಭಾರತದ ಜನಸಮುದಾಯ ತನ್ನ ಅಗಾಧ ಹಸಿವು, ಅಪಮಾನ, ಅನಕ್ಷರತೆ, ದಾರಿದ್ರ್ಯ, ಅಜ್ಞಾನಗಳೆಲ್ಲವನ್ನೂ ಸ್ವಲ್ಪ ಮಟ್ಟಿಗಾದರೂ ನಿವಾರಿಸಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆಂದರೆ ಅದು ಬಾಬಾ ಸಾಹೇಬರ ಸಂವಿಧಾನಾತ್ಮಕವಾದ ಕ್ರಿಯಾತ್ಮಕ ರೂಪವೇ ವಿನಃ ಮತ್ತೇನೂ ಕೂಡ ಆಗಿರಲಾರದು. (ಮೀಸಲಾತಿ ಕೇವಲ ದಲಿತರಿಗಷ್ಟೇ ಅಲ್ಲದೆ, ಈ ದೇಶದ ಎಲ್ಲ ಜನಸಮುದಾಯಗಳಿಗೂ ಆಯಾಯ ಜನಸಮುದಾಯದ ಒಟ್ಟು ಬಾಹುಳ್ಯತೆಯ ಸಂಖ್ಯೆಯನ್ನಾಧರಿಸಿ ಹಂಚಿಕೆಯಾಗುತ್ತಿದೆ. ಈ ಸತ್ಯ ಎಷ್ಟೋ ರಾಜಕಾರಣಿಗಳಿಗೆ ಹಾಗೂ ಅಧಿಕಾರಿಗಳಿಗೆ ಇನ್ನೂ ಗೊತ್ತಿಲ್ಲದೆ ಇರುವುದು ಕೂಡ ವ್ಯವಸ್ಥೆಯ ದುರಂತವೇ ಸರಿ) ಆದರೆ ಈ ಸತ್ಯವು ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಇನ್ನೂ

ಮನವರಿಕೆಯಾಗುತ್ತಿಲ್ಲ. ಇಂತಹ ದುರಂತ ವಿಪರ್ಯಾಸದ ಅಧಿಕಾರಶಾಹಿಯ ಪರಿ ಭಾರತದ್ದಾಗಿದೆ. ಹಾಗಾಗಿ ಅಧಿಕಾರದ ಬಗೆಗೆ ಸೂಕ್ಷ್ಮ ಗ್ರಹಿಕೆ ಭಾರತದ ಮನಸ್ಥಿತಿಗೆ ಇನ್ನೂ ಅರ್ಥವಾಗಿಲ್ಲವೆಂಬುದೆ ಸತ್ಯವಾದುದು.

ಪ್ರಜಾಸತ್ತಾತ್ಮಕ ವ್ಯವಸ್ಥೆಯೊಳಗೆ ಕಾರ್ಯಾಂಗದ ಕರ್ತವ್ಯ ಮಹತ್ತರವಾದುದು. ಸಮಾಜದ ಸಾರ್ವಜನಿಕ ಕಾರ್ಯನಿರ್ವಾಹಕ ಅಂಗವಾಗಿರುವ ಈ ಅಧಿಕಾರವರ್ಗವು ಒಟ್ಟು ಸಮಾಜದ ಸೇವಕರಾಗಿರುತ್ತಾರೆ. ಈ ಸೇವಕರು ಸಂವಿಧಾನದ ವಿಧಿನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸಬೇಕಾದ್ದರಿಂದ ಅವರು ಸ್ವಾರ್ಥರಹಿತ ಮನೋಭಾವನೆ, ವಸ್ತುನಿಷ್ಠತೆ, ಮುಕ್ತಮನೋಭಾವ, ಪ್ರಾಮಾಣಿಕತೆ, ಸೇವಾಪರತೆ, ದೂರದರ್ಶಿತ್ವ, ಪಾರದರ್ಶಕತೆ, ದಕ್ಷತೆ, ನಿಯಮಪರಿಪಾಲನೆ, ನೈಪುಣ್ಯತೆ, ಕೌಶಲ್ಯ ಮುಂತಾದ ವೃತ್ತಿಪರತೆಗೆ ಅನುಕೂಲಕರವಾದ ಆಡಳಿತಾತ್ಮಕ ನೆಲೆಗಳಲ್ಲಿ ವ್ಯವಹರಿಸಬೇಕಾಗುತ್ತದೆ. ಸಮುದಾಯದ ಬದುಕಿನ ಸಾಕಾರಗಳಿಗೆ ಯೋಜನೆಗಳನ್ನು ರೂಪಿಸುವ ಮತ್ತು ಆ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಗುರುತರವಾದ ಜವಾಬ್ದಾರಿ ಕಾರ್ಯಾಂಗದ ಅತಿಮುಖ್ಯ ಕರ್ತವ್ಯ. ಈ ಕಾರ್ಯಾಂಗವು ತನ್ನ ದಕ್ಷತೆಯಿಂದ ಅತ್ಯಂತ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದೇ ಆದರೆ ಸಮಾಜದ ಎಲ್ಲ ತರತಮಗಳನ್ನು ಇಲ್ಲವಾಗಿಸಿ ಉತ್ತಮ ಮತ್ತು ಉದಾತ್ತವಾದ ಸಮಾಜವನ್ನು ನಿರ್ಮಿಸುವಲ್ಲಿ ಸಫಲವಾಗುತ್ತದೆ. ಅದರ ಐಕ್ಯೈಕ ಹೊಣೆಗಾರಿಕೆಯೂ ಕೂಡ ಅದೇ ಆಗಿರುತ್ತದೆ. ಸಂವಿಧಾನವನ್ನು ಯೋಜನೆಗಳ ರೂಪದಲ್ಲಿ ಜಾರಿ ಮಾಡುವ ಈ ವರ್ಗಕ್ಕೆ ಯಾವ ತರತಮದ ವರ್ಗೀಕರಣದ ಅವಕಾಶವೂ ಕೂಡ ಇರುವುದಿಲ್ಲ. ಆದರೆ ಭಾರತೀಯ ಅಧಿಕಾರಶಾಹಿ ಭಾರತೀಯ ಜಾತಿ ವ್ಯವಸ್ಥೆಯಿಂದ ಸೃಷ್ಟಿಯಾಗಿದೆ ಹಾಗೂ ಸುತ್ತುವರಿದಿದೆ. ಈ ಕಾರಣದಿಂದಲೇ ಆಡಳಿತವ್ಯವಸ್ಥೆ ಎಂಬುದು ಕೇವಲ ಅಲಂಕಾರಿಕವಾಗಿ ಪ್ರಜಾಪ್ರಭುತ್ವದ ಜಾತ್ರೆಯಲ್ಲಿ ಜಾತಿ ಕೇಂದ್ರಿತ ಅಧಿಕಾರವೇ ಆತ್ಯಂತಿಕವಾಗಿ ಕ್ರಿಯಾಶೀಲವಾಗಿರುತ್ತದೆ. ನೈತಿಕ ವಿವೇಕವಿಲ್ಲದ ಇಂತಹ ಅಧಿಕಾರಶಾಹಿತ್ವಕ್ಕೆ ಭ್ರಷ್ಟಾಚಾರದ ವ್ಯಾಧಿ ಆವರಿಸಿಕೊಂಡು ಸಂವಿಧಾನ, ಪ್ರಜಾಪ್ರಭುತ್ವ, ಸಾಮಾಜಿಕ ಮೌಲ್ಯ ಮುಂತಾದ ಪರಿಕಲ್ಪನೆಗಳು ನೆಲಕಚ್ಚುತ್ತವೆ. ಆಗ ಅವರ ವೈಯುಕ್ತಿಕ ಹಿತಾಸಕ್ತಿಯೇ ಸವಾರಿಗೈದು ಜನಸಾಮಾನ್ಯರ ಬದುಕು ನರಕವಾಗುತ್ತದೆ.

ಜಾತಿಧರ್ಮ ನಿರಪೇಕ್ಷವಾದ ಸೆಕ್ಯುಲರ್ ಆದ ಸಾಮಾಜಿಕ ವ್ಯವಸ್ಥೆಯಲ್ಲಿ ಖಳನಾಯಕನ ಸ್ಥಾನದಲ್ಲಿರುವುದು ಸಂವಿಧಾನದ ಆಶಯಗಳನ್ನು ಧ್ವಂಸಮಾಡುತ್ತಿರುವ ರಾಜಕಾರಣ ಮತ್ತು ಅಧಿಕಾರಶಾಹಿ ವರ್ಗ. ಭಾರತೀಯ ಸಂವಿಧಾನದ ಅಡಿಯಲ್ಲಿ ರಾಜಕಾರಣ ಮತ್ತು ಅಧಿಕಾರಶಾಹಿತ್ತ್ವದ ನೆಲೆಗಳು ಅತ್ಯಂತ ಶಕ್ತಿಶಾಲಿ ಅಂಗಗಳೆಂದು

ಬಾಬಾಸಾಹೇಬರೇ ಒತ್ತಿ ಹೇಳುತ್ತಾರೆ. ತಮ್ಮ ಅಧಿಕಾರದತ್ತ ಬಲವನ್ನೂ ಅಪಮಾರ್ಗಕ್ಕೆ ಬಳಸಿಕೊಳ್ಳುತ್ತಿರುವುದು ಕೂಡ ಪ್ರಜಾಪ್ರಭುತ್ವದ ವಿಕಲಾಂಗ ಸ್ಥಿತಿಯೇ ಆಗಿದೆ. ರಾಜಕಾರಣದ ಆಶ್ರಯದಲ್ಲಿ ಅಧಿಕಾರಶಾಹಿ, ಅಧಿಕಾರಶಾಹಿಯ ಬೆಂಬದಲ್ಲಿ ಭಾರತೀಯ ರಾಜಕಾರಣ ನಡೆಯಬೇಕಾದ ಪರಿಸ್ಥಿತಿ ಏರ್ಪಟ್ಟಿದೆ. ದುರದೃಷ್ಟವೆಂದರೆ ಪ್ರಜಾಪ್ರಭುತ್ವದ ಅರ್ಥವೇ ಕಳೆದು ಹೋಗುವಂತೆ ಭ್ರಷ್ಟಾಚಾರದ ವ್ಯಾಪಕ ಹುನ್ನಾರಗಳಿಗೆ ಇವು ಕಾರಣವಾಗಿವೆ. ಸಮಾಜದ ಎಲ್ಲ ಅಂಗಗಳಿಗೂ (ಸಾಮಾಜಿಕ ಸೇವಾ ಕ್ಷೇತ್ರವಾದ ಆರೋಗ್ಯ ಮತ್ತು ಶಿಕ್ಷಣ) ತೀವ್ರವಾಗಿ ಬಾಧಿಸುತ್ತಿರುವ ಭ್ರಷ್ಟಾಚಾರದ ವಿವಿಧ ರೂಪಾಂತರಗಳಿಗೆ ಅಧಿಕಾರಶಾಹಿ ಮತ್ತು ರಾಜಕಾರಣಿಗಳೇ ಕಾರಣವಾಗಿರುವುದನ್ನು ಭಾರತದ ವರ್ತಮಾನ ಜೀರ್ಣಸಿಕೊಳ್ಳದೆ ನರಳುತ್ತಿದೆ. ಪರಿಣಾಮವಾಗಿ ಪ್ರಜಾಪ್ರಭುತ್ವದ ಎಲ್ಲ ಅಂಗಗಳೂ ಅತ್ಯಂತ ವಿಕಾರಗೊಂಡಿರುವುದರಿಂದ ನೆಲದ ಶಾಂತಿ–ನೆಮ್ಮದಿ ನಾಶವಾಗಿದೆ. ಇಂತಹ ಸಂದರ್ಭದಲ್ಲಿ ಈ ದೇಶಕ್ಕೆ ಪ್ರಜಾಪ್ರಭುತ್ವದ ಅನಿವಾರ್ಯತೆ ಇದೆಯೆ? ಎಂಬುದನ್ನು ಕೇಳಿಕೊಳ್ಳುವಂತದ್ದಾಗಿದೆ. (ಆದರೆ ಪ್ರಜಾಪ್ರಭುತ್ವಕ್ಕೆ ಪರ್ಯಾಯ ಸದ್ಯಕ್ಕೆ ತೋಚುತ್ತಿಲ್ಲ. ಸೇನಾಡಳಿತ, ಸಮಾಜವಾದ ಮುಂತಾದವು ಇದಕ್ಕಿಂತಲೂ ಹೆಚ್ಚು ಅರಾಜಕತೆಯನ್ನೂ ಸೃಷ್ಟಿಸಿರುವುದನ್ನೂ ಜಗತ್ತಿನ ಸಂದರ್ಭದಲ್ಲಿ ನಾವು ನೋಡುತ್ತಲೇ ಇದ್ದೇವೆ). ಜಾತಿ–ಸಮುದಾಯಗಳ ಅಂತರ್‌ಸಂಬಂಧಗಳಲ್ಲಿ ಸಾಮರಸ್ಯದ ಹೊಂದಾಣಿಕೆ ಮತ್ತು ಪರಸ್ಪರ ಆತ್ಮೀಯ ಬಾಂಧವ್ಯಗಳನ್ನು ಸಾಧ್ಯಗೊಳಿಸಬೇಕಿದ್ದ ಅಧಿಕಾರಶಾಹಿಯು ಪರಸ್ಪರ ದ್ವೇಷ ಅಸಹನೆಗಳು ದಟ್ಟವಾಗುವಂತೆ ವರ್ತಿಸುತ್ತಿದೆ. (ಕೆ.ಪಿ.ಎಸ್.ಸಿ. ನೇಮಕಾತಿಯಲ್ಲಿ ನಡೆದ / ನಡೆಯುತ್ತಿರುವ ವಿಧಾನಗಳನ್ನು ಗಮನಿಸಿ) ಈ ನೆಲೆಯಲ್ಲಿ ಪ್ರಬಲಜಾತಿ / ಸಮುದಾಯಗಳು ಮತ್ತಷ್ಟು ಬಲಿಷ್ಟಗೊಳ್ಳುತ್ತಿವೆ. ಇಂತಹ ಪ್ರಬಲ ಜಾತಿಗಳಿಗೆ ಸೇರಿದ ಅಧಿಕಾರಿ ವರ್ಗವು ತನ್ನ ಮೂಲ ಗುಣಗಳಾದ ಪಾಳೇಗಾರಿಕೆ ವ್ಯವಸ್ಥೆಯ ಕ್ರೂರ ನಿಲುವುಗಳನ್ನು ತಮ್ಮ ಕೆಳಗಿನ ಜಾತಿ ಸಮುದಾಯಗಳ ಅಧಿಕಾರಿ ವರ್ಗದ ಮೇಲೆ ಅಡೆತಡೆ ಇಲ್ಲದೆ, ಒಂದಲ್ಲ ಒಂದು ರೂಪದಲ್ಲಿ ಪ್ರಯೋಗ ಮಾಡುತ್ತಿವೆ. ರಾಜಕಾರಣ ಮತ್ತು ಆಡಳಿತಶಾಹಿಯ ನಡುವೆ ನೇರ ಹೊಂದಾಣಿಕೆಯ ಸಂಬಂಧವಿರುವುದರಿಂದ ಜಾತಿಕೇಂದ್ರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಅಧಿಕಾರದ ರಚನೆ ಕೂಡ ಜಾತಿಕೇಂದ್ರಿತವಾಗಿ ಕಾರ್ಯನಿರ್ವಹಿಸುತ್ತದೆ. ಈ ದೇಶದಲ್ಲಿ ಜಾತಿಯನ್ನು ಹೊರತುಪಡಿಸಿ ಆಲೋಚಿಸುವುದಾಗಲಿ, ಇಲ್ಲವೇ ಬದುಕುವುದಾಗಲಿ ಸಾಧ್ಯವಾಗಲಾರದೆಂಬುದು ಕ್ರೂರ ಸತ್ಯವಾದ್ದರಿಂದ ಅಂತಿಮವಾಗಿ ಸಾಮಾಜಿಕ ಸತ್ಯವಾದ ಜಾತಿ ಮಾತ್ರವೇ ಸ್ಥಿರವಾಗಿ ನಿಲ್ಲುತ್ತದೆ. ಆಗ ಸಂವಿಧಾನ

ಬದ್ಧವಾದ ಮತ್ತು ಕಾನೂನು ಕಟ್ಟಳೆಗಳಿಂದ ಆಗಬಹುದಾಗಿದ್ದ ಧನಾತ್ಮಕ ಪರಿಣಾಮಗಳು ಶೂನ್ಯವಾಗುತ್ತವೆ; ಇಲ್ಲವೇ ಅಲ್ಪಪ್ರಮಾಣದಲ್ಲಿರುತ್ತವೆ.

ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ದಲಿತ ಅಧಿಕಾರಶಾಹಿತ್ವಕ್ಕೆ ಗುರುತವಾದ ಹೊಣೆಗಾರಿಕೆ ಇದೆ ಎಂದು ಹೇಳಬಹುದು. ಯೋಜನೆಗಳ ಮೂಲಕ ಕಾರ್ಯಗಳನ್ನು ರೂಪಿಸುವುದು ಅಂದರೆ ಸಂವಿಧಾನವನ್ನು ಕಾಯುವುದು ಎಂದೇ ಅರ್ಥ. ಹಾಗಾಗಿ ಸಂವಿಧಾನವನ್ನು ಕಾಯುವ ಒಂದು ಸೂಕ್ಷ್ಮಜವಾಬ್ದಾರಿ ಈ ವರ್ಗದ ಆಡಳಿತಶಾಹಿಯ ಮೇಲೆ ಇದೆ. ಅಂದರೆ ಯಾಜಮಾನ ನೆಲೆಯ ಕ್ರೌರ್ಯ ಮತ್ತು ಹಿತಾಸಕ್ತಿಗಳನ್ನು ವಿರೋಧಿಸುತ್ತ ಸಂವಿಧಾನ ಬದ್ಧವಾದ ಮತ್ತು ಎಲ್ಲ ಜೀವಪರವಾದ ಯೋಜನೆಗಳನ್ನು ರೂಪಿಸಿ ಸಂಕಲ್ಪ ಬಲದಿಂದ ಅವುಗಳನ್ನು ಅನುಷ್ಠಾನಕ್ಕೆ ತಂದು, ಸಮಸಮಾಜದ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗುವ ಸವಾಲು ಅದು. ಇಂತಹ ಸವಾಲಿಗೆ ಎದೆಯೊಡ್ಡಿನಿಲ್ಲುವ ಎದೆಗಾರಿಕೆ ದಲಿತ ಶಕ್ತಿಗೆ ಮಾತ್ರಸಾಧ್ಯ. ವರ್ತಮಾನ ಸಮಾಜದ ಜೀವನ ಅವಶ್ಯಕತೆಗಳಿಗೆ ಪೂರಕವಾಗಿ ಯೋಜನೆಗಳನ್ನು ರೂಪಿಸಬೇಕು. ಜಗತ್ತಿನ ಸಂದರ್ಭದಲ್ಲಿ ಅವಕಾಶಗಳು ಹಂಚಿಕೆಯಾಗುವಂತೆ ದೂರದೃಷ್ಟಿಯ ಕಾರ್ಯಯೋಜನೆಗಳನ್ನು ಅನುಷ್ಠಾನಕ್ಕೆ ತರಬಹುದು. (ಆಟೋ ಡ್ರೈವಿಂಗ್, ಟೈಲರಿಂಗ್ ಕಲಿಕೆ, ಪೆಟ್ಟಿಗೆ ಅಂಗಡಿ ಸಾಲ, ಕುರಿಕೋಳಿ ಸಾಲಯೋಜನೆ, ಮುಂತಾದ ಓಬೀರಾಯನ ಕಾಲದ ಯೋಜನೆಗಳನ್ನು ಕೈಬಿಟ್ಟು ಬೃಹತ್ ಉದ್ದಿಮೆ ಮತ್ತು ಮುಕ್ತ ಜಾಗತಿಕ ಮಾರುಕಟ್ಟೆಗಳ ಪ್ರವೇಶಗಳ ಬಗೆಗೆ ಕೌಶಲ್ಯಗಳನ್ನು ಮತ್ತು ಅದಕ್ಕೆ ಬೇಕಾದ ಆರ್ಥಿಕ ಬೆಂಬಲವನ್ನು ರೂಪಿಸುವ ಯೋಜನೆಗಳನ್ನು ಜಾರಿಗೊಳಿಸುವುದು).

ಹಾಗೆಯೇ ಸವಾಲಿನ ಜೊತೆಗೆ ಬದಲಾದ ರಾಜಕೀಯ ಸ್ಥಿತ್ಯಂತರದಲ್ಲಿ ಆತಂಕ ಮತ್ತು ಭಯದಿಂದಲೂ ದಲಿತ ಅಧಿಕಾರಿ ವರ್ಗ ತಲ್ಲಣಕ್ಕೊಳಗಾಗಿದೆ. ಕೇಂದ್ರದಲ್ಲಿ ಸಿ.ಬಿ.ಐ., ರಾಜ್ಯಮಟ್ಟದಲ್ಲಿ ಲೋಕಾಯುಕ್ತ ಸ್ವಾಯತ್ತ ಸಂಸ್ಥೆಗಳು ಆಡಳಿತ ರೂಢ ಸರ್ಕಾರಗಳಿಗೆ ಪೂರಕವಾಗಿ ಕೆಲಸ ಮಾಡುವುದು ಕೂಡ ಒಂದು ಕಡೆ ಆತಂಕಕ್ಕೆ ಕಾರಣವಾಗಿದೆ. ಮೇಲ್ವರ್ಗದ ಅಧಿಕಾರಿಗಳಿಗೆ ಅವರದೇ ಆದ ರಾಜಕೀಯ ಆಶ್ರಯತಾಣಗಳಿರುತ್ತವೆ. ಹಾಗೂ ಜಾತಿಯ ಕಾವಲು ಸಮಿತಿಗಳಿರುತ್ತವೆ. ಆಯಾಯ ಜಾತಿಯ ಮಠಮಾನ್ಯಗಳು ಕೂಡ ಸಹಾಯ ಮಾಡುತ್ತವೆ. ಈ ವರ್ಗಗಳು ಸಂವಿಧಾನ ಬಾಹಿರವಾಗಿ ಆಡಳಿತ ನಡೆಸಿದರೂ ಯಾವ ಕಾನೂನು ಕಟ್ಟಳೆಗಳು ಅನ್ವಯವಾಗುವುದಿಲ್ಲ. ಸಮಾಜವೂ ಕೂಡ ಮೌನವಾಗಿರುತ್ತದೆ. ಅದೇ ಒಬ್ಬ ದಲಿತ ಅಧಿಕಾರಿ ಒಂದು ಸಣ್ಣ ತಪ್ಪು ಎಸಗಿದರೂ ಅದು ದೊಡ್ಡ ಪ್ರಮಾದವಾಗಿ ಇಡೀ ವ್ಯವಸ್ಥೆ ಒಟ್ಟಾಗಿ ಆತನ ವಿರುದ್ಧ ಸೆಟೆದು ನಿಲ್ಲುತ್ತದೆ. ಹಾಗಂತ ದಲಿತ

ಅಧಿಕಾರಿವರ್ಗ ಪೂರ್ಣವಾಗಿ ಸತ್ಯಹರಿಶ್ಚಂದ್ರರು ಅಂತ ನಾನು ಹೇಳುತ್ತಿಲ್ಲ. ಎಲ್ಲ ತಲೆಮಾರಿನ ಅಧಿಕಾರಿಗಳಲ್ಲೂ ಅತ್ಯಂತ ಸ್ವಾರ್ಥ ಹಾಗೂ ಭ್ರಷ್ಟತೆ ಇದ್ದೆ ಇರುತ್ತೆ. ಹಾಗೆಯೇ ಮೇಲ್ವರ್ಗದ ಅಧಿಕಾರಿಗಳೆಲ್ಲರೂ ಭ್ರಷ್ಟರು ಎಂಬ ಸರಳ ತೀರ್ಮಾನವೂ ಸರಿಯಾದುದಲ್ಲ ಎಂಬ ಗ್ರಹಿಕೆ ನನಗಿದೆ. ಹಾಗಾಗಿ ಭ್ರಷ್ಟಾಚಾರಕ್ಕೆ, ಸ್ವಜನಪಕ್ಷಪಾತಕ್ಕೆ, ಸ್ವಾರ್ಥಕ್ಕೆ ಜಾತಿ ಇಲ್ಲ. ಆದರೆ ಅಧಿಕಾರಶಾಹಿಯ ಒಟ್ಟು ಪ್ರಮಾಣದಲ್ಲಿ ಅಪ್ರಾಮಾಣಿಕ ದಲಿತ ಅಧಿಕಾರಿಗಳ ಸಂಖ್ಯೆ ತೀರ ಕಡಿಮೆ ಎಂಬುದು ಸತ್ಯವಾದುದು. ದಲಿತೇತರ ಅಧಿಕಾರಿಗಳಲ್ಲಿ ಕಾಣಿಸಿಕೊಳ್ಳುವ (ಜಾತಿ ಕಾರಣದಿಂದ) ಉಡಾಫೆ, ದರ್ಪ, ಅಹಂಕಾರ ದಲಿತ ಅಧಿಕಾರಿ ವರ್ಗಗಳಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಅಧಿಕಾರ ದೊರಕಿದ ತಕ್ಷಣವೇ ಅವರ ಹಾಗೆ ದಾಂಧಲೆ / ದುರುಪಯೋಗ ಮಾಡುವುದಕ್ಕೆ ದಲಿತ ಅಧಿಕಾರಿವರ್ಗ ಮುಂದಾಗುವುದಿಲ್ಲ. ಇದಕ್ಕೆ ಕಾರಣಗಳು ಬೇರೆ ಇರಬಹುದು. ಬೆಳೆದು ಬಂದ ದಾರಿಯ ಬಡತನದ ಕಹಿ ನೆನಪುಗಳಿರಬಹುದು, ಬುದ್ಧ ಮತ್ತು ಅಂಬೇಡ್ಕರ್ ಅವರ ಮಾನವೀಯ ತತ್ತ್ವದ ಪ್ರಭಾವವಿರಬಹುದು, ಜಾತಿಯ ಒಗ್ಗಟ್ಟು ಇಲ್ಲದೆ ಇರುವುದು, ಇಲ್ಲವೆ ಸ್ವಭಾವತಃ ಸ್ವಾಭಿಮಾನಿಯಾಗಿರಬಹುದು – ಹೀಗೆ ಅನೇಕ ಕಾರಣಗಳನ್ನು ನೀಡಬಹುದು. ಏನೇ ಆದರೂ ಸಂವಿಧಾನ ಬದ್ಧವಾಗಿ ಕರ್ತವ್ಯ ನಿರ್ವಹಿಸುವ ನಿಯತ್ತು ದಲಿತ ಅಧಿಕಾರಿ ವರ್ಗಕ್ಕೆ ಸಾಮಾನ್ಯವಾಗಿರುತ್ತದೆ. ಇನ್ನೂ ಚಳುವಳಿಗಳ ಹಿನ್ನೆಲೆಯಿಂದ ಬಂದವರಂತೂ ಒಂದು ಹೆಜ್ಜೆ ಮುಂದೆಯೇ ಇಟ್ಟು ಮಾನವತೆಯ ವಿವೇಕದಿಂದ ವರ್ತಿಸುತ್ತಾರೆ.

ದಲಿತ ಅಧಿಕಾರಶಾಹಿಯ ಮೇಲೆ ಅದಕ್ಷತೆಯ ಆಪಾದನೆಗಳು ಸಾಮಾಜಿಕ ನಿಲುವುಗಳಲ್ಲಿ ಸಾಮಾನ್ಯವಾಗಿರುತ್ತವೆ. ಇದೊಂದು ಕಾಣದ ಕೈಯ ಸಾಮಾಜಿಕ ಶಾಪ. ಮೀಸಲಾತಿಯಿಂದ ಬಂದವರು ಎಂಬ ಒಂದೇ ಒಂದು ಕಾರಣಕ್ಕೆ ದಲಿತರ ಪ್ರಮಾಣಿಕತೆ ಮತ್ತು ಪ್ರತಿಭೆಗಳು ನಗಣ್ಯವೆನಿಸಿ ನೇಪಥ್ಯಕ್ಕೆ ಸರಿಯುತ್ತವೆ. ಜಾತಿಯ ಮೂಲಕವೇ ಸ್ಥಾನಮಾನವನ್ನು ಅಳೆಯುವ ಭಾರತೀಯ ಜಾತಿಸೂತಕ ಮನೋಧರ್ಮವಿದು. ಇತರರಿಗಿಂತಲೂ ಉನ್ನತ ಸಾಮರ್ಥ್ಯ ಮತ್ತು ದಕ್ಷತೆಯ ನಡವಳಿಕೆ ಇದ್ದರೂ; ಸಮಾಜ ಅವರನ್ನು ನೋಡುವುದು ಜಾತಿಯ ನಿಲುವಂಗಿಯಲ್ಲೇ ಎಂಬುದು ಸತ್ಯವಾದುದು. ಇಂತಹ ಸ್ಥಿತಿಯಲ್ಲಿ ಅಧಿಕಾರಿಯಾಗಿ ಬರುವ ಪೂರ್ವದಲ್ಲಿ ಸಮಾಜದ ಅಭಿವೃದ್ಧಿಯ ಕನಸು ಹೊತ್ತು ಬರುವವರು ನಂತರದಲ್ಲಿ ಏನನ್ನೂ ಮಾಡಲಾಗದೆ ಒದ್ದಾಡುವ ಸ್ಥಿತಿಯಲ್ಲಿದ್ದಾರೆ. ಇಂತಹ ಅಸಹಾಯಕ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಇಡೀ ವ್ಯವಸ್ಥೆ ಸೃಷ್ಟಿಸುತ್ತದೆ. ಪರಿಣಾಮವಾಗಿ ಎಷ್ಟೋ ಜನ ಉನ್ನತ ಅಧಿಕಾರಿಗಳು ಸೇವೆಯ ಅರ್ಧಕ್ಕೆ ರಾಜೀನಾಮೆ ನೀಡಿ ಕೈತೊಳೆದುಕೊಂಡವರಿದ್ದಾರೆ.

ಅನ್ಯರಿಗೆ ಹೇಳಿಕೊಳ್ಳಲಾಗದ ಹಾಗೂ ಯಾರೂ ಸ್ಪಂದಿಸದ ನೋವು ಇದು. ದಲಿತ ಅಧಿಕಾರಶಾಹಿಯು ಅನೇಕ ಒತ್ತಡಗಳ ನಡುವೆ ಕೆಲಸಮಾಡಬೇಕಾದಂತಹ ಪರಿಸ್ಥಿತಿಯನ್ನು ಸದ್ಯದ ಸರ್ಕಾರಗಳು ನಿರ್ಮಿಸುತ್ತಲೇ ಇರುತ್ತವೆ. (ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ದಲಿತ ಅಧಿಕಾರಿಗಳಿಗೆ ಕಡೇ ಪಕ್ಷ ಮಾತನಾಡುವುದಕ್ಕೆ ಅವಕಾಶವಿತ್ತು. ಕಾಂಗ್ರೆಸೇತರ ಸರ್ಕಾರಗಳಲ್ಲಿ ಆ ಸ್ವಾತಂತ್ರ್ಯ ಸಾಧ್ಯವಾಗುತ್ತಿಲ್ಲವೆಂಬುದನ್ನು ಗಮನಿಸಬೇಕು) ಎಡ-ಬಲಗಳ ಸಾಂಸ್ಕೃತಿಕ ಆಯಾಮವನ್ನು ರಾಜಕೀಯಗೊಳೀಸಿ ಅಸಮಧಾನದ ಹೊಗೆಯನ್ನು ಸೃಷ್ಟಿಸಿ ಮರೆಯಲ್ಲಿ ನಿಂತು ಮುಸಿ ಮುಸಿ ನಗುವ ರಾಜಕಾರಣದ ಹೀನಕೃತ್ಯವನ್ನು ಈ ಸಮುದಾಯ ಮಾನವ ಅಂತಃಕರಣದ ಮೂಲಕ ಅರ್ಥ ಮಾಡಿಕೊಂಡು ನಿವಾರಿಸಿಕೊಳ್ಳಬೇಕಿದೆ.

ಆಂತರಿಕ ರಾಜಕೀಯ ಪಲ್ಲಟಗಳಿಂದ ಮತ್ತು ಬಲಿಷ್ಠಕೋಮು ಅಧಿಕಾರಕ್ಕೆ ಬಂದಾಗ ದಲಿತ ಅಧಕಾರಶಾಹಿ ಜೋಬದ್ರರಂತೆ ವರ್ತಿಸುವುದು ಕೂಡ ಇದೆ. ಗುಲಾಮಗಿರಿಗೆ ಒಳಗಾಗುವ ಈ ಪರಿ ಒಂದರ್ಥದಲ್ಲಿ ಓಲೈಕೆ ರಾಜಕಾರಣ ಇದ್ದ ಹಾಗೆ. ಓಲೈಕೆ ಅಧಿಕಾರಶಾಹಿಯ ವರ್ಗವೂ ಎಲ್ಲ ಕಾಲಕ್ಕೂ ಇರುತ್ತದೆ. ಪ್ರಭಾವಿ ಮಂತ್ರಿಗಳನ್ನೂ ಹೊಗಳಿ ಇಅವರು ಬಾಬಾಸಾಹೇಬರಿಗೆ ಸಮಾನರು ಎಂದು ಹೇಳಿ ಹೆಚ್ಚಿನ ಅವಕಾಶ ಗಿಟ್ಟಿಸಿಕೊಂಡವರೂ ಇದ್ದಾರೆ. ಅದೇ ತರಹ ರಾಜಕಾರಣದ ಶಕ್ತಿಯನ್ನು ತಾತ್ವಿಕವಾಗಿ ವಿರೋಧಿಸಿ ದಕ್ಷತೆಯಿಂದ ಕರ್ತವ್ಯ ಪಾಲಿಸಿದ ಸ್ವಾಭಿಮಾನಿಗಳೂ ಇದ್ದಾರೆ. ಆ ಮೂಲಕ ಅಧಿಕಾರದ ಸಜೀವತೆ ಮತ್ತು ಮಾನವೀಯತೆಯನ್ನು ಲೋಕಕ್ಕೆ ತೋರಿಸಿಕೊಟ್ಟಿದ್ದಾರೆ. ಆ ಮೂಲಕ ಹೊಸ ತಲೆಮಾರಿನ ಅಧಿಕಾರಿಗಳಿಗೆ ಆದರ್ಶಪ್ರಾಯವಾದ ಅನೇಕರು ಸ್ವಾರ್ಥರಹಿತ ಜೀವನವನ್ನೂ ಸರಳವಾಗಿ ಬದುಕಿ ತೋರಿಸಿದ್ದಾರೆ. ಹಾಗಾಗಿ ದಲಿತ ಅಧಿಕಾರಶಾಹಿ ಎನ್ನುವುದು ತನ್ನ ಎಲ್ಲ ಲೌಕಿಕ ಆಶೋತ್ತರಗಳಾಚೆ ನಿಂತು ಈ ನೆಲದ ನೆಮ್ಮದಿಯನ್ನು ಕಾಪಾಡುವ ಕಾರಣೀಕರಾಗಬೇಕಿದೆ.

ನಮ್ಮ ಚರಿತ್ರೆ ನಮ್ಮ ಆಲೋಚನೆಯಿಂದ ಶುರುವಾಗುತ್ತದೆ ಅನ್ನುವುದಾದರೆ ಮೂಲತಃ ದಲಿತರು ಜೀತಗಾರರು. ಯಾರು ಏನೇ ಹೇಳಿದರೂ ಕೂಡ ಭಾರತದ ಸಂದರ್ಭದಲ್ಲಿ ದೇಶದ ಎಲ್ಲ ದಲಿತರ ಬದುಕು ಸದೃಶವಾದ ನರಕವಾಗಿತ್ತು. ಸಂವಿಧಾನೋತ್ತರ ಭಾರತದಲ್ಲಿ ಮಾತ್ರವೇ ದಲಿತರಿಗೆ ಸ್ಥಾನಮಾನ ದೊರಕಿದ್ದು. ಸಂವಿಧಾನ ಪೂರ್ವಭಾರತದಲ್ಲಿ ದಲಿತರಿಗೆ ಜೀತಗಾರಿಕೆಯೇ ವೃತ್ತಿ. ನಾವು ಹಿಂದೆ ರಾಜರಾಗಿದ್ದವರು, ಅರಸರಾಗಿದ್ದವರು ಶ್ರೀಮಂತರಾಗಿದ್ದವರು ಮುಂತಾದ ಹೇಳಿಕೆಗಳಿಲ್ಲ ನಮ್ಮ ಭೂತವನ್ನು ವರ್ತಮಾನಕ್ಕೆ ಹೊಸದಾಗಿ ನಿರ್ವಚನೆ ಮಾಡಿಕೊಳ್ಳುವ ಬೇರೆ ಬೇರೆ ರೂಪಾಂತರಗಳು ಮಾತ್ರವೇ ಎಂಬುದು ನನ್ನ

ತಿಳುವಳಿಕೆ. ಹಾಗಾಗಿ ಸಂವಿಧಾನದ ಮಡಿಲು ಮಾತ್ರವೆ ನಮ್ಮೆಲ್ಲರನ್ನೂ ಸಂತೈಸಿದೆ. ಆಧುನಿಕತೆಯ ಬೀಸಿನಲ್ಲಿ ನಮಗೆ ಒಂದು ಅಸ್ತಿತ್ವ ಮತ್ತು ಚಹರೆಯನ್ನು ದಯಪಾಲಿಸಿದೆ. ಚೋಮನ ಮಕ್ಕಳು ಸಣ್ಣಸಣ್ಣ ಹಿಡುವಳಿದಾರರಾಗಿದ್ದಾರೆ. ಸಾಕವ್ವನ ಮಕ್ಕಳು ಸರ್ಕಾರಿ ಸೇವೆಯಲ್ಲಿದ್ದಾರೆ. ತಳವಾರಿಕೆ ಕುಳುವಾಡಿಕೆಗಳೆಂಬ ಜೀತಗಾರಿಕೆಯ ಗುಲಾಮಗಿರಿ ವಿಧಾನಗಳು ಮುರಿದು ಬಿದ್ದಿವೆ. ಸಮಗ್ರವಾದ ಮತ್ತು ಸಮೃದ್ಧವಾದ ಬದುಕಿನ ವಾತವರಣವನ್ನು ನಿರ್ಮಿಸಿಕೊಳ್ಳುವ ಶಕ್ತಿಯನ್ನು ಸಂವಿಧಾನ ನೀಡಿದೆ. ಅದನ್ನು ಬಳಸಿಕೊಂಡು ನಮ್ಮ ಅಧಿಕಾರಶಾಹಿಯು ವರ್ತಮಾನವನ್ನು ಹೆಚ್ಚು ಹೆಚ್ಚು ಮಾನವೀಕರಣಗೊಳಿಸಬೇಕಾದ ಅನಿವಾರ್ಯತೆ ಇದೆ.


ಒಬ್ಬ ದಕ್ಷ ಅಧಿಕಾರಿ ಒಬ್ಬ ಪ್ರಭಾವಿ ದಲಿತನಿಗೆ ಮಾತ್ರವೇ ಸಹಾಯ ಮಾಡಬಹುದೇ ಹೊರತು ಸೋತು ದಿಕ್ಕೆಟ್ಟ ದಲಿತನಿಗಲ್ಲ; ರಾಜಕಾರಣ ಮತ್ತು ಅಧಿಕಾರ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಸ್ಪಂದನೆ ನೀಡುತ್ತದೆ ಎಂಬ ಭಾವನೆಯೇ ಮೂಲತಃ ಭ್ರಮಾತ್ಮಕವಾದುದು. ಹಾಗಾಗಿ ಅವರಿಂದ ಯಾವ ನಿರೀಕ್ಷೆ ಮತ್ತು ಭರವಸೆಯನ್ನು ಎದಿರು ನೋಡಲು ಸಾಧ್ಯ? ಪ್ರಜಾಪ್ರಭುತ್ವದಲ್ಲಿ ರಾಜ್ಯಾಂಗ ಸೋತು ಸ್ವಾರ್ಥ ಸದಾ ಗೆಲ್ಲುತ್ತದೆ. ಜನ ಸಾಮಾನ್ಯರಿಗೆ ಈ ಸತ್ಯ ಅರಿವಾಗದೆ ಅಧಿಕಾರಿಗಳನ್ನು ದೇವರು ಕಂಡ ಹಾಗೆ ಕಾಣುತ್ತಾರೆ. ರಾಜಕಾರಣಿಗಳನ್ನು ದೊರೆಗಳಿಗೆ ಸಮಾನಾಗಿ ಆರಾಧಿಸುತ್ತಾರೆ... ಮುಂತಾದ ಸಂವಿಧಾನವಿರೋಧಿ ಭಾವನೆಗಳನ್ನು ದಲಿತ ಅಧಿಕಾರವರ್ಗ ನಿವಾರಿಸುವ ತುರ್ತು ಇದೆ. ಮೂಲಭೂತವಾದ ಪ್ರಬಲವಾಗುತ್ತಿರುವ ಈ ಸಂದರ್ಭದಲ್ಲಿ ಎಲ್ಲ ಒತ್ತಡಗಳನ್ನೂ ಮೆಟ್ಟಿನಿಂತು ಕರ್ತವ್ಯಪರತೆಯೊಂದನ್ನೇ ಧ್ಯಾನಿಸುವ ಮೂಲಕ ಬುದ್ಧ ಬೆಳಗಿಸಿದ ಸಮಾನತೆಯ ಹಣತೆಯನ್ನು ಒಟ್ಟು ಸಮಾಜದಲ್ಲಿ ಬೆಳಗಿಸುವ ಹೊಣೆಗಾರಿಕೆ ದಲಿತ ಅಧಿಕಾರಿಶಾಹಿತ್ವದ ದಿಟ್ಟ ನಿಲುವಾಗಬೇಕಿದೆ. ಆ ಮೂಲಕ ಮನುಕುಲ ಉದ್ಧಾರದ ಪಥ ನಿರ್ಮಾಪಕರು ಮತ್ತು ಆ ಪಥಕ್ಕೆ ದೀವಟಿಕೆದಾರರೂ ಅವರೇ ಯಾಕಾಗಬಾರದು? ಹಾಗಾಗಿ ಸಾಮಾಜಿಕವಾಗಿ ನಮಗೆ ಏನೆಲ್ಲ ಅಡೆ–ತಡೆಗಳಿದ್ದರೂ ವಿಶಾಲ ಅರಿವಿನಲ್ಲಿ ಮತ್ತು ಕಾರ್ಯೋನ್ಮುಖತೆಯಲ್ಲಿ ಸರಳವಾದ ವಿವೇಕವೆನ್ನುವುದಾದರೆ; ನಮ್ಮೆಲ್ಲರಿಗೂ ಸಾಮಾಜಿಕ ಹೊಣೆಗಾರಿಕೆಯ ಜೈವಿಕ ಸಂಬಂಧವಿದೆ. ಹಾಗಾಗಿ ಅದರೊಟ್ಟಿಗೆ ಒಬ್ಬ ಸರ್ಕಾರಿ ನೌಕರ / ಅಧಿಕಾರಿಯು ಸಂವಿಧಾನ ಬದ್ಧವಾಗಿ ನಡೆದುಕೊಳ್ಳುವುದೇ ಆತನ ಘನತೆ ಮತ್ತು ಗೌರವವೆಂದು ತಿಳಿಯಬಹುದು.

ಶಕ್ತಿರಾಜಕಾರಣ ವ್ಯವಸ್ಥೆಇರುವ ಹಾಗೆ ಶಕ್ತಿಅಧಿಕಾರ ಶಾಹಿಯ ಪರಿಕಲ್ಪನೆ ಮತ್ತು ಅದರ ರಚನಾತ್ಮಕವಾದ ಪ್ರಯೋಗ ಸಾಮಾಜಿಕವಾಗಿ ಮೇಲ್ವರ್ಗದ ಅಧಿಕಾರಿಗಳಿಗೆ ಮಾತ್ರವೇ ಸಾಧ್ಯವಾಗದೆ. ಅಂದರೆ ಬ್ರಾಹ್ಮಣ ಅಧಿಕಾರಶಾಹಿ, ಲಿಂಗಾಯಿತ

ಅಧಿಕಾರಶಾಹಿ ಮತ್ತು ಒಕ್ಕಲಿಗ ಅಧಿಕಾರಶಾಹಿ.. ಮುಂತಾದ ಜಾತಿಕೇಂದ್ರಿತ ಶಕ್ತಿಗಳು ತಮ್ಮ ಅಧಿಕಾರದ ನೆಲೆಗಳನ್ನು ವಿಸ್ತರಿಸಿಕೊಳ್ಳುವ (ಸಂವಿಧಾನದ ನೆಲೆಯನ್ನು ನೇರವಾಗಿ ಉಲ್ಲಂಘನೆ ಮಾಡುವ) ಹಾಗೆ ದಲಿತ ಅಧಿಕಾರಶಾಹಿಯು ತನ್ನ ಸೀಮಿತ ಸಾಮುದಾಯಿಕ ನೆಲೆಯ ಅವಕಾಶಗಳನ್ನು ಬಳಸಿಕೊಳ್ಳಲು ಖಂಡಿತವಾಗಿಯೂ ಪ್ರಯತ್ನಿಸಬಾರದು. ಅದರ ಪ್ರಾಬಲ್ಯವಿರುವುದು ಪ್ರಜಾಪ್ರಭುತ್ವದ ಸಮರ್ಥ ಆಚರಣೆಯ ಕೌಶಲ್ಯದಲ್ಲಿ ಮಾತ್ರವೆಂದೇ ನನ್ನ ತಿಳುವಳಿಕೆ. ಆ ಮೂಲಕ ಸಮಾಜದ ಅಸಮಾನತೆಯ ನಿರ್ಮೂಲನೆಗಾಗಿ ಸಂವಿಧಾನವನ್ನು ತಮ್ಮ ಅಧಿಕಾರದ ಮಿತಿ–ಮತ್ತು ಸಾಧ್ಯತೆಯಲ್ಲಿ ಜಾರಿಗೊಳಿಸುವುದು ಒಬ್ಬ ದಕ್ಷ ಅಧಿಕಾರಿಯ ಆದ್ಯ ಕರ್ತವ್ಯವಾಗಬೇಕು. ಆಗ ಮಾತ್ರ ದಲಿತ ಅಧಿಕಾರಶಾಹಿತ್ವಕ್ಕೆ ಒಂದು ವಿಶಾಲವಾದ ತಳಹದಿಯ ಮೇಲೆ ನಿಲ್ಲಲು ಸಾಧ್ಯವಾಗುತ್ತದೆ. ಅಲ್ಲದೆ ದಲಿತ ಅಧಿಕಾರಿ ದಕ್ಷ ಅಧಿಕಾರಿಯಾಗಲು ಅವಕಾಶವಾಗುತ್ತದೆ. ಸ್ವತಂತ್ರತೆ, ಸಮಾನತೆ ಹಾಗೂ ಸೋದರತೆಯ ಸಾರ್ಥಕತೆಯ ಜವಾಬ್ದಾರಿ ಅವರದ್ದಾಗಿರುತ್ತದೆ. ಆ ಮೂಲಕ ಈಗಾಗಲೇ Emerge ಆಗಿರುವ ಜಾತಿಕೇಂದ್ರಿತ ಅಧಿಕಾರದ ತೆವಲುಗಳನ್ನು ದುರ್ಬಲಗೊಳಿಸಿದಂತೆಯೂ ಆಗುತ್ತದೆ.

ಒಟ್ಟಾರೆ ದಲಿತ ಅಧಿಕಾರಶಾಹಿ ಅನ್ನುವುದು ಸಂವಿಧಾನ ಬದ್ಧ ನಿಲುವಿಗೆ ಒಪ್ಪಿತವಾದುದಲ್ಲ. ಯಾವುದೇ ಅಧಿಕಾರಿಗೆ ಅವನ ಜಾತಿರಾಜಕಾರಣದ ಶಕ್ತಿಗಿಂತಲೂ ಸಂವಿಧಾನವೇ ಪರಮ ರಕ್ಷಕವಚವಾಗಬೇಕು. ಇದು ಆದರ್ಶ ಮತ್ತು ವಿವೇಕ. ಸಂವಿಧಾನದ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಬೇಕಾದ ಕಾರ್ಯಾಂಗವು ತನ್ನ ನೈತಿಕ ನೈರ್ಮಲ್ಯವನ್ನು ಜತನವಹಿಸಿ ಕಾಪಾಡಿಕೊಳ್ಳಬೇಕಾಗುತ್ತದೆ. ಅಧಿಕಾರಿವರ್ಗವು ಯಾವಾಗ ತಮ್ಮ ದೌರ್ಬಲ್ಯಗಳಿಂದ ಕರ್ತವ್ಯ ಭ್ರಷ್ಟತೆಗೆ ಒಳಗಾಗುತ್ತಾರೋ ಆಗ ಕಾರ್ಯಾಂಗ ಅಧಿಕಾರಶಾಹಿಯಾಗಿ ಪರಿವರ್ತನೆ ಪಡೆದು ಸಾರ್ವಜನಿಕ ಹಿತಾಸಕ್ತಿಯ ಉಲ್ಲಂಘನೆಗೆ ಕಾರಣವಾಗುತ್ತದೆ. ದಲಿತ ಅಧಿಕಾರಿಗಳು ಇಂತಹ ದೌರ್ಬಲ್ಯ ಮತ್ತು ಕರ್ತವ್ಯ ಭ್ರಷ್ಟತೆಯಿಂದ ವಿಮುಕ್ತರಾಗಿ ಸಮಷ್ಟಿ ಜೀವಪ್ರೀತಿಯ ವಿಕಸನಕ್ಕೆ ಮಾನವೀಯ ವಿವೇಕ ಪ್ರಜ್ಞೆಯಿಂದ ದುಡಿಯುವ ಹಾಗೂ ನಿರ್ಗತಿಕರ ಬದುಕಿಗೆ ಪ್ರೀತಿ ಮತ್ತು ಭರವಸೆಯ ಒರತೆಯಾಗಿರಲಿ ಎಂಬುದೇ ದೊಡ್ಡ ಕನಸು ಮತ್ತು ಉರಿಯುತ್ತಿರುವ ವರ್ತಮಾನದಲ್ಲಿ ಒಬ್ಬ ದಕ್ಷ ಅಧಿಕಾರಿ ಸ್ವೀಕರಿಸಬಹುದಾದ ಸವಾಲು ಕೂಡ.

ಪ್ರವಾಚಕರು
ಮೈಸೂರು ವಿಶ್ವವಿದ್ಯಾನಿಲಯದ
ಸರ್. ಎಂ. ವಿ. ಸ್ನಾತಕೋತ್ತರ ಕೇಂದ್ರ
ತೂಬಿನಕೆರೆ, ಮಂಡ್ಯ



ರಥದ ಗಾಲಿಗೆ ಎಣ್ಣೆ ಎರೆದವರು

ಮಹಾದೇವ ಶಂಕನಪುರ

ಪೂರ್ವಿಕನ ಸ್ತುತಿಸುತ್ತ

ನಾವಾಗ ಇನ್ನೂ ಚಿಕ್ಕವರು. ಎರಡು ಮೂರನೆ ತರಗತೀಲಿ ಓದುತಿದ್ದೆವು. ಶಾಲೆಗೆ ರಜೆ ಇರಲಿ ಇಲ್ಲದಿರಲಿ ಓದಬೇಕು ಬರಿಬೇಕು ಅಂತ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅಪ್ಪ ಅವ್ವ ಮಾತ್ರ ಕೂತಗಂಡು ಓದದು ಬರಿಯದ ಮಾಡಕಾಗಲ್ವ ಅಂತ ಕೈಗೆ ಸಿಕ್ಕಿದ್ದರಲ್ಲಿ ತಿಕದ ಮೇಲೆ ಒಡೆಯದೆ ಬಿಡುತ್ತಿರಲಿಲ್ಲ. ಆದರೂ ನಾವು ನಮ್ಮೂರ ದೇವಸ್ಥಾನವಾದ

ಸಿದ್ಧಪ್ಪಾಜಿ ಗುಡಿಯ ಮುಂದಲ ಅಂಗಳದಲ್ಲಿ ಉಫೇ ಎಂದು ಯಾರಿಗೂ ಕೇರುಮಾಡದೆ, ತಿರುಗಾಡುವವರಿಗೂ ದಾರಿ ಬಿಡದೆ ಗೋಲಿ, ಬುಗುರಿ ಆಟ ಹಾಡುತ್ತಿದ್ದೆವು. ಬೆಳಿಗ್ಗೆ ಸಂಜೆ ಅನ್ನದೆ ಬಿಡುವಿನ ಸಮಯವನ್ನೆಲ್ಲಾ ಆ ಅಂಗಳದಲ್ಲೇ ಕಳೆಯುತ್ತಿದ್ದೆವು. ಆ ಅಂಗಳದ ಎದುರಿಗೆ ಹಿಂದಲ ಮುಂದಲ ಆರಿನ ಒಂದು ಹಂಚಿನ ಮನೆ ಇತ್ತು. ಅದರ ನಯವಾದ ಗೋಡೆಯ ಮೇಲೆ ಅಂಟಿಸಿದ್ದ ಚುನಾವಣಾ ಪೋಸ್ಟರ್‌ನಲ್ಲಿದ್ದ ವ್ಯಕ್ತಿಯೊಬ್ಬರ ಚಿತ್ರ ಇಂದಿಗೂ ನನ್ನೊಳಗೆ ಅಚ್ಚಳಿಯದೆ ಉಳಿದಿದೆ. ಅಪ್ಪ ಮತ್ತು ಊರವರೆಲ್ಲಾ ದೇವಸ್ತಾನದ ಮುಂದೆ ಕುಳಿತಾಗ, ಅಲ್ಲಿ ಇಲ್ಲಿ ಆ ವ್ಯಕ್ತಿಯ ಬಗ್ಗೆ ಆಡುತ್ತಿದ್ದ ಮಾತುಗಳನ್ನು ನಾವೆಲ್ಲ ಕೇಳಿಸಿಕೊಳ್ಳುತ್ತಿದ್ದೆವು. "ಅವುರು ಸೋಮನಾಥಪುರದವರಂತಕಯ್ಯ. ಮಸ್ತಾಗೋದಿದ್ದರಂತ. ಆ ಅಂಬಾಡಿಕರ ಕಂಡಗ. ಅವರ ಹೆಸರು ಭರಣಯ್ಯ ಅಂತ. ಯಾವುದೊ ದೊಡ್ಡ ಕೆಲಸದಲಿದ್ದರಂತ. ಈಗ ಓಟಗ ನಿಂತರ. ಗೆದ್ದು ನಂ ಜಾತಿಯ ಉದ್ಧಾರ ಮಾಡಬೇಕು ಅಂತಲಂತ" ಹೀಗೆ ಜನ ಮಾತಾಡುತ್ತಿದ್ದರು.

ನಮಗಾಗ ಏನೂ ಗೊತ್ತಾಗದ ವಯಸ್ಸು. ಭರಣಯ್ಯ ಚುನಾವಣೆಗೆ ಸ್ಪರ್ಧಿಸಿದ್ದಾಗ ಅವರ ಚುನಾವಣಾ ಪೋಸ್ಟರ್ ಒಂದನ್ನು ನಮ್ಮೂರ ದೇವಸ್ಥಾನದ ಪಕ್ಕದ ಮನೆಯ ಗೋಡೆಗೆ ಅಂಟಿಸಿದ್ದರು. ಅಲ್ಲಿದ್ದ ಅವರ ಫೋಟೋ ನೋಡಿದಾಗ ಜನ ಹೀಗೆ ಮಾತನಾಡುವುದನ್ನು ಕೇಳಿದ್ದೆವು. ಆಗ ನಮಗೆ 'ಓಹೋ' ಇವರು ನಂ ಜಾತಿಯ ಯಾರೋ ದೊಡ್ಡ ಮನುಷ್ಯರಂತ. ಅವರು ನಮಗೆಲ್ಲಾ ಆದರ್ಶ ಪುರುಷ ಅನ್ನಿಸಿ ಆ ಪೋಸ್ಟರ್ ಮಳೆ, ಬಿಸಿಲಿಗೆ, ಬೇಗ ಹಾಳಾಗದಂತೆ ಎಚ್ಚರ ವಹಿಸಿದ್ದೆವು. ಯಾರೂ ಅದನ್ನು ವಿಕಾರ ಮಡದಂತೆ ತಾಕೀತು ಮಾಡಿದ್ದೆವು. ಹೀಗೆ ಭರಣಯ್ಯರು ನನ್ನೊಳಗೆ ಕಥೆಯಾದರು. (ಕಾಕತಾಳೀಯವೆಂದರೆ ಆಗಸ್ಟ್ 2009ರಲ್ಲಿ ಡಾ. ಸುಭಾಶ್ ಭರಣಿ ಕೊಳ್ಳೇಗಾಲ ಮೀಸಲು ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿ ನಮ್ಮೂರ ಅದೇ ಸಿದ್ದಪ್ಪಾಜಿ ಗುಡಿ ಮುಂದೆ ನಿಂತು ಗ್ರಾಮಸ್ಥರ ಸಭೆ ಸೇರಿಸಿ ಮತಯಾಚಿಸಿದ್ದಾರೆ.)

ನಾವೆಲ್ಲ ದೊಡ್ಡವರಾದೆವು. ನಮ್ಮ ಹಿಂದಿನ ತಲೆಮಾರು ಊರಲ್ಲಿ "ಸಿದ್ಧಪ್ಪಾಜಿ ಯುವಕ ಸಂಘ" ಮಾಡಿದ್ದರು. ಹೈಸ್ಕೂಲು, ಕಾಲೇಜು ಕಲಿಯುತ್ತಿದ್ದ ನಾವು ಮತ್ತು ನಮ್ಮ ಮುಂದಿದ್ದವರು ಶ್ರೀ ಸಿದ್ಧಪ್ಪಾಜಿ ಹೆಸರಿನ ಸಂಘವನ್ನು ಡಾ. ಬಿ. ಆರ್. ಅಂಬೇಡ್ಕರ್ ಯುವಕ ಸಂಘವನ್ನಾಗಿ ಪರಿವರ್ತಿಸಿದೆವು. ಈ ಸಂಘ ಯಾರೊಬ್ಬರಿಗಾಗಿ ಅಲ್ಲ. ಇದು ಊರಿಗಾಗಿ. ನಮ್ಮ ಸಮುದಾಯದ ಹಿತಕ್ಕಾಗಿ ಎಂದಾಯಿತು. ಆಗೆಲ್ಲಾ ಕೊಳ್ಳೇಗಾಲ ಪಟ್ಟಣ ಮತ್ತು ತಾಲ್ಲೂಕಿನಲ್ಲಿ ಒಂದೊಂದು ಸಲ ದಲಿತ ಮುಸ್ಲಿಂ, ದಲಿತ ಲಿಂಗಾಯಿತ,

ದಲಿತ ಗೌಡ ಗಲಭೆಗಳು ನಡೆಯುತ್ತಿದ್ದವು. ಆಗ ಸಂಘಗಳ ಜತೆಗೆ ಗ್ರಾಮಗಳ ಯಜಮಾನರ ನಾಯಕತ್ವದಲ್ಲೇ ಏಕಮತವಾಗಿ ಪ್ರತಿಕ್ರಿಯೆಗಳಿರುತ್ತಿದ್ದು. ಅಂದಿನ ದಲಿತ ಅಧಿಕಾರಿಗಳು ಸಹ ನ್ಯಾಯಭದ್ಧವಾಗಿ ಜಾತಿ ಪರವಾಗಿಯೂ, ದಲಿತೇತರರ ಬಗ್ಗೆ ಮಾನವೀಯವಾಗಿಯೂ ಇರುತ್ತಿದ್ದರು.

ಸ್ನಾತಕೋತ್ತರ ಪದವಿ ಓದಲು (ಎಂ.ಎ) ಮೈಸೂರಿನ ಮಾನಸಗಂಗೋತ್ರಿಗೆ ಹೋದಾಗಲೆ ದಲಿತ ಸಂಘರ್ಷ ಸಮಿತಿ, ದಲಿತ ಚಳವಳಿ, ಡಾ. ಅಂಬೇಡ್ಕರ್ ವಿಚಾರ, ರೈತ, ಮಹಿಳೆ, ಜಾತ್ಯತೀತ ವಿಚಾರಗಳು ಹಾಗೂ ಎಲ್ಲಾ ಶೋಷಿತ ಸಮುದಾಯಗಳ ಬಗ್ಗೆ ಮಾನವೀಯ ಪ್ರೀತಿ ಅಂಕುರವಾದದ್ದು. ಯಾವುದೇ ದಲಿತ ಶೋಷಿತ ವಿದ್ಯಾವಂತ ಅಧಿಕಾರಿಯ ಜವಾಬ್ದಾರಿ ಏನು ಎಂಬುದು ಅರ್ಥವಾಯಿತು. ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಮಾನವತಾವಾದಗಳಿಂದ ಆಕರ್ಷಿತರಾಗಿ ಪ್ರಖರ ವೈಚಾರಿಕತೆಯ ಹಾಗೂ ಬಂಡಾಯದ ಭಾಷಣಗಳನ್ನು, ಉಪನ್ಯಾಸಗಳನ್ನು ಕೊಡಲು ಮತ್ತು ಕೇಳಲು ತವಕಿಸುತ್ತಲೇ ಸಮಾಜಕ್ಕೆ ಮತ್ತು ಶಿಕ್ಷಣ ರಂಗಕ್ಕೆ ಪ್ರವೇಶ ಪಡೆದಾಯಿತು.

ರಥದ ಹಾದಿಯಲಿ

ಒಂದು ಕಾಲ ಇತ್ತು. ವಿದ್ಯಾವಂತ ದಲಿತ ಅಧಿಕಾರಿಗಳು ಸಂಘಟನೆಗಳಿಗೆ, ಚಳುವಳಿಗಳಿಗೆ ಬೆಂಬಲವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಚಳುವಳಿಗಳಲ್ಲಿ, ಸಂಘಟನೆಗಳಲ್ಲಿ ಸಕ್ರಿಯವಾಗಿರುತಿದ್ದ ಕಾರ್ಯಕರ್ತರನ್ನು ಬೆಂಬಲಿಸುವುದು, ಪೋಷಿಸುವುದು ನಮ್ಮ ಕರ್ತವ್ಯವೆಂದು ಅಧಿಕಾರಿಗಳು ಕಳಕಳಿಯನ್ನು ತೋರುತ್ತಿದ್ದರು. ನಮ್ಮೂರ ವಿದ್ಯಾವಂತ ಅಧಿಕಾರಿಯಾದ ಎನ್. ಮಹೇಶ್‌ರವರು ಇಂತಹ ಕಮಿಟ್‌ಮೆಂಟ್ ಇದ್ದು, ಸಂಘಟನೆ ಚಳುವಳಿಯಲ್ಲಿದ್ದ ನಮ್ಮಂತವರನ್ನು ಬೆಂಬಲಿಸಿದರು.

1991 –ಬಾಬಾಸಾಹೇಬರ ಜನ್ಮ ಶತಮಾನೋತ್ಸವ ಸಂದರ್ಭ. ಕರ್ನಾಟಕ ರಾಜ್ಯದಲ್ಲಿ ಹಲವು ದಲಿತ ಸಂಘಟನೆಗಳು ತುಂಬಾ ಭಿನ್ನ ವಿಭಿನ್ನ ಕಾಯಕ್ರಮಗಳನ್ನು ರೂಪಿಸಿದ್ದರು. ಕೊಳ್ಳೇಗಾಲದ ದಲಿತ ನೌಕರರ ಸಂಘ ಕೂಡ ಅದ್ದೂರಿಯಾಗಿ ಬಾಬಾಸಾಹೇಬರ ಶತಮಾನೋತ್ಸವ ಆಚರಿಸಲು ಸಿದ್ಧತೆ ನಡೆಸಿತ್ತು. ಕೊಳ್ಳೇಗಾಲ ಟೌನ್. ದಲಿತ ಮೂಲದ ಕ್ರೈಸ್ತ ಪಾದ್ರಿ, ದಲಿತ ಕ್ರೈಸ್ತರ ಹಿತ ಚಿಂತಕರೂ ಆಗಿದ್ದ ದಿ. ಡಾ. ಬಿ. ಹೆಚ್ ಜಕ್ಕಾಯ ರವರ ನಾಯಕತ್ವದಲ್ಲಿ ಪಿ.ಎಂ.ಎಸ್.ಆರ್. ಸ್ವಯಂ ಸೇವಾ ಸಂಸ್ಥೆ ಸ್ಥಾಪನೆಯಾಗಿ ಮಹತ್ವದ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ಪರ ಜಾಗೃತಿ ಮತ್ತು ಅಭಿವೃದ್ಧಿಕಾರ್ಯದಲ್ಲಿ ತೊಡಗಿತ್ತು, ಈ ಸಂಸ್ಥೆಯನ್ನು ಲೀಡ್ ಮಾಡಿದ ನೀಲಯ್ಯ, ಹೆಚ್. ಮೋಹನ್‌ಕುಮಾರ್ ನಾಯಕತ್ವದ ಕಾರ್ಯಕರ್ತರ ಪಡೆ ಕೊಳ್ಳೇಗಾಲ ತಾಲ್ಲೂಕಿನ

ದಲಿತ ಸಮುದಾಯ ಮತ್ತು ಅಧಿಕಾರಿ ವರ್ಗದ ನಡುವೆ ಆ ವೇಳೆಗೆ ಬಹಳ ದೊಡ್ಡ ಎಚ್ಚರವನ್ನು ಮೂಡಿಸುತ್ತಾ, ಡಾ. ಅಂಬೇಡ್ಕರ್ ಚಿಂತನೆಗಳನ್ನು ಹರಡತೊಡಗಿದ್ದರು. ಬೆಂಗಳೂರಿನಿಂದ ಹೊರಟ "ಭೀಮ್ ಮಾರ್ಚ್" ಸೈಕಲ್‌ರ್ಯಾಲಿ ಕೊಳ್ಳೇಗಾಲಕ್ಕೂ ಆಗಮಿಸಿತ್ತು. ರಾಜ್ಯಾದ್ಯಾಂತ 35,000 ಕಿಮೀ. ಸಂಚಿರಿಸದ ಈ ಸುಧೀರ್ಘ ಸೈಕಲ್ ಯಾತ್ರೆ ಚರಿತ್ರಾರ್ಹ. ಇದನ್ನು ಮುನ್ನಡೆಸಿದವರು ಎಂ. ಗೋಪಿನಾಥ್.

ಬಾಬಾಸಾಹೇಬರ ಶತಮಾನೋತ್ಸವವನ್ನು ದಾಟುತ್ತಿದ್ದಂತೆ ಹಲವು ದಲಿತ ಸಂಘಟನೆ ಮತ್ತು ಚಳುವಳಿಯಲ್ಲಿ ನಾಯಕರು ಮತ್ತು ಕಾರ್ಯಕರ್ತರಲ್ಲಿ "ಅಂಬೇಡ್ಕರ್ ವಿಚಾರ ದಾಹ" ಆರಂಭವಾಯಿತು. ಮೋಹನ್‌ಕುಮಾರ್ ಮತ್ತು ನಮ್ಮೆಲ್ಲಾ ಸ್ನೇಹಿತರ ತಂಡ ಬಾಬಾಸಾಹೇಬರ ಬರಹಗಳ ಮತ್ತು ಭಾಷಣಗಳ ಇಂಗ್ಲೀಷ್ ಸಂಪುಟಗಳನ್ನು ತಂದು ಅಕ್ಷರಸಹ ಪುಟಪುಟಗಳನ್ನು ಸಾಲುಸಾಲುಗಳನ್ನು ಓದಿ ವ್ಯಾಖ್ಯಾನಿಸಿ ಚರ್ಚೆ ಆರಂಭಿಸಿದೆವು. 1992ರ ವೇಳೆಗೆ ಬಹುಷಃ ಯಾವುದೇ ವಿಶ್ವವಿದ್ಯಾನಿಲಯಗಳಲ್ಲೂ ನಡೆಯದಂತ ಅಧ್ಯಯನವನ್ನು ಕೊಳ್ಳೇಗಾಲದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅಧ್ಯಯನ ಕೇಂದ್ರದಿಂದ ಆರಂಭಿಸಿದೆವು. ಈ ಕೇಂದ್ರದ ವತಿಯಿಂದ ಪ್ರತೀ ಭಾನುವಾರ ಸ್ಟಡೀ ಕ್ಲಾಸ್ ಹೆಸರಿನಲ್ಲಿ ವಿದ್ಯಾರ್ಥಿಗಳು ಮತ್ತು ದಲಿತ ಅಧಿಕಾರಿಗಳಿಗೆ ಮೋಹನ್‌ಕುಮಾರ್ ಮತ್ತಿತರ ಸ್ನೇಹಿತರು ವರ್ಷಾನುಕಾಲ ತರಗತಿಗಳನ್ನು ನಡೆಸಿದೆವು. ಈ ಚಟುವಟಿಕೆ ಕ್ರಮೇಣ ಬೆಂಗಳೂರಿನವರೆಗೂ ವಿಸ್ತಾರಗೊಂಡಿತು. ಎನ್. ಮಹೇಶ್, ಎಂ. ಗೋಪಿನಾಥ್, ಪಿ.ಎಂ.ಎಸ್.ಆರ್. ತಂಡ ಒಟ್ಟಾಗಿಸೇರಿ ಕೊಳ್ಳೇಗಾಲ ತಾಲ್ಲೂಕಿನ ದಲಿತ ಸಮುದಾಯ ಮತ್ತು ಅಧಿಕಾರಿವರ್ಗವನ್ನು ಅಂಬೇಡ್ಕರ್‌ವಾದದ ಕಡೆಗೆ ಮುನ್ನಡೆಸತೊಡಗಿತು.

ಕ್ರಮೇಣ ಕೊಳ್ಳೇಗಾಲ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಅಂಬೇಡ್ಕರ್ ವಿಚಾರಗಳು ವ್ಯಾಪಿಸತೊಡಗಿದವು. ಇದಕ್ಕೆ ಮುಖ್ಯಕಾರಣ ಪಿ.ಎಂ.ಎಸ್.ಆರ್. ಸಂಸ್ಥೆ ಮತ್ತು ಬಾಬಾಸಾಹೇಬ್ ಅಧ್ಯಯನ ಕೇಂದ್ರ. ಇವುಗಳ ಮೂಲಕ ಅಂಬೇಡ್ಕರ್ ಜಯಂತಿ, ಪರಿನಿರ್ವಾಣ ದಿನ, ಬುದ್ಧ ಜಯಂತಿ, ಪೂನಾ ಒಪ್ಪಂದದ ದಿನ, ದಮ್ಮದೀಕ್ಷಾ ದಿನ ಹೀಗೆ ಹಲವು ಮಹತ್ವದ ದಿನಗಳಂದು ವಿದ್ಯಾರ್ಥಿಗಳು ಮತ್ತು ನೌಕರರನ್ನು ಸೇರಿಸಿ ಬಾಬಾಸಾಹೇಬರ ಸಂಪುಟಗಳ ವಿಚಾರಗಳನ್ನೇ ಚರ್ಚಿಸಲಾಗುತ್ತಿತ್ತು. ಅಲ್ಲದೆ ಯುವಕ ಸಂಘಗಳ ಸದಸ್ಯರಿಗೆ, ಅಧಿಕಾರಿಗಳಿಗೆ ಸಾವಿರಾರು ಅಧ್ಯಯನ ಶಿಬಿರಗಳನ್ನು ನಡೆಸಲಾಯಿತು. ದಲಿತ ಇತಿಹಾಸ, ಸಂಸ್ಕೃತಿ ದಲಿತರ ಹಕ್ಕು ಅಧಿಕಾರಿಗಳು ಮತ್ತು ಅಂಬೇಡ್ಕರ್ ವಿಚಾರಗಳ ಕುರಿತು ಜಾತ, ಬೀದಿನಾಟಕಗಳನ್ನು ಮಾಡಲಾಯಿತು. ದಲಿತ ಅಧಿಕಾರಿ ವರ್ಗ ತಮ್ಮೊಳಗಿನ ಎಲ್ಲಾ ಕನಸುಗಳನ್ನು ನಮ್ಮ ಮೂಲಕ ನನಸಾಗಿಸಿಕೊಳ್ಳಲು ಮುಂದೆ ಬಂತು. ಯಾವುದೇ ಕಾರ್ಯಕ್ರಮಗಳಿಗೆ ಸಂಗ್ರಹಿಸುತ್ತಿದ್ದ ವಂತಿಗೆ, ಎಷ್ಟು

ಸಂಗ್ರಹವಾಗಿದೆ, ಎಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆ, ಅದನ್ನು ಹೇಗೆ ಏತಕ್ಕೆ ವಿನಿಯೋಗಿಸಬಹುದು ಎಂಬ ಮಾಹಿತಿಗಳನ್ನೊಳಗೊಂಡ ಬ್ಯಾಲೆನ್ಸ್ ಷೀಟ್ ಒಂದನ್ನು ನೀಡುವ ಪದ್ಧತಿ ನಮ್ಮಲ್ಲಿತ್ತು. ಇದರಿಂದ ಅಧಿಕಾರಿಗಳು ದಲಿತ ಸಂಘಟನೆ ಮತ್ತು ಚಳುವಳಿಗೆ ಪ್ರಾಮಾಣಿಕವಾಗಿ ಬೆಂಬಲವಾಗಿನಿಂತರು.

ಆರಂಭದ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಚಳುವಳಿಗಳ ನಾಯಕತ್ವಗಳ ಕಾರ್ಯಸಾಧನೆಗಳ ಫಲದಿಂದಾಗಿ ಬಹು ಸಂಖ್ಯಾತ ಅಧಿಕಾರಿಗಳು ಕಾರ್ಯಕರ್ತರಿಗೆ ಬಹಳ ಗೌರವ ಕೊಡುತ್ತಿದ್ದರು. ಒಂದು ಕಾಲಕ್ಕೆ 1990–2002ರ ಅವಧಿಯವರೆಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಅಂತಹ ಅಧಿಕಾರಿಗಳ ಒಂದು ವರ್ಗವೇ ಇತ್ತು. ಇದಕ್ಕೆ ಕಾರಣ ದಲಿತ ಸಂಘಟನೆ ಹೆಸರಲ್ಲಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತರು. ಅವರಿಗೆ ಸ್ಪಷ್ಟವಾಗಿ ಅಂಬೇಡ್ಕರ್ ವಿಚಾರ ತಿಳಿದಿತ್ತು. ಯಾವುದೇ ದಲಿತ ಸಮಸ್ಯೆಗೆ ಭದ್ಧತೆಯಿಂದ ಕೆಲಸ ಮಾಡುತ್ತಿದ್ದರು. ಅಧಿಕಾರಿಗಳನ್ನಾಗಲಿ, ಜನ ಸಮುದಾಯಗಳನ್ನಾಗಲಿ ಮಿಸ್‌ಗೈಡ್ ಮಾಡುತ್ತಿರಲಿಲ್ಲ. ಕಾರ್ಯಕರ್ತರೂ ಅಷ್ಟೇ ಕ್ಲೀನ್ ಹ್ಯಾಂಡ್ ಆಗಿದ್ದರು.

ತೊಂಬತ್ತರ ದಶಕದಲ್ಲಿ ಕೊಳ್ಳೇಗಾಲದಲ್ಲಿ ಒಂದಷ್ಟು ಜನ ನಾವು ಅಂಬೇಡ್ಕರ್ ಮತ್ತು ದಲಿತ ಸಂಘಟನೆಯ ಕೆಲಸಕ್ಕಿರುವವರೆಂದು ಬ್ರಾಂಡ್ ಆಗಿ ಹೋಗಿದ್ದೆವು. ಅಧಿಕಾರಿಗಳು ಮತ್ತು ಜನ ಯಾವುದೆ ಇಸ್ಸಿವ್ ಬಂದರೆ ಅದಕ್ಕೆ 'ನಾವು' ಪ್ರತಿಕ್ರಿಯಿಸಬೇಕೆಂದು ಅವರು ಪ್ರತಿಕ್ರಿಯಿಸುತ್ತಾರೆಂದು, ಇಲ್ಲವೆ ಖುದ್ದು ಕರೆದು ಹೀಗೆ ಮಾಡಿರೆಂದು ಹೇಳುವ ಸ್ಥಿತಿ ಇತ್ತು. ಅಂತಹ ಅಧಿಕಾರಿಗಳ ತಂಡ ಕೊಳ್ಳೇಗಾಲದಲ್ಲಿತ್ತು. ತುಂಬಾ ನೆನಪಾಗುವ ಕೆಲವರನ್ನು ಮತ್ತು ಅವರು ನೀಡಿದ ಕೊಡುಗೆಯನ್ನು ನೆನೆಯುವೆ.

ಯಾವುದೇ ವಿದ್ಯಾರ್ಥಿ ಅಥವಾ ಸಮುದಾಯ ಸಮಸ್ಯೆಯಾಗಲಿ, ವಿಚಾರ ಸಂಕಿರಣ, ಜಾಥಾ, ಪ್ರತಿಭಟನೆ ವಿಷಯಗಳಾಗಲಿ, ಸಭೆ ಕರೆಯುವ ವಿಷಯವಾಗಲಿ, ವಂತಿಕೆ ಸಂಗ್ರಹಿಸುವುದಾಗಲಿ ಮೊದಲು ನೆನಪಾಗುತ್ತಿದ್ದ ಅಧಿಕಾರಿ ಎಂದರೆ ಕಬಿನಿ ಇಲಾಖೆಯ ಶ್ರೀ ಶಿವಲಿಂಗಯ್ಯನವರು. ಇಡೀ ನನ್ನ ಅನುಭವದಲ್ಲಿ ಹೇಳೋದಾದರೆ, ಎಂದೂ ಅವರು ಬೇಸರ ಪಟ್ಟುಕೊಂಡಿದ್ದಿಲ್ಲ. ತಲೆತಪ್ಪಿಸಿಕೊಂಡಿದ್ದಿಲ್ಲ. ಯಾವುದಕ್ಕೂ ಹಿಂದೆ–ಮುಂದೆ ನೋಡಿದ್ದಿಲ್ಲ. ಎಲ್ಲದಕ್ಕೂ ಅವರೆ ಮೊದಲಿಗರು. "ನೀವು ನಮ್ಮತ್ರಕ್ಕಲ್ಲದೆ ಇನ್ನಾರತ್ರಕ್ಕೋದಿರಿ, ನೀವು ಹಿಂಜರಿಲೇ ಬೇಡಿ, ಬನ್ನಿ. ನಾನು – ಜೊತೆಗೆ ನನ್ನ ಸ್ನೇಹಿತರು ಎಷ್ಟು ಸಾಧ್ಯ ಅಷ್ಟು ಸಹಾಯ ಮಾಡಿತೀವಿ. ಈ ಆಫಿಸಗಳೆ ನಮ್ಮ ಸಂಘಟನೆ, ಚಳುವಳಿಗಳ ಕಾರ್ಯಕ್ಷೇತ್ರ" ಅಂತಾ ಇದ್ದರು.

ಶಿವಲಿಂಗಯ್ಯ ಕೆ. ಆರ್. ಪೇಟೆಯವರು. ಸಿವಿಲ್ ಇಂಜಿನಿಯರಿಂಗ್ ಓದಿ ಕಬಿನಿ ಇಲಾಖೆಯಲ್ಲಿ ಡ್ರಾಫ್ಟ್‌ಮನ್ ಆಗಿದ್ದರು. ದ.ಸಂ.ಸ. ಸ್ಥಾಪನೆಯಲ್ಲಿ ಮುಖ್ಯಪಾತ್ರವಹಿಸಿದ್ದವರು.

ಇವರ ಪತ್ನಿ ಹಾಸ್ಟಲ್ ವಾರ್ಡ್‌ನ್ ಆಗಿದ್ದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಇವರು ಸಹಾಯ ಮಾಡಿದ್ದಾರೆ. ಇಂದಿಗೂ ಅನೇಕರು ಅದನ್ನು ನೆನೆದುಕೊಳ್ಳುತ್ತದೆ. ಡಾ. ಅಂಬೇಡ್ಕರ್ ಸಂಬಂಧಿಸಿದ ಅಥವ ಯಾವುದೇ ದಲಿತ ಸಂಘಟನೆಯ ಕಾರ್ಯಕ್ರಮ ಸಭೆ ಸಮಾರಂಭವಾಗಲಿ ಅಲ್ಲಿ ಶಿವಲಿಂಗಯ್ಯ ಇರುತ್ತಿದ್ದರು. ಇದೇ ನಿಲುವನ್ನು ಹೊಂದಿದ್ದ ಇವರದೇ ಟೀಮಿನ ಸದಸ್ಯರೆಂದರೆ ಶ್ರೀ ಶಿವರಾಮು, ಶ್ರೀ ಕಾಂತರಾಜು, ಶ್ರೀ ಮಂಜುನಾಥ್, ಶ್ರೀ ಶಿವಮೂರ್ತಿ, ಶ್ರೀ ಭಾಸ್ಕರ್, ಶ್ರೀ ವೆಂಕಟಾಚಲ ಮೊದಲಾದವರು. ಮೂಲತಃ ದಲಿತ ಚಳುವಳಿಯು ಹಿನ್ನೆಲೆಯಿಂದ ಬಂದವರಾಗಿದ್ದರು. ಇವರೆಲ್ಲರ ಮನೆ, ಕಛೇರಿಗಳು ಚಳುವಳಿಯ ಆಕ್ಟಿವಿಸ್ಟ್‌ಗಳಿಗೆ ಚಿರಪರಿಚಿತ ಹಾಗೂ ಸದಾ ತೆರೆದುಕೊಂಡಿದ್ದವು.

1990ರ ಸಂದರ್ಭ ನಾವಾಗ ಡಾ. ಅಂಬೇಡ್ಕರ್ ವಿಚಾರ ಸಾಹಿತ್ಯವನ್ನು ಹೇಗೆಲ್ಲಾ ಅಧಿಕಾರಿ ಮತ್ತು ಜನರ ಬಳಿಗೆ ಮುಟ್ಟಿಸಿದೆವು ಎಂದರೆ ಆಶ್ಚರ್ಯ. ಅಧಿಕಾರಿಗಳಿಗೆ ಬಾಬಾಸಾಹೇಬರ ಬರಹಗಳನ್ನು ಓದಿಸುವುದರ ಜೊತೆಗೆ ಅವುಗಳ ಮುದ್ರಣಕ್ಕೆ ನೆರವಾಗುವಂತೆ ಮಾಡಿದೆವು. 1990 ಕೊಳ್ಳೇಗಾಲ ದಲಿತ ನೌಕರರ ಸಂಘದಲ್ಲಿ ವೈಧ್ಯಾದಿಕಾರಿಯಾಗಿದ್ದ ಡಾ. ನಂಜುಂಡಸ್ವಾಮಿ ಹಾಗೂ ಖಜಾನಾಧಿಕಾರಿ ಡಿ. ದೊಡ್ಡಯ್ಯರವರು ಪ್ರಮುಖರಿದ್ದ ಸಂದರ್ಭ. ಡಾ. ಅಂಬೇಡ್ಕರರ ಬಹುಮುಖ್ಯ ಎನಿಸುವ ಸಣ್ಣಪುಟ್ಟ ಪ್ರಬಂಧಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಎಲ್ಲರಿಗೂ ಓದಲು, ಚರ್ಚಿಸಲು ಸಿಗುವಂತೆ ಮಾಡಲು ಪ್ರಯತ್ನಿಸುತ್ತಿದ್ದೆವು. ಸ್ನೇಹಿತರಾದ ಎಂ. ಗೋಪಿನಾಥ್, ಡಾ. ಅಂಬೇಡ್ಕರ್ ಬರೆದ 'ಪೂನಾ ಪ್ಯಾಕ್ಟ್' ಪ್ರಬಂಧವನ್ನು ಕನ್ನಡಕ್ಕೆ ಅನುವಾದಿಸಿದ್ದರು. ಅದು ಒಮ್ಮೆ ಮುದ್ರಣಗೊಂಡು ಖರ್ಚಾಗಿ ಪ್ರತಿಗಳಿಗೆ ತುಂಬಾ ಬೇಡಿಕೆ ಇತ್ತು. ಇದನ್ನು ತಿಳಿಸಿದಾಗ ಕೊಳ್ಳೇಗಾಲದ ದಲಿತ ನೌಕರರ ಸಂಘ ಮುದ್ರಣಕ್ಕೆ ಬೇಕಾಗುವ ಹಣವನ್ನು ನೀಡಿ 'ಪೂನಾ ಒಪ್ಪಂದ' ಕೃತಿಯ 2ನೇ ಆವೃತ್ತಿಯನ್ನು ಪ್ರಕಟಿಸಲು ನೆರವಾಯಿತು. ಇಂದಿಗೂ ಬಹುತೇಕ ಅಂಬೇಡ್ಕರ್ ವಾದಿಗಳ ಬಳಿ ಕೃತಿಯ ಪ್ರತಿಗಳು ಇವೆ.

ಹಾಗೇ ಬಾಬಾಸಾಹೇಬರ ಬರಹಗಳಲ್ಲಿ 'ಇಮಾನ್ಸಿಪೇಷನ್ ಆಫ್ ಅನ್‌ಟಚ್‌ಬಲ್ಸ್' ಪ್ರಬಂಧ ತುಂಬಾ ಮಹತ್ವದ್ದು. ಈ ಪ್ರಬಂಧ ಎಷ್ಟು ಮುಖ್ಯ ಎಂಬುದನ್ನು ಡಾ. ಅಂಬೇಡ್ಕರ್ ಹೀಗೆ ಹೇಳಿದ್ದಾರೆ. "ಹಿಂದೂಗಳು ವಿಶ್ವದ ನ್ಯಾಯಾಲಯದ ಮುಂದೆ ಹಾಜರಾಗಲು ಈ ಪ್ರಬಂಧ ಅವರಿಗೆ ನೋಟೀಸಾಗಿ ಜಾರಿಯಾಗುತ್ತದೆ" ಎಂದು. ಅಗತ್ಯವಾಗಿ ದಲಿತ – ದಲಿತೇತರರೆಲ್ಲಾ ಓದಬೇಕಾದ ಇಂತಹ ಬರಹವನ್ನು ನಮ್ಮ ಅಧ್ಯಯನ ಕೇಂದ್ರದ ಸ್ನೇಹಿತರಾದ ಹೆಚ್. ಮೋಹನ್ ಕುಮಾರ್ ಕನ್ನಡಕ್ಕೆ ಅನುವಾದ ಮಾಡಿದ್ದರು. ಅಂದು ಕೊಳ್ಳೇಗಾಲದಲ್ಲಿ ಬಿ.ಡಿ.ಓ. ಆಗಿದ್ದ ಶ್ರೀ ಮಹದೇವ ಮೂರ್ತಿ, ಪಿ.ಡಬ್ಲ್ಯೂ.ಡಿನ ಎ.ಇ.ಇ. ಆಗಿದ್ದ ಶ್ರೀ ಕೆ. ಶಿವಮೂರ್ತಿ, ಜೆ.ಇ. ಆಗಿದ್ದ ಬಸವರಾಜು,

ತೋಟಗಾರಿಕೆ ಇಲಾಖೆಯ ನಿರ್ದೇಶಕರಾಗಿದ್ದ ಶಿವಪ್ರಕಾಶ್, ಎಲ್.ಐ.ಸಿ. ಅಧಿಕಾರಿ ಶಿವಾನಂದಾಜಿ ರವರು ಮುಂದೆ ಬಂದು ಧನಸಹಾಯ ಮಾಡಿ "ಅಸ್ಪೃಶ್ಯರ ವಿಮೋಚನೆ" ಹೆಸರಿನಲ್ಲಿ ಅದನ್ನು ಪುಸ್ತಕವಾಗಿ ಮುದ್ರಣವಾಗಲು ಕಾರಣರಾದವರು. ಅದೇ ರೀತಿ ಬಾಬಾ ಸಾಹೇಬರ ಮಹತ್ವದ ಬಾಲ್ಯ ಜೀವನದ ಹಾಗೂ ಅಸ್ಪೃಶ್ಯತೆ ಆಚರಣೆಯ ಅನುಭವ ಕಥನಗಳನ್ನೊಳಗೊಂಡಿರುವ ಅವರೇ ಬರೆದ "ವೆಯ್ಟಿಂಗ್ ಫಾರ್ ಎ ವೀಸಾ" ಕೃತಿಯನ್ನು ನಮ್ಮ ಅಧ್ಯಯನ ಕೇಂದ್ರದ ಸಹೋದರಿಯರಾದ ಎಂ. ಮಾತಂಗಿ, ಸಿ.ವಿ. ಲಕ್ಷ್ಮಿಯವರು ಕನ್ನಡಕ್ಕೆ ಅನುವಾದಿಸಿದರು. ಇದನ್ನು ಬೆಂಗಳೂರಿನ 'ಮೂಲನಿವಾಸಿ ಮಹಾ ಒಕ್ಕೂಟ' ಮುದ್ರಣ ಮಾಡಿಸಿತು. ಹೀಗೆ ಡಾ. ಅಂಬೇಡ್ಕರ್ ಬರೆದ ಮುಖ್ಯ ಬರಹಗಳಲ್ಲಿ 'ದಲಿತರು ಯಾರು?' 'ಬಾಡುತಿಂದ ಬ್ರಾಹ್ಮಣರು', ಮುಂತಾದ ಆಯ್ದ ಲೇಖನಗಳನ್ನು ದಲಿತ ಅಧಿಕಾರಿಗಳ ಧನ ಸಹಾಯದಿಂದ ಕನ್ನಡಕ್ಕೆ ಭಾಷಾಂತರಿಸಿ ಸಾವಿರಾರು ಓದುಗರಿಗೆ ತಲುಪಿಸುವ ಮೂಲಕ ಕೊಳ್ಳೇಗಾಲ, ಮೈಸೂರು, ಮಂಗಳೂರು, ಬೆಂಗಳೂರು ಕಡೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳ ನಡುವೆ ಅಂಬೇಡ್ಕರ್ ವಿಚಾರ ಕ್ರಾಂತಿಗೆ ಕೊಳ್ಳೇಗಾಲದ ದಲಿತ ಸಂಘಟನೆ ನಾಂದಿಯಾಡಿತು.

ಹೆಜ್ಜೆ ಮೂಡಿಸಿದವರು

ಹುಡುಗರಾಗಿದ್ದಾಗ ಅಧಿಕಾರಿಗಳೆಂದರೆ ನಮಗೆ ಭಯ. ಸ್ಕಾಲರ್‌ಶಿಪ್ ತೆಗೆದುಕೊಳ್ಳಬೇಕಾದರೆ ಅಂದು ವಿದ್ಯಾರ್ಥಿ ವೇತನದ ಅರ್ಜಿಗೆ ಬಿ.ಡಿ.ಓ. ಅವರಿಂದ ಸಹಿ ಹಾಕಿಸಬೇಕಿತ್ತು. ನಮಗೆ ಅವರ ಛೇಂಬರ್ ಪ್ರವೇಶಿಸುವುದೆಂದರೆ ಜೀವವನ್ನು ಕೈಲಿಡಿದುಕೊಂಡು ಭಯ ಭಕ್ತಿಯಿಂದ ಹೋಗುತ್ತಿದ್ದವು. ಅವರ ಮಾತು, ನೋಟ ನೋಡಿದರೆ ಇವರು ಯಾವುದೋ ನಮ್ಮ ಕೈಗೆಟುಕದ, ನಮಗೆಂದೂ ನಿಲುಕದ ಲೋಕದಲ್ಲಿರುವ ದೊಡ್ಡ ಮನಷ್ಯರಂತೆ ಕಾಣುತ್ತಿದ್ದರು.

ಹೀಗಿರುವಾಗ ನಾನು ಎಂ.ಎ. ಮುಗಿಸಿ ಕೆಲಸಕ್ಕೆ ಹುಡುಕಾಡುತ್ತಿದ್ದ ದಿನಗಳವು. ಅಷ್ಟೊತ್ತಿಗೆ ನಮ್ಮೂರವರೆ ಆದ ಎನ್. ಮಹೇಶ್‌ರವರು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾಧಿಕಾರಿಯಾಗಿದ್ದರು. ಆ ವೇಳೆಗಾಗಲೇ ಅವರು ದಲಿತ ಸಂಘಟನೆ, ಚಳುವಳಿಗಳಿಗೆ ಸಕ್ರಿಯವಾಗಿ ಬೆಂಬಲಿಸುತ್ತಾ, ಭಾಗಿಯಾಗುತ್ತಿದ್ದರು. ಬೆಂಗಳೂರು, ಮಡಿಕೇರಿ, ಮಂಡ್ಯಗಳಲ್ಲಿ ಸೇವೆಯಲ್ಲಿದ್ದರು. ನಾನು ಪರ್ಸನಲ್ ಹಾಗೂ ಸಂಘಟನೆಯ ಕೆಲಸಗಳ ನಿಮಿತ್ತ ಆಗಾಗ ಅವರ ಕಛೇರಿಗೆ ಹೋಗುತ್ತಿದ್ದೆ. ಬೆಂಗಳೂರಿನ ವಿಧಾನಸೌಧದ ಪಕ್ಕದ ವಿಶ್ವೇಶ್ವರಯ್ಯ ಟವರ್‌ನ ಅವರ ಆಫೀಸಿಗೆ ಲಿಫ್ಟ್‌ನಲ್ಲೂ ಸಹ ಹೋಗಬಹುದಿತ್ತು. ಹಾಗೆ ಹೋಗುವುದೇನಮಗೆ ಅಭಿಮಾನದ

ವಿಷಯ. ಹೋದಾಗ ಅವರ ಆಫೀಸಿನಲ್ಲಿ ಅವರು ತಮ್ಮ ಕಛೇರಿ ಸಿಬ್ಬಂದಿಗೆ ಹೇಳಿ ನಮಗೆ ಕಾಫಿ ತರಿಸುತ್ತಿದ್ದರು. ಚೇರಾಕಿ ಕೂರಿಸುತ್ತಿದ್ದರು. ಕಛೇರಿ ಸಿಬ್ಬಂದಿ ನಮ್ಮನ್ನು ಚೆನ್ನಾಗಿ ಗಮನಿಸಿಕೊಳ್ಳುತ್ತಿದ್ದರು. ಕೆಲವು ಸಲ ನಮಗೆ ಊಟವನ್ನು ಮಾಡಿಸಿ, ಜೀಪ್‌ನಲ್ಲಿ ನಾವು ಹೋಗಬೇಕಾದ ಕಡೆಗೆ ಡ್ರಾಪ್ ಮಾಡಿಸುತ್ತಿದ್ದರು. ಅವೆಲ್ಲವು ನಮಗೆ ಪವಾಡಗಳಂತೆ ಅನ್ನಿಸುತ್ತಿದ್ದವು. ಹೈದರಾಬಾದಿನಲ್ಲಿ ನಡೆದ ಅಖಿಲಭಾರತ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲಾ ಖರ್ಚಾಕಿ ನನ್ನನ್ನು ಕಳುಹಿಸಿಕೊಟ್ಟಿದ್ದರು. ದೇವನೂರ ಮಹಾದೇವರೂ ಭಾಗವಹಿಸಿದ್ದ ಆ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿ ಮೊದಲಿಗೆ ನಾನು ಕವನ ವಾಚನ ಮಾಡಿದೆ.

ಬಿ.ಸಿ.ಎಂ. ಜಿಲ್ಲಾಧಿಕಾರಿಯಾಗಿದ್ದ ಮಹೇಶ್‌ರವರ ಕಛೇರಿಯಲ್ಲಿ ಸದಾ ಯಾರಾದರು ದಲಿತ ಸಂಘಟನೆಯ ಕಾರ್ಯಕರ್ತರು ಇರುತ್ತಲೇ ಇದ್ದರು. ತಮ್ಮನ್ನು ಒಳಗೊಂಡು ಯಾರೂ ಯಾವುದೇ ಆಮಿಷಗಳಿಗೆ ಒಳಗಾಗದೆ ಜನರಿಗೆ ಇಲಾಖೆಯ ಕೆಲಸಗಳನ್ನು ಮಾಡಿಕೊಂಡುವಂತೆ ಆದೇಶಿಸುತ್ತಿದ್ದರು. ಕೊಳ್ಳೇಗಾಲದ ಶಿವಮೂರ್ತಿಯವರು, ಮಂಜುನಾಥ್, ಶಿವಲಿಂಗಯ್ಯ, ಕಾಂತರಾಜು, ಶಿವರಾಮು ಮೊದಲಾದ ಅನೇಕರು ಹೀಗೆ ಸಮುದಾಯಮುಖಿಯಾಗಿದ್ದರು. ಎನ್. ಮಹೇಶ್‌ರನ್ನು ಒಳಗೊಂಡು ಈ ಎಲ್ಲಾ ಅಧಿಕಾರಿಗಳು ದಲಿತ ಸಂಘಟನೆಯ ಯಾವುದೇ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭಾಗಿಯಾಗುತ್ತಿದ್ದರು. ಅಂಬೇಡ್ಕರ್, ಬುದ್ಧ, ಮಾರ್ಕ್ಸ್, ಓಸೋ ಬಗ್ಗೆ ಓದುತ್ತಿದ್ದ ಮಹೇಶ್‌ರವರು ಒಳ್ಳೆ ಭಾಷಣಕಾರರು. ಆಗಾಗಿ ದಲಿತ ಸಂಘಟನೆಯ ವಿಚಾರ ಸಂಕಿರಣ, ತರಬೇತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುತ್ತಿದ್ದರು. ಎಷ್ಟೋ ಸಲ ರಜೆಹಾಕಿ ಸಂಘಟನೆಯ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಿದ್ದರು. ಆಂಧ್ರಪ್ರದೇಶದ ಚುಂಡೂರು ದಲಿತಹತ್ಯಾ ಕಾಂಡ ವಿರುದ್ಧ ಅದನ್ನು ಪ್ರತಿಭಟಿಸಲು ಕರ್ನಾಟಕದಿಂದಲೂ ಆಂಧ್ರಕ್ಕೆ ಹೋಗಿದ್ದೆವು. ಆ ಪ್ರತಿಭಟನೆಯಲ್ಲಿ ಎನ್. ಮಹೇಶ್ ಭಾಗವಹಿಸಿದ್ದರೆಂದರೆ ಅವರಿಗಿದ್ದ ದಲಿತಪರ ಕಳಕಳಿ ಎಂತಹದ್ದೆಂದು ತಿಳಿಯಬಹುದು.

ಹೀಗೆ ಅನೇಕ ಚಟುವಟಿಕೆಗಳು ಬೆಂಗಳೂರು ಭಾಗದ ದ.ಸಂ.ಸದ ಒಂದು ಬಣದಿಂದ ನಡೆಯುತ್ತಿತ್ತು. ಲಾಲ್‌ಬಾಗ್ ಸಮೀಪದ ಸ್ಟೇಟ್‌ಬ್ಯಾಂಕ್ ನೌಕಕರಾಗಿದ್ದ ಎಂ. ವೆಂಕಟಸ್ವಾಮಿ ಆ ಬಣದ ಪ್ರಮುಖರು. ಬೆಂಗಳೂರು, ಕೋಲಾರ ಮತ್ತು ಯಾವುದೇ ಭಾಗದ ದಲಿತ ಸಮಸ್ಯೆಗಳನ್ನು ಇವರು ಕೈಗೆತ್ತುಕೊಳ್ಳುತ್ತಿದ್ದರು. ನಾನಿನ್ನು ಕೆಲಸಕ್ಕೆ ಸೇರಿರದ ದಿನಗಳಲ್ಲಿ ಬ್ಯಾಂಕ್ ಉದ್ಯೋಗಿಯಾದ ಇವರು ಹೇಗೆ ಸಂಘಟನೆ, ಚಳುವಳಿ ಜವಾಬ್ದಾರಿ ನಿರ್ವಹಿಸುತ್ತಾರೆ ಎಂದು ಆಶ್ಚರ್ಯವಾಗುತ್ತಿತ್ತು. ದಲಿತರ ಭೂವಿವಾದಕ್ಕೆ ಸಂಬಂಧಿಸಿದ ಘಟನೆಯೊಂದರಲ್ಲಿ ತಲೆಗೆ ಪೆಟ್ಟು ತಿಂದ ವೆಂಕಟಸ್ವಾಮಿ ಮತ್ತಿತರ ದ.ಸಂ.ಸ. ನಾಯಕರ

ಬಗ್ಗೆ ಲಂಕೇಶ್ ಪ್ರತಿಕೆ ವರದಿ ಮಾಡಿತು. ಆಗ ಅವರೆಲ್ಲ ಕಾರ್ಯಕರ್ತರ ಪಾಲಿಗೆ ದೊಡ್ಡ ನಾಯಕರಂತೆ ಕಂಡರು.

ಅನೇಕ ದಲಿತ ವಿದ್ಯಾವಂತ ಅಧಿಕಾರಿಗಳು ಸಮುದಾಯದ ಕಳಕಳಿಯಿಂದ ಚಳುವಳಿಗೆ ಬಂದರೆ ಇನ್ನು ಕೆಲವರು ಡಾ. ಅಂಬೇಡ್ಕರ್ ವಿಚಾರಗಳಿಂದ ಆಕರ್ಷಿತರಾಗಿ ಚಳುವಳಿಗೆ ಬಂದವರು. ಎಂ. ಗೋಪಿನಾಥ್ ಈ ಎರಡು ಹಿನ್ನೆಲೆಯಿಂದ ಸಂಘಟನೆಗೆ ಬಂದವರು. ಆದರ್ಶಪ್ರಾಯರಾದ ಇವರು ತತ್ತ್ವಸಿದ್ಧಾಂತಗಳಿಗೆ, ಸಮುದಾಯ ಸಂಘಟನೆಗೆ ತಮ್ಮನ್ನು ಅರ್ಪಿಸಿಕೊಂಡವರು. ಕರ್ನಾಟಕ ಹಣಕಾಸು ನಿಗಮದ ಮ್ಯಾನೇಜರ್ ಹುದ್ದೆಯಲ್ಲಿದ್ದವರು. 1988ರ ಸಂದರ್ಭದಲ್ಲಿನ ಬೆಂಡಿಗೇರಿ ಮಲಪ್ರಕರಣವನ್ನು ಪ್ರತಿಭಟಿಸಿ ಕೆಲಸಕ್ಕೆ ರಾಜೀನಾಮೆ ಕೊಟ್ಟು, ದಲಿತ ಸಂಘಟನೆ, ಚಳುವಳಿಯಲ್ಲಿ ಸಕ್ರಿಯರಾದರು. ಕರ್ನಾಟಕ ದಕ್ಷಿಣ ಭಾರತದಾದ್ಯಂತ ತಮ್ಮ ಹೆಂಡತಿ, ಮಗನ ಜೊತೆ ತರುಣ ಅಂಬೇಡ್ಕರ್‌ವಾದಿಗಳನ್ನು ಕಟ್ಟಿಕೊಂಡು ಭೀಮ್ ಮಾರ್ಚ್, – ಸೈಕಲ್ ರ್‍ಯಾಲಿ, ಆದಿಜನರ ಅರಿವಿನ ಜಾಥ ಹೆಸರಿನಲ್ಲಿ ಸುದೀರ್ಘ ಯಾತ್ರೆಗಳನ್ನು ಮಾಡಿದರು. ಅಧಿಕಾರಿಯಾಗಿದ್ದವರು ನಂತರ ಅಂಬೇಡ್ಕರ್‌ವಾದ, ಬುದ್ಧವಾದ, ದಲಿತ ಇತಿಹಾಸ, ಸಂಸ್ಕೃತಿ ಕುರಿತು ಹೊಸ ತಲೆಮಾರಿನಲ್ಲಿ ವಿಚಾರ ಬಿತ್ತುವ ಮೂಲಕ ದಲಿತರ ಸಮುದಾಯದ ನಡುವೆ ಎಚ್ಚರವನ್ನುಂಟು ಮಾಡಿದರು. ಮಹೇಶ್, ಗೋಪಿನಾಥ್, ಕೊಳ್ಳೇಗಾಲ ಭಾಗದ ಮೋಹನ್‌ಕುಮಾರ್, ನೀಲಯ್ಯ, ಮುಳ್ಳೂರು ಶಿವಮಲ್ಲು ಮೊದಲಾದವರ ನೇತೃತ್ವದಲ್ಲಿ ಅಂಬೇಡ್ಕರ್ ಚಿಂತನಾ ಪ್ರಧಾನವಾದ ದ.ಸಂ.ಸ ಚಟುವಟಿಕೆ ನಮ್ಮ ಕೊಳ್ಳೇಗಾಲ ಪ್ರಾಂತ್ಯದಲ್ಲಿ ನೆಲೆಕಂಡಿತು. ಆ ವೇಳೆಗೆ ಕೊಳ್ಳೇಗಾಲದಲ್ಲಿದ್ದ ಪಿ.ಎಂ.ಎಸ್.ಆರ್. ಕಾರ್ಯಕರ್ತರು ದಲಿತ ಅಧಿಕಾರಿಗಳನ್ನು ಸಮುದಾಯದ ಕಡೆಗೆ ಮುಖಾಮುಖಿಯಾಗಿಸಿದರು. ಸಂಸ್ಥೆಯ ಕಾರ್ಯದರ್ಶಿಗಳಾಗಿದ್ದ ಡಾ. ಜಕ್ಕಾಯರ ಪಾತ್ರ ಮತ್ತು ಕೊಡುಗೆ ಈ ವಿಷಯದಲ್ಲಿ ದಾಖಲಾರ್ಹವಾದದ್ದು. ದಲಿತರಲ್ಲಿ ಮತ್ತು ಅಧಿಕಾರಿವರ್ಗದಲ್ಲಿ ರಾಜಕೀಯ ಸಶಕ್ತತೆ, ಇತಿಹಾಸ–ಸಂಸ್ಕೃತಿ ಜಾಗೃತಿ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ವಾವಲಂಬನೆ ಉಂಟುಮಾಡುವುದು ಸಂಸ್ಥೆಯ ಕಾರ್ಯಕ್ರಮಗಳಾಗಿದ್ದವು. ಈ ನಿಟ್ಟಿನಲ್ಲಿ ದಲಿತರನ್ನು ಜಾಗೃತಿಗೊಳಿಸಲು ದಲಿತ ಅಭಿವೃದ್ಧಿ ಸಂಘ ಸ್ಥಾಪಿಸಲಾಯಿತು. ಸರಗೂರು ದುಂಡುಮಾದ, ಉತ್ತಂಬಳ್ಳಿ ಲಿಂಗಯ್ಯ ಮೊದಲಾದವರು ಸಂಸ್ಥೆಯ ಸಹಯೋಗದೊಂದಿಗೆ ದುಡಿದು ದಲಿತರಲ್ಲಿ ಜಾಗೃತಿ ಉಂಟಾಗಲು ಕಾರಣರಾದರು. ಕೊಳ್ಳೇಗಾಲದಲ್ಲಿ ಸಂಘಟಿಸಲಾಗುತ್ತಿದ್ದ ವಿಚಾರ ಸಂಕಿರಣ, ತರಬೇತಿ ಶಿಬಿರಗಳು, ಸಭೆ ಸಮಾರಂಭಗಳಿಗೆ ಮಹೇಶ್, ಗೋಪಿನಾಥ್ ಮುಖ್ಯಭಾಷಣಕಾರರಾಗಿರುತ್ತಿದ್ದರು. ಪಿ.ಎಂ.ಎಸ್.ಆರ್. ಸಂಸ್ಥೆ ಮತ್ತು ಅಂಬೇಡ್ಕರ್ ಅಧ್ಯಯನ ಕೇಂದ್ರದ ಸ್ನೇಹಿತರು

ಕೊಳ್ಳೇಗಾಲದಲ್ಲಿ ದಲಿತ ಅಧಿಕಾರಿವರ್ಗವನ್ನು, ದಲಿತ ಬರಹಗಾರನ್ನು ಸಂಘಟಿಸಿ ದಲಿತರ ಕಡೆಗೆ ಮುಖಮಾಡುವ ಕೆಲಸ ಮಾಡಿತು. ದೇವನೂರ ಮಹಾದೇವರವರು "ಕೊಳ್ಳೇಗಾಲ ದಲಿತ ಬರಹಗಾರರ ಬಳಗ" ಸಾಹಿತ್ಯ ಸಂಘಟನೆ ಉದ್ಘಾಟಿಸಿದರು. ಅದೇ ರೀತಿ 'ದಲಿತ ಉಪನ್ಯಾಸಕರ ಸಂಘಟನೆ' ಅಸ್ತಿತ್ವಕ್ಕೆ ಬಂತು. ಇದು ದಲಿತ ವಿದ್ಯಾರ್ಥಿಗಳಿಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಬೆಂಬಲವಾಗುವ, ಮಾರ್ಗದರ್ಶನವಾಗುವ ಕಾರ್ಯಕ್ರಮ ರೂಪಿಸಿತು. ಪ್ರತೀತಿಂಗಳು ಒಬ್ಬ ದಲಿತ ಅಧಿಕಾರಿ ಕೊಡುತ್ತಿದ್ದ ನೂರು ರೂಪಾಯಿಗಳ ಸಹಾಯಧನದಿಂದ ವಾಚನಾಲಯ, ಗ್ರಂಥಾಲಯ, ಉದ್ಯೋಗ ಮಾಹಿತಿ ಕೇಂದ್ರ ನಡೆಸುವಂತಹ ಕಾರ್ಯಕ್ರಮ ರೂಪಿಸುವಂತಾಯಿತು. ಇಂತಹ ಮಹತ್ಕಾರ್ಯದಲ್ಲಿ ಭಾಗಿಗಳಾಗಿ ಇದನ್ನು ಮುನ್ನಡೆಸಿದವರು ಪ್ರಾಂಶುಪಾಲರಾಗಿದ್ದ ಆರ್. ಮಹಾದೇವಪ್ಪ, ಎಸ್.ಬಿ.ಎಂ.ನ ರಾಚಪ್ಪಾಜಿ, ಉಪನ್ಯಾಸಕರಾದ ಬಿ. ಮಹಾದೇವ, ಕೊಳ್ಳೇಗಾಲದ ಮಹದೇವ ಮೂರ್ತಿ, ಎಸ್. ಲಿಂಗಣ್ಣ, ಜೆ.ಎಸ್.ಎಸ್.ನ ಪುಟ್ಟಸ್ವಾಮಿ, ಕೆನರಾಬ್ಯಾಂಕ್ ಸಿದ್ದು ಹೀಗೆ ಹಲವಾರು ನೌಕರ ಬಂಧುಗಳಿದ್ದರು.

ಭೂಮಿತೂಕದ ಕಳಕಳಿಬೇಕು

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಪಂಜಾಬ್‌ನ ಜಲಂದರ್‌ನಲ್ಲಿ 27–10–1951ರಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ ದಲಿತ ಸಮುದಾಯದಜನ ಸಾಗರದ ಮುಂದೆ ಹೀಗೆ ಹೇಳುತ್ತಾರೆ. "ಯಾವಾಗ ನಾನು ನನ್ನ ಬದುಕಿನ ಅರ್ಥವನ್ನು ತಿಳಿದುಕೊಳ್ಳಲು ಸಮರ್ಥನಾದೆನೊ, ಅಂದಿನಿಂದ ನಾನು ನನ್ನ ಅಸ್ಪೃಶ್ಯ ಬಾಂಧವರಿಗಾಗಿ ಸೇವೆ ಮಾಡಬೇಕೆಂಬ ಒಂದು ತತ್ತ್ವವನ್ನು ನನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇನೆ. ನಾನು ಎಲ್ಲೆ ಇರಲಿ, ಹೇಗೆ ಇರಲಿ, ಯಾವುದೇ ಸ್ಥಿತಿಯಲ್ಲಿರಲಿ, ನಾನು ಯಾವತ್ತೂ ನನ್ನ ಬಾಂಧವರ ಒಳಿತಿನ ಬಗ್ಗೆ ಆಲೋಚಿಸುತ್ತಿದ್ದೆ. ಅಸ್ಪೃಶ್ಯರ ಹಕ್ಕು ಬಾಧ್ಯತೆಯನ್ನು ರಕ್ಷಿಸಲೇಬೇಕೆಂಬುದು ನನ್ನ ಬದುಕಿನ ಮುಖ್ಯ ಉದ್ದೇಶ. ಈ ಗುರಿಯು ನನ್ನಲ್ಲಿ ಹಿಂದಿನಿಂದಲೂ ಇತ್ತು. ಇನ್ನು ಮುಂದೆಯೂ ಇರುತ್ತದೆ. ನನಗೆ ನೂರಾರು ಆಕರ್ಷಕ ಕೆಲಸಗಳು, ದೊಡ್ಡ ಮೊತ್ತದ ವೇತನ ಸಿಗುವ ಅವಕಾಶಗಳಿದ್ದವು. ಅವೆಲ್ಲವನ್ನು ನಾನು ನನ್ನ ಜನರಿಗಾಗಿ ದುಡಿಯಲು ಮತ್ತು ನನ್ನ ಬದುಕಿನ ಮೂಲಗುರಿಯನ್ನು ಮುಟ್ಟುವ ಸಲುವಾಗಿ ತಿರಸ್ಕರಿಸಿದ್ದೇನೆ...

ನನ್ನ ಬ್ಯಾರಿಸ್ಟರ್ ಪದವಿಯನ್ನು ಮುಗಿಸಿಕೊಂಡು ಇಂಗ್ಲೆಂಡ್‌ನಿಂದ ಹಿಂದಿರುಗಿದ ನಂತರ ಮತ್ತೊಮ್ಮೆ ನನಗೆ ಜಿಲ್ಲಾ ನ್ಯಾಯಾದೀಶನ ಹುದ್ದೆಯನ್ನು, ಮೂರು ವರ್ಷದೊಳಗೆ ಹೈಕೋರ್ಟ್ ಜಡ್ಜ್ ಮಾಡುವ ಭರವಸೆಯೊಂದಿಗೆ ನೀಡಲಾಯಿತು. ಆ ಸಮಯದಲ್ಲಿ

ತಿಂಗಳೊಂದಕ್ಕೆ ನನಗೆ ಕನಿಷ್ಟ ನೂರು ರೂಪಾಯಿಗಳ ಆದಾಯವೂ ಇರಲಿಲ್ಲ. ಮುಂಬೈಯಲ್ಲಿ ವಿಶೇಷವಾಗಿ ತೀರ ಬಡವರಿಗೆ ಕಟ್ಟಿರುತ್ತಿದ್ದ ಗುಡಿಸಲಿನಲ್ಲಿ ನಾನು ವಾಸಿಸುತ್ತಿದ್ದೆ. ನಾನು ಈ ಹುದ್ದೆಯ ಮೂಲಕ ಒಳ್ಳೆಯ ವೇತನ ಪಡೆದು ನನ್ನ ಹಣದ ಅವಶ್ಯಕತೆ ಪೂರೈಸಿಕೊಂಡು ಜೀವನದ ಉದ್ದಕ್ಕೂ ಸಿರಿವಂತನಾಗಿರಬಹುದಾಗಿದ್ದರೂ ಅದನ್ನು ಬಿಟ್ಟುಬಿಟ್ಟೆ. ಏಕೆಂದರೆ ಈ ಹುದ್ದೆಯನ್ನು ಒಪ್ಪಿಕೊಂಡರೆ, ನನ್ನ ಜೀವನದ ಉದ್ದೇಶ ಸಾಧನೆಗೆ ತುಂಬಾ ತೊಡಕುಂಟಾಗುತ್ತಿತ್ತು. ನಾನು ನನ್ನ ಜನರ ಒಳಿತಿಗಾಗಿ, ಉದ್ಧಾರಕ್ಕಾಗಿ ಏನನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ".

ಜೀವನ ನಿರ್ವಹಣೆಗಾಗಿ ಸಣ್ಣಪುಟ್ಟ ಸರ್ಕಾರಿ ಕೆಲಸದಿಂದಿಡಿದು ಅವರವರ ವಿದ್ಯಾರ್ಹತೆಗೆ ತಕ್ಕಂತೆ ಉನ್ನತ ಹುದ್ದೆಗಳವರೆಗೆ ಒಳ್ಳೊಳ್ಳೆ ಸಂಬಳ ಸಿಗುವ ಸರ್ಕಾರಿ ಹುದ್ದೆಗಳಿಗೆ ಹೋಗಲು ಸದಾ ಸತತ ಪ್ರಯತ್ನದಲ್ಲಿ ತೊಡಗುವ, ಆ ನಿಟ್ಟಿನಲ್ಲಿ ಯಶಸ್ವಿಯು ಆಗುವ ಸಹಸ್ರ ಸಹಸ್ರ ದಲಿತ ವಿದ್ಯಾವಂತ ಅಧಿಕಾರಿವರ್ಗ ಇಂದು ನಮ್ಮಮುಂದಿದೆ. ಈ ಸಮುದಾಯ ಬಾಬಾಸಾಹೇಬರ ಕಾಲದಲ್ಲಿದ್ದಂತೆ ಇರದೆ ಇಂದು ಬೇರೆ ಬೇರೆ ವಿಭಿನ್ನ ಸ್ಥಿತಿಯಲ್ಲಿದೆ. ಆದರೆ ಎಷ್ಟು ಜನ ದಲಿತ ವಿದ್ಯಾವಂತ ಅಧಿಕಾರಿಗಳು ತಮ್ಮ ಸಮುದಾಯದ ಏಳಿಗೆಗೆ ದುಡಿಯುವ ಸಲುವಾಗಿ ತಮ್ಮ ಬದುಕನ್ನು ತ್ಯಾಗ ಮಾಡಿದ್ದಾರೆ ಎಂದು ನೋಡಿದರೆ ಹಲವು ಪ್ರಶ್ನೆಗಳು ಎದುರಾಗುತ್ತವೆ. ಬಾಬಾಸಾಹೇಬರಿಗೆ ಇಡೀ ದೇಶದ ತನ್ನ ಸಮುದಾಯದ ವಿಮೋಚನೆಯ ಬಗ್ಗೆ, ಹಕ್ಕು ಬಾಧ್ಯತೆಯ ರಕ್ಷಣೆಯ ಬಗ್ಗೆ ಇದ್ದ ಕಳಕಳಿ ಭೂಮಿತೂಕದ್ದು. ಆ ರೀತಿ ಅವರು ತಮ್ಮನ್ನು ಅರ್ಪಿಸಿಕೊಂಡಿದ್ದಕ್ಕೆ ಅಷ್ಟೇ ಭೂಮಿತೂಕದ ಬೆಲೆ ಮತ್ತು ಗೌರವವಿದೆ. ಆದರೆ ಎಷ್ಟುಜನ ಅಧಿಕಾರಿಗಳಿಗೆ ಅಂಬೇಡ್ಕರರ ಈ ತ್ಯಾಗದ ಅರಿವಿದೆ? ದೇಶದ ಮತ್ತು ಸಮುದಾಯದ ಹಿತಕ್ಕಾಗಿ ಬಾಬಾಸಾಹೇಬರು ಮಾಡಿದ ತ್ಯಾಗ ಅಕ್ಷರಸಹ ಸಾರ್ಥಕವಾದದ್ದು.

ಇಂದು ವಿದ್ಯಾವಂತ ದಲಿತ ಅಧಿಕಾರಿ ವರ್ಗದವರು ತಮ್ಮ ಸಮುದಾಯದ ಏಳಿಗೆಗೆ ಕಿಂಚಿತ್ತಾದರೂ ಗಮನ ಕೊಡುವ ಮನಸ್ಥಿತಿ ಇದ್ದರೆ ಸಾಕು. ಬಾಬಾಸಾಹೇಬರು ದಲಿತ ಅಧಿಕಾರಿ ವರ್ಗದವರಿಂದ ಬಯಸಿದ್ದು ಅಷ್ಟನ್ನು ಮಾತ್ರ. ಹಾಗೇ ದಲಿತ ಪರವಾದ ನಿಲವು ತಳೆಯುವುದೇ ಬಾಬಾಸಾಹೇಬರ ಹೋರಾಟದ ರಥವನ್ನು ಎಳೆಯುವ ಕ್ರಿಯೆ. ಪ್ರತಿಯೊಬ್ಬ ದಲಿತ ವಿದ್ಯಾವಂತ ಅಧಿಕಾರಿ ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಹುದ್ದೆಯನ್ನು ನಿರ್ವಹಿಸುತ್ತಿರಲಿ ಆ ಹುದ್ದೆಗೆ ಹತ್ತಿರದಲ್ಲಿರುವ ದಲಿತರು ಮತ್ತು ದಲಿತೇತರರಿಗೂ ನೆರವಾಗುವುದು ಡಾ. ಅಂಬೇಡ್ಕರ್‌ರ ತ್ಯಾಗಕ್ಕೆ ನಾವು ಸಲ್ಲಿಸಬಹುದಾದ ಗೌರವ ಮತ್ತು ನಾವು ತೆರಬೇಕಾದ ಬೆಲೆಯಾಗಿದೆ. ಇಂದು ರಾಜ್ಯ ಮತ್ತು ದೇಶದಲ್ಲಿ ದಲಿತ ಚಳುವಳಿ, ಸಂಘಟನೆಗಳು ಏನೆಲ್ಲಾ ಆಗಿದ್ದರೂ ದಲಿತ

ವಿದ್ಯಾವಂತ ಅಧಿಕಾರಿಗಳು ಬಾಬಾಸಾಹೇಬರು ಹೊಂದಿದ್ದಂತೆ ದಲಿತಪರ ಕಾಳಜಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿರುವುದು ನಿಜ. ಬಾಬಾಸಾಹೇಬರ ದಲಿತಪರ ಸಂಗತಿಗಳು ಗೊತ್ತಿರಬಹುದು, ಗೊತ್ತಿಲ್ಲದಿರಬಹುದು. ಆದರೆ ತಮ್ಮತಮ್ಮ ವ್ಯಾಪ್ತಿಯಲ್ಲಿ ದಲಿತಪರ ಕೆಲಸ ಮಾಡುತ್ತಿರುವ ಉದಾಹರಣೆಗಳಿವೆ. ಖಂಡಿತ ಅಧಿಕಾರಿಗಳು ಹೀಗೆ ತಮ್ಮನ್ನು ಸಮುದಾಯ ಮುಖಿಮಾಡಿಕೊಳ್ಳಬೇಕು. ಏಕೆಂದರೆ ಸಾಮಾನ್ಯ ಜನರಿಗಿಲ್ಲದ ಎಲ್ಲಾ ಸಾಮರ್ಥ್ಯ ಅಧಿಕಾರಿಗಳಿರುತ್ತದೆ. ಅವರಿಗೆ ತಮ್ಮ ಹುದ್ದೆಯಿಂದಾಗಿ ಸಾಮಾಜಿಕ ಸ್ಥಾನಮಾನ, ಹಣ, ಅಧಿಕಾರ, ಸಮಯ ಎಲ್ಲವೂ ಇರುತ್ತದೆ.

ಆದರೆ ಅಧಿಕಾರಿ ವರ್ಗಕ್ಕೆ ಸಮುದಾಯಪರ ಕೆಲಸ ಮಾಡಲು ದೊಡ್ಡ ತೊಡಕಾಗಿರುವುದು ಪಕ್ಷ ರಾಜಕಾರಣ ಮತ್ತು ಪಕ್ಷ ರಾಜಕಾರಣಿಗಳು. ಇದರಲ್ಲಿ ದಲಿತ ರಾಜಕಾರಣಿಗಳು ಮತ್ತು ದಲಿತೇತರ ರಾಜಕಾರಣಿಗಳು ಸೇರಿರುತ್ತಾರೆ. ಡಾ. ಅಂಬೇಡ್ಕರ್ ಅವರು ದಲಿತರ, ಶೋಷಿತರ ವಿಮೋಚನೆ ಇರುವುದು ರಾಜಕೀಯ ಅಧಿಕಾರ ಪಡೆಯುವುದರಲ್ಲಿದೆ ಎಂಬುದನ್ನು ಪ್ರತಿಪಾದಿಸಿದ್ದಾರೆ. ಆ ನಿಟ್ಟಿನಲ್ಲಿ ದಲಿತರು, ಶೋಷಿತರು ಪ್ರಯತ್ನ ನಡೆಸುವುದು ಸರಿ. ಅದು ಬೇರೆ ಚರ್ಚೆ. ಆದರೆ ಪ್ರಸುತ ಇಂದಿನ ಎಲ್ಲಾ ಸನ್ನಿವೇಶಗಳು, ಪರಿಸ್ಥಿತಿಗಳ ನಡುವೆ ದಲಿತ ಅಧಿಕಾರಿಗಳ ದಲಿತಪರ ಕಾಳಜಿಗೆ 'ರಾಜಕಾರಣ' ತೊಡಕಾಗಿದೆ. ಇಂದು ದಲಿತ ಹಾಗೂ ಶೋಷಿತರ ಚಳುವಳಿ, ಸಂಘಟನೆ ಮತ್ತು ಅಧಿಕಾರಿ ವರ್ಗಗಳನ್ನು ರಾಜಕಾರಣ ನುಂಗಿಹಾಕುತ್ತಿದೆ. ಇಂದು ಯಾವನೊಬ್ಬ ಅಧಿಕಾರಿಯಾಗಲಿ, ಗ್ರೂಪ್-ಡಿ ನೌಕರನಿಂದ ಸರ್ಕಾರದ ಮುಖ್ಯಕಾರ್ಯದರ್ಶಿವರೆಗೆ – ಪ್ರತಿಯೊಬ್ಬನೂ ಯಾವುದಾದರೊಂದು ಪಕ್ಷಕ್ಕೆ ಅಧೀನನಾಗಿರುತ್ತಾನೆ. ಆಗಿರಲೇ ಬೇಕು. ಅದು ಒಂದು ಅರ್ಥದಲ್ಲಿ ಆತನ ಸಮುದಾಯ ಪರ ನಿಲುವಿಗೆ ಪೂರಕವೂ ಆಗಿದ್ದು – ಆತನ ಅನಿವಾರ್ಯತೆ ಕೂಡ ಆಗಿರಬಹುದು? ಆದರೆ ಅದು ಬೇರೆ. ಆದರೆ ಇಂತಹ ಬೆಳವಣಿಗೆಗಳು ಇತರೆ ಪಕ್ಷ ಮತ್ತು ರಾಜಕಾರಣಿಗಳ ಅಸ್ತಿತ್ವಕ್ಕೆ ತೊಡಕಾಗುವುದರಿಂದಾಗಿ ಅವರಿಂದ ಎದುರಾಗುವ ಸಮಸ್ಯೆಗಳಿದೆಯಲ್ಲ ಅದು ದಲಿತ ಅಧಿಕಾರಿಗಳಿಗೆ ದೊಡ್ಡ ಸಮಸ್ಯೆ. ಬಾಬಾಸಾಹೇಬರ ನಂತರ ದಲಿತ ವಿಮೋಚನೆ ಅಥವ ದಲಿತ ಅಭಿವೃದ್ಧಿ ಅನ್ನುವಂತದ್ದು ಗೊಂದಲಕ್ಕೀಡಾಗಿದೆ. ದಲಿತ ವಿಮೋಚನೆ ಮಾರ್ಗ ಮತ್ತು ವಿಮೋಚನಾ ನಾಯಕತ್ವಗಳೂ ಕೂಡ ಗೊಂದಲಕ್ಕೊಳಗಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಬಾಬಾಸಾಹೇಬರ ಹೋರಾಟದ ಮುಂದುವರಿಕೆಯ ವಾರಸುದಾರರಾದ ದಲಿತ ವಿದ್ಯಾವಂತ ಅಧಿಕಾರಿ ವರ್ಗ ತಮ್ಮ ತಮ್ಮ ಹಿತಾಸಕ್ತಿಗನುಗುಣವಾಗಿ ನಡೆದುಕೊಳ್ಳುವಂತಾಗಿದೆ. ದಲಿತ ಅಧಿಕಾರಿವರ್ಗ ದಲಿತ ಹಿತ ಚಿಂತನೆಗೆ ಬದಲು ರಾಜಕೀಯ ಪ್ರೇರಿತವಾಗಿ ವರ್ತಿಸಬೇಕಾಗಿದೆ.

ದಲಿತ ವಿಮೋಚನೆ, ದಲಿತ ಕಾಳಜಿ ಎಂಬುದು ಇಂದು ಯಾವ ದಲಿತ ನಾಯಕತ್ವವನ್ನು ನೆಚ್ಚಿಕೊಳ್ಳಬೇಕು ಎಂಬುದರಲ್ಲೂ ಗೊಂದಲಗಳಿವೆ. ಒಂದು ಕಡೆ ದಲಿತ ಬುದ್ಧಿಜೀವಿಗಳ ನಾಯಕತ್ವವಿದೆ. ಒಂದು ಕಡೆ ದಲಿತ ಪ್ರಧಾನ ಪಕ್ಷರಾಜಕೀಯ ನಾಯಕತ್ವವಿದೆ. ಒಂದು ಕಡೆ ದಲಿತೇತರ ಪಕ್ಷದೊಳಗಿನ ದಲಿತ ನಾಯಕತ್ವವಿದೆ. ಒಂದು ಕಡೆ ಈ ಮೂರು ನಾಯಕತ್ವದ ಜೊತೆಗೂ ನಂಟಿರುವ ದಲಿತ ಅಧಿಕಾರಿ ವರ್ಗದ ನಾಯಕತ್ವವಿದೆ. ಈ ನಾಲ್ಕು ವಿಧದ ನಾಯಕತ್ವದಲ್ಲಿ ಒಬ್ಬರು ಮತ್ತೊಬ್ಬರಿಗೆ ವಿರುದ್ಧವಾಗಿದ್ದಾರೆ. ಇವರಲ್ಲಿ ದಲಿತೇತರ ಪಕ್ಷದೊಳಗಿನ ದಲಿತರಾಜಕಾರಣಿಗಳ ನಾಯಕತ್ವದ ಮೇಲಾಟವೆ ಮೇಲುಗೈಸಾಧಿಸಿದೆ. ಈ ನಾಯಕತ್ವ ದಲಿತ ಅಧಿಕಾರಿ ವರ್ಗವನ್ನು, ದಲಿತ ಬುದ್ಧಿಜೀವಿಗಳನ್ನು, ವಿದ್ಯಾವಂತರನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತಾ, ಅವರ ದಲಿತ ವಿಮೋಚನೆಯ ಕಳಕಳಿಯ ಕನಸುಗಳನ್ನು ಕೊಲ್ಲುತ್ತಿದೆ. ಯಾವುದೇ ದಲಿತ ಅಧಿಕಾರಿ ತನ್ನಷ್ಟಕ್ಕೆ ತಾನು ದಲಿತ ಪರವಾಗಿ ಕೆಲಸ ಮಾಡಲು 'ರಾಜಕಾರಣ' ಬಿಡದ ಪರಿಸ್ಥಿತಿ ಇದೆ. ದಲಿತೇತರ ರಾಜಕಾರಣ ಕೂಡ ದಲಿತ ಅಧಿಕಾರಿಗಳನ್ನು ಅನುಕೂಲಕ್ಕೆ ಬಳಸಿಕೊಳ್ಳುತ್ತಿರುವುದರಿಂದ ದಲಿತ ಅಧಿಕಾರಿ ವರ್ಗ ಬಾಬಾಸಾಹೇಬರ ಸಮುದಾಯನಿಷ್ಠ ಮಾರ್ಗದಲ್ಲಿ ನಡೆಯಲಾಗದ ಸ್ಥಿತಿಗೆ ಒಳಗಾಗುತ್ತಿದೆ. ಈ ನಡುವೆ ದಲಿತ ಪ್ರಧಾನ ಪಕ್ಷರಾಜಕೀಯ ನಾಯಕತ್ವ, ದಲಿತ ಬುದ್ಧಿಜೀವಿನಾಯಕತ್ವ, ದಲಿತೇತರ ಪಕ್ಷದೊಳಗಿನ ದಲಿತ ನಾಯಕತ್ವ, ದಲಿತ ಅಧಿಕಾರಿವರ್ಗದ ನಾಯಕತ್ವಗಳಲ್ಲಿ ಸಮನ್ವಯತೆಯ ಕೊರತೆ ಇದೆ. ಪರಸ್ಪರ ವಿಚಾರಗಳ ಗೊಂದಲಗಳಿವೆ.

ಕನಸುಗಳನ್ನು ಕೊಂದುಕೊಂಡವರು

1942 ಡಿಸೆಂಬರ್‌ನಲ್ಲಿ ಕೆನಡಾದ ಕ್ಯುಜಿಕ್‌ನ 'ಮೌಂಟ್ ಟ್ರಾಂಬ್‌ಲಾಂಟ್'ನಲ್ಲಿ ಫೆಸಿಫಿಕ್ ರಿಲೇಷನ್ಸ್ ಅಂತರರಾಷ್ಟ್ರೀಯ ಸಮ್ಮೇಳನ ನಡೆಯುತ್ತದೆ. ಈ ಸಮ್ಮೇಳದಲ್ಲಿ ಡಾ. ಅಂಬೇಡ್ಕರ್ 'ಅಸ್ಪೃಶ್ಯರ ವಿಮೋಚನೆ' ಕುರಿತು ಒಂದು ಗಂಭೀರವಾದ ಪ್ರಬಂಧ ಮಂಡಿಸಿ ವಿಶ್ವದ ಗಮನ ಸೆಳೆಯುವ ಪ್ರಯತ್ನ ಮಾಡುತ್ತಾರೆ. ಡಾ. ಅಂಬೇಡ್ಕರ್ 'ಭಾರತದಲ್ಲಿ ಅಸ್ಪೃಶ್ಯರ ವಿಮೋಚನಾ ಚಳುವಳಿಯು ಮುಂಚೂಣಿಗೆ ಬರುವ ಮೊದಲೇ ದಲಿತ ಚಳುವಳಿ ಎಂಬುದು ರೂಪುಗೊಳ್ಳುತ್ತಾ ಬರುತ್ತಿತ್ತು. ದಲಿತರ ವಿಮೋಚನೆಗೆ ಮಾರ್ಗಗಳೇನು' ಎಂಬ ವಿಷಯದ ಬಗ್ಗೆ ಅಂದಿನ ದಲಿತ ಸಮುದಾಯಕ್ಕೆ ತನ್ನದೇ ಆದ ನಿಲುವು ಇತ್ತು. ಡಾ. ಅಂಬೇಡ್ಕರ್ 1942ರಲ್ಲಿ ಮಂಡಿಸಿದ ಪ್ರಬಂಧದಲ್ಲಿ ಅದನ್ನು ಉಲ್ಲೇಖಿಸಿದ್ದಾರೆ.

1942 ಜುಲೈ 18, 19 ರಂದು ನಾಗಪುರದಲ್ಲಿ ನಡೆದ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳ ಕೆಲ ಅಂಶಗಳು ಈ ರೀತಿ ಇವೆ.

‘1. ಅಸ್ಪೃಶ್ಯರು ಹಿಂದುಗಳಿಗಿಂತ ಬೇರೆ ಜನಾಂಗವೆಂಬ ಸತ್ಯವನ್ನು ಒಪ್ಪಿ ಸ್ವತಂತ್ರ್ಯ ಭಾರತದ ನಿರ್ಮಾಣದಲ್ಲಿ ಅಸ್ಪೃಶ್ಯರು ಒಂದು ಬಹುಮುಖ್ಯ ಅಂಗವೆಂದು ಘೋಷಿಸಬೇಕು.

2. ಎಲ್ಲಾ ಪ್ರಾಂತೀಯ ಸರ್ಕಾರಗಳ ಬಜೆಟ್ಟಿನಲ್ಲಿ ಅಸ್ಪೃಶ್ಯ ಮಕ್ಕಳ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಕ್ಕೆ ನಿರ್ದಿಷ್ಟ ಹಣವನ್ನು ಪ್ರತೀವರ್ಷ ಮೀಸಲಿಡಬೇಕು.

3. ಅಸ್ಪೃಶ್ಯರ ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರ, ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಆಡಳಿತ ಇಲಾಖೆಗಳಲ್ಲಿ ಪ್ರಾತಿನಿಧ್ಯ ಇರುವಂತೆ ಕಾನೂನು ಮಾಡಬೇಕು.

4. ಶಾಸನ ಸಭೆಗಳಲ್ಲಿ, ಸ್ಥಳೀಯ ಮಂಡಳಿಗಳಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧ್ಯವಿರಬೇಕು.

5. ಅಸ್ಪೃಶ್ಯ ಪ್ರತಿನಿಧಿಗಳು ಪ್ರತ್ಯೇಕ ಚುನಾಯಕ ಪದ್ಧತಿಯಿಂದಲೇ ಆಯ್ಕೆಯಾಗಬೇಕು.

6. ಅಸ್ಪೃಶ್ಯರು ಹಿಂದೂಗಳಿಂದ ಮುಕ್ತವಾದ, ಸ್ವತಂತ್ರವಾದ ಹಳ್ಳಿಗಳಿಗೆ ಸ್ಥಳಾಂತರವಾಗಬೇಕು. ಅಂದರೆ ಪ್ರತ್ಯೇಕ ಹಳ್ಳಿಗಳು ಸ್ಥಾಪನೆಯಾಗಬೇಕು’.

1942ರ ಪರಿಶಿಷ್ಟ ಜಾತಿಗಳ ಒಕ್ಕೂಟದ ಸಮ್ಮೇಳನದ ಈ ನಿರ್ಣಯಗಳನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಅಂದಿನ ದಲಿತ ಸಮುದಾಯ ಎಷ್ಟು ಸ್ವಾಭಿಮಾನದಿಂದಿತ್ತು. ಎಷ್ಟು ಸ್ಪಷ್ಟವಾಗಿ ತಮ್ಮ ವಿಮೋಚನೆಗೆ ಚಿಂತಿಸಿತ್ತು ಎಂಬುದನ್ನು ನೋಡಿದರೆ ದಿಗಿಲಾಗುತ್ತದೆ. ಎಷ್ಟೊಂದು ಪ್ರಬುದ್ಧರಾಗಿ ಯೋಚಿಸಿದ್ದಾರೆ ಎಂದು ಹೆಮ್ಮೆಯಾಗುತ್ತದೆ. ಹೀಗೆಲ್ಲಾ ಯೋಚಿಸಿದ್ದ ದಲಿತರು ಇಷ್ಟೊತ್ತಿಗಾಗಲೇ ಬಿಡುಗಡೆ ಹೊಂದಿ ತಮ್ಮದೇ ಆದ ಸ್ವಚ್ಛಂದ ಲೋಕವನ್ನು, ಬದುಕನ್ನು ಕಟ್ಟಿಕೊಂಡು ಬಾಳಬೇಕಿತ್ತು. ಆದರೆ ಇಂದು ಪರಿಸ್ಥಿತಿ ತೀರ ಕೆಟ್ಟು ತದ್ವಿರುದ್ಧವಾಗಿದೆ. ದಲಿತರಿಗೆ ತಮ್ಮ ಸ್ಪಷ್ಟ ವಿಮೋಚನಾ ಮಾರ್ಗವೆ ಮರೆತುಹೋಗಿದೆ. ನಾವು ಏತಕ್ಕಾಗಿ ಹೋರಾಡಬೇಕು. ದಲಿತರ ನಿಲುವು ಏನಾಗಿರಬೇಕೆಂಬುದೇ ತಿಳಿಯದಾಗಿದೆ. ದಲಿತ ನಾಯಕರಿಂದಾಲಿ, ಅಧಿಕಾರಿಗಳಿಂದಾಗಲಿ ನಾವು ಏನನ್ನು ಬಯಸಬೇಕು? ಸಮುದಾಯದ ಬಿಡುಗಡೆಗೆ ಅವರಿಂದ ಏನನ್ನು ನಿರೀಕ್ಷಿಸಬೇಕೆಂಬುದೆ ದಲಿತರಿಗೆ ಮರೆತುಹೋಗಿದೆ. ಕಾರಣ ಮುಖ್ಯವಾಗಿ ತಮ್ಮ ವಿಮೋಚನಾ ಹೋರಾಟದ ಚರಿತ್ರೆ ಇಂದಿನ ದಲಿತ ಸಮುದಾಯಕ್ಕೆ ಗೊತ್ತೇ ಇಲ್ಲ. ಆದ್ದರಿಂದ ಇಂದಿನ ಸಮುದಾಯ ತೀರ ವೈಯುಕ್ತಿಕವಾದ, ಕ್ಷುಲ್ಲಕವಾದ ನಿರೀಕ್ಷೆಗಳನ್ನು ಹೊಂದಿದೆ. ಸಾಲದ್ದಕ್ಕೆ ಇಂದಿನ ದಲಿತ-ದಲಿತೇತರ ರಾಜಕಾರಣ ದಲಿತ ಸಮುದಾಯದ ಕನಸುಗಳನ್ನು, ಸರಿಯಾದ ನಿರೀಕ್ಷೆಗಳನ್ನು ಕೊಂದುಹಾಕಿದೆ. ದಿಕ್ಕುತಪ್ಪಿಸಿದೆ.

ಡಾ. ಅಂಬೇಡ್ಕರರ ಹಾಗೂ ದಲಿತ ಸಾಂಸ್ಕೃತಿಕ ನಾಯಕರ ದಲಿತ ವಿಮೋಚನಾ ಚಳುವಳಿ ಇಂದು ರೋಚಕ ಕಥೆಗಳಾಗಿ, ಕಾವ್ಯಗಳಾಗಿ, ಪುರಾಣಗಳಾಗಿಬಿಟ್ಟಿವೆ.

ಅವುಗಳನ್ನೆಲ್ಲಾ ಆಸಕ್ತಿಯಾದ ಕುತೂಹಲದಿಂದ, ಭಕ್ತಿಗೌರವಗಳಿಂದ ದಲಿತ ಸಮುದಾಯ ಕೇಳಿಸಿಕೊಳ್ಳುತ್ತದೆ. ಆದರೆ ಅವನ್ನು ಕ್ರಿಯಾರೂಪಕ್ಕೆ ಇಳಿಸಿ 1942ರ ಸಂದರ್ಭದಲ್ಲಿ ದಲಿತ ಸಮುದಾಯ ಭಾರತ ಸರ್ಕಾರದ ಮುಂದೆ ಮಂಡಿಸಿದ ವಿಮೋಚನಾ ಯೋಜನೆಗಳಂತೆ ಇಂದಿನ ದಲಿತರು ಮಂಡಿಸಲಾರದ ಸ್ಥಿತಿಗೆ ತಲುಪಿದ್ದಾರೆ. ಇಂದು ಸರ್ಕಾರ ಇರಲಿ, ಪಕ್ಷ ಇರಲಿ, ವ್ಯಕ್ತಿ ಇರಲಿ ಯಾವುದೇ ಕಡೆಯಿಂದ ಇರಲಿ ದಲಿತ ಸಮುದಾಯ ತೀರಾ ವೈಯುಕ್ತಿಕವಾದ, ಸ್ವಾರ್ಥ ಪರವಾದ ತಾತ್ಕಾಲಿಕ, ಕ್ಷಣಿಕವಾದ ಸಹಾಯವನ್ನು, ಪರಿಹಾರವನ್ನು ನಿರೀಕ್ಷಿಸುತ್ತದೆ. ಒಂದು ಗ್ರಾಮಕ್ಕೆ ಸಮುದಾಯಭವನ ಅಥವ ರುದ್ರಭೂಮಿ, ಇಲ್ಲವೆ ತೀರ ವೈಯುಕ್ತಿಕವಾಗಿ ಒಂದು ಕುಟುಂಬ, ಒಬ್ಬ ವ್ಯಕ್ತಿ ತನ್ನ ಆರ್ಥಿಕ ಸಮಸ್ಯೆ ನಿವಾರಣೆಗೆ ದಲಿತ ಅಥವಾ ದಲಿತೇತರರಿಂದ ಸಹಾಯ ನಿರೀಕ್ಷಿಸುತ್ತಾನೆ. ಚುನಾವಣೆಗೆ ಸಂದರ್ಭದಲ್ಲಿ ಊಟ ತಿಂಡಿಗೆ, ಹೆಂಡ ಬಾಡಿಗೆ – ನೂರು, ಸಾವಿರ, ಲಕ್ಷಕ್ಕೆ ಮಾರಾಟವಾಗುವ ದಲಿತರು ಸಮುದಾಯದ ಹಿತ, ವಿಮೋಚನೆ ಎಂಬುದನ್ನೆಲ್ಲಾ ತಮಗೆ ತಾವೆ ಕೊಂದುಕೊಂಡಿದ್ದಾರೆ, ಮಾರಾಟಕ್ಕಿಟ್ಟಿದ್ದಾರೆ.

ಯಾವುದಾದರು ಊರಿನ ದಲಿತ ಕೇರಿಗೆ ಒಬ್ಬ ದಲಿತ ಅಥವ ದಲಿತೇತರ ಅಧಿಕಾರಿ ಅಥವ ಚಳುವಳಿಯ ಕಾರ್ಯಕರ್ತ ಹೋದರೆ, ರಾಜಕಾರಣಿ ಹೋದರೆ ದಲಿತರು ವ್ಯಕ್ತಿಗತವಾದ ಇಲ್ಲವೆ ಗ್ರಾಮ ಪರವಾದ ಸಮಸ್ಯೆಗಳ ಪಟ್ಟಿಮಾಡಿ ಮುಂದಿಡುತ್ತಾ ಹೋಗುತ್ತಾರೆ. ದೌರ್ಜನ್ಯ, ಜಾತಿಯತೆ, ಬಡತನ ಮೊದಲಾದ ವಿಷಯಗಳನ್ನು ಹೇಳುತ್ತಾರೆ. ಅಧಿಕಾರಿ ವರ್ಗದವರನ್ನು ತಮ್ಮಕೈಲಾದ ಇಲ್ಲವೆ ಇಲಾಖೆ ಪರವಾದ ಸೌಲಭ್ಯಗಳನ್ನು ಕೇಳುತ್ತಾರೆ. ಅಂದರೆ ತೀರ ತಾತ್ಕಾಲಿಕವಾದ, ತ್ವರಿತವಾದ, ಸದ್ಯದ ತಮ್ಮ ತಾಪತ್ರಯಗಳೇ ಅವರಿಗೆ ದೊಡ್ಡ ಸಮಸ್ಯೆಯಾಗಿ ಕಾಣುತ್ತವೆ. ಅವುಗಳಿಂದ ಬಿಡಿಸಿಕೊಳ್ಳದ ಹೊರತು ಅವರ ವಿಮೋಚನಾ ಮಾರ್ಗದ ಕನಸು ಕಾಣಲು ಅವರಿಗೆ ಅಸಾಧ್ಯ.

ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಶ್ರೀಮಹದೇಶ್ವರ ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ



ದಿಕ್ಕುದೆಸೆಯ ಹುಡುಕುತ್ತಾ.....

ಡಾ. ಎಸ್. ನರೇಂದ್ರಕುಮಾರ್

ಒಮ್ಮೆ ತುಕಾರಾಮ್ ಸರ್ ಜೊತೆ ಎಂಭತ್ತೈದರ ಹರೆಯದ ಸಿದ್ಧಬಸವಯ್ಯನವರನ್ನು ಸಂದರ್ಶನ ಮಾಡಲು ಹೋಗಿದ್ದಾಗ, ಅವರೊಂದು ಘಟನೆ ಹೇಳಿದ್ದು ಕಾಡಿತು. ಈ ಹಿರೀಕರು ಹೇಳಿದಂತೆ; ಭರಣಯ್ಯ ಅವರು ಯಾವುದೇ ಜಾತಿಯ ಅಸಹಾಯಕರ

ಬಗ್ಗೆ ಮರುಗುತಿದ್ದವರು. ಸಾಧ್ಯವಾದಷ್ಟು ತಮ್ಮ ಪರಿಧಿಯಲ್ಲಿ ಅಂತವರಿಗೊಂದು ನೆಲೆಯನ್ನು... ಒದಗಿಸಿಕೊಡಲು ತಕ್ಷಣವೇ ಕಾರ್ಯ ರೂಪಕ್ಕಿಳಿಯುತಿದ್ದವರು. ಇಂತಹ ಭರಣಯ್ಯನವರನ್ನು ನೆನೆಯುತ್ತ ಒಮ್ಮೆ ಯಾರೋ ಅಧಿಕಾರಿಯೊಬ್ಬರು "ನೀನು ಯಾವ ಕೈ" ಎಂದಾಗ ಒಂದು ಕ್ಷಣವೂ ಭರಣಯ್ಯ ಅವರು ತಬ್ಬಿಬ್ಬಾಗದೆ ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ, ಕೇಳಿದ ಅಧಿಕಾರಿಯ ಕಣ್ಣಲ್ಲಿ ಕಣ್ಣಿಟ್ಟು "ನಾನು ಎರಡೂ ಕೈ" ಎಂದರಂತೆ. ಇದನ್ನು ಸಿದ್ಧಬಸವಯ್ಯನವರು ಹೇಳುವಾಗ ಅವರ ಮನಸ್ಸು, ವ್ಯಕ್ತಿತ್ವ ಮತ್ತು ಮುಖಭಾವದಲ್ಲಿ ಸಂಭ್ರಮ ಕ್ಷಣಕಾಲ ಮಿನುಗಿ, ಈಗ ಯಾವ ಸ್ಥಿತಿ ಇದೆ? ಎಂದು ಅಣುಕಿಸಿದಂತಾಯ್ತು. ಅವರ ಮನೆಯಿಂದ ಕಾರಲ್ಲಿ ಹಿಂತಿರುಗುವಾಗ ನಾನು ಮತ್ತು ತುಕಾರಾಮ್ ಅವರು ಈ ಘಟನೆಯನ್ನು ಪದೇಪದೇ ಬೇರೆಬೇರೆ ಬಗೆಯಲ್ಲಿ ನೆನಪಿಸಿಕೊಂಡೆವು. ಬಹುಶಃ ಅಕ್ಷರ ಕಲಿತ ಅಸ್ಪೃಶ್ಯ ಸಮುದಾಯದ ಮೊದಲ ತಲೆಮಾರಿನವರಲ್ಲಿ ಈ ಬಗೆಯ ಎಡ-ಬಲದ ಭಿನ್ನಭೇದಗಳು ಇದ್ದುದನ್ನು ಗುರುತಿಸುವುದು ಕಷ್ಟವಾಗುತ್ತದೆ.

ಎಪ್ಪತ್ತರ ದಶಕದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ತಾನು ತರುತ್ತಿದ್ದ 'ಪಂಚಮ' ಪತ್ರಿಕೆಯಲ್ಲಿ ಹಾಗೂ ತನ್ನ ಹೋರಾಟದ ಗಳಿಗೆಗಳಲ್ಲಿ ಅಸ್ಪೃಶ್ಯ ಸಮುದಾಯದ ಒಳಜಾತಿ ತಾರತಮ್ಯಗಳನ್ನು ನಾಶಗೊಳಿಸುವ ಹಾಗೂ ಒಗ್ಗೂಡಿಸುವ ಕಾರಣಗಳಿಗಾಗಿ ಅಸ್ಪೃಶ್ಯ ಸಮುದಾಯದ ಯಾರೂ ಕೂಡ ತಮ್ಮ ಉಪಜಾತಿಗಳನ್ನು ನಮೂದಿಸದೆ ಎಲ್ಲರೂ ಆದಿಕರ್ನಾಟಕ ಎಂದೇ ಉಲ್ಲೇಖಿಸಿ ಜಾತಿ ಪ್ರಮಾಣಪತ್ರ ಪಡೆಯಬೇಕೆಂದು ಎಚ್ಚರಿಕೆಯ ಕರೆಗಳನ್ನು ನೀಡಿದ್ದಿದೆ. (ನೀವು ಅಸ್ಪೃಶ್ಯರೆ? ನಿಮ್ಮ ಮಗುವನ್ನು ಶಾಲೆಗೆ ಸೇರಿಸಬೇಕಾಗಿದೆಯೆ? ಹಾಗಾದರೆ ಅಂಬೇಡ್ಕರ್ ಮಾತೊಂದಿದೆ ಕೇಳಿ! ಅಸ್ಪೃಶ್ಯರೆಲ್ಲಾ ಒಂದೇ. ಅದಕ್ಕಾಗಿ 'ಆದಿ ಕರ್ನಾಟಕ' ಎಂದೇ ಎಲ್ಲಾ ಉಪಪಂಗಡದವರೂ ಒಂದೇ ಹೆಸರು ಕೊಡಿ – ಪಂಚಮಾ, ಜೂನ್ 1982, ಸಂಪುಟ 6, ಸಂಚಿಕೆ: 10–11). ಮುಂದುವರೆದು ಅಂತರ್ಜಾತಿಗಳಷ್ಟೆ ಅಲ್ಲದೆ ಉಪಜಾತಿಗಳ ಒಳಗೂ ಅಂತರ್ ಮದುವೆಗಳನ್ನು ನಡೆಸಿದ್ದಿದೆ. 1981ರ ಆಗಸ್ಟ್‌ನಲ್ಲಿ ಕವಿ ಕೆ.ಬಿ. ಸಿದ್ಧಯ್ಯ–ಗಂಗರಾಜಮ್ಮ ಅವರು ಬಾಳಸಂಗಾತಿಗಳಾಗುವ ಮೂಲಕ ಇಂತಹ ಆಂದೋಲನಕ್ಕೂ ನಾಂದಿ ಹಾಡಿದ್ದಿದೆ. ಇಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಹಲವಾರು ಬಣಗಳಾಗಿ ಹೋಳಾಗಿದ್ದರೂ ಕೂಡ ನಿಜವಾದ ಹಾಗೂ ಪ್ರಾಮಾಣಿಕ ಹೋರಾಟಗಾರ ಕಾರ್ಯಕರ್ತರು ಮಾತ್ರ ಇಂದಿಗೂ ತಮ್ಮ ಮನಸ್ಸುಗಳನ್ನು ಕಲುಷಿತಗೊಳಿಸಿಕೊಳ್ಳದೆ ಹೊಲೆಯ–ಮಾದಿಗರು ಕಚ್ಚಾಡುವುದನ್ನು ವಿರೋಧಿಸುತ್ತಾರೆ. ಆರಂಭದಿಂದಲೂ ದಸಂಸದಲ್ಲಿ ದುಡಿದಿರುವ ಹಾಸನದ ಜಯಣ್ಣ ಎಂಬ ಕಾರ್ಯಕರ್ತರು

"ನಾವೇನಾದರೂ ಆಗ ಈ ರೀತಿ ಮಾತನಾಡಿದರೆ ನಮ್ಮ ನಾಯಕರುಗಳು ಹೀಗೆ ಮಾತಾಡುವವರನ್ನು ತುಂಬಾ ಕೆಟ್ಟದಾಗಿ ಬೈಯ್ಯುತ್ತಿದ್ದರು. ನಮಗೆ ಇಂವ ಎಡಗೈ – ಇಂವ ಬಲಗೈ – ಇಂವ ಆ ಕೈ ಇಂವ ಈ ಕೈ ಎಂಬುದು ಬರಲೇ ಇಲ್ಲ. ಈಗಲೂ ಇಲ್ಲ" ಎಂದು ತಮ್ಮ ಪ್ರಾಮಾಣಿಕ ಅನಿಸಿಕೆ ವ್ಯಕ್ತಪಡಿಸಿದರು. ಮೈಸೂರಿನ ಆರ್.ಐ.ಈಗೆ ಯಾವುದೋ ಟ್ರೈನಿಂಗಿಗೆ ಬಂದಿದ್ದ ದೇಸಿ ಹಾಡುಗಾರ ಅಪ್ಪಗೆರೆ ತಿಮ್ಮರಾಜು ಅವರು ಸಿಕ್ಕಿ ತಮ್ಮ ಮಾತುಗಳ ನಡುವೆ "ದಸಂಸ ಆರಂಭದಲ್ಲಿ ಬರ್ತ್ತಲ್ಲ ಹಾಗೇ ಅದು ಮುಂದ್‌ವರಿದಿದ್ರೆ ಇಂದು ಏನಾಗ್ತಿತ್ತೋ... ಆದ್ರೆ ಕೆಲವು ಅನ್ಯಜಾತಿ ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಇದನ್ನು ಎಂದೆಂದೂ ಒಂದಾಗದ ಹಾಗೆ ಒಡೆದು ಬಿಟ್ರು. ಇದಕ್ಕೆ ಕೆಲವು ದಲಿತ ರಾಜಕಾರಣಿಗಳು ಹಾಗೂ ಸ್ವಾರ್ಥ ದಲಿತ ಅಧಿಕಾರಿಗಳು ಕಾರಣಕರ್ತರಾಗಿದ್ದಾರೆ" ಎಂದು ತೀವ್ರ ವಿಷಾದ ವ್ಯಕ್ತಪಡಿಸಿದರು. ಅಸ್ಪೃಶ್ಯ ಸಮುದಾಯದ ಇಂತಹ ದುರಂತವನ್ನೆ "ಹೆಪ್ಪುಗಟ್ಟುತ್ತಿಲ್ಲ ನಮ್ಮ ಮನೆಯ ಕೆನೆ ಹಾಲು" ಎಂದು ಒಂದು ಪದ್ಯವಾಗಿಸಿರುವ ನನ್ನ ಗುರುಗಳಾದ ಡಾ. ಎಂ. ಎಸ್. ಶೇಖರ್ ಅವರು ಅದನ್ನು ವಾಚನ ಮಾಡಿ ಕೆಲಕಾಲ ಈ ವಿಷಯ ಕುರಿತೇ ಗಂಭೀರವಾಗಿ ಚರ್ಚಿಸುವಂತೆ ಮಾಡಿಬಿಟ್ಟರು. ಈ ಪದ್ಯ ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲೂ ಪ್ರಕಟಗೊಂಡಿದೆ.

ಅಂಬೇಡ್ಕರ್ ಅವರು ಬೌದ್ಧಧರ್ಮದತ್ತ ಸಾಮೂಹಿಕವಾಗಿ ನಡೆದ ಐವತ್ತನೇ ವರ್ಷದ ನೆನಪಿನ ಅಂಗವಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಧಮ್ಮದೀಕ್ಷಾ ಸುವರ್ಣ ವರ್ಷಾಚರಣೆ ಸಮಿತಿಯೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ನಮ್ಮ ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರವು 26–11–2006ರಂದು 'ಬುದ್ಧನೆಡೆಗೆ... ಮರಳಿ ಮನೆಗೆ' ಎಂಬ ಬೃಹತ್ ಸಮಾವೇಶವನ್ನು ಹಮ್ಮಿಕೊಂಡಿತ್ತು. ಅದರ ಮುಂದುವರಿಕೆಯಾಗಿ ಜನವರಿ 1, 2009ರಂದು 'ಬುದ್ಧನೆಡೆಗೆ ಮರಳಿ ಮನೆಗೆ' ಸಮಾವೇಶವನ್ನು ದಸಂಸ ನೇತಾರ ಪ್ರೊ. ಬಿ. ಕೃಷ್ಣಪ್ಪನವರ ಸಮಾಧಿ ಇರುವ ಹರಿಹರದಲ್ಲಿ ಹಮ್ಮಿಕೊಂಡಿದ್ದ ಮಾವಳ್ಳಿ ಶಂಕರ್ ಅವರು, ಅಲ್ಲಿಗೆ ಬಂದಿದ್ದ ಭಂತೇಜಿ ಅವರೊಬ್ಬರು ಈ ಕಾರ್ಯಕ್ರಮವನ್ನು ಮುಗಿಸಿ ಇನ್ಯಾವುದೋ ಊರಿನಲ್ಲಿ ಛಲವಾದಿ ಸಂಘಟನೆಯ ಉದ್ಘಾಟನೆಗೆ ಹೋಗುತ್ತಿದ್ದೇನೆಂದಾಗ ತುಂಬಾ ಸಿಟ್ಟಾಗಿ "ಭಂತೇಜಿ... ತಾವು ಸಮುದಾಯಾನ ದಿಕ್‌ತಪ್ಸೋ ಕೆಲ್ಸ ಮಾಡ್ತಾ ಇದ್ದೀರಿ. ನೀವು ಭಂತೇಜಿಯಾಗಿದ್ದೀರಿ ಈ ಕೆಲ್ಸ ಮಾಡ್ಬೇಡಿ. ಹೊಲೆಯರ್ನು ಮಾದಿಗುರ್ನು ಒಂದಾಗ್ಸೊ ಪ್ರಯತ್ನ ಪಡಿ. ನೀವು ಸರಿಯಾಗ್ ಆಲೋಚ್ನೆ ಮಾಡ್ದೆ ಇದ್ರೆ ಅಂಬೇಡ್ಕರ್‌ವಾದಕ್ಕೆ ಅಪಮಾನ ಮಾಡ್ತೀರಿ.

ಅಲ್ದೆ ಬೌದ್ಧಧರ್ಮನೂ ಒಂದೇ ಜಾತಿಗೆ ಕಟ್ಬಾಕ್ತೀರಿ ಅಷ್ಟೆ" ಎಂದು ಎಚ್ಚರಿಸಿದರು. ಮಾವಳ್ಳಿಯವರ ಕಾಳಜಿ ಪ್ರಾಮಾಣಿಕವಾದುದಾಗಿತ್ತು.

ಹಳ್ಳಿಯ ಸಾಮಾನ್ಯ ಕಾರ್ಯಕರ್ತನೊಬ್ಬ ಚಿಕ್ಕಬಳ್ಳಾಪುರದಲ್ಲಿ ನಡೆದ ದಸಂಸಧ ಅಧ್ಯಯನ ಶಿಬಿರವೊಂದರ ಸಂವಾದದಲ್ಲಿ "ಈಗ ನಮ್ ದಲಿತ್ ಜನಾಂಗ್‌ದ ಅಧಿಕಾರಿಗಳ್ನ, ನಮ್ಮ ರಾಜಕಾರ್ಣಿಗಳ್ನ, ನಮ್ಮ ಕೆಲವಿದ್ಯಾವಂತರ ನೆಡವಳಿಕೆಗಳ್ನ ನೋಡುದ್ರೆ ಬೇಸ್ರ ಆಗುತ್ತೆ.. ದುಃಖ ಆಗುತ್ತೆ ಇವರೆಲ್ಲಾ ಒಟ್ಟಾಗಿರೋಕೆ ಏನ್ ಬಂದಿದೆ. ಎಡಗೈ ಬಲಗೈ ಇಬ್ರೂ ಅಣ್ಣಾತಮ್ಮಿಂದ್ರೆ ಅಲ್ವಾ ಸಾ" ಎಂದ. ಆತ ಅನಕ್ಷರಸ್ಥ. ಆದರೆ ಅವನಿಗಿರುವ ವಿವೇಕ ದೊಡ್ಡದು. ಇಂತಹ ವಿಷಯಗಳನ್ನೆ ಕುರಿತು ಬಿಡುಬೀಸಾಗಿ ಒಮ್ಮೆ ಚರ್ಚಿಸುತ್ತಿದ್ದಾಗ ನಮ್ಮ ಕೆ. ಟಿ. ಶಿವಪ್ರಸಾದ್ ಅವರು "ರೀ ಏನ್ರಿ ಇದು. ಎಡಗೈ ಬಲಗೈ ಅಂತಾ ಕಿತ್ತಾಡ್ತಾ ಇವರಿವರೆ ಪರಸ್ಪರ ಜಗ್ಳ ಆಡ್ತಾ ಅವ್ರಲ್ಲ. ಇದು ನಾಚಿಕೆಗೇಡು ಅಲ್ವೇನ್ರಿ. ದಲಿತೇತರ ಜಾತಿಗಳು ಶೋಷ್ಣೆ ಮಾಡ್ತಾರೆ, ಅಪಮಾನ ಮಾಡ್ತಾರೆ, ಮೀಸಲಾತಿ ಕಸಿದ್‌ಕೊಳ್ತಾರೆ ಅಂತ ಯೋಳ್ತೀಕೆ ಇಂತವರಿಗೆ ಯಾವ ನೈತಿಕತೆ ಇರುತ್ತೆ. ಇವೆಲ್ಲಾ ಈಗ್ಲೆ ಹೆಚ್ಚಾಗ್ತಾ ಇರೋದು. ನಾನು ಕಂಡಂಗೆ ದಸಂಸದಲ್ಲಿ ಇದು ಇರ್ಲೆ ಇಲ್ಲ. ಇದಕ್ಕೆ ತಿಳಿಗೇಡಿ ರಾಜಕಾರಣಿಗಳು ಮತ್ತು ಅಧಿಕಾರಿಗಳೇ ಕಾರ್ಣ. ಆದ್ರೂ ನಮ್ ದಲಿತ್ರು ಯೋಚ್ನೆ ಮಾಡ್ಬಾರ್ದೇನ್ರಿ" ಎಂದು ಚಿಂತಾಮಗ್ನರಾದರು.

ನಿಜ, ಅಸ್ಪೃಶ್ಯ ಸಮುದಾಯಗಳು ಈಗೀಗ ಪರಸ್ಪರ ಅನುಮಾನ, ದ್ವೇಷ, ಈರ್ಷೆ ಇಂತಹ ವಿಕಾರಗಳಿಗೆ ಸಿಕ್ಕಿಹಾಕಿಕೊಳ್ಳುತ್ತಿವೆ. ಆದರೆ ಹಿಂದೆ ತಮ್ಮೊಟ್ಟಿಗೆ ಈ ಅಸ್ಪೃಶ್ಯರು ಇತರ ಅಸಹಾಯಕ, ನಿರ್ಗತಿಕ ಹಾಗೂ ದೌರ್ಜನ್ಯಕ್ಕೆ ಒಳಗಾದ ಇನ್ನಿತರ ಸಮುದಾಯಗಳ ದುಃಖದುಮ್ಮಾನಗಳಿಗೂ ತುಡಿಯುತ್ತಿದ್ದರು. ಇದಕ್ಕೆ ಬಹುದೊಡ್ಡ ಉದಾಹರಣೆ ಹುಣಸೆಕೋಟೆಯ ಕುಂಬಾರ ಶೇಷಗಿರಿಯಪ್ಪನ ಕೊಲೆ ಹಾಗು ಆತನ ಮಗಳು ಅನುಸೂಯಮ್ಮಳ ಅತ್ಯಾಚಾರದ ಬಗೆಗೆ ಸ್ಪಂದಿಸಿದ ರೀತಿ. ಈ ಹಿನ್ನೆಲೆಯಲ್ಲಿ "ಕೋಟಿ ಕೋಟಿ ಬಾಧೆಗಳಲ್ಲಿ ಲಕ್ಷಾಂತರ ನೋವುಗಳಲ್ಲಿ ನೀ ಹುಟ್ಟಿ ಬೆಳೆದೆಯಮ್ಮ ನನ್ನ ತಂಗೀ ಅನುಸೂಯಾ" ಎಂದು ಹೋರಾಟದ ಹಾಡೇ ಹುಟ್ಟಿಕೊಂಡಿತು. ಅಲ್ಲದೆ ಅನೇಕ ಭೂ ಹೋರಾಟಗಳಲ್ಲಿ ಅಸ್ಪೃಶ್ಯೇತರರಿಗೂ ಅನುಕೂಲವಾಗಿವೆ. ಆಗ ಇಂತಹ ಘಟನೆಗಳೆಷ್ಟೊ! ಈಗ ಅಂತಹ ತಾಯ್ತನ ಎಲ್ಲಿ ಹೋಯ್ತು? ಅದನ್ನು ಕಟ್ಟಿಕೊಳ್ಳುವ ಬಗೆ ಹೇಗೆ? ಪ್ರಶ್ನೆಗಳು ಬೆಳೆಯುತ್ತಲೇ ಹೋಗುತ್ತವೆ.

ಅಸ್ಪೃಶ್ಯ ಸಮುದಾಯದ ಒಳಗೇ ನಡೆಯುತ್ತಿರುವ ಈ ಬಿಕ್ಕಟ್ಟು ಸುಮ್ಮನಿರದೆ ದ್ವೇಷದ ಮನೋಭಾವನೆಯನ್ನು ಹೆಚ್ಚು ಮಾಡುತ್ತಿದೆ. ಇದೊಂದು ರೋಗವಾಗಿ

ಹಬ್ಬುತ್ತಿರುವುದು ಮಾತ್ರ ಬಹುದೊಡ್ಡ ದುರಂತ. ಇಡೀ ಅಸ್ಪೃಶ್ಯರ ವಿಮೋಚನೆಗಾಗಿ ಹಾತೊರೆದು ಶ್ರಮಿಸಿದ ಬಾಬಾಸಾಹೇಬರ ಕನಸನ್ನು ಭಗ್ನಗೊಳಿಸುವ ಬಗೆ ಇದಾಗಿದೆ. ಚರಿತ್ರೆಯಲ್ಲಿ ಎಲ್ಲರಿಗೂ ಗೊತ್ತಿರುವಂತೆ ಅಂಬೇಡ್ಕರ್ ಅವರು ತಮ್ಮ ಬದುಕಿನ ಕೊನೆತನಕವೂ ಅಸ್ಪೃಶ್ಯರನ್ನು ಒಟ್ಟೊಟ್ಟಿಗೇ ಬಿಡುಗಡೆಗೊಳಿಸುವ; ಅವರಿಗೆ ಹಲವಾರು ಬಗೆಯ ಹಕ್ಕುಗಳನ್ನು ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದರು. ಒಂದಿಷ್ಟು ಅದನ್ನಿಲ್ಲಿ ಮತ್ತೊಮ್ಮೆ ನೆನಪಿಸಿಕೊಳ್ಳುವುದು ಉತ್ತಮ:

ಅಸ್ಪೃಶ್ಯರ ಸಂಘಟನಾತ್ಮಕ ಹೋರಾಟಕ್ಕಾಗಿ ಅಂಬೇಡ್ಕರ್ ಅವರು 1924ರ ಜುಲೈನಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭಾ' ಸ್ಥಾಪಿಸಿದರು. ಇಲ್ಲಿ ಯಾರನ್ನು ಉದ್ದೇಶಿಸಿ ಅಂಬೇಡ್ಕರರು ಬಹಿಷ್ಕೃತರೆಂದು ಕರೆದರು? 1926ರ ಮಾರ್ಚ್‌ನಲ್ಲಿ ಮಹಾದ್ ನಗರದ ಚೌಡರ್ ಕೆರೆಯ ನೀರನ್ನು ಮುಟ್ಟುವ ಚಳವಳಿಯನ್ನು ಇದೇ ಸಂಘಟನೆಯ ವತಿಯಿಂದ ಹಮ್ಮಿಕೊಂಡಾಗ ಅಂಬೇಡ್ಕರ್ ಅವರು ಮಹಾರ್ ಮತ್ತು ಚಮ್ಮಾರ ಸಮುದಾಯದ ಜನರನ್ನು ಒಟ್ಟುಗೂಡಿಸಿಕೊಂಡು ಹೋಗಿರುತ್ತಾರೆ. ಅಲ್ಲದೆ ಇದಕ್ಕೆ ಪೂರಕವಾಗಿ 1926ರ ಡಿಸೆಂಬರ್‌ನಲ್ಲಿ ಮಹಾದ್ ನಗರದಲ್ಲಿ ಮತ್ತೊಂದು ಸಮಾವೇಶವನ್ನು ನಡೆಸಿ ಮನುಸ್ಮೃತಿಯನ್ನು ದಹನ ಮಾಡಿದಾಗ ಅವರು ಪ್ರಜ್ಞಾಪೂರ್ವಕವಾಗೆ ಒಬ್ಬ ಚಮ್ಮಾರ ಸಮುದಾಯದ ವ್ಯಕ್ತಿಯಿಂದ ನಾವೇಕೆ ಮನುಧರ್ಮವನ್ನು ಸುಡುತ್ತಿದ್ದೇವೆ (ಮಾನಸಿಕವಾಗಿ ಮತ್ತು ಆಚರಣಾತ್ಮಕವಾಗಿ) ಎಂಬುದರ ಬಗ್ಗೆ ಪ್ರಮಾಣವನ್ನು ಓದಿಸುತ್ತಾರೆ. ಆ ಸಂದರ್ಭದಲ್ಲಿ ಅದಕ್ಕೆ ಬೆಂಕಿ ಹಚ್ಚಿ ಸುಡುವವನು ಪ್ರಗತಿಪರನಾದ ಒಬ್ಬ ಬ್ರಾಹ್ಮಣ ಸಮುದಾಯದ ವ್ಯಕ್ತಿ. ಇದರ ಅರ್ಥ ಹಾಗೂ ಆದರ್ಶವೇನು? ಬಳಿಕ ಅಂಬೇಡ್ಕರ್ ಅವರು 1927ರ ಏಪ್ರಿಲ್‌ನಲ್ಲಿ ಹೊರತಂದ ಪತ್ರಿಕೆಯ ಹೆಸರೂ "ಬಹಿಷ್ಕೃತ ಭಾರತ" ವೆಂದು. ಆ ಬಳಿಕ ಗಾಂಧೀಜಿಯವರೊಂದಿಗೆ ಬಹುದೊಡ್ಡ ಸಂಘರ್ಷ ಹಾಗೂ ವಾಗ್ವಾದಗಳಿಗೆ ಕಾರಣವಾದ ದುಂಡುಮೇಜಿನ ಸಮ್ಮೇಳನ (1930–32)ದಲ್ಲಿ ನಿಮ್ನವರ್ಗಗಳಿಗೆ ಪ್ರತ್ಯೇಕ ಚುನಾಯಕಗಳನ್ನು ಪ್ರಬಲವಾಗಿ ಪ್ರಸ್ತಾಪ ಮಾಡಿದಾಗಲೂ ಅವರ ಕಣ್ಣಮುಂದೆ ಹಾಗೂ ಮನಸ್ಸಿನಾಳದಲ್ಲಿ ಇದ್ದುದು ಇಡೀ ಅಸ್ಪೃಶ್ಯ ಸಮುದಾಯದ ಏಳಿಗೆಯೆ ತಾನೆ? ಅಸ್ಪೃಶ್ಯ ಸಮುದಾಯವನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ ಹಾಗೂ ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿದ್ದ ಎಲ್ಲಾ ಬಗೆಯ ಪ್ರಾತಿನಿಧ್ಯ, ಸೌಲಭ್ಯ, ಸವಲತ್ತುಗಳನ್ನು ನೀಡಬೇಕೆಂಬುದು ಅವರ ಹೋರಾಟದ ಕಾಳಜಿಯಾಗಿತ್ತು. ಮುಂದೆ 1944ರ ಸಂದರ್ಭದಲ್ಲಿ ಅವರು "ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ"ವನ್ನು ಹುಟ್ಟುಹಾಕುತ್ತಾರೆ. ಅಲ್ಲದೆ ಈ ಒಕ್ಕೂಟದ ಪರವಾಗಿ ಬ್ರಿಟಿಷರಿಗೆ ಅಸ್ಪೃಶ್ಯರ

ಸಂರಕ್ಷಣೆಯನ್ನು ಯಾವಯಾವ ಬಗೆಯ ಸವಲತ್ತುಗಳನ್ನು ಒದಗಿಸಿಕೊಡುವ ಮೂಲಕ ಮಾಡಬೇಕೆಂಬುದನ್ನು ಬಹು ಸುದೀರ್ಘವಾಗಿ ಬರೆದು 1946ರಲ್ಲಿ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು" ಎಂಬ ಶೀರ್ಷಿಕೆ ಕೊಟ್ಟು ಬಿನ್ನವತ್ತಳೆ ಅರ್ಪಿಸುತ್ತಾರೆ. ಇದರಲ್ಲಿ ಅಸ್ಪೃಶ್ಯರಿಗೆ ಶೈಕ್ಷಣಿಕ ಸೌಲಭ್ಯ, ನಾಗರಿಕ-ಮೂಲಭೂತ ಹಕ್ಕುಗಳು, ಭೂಮಿ ನೀಡಿಕೆ, ಶಾಸಕಾಂಗ, ಕಾರ್ಯಾಂಗ, ಸ್ಥಳೀಯ ಸಂಸ್ಥೆ ಮತ್ತು ಸೇವಾ ವಲಯಗಳಲ್ಲಿ ವಿಶೇಷ ಪ್ರಾತಿನಿಧ್ಯ ಹಾಗೂ ಸಂರಕ್ಷಣೆ ಕುರಿತು ಬೇಡಿಕೆ ಸಲ್ಲಿಸಿದ್ದಾರೆ. ಮುಂದೆ 1948ರ ಅಕ್ಟೋಬರ್‌ನಲ್ಲಿ "ಅಸ್ಪೃಶ್ಯರು ಯಾರು?" ಎನ್ನುವ ಸಂಶೋಧನಾ ಕೃತಿಯನ್ನು ಪ್ರಕಟಿಸುವ ಮೂಲಕ ಈ ದೇಶದ ಅಸ್ಪೃಶ್ಯರಿಗೊಂದು ಪಾರಂಪರಿಕ ಹಾಗೂ ಸಾಂಸ್ಕೃತಿಕವಾದ ಚರಿತ್ರೆ ಇದೆ ಎಂಬುದನ್ನು ಗುರುತಿಸಿದ್ದಾರೆ. ಈ ಕೃತಿಯನ್ನು "ಅಸ್ಪೃಶ್ಯರಾಗಿ ಜನಿಸಿ ತಮ್ಮ ವೈಯಕ್ತಿಕ ಶ್ರದ್ಧಾ ಭಕ್ತಿ ಮತ್ತು ಸದ್ಗುಣಗಳಿಂದ ಸರ್ವರ ಗೌರವಕ್ಕೆ ಪಾತ್ರರಾದಂತಹ ಮೂವರು ಸಂತರಾದ ನಂದನಾರ್, ರವಿದಾಸ್ ಹಾಗೂ ಜೋಖಾಮೇಳಾ ಅವರ ಪುಣ್ಯಸ್ಮೃತಿಗೆ ಸಮರ್ಪಣೆ" ಮಾಡಿದ್ದಾರೆ. ಈ ಸಂತರಲ್ಲಿ ಮಹಾರ್ ಹಾಗೂ ಚಮ್ಮಾರ ಹಿನ್ನೆಲೆಯ ಸಂತರಿದ್ದಾರೆ ಎಂಬುದನ್ನು ಅರಿಯಬೇಕು. ಮುಂದೆ 1956ರ ಅಕ್ಟೋಬರ್ 14ರಂದು ತಾವು ಬುದ್ಧನತ್ತ ನಡೆದಾಗ ಭಿನ್ನಭೇದವಿಲ್ಲದೆ ಅಸಂಖ್ಯಾತ ಅಸ್ಪೃಶ್ಯ ಸಮುದಾಯದವರನ್ನು ತಮ್ಮೊಟ್ಟಿಗೆ ಮರಳಿ ಮನೆಗೆ ಕರೆದೊಯ್ದು, ಸ್ಥಗಿತಗೊಂಡಿದ್ದ ಸಾವಿರಾರು ವರ್ಷಗಳ ಅಸ್ಪೃಶ್ಯರ ಮೂಲಸಂಸ್ಕೃತಿಗೆ ಧರ್ಮಚಕ್ರದ ಚಾಲನೆ ನೀಡಿದರು. ಇದು ಎಲ್ಲರಿಗೂ ಗೊತ್ತಿರುವಂತದ್ದೆ, ಚರಿತ್ರೆಯಲ್ಲಿ ದಾಖಲಾಗಿರುವಂತದ್ದೆ.

ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಕೆಲವು ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಶಿಕ್ಷಣ ಪಡೆದಿರುವವರು ಅಂಬೇಡ್ಕರ್ ಅವರ ಈ ಬಗೆಯ ಚಿಂತನೆಗಳಿಗೆ ಜಾಣಕುರುಡುತನ ತೋರುತ್ತಿದ್ದಾರೆ. ಅಲ್ಲದೆ ಅಂಬೇಡ್ಕರ್ ಅವರಿಂದಲೆ ದೂರವಾಗುತ್ತಿದ್ದಾರೆ. ಈ ಮಾತುಗಳನ್ನು ನಾನು ಭಾವನಾತ್ಮಕ ನೆಲೆಯಲ್ಲಿ ಹೇಳುತ್ತಿಲ್ಲ ಬದಲಿಗೆ ಕ್ರಿಯಾತ್ಮಕ ನೆಲೆಯಲ್ಲಿ ಹೇಳುತ್ತಿದ್ದೇನೆ. ಯಾಕೆಂದರೆ ಬಹುಪಾಲು ಶಿಕ್ಷಿತ ಸಮುದಾಯ ಇಂದು ಅಂಬೇಡ್ಕರ್ ಅವರ ಬಗ್ಗೆ ಅತಿರೇಕದ ಅಭಿಮಾನವನ್ನೊ ಇಲ್ಲವೆ ಕುರುಡು ಅಭಿಮಾನವನ್ನೊ ಇಲ್ಲವೆ ಹುಸಿ ಅಭಿಮಾನವನ್ನೊ ಹೊಂದಿದ್ದಾರೆ. ಇಂತಹವರಲ್ಲಿ ಕೆಲವರು ವೇದಿಕೆ ಸಿಕ್ಕಿದಾಗ ಭಾಷಣದಲ್ಲಿ ಅಂಬೇಡ್ಕರ್ ಅವರ ಬಗ್ಗೆ ತುಂಬುಅಭಿಮಾನ ಹಾಗೂ ಅವರ ಕಾರ್ಯಚಟುವಟಿಕೆಗಳನ್ನು ಕುರಿತು ವಾಗ್‌ಝರಿಯನ್ನು ಹರಿಸುವರು. ಆದರೆ ತಮ್ಮ ವೈಯಕ್ತಿಕ ಬದುಕಿನಲ್ಲಿ ಮಾತ್ರ ಕಿಂಚಿತ್ತೂ ಅಳವಡಿಸಿಕೊಳ್ಳದಿರುವುದು ದುರಂತ.

ಇಂತಹ ದ್ವಂದ್ವವೆ ಅಸ್ಪೃಶ್ಯ ಸಮುದಾಯದೊಳಗೆ ದೊಡ್ಡ ಬಿರುಕನ್ನು ಸೃಷ್ಟಿಸುತ್ತಿದೆ ಎಂಬ ಅನುಮಾನ ನನಗಿದೆ. ಯಾಕೆಂದರೆ ಇಂತವರು - ಅಂಬೇಡ್ಕರ್ ಅವರು ಇಡೀ ಅಸ್ಪೃಶ್ಯರ ವಿಮೋಚನೆಗೆ ಹೇಗೆ ಹೋರಾಡಿದರು ಸಮಕಾಲೀನ ಪ್ರಸ್ತುತ ಸಂದರ್ಭದಲ್ಲಿ ಹೇಗೆ ಅವುಗಳನ್ನು ಕ್ರಿಯಾತ್ಮಕವಾಗಿ ಕೊಂಡೊಯ್ಯಬೇಕು ಎಂಬುದನ್ನು ತಮ್ಮ ಅಭಿಮಾನದ ಭರದಲ್ಲಿ ಮರೆತುಬಿಡುತ್ತಾರೆ. ಅಲ್ಲದೆ ಭಾವನಾತ್ಮಕ ಪರಿಸರವನ್ನು ಸೃಷ್ಟಿಸಿಬಿಡುತ್ತಾರೆ. ಹಾಗಾಗಿ ಇನ್ನೊಬ್ಬ ಅಂಬೇಡ್ಕರ್ ಅವರನ್ನು ಸೃಷ್ಟಿಸುವಲ್ಲಿ ಸೋಲುತ್ತಾರೆ. ಇದು ಗಂಭೀರವಾಗಿ ಯೋಚಿಸಬೇಕಾದ ಸಂಗತಿ.

ಸಂವಿಧಾನಾತ್ಮಕವಾಗಿ ದಕ್ಕಿರುವ ಮೀಸಲಾತಿಯ ಪಾಲಿನ ಬಗೆಗೆ ಇಂದು ಎಡಗೈ ಬಲಗೈಗಳು ಪರಸ್ಪರ ಗುದ್ದಾಡುತ್ತಿವೆ. ಇದಕ್ಕಾಗಿ ಸಮೀಕ್ಷೆ ನಡೆಯಬೇಕೆಂದು ಕೆಲವರೂ; ಸಮೀಕ್ಷೆಯ ಅಗತ್ಯವೇ ಇಲ್ಲವೆಂದು ಕೆಲವರು ವಾದಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಮ್ಮ ಕಾಳಜಿ-ಪ್ರೀತಿ, ಸಿಟ್ಟು-ಅಸಹನೆಗಳನ್ನೂ ತೋರುತ್ತಿದ್ದಾರೆ. ನನಗೆ ಪ್ರಾಮಾಣಿಕವಾಗಿ ಅನ್ನಿಸುವುದು; ಸಮೀಕ್ಷೆ ನಡೆಸಿದರೆ ತಪ್ಪೇನು? ಎಂದು. (ಈಗಾಗಲೇ ನ್ಯಾಯಮೂರ್ತಿ ಎ. ಜೆ. ಸದಾಶಿವ ಆಯೋಗ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ) ಆ ಸಮೀಕ್ಷೆಯ ಮೂಲಕ ಒಂದು ವೇಳೆ ಒಂದು ಕೈ ಇನ್ನೊಂದು ಕೈಗಿಂತ ಹೆಚ್ಚಿನ ಪಾಲನ್ನು ಪಡೆದಿದ್ದರೆ, ಪಾಲನ್ನು ಕಡಿಮೆ ಪಡೆದಿರುವ ಕೈಗೆ ಅವಕಾಶಗಳನ್ನು ನೀಡುವ, ಸೃಷ್ಟಿಸುವ ನೈತಿಕ ಜವಾಬ್ದಾರಿ ಪಡೆದ ಕೈಗೆ ಇರಲೇಬೇಕು ತಾನೆ. ಆದರೆ ಈ ಬಗ್ಗೆ ಮುಕ್ತವಾಗಿ, ಪ್ರಜಾಸತ್ತಾತ್ಮಕವಾಗಿ ಹಾಗೂ ಸಾಮಾಜಿಕ ನ್ಯಾಯದ ನೆಲೆಯಲ್ಲಿ ನಿರ್ಮಲ ಮನಸ್ಸಿನಿಂದ ಮಾತನಾಡುವವರ ಸಂಖ್ಯೆ ನಮ್ಮಲ್ಲಿ ಕಡಿಮೆ ಇದೆ. ಈ ಕಾರಣವಾಗಿ ಇಂದು ಎಡಗೈ ಬಲಗೈಗಳ ನಡುವೆ ಮಾನಸಿಕ, ದೈಹಿಕ ಹಾಗೂ ತಾತ್ತ್ವಿಕ ಅಂತರಗಳು ಹೆಚ್ಚಾಗುತ್ತಿವೆ. ಇಂತಹ ವಿಷಮ ಸ್ಥಿತಿಯಲ್ಲಿ ನಾವು ಮರೆಯದೆ ಕಳೆದ ಶತಮಾನದ ಎಪ್ಪತ್ತು ಹಾಗೂ ಎಂಭತ್ತರ ದಶಕದತ್ತ ಮರಳಿ ಕಣ್ಣುಹಾಯಿಸಬೇಕಾದ ಅಗತ್ಯವಿದೆ. ಈಗಾಗಲೆ ಹಿಂದೆ ಉಲ್ಲೇಖಿಸಿದಂತೆ ಆದಿಕರ್ನಾಟಕ ಎಂಬ ಒಂದೇ ಪದಪುಂಜದಲ್ಲಿ ಎಡಗೈ-ಬಲಗೈಗಳು ತಮ್ಮನ್ನು ಗುರುತಿಸಿಕೊಂಡದ್ದು, ಹಾಗೆಯೇ ಜುಲೈ 1981ರಲ್ಲಿ ಪ್ರಕಟವಾದ ದೇವನೂರ ಮಹಾದೇವ ಅವರ "ಒಂದು ಗಂಡಭೇರುಂಡ ಪಕ್ಷಿ ಕಥೆ" (ಪಂಚಮ ಸಂಪುಟ 5, ಸಂಚಿಕೆ 10-11, ಜುಲೈ 1981) ಹಾಗೂ ಪ್ರೊ. ಬಿ. ಕೃಷ್ಣಪ್ಪ ಅವರು ಬರೆದಿರುವ "ತೂಗುವ ಕತ್ತಿಯ ಕೆಳಗೆ ಹೊಲೆ-ಮಾದಿಗರ ಕಿತ್ತಾಟ!" (ಪಂಚಮ, ಸಂಪುಟ 5, ಸಂಚಿಕೆ 15-16 ಅಕ್ಟೋಬರ್ 1981) ಈ ಎರಡು ಲೇಖನಗಳನ್ನು ಅಸ್ಪೃಶ್ಯ ಸಮುದಾಯದವರು ಇಂದು ಯಾವುದೆ ಪೂರ್ವಾಗ್ರಹಕ್ಕೆ ಒಳಗಾಗದೆ ಮತ್ತೆ

ಓದಲೇಬೇಕಾದ ಲೇಖನಗಳಾಗಿವೆ. ಹಾಗೆಯೇ ಸಿದ್ಧಲಿಂಗಯ್ಯ ಅವರು 'ದಲಿತ ಚಳವಳಿ ಮತ್ತು ನಾನು' ಲೇಖನದಲ್ಲಿ ಪ್ರಸ್ತಾಪಿಸಿರುವ ಹೊಲೆಯರು ಮತ್ತು ಮಾದಿಗರ ವಿಭಜನೆಯ ಸಮಸ್ಯೆಯೆ ಇಂದು ಮುಂಚೂಣಿಗೆ ಬರುತ್ತಿರುವುದರ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿರುವುದನ್ನು ಗಮನಿಸಿಬಹುದು. ಇನ್ನಷ್ಟು ಸ್ವಲ್ಪ ಹಿಂದಕ್ಕೆ ಅಂದರೆ ಎಪ್ಪತ್ತರ ದಶಕಕ್ಕೆ ಹೋದರೆ ಆಗ ಬಂದ ಸಿದ್ಧಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' (1975) ಕವನ ಸಂಕಲನ ಎಂಭತ್ತರ ದಶಕದಲ್ಲಿ ಬಂದ ಮ. ನ. ಜವರಯ್ಯ ಅವರ 'ಕೇಳು ಜಗಮಾದಿಗಹೊಲೆಯ' (1981) ಕವನ ಸಂಕಲನ ಇವುಗಳು ಏನನ್ನು ಸಂಕೇತಿಸುತ್ತವೆ? ಇಲ್ಲಿನ ಶೀರ್ಷಿಕೆಗಳು ತುಂಬು ಸ್ವಾಭಿಮಾನದಿಂದ ಎಡಗೈ ಬಲಗೈಯಲ್ಲಾ ಒಂದೇ ಎಂದು ಪರಿಭಾವಿಸಿದವುಗಳಾಗಿವೆ. ಅವುಗಳೊಳಗಿನ ಆಶಯ ವಿಮೋಚನೆಯದಾಗಿದೆ. ಒಳ ಮೀಸಲಾತಿ ಕುರಿತು ಬಂದಿರುವ ಅರವಿಂದ ಮಾಲಗತ್ತಿ ಅವರ 'ಸಮುದ್ರದೊಳಗಣ ಉಪ್ಪು' (1999) ನಾಟಕ ಕೂಡ ಈ ಹಿನ್ನೆಲೆಯಲ್ಲಿ ಗಮನಿಸಬೇಕಾದ ಕೃತಿಯಾಗಿದೆ.

ಒಂದು ನಾಲ್ಕೈದು ವರ್ಷಗಳ ಹಿಂದೆ ನನಗೆ ವೈಯಕ್ತಿಕವಾಗಿ ಆದ ಅನುಭವವನ್ನು ಇಲ್ಲಿ ದಾಖಲಿಸಲೇಬೇಕು. ನನ್ನನ್ನು ಮತ್ತು ಗೆಳೆಯ ಅಪ್ಪಗೆರೆ ಸೋಮಶೇಖರನನ್ನು ಮೇಷ್ಟ್ರು ಪ್ರೊ. ಕಾಳೇಗೌಡ ನಾಗವಾರ ಅವರು ಶ್ರೀರಂಗಪಟ್ಟಣದ ನದೀತೀರದಲ್ಲಿ ನಡೆದ ಬೆಳದಿಂಗಳ ತತ್ತ್ವಪದ ಗಾಯನ ಸಮಾವೇಶಕ್ಕೆ ಕರೆದುಕೊಂಡು ಹೋಗಿದ್ದರು. ರಾತ್ರಿ ಹನ್ನೊಂದರ ನಂತರ ನಾಗವಾರ ಅವರು ಮೈಸೂರಿಗೆ ತೆರಳಿದರು. ನಾವು ಅಲ್ಲೇ ಉಳಿದೆವು. ಅಂದು ಬೆಳಿಗ್ಗೆ ಅಲ್ಲಿದ್ದ ಕೆಲವರು ಇಡೀ ಬಲಗೈನವರ ಬಗ್ಗೆ ವಿಪರೀತವಾದ ಸಿಟ್ಟು ಹಾಗೂ ಅಸಹನೆಯನ್ನು ವ್ಯಕ್ತಪಡಿಸುತ್ತಿದ್ದುದು ಕಂಡುಬಂತು. ಕೇಳಿ ಮನಸ್ಸಿಗೆ ವಿಷಾದವೆನಿಸಿತು. ಕಳೆದ ಒಂದೆರಡು ವರ್ಷದ ಹಿಂದೆ ನಾನು ಬಿ. ಕೃಷ್ಣಪ್ಪ ಅವರ ಬಗೆಗೆ ಕೆಲಸ ಮಾಡಬೇಕೆಂದು ಬಯಸಿ (ವೈಯಕ್ತಿಕವಾಗಿ ಅವರ ಬಗ್ಗೆ ಬರೆಯಲು ಹುರಿದುಂಬಿಸಿದವರು ಗುರುಗಳಾದ ಡಾ. ಎಂ. ಎಸ್. ಶೇಖರ್) ಒಬ್ಬರು ಪ್ರಾಧ್ಯಾಪಕರಲ್ಲಿ ಪ್ರಸ್ತಾಪ ಮಾಡಿದಾಗ ಅವರು ಕೂಡಲೆ ಮುಖವನ್ನೆಲ್ಲ ಸಿಂಡರಿಸಿಕೊಂಡು "ಏನ್ರಿ ಎಡಗೈನವರ ಬಗ್ಗೆ ನೀವು ಕೆಲ್ಸ ಮಾಡೋದು" ಎಂದು ತಮ್ಮ ಸಿಟ್ಟಿನ ಸಣ್ಣತನ ತೋರಿದರು.

ಮೇಲಿನ ಘಟನೆಗಳೆರಡೂ ಅಸ್ಪೃಶ್ಯ ಸಮುದಾಯದ ಹಿತದೃಷ್ಟಿಯಿಂದ ಹಾಗೂ ಒಗ್ಗಟ್ಟಿನ ದೃಷ್ಟಿಯಿಂದ ಅನಗತ್ಯ ಹಾಗೂ ಅವಿವೇಕದಿಂದ ಕೂಡಿರುವಂತದ್ದು. ಎರಡು ಸಮುದಾಯದವರಲ್ಲೂ ತುಂಬ ವಿಶಾಲ ಮನೋಭಾವದ ವ್ಯಕ್ತಿತ್ವದವರೂ ಇದ್ದಾರೆ, ಹಾಗೆಯೇ ಕುಬ್ಜರೂ ಇದ್ದಾರೆ. ಆ ಎಚ್ಚರ ನಮಗಿರಬೇಕು. ಪೂರ್ವಾಗ್ರಹಕ್ಕೆ

ಒಳಗಾಗಿ ಇಡೀ ಸಮುದಾಯದವರನ್ನೆ ಟೀಕಿಸುವುದು ಎಷ್ಟು ಸಮಂಜಸ. ಅಸ್ಪೃಶ್ಯ ಸಮುದಾಯಗಳಲ್ಲಿ ಕೇವಲ ಎರಡೇ ಇಲ್ಲ. ಈ ಅರಿವೂ ನಮಗಿರಬೇಕು. ಮಯೂರದ ಒಂದು ಸಂದರ್ಶನದಲ್ಲಿ ಕೆ. ಬಿ. ಸಿದ್ಧಯ್ಯ ಅವರು ಹೇಳಿರುವ ಮಾತನ್ನಿಲ್ಲಿ ಉಲ್ಲೇಖಿಸಲೇಬೇಕು "ನಾನು ನನಗಿಂತ ಕೆಳಜಾತಿಯಾದ ದಕ್ಕಲರ ಏಳಿಗೆ ಬಗೆಗೆ ಪ್ರಾಮಾಣಿಕ ಕಾಳಜಿ ಹಾಗೂ ಪ್ರೀತಿಯನ್ನು ತೋರದಿದ್ದರೆ ನಾನೆಂಥ ಮನುಷ್ಯ?" ಎಂಬುದೇ ಆ ಮಾತು. ಜಾತಿ ಮೀರಿದ ಎಲ್ಲಾಜಾತಿಯ ಮಾನವೀಯ ವ್ಯಕ್ತಿತ್ವಗಳನ್ನು ನಮ್ಮೊಟ್ಟಿಗೆ ಸೇರಿಸಿಕೊಂಡು ನಮಗಿಂತ ಕೆಳಜಾತಿಗಳನ್ನೂ ಮಾನವತೆಯ ಪ್ರೀತಿಯ ನಾವೆಯಲ್ಲಿ ಕರೆದುಕೊಂಡು ಹೋಗಬೇಕಾದುದು ಸದ್ಯದ ಎಲ್ಲರ ಅಗತ್ಯ. ಇದನ್ನು ಅರಿಯದೆ ಹೋದರೆ ಅಸ್ಪೃಶ್ಯರು ಖಂಡಿತ ಜಾತಿರೋಗದಲ್ಲಿರಬಹುದಾದ ಎಲ್ಲಾ ಬಗೆಯ ಅಪಾಯಗಳಿಗೂ ಬಲಿಯಾಗುತ್ತಾರೆ.

ಕೆಲವು ದಲಿತ ರಾಜಕಾರಣಿಗಳಿಗೆ, ಕೆಲವು ದಲಿತ ಅಧಿಕಾರಿಗಳಿಗೆ, ಕೆಲವು ಅಧ್ಯಾಪಕ ವರ್ಗಕ್ಕೆ ಈ ರೋಗ ಅಡರಿಕೊಂಡಿದೆ. ಈ ಕೆಲವರಿಗೆ ತಮ್ಮ ಸ್ವಾರ್ಥ, ಪ್ರತಿಷ್ಠೆ, ವೈಯಕ್ತಿಕ ನಾಯಕತ್ವ, ತಮ್ಮದೇ ಬೇಳೆ ಬೆಯ್ಯಬೇಕು ಹೀಗೆ ಇನ್ನು ಏನೇನೋ ಒಳರೋಗಗಳಿವೆ. ಇಂತಹ ಒಳರೋಗದವರು ತಮ್ಮದಲ್ಲದ ಇನ್ನಿತರ ಅಸ್ಪೃಶ್ಯ ಸಮುದಾಯದವರನ್ನು ಅನುಮಾನಿಸುತ್ತ, ಅವರ ವ್ಯಕ್ತಿತ್ವ, ಲೇಖನ, ಸಾಹಿತ್ಯ ಕೃತಿ, ಹೋರಾಟ ಇವೆಲ್ಲವುಗಳನ್ನು ತೀರಾ ಅಸಹ್ಯಕರ ಭಾಷೆಯಲ್ಲಿ ಟೀಕಿಸುತ್ತ, ಹಂಗಿಸಿ ಬರೆಯುತ್ತ ಪರಸ್ಪರ ದ್ವೇಷ, ಅಸೂಯೆ, ಅನುಮಾನ, ಈರ್ಷೆ ಇವೇ ಮುಂತಾದ ರೋಗಗಳನ್ನು ಅಸ್ಪೃಶ್ಯ ಸಮುದಾಯದಲ್ಲಿ ಹುಟ್ಟಿಸುತ್ತಿದ್ದಾರೆ. ಹೀಗೆ ಹುಟ್ಟಿಸುವವರು ಅಸ್ಪೃಶ್ಯ ಸಮುದಾಯದೊಳಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಒಂದಷ್ಟು ಸೇಫ್ ಆಗಿ ಇರುವವರೆ ಆಗಿದ್ದಾರೆ. ಇಂತವರಿಗೆ ಕೆಲವು ದಲಿತೇತರ ಜಾತಿವಾದಿಗಳ ಸಹಕಾರ ಕೂಡ ಇರುತ್ತದೆ. ಆದರೆ ಇಂತಹ ಕೆಲವರು ಹುಟ್ಟುಹಾಕಿದ ರೋಗರುಜಿನಗಳಿಗೆ ತುತ್ತಾಗುವವರು ಮಾತ್ರ ಗ್ರಾಮ ಹಾಗೂ ನಗರದ ಅಸಂಖ್ಯಾತ ಮುಗ್ಧ ಅಸ್ಪೃಶ್ಯರು. ಇದಕ್ಕೆ ಮುಂದಿನ ಪೀಳಿಗೆ ತಲೆದಂಡವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಒಮ್ಮೆ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಯೊಬ್ಬರು ನನ್ನೊಟ್ಟಿಗೆ "ಈಗ ಎಡಗೈಬಲಗೈ ಬೇರೆಬೇರೆಯಾಗಿ ಹೋಗಿದ್ದಾರೆ. ಅವರು ಒಬ್ಬರಿಗೊಬ್ಬರು ಹತ್ತಿರ ಸೇರೋ ಸಾಧ್ಯತೆಯೇ ಇಲ್ಲ" ಎಂದು ತೀರಾ ನಿರಾಶಾಭಾವದ ಮಾತನಾಡಿದರು. ನಾನು ಅವರಿಗೊಂದು ಪ್ರಶ್ನೆ ಹಾಕಿದೆ "ಈ ಎಡಗೈ–ಬಲಗೈ ಸಮಸ್ಯೆ ಬಗ್ಗೆ ನಿಮ್ಮದಲ್ಲದ ಅಸ್ಪೃಶ್ಯ ಜಾತಿಯವರೊಂದಿಗೆ ಎಂದಾದರೂ ಮಾತನಾಡಿದ್ದೀರಾ ಸರ್" ಎಂದು. ಅದಕ್ಕವರು "ಇಲ್ಲ" ಎಂದರು. ಮಾತಾಡದೆ ಉತ್ತರ ಹೇಗೆ ಸಿಗಲು ಸಾಧ್ಯ?

ಅಸ್ಪೃಶ್ಯರು ತಮ್ಮ ಎಲ್ಲಾ ಬಗೆಯ ವೈಯಕ್ತಿಕ ಅಸಹನೆಗಳನ್ನು ಬದಿಗೊತ್ತಿ ಒಂದೆಡೆ ಸೇರಿ ಪರಸ್ಪರ ನಿರುಮ್ಮಳವಾಗಿ ಮಾತನಾಡುವ ವಾತಾವರಣ ಸೃಷ್ಟಿಸಿಕೊಂಡರೆ ಈ ಬೃಹತ್ ಸಮಸ್ಯೆಗಳಿಗೆ ಸ್ವಲ್ಪ ಪರಿಹಾರದ ದಿಕ್ಕುದೆಸೆ ಸಿಗಬಹುದೇನೋ? ಮುಕ್ತವಾಗಿ ಚರ್ಚಿಸದ, ಅಹಮ್ಮುಗಳನ್ನು ಬಿಡದ, ಕೇವಲ ತನ್ನದೇ ಅಭಿಪ್ರಾಯಕ್ಕೆ ಅಂಟಿಕೊಂಡ, ಆದರೆ ತಮ್ಮ ತಮ್ಮ ಸಮುದಾಯ ಸೇರಿದಾಗ ಮಾತ್ರ ಇಂತಹ ಸಮಸ್ಯೆ ಬಗ್ಗೆ ಏಕಮುಖವಾಗಿ ಮಾತನಾಡುವ ಮನೋಧೋರಣೆ ಖಂಡಿತ ಅಸ್ಪೃಶ್ಯರ ವಿಮೋಚನೆಯ ಕನಸನ್ನು ಛಿದ್ರಗೊಳಿಸುತ್ತದೆ. ಬಿ. ಬಸವಲಿಂಗಪ್ಪನವರು ಎನ್. ರಾಚಯ್ಯನವರನ್ನು ಸಾರ್ವಜನಿಕವಾಗಿ ತನ್ನ ಗುರುವೆಂದು ಹೇಳಿಕೊಂಡ ಉಲ್ಲೇಖವಿದೆ. ಅಲ್ಲದೆ ಪರಸ್ಪರ ಇವರಿಬ್ಬರೂ ಅಸ್ಪೃಶ್ಯರ ವಿಮೋಚನೆಗೆ ಮಾಡಿದ ಕೆಲಸಗಳು ನಮ್ಮ ಕಣ್ಮುಂದೆ ಇವೆ. ಹಾಗೆಯೇ ಭರಣಯ್ಯ, ಬಿಳಿಗಿರಿ ರಂಗಯ್ಯ ಮುಂತಾದ ಹಿರಿಯ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಹಾಗೂ ಬಹಳ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಲೇ ಅಸ್ಪೃಶ್ಯ ಸಮುದಾಯವನ್ನು ಒಂದೇ ಎಂದು ಪರಿಭಾವಿಸಿ ತಮ್ಮ ಕೈಲಾದ ಮಟ್ಟಿಗೆ ಅವರನ್ನು ಬಿಡುಗಡೆಗೊಳಿಸಿದ ಬಗೆ ಇಂದಿಗೂ ಆದರ್ಶನೀಯ.

ತಮ್ಮನ್ನು ಸಂತೈಸುವ, ಭರವಸೆ ನೀಡುವ, ಕೈಹಿಡಿದು ನಡೆಸುವ, ಸ್ವಾಭಿಮಾನ ತುಂಬುವ, ಭದ್ರತೆಯ ದಿಕ್ಕು ತೋರಿಸುವ ವ್ಯಕ್ತಿಗಳಿಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಸಹಾಯಕ ಅಸ್ಪೃಶ್ಯರು ಕಾಯುತ್ತಿದ್ದಾರೆ. ಅವರ ಕೆಲವು ಮಕ್ಕಳು ಅರ್ಧಕ್ಕೇ ಶಾಲಾಕಾಲೇಜುಗಳನ್ನು ಬಿಟ್ಟು ದಿಕ್ಕುತಪ್ಪಿ ಅರೆದುಡಿಮೆ, ಸೋಮಾರಿತನ, ಅರೆಅಲೆಮಾರಿತನ, ನಿರುದ್ಯೋಗ, ಓದಿಯೂ ಏನೂ ಮಾಡಲಾಗದ, ವಯಸ್ಸಾದರೂ ಅವಿವಾಹಿತರಾಗೇ ಉಳಿಯುವ, ತುತ್ತು ಅನ್ನಕ್ಕಾಗಿ ಬೆಂಗಳೂರಿನಂತ ನಗರ ಪ್ರದೇಶಗಳತ್ತ ವಲಸೆ ಹೋಗುವ, ಅಲ್ಲಿ ತಮ್ಮ ಜಾತಿಯನ್ನು ಅಂತರಾಳದಲ್ಲೆ ಬಚ್ಚಿಟ್ಟುಕೊಂಡು ಇನ್ನೊಂದು ಜಾತಿ ಹೆಸರೇಳಿ ಯಾವುದಾದರೂ ಕೆಲಸ ಪಡೆವ, ಬಾಡಿಗೆ ಮನೆ ಗಿಟ್ಟಿಸಿಕೊಳ್ಳುವ ಹೀಗೆ.....ಹತ್ತಾರು ಬಗೆಯ ಅತಂತ್ರ ಸ್ಥಿತಿಯಲ್ಲಿ ಇದ್ದಾರೆ. ಈ ಬಂಧುಬಳಗಕ್ಕೆ ದಿಕ್ಕು ತೋರುವವರು ಯಾರು? ದಲಿತ ಉದ್ಯೋಗಸ್ಥರು, ಉನ್ನತ ಶಿಕ್ಷಣ ಪಡೆದವರು ತಮ್ಮ ಕುಟುಂಬ, ತಮ್ಮ ಜೀವನ ಹೀಗೆ ತಮ್ಮನ್ನು ಮಾತ್ರವೆ ಮತ್ತಷ್ಟು ಮೊಗದಷ್ಟು ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದಾರೆ. ಮಾತ್ರವಲ್ಲದೆ ಕೆಲವರು ಮೇಲರಿಮೆಯ ರೋಗವನ್ನು ಹತ್ತಿಸಿಕೊಂಡು ತಮ್ಮ ಕರುಳಬಳ್ಳಿಯ ಸಂಬಂಧಿಗಳನ್ನೇ ಮನೆಗೆ ಸೇರಿಸದ, ಅವರೊಟ್ಟಿಗೆ ಒಂದು ಅಂತರವನ್ನು ಕಾಯ್ದುಕೊಳ್ಳುವ, ಇನ್ನೂ ಮುಂದುವರೆದು ಯಾಗ, ಯಜ್ಞ, ಸತ್ಯನಾರಾಯಣ ಪೂಜೆ, ಇತ್ಯಾದಿ

ಪುರೋಹಿತಶಾಹಿಯ ಆಚರಣೆಗಳನ್ನು ಮಾಡುವ, ಆ ಮೂಲಕ ಇನ್ನಿತರ ಅಸ್ಪೃಶ್ಯರಿಗಿಂತ ತಾವೇ ಶ್ರೇಷ್ಠವೆಂದು ಭ್ರಮಿಸಿರುವ ವಿಚಿತ್ರ ಮನೋರೋಗಕ್ಕೆ ಒಳಗಾಗಿದ್ದಾರೆ. ಅಂಬೇಡ್ಕರ್ ಅವರ ಕನಸು ಇದಾಗಿತ್ತಾ? ಅವರೇ ಹೇಳಿದಂತೆ "ರಾಜಕೀಯವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ವ್ಯಕ್ತಿ ತನ್ನ ಸಮುದಾಯದ ಒಬ್ಬನನ್ನಾದರೂ ಅಭಿವೃದ್ಧಿ ಮಾಡುವುದು ಆತನ ನೈತಿಕ ಜವಾಬ್ದಾರಿ. ಇದನ್ನು ಬದ್ಧತೆಯಿಂದ ಮಾಡಿ ಸಮುದಾಯದ ಋಣವನ್ನು ತೀರಿಸಬೇಕು". ಆದರೆ ಈಗ ಬಾಬಾಸಾಹೇಬರ ಈ ಮಾತನ್ನು ಪಾಲಿಸುವವರು ಕ್ರಮೇಣ ಕಡಿಮೆಯಾಗುತ್ತಿದ್ದಾರೆ. ಇಂತವರು ಏನೂ ಮಾಡುವುದು ಬೇಡ ಸಧ್ಯಕ್ಕೆ ಯಾವುದೆ ಬಗೆಯ ಮೇಲರಿಮೆ –ಕೀಳರಿಮೆಗಳಿಲ್ಲದ ಸ್ವಾಭಿಮಾನದ ಬದುಕನ್ನು ನಡೆಸುವುದಾದರೆ ಅದೂ ಸಾರ್ಥಕತೆಯೆ ಆಗಿದೆ.

ಇನ್ನು ಸರ್ಕಾರದ ವತಿಯಿಂದ ನಾವು ಗಮನಿಸುವುದಾದರೆ: ಸಮಾಜಕಲ್ಯಾಣ ಇಲಾಖೆ ಇರುವುದೇ ಪರಿಶಿಷ್ಟ ಜಾತಿಗಳ ಅಭಿವೃದ್ಧಿಗಾಗಿ ಆದರೆ ಇಲ್ಲಿನ ಕೆಲವು ದಲಿತ ಅಧಿಕಾರಿಗಳೇ ದಲಿತ ವಿದ್ಯಾರ್ಥಿಗಳಿಗೆ ನ್ಯಾಯವಾಗಿ ನೀಡಬೇಕಾದ ಪುಸ್ತಕ, ಊಟ, ವಸತಿ, ಆರೋಗ್ಯ ಇತ್ಯಾದಿ ಸೌಕರ್ಯಗಳನ್ನು ಒದಗಿಸುತ್ತಿದ್ದಾರಾ? ಇಲ್ಲಿ ದಲಿತರನ್ನು ದಲಿತರೆ ಶೋಷಿಸುವ ವಿಚಿತ್ರ ಸ್ಥಿತಿಯೊಂದು ನಿರ್ಮಾಣವಾಗಿದೆ. ಹಿಂದಕ್ಕೆ ನೆನಪಿಸಿಕೊಂಡರೆ; ಇಂತಹ ಬಹುಪಾಲು ವಿದ್ಯಾರ್ಥಿ ನಿಲಯಗಳೆ ದಲಿತ ಸಂಘಟನೆಗಳಿಗೆ ಆಶ್ರಯತಾಣಗಳೂ ಆಗಿ, ಹಾಗೆ ಅದರೊಂದಿಗಿನ ಒಡನಾಟದಲ್ಲಿ ವಿದ್ಯಾರ್ಥಿಗಳು ತಮ್ಮ ಜಾತಿ ಹಾಗೂ ಒಳಜಾತಿಯ ಕೀಳರಿಮೆ ಮೀರುವ, ತಮ್ಮ ಬಡತನ, ಅಭದ್ರತೆಯ ನಡುವೆಯೂ ತುಂಬುಸ್ವಾಭಿಮಾನಿಗಳಾಗಿ, ವಿಚಾರವಂತರಾಗಿ, ಹೋರಾಟಗಾರರಾಗಿ, ಅಧಿಕಾರಿಗಳಾಗಿ ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ – ಸಮುದಾಯದ ಬಗ್ಗೆ ಕಾಳಜಿಗಳನ್ನೂ ಇಟ್ಟುಕೊಂಡು – ಉನ್ನತಿ ಹೊಂದುವ ಸಾಧ್ಯತೆಗಳು ಉಂಟಾದವು. ಅಲ್ಲದೆ ಆ ಕಾಲದಲ್ಲಿ ಅನೇಕ ದಲಿತ ಅಧಿಕಾರಿಗಳು ಕಾಳಜಿ ಇಟ್ಟುಕೊಂಡು, ತಮ್ಮ ಸಮೀಪದ ವಿದ್ಯಾರ್ಥಿ ನಿಲಯಗಳಿಗೆ ಬಿಡುವು ಮಾಡಿಕೊಂಡು ಹೋಗಿ ಅಲ್ಲಿರುವ ವಿದ್ಯಾರ್ಥಿಗಳನ್ನು ವಿಚಾರಿಸುವ, ಓದಿಗೆ ಉತ್ತೇಜಿಸುವ, ಅವರನ್ನು ಸ್ವಾಭಿಮಾನಿಗಳಾಗಿಸುವ ಪ್ರಯತ್ನಗಳನ್ನು ಮಾಡುತ್ತಿದ್ದರು. ಆದರೆ ಇಂದು ಅದೇಕೆ ಸಾಧ್ಯವಾಗುತ್ತಿಲ್ಲ? ಆಗ ಕಡಿಮೆ ದಲಿತ ಅಧಿಕಾರಿಗಳಿದ್ದರು; ಆದರೂ ಅವರ ಕಳಕಳಿ ದೊಡ್ಡದಿತ್ತು. ಆದರೆ ಈಗ ದಲಿತ ಅಧಿಕಾರಿಗಳು ಹೆಚ್ಚಾಗಿದ್ದಾರೆ; ಆದರೆ ಕಳಕಳಿ ಹೊಂದಿದವರು ಮಾತ್ರ ಅಂದಿಗಿಂತ ಕಡಿಮೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಿಡುಗಡೆಯಾಗುವ ಅಷ್ಟೂ ಹಣ ಸಂಪೂರ್ಣವಾಗಿ ಸರಿಯಾದ ನಿಟ್ಟಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಬಳಕೆಯಾದರೆ ಖಂಡಿತ ಅಲ್ಲಿನ ವಿದ್ಯಾರ್ಥಿಗಳು ಬೆಳಕು ಕಂಡುಕೊಳ್ಳುವುದರಲ್ಲಿ ಅನುಮಾನವಿಲ್ಲ.

ಇವೆಲ್ಲದರ ನಡುವೆ ಇಂದು ರಾಜಕೀಯವಾಗಿ ಛಿದ್ರಗೊಂಡ ಮನಸ್ಸುಗಳು ಹಳ್ಳಿಯಿಂದ ದಿಲ್ಲಿಯವರೆಗೂ ಸಮುದಾಯವನ್ನು ನುಗ್ಗಿನುಸಿ ಮಾಡುತ್ತಿವೆ. ರಾಜಕೀಯವಾಗಿ ಸ್ಪರ್ಧಿಸುವ ತನ್ನದೇ ಸಮುದಾಯದ ಸ್ಪರ್ಧಿಯನ್ನು ಸಹಸ್ಪರ್ಧಿಯಾಗಿ ಕಾಣದೆ ವಿರೋಧಿಯಾಗಿ ಹಾಗೆಯೆ ಅವನ ಅನುಯಾಯಿ ಬೆಂಬಲಿಗರನ್ನೂ ವಿರೋಧಿಗಳಾಗಿ ಕಾಣುತ್ತಿರುವುದು ಕೇಡಿನದಾಗಿದೆ. ಇನ್ನೂ ಮುಂದುವರೆದು ತನ್ನದಲ್ಲದ ಇತರ ಪಕ್ಷಗಳ ಬಗ್ಗೆ ಕಾಳಜಿ ತೋರುವ, ಆಸಕ್ತಿವಹಿಸುವ ವ್ಯಕ್ತಿಗಳನ್ನು ದ್ವೇಷದ ನೆಲೆಯಲ್ಲಿ ನೋಡುವುದೇ ಬಹುದೊಡ್ಡ ಅಪಾಯ. ಇಂತಹ ಮನಸ್ಸಿನ ವ್ಯಕ್ತಿಯೊಬ್ಬ ಗೆದ್ದರೆ ತನಗೆ ಸಹಕರಿಸದ, ತನ್ನ ಸಹಸ್ಪರ್ಧಿಯಾಗಿ ನಿಂತ ಹಾಗೂ ಆತನಿಗೆ ಸಹಕರಿಸಿದ ವ್ಯಕ್ತಿಗಳಿಗೆ ಯಾವುದೇ ಬಗೆಯ ಸೌಲಭ್ಯಗಳು, ಅವಕಾಶಗಳು ಸಿಗದಂತೆ ಮಾಡುವ, ಕೆಲವೊಮ್ಮೆ ಅನಗತ್ಯ ತೊಂದರೆಗಳನ್ನೂ ನೀಡುವ ಹಿಂಸಾಪ್ರವೃತ್ತಿಯೂ ಹೆಚ್ಚಾಗುತ್ತಿದೆ. ಇನ್ನೊಂದು ಕಡೆ ಇಡೀ ಭಾರತದ ರಾಜಕಾರಣವೇ ಪ್ರಜಾಪ್ರಭುತ್ವದ ಆಶಯಗಳಿಗೆ ತದ್ವಿರುದ್ಧವಾಗಿ, ಮತ ಪಾವಿತ್ರ್ಯ ನಾಶಪಡಿಸುತ್ತಿರುವ, ಅಥವಾ ಮತವನ್ನು ಯಾವಯಾವುದೋ ಆಮಿಷಕ್ಕೆ ಮಾರಿಕೊಳ್ಳುತ್ತಿರುವ ಅಥವಾ ಅಂತಹ ಒತ್ತಡಗಳು ಸೃಷ್ಟಿಯಾಗಿರುವ ದುರಂತದ ಸಂದರ್ಭದಲ್ಲಿ ದಲಿತರ ಇಂತಹ ನಡವಳಿಕೆಗಳು ಸಮುದಾಯವನ್ನು ಇನ್ನಷ್ಟು ದಿಕ್ಕುಗಾಣದಂತೆ ಮಾಡುತ್ತಿವೆ. ಸಮುದಾಯದ ಒಳಿತಿಗಾಗಿ ಜನಪ್ರತಿನಿಧಿಗಳು ತಮ್ಮ ವೈಯಕ್ತಿಕ ಅಸಮಧಾನಗಳನ್ನು ಮೀರುವ ಮನಸ್ಸು ಮಾಡಬೇಕಿದೆ.

ಸದ್ಯದ ನಮ್ಮ ಅಸ್ಪೃಶ್ಯರ ಪರಿಸ್ಥಿತಿ ಹೇಗಿದೆ ಎಂದರೆ; ಸಂವಿಧಾನಾತ್ಮಕವಾಗಿ ನೀಡಿದ ಮೀಸಲಾತಿ ಪ್ರಮಾಣ ಮಾತ್ರ ಅಷ್ಟೆ ಇದೆ. ಆದರೆ ಅದನ್ನು ಬಳಸಿಕೊಳ್ಳಲು ಸೇರಿಸುತ್ತಿರುವ ಸಮುದಾಯಗಳ ಸಂಖ್ಯೆ ಮಾತ್ರ ಹೆಚ್ಚಾಗುತ್ತಲೇ ಇದೆ. ಇಂತಹ ಸಂದರ್ಭದಲ್ಲಿ ಅಸ್ಪೃಶ್ಯರ ಸ್ಥಿತಿ ತುಂಬಾ ಸಂಕೀರ್ಣವಾಗಿದೆ. ಹೀಗಿರುವಾಗ ಪರಿಶಿಷ್ಟ ಜಾತಿಯ ಒಳಗೆ ಸೇರಿರುವ ಅಸ್ಪೃಶ್ಯರಲ್ಲದ ಜನಸಮುದಾಯಗಳೂ ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಇವರು ಅಸ್ಪೃಶ್ಯರ ಒಡಕನ್ನು ಹೆಚ್ಚಿಸದೆ ಹಾಗೂ ಬಯಸದೆ ತಮ್ಮನ್ನೂ ಅಂಬೇಡ್ಕರ್ ಅವರ ವಿಚಾರಗಳಲ್ಲಿ ಗುರುತಿಸಿಕೊಳ್ಳುವ ಮತ್ತು ಸಾಮಾಜಿಕ ನ್ಯಾಯ ಪರಿಪಾಲನಾ ಸಂದರ್ಭದಲ್ಲಿ ತುಂಬುಜವಾಬ್ದಾರಿಯುತವಾಗಿ, ವಿವೇಕಯುತವಾಗಿ ನಡೆದುಕೊಳ್ಳುವ ಅತ್ಯಗತ್ಯವಿದೆ. ಅಸಹಾಯಕತೆಯಿಂದ ಜೀವಿಸುತ್ತಿರುವವರಿಗೆ ಪರಸ್ಪರ ಹೊಂದಾಣಿಕೆ, ನಂಬಿಕೆ ಮತ್ತು ಸಹಕಾರಗಳು ಮಾತ್ರವೆ ಬಿಡುಗಡೆಯನ್ನು ಸಾಧ್ಯವಾಗಿಸುವುದು.

ಒಂದಷ್ಟು ಪ್ರಸ್ತುತ ಸಂದರ್ಭದ ಅರಿವು ಇರಬೇಕಾದದ್ದು ನಮ್ಮೆಲ್ಲರಿಗೂ ಅತ್ಯಗತ್ಯ. ಇಂಡಿಯಾದಲ್ಲಿ ಸಾರ್ವಜನಿಕ ವಲಯಗಳಿಗಿಂತ ಖಾಸಗಿ ವಲಯಗಳೇ

ಹೆಚ್ಚಾಗುತ್ತಿರುವ ಸಂದರ್ಭವಿದು. ಮೀಸಲಾತಿ ಇರುವ ಸರ್ಕಾರಿ ವಲಯದಲ್ಲಿ ಈಗ ಇರುವ ಉದ್ಯೋಗ ಅವಕಾಶ ಕೇವಲ 7.3% ಮಾತ್ರ. ಆದರೆ ಮೀಸಲಾತಿ ಇಲ್ಲದ ಖಾಸಗಿ ವಲಯದಲ್ಲಿ ಶೇ. 98.7 ಉದ್ಯೋಗಾವಕಾಶಗಳಿವೆ. ಇಂತಹ ಸಂದಿಗ್ಧ ಗಳಿಗೆಯಲ್ಲಿ ಒಳ ಮೀಸಲಾತಿಯ ಪ್ರಶ್ನೆ ಉದ್ಭವಿಸಿದೆ.

ಇಂತಹ ಸಂದರ್ಭಗಳಲ್ಲಿ ಬಹಳ ಮುಕ್ತವಾಗೆ ಎಲ್ಲರೂ ಒಳಮೀಸಲಾತಿಯನ್ನು ಸಮತೆಯ ಪ್ರೀತಿಯಲ್ಲಿ ಸ್ವಾಗತಿಸುತ್ತಾ ಎಡಗೈ-ಬಲಗೈ ಒಂದಾಗುತ್ತಾ ತಮ್ಮೊಟ್ಟಿಗೆ ಅಸ್ಪೃಶ್ಯತೆಯ ಕಳಂಕ ಹೊತ್ತು ಇನ್ನೂ ಅಭದ್ರತೆಯಲ್ಲೆ ಬದುಕುತ್ತಿರುವ ದಕ್ಕಲಿಗರು, ಕಪ್ಪೆಹೊಲೆಯರು, ಜಾಡಮಾಲಿಗಳು ಮುಂತಾದವರನ್ನು ಹಾಗೆಯೇ ಪರಿಶಿಷ್ಟ ಜಾತಿಗೆ ಸೇರಿರುವ ಕೊರಚ, ಕೊರವ, ಲಂಬಾಣಿ, ಬೋವಿ ಮುಂತಾದ ಸಹಸಮುದಾಯಗಳನ್ನೂ ಅಲ್ಲದೆ ಪರಿಶಿಷ್ಟ ವರ್ಗದ ಬುಡಕಟ್ಟು ಸಮುದಾಯಗಳನ್ನೂ ಪರಸ್ಪರ ಪ್ರೀತಿಯಿಂದ ಕೈಹಿಡಿದು ವಿವೇಕದಿಂದ ಮುನ್ನಡೆಯುತ್ತ ಸಾಗಬೇಕಾದ ಜವಾಬ್ದಾರಿ ಇದೆ. ಈ ಎಲ್ಲರೂ ಮೀಸಲಾತಿಗಾಗಿ ಖಾಸಗೀ ವಲಯದಲ್ಲಿ ಒಗ್ಗಟ್ಟಿನಿಂದ ಹೋರಾಡುವ ಆ ಮೂಲಕ ತಮ್ಮ ತಮ್ಮ ಪಾಲುಗಳನ್ನು ನ್ಯಾಯಯುತವಾಗಿಯೇ ದಕ್ಕಿಸಿಕೊಂಡು, ಹಂಚಿಕೊಳ್ಳುವ ದೊಡ್ಡ ಮನಸ್ಸು ಮಾಡಬೇಕಿದೆ ಹಾಗೂ ಎದುರಾಗಿರುವ ಹೊಸ ಹೊಸಸವಾಲುಗಳಿಗೂ ಪರಿಹಾರ ಕಂಡುಕೊಳ್ಳಬೇಕಾಗಿದೆ. ಇದಕ್ಕಾಗಿ ವಿವಿಧ ಹುದ್ದೆಗಳಲ್ಲಿರುವ ಈ ಎಲ್ಲಾ ಹಿನ್ನೆಲೆಯ ಅಧಿಕಾರಿ ವರ್ಗ ತಮ್ಮ ತಮ್ಮ ಇಸಮ್ಮುಗಳನ್ನು ಬಿಟ್ಟು ಸಮುದಾಯಪರವಾಗಿ ಒಗ್ಗಟ್ಟಾಗಿ – ಒತ್ತಾಸೆಯಾಗಿ ನಿಲ್ಲಬೇಕಾಗಿದೆ. ಆಗ ಮಾತ್ರ ಅಸ್ಪೃಶ್ಯರಿಗೆ ಬೆಳಕಿನ ದಿಕ್ಕು ಕಾಣಬಹುದು.

ಈ ಬರೆಹಕ್ಕೆ ಪೂರಕ ಲೇಖನಗಳು:

1. ಒಂದು ಗಂಡಭೇರುಂಡ ಪಕ್ಷಿ ಕಥೆ

ಎಲ್ಲೋ ಎಂದೊ ಓದಿದ ಕತೆಯ ಗಂಡಭೇರುಂಡ ಪಕ್ಷಿಯು ನನ್ನ ತಲೆಯಲ್ಲಿ ಆಗಾಗ ಹಾರಾಡುತ್ತಿರುತ್ತದೆ. ಆ ಗಂಡಭೇರುಂಡ ಪಕ್ಷಿ ಹಾರುತ್ತ ವಿಹರಿಸಿಕೊಂಡು ಬಂದು ಒಂದು ನದೀ ದಡದಲ್ಲಿ ಕೂತು, ಅದರ ಒಂದು ತಲೆ ಒಂದು ಕಡೆ, ಇನ್ನೊಂದು ತಲೆ ಇನ್ನೊಂದು ಕಡೆ ನೋಡುತ್ತ ಆನಂದಿಸುತಿಹುದು. ಅಷ್ಟರಲ್ಲಿ ಆ ಹರಿಯೋ ನದೀಲಿ ತೇಲುತ್ತ ಒಂದು ಫಲವು ಆ ಪಕ್ಷಿ ನೋಡಿಯೋ ಎಂಬಂತೆ ದಡದಲ್ಲಿ ಬಂದು ನಿಂತಿತು. ಇದ ಕಂಡ ಆ ಪಕ್ಷಿಯ ಒಂದು ತಲೆಯು ಇನ್ನೇನು ಆ ಫಲವನ್ನು ಕುಕ್ಕಿ ತಿನ್ನಬೇಕು ಅನ್ನುವಷ್ಟರಲ್ಲಿ, ಆ ಪಕ್ಷಿಯ ಇನ್ನೊಂದು ತಲೆ 'ನಿಲ್ಲಿಸು ತಿನ್ನಬೇಡ' ಎಂದಿತು. ತೊಗಟೆಗೆ ಕೊಕ್ಕು ಸಿಕ್ಕಿಸಿದ್ದ ತಲೆಯು ಸುರಿಯುವ ಜೊಲ್ಲು ಉಗತು 'ಯಾಕೆ ತಿನ್ನಬಾರದು?' ಎಂದು ಕಿಡಿಕಿಡಿಯಾಗಿ ಕೇಳಿತು. ಇನ್ನೊಂದು ತಲೆಯು ಇನ್ನಷ್ಟು ಕಿಡಿಯಾಗಿ

'ಯಾಕೆ ಅಂದರೆ? ನಾನೂ ತಿನ್ನಬಾರದೆ?'

'ಮೊದಲು ನೋಡಿದ್ದು ನಾನಲ್ಲವೆ?'

'ನಮ್ಮ ದೇಹ ಒಂದೇ ಅಲ್ಲವೆ?'

'ದೇಹ ಒಂದೇ ಆದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?' – ಹೀಗೆ ವಾಗ್ವಾದ ನಡೆದು ಮೊದಲು ಹಣ್ಣು ಕಂಡ ತಲೆಯೇ ಪೂರ್ತ ಹಣ್ಣು ತಿಂದಿತು. ತಿನ್ನದ ತಲೆ ಕಣ್ಣು ಮುಚ್ಚಿಕೊಂಡು ಕಣ್ಣು ತೆರೆದರೆ ಕಂಡದ್ದೇನು? ಇನ್ನೊಂದು ಫಲವು ನದೀಲಿ ತೇಲಿಕೊಂಡು ಬರುತಲಿದೆ. ಮೊದಲ ಹಣ್ಣು ತಿನ್ನದಿದ್ದ ತಲೆಯು ಇನ್ನೇನು ತಿನ್ನಬೇಕು ಅನ್ನುವಷ್ಟರಲ್ಲಿ ಇನ್ನೊಂದು ತಲೆಯು ಗಾಬರಿಯಿಂದ 'ಅಯ್ಯೊಯ್ಯೊ ವಿಷದ ಫಲ ತಿನ್ನಬೇಡ ಎಂದಿತು. ಇದರಿಂದ ಮೊದಲ ತಲೆಗೆ ಸಂತೋಷವೇ ಆಗಿ 'ನನ್ನ ತಲೆ, ನಾನು ತಿಂತೇನೆ ನಿಂಗೇನು?' ಎಂದಾಗ, ಇನ್ನೊಂದು ತಲೆಯು 'ನೀನೇ ತಿಂದರೂ ನಮ್ಮ ದೇಹ ಒಂದೇ ಅಲ್ಲವೆ?' ಅಂದುದಕ್ಕೆ ಈ ತಲೆಯು 'ದೇಹ ಒಂದಾದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?' ಎಂದು ಆ ಹಣ್ಣನ್ನು ತಿಂದೇ ತಿಂದಿತು.

–ಹೀಗೆ ತಿಂದಾದ ಮೇಲೆ ಇಡೀ ದೇಹಕ್ಕೆ ಬೆಂಕಿ ಕೆಂಡವ ಸುರಿದಂತಾಗಿ ಆ ಉರಿಗೆ ದೇಹವಿಡೀ ವಿಲಿವಿಲಿ ಒದ್ದಾಡಿ ಮತ್ತು ಕೊನೆಯದಾಗಿ ಆ ಪಕ್ಷಿಯು ಸತ್ತಿತು.

ಪ್ರೀತಿಯ ಸ್ನೇಹಿತರೇ ಕೇಳಿ, ಅಸ್ಪೃಶ್ಯರಿಗೆ ದೇಹ ಒಂದೇ ಆದರೂ ತಲೆ ನೂರೆಂಟು – ಎಡಗೈ, ಬಲಗೈ, ಎಡಗೈ ಹೆಬ್ಬೆರಳು ಕಿರುಬೆರಳು, ಬಲಗೈ ಹೆಬ್ಬೆರಳು ಕಿರುಬೆರಳು – ಹೀಗೆ ನೂರೆಂಟು. ನರಿ ನಾಯಿಗಳಂತಿರುವ ದಲಿತ ರಾಜಕಾರಣಿಗಳೊ ತಮ್ಮ ಉಳಿವಿಗಾಗಿ ಅಸ್ಪೃಶ್ಯರೊಳಗಿನ ಭಿನ್ನತೆಯನ್ನು ಹೆಚ್ಚಿಸುತ್ತಿರುವರು. ಆದರೆ ನೆನಪಿರಲಿ ಗಂಡಭೇರುಂಡ ಪಕ್ಷಿಯಂತೆ ಸಾಯುವವರು ಒಟ್ಟಿಗೆ ದೇಹವಾದ ನಾವೂ. ನಮ್ಮ ಸಾವಿಗೆ ಸ್ವಲ್ಪ ಕಾಲಾವಕಾಶವಿರುವಾಗಲೇ ಅಸ್ಪೃಶ್ಯ ಮತ್ತಿತರ ಸಣ್ಣ ಪುಟ್ಟ ಜಾತಿಗಳೊಳಗಿನ ಭಿನ್ನತೆಯನ್ನು ಮೊದಲು ಕಿತ್ತೆಸೆದರೆ ಮಾತ್ರ ನಮ್ಮ ಉಳಿವು. ಈಗ ಗಂಡಭೇರುಂಡ ಕತೆಯು ನಿಮ್ಮ ತಲೆಯೊಳಗೆ ಹಾರಾಡಲಿ.

ದೇವನೂರ ಮಹಾದೇವ, ಪಂಚಮ, ಜುಲೈ 1981

2. ತೂಗುವ ಕತ್ತಿಯ ಕೆಳಗೆ ಹೊಲೆ ಮಾದಿಗರ ಕಿತ್ತಾಟ!

ಇತ್ತೀಚಿನ ಸಮೀಕ್ಷೆಯೊಂದು ಭಾರತದಲ್ಲಿ 4 ಸಾವಿರ ಜಾತಿಗಳು, 50 ಸಾವಿರ ಉಪಜಾತಿಗಳಿವೆ ಎಂದು ವರದಿ ಮಾಡಿದೆ. ಅಷ್ಟೆಅಲ್ಲ ಅಸ್ಪೃಶ್ಯರಲ್ಲೆ ಸಾವಿರ ಉಪಪಂಗಡಗಳಿವೆ ಎಂದು ತಿಳಿಸಿದೆ. ಜಾತಿ ನಾಶಮಾಡಬೇಕು ಎಂದು ಬಯಸುವ ನನ್ನಂಥವನಿಗೆ ಈ ವರದಿ ಹೃದಯಾಘಾತಕ್ಕಿಂತ ಬಲವಾಗಿದೆ. ಜಾತಿಯಿಂದ ಒಡೆದು ಛಿದ್ರವಾಗಿರುವ ಈ ದೇಶದಲ್ಲಿ ಭಾರತೀಯನೊಬ್ಬನನ್ನು ಇಡಿಯಾಗಿ ಚಿತ್ರಿಸಿಕೊಳ್ಳಲು ಇದುವರೆಗೂ ನನಗೆ ಸಾಧ್ಯವಾಗಿಲ್ಲ. ಭಾರತದ ಪ್ರಥಮ ಪ್ರಜೆ ರಾಷ್ಟ್ರಪತಿಯನ್ನೆ ನೋಡಿ. ಸರ್ಕಸ್ ಕಂಪನಿಯ ಬಫೂನನ ನೆನಪು ಬರುತ್ತದೆ. ಚಿತ್ರವಿಚಿತ್ರ ಉಡುಪನ್ನು ಧರಿಸಿ ಬಫೂನ್, ಸರ್ಕಸ್ ನೋಡಲು ಬಂದ ಎಲ್ಲರನ್ನೂ ರಂಜಿಸುವಂತೆ, ನಮ್ಮ ರಾಷ್ಟ್ರಪತಿ ದೇವಸ್ಥಾನಕ್ಕೆ ಹೋದರೆ ಹಿಂದುಗಳಂತೆ, ಚರ್ಚಿಗೆ ಹೋದರೆ ಕ್ರಿಶ್ಚಿಯನ್ನರಂತೆ, ಮಸೀದಿಗೆ ಹೋದರೆ ಮುಸ್ಲಿಮರಂತೆ, ಅವರವರ ಭಂಗಿಗಳಲ್ಲಿ ಮುಜುರೆ ಮಾಡುವ ರೀತಿ ಕ್ರೂರವೆನಿಸುತ್ತದೆ.

ಮೇಲುಜಾತಿಯ ಕ್ರೌರ್ಯವನ್ನು ಕ್ಷಣಕಾಲ ಮರೆತು, ಕೆಳಜಾತಿಗಳ ಬಗ್ಗೆ ಯೋಚಿಸುವಾ. ಕೆಳಜಾತಿ ಅಸ್ಪೃಶ್ಯರಲ್ಲಿ ಎಂಥ ತಾರತಮ್ಯ ಇದೆ! ಹೊಲೆಯ–ಮಾದಿಗ, ಮೋಚಿ–ಚಮ್ಮಾರ, ಮಾಲ–ಮಾದಿಗ, ಮಹರ್–ಮಾಂಗ್. ಪರಸ್ಪರ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಈಗ್ಗೆ ಕೆಲವು ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಹೊಲೆಮಾದಿಗರಿಗೆ ಕುಡಿಯಲು ನೀರಿರಲಿಲ್ಲ. ಅರಸು ಸರ್ಕಾರದಲ್ಲಿ ಉಪ–ಸಭಾಪತಿಯಾಗಿದ್ದ ಮಂಜುನಾಥ್, ಬಿ.ಡಿ.ಓ. ಅವರನ್ನು ಕರೆಸಿ ಕೇಳಲು, ಹರಿಜನರಿಗೆ ಬಾವಿ ತೋಡಿಸಲಾಯಿತು. ಆದರೆ ಬಾವಿಯಲ್ಲಿ ಮಾದಿಗರು ನೀರು ತುಂಬಿದರೆಂಬ ಕಾರಣಕ್ಕಾಗಿ ಯಾವ ಹೊಲೆಯರೂ ಬಾವಿ ನೀರು ಮುಟ್ಟಲಿಲ್ಲ. ತರುವಾಯ ಹೊಲೆಯರೆಲ್ಲ ಒಗ್ಗಟ್ಟಾಗಿ ಕೆ. ಎಚ್. ರಂಗನಾಥ್ ಹತ್ತಿರ ಹೋದರು. ರಂಗನಾಥ್ ಹೊಲೆಯರಿಗೆ ಪ್ರತ್ಯೇಕ ಬಾವಿ ತೋಡಿಸಿಕೊಟ್ಟರು.

ಹೋದ ವರ್ಷ ಗುಲಬರ್ಗಾ–ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದ ನನಗೆ ಮತ್ತೊಂದು ವಿಚಿತ್ರ ಕಂಡುಬಂತು. ಹೊಲೆಯರೆಲ್ಲ ಬೌದ್ಧಮತಕ್ಕೆ ಮತಾಂತರವಾಗುತ್ತಿದ್ದರೆ, ಮಾದಿಗರೆಲ್ಲ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿ ಅಲ್ಲೂ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಿದ್ದರು. ಅಂಬೇಡ್ಕರ್ ಹೊಲೆಯರ ನಾಯಕ, ಜಗಜೀವನರಾಂ ಮಾದಿಗರ ನಾಯಕ ಎಂಬ ಅಪಾಯಕಾರಿ ಪ್ರಚಾರಗಳಿಗೂ ಕಡಿಮೆ ಇಲ್ಲ. ಏನೂ ಅರಿಯದ ನಿರಕ್ಷರಕುಕ್ಷಿ ಅಸ್ಪೃಶ್ಯರ ಮನಸ್ಸಿನಲ್ಲಿ ಇಂಥ ವಿಷ ಬೀಜಗಳನ್ನು ಅಸ್ಪೃಶ್ಯ ರಾಜಕಾರಣಿಗಳು, ನೌಕರವರ್ಗ ಬಿತ್ತುತ್ತಿದ್ದಾರೆ. ಅವರಿಗೆ ತಮ್ಮ ಹಿಂದೆ ಬಿದ್ದಿರುವ ಅಸಂಖ್ಯ ಅಸ್ಪೃಶ್ಯರ ಬಗ್ಗೆ ಕಳಕಳಿ ಇದ್ದಂತಿಲ್ಲ. ಬಸವಲಿಂಗಪ್ಪ ಮಂತ್ರಿಯಾದರೆ ಹೊಲೆಯರೆಲ್ಲ ಕೂಡಿ ಸನ್ಮಾನ ಸಮಾರಂಭ ಮಾಡುತ್ತಾರೆ. ಮಾದಿಗರೆಲ್ಲ ರಾಚಯ್ಯನವರಿಗೆ ಸನ್ಮಾನ ಮಾಡುತ್ತಾರೆ. ಮಾದಿಗರು ಹೊಲೆಯ ಮಂತ್ರಿಯನ್ನು, ಹೊಲೆಯರು ಮಾದಿಗ ಮಂತ್ರಿಯನ್ನು ಸನ್ಮಾನ ಮಾಡಿದ ಉದಾಹರಣೆಗಳು ಇದುವರೆಗೂ ಇಲ್ಲ. ಒಂದೊಂದು ಉಪಜಾತಿ ಹೆಸರಿನಲ್ಲಿ ಮಂತ್ರಿ ಪದವಿ ಗಿಟ್ಟಿಸಿಕೊಳ್ಳಲು ಕ್ಯೂ ನಿಂತಿರುವ ಈ ಜನಕ್ಕೆ ಅಸ್ಪೃಶ್ಯರು ಒಂದಾಗುವುದು ಬೇಕಿಲ್ಲ. ಇತ್ತೀಚೆಗೆ ಮಾಜಿ ಮಂತ್ರಿ ರೇಣುಕಾರಾಜೇಂದ್ರನ್ ಅಸ್ಪೃಶ್ಯರಲ್ಲಿ ಈ ಬಿರುಕನ್ನು ಬಹಿರಂಗವಾಗಿ ಸ್ಫೋಟಗೊಳಿಸಿದ್ದಾರೆ. ಹೊಲೆಯರು ಸಮಾಜಕಲ್ಯಾಣ ಮಂತ್ರಿ ವೆಂಕಟರಮಣರಿಗೆ ಸನ್ಮಾನ ಏರ್ಪಡಿಸಿದ್ದರು. ಸಮಾರಂಭಕ್ಕೆ ಉಳಿದೆಲ್ಲ ಮಂತ್ರಿಗಳನ್ನು ಕರೆದಿದ್ದು ವೈ. ರಾಮಕೃಷ್ಣ ಅವರನ್ನು ಮಾತ್ರ ಕರೆದಿರಲಿಲ್ಲ ಕಾರಣ ಆತ ಮಾದಿಗರವನು. ರೇಣುಕಾರಾಜೇಂದ್ರನ್ ಕರೆದದ್ದು ಯಾಕೆ ಎಂದರೆ, ಆಕೆ ಮಾದಿಗರವಳಾದರೂ ಹೊಲೆಯರವನನ್ನು ಮದುವೆಯಾಗಿದ್ದಾಳೆ. ಇದು ಹೊಲೆಮಾದಿಗರಲ್ಲಿ ಬಿಸಿ ವಾತಾವರಣವನ್ನು ಕೆದಕಿತು.

ಇತ್ತೀಚೆಗೆ ಹೊಲೆಮಾದಿಗರು ಜಾತಿ ಸಂಘಟನೆಗಳನ್ನು ಕಟ್ಟಲು ದೊಡ್ಡ ಪೈಪೋಟಿ ನಡೆಸಿದ್ದಾರೆ. ಎಕ್ಸಿಕ್ಯುಟಿವ್ ಎಂಜಿನಿಯರ್ ಶ್ರೀ ಶಿವಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಹೊಲೆಯರೆಲ್ಲ ಬ್ಯಾಂಕ್ ಮಾಡಲು ಹೊರಟಿದ್ದರೆ, ಮಾಜಿ ಲೋಕಸೇವಾ ಆಯೋಗದ ಅಧ್ಯಕ್ಷ ಶ್ರೀ ಜಿ. ದುಗ್ಗಪ್ಪನವರ ಅಧ್ಯಕ್ಷತೆಯಲ್ಲಿ ಮಾದಿಗರೆಲ್ಲ "ಆದಿ ಜಾಂಬವ ಫೈನಾನ್ಸ್ ಕಾರ್ಪೊರೇಷನ್" ಮಾಡಲು ನಿರ್ಧರಿಸಿರುವುದಾಗಿ ವದಂತಿಯಾಗಿದೆ.

ಅಸ್ಪೃಶ್ಯ ಸಮಾಜವನ್ನು ಇಡಿಯಾಗಿ ಕಲ್ಪಿಸಿಕೊಳ್ಳುವ, ಅವರ ಸಮಗ್ರ ಬಿಡುಗಡೆಗಾಗಿ ಹೋರಾಡುವ, ಪೂರ್ಣ ವ್ಯಕ್ತಿತ್ವ ಪಡೆದುಕೊಂಡ ಅಸ್ಪೃಶ್ಯ ರಾಜಕಾರಣಿಯೊಬ್ಬ ದುರ್ಬೀನು ಹಾಕಿ ಹುಡುಕಿದರೂ ಈ ದೇಶದಲ್ಲಿ ಸಿಕ್ಕುವುದಿಲ್ಲ. ಅಸ್ಪೃಶ್ಯತೆ ಆಚರಿಸುವ ಅಸ್ಪೃಶ್ಯರಿಗೆ, ಅಸ್ಪೃಶ್ಯತೆ ವಿರುದ್ಧ ಮಾತನಾಡುವ ಯಾವ ನೈತಿಕ ಹಕ್ಕಿದೆ? ಹೀಗೆಲ್ಲ ಚಿಂತಿಸುವ ನನಗೆ, ಅಸ್ಪೃಶ್ಯರ ಸಮಗ್ರ ಬಿಡಗಡೆಗೆ ಉಳಿದಿರುವ ಏಕೈಕ ಆಶೆ ದಲಿತ ಸಂಘರ್ಷ ಸಮಿತಿ ಎನ್ನಿಸುತ್ತದೆ.


–ಪ್ರೊ. ಬಿ. ಕೃಷ್ಣಪ್ಪ, ಪಂಚಮ, ಅಕ್ಟೋಬರ್ 1981

೩. ದಲಿತ ಚಳುವಳಿ ಮತ್ತು ನಾನು

..... ಈಗ ದಲಿತ ಚಳುವಳಿಯಲ್ಲಿ ಮೊದಲಿನ ಒಗ್ಗಟ್ಟು ಕಂಡುಬರುತ್ತಿಲ್ಲ. ಎಲ್ಲ ಸಂಘಟನೆಗಳನ್ನು ದುರ್ಬಲಗೊಳಿಸಬಹುದಾದ ಅಂಶಗಳು ಈ ಸಂಘಟನೆಯಲ್ಲೂ ಕಾಣಿಸಿಕೊಂಡಿವೆ. ಹೊಲೆಯ–ಮಾದಿಗ ಎಂಬ ವಿಂಗಡಣೆ ತಲೆಯೆತ್ತಿರುವುದು ವಿಷಾದಕರ ಸಂಗತಿ. ಈ ಒಡಕನ್ನು ಮುಚ್ಚಿ ಶೋಷಿತ ವರ್ಗವನ್ನು ಒಗ್ಗೂಡಿಸದಿದ್ದರೆ ದಲಿತ ಚಳುವಳಿಗೆ ಭವಿಷ್ಯವಿಲ್ಲ. ಹೊಲೆಮಾದಿಗರು ಮಾತ್ರವಲ್ಲ. ಎಲ್ಲ ಅವಮಾನಿತ ಜಾತಿಗಳು ಒಂದಾಗಿ ಜಾತಿವಿನಾಶ ಚಳುವಳಿಯನ್ನು ಬಲಗೊಳಿಸಬೇಕಾಗಿದೆ. ದಲಿತ ವರ್ಗದವರು ಎಲ್ಲಾ ಜಾತಿ ಜನವರ್ಗಗಳ ಬಡವರ ಹಿತವನ್ನು ರಕ್ಷಿಸುವ ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕಾಗಿದೆ. ಆದರೆ ಹೊಲೆಯರು ಮತ್ತು ಮಾದಿಗರ ವಿಭಜನೆಯ ಸಮಸ್ಯೆಯೇ ಇಂದು ಮುಂಚೂಣಿಗೆ ಬರುತ್ತಿರುವುದು ದುಃಖಕರ. ಈ ಸಂಬಂಧದಲ್ಲಿ ನನಗೆ ಒಂದು ಕಥೆ ನೆನಪಾಗುತ್ತದೆ. ಊರಗೌಡನ ಮನೆಯಲ್ಲಿ ಹೊಲೆಯ ಮಾದಿಗ ಇಬ್ಬರೂ ಜೀತಕ್ಕಿದ್ದರು. ಇಬ್ಬರಿಗೂ ದನದ ಕೊಟ್ಟಿಗೆಯಲ್ಲಿ ಬೆಳಗಿನ ಸಮಯದಲ್ಲಿ ಹಿಂದಿನ ರಾತ್ರಿಯ ತಂಗಳನ್ನು ಉಣ್ಣಲು ಕೊಡುತ್ತಿದ್ದರು. ಹೊಲೆಯ ಮಾದಿಗ ಇಬ್ಬರೂ ತಂಗಳನ್ನೇ ಉಣ್ಣುತ್ತಿದ್ದರು. ತಿನ್ನುವ ಮೊದಲು ಹೊಲೆಯ ಆ ತಂಗಳನ್ನು ಬಾಯಿಂದ ಉರುಬಿ ಬಿಸಿಯನ್ನು ಆರಿಸುವವನಂತೆ ನಟಿಸುತ್ತಿದ್ದ. ಇದನ್ನು ನೋಡಿದ ಮಾದಿಗ ಗೌಡನ ಮೇಲೆ ಜಗಳಕ್ಕೆ ನಿಂತ. ನಾವಿಬ್ಬರೂ ಜೀತಗಾರರು, ಹೊಲೆಯನಿಗೆ ಬಿಸಿಯೂಟ ಕೊಟ್ಟು ನನಗೇಕೆ ತಂಗಳೂಟ ಕೊಡುತ್ತಿದ್ದೀರಿ ಎಂದು ಮಾದಿಗ ವಾದಿಸುತ್ತಿದ್ದ. ನಿಮ್ಮಿಬ್ಬರಿಗೂ ತಂಗಳನ್ನೇ ಕೊಡುತ್ತಿದ್ದೇನೆ ಎಂದು ಗೌಡ ಹೇಳಿದರೂ ಮಾದಿಗನಿಗೆ ನಂಬಿಕೆ ಬರಲಿಲ್ಲ. ಹೊಲೆಯ ತಂಗಳನ್ನೇ ಬಿಸಿಯೂಟ ಮಾಡುವವನಂತೆ ಆರಿಸಿ ತಿಂದು ಮಾದಿಗನಲ್ಲಿ ಗೊಂದಲವನ್ನು ಉಂಟು ಮಾಡಿದ್ದ. ಮಾದಿಗನ ಮುಗ್ಧತೆ ಅವನನ್ನು ಹೊಲೆಯನ ವಿರುದ್ಧ ಸಂಘರ್ಷಕ್ಕೆ ನಿಲ್ಲುವಂತೆ ಮಾಡಿತ್ತು. ಈ ಕಥೆಯ ಆಶಯವನ್ನು ಹೊಲೆಯ ಮತ್ತು ಮಾದಿಗ ಜನಾಂಗದ ಸಹೋದರರಿಬ್ಬರೂ ಅರ್ಥಮಾಡಿಕೊಳ್ಳಲೆಂದು ಆಶಿಸುತ್ತೇನೆ.

– ಡಾ. ಸಿದ್ಧಲಿಂಗಯ್ಯ, ಜನಸಂಸ್ಕೃತಿ, 2007

ವಿಳಾಸ : ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ
ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ
ಮೈಸೂರು – 570 006



ಸಾಮಾಜಿಕ ನ್ಯಾಯಕ್ಕಾಗಿ : ಆರ್ಥಿಕ ವಿಕೇಂದ್ರಿಕರಣದತ್ತ ದಲಿತರ ನಡಿಗೆ

ಡಾ. ಅಪ್ಪಗೆರೆ ಸೋಮಶೇಖರ್

ಇಪ್ಪತ್ತೊಂದನೆಯ ಶತಮಾನದ ಈ ಹೊತ್ತಿನಲ್ಲಿ ಭಾರತೀಯ ಶೋಷಿತ ಸಮುದಾಯಗಳು : ಗಂಭೀರವೂ, ಸಂಕೀರ್ಣವೂ ಆದಂತಹ ಹಲವು ಸಮಸ್ಯೆ-ಸವಾಲುಗಳಿಗೆ ಸಿಲುಕಿ ತಲ್ಲಣಿಸುತ್ತಿವೆ. ಈ ಹಿನ್ನೆಲೆಯಲ್ಲಿ ದಲಿತ ಸಮಾಜ ಅಂಬೇಡ್ಕರ್

ಪ್ರಣೀತ ವೈಚಾರಿಕ ನೆಲೆಗಟ್ಟಿನ ಮೇಲೆ ಈವರೆಗಿನ ಸಾಮುದಾಯಿಕ 'ಸಾಂಸ್ಕೃತಿಕ ನಡಿಗೆ' ಹಾಗೂ 'ಸಾಮಾಜಿಕ ಬದ್ಧತೆ'ಯನ್ನು ಕುರಿತು 'ಆತ್ಮವಿಮರ್ಶೆ'ಗೆ ಒಡ್ಡಿಕೊಳ್ಳುವ ತುರ್ತಿದೆ. ಜೊತೆಗೆ ತನ್ನ ವಿರುದ್ಧ ತಾನೇ ಬಂಡೇಳುವ ಮೂಲಕ ತನ್ನನ್ನು ತಾನೇ ಮುರಿದು ಕಟ್ಟಿಕೊಳ್ಳುವ ಅಗತ್ಯವಿದೆ.

ಬಹುಪಾಲು ಭಾರತದ ದಲಿತರು ಅಂಬೇಡ್ಕರ್ ಅವರನ್ನು ಭಾವನಾತ್ಮಕ ನೆಲೆಯಲ್ಲಿ ಗ್ರಹಿಸಿದ್ದೇ ಹೆಚ್ಚು. ಆ ಕಾರಣಕ್ಕಾಗಿ ಅಂಬೇಡ್ಕರ್ ಪ್ರತಿಮೆಗಳನ್ನು ವಿರೂಪಗೊಳಿಸಿದಾಗ; ಅವಮಾನಿಸಿದಾಗ ನಡೆದ ದಲಿತರ ಪ್ರತಿಕ್ರಿಯಾತ್ಮಕ ಹೋರಾಟಗಳು: ಅದೇ ಶೋಷಿತರ ಪರವಾದ ಅಂಬೇಡ್ಕರ್ ಪ್ರಣೀತ ಸಂವಿಧಾನಬದ್ಧ ಹಕ್ಕು-ಬಾಧ್ಯತೆಗಳು ಕಡೆಗಣಿಸಲ್ಪಟ್ಟಾಗ ಅಥವಾ ಅವುಗಳ ಪ್ರಾಮಾಣಿಕ ಅನುಷ್ಠಾನದ ಸಂಬಂಧವಾಗಿ ದಲಿತರು ಪ್ರಜ್ಞಾಪೂರ್ವಕವಾಗಿ ಚಳವಳಿ ರೂಪಿಸಿದ್ದು ಕಡಿಮೆ ಎಂದೇ ಹೇಳಬೇಕಾಗಿದೆ. ಹಾಗಂತ ಅಂಬೇಡ್ಕರ್ ಪ್ರಭಾವದ ಹಿನ್ನೆಲೆಯಲ್ಲಿ ದೇಶಾದ್ಯಂತ ಹುಟ್ಟಿಕೊಂಡ 'ದಲಿತ ಚಳವಳಿ'ಗಳನ್ನಾಗಲಿ ಕಡೆಗಣೀಸುವಂತಿಲ್ಲ ಅಥವಾ ದಲಿತರಲ್ಲಿ ಮೂಡಿರುವ ಜಾಗೃತಿಯನ್ನಾಗಲಿ ಸ್ವಾತಂತ್ರ್ಯ ನಂತರದ ಭಾರತದಲ್ಲಿನ ದಲಿತರ ಬಿಡುಗಡೆಗಾಗಿ ಸಂವಿಧಾನವನ್ನ ಪೂರಕ ಶಕ್ತಿಯಾಗಿ ಬಳಸಿಕೊಳ್ಳುವ ಹಾಗೂ ಸಂವಿಧಾನದಾಚೆಗಿನ ಅಂಬೇಡ್ಕರ್ ವೈಚಾರಿಕ ನೆಲೆಗಳನ್ನ ದಲಿತ ವಿಮೋಚನೆಯ ಪ್ರಜ್ಞೆಯಾಗಿಸಿಕೊಳ್ಳುವ ಅಗತ್ಯವಿದೆ. ಹಾಗಾಗಿ ದಲಿತರು ತಮ್ಮೆಲ್ಲ ಸಮಸ್ಯೆ - ಸವಾಲುಗಳಿಗೆ ಅಂಬೇಡ್ಕರ್ ಅವರನ್ನ ಮುಖಾಮುಖಿಯಾಗಿ ನಿರ್ಮಿಸಿಕೊಳ್ಳುತ್ತಲೇ ಭಾವನಾತ್ಮಕತೆಯಿಂದ - ವೈಚಾರಿಕತೆಯೆಡೆಗೆ: ವೈಚಾರಿಕತೆಯಿಂದ - ಅನುಷ್ಠಾನದೆಡೆಗೆ ಪ್ರವಹಿಸಬೇಕಿದೆ. ಈ ವೈಚಾರಿಕ ನಡಿಗೆಯೇ ಒಟ್ಟು ಶೋಷಿತರ ಭವಿಷ್ಯದ ಬದುಕಿನ ಅಸ್ತಿತ್ವಕ್ಕೆ ದಿಕ್ಕಾಗಬಲ್ಲದು. "ಸಾಮಾಜಿಕ ನ್ಯಾಯಕ್ಕಾಗಿ ಆರ್ಥಿಕ ವಿಕೇಂದ್ರಿಕರಣದತ್ತ ದಲಿತರ ನಡಿಗೆ" ಎಂಬ ಪ್ರಸ್ತುತ ವಿಚಾರವನ್ನು ಈ ಹಿನ್ನೆಲೆಯಲ್ಲಿ ಚರ್ಚಿಸಬೇಕಿದೆ.

'ಸಾಮಾಜಿಕ ನ್ಯಾಯಕ್ಕಾಗಿ ಆರ್ಥಿಕ ವಿಕೇಂದ್ರಿಕರಣದತ್ತ ದಲಿತರ ನಡಿಗೆ' ಎಂಬಲ್ಲಿ ಸಂಕೀರ್ಣವಾದ ಮೂರು ವೈಚಾರಿಕ ನೆಲೆಗಳಿವೆ.

1. ಸಾಮಾಜಿಕ ನ್ಯಾಯ

2. ಆರ್ಥಿಕ ವಿಕೇಂದ್ರಿಕರಣ / ಸಬಲೀಕರಣ

3. ದಲಿತರ ನಡಿಗೆ

ಈ ಮೂರು ಸಾಂಸ್ಕೃತಿಕ ಸಂವೇದನೆಗಳನ್ನು 'ಭೂತಕಾಲ'ದ ಸಾಂಸ್ಕೃತಿಕ ಆದಿಮ ಪರಂಪರೆಯ ನೆನಪಿನ ಸಂಕೇತವಾಗಿಯೂ; 'ವರ್ತಮಾನ'ದ ಸಮಾಜೋ ಧಾರ್ಮಿಕ ರಾಜಕೀಯ ಅರಿವಿನ ಎಚ್ಚರದ ಪ್ರತಿಮೆಯಾಗಿಯೂ; 'ಭವಿಷ್ಯ'ದ ಸ್ವಾಭಿಮಾನಿ-

ಸ್ವಾವಲಂಬನೆಯ ಬದುಕಿನ ಅಸ್ತಿತ್ವದ ರೂಪಕವಾಗಿಯೂ ಅರ್ಥೈಸಬಹುದಾಗಿದೆ. ಯಾಕೆ ಈ ಮಾತುಗಳು ಮುಖ್ಯವೆಂದರೆ; "ಭಾರತೀಯ ಅಸ್ಪೃಶ್ಯ ಸಮುದಾಯಕ್ಕೆ ತನ್ನ ಭೂತಪರಂಪರೆಯ ನೆನಪಿನ ಪ್ರಜ್ಞೆಯೊಟ್ಟಿಗೆ; ವರ್ತಮಾನದ ಅರಿವಿನ ಎಚ್ಚರವಿರದಿದ್ದರೆ; ಅರ್ಥಪೂರ್ಣವಾದ ಭವಿಷ್ಯದ ಬದುಕನ್ನ ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ", ಅನ್ನುವ ಕಾರಣಕ್ಕಾಗಿ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಹೇಳಿದ್ದು: "ಚರಿತ್ರೆ ಅರಿಯದವರು ಚರಿತ್ರೆಯನ್ನು ನಿರ್ಮಿಸಲಾರರು" ಮತ್ತು "ತನ್ನ ಸಂಸ್ಕೃತಿಯನ್ನು ಕಳೆದುಕೊಂಡ ಜನಾಂಗ ಹಕ್ಕು-ಅಧಿಕಾರಗಳನ್ನು ಕಳೆದುಕೊಳ್ಳುತ್ತದೆ" ಎಂದು. ಈ ನೆಲೆಗಳಲ್ಲಿಯೇ ನಾವೆಲ್ಲರೂ ಇವತ್ತು ಗಂಭೀರವಾಗಿ ಚಿಂತಿಸುವ ತುರ್ತಿದೆ.

1920ರ ಸಂದರ್ಭದಲ್ಲಿ ಅಂಬೇಡ್ಕರ್ ಅವರು ತಮ್ಮ ಭಾಷಣವೊಂದರಲ್ಲಿ ಹೇಳಿದ : "ಅಸ್ಪೃಶ್ಯರು ಶತಶತಮಾನಗಳ ಬಡತನದಿಂದ ಜಾಗೃತರಾಗುವ ತನಕ ಈ ನಾಡಿಗೆ ಮುಕ್ತಿಯಿಲ್ಲ. ಭಾರತ ಸ್ವಾತಂತ್ರ್ಯವಾದರೆ ಸಾಲದು. ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿ ಭರತ ಖಂಡದಲ್ಲಿ ಹುಟ್ಟಿದವರೆಲ್ಲರೂ ಸಮಾನ ಹಕ್ಕುಳ್ಳವರಾಗಬೇಕು. ಪ್ರತಿಯೊಬ್ಬನೂ ವಿಕಾಸ ಹೊಂದಲು ಅನುಕೂಲವಾಗುವಂತೆ ಸಮಾನಾವಕಾಶಗಳನ್ನು ಕಲ್ಪಿಸಬೇಕು" ಎಂಬ ಮಾತುಗಳು 'ಸಾಮಾಜಿಕ ನ್ಯಾಯ'; 'ಆರ್ಥಿಕ ವಿಕೇಂದ್ರಿಕರಣ' ಹಾಗೂ 'ದಲಿತರ ನಡಿಗೆ'ಯನ್ನು ತಾತ್ವಿಕವಾಗಿ ಕಟ್ಟಿಕೊಡುತ್ತವೆ.

ಸಾಮಾಜಿಕ ನ್ಯಾಯ; ಆರ್ಥಿಕ ವಿಕೇಂದ್ರಿಕರಣ ಹಾಗೂ ದಲಿತರ ನಡಿಗೆಯ ನಡುವೆ ತಾತ್ವಿಕವಾದ ಅಂತರ್ ಸಂಬಂಧವಿದೆ. ಸಾಮಾಜಿಕ ನ್ಯಾಯ ಹಾಗೂ ದಲಿತರ ನಡಿಗೆಯನ್ನ: ಆರ್ಥಿಕ ಮತ್ತು ರಾಜ್ಯಾಧಿಕಾರದ ವಿಕೇಂದ್ರಿಕರಣಗಳು ನಿಯಂತ್ರಿಸುತ್ತಿರುತ್ತವೆ. ಹಾಗೆಯೇ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಥವಾ ರಾಜ್ಯಾಧಿಕಾರ ವಿಕೇಂದ್ರಿಕರಣಗಳು ಶೋಷಿತರ ನಡಿಗೆಯ ಭವಿಷ್ಯದ ದಿಕ್ಕನ್ನ ನಿರ್ದೇಶಿಸುತ್ತಿರುತ್ತವೆ. ಸಾಮಾಜಿಕ ನ್ಯಾಯದ ಕೊರತೆ ಇರುವ ಸಮಾಜ, ಆರ್ಥಿಕ ಅಸಮಾನತೆಯಿಂದ ನರಳುತ್ತಿರುತ್ತದೆ; ಹಾಗೆಯೇ ಆರ್ಥಿಕ ಅಥವಾ ಸಂಪತ್ತಿನ ಅಸಮಾನ ಹಂಚಿಕೆ ಇರುವ ಸಮಾಜ, ಸಾಮಾಜಿಕ ನ್ಯಾಯದ ಕೊರತೆಯಿಂದ ಬಳಲುತ್ತಿರುತ್ತದೆ. ಶೋಷಿತ ಪ್ರಜ್ಞೆಯ ಹಿನ್ನೆಲೆಯಲ್ಲಿ ಅರ್ಥೈಸುವುದಾದರೆ: "ಜಾತಿ-ಧರ್ಮಗಳ ಮೇಲರಿಮೆ ಮತ್ತು ಕೀಳರಿಮೆಗಳಿಲ್ಲದೆ ಸಹಮಾನವರನ್ನ ಗೌರವಯುತವಾಗಿ, ಅವರ ಬದುಕುವ ಹಕ್ಕಿಗೆ ಧಕ್ಕೆಬಾರದ ಹಾಗೆ ಪ್ರೀತಿ-ವಿಶ್ವಾಸಗಳಿಂದ ಮನುಷ್ಯರನ್ನಾಗಿ ನಡೆಸಿಕೊಳ್ಳುವುದೇ "ಸಾಮಾಜಿಕ ನ್ಯಾಯ"; ಜಾತಿ ಶ್ರೇಣೀಕೃತ ವ್ಯವಸ್ಥೆಯಲ್ಲಿನ ಕಟ್ಟಕಡೆಯವನನ್ನೂ ಒಳಗೊಂಡ ಹಾಗೆ ದೇಶದ

ಸಂಪತ್ತಿನ ಸಮಾನ ಹಂಚಿಕೆಯೇ "ಆರ್ಥಿಕ ವಿಕೇಂದ್ರಿಕರಣ"; ರಾಜಕೀಯ ಅಧಿಕಾರದೆಡೆಗೆ ಮತ್ತು ಮರಳಿ ಮನೆಗೆ ಬುದ್ಧನೆಡೆಗೆ "ದಲಿತರ ನಡಿಗೆ". ಹೊಸ ಕಾಲದ ಸಂಕೀರ್ಣ ಸಮಸ್ಯೆ–ಸವಾಲುಗಳಿಗೆ ತಕ್ಕ ಹಾಗೆ 'ಸಾಮಾಜಿಕ ನ್ಯಾಯ; ಆರ್ಥಿಕ ವಿಕೇಂದ್ರಿಕರಣ ಹಾಗೂ ದಲಿತರ ನಡಿಗೆ' ವಿಚಾರಗಳು ಸಾಂಪ್ರದಾಯಿಕ ಪರಿಭಾಷೆಗಳಿಗಿಂತ ಭಿನ್ನವಾಗಿ ಹೊಸ ರೀತಿಯ ವಿಮರ್ಶಾತ್ಮಕ ವ್ಯಾಖ್ಯಾನಕ್ಕೆ ಒಳಗೊಳ್ಳುವ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲೇ ಪಾರಂಪರಿಕ ಸಾಮಾಜಿಕ ಪರಿಭಾಷೆಗಳೆಲ್ಲವೂ ಬದಲಾದ ಬೌದ್ಧಿಕ ಆಯಾಮದೊಟ್ಟಿಗೆ ಪ್ರಾಮಾಣಿಕವಾಗಿ ಸಂಘರ್ಷಕ್ಕಿಳಿಯಬೇಕಾಗಿದೆ.

1. ಸಾಮಾಜಿಕ ನ್ಯಾಯ:

ಭಾರತದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಪರವಾದ ಸಾಂಸ್ಕೃತಿಕ ಹೋರಾಟಗಳಿಗೆ ದೀರ್ಘ ಪರಂಪರೆ ಇದೆ. ಹಾಗೆಯೇ 'ಸಾಮಾಜಿಕ ನ್ಯಾಯ'ದ ಪರ ದನಿ ಎತ್ತಿದವರನ್ನ ತಲತಲಾಂತರಗಳಿಂದ ಈ ನೆಲದಲ್ಲಿ ಅವಮಾನಿಸಲಾಗಿದೆ; ಕೊಲ್ಲಲಾಗಿದೆ. ಹಾಗಾಗಿ ನಮ್ಮದು "ಮಾತು ಕೊಂದ ಭಾರತ". ಸಾಮಾಜಿಕ ನ್ಯಾಯದ ಪರ ನಿಂತ ಕಾರಣಕ್ಕಾಗಿಯೇ ಬುದ್ಧನನ್ನ ಈ ದೇಶದಿಂದ ಬಹಿಷ್ಕರಿಸಲಾಯಿತು. ಹೀಗೆ ಬಹಿಷ್ಕೃತಗೊಂಡ ಬುದ್ಧನನ್ನು, ಅಂಬೇಡ್ಕರ್ ಅವರು ಮರಳಿ ಭಾರತಕ್ಕೆ ತಂದದ್ದು ಬಹುದೊಡ್ಡ ಚಾರಿತ್ರಿಕ ತಿರುವಾಗಿದೆ. ಬುದ್ಧನ ಒಟ್ಟು ಚಿಂತನೆಯಲ್ಲಿ ಸಾಮಾಜಿಕ ನ್ಯಾಯದ; ಆರ್ಥಿಕ ವಿಕೇಂದ್ರಿಕರಣದ; ಶೋಷಿತರ ವಿಮೋಚನಾ ಮಾರ್ಗದ ದಿಕ್ಕುದೆಸೆಗಳನ್ನು ಕಾಣಬಹುದಾಗಿದೆ. "ಹಸಿದವನಿಗೆ ಧರ್ಮವನ್ನ ಬೋಧಿಸಬೇಡ; ನನ್ನನ್ನೂ ಪ್ರಶ್ನೆ ಮಾಡು; ನಿನ್ನ ಮೂಲಭೂತ ಅವಶ್ಯಕತೆಗೆ ಮೀರಿ ಹಣ, ಆಸ್ತಿ, ಸಂಪತ್ತು, ಭೂಮಿ, ಆಹಾರಧಾನ್ಯಗಳನ್ನು ಸಂಗ್ರಹಿಸುವುದು ಅಮಾನವೀಯ" – ಎಂಬುದಾಗಿ ಹೇಳಿದ ಬುದ್ಧನ ಈ ಎಲ್ಲಾ ವೈಚಾರಿಕ ಆಲೋಚನೆಗಳಲ್ಲಿ ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ವಿಕೇಂದ್ರಿಕರಣ–ಸಬಲೀಕರಣ ಸಮಾನತೆಯ ತತ್ತ್ವಗಳನ್ನ ಗ್ರಹಿಸಬಹುದಾಗಿದೆ. ಶಾಕ್ಯ ಮತ್ತು ಕೊಲಿಯ ಜನಸಮುದಾಯಗಳ ನಡುವೆ 'ರೋಹಿಣಿ' ನದಿ ನೀರಿನ ಹಂಚಿಕೆ ವಿಷಯದಲ್ಲಿ ಕಲಹವೇರ್ಪಟ್ಟಾಗ 'ನೀರಿನ ವಿಕೇಂದ್ರಿಕರಣ' ಸಂಬಂಧ ಸಾಮಾಜಿಕ ನ್ಯಾಯ ಪ್ರತಿಪಾದಿಸಿದ ಕಾರಣಕ್ಕಾಗಿ 'ಸಿದ್ಧಾರ್ಥ'ನನ್ನ ಗಡಿಪಾರು ಮಾಡಲಾಯಿತು; ಈ ಸಂಗತಿಯೇ ಮುಂದೆ 'ಸಿದ್ಧಾರ್ಥ' 'ಬುದ್ಧ'ನಾಗಲು ಮೂಲ ಪ್ರೇರಣೆಯಗಿದ್ದು ಕೂಡ. ಸಾಮಾಜಿಕ ನ್ಯಾಯದ ಹಕ್ಕೊತ್ತಾಯದ ಕಾರಣಕ್ಕಾಗಿಯೇ 12ನೇ ಶತಮಾನದಲ್ಲಿ

ವಚನ ಚಳವಳಿ ಹುಟ್ಟಿಕೊಂಡಿತು. ಆದರೆ ಸಾಮಾಜಿಕ ನ್ಯಾಯದ ಹೋರಾಟ ಕಟ್ಟಿದ ಬಸವಣ್ಣನನ್ನ ಈ ಜಾತಿ ಸಮಾಜ ಕೊಂದುಹಾಕಿತು.

ಬಿ. ವಿ. ಚಂದ್ರಪ್ರಸಾದ್ ತ್ಯಾಗಿಯವರು ಬದುಕಿದ್ದಾಗ ನನ್ನೊಟ್ಟಿಗೆ ಹೇಳಿದ ಒಂದು ಸಂಗತಿ 'ಸಾಮಾಜಿಕ ನ್ಯಾಯ ತೀರ್ಮಾನದ ರೂಪಕ'ವಾಗಿ ಈ ಕ್ಷಣದಲ್ಲಿ ನೆನಪಾಗುತ್ತದೆ. ಆ ಸಂಗತಿ ಯಾವುದೆಂದರೆ: ಹಾಸನ ಜಿಲ್ಲೆಯ ಒಂದು ಹಳ್ಳಿಯ ಒಕ್ಕಲಿಗರು, ಅದೇ ಹಳ್ಳಿಯ ದಲಿತರ ಮೇಲೆ ದೈಹಿಕ ಹಲ್ಲೆ ಮಾಡಿ, ಅವರ ಮನೆಗಳ ಮೇಲೆ ದಾಳಿ ಮಾಡಿರುತ್ತಾರೆ. ಈ ಹಲ್ಲೆಗೆ ಕಾರಣ; ಗ್ರಾಮದೇವತೆಯ ಹಬ್ಬದಲ್ಲಿ ದಲಿತರು ತಮಟೆ ಬಡಿಯಲು ನಿರಾಕರಿಸಿದ್ದು. ಈ ವಿಚಾರ ತ್ಯಾಗಿಯವರ ಗಮನಕ್ಕೆ ಬಂದು, ಒಕ್ಕಲಿಗರು ಮತ್ತು ದಲಿತರ ಜಗಳದ ನ್ಯಾಯ ತೀರ್ಮಾನಕ್ಕಾಗಿ ದಲಿತ ಸಂಘರ್ಷ ಸಮಿತಿಯ ವತಿಯಿಂದ ಆ ಹಳ್ಳಿಗೆ ಬರುತ್ತಾರೆ. ನ್ಯಾಯ ಪಂಚಾಯಿತಿಯ ಸಂದರ್ಭದಲ್ಲಿ ಆ ಹಳ್ಳಿಯ ಒಕ್ಕಲಿಗ ಮುಖಂಡ ಹಾಗೂ ತ್ಯಾಗಿಯವರ ನಡುವೆ ಮಾತುಕತೆ ನಡೆಯುತ್ತದೆ.

ತ್ಯಾಗಿ : ಯಜಮಾನ್ರೆ ಈ ಜಗಳಕ್ಕೆ ಏನ್ ಕಾರಣ.

ಯಜಮಾನ : ತ್ಯಾಗಪ್ನೋರೆ, ತಲತಲಾಂತರದಿಂದ ನಮ್ಮೂರ ಹಬ್ಬದಲ್ಲಿ ನಮ್ಮಳ್ಳಿ ಹರಿಜನರೆ ತಮಟೆ ಹೊಡೆಯೋರು. ಆದರೆ ಈಸಾರಿ 'ನಾವು ತಮಟೆ ಹೊಡೆಯಲ್ಲ' ಅಂದ್ರು. ಅದಕ್ಕೆ ನಮ್ಮ ಜನ ಅವರನ್ನ ಹೊಡುದ್ರು. ನಮ್ಮ ತಾತ-ಮುತ್ತಾತನ ಕಾಲದಿಂದ ನಡಕೊಂಡು ಬಂದ ಪದ್ಧತಿನ ಮೀರೋದು ಅಂದ್ರೆ ಹೆಂಗೆ.

ತ್ಯಾಗಿ : ಅಂದ್ರೆ, ತಾತ-ಮುತ್ತಾತನ ಕಾಲದಿಂದ ನಿಮ್ಮೂರ ಹರಿಜನರು ಊರ ಹಬ್ಬಕ್ಕೆ ತಮಟೆ ಬಡಿತಿದ್ರು; ನೀವು ಕುಣಿತಿದ್ರಿ ಅಂದಂಗಾಯ್ತು.

ಯಜಮಾನ : ಹೌದು...

ತ್ಯಾಗಿ : ಹಂಗಾದರೆ ಸ್ವಲ್ಪ ಬದಲಾವಣೆ ಮಾಡೋಣ. ಇಷ್ಟ್ ವರ್ಷ ಹರಿಜನರು ತಮಟೆ ಹೊಡಿತಿದ್ರು – ನೀವು ಕುಣಿತಿದ್ರಿ; ಇನ್ ಮುಂದೆ ನೀವು ತಮಟೆ ಹೊಡಿರಿ – ಹರಿಜನರು ಕುಣೀಲಿ. ಯಾಕೆಂದರೆ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ಮೇಲು-ಕೀಳು ಎಂಬುದಿಲ್ಲ.

ಭಾರತದ ನೆಲದಲ್ಲಿ ಬುದ್ಧನಾದಿಯಾಗಿ ಅಸಂಖ್ಯಾತ ಮನಸ್ಸುಗಳು 'ಸಾಮಾಜಿಕ ನ್ಯಾಯ' ಪರವಾದ ಅರ್ಥಪೂರ್ಣ ಹೋರಾಟಗಳನ್ನ ಕಟ್ಟಿವೆ. ಆ ಹಿನ್ನೆಲೆಯಲ್ಲಿ ಜ್ಯೋತಿಬಾಫುಲೆ, ಸಾವಿತ್ರಿ ಬಾಫುಲೆ, ನಾರಾಯಣ ಗುರು, ಶಾಹುಮಹಾರಾಜ್, ಪೆರಿಯಾರ್, ಬಿ. ಶ್ಯಾಮಸುಂದರ್, ಡಿ. ಗೋವಿಂದದಾಸ್, ಕುದ್ಮಲ್ ರಂಗರಾಯ್, ಆರ್. ಗೋಪಾಲ್ ಸ್ವಾಮಿ ಐಯ್ಯರ್ ಮುಂತಾದ ವ್ಯಕ್ತಿತ್ವಗಳ ಹೋರಾಟದ ಬದುಕುಗಳನ್ನ ನೆನಪಿಸಿಕೊಳ್ಳಬಹುದು. ಭಾರತದ ಶೋಷಿತರ ಸಾಮಾಜಿಕ ನ್ಯಾಯಕ್ಕಾಗಿಯೇ ಅಂಬೇಡ್ಕರ್ ಅವರು ತಮ್ಮ ಇಡೀ ಬದುಕನ್ನ ತ್ಯಾಗ ಮಾಡಿದರು. ಅಂಬೇಡ್ಕರ್ ಅವರು ನಡೆಸಿದ: 1926ರ ಮಹಡ್‌ನಗರದ 'ಚೌಡರ್ ಕೆರೆ' ಪ್ರಸಂಗ; 1930ರ ನಾಸಿಕ್‌ನ 'ಕಾಳರಾಮ ದೇವಾಲಯ ಪ್ರವೇಶ ಪ್ರಸಂಗ'; 1932ರ 'ಪೂನಾ ಒಪ್ಪಂದ' ಹಾಗೂ 1951ರಲ್ಲಿ ಮಂಡಿಸಿದ 'ಹಿಂದೂಕೋಡ್ ಬಿಲ್' – ಇವೆಲ್ಲವೂ ಕೂಡ ಸಾಮಾಜಿಕ ನ್ಯಾಯಪರವಾಗಿ ಅಂಬೇಡ್ಕರ್ ಕಟ್ಟಿದ ಹೋರಾಟದ ಸಂಕೇತಗಳಾಗಿವೆ. ಆದರೆ ಅಂಬೇಡ್ಕರೋತ್ತರ ಭಾರತೀಯ ಜಾತಿ ಶ್ರೇಣೀಕೃತ ಸಮಾಜದಲ್ಲಿ ನಡೆದ – ಬೆಲ್ಚಿ, ಕರಂಚೇಡು, ಕಂಬಾಲಪಲ್ಲಿ, ಬೆಂಡಿಗೇರಿ, ಬದನವಾಳು, ಹಂಗರಹಳ್ಳಿ, ಕಡಕೊಳ, ಖೈರ್ಲಾಂಜಿ – ಇನ್ನೂ ಮುಂತಾದ ಘಟನೆಗಳು ಸಾಮಾಜಿಕ ನ್ಯಾಯದ ಕಗ್ಗೊಲೆಗಳನ್ನ ಸಾಬೀತು ಪಡಿಸುತ್ತವೆ.

ಸಾಮಾಜಿಕ ನ್ಯಾಯದ ಹೋರಾಟ ಮತ್ತು ನೈತಿಕತೆಯ ಪ್ರಶ್ನೆ:

ಕರ್ನಾಟಕದ ಮಟ್ಟಿಗೆ, 12ನೇ ಶತಮಾನದ ವಚನ ಚಳವಳಿಯ ತರುವಾಯ; ಶೋಷಿತರು ಸಾಮುದಾಯಿಕ ನೆಲೆಯಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ದನಿ ಎತ್ತಿದ್ದು 70ರ ದಶಕದ ದಲಿತ ಸಂಘರ್ಷ ಸಮಿತಿ ರೂಪಿಸಿದ 'ದಲಿತ ಚಳುವಳಿ' ಸಂದರ್ಭದಲ್ಲಿ. ಆಗ ದಲಿತರಲ್ಲಿ ಒಗ್ಗಟ್ಟಿತ್ತು; ಸಂಘಟನೆ ಒಂದೇ ಇತ್ತು. 21ನೇ ಶತಮಾನದ ಈ ಹೊತ್ತಿನಲ್ಲಿ ದಲಿತ ಸಂಘಟನೆಗಳು ಮತ್ತು ದಲಿತರು ಅನೇಕ ಗುಂಪುಗಳಾಗಿ – ವರ್ಗಗಳಾಗಿ ಛಿದ್ರಗೊಂಡಿದ್ದಾರೆ. ಇನ್ನು ದಲಿತರಲ್ಲಿಯೇ, ನೌಕರವರ್ಗ, ಅಧಿಕಾರಶಾಹಿವರ್ಗ, ಬಂಡವಾಳಶಾಹಿ ವರ್ಗ, ರಾಜಕಾರಣಿವರ್ಗ, ದಲಿತ ಬ್ರಾಹ್ಮಣವರ್ಗ, ಟಚಬಲ್ ಎಸ್.ಸಿ. – ಅನ್‌ಟಚಬಲ್ ಎಸ್.ಸಿ. ಹಾಗು ಎಡ-ಬಲ ಎಂಬುದಾಗಿ ಅನೇಕ ರೀತಿಯ ವರ್ಗತಾರತಮ್ಯಗಳು ನಿರ್ಮಾಣಗೊಂಡಿವೆ. ಇವುಗಳಲ್ಲಿ ಬಹಳ ಗಂಭೀರವಾದದ್ದು 'ಎಡ-ಬಲ' ಸಮಸ್ಯೆ. ಈ ಕ್ಷಣದಲ್ಲಿ ನನಗೆ ದೇವನೂರ ಮಹಾದೇವರ 'ಗಂಡಭೇರುಂಡ ಕಥೆ' ನೆನಪಾಗುತ್ತದೆ. ಈ ಸಂಬಂಧ ನನ್ನನ್ನು ಗಾಢವಾಗಿ ಕಾಡುವಂತಹದ್ದು: "ಎಡ-ಬಲ ಎಂದು

ಕಚ್ಚಾಡುತ್ತಿರುವ ದಲಿತರಿಗೆ, ಅಸ್ಪೃಶ್ಯತೆ ವಿರುದ್ಧ ಹಾಗೂ ಸಾಮಾಜಿಕ ನ್ಯಾಯದ ಪರ ಹೋರಾಡಲಿಕ್ಕೆ ಯಾವ ಬಗೆಯ ನೈತಿಕ ಹಕ್ಕಿದೆ?" ಎಂಬ ತಾತ್ವಿಕ ಪ್ರಶ್ನೆ. ನನ್ನ ಗ್ರಹಿಕೆಯ ಹಿನ್ನೆಲೆಯಲ್ಲಿ ಹೇಳುವುದಾದರೆ, ಈ ಎಡ-ಬಲ ಸಮಸ್ಯೆ ಎಂಬುದು ಜಾತಿವಾದಿ ಮನಸ್ಸುಗಳು ಹುಟ್ಟುಹಾಕಿರುವ ಒಡೆದು ಆಳುವ ನೀತಿಯ ಜಾತಿರಾಜಕಾರಣ. ದಲಿತರು ಒಗ್ಗಟ್ಟಾದದ್ದೇ ಆದರೆ ಈ ರಾಜ್ಯವನ್ನು ಆಳುತ್ತಾರೆ; ಇಲ್ಲಿ ತನಕ ನಾವು ಅನುಭವಿಸಿದ ರಾಜ್ಯಾಧಿಕಾರ ಅವರ ವಶವಾಗುತ್ತದೆ ಎಂಬ ಸವರ್ಣೀಯರ ಆತಂಕವೇ ಈ ಎಡ-ಬಲ ಸಮಸ್ಯೆಯ ಹುಟ್ಟಿಗೆ ಕಾರಣ. ಈ ಬಗೆಯ ಜಾತಿ ಸಮಾಜದ ಕುತಂತ್ರಗಳ ಕುಟಿಲತನವನ್ನ ಅರ್ಥ ಮಾಡಿಕೊಳ್ಳದ ಅಸ್ಪೃಶ್ಯ ಸಮಾಜ ದ್ವೇಷದ ಕತ್ತಿ ಮಸೆಯುತ್ತಲೇ ಇವೆ. ಬ್ರಾಹ್ಮಣ, ಲಿಂಗಾಯತ, ಕುರುಬ, ಒಕ್ಕಲಿಗ ಮುಂತಾದ ಜನಾಂಗಗಳಲ್ಲಿಯೂ ಒಳ ಪಂಗಡಗಳಿದ್ದೂ; ಪರಸ್ಪರ ದ್ವೇಷ-ಅಸೂಯೆ ಕಚ್ಚಾಟಗಳಿದ್ದಾಗಿಯೂ ಅವುಗಳು ಯಾಕೆ ಬಯಲಿಗೆ ಬರೋದಿಲ್ಲ? ಆದರೆ ದಲಿತರ ಎಡ-ಬಲ ಸಮಸ್ಯೆ ಮಾತ್ರ ಬಹಿರಂಗವಾಗಿ ಮಾಧ್ಯಮಗಳಲ್ಲಿ ಮತ್ತೆಮತ್ತೆ ಯಾಕೆ ವಿಜೃಂಭಿಸುತ್ತದೆ? ಇದರ ಹಿಂದಿರುವ ಸಾಂಸ್ಕೃತಿಕ ಹುನ್ನಾರವನ್ನ ಅಸ್ಪೃಶ್ಯ ಸಮುದಾಯಗಳು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕಿದೆ. ಮೇಲ್ಜಾತಿ ಜನಗಳು ಒಳಪಂಡಗಳ ವಿಚಾರವಾಗಿ ಆಂತರಿಕವಾಗಿ ಎಷ್ಟೆಲ್ಲಾ ದ್ವೇಷ-ಅಸೂಯೆಗಳಿಂದ ಕಚ್ಚಾಡಿದರೂ ಸಹ ಬಹಿರಂಗವಾಗಿ ಜಾತಿಪ್ರತಿಷ್ಠೆ ಹಾಗೂ ರಾಜ್ಯಾಧಿಕಾರದ ಹಂಚಿಕೆ ವಿಷಯ ಬಂದಾಗ ತಮ್ಮ ಆಂತರಿಕ ಒಳಜಗಳಗಳನೆಲ್ಲ ಮರೆತು ಒಂದಾಗುತ್ತಾರೆ. ಆ ಕಾರಣದಿಂದಲೆ ಮೇಲ್ಜಾತಿ ಸಮುದಾಯಗಳಿಗೆ ನಿರಂತರವಾಗಿ ರಾಜ್ಯಾಧಿಕಾರವನ್ನ ಅನುಭವಿಸಲಿಕ್ಕೆ ಸಾಧ್ಯವಾಗಿದೆ. ಆದರೆ ಕರ್ನಾಟಕ ಅಸ್ತಿತ್ವಕ್ಕೆ ಬಂದಾಗಿನಿಂದ ಇವತ್ತಿನವರೆಗೂ ಒಬ್ಬ ಅಸ್ಪೃಶ್ಯ ಈ ರಾಜ್ಯದ ಮುಖ್ಯಮಂತ್ರಿಯಾಗಲಿಕ್ಕೆ ಸಾಧ್ಯವಾಗಿಲ್ಲ. ಕಳೆದ 2008-09ನೇ ಸಾಲಿನ ಚುನಾವಣೆ ಸಂದರ್ಭದಲ್ಲಿ ಆ ಎಲ್ಲಾ ಸಾಧ್ಯತೆಗಳು ಇದ್ದಾಗಲೂ ಮೇಲ್ಜಾತಿ ಮನಸ್ಸುಗಳು ಎಡ-ಬಲ ಸಮಸ್ಯೆಯನ್ನು ತೀವ್ರಗೊಳಿಸಿ ಆ ಅವಕಾಶಗಳನ್ನ ವ್ಯವಸ್ಥಿತವಾಗಿ ಕಡೆಗಣಿಸಲಾಯಿತು. ಈ ಹುನ್ನಾರದ ಹಿನ್ನೆಲೆಯಲ್ಲಿ ಕೆಲವು ದಲಿತ ರಾಜಕಾರಣಿಗಳು ಕೈ ಜೋಡಿಸಿದ್ದು ದುರಂತದ ಸಂಗತಿ. ಇಂತಹ ಸಂಕೀರ್ಣ ಮತ್ತು ಸಂದಿಗ್ಧ ಸಂದರ್ಭದಲ್ಲಿ ಇಡೀ ಶೋಷಿತ ಸಮುದಾಯಗಳು ಗಂಭೀರವಾಗಿ ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ.

ಈ ಮೊದಲೇ ಪ್ರಸ್ತಾಪಿಸಿದ ಹಾಗೆ, ದಲಿತರಲ್ಲೇ ಪ್ರಬಲವಾದ ಎರಡು ಗುಂಪುಗಳು ನಿರ್ಮಾಣವಾಗಿವೆ: 1. ಅನ್‌ಟಚಬಲ್ ಎಸ್.ಸಿ. 2. ಟಚಬಲ್

ಎಸ್.ಸಿ. ಒಂದು ಕಡೆ 'ಅನ್‌ಟಚಬಲ್ ಎಸ್.ಸಿ.ಗಳು – ಒಳಮೀಸಲಾತಿ, ಎಡ–ಬಲವೆಂದು ಕಚ್ಚಾಡುತ್ತಿದ್ದರೆ; ಇನ್ನೊಂದು ಕಡೆ ಮೀಸಲಾತಿಯ ಸವಲತ್ತು, ಅಧಿಕಾರ, ಉದ್ಯೋಗಗಳನ್ನ ದಕ್ಕಿಸಿಕೊಳ್ಳುವಾಗ ನಾವು ದಲಿತರು ಎಂದು ಹೇಳಿಕೊಳ್ಳುವ ಹೆಚ್ಚಿನ ಟಚಬಲ್ ಎಸ್.ಸಿ.ಗಳು ಆನಂತರದಲ್ಲಿ ಅಂಬೇಡ್ಕರ್ ಮತ್ತು ಅಂಬೇಡ್ಕರ್ ಪ್ರಣೀತ ಸಮುದಾಯಬದ್ಧ ಕಾಳಜಿಯ ಪ್ರಶ್ನೆ ಉದ್ದೇಶಪೂರ್ವಕವಾಗಿಯೇ ಬಂದಾಗ ಮೌನವಹಿಸುತ್ತಾರೆ. ಇದು ನಿಜಕ್ಕೂ ದುರಂತ. ಇವರಿಗೆ ಅಂಬೇಡ್ಕರ್ ಕಲ್ಪಿಸಿಕೊಟ್ಟ ಮೀಸಲಾತಿ ಸೌಲಭ್ಯ ಬೇಕೆ ಹೊರತು; ಅಂಬೇಡ್ಕರ್ ಅಲ್ಲ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇತ್ತೀಚೆಗೆ ದಲಿತರ ಸಂಬಂಧದಲ್ಲಿ ಮೂರು ಸಂಗತಿಗಳು ಏಕಕಾಲದಲ್ಲೆ ಜರುಗಿವೆ. 1. ಮಾದಿಗದಂಡೋರ ಸಮಾವೇಶ 2. ಛಲವಾದಿ ಸಮಾವೇಶ 3. ಗುಲ್ಬರ್ಗಾದಲ್ಲಿ ಬೌದ್ಧವಿಹಾರ ಸ್ಥಾಪನೆ. ಈ ಮೂರರಲ್ಲಿ ದಲಿತರ ಆಯ್ಕೆ ಯಾವುದು ಎನ್ನುವುದರ ಮೇಲೆ ಅವರ ಭವಿಷ್ಯದ ಬದುಕಿನ ಅಸ್ತಿತ್ವ ನಿರ್ಧಾರವಾಗಲಿದೆ.

2. ಆರ್ಥಿಕ ವಿಕೇಂದ್ರಿಕರಣ:

ಅಸ್ಪೃಶ್ಯ ಸಮುದಾಯದ ಹಿನ್ನೆಲೆಯಲ್ಲಿ ನಾನು 'ಆರ್ಥಿಕ ವಿಕೇಂದ್ರಿಕರಣ' ವನ್ನು: ದೇಶದ ಸಂಪತ್ತು ಹಾಗೂ ರಾಜ್ಯಾಧಿಕಾರ (ಪೊಲಿಟಿಕಲ್ ಪವರ್)ದ ಸಮಾನ ಹಂಚಿಕೆ ಹಾಗೂ ಅವಕಾಶದ ಆದ್ಯತೆಯ ಮೇರೆಗೆ ಪರಿಭಾವಿಸಲ್ಪಡುತ್ತೇನೆ. ಅಂಬೇಡ್ಕರ್ ಪ್ರತಿಪಾದಿಸಿದ : 'ಭೂ ರಾಷ್ಟ್ರೀಕರಣ, ಭೂಮಿತಿ ಕಾಯ್ದೆ, ಸಹಕಾರ ಕೃಷಿ ಪದ್ಧತಿ'ಗಳನ್ನ ದಲಿತರ ಆರ್ಥಿಕ ಸಮಸ್ಯೆಗಳಿಗೆ ಉತ್ತರದ ಸ್ವರೂಪದಲ್ಲಿ ಮರುಚಿಂತನೆ ಮತ್ತು ಅನುಷ್ಠಾನಕ್ಕೆ ಒಳಪಡಿಸಬೇಕಿದೆ. 'ಖಾಸಗೀಕರಣ'ದ ಪರಿಕಲ್ಪನೆಯೇ ಸಂವಿಧಾನಬದ್ಧ ಶೋಷಿತರ ಮೀಸಲಾತಿ ಸೌಲಭ್ಯ ಹಾಗೂ ಸದಾವಕಾಶಗಳನ್ನ ಕೊಲ್ಲುವ ಬಹಳ ದೊಡ್ಡ ಕುತಂತ್ರವಾಗಿದೆ. ಆ ಮೂಲಕ ಸಂವಿಧಾನಬದ್ಧ ದಲಿತರಪರ ಆಶಯಗಳನ್ನ ವ್ಯವಸ್ಥಿತವಾಗಿ ನಿಯಂತ್ರಿಸುವುದಾಗಿದೆ. ಸಮಾಜ ಕಲ್ಯಾಣ ಇಲಾಖೆ, ಎಸ್.ಸಿ., ಎಸ್.ಟಿ. ಕಾರ್ಪೊರೇಷನ್, ಅಂಬೇಡ್ಕರ್ ನಿಗಮ–ಮಂಡಳಿ ಮುಂತಾದ ಸರ್ಕಾರಿ ಸ್ವಾಮ್ಯದ ಸಂಘ–ಸಂಸ್ಥೆಗಳು ದಲಿತರ ಆರ್ಥಿಕ ಸಬಲೀಕರಣದ ಹಿನ್ನೆಲೆಯಲ್ಲಿ ಈವರೆಗೆ ರೂಪಿಸಿದ ಆರ್ಥಿಕ ಸಂಬಂಧಿ ಕಾರ್ಯಕ್ರಮಗಳ ಸಾಧನೆಗಳೇನು? ಕರ್ನಾಟಕದ ಸಂದರ್ಭದಲ್ಲಿ ಸರ್ಕಾರಗಳು ರೈತರ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಮನ್ನ ಮಾಡುವಾಗಲೇ; ದಲಿತರಿಗೆ ಕೊಡಲಾದ ಸಾಲಗಳ ಮರುಪಾವತಿಗಾಗಿ ವಸೂಲಿ ತಂಡಗಳನ್ನ ನೇಮಿಸುತ್ತದೆ.

ಅದೇ ಸಮಯದಲ್ಲಿ ಈ ಸರ್ಕಾರವೇ ತನ್ನ ಬೊಕ್ಕಸದ ಕೋಟ್ಯಾಂತರ ರೂಪಾಯಿ ಸಾರ್ವಜನಿಕ ಹಣವನ್ನ ಜಾತಿ ಕೇಂದ್ರಿತ ಮಠಮಾನ್ಯಗಳಿಗೆ ದೇಣಿಗೆ ನೀಡುತ್ತದೆ. ಕರ್ನಾಟಕದ ಬಹುತೇಕ ಭೂಮಿ ಕೆಲವೇ ಜಾತಿ–ಜನಾಂಗಗಳಲ್ಲಿ, ಮಠಮಾನ್ಯಗಳಲ್ಲಿ ಕೇಂದ್ರೀಕೃತವಾಗಿದೆ. ಈ ಅಸಮಾನತೆಯ ವಿರುದ್ಧ 70ರ ದಶಕದಲ್ಲಿ ದಲಿತ ಸಂಘರ್ಷ ಸಮಿತಿ ನಡೆಸಿದ ಅಸಂಖ್ಯಾತ ಭೂ ಹೋರಾಟಗಳು ಹೆಚ್ಚು ಮಹತ್ವದ್ದಾಗಿ ಕಾಣುತ್ತದೆ. ಏಕೆಂದರೆ ಡಿಎಸ್‌ಎಸ್ ತನ್ನ ಹೋರಾಟದ ಮೂಲಕ ಭೂ ರಹಿತ ದಲಿತ ಕುಟುಂಬಗಳಿಗೆ ಮಾತ್ರವಲ್ಲದೆ ದಲಿತೇತರ ಬಡವರಿಗೂ ಭೂಮಿ ಕೊಡಿಸುವಲ್ಲಿ ಯಶಸ್ವಿಯಾಗಿದೆ. ಆದರೆ ಕರ್ನಾಟಕ ರಾಜ್ಯ ರೈತ ಸಂಘಟನೆಯು, ಭೂಮಿಯ ಸಮಾನ ಹಂಚಿಕೆ ಬಗ್ಗೆ ಭೂ ಮಿತಿ ಕಾಯ್ದೆ ಕುರಿತು; ಕೃಷಿ ಕೂಲಿ ಕಾರ್ಮಿಕರು ಹಾಗು ಭೂ ರಹಿತ ಶೋಷಿತ ಸಮುದಾಯಗಳ ಪರ ಚಳವಳಿಯನ್ನು ರೂಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ ಯಾಕೆ? ದಲಿತರ ಆರ್ಥಿಕ ಸಮಸ್ಯೆ ಹಾಗೂ ಭೂಮಿಯ ಅಸಮಾನ ಹಂಚಿಕೆಯ ನಡುವೆ ಸಂಬಂಧವಿದೆ. ಹಾಗಾಗಿ ಈ ದೇಶದ ಭೂಮಿ ಮತ್ತು ಮಠಮಾನ್ಯಗಳು ರಾಷ್ಟ್ರೀಕರಣಗೊಳ್ಳಬೇಕಿದೆ. ಬಿ. ಎಂ. ಪುಟ್ಟಯ್ಯ ಅವರು ಹೇಳುವ ಹಾಗೆ: "ಈ ದೇಶದ ಸಂಪತ್ತಿನಲ್ಲಿ; ಆಸ್ತಿಯಲ್ಲಿ ದಲಿತರು ಒಳಮೀಸಲಾತಿ ಕೇಳಬೇಕಾಗಿದೆ."

ದಲಿತರು ಮತ್ತು ಆರ್ಥಿಕ ವಿಕೇಂದ್ರಿಕರಣ – ಸಬಲೀಕರಣ:

ದಲಿತರ ಸಂಬಂಧದಲ್ಲಿ ಆರ್ಥಿಕ ವಿಕೇಂದ್ರಿಕರಣ ಅನ್ನುವುದಕ್ಕಿಂತ; ಆರ್ಥಿಕ ಸಬಲೀಕರಣ ಎನ್ನುವುದೇ ಹೆಚ್ಚು ಸೂಕ್ತವಾದದ್ದು. ಅಂಬೇಡ್ಕರ್ ಕಲ್ಪಿಸಿಕೊಟ್ಟ ಮೀಸಲಾತಿಯ ಪರಿಣಾಮದಿಂದಾಗಿ ಕಳೆದ ಐವತ್ತು ವರ್ಷಗಳಲ್ಲಿ ದಲಿತರು ಆರ್ಥಿಕವಾಗಿ ಹಲವು ಸ್ಥಿತ್ಯಂತರಗಳನ್ನ ಕಂಡಿದ್ದಾರೆ. ಆ ಹಿನ್ನೆಲೆಯಲ್ಲಿ ಬಹುತೇಕ ಶೋಷಿತರ ಬದುಕುಗಳು ಪಲ್ಲಟಗೊಂಡಿವೆ. ಪ್ರಸ್ತುತ ದಲಿತರಲ್ಲಿಯೂ ನೌಕರವರ್ಗ, ಅಧಿಕಾರಿವರ್ಗ, ಶ್ರೀಮಂತವರ್ಗ, ಬಂಡವಾಳಶಾಹಿವರ್ಗ, ಸ್ಥಿತಿವಂತ ರಾಜಕಾರಣಿವರ್ಗ ನಿರ್ಮಾಣವಾಗಿದೆ. ಹಾಗಂತ ಬಡ–ನಿರ್ಗತಿಕ ದಲಿತ ಸಮುದಾಯಕ್ಕೇನು ಕೊರತೆ ಇಲ್ಲ. ಮೀಸಲಾತಿಯ ಪ್ರಭಾವಕ್ಕೆ ಒಳಗಾಗದೆ ಅದರಿಂದ ಹೊರತಾಗಿ ಉಳಿದಂತ ಅಸಂಖ್ಯಾತ ದಲಿತ ಕುಟುಂಬಗಳಿವೆ. ಹಾಗಾದರೆ ಆ ದಲಿತ ಕುಟುಂಬಗಳ ಆರ್ಥಿಕ ಸ್ಥಿತಿಗತಿಗಳೇನು? ಆರ್ಥಿಕ ಅನಿಶ್ಚಿತತೆಯಿಂದ ಬಳಲುತ್ತಿರುವ ಇಂತಹ ದಲಿತ ಕುಟುಂಬಗಳ ಆರ್ಥಿಕ ಸಬಲೀಕರಣದ ಹಿನ್ನೆಲೆಯಲ್ಲಿ ಸರ್ಕಾರದ ಪಾತ್ರದಷ್ಟೆ ಸ್ಥಿತಿವಂತ ದಲಿತರ ಪಾತ್ರ ಕೂಡ ಮಹತ್ತರದ್ದಾಗಿದೆ.

ಮೀಸಲಾತಿಯ ಕಾರಣದಿಂದಾಗಿ ಆರ್ಥಿಕ ಸುಸ್ಥಿರತೆಯನ್ನ ಕಂಡುಕೊಂಡ ಮೊದಲ ತಲೆಮಾರಿನ ದಲಿತ ವಿದ್ಯಾವಂತ, ನೌಕರಸ್ಥ, ಅಧಿಕಾರಿ ಹಾಗೂ ಬಂಡವಾಳಶಾಹಿ ವರ್ಗ ಶೋಷಿತರ ಪರವಾಗಿ ಹಮ್ಮಿಕೊಂಡ ಆರ್ಥಿಕ ಸಂಬಂಧಿ ಕಾರ್ಯಕ್ರಮಗಳೇನು? ಎಂಬುದು ಬಹುಮುಖ್ಯ ನೈತಿಕ ಪ್ರಶ್ನೆಯಾಗಿದೆ. ಮೀಸಲಾತಿಯ ಫಲಾನುಭವಿಗಳೆಲ್ಲ ಸ್ವಾರ್ಥಿಗಳಾದ ಕಾರಣದಿಂದಾಗಿ, ಶೋಷಿತರ ಆರ್ಥಿಕ ಸಮಸ್ಯೆಗಳು ಮತ್ತಷ್ಟು ಸಂಕೀರ್ಣಗೊಂಡಿವೆ. ಇಂತಹ ಸ್ವಾರ್ಥ ದಲಿತರನ್ನ ಕುರಿತು ಅಂಬೇಡ್ಕರ್ ಅವರು 1955 ಮಾರ್ಚ್ 18ರಂದು ಆಗ್ರಾದಲ್ಲಿ ಭಾಷಣ ಮಾಡುತ್ತಾ ಹೀಗೆ ಹೇಳುತ್ತಾರೆ: "ನಮ್ಮ ಸಮಾಜ ಶಿಕ್ಷಣದಲ್ಲಿ ಇಂದು ಸ್ವಲ್ಪಮಟ್ಟಿನ ಪ್ರಗತಿ ಕಂಡಿದೆ. ಶಿಕ್ಷಣ ಪಡೆದದ್ದರಿಂದ ಸ್ವಲ್ಪ ಜನ ಉನ್ನತ ಸ್ಥಾನಗಳಿಸಿದ್ದಾರೆ. ಆದರೆ ಈ ಸುಶಿಕ್ಷಿತ ಜನರು ನನಗೆ ಮೋಸ ಮಾಡಿದ್ದಾರೆ. ಶಿಕ್ಷಣ ಪಡೆದ ಮೇಲೆ ಅವರು ಸಮಾಜ ಸೇವೆ ಮಾಡುತ್ತಾರೆ ಎಂದು ನಾನು ಆಶಿಸಿದ್ದೆ. ಆದರೆ ಈಗ ನನಗೆ ಕಾಣುವುದೇನು? ತಮ್ಮನ್ನು ಅಥವಾ ತಮ್ಮ ಕುಟುಂಬಗಳನ್ನು ಮಾತ್ರ ಪೋಷಿಸಿಕೊಳ್ಳುತ್ತಾ ನಮ್ಮ ಸುತ್ತಾ ಓಡಾಡುತ್ತಿರುವ ಕಿರಿಯ ಅಥವಾ ಹಿರಿಯ ಗುಮಾಸ್ತರುಗಳ ಸ್ವಾರ್ಥ ಗುಂಪು ಮಾತ್ರ" ಮೀಸಲಾತಿ ಫಲಾನುಭವಿಗಳಲ್ಲಿನ ಸಮುದಾಯಬದ್ಧ ಆರ್ಥಿಕ ಸಂಬಂಧಿ ಕಾರ್ಯಕ್ರಮಗಳ ಪ್ರಾಮಾಣಿಕ ಅನುಷ್ಠಾನದ ಕೊರತೆಯೆ ಇದಕ್ಕೆ ಕಾರಣ. ಹಾಗಾಗಿ "ಬಡ ದಲಿತರ ಆರ್ಥಿಕ ಸಬಲೀಕರಣ ತತ್ತ್ವ"ವು; "ಬಲಿತ ದಲಿತರ ಆರ್ಥಿಕ ವಿಕೇಂದ್ರಿಕರಣ ತತ್ತ್ವ"ವನ್ನ ಅವಲಂಬಿಸಿದೆ.

3. ದಲಿತರ ನಡಿಗೆ; ಅಸ್ಮಿತೆಯ ಪ್ರಶ್ನೆ

ಈ ದೇಶದ ಸವರ್ಣೀಯ ಸಮಾಜ, ಶೋಷಿತ ಸಮುದಾಯಗಳ 'ಅಸ್ಮಿತೆ' (ಐಡೆಂಟಿಟಿ)ಗಳನ್ನ ಚರಿತ್ರೆಯುದ್ದಕ್ಕೂ 'ವಿಸ್ಮೃತಿ'ಗೆ ಒಳಗು ಮಾಡುತ್ತಾ ಬರುತ್ತಿದೆ. ಇದು ಸಾಂಸ್ಕೃತಿಕ ರಾಜಕಾರಣದ ಬಹಳ ದೊಡ್ಡ ಹುನ್ನಾರ. ಈ ನೆಲದ ಅಸ್ಪೃಶ್ಯರು ತಮ್ಮ ಪಾರಂಪರಿಕ ಅಸ್ಮಿತೆಗಳನ್ನು ಹುಡಿಕಿಕೊಳ್ಳದ ಹೊರತು ಭವಿಷ್ಯದ ನಡಿಗೆಗಳನ್ನ ಸ್ಪಷ್ಟಪಡಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಇದನ್ನ ಮನಗಂಡಿದ್ದ ಅಂಬೇಡ್ಕರ್ ಅವರು ತಮ್ಮ ಬದುಕಿನುದ್ದಕ್ಕೂ ಶೋಷಿತರ ಅಸ್ಮಿತೆಗಳನ್ನ ಸಂಶೋಧನಾತ್ಮಕವಾಗಿ ಕಟ್ಟಿಕೊಡುವಲ್ಲಿ ಶ್ರಮಿಸಿದ್ದಾರೆ. 'ಮರಳಿ ಮನೆಗೆ.......... ಬುದ್ಧನೆಡೆಗೆ..........." ಎಂಬುದೇ ದಲಿತರ ಅಸ್ಮಿತೆಯ ಬಹುದೊಡ್ಡ ರೂಪಕವಾಗಿದೆ. ಅಂಬೇಡ್ಕರ್ ಅವರು ಪರಿಶೋಧಿಸಿಕೊಟ್ಟ 'ಸಾಂಸ್ಕೃತಿಕ ಅಸ್ಮಿತೆ'ಗಳ ಮೌಲ್ಯಗಳು ಅರ್ಥವಾಗದ ಹೊರತು ದಲಿತರ ಭವಿಷ್ಯದ ಬದುಕಿನ ನಡಿಗೆಗಳು ಚರಿತ್ರೆಯನ್ನ ನಿರ್ಮಿಸಲಿಕ್ಕೆ ಸಾಧ್ಯವಿಲ್ಲ.

ಯಾವುದೇ ಜನಾಂಗ ತನ್ನ ಸಾಂಸ್ಕೃತಿಕ ಅಸ್ಮಿತೆಗಳನ್ನ ಕಳೆದುಕೊಂಡದ್ದೆ ಆದರೆ ಸಾಂಸ್ಕೃತಿಕ ವಿಸ್ಮೃತಿಗೆ ಒಳಗಾಗುತ್ತದೆ ಎಂಬುದು ಚಾರಿತ್ರಿಕ ಸತ್ಯ. ಕರ್ನಾಟಕದ ಸಂದರ್ಭದಲ್ಲಿ ಶೋಷಿತರ ಸಾಂಸ್ಕೃತಿಕ ಅಸ್ಮಿತೆಗಳನ್ನ ಕಟ್ಟಿಕೊಡುವ ನಿಟ್ಟಿನಲ್ಲಿ ಆರ್. ಭರಣಯ್ಯನವರನ್ನೂ ಒಳಗೊಂಡ ಹಾಗೆ ಬಿ. ಶ್ಯಾಮಸುಂದರ್, ಡಿ. ಗೋವಿಂದದಾಸ್, ಜಿ. ವೆಂಕಟಯ್ಯ, ಸೋಸಲೆ ಸಿದ್ದಪ್ಪ, ಬಿ. ಬಸವಲಿಂಗಪ್ಪ, ಬಿ. ಕೃಷ್ಣಪ್ಪ, ಚಂದ್ರಪ್ರಸಾದ್‌ತ್ಯಾಗಿ, ದೇವಯ್ಯ ಹರವೆ ಮುಂತಾದವರ ಪರಿಶ್ರಮಗಳನ್ನ ಕಡೆಗಣಿಸುವಂತಿಲ್ಲ.


ಸ್ವಾತಂತ್ರ್ಯೋತ್ತರ ಕರ್ನಾಟಕದ ಸಂದರ್ಭದಲ್ಲಿ ದಲಿತರನ್ನು ಹೊರತುಪಡಿಸಿ, ಬಹುತೇಕ ಸವರ್ಣೀಯ ಜಾತಿಜನಾಂಗಗಳು ತಮ್ಮತಮ್ಮ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗು ಸಾಂಸ್ಕೃತಿಕ ಅಸ್ಮಿತೆಗಳನ್ನ ನಿರ್ಮಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ದಲಿತರಿಗೆ ಇದು ಸಾಧ್ಯವಾಗದಿರುವುದಕ್ಕೆ, ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಧಾನವಾಗಿ ದಲಿತರ ಸ್ವಯಂಕೃತ ಮಿತಿಗಳನ್ನ ಕಡೆಗಣಿಸುವಂತಿಲ್ಲ. ಕರ್ನಾಟಕದ ಪ್ರಬಲ ಜಾತಿಗಳಾದ ಒಕ್ಕಲಿಗ ಮತ್ತು ಲಿಂಗಾಯತ ಜನಾಂಗಗಳನ್ನ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ: "ನಾವು ಜಾತಿಯಲ್ಲಿ ಶ್ರೇಷ್ಠ, ಮೇಲ್ಜಾತಿಯ ಜನ ನಾವು" ಎನ್ನುವ ಮೂಲಕ – 'ಸಾಮಾಜಿಕ ಅಸ್ಮಿತೆ'ಯನ್ನು ; ಜಾತಿಧರ್ಮಗುರುಗಳು, ಮಠಮಾನ್ಯ ಹಾಗೂ ಭೂಮಿಯ ಒಡೆತನದ ಮೂಲಕ "ಧಾರ್ಮಿಕ" ಮತ್ತು "ಆರ್ಥಿಕ ಅಸ್ಮಿತೆ"ಗಳನ್ನ; ಜಾತಿ ರಾಜಕೀಯ ಪಕ್ಷಗಳನ್ನ ಕಟ್ಟಿಕೊಂಡು, ಸಂಘಟಿತ ರಾಜಕೀಯಶಕ್ತಿಯಾಗಿ, ಈ ರಾಜ್ಯವನ್ನಾಳಿದ ಮುಖ್ಯಮಂತ್ರಿಗಳಲ್ಲಿ ಬಹುತೇಕ ಈ ಎರಡೂ ಜಾತಿಯವರೆ ಆಗುವ ಮೂಲಕ "ರಾಜಕೀಯ ಅಸ್ಮಿತೆ"ಯನ್ನ ನಿರ್ಮಿಸಿಕೊಂಡಿದ್ದಾರೆ. ಆದರೆ ಕಳೆದ ಐವತ್ತು ವರ್ಷಗಳಲ್ಲಿ ದಲಿತರಿಗೆ 'ಸಂಘಟನಾತ್ಮಕ ಸಾಮುದಾಯಿಕ ಅಸ್ಮಿತೆಯ ಶಕ್ತಿ'ಯಾಗಿ ಹೊರಹೊಮ್ಮಲಿಕ್ಕೆ ಸಾಧ್ಯವಾಗೇ ಇಲ್ಲ. ದಲಿತರಿಗೆ: "ಜಾತಿಯಲ್ಲಿ ಕೀಳು, ಅಸ್ಪೃಶ್ಯರು, ಮುಟ್ಟಿಸಿಕೊಳ್ಳದವರು ಎಂಬ 'ಸಾಮಾಜಿಕ ಅಸ್ಮಿತೆ' ಇದೆ. ಅಂಬೇಡ್ಕರ್ ಪ್ರಣೀತ ರಾಜಕೀಯ ಅರಿವಿನ ಕೊರತೆಯಿಂದಾಗಿ ದಲಿತ ರಾಜಕಾರಣ ಬೇರೆಬೇರೆ ರಾಜಕೀಯ ಪಕ್ಷಗಳಲ್ಲಿ ಹರಿದುಹಂಚಿಹೋಗಿರುವ ಕಾರಣದಿಂದಾಗಿ ಇವತ್ತಿಗೂ ಸ್ಪಷ್ಟವಾದ 'ರಾಜಕೀಯ ಅಸ್ಮಿತೆ'ಯನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ದಲಿತರ ಪಾಲಿಗೆ ರಾಜ್ಯಾಧಿಕಾರ ಮರೀಚಿಕೆಯಾಗಿರುವುದಕ್ಕೆ 'ರಾಜಕೀಯ ಅಸಂಘಟನೆ'ಯೆ ಕಾರಣವಾಗಿದೆ. ಬೇರೆಬೇರೆ ರಾಜಕೀಯ ಪಕ್ಷಗಳಲ್ಲಿರುವ ದಲಿತ ರಾಜಕಾರಣಿಗಳು, ಅಂಬೇಡ್ಕರ್ ಅವರ ರಾಜಕೀಯ ತತ್ತ್ವದ ಅಡಿಯಲ್ಲಿ ಸಂಘಟಿತರಾದದ್ದೇ ಆದರೆ

ದಲಿತ ರಾಜಕಾರಣದ ದಿಕ್ಕುದೆಸೆಗಳನ್ನ ಸ್ಪಷ್ಟವಾಗಿ ಗುರುತಿಸಿಕೊಳ್ಳುವ ಮೂಲಕ 'ರಾಜಕೀಯ ಅಸ್ಮಿತೆ'ಯನ್ನು ಕಂಡುಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ, ಶೋಷಿತ ಸಮುದಾಯಗಳಲ್ಲಿ ರಾಜಕೀಯ ಪ್ರಜ್ಞೆಯ ಅರಿವು ಹೆಚ್ಚೆಚ್ಚು ವಿಸ್ತರಿಸಬೇಕಿದೆ. ಅಂಬೇಡ್ಕರ್ ಅವರು 'ಬುದ್ಧ'ನ ಮೂಲಕ ದಲಿತರಿಗೊಂದು ಧಾರ್ಮಿಕ ಅಸ್ಮಿತೆಯನ್ನ ತೋರಿಸಿಕೊಟ್ಟಿದ್ದಾಗಿಯೂ ಕೂಡ ಅದನ್ನ ಪೂರ್ಣಪ್ರಮಾಣದಲ್ಲಿ ಒಪ್ಪಿಕೊಳ್ಳುವಲ್ಲಿ ಸೋತಿದ್ದೇವೆ. ಬದಲಾಗಿ ಸತ್ಯನಾರಾಯಣ ವ್ರತ ಆಚರಿಸುವ ಮೂಲಕ ವಿದ್ಯಾವಂತ ದಲಿತ ಸಮುದಾಯವೇ 'ನವಬ್ರಾಹ್ಮಣೀಕರಣ'ಕ್ಕೆ ಬಲಿಯಾಗುತ್ತಿರುವುದು ದುರಂತದ ಸಂಗತಿ. ಪ್ರಸ್ತುತ ದಲಿತ ವರ್ಗದಲ್ಲಿರುವ ನೌಕರರು, ಅಧಿಕಾರಿಗಳು, ಶ್ರೀಮಂತರು, ಬಂಡವಾಳಶಾಹಿಗಳು ಮುಂತಾದ ಸ್ಥಿತಿವಂತ ದಲಿತರು ಸಂಘಟಿತರಾಗಿ ಕನಿಷ್ಠ ಪ್ರಮಾಣದ ತ್ಯಾಗದ ಮೂಲಕ ಸಮುದಾಯ ಬದ್ಧ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ದಲಿತರಿಗೊಂದು 'ಆರ್ಥಿಕ ಅಸ್ಮಿತೆ'ಯನ್ನು ತಂದುಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿದೆ. ಶೋಷಿತರ ಪಾಲಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಅಸ್ಮಿತೆ ಎಂಬುದು ಸ್ವಾಭಿಮಾನಿ – ಸ್ವಾವಲಂಬನೆಯ ಬದುಕಿನ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ದಲಿತರಿಗೆ ಅಂಬೇಡ್ಕರ್ ಅವರ ಬದುಕು ಮತ್ತು ಬರಹ ಆದರ್ಶವಾಗಬೇಕಿದೆ ಮತ್ತು ಮಾರ್ಗಸೂಚಿಯಾಗಬೇಕಿದೆ. ಯಾಕೆ ಈ ಮಾತುಗಳನ್ನ ಹೇಳುತ್ತಿದ್ದೇನೆ ಎಂದರೆ, ಈವರೆಗೆ ದಲಿತರು ಅಂಬೇಡ್ಕರ್ ಅವರನ್ನ ತಮ್ಮ ಬದುಕಿನ ದಿಕ್ಕು-ದೆಸೆಗಳ ಗುರಿಕಾರನನ್ನಾಗಿ ಪ್ರಾಮಾಣಿಕವಾಗಿ ಸ್ವೀಕರಿಸಿಲ್ಲ ಎನ್ನುವ ಕಾರಣಕ್ಕಾಗಿ. ಒಟ್ಟಾರೆ ಅಂಬೇಡ್ಕರ್ ಅವರನ್ನ ಮರೆತ ದಲಿತರಿಗೆ ಭವಿಷ್ಯವಿಲ್ಲ.

ಅಪ್ಪಗೆರೆ ಗ್ರಾಮ,

ಚನ್ನಪಟ್ಟಣ ತಾಲೋಕು ಮತ್ತು ಅಂಚೆ

ರಾಮನಗರ ಜಿಲ್ಲೆ



'ಭರಣಿ'ಮಂಡಲ ಮಧ್ಯದೊಳಗೆ......

ಬಿ. ಎನ್. ಸಿದ್ದುಪ್ರಸನ್ನ

ಒಂದು ಸಂಜೆ ಹಿಂದೆ ಮನೆಯ ಅಂಗಳದಲ್ಲಿ ಹರಟುತ್ತಾ ಕುಳಿತಿದ್ದ ನನ್ನ ಮೊಬೈಲ್‌ಗೆ ಗೆಳೆಯ ರಾಘವೇಂದ್ರನಿಂದ ಸಂದೇಶವೊಂದು ಬಂದಿತ್ತು. "ನಮ್ಮ ಎಸ್.ಆರ್.ಸಿ.ಯಲ್ಲಿ ಒಂದು ಕೆಸಲ ಇದೆ ಮಾಡ್ತೀಯ?" ಎಂದು. ಆಗ ಆರಾಮವಾಗಿದ್ದ ನಾನು ಅವನಿಗೊಂದು

ಫೋನ್ ಮಾಡಿದೆ. "ಎಂಥ ಕೆಲಸ ಅದು?" "ಫೀಲ್ಡ್ ವರ್ಕ್. ಹೊರಗಡೆ ಎಲ್ಲ ಹೋಗೋದು ಇರುತ್ತೆ" ಅಂದ ಗೆಳೆಯ ರಾಘೂ. ನಾಲ್ಕು ಗೋಡೆಗಳ ನಡುವಿನ ಕೆಲಸವೆಂದರೆ ಮೊದಲಿನಿಂದಲೂ ಅಲರ್ಜಿಯಿದ್ದ ನನಗೆ ಈ ಕ್ಷೇತ್ರಕಾರ್ಯ ಮಾಡಬೇಕೆನಿಸಿತ್ತು. "ಸರಿ" ಎಂದು ಮರುದಿನ ಹೋಗಿದ್ದು ಎಸ್.ಆರ್.ಸಿ. ಕಛೇರಿಗೆ. ಅಲ್ಲಿ ತುಕಾರಾಮ್ ಸರ್ ಭೇಟಿಯಾಯಿತು. "ನಾವು ಆರ್. ಭರಣಯ್ಯ ಅನ್ನುವ ಐ.ಎ.ಎಸ್. ಅಧಿಕಾರಿ ಬಗ್ಗೆ ಪುಸ್ತಕ ಮಾಡುತ್ತಿದ್ದೇವೆ. ಅದಕ್ಕೆ ಕ್ಷೇತ್ರ ಕಾರ್ಯದಿಂದ ಅವರ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗಿದೆ. ಮೊದಲು ಭರಣಯ್ಯನವರ ಹುಟ್ಟೂರು ಸೋಮನಾಥಪುರದಿಂದ ಪ್ರಾರಂಭಿಸಿ ಅಲ್ಲಿ ಯಾವುದಾದರೂ ಮಾಹಿತಿ ಮೂಲಗಳು, ವ್ಯಕ್ತಿಗಳು ಗೊತ್ತಾ?" ಎಂದು ಕೇಳಿದರು. ತಕ್ಷಣವೇ ನೆನಪಾದದ್ದು ನಮ್ಮ ತಾತ. ಸೋಮನಾಥಪುರದ ದೇವಸ್ಥಾನದಲ್ಲಿ ಸುಮಾರು 25 ವರ್ಷ ಕೆಲಸ ಮಾಡಿದ್ದರು. ಈಗ ನಿವೃತ್ತಿಯಾಗಿ ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ. ಅವರ ಸಹಾಯದಿಂದ ಅಲ್ಲಿನ ವ್ಯಕ್ತಿಯೊಬ್ಬರ ಪರಿಚಯವಾಯಿತು.

ಮೊದಲ ಪಯಣ:

ನಾನು 7ನೇ ತರಗತಿಯಲ್ಲಿದ್ದಾಗ ಸೋಮನಾಥಪುರಕ್ಕೆ ಹೋಗಿದ್ದೆ ಅದು ಬಿಟ್ಟರೇ ಈಗಲೇ ಹೋಗಿದ್ದು. ನರಸೀಪುರದಿಂದ ಬಸ್ ಹಿಡಿದು ಸೋಮನಾಥಪುರದ ತಲುಪಿದ ನನಗೆ ಕಂಡಿದ್ದು ಅದೇ ಹಳೆಯ ಸೋಮನಾಥಪುರ. ದೇವಸ್ಥಾನವೊಂದನ್ನು ಬಿಟ್ಟರೆ ಅದೊಂದು ಪ್ರವಾಸಿ ತಾಣವೆಂದು ಹೇಳುವ ಯಾವ ಕುರುಹುಗಳೂ ಅಲ್ಲಿರಲಿಲ್ಲ. ಅದೇ ಗುಂಡಿಬಿದ್ದ ರಸ್ತೆಗಳು. ನಾಲ್ಕೈದು ಸಣ್ಣಪುಟ್ಟ ಅಂಗಡಿಗಳು, ಒಂದಷ್ಟು ಹೊಸ ತಾರಸಿ ಮನೆಗಳನ್ನು ಬಿಟ್ಟರೆ. ಅಂದಿಗೂ ಇಂದಿಗೂ ಏನೂ ಬದಲಾಗಿಲ್ಲ. ಬಸ್ ಇಳಿದು ನೇರವಾಗಿ ಹೋದ್ದು ಶ್ರೀ ರೇಣುಕಾಸ್ವಾಮಿಯವರ ಮನೆಗೆ. ಇವರು ನಮ್ಮ ತಾತನ ಪರಿಚಯಸ್ಥರು. ದೇವಸ್ಥಾನದಲ್ಲೇ ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಬಳಿ ನಾನು ಬಂದ ಉದ್ದೇಶ ತಿಳಿಸಿದೆ. ಅದನ್ನು ಕೇಳಿ ಸಂತೋಷಪಟ್ಟ ಅವರು ನನ್ನನ್ನು ಮೊದಲು ಕರೆದುಕೊಂಡು ಹೋದದ್ದು ಭರಣಯ್ಯನವರ ಮನೆಯ ಹತ್ತಿರ. ಸೋಮನಾಥ ದೇವಾಲಯದ ಬಲಭಾಗಕ್ಕೆ ಅವರ ಮನೆಯಿದೆ. ಅವರು ಬೆಂಗಳೂರಿನಿಂದ ಊರಿಗೆ ಬಂದಾಗ ತಂಗಲೆಂದು ಒಂದು ಹೊಸ ಹೆಂಚಿನ ಮನೆಯನ್ನು ಮಾಡಿಕೊಂಡಿದ್ದರು. ಅದರ ಪಕ್ಕದಲ್ಲೇ ಅವರ ಹಳೆಯಮನೆ. ಅವರ ಪೂರ್ವಜರು ಬಾಳಿ ಬದುಕಿದ ಮನೆ. ಸುತ್ತಮುತ್ತ ದೊಡ್ಡಪ್ಪ ಚಿಕ್ಕಪ್ಪನ ಮನೆಗಳು. ಅವರ ತಮ್ಮನ ಮಕ್ಕಳ ಭೇಟಿಯಾಯಿತು.

ನಂತರ ಊರಿನ ಹಿರಿಯರು. ಮುಖಂಡರನ್ನು ಭೇಟಿಯಾದೆವು. ನಾನು ಬಂದ ಉದ್ದೇಶವನ್ನು ಅವರಿಗೆ ತಿಳಿಸಿದೆ. ಅವರೆಲ್ಲ ತಮ್ಮ ಸಹಕಾರ ಕೊಡಲು ಒಪ್ಪಿದರು. ಮೊದಲು ಆ ಊರಿನ ನಾಲ್ಕೈದು ಹಿರಿಯನ್ನು ಭೇಟಿ ಮಾಡಿದೆ. ಅಷ್ಟೂ ಜನರು ಅವರ ನೆನಪಿನಂಗಳದಿಂದ ಒಂದಷ್ಟು ಮಾಹಿತಿಯನ್ನು ಹೆಕ್ಕಿ ಕೊಟ್ಟರು. ಅಲ್ಲಿಗೆ ಭರಣಯ್ಯನವರ ಬಗ್ಗೆ ನನಗೊಂದಷ್ಟು ಪ್ರಥಮ ಮಾಹಿತಿಗಳು ದೊರೆತವು. ಕೆಲವೊಂದು ಕುತೂಹಲಗಳ ಜೊತೆಗೆ....

ಕೆಲಸ ಕೊಡಿಸಿದ್ದಕ್ಕಷ್ಟೇ ದೇವರಾಗುತ್ತಾರಾ?

ನಾವು ಭೇಟಿ ಮಾಡಿದ ಹಲವಾರು ಜನ ಹೇಳುತ್ತಿದ್ದುದು ಒಂದೇ ಮಾತು. "ಭರಣಯ್ಯ ನಮಗೆ ಕೆಲಸ ಕೊಡಿಸಿದರು. ಅವರು ನಮ್ಮ ಪಾಲಿನ ದೇವರು. ನಮಗೆ ಅನ್ನ ನೀಡಿದ ಪುಣ್ಯಾತ್ಮ" ಎಂದು. ಅಲ್ಲ ಒಬ್ಬ ವ್ಯಕ್ತಿ ಕೆಲಸಕ್ಕೆ ಸೇರಿ ಒಳ್ಳೆ ಹುದ್ದೆಗೆ ಬಂದರೆ ತನ್ನವರು ಮತ್ತು ತನ್ನೂರಿನವರಿಗೆ ಸಹಾಯ ಮಾಡಬೇಕಾದದ್ದು ಆತನ ಕರ್ತವ್ಯ. ಅಷ್ಟು ಮಾತ್ರಕ್ಕೆ ಅವರು ದೇವರಾಗುತ್ತಾರಾ? ಎಂಬುದು ನಮ್ಮಂತ ಪಡ್ಡೆ ಪಟಾಲಮ್ಮುಗಳ ಪ್ರಶ್ನೆಯಿರಬಹುದು. ಆದರೆ ಅವರು ಭರಣಯ್ಯನವರನ್ನು ದೇವರು ಎನ್ನಲು ಅವರು ಕೆಲಸ ಕೊಡಿಸಿದರು ಎನ್ನುವುದಕ್ಕಿಂತ ಕೊಡಿಸುವಾಗಿನ ಸನ್ನಿವೇಶಗಳು ಪ್ರಮುಖ ಕಾರಣಗಳಾಗುತ್ತವೆ. ದುಡ್ಡು ಕೊಟ್ಟರೆ ಎಷ್ಟು ಕೆಲಸಬೇಕು? ಎಲ್ಲಿ ಕೆಲಸ ಬೇಕು? ಎನ್ನುವಂತಹ ಪರಿಸ್ಥಿತಿಯಿರುವಾಗ ಕೆಲಸ ಕೇಳಲು ಬಂದವನ ಬದುಕು ಬವಣೆಗಳನ್ನು ವಿಚಾರಿಸಿ ಆ ಕ್ಷಣ ಅವರ ಹೃದಯ ಮಿಡಿಯುತ್ತಿತ್ತು. ಅದಕ್ಕೆ ಜನಗಳ ದೃಷ್ಟಿಯಲ್ಲಿ ಅವರು ದೇವರ ಪಟ್ಟಕ್ಕೇರಿದ್ದು. ಕೆಲಸ ಕೇಳಲೆಂದು ಬಂದವರನ್ನು ಮೊದಲು ಕೇಳುತ್ತಿದ್ದುದು "ಊಟ ಮಾಡಿದ್ದೀಯಾ?" ಎಂದು. ಇಲ್ಲದಿದ್ದರೇ ತಾವೇ ದುಡ್ಡು ಕೊಟ್ಟು ಊಟಕ್ಕೆ ಕಳುಹಿಸುತ್ತಿದ್ದರು. ನಂತರ ಕೆಲಸದ ಆದೇಶ ನೀಡಿಕೆಗೆ ದಿನಾಂಕ ಗೊತ್ತುಪಡಿಸಿ ಅವರ ಬಸ್ ಚಾರ್ಜ್‌ಗೆ ಕಾಸು ಕೊಟ್ಟು ಊರಿಗೆ ಕಳಿಸುತ್ತಿದ್ದರು. ಇದನ್ನು ಯಾರೋ ಒಬ್ಬರು ಹೇಳಿದ್ದರೆ ನಂಬಲು ಹಿಂದೆ ಮುಂದೆ ನೋಡಬೇಕಾಗಿತ್ತು. ಆದರೆ ಅವರಿಂದ ಕೆಲಸ ಪಡೆದುಕೊಂಡವರ ಎಲ್ಲರ ಅನುಭವ ಇದೇ ರೀತಿಯದ್ದು. ಅವರೊಬ್ಬ ಅಧಿಕಾರಿಯಾಗಿ ಕೇವಲ ಕೆಲಸ ಕೊಟ್ಟು ಕೈ ತೊಳೆದು ಕೊಳ್ಳಬಹುದಾಗಿತ್ತು. ಅವರನ್ನು ಯಾರೂ ಪ್ರಶ್ನೆ ಮಾಡುತ್ತಿರಲಿಲ್ಲ. ಆದರೆ ಅದೆಲ್ಲವನ್ನು ಮೀರಿ ಅಧಿಕಾರತ್ವದ ಎಲ್ಲೆಯನ್ನು ದಾಟಿ ಸಹಾಯ ಹಸ್ತ ಚಾಚುತ್ತಿದ್ದರು. ಇಂಥ ಅಪರೂಪದ ವ್ಯಕ್ತಿತ್ವದ ಬಗ್ಗೆ ಜನರು ಮಾತಾಡುತ್ತಿದ್ದಾಗ ಇಂದಿನ ನಮ್ಮ ಕೆಲವು ಘನ ಐ.ಎ.ಎಸ್., ಐ.ಪಿ.ಎಸ್., ಎಂಬ ಅಧಿಕಾರದಮಲಿನ ಅಧಿಕಾರಿಗಳು ಕಣ್ಣಮುಂದೆ ಹಾದು ಹೋಗುತ್ತಿದ್ದರು.....

ಸವರ್ಣೀಯರ ಮನೆಯ ಭಾವಚಿತ್ರವಾದದ್ದು:

ಒಬ್ಬ ದಲಿತನ ಮಟ್ಟಿಗೆ ಇದು ಅಪರೂಪದವೆಂದೇ ಹೇಳಬಹುದು. ಮಾನವೀಯತೆಯ ಮುಂದೆ ಜಾತೀಯತೆ ಎಂಬುದು ನಗಣ್ಯ ಎಂಬುದಕ್ಕೆ ಇದೊಂದು ಉದಾಹರಣೆ. ಅಸ್ಪೃಶ್ಯತೆ ಶೋಷಣೆ ಎಂಬುದೆಲ್ಲ ಭರಣಯ್ಯನವರ ಕಾಲದಲ್ಲಿ ಕೂಡ ಇತ್ತು. ದಲಿತರೆಂದರೆ ತುಳಿತಕ್ಕೆಂದೇ ಮೀಸಲಾದವರು ಎಂಬ ಭಾವನೆ ಕೆಲವೆಡೆಗಳಲ್ಲಿ ಇತ್ತು. ಅಂತಹುದರಲ್ಲಿ ಭರಣಯ್ಯನವರ ಪೋಟೋ ಸವರ್ಣೀಯರ ಮನೆಗಳಲ್ಲಿ ಇತ್ತು ಎಂಬ ವಿಷಯ ಕೇಳಿ ಆಶ್ಚರ್ಯದ ಜೊತೆಗೆ ಕುತೂಹಲವೂ ಜಾಸ್ತಿಯಾಯಿತು. ಒಬ್ಬ ದಲಿತನ ಪೋಟೋವನ್ನು ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳುತ್ತಾರೆಂದರೆ ಭರಣಯ್ಯನವರ ವ್ಯಕ್ತಿತ್ವದ ಹೊಳಪು ಇನ್ನಷ್ಟು ಜಾಸ್ತಿಯಾಗಿತ್ತು. ಅವರು ಕೇವಲ ದಲಿತರಿಗಲ್ಲದೇ ಎಲ್ಲ ವರ್ಗದ ಜನರನ್ನು ಸಮಾನವಾಗಿ ನೋಡುತ್ತಿದ್ದರು. ಬಡತನವೆಂಬ ಅರ್ಹತೆ ಇದ್ದವರಿಗೆಲ್ಲಾ ಸರ್ಕಾರಿ ನೌಕರಿಯನ್ನು ಕೊಡಿಸಿದ್ದರು. ತಮ್ಮ ಜನ ತಮ್ಮ ಕುಲ ಎಂಬ ಸಂಕುಚಿತ ಮನೋಭಾವ ಹೊಂದಿದ್ದರೆ ಕೇವಲ ಒಂದು ವರ್ಗದ ಕಣ್ಮಣಿಯಾಗುತ್ತಿದ್ದರು. ತಮ್ಮ ಜಾತಿಯ ಪರಿಧಿಯೊಳಗಿನಿಂದಲೇ ಇತರ ಜಾತಿಗಳ ಕುಟುಂಬಕ್ಕೆ ಆಸರೆಯ ಹಸ್ತ ಚಾಚುತ್ತಿದ್ದರು. ಈ ಕಾರಣದಿಂದಲೇ ಅವರು ಎಲ್ಲರ ಮನಸ್ಸನ್ನು ಗೆದ್ದಿದ್ದರು. ಹೀಗೆ ಸವರ್ಣೀಯರು ಭರಣಯ್ಯನವರನ್ನು ತಮ್ಮ ಮನೆಯ ಹಜಾರಕ್ಕೆ ಬಿಟ್ಟುಕೊಳ್ಳದಿದ್ದರೂ ಮನಸೆಂಬ ಹಜಾರಕ್ಕೆ ಬಿಟ್ಟುಕೊಂಡಿದ್ದರು.

ಜಾತಿ ಪದ್ಧತಿಯನ್ನು ಗೌರವಿಸಿದ್ದು:

ಭರಣಯ್ಯನವರು ಎಷ್ಟೇ ಎತ್ತರಕ್ಕೆ ಬೆಳೆದರೂ ಅವರಿಗೆ ಅವರ 'ಜಾತಿಯ' ಪ್ರಜ್ಞೆ ಬಹಳವಾಗಿತ್ತು. ಎಂದಿಗೂ ಜಾತಿಯ ಚೌಕಟ್ಟನ್ನು ಮೀರಿ ಬದುಕಲಿಲ್ಲ. ಅವರಿಗಿದ್ದ ವಿದ್ಯೆ, ಪಾಂಡಿತ್ಯ, ಅಧಿಕಾರ. ಪ್ರಭಾವದಿಂದ ಅವರು ಸಮಾಜಮುಖಿ ಚಿಂತನಗೆಳ ಕಡೆ ಗಮನಹರಿಸಿದ್ದರೋ ಹೊರತು. 'ಜಾತಿ' ಎಂಬುದನ್ನು ಯಾವುದೇ ಅಸ್ತ್ರಮಾಡಿಕೊಳ್ಳಲಿಲ್ಲ. ಬಹುಶಃ ಇಷ್ಟೇ ಅಧಿಕಾರ, ಪ್ರಭಾವ ಬೇರಾವುದೇ ಕ್ರಾಂತಿಕಾರಕ ಮನಸ್ಸಿಗಿದ್ದಿದ್ದರೆ ಒಂದು ಸಾಮಾಜಿಕ ಕ್ರಾಂತಿಯೇ ಆಗಬಹುದಿತ್ತು. ಆದರೆ ಭರಣಯ್ಯನವರಿಗಿದ್ದಿದ್ದು ಒಂದೇ ಗುರಿ. ತನಗೆ ಅಧಿಕಾರವಿರುವವರೆಗೂ ಬಡತನದ ಕುಟುಂಬಗಳಿಗೆ ಅನ್ನದ ದಾರಿ ಮಾಡಿಕೊಡುವುದು.

ನಮ್ಮ ಕ್ಷೇತ್ರಕಾರ್ಯದ ಸಂದರ್ಶನಗಳಲ್ಲಿ ಕೇಳಿಬಂದ ಹಲವು ವಿಚಾರಗಳೆಂದರೆ, ಭರಣಯ್ಯ ಊರಿಗೆ ಬಂದಾಗ ಸವರ್ಣೀಯರ ಬೀದಿ ಮುಖಾಂತರ ಮನೆಗೆ ಹೋಗಬೇಕಾಗುತ್ತದೆ ಎಂದು ದೇವಸ್ಥಾನದ ಮುಂದಿನಿಂದ ತಮ್ಮ ಮನೆಗೆ ಪ್ರತ್ಯೇಕ

ದಾರಿ ಮಾಡಿಸಿಕೊಂಡಿದ್ದು, ದಾರಿಯಲ್ಲಿ ಎಲ್ಲಾದರೂ 'ಎಳನೀರು' ಕುಡಿದರೆ ಅದನ್ನು ಕೆಳಕ್ಕೆ ಎಸೆಯದೆ ತಮ್ಮ ಕಾರಿನಲ್ಲೇ ಕೊಂಡೊಯ್ಯುತ್ತಿದ್ದುದು, ದೇವಸ್ಥಾನಗಳಿಗೆ ಹೋದರೆ ಗರ್ಭಗುಡಿ ಪ್ರವೇಶಿಸದೇ ಇರುತ್ತಿದ್ದುದು. ತಮ್ಮಲ್ಲಿಗೆ ಯಾರಾದರೂ ಅನ್ಯ ಸಮುದಾಯದವರು ಕೆಲಸ ಕೇಳಿಕೊಂಡು ಬಂದರೆ ಅವರಿಗೆ ದುಡ್ಡು ಕೊಟ್ಟು ಹೋಟೇಲ್‌ಗೆ ಊಟಕ್ಕೆ ಕಳಿಸುತ್ತಿದ್ದುದು. ಹೀಗೆ ಹಲವಾರು ವಿಚಾರಗಳಲ್ಲಿ ಅವರು ತಮ್ಮ 'ಜಾತಿ'ಪದ್ಧತಿಯನ್ನು ಗೌರವಿಸುತ್ತಿದ್ದರು. ಊರೊಳಗೆ ನೇರವಾಗಿ ನುಗ್ಗಿದ್ದರೆ, ಎಳನೀರು ಬುರುಡೆಯನ್ನು ಅಲ್ಲೇ ಎಸೆದಿದ್ದರೆ, ದೇವಸ್ಥಾನ ಪ್ರವೇಶಿಸಿದ್ದರೆ, ಅಥವಾ ಸವರ್ಣೀಯರಿಗೆ ತಮ್ಮ ಮನೆಯಲ್ಲೇ ಊಟು ಹಾಕಿದ್ದರೆ, ಅವರನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಅವರಿಗೆ ಅವೆಲ್ಲ ಅಧಿಕಾರಗಳು ಇದ್ದವು. ಆದರೂ ಭರಣಯ್ಯ ಎಲ್ಲೂ ಆ ಒಂದು ಸಾಮಾಜಿಕ 'ಎಲ್ಲೆ'ಯನ್ನು ಮೀರಲಿಲ್ಲ. ಆ 'ಎಲ್ಲೆ'ಯನ್ನು ಮೀರದೇ 'ಕಾಯಕ ಕ್ರಾಂತಿ' ಮಾಡಬಹುದೆಂದು ತೋರಿಸಿಕೊಟ್ಟರು. ಇಂದಿನ ನಮ್ಮಂತವರಿಗೆ ಅಂತಹ ಗುಣವಿರಬೇಕು. ಸಮಾಜ ವಿನಾಶದಂಚಿಗೆ ತಲುಪಿದ್ದರೂ ಜಾತಿಯ ಭೂತ ನಮ್ಮನ್ನು ಬಿಟ್ಟಿಲ್ಲ. ಭರಣಯ್ಯನವರ ಮೌನಕ್ರಾಂತಿ ನಮಗೆಲ್ಲ ಮಾದರಿಯಾಗಬೇಕು. ಹೀಗೆ ಜಾತಿಹೀನನ ಮನೆಯ 'ಜ್ಯೋತಿ' ಆರ್. ಭರಣಯ್ಯ. ಎಷ್ಟೋ ಹೀನ ಬದುಕಿನ ಕತ್ತಲೆಗೆ ಬೆಳಕಾಗಿದ್ದಾರೆ.

ಕಾಲದ ಮಹಿಮೆ:

ಭರಣಯ್ಯ ಈಗ ಇದ್ದಿದ್ರೆ ಆ ರೀತಿ ಕೆಲಸ ಕೊಡ್ಸೋಕೆ ಆಗ್ತಿತ್ತಾ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಆಗೆಲ್ಲ ಸರ್ಕಾರಿ ಕೆಲಸಗಳಿಗೆ ಜನ ಕಮ್ಮಿ ಇದ್ದರು. ಇದ್ದರೂ ವಿದ್ಯಾರ್ಹತೆ ಕಡಿಮೆ ಇರುತ್ತಿತ್ತು. ಹಾಗಾಗಿ ಸರ್ಕಾರಿ ಕೆಲಸಗಳಿಗೆ ಹೆಚ್ಚಿನ ನೌಕರರ ಅವಶ್ಯಕತೆ ಇತ್ತು. ಹಾಗೆಂದು ಎಲ್ಲ ಅಧಿಕಾರಿಗಳು ಎಲ್ಲರಿಗೂ ಕೆಲಸಕೊಡಲಿಲ್ಲ. ಆ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡವರೆಂದರೆ ಭರಣಯ್ಯ. ಅವರಿಗೆ ಯಾವುದೇ ರಾಜಕೀಯ ಒತ್ತಡಗಳಾಗಲೀ, ಪ್ರಭಾವಗಳಾಗಲೀ ಅಡ್ಡ ಬರಲಿಲ್ಲ. ಕೆಲಸ ಕೊಡಿಸುವ ವಿಚಾರದಲ್ಲಿ ಅಕ್ಷರಶಃ ಉದಾರಿಯಾಗಿದ್ದರು. ಕೆಲಸಕ್ಕೆ ನೌಕರರನ್ನು ತೆಗೆದುಕೊಂಡು ನಂತರ ಅದಕ್ಕೆ ಸರ್ಕಾರದ ಅನುಮೋದನೆ ದೊರಕುತ್ತಿತ್ತು. ಅಷ್ಟರ ಮಟ್ಟಿನ ಸ್ವಾತಂತ್ರ್ಯ ಭರಣಯ್ಯನವರಿಗಿತ್ತು. ಭರಣಯ್ಯನವರ ಒಂದು ಪತ್ರಕ್ಕೆ ಸರ್ಕಾರದ ಯಾವ ಇಲಾಖೆಯಲ್ಲಾದರೂ ಕೆಲಸ ಸಿಗುತ್ತಿತ್ತು.

ಪ್ರಸ್ತುತ ವ್ಯವಸ್ಥೆಯಲ್ಲಿ ಭರಣಯ್ಯ ಇದ್ದಿದ್ದರೆ ಈ ರೀತಿ ಕೆಲಸಕ್ಕೆ ನೌಕರರನ್ನು ಸೇರಿಸಿಕೊಳ್ಳಲು ಆಗುತ್ತಿರಲಿಲ್ಲ. ಕಾರಣ ಈಗಿನ ಪ್ರಭಾವ, ಭ್ರಷ್ಟಾಚಾರ, ಲಂಚ ಮೊದಲಾದವುಗಳು. ಈಗಿನ ವ್ಯವಸ್ಥೆಯು. ಒಬ್ಬರಲ್ಲ ನೂರಾರು ಭರಣಯ್ಯಗಳು ಹುಟ್ಟಿಬಂದರೂ ಬದಲಾಗದಷ್ಟು ಕುಲಗೆಟ್ಟಿವೆ. ಹೀಗಾಗಿ ಆ ವ್ಯವಸ್ಥೆಯನ್ನು ಹಳಿಯುತ್ತ ಶಪಿಸುತ್ತ ಕಾಲದೂಡಬೇಕಷ್ಟೆ.

ಅಂತಹ ಭರಣಯ್ಯ ಮತ್ತೆಂದೂ ಹುಟ್ಟಲಿಲ್ಲ. ಭರಣಯ್ಯನವರಿಂದ ಕೆಲಸ ಪಡೆದುಕೊಂಡ ಎಷ್ಟೋ ಜನರನ್ನು ನಾವು ಭೇಟಿಯಾಗಿದ್ದೀವಿ. ಆದರೆ ಅವರಿಂದ ಕೆಲಸ ಪಡೆದು ಅರ್ಧದಲ್ಲೇ ಕೆಲಸ ಬಿಟ್ಟ ಎಷ್ಟೋ ಜನರಿದ್ದಾರೆ. ಈಗ ಓದಿರುವವರಿಗೇ ಕೆಲಸ ಸಿಗುತ್ತಿಲ್ಲ. ಆಗ ಭರಣಯ್ಯ ಬೀದಿಯಲ್ಲಿ ಅಲೆಯುತ್ತಿದ್ದ ಪುಂಡು ಪೋಕರಿಗಳ ಎಳೆದುಕೊಂಡು ಹೋಗಿ ಕೆಲಸ ಕೊಡಿಸುತ್ತಿದ್ದರಂತೆ....! ಕೆಲಸ ಪಡೆದು ಕೊಂಡವರೆಲ್ಲ ಭರಣಯ್ಯನವರ ಅರ್ಧದಷ್ಟು ಪ್ರಾಮಾಣಿಕವಾಗಿ ದುಡಿದಿದ್ದರೆ. ವ್ಯವಸ್ಥೆ ಇನ್ನೂ ಸುಧಾರಿಸುತ್ತಿತ್ತು. ಭೇಟಿ ಮಾಡಿದ ಅಷ್ಟು ಮಹನೀಯರು ಹೇಳಿದ್ದು "ನಾವು ಭರಣಯ್ಯನವರಿಂದ ಅದು ಕಲಿತೆ, ಇದು ಕಲಿತೆ" ಎಂದು. Interesting ಅಂದರೆ ಅದೆಲ್ಲ ಮಾತಲ್ಲಿ ಸೀಮಿತ ಅಷ್ಟೆ. ಕಾರ್ಯರೂಪಕ್ಕೆ ತಂದದ್ದು ಕಡಿಮೆ. ಕೇವಲ ಕಲಿತರಷ್ಟೇ ಸಾಲದು ಕಲಿತದ್ದನ್ನು ಮತ್ತೊಬ್ಬರಿಗೆ ಕಲಿಸಬೇಕು. ಭರಣಯ್ಯ ತಾವು ಕೆಲಸ ಕೊಡಿಸುವವರಿಗೆ ಹೇಳಿದ್ದು ಇದನ್ನೇ.. "ಪ್ರಾಮಾಣಿಕವಾಗಿ ಬದುಕು ಅದಕ್ಕಿಂತ ಹೆಚ್ಚಾಗಿ ನೀನು ಹತ್ತು ಜನಕ್ಕೆ ಅನ್ನ ಕೊಡು" ಅಂತ... ಎಲ್ಲರೂ ಅದನ್ನು ಅನುಸರಿಸಿದರೋ ಇಲ್ಲವೋ ಗೊತ್ತಿಲ್ಲ. ನಮ್ಮ ಯುವ ಜನತೆ ಮಾತ್ರ ಅದನ್ನು ನೆನಪಿಟ್ಟುಕೊಳ್ಳಬೇಕು.

ಮೀಸಲು ಬೆನ್ನುಹತ್ತಿದ್ದು:

ಭರಣಯ್ಯ ರಾಜ್ಯ ಅಧಿಕಾರ ವಲಯದಲ್ಲಿ ದೊಡ್ಡ ಹೆಸರು ಮಾಡಿದ್ದರು. ಅಧಿಕಾರಿ ಎನ್ನುವುದಕ್ಕಿಂತ ಜನಾನುರಾಗಿಯಾಗಿ ಎಲ್ಲರಿಗೂ ಹತ್ತಿರವಾಗಿದ್ದರು. ಅವರು ಚುನಾವಣೆಗೆ ಸ್ಪರ್ಧಿಸಿದ್ದು ಮಾತ್ರ ಎಲ್ಲೋ ರಾಜಕೀಯ ಲೆಕ್ಕಾಚಾರದಲ್ಲಿ ತಪ್ಪಿದರು ಅನ್ನಿಸುತ್ತೆ. ಆಡಳಿತವೇ ಬೇರೆ ರಾಜಕೀಯವೇ ಬೇರೆ ಎಂಬುದು ಬಹುಶಃ ಹೂಮನಸ್ಸಿನ ಭರಣಯ್ಯನವರಿಗೆ ತಿಳಿಯದೇ ಹೋಗಿರಬಹುದು. ಅವರಿಗಿದ್ದ ಜನ ಪ್ರೀತಿಗೆ ಅವರು ಎಲ್ಲೇ ಚುನಾವಣೆಗೆ ನಿಂತಿದ್ದರೂ ಗೆಲ್ಲಬಹುದಿತ್ತು. ಆದರೂ ಅವರು ತಮ್ಮ ಸ್ವಂತ ತಾಲ್ಲೂಕು ತಿ.ನರಸೀಪುರದಲ್ಲಿ ಸ್ಪರ್ಧಿಸಬಹುದಿತ್ತು. ಅದ್ಯಾವ ಕಾರಣಗಳಿಂದಾಗಿ ಅಲ್ಲಿ ನಿಲ್ಲಲಿಲ್ಲವೋ ಗೊತ್ತಿಲ್ಲ. ಜನಕ್ಕೆ ಚುನಾವಣಾ ಸಮಯದಲ್ಲಿ ಅವರು ಓಟು ಕೇಳುವ ಬದಲಾಗಿ, ಸವಲತ್ತುಗಳನ್ನು ಹೇಗೆ ಜನರಿಗೆ ತಲುಪಿಸಬೇಕೆಂದು ವಿಚಾರ ತಿಳಿಸುತ್ತಾ, ಉಳಿದ ಜನ ಪ್ರತಿನಿಧಿಗಳಿಗೆ ಮಾದರಿಯಾಗಿರುತ್ತಿದ್ದರು. ಅಧಿಕಾರಶಾಹಿಯ ವರ್ತುಲದೊಳಗೆ ಸಾಮಾಜಿಕ ಕಳಕಳಿಯನ್ನು ತುಂಬುತ್ತಿದ್ದರು. ಆದರೆ ಜನತೆಯ ಲೆಕ್ಕಾಚಾರವೇ ಬೇರೆಯಾಗಿತ್ತು. ದೇವರೆಂದು ಒಪ್ಪಿಕೊಂಡವರು ನಾಯಕನೆಂದು ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದರು. ಹೀಗೆ ಅಲ್ಲಿನ ಜನ ತಮ್ಮಲ್ಲಾಗುವ ಬದಲಾವಣೆಯೊಂದಕ್ಕೆ ತಾವೇ 'ತಡೆ' ಹಾಕಿದ್ದರು. ಚುನಾವಣಾ ಪ್ರಚಾರಕ್ಕೆ ಹೋದ

ಭರಣಯ್ಯ ಅಲ್ಲಿ ಸಂಘಟನೆ ಬಗ್ಗೆ ಹೆಚ್ಚು ಮಾತಾಡತೊಡಗಿದ್ದರು. ವೃತ್ತಿಪರ ರಾಜಕಾರಣಿಗಳಂತೆ ಭರವಸೆಗಳ ಖಾಲಿ ಬೋಗಿಗಳನ್ನು ಬಿಡಲಿಲ್ಲ. ಜನಾಂಗವನ್ನು ತಳಮಟ್ಟದಿಂದ ಸಂಘಟಿಸುವುದರ ಜೊತೆಗೆ ಇತರ ಜನಾಂಗಗಳ ಜೊತೆ ಸಾಧಿಸಬಹುದಾದ ಸಮನ್ವಯವನ್ನು ಕೂಡ ಹೇಳುತ್ತಿದ್ದರು. ಇದೆಲ್ಲವನ್ನು ಗಮನಿಸಿದರೆ ಭರಣಯ್ಯನವರಂತ ಧೀಮಂತ ವ್ಯಕ್ತಿಯನ್ನು ಹೊಂದಿದ್ದ ಆ ಕಾಲವೇ ಶ್ರೇಷ್ಠವೆನ್ನಬಹುದೇನೋ....

ಜನಾಂಗಕ್ಕೆ ಬೆಳೆದವರ ರಕ್ಷೆ:

ಭರಣಯ್ಯನವರ ಮನೆತನದವರು ಅನುಕೂಲಸ್ಥರೇ. ಆ ಕಾರಣದಿಂದ ಅವರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ನೆರವು ಸಿಕ್ಕಿತು. ಹೀಗಾಗಿ ಅವರು ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಿಕೊಂಡರು. ನಂತರ ಒಂದೊಂದೇ ಹುದ್ದೆಯಲ್ಲಿ ಮುಂದುವರೆದು ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿದರು. ಒಬ್ಬ ವ್ಯಕ್ತಿ ಉನ್ನತ ಸ್ಥಾನಕ್ಕೇರಿದಾಗ ಇಡೀ ಜನಾಂಗ ಅವರಿಂದ ನಿರೀಕ್ಷೆಯಿಟ್ಟುಕೊಂಡಿರುತ್ತದೆ. ಸಲಹೆ, ಸಹಕಾರ ಮತ್ತು ಅವಕಾಶ. ಭರಣಯ್ಯ ಸಹ ತನ್ನ ಸಮುದಾಯಕ್ಕೆ ಉತ್ತಮ ಮಾರ್ಗದರ್ಶಕರಾಗಿ ದಾರಿ ತೋರಿದ್ದಾರೆ. ಅವರ ಕುಟುಂಬದ ಹಲವಾರು ಜನ ಅವರಿಂದ ಪ್ರಭಾವಿತರಾಗಿ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ನಂತ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸೋಮನಾಥಪುರದಲ್ಲೇ ಹಲವಾರು ಜನ ಅಧಿಕಾರಿಗಳು ಇದ್ದಾರೆ. ಭರಣಯ್ಯ ಅವರ ಕುಟುಂಬಕ್ಕೆ ಒಂದು ಭದ್ರತೆಯಂತೆ ಇದ್ದರು. ಹೀಗಾಗಿ ಅವರ ಓದಿಗೆ, ಬೆಳವಣಿಗೆಗೆ ಯಾವುದೇ ಸಾಮಾಜಿಕ ಅಡ್ಡಿ ಆಂತಕಗಳು ಎದುರಾಗಲಿಲ್ಲ. ಆದಾಗ್ಯೂ ಇಂದಿಗೂ ಅವರಲ್ಲಿ ಮತ್ತೊಬ್ಬ ಭರಣಯ್ಯ ಬರುವರೇ? ಎನಿಸುತ್ತಿದೆ.

ಕೊನೆಯದಾಗಿ:

ಭರಣಯ್ಯನವರ ಜೀವನಗಾಥೆಯನ್ನು ತಿಳಿದ ಬಳಿಕ ಇಂತಹ ವ್ಯಕ್ತಿಯೊಬ್ಬರು ಇದ್ದರಾ....!? ಎನ್ನುವ ಸೋಜಿಗ ಹುಟ್ಟುತ್ತದೆ. ಯುವ ಪೀಳಿಗೆಗಂತೂ ನಂಬಲಸಾಧ್ಯವಾದ ವಿಚಾರ. ಇಂದಿನ ವ್ಯವಸ್ಥೆಯಲ್ಲಿ ಕಲ್ಪಿಸಿಕೊಳ್ಳಲೂ ಆಗದಂತಹ ವ್ಯಕ್ತಿತ್ವ. ವಾಸ್ತವವಾಗಿ ಆಗಿನ ಎಲ್ಲ ಜನರೂ, ಅಧಿಕಾರಿಗಳು ಭರಣಯ್ಯನವರ 'ರೀತಿ' ಸಾರ್ವಜನಿಕ ಸೇವೆ ಮಾಡಬೇಕಿತ್ತು. ಆದರೆ ಭರಣಯ್ಯ ನಿಜವಾದ ಜನಪರ ಕೆಲಸಗಳನ್ನು ಮಾಡಿ ತೋರಿಸಿದರು. ಹೀಗಾಗಿ ಸಹಜವಾಗಿಯೇ ಅವರು ಜನರ ಕಣ್ಮಣಿಯಾದರು. ಎಷ್ಟೋ

ಜನ ಅಧಿಕಾರಿಗಳು, ಸಂಬಂಧಿಕರು. ಅವರ ಸಾಧನೆಗಳ ಗುಣಗಾನ ಮಾಡಿಕೊಂಡು ಕಾಲದೂಡಿದರೇ ವಿನಃ ಭರಣಯ್ಯನವರಂತ ಸಾಹಸಗಳಿಗೆ ಮುಂದಾಗಲಿಲ್ಲ. ಯಾರಾದರೊಬ್ಬರು ಅಪ್ಪಟ, ಶುದ್ಧಕನ್ನಡದಲ್ಲಿ ಮಾತಾಡಿದರೆ ಎಲ್ಲರೂ ಅವರನ್ನು ಅಭಿನಂದಿಸುತ್ತೇವೆ. ಆದರೆ ನಾವುಗಳು ಮಾತ್ರ ಅದರ ಬಗೆಗೆ ತಲೆಕೆಡಿಸಿಕೊಳ್ಳುವುದಿಲ್ಲ.. ಎಲ್ಲ ವಿಚಾರಗಳಲ್ಲೂ ನಮ್ಮ ಸಮಾಜ ಹೀಗೆಯೇ... ಭರಣಯ್ಯನವರೆನೋ ಮಾಡಿ ತೋರಿಸಿದರು. ಅವರಿಗೆ ಸಮಾಜವನ್ನು ಸಮನಾಗಿಕಂಡು ಹಿಂದುಳಿದವರ ಏಳಿಗೆಗೆ ಶ್ರಮಿಸುವ ಕಳಕಳಿಯಿತ್ತು. ಆ ದಿಸೆಯಲ್ಲಿ ಯಶಸ್ವಿಯಾಗಿದ್ದರು ಕೂಡ. ಆದರೆ ಅವರ ಸಾಧನೆಗಳನ್ನು ಕಂಡು ಚಪ್ಪರಿಸುವ ನಾವುಗಳು ನಮ್ಮ ಜವಾಬ್ದಾರಿಯನ್ನು ಅರಿಯಬೇಕಿದೆ. ಭರಣಯ್ಯ ಅಭಿವೃದ್ಧಿ ಸಮಾಜಕ್ಕೊಂದು ಮಾದರಿ.

ಈಗ ಯಾರು ಯಾವುದನ್ನು ಬೇಕಾದರೂ ಕಲಿಯಬಹುದು. ಜಾತಿಯಾಧಾರಿತ ಕಸುಬುಗಳನ್ನು ಮಾತ್ರ ಕಲಿಯಬೇಕೆಂಬ ಗೊಡ್ಡು ನಿಯಮ ಎಂದೋ ಕಾಣೆಯಾಗಿದೆ. ಆದರೆ ವೇದ, ಶಾಸ್ತ್ರ, ಸಂಸ್ಕೃತ, ಉನ್ನತ ಅಧ್ಯಯನಗಳನ್ನು ಮೇಲುಸ್ತರದವರು ಮಾತ್ರ ಕಲಿಯಬೇಕು. ದಲಿತರ – ಹಿಂದುಳಿದವರಿಗೆ ಅದು ನಿಷಿದ್ಧ ಎಂಬ ಕಟ್ಟಳೆಯನ್ನು ನಾವು ನೋಡಿಲ್ಲವಾದರೂ ಕೇಳಿದ್ದೇವೆ. ಬಹುಶಃ ಭರಣಯ್ಯನವರ ಕಾಲದಲ್ಲಿ ಇದೇ ಪರಿಸ್ಥಿತಿ ಇತ್ತು ಎಂದು ತೋರುತ್ತದೆ. ಯಾವುದು ತಮ್ಮ ವರ್ಗಕ್ಕೆ ನಿಷಿದ್ಧ ಎಂಬ ನಿಯಮವಿತ್ತೊ ಅದೇ ಸಂಸ್ಕೃತವನ್ನು ಭರಣಯ್ಯ ಕಲಿತಿದ್ದರು. ಈ ಕಾರಣಕ್ಕೆ ಭರಣಯ್ಯ ಭಿನ್ನವಾಗಿದ್ದರು. ಚಿತ್ರದುರ್ಗದ ಕಾಶೀನಾಥಶಾಸ್ತ್ರಿಗಳು ತಮ್ಮ ಉಪೇಕ್ಷಿತ ಬಂಧು ಭರಣಯ್ಯನವರನ್ನು ತಮ್ಮ ಮನೆಯ ಯಜ್ಞಶಾಲೆಯಲ್ಲಿ ಕುಳ್ಳಿರಿಸಿ ಸಂಸ್ಕೃತ ಕಲಿಸುತ್ತಿದ್ದರಂತೆ. ಅಂದರೆ ಕಾಶೀನಾಥ ಶಾಸ್ತ್ರಿಗಳಿಗೆ ಆಗ ಎದುರಾಗಿದ್ದ ಸವಾಲುಗಳು ಯಾವುವು ಎಂಬುದು ನಮಗೆ ತಿಳಿಯದಿದ್ದರೂ, ಶಾಸ್ತ್ರಿಗಳ ಈ ಕಾರ್ಯವಂತೂ ಸರ್ವ ಜನಾಂಗಕ್ಕೂ ಮಾದರಿ. ದಲಿತನೊಬ್ಬನನ್ನು ಯಜ್ಞಶಾಲೆಗೆ ಬಿಟ್ಟುಕೊಳ್ಳುವುದೆಂದರೆ ಸುಲಭದ ಮಾತಾಗಿರಲಿಲ್ಲ. ಆದರೆ ಇಬ್ಬರ ಮನಸ್ಥಿತಿಯೋ ಒಂದೇ ಆಗಿತ್ತೆಂಬುದಕ್ಕೆ ಯಾವ ಅನುಮಾನಗಳೂ ಇಲ್ಲ. ಜಾತಿ ವ್ಯವಸ್ಥೆಯೇ ಪ್ರಮುಖವಾಗಿದ್ದ ಕಾಲದಲ್ಲಿ ಅದು ಒಂದು ಕ್ರಾಂತಿಯೇ.

ಕೊಳ್ಳೇಗಾಲದ ಚುನಾವಣೆಗೆ ಸ್ಪರ್ಧಿಸಿದ್ದ ಸಮಯದಲ್ಲಿ ಅಲ್ಲಿ ಪ್ರಚಾರದ ಜೊತೆಗೆ ಸಮುದಾಯದ ಸಂಘಟನೆಗೆ ಹೆಚ್ಚು ಆದ್ಯತೆ ಕೊಟ್ಟಿದ್ದರು. ಪ್ರಚಾರದ ಸಂದರ್ಭದಲ್ಲಿ ಅವರು 'ಹರಿಜನ' ಎಂಬ ಪದದ ಬದಲಾಗಿ 'ದಲಿತ' ಎಂಬ ಪದವನ್ನೇ ಬಳಸುವಂತೆ ಸಲಹೆ ನೀಡುತ್ತಿದ್ದರು. ಆದರೆ ಯಾಕೆ ಎಂಬುದು ಸ್ಪಷ್ಟವಾಗಿ ನನಗೆ ಗೊತ್ತಿಲ್ಲವಾದರೂ ಅವರು ಅಂಬೇಡ್ಕರ್ ಅನುಯಾಯಿಯಾಗಿದ್ದರು. 'ಹರಿಜನ' ಎಂಬುದು ಮಹಾತ್ಮ ಗಾಂಧೀಜಿ ದಲಿತ ಸಮುದಾಯಕ್ಕೆ ಸಂಬೋಧಿಸಿದ ಹೆಸರು. ಆದರೆ ಗಾಂಧಿಯ

ಕೆಲವು ವಿಚಾರಧಾರೆಗಳು ಅಂಬೇಡ್ಕರರಿಗೆ ಸಮ್ಮತಿಯಿರಲಿಲ್ಲ. ಇಬ್ಬರಲ್ಲೂ ಹಲವಾರು ಅಭಿಪ್ರಾಯ ಭೇದಗಳು ಇದ್ದವು. ಈ ಕಾರಣದಿಂದಾಗಿ ಭರಣಯ್ಯ ಕ್ರಾಂತಿಯನ್ನೇನು ಮಾಡಿದಿದ್ದರೂ ಕೊಳ್ಳೇಗಾಲದಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ರೊಸೋ, ಗ್ಯಾರಿ, ಬಾಲ್ಡಿ, ಲಿಯೋಟಾಲ್‌ಸ್ಟಾಯ್ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುತ್ತಿದ್ದರು. ಅವರ ವಿಚಾರಗಳೆಲ್ಲವನ್ನು ಓದಿಕೊಂಡಿದ್ದರು. ಹೀಗಾಗಿ ಕ್ರಾಂತಿಯೆಂಬುದು ಅವರ ಮನದೊಳಗಿತ್ತಾ ಎಂಬ ಪ್ರಶ್ನೆ ಮೂಡುತ್ತದೆ. ಭರಣಯ್ಯ ಸಮಾಜವೆಂಬ ಮನೆಯನ್ನು ಇರುವಂತೆಯೇ ಶುಚಿ ಮಾಡಲು ಮುಂದಾದರೇ ಹೊರತು ಕೆಡವಿ ಹೊಸದಾರಿ ಕಟ್ಟಲು ಪ್ರಯತ್ನಿಸಲಿಲ್ಲ.

ಭರಣಯ್ಯನವರಿಂದ ನಾವು ಕಲಿಯುವುದು ಸಾಕಷ್ಟಿದೆ. ನಮ್ಮಂತ ಯುವ ಪೀಳಿಗೆಗೆ ಅವರ ಒಂದೊಂದು ನಡೆಯೂ ಪಾಠ. ನಾನು ಅವರನ್ನು ಕಂಡಿಲ್ಲವಾದರೂ ಅವರ ದೂರದೃಷ್ಟಿಯ ಚಿಂತನೆಗಳಲ್ಲಿ ಅವರಿನ್ನೂ ಜೀವಂತ. ಅವರ ಕುಟುಂಬಸ್ಥರು, ಸ್ನೇಹಿತರು, ಒಡನಾಡಿಗಳು, ಅವರಿಂದ ಉಪಕಾರ ಪಡೆದವರು ಭರಣಯ್ಯನವರ ಬದುಕಿನ ಪ್ರತಿಯೊಂದು ಕ್ಷಣಗಳನ್ನು ದರ್ಶನ ಮಾಡಿಸಿದ್ದಾರೆ. ಅವರನ್ನು ಅಕ್ಷರರೂಪದಲ್ಲಿ ಹಿಡಿದಿಡುವುದು ಕಷ್ಟವೇ.. ಎಷ್ಟು ಬರೆದರೂ ಕಡಿಮೆಯೇ.. ಆದರೂ 'ಭರಣಯ್ಯ' ಎಂಬುದೊಂದೆ ದೊಡ್ಡ ಶೀರ್ಷಿಕೆ... ಉಳಿದೆದ್ದೆಲ್ಲಾ ಅಡಿಬರಹ.

ವಿಳಾಸ : # 106, ಸಿದ್ದಪ್ಪಾಜಿ ಕೃಪ
ಕೆ. ಎಚ್. ಬಿ. ವಾಟರ್ ಟ್ಯಾಂಕ್ ಹಿಂಭಾಗ
ಬೆಳವಾಡಿ, ಮೈಸೂರು – 570 018

ಅಲೆ – ಐದು

ಛಾಯಾಂಕಣ



ಸಹಕಾರ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀರಾಮಕೃಷ್ಣ ಹೆಗಡೆ, ಶ್ರೀ ಆರ್.ಭರಣ್ಣಯ್ಯ, ಶ್ರೀ ಎಸ್.ಜಿ.ಎ. ನಾಯ್ಡು, ಶ್ರೀ ಸಿ.ಎ. ಜಮಖಂಡಿಮಠ್ ರವರೊಂದಿಗೆ ಸಹಕಾರ ಉಪಸಚಿವ ಶ್ರೀ ಕೊಂಡಜ್ಜಿ ಬಸಪ್ಪ ಅವರು ಬೆಂಗಳೂರಿನ ಕರ್ನಾಟಕ ಸಹಕಾರ ಮಾರುಕಟ್ಟೆ ಮಂಡಳಿಗೆ ಭೇಟಿ ನೀಡಿದಾಗ.



ಉಗ್ರಾಣ ನಿಗಮದ ಗೋದಾಮುಗಳ ನಿರ್ಮಾಣದ ಗುದ್ದಲಿಪೂಜೆಯೊಂದರಲ್ಲಿ ಆರ್. ಭರಣಯ್ಯ. (1962)



ಸಹಕಾರ ಇಲಾಖೆ ರಿಜಿಸ್ಟ್ರಾರ್ ಆಗಿದ್ದಾಗ, ಇಲಾಖೆಯ ಸಹೋದ್ಯೋಗಿಗಳೊಂದಿಗೆ ಆರ್. ಭರಣಯ್ಯ (ಎಡದಿಂದ 6ನೆಯವರು). (1962)



ಭಾರತದ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ಜವಹಾರ್ ಲಾಲ್ ನೆಹರು ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಜರುಗಿದ ಸಭೆಯೊಂದರಲ್ಲಿ ಆರ್. ಭರಣಯ್ಯ (2ನೇ ಸಾಲಿನಲ್ಲಿ ಎಡದಿಂದ 3ನೇಯವರು). (1963)



4ನೇ ಭಾರತೀಯ ಸಹಕಾರಿ ಕಾಂಗ್ರೇಸ್ ಸಮ್ಮೇಳನದಲ್ಲಿ ಅತಿಥಿ, ಗಣ್ಯರೊಂದಿಗೆ ಭಾಗವಹಿಸಿರುವ ಸಂದರ್ಭ. ಮಧ್ಯದಲ್ಲಿರುವವರು ಕೇಂದ್ರ ಸಚಿವರಾಗಿದ್ದ ಸರೋಜಿನಿ ಮಹಿಷಿ ಪಕ್ಕದಲ್ಲಿ ಆರ್. ಭರಣಯ್ಯ. (1963)



ಎಸ್. ಆರ್. ಕಂಠಿ, ಮಾಜಿ ಮುಖ್ಯ ಮಂತ್ರಿಗಳು, ದಯನಂದ ಸಾಗರ್, ಸಚಿವರು, ಕನ್ನಡ ಚಳುವಳಿ ನೇತಾರ ವಾಟಾಳ್ ನಾಗರಾಜ್‌ರ ಜೊತೆ ಆರ್. ಭರಣಯ್ಯ(ಬಲದಿಂದ 2ನೇಯವರು). (1963)



ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಸಂದರ್ಭವೊಂದರಲ್ಲಿ ವಿವಿಧ ಗಣ್ಯರೊಂದಿಗೆ ಆರ್. ಭರಣಯ್ಯ (ಮಾತನಾಡುತ್ತಿರುವವರು). (1964)




ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದ ನಂತರ ನಡೆದ ಬೀಳ್ಕೊಡಿಗೆ ಸಮಾರಂಭ. ಸಹಕಾರ ಸಚಿವರಾಗಿದ್ದ ಪಿ. ಎಂ. ನಾಡಗೌಡರ ಉಪಸ್ಥಿತಿ. (ಕುಳಿತವರಲ್ಲಿ ಎಡದಿಂದ 7ನೇಯವರು) ಆರ್. ಭರಣಯ್ಯ.



ಆರ್. ಭರಣಯ್ಯ (ಭಾಷಣ ಮಾಡುತ್ತಿರುವವರು) ಮಾಜಿ ಸಚಿವರು ಹಾಗೂ ಲೋಕಸಭಾ ಸದಸ್ಯರಾಗಿದ್ದ ಶ್ರೀ ವಿ. ಎಸ್. ಕೃಷ್ಣಅಯ್ಯರ್ ಮತ್ತು ಕೃಷಿ ಸಚಿವರಾಗಿದ್ದ ಬಿ. ರಾಚಯ್ಯ ಮತ್ತು ಇತರರೊಂದಿಗೆ. (1964)



ಮುಖ್ಯ ಕಾರ್ಯದರ್ಶಿಗಳಾಗಿದ್ದ ಸತೀಶ್ ಚಂದ್ರನ್ ಮತ್ತಿತರ ಅಧಿಕಾರಿಗಳ ಜೊತೆಗಿನ ಸಂದರ್ಭ. (ಎಡದಿಂದ 6ನೇಯವರು ಆರ್. ಭರಣಯ್ಯ). (1965)



ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ (ನಿಂತಿರುವವರು), ಪಿ. ಎಂ. ನಾಡಗೌಡ, ಸಹಕಾರಿ ಸಚಿವರು (ಎಡದಿಂದ ಎರಡನೆಯವರು) ಬಿ. ಎಸ್. ಮುದ್ದಪ್ಪ ಮಾಜಿ ಮುಖ್ಯ ಕಾರ್ಯದರ್ಶಿಯವರೊಂದಿಗೆ ಆರ್. ಭರಣಯ್ಯ (ಬಲತುದಿ). (1965)



ಆರ್. ಭರಣಯ್ಯ (ಎಡದಿಂದ– 3ನೇಯವರು) ಅಮೆರಿಕನ್ ಪೀಸ್ ಕೋರ್'ರವರ ಆಮಂತ್ರಣದ ಮೇರೆಗೆ ಅಮೆರಿಕಾದ ಅತಿ ಪ್ರತಿಷ್ಠಿತ ವಿಶ್ವವಿದ್ಯಾಲಯವೊಂದರಲ್ಲಿ ಭಾಗವಹಿಸಿರುವುದು. (1966)



ಂಜ ಕೇಂದ್ರ ಸಚಿವ ಗುರುಪಾದಸ್ವಾಮಿ ಮತ್ತಿತರರ ಜೊತೆ ಆರ್. ಭರಣಯ್ಯ (ಬಲತುದಿ)
ಯಾಲೋಚನೆಯಲ್ಲಿ. (1967)



ಸಹಕಾರಿ ಸಚಿವರಾಗಿದ್ದ ಕೊಂಡಜ್ಜಿ ಬಸಪ್ಪ ಮತ್ತು
ಇತರ ಅಧಿಕಾರಿ ವರ್ಗದೊಂದಿಗೆ ಆರ್. ಭರ



ಸಹಕಾರಿ ಸಚಿವರಾಗಿದ್ದ ಪಿ.ಎಂ. ನಾಡಗೌಡ, ಶಾಸಕರಾಗಿದ್ದ ಬಿ. ಎಂ. ಪಾಟೀಲ, ಪಿ. ಎಸ್. ಭಟ್, ಮಾಜಿ ಎಂ.ಡಿ. ಸಹಕಾರ ಬ್ಯಾಂಕ್ ಇವರ ಜೊತೆ ಸಭೆಯೊಂದರಲ್ಲಿ ಆರ್. ಭರಣಯ್ಯ (ಬಲತುದಿಯಲ್ಲಿ ನಿಂತಿರುವವರು). (1967)



ಸಹಕಾರ ಇಲಾಖೆ ಕಾರ್ಯದರ್ಶಿಯಾಗಿದ್ದಾಗ. ಬೆಂಗಳೂರಿನ ರಾಜಾಜಿನಗರದಲ್ಲಿ 'ಜನತಾ ಬಜಾರ್' ಆರಂಭೋತ್ಸವದ ಸಂದರ್ಭದಲ್ಲಿ ಆರ್. ಭರಣಯ್ಯ. (1968)



ಬೆಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಮಂಡಲಿ ಸದಸ್ಯರ ಜೊತೆಗೆ
ಇರುವ ಸಂದರ್ಭ. (ಎಡದಿಂದ 4ನೇಯವರು ಆರ್. ಭರಣಯ್ಯ). (1968)



ಆರ್. ಭರಣಯ್ಯ ರೋಟರಿ ಕ್ಲಬ್‌ನ ಸದಸ್ಯರೊಂದಿಗೆ
(ಎಡದಿಂದ 3ನೇಯವರು). (1968)



ಭಾರತದ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಕೇಂದ್ರ ಸಚಿವರಾಗಿದ್ದ ಶ್ರೀಮತಿ ಯಶೋಧರ ದಾಸಪ್ಪನವರು ಆರ್. ಭರಣಯ್ಯನವರನ್ನು ಪರಿಚಯಿಸುತ್ತಿರುವ ಅಪರೂಪದ ಚಿತ್ರಣ (ನಿಂತವರಲ್ಲಿ ಎಡದಿಂದ 2ನೆಯವರು) 1969



ಕೇಂದ್ರ ಸಚಿವರಾಗಿದ್ದ ವೈ. ಬಿ. ಚವ್ಹಾಣ್‌ರವರ ಜೊತೆ ಆರ್. ಭರಣಯ್ಯ (ಬಲತುದಿ) ಸಮಾಲೋಚನೆಯ ಸಂದರ್ಭ. (1968)



ಆರ್. ಭರಣಯ್ಯ 'ಅಮೇರಿಕನ್ ಪೀಸ್ ಕೋರ್' ಸಭೆಯೊಂದರಲ್ಲಿ 'ಸಹಕಾರಿ ಆಂದೋಲನ'ದ ಬಗ್ಗೆ ಉಪನ್ಯಾಸ ಮಾಡುತ್ತಿರುವುದು. (1969)



ಅಭಿವೃದ್ಧಿ (DHPC) , ಆರೋಗ್ಯ, ಹೌಸಿಂಗ್, ಪಂಚಾಯತ್ ರಾಜ್ ಹಾಗೂ ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾಗ, ಭಾರತ ಸರ್ಕಾರದ ವಿವಿಧ ರಾಜ್ಯಗಳ ಕಾರ್ಯದರ್ಶಿಗಳ ಸಭೆಯೊಂದರಲ್ಲಿ ಆರ್. ಭರಣಯ್ಯ (ಎಡದಿಂದ ಮೊದಲನೆಯವರು). (1969)



ಸಹಕಾರ ಸಚಿವರಾಗಿದ್ದ ಪಿ.ಎಂ. ನಾಡಗೌಡ ಹಾಗೂ ಕೃಷಿ ಸಚಿವರಾಗಿದ್ದ ಬಿ. ರಾಚಯ್ಯ ಮತ್ತು ಶಿಕ್ಷಣ ಸಚಿವರಾಗಿದ್ದ ಶಂಕರೇಗೌಡರ ಜೊತೆ ಹುಟ್ಟೂರು ಸೋಮನಾಥಪುರದ ಸಭೆಯೊಂದರಲ್ಲಿ. (1969)




ಬೆಂಗಳೂರು ವಿಶ್ವವಿದ್ಯಾನಿಲಯದ ಉಪನ್ಯಾಸ ಕಾರ್ಯಕ್ರಮವೊಂದರಲ್ಲಿ ಆರ್. ಭರಣಯ್ಯ (ಬಲದಿಂದ 5ನೆಯವರು) ಭಾಗವಹಿಸಿದ ಸಂದರ್ಭ. ಸಿಂಡಿಕೇಟ್ ಸದಸ್ಯ ಮೋಹನ್‌ದೇವ ಆಳ್ವ (ಎಡದಿಂದ 3ನೆಯವರು) ಮತ್ತು ಇತರರು. (1970)



ಆರ್. ಗೋಪಾಲಸ್ವಾಮಿ ಅಯ್ಯರ್ ಹಾಸ್ಟೆಲ್‌ನಲ್ಲಿ ಅಶ್ವತ್ಥಕಟ್ಟೆಯೊಂದಕ್ಕೆ ಶ್ರೀಮತಿ ಶಾಂತಮ್ಮ ಹಾಗೂ ಆರ್. ಭರಣಯ್ಯ ದಂಪತಿಗಳು ಭಕ್ತಿ ಪೂರ್ವಕ ನಮನ ಸಲ್ಲಿಸುತ್ತಿರುವ ಸಂದರ್ಭ. (1970)



ಪಶುಸಂಗೋಪನಾ ನಿರ್ದೇಶಕರಾಗಿದ್ದ ಡಿ. ರುದ್ರಯ್ಯ, ಸಚಿವರಾಗಿದ್ದ ಚನ್ನಿಗರಾಮಯ್ಯ, ಜಸ್ಟಿಸ್ ಭೀಮಯ್ಯ, ಡಿ. ವೆಂಕಟಯ್ಯ, ನಿಲಯ ಪಾಲಕರು, ಆರ್. ಗೋಪಾಲಸ್ವಾಮಿ ಅಯ್ಯರ್ ಹಾಸ್ಟೆಲ್, ಬಿಳಿರಂಗಯ್ಯ, ವಕೀಲರು ಇವರುಗಳೊಂದಿಗೆ ಆರ್. ಭರಣಯ್ಯ (ಬಲದಿಂದ 3ನೆಯವರು). (1970)




ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಹಾಸ್ಟೆಲ್‌ನಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದ ಡಿ. ವೆಂಕಟಯ್ಯ, ನಿಲಯ ಪಾಲಕರು ಇವರೊಂದಿಗೆ ಆರ್. ಭರಣಯ್ಯ ವಸತಿ ನಿಲಯ ಕಲ್ಯಾಣ ಸಮಿತಿ ಅಧ್ಯಕ್ಷರಾಗಿದ್ದಾಗ ಭಾಗವಹಿಸಿದ್ದ ಒಂದು ಸಂತಸದ ಕ್ಷಣ. (1970)



70ರ ದಶಕದಲ್ಲಿ ಉಡುಪಿಯಲ್ಲಿ ಸರ್ವಧರ್ಮ ಸಮ್ಮೇಳನದಲ್ಲಿ ಸಂಸ್ಕೃತದಲ್ಲಿ ಉಪನ್ಯಾಸ ಮಾಡುತ್ತಿರುವುದು



ಆರ್. ಭರಣಯ್ಯ ಮತ್ತು ಶ್ರೀಮತಿ ಶಾಂತಮ್ಮ (1942)




ಆರ್. ಭರಣಯ್ಯರವರ
ಎರಡನೇ ಮಗಳು ಶಾರದ
ಮತ್ತು
ಚಂದ್ರಶೇಖರ್‌ರವರ
ವಿವಾಹ ಮಹೋತ್ಸವ
ಸಂದರ್ಭದಲ್ಲಿ ಶಾಂತಮ್ಮ
ಭರಣಯ್ಯ ಹಾಗೂ
ಕುಟುಂಬದವರು.
(1963)




ಆರ್. ಭರಣಯ್ಯ,
ಶ್ರೀಮತಿ ಭರಣಯ್ಯ,
ಬಿ. ವಿಜಯಕೃಷ್ಣ,
ಶ್ರೀಮತಿ ಬಿ. ರಾಚಪ್ಪ,
ಬಿ. ರಾಚಪ್ಪ
ಬಿ.ಗುರುಪ್ರಸಾದ್,
ಜಿ.ರಾಣಿ, ಎಂ.
ಚೆನ್ನಮ್ಮ ಮತ್ತು ಬಿ.
ಮಂಜುಳ(ನಾಗರತ್ನ
ಮತ್ತು ಎಸ್.ಎಸ್.
ಅರಕೇರಿ
ಮದುವೆ ಸಂದರ್ಭ
(1962)




ಅಮೆರಿಕ ಪ್ರವಾಸಕ್ಕೆ
ಮುನ್ನಾ ಆರ್. ಭರಣಯ್ಯ
ಮತ್ತು ಕುಟುಂಬದ
ಸದಸ್ಯರು ಹಾಗೂ
ಸ್ನೇಹಿತರೊಂದಿಗೆ (1966)




ಆರ್. ಭರಣಯ್ಯ, ಶ್ರೀಮತಿ ಶಾಂತಮ್ಮ, ಬಿ. ಗುರುಪ್ರಸಾದ್, ಬಿ. ಭುವನೇಶ್ವರಿ, ಶ್ರೀ ಲಿಂಗಯ್ಯ
ಬಲತುದಿ), ಮತ್ತು ಶ್ರೀಮತಿ ಲಿಂಗಯ್ಯ(ಎಡತುದಿ). (1968)



ಆರ್. ಭರಣಯ್ಯನವರ ಮೊಮ್ಮಗಳಾದ ಚಾರು ಮತ್ತು ಮನೀಶ್‌ರವರ ವಿವಾಹ ಸಂದರ್ಭದಲ್ಲಿ
ಭರಣಯ್ಯನವರ ಮಗಳಾದ ಭುವನೇಶ್ವರಿ, ಅಳಿಯ ಅನಿಲ್ ಶ್ರೀನಿವಾಸ್, ದರ್ಬೀತ್ ಶ್ರೀನಿವಾಸ್,
ಚೇತಸ್ ಶ್ರೀನಿವಾಸ್ (2008)



ಆರ್. ಭರಣಯ್ಯನವರ ಮೊಮ್ಮಗಳಾದ ಚಾರು ಮತ್ತು ಮನೀಶ್‌ರವರ ವಿವಾಹ ಸಂದರ್ಭದಲ್ಲಿ ಶಾಂತಮ್ಮಭರಣಯ್ಯನವರು, ಮಗಳು ನಂದಿನಿ ಮತ್ತು ಮಗ ಗುರುಪ್ರಸಾದ್ (2008)




ಆರ್. ಭರಣಯ್ಯನವರ ಮೊಮ್ಮಗಳಾದ ಚಾರು ಮತ್ತು ಮನೀಶ್‌ರವರ ವಿವಾಹ ಸಂದರ್ಭದಲ್ಲಿ ಮಗಳು ಪದ್ಮಿನಿ, ಅಳಿಯ ಶಶಿಕುಮಾರ್ ನಾಯರ್, ಪೃಥ್ವಿ ನಾಯರ್ (2008)



ಆರ್. ಭರಣಯ್ಯನವರ
ಮೊಮ್ಮಗಳಾದ ಚಾರು
ಮತ್ತು ಮನೀಶ್‌ರವರ
ವಿವಾಹ
ಸಂದರ್ಭದಲ್ಲಿ
ಭರಣಯ್ಯನವರ
ಮೊಮ್ಮಗ ರೂಪೇಂದ್ರ
ಅವರ ಪತ್ನಿ ಗಂಗಾ
ಮತ್ತು ಅವರ ತಂದೆ
ಎನ್ ಚಂದ್ರಶೇಖರ್
ಮೂರ್ತಿ IFS (2008).



ಆರ್. ಭರಣಯ್ಯ, ಮೈಸೂರು ಸಂಸ್ಥಾನದ ಆಡಳಿತಾ ಸೇವೆಗೆ ಸೇರಿದಾಗ ವಿವಿಧ ಉನ್ನತ ಅಧಿಕಾರಿಗಳ ಜೊತೆ (ಕುಳಿತವರಲ್ಲಿ ಬಲದಿಂದ 2ನೆಯವರು. (1935)



ಸಚಿವರಾಗಿದ್ದ ಪೂಣಚ್ಚ (ಬಲದಿಂದ ಮೊದಲನೆಯವರು)ರ ಜೊತೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕಾರ್ಯದರ್ಶಿಯಾಗಿದ್ದಾಗ ಆರ್. ಭರಣಯ್ಯ (ಎಡದಿಂದ ಮೊದಲನೆಯವರು). (1950)



ಅಂತರಾಷ್ಟ್ರೀಯ
ಸಭೆಯೊಂದರಲ್ಲಿ ದೇಶ
ವಿದೇಶದ
ಅಧಿಕಾರಿಗಳೊಂದಿಗೆ
(ಎಡದಿಂದ
ನಾಲ್ಕನೆಯವರು)
ಆರ್. ಭರಣಯ್ಯ
(1952)



ಆರ್. ಭರಣಯ್ಯ
(ನಿಂತವರಲ್ಲಿ ಬಲತುದಿ)
ಕಾರ್ಯದರ್ಶಿ ರೆಮ್ಕೊ
ಆಗಿದ್ದಾಗ
ಸಹೋದ್ಯೋಗಿಗಳಾದ
ಟಿ. ಶಾಮಣ್ಣ,
ಕೆ.ಬಿ. ಕಾರಿಯಪ್ಪ ಅವರ
ಜೊತೆ ಜಪಾನಿನ
ಅತಿಥಿಗಳೊಂದಿಗೆ.
(1953)




ಮೈಸೂರು ಲ್ಯಾಂಪ್ ವರ್ಕ್ಸ್
ಕಾರ್ಯದರ್ಶಿಯಾಗಿದ್ದಾಗ
ಅಧಿಕಾರಿಗಳು ಮತ್ತು
ಸಿಬ್ಬಂದಿಗಳ ಜೊತೆ
ಆರ್. ಭರಣಯ್ಯ.
(2ನೇ ಸಾಲಿನ ಕುಳಿತವರಲ್ಲಿ
ಎಡದಿಂದ 11ನೇಯವರು)
(1953)



ಎಂ. ಆರ್. ಎ. ಪ್ರಜಾಪ್ರತಿನಿಧಿ ಮಂಡಳಿಯ ಸದಸ್ಯರಾಗಿದ್ದ ಚನ್ನಿಗ ರಾಮಯ್ಯನವರು (ಮಧ್ಯದಲ್ಲಿರುವವರು) ಪ್ರಸಿದ್ಧ ಕಣ್ಣಿನ ವೈದ್ಯ ಡಾ. ಟಿ. ಮಾಣಿಕ್ಯಂ ಇವರ ಜೊತೆ ಆರ್. ಭರಣಯ್ಯ (ಎಡದಿಂದ ಮೊದಲನೇಯವರು). (1953)



ಆರ್. ಭರಣಯ್ಯ (ಹಿಂದಿನ ಸಾಲಿನ ನಿಂತಿರುವವರಲ್ಲಿ ಎಡದಿಂದ 6ನೇ ಯವರು) ಗೃಹ ಇಲಾಖೆ ಅಧೀನ ಕಾರ್ಯದರ್ಶಿಗಳಾಗಿದ್ದಾಗ ಐ.ಎ.ಎಸ್. ದೊರೆತ ವೇಳೆ. ಅಂದಿನ ಅಠಾರ ಕಛೇರಿ ಮುಂದೆ ಮುಖ್ಯ ಕಾರ್ಯದರ್ಶಿಗಳು ಮತ್ತು ಇತರ ಅಧಿಕಾರಿಗಳ ಜೊತೆ. (1954)



ಭೂದಾನ ಚಳುವಳಿ
ನೇತಾರ ವಿನೋಬಾಭಾವೆ
ಮತ್ತು ರಾಮಕೃಷ್ಣ ಹೆಗಡೆ
ಮಾಜಿ ಮುಖ್ಯ ಮಂತ್ರಿ,
ಕಾರ್ಯದರ್ಶಿ
ಜಿ.ವಿ.ಕೆ.ರಾವ್‌ರವರ ಜೊತೆ
ಸಾರ್ವಜನಿಕ
ಸಮಾರಂಭವೊಂದರಲ್ಲಿ.
(1956)



ಆರ್. ಭರಣಯ್ಯ
ಶಿವಮೊಗ್ಗ
ಜಿಲ್ಲಾಧಿಕಾರಿಯಾಗಿದ್ದಾಗ
ಜನಸಾಮಾನ್ಯರ
ಕುಂದುಕೊರತೆಗಳನ್ನು
ಆಲಿಸುವ ಸಲುವಾಗಿ
ಗ್ರಾಮಸಭೆಗಳನ್ನು
ಏರ್ಪಡಿಸುತ್ತಿದ್ದರು. ಅಂತಹ
ವಿಶೇಷ ಸಂದರ್ಭದ ಚಿತ್ರಣ.
(1956)



ಸಹಕಾರ ಸಚಿವರಾಗಿದ್ದ
ಟಿ. ಚನ್ನಯ್ಯ
ನವರೊಂದಿಗೆ
ಸಮಾರಂಭವೊಂದರಲ್ಲಿ
ಆರ್. ಭರಣಯ್ಯ.
(1956)



ಭಾರತದ ಸ್ವಾತಂತ್ರ್ಯ ಸಂಗ್ರಾಮದ ದಶಮಾನೋತ್ಸವ ಸಮಾರಂಭವೊಂದರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದಾಗ ಆರ್. ಭರಣಯ್ಯ (ವೇದಿಕೆಯ ಮಧ್ಯದಲ್ಲಿ ಸೆಲ್ಯೂಟ್ ಸ್ವೀಕರಿಸುತ್ತಿರುವುದು). (1957)



ಶಿವಮೊಗ್ಗಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದಾಗ ಅಲ್ಲಿನ ಗ್ರಾಮವೊಂದರಲ್ಲಿ ನಡೆದ ನಾಟಕ ಪ್ರದರ್ಶನ ಸಂದರ್ಭದಲ್ಲಿ ಭಾಗವಹಿಸಿ ಮಾತನಾಡುತ್ತಿರುವುದು. (1957)



ವಸತಿ ಶಾಲೆಯೊಂದರಲ್ಲಿ ಉಚಿತ ಸ್ಲೇಟು ಬಳಪ ವಿತರಣೆಯಲ್ಲಿ ಆರ್. ಭರಣಯ್ಯ. (1956)



ಶಿವಮೊಗ್ಗದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಆರ್. ಭರಣಯ್ಯ ಸಿಬ್ಬಂಧಿ ಜೊತೆ
(ಕುಳಿತರವರಲ್ಲಿ ಎಡದಿಂದ 6ನೆಯವರು). (1957)



ನಾಟಕವೊಂದರಲ್ಲಿ 'ಭೀಮ'ನ ಪಾತ್ರಧಾರಿಯಾಗಿ ಇತರ ಸಹ ನಟರೊಂದಿಗೆ (ಮೊದಲ ಸಾಲಿನ ಕುಳಿತವರಲ್ಲಿ ಎಡದಿಂದ ಮೊದಲನೆಯವರು) ಆರ್. ಭರಣಯ್ಯನವರವಿಶೇಷ ಚಿತ್ರ. (1958)



ಎನ್. ರಾಚಯ್ಯ, ಅಂದಿನ ಸಮಾಜ ಕಲ್ಯಾಣ ಇಲಾಖೆ ಸಚಿವರು, ಶ್ರೀಮತಿ ಸುಧಾರೆಡ್ಡಿ, ಮಾಜಿ ಶಾಸಕಿ, ಜೆ.ವಿ.ಕೆ. ರಾವ್, ಮಾಜಿ ಮುಖ್ಯ ಕಾರ್ಯದರ್ಶಿಯವರ ಜೊತೆ ಸಭೆಯೊಂದರಲ್ಲಿ ಆರ್. ಭರಣಯ್ಯ (ಎಡದಿಂದ ಮೊದಲನೆಯವರು). (1959)



ಮೈಸೂರು ಸಂಸ್ಥಾನದ
ಮಹಾರಾಜರಾದ
ಶ್ರೀ ಜಯಚಾಮರಾಜ
ಒಡೆಯರ್‌ರವರು
(ಮಧ್ಯದಲ್ಲಿರುವವರು)
ಶಿವಮೊಗ್ಗಕ್ಕೆ ಆಗಮಿಸಿದ್ದಾಗ
ಹಾಗೂ ಶಿಕ್ಷಣ
ಸಚಿವರಾಗಿದ್ದ ಬದರಿ
ನಾರಾಯಣ ಎ. ಆರ್.
ಮತ್ತಿತರ ಗಣ್ಯರ ಜೊತೆ
ಶಿವಮೊಗ್ಗ ಜಿಲ್ಲಾಧಿಕಾರಿ
ಆರ್. ಭರಣಯ್ಯ
(ಕುಳಿತವರಲ್ಲಿ ಎಡತುದಿ).
(1958)



ಶಿವಮೊಗ್ಗ ಜಿಲ್ಲಾಧಿಕಾರಿಯಾಗಿದ್ದಾಗ (1956–58ರಲ್ಲಿ) ಡಿ.ಸಿ.ಕಛೇರಿ ಆವರಣ. ಬಿ. ಸಂಪತ್ ಕುಮಾರ್, (ಮೊದಲನೇ ಮಗ) ವಿಜಯ ಕೃಷ್ಣ (ಎರಡನೇ ಮಗ) ಜೊತೆ ಆರ್. ಭರಣಯ್ಯ (ಎಡದಿಂದ ಆರನೆಯವರು) (1958)



ಮೈಸೂರು ಉಗ್ರಾಣ ನಿಮಗದ ಎಂ.ಡಿ. ಆಗಿದ್ದಾಗ ಅಂದಿನ ಸಚಿವ ಪಿ. ಮಲ್ಲಪ್ಪನವರು ಹಾಗೂ ಮತ್ತಿತರ ಅಧಿಕಾರಿಗಳ ಜೊತೆ ಆರ್. ಭರಣಯ್ಯ. (1961)



ಉಗ್ರಾಣ ನಿಗಮದ ಸಭೆಯೊಂದರಲ್ಲಿ ಆರ್. ಭರಣಯ್ಯ (ಎಡದಿಂದ ಮೂರನೆಯವರು) ಮತ್ತು ಇತರೆ ಅಧಿಕಾರಿಗಳು. (1961)



(ಬಲದಿಂದ ಮೊದಲ ಸಾಲಿನಿಂದ) ಬಸವರಾಜು, ಫೋಟೋಗ್ರಾಫರ್, ಆರ್. ಭರಣಯ್ಯ, ಸಿ. ರಾಚಯ್ಯ, ವಿ. ನಂಜಯ್ಯ, ಮಂಡ್ಯ ಬೊಮ್ಮಯ್ಯ, (ಕುಳಿತವರಲ್ಲಿ ಎಡದಿಂದ) ಶ್ರೀಮತಿ ಬಿ. ರಾಚಯ್ಯ, ಬಿ. ರಾಚಯ್ಯ, ಚೆನ್ನಿಗರಾಮಯ್ಯ, ಹರಿಜನಬಂಧು ಕೃಷ್ಣಯ್ಯ ಶೆಟ್ಟಿ, ಬಿ. ರಾಚಪ್ಪ, ಡಾ. ಟಿ. ಮಾಣಿಕ್ಯಂ, ಡಾ. ಚಾಮಾರಾಜು ಮತ್ತಿತರರು. (1962)

ಅವರು ಬಡವರ ರಾಯಭಾರಿ, ದಲಿತ ಲೋಕದ ಚಂದಿರ, ಎರಡನೇ ಅಂಬೇಡ್ಕರ್. ಜಾತ್ಯತೀತ ವ್ಯಕ್ತಿತ್ವದ ಸಿರಿ. ಸಂಸ್ಕೃತದಲ್ಲಿ ವಿದ್ವಾಂಸ, ಜನರ ಬಾಯಲ್ಲಿ ಧರ್ಮರಾಯ, ಮಾನವೀಯತೆಯ ಮೌನಪ್ರೇಮಿ, ಕಾರ್ಯತತ್ಪರ, ದಕ್ಷತೆಯ ಹರಿಕಾರ ಔದಾರ್ಯಶೀಲ ಹುಟ್ಟನ್ನು ಎಂದೂ ಸ್ವಲಾಭಕ್ಕಾಗಿ ಬಳಸಿಕೊಳ್ಳದ ಅಪರೂಪದ ವ್ಯಕ್ತಿ. ಸರ್ಕಾರದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಭ್ರಷ್ಟಾಚಾರ ಮುಕ್ತ ಶುದ್ಧ ಹಸ್ತ. ಅರ್ಥಶೌಚವನ್ನು ಕಾಪಾಡಿಕೊಂಡು ಬಂದ ಜನಾನುರಾಗಿ....

◆ ಕರ್ನಾಟಕ ರತ್ನ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು

Shri Bharaniah was not a person to stand on ceremony. He was a civil servant; but with the touch and magic of a true representative and even a leader of people. He loved mixing with people, hearing them narrate their problems and, then, trying his best to find solutions in whatever way he could, to help.........

Times have changed vastly since those days. The sheer weight of the growth in the volume of work would make it impossible to adopt some of his methods today. But, the enduring memory of his contribution to the bureaucracy of those days, which would be as significant today as it was then, was his attitude and the frame of mind he brought to bear upon his responsibilities - to be a problem-solver and not a problem-creator; to find ways within the system to redress a grievance rather than offer the system as an excuse for not doing anything to redress it.



◆ Sri Zafar Saifullah, I.A.S. (Retd)
Former Cabinet Secretary, Govt. Of India.

ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಷನ್(ರಿ)